

ಲೋಹಿಯಾ
ಶತಮಾನೋತ್ಸವ
ಮಾಲಿಕೆ

ವಸಿಷ್ಠರು ಮತ್ತು ವಾಲ್ಮೀಕಿಯರು

ಸಮಾಜವಾದಿ ಸಂಕಥನಗಳು-೨

ಡಿ.ಎಸ್. ನಾಗಭೂಷಣ



ವಸಿಷ್ಠರು ಮತ್ತು ವಾಲ್ಮೀಕಿಯರು

ಡಿ. ಎಸ್. ನಾಗಭೂಷಣ

ಲೋಹಿಯಾ ಪ್ರಕಾಶನ

ಲೋಹಿಯಾ ಶತಮಾನೋತ್ಸವ ಮಾಲಿಕೆ - ೧

ವಸಿಷ್ಠರು ಮತ್ತು ವಾಲ್ಮೀಕಿಯರು

(ಸಮಾಜವಾದಿ ಸಂಕಥನಗಳು-೩)

ಡಿ. ಎಸ್. ನಾಗಭೂಷಣ

ಲೋಹಿಯಾ ಪ್ರಕಾಶನ

ಬಳ್ಳಾರಿ

Vasishtaru mattu Valmeekiyaru
(Vashistas and Valmeekis)
–a collection of Socialist discourses
by
D.S.Nagabhushana,
HIG-5, 'Nudi', Kallahally Extension,
Vinaoba Nagara, Shivamogga - 577 204
Ph: 08182-248574 Mob: 94492 42284

Published by
LOHIYA PRAKASHANA
'Kshitija' Kappagallu Road
Gandhi Nagar, Bellary - 583 103
Tel: 08392 - 257412

ISBN: 81-87731-95-8

FIRST IMPRESSION: 2009

PAGES: xii + 356 = 368

PRICE: Rs.150

COVER DESIGN: SUDHAKAR DARBE

D.T.P.: SREEDHAR

PRINTED AT:
VISHWAS PRINTS
Chamarajpet, Bangalore.

ವಸಿಷ್ಠರು ಮತ್ತು ವಾಲ್ಮೀಕಿಯರು
ಡಿ.ಎಸ್. ನಾಗಭೂಷಣ
ಎಚ್.ಐ.ಜಿ.-೫, 'ನುಡಿ', ಕೆ.ಎಚ್.ಬಿ. ಕಾಲೋನಿ, ಕಲ್ಲಹಳ್ಳಿ ಬಡಾವಣೆ, ವಿನೋಬ ನಗರ
ಶಿವಮೊಗ್ಗ - ೫೭೭೨೦೪ ಮೊಬೈಲ್: ೯೪೪೯೨ ೪೨೨೮೪

ಪ್ರಕಾಶಕರು:
ಲೋಹಿಯಾ ಪ್ರಕಾಶನ
'ಕ್ಷಿತಿಜ' ಕಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ - ೫೮೩ ೧೦೩

ಬೆಲೆ: ರೂ. ೧೫೦

ಮುದ್ರಣ :
ವಿಶ್ವಾಸ್ ಪ್ರಿಂಟ್ಸ್
VISHWAS PRINTS
23, 3ನೇ ಅಡ್ಡರಸ್ತೆ, ನಂಜಾಂಬ ಅಗ್ರಹಾರ
ಚಾಮರಾಜಪೇಟೆ, ಬೆಂಗಳೂರು - 18
ದೂರವಾಣಿ : 26604835

ಅರ್ಪಣೆ

ನನಗೆ ಸಮಾಜವಾದದ
ಪ್ರಾಥಮಿಕ ಪಾಠಗಳನ್ನು ಹೇಳಿದ

ಕೆ. ಎಂ. ಶಂಕರಪ್ಪ
ದೇವನೂರ ಮಹಾದೇವ
ಹಾಗೂ
ಎಂ. ಡಿ. ನಂಜುಂಡಸ್ವಾಮಿ

ಅವರಿಗೆ

ಲೇಖಕನ ಮಾತು

ಇದು 'ಬೇರು ಬಿಳಲು'ವಿನಿಂದ ಆರಂಭವಾದ ನನ್ನ ಸಮಾಜವಾದಿ ಸಂಕಥನಗಳ ಮೂರನೇ ಸಂಪುಟ. ಇದರ ಶೀರ್ಷಿಕೆ ಡಾ|| ರಾಮಮನೋಹರ ಲೋಹಿಯಾ ಅವರ ಸುಪ್ರಸಿದ್ಧ ರಾಜಕೀಯೇತರ ಲೇಖನವೊಂದರ ಶೀರ್ಷಿಕೆಯೇ ಆಗಿದೆ. ಇದನ್ನೇ ನಾನು ಏಕೆ ಬಳಸಿಕೊಂಡಿಕೊಂಡಿದ್ದೇನೆಂಬುದು ಈ ಸಂಪುಟದಲ್ಲಿನ ಇದೇ ಶೀರ್ಷಿಕೆಯ ಲೇಖನ ಓದಿದರೆ ಗೊತ್ತಾಗುತ್ತದೆ. ಈ ಸಂಪುಟದಲ್ಲಿ ಒಟ್ಟು ಐವತ್ತು ಲೇಖನಗಳಿದ್ದು, ಇವುಗಳಲ್ಲಿ ಮೊದಲ ನಲವತ್ತೊಂದು ಲೇಖನಗಳು 'ವಿಕ್ರಾಂತ ಕರ್ನಾಟಕ' ವಾರಪತ್ರಿಕೆಗಾಗಿ ನಾನು ಬರೆದ 'ವಾರದ ಒಳನೋಟ' ಎಂಬ ಅಂಕಣ ಬರಹಗಳು. ಈ ಬರಹಗಳ ಸಾಂದರ್ಭಿಕತೆಯನ್ನು ತಿಳಿಯಬಯಸುವ ಓದುಗರ ಅನುಕೂಲಕ್ಕಾಗಿ ಈ ಅಂಕಣಗಳು ಪ್ರಕಟವಾದ ಸಂಚಿಕೆಯ ದಿನಾಂಕಗಳನ್ನೂ ಪ್ರತಿ ಲೇಖನದ ಕೊನೆಯಲ್ಲೂ ನೀಡಲಾಗಿದೆ. ಇನ್ನು ಈ ಬರಹಗಳ ಬಗ್ಗೆ ನಾನು ಹೇಳಬೇಕಾದುದನ್ನೆಲ್ಲ ಈ ಸಂಪುಟದ ಳಗನೇ ಲೇಖನವಾದ 'ವಾರದ ಒಳನೋಟಗಳ ಒಂದು ಹಿನ್ನೋಟ' ಎಂಬ ಲೇಖನದಲ್ಲಿ ಹೇಳಿರುವುದರಿಂದ ಇಲ್ಲಿ ಹೆಚ್ಚಿಗೆ ಹೇಳಲು ಏನೂ ಉಳಿದಿಲ್ಲ, ಈ ಒಂದು ಮಾತಿನ ಹೊರತಾಗಿ: ಮುಖ್ಯಮಂತ್ರಿ ಚಂದ್ರು ಅವರಿಗೆ, ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸಂದರ್ಭದಲ್ಲಿ ಬರೆದ ಬಹಿರಂಗ ಪತ್ರದ ಬಗ್ಗೆ ನನಗೀಗ ವಿಷಾದವೆನಿಸುತ್ತಿದೆ. ಬೆಂಗಳೂರಿನ ಸಮಾರಂಭವೊಂದರಲ್ಲಿ ಭೇಟಿಯಾಗಿ ಮಾತನಾಡಿದ್ದಾಗ, ಚಲನಚಿತ್ರಗಳಲ್ಲಿನ ಅವರ ವಿಚಿತ್ರ ಅವತಾರಗಳನ್ನು ನೋಡಿಯೂ, ಈ ಮನುಷ್ಯನಿಗೆ ನಾಡು-ನುಡಿಗಳ ಬಗ್ಗೆ ಆಳವಾದ ಬದ್ಧತೆಯಿದೆ, ತಿಳುವಳಿಕೆಯೂ ಇದ್ದಂತಿದೆ ಎಂದು ನಾನು ಮಾಡಿಕೊಂಡ ಕಲ್ಪನೆ ಎಷ್ಟು ಹುಸಿಯಾಗಿದೆ! ಇದು ಅಧಿಕಾರ ಸ್ಥಾನ ಸಿಗುವವರೆಗೂ ಕನ್ನಡದ ಬಗ್ಗೆ ಇನ್ನಿಲ್ಲದ ಆರ್ಭಟ ನಡೆಸಿದ ಈ ವ್ಯಕ್ತಿ, ಈಗ ಅಧಿಕಾರದ ಸುಖದಲ್ಲಿ ಬೆಂಗಳೂರಿನ ಕನ್ನಡ ಬೋರ್ಡುಗಳ ಮೇಲ್ವಿಚಾರಕನ ಮಟ್ಟಕ್ಕಿಂತ ಮೇಲೇರಲು ಸಾಧ್ಯವಾಗದಿರುವುದರ ಬಗೆಗಿನ ವಿಷಾದವಿದಷ್ಟೆ!

ಇನ್ನುಳಿದಂತೆ, ಇತರ ಎಂಟು ಲೇಖನಗಳು ನಾನು ವಿವಿಧ ಸಂದರ್ಭಗಳಲ್ಲಿ ವಿವಿಧ ಪತ್ರಿಕೆ/ಸಂಪುಟಗಳಿಗಾಗಿ ಬರೆದ ಲೇಖನಗಳು. ಇವೆಲ್ಲವೂ ಸಮಾಜವಾದ ಕುರಿತ ನನ್ನ ತಾತ್ವಿಕ ಆಸಕ್ತಿ ಮತ್ತು ಕುತೂಹಲಗಳಿಂದ ಹುಟ್ಟಿದ ವಿಶ್ಲೇಷಣೆಗಳು ಮತ್ತು ಅನ್ವೇಷಣೆಗಳು. ಕಳೆದ ಶತಮಾನದ ಅಂತ್ಯದ ವೇಳೆಗೆ ಸಮಾಜವಾದಿ ರಾಜಕಾರಣವನ್ನು ಸೋಲಿಸಿ ಮುನ್ನಡೆಯಿತೆಂದು ಹೇಳಲಾದ ಮುಕ್ತ ಮಾರುಕಟ್ಟೆಯ ಬಂಡವಾಳಶಾಹಿ ರಾಜಕಾರಣ, ಈ ಶತಮಾನದ ಆರಂಭದ ಹೊತ್ತಿಗೆ ದೊಡ್ಡ ಜಾಗತಿಕ ಆರ್ಥಿಕ ಹಿಂಜರಿತಕ್ಕೆ ಕಾರಣವಾಗಿ ತನ್ನೆಲ್ಲ ವಿಶ್ವಾರ್ಹತೆಯನ್ನು ಕಳೆದುಕೊಳ್ಳತೊಡಗಿದೆ. ಇಂದಿನ ಈ ವಿಚಿತ್ರ ಸನ್ನಿವೇಶದಲ್ಲಿ ನನ್ನ ಈ

ಎಲ್ಲ ಲೇಖನಗಳು ಒಂದು ಹೊಸ ರಾಜಕೀಯ-ಆರ್ಥಿಕ ನೈತಿಕತೆಯ ಕೇಂದ್ರ ಪಡೆದುಕೊಂಡು, ಹೊಸ ಪ್ರಸ್ತುತತೆಯೊಂದಿಗೆ ಓದುಗರನ್ನು ಎದುರುಗೊಳ್ಳಬಲ್ಲವಾಗಿವೆ ಎಂದು ನಾನು ಭಾವಿಸಿದ್ದೇನೆ. ಇವಲ್ಲದೆ, ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವು ಬರಹಗಳಿಗೆ ನಾನು ಬರೆದ ಕೆಲವು ಪ್ರತಿಕ್ರಿಯೆಗಳನ್ನೂ ಈ ಸಂಪುಟದಲ್ಲಿ ಸೇರಿಸಿದ್ದೇನೆ. ಇವು ಕೆಲವು ಸಮಕಾಲೀನ ವಿಷಯಗಳ ಬಗ್ಗೆ ಈಗ ನಮ್ಮ ನಡುವೆ ನಡೆದಿರುವ ಚರ್ಚೆಯ ಸ್ವರೂಪವನ್ನು ಪರಿಚಯ ಮಾಡಿಕೊಡುತ್ತವೆ ಮತ್ತು ಈ ಸಂಪುಟದಲ್ಲಿನ ಕೆಲವು ಲೇಖನಗಳಿಗೆ, ಅವುಗಳಲ್ಲಿನ ವಿಚಾರಗಳಿಗೆ ಪೂರಕವಾಗಿವೆ ಎಂಬ ಕಾರಣದಿಂದ.

ಇವುಗಳ ಜೊತೆಗೆ, ನನ್ನ ಈ ಎಲ್ಲ ಬರವಣಿಗೆಗೆ ಹಿನ್ನೆಲೆ ಒದಗಿಸುವಂತಿರುವ ನನ್ನ ಸಂದರ್ಶನವೊಂದೂ ಇಲ್ಲಿದೆ. ಇದನ್ನು ತಮ್ಮ 'ಚಾರ್ವಾಕ' ಪತ್ರಿಕೆಯ ವಾರ್ಷಿಕ ವಿಶೇಷಾಂಕಕ್ಕಾಗಿ, ನನ್ನ ಬಗ್ಗೆ ಇರುವ ವಿಶ್ವಾಸದಿಂದ ಆಯೋಜಿಸಿದವರು ಸಾಗರದ ಗೆಳೆಯ ಎಚ್.ಬಿ.ರಾಘವೇಂದ್ರ ಅವರು. ಸಂದರ್ಶನ ಮಾಡಿರುವವರು ಮತ್ತೊಬ್ಬ ಗೆಳೆಯ ಹೆಗ್ಗೋಡಿನ ಎನ್.ಎಂ.ಕುಲಕರ್ಣಿಯವರು. ಇವರನ್ನಲ್ಲದೆ ನಾನು ಈ ಸಂದರ್ಭದಲ್ಲಿ ಎಲ್ಲರಿಗಿಂತ ಮುಖ್ಯವಾಗಿ ನೆನಪಿಸಿಕೊಳ್ಳಬೇಕಾದುದು, ಅಂತರ್ಜಾಲದಲ್ಲಿನ 'ಸಂಪದ' ಬ್ಲಾಗ್‌ನಲ್ಲಿ ನನಗಾಗಿ 'ನಾಗಸಂಪದ' ಎಂಬ ಒಂದು ಉಪ-ಬ್ಲಾಗ್ ಮಾಡಿ; ಈ ಎಲ್ಲ ನನ್ನ ಬರಹಗಳನ್ನೂ ಅಲ್ಲಿಗೆ ಹಾಕಿ, ನನಗೆ ಅಲ್ಲೂ ಸಾವಿರಾರು ಓದುಗರನ್ನು ಒದಗಿಸಿಕೊಟ್ಟಿರುವ ಮೈಸೂರಿನ ಗೆಳೆಯ ಎಸ್.ಆರ್. ಶ್ರೀನಿವಾಸಮೂರ್ತಿ ಅವರನ್ನು. ಇವರೆಲ್ಲರಿಗೆ ಮತ್ತು ಈ ಎಲ್ಲ ಬರಹಗಳನ್ನು ಪ್ರಕಟಿಸಿದ ಪತ್ರಿಕೆಗಳ/ಸಂಪುಟಗಳ ಸಂಪಾದಕರುಗಳಿಗೆ, ವಿಶೇಷವಾಗಿ 'ವಿಕ್ರಾಂತ ಕರ್ನಾಟಕ' ಪತ್ರಿಕೆಯ ಸಂಪಾದಕ ವರ್ಗಕ್ಕೆ ನನ್ನ ಕೃತಜ್ಞತೆಗಳು. ಇದರ ಜೊತೆಯಲ್ಲೇ, ನನ್ನ ಎಲ್ಲ ಬರಹಗಳನ್ನೂ ಮೊದಲು ಓದಿ, ಸಲಹೆ ನೀಡಿ, ಕೆಲವೊಮ್ಮೆ ತಿದ್ದುಪಡಿಗಳಿಗೂ ಕಾರಣವಾಗುವ ನನ್ನ ಶ್ರೀಮತಿ ಸವಿತಾಳನ್ನೂ ಇಲ್ಲಿ ನೆನೆಯಬೇಕು. ಅಲ್ಲದೆ ಈ ಪುಸ್ತಕಕ್ಕೆ ಪ್ರೀತಿ-ಅಭಿಮಾನಗಳಿಂದ ಬೆನ್ನುಡಿ ಬರೆದುಕೊಟ್ಟಿರುವ 'ಪ್ರಜಾವಾಣಿ'ಯ ನನ್ನ ಮೆಚ್ಚಿನ ಅಂಕಣಕಾರ ದಿನೇಶ್ ಅಮಿನ್‌ಮಟ್ಟು ಅವರಿಗೂ ನನ್ನ ಧನ್ಯವಾದಗಳು.

ಹಾಗೇ ಈ ಪುಸ್ತಕವನ್ನು ತಮ್ಮ ಸಮಾಜವಾದಿ ಬದ್ಧತೆ ಮತ್ತು ನನ್ನ ಮೇಲಿನ ಪ್ರೀತಿ-ವಿಶ್ವಾಸಗಳಿಂದ ಪ್ರಕಟಿಸುತ್ತಿರುವ ಸಿ. ಚೆನ್ನಬಸವಣ್ಣ ಅವರಿಗೂ, ಈ ಪುಸ್ತಕದ ಅಚ್ಚುಕಟ್ಟಾದ ಪುಟ ವಿನ್ಯಾಸ ಮಾಡಿಕೊಟ್ಟಿರುವ ಆರ್.ಎಸ್. ಶ್ರೀಧರ್ ದಂಪತಿಗಳಿಗೂ, ಅರ್ಥಪೂರ್ಣ ಮುಖಪುಟ ವಿನ್ಯಾಸ ಮಾಡಿಕೊಟ್ಟಿರುವ ಸುಧಾಕರ ದರ್ಬೆಯವರಿಗೂ ಮತ್ತು ಪುಸ್ತಕವನ್ನು ಅಂದವಾಗಿ ಮುದ್ರಿಸಿ, ತಯಾರು ಮಾಡಿಕೊಟ್ಟಿರುವ ವಿಶ್ವಾಸ್ ಪ್ರಿಂಟ್ಸ್‌ನವರಿಗೂ ನನ್ನ ಧನ್ಯವಾದಗಳು

ಶಿವಮೊಗ್ಗ

ಡಿ. ಎಸ್. ನಾಗಭೂಷಣ

ಮಾರ್ಚ್ ೧೦, ೨೦೦೯

ಪ್ರಕಾಶಕರ ಮಾತು

ಲೋಹಿಯಾ ಶತಮಾನೋತ್ಸವ ವರ್ಷ

ಇಂದು ಲೋಹಿಯಾ ನಮ್ಮೊಂದಿಗಿದ್ದಿದ್ದರೆ ಅವರು ನೂರನೇ ವರ್ಷಕ್ಕೆ ಕಾಲಿಡುತ್ತಿದ್ದರು. ಆದರೆ ಅವರು ಗತಿಸಿಯೇ ನಾಲ್ಕು ದಶಕಗಳು ಉರುಳಿದರೂ ರಾಜಕೀಯ, ಹೋರಾಟ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಅವರ ಚಿಂತನೆಗಳು ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವಾಗಿವೆ.

ಬಹುಮುಖೀ ವ್ಯಕ್ತಿತ್ವದ ಲೋಹಿಯಾರ ನೆನಪುಗಳು ಪ್ರಸಕ್ತ ಸಂದರ್ಭದಲ್ಲಿ ನಮ್ಮನ್ನು ಚಿಂತೆಗೀಡು ಮಾಡುತ್ತಿವೆ, ಚಿಂತನೆಗೂ ಹಚ್ಚುತ್ತವೆ. ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಲೋಹಿಯಾ ಮಹಾನ್ ದೇಶಪ್ರೇಮಿಯಾಗಿದ್ದರು. ಆದಾಗ್ಯೂ ಅವರ ವಿಶ್ವ ಮಾನವನ ಪರಿಕಲ್ಪನೆಗೆ ಅವರ ದೇಶಪ್ರೇಮ ಅಡ್ಡಿಯಾಗುವಂಥದ್ದಾಗಿರಲಿಲ್ಲ.

ಪೊಲೀಸ್ ಮತ್ತು ಸೇನೆರಹಿತ ಜಗತ್ತಿನ ಕನಸು ಕಂಡಿದ್ದ ಲೋಹಿಯಾ ಅಸಾಧಾರಣ ಮಾನವಪ್ರೇಮಿಯಾಗಿದ್ದರು. ಅವರು ಹುಟ್ಟಾ ಬಂಡುಕೋರರಾಗಿದ್ದರು. ಸ್ವಾತಂತ್ರ್ಯ ಬಯಸುವ ಸ್ವಭಾವ ಅವರದಾಗಿತ್ತು. ಅಂತೆಯೇ ಅವರು ಸ್ವತಂತ್ರ ಭಾರತದಲ್ಲೂ ಸ್ವಾತಂತ್ರ್ಯಕ್ಕಾಗಿ, ಪ್ರತಿಭಟನೆಯ ಹಕ್ಕಿಗಾಗಿ ಹೋರಾಟ ಮುಂದುವರಿಸಿದರು.

ಲೋಹಿಯಾರ ಮನುಷ್ಯಪ್ರೀತಿ ಅದೆಷ್ಟು ಗಾಢವಾಗಿತ್ತೆಂದರೆ ಜಾತಿ, ಲಿಂಗ ಕುರಿತ ಪ್ರತ್ಯೇಕತೆಯಿಂದ ಮುಕ್ತಾಗದ ಒಂದು ಸುಂದರ ಸಮಾಜದ ಕನಸನ್ನು ಅವರು ಕಂಡಿದ್ದರು. ಹೋರಾಟದ ರಾಜಕೀಯದಿಂದ ಬಸವಳಿದ ಆ ಜೀವಕ್ಕೆ ಸಾಹಿತ್ಯ ಹಾಗೂ ಸಾಹಿತಿಗಳ ಸಂಗ ಕಾಯಕಲ್ಪ ನೀಡುತ್ತಿತ್ತು.

ಸಮಾನತೆಯನ್ನಾಧರಿಸಿದ ಸಮಾಜದಲ್ಲೇ ಮನುಷ್ಯ ಘನತೆಯಿಂದ ಬದುಕಬಲ್ಲ ಎಂದು ಸಾರಿದ ಬಸವಣ್ಣನವರ ವೈಚಾರಿಕ ಕ್ರಾಂತಿಯ ಹಿನ್ನೆಲೆಯುಳ್ಳ ಕನ್ನಡಿಗರಿಗೆ ಲೋಹಿಯಾ ಚಿಂತನೆಗಳು ಅಪ್ಯಾಯಮಾನವೆನಿಸಿದವು.

ಕರ್ನಾಟಕದ ಮೊದಲ ರೈತ ಹೋರಾಟದಲ್ಲಿ ಪಾಲ್ಗೊಂಡ ಲೋಹಿಯಾ ಬಂಧನಕ್ಕೊಳಗಾದರು. ಅವರಿಂದಾಗಿ ಕಾಗೋಡು ರೈತ ಸತ್ಯಾಗ್ರಹ ರಾಷ್ಟ್ರದ ಗಮನ ಸೆಳೆಯಿತು. ಹಿರಿಯ ಲೋಹಿಯಾವಾದಿ ನೀಲಗಂಗಯ್ಯ ಪೂಜಾರ ಹುಟ್ಟು ಹಾಕಿದ ಹೆಬ್ಬಳ್ಳಿ ರೈತ ಹೋರಾಟ ಕಾಗೋಡು ಸತ್ಯಾಗ್ರಹಕ್ಕಿಂತ ಕಡಿಮೆ ಮಹತ್ವದ್ದಲ್ಲ. ಸಮಾಜವಾದಿ ಯುವಜನ ಸಭಾ, ಬರಹಗಾರರು ಮತ್ತು ಕಲಾವಿದರ ಒಕ್ಕೂಟ ಮತ್ತು ನವನಿರ್ಮಾಣ ಸಮಿತಿ ಇತ್ಯಾದಿ ಚಳವಳಿಗಳಿಗೆ ಲೋಹಿಯಾ ಸ್ಫೂರ್ತಿಯ ಸೆಲೆಯಾಗಿದ್ದರು.

ಪಿ. ಲಂಕೇಶ್, ಯು.ಆರ್. ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ, ಡಿ.ಎಸ್. ನಾಗಭೂಷಣ ಮೊದಲಾದ ಅನೇಕ ಹಿರಿ ಕಿರಿಯ ಸಾಹಿತಿಗಳು ಲೋಹಿಯಾ ವಿಚಾರಧಾರೆಯಿಂದ ಗಾಢವಾಗಿ ಪ್ರಭಾವಿತರಾಗಿದ್ದಾರೆ.

"ನನ್ನ ಜೀವನ ವಿಧಾನವನ್ನು, ಗ್ರಹಿಸುವ ಕ್ರಮವನ್ನು, ಆಲೋಚನೆಯನ್ನು, ಅಭಿವ್ಯಕ್ತಿ ಮಾಧ್ಯಮವನ್ನು, ಒಟ್ಟಿನಲ್ಲಿ ಸಮಗ್ರ ವ್ಯಕ್ತಿತ್ವವನ್ನು ಸಂಪೂರ್ಣ ಬದಲಿಸಿ ಹಾಕಿದ್ದು ಲೋಹಿಯಾರವರ ತತ್ವಚಿಂತನೆ. ಸದ್ಯದ ಭಾರತೀಯ ಸಂದರ್ಭದಲ್ಲಿ ಲೋಹಿಯಾ ಒಬ್ಬರೇ ಒರಿಜಿನಲ್ ಎನ್ನಿಸುವ ತತ್ವ ಮೀಮಾಂಸಕರು", ಎಂದಿದ್ದರು ಪೂರ್ಣಚಂದ್ರ ತೇಜಸ್ವಿ.

ಇಂಥ ಮಹಾನ್ ಚೇತನ ನಮ್ಮ ಪ್ರಕಾಶನ ಸಂಸ್ಥೆಗೆ ಒತ್ತಾಸೆಯಾಗಿರುವುದರಿಂದಲೇ ಪ್ರತಿಭೆಗಳನ್ನು ಗುರುತಿಸುವುದಷ್ಟೇ ಅಲ್ಲ ಅಂಥ ಪ್ರತಿಭೆಗಳು ಅರಳಿ ನಳನಳಿಸಲು ಸಾಹಿತ್ಯಕ ಸಾಂಸ್ಕೃತಿಕ ಪರಿಸರ ನಿರ್ಮಿಸುವುದು ನಮ್ಮ ಮುಖ್ಯ ಕಾಳಜಿಯಾಗಿದೆ. ನಮ್ಮ ಪ್ರಕಾಶನ ಈಗಾಗಲೇ ಕಾವ್ಯ, ಕತೆ, ಕಾದಂಬರಿ ಹಾಗೂ ವೈಚಾರಿಕ–ಹೀಗೆ ವಿವಿಧ ಪ್ರಕಾರಗಳಲ್ಲಿ ನೂರಕ್ಕೂ ಹೆಚ್ಚು ಕೃತಿಗಳನ್ನು ಹೊರತಂದಿದೆ.

ಸಾಹಿತ್ಯಕ ಬದ್ಧತೆ, ಸಾಂಸ್ಕೃತಿಕ ಕಾಳಜಿ ಹಾಗೂ ಸಾಮಾಜಿಕ ನ್ಯಾಯಕ್ಕೆ ಸದಾ ಒತ್ತು ಕೊಡುತ್ತಾ ಬಂದಿರುವ ನಮ್ಮ ಪ್ರಕಾಶನ ಸಂಸ್ಥೆ ಲೋಹಿಯಾ ಶತಮಾನೋತ್ಸವ ವರ್ಷದಲ್ಲಿ ಲೋಹಿಯಾರ ಆಶಯಗಳಿಗೆ ಇಂಬುಗೊಡುವ ಸೃಜನಶೀಲ ಹಾಗೂ ವೈಚಾರಿಕ ಕೃತಿಗಳನ್ನು ಹೊರತರಲು ಉದ್ದೇಶಿಸಿದೆ. ಆ ಮೂಲಕ ನಮ್ಮ ಪ್ರಕಾಶನ ತನ್ನ ಮಿತಿಯಲ್ಲೇ ಲೋಹಿಯಾ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಮುಂದಾಗಿದೆ. ಲೋಹಿಯಾ ಶತಮಾನೋತ್ಸವ ಮಾಲಿಕೆಯಲ್ಲಿ ಈ ವರ್ಷ ೧೨ ಕೃತಿಗಳನ್ನು ಹೊರತರುವ ಯೋಜನೆಯನ್ನು ಪ್ರಕಾಶನ ಹಾಕಿಕೊಂಡಿದೆ. ಈ ಮಾಲಿಕೆಯ ಮೊದಲ ಕೃತಿಯಾಗಿ, ವರ್ತಮಾನದ ರಾಜಕೀಯ ಮತ್ತು ಸಾಂಸ್ಕೃತಿಕ ದಾಖಲೆಗಳನ್ನೊಳಗೊಂಡ ಗೆಳೆಯ ಡಿ.ಎಸ್. ನಾಗಭೂಷಣ ಅವರ 'ವಸಿಷ್ಠರು ಮತ್ತು ವಾಲ್ಮೀಕಿಯರು' ಎಂಬ ಕೃತಿ ಹೊರಬರುತ್ತಿದೆ.

ಈ ಕೃತಿಯನ್ನು ಪ್ರಕಟಿಸಲು ಅನುವು ಮಾಡಿಕೊಟ್ಟ ಡಿ.ಎಸ್. ನಾಗಭೂಷಣ ಅವರಿಗೆ, ಸುಂದರ ಮುಖಪುಟ ರಚಿಸಿಕೊಟ್ಟ ಕಲಾವಿದ ಸುಧಾಕರ ದರ್ಬೆ ಅವರಿಗೆ, ಅಚ್ಚುಕಟ್ಟಾಗಿ ಅಕ್ಷರಜೋಡಣೆ ಮಾಡಿಕೊಟ್ಟ ಶ್ರೀಧರ್ ದಂಪತಿಗಳಿಗೆ, ಎಂದಿನಂತೆ ಸುಂದರವಾಗಿ ಮುದ್ರಿಸಿಕೊಟ್ಟ ವಿಶ್ವಾಸ್ ಪ್ರಿಂಟ್ಸ್‌ನ ಎಲ್ಲಾ ಸಿಬ್ಬಂದಿವರ್ಗಕ್ಕೆ, ಎಲ್ಲಕ್ಕಿಂತ ಮಿಗಿಲಾಗಿ ಕೊಂಡು ಓದಿ ಪ್ರಕಾಶನವನ್ನು ಬೆಂಬಲಿಸುತ್ತಿರುವ ಕನ್ನಡದ ಪ್ರೀತಿಯ ಓದುಗರಿಗೆ ಪ್ರಕಾಶನ ಕೃತಜ್ಞವಾಗಿದೆ.

ಸಿ. ಚನ್ನಬಸವಣ್ಣ
ಪ್ರಕಾಶನದ ಪರವಾಗಿ

ಪರಿವಿಡಿ

೧. ಚುನಾವಣಾ ಸಮೀಕ್ಷೆಗಳೆಂಬ ಮನರಂಜನೆಗಳು...

ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಚುನಾವಣಾ ಸಮೀಕ್ಷೆಗಳ ಭರಾಟೆಯೂ ಶುರುವಾಗುತ್ತದೆ. ಚುನಾವಣೆಗಳು ಹಂತಾನುಹಂತವಾಗಿ ನಡೆಯುವುದರಿಂದ ಈ ಸಮೀಕ್ಷೆಗಳೂ ಹಂತಾನುಹಂತ ವಾಗಿ ಪ್ರಕಟವಾಗುತ್ತಾ ನಮ್ಮ ಕುತೂಹಲ ಕೆರಳಿಸಿವೆ! ಚುನಾವಣೆಗಳು ಎಂದರೆ ಇತ್ತೀಚೆಗೆ ಅಕ್ರಮ, ಅಶಾಂತಿ ಎಂದೇ ಆಗಿರುವುದರಿಂದ ಅವನ್ನು ಆದಷ್ಟೂ ಶಾಂತಿ ಹಾಗೂ ಸುವ್ಯವಸ್ಥೆಗಳೊಂದಿಗೆ ನಡೆಸಲು ಚುನಾವಣಾ ಆಯೋಗ, ಮೊದಲಿದ್ದಂತೆ ಮತದಾನವನ್ನು ಒಂದೇ ದಿನಕ್ಕೆ ಬದಲಾಗಿ, ಹಲವಾರು ಹಂತಗಳಲ್ಲಿ ನಡೆಸಲು ಮುಂದಾಗಿದೆ. ಮೇಲ್ವಿಚಾರಣೆ ಚುರುಕಾಗಿರಲು ಮತ್ತು ಭದ್ರತಾ ಪಡೆಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಲು ಅನುಕೂಲವಾಗುವಂತೆ ಈ ಹೊಸ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಬಹುತೇಕ ಶಾಂತಿಯುತ ಚುನಾವಣೆಗಳಿಗೆ ಹೆಸರಾಗಿದ್ದ ಕರ್ನಾಟಕದಲ್ಲೂ ಇದೇ ಮೊದಲ ಬಾರಿಗೆ, ಎರಡು ವಾರಗಳಷ್ಟು ಕಾಲಾವಧಿಯಲ್ಲಿ ಪರಡಿಕೊಂಡಿರುವ ಮೂರು ದಿನಾಂಕಗಳಲ್ಲಿ ಮತ್ತು ರಾಜ್ಯದ ಚುನಾವಣಾ ಇತಿಹಾಸದಲ್ಲೇ ಕಂಡರಿಯದಂತಹ ಪ್ರಮಾಣದ ಭದ್ರತಾ ವ್ಯವಸ್ಥೆಯೊಂದಿಗೆ ಚುನಾವಣೆಗಳು ನಡೆಯುತ್ತಿವೆ.

ರಾಜ್ಯದಲ್ಲಿ ಈ ಬಾರಿ, ಹಿಂದಿನ ಸರ್ಕಾರದ ಸಂದರ್ಭದಲ್ಲಿ ಕಂಡು ಬಂದ ಅಧಿಕಾರ ಹಸ್ತಾಂತರದ ಗೊಂದಲದಿಂದಾಗಿ, ಸ್ಪರ್ಧೆ ಬಹು ತುರುಸಾಗಿರುವ ಮತ್ತು ಹಲವಾರು ಅಭ್ಯರ್ಥಿಗಳು ತಮ್ಮ ಆಸ್ತಿ ಕೋಟಿಗಟ್ಟಲೆ ರೂಪಾಯಿಗಳದೆಂದು ಅಧಿಕೃತವಾಗಿಯೇ ಘೋಷಿಸಿಕೊಂಡಿರುವ ಹಿನ್ನೆಲೆಯಲ್ಲಿ, ಚುನಾವಣಾ ಆಯೋಗದ ಈ ಮುನ್ನೆಚ್ಚರಿಕೆಯ ವ್ಯವಸ್ಥೆಯನ್ನು–ಸ್ವಲ್ಪ ಅತಿ ಎನ್ನಿಸಿದರೂ–ಯಾರಾದರೂ ಮೆಚ್ಚಲೇ ಬೇಕಾಗಿದೆ. ಏಕೆಂದರೆ, ಆಯೋಗ ಈ ಬಾರಿ, ರಾಜ್ಯಪಾಲರ ಆಡಳಿತದ ಅನುಕೂಲಕರ ಪರಿಸ್ಥಿತಿಯಿಂದಾಗಿ ಚುನಾವಣಾ ಕಾನೂನುಗಳನ್ನು ಅತಿ ಬಿಗಿಯಾಗಿ ಜಾರಿಗೆ ತರಲು ಯತ್ನಿಸಿದ್ದು, ಯಾವಾಗಲೂ ಸಾರ್ವಜನಿಕರ ಕಿರಿಕಿರಿಗೆ ಕಾರಣವಾಗುತ್ತಿದ್ದ ಚುನಾವಣಾ 'ಗದ್ದಲ' ಸಾಕಷ್ಟು ಕಡಿಮೆಯಾಗಿದೆ. ಆಯೋಗದ ಈ ರೀತಿಯ ಕಟ್ಟುನಿಟ್ಟು, ತಮಗಾಗಿ ಪ್ರಚಾರ ಮಾಡಿಕೊಳ್ಳುವ ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸಿದೆ ಎಂದು ಎಲ್ಲ ಪಕ್ಷಗಳೂ ಮತ್ತು ಅವುಗಳ ಅಭ್ಯರ್ಥಿಗಳು ದೂರುತ್ತಿರುವರಾದರೂ, ಇದಕ್ಕೆ ಕಾರಣ ಇವರೆಲ್ಲ ಸೇರಿ ಕಳೆದ ಚುನಾವಣೆಗಳಲ್ಲಿ

ಸೃಷ್ಟಿಸಿದ್ದ ಆತಂಕಕಾರಿ ವಾತಾವರಣವೇ ಆಗಿರುವುದರಿಂದ, ನಾವು ಈ ವಿಷಯದಲ್ಲಿ ಆಯೋಗವನ್ನು ಅದರ ಕಾರ್ಯ ವೈಖರಿಗಾಗಿ ಅಭಿನಂದಿಸಲೇ ಬೇಕಿದೆ.

ಆದರೆ ಮತದಾರರ ಪಟ್ಟಿ ತಯಾರಿ ಮತ್ತು ಅದರ ಪರಿಷ್ಕರಣೆಯ ವಿಷಯದಲ್ಲಿ ಆಯೋಗವನ್ನು ಹೀಗೆ ಅಭಿನಂದಿಸಲಾಗದು. ಏಕೆಂದರೆ, ಈ ಬಾರಿಯ ಮತದಾರರ ಪಟ್ಟಿ ಅತ್ಯಂತ ದೋಷಪೂರ್ಣವೂ, ಗೊಂದಲಕಾಕಾರಿಯೂ ಆಗಿದೆಯೆಂದು ಎಲ್ಲ ಕಡೆಗಳಿಂದ ದೂರು ಕೇಳಿ ಬರುತ್ತಿದೆ. ಈ ಪಟ್ಟಿಯನ್ನು ಸಿದ್ಧಪಡಿಸುವ ಸಿಬ್ಬಂದಿ ಈ ಕೆಲಸದಲ್ಲಿ ಸರಿಯಾಗಿ ತರಬೇತಿಗೊಳ್ಳದಿರುವುದು ಮತ್ತು ಈ ಸಂಬಂಧ ಸೂಕ್ತ ಮೇಲ್ವಿಚಾರಣಾ ವ್ಯವಸ್ಥೆ ಇಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಅಲ್ಲದೆ, ಚುನಾವಣಾ ಆಯೋಗ ಈ ಕೆಲಸಗಳಿಗಾಗಿ ಕಂದಾಯ ಇಲಾಖೆಯ ಅದಕ್ಷ ಮತ್ತು ಭ್ರಷ್ಟ ಸಿಬ್ಬಂದಿಯನ್ನೇ ಅವಲಂಬಿಸಬೇಕಾಗಿ ಬಂದಿರುವುದೇ ಈ ಪಟ್ಟಿ ಅತ್ಯಂತ ಬೇಜವಾಬ್ದಾರಿಯಿಂದ ತಯಾರಾಗಿರುವುದಕ್ಕೆ ಇನ್ನೊಂದು ಕಾರಣವಾಗಿದೆ. ಇವರಲ್ಲಿ ಬಹುತೇಕರಿಗೆ ಪ್ರಜಾಪ್ರಭುತ್ವದ ಅಥವಾ ಗಣರಾಜ್ಯ ವ್ಯವಸ್ಥೆಯ ಮಹತ್ವವಾಗಲೀ, ಅದರಲ್ಲಿ ಚುನಾವಣೆಗಳಿಗಿರುವ ಪಾವಿತ್ರ್ಯದ ಅರಿವಾಗಲೀ ಇದ್ದಂತಿಲ್ಲ. ಹೀಗಾಗಿ ಇವರು ಸ್ಥಳೀಯ ರಾಜಕಿಯ ಪುಢಾರಿಗಳ ಹಸ್ತಕ್ಷೇಪಕ್ಕೆ ಅವಕಾಶ ಮಾಡಿಕೊಟ್ಟು, ಅನೇಕ ಹುಸಿ ಮತದಾರರ ಸೇರ್ಪಡೆಗೂ ಕಾರಣರಾಗಿದ್ದಾರೆ. ಇಲ್ಲದೇ ಹೋದಲ್ಲಿ ಈ ಪಟ್ಟಿಯಲ್ಲಿ ಈ ಮೊದಲು, ಆಯೋಗವೇ ಒಪ್ಪಿಕೊಂಡಿದ್ದಂತೆ ಮುವ್ವತ್ತು ಲಕ್ಷಕ್ಕೂ ಹೆಚ್ಚು ಖೊಟ್ಟಿ ಮತದಾರರು ಸೇರಿಕೊಳ್ಳಲು ಹೇಗೆ ಸಾಧ್ಯವಾಗಿರುತ್ತಿತ್ತು?

ಉದಾಹರಣೆಗೆ ನನ್ನ ವಿಳಾಸದಲ್ಲೇ ಏಳು ಜನ ಖೊಟ್ಟಿ ಮತದಾರರು ದಾಖಲಾಗಿದ್ದರು. ಅವುಗಳನ್ನು ಪಟ್ಟಿಯಿಂದ ತೆಗೆಸಿ, ನನ್ನ ಕುಟುಂಬದ ಮತದಾರರ ಹೆಸರುಗಳನ್ನು ಸೇರಿಸಲು ನಾನು ಹರಸಾಹಸ ಮಾಡಬೇಕಾಯಿತು! ಈಗಲೂ ಹೊಸದಾಗಿ ಅರ್ಜಿ ಕೊಟ್ಟವರಲ್ಲಿ ಅನೇಕರ ಹೆಸರುಗಳು ಪಟ್ಟಿಯಲ್ಲಿ ಸೇರಿಯೇ ಇಲ್ಲ. ಸೇರಿದ್ದರೂ, ಹೆಸರು, ವಯಸ್ಸು, ಲಿಂಗ, ವಿಳಾಸಗಳಲ್ಲಿ ನಿರ್ಣಾಯಕ ತಪ್ಪುಗಳು ಹೇರಳವಾಗಿವೆ. ಅಂತಹವರು ಗುರುತಿನ ಚೀಟಿಗಾಗಿ ಬಂದ ಸಂದರ್ಭದಲ್ಲಿ ಅನೇಕ ರೀತಿಯ ಪ್ರಶ್ನೆಗಳನ್ನು ಎದುರಿಸಿ ಮುಜಗರಕ್ಕೊಳಪಟ್ಟಿದ್ದಾರೆ. ಇನ್ನು ಹೋದ ಚುನಾವಣೆಗಳಲ್ಲಿ ಹೇಗೂ ಮತದಾನ ಮಾಡಿದ್ದೆವಲ್ಲ ಎಂದು ನಿರಾಳವಾಗಿದ್ದವರು, ಈ ಬಾರಿ ಮತದಾನ ಮಾಡಲು ಹೋಗಿ ತಮ್ಮ ಹೆಸರುಗಳೇ ಕಾಣೆಯಾಗಿರುವದನ್ನು ಕಂಡು ಖೇದ-ನಿರಾಶೆಗಳಿಂದ ವಾಪಸಾಗಿದ್ದಾರೆ! ನಮ್ಮ ಚುನಾವಣಾ ಆಯೋಗ ಮತದಾನದ ವಿಷಯದಲ್ಲಿ ಸಾರ್ವಜನಿಕರಿಗೆ ಸಂಬಂಧಿಸಿದಂತೆ ಎಷ್ಟು ಕಟ್ಟುನಿಟ್ಟಾಗಿರುವುದೋ, ಮತದಾರರ ಪಟ್ಟಿ ತಯಾರಿಯ ವಿಷಯದಲ್ಲೂ ತನ್ನ ಸುಪರ್ದಿಯಲ್ಲಿರುವ ಸಿಬ್ಬಂದಿಯ ವಿಷಯದಲ್ಲೂ ಅಷ್ಟೇ ಕಟ್ಟುನಿಟ್ಟಾಗಿದ್ದರೆ ಮಾತ್ರ ನಮ್ಮ ಚುನಾವಣಾ ವ್ಯವಸ್ಥೆಯನ್ನು ನಿಜವಾದ ಅರ್ಥದಲ್ಲಿ ವಿಶ್ವಾಸಾರ್ಹಗೊಳಿಸಬಹುದು.

ಇನ್ನು ಚುನಾವಣಾ ಸಮೀಕ್ಷೆಗಳ ವಿಷಯಕ್ಕೆ ಬಂದರೆ, ಚುನಾವಣೆಗಳು ಈ ದೇಶದಲ್ಲಿ ಐವತ್ತಕ್ಕೂ ಹೆಚ್ಚು ವರ್ಷಗಳಿಂದ ನಡೆಯುತ್ತಿದ್ದರೂ, ಈ ಸಮೀಕ್ಷೆಗಳು ಮಾತ್ರ ಕಳೆದ

ಹತ್ತು-ಹದಿನೈದು ವರ್ಷಗಳಿಂದೀಚೆಗಷ್ಟೇ ಚಾಲೂ ಆಗಿವೆ. ಇದಕ್ಕೆ ಕಾರಣ, ಚುನಾವಣಾ ನಿರ್ವಹಣೆ ಎನ್ನುವುದು ಪಕ್ಷಗಳು ಮತ್ತು ಅಭ್ಯರ್ಥಿಗಳ ಪಾಲಿಗೆ ಒಂದು ಕೈಗಾರಿಕೆಯ ಸ್ವರೂಪ ಪಡೆಯುತ್ತಿರುವುದೇ ಆಗಿದೆ. ಚುನಾವಣೆಗಳಂತೆ ಇತರೆ ಮಾರುಕಟ್ಟೆ ವಿದ್ಯಮಾನಗಳ ಬಗ್ಗೆ ಸಮೀಕ್ಷೆಗಳನ್ನು ನಡೆಸುವುದೂ ಈಗ ಇನ್ನೊಂದು ಕೈಗಾರಿಕೆಯಾಗಿರುವುದರಿಂದ, ಚುನಾವಣೆಗಳೆಂಬ ಕೈಗಾರಿಕೆ ಇದನ್ನು ತನ್ನ ಪೂರಕ(ancillary) ಕೈಗಾರಿಕೆಯಂತೆ ಪ್ರೋತ್ಸಾಹಿಸುತ್ತಿದೆ! ಈ ಸಮೀಕ್ಷಾ ಸಂಸ್ಥೆಗಳು ತಮ್ಮನ್ನು ತಾವು ಸ್ವತಂತ್ರ ಸಂಸ್ಥೆಗಳೆಂದು ಕರೆದುಕೊಳ್ಳುವವಾದರೂ, ಅವಕ್ಕೂ ಭಾರಿ ಪ್ರಮಾಣದ ಹಣ ಹೂಡಿಕೆಯ ಅಗತ್ಯವಿರುವುದರಿಂದ, ಅವು ಕೂಡಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಒಂದಲ್ಲ ಒಂದು ಉದ್ಯಮದೊಂದಿಗೆ ಕೈ ಜೋಡಿಸಿಕೊಂಡೇ ಈ ಸಮೀಕ್ಷೆಗಳನ್ನು ಮಾಡುತ್ತಿವೆ. ಇತ್ತೀಚೆಗೆ ಇವನ್ನು ಮುದ್ರಣ ಅಥವಾ ವಿದ್ಯುನ್ಮಾನ ಮಾಧ್ಯಮಗಳು ತಮ್ಮ ಪ್ರಸಾರ ಅಥವಾ ಟಿ.ಆರ್.ಪಿ. ಹೆಚ್ಚಿಸಿಕೊಳ್ಳಲು ಪ್ರಾಯೋಜಿಸುತ್ತಿರುವುದೂ ಉಂಟು!

ಈ 'ವೈಜ್ಞಾನಿಕ' ಸಮೀಕ್ಷೆಗಳು ಹೆಚ್ಚು ಬಾರಿ ಸುಳ್ಳಾಗಿ ಪರಿಣಮಿಸಿದ್ದರೂ, ಅವುಗಳ 'ಜನಪ್ರಿಯತೆ'ಯೇನೂ ಕಡಿಮೆಯಾಗಿಲ್ಲ! ಜನ ಅವನ್ನು ಸತ್ಯಕ್ಕಾಗಿ ಗಮನಿಸದಿದ್ದರೂ, ಕುತೂಹಲಕ್ಕಾಗಿಯಾದರೂ ಗಮನಿಸುತ್ತಾರೆ ಎಂಬುದು ಈ ಸಮೀಕ್ಷಾಕಾರರಿಗೆ ಗೊತ್ತಿದೆ. ಅವರು ಕೂಡಾ ತಮ್ಮ ಸಮೀಕ್ಷೆಗಳ ವಿಧಾನವನ್ನು ವಿವರಿಸುತ್ತಾ, ತಮ್ಮ ಸಮೀಕ್ಷೆಗಳ ದೋಷಗಳ ಶೇಕಡಾವಾರು ಪ್ರಮಾಣವನ್ನು ಮೊದಲೇ ಘೋಷಿಸ ತೊಡಗಿದ್ದಾರೆ–ಸಿಗರೇಟ್ ಪ್ಯಾಕ್ ಮೇಲಿನ ಅಪಾಯದ ಸೂಚನೆಯಂತೆ! ಆದರೂ, ಪ್ರತಿ ಬಾರಿಯೂ ಅವುಗಳ ದೋಷ ಅವರು ಸೂಚಿಸುವ ಪ್ರಮಾಣದ ಎರಡರಷ್ಟೇನು, ಕೆಲವು ಬಾರಿ ಐದು-ಹತ್ತು ಪಟ್ಟು ಹೆಚ್ಚಿರುತ್ತದೆ! ಆದರೆ ಇದರ ಬಗ್ಗೆ ಅವರಿಗೇನೂ ಸಂಕೋಚವಿರುವುದಿಲ್ಲ. ಏಕೆಂದರೆ, ಅವರು ಎಷ್ಟಾದರೂ ಕೈಗಾರಿಕೋದ್ಯಮಿಗಳು... ತಮ್ಮ ಉತ್ಪನ್ನ ಕೆಟ್ಟದ್ದೋ, ಒಳ್ಳೆಯದೋ ಎಂಬುದು ಅವರಿಗೆ ಮುಖ್ಯವಲ್ಲ. ಎಲ್ಲಿಯವರೆಗೆ ಉತ್ಪನ್ನಗಳಿಗೆ ಗ್ರಾಹಕರಿರುತ್ತಾರೋ ಅಲ್ಲಿಯವರೆಗೆ ಅದನ್ನು ಉತ್ಪಾದಿಸುತ್ತಿರುವುದು, ಅವರ ಕೈಗಾರಿಕಾ ಧರ್ಮವಾಗಿರುತ್ತದೆ! ಇದರ ಹಿಂದೆ ರಾಜಕೀಯ ಪಕ್ಷಗಳೂ, ಅವುಗಳ ಹಿಂದೆ ಅವುಗಳಿಂದ ಲಾಭ ಪಡೆಯ ಬಯಸುವ ಉದ್ಯಮಗಳೂ ಇದ್ದೇ ಇರುತ್ತವೆ.

ಹೀಗೆ ಚುನಾವಣಾ ಸಮೀಕ್ಷೆಗಳೆಂಬುವವು ಒಂದು ಕಡೆ ಸತ್ಯ-ಕುತೂಹಲಕ್ಕಲ್ಲದಿದ್ದರೂ, ಸುದ್ದಿ ಸ್ವಾರಸ್ಯಕ್ಕಾಗಿಯಾದರೂ ಮುಗಿ ಬೀಳುವ ಮತದಾರ-ಓದುಗರಿಂದ; ಮತ್ತೊಂದು ಕಡೆ ತನಗೆ ಬೇಕಾದ ರಾಜಕೀಯ ಪಕ್ಷದ ಹಿತಕ್ಕಾಗಿ ಹಣ ಹೂಡುವ ಬಂಡವಾಳದಾರರಿಂದ ಪ್ರೋತ್ಸಾಹ ಪಡೆದು ಪ್ರಕಟವಾಗುತ್ತಲೇ ಇವೆ. ಅಂದ ಮಾತ್ರಕ್ಕೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಸಮೀಕ್ಷಾ ತಂಡಗಳೇ ಅಥವಾ ಸಮೀಕ್ಷಕರೇ ಇಲ್ಲವೆಂದಲ್ಲ. ಉದಾಹರಣೆಗೆ ಯೋಗೇಂದ್ರ ಯಾದವ್‌ರಂತಹ ವೃತ್ತಿಪರ ಸಮೀಕ್ಷಾ ತಜ್ಞರ ಪ್ರಾಮಾಣಿಕತೆಯನ್ನು ಯಾರೂ ಅಲ್ಲಗಳೆಯಲಾರರು. ಆದರೆ ಅವರ ಸಮೀಕ್ಷೆಗಳೂ ಇತ್ತೀಚೆಗೆ ಚುನಾವಣಾ ಸಮೀಕ್ಷೆಗಳನ್ನು

ಮುನ್ನೋಡುವಲ್ಲಿ ಸಾಕಷ್ಟು ಅಂತರದಿಂದ ವಿಫಲವಾಗಿವೆ. ಚುನಾವಣಾ ಪೂರ್ವ ಸಮೀಕ್ಷೆಗಳು ಹೋಗಲಿ, ಮತದಾನಾನಂತರದ (Exit) ಸಮೀಕ್ಷೆಗಳೂ ಹಾಸ್ಯಾಸ್ಪದವೆನಿಸುವಷ್ಟರ ಮಟ್ಟಿಗೆ ವಿಫಲವಾಗಿವೆ. ಏಕೆ? ನಮ್ಮ ಚುನಾವಣಾ-ವಿಶೇಷವಾಗಿ ಮತದಾನ-ಪ್ರಕ್ರಿಯೆ, ಈಗ ಕ್ರಮೇಣ ತನ್ನ 'ಸೂಚ್ಯಂಕ'ಗಳನ್ನು ಅನಿರೀಕ್ಷಿತವಾಗಿ ಮತ್ತು ಕ್ಷಿಪ್ರವಾಗಿ ಬದಲಾಯಿಸಿಕೊಳ್ಳುವ ಒತ್ತಡಗಳಿಗೆ ಸಿಕ್ಕಿದೆ. ಕಳೆದ ಗುಜರಾತ್ ಚುನಾವಣಾ ಸಮೀಕ್ಷೆಗಳು ಈ ಸಮೀಕ್ಷೆಗಳ 'ಅವೈಜ್ಞಾನಿಕತೆ'ಗೆ ಅನೇಕ ಸಾಕ್ಷಿಯನ್ನೊದಗಿಸಿದವು: ಗೆಲ್ಲುವ ಪಕ್ಷದ ಪರವಾಗಿದ್ದ ಸಂಸ್ಥೆಗಳು ನಡೆಸಿದ ಸಮೀಕ್ಷೆಗಳು ಮಾತ್ರ ನಿಜವಾಗಿದ್ದವು!

ಅದೇನೇ ಇರಲಿ, ಸ್ವತಂತ್ರ ಮತ್ತು ಪ್ರಾಮಾಣಿಕವೆನ್ನಿಸುವ ಸಂಸ್ಥೆಗಳು ನಡೆಸಿದ ಸಮೀಕ್ಷೆಗಳೂ ವಿಫಲವಾಗಲು ಮುಖ್ಯ ಕಾರಣ, ಅವುಗಳು ಸಮೀಕ್ಷೆಗಾಗಿ ತಯಾರು ಮಾಡಿಕೊಳ್ಳುವ 'ಮಾದರಿ' (Sample) ದೋಷಪೂರ್ಣವಾಗಿರುವುದು. ಸಂಖ್ಯಾಶಾಸ್ತ್ರದ ವೈಜ್ಞಾನಿಕ ತತ್ವಗಳನ್ನಾಧರಿಸಿ ಈ ಮಾದರಿಯನ್ನು ರೂಪಿಸಲಾಗುತ್ತದೆ. ಆದರೆ ಅಂಕಿ ಅಂಶಗಳನ್ನಾಧರಿಸಿಧ ಈ ಸಂಖ್ಯಾಶಾಸ್ತ್ರದ ವೈಜ್ಞಾನಿಕತೆಯೇ ಒಂದು ನೆಲೆಯಲ್ಲಿ ಅನುಮಾನಾಸ್ಪದವೆನ್ನಿಸುತ್ತದೆ. ಏಕೆಂದರೆ, ಸುಳ್ಳುಗಳಲ್ಲಿ ಸುಳ್ಳು, ಶುದ್ಧ ಸುಳ್ಳು ಮತ್ತು ಅಂಕಿ-ಅಂಶ ಎಂಬ ಮೂರು ಪ್ರಬೇಧಗಳಿವೆ ಎಂಬ ವಿಡಂಬನೆಯನ್ನು ಎಲ್ಲರೂ ಕೇಳಿರಬಹುದು! ಅದೇನೇ ಇರಲಿ, ಸದಾ ಚಂಚಲವಾಗಿರುವ ಮನಸ್ಸನ್ನು ಹೊಂದಿರುವ ಮನುಷ್ಯರ 'ಮಾದರಿ', ವೈಜ್ಞಾನಿಕವೆಂದು ಕರೆಯಲಾಗದಷ್ಟು ಅಸ್ಥಿರವಾಗಿರುತ್ತದೆ ಎಂಬುದನ್ನು ಎಲ್ಲರೂ ಬಲ್ಲರು. ಹಾಗಾಗಿ, ತನ್ನ ಆಯ್ಕೆಯನ್ನು ಮತದಾರ-ಮನುಷ್ಯ ಅಂತಿಮವಾಗಿ ಖಚಿತಗೊಳಿಸಿಕೊಳ್ಳುವುದು ಯಾವಾಗ ಮತ್ತು ಯಾವ ಕಾರಣದ ಮೇಲೆ ಎಂಬುದು ತುಂಬಾ ಸಂಕೀರ್ಣವಾದ ವಿಷಯ. ಅಲ್ಲದೆ ಅವನು ತನ್ನ ಆಯ್ಕೆಯನ್ನು ಸಮೀಕ್ಷಕನಿಗೆ ಸೂಚಿಸುವಾಗಲೂ ಎಷ್ಟು ಸ್ಥಿರ ಮತ್ತು ಬಿಚ್ಚು ಮನಸ್ಸಿನವನಾಗಿರುತ್ತಾನೆ ಎಂಬುದೂ ಸಮೀಕ್ಷೆಯಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತದೆ. ಇದು ಮತದಾನಾನಂತರದ ಸಮೀಕ್ಷೆಯಲ್ಲಂತೂ ನಿರ್ಣಾಯಕ. ಜೊತೆಗೆ, ಸಮೀಕ್ಷೆಗಾಗಿ ಸಿದ್ಧಪಡಿಸುವ ಪ್ರಶ್ನಾವಳಿ, ಅದರ ಭಾಷೆ ಹಾಗೂ ಅದರ ಉದ್ದೇಶ-ಸ್ಪಷ್ಟತೆಗಳೂ ಇಲ್ಲಿ ಮುಖ್ಯವಾಗುತ್ತವೆ. ಬಹಳಷ್ಟು ಸಮೀಕ್ಷಾ ಸಂಸ್ಥೆಗಳು ಪ್ರಾದೇಶಿಕ ಭಾಷೆಗಳ ಮೇಲೆ ಹಿಡಿತವಿಲ್ಲದ 'ಪರಿಣತ'ರಿಂದ ತುಂಬಿರುವುದರಿಂದ ಈ ಪ್ರಶ್ನಾವಳಿ ಬಹು ಬಾರಿ ಮತದಾರರಿಗೆ ಅಸಂಗತವಾಗಿ ಕಾಣುತ್ತಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಸಮೀಕ್ಷೆ ರೂಪಿಸಿಕೊಂಡಿರುವ 'ಮಾದರಿ'ಯ ಸ್ವರೂಪ ಗಾತ್ರ ಮತ್ತು ವ್ಯಾಪ್ತಿ ಬಹು ಮುಖ್ಯವೆನಿಸಿಕೊಳ್ಳುತ್ತದೆ.

ಚುನಾವಣೆಗಳಲ್ಲಿ ಜಾತಿ, ವರ್ಗ, ಲಿಂಗ, ಅಭ್ಯರ್ಥಿಯ ಸಾರ್ವಜನಿಕ ವರ್ಚಸ್ಸು, ಚುನಾವಣಾ ವಿಷಯಗಳು, ವಿವಿಧ ಪಕ್ಷಗಳ ಪ್ರಣಾಳಿಕೆಗಳು, ಕ್ಷೇತ್ರದ ಭೌಗೋಳಿಕ ಹಾಗೂ ಆರ್ಥಿಕ ಸ್ವರೂಪ, ಹಿಂದಿನ ಚುನಾವಣೆಗಳ ಮತದಾನದ ಪ್ರಮಾಣ ಇತ್ಯಾದಿಗಳೆಲ್ಲವೂ ಸೇರಿ ಪ್ರಸಕ್ತ ಫಲಿತಾಂಶವನ್ನು ನಿರ್ಧರಿಸುವುದರಿಂದ, ಈ ಎಲ್ಲ ನೆಲೆಗಳನ್ನೂ ಪ್ರಮಾಣಾನುಸಾರ

ಸಂಯೋಜಿಸಿ 'ಮಾದರಿ'ಯನ್ನು ರೂಪಿಸಲಾಗುತ್ತದೆ. ಮಾದರಿ ಚಿಕ್ಕದಾದಷ್ಟೂ, ಈ ನೆಲೆಗಳ ವೈವಿಧ್ಯ ಕಡಿಮೆಯಾಗುತ್ತಾ ಹೋಗುತ್ತದೆ; ದೊಡ್ಡದಾದಷ್ಟೂ, ಈ ನೆಲೆಗಳ ಸೂಕ್ಷ್ಮತೆ ಸ್ಥೂಲವಾಗುತ್ತಾ ಹೋಗುತ್ತದೆ! ಹೀಗೆ 'ಮಾದರಿ'ಯ ಗಾತ್ರ, ವ್ಯಾಪ್ತಿ ಮತ್ತು ಸ್ವರೂಪಗಳೇ ಸಮೀಕ್ಷೆಯ ವಿಶ್ವಸನೀಯತೆಯನ್ನು ನಿರ್ಧರಿಸುತ್ತದೆ. ಹಾಗಾಗಿ ಸಮರ್ಪಕವಾದ 'ಮಾದರಿ' ಎಂದರೆ ಎಂತಹುದು ಎಂಬುದೇ ಇನ್ನೂ 'ವೈಜ್ಞಾನಿಕ'ವಾಗಿ ನಿರ್ಧಾರವಾಗಿಲ್ಲ! ಹೀಗಿರುವಾಗ, ಈ ಚುನಾವಣಾ ಸಮೀಕ್ಷೆಗಳ ಫಲಿತಾಂಶಗಳು 'ವೈಜ್ಞಾನಿಕ'ವಾಗಿರಲು ಹೇಗೆ ಸಾಧ್ಯ? ಹಾಗಾಗಿಯೇ ಈ ಸಮೀಕ್ಷೆಗಳು ಕ್ರಮೇಣ 'ಸತ್ಯಾ'ನ್ವೇಷಣೆಯ ಪ್ರಯತ್ನಗಳಿಗಿಂತ ಹೆಚ್ಚಾಗಿ ಮಾಧ್ಯಮಗಳ ಮಸಾಲೆಯನ್ನು ಹೆಚ್ಚಿಸುವ ಅಥವಾ ಸ್ಪರ್ಧಿಸಿರುವ ಪಕ್ಷಗಳ ಆತ್ಮ ವಿಶ್ವಾಸವನ್ನು ಹೆಚ್ಚಿಸುವ ಪ್ರಯತ್ನಗಳಾಗಿ ಸಾರ್ವಜನಿಕರಿಗೆ ಕಾಣತೊಡಗಿವೆ. ಉದಾಹರಣೆಗೆ ನೋಡಿ: ಕರ್ನಾಟಕದ ಸದ್ಯದ ಚುನಾವಣೆಗಳ ಬಗ್ಗೆ ಮೊದಲೆರಡು ಸಮೀಕ್ಷೆಗಳು ಕಾಂಗ್ರೆಸ್‌ಗೆ ಹೆಚ್ಚಿನ ಸ್ಥಾನಗಳನ್ನು ನೀಡಿದರೆ, ಅದಕ್ಕೆ ಪ್ರತಿಕ್ರಿಯೆಯೆಂಬಂತೆ ಬಂದ ಇನ್ನೊಂದು ಸಮೀಕ್ಷೆ ಬಿಜೆಪಿಗೆ ಹೆಚ್ಚು ಸ್ಥಾನಗಳನ್ನು ನೀಡಿದೆ! ನಂತರ ಜೆಡಿಎಸ್‌ಗೂ ಎಲ್ಲಕ್ಕಿಂತ ಹೆಚ್ಚಿನ ಸ್ಥಾನಗಳನ್ನು ನೀಡಿರುವ ಮತ್ತೊಂದು ಸಮೀಕ್ಷೆಯೂ ಪ್ರಕಟವಾಗಿದೆ! ಜೊತೆಗೆ ಈ ಸಮೀಕ್ಷೆಗಳಲ್ಲಿ ಮೂರು ಮುಖ್ಯ ಪಕ್ಷಗಳ ನಡುವಣ ಅಂತರಗಳೂ ವೈವಿಧ್ಯಮಯವಾಗಿವೆ. ಸಮೀಕ್ಷೆಗಳು ನಿಜವಾಗಿಯೂ ವೈಜ್ಞಾನಿಕವಾಗಿರುವುದಾದರೆ, ಇಷ್ಟೊಂದು ಅಂತರಗಳೇಕೆ? ಸಮೀಕ್ಷಾಕಾರರು ಇದಕ್ಕೆ ವಿವಿಧ ಕಾರಣಗಳನ್ನು ನೀಡುತ್ತಾರೆ. ಆದರೆ, ಒಂದು ಸಮೀಕ್ಷಾ ಸಂಸ್ಥೆ ಹೇಳುವ ಕಾರಣಗಳಿಗೂ ಇನ್ನೊಂದು ಸಮೀಕ್ಷಾ ಸಂಸ್ಥೆ ಹೇಳುವ ಕಾರಣಗಳಿಗೂ ಸಂಬಂಧವೇ ಇರುವುದಿಲ್ಲ! ಹಾಗಾಗಿಯೂ ಇವು ವಿಶ್ವಸನೀಯವೆನ್ನಿಸುವುದಿಲ್ಲ.

ಹಾಗೆ ನೋಡಿದರೆ, ಸುಮ್ಮನೆ ಚುನಾವಣಾ ವಾತಾವರಣವನ್ನು ಗಮನಿಸಿ ಅಥವಾ 'ವಾಸನೆ ಹಿಡಿದು', ಸಾಮಾನ್ಯ ಪರಿಜ್ಞಾನದೊಡನೆ ಅಂತರ್ಬೋಧೆಯನ್ನು ನೆಚ್ಚಿ ಮಾಡುವ ಊಹೆಯೇ ಸತ್ಯಕ್ಕೆ ಹೆಚ್ಚು ಹತ್ತಿರವೇನೋ ಎಂದು ಬಹಳ ಬಾರಿ ನನಗೆ ಅನ್ನಿಸಿದೆ... ಹಾಗಾಗಿಯೇ ಹೋದ ಚುನಾವಣೆಯಲ್ಲಿ ಜೆಡಿಎಸ್ ೪೫ರಿಂದ ೫೫ ಸ್ಥಾನಗಳನ್ನು ಪಡೆಯಬಹುದೆಂಬ-ಅಂದು ಬಹಳ ಜನರಿಗೆ ಹಾಸ್ಯಾಸ್ಪದವೆನಿಸಿದ್ದ-ನನ್ನ ಊಹೆ ನಿಜವಾಯಿತೋ ಏನೋ! ಈ ಬಾರಿ ನನ್ನ ಇಂತಹ ಊಹೆ ನಿಜವಾಗುತ್ತದೆ ಎಂದು ಹೇಳಲಾರೆ. ಏಕೆಂದರೆ, ಅಂತರ್ಬೋಧೆಯ ಮರ್ಮ, ಅಂತರ್ಬೋಧೆಯಾದವನಿಗೂ ಗೊತ್ತಿರುವುದಿಲ್ಲ! ಆದರೂ ನನ್ನ ಊಹೆ ಹೀಗಿದೆ: ಕಾಂಗ್ರೆಸ್‌ಗೆ: ೧೦೦ರಿಂದ ೧೦೫, ಬಿಜೆಪಿಗೆ: ೮೫ರಿಂದ ೯೫, ಜೆಡಿಎಸ್‌ಗೆ: ೨೫ರಿಂದ ೩೦ ಹಾಗೂ ಇತರರಿಗೆ: ೫ರಿಂದ ೧೦. ಇದು ಸುಳ್ಳಾದರೂ ನನಗೇನೂ ಆಶ್ಚರ್ಯವಿಲ್ಲ ಅಥವಾ ಬೇಸರವಿಲ್ಲ. ಏಕೆಂದರೆ, ಇದಕ್ಕಾಗಿ ನಾನು ಯಾವ ಹಣವನ್ನೂ ಹೂಡಿಲ್ಲ ಮತ್ತು ಇದನ್ನು ವೈಜ್ಞಾನಿಕವೆಂದು ಹೇಳಿಕೊಂಡು, ಯಾರ ಕುತೂಹಲವನ್ನೂ ಕೆರಳಿಸಿಲ್ಲ!

(೧೬ ಮೇ ೨೦೦೮ರ ಸಂಚಿಕೆಯಲ್ಲಿ ಪ್ರಕಟವಾಗಬೇಕಿದ್ದ ಈ ಲೇಖನ, ಆ ದಿನಾಂಕದ ಸಂಚಿಕೆಯೇ

ಹೊರಬರಲಿಲ್ಲವಾದ್ದರಿಂದ ಪತ್ರಿಕೆಯಲ್ಲಿ ಪ್ರಕಟವಾಗಲಿಲ್ಲ! ಆದರೆ ನನ್ನ 'ನಾಗಸಂಪದ' ಬ್ಲಾಗ್‌ನಲ್ಲಿ ಪ್ರಕಟವಾಗಿ ಹಲವರ ಗಮನ ಸೆಳೆಯಿತು. ಚುನಾವಣಾ ಫಲಿತಾಂಶಗಳನ್ನು ಕುರಿತ ನನ್ನ ಅಂತರ್ಬೋಧೆಯನ್ನಾಧರಿಸಿದ ಊಹೆಯಲ್ಲಿ ನಿಜ ಫಲಿತಾಂಶಗಳನ್ನು ಗಮನಿಸಿದಾಗ ಕಾಂಗ್ರೆಸ್ಸಿನ ಮತ್ತು ಬಿಜೆಪಿಯ ಸ್ಥಾನಗಳು ಅದಲು ಬದಲಾಗಿರುವುದು ಕಂಡುಬರುತ್ತದೆ. ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ ಮತ್ತು ಮತದಾನದ ಒಂದೊಂದೇ ಹಂತ ಮುಗಿಯುತ್ತಿದ್ದಂತೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ತಮ್ಮ ಚುನಾವಣಾ ಪ್ರಚಾರ ವ್ಯವಸ್ಥೆಗಳನ್ನು ನಿರ್ವಹಿಸಿದ ರೀತಿ ಇದಕ್ಕೆ ಕಾರಣವೆಂದು ನಾನು ಸಮಾಧಾನ ಪಟ್ಟುಕೊಳ್ಳಬಹುದಾಗಿದೆ!)

■

೨. ಕಲ್ಯಾಣ ಕ್ರಾಂತಿ ಎಂಬ ನೋವಿನ ಹಲ್ಲು!

ಗಿರೀಶ್ ಕಾರ್ನಾಡರು ತಮ್ಮ 'ತಲೆದಂಡ' ನಾಟಕದ ಮುನ್ನುಡಿಯಲ್ಲಿ ನೋಯುವ ಹಲ್ಲಿನ ಕಡೆ ನಾಲಗೆ ಪದೇ ಪದೇ ಹೊರಳುವಂತೆ ಕನ್ನಡ ಪ್ರಜ್ಞೆ ಪದೇ ಪದೇ ೧೨ನೇ ಶತಮಾನದ ಕಲ್ಯಾಣ ಕ್ರಾಂತಿಯ ಕಡೆ ಹೊರಳುವ ಕಡೆಗೆ ನಮ್ಮ ಗಮನ ಸೆಳೆದಿದ್ದಾರೆ. ಈ ಮಾತನ್ನು ಆನಂತರ ನಮ್ಮ ಅನೇಕ ಸಂಸ್ಕೃತಿ ಚಿಂತಕರು ಮತ್ತು ಲೇಖಕರು ತಮ್ಮ ಸಾಹಿತ್ಯ-ಸಂಸ್ಕೃತಿ ಚಿಂತನೆಗಳ ಮಧ್ಯೆ ಪ್ರಸ್ತಾಪಿಸಿದ್ದಾರೆ. ಆದರೆ ಇವರೆಲ್ಲ, ಕಾರ್ನಾಡರ ಈ ಮಾತನ್ನು ಕನ್ನಡ ಸಂಸ್ಕೃತಿಯಲ್ಲಿ ಕಲ್ಯಾಣ ಕ್ರಾಂತಿಯ ಮಹತ್ವವನ್ನು ಸೂಚಿಸಲಷ್ಟೇ ಬಳಸಿರುವಂತೆ ತೋರುತ್ತದೆಯೇ ಹೊರತು, ಆ ಮಾತಿನಲ್ಲಿರುವ 'ನೋಯುವ ಹಲ್ಲು' ಎಂಬ ಪದ ಪುಂಜದ ಕಡೆ ಗಮನ ಕೊಟ್ಟಂತೆ ತೋರುವುದಿಲ್ಲ. ಅವರು ಹಾಗೆ ಗಮನ ಕೊಟ್ಟಿದ್ದರೆ 'ತಲೆದಂಡ' ನಾಟಕವೂ ಸೇರಿದಂತೆ ಕಲ್ಯಾಣ ಕ್ರಾಂತಿ ಕುರಿತು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮೂಡಿರುವ ಸೃಜನ ಮತ್ತು ಸೃಜನೇತರ ಕೃತಿಗಳ ಬಗ್ಗೆ ಈಗ ಬಂದಿರುವ ಕೇವಲ 'ಚಿಂತನಶೀಲ' ಬರಹಗಳ ಜೊತೆ ಜೊತೆಗೇ 'ಕ್ರಿಯಾಶೀಲ' ಬರವಣಿಗೆಯೂ ಹೊಮ್ಮಿರುತ್ತಿತ್ತೇನೋ! ಅಂದರೆ ಕನ್ನಡ ಸಮಾಜದಲ್ಲಿ ಒಂದು ನಿರ್ಣಾಯಕ ಸಾಮಾಜಿಕ ಬದಲಾವಣೆಗೆ–ತಮಿಳ್ನಾಡಿನಲ್ಲಿ ಆದಂತೆ–ಇಂಬುಕೊಡುವ ಒಂದು ಪ್ರಬುದ್ಧ ಸಾಹಿತ್ಯಕ, ಸಾಂಸ್ಕೃತಿಕ ಸಂವಾದ ಕನ್ನಡ ಸಾಹಿತ್ಯದ ಚೈತನ್ಯದ ಶಕ್ತಿಯಾಗಿರುತ್ತಿತ್ತೇನೋ...

ಇಂತಹ ಸಂವಾದ ಕನ್ನಡ ಸಾಹಿತ್ಯದಲ್ಲಿ ನಡೆದಿಲ್ಲ ಎಂದಲ್ಲ. ಆದರೆ ಅದು ಕನ್ನಡ ಸಾಹಿತ್ಯದ ಚೈತನ್ಯಶಕ್ತಿ (driving force) ಆಗಿಲ್ಲ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು'ವನ್ನೂ, ಭೈರಪ್ಪನವರ 'ಆವರಣ'ವನ್ನೂ ಒಟ್ಟಿಗೇ ಶ್ರೇಷ್ಠ ಕೃತಿಗಳು ಎಂದು 'ಪ್ರಾಮಾಣಿಕ'ವಾಗಿ ಗುರುತಿಸುವ, ಚರ್ಚಿಸುವ, ಸಮರ್ಥಿಸುವ ಒಂದು ದೊಡ್ಡ ಸಾಂಸ್ಕೃತಿಕ ಧಾರೆಯೇ ಇಂದು ಕನ್ನಡ ಸಾಹಿತ್ಯ ಸಂಕಥನದ ಮಧ್ಯೆ ಜೀವಂತವಿದೆ! ನಾನು ಹೇಳುತ್ತಿರುವುದು ಈ ಅಸಾಂಗತ್ಯದ ಬಗ್ಗೆ; ಇದು ಸೂಚಿಸುವ ಸಾಹಿತ್ಯದ ಲೋಕಾಭಿರಾಮೀಕರಣದ ಹಿಂದಿರುವ ಸಾಂಸ್ಕೃತಿಕ ದೃಷ್ಟಿ ಕೇಂದ್ರದ ಪ್ರಕ್ಷೇಪದ ಬಗ್ಗೆ: ಕನ್ನಡ ಸಾಹಿತ್ಯ ಕಲ್ಯಾಣ ಕ್ರಾಂತಿಯಿಂದ ಸ್ಫೂರ್ತಿ ಪಡೆದು, ಒಂದು ದೊಡ್ಡ ಸಾಮಾಜಿಕ ಕ್ರಾಂತಿಗೆ ಕಾರಣವಾಗಿರಬೇಕಿತ್ತು ಎಂದಲ್ಲ. ನಿಜ, ಕಲ್ಯಾಣ ಕ್ರಾಂತಿ ಈಗಲೂ ಕನ್ನಡ ಸಂವೇದನೆಯ ಹೃದಯ ಸ್ಥಾನದಲ್ಲಿದೆ. ಆದರೆ ಒಂದು ಒಣ ಹೆಮ್ಮೆಯ ವಿಷಯವಾಗಿ. ಕನ್ನಡ ಸಮಾಜ-ಅದರ ರಾಜಕಾರಣ,

ಭಾಷೆ, ಸಂವೇದನೆ ಎಲ್ಲವೂ ಒಟ್ಟಿಗೆ ಏರಿದ್ದ ಹೊಸ ಎತ್ತರಗಳ ದ್ಯೋತಕವಾಗಿ ಅದನ್ನು ನೋಡುತ್ತೇವೆ. ಆದರೆ ಅದು ಕಾರ್ನಾಡರು ಹೇಳುವ ಹಾಗೆ 'ನೋಯುವ ಹಲ್ಲು' ಕೂಡಾ ಆಗಿದೆಯಲ್ಲವೇ? ಅಂದರೆ ಕಲ್ಯಾಣ ಕ್ರಾಂತಿಯ ನೆನಪು; ಆ ಹೊಸ ಎತ್ತರಗಳನ್ನು ಕನ್ನಡ ಸಮಾಜ, ರಾಜಕಾರಣ, ಸಂವೇದನೆ ಮತ್ತು ಭಾಷೆಗಳು ಬೀಜರೂಪಿಯಾಗಿ ಉಳಿಸಿಕೊಳ್ಳಲಾಗದೇ ಹೋದ ವೇದನೆಯಾಗಿಯೂ ನಮ್ಮನ್ನು ಕಾಡಬೇಕಲ್ಲವೆ? ಆದರೆ ಇಂದು ಹಾಗೆ ಅದು ನಮ್ಮನ್ನು ಕಾಡುತ್ತಿದೆಯೇ?

ಈ ಪ್ರಶ್ನೆಗೆ ಉತ್ತರ ನಾವು ಕಲ್ಯಾಣ ಕ್ರಾಂತಿಯನ್ನು ಒಂದು ಪರಿಕಲ್ಪನೆಯಾಗಿ ಹೇಗೆ ಗ್ರಹಿಸುತ್ತೇವೆ ಎಂಬುದನ್ನು ಅವಲಂಬಿಸಿದೆ ಎಂದು ತೋರುತ್ತದೆ. ಇಲ್ಲಿ ಕ್ರಾಂತಿ ಎಂದರೆ ಅಲ್ಲಮಪ್ರಭುಗಳ ಪ್ರಭಾವದಲ್ಲಿ, ಬಸವಣ್ಣನ ನೇತೃತ್ವದಲ್ಲಿ ನಡೆದ ವೈಚಾರಿಕ ಕ್ರಾಂತಿಯೋ ಅಥವಾ ಇದರ ಪರಿಣಾಮವಾಗಿ ನಡೆದುವೆಂದು ಹೇಳಲಾದ ಬಿಜ್ಜಳನ ಕೊಲೆ, ಶರಣರ ಸಾಮೂಹಿಕ ಹತ್ಯೆ ಮತ್ತು ಬಸವಣ್ಣನ 'ಲಿಂಗೈಕ್ಯತೆ' ಇತ್ಯಾದಿಗಳು ಸೂಚಿಸುವ ರಕ್ತ ಕ್ರಾಂತಿಯೋ? ಇದಕ್ಕೆ ನಿಶ್ಚಿತ ಉತ್ತರ ಕಂಡುಕೊಳ್ಳಲಾಗದ ಕನ್ನಡ ಸಮಾಜ ತನ್ನೊಳಗೇ ವೀರಶೈವ ಸಮಾಜವೆಂಬುದೊಂದನ್ನು ಸೃಷ್ಟಿಸಿಕೊಂಡು, ಪಡಬಾರದ ಪಡಿಪಾಟಲನ್ನು ಪಡುತ್ತಿದೆ. ಇದರ ಪರಿಣಾಮವಾಗಿ ತನ್ನ ನಿಜವಾದ ನಾಯಕನನ್ನೇ ಕಳೆದುಕೊಂಡು ಅನಾಥವಾಗಿದೆ. ಕಿರೀಟ ಧರಿಸಿಕೊಂಡು ಕುದುರೆ ಮೇಲೆ ಕೂತ ಬಸವಣ್ಣನ ಪ್ರತಿಮೆ ಕನ್ನಡ ಸಮಾಜದ ಈ ದುರಂತವನ್ನು ಅಣಕಿಸಿ ಹೇಳುವಂತಿದೆ. ಈ ಮೂಲಕ ಬಸವಣ್ಣನನ್ನು ನಿಜವಾಗಿ ಕೊಂದವರು ಯಾರು, ಹೇಗೆ ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ವರ್ಗವೊಂದರ ಧಾರ್ಷ್ಟ್ಯವನ್ನೂ ಇದು ಸೂಚಿಸುವಂತಿದೆ!

ಇದೆಲ್ಲ ನನ್ನ ಮನಸ್ಸಿನಲ್ಲಿ ಹಾದು ಹೋದದ್ದು, ಇತ್ತೀಚೆಗೆ ಕುವೆಂಪು ವಿಶ್ವವಿದ್ಯಾಲಯದ ಅಧ್ಯಾಪಕ ಗೆಳೆಯರೊಬ್ಬರು, ಇಡೀ ವಚನ ಸಾಹಿತ್ಯವನ್ನು ಹುಡುಕಿದರೂ ಜಾತಿ ವಿರೋಧಿಯಾದ ಒಂದು ವಚನವೂ ಸಿಕ್ಕಲಾರದು ಎಂದು ಹೇಳಿ ನನ್ನನ್ನು ದಂಗು ಬಡಿಸಿದಾಗ! ಕಲ್ಯಾಣ ಕ್ರಾಂತಿ ಎಂದರೆ, ವಚನ ಚಳುವಳಿ ಎಂದರೆ, ಜಾತಿ ವಿರೋಧಿ ಚಳುವಳಿ ಎಂದು ಕನ್ನಡದ ಜನ ಶತ ಶತಮಾನಗಳಿಂದ ನಂಬಿ, (ಹುಸಿ)ಹೆಮ್ಮೆ ಪಡುತ್ತಾ, ಚರ್ಚಿಸುತ್ತಾ, ಮಠ-ಮಂದಿರಗಳನ್ನು ಕಟ್ಟುತ್ತಾ ಬರುತ್ತಿರುವಾಗ ಇವರೇನು ಹೀಗೆ ಹೇಳುತ್ತಿದ್ದಾರೆಂದು ವಿವರವಾಗಿ ವಿಚಾರಿಸಿದೆ. ಅವರು ತಮ್ಮ ಮಾತನ್ನು ವಿವರಿಸಿದ್ದು ಹೀಗೆ: ಜಾತಿ ವಿರುದ್ಧ ನಿಂತ ಶರಣರದೇ ಇಂದು ಒಂದು ಜಾತಿಯಾಗಿದೆ ಎಂದು ನಾವು ಸೋಜಿಗ ಅಥವಾ ವಿಷಾದಪಡುವ ಅಗತ್ಯವಿಲ್ಲ. ಏಕೆಂದರೆ ಬಸವಣ್ಣ ಮಾಡಿದ್ದು ಶರಣ ಚಳುವಳಿಯೇ ಹೊರತು, ಜಾತಿ ವಿರೋಧಿ ಚಳುವಳಿಯಲ್ಲ. ಆತ ಶರಣರಾದವರಿಗೆ ಜಾತಿ ಇಲ್ಲವೆಂದನೇ ಹೊರತು, ಜಾತಿ ವ್ಯವಸ್ಥೆಯ ತಾತ್ವಿಕತೆ ಮತ್ತು ರಾಜಕಾರಣದ ವಿರುದ್ಧ ಮಾತನಾಡಲಿಲ್ಲ.

ಇವರ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ವಚನಗಳನ್ನು ಓದಿದರೆ, ವಚನಗಳೆಲ್ಲ ಹಾಗೇ ಕಾಣುತ್ತವೆ! ಜಾತಿ ಉಲ್ಲೇಖವಿರುವ ಎಲ್ಲ ವಚನಗಳೂ 'ಶಿವಭಕ್ತನೇ ಕುಲಜ'

ಎಂಬ ನಂಬಿಕೆಯ ಆಧಾರದ ಮೇಲೆ ಕಾಯಕದ ಘನತೆ ಮತ್ತು ದಾಸೋಹದ ಮಹತ್ವಗಳನ್ನು ಹೇಳುತ್ತಾ, ಶರಣ ಸಂಕುಲವೆಂಬ ಕಾಯಕ ಜೀವಿಗಳ ಹೊಸದೊಂದು ಸಮುದಾಯದ ಶೀಲ ಮತ್ತು ಐಕ್ಯತೆಯನ್ನು ಕಟ್ಟುವ ಕಡೆಗೆ ಮುಖಮಾಡಿರುವಂತೆ ತೋರುತ್ತವೆಯೇ ಹೊರತು, ಜಾತಿ ವ್ಯವಸ್ಥೆಯನ್ನು ಇಡಿಯಾಗಿ ಮುಖಾಮುಖಿಯಾಗಿಸಿಕೊಳ್ಳುವ ಪ್ರಯತ್ನಗಳಂತೆ ಕಾಣುವುದಿಲ್ಲ. 'ಕೆಳ' ಮತ್ತು 'ಕೀಳು' ಎಂದು ಹೇಳಲಾಗುವ ಜಾತಿ ಮತ್ತು ವೃತ್ತಿಗಳ ವಚನಕಾರರೂ ತಮ್ಮ ವಚನಗಳಲ್ಲಿ ಮೇಲ್ಜಾತಿಗಳ (ವಿಶೇಷವಾಗಿ ವೈದಿಕರ) ಆಚರಣೆಗಳು ಮತ್ತು ಅವರ ವೃತ್ತಿ-ವ್ಯವಹಾರಗಳ ಬಗ್ಗೆ ಖಂಡನೆ-ವಿಡಂಬನೆ ಮಾಡುವವರಾದರೂ, ಅದು ತಮ್ಮ 'ಶರಣಕುಲ'ದ ಹಿರಿಮೆಯನ್ನು ಸ್ಥಾಪಿಸುವ ಉದ್ದೇಶವನ್ನಷ್ಟೇ ಹೊಂದಿದಂತೆ ತೋರುತ್ತದೆ. ಜಾತಿ ಕುರಿತ ಬಸವಣ್ಣನ ನಿಲುವು ಅತ್ಯಂತ ತೀವ್ರವಾಗಿ ವ್ಯಕ್ತವಾಗುವ

ಸೂಳೆಗೆ ಹುಟ್ಟಿದ ಕೂಸಿನಂತೆ
ಆರನಾದರೆಯೂ 'ಅಯ್ಯ' 'ಅಯ್ಯ' ಎನಲಾರೆನಯ್ಯ
ಚೆನ್ನಯ್ಯನೆಮ್ಮಯ್ಯನು
ಚೆನ್ನಯ್ಯನ ಮಗ ನಾನು;
ಕೂಡಲಸಂಗನ ಮಹಾಮನೆಯಲ್ಲಿ
ಧರ್ಮಸಂತಾನ ಭಂಡಾರಿ ಬಸವನು!

ಎಂಬ ವಚನದಲ್ಲೂ ಎದ್ದು ಕಾಣುವುದು ಶರಣ ಸಂಸ್ಕೃತಿಯ ಆಶಯದಂತೆ ಕೆಳ ಜಾತಿಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳುವ ಹಂಬಲವೇ ಹೊರತು, ಜಾತಿ ವಿರೋಧಿ ಧೋರಣೆಯಲ್ಲ ಅನ್ನಿಸುತ್ತದೆ.

ನನ್ನ ಅಧ್ಯಾಪಕ ಮಿತ್ರರ ವಾದದ ಕಣ್ಣಿನಲ್ಲಿ ಕಾಣುವಂತಹ ಇಂತಹ ನೋಟದ ಹಿಂದೆ ಒಂದು ತಾತ್ವಿಕತೆ ಇದೆ. ಅದು ಇತ್ತೀಚೆಗೆ ಕೆಲವು ಸಮಾಜ ಶಾಸ್ತ್ರಜ್ಞರು, ರಾಜಕೀಯ ಶಾಸ್ತ್ರಜ್ಞರು, ಇತಿಹಾಸಜ್ಞರು ಮತ್ತು ಸಂಸ್ಕೃತಿ ಚಿಂತಕರ ವಿಶೇಷ ಗಮನ ಸೆಳೆಯುತ್ತಿರುವ ಭಾರತೀಯ ಶಾಸ್ತ್ರಜ್ಞರಾದ (ಕನ್ನಡಿಗರೇ ಆದ)ಬೆಲ್ಜಿಯಂ ನಿವಾಸಿ ಬಾಲಗಂಗಾಧರರ ಸಾಮಾಜಿಕ ಚಿಂತನೆ.* ಅವರ ಪ್ರಕಾರ, 'ಹಿಂದೂ ಧರ್ಮ'ವೆಂಬುದೇ ಒಂದು ಕೃತಕ ರಾಜಕೀಯ ರಚನೆ. ವಿಶೇಷವಾಗಿ ಪಾಶ್ಚಾತ್ಯರು ತಮ್ಮ 'ಕ್ರಿಶ್ಚಿಯನ್' ಧರ್ಮದ ಎರಕದಲ್ಲಿ ರೂಪಿಸಿದ ಹಿಂದೂ ಧರ್ಮವದು. ಹಾಗೆ ನೋಡಿದರೆ, ಹಿಂದೂ ಧರ್ಮವೆಂಬುದೇ ಇಲ್ಲ. ಅದೊಂದು ಸಂಪ್ರದಾಯಗಳ ಪರಂಪರೆ, ಅಷ್ಟೆ. ಅದಕ್ಕೆ ಕ್ರಿಶ್ಚಿಯಾನಿಟಿ ಅಥವಾ ಇಸ್ಲಾಂನಂತೆ (ಅಥವಾ ಇನ್ನಾವುದೇ ಮಧ್ಯಪ್ರಾಚ್ಯ ಮೂಲವಾದ 'ರಿಲಿಜನ್'ನಂತೆ) ಸಾಮಾನ್ಯವಾದ ಒಂದು ಅನನ್ಯ ದೈವವಾಗಲಿ, 'ದೈವದತ್ತ' ಧರ್ಮಗ್ರಂಥವಾಗಲೀ, ತಾತ್ವಿಕತೆಯಾಗಲೀ ಅಥವಾ ಧಾರ್ಮಿಕ ಸಂಸ್ಥೆಯಾಗಲೀ ಇಲ್ಲ. ಹಾಗಾಗಿ ಅದು ಅವರ 'ರಿಲಿಜನ್'ನಂತಹ

---

* ಇದೇ ಸಂಪುಟದ ೩೫, ೪೫ ಹಾಗೂ ೪೬ನೇ ಲೇಖನಗಳನ್ನು ಗಮನಿಸಿ.

ರಿಲಿಜನ್ ಅಲ್ಲ. ಹಾಗಾಗಿ ಭಾರತದ 'ಧರ್ಮ' ಎಂಬ ಸಾರ್ವತ್ರಿಕ ಶಬ್ದ ನಮ್ಮ ಆಧುನಿಕ ಚರ್ಚೆ ವ್ಯವಹಾರಗಳಲ್ಲಿ 'ರಿಲಿಜನ್' ಎಂಬ ನಿರ್ದಿಷ್ಟ ಅರ್ಥ ಪಡೆದು ತರ್ಜುಮೆಯಾದುದರಿಂದ ಅನೇಕ ಅನಾಹುತಗಳಾಗಿವೆ. ಜಾತಿ ವ್ಯವಸ್ಥೆ ಕುರಿತಂತೆ ನಾವು ಕಟ್ಟಿಕೊಂಡಿರುವ ಚರಿತ್ರೆಯೂ ಇಂತಹ ಅನಾಹುತಗಳಲ್ಲೊಂದು. ಹಾಗಾಗಿ ವಚನ ಚಳುವಳಿಯನ್ನು ಜಾತಿ ವಿರೋಧಿ ಚಳುವಳಿಯನ್ನಾಗಿ ನೋಡುವ ನಮ್ಮ ಕ್ರಮವೇ ತಪ್ಪಾಗಿದ್ದು, ಅದರ ಸಾಮಾಜಿಕ ಚಲನಶೀಲತೆಯನ್ನು ಅರ್ಥ ಮಾಡಿಕೊಳ್ಳುವುದರಲ್ಲೇ ಎಡವುತ್ತಿದ್ದೇವೆ.

ಈ ವಾದ, ಶರಣರನ್ನು ಒಂದು ಜಾತಿಯಾಗಿ (ಮತ್ತು ಅದರೊಳಗೆ ಹಲವು ಉಪಜಾತಿಗಳನ್ನಾಗಿ) ಜಡಗೊಳಿಸಿ 'ಕಾಪಾಡು'ತ್ತಿರುವ ನಮ್ಮ ಮಠಾಧೀಶರಿಗೆ ಪ್ರಿಯವಾಗ ಬಹುದು. ಆದರೆ ವಚನ ಚಳುವಳಿ ನಿಜವಾಗಿ ಜಾತಿ ವ್ಯವಸ್ಥೆ ವಿರುದ್ಧ ದಂಗೆಯೇಳಲಿಲ್ಲವೇ? ಹಾಗಿಲ್ಲದಿದ್ದರೆ, ಬಿಜ್ಜಳನಿಗೇಕೆ ಕಷ್ಟವೊದಗಿ ಆತ ತನ್ನ ಪ್ರಿಯ ಮಿತ್ರನೇ ಆಗಿದ್ದ ಬಸವಣ್ಣನ ಕಾರ್ಯಾಚರಣೆಗಳ ವಿರುದ್ಧ ತಿರುಗಿ ಬೀಳುತ್ತಿದ್ದ? ಇಂತಹ ಬರೀ ಚೂಪಾದ ಪ್ರಶ್ನೆಗಳಿಗೆ ಅವಕಾಶ ಒದಗಿಬರುವುದು, ನಾವು ಬಸವಣ್ಣನ ಕ್ರಾಂತಿಯನ್ನು ಆಧುನಿಕ ಕಾಲದ ಕ್ರಾಂತಿಗಳ ಕಲ್ಪನೆಯ ಚೌಕಟ್ಟಿನಲ್ಲಿಟ್ಟು ಅರ್ಥ ಮಾಡಿಕೊಳ್ಳಲೆತ್ನಿಸುವುದರಿಂದ. ಹಾಗಾಗಿಯೇ ನಾವು (ಮತ್ತು ಹಲವು ಸಾರ್ವಜನಿಕ ಭಾಷಣಕಾರರು) ಸುಲಭವಾಗಿ ಬಸವಣ್ಣನೇ ಜಗತ್ತಿನ ಮೊದಲ ಸಮಾಜವಾದಿ, ಕಮ್ಯೂನಿಸ್ಟ್ ಎಂದೆಲ್ಲ ಹೆಮ್ಮೆಯಿಂದ ಘೋಷಿಸತೊಡಗುತ್ತೇವೆ. ಇದೆಲ್ಲ ಸಮಾಜವಾದವೆಂದರೇನು, ಕಮ್ಯೂನಿಸಂ ಎಂದರೇನು ಎಂದು ನಿಜವಾಗಿ ತಿಳಿಯದವರ ಮಾತು. ಬಸವಣ್ಣ ತನ್ನ ಕಾಲ-ದೇಶಗಳ ಕೂಸು. ಅವನಿಗೆ ಅವನದೇ ಆದ-ರೂಪಿಸಿಕೊಂಡ-ರಾಜಕೀಯ ಪರಿಭಾಷೆ ಇದೆ. ಆ ಮೂಲಕ-ಅದರ ಮಾತೃಕೆಗಳಲ್ಲಿ-ಅವನ ಕ್ರಾಂತಿ ಸಂಭವಿಸಿದೆ. ಆ ರಾಜಕೀಯ ಪರಿಭಾಷೆಯನ್ನು ಅರಿಯದ ಹೊರತು ನಾವು ಆ ಕ್ರಾಂತಿಯನ್ನು, ಅದರ ವೈಫಲ್ಯವನ್ನು, ಅದರ ಹಿಂದಿನ ಕಾರಣಗಳನ್ನು ಮತ್ತು ಅದರ ಇಂದಿನ ಅವಶೇಷ ರೂಪಗಳನ್ನು ಅರ್ಥಮಾಡಿಕೊಳ್ಳಲಾರೆವು.

ಆದರೆ ದುರದೃಷ್ಟಕರ ಸಂಗತಿಯೆಂದರೆ, ವಚನ ಸಾಹಿತ್ಯದ ಹೊರತಾಗಿ ಈ ಸಾಹಸವನ್ನರಿಯಲು ಇನ್ನಾವ ಆಕರಗಳೂ ನಮಗೆ ಸಿಗುತ್ತಿಲ್ಲ. ಲಭ್ಯ ಶಾಸನಗಳು ಹಾಗೂ ಜಾನಪದ ಐತಿಹ್ಯಗಳನ್ನು ಸಾಹಿತ್ಯದ ಜೊತೆ ಸಮನ್ವಯಿಸಿ ಹೊಸ ಆಕರ ಆಧಾರಗಳನ್ನು ನಿರ್ಮಿಸಿಕೊಳ್ಳ ಹೊರಟರೆ, ಆ ಆಧಾರಗಳು ಸೂಚಿಸುವ ತೀರ್ಮಾನಗಳು ಇಂದಿನ ಬಸವವಾದಿಗಳಿಗೆ ಪಥ್ಯವಾಗುವುದಿಲ್ಲ. ಉದಾಹರಣೆಗೆ ಇತ್ತೀಚೆಗೆ ಬಂಜಗೆರೆ ಜಯಪ್ರಕಾಶರು 'ಅನುಮಾನಿತ ಸತ್ಯ'ವೆಂದು ಪ್ರಸ್ತುತ ಪಡಿಸಿದ ಬಸವಣ್ಣನ ಜಾತಿ ಮೂಲ ಕುರಿತ ಚರ್ಚೆಯನ್ನು ಅದು ಬಸವಣ್ಣನ ತಾಯಿಯ ಶೀಲವನ್ನೇ ಪ್ರಶ್ನಿಸುವಂತಿದೆ ಎಂಬ ಅಶಿಕ್ಷಿತ ನೆಪವೊಡ್ಡಿ, ಅದಕ್ಕೆ ಅಧಿಕೃತ ಬಹಿಷ್ಕಾರವನ್ನೇ ಹಾಕಿಸಲಾಯಿತು. ಆದರೆ ಬಸವಣ್ಣನ ಹೆಸರಿನಲ್ಲೇ ಇರುವ ಮತ್ತು ಅನೇಕ ಕಟ್ಟಾ ವೀರಶೈವ ಸಂಶೋಧಕರ ಮತ್ತು ವಿದ್ವಾಂಸರ ಸಂಪಾದಕತ್ವದಲ್ಲೇ ಹಲವು ಕಡೆ ದಾಖಲಾಗಿರುವ ಈ ವಚನ ಸೂಚಿಸುವ ಶೀಲ

ಸಂಸ್ಕೃತಿಯಾದರೂ ಎಂತಹುದು? ಅದು ಇಂದಿನ ಈ 'ಶೀಲವಾದಿ'ಗಳ ಶೀಲ ಕಲ್ಪನೆಯನ್ನೇ ಒಡೆದು ಹಾಕುವಂತಿದೆಯಲ್ಲಾ?:

> **... ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳೆ ಚೆಲುವೆ**
> **ಆಕೆಯನ್ನು ಸಂಗಮದೇವಾ, ನೀ ಜಂಗಮ ರೂಪವಾಗಿ ಬಂದು**
> **ಎನ್ನ ಮುಂದೆ ಸಂಗವ ಮಾಡುತ್ತಿರಲು**
> **ಎನ್ನೊಡನಿದ್ದ ಸತಿಯೆಂದು ಮಾಯಕ್ಕೆ ಮರುಗಿನಾದರೆ**
> **ನಿಮ್ಮಾಣೆ ನಿಮ್ಮ ಪ್ರಮಥರಾಣೆ ಮನದೊಡೆಯ...**

ಹಾಗೇ, ಈ ವಚನ ಭಾಗದೊಂದಿಗೇ ಇನ್ನೊಂದಿಷ್ಟು ವಚನಗಳನ್ನು ಉದ್ಧರಿಸುತ್ತಾ ಖ್ಯಾತ ಸ್ತ್ರೀವಾದಿ ವಿಮರ್ಶಕಿ ಡಾ. ಎಂ.ಎಸ್. ಆಶಾದೇವಿ ಅವರು ಹೆಣ್ಣನ್ನು ಕುರಿತ ಬಸವಣ್ಣನ 'ಊಳಿಗಮಾನ್ಯಶಾಹಿ' ನಿಲುವನ್ನು ವಿಷದೀಕರಿಸಿದ್ದಾರಲ್ಲಾ? (ಹಾಗಾದರೆ ಬಸವಣ್ಣ ಎಂತಹ ಸಮಾಜವಾದಿ?) ಆಶಾದೇವಿಯವರು ಮುಂದುವರಿದು, ಬಸವಣ್ಣನ ಕ್ರಾಂತಿ ಕೆಳ-ದಲಿತ ಜಾತಿಗಳ ವಿಷಯದಲ್ಲಿ ನಿಜವಾದಷ್ಟು ಹೆಣ್ಣಿನ ವಿಷಯದಲ್ಲಿ ಆಗಿಲ್ಲ ಎಂದೂ ಹೇಳುವರಲ್ಲಾ? (ಅವರ 'ಸ್ತ್ರೀಮತವನ್ನುತ್ತರಿಸಲಾಗದೆ' ಪುಸ್ತಕ ನೋಡಿ)

ಬಸವಣ್ಣನ ಕ್ರಾಂತಿಯನ್ನು ನಮ್ಮ ಪ್ರಜ್ಞೆಯಾಳದ ನೋವಿನ ಹಲ್ಲಿನಂತೆ ಸಂವೇದಿಸದೆ, ನಮ್ಮೆಲ್ಲ ಆಧುನಿಕ ನಿರೀಕ್ಷೆಗಳನ್ನು ಅದರಲ್ಲಿ ಕಂಡು ನಲಿಯಲು ಅಥವಾ ನುಲಿಯಲು ಯತ್ನಿಸುವ ಪ್ರವೃತ್ತಿಯೇ ಇಷ್ಟೆಲ್ಲ ತಾತ್ವಿಕ, ಭಾವನಾತ್ಮಕ ಪಡಿಪಾಟಲುಗಳಿಗೆ ಕಾರಣವಾಗಿದೆಯೆಂದು ನನಗನ್ನಿಸುತ್ತದೆ. ವರ್ತಮಾನವನ್ನು ಚರಿತ್ರೆಯ ಮುಂದುವರಿದ ರೂಪವಾಗಿಯಷ್ಟೇ ನೋಡುವ ಸರಳ ಚಾರಿತ್ರಿಕ ದೃಷ್ಟಿಯೇ ಇದಕ್ಕೆ ಕಾರಣವಾಗಿದೆ. ಇದು ಕಲ್ಯಾಣ ಕ್ರಾಂತಿಯ ಹಿಂದೆ ಯಾವೆಲ್ಲ ಕಾಲ, ದೇಶ ವಿಶಿಷ್ಟ ಚಾರಿತ್ರಿಕ ಒತ್ತಡಗಳು ಕೆಲಸ ಮಾಡಿವೆ ಎಂಬುದರ ಕಡೆ ಗಮನವನ್ನೇ ಹರಿಸದ ನಮ್ಮ ನೋಟದಲ್ಲಿನ, ವರ್ತಮಾನ ಸ್ಥಿತವಾದ 'ತುಂಬು' ಸಾಮಾಜಿಕ-ಸಾಹಿತ್ಯಕ-ಸಾಂಸ್ಕೃತಿಕ ಸ್ಥೂಲತೆಯೇ ಆಗಿದೆ. ಕಲ್ಯಾಣ ಕ್ರಾಂತಿಗೆ ಜಾತಿ-ಧರ್ಮಗಳಲ್ಲದೇ ಆ ಕಾಲಕ್ಕೆ ವಿಶಿಷ್ಟವಾದ ರಾಜಕೀಯ ಅರ್ಥಶಾಸ್ತ್ರದ ಆಯಾಮಗಳೂ ಇರಬಹುದಲ್ಲವೇ? ಜಾತಿ ವ್ಯವಸ್ಥೆಯ 'ಬಂಧನ'ಗಳೇ ಅವುಗಳೊಳಗಿನ ಜಾತಿಗಳ 'ಬಿಡುಗಡೆ'ಯ ಶಕ್ತಿಗಳನ್ನೂ ಉತ್ಪಾದಿಸುತ್ತಿದ್ದು; ೧೨ನೇ ಶತಮಾನದ ಹೊತ್ತಿಗೆ ಜಾತಿ ವ್ಯವಸ್ಥೆಯೊಳಗಿನ ಈ ರಾಜಕಾರಣ ಯಾವ ಹಂತ ತಲುಪಿತ್ತು ಎಂಬುದನ್ನು ನಾವು ಪರಿಶೀಲಿಸಬೇಕಲ್ಲವೇ? ಈ ಕಾಲಾವಧಿಯಲ್ಲಿನ ಆರ್ಥಿಕ ಚಟುವಟಿಕೆಗಳು ವಿನ್ಯಾಸಗೊಳ್ಳುತ್ತಿದ್ದ ರೀತಿ, ಅವು ರೂಪಿಸುತ್ತಿದ್ದ ಹೊಸ ಹಿತಾಸಕ್ತಿಗಳು ಮತ್ತು ಆ ಮೂಲಕ ಸೃಷ್ಟಿಯಾಗುತ್ತಿದ್ದ ಸಾಮಾಜಿಕ ವೈರುಧ್ಯಗಳು ಹಾಗೂ ಅವು ಮತ್ತೆ ಧಾರ್ಮಿಕ ನೆಲೆಯಲ್ಲಿ ಉಂಟುಮಾಡುತ್ತಿದ್ದ ಪರಿಣಾಮಗಳ ಅಧ್ಯಯನವನ್ನು ನಮ್ಮ ಸಾಮಾಜಿಕ-ಸಾಂಸ್ಕೃತಿಕ-ಸಾಹಿತ್ಯಕ ಅಧ್ಯಯನದ ಜೊತೆಗೆ ಜೋಡಿಸಿ ನೋಡಬೇಕಲ್ಲವೆ?

ಬಂಜಗೆರೆ ಜಯಪ್ರಕಾಶರ 'ಕನ್ನಡ ರಾಷ್ಟ್ರೀಯತೆ' ಸಂಪ್ರಬಂಧದಲ್ಲಿ ಕಾಣುವ ಇಂತಹದೊಂದು ಬಹುಶಿಸ್ತೀಯ ಅಧ್ಯಯನದ ಪ್ರಯತ್ನದ ಹೊರತಾಗಿ ನಮ್ಮ ಇತಿಹಾಸಕಾರರಾಗಲಿ, ಸಮಾಜಶಾಸ್ತ್ರಜ್ಞರಾಗಲಿ ಈ ದಿಕ್ಕಿನಲ್ಲಿ ಯಾವುದೇ ಗಮನಾರ್ಹ ಕೆಲಸ ಮಾಡಿರುವುದು ನನ್ನ ಗಮನಕ್ಕಂತೂ ಬಂದಿಲ್ಲ. ಹಾಗಾಗಿಯೇ ಕಲ್ಯಾಣ ಕ್ರಾಂತಿ ಎಂಬುದು ಸಾಹಿತ್ಯ ವಿಮರ್ಶಕರ, ಸಂಸ್ಕೃತಿ ಚಿಂತಕರ, ರಾಜಕಾರಣಿಗಳ ಮತ್ತು ಮಠಾಧಿಪತಿಗಳ 'ಕಲ್ಪನಾಶೀಲ' ಚಟುವಟಿಕೆಗಳ ಆಡೊಂಬಲವಾಗಿದೆ! ಹನ್ನೆರಡನೇ ಶತಮಾನದ ಹೊತ್ತಿಗೆ 'ಕಲ್ಯಾಣ ಕರ್ನಾಟಕ' ಭಾಗದಲ್ಲಿ ಆಯಗಾರ-ಶೂದ್ರ-ವರ್ಗವೇ ವ್ಯಾಪಾರೀ-ವೈಶ್ಯ-ವರ್ಗವಾಗಿ ಬೆಳೆದು, ಜಾತಿ ನೆಲೆಯ ಸಂಬಂಧಗಳನ್ನು ತಲೆಕೆಳಗು ಮಾಡತೊಡಗಿತ್ತು. ಮತ್ತು ಈ ಸಾಮಾಜಿಕ ಸ್ಥಿತ್ಯಂತರದ ಸಂದರ್ಭವನ್ನು ನಿಭಾಯಿಸುವ ಜವಾಬ್ದಾರಿ ಮಂತ್ರಿಯಾಗಿದ್ದ ಬಸವಣ್ಣನದಾಗಿತ್ತು; ಈ ನಿಭಾವಣೆಯ ಕಥೆಯೇ ಕಲ್ಯಾಣ ಕ್ರಾಂತಿಯ ಕಥೆ ಎಂದು ಬಂಜಗೆರೆಯವರು, ಆರ್.ಎನ್. ನಂದಿಯವರ ಸಂಶೋಧನೆಗಳನ್ನು-ಇದು ಬಲವಂತದ ಮಾರ್ಕ್ಸ್‌ವಾದಿ ವ್ಯಾಖ್ಯಾನ ಎಂದು ಹೇಳಲಾಗುವುದಾದರೂ-ಉಲ್ಲೇಖಿಸಿ ಆಡಿರುವ ಮಾತುಗಳಿಗೆ ಇನ್ನಷ್ಟು ಆಧಾರಗಳೂ, ಬೆಂಬಲವೂ ಬೇಕಿದೆ, ನಿಜ. ಆದರೆ ನಮ್ಮ ಹೆಮ್ಮೆಯಾಗಿರುವ ಕಲ್ಯಾಣ ಕ್ರಾಂತಿಯನ್ನು ಇಂದಿನ ಸಂದರ್ಭಕ್ಕೆ ಪ್ರಸ್ತುತಪಡಿಸಿಕೊಂಡು ಅರ್ಥಮಾಡಿಕೊಳ್ಳಬೇಕಾದರೆ, ಈ ಒಂದು 'ಲೌಕಿಕ' ದೃಷ್ಟಿಯೂ ಅವಶ್ಯಕ. ಆಗ ಬಸವಣ್ಣ, ಸ್ಥಿತ್ಯಂತರದಲ್ಲಿರುವ ವರ್ಗವೊಂದರ ಲೌಕಿಕ ನಾಯಕನಾಗಿಯೂ ಕಾಣತೊಡಗಿ, ಕಲ್ಯಾಣ ಕ್ರಾಂತಿಯ ರೋಮಾಂಚನದ ಹಲವು ಆಯಾಮಗಳು ತುಸು ಮಸುಕಾಗ ತೊಡಗುತ್ತವೆ ಮತ್ತು ಚಾರಿತ್ರಿಕ ವಾಸ್ತವದ ನೆಲೆಗಳು ಮುನ್ನೆಲೆಗೆ ಬರತೊಡಗುತ್ತವೆ. ಮತ್ತೂ ಮುಖ್ಯವಾಗಿ, ಈ 'ಕ್ರಾಂತಿ' ಎಲ್ಲರಿಗೂ ಎಲ್ಲ ಕನಸುಗಳನ್ನೂ ಒದಗಿಸುವ ಇಕ್ಕಟ್ಟಿನಿಂದ ಪಾರಾಗುತ್ತದೆ. ಬಸವಣ್ಣ ತನ್ನ ಕಾಲ ದೇಶಗಳ ಮಿತಿಗಳೊಳಗೆ ಒಬ್ಬ ಮನುಷ್ಯ ಮಾತ್ರನಾಗಿ ಏನೆಲ್ಲ ಎತ್ತರಗಳನ್ನು ಏರಬಲ್ಲವನಾಗಿದ್ದನೋ ಅಷ್ಟು ಎತ್ತರಗಳನ್ನು ಮಾತ್ರ ಏರಿದ, ಕಟು 'ಚಾರಿತ್ರಿಕ ವಾಸ್ತವ'ದ ಚಿತ್ರ ದೊರಕುತ್ತದೆ.

ಹಾಗೇ ಈ ಕ್ರಾಂತಿ ೧೫-೧೬ನೇ ಶತಮಾನದ ಹೊತ್ತಿಗೆ ಸೃಷ್ಟಿಸಿದ್ದ ಪ್ರತಿ ಕ್ರಾಂತಿಯ ಪರಿಣಾಮಗಳ-ಹಲವು ಶೂನ್ಯ ಸಂಪಾದನೆಗಳೂ ಸೇರಿದಂತೆ, ಕಲ್ಲುಮಠದ ಪ್ರಭುದೇವರ 'ಲಿಂಗಲೀಲಾ ವಿಲಾಸ ಚಾರಿತ್ರ'ದಿಂದ ಹಿಡಿದು ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ'ದವರೆಗಿನ ವೀರಶೈವ ಧರ್ಮದ ಸಂಸ್ಥೀಕರಣ ಮತ್ತು ವೈದಿಕೀಕರಣದ ಪ್ರಯತ್ನಗಳು-ಒಡಲಿನಿಂದಲೇ ಏಕೆ ಮತ್ತು ಹೇಗೆ ಕರ್ನಾಟಕದ ತತ್ವಪದಗಳ ಮತ್ತು ಮಲೆಮಾದೇಶ್ವರ, ಮಂಟೇಸ್ವಾಮಿ ಇತ್ಯಾದಿ ಜನಪದ ಮಹಾಕಾವ್ಯಗಳ ವಿಶಿಷ್ಟ ಸಾಮಾಜಿಕ (ಬರೀ ಸಾಹಿತ್ಯಕವಲ್ಲ ಎನ್ನುವ ಅರ್ಥದಲ್ಲಿ) ಪ್ರತಿಭಟನೆಗಳ ಪರಂಪರೆ ಆರಂಭವಾಯಿತು ಎಂಬುದು ಗೊತ್ತಾಗುತ್ತದೆ. ಆ ಮೂಲಕವೇ ನಿಜವಾದ ಬಸವ ಪರಂಪರೆ ಎಲ್ಲಿ, ಯಾವ ನೆಲೆಯಲ್ಲಿ ಹೇಗೆ ಮುಂದುವರಿದಿದೆ ಎಂಬುದೂ ಅರಿವಿಗೆ ಬರುತ್ತದೆ. ಆಗ ಕಲ್ಯಾಣ ಕ್ರಾಂತಿ

ಕನ್ನಡ ಪ್ರಜ್ಞೆಯ ಪಾಲಿಗೆ ಏಕೆ ಮತ್ತು ಹೇಗೆ ನೋವಿನ ಹಲ್ಲಾಗಿದೆ ಎಂಬುದೂ ಗೊತ್ತಾಗುತ್ತದೆ. ಜೊತೆಗೇ ಬಾಲಗಂಗಾಧರರ ಶಿಷ್ಯರಿಗೂ, ಸ್ತ್ರೀವಾದಿ ಅಥವಾ ಇನ್ನಾವುದೇ ವಾದಿಗಳಾದ ವಿಮರ್ಶಕರಿಗೂ ತಮ್ಮ ನೋಟಗಳು ಹೇಗೆ ಕೇವಲ ಶಿಕ್ಷಿತ ನೋಟಗಳಾಗಿ–ಅಧ್ಯಯನಗಳಿಂದ ತಮಗೆ ಬೇಕಾದ್ದನ್ನಷ್ಟೇ ಪಡೆಯುವ–ಆಧುನಿಕ ಅಧ್ಯಯನಗಳ 'ಸ್ವಾರ್ಥಪರತೆ'ಯ ಪ್ರತೀಕಗಳಾಗಿವೆ ಎಂಬುದೂ ತಿಳಿಯುತ್ತದೆ.

ಇನ್ನೂ ಮುಂದುವರಿದು ಹೇಳುವುದಾದರೆ, ಇದು ನಮ್ಮ ವೀರಶೈವ ಮಠಾಧಿಪತಿಗಳ ಆತ್ಮ ಸಾಕ್ಷಿಯನ್ನೂ ಕೆಣಕಿ, ಬಸವ ಪರಂಪರೆಯ ನಿಜವಾದ ವಾರಸುದಾರಿಕೆ ಎಂದರೆ, ಕಲ್ಯಾಣ ಕ್ರಾಂತಿ ಎಂಬ ನೋವಿನ ಹಲ್ಲಿಗೆ ನೋವು ನಿವಾರಕಗಳ ಚಿಕಿತ್ಸೆಗೆ ಬದಲಾಗಿ ಬೇರು ಮುಟ್ಟದ (Root canal?) ಚಿಕಿತ್ಸೆ ನೀಡುವುದೇ ಆಗಿದೆ ಎಂಬ ಅರಿವನ್ನೂ ಹುಟ್ಟಿಸಬಹುದಾಗಿದೆ. ಅದಕ್ಕಾಗಿ ಅವರು ಬಸವ ಪರಂಪರೆಯ ನಿಜವಾದ ಬೇರು ಈಗ ಎಲ್ಲಿದೆ ಎಂಬುದರ ಕಡೆಗೆ ಗಮನ ಹರಿಸಬೇಕಾಗಿದೆ.

(೨೩ ಮೇ ೨೦೦೮)

ಕೆಲವು ಪ್ರತಿಕ್ರಿಯಗಳನ್ನು ಕುರಿತಂತೆ*

'ಕಲ್ಯಾಣ ಕ್ರಾಂತಿ ಎಂಬ ನೋವಿನ ಹಲ್ಲು' ಎಂಬ ನನ್ನ ಲೇಖನಕ್ಕೆ ಬಂದಿರುವ ವೈವಿಧ್ಯಮಯ ಪ್ರತಿಕ್ರಿಯೆಗಳನ್ನು ಗಮನಿಸಿರುವೆ. ನನ್ನ ವಿಚಾರಗಳನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳುವ ಪ್ರಯತ್ನಗಳಿಂದ ಹಿಡಿದು, ನನ್ನ ಲೇಖನ ದುರುದ್ದೇಶಪೂರಿತವಾದದ್ದು ಎಂದು ಹೇಳುವವರೆಗೆ ಈ ಪ್ರತಿಕ್ರಿಯೆಗಳು ಹರಡಿವೆ. ಈ ಪ್ರತಿಕ್ರಿಯೆಗಳೇನೇ ಇರಲಿ, ನನ್ನ ಲೇಖನವನ್ನು ಆಸಕ್ತಿಯಿಂದ ಓದಿದ ಈ ಎಲ್ಲ ಓದುಗರಿಗೂ ನನ್ನ ಧನ್ಯವಾದಗಳು. ಆದರೆ ಅದೇ ವೇಳೆಗೆ, ಲೇಖನದಲ್ಲಿ ತಾವು ಒಪ್ಪದ ಅಥವಾ ತಮಗೆ ಪಥ್ಯವಾಗದ ಒಂದು ಸಂಗತಿ ಕಂಡೊಡನೆ, ಇಡೀ ಲೇಖನವನ್ನು ಅನುಮಾನದಿಂದ ನೋಡುವ; ಅದಕ್ಕಿಂತ ಹೆಚ್ಚಾಗಿ, ಅದರ ಬಗ್ಗೆ ಗಂಭೀರ ಚರ್ಚೆಗೆ ಆಸ್ಪದವನ್ನೇ ನೀಡದಂತಹ ಉಡಾಫೆಯ ಮಾತುಗಳನ್ನಾಡುವ ಕೆಲವು ಓದುಗರ ಪ್ರವೃತ್ತಿಯನ್ನು ಕಂಡು ವಿಷಾದವೂ ಉಂಟಾಗಿದೆ ಎಂದೂ ಇಲ್ಲಿ ಹೇಳಬಯಸುವೆ.

ನನ್ನ ಲೇಖನದಲ್ಲಿ ಉಲ್ಲೇಖಿಸಲಾಗಿರುವ ನನ್ನ ಅಧ್ಯಾಪಕ ಗೆಳೆಯರೊಬ್ಬರ ಒಂದು ಅಭಿಪ್ರಾಯ ಮತ್ತು ಒಂದು ವಚನದ ಬಗ್ಗೆ ಕೆಲವು ಓದುಗರು ಪ್ರಶ್ನೆಗಳನ್ನೆತ್ತಿದ್ದಾರೆ. ನಿಮ್ಮ ಆ ಗೆಳೆಯರ ಅಭಿಪ್ರಾಯವನ್ನು ನೀವು ಒಪ್ಪುವಿರೋ ಎಂಬುದನ್ನು ತಿಳಿಸಿ ಎಂದು ಒಬ್ಬ ಓದುಗರು ಆಗ್ರಹಿಸಿದ್ದಾರೆ. ನಾನು ಈ ಅಧ್ಯಾಪಕ ಮಿತ್ರರ ಅಭಿಪ್ರಾಯವನ್ನು ಮಾತ್ರವಲ್ಲ,

* ಇದು, ಲೇಖನವನ್ನು ಅಂತರ್ಜಾಲದ ನನ್ನ 'ನಾಗಸಂಪದ' ಬ್ಲಾಗ್‌ನಲ್ಲಿ ಪ್ರಕಟಿಸಿದಾಗ ಅಲ್ಲಿ ಬಂದ ಪ್ರತಿಕ್ರಿಯೆಗಳಿಗೆ ನೀಡಿದ ಉತ್ತರ.

ಇತರ ವಚನಗಳೊಂದಿಗೆ ಈ ಉಲ್ಲೇಖಿತ ವಚನ ಬಳಸಿ, ಬಸವಣ್ಣ ಹೆಣ್ಣಿನ ಬಗ್ಗೆ ಊಳಿಗಮಾನ್ಯಶಾಹಿ ಧೋರಣೆಯನ್ನು ಹೊಂದಿದ್ದಾನೆ ಎಂದು ವಾದಿಸುವ ಶ್ರೀಮತಿ ಆಶಾದೇವಿಯವರ 'ಸ್ತ್ರೀವಾದಿ' ವಿಮರ್ಶೆಯನ್ನೂ ನಾನು ಪೂರ್ಣವಾಗಿ ಒಪ್ಪುವುದಿಲ್ಲವೆಂದು–ಅವು ತಮಗೆ ಬೇಕಾದ ತೀರ್ಮಾನಗಳನ್ನಷ್ಟೇ ಹುಡುಕಿಕೊಳ್ಳುವ ಸೀಮಿತ ಉದ್ದೇಶಗಳುಳ್ಳ 'ಶಿಕ್ಷಿತ' ಅಧ್ಯಯನ ಮಾದರಿಗಳೆಂದು–ನಾನು ನನ್ನ ಲೇಖನದ ಉಪಸಂಹಾರದಲ್ಲಿ ಸ್ಪಷ್ಟವಾಗಿಯೇ ಸೂಚಿಸಿದ್ದೇನೆ. ನನ್ನ ಲೇಖನವೂ ಅದೇ ಮಾದರಿಯದ್ದಾಗಿದ್ದರೆ, ಆಧಾರ ಸಹಿತವಾಗಿ ಯಾರಾದರೂ ಅದನ್ನು ಹೇಳಿದರೆ ನಾನು ಸ್ವಾಗತಿಸುತ್ತೇನೆ. ಇಲ್ಲಿ ನಾನು ಸ್ಪಷ್ಟಪಡಿಸ ಬಯಸುವ ಇನ್ನೊಂದು ವಿಷಯವೆಂದರೆ, ರಾಜ್ಯಶಾಸ್ತ್ರ ವಿಷಯದಲ್ಲಿ ಹೆಸರಾಂತ ವಿದ್ವಾಂಸರಾದ ನನ್ನ ಆ ಅಧ್ಯಾಪಕ ಮಿತ್ರರು ಹಿಂದೂ ಧರ್ಮದ ಜಾತಿಪದ್ಧತಿ ಕುರಿತು ತಾವು ಕೈಗೊಂಡಿರುವ ಸಂಶೋಧನಾ ಯೋಜನೆಯ ಅಂಗವಾಗಿ ನೂರಾರು ವಚನಗಳನ್ನು ವಿಶ್ಲೇಷಿಸಿ ತಮ್ಮ ಆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಯೇ ಹೊರತು, ಕೇವಲ ಅನ್ನಿಸಿಕೆಯ ಆಧಾರದ ಮೇಲಲ್ಲ. ಹಾಗಾಗಿ, ಅವರ ಅಭಿಪ್ರಾಯದ ಬಗ್ಗೆ ಭಿನ್ನಮತ ವ್ಯಕ್ತಪಡಿಸುವ ಭರದಲ್ಲಿ, ಅವರಿಗೆ ವಚನಗಳ ಜ್ಞಾನವೇ ಇಲ್ಲವೆಂಬ ಅರ್ಥದಲ್ಲಿ ಪ್ರತಿಕ್ರಿಯಿಸುವುದು ಉಚಿತವೆನಿಸುವುದಿಲ್ಲ.

ಇನ್ನೊಬ್ಬ ಓದುಗರು, ಉಲ್ಲೇಖಿತ ವಚನದಲ್ಲಿ ನೀಲಾಂಬಿಕೆಯ ಹೆಸರು ನೀಲಲೋಚನೆ ಎಂದಾಗಿರುವುದರ ಬಗ್ಗೆ ತಕರಾರು ಎತ್ತಿ, ಈ ವಚನವೇ ಅನುಮಾನಾಸ್ಪದ ಎಂದಿದ್ದಾರೆ. ಇವರು ಮತ್ತು ಈ ವಚನದ ನಿಜತ್ವವನ್ನು ಇತರ ಆಧಾರಗಳ ಮೇಲೆ ಅನುಮಾನಿಸಿರುವವರು ವಚನ ಸಾಹಿತ್ಯವನ್ನು ನಮಗೆ ಸಂಪಾದಿಸಿ ಕೊಟ್ಟಿರುವ ವಿದ್ವಾಂಸರೆಲ್ಲರ ವಿದ್ವತ್ತು ಮತ್ತು ಪ್ರಾಮಾಣಿಕತೆಗಳನ್ನೇ ಅನುಮಾನಿಸುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. ಇವರು, ನಮ್ಮ ನಡುವೆ ಈಗಲೂ ಇರುವ ವಚನ ಚಳುವಳಿಯ ನಿಜತ್ವವನ್ನೇ ಅನುಮಾನಿಸುವವರಿಗೆ (ಇವರ ಪ್ರಕಾರ ಶರಣ ಚಳುವಳಿ-ವಚನ ಸಾಹಿತ್ಯಗಳೆಂಬುವವೇ ಶೂನ್ಯ ಸಂಪಾದನಾಕಾರರ ಸೃಷ್ಟಿ!) ಜೊತೆಯಾಗಬಲ್ಲರೆಂದು ಕಾಣಿಸುತ್ತದೆ! ತಮ್ಮ ಅಭಿಪ್ರಾಯ ಅಥವಾ ನಂಬಿಕೆಗೆ ಪಥ್ಯವಾಗದ್ದರ ಮೇಲೆಲ್ಲ ದುರುದ್ದೇಶವನ್ನು ಆರೋಪಿಸಿ, ಅದನ್ನು ಅಳಿಸಹಾಕಬೇಕೆಂದು ಆಗ್ರಹಿಸುವ ಇಂತಹವರಿಗೆ ಬೇಕಾಗಿರುವುದು ಧರ್ಮವಲ್ಲವೆಂದು ಎಂಬುದು ಸ್ಪಷ್ಟ. ಏಕೆಂದರೆ, ಧರ್ಮ ಎಂದರೆ ಮೂಲತಃ ಆತ್ಯಂತಿಕ ಸತ್ಯದ ಹುಡುಕಾಟ. ಅದು ಬೆಳೆಯುವುದು ಅನುಭವ ಮಂಟಪದಲ್ಲಿ ನಡೆಯುತ್ತಿದ್ದಂತಹ ಧ್ಯಾನ-ಅಧ್ಯಯನ-ಬಿಚ್ಚು ಮನಸ್ಸಿನ ಚರ್ಚೆಗಳಿಂದಲೇ ಹೊರತು, ತಮ್ಮ ನಂಬಿಕೆಗಳ ಅಭದ್ರತೆಯ ಆತಂಕದಲ್ಲಿ ಶತ್ರು ಪಾಳೆಯವೊಂದನ್ನು ಕಲ್ಪಿಸಿಕೊಂಡು ಅಶಾಂತರಾಗುವುದರಿಂದಲ್ಲ. ಇರಲಿ, ಇವರು ಅನುಮಾನಿಸಿರುವ ವಚನ ಭಾಗ ಹಲವು ವಚನ ಸಂಪುಟಗಳಲ್ಲಿ ಲಭ್ಯವಿದ್ದು, ಅದನ್ನು ಉದಾಹರಣೆಗೆ ನಮ್ಮ ಕಾಲದ ಶ್ರೇಷ್ಠ ವೀರಶೈವ ವಿದ್ವಾಂಸರೆನಿಸಿರುವ ಡಾ॥ ಎಲ್. ಬಸವರಾಜು ಅವರು ಸಂಪಾದಿಸಿ ಬಹು ಜನಪ್ರಿಯವೂ ಆಗಿರುವ 'ಬಸವಣ್ಣನ ವಚನಗಳು' ಕೃತಿಯ 'ಮಾಹೇಶ್ವರ ಸ್ಥಲ'

ಅಧ್ಯಾಯದ ೩೯೧ನೇ ವಚನದಲ್ಲಿ ಓದಿ, ತಮಗಿಷ್ಟ ಬಂದಂತೆ ಅರ್ಥೈಸಿಕೊಂಡು ಸಮಾಧಾನಪಟ್ಟುಕೊಳ್ಳಬಹುದು ಎಂದು ತಿಳಿಸಬಯಸುತ್ತೇನೆ.

ಕಲ್ಯಾಣ ಕ್ರಾಂತಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗ್ಗೆ ನಮ್ಮಲ್ಲಿ ಹೆಮ್ಮೆ ಮೂಡಿಸುವಂತಹ ಮಹಾ ಘಟನೆ, ನಿಜ. ಹಾಗೇ ಇದರ ನಾಯಕತ್ವವನ್ನು ವಹಿಸಿದ್ದ ಬಸವಣ್ಣ ಕನ್ನಡ ಸಮಾಜಕ್ಕೆ ನಿರಂತರ ಸ್ಫೂರ್ತಿ ಕೇಂದ್ರವಾಗಬಲ್ಲವನೆಂಬುದೂ ನಿಜ. ಆದರೆ ಈ ಮಹಾಘಟನೆ ತನ್ನ ಉತ್ತುಂಗ ಸ್ಥಿತಿಯಲ್ಲಿ ಒಂದು ದೊಡ್ಡ ಸಂಚಿಗೆ ಒಳಗಾಗಿ ಸೋಲನ್ನು ಕಂಡಿತು ಎಂಬುದನ್ನೂ ನಾವು ನೆನಪಿನಲ್ಲಿಡಬೇಕು. ನಂತರ ಅದು ಜೀವವಿರಿಸಿಕೊಳ್ಳುವುದಿರಲಿ; ವ್ಯವಸ್ಥೆಯಲ್ಲಿ ಲೀನವಾಗಿ ಹೋಗಿ, ಈಗ ಒಂದು ವ್ಯವಸ್ಥಿತ ಜಾತಿಯ ರೂಪ ಪಡೆದು ಈ ಸೋಲನ್ನು ಶಾಶ್ವತಗೊಳಿಸಿಕೊಂಡಿದೆ ಎಂಬುದನ್ನೂ ಗಮನಿಸಬೇಕು. ಇದರ ಪರಿಣಾಮಗಳನ್ನು ಈ ಲೇಖನಕ್ಕೆ ಬಂದ ಪ್ರತಿಕ್ರಿಯೆಗಳ ರೀತಿ-ನೀತಿಗಳಲ್ಲೂ ಗಮನಿಸ ಬಹುದಾಗಿದೆ. ಇದಕ್ಕೆ ಕಾರಣ, ಈ ಮಹಾಘಟನೆಯ ಸೋಲಿನ ಬಗ್ಗೆ ವಿಷಾದವೇ ಹುಟ್ಟದಂತಹ–ಆ ಮೂಲಕ ಯಾವುದೇ ರಚನಾತ್ಮಕ ಸಂಚಲನವೂ ಸಾಧ್ಯವಾಗದಂತಹ–ಒಂದು ಒಣ ಹೆಮ್ಮೆಯ ವಾತಾವರಣವನ್ನು ಸೃಷ್ಟಿಸುವ ಪಟ್ಟಭದ್ರ ಜಾತಿ ರಾಜಕಾರಣವನ್ನು, ಕಾಲಾನುಕಾಲದಿಂದ ಪೋಷಿಸಲಾಗುತ್ತಿರುವುದೇ ಆಗಿದೆ. ಇದನ್ನೇ ನಾನು ವೀರಶೈವ ಚಳುವಳಿಯ ಸಂಸ್ಥೀಕರಣ ಎಂದು ಕರೆದಿರುವುದು. ಈ ಸಂಬಂಧವಾಗಿಯೇ ಬಸವಣ್ಣನ ಇಂದಿನ ಮೂರ್ತೀಕರಣದ ವೈಖರಿಯ ಪ್ರಸ್ತಾಪ ಮಾಡಿರುವುದು. ಇದನ್ನು ಹೇಳಿದೊಡನೆ, ಇದನ್ನು ಕೆಟ್ಟದ್ದನ್ನೇ ಕಾಣುವ ಮನಸ್ಸಿನ ದೋಷವೆಂದೋ, ಸಿ.ಪಿ.ಐ. ತತ್ವವೆಂದೋ (ಹಾಗೆಂದರೇನೆಂದು ನನಗೆ ತಿಳಿಯದು!) ಬರೀ ಟೀಕಿಸಿದರೆ ಏನು ಉತ್ತರ ಕೊಡಲಾದೀತು? ನನ್ನ ಇಡೀ ಲೇಖನವೇ ಇಂತಹ ಸುಲಭ ತೀರ್ಮಾನಗಳಿಗೆ ಬರುವ ಪ್ರವೃತ್ತಿಯ ಅಪಾಯಗಳ ಬಗ್ಗೆಯೇ ಇರುವುದು ಎಂಬುದನ್ನು ಓದುಗರು ಗಮನಿಸುತ್ತಾರೆ ಎಂದು ಭಾವಿಸುತ್ತೇನೆ.

■

೩. ಬುದ್ಧನ ನೆನಪಲ್ಲಿ ಕೆಲವು ಸತ್ಯಗಳನ್ನು ಧ್ಯಾನಿಸುತ್ತಾ....

ಕೆಲವು ವರ್ಷಗಳ ಹಿಂದೆ ನನ್ನ ವಿಚಾರವಾದಿ ಗೆಳೆಯರ ಗುಂಪೊಂದು ಬುದ್ಧ ಹೇಳಿದ್ದ ಪ್ರಾಥಮಿಕ ಸತ್ಯವೆಂದು ಅವರು ನಂಬಿದ್ದ 'ಆಸೆಯೇ ದುಃಖಕ್ಕೆ ಕಾರಣ' ಎಂಬ ಹೇಳಿಕೆ ಬಗ್ಗೆ ಚರ್ಚೆ ನಡೆಸಿದ್ದರು. ಅವರಲ್ಲೊಬ್ಬರು ಆಸೆ ಇಲ್ಲದೆ ಬದುಕಲು ಹೇಗೆ ಸಾಧ್ಯ ಎಂದು ಕೇಳಿದ ಪ್ರಶ್ನೆಯೇ ಈ ಚರ್ಚೆಗೆ ಕಾರಣವಾಗಿತ್ತು! ಇದಕ್ಕೆ ಗುಂಪಿನ ನಾಯಕ ಆಸೆ ಎಂಬ ಶಬ್ದವನ್ನು ಬುದ್ಧ ದುರಾಸೆ ಅನ್ನುವ ಅರ್ಥದಲ್ಲಿ ಬಳಸಿದ್ದಾನೆ ಎಂಬ ಸಮಜಾಯಿಷಿ ನೀಡಿದಾಗ ಮತ್ತೊಬ್ಬರು ಎದ್ದು ನಿಂತು, ಇದು ನಿಜವಾಗಿದ್ದರೆ ಬುದ್ಧನಿಗೆ ಭಾಷಾ ಬಡತನವಿತ್ತೆಂದು ಹೇಳಬೇಕಾಗುತ್ತದೆ ಎಂದರು. ಹಾಗಿಲ್ಲದಿದ್ದರೆ, ಬುದ್ಧ ಆಸೆ ಎಂಬ ಶಬ್ದದ ಬದಲಾಗಿ ದುರಾಸೆ ಎಂಬ ಶಬ್ದವನ್ನೇ ಬಳಸುತ್ತಿದ್ದ ಎಂಬುದು ಅವರ ವಾದ! ಈ ವಾದ-ವಿವಾದ ಬಿಸಿ ಬಿಸಿ ಚರ್ಚೆಗೆ ಕಾರಣವಾಗುತ್ತಿದ್ದಂತೆ, ಇದು ಬುದ್ಧನ ಶಾಂತಿ-ಸಮಾಧಾನಗಳ ವ್ಯಕ್ತಿತ್ವಕ್ಕೆ ಒಗ್ಗುವುದಿಲ್ಲವೆಂದು ನಾನು ಎದ್ದು ನಿಂತು ಎರಡು ವಿಷಯಗಳನ್ನು ಸ್ಪಷ್ಟಪಡಿಸಬೇಕಾಯಿತು. ಒಂದು: ಬುದ್ಧ ಕನ್ನಡ ಭಾಷೆಯಲ್ಲಿ ಬೋಧನೆ ಮಾಡಲಿಲ್ಲ. ಎರಡು: ನೀವು ಚರ್ಚಿಸುತ್ತಿರುವುದು ನೀವು ತಿಳಿದಂತೆ ಬುದ್ಧ ಹೇಳಿದ ಪ್ರಾಥಮಿಕ ಸತ್ಯ ಅಲ್ಲ.

ನನ್ನ ಮೊದಲನೆಯ ಸ್ಪಷ್ಟನೆ ಕೆಲವರಲ್ಲಿ ಲಘುವಾಗಿ ನಗೆಯುಕ್ಕಿಸಿದರೆ, ಮತ್ತೆ ಕೆಲವರನ್ನು ಯೋಚನೆಗೆ ಹಚ್ಚಿತು. ಬುದ್ಧನ ಈ ಸತ್ಯ ಆತ ಮಾತನಾಡುತ್ತಿದ್ದ ಪಾಲಿ ಭಾಷೆಯಲ್ಲಿ ದಾಖಲಾಗಿದ್ದು, ಅದರಲ್ಲಿರುವ 'ತನ್ಹಾ' ಎಂಬ ಶಬ್ದ ಕನ್ನಡದಲ್ಲಿ 'ಆಸೆ' ಎಂದು ಅನುವಾದಿತವಾಗಿ ಈ ಎಲ್ಲ ಚರ್ಚೆ-ಗೊಂದಲಗಳಿಗೆ ಕಾರಣವಾಗಿದೆ ಎಂದು ವಿವರಿಸಿದೆ. ಈ ತನ್ಹಾ ಎಂಬುದು ಸಂಸ್ಕೃತದಲ್ಲಿ 'ತೃಷ್ಣಾ'ಗೆ ಸಮಾನಾರ್ಥಕವಾದ ಶಬ್ದ. ಕನ್ನಡದಲ್ಲಿ ಇದಕ್ಕೆ ಹತ್ತಿರದ ಸಮಾನಾರ್ಥಕ ಶಬ್ದವೆಂದರೆ ದಾಹ. ದಾಹ ಎಂಬುದಕ್ಕೆ ಆಸೆ ಎಂಬುದು ಒಂದು ಅರ್ಥ ಛಾಯೆಯಷ್ಟೆ. ವಾಸ್ತವವಾಗಿ, ಬುದ್ಧನ ಉಪದೇಶಗಳ ಒಟ್ಟು ಹಿನ್ನೆಲೆಯಲ್ಲಿ ದಾಹ ಎಂದರೆ, ಇರುವಿಕೆಯ, ಬದುಕುವ ದಾಹ. ಅಂದರೆ ದೇಹಭಾವ ಅನುಭವಿಸುವ ಕೊರತೆಗಳನ್ನು ನೀಗಿಸಿಕೊಳ್ಳುವ ದಾಹ. ಇದನ್ನು ಇಂಗ್ಲಿಷ್‌ನಲ್ಲಿ craving ಎಂದು ಕರೆಯಬಹುದು. ಪಾರಮಾರ್ಥಿಕ ಭಾಷೆಯಲ್ಲಿ ಇದನ್ನು ಭವರೋಗ ಎಂದು ಕರೆಯುವರು. ಈ ಭವರೋಗದ ಮೂಲ ನೆಲೆ, ಮಮಕಾರ-attachment ಇದೇ ದುಃಖಕ್ಕೆ ಕಾರಣ ಎನ್ನುತ್ತಾನೆ ಬುದ್ಧ. ಆದರೆ ಇದು ಬುದ್ಧನ ಪ್ರಾಥಮಿಕ ಸತ್ಯವಲ್ಲ. ಇದು ಆತ ಹೇಳಿದ ನಾಲ್ಕು

ಮುಖ್ಯ (ಆರ್ಯ) ಸತ್ಯಗಳಲ್ಲಿ ಎರಡನೆಯದು. ಮೊದಲ ಸತ್ಯ 'ಸಂಸಾರ ದುಃಖಮಯ' ಎಂಬುದು. ಇದನ್ನು ಅರಿಯದೆ ಎರಡನೇ ಸತ್ಯವನ್ನು ಅರ್ಥ ಮಾಡಿಕೊಳ್ಳಲೆಳಿಸಿದ್ದರಿಂದಲೇ ಈ ಎಲ್ಲ ಗೊಂದಲ. ಆದುದರಿಂದ ಬುದ್ಧನನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು ನಾವು ಆತ ಹೇಳಿದ ಮೊದಲ ಸತ್ಯದಿಂದಲೇ ಆರಂಭಿಸಬೇಕು.

ಈ ಮೊದಲನೇ ಸತ್ಯದಲ್ಲಿನ 'ಸಂಸಾರ' ಎಂದರೆ, ಕುಟುಂಬ ಅಥವಾ ಜಗತ್ತು ಎಂದರ್ಥವಲ್ಲ. ಅದು ಭವಚಕ್ರ–ಹುಟ್ಟು ಸಾವುಗಳ ಸುಳಿ. ಇದರಲ್ಲಿ ಸಿಕ್ಕಿ ಹಾಕಿಕೊಂಡಿರುವುದರಿಂದಲೇ ಇಡೀ ಜೀವ ಜಗತ್ತು ದುಃಖದಲ್ಲಿ ತೊಳಲಾಡುತ್ತಿದೆ ಎಂದ ಬುದ್ಧ. ಇದು ಕೆಲವರಿಗೆ ವಿಚಿತ್ರ ಅನ್ನಿಸಬಹುದು. ಬುದ್ಧನ ಪ್ರಕಾರ ಹಾಗಾದರೆ, ಬದುಕಿನಲ್ಲಿ ಸುಖವೆಂಬುದೇ ಇಲ್ಲವೆ? ಹಾಗೆ ನೋಡಿದರೆ, ಬುದ್ಧನ ಪರಿಭಾಷೆಯಲ್ಲಿ ಸುಖವೆಂಬ ಶಬ್ದವೇ ಇಲ್ಲ! ಇಲ್ಲದ ಅದರ ಹುಡುಕಾಟದಲ್ಲೇ ಮನುಷ್ಯ ದುಃಖಿತನಾಗಿರುವುದು ಎನ್ನುತ್ತಾನೆ ಆತ. ಇಲ್ಲಿ ಇಲ್ಲ ಎಂದರೆ, ಶಾಶ್ವತವಲ್ಲ-ಎಲ್ಲ ಕ್ಷಣ ಭಂಗುರ ಎಂದರ್ಥವಷ್ಟೆ. ಹಾಗಾಗಿ ಅದು-ಸುಖವೆನಿಸುವುದು-ನಿಜವಲ್ಲ ಎಂದೂ ಅರ್ಥ. ಮನುಷ್ಯ ಈ ನಿಜವಲ್ಲದ್ದನ್ನು ಅರಸುತ್ತಾ, ಅದನ್ನು ತನ್ನ ಸಾವಿನಲ್ಲಿ ಕಳೆದುಕೊಳ್ಳುವ (ಅಶಾಶ್ವತತೆಯ) ಆತಂಕದಲ್ಲೇ ಜೀವನ ದೂಡುತ್ತಾ ಆತ್ಯಂತಿಕವಾಗಿ ದುಃಖಿಯೇ ಆಗಿರುತ್ತಾನೆ. ಈ ದುಃಖವನ್ನು, ಹುಟ್ಟು ಸಾವುಗಳನ್ನು ಮೀರುವ ಮೂಲಕ ನಿವಾರಿಸಿಕೊಳ್ಳಬಹುದು ಎಂಬುದು ಬುದ್ಧನ ಮೂರನೆಯ ಸತ್ಯ. ಈ ಮೀರುವಿಕೆಯನ್ನೇ ನಿರ್ವಾಣವೆನ್ನುವುದು. ಆ ಸ್ಥಿತಿಯನ್ನೇ ಶೂನ್ಯತಾ ಎನ್ನುವುದು. ಇದನ್ನು ಸಾಧಿಸಲು ಆತ ಹೇಳುವ ಅಷ್ಟಾಂಗ ಮಾರ್ಗವೇ ನಾಲ್ಕನೇ ಸತ್ಯ. ಜಗತ್ತೆಂಬುದು ಇದೆ ಮತ್ತು ಇಲ್ಲ ಎಂಬೆರಡು ಸ್ಥಿತಿಗಳಾಚೆಯ ಅನುಭವವೆಂಬ ಅರಿವನ್ನು ತಂದುಕೊಡುವ ಈ ಅಷ್ಟಾಂಗ ಮಾರ್ಗ, ಎಂಟು ಕುಶಲತೆಗಳನ್ನು ಒಳಗೊಂಡಿದೆ. ಸ್ಥೂಲವಾಗಿ ಹೇಳುವುದಾದರೆ ಅವು: ಸದಾಚಾರ, ಸದಾಶಯ, ಸನ್ನುಡಿ, ಸನ್ನಡತೆ, ಸಜ್ಜೀವನ, ಸತ್ಪ್ರಯತ್ನ, ಸದ್ಭಾವನೆ ಮತ್ತು ಸದ್ಧ್ಯಾನ.

ವೈರಾಗ್ಯ ಮತ್ತು ಭೋಗಗಳನ್ನು ಎರಡು ಅತಿಗಳೆಂದು ಬೋಧಿಸುವ ಪ್ರಜ್ಞೆಯನ್ನು ರೂಢಿಸುವ ಇದನ್ನು ಮಧ್ಯಮಮಾರ್ಗ ಎಂದು ಕರೆಯಲಾಗುತ್ತದೆ. ಆದರೆ ಈ ಮಧ್ಯಮ ಮಾರ್ಗ ಯಾರಿಗಾದರೂ ಒಂದು ಧರ್ಮ ಮಾರ್ಗವಾಗಿ ಅರ್ಥಪೂರ್ಣವೆನಿಸಿಕೊಳ್ಳುವುದು, ಈ ಧರ್ಮದ ಮೊದಲ ಸತ್ಯ-ಸಂಸಾರ ದುಃಖಮಯ ಎಂಬುದು-ಅವರಿಗೆ ಒಂದಲ್ಲ ಒಂದು ಸ್ತರದಲ್ಲಿ ಅನುಭವಕ್ಕೆ ಬಂದು, ಸತ್ಯವೆನಿಸಿದಾಗ ಮಾತ್ರ. ಆದರೆ ಇಂತಹ ಅನುಭವದ ಅಥವಾ ಸತ್ಯದ ಹತ್ತಿರಕ್ಕೂ ಸುಳಿಯದ ನಾವು ಬುದ್ಧನ ಬಗ್ಗೆ ಆತನ ಈ ಧರ್ಮದ ಬಗ್ಗೆ ಭಾವಾವೇಶದಿಂದ ಮಾತನಾಡತೊಡಗುತ್ತೇವೆ. ಸುಖದ ಬೆನ್ನು ಹತ್ತಿ, ಜಗತ್ತಿನ ಸಕಲ ಜಂಜಾಟಗಳಲ್ಲಿ ಸಿಲುಕಿಕೊಂಡು ಬದುಕಿನ 'ದಾಹ'ವನ್ನು ವಿವಿಧ ನೆಲೆಗಳಲ್ಲಿ ಹೆಚ್ಚಿಸಿಕೊಳ್ಳುತ್ತಿರುವಾಗಲೂ, ಬುದ್ಧನೇ ನಮ್ಮ ಆದರ್ಶ ಎಂದು ಘೋಷಿಸಿಕೊಳ್ಳುತ್ತೇವೆ! ಅಷ್ಟೇ ಅಲ್ಲ, ಬೌದ್ಧ ಧರ್ಮದ ದೀಕ್ಷೆಯನ್ನೂ ಪಡೆದು ನಿರಾಳವಾಗುತ್ತೇವೆ! ಇಂತಹ ಆತ್ಮದ್ರೋಹದ

ಆವೇಶದಲ್ಲಿ ನಮ್ಮಲ್ಲಿ ಕೆಲವರು ಬುದ್ಧನನ್ನು ಭಾರತೀಯ ಧರ್ಮ ಪರಂಪರೆಯ ಪ್ರತಿನಾಯಕನಂತೆ ಪ್ರಸ್ತುತ ಪಡಿಸುತ್ತಾ, ಆತನ ಮತ್ತು ಆತನ ಧರ್ಮದ ಸ್ವಾಯತ್ತತೆಯನ್ನೇ ಅಲ್ಲಗೆಳೆಯುವ ಮೂರ್ಖತನಕ್ಕೂ ಕೈ ಹಾಕುತ್ತಿದ್ದೇವೆ. ವಿಶೇಷವಾಗಿ ವೈದಿಕ ಧರ್ಮದ ಅನ್ಯಾಯಗಳ ವಿರುದ್ಧ ಬಂಡೆದ್ದ ಧಾರ್ಮಿಕ ನಾಯಕನೆಂಬಂತೆ ಆತನ ಚಿತ್ರ ಕಟ್ಟುತ್ತಾ, ದೊಡ್ಡ ರಾಜಕೀಯ ಗೊಂದಲವನ್ನೇ ಸೃಷ್ಟಿಸುತ್ತಿದ್ದೇವೆ ಮತ್ತು ಆ ಮೂಲಕ ನಮ್ಮ ವರ್ತಮಾನವನ್ನು ಪುನಾರಚಿಸಿಕೊಳ್ಳಲು ಅಗತ್ಯವಾದ ಚರಿತ್ರೆಯ ಓದಿಗೆ ನಾವೇ ಅಪಚಾರವೆಸಗಿಕೊಳ್ಳುತ್ತಿದ್ದೇವೆ. ಇದು ಇಂದು ಆರಂಭವಾದ ಗೊಂದಲ ಅಥವಾ ಅಪಚಾರದ ಪ್ರಯತ್ನವೇನೂ ಅಲ್ಲ. ಬೌದ್ಧ ಧರ್ಮದಲ್ಲಿ ಪುರೋಹಿತಶಾಹಿ ಸೃಷ್ಟಿಯಾದ ಕಾಲದಿಂದಲೂ ನಡೆಯುತ್ತಿರುವ ಧರ್ಮಕಾರಣವಿದು.

ಇಂದಿನ ಪುರೋಹಿತಶಾಹಿಯ ವಿರುದ್ಧದ ಹೋರಾಟದ ಆವೇಶದಲ್ಲಿ ನಾವು ಚರಿತ್ರೆಯ ನಿರಂತರತೆಯನ್ನೇ ಮರೆತು, ಇದಕ್ಕೆ ಕಾರಣವಾದ ಹಿಂದಿನ ಪುರೋಹಿತಶಾಹಿಯ ಅನಾಚಾರಗಳನ್ನು ಮಾನ್ಯ ಮಾಡುತ್ತಿರುವಂತೆ ತೋರುತ್ತಿದೆ. ಭಾರತದ ಧಾರ್ಮಿಕ ಚರಿತ್ರೆ ಕುರಿತು ಅಂಬೇಡ್ಕರ್ ಕಟ್ಟಿರುವ ಸಂಕಥನಗಳಲ್ಲಿ ಈ ದೋಷವನ್ನು ಢಾಳಾಗಿ ಕಾಣಬಹುದು. ಕೆಲವು ದಿನಗಳ ಹಿಂದೆ, ಗೆಳೆಯ ಎನ್.ಎಸ್.ಶಂಕರ್ ಅನುವಾದಿಸಿರುವ 'ಬ್ರಾಹ್ಮಣ ದಿಗ್ವಿಜಯ' ಎಂಬ ಅಂಬೇಡ್ಕರರ ಕಿರುಪುಸ್ತಕವೊಂದನ್ನು ಬಿಡುಗಡೆ ಮಾಡುತ್ತಾ ನಾನು ಪರೋಕ್ಷವಾಗಿ ಹೇಳಿದ್ದು ಇದನ್ನೇ: ವರ್ತಮಾನದ ಧರ್ಮಕಾರಣದ ಸಂಕಥನದಲ್ಲಿ ನಾವು ಸೃಷ್ಟಿಸಿಕೊಂಡಿರುವ ಈ ಬ್ರಾಹ್ಮಣ ಎಂಬ ಶತ್ರು ಚಾರಿತ್ರಿಕವಾಗಿ ಎಷ್ಟು ನಿಜವಾದವನು? ನಿಜವಾಗಿ ಯಾರೀತ? ನಾವು ಈ ಬ್ರಾಹ್ಮಣರ ಮೂಲ ವಂಶಸ್ಥರೆಂದು ನಂಬಿರುವ ಆರ್ಯರಿಗೂ ಮುಂಚೆ ಬ್ರಾಹಣರೆಂಬುವರು ಇಲ್ಲಿದ್ದರು ಮತ್ತು ಅವರ ವಿರುದ್ಧವೇ ಈ ಆರ್ಯರ 'ಇಂದ್ರ'ರು ಯುದ್ಧ ಮಾಡಿದ್ದು ಎಂಬ ಚಾರಿತ್ರಿಕ ಸಂಶೋಧನೆಗಳು–ಅವೈದಿಕ ಧಾರೆಯ ಧರ್ಮಾನಂದ ಕೊಸಾಂಬಿಯವರಂತಹ ಚರಿತ್ರಕಾರರ ಮೂಲಕವೇ– ಅಸ್ಪಷ್ಟವಾಗಿಯಾದರೂ ಬೆಳಕಿಗೆ ಬಂದಿವೆಯಲ್ಲ? ಹಾಗಾದರೆ ಭಾರತದಲ್ಲಿ ಬೌದ್ಧ ಧರ್ಮದ ನಾಶಕ್ಕೆ ಕಾರಣನಾದನೆಂದು ಅಂಬೇಡ್ಕರ್ ಹೇಳುವ ಪುಷ್ಯಮಿತ್ರ ಯಾವ, ಎಂತಹ ಬ್ರಾಹ್ಮಣ? ಕ್ರಿ.ಪೂ. ಎರಡನೇ ಶತಮಾನದ ಈ ಬ್ರಾಹ್ಮಣ ರಾಜ ಮನುಧರ್ಮ ಶಾಸ್ತ್ರವನ್ನು ಬರೆಸಿ, ಅದನ್ನು ಜಾರಿಗೆ ತಂದು ಆ ಮೂಲಕ; ಆ ಮುನ್ನ ಒಂದೂವರೆ ಶತಮಾನಗಳ ಕಾಲ ಮೌರ್ಯ ಸಾಮ್ರಾಜ್ಯದ ರಾಜ ಧರ್ಮವಾಗಿದ್ದ ಬೌದ್ಧ ಧರ್ಮವನ್ನು ನಾಶ ಮಾಡಿ, ಅದರ ಜಾಗದಲ್ಲಿ ಬ್ರಾಹ್ಮಣ ಧರ್ಮವನ್ನು ಸ್ಥಾಪಿಸಿದನೆಂದು ಅಂಬೇಡ್ಕರ್ ಹೇಳುತ್ತಾರೆ.

ಆದರೆ ಹಾಗೆ ಹೇಳುವಾಗ ಅವರು ಎರಡು ಮುಖ್ಯ ಅಂಶಗಳನ್ನು ಗಮನಿಸಿದಂತೆ ಕಾಣುವುದಿಲ್ಲ. ಒಂದು: ಬೌದ್ಧ ಧರ್ಮವನ್ನು ರಾಜಧರ್ಮವೆಂದು ಘೋಷಿಸಿದನೆಂದು ಹೇಳಲಾಗುವ ಅಶೋಕನ ಶಾಸನಗಳಲ್ಲೆಲ್ಲೂ ನಿರ್ದಿಷ್ಟವಾಗಿ ಬೌದ್ಧ ಧರ್ಮದವೆಂದೇ ಹೇಳಬಹುದಾದ ಉಪದೇಶಗಳಿಲ್ಲವೇಕೆ? ಬದಲಿಗೆ ಅವು ಪ್ರಚಲಿತ ಎಲ್ಲ ಪಾಶಂಡ

(ನಂಬಿಕೆ-ಸಂಪ್ರದಾಯ)ಗಳನ್ನೂ ಸಮಾನ ಗೌರವದಿಂದ ಕಾಣಬೇಕೆಂದು ಹೇಳುತ್ತ, ಸಾರ್ವತ್ರಿಕ ಸದಾಚಾರಗಳನ್ನಷ್ಟೆ ಪ್ರಚಾರ ಮಾಡುತ್ತವಲ್ಲ? ಸ್ವತಃ ಅಶೋಕನೇ ಬೌದ್ಧ ಧರ್ಮ ಪ್ರತಿಪಾದಿಸುವ ಅಜ್ಞೇಯತಾವಾದಕ್ಕೆ ವಿರುದ್ಧವಾಗಿ ತನ್ನನ್ನು ತಾನು 'ದೇವನಾಂಪ್ರಿಯ'(ದೇವರಿಗೆ ಪ್ರಿಯನಾದವನು)ನೆಂದೇಕೆ ಕರೆದುಕೊಂಡಿದ್ದಾನೆ? ಎರಡು: ಅಂಬೇಡ್ಕರ್ ಹೇಳುವ ಬೌದ್ಧ ಧರ್ಮದ ನಾಶ ಮತ್ತು ಬ್ರಾಹಣ ಧರ್ಮದ ಪುರ್ನಸ್ಥಾಪನೆಯ ನಂತರವೂ, ಬೌದ್ಧ ಧರ್ಮ ಕಿ.ಶ. ಎರಡನೇ ಶತಮಾನದ ಶಾತವಾಹನರ ಕಾಲದಲ್ಲೂ ರಾಜಾಶ್ರಯ ಪಡೆದು ವೈಭವದಿಂದ ಬಾಳಿದ ಸ್ಪಷ್ಟ ಚರಿತ್ರೆಯೇ ಇದೆಯಲ್ಲ? ಕ್ರಿ.ಶ. ಒಂದನೇ ಶತಮಾನದ ಚಕ್ರವರ್ತಿ ಕಾನಿಷ್ಕ, ಸ್ವತಃ ತಾನೇ ಮೇಲ್ವಿಚಾರಣೆ ವಹಿಸಿಕೊಂಡು ಬೌದ್ಧ ಮಹಾಸಮ್ಮೇಳನವನ್ನು ನಡೆಸಿದ್ದರ ವಿವರಗಳನ್ನು ಹ್ಯೂನೆತ್ಸಾಂಗ್ ವರ್ಣಿಸಿದ್ದಾನಲ್ಲ?

ಹಾಗೆ ನೋಡಿದರೆ, ಕ್ರಿ.ಶ. ಏಳನೇ ಶತಮಾನದ ಅಂತ್ಯದವರೆಗೂ–ಇಂದು ವೈದಿಕ ಮಹಾಗುರು ಎಂದೇ ಮಾನ್ಯ ಮಾಡಲ್ಪಟ್ಟಿರುವ ಶಂಕರಾಚಾರ್ಯರ ಧೃತಿಗೆಡಿಸುವಷ್ಟರ ಮಟ್ಟಿಗೆ–ಅದು ಬಾಳಿದ ಚರಿತ್ರೆ ಇದೆಯಲ್ಲ? ಇವರ ಗುರುಗಳ ಗುರುಗಳಾದ ಗೌಡಪಾದರ ಧರ್ಮ ಮೀಮಾಂಸೆಯೆಲ್ಲ ಬುದ್ಧನ ಶೂನ್ಯವಾದವನ್ನೇ (ನಾನೂ, ನೀನೂ, ಅವನೂ, ಯಾರೂ ಇಲ್ಲ! ಅದು, ಇದು ಯಾವುದೂ ಇಲ್ಲ! ಹಿಂದೆ, ಇಂದು, ಮುಂದೆ ಎಂಬುದೂ ಇಲ್ಲ!) ಅವಲಂಬಿಸಿ ಬೆಳೆದಿತ್ತಲ್ಲ? ಅಷ್ಟೇ ಅಲ್ಲ, ತಮ್ಮನ್ನು ಶುದ್ಧ ವೈದಿಕರು ಎಂದು ಕರೆದುಕೊಳ್ಳುವ ಆಚಾರ್ಯರೆಲ್ಲ ಶಂಕರರನ್ನು ಪ್ರಚ್ಛನ್ನ (ವೇಷ ಮರೆಸಿಕೊಂಡ) ಬುದ್ಧ ಎಂದು ಕರೆವರಲ್ಲ? ಹೋಗಲಿ, ಹತ್ತೊಂಭತ್ತನೇ ಶತಮಾನದ-ಹಿಂದೂ ಧರ್ಮದ ಪುನರುದ್ಧಾರಕರೆಂದೇ ಪ್ರಸಿದ್ಧರಾದ-ರಾಮಕೃಷ್ಣ ಪರಮಹಂಸರ ಮತ್ತು ನಮ್ಮದೇ ಇಪ್ಪತ್ತನೇ ಶತಮಾನದ ರಮಣ ಮಹರ್ಷಿಗಳ ಉಪದೇಶಗಳನ್ನು ಓದುತ್ತಿದ್ದಂತೆ, ಅವುಗಳ ಹಿನ್ನೆಲೆಯಲ್ಲಿ ಬುದ್ಧನೇ ಕಾಣತೊಡಗುತ್ತಾನಲ್ಲ? ಪರಮಹಂಸರು ವಿವೇಕಾನಂದರ ಬಾಯಲ್ಲಿ ಅವರ ಬುದ್ಧ ಗಯಾ ಯಾತ್ರೆಯ ವರ್ಣನೆ ಕೇಳಿ 'ಸಮಾಧಿ'ಗೆ ಹೋದರೆ, ಆತ್ಮವಾದಿಯಾದ ರಮಣರು ಬುದ್ಧನ 'ಅನಾತ್ಮವಾದ'ವೇ ತಮ್ಮ 'ನಾನು ಯಾರು?' ಎಂಬ ಪ್ರಶ್ನೆಯ ಮೀಮಾಂಸೆಯ ಹಿಂದೆಯೂ ಇರುವುದು ಎಂದು ಸೂಚಿಸುತ್ತಾರಲ್ಲ?

ಇದನ್ನೆಲ್ಲ ಗಮನಿಸಿದಾಗ ಬೌದ್ಧ ಧರ್ಮವನ್ನು ಯಾರೋ ನಾಶ ಮಾಡಿದರು ಅಥವಾ ಅದನ್ನು ಭಾರತದಿಂದ ಹೊರಕ್ಕೆ ಓಡಿಸಲಾಯಿತು ಎಂಬ ಮಾತುಗಳೇ ಅಸಂಗತವಾಗಿ ಕಾಣುತ್ತವೆ. ಏಕೆಂದರೆ ಬೌದ್ಧ ಧರ್ಮ ತನ್ನ ಉಚ್ಛ್ರಾಯ ಕಾಲದಲ್ಲೇ ಇತರೆ ದೇಶಗಳಿಗೆ ಹರಡಿತ್ತು. ಹಾಗೇ, ಬ್ರಾಹ್ಮಣ ಅಥವಾ ವೈದಿಕ ಧರ್ಮದ ಕಾರಣದಿಂದಲೇ ಅದು ಭಾರತದಲ್ಲಿ ನಾಶವಾಯಿತೆನ್ನುವವರು, ಮಧ್ಯ ಏಷ್ಯಾದುದ್ದಕ್ಕೂ ಬೇರೂರಿದ್ದ ಬೌದ್ಧ ಧರ್ಮ ಏಕೆ ಅಲ್ಲಿ ಕಾಣೆಯಾಯಿತು ಎಂಬುದಕ್ಕೂ ಉತ್ತರ ಹೇಳಬೇಕಾಗುತ್ತದೆ. ನಮ್ಮ ವರ್ತಮಾನದ ರಾಜಕಾರಣದ ಬೇಳೆ ಬೇಯಿಸಿಕೊಳ್ಳುವ ಆತುರದಲ್ಲಿ ನಾವು ಇತಿಹಾಸವನ್ನು ನಮ್ಮ ಅಗತ್ಯಗಳಿಗೆ ತಕ್ಕಂತೆ ಸರಳೀಕರಿಸಿಕೊಳ್ಳುವ ತಪ್ಪು ಮಾಡುತ್ತಿದ್ದೇವೆ. ಇತಿಹಾಸದಲ್ಲಿ ಹಾಲು

ಕುಡಿದ ಮಕ್ಕಳೇ ಬದುಕಿಲ್ಲ. ಇನ್ನು ವಿಷ ಕುಡಿಯುವ ಮಕ್ಕಳು? ಪ್ರಾಚೀನ ಭಾರತದ-ಬುದ್ಧಪೂರ್ವ ಭಾರತದ-ಇತಿಹಾಸ ಅನೇಕ ಗೊಂದಲಗಳ ಗೂಡಾಗಿದೆ. ರೂಪಕ ಭಾಷೆಯಲ್ಲಿ ಪುರಾಣವಾಗಿ ಮಾತ್ರ ದಾಖಲಾಗಿರುವ ಭಾರತದ ಇತಿಹಾಸವನ್ನು, ಆಧುನಿಕರಾದ ನಾವೀಗ 'ವಾಸ್ತವವಾದಿ ದಾಖಲೆ'ಗಳನ್ನು ಆಧರಿಸಿದ ಪಾಶ್ಚಿಮಾತ್ಯ ಇತಿಹಾಸ ದೃಷ್ಟಿಯನ್ನು ಆವಾಹಿಸಿಕೊಂಡು ನೋಡುತ್ತಾ, ಅನೇಕ ತಪ್ಪು ತೀರ್ಮಾನಗಳಿಗೆ ಬರುತ್ತಿದ್ದೇವೆ.

ಇದರಿಂದಾಗಿರುವ ದೊಡ್ಡ ತಪ್ಪೆಂದರೆ, ಭಾರತದ ಧಾರ್ಮಿಕ ಇತಿಹಾಸವನ್ನು ಅಚ್ಚುಕಟ್ಟಾಗಿ–ಗೆರೆ ಹೊಡೆದಂತೆ–ವೈದಿಕ ಮತ್ತು ಬೌದ್ಧ ಧರ್ಮಗಳ ಮುಖಾಮುಖಿ ಮಾತ್ರವೆಂಬಂತೆ ನೋಡುವ ಸರಳೀಕರಣ. ಬ್ರಾಹ್ಮಣ ಮತ್ತು ಶ್ರಮಣ ಪರಂಪರೆಗಳಿಗೆ ದೀರ್ಘ ಮತ್ತು ಸಂಕೀರ್ಣ ಇತಿಹಾಸವಿದ್ದು, ಇವುಗಳ ಮಧ್ಯೆ ಅನೇಕ ಸಂಕರಗಳು ನಡೆದು ಚರಿತ್ರೆಯ ಮೇಲೆ ಪ್ರಭಾವ ಬೀರಿದ ಅನೇಕಾನೇಕ ಧಾರ್ಮಿಕ–ಅತ್ತ ಆಸ್ತಿಕವೂ ಅಲ್ಲದ, ಇತ್ತ ನಾಸ್ತಿಕವೂ ಅಲ್ಲದ; ಈ ವಿಭಾಗೀಕರಣವೇ ಅಸಂಗತವೆನ್ನಿಸುವಂತಹ–ಸಂಪ್ರದಾಯಗಳು ಇಲ್ಲಿ ಬಾಳಿ ಹೋಗಿವೆ ಮತ್ತು ಅವುಗಳಲ್ಲಿ ಹಲವು ಇನ್ನೂ ವಿವಿಧ ರೂಪಗಳಲ್ಲಿ ಕ್ರಿಯಾಶೀಲವಾಗಿವೆ. ಇವೆಲ್ಲ ಸೇರಿ ಇಂದು ಜನಪ್ರಿಯ ಭಾಷೆಯಲ್ಲಿ ಹಿಂದೂ ಧರ್ಮವೆನಿಸಿಕೊಂಡಿದೆ. ಹೀಗಿರುವಾಗ ನಾವು ಶ್ರಮಣ ಪರಂಪರೆಯ ಅತ್ಯುತ್ಕೃಷ್ಟ ಉತ್ಪನ್ನವಾದ ಬುದ್ಧನನ್ನು ಬ್ರಾಹ್ಮಣ–ಇಂದಿನ ಹಿಂದೂ–ಧರ್ಮದ ವಿರುದ್ಧ, ಅದರ ಜಾತಿ ಪದ್ಧತಿ ವಿರುದ್ಧ ಬಂಡಾಯ ಹೂಡಿದ ಹೋರಾಟಗಾರನೆಂದೂ, ನಾಸ್ತಿಕನೆಂದೂ, ಭೌತವಾದಿ ವೈಚಾರಿಕನೆಂದೂ ಪ್ರಸ್ತುತ ಪಡಿಸುತ್ತಾ–ನಮ್ಮ ಇಂದಿನ ಸಂಕಟಗಳಿಗೆ ಅವನ ಈ ಚಿತ್ರದಲ್ಲಿ ಉತ್ತರಗಳನ್ನು ಹುಡುಕುವ ಪ್ರಯತ್ನದಲ್ಲಿ–ಅವನ ವ್ಯಕ್ತಿತ್ವ ಹಾಗೂ ಬೋಧನೆಗಳನ್ನು ವಿರೂಪಗೊಳಿಸುತ್ತಿದ್ದೇವೆ.

ಬುದ್ಧ ಎಂದೂ ಯಾವುದರ ಬಗೆಯೂ ಋಣಾತ್ಮಕವಾಗಿ ಮಾತಾಡಿದ ದಾಖಲೆಗಳಿಲ್ಲ. ಕೊನೆಗೆ ದೇವರ ಬಗೆಗಿನ ಪ್ರಶ್ನೆಗೂ ಅವನ ಉತ್ತರ ಅರ್ಥಪೂರ್ಣ ಮೌನವಾಗಿತ್ತೇ ಹೊರತು, ನಿರಾಕರಣೆಯದಾಗಿರಲಿಲ್ಲ. ಅನೇಕ 'ಸುತ್ತ'ಗಳಲ್ಲಿ ಅವನು ಶ್ರಮಣರೊಂದಿಗೆ, ಬ್ರಾಹ್ಮಣರನ್ನೂ ಗೌರವಿಸಿರಿ ಎಂದು ಹೇಳುತ್ತಾನೆ. ಆದರೆ ಬಹುಶಃ ವರ್ಣಧರ್ಮ ಜಾತಿ ಪದ್ಧತಿಯಾಗಿ ಮಾರ್ಪಾಡುಗೊಳ್ಳುತ್ತಿದ್ದ ಆ ಸಂದರ್ಭದಲ್ಲಿ, ಬ್ರಾಹ್ಮಣನನ್ನು ಹುಟ್ಟಿನಿಂದ ಗುರುತಿಸುವ ಪ್ರವೃತ್ತಿ ಹೇಗೆ ಅಸಂಗತವೆಂದೂ ಆತ ವಿವರಿಸುತ್ತಿದ್ದ. ಬುದ್ಧನ ಪ್ರಕಾರ ಬ್ರಾಹ್ಮಣನೆನಿಸಿಕೊಳ್ಳಲು ಒಂದು ಕಡ್ಡಾಯ ಅರ್ಹತೆ ಎಂದರೆ, ಆತನಿಗೆ ಶ್ರಮಣರಂತೆ ತನ್ನದೆನ್ನುವ ಆಸ್ತಿಯಿರಕೂಡದು. 'ಬ್ರಾಹ್ಮಣ ಧಮ್ಮಿಕ ಸುತ್ತ'ದಲ್ಲಿ ಬುದ್ಧ, ಮೊದಲು ಸರಳ ಜೀವಿಗಳಾಗಿದ್ದ ಬ್ರಾಹ್ಮಣರು ಹೇಗೆ ಲೋಕರುಚಿಗಳ ಮೋಹಕ್ಕೆ ಸಿಕ್ಕಿ, ರಾಜನೊಬ್ಬನಿಗೆ ಮಹಾ ಯಜ್ಞ ಮಾಡಿಸುವಂತೆ ದುಂಬಾಲು ಬಿದ್ದು ಅವನತಿಗೊಂಡರು ಎಂಬುದನ್ನು ಸಾಂಕೇತಿಕವಾಗಿ ವಿವರಿಸುತ್ತಾನೆ.

ಅನುಭವ ಮತ್ತು ವಿಚಾರಗಳ ಆಧಾರವಿಲ್ಲದೆ ಯಾವುದನ್ನೂ, ಯಾರು ಹೇಳಿದ್ದನ್ನೂ

ನಂಬಬಾರದೆಂದು ಹೇಳುತ್ತಿದ್ದ ಬುದ್ಧ, ಸಹಜವಾಗಿಯೇ ವೇದ ಪ್ರಾಮಾಣ್ಯವನ್ನು ಒಪ್ಪದ ಶುದ್ಧ ಪ್ರಜ್ಞಾವಾದಿ. ಹಾಗಾಗಿಯೇ ಬೌದ್ಧ ಧರ್ಮ ಶುದ್ಧ ಮಾನವ ಧರ್ಮವೆನಿಸಿ, ಅವನ ಕಾಲದಲ್ಲೇ ಅನೇಕ 'ವೈದಿಕ' ಬ್ರಾಹ್ಮಣರು ಅವನಿಗೆ ಶರಣಾಗಿ ಬೌದ್ಧರಾದರು. ಇದರ ಒಂದು ಅದ್ಭುತ ಮತ್ತು ಅರ್ಥಪೂರ್ಣ ಚಿತ್ರವೊಂದನ್ನು ಇಂದಿನ ಹಲವು ಆಧುನಿಕ 'ಬಂಡಾಯಗಾರ'ರಿಂದ ಹಿಂದೂ ಸನಾತನಿ ಎಂದು ಕರೆಸಿಕೊಂಡ ಮಾಸ್ತಿ, ತಮ್ಮ 'ಸಾರಿಪುತ್ತನ ಕೊನೆಯ ದಿನಗಳು' ಎಂಬ ಕಥೆಯಲ್ಲಿ ಕಟ್ಟಿಕೊಡುತ್ತಾರೆ. ಈ ಕಥೆಯಲ್ಲಿ ಮಾಸ್ತಿ ಬುದ್ಧನನ್ನು, ಕತ್ತಲ ದಾರಿ ಹಿಡಿದಿದ್ದ ಸನಾತನ ಧರ್ಮವನ್ನು ಮತ್ತೆ ಬೆಳಕಿನ ದಾರಿಗೆ ಕೊಂಡೊಯ್ದ ಮಹಾ ಪುರುಷನಂತೆ ಚಿತ್ರಿಸುತ್ತಾರೆ. ಈ ಚಿತ್ರಣದಲ್ಲಿ, ತನ್ನ ಬ್ರಾಹ್ಮಣ ಶಿಷ್ಯ ಸಾರಿಪುತ್ತನ ಪೂರ್ವಾಶ್ರಮದ ಪ್ರವೃತ್ತಿಯೊಂದಿಗೆ ಸಹಾನುಭೂತಿ ತೋರಿಸುವ ಬುದ್ಧ, ಆತನಿಗೆ ತನ್ನನ್ನು ದೇವರೆಂದು ಪೂಜಿಸಲು ಅನುಮತಿಯನ್ನೂ ನೀಡುತ್ತಾನೆ!

ಇದು ಮಾಸ್ತಿಯವರ ಕಲ್ಪನೆ ಮಾತ್ರವಲ್ಲವೆಂಬಂತೆ, ಬುದ್ಧನ ನಂತರದ ಐದುನೂರು ವರ್ಷಗಳಲ್ಲಿ–ಕ್ರಿ.ಶ. ಒಂದನೇ ಶತಮಾನದ ಹೊತ್ತಿಗೆ–ಬೌದ್ಧ ಮಹಾಯಾನ ಶಾಖೆ ನಾಗಾರ್ಜುನನಿಂದ ರೂಪುಗೊಂಡಿತು. ತನ್ನ ಧರ್ಮ ಮೀಮಾಂಸೆಗೆ ಪಾಲಿ ಭಾಷೆಗೆ ಬದಲಾಗಿ ಸಂಸ್ಕೃತವನ್ನು ಅಳವಡಿಸಿಕೊಂಡ ಈ ಮಹಾಯಾನ, ಲೋಕ ಮಾಯೆ ಎಂಬ 'ಅವಿದ್ಯೆ'ಯನ್ನು ದಾಟಲು ಜೀವ ಕರುಣೆಯನ್ನು ಊರುಗೋಲಾಗಿಸಿಕೊಂಡ 'ಪ್ರಜ್ಞೆ'ಯನ್ನು ರೂಢಿಸಿಕೊಳ್ಳುವ ಪ್ರಜ್ಞಾಶಾಸ್ತ್ರವೊಂದನ್ನು ಅನಾವರಣಗೊಳಿಸಿತು. ಇದರ ಅಂಗವಾಗಿ ಧ್ಯಾನವನ್ನೂ ಒಂದು ಆಚರಣೆಯನ್ನಾಗಿ ಮಾರ್ಪಡಿಸಿದ ಅದು, ಆ ಹೊತ್ತಿಗೆ ಪುನರುಜ್ಜೀವನಗೊಳ್ಳ ತೊಡಗಿದ್ದ ಯಜ್ಞ-ಯಾಗಗಳ ವೈದಿಕ ಧರ್ಮವನ್ನು ಸಾಮಾನ್ಯ ಜನತೆಯ ನೆಲೆಯಲ್ಲಿ ಎದುರಿಸಲೋ ಎಂಬಂತೆ, ಕ್ರಮೇಣ ಮೂರ್ತಿ ಪೂಜೆಯ ದೊಡ್ಡ ಆಂದೋಲನವಾಗಿ ಮಾರ್ಪಾಡಾಯಿತು! ಇದರೊಂದಿಗೆ ಗಾಂಧಾರ ಶಿಲ್ಪವೂ ವಿಕಾಸಗೊಂಡು, ಅದನ್ನೊಂದು ಸಂಸ್ಕೃತಿಯನ್ನಾಗಿ ಹರಡುವಲ್ಲಿ ಸಹಾಯಕವಾಯಿತು. ಇದರ ಫಲವಾಗಿ ಅನೇಕ ತಂತ್ರ-ಮಂತ್ರಗಳ, ಪೂಜೆ-ಆಚರಣೆಗಳ ಮತಲೋಕವೊಂದು ರೂಪುಗೊಂಡು, 'ಸಿದ್ಧಿ'ಯನ್ನರಸುವ ಅನೇಕ-ತಾಂತ್ರಿಕ-ಪಂಥಗಳು ಸೃಷ್ಟಿಯಾಗುವುದನ್ನು ನಾವು ಕಾಣುತ್ತೇವೆ. ಬೋಧಿ ಸತ್ವರ ಕಲ್ಪನೆ ಜಾತಕ 'ಕಥೆ'ಗಳಿಗೆ ದಾರಿ ಮಾಡಿಕೊಟ್ಟು, ಬುದ್ಧ ಪೂಜಾರ್ಹ ದೇವರೇ ಆಗುತ್ತಾನೆ. ಅವನ ಪರಿವಾರವಾಗಿ ಅನೇಕ ಹೆಣ್ಣು ದೇವತೆಗಳೂ, ಗಂಡು ದೇವತೆಗಳೂ, ಯಕ್ಷ-ಕಿಂಪುರುಷರೂ ಸೇರಿಕೊಂಡು, ಕಾಲ ಕ್ರಮೇಣ ಒಂದು 'ಅ-ಭಯ' ಲೋಕವೇ ಸೃಷ್ಟಿಯಾಗುತ್ತದೆ.

ಇದೆಲ್ಲದರ ಪರಿಣಾಮವಾಗಿ ಬೌದ್ಧ ಭಿಕ್ಷು-ಭಿಕ್ಷುಣಿಯರಿಗೆ ಸಾಮಾನ್ಯ ಜನತೆಯಲ್ಲದೆ, ಶ್ರೀಮಂತರ ಮತ್ತು ರಾಜ-ರಾಣಿಯರ ಅಪಾರ ಸಂಪತ್ತಿನ ದಾನ-ದತ್ತಿಗಳೂ ದೊರೆತು, ವಿಹಾರಗಳು ಕ್ರಮೇಣ ವಿಶಾಲವೂ, ವೈಭವೋಪೇತವು ಆಗತೊಡಗಿ; ಬೌದ್ಧ ಪುರೋಹಿತಶಾಹಿ ಯೊಂದು ಸೃಷ್ಟಿಯಾಗುವುದರ ಸೂಚನೆಗಳನ್ನು ಶಾತವಾಹನರ ಕಾಲದ ಅನೇಕ ದತ್ತಿ-ದಾನಗಳ

ಶಾಸನಗಳಲ್ಲಿಯೇ ನಾವು ಕಾಣತ್ತೇವೆ. ಹಾಗೇ, ನಂತರದ ಕಾಲದ 'ಮೃಚ್ಛಕಟಿಕ', 'ಮತ್ತ ವಿಲಾಸ ಪ್ರಹಸನ' ಇತ್ಯಾದಿ ನಾಟಕಗಳು ಮತ್ತು ಅನೇಕ ಕಥಾನಕಗಳಲ್ಲಿ ನೂರಾರು ಆನೆಗಳ ಸರದಾರರಾದ ಭಿಕ್ಷು ಮಹಾರಾಜರ ಮತ್ತು ಮೈ ತುಂಬಾ ವಜ್ರಾಭರಣಗಳಿಂದ ಅಲಂಕೃತರಾಗಿದ್ದ ಭಿಕ್ಷುಣಿ ಮಹಾರಾಣಿಯರ ವಿಹಾರ-ವಿಲಾಸಗಳು ಹಾಗೂ ಕಳ್ಳ-ಸುಳ್ಳ-ಖದೀಮರೆಲ್ಲ ಬೌದ್ಧ ಸಂನ್ಯಾಸಿಗಳ ವೇಷ ತೊಟ್ಟು ಸಂಕಷ್ಟದಿಂದ ಪಾರಾಗುವ ಅನೇಕ ಪ್ರಸಂಗಗಳು ವಿಡಂಬನಾತ್ಮಕವಾಗಿ ನಿರೂಪಿತವಾಗಿರುವುದನ್ನು ನಾವು ಗಮನಿಸಬಹುದು. ಹೀಗೆ ತನ್ನದೇ ಪುರೋಹಿತಶಾಹಿಯನ್ನು ನಿರ್ಮಿಸಿಕೊಂಡ ಬೌದ್ಧ ಧರ್ಮ ತನ್ನ ಅನನ್ಯ ಗುರುತನ್ನು ಕಳೆದುಕೊಂಡು, ಭಾರತದ ಅಂದಿನ ಧಾರ್ಮಿಕ ಕೋಲಾಹಲದಲ್ಲಿ ಅನೇಕ ಸಂಪ್ರದಾಯಗಳ ಮಧ್ಯೆ ಲೀನವಾಗುತ್ತಾ, ಕ್ರಮೇಣ ಕಳೆದು ಹೋಯಿತಷ್ಟೇ.

ಆದರೆ ಸಂಪೂರ್ಣವಾಗಿಯೇನೂ ಕಳೆದು ಹೋಗಿಲ್ಲ. ಏಕೆಂದರೆ ಅದು, ನಾಗಾರ್ಜುನ ತನ್ನ 'ಮೂಲ ಮಾಧ್ಯಮಕಾರಿಕಾ'ದಲ್ಲಿ 'ಪ್ರಜ್ಞಾ ಪಾರಮಿತ' (ಪ್ರಜ್ಞೆಯ ಪರಿಪೂರ್ಣತೆ)ದ ಸಾಧನೆಯ ಅಂಗವಾಗಿ ನಿರೂಪಿಸಿರುವ 'ಜಗತ್ತು ಒಂದು ಸಂಕೀರ್ಣ ಕಾರ್ಯ ಕಾರಣ ಸಂಬಂಧಗಳ ಜಾಲವಾಗಿದ್ದು, ಪ್ರತಿಯೊಂದು ಜೀವಿಯೂ ಪ್ರತಿ ಇನ್ನೊಂದು ಜೀವಿಯ ಸಂಬಂಧದಲ್ಲಷ್ಟೇ ತನ್ನ ಅಸ್ತಿತ್ವದ ಅರ್ಥಪೂರ್ಣತೆಯನ್ನು ಕಂಡುಕೊಳ್ಳಬಹುದು' ಎಂಬರ್ಥದ 'ಪ್ರತೀತ್ಯ ಸಮುತ್ಪಾದ ತತ್ವ' ಅನೇಕ ರೂಪಗಳಲ್ಲಿ ನಮ್ಮ ಮಧ್ಯೆ ಇನ್ನೂ ಜೀವಂತವಾಗಿದೆ. ಪುರಾತನ ಮೌಢ್ಯಗಳು ಮತ್ತು ಆಧುನಿಕ ಬದುಕಿನ ಜಂಜಾಟಗಳ ನಡುವೆಯೂ ಇನ್ನೂ ನಮ್ಮಲ್ಲಿ ಸಂಪೂರ್ಣ ಬತ್ತಿ ಹೋಗಿರದ 'ಸಕಲ ಜೀವಿಗಳಿಗೆ ಲೇಸನ್ನೇ ಬಯಸುವ' ಮತ್ತು 'ದಯೆಯೇ ಧರ್ಮದ ಮೂಲವಯ್ಯ' ಎಂಬ ಆಳದ ಸಾರ್ವತ್ರಿಕ ಅರಿವಿನ ಹಿಂದಿನ 'ಕರುಣಾ'ವಾಗಿ, ಅದು ಭಾರತದ ಜನಮನದ ಹೃದಯದಲ್ಲಿ ಇಂದೂ ಅನುರಣಿಸುತ್ತಿದೆ. ಈ ದೃಷ್ಟಿಯಿಂದ ನೋಡಿದಾಗ ಇಂದು ಜನಪ್ರಿಯ ನೆಲೆಯಲ್ಲಿ ಹಿಂದೂ ಧರ್ಮವೆಂದು ಕರೆಸಿಕೊಳ್ಳುವ ಹಲವು ಸಂಪ್ರದಾಯ-ನಂಬಿಕೆಗಳ ಕಲಸು ಮೇಲೋಗರದಂತಿರುವ 'ಧರ್ಮ'ಕ್ಕೆ, ಜೀವ ಕೇಂದ್ರವಾಗಿರುವುದು ಬೌದ್ಧ ಧರ್ಮವೇ. ಹಾಗಾಗಿಯೇ ಈ 'ಹಿಂದೂ ಧರ್ಮ', ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಪುರಾತನ ವೈದಿಕ ಪುರೋಹಿತಶಾಹಿಯ ಮೌಢ್ಯ ಮತ್ತು ಆಧುನಿಕ ಕ್ರಿಶ್ಚಿಯನ್ ಮತದ ಲೌಕಿಕ ಆಕರ್ಷಣೆಗಳೆರಡನ್ನೂ 'ಮಧ್ಯಮ ಮಾರ್ಗ'ದಲ್ಲಿ ಎದುರಿಸಿ ನಿಲ್ಲುತ್ತಾ,

ಇಲ್ಲಿ
ಯಾರೂ ಮುಖ್ಯರಲ್ಲ
ಯಾರೂ ಅಮುಖ್ಯರಲ್ಲ
ಯಾವುದೂ ಯಃಕಶ್ಚಿತವಲ್ಲ
ಇಲ್ಲಿ

ಯಾವುದಕ್ಕೂ ಮೊದಲಿಲ್ಲ
ಯಾವುದಕ್ಕೂ ತುದಿಯಿಲ್ಲ
ಯಾವುದೂ ಎಲ್ಲಿಯೂ ನಿಲ್ಲುವುದಿಲ್ಲ
ಕೊನೆ ಮುಟ್ಟುವುದೂ ಇಲ್ಲ.

ಇಲ್ಲಿ
ಅವಸರವೂ ಸಾವಧಾನದ ಬೆನ್ನೇರಿದೆ.

ಇಲ್ಲಿ
ಎಲ್ಲದಕ್ಕೂ ಇದೆ ಅರ್ಥ
ಯಾವುದೂ ಅಲ್ಲ ವ್ಯರ್ಥ
ನೀರೆಲ್ಲ ಊ ತೀರ್ಥ.

ಎಂಬ ಬೌದ್ಧ 'ಪ್ರತೀತ್ಯ ಸಮುತ್ಪಾದ' ತತ್ವವೇ ಆದ ಈ ಬೀಜವಾಕ್ಯವನ್ನು ತನ್ನ ಜೀವನ ದರ್ಶನವನ್ನಾಗಿ ಅದ್ಭುತ ರೀತಿಯಲ್ಲಿ ಘೋಷಿಸಿಕೊಳ್ಳಲು ಸಾಧ್ಯವಾಗಿರುವುದು. ಆದರೆ ತನ್ನ ಜೀವನ ದರ್ಶನಕ್ಕೆ ವಿರುದ್ಧವಾದ ಇದನ್ನು ಸಹಿಸಲಾಗದ ಹೊಸ ವೈದಿಕ ಪುರೋಹಿತಶಾಹಿಯು ಇಂದು ವಿಭಿನ್ನ ತಾತ್ವಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಪುನರ್ಸಂಘಟಿತಗೊಂಡು, 'ಹಿಂದುತ್ವ'ವೆಂಬ ಹೊಸ ಹೆಸರಲ್ಲಿ ಹಿಂದೂ ಧರ್ಮದ ಈ ಬೌದ್ಧ ಹೃದಯ ಕೇಂದ್ರವನ್ನು ನಾಶ ಪಡಿಸುವ ಪ್ರಯತ್ನದಲ್ಲಿ ತೊಡಗಿದೆ. ಇದನ್ನು ಇಂದಿನ ಪರಿಸ್ಥಿಯಲ್ಲಿ ನಾವು 'ಹಿಂದೂ'ವಾಗಿ ಇದ್ದುಕೊಂಡೇ ಬುದ್ಧನಿಗೆ ನಮಸ್ಕರಿಸುವ ಮೂಲಕ ಮಾತ್ರ ಪರಿಣಾಮಕಾರಿಯಾಗಿ ಎದುರಿಸಬಹುದು. ಆ ಮೂಲಕ ಮಾತ್ರ ಹಿಂದೂ ಧರ್ಮ ತನ್ನ ಬಹುಮುಖಿ ಸಂಸ್ಕೃತಿಯನ್ನು ಉಳಿಸಿಕೊಂಡು ಬುದ್ಧನಿಂದ ಸ್ಫೂರ್ತಿಯನ್ನು ಪಡೆಯಬಹುದು ಎಂಬುದು ನನ್ನ ನಮ್ರ ಅಭಿಪ್ರಾಯವಾಗಿದೆ.

(೩೦ ಮೇ, ೨೦೦೮)

■

೪. ಈ ಚುನಾವಣೆಯ ಪಾಠಗಳು

ಈ ಅಂಕಣ ಪ್ರಕಟವಾಗುವ ವೇಳೆಗೆ ಕರ್ನಾಟಕದ ಜನತೆ ಒಂದು ಹೊಸ ಸರ್ಕಾರವನ್ನು ಪಡೆದಿರಬಹುದು. ಬಹುಶಃ ಅದು ಬಿಜೆಪಿ ಸರ್ಕಾರವೇ ಆಗಿರಬಹುದು. ಆದರೆ ಇದನ್ನು ಖಚಿತವಾಗಿ ಹೇಳಲಾಗದಿರಲು ಇರುವ ಕಾರಣವೆಂದರೆ, ಸರಳ ಬಹುಮತಕ್ಕೆ ಅಗತ್ಯವಿರುವ ಕನಿಷ್ಠ ಮೂರು ಪಕ್ಷೇತರ ಶಾಸಕರನ್ನು ತನ್ನೆಡೆಗೆ ಸೆಳೆದುಕೊಳ್ಳಲು ಬಿಜೆಪಿ ಭಾರಿ ಕಸರತ್ತನ್ನೇ ಮಾಡಬೇಕಾಗುವಂತಹ ಪರಿಸ್ಥಿತಿ ಉಂಟಾಗಿರುವುದು: ಈ ಬಹುಮತ ಒದಗಿಸಬಲ್ಲ ಆರು ಮಂದಿ ಶಾಸಕರಲ್ಲಿ ನಾಲ್ವರು ಕಾಂಗ್ರೆಸ್ ಬಂಡಾಯ ಅಭ್ಯರ್ಥಿಗಳೇ ಆಗಿದ್ದು, ಅವರ ಒಲವು ಗಳಿಸಲು ಈ ಪಕ್ಷ ಭಾರಿ 'ಬೆಲೆ'ಯನ್ನೇ ತೆರಬೇಕಾಗಿ ಬರಬಹುದು. ಈ 'ಬೆಲೆ' ಹಣದ ರೂಪದಲ್ಲಿ ಮಾತ್ರ ಇರದೆ, ಅವರ ಸಹಕಾರದೊಂದಿಗೆ ರಚಿಸಬಹುದಾದ ಸರ್ಕಾರದ 'ಸ್ಥಿರತೆ' ಮತ್ತು 'ವಿಶ್ವಾಸಾರ್ಹತೆ'ಗಳನ್ನು ಭಂಗಗೊಳಿಸುವ ರೂಪಗಳಲ್ಲಿ ಪಕ್ಷವನ್ನು ನಿರಂತರ ಕಾಡುತ್ತಲೇ ಇರಬಹುದು.

ಆದರೆ ಗೆಲುವಿನ ಸಂಭ್ರಮದಲ್ಲಿರುವ ಬಿಜೆಪಿಗೆ ಸದ್ಯಕ್ಕೆ 'ಸ್ಥಿರತೆ' ಮತ್ತು 'ವಿಶ್ವಸನೀಯತೆ'ಗಳು ಅಷ್ಟು ದೊಡ್ಡದಾದ ಪ್ರಶ್ನೆಗಳಾಗಿ ಕಾಣಲಾರವು. ಏಕೆಂದರೆ, ಅದು ಕಾಂಗ್ರೆಸ್ ಮತ್ತು ಜೆಡಿಎಸ್ ಸೇರಿ ಮಾಡುತ್ತಿರುವ ಮತ್ತೊಂದು ಸಮ್ಮಿಶ್ರ ಸರ್ಕಾರ ರಚನೆಯ ಪ್ರಯತ್ನಗಳು ಯಶಸ್ವಿಯಾಗುವ ಮುನ್ನ ತನ್ನ ಸರ್ಕಾರ ರಚನೆಯ ಕಾರ್ಯಾಚರಣೆಯನ್ನು ಕ್ಷಿಪ್ರ ಗತಿಯಲ್ಲಿ ಮುಗಿಸಬೇಕಿದೆ! ಅತಿ ದೊಡ್ಡ ಶಾಸಕಾಂಗ ಪಕ್ಷವಾಗಿ ಹೊರಹೊಮ್ಮಿರುವ ಬಿಜೆಪಿಗೇ ರಾಜ್ಯಪಾಲರಿಂದ ಸರ್ಕಾರ ರಚನೆಗಾಗಿ ಮೊದಲ ಕರೆ ಬರಬೇಕು. ಆದರೆ ಅದಕ್ಕೆ ಮುನ್ನವೇ ಕಾಂಗ್ರೆಸ್-ಜೆಡಿಎಸ್ ತನ್ನ ಬಹುಮತವನ್ನು ಸಾಬೀತು ಪಡಿಸುವಂತಹ ಸಂಯುಕ್ತ ಶಾಸಕಾಂಗ ಪಕ್ಷದ ಪಟ್ಟಿಯನ್ನು ರಾಜ್ಯಪಾಲರಿಗೆ ಸಲ್ಲಿಸಿದರೆ, ಬಿಜೆಪಿಗೆ ಪರಿಸ್ಥಿತಿ ಕಷ್ಟವಾಗಬಹುದು.

ಅದೇನೇ ಇರಲಿ, ಈ ಚುನಾವಣೆಗಳ ಮೂಲಕ ವ್ಯಕ್ತವಾಗಿರುವ ಜನತೆಯ ತೀರ್ಪಿನ ಹಿಂದಿನ ಭಾವವನ್ನು ಗಮನಿಸಿದರೆ, ಜನತೆ ಬಿಜೆಪಿಗೆ ಹೆಚ್ಚು ಒಲಿದಿದೆ ಮತ್ತು ಏಕ ಪಕ್ಷ ಸರ್ಕಾರಕ್ಕಾಗಿ ಆಶಿಸಿದೆ ಎಂಬುದು ಎದ್ದು ಕಾಣುತ್ತದೆ. ಆದರೆ ಸರ್ಕಾರ ರಚನೆಯಂತಹ ಶುದ್ಧ ವ್ಯಾವಹಾರಿಕ ಕೆಲಸಗಳಲ್ಲಿ ಭಾವಕ್ಕೆ ಆದ್ಯತೆ ಕಡಿಮೆ. ತಾಂತ್ರಿಕವಾಗಿ ಎಲ್ಲ ಸರಿಯಿದ್ದರಾಯಿತಷ್ಟೆ! ಹಾಗಾಗಿ ಬಿಜೆಪಿಗೆ ರಾಜ್ಯಪಾಲರಿಂದ ಸರ್ಕಾರ ರಚನೆಗಾಗಿ ಆಹ್ವಾನ ಸಿಕ್ಕರೂ ವಿಧಾನ

ಮಂಡಲದಲ್ಲಿ ಅದು ತನ್ನ ಬಹುಮತವನ್ನು ಸಾಬೀತುಪಡಿಸುವವರೆಗೂ, ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದ ರಚನೆಯ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಆದರೆ ಯಾವುದೇ ಸರ್ಕಾರ ಬರಲಿ, ಅದು ಯಾರು ಯಾವ ಪಕ್ಷದಲ್ಲಾದರೂ ಇರಬಹುದಾದ ಇಂದಿನ ರಾಜಕೀಯ ವಾತಾವರಣದಲ್ಲಿ ಹೆಚ್ಚಿನ ವ್ಯತ್ಯಾಸವನ್ನೇನೂ ಮಾಡಲಾರದೆಂಬುದು ಇಂದಿನ ಸತ್ಯ. ಆದರೂ ಕೆಲವರಿಗೆ ಏನೇ ಆಗಲಿ ಬಿಜೆಪಿ ಸರ್ಕಾರ ಬರಬಾರದೆಂಬ ಆಸೆ!

ಈ ಆಸೆಗೆ ಕಾರಣಗಳು ಹಲವಾರು. ಕಳೆದ ವಾರ ಮೈಸೂರಿನಲ್ಲಿ ನಡೆದ ನನ್ನ 'ಇದು ಭಾರತ! ಇದು ಭಾರತ!!' ಎಂಬ ಪುಸ್ತಕದ (ಇದು ಕಳೆದೊಂದು ವರ್ಷದಲ್ಲಿ 'ವಿಕ್ರಾಂತ ಕರ್ನಾಟಕ'ಕ್ಕಾಗಿ ನಾನು ಬರೆದ ಆಯ್ದ ಐವತ್ತು 'ವಾರದ ಒಳನೋಟ'ಗಳ ಸಂಗ್ರಹ) ಬಿಡುಗಡೆ ಸಮಾರಂಭದಲ್ಲಿ ಇಂತಹ ಹಲವಾರು ಕಾರಣಗಳು ಪ್ರಕಟಗೊಂಡವು. ಪುಸ್ತಕದ ಬಗ್ಗೆ ಮಾತನಾಡ ಹೊರಟ ರವೀಂದ್ರ ರೇಷ್ಮೆಯವರು ಪುಸ್ತಕ ಬಿಟ್ಟು ತಮ್ಮದೇ ರಾಜಕೀಯ ಲಹರಿಯಲ್ಲಿ ಮಾತನಾಡುತ್ತಾ, 'ಬಿಜೆಪಿ ಅಧಿಕಾರಕ್ಕೆ ಬಂದರೆ ಬರಲಿ ಬಿಡಿ; ಅದನ್ನು ಎದುರಿಸೋಣ' ಎಂದಾಗ, ಎಚ್.ಎಲ್. ಕೇಶವಮೂರ್ತಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ 'ಬಿಜೆಪಿ ಬಂದರೆ ಕಷ್ಟ. ಆದುದರಿಂದ ಅದು ಬರಕೂಡದು' ಎಂದರು. ಇವರ ಈ ಮಾತಿನ ಸುತ್ತ ನಡೆದ ಸಂಕ್ಷಿಪ್ತ ಚರ್ಚೆಯಲ್ಲಿ ಬಿಜೆಪಿಗೆ ವಿರೋಧವಾಗಿ ವ್ಯಕ್ತವಾದ ಕಾರಣಗಳೆಂದರೆ: ಅದೊಂದು ಕೋಮುವಾದಿ ಪಕ್ಷ, ಅದೊಂದು ಫ್ಯಾಸಿಸ್ಟ್ ಪಕ್ಷ, ಅದು ಸಂವಿಧಾನವನ್ನೇ ತಿದ್ದಹೊರಟ ಪಕ್ಷ, ಅದು ಪಠ್ಯ ಪುಸ್ತಕಗಳಲ್ಲಿ ಚರಿತ್ರೆಯನ್ನೇ ಬದಲಿಸ ಹೊರಟ ಪಕ್ಷ ಇತ್ಯಾದಿ.

ನಾನು ಈ ಚರ್ಚೆಯನ್ನು ಆಲಿಸುತ್ತಿದ್ದಾಗ ನನಗನ್ನಿಸಿದ್ದು: ನಾವು ಬಿಜೆಪಿ ಬಗ್ಗೆ ಮಾತನಾಡುವಾಗ ನಾವು ನಮ್ಮ ದೌರ್ಬಲ್ಯಗಳ ನೆಲೆಯಲ್ಲೇ ಮಾತನಾಡುತ್ತಿರುತ್ತೇವೆ. ಹಾಗಾಗಿಯೇ, ಬಿಜೆಪಿ ವಿರೋಧದ ನಮ್ಮೆಲ್ಲ ವಾದ-ವಿವಾದ ಹಾಗೂ 'ಕಾರ್ಯಾಚರಣೆ'ಗಳ ಹೊರತಾಗಿಯೂ, ಅದು ಜನರ ಒಲವನ್ನು ಹೆಚ್ಚಿಸಿಕೊಳ್ಳುತ್ತಲೇ ನಡೆದಿದೆ! ಅಂದಹಾಗೆ, ನಮಗೆ ಕಾಣುವ ಬಿಜೆಪಿಯಲ್ಲಿನ ಅಪಾಯಗಳು ಜನರಿಗೇಕೆ ಕಾಣುತ್ತಿಲ್ಲ? ಜನರೇನು ಮೂಢರೇ? ಹಾಗೆಂದು ಭಾವಿಸುವವರಿಗೆ ಪ್ರಜಾಪ್ರಭುತ್ವದಲ್ಲೇ ನಂಬಿಕೆ ಇಲ್ಲವೆಂದು ಹೇಳಬೇಕಾಗುತ್ತದೆ. ಹಾಗಾದರೆ ಫ್ಯಾಸಿಸ್ಟರು ಯಾರು? ಇಂದು ಜನ ಬಿಜೆಪಿ ಕಡೆಗೆ ಒಲವು ತೋರುತ್ತಿದ್ದರೆ ಅದಕ್ಕೆ ಹಲವಾರು ಕಾರಣಗಳಿವೆ. ಮುಖ್ಯವಾದದ್ದು: ಬಿಜೆಪಿಯೇತರ ಪಕ್ಷಗಳು ಬಿಜೆಪಿಗಿಂತ ಅಲ್ಲದಿದ್ದರೂ ಬಿಜೆಪಿಯಷ್ಟೇ ಭ್ರಷ್ಟ, ದುಷ್ಟ ಹಾಗೂ ಜನವಿರೋಧಿಯಾಗಿವೆ. ಹಾಗೆ ನೋಡಿದರೆ, ಕರ್ನಾಟಕದಲ್ಲಿ ಬಿಜೆಪಿಯನ್ನು ಬೆಳೆಸಿದವರಾದರೂ ಯಾರು? ಖಂಡಿತ ಯಡಿಯೂರಪ್ಪನವರಲ್ಲ. ಈ ಚುನಾವಣೆಗಳಲ್ಲಿ ಕಾಣುತ್ತಿರುವ ಬಿಜೆಪಿ ಸಾಧನೆಗೆ ಕಾರಣರಾದವರಲ್ಲಿ, ಅವರಿಗೆ ನನ್ನ ಪ್ರಕಾರ ಏನಿದ್ದರೂ ನಾಲ್ಕನೇ ಸ್ಥಾನ!

ಕಳೆದ ಚುನಾವಣೆಗಳಲ್ಲಿ ಅಧಿಕಾರದ ಹಂಬಲದಲ್ಲಿ ಆ ಪಕ್ಷ ಸೇರಿ, ಕೆಳ ಜಾತಿಗಳಲ್ಲಿನ ತಮ್ಮ ವ್ಯಾಪಕ ಪ್ರಭಾವದಿಂದಾಗಿ ಅದು ಮೊದಲ ಬಾರಿಗೆ ರಾಜ್ಯದಲ್ಲಿ ಅತಿ ದೊಡ್ಡ

ಪಕ್ಷವಾಗಿ ಹೊರಮೂಡುವಂತೆ ಮಾಡಿ ಅದರ ಆತ್ಮವಿಶ್ವಾಸ ಹೆಚ್ಚಿಸಿದ ಬಂಗಾರಪ್ಪನವರಿಗೆ ಮೊದಲ ಸ್ಥಾನ. ಎರಡನೇ ಸ್ಥಾನ, ಹೋದ ಚುನಾವಣೆಗಳಲ್ಲಿ ಜನರಿಂದ ತಿರಸ್ಕೃತವಾದರೂ, ಅತಿ ದೊಡ್ಡ ಪಕ್ಷವಾಗಿದ್ದ ಬಿಜೆಪಿಗೆ ಅಧಿಕಾರದ ಸಾಧ್ಯತೆಯನ್ನು ತಪ್ಪಿಸಲೆಂದೇ, ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಂಡು ಕೊನೆಗೆ ಅವಮಾನಕರ ರೀತಿಯಲ್ಲಿ ಅಧಿಕಾರ ಕಳೆದುಕೊಳ್ಳುವಂತಹ ಅಧಿಕಾರ ಹಪಾಹಪಿಯ ರಾಜಕಾರಣ ಮಾಡಿದ ಕಾಂಗ್ರೆಸ್ಸಿನ ವರಿಷ್ಠ ನಾಯಕತ್ವಕ್ಕೆ. ಕೌಟುಂಬಿಕ ರಾಜಕಾರಣಕ್ಕೆ ಧಕ್ಕೆಯೊದಗುವ ಆತಂಕದಲ್ಲಿ ಕಾಂಗ್ರೆಸ್ಸಿಗೆ ಕೈ ಕೊಟ್ಟು ಬಿಜೆಪಿಯೊಂದಿಗೆ ಸಮಯ ಸಾಧಕ ಮೈತ್ರಿ ಸಾಧಿಸಿದ ಮಗನನ್ನು ಅಮಾಯಕವಾಗಿ ಪ್ರೋತ್ಸಾಹಿಸಿ, ನಂತರ ಮಾತು ಬದಲಾಯಿಸುವ ಮೂಲಕ ಅಧಿಕಾರ ಹಸ್ತಾಂತರ ಮಾಡದೆ ಆ ಪಕ್ಷದ ಬಗ್ಗೆ ಜನರಲ್ಲಿ ಸಹಾನುಭೂತಿ ಉಂಟಾಗಲು ಕಾರಣರಾದ ದೇವೇಗೌಡರಿಗೆ ಮೂರನೇ ಸ್ಥಾನ.

ಇವರೆಲ್ಲ ಸೇರಿ ಈಗ ಬಿಜೆಪಿಯನ್ನು ಸೋಲಿಸಿ ಎಂದರೆ ಜನ ಯಾಕೆ ಇವರ ಮಾತು ಕೇಳಬೇಕು? ಜನಕ್ಕೆ ನಮಗಿಂತ ಸ್ಪಷ್ಟವಾಗಿ ಗೊತ್ತಿದೆ, ಬಿಜೆಪಿ ತನ್ನೆಲ್ಲ ತಾತ್ವಿಕತೆಯನ್ನು ಚುನಾವಣಾ ಯಶಸ್ಸಿಗೆ ಒತ್ತೆ ಇಟ್ಟು ಇತರೆಲ್ಲ ಪಕ್ಷಗಳಂತೆಯೇ ವ್ಯಾವಹಾರಿಕ ರಾಜಕಾರಣ ಮಾಡುವ ಇನ್ನೊಂದು ಸಮಯಸಾಧಕ ಪಕ್ಷ ಮಾತ್ರವೆಂದು. ಆದರೆ ಅದಿನ್ನೂ ರಾಜ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಅಧಿಕಾರ ನಡೆಸದ ಪಕ್ಷವಾದ್ದರಿಂದ ಮತ್ತು ಬೇರೆ ವಿಶ್ವಾಸಾರ್ಹ ಪರ್ಯಾಯವಿಲ್ಲವಾದ್ದರಿಂದ, ಜನ ಈ ಬಾರಿ ಅದಕ್ಕೂ ಒಂದು ಅವಕಾಶ ಕೊಟ್ಟು ಪರೀಕ್ಷಿಸುವ ಪ್ರಯತ್ನ ಮಾಡಿದ್ದಾರೆ. ಜನತೆಯ ಈ ತೀರ್ಪನ್ನು ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟವರೆಲ್ಲರೂ ಗೌರವಿಸಬೇಕಿದೆ. ಹಾಗೇ, ಬಿಜೆಪಿ ಕೂಡಾ-ಅಧಿಕಾರಕ್ಕೆ ಬಂದಲ್ಲಿ-ಇದನ್ನರಿತು, ಅತಿಗಳಿಗೆ ಹೋಗದೆ ನಮ್ಮ ಸಂವಿಧಾನದ ಆಶಯಗಳಿಗೆ ಭಂಗ ಬರದಂತೆ ಆಡಳಿತ ನಡೆಸಬೇಕಿದೆ. ಇಲ್ಲದೇ ಹೋದಲ್ಲಿ ಅದನ್ನೂ ಜನ ಮುಂದೆ ದುಪ್ಪಟ್ಟು ಕ್ರೋಧದಿಂದ ತಿರಸ್ಕರಿಸುವುದು ಖಂಡಿತ. ಪ್ರಜಾಪ್ರಭುತ್ವದ ಶಕ್ತಿ-ಸೌಂದರ್ಯಗಳಿರುವುದೇ ಜನತೆಯ ಇಂತಹ ಪರಿಣಾಮಕಾರಿ ತೀರ್ಪುಗಳಲ್ಲಿ ಅಲ್ಲವೆ?

ಅಂದಹಾಗೆ, ಚುನಾವಣೆಗಳಿಗೆ ಮುನ್ನ ಸ್ಪರ್ಧೆಯಲ್ಲಿ ಮುಂದಿದ್ದಂತೆ ತೋರಿದ ಕಾಂಗ್ರೆಸ್ಸೇಕೆ ಅಂತಿಮವಾಗಿ ಹಿಂದೆ ಬಿದ್ದಿತು? ಹಲವು ಮಹತ್ವಾಕಾಂಕ್ಷಿ ನಾಯಕರ ಒಳ ರಾಜಕೀಯದ ಒತ್ತಡಗಳಿಗೆ ಸಿಕ್ಕ ಪಕ್ಷ, ಜನತೆಯ ಭಾವನೆಗಳ ಬಗ್ಗೆ ಗೌರವವನ್ನೇ ಕಳೆದುಕೊಂಡಂತೆ; ಅತ್ಯಂತ ಬೇಜವಾಬ್ದಾರಿತನದಿಂದ ನಡೆಸಿದ ಟಿಕೆಟ್ ಹಂಚಿಕೆಯೇ ಅದರ ಹಿನ್ನಡೆಗೆ ಪ್ರಮುಖ ಕಾರಣವಾಗಿದ್ದಂತೆ ತೋರುತ್ತದೆ. ಜನರ ವಿವೇಕದಲ್ಲಿ ವಿಶ್ವಾಸವೇ ಇಲ್ಲದಂತೆ ಜಾತಿ ಮತ್ತು ಹಣ ನೋಡಿ, ರಾಜಕಾರಣದ ಗಂಧ ಗಾಳಿಯಿಲ್ಲದ ಸಿನೆಮಾ ನಟ ನಟಿಯರಿಗೆಲ್ಲ ಮತ್ತು ತಮ್ಮ ಸಂಪತ್ತನ್ನು ರಕ್ಷಿಸಿಕೊಳ್ಳಲು ಮಾತ್ರ ಶಾಸಕರಾಗ ಬಯಸಿದ ಕೋಟ್ಯಾಧೀಶರಿಗೆಲ್ಲ ಟಿಕೆಟ್ ನೀಡಿದ ಕಾಂಗ್ರೆಸ್ ಇತರ ಪಕ್ಷಗಳಿಗಿಂತ ಭಿನ್ನವಾಗಿ ಕಾಣದೆ, ಕ್ರಮೇಣ ಜನರ ಸಹಾನುಭೂತಿ ಕಳೆದುಕೊಳ್ಳುತ್ತಾ ಹೋಯಿತು. ಜೊತೆಗೆ ಬಿಜೆಪಿಯ

ಸುಯೋಜಿತ ಮತ್ತು ಸುಸಂಘಟಿತ ಪ್ರಚಾರ ವೈಖರಿಗೆ ಸರಿಸಮವಾದ ಪ್ರಚಾರ ತಂತ್ರವನ್ನು ಆವಿಷ್ಕರಿಸಿಕೊಳ್ಳಲಾಗದ ಅದರ ಮೊದ್ದುತನದಿಂದಾಗಿ ಅದು ಸ್ಪರ್ಧೆಯ ಅಂತಿಮ ಹಂತಗಳಲ್ಲಿ ಇನ್ನೂ ಅನಿಶ್ಚಿತರಾಗಿದ್ದ ಮತದಾರ ವಲಯದ ಮನಸ್ಸನ್ನು ಗೆಲ್ಲಲಾಗದೇ ಹೋಯಿತು. ಅಲ್ಲದೆ, ಪಕ್ಷ ಆರಂಭದ ಮುನ್ನಡೆಯನ್ನು ಉಳಿಸಿಕೊಳ್ಳುವಲ್ಲಿ ನೆರವಾಗ ಬಹುದಾಗಿದ್ದ–ಬಿಜೆಪಿ ಹಾಗೂ ಜೆಡಿಎಸ್‌ಗಳಿಗಿದ್ದಂತೆ–ಬದ್ಧತೆಯುಳ್ಳ ಯುವಪಡೆಯನ್ನು ಹೊಂದಿಲ್ಲದಿರುವುದೂ ಅದರ ಅಂತಿಮ ಹಿನ್ನಡೆಗೆ ಕಾರಣವಾಗಿದ್ದಲ್ಲಿ ಆಶ್ಚರ್ಯವಿಲ್ಲ. ನವ ಚೈತನ್ಯವೇ ಇಲ್ಲದ ಅದರ ಅದೇ ಹಳೆಯ, ಸವೆದ, ಸುಸ್ತಾದ ವೃದ್ಧ ಮುಖಗಳಿಂದ ಕೂಡಿದ ನಾಯಕತ್ವ ಯಾರನ್ನೂ ಹೊಸದಾಗಿ ಸೆಳೆಯಲಾರದು.

ಕಾಂಗ್ರೆಸ್ ಪಕ್ಷ ಕರ್ನಾಟಕದಲ್ಲಿ ಮುಂದೆ ಬದುಕುಳಿಯಬೇಕಾದರೆ, ಮೊದಲು ಅದು ತನ್ನ ಮುಖ ಚಹರೆಯನ್ನು ಬದಲಿಸಿಕೊಳ್ಳಬೇಕಿದೆ. ಜಾಣ, ಯುವ, ಹೊಸ ಮುಖಗಳನ್ನು ತನ್ನೆಡೆಗೆ ಸೆಳೆದುಕೊಳ್ಳಬೇಕಿದೆ. ಅದಕ್ಕಾಗಿ ಅದು ತನ್ನ ದೆಹಲಿ ನಾಯಕತ್ವದ ಚೇಲಾಗಿರಿಯನ್ನು ಕಡಿಮೆ ಮಾಡಿಕೊಂಡು ತನ್ನ ಸ್ವಾಯತ್ತತೆಯನ್ನು ಪುನರ್‌ಸ್ಥಾಪಿಸಿಕೊಳ್ಳಬೇಕಿದೆ. ಸ್ವಾತಂತ್ರ್ಯ ಮತ್ತು ಸಮಾನತೆಯ ವಾತಾವರಣವಿದ್ದೆಡೆಗೆ ಮಾತ್ರ ಪ್ರತಿಭಾವಂತ ಯುವಜನರು ಆಕರ್ಷಿತರಾಗಬಲ್ಲರು ಎಂಬ ಸತ್ಯವನ್ನು ಅದು ಅರಿಯಬೇಕಾಗಿದೆ. ಹಾಗೇ ಪಕ್ಷಕ್ಕಿಂತ ದೊಡ್ಡವರಂತೆ ವರ್ತಿಸುತ್ತಾ, ವೈಯುಕ್ತಿಕ ಶೈಲಿಯ ರಾಜಕಾರಣ ಮಾಡುವ ಮಹತ್ವಾಕಾಂಕ್ಷಿ ನಾಯಕರನ್ನು ನಿರ್ದಾಕ್ಷಿಣ್ಯವಾಗಿ ಶಿಸ್ತಿಗೆ ಒಳಪಡಿಸುವ ಧೈರ್ಯ ತೋರಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ಈಗ ಜೆಡಿಎಸ್‌ನೊಂದಿಗೆ ಮತ್ತೆ ಮೈತ್ರಿ ರಾಜಕಾರಣ ಮಾಡುವುದು ಅನಿವಾರ್ಯವೇ ಆದರೆ, ಆ ಪಕ್ಷದ ಬೇಷರತ್ ಬೆಂಬಲವನ್ನು ಖಚಿತಪಡಿಸಿಕೊಂಡೇ ಮುಂದುವರೆಯುವ ಸಹನೆ ಮತ್ತು ವಿವೇಕಗಳನ್ನು ಪ್ರದರ್ಶಿಸಬೇಕಿದೆ. ಅದು ಸಾಧ್ಯವಾಗದಿದ್ದಲ್ಲಿ ಮರ್ಯಾದೆಯಿಂದ ವಿರೋಧ ಪಕ್ಷದ ಸ್ಥಾನದಲ್ಲಿ ಕೂರುವುದು ಪಕ್ಷದ ಹಿತ ದೃಷ್ಟಿಯಿಂದ ಒಳ್ಳೆಯದು.

ಇನ್ನುಳಿದಂತೆ ಈ ಚುನಾವಣೆ ಅನೇಕ ಸಿಹಿ ಸುದ್ದಿಗಳಿಗೆ ಕಾರಣವಾಗಿದೆ. ತಾತ್ವಿಕತೆಯ ಸೋಗಿನೊಂದಿಗೆ ಬರೀ ವೈಯುಕ್ತಿಕ ಠೇಂಕಾರದ ಮತ್ತು ಕುಟುಂಬ ಕೇಂದ್ರಿತ ರಾಜಕಾರಣ ಮಾಡುತ್ತಾ ಹಲವು ಬಾರಿ ರಾಜ್ಯ ರಾಜಕಾರಣದ ದಿಕ್ಕು ತಪ್ಪಿಸುವಲ್ಲಿ ಯಶಸ್ವಿಯಾಗಿದ್ದ ಬಂಗಾರಪ್ಪ ಮತ್ತು ದೇವೇಗೌಡರಿಗೆ ಜನತೆ ಅಂತಿಮವಾಗಿ (?) ಅವರ ಸ್ಥಾನಗಳನ್ನು ತೋರಿಸಿದೆ. ಅಷ್ಟೇ ಅಲ್ಲ, ಇವರ ಪಕ್ಷಗಳಿಗೆ ಇನ್ನು ಪ್ರತ್ಯೇಕ ಅಸ್ತಿತ್ವದ ಅಗತ್ಯವಿಲ್ಲ ಎಂದೂ ಸೂಚಿಸಿದೆ. ಹಾಗೇ, ಸಮಯ ಸಾಧಕ ರಾಜಕಾರಣವನ್ನೇ ಒಂದು ರಾಜಕೀಯ ಮೌಲ್ಯವಾಗಿ ಪ್ರತಿಪಾದಿಸತೊಡಗಿದ್ದ ಬಿಎಸ್‌ಪಿ ಎಂಬ ಪಕ್ಷಕ್ಕೆ ಕರ್ನಾಟಕದಲ್ಲಿ ಸ್ಥಾನವಿಲ್ಲವೆಂದು ಈ ಚುನಾವಣೆ ಮತ್ತೊಮ್ಮೆ ಸ್ಪಷ್ಟಪಡಿಸಿದೆ. ವಾಟಾಳ್ ನಾಗರಾಜ್ ಎಂಬ ಹುಸಿ ನಾಯಕನ ಠೇವಣಿ ಕಳೆದು, ಇಂತಹವರ (ಅಂದರೆ ಇವರ ಜೊತೆಗಾರರಾಗಿದ್ದ ಕಮ್ಯುನಿಸ್ಟ್ ಎಂದು ಹೇಳಲಾಗುತ್ತಿದ್ದ ಸೊಗಸುಗಾರ ಶ್ರೀರಾಮ ರೆಡ್ಡಿ ಮತ್ತು ಶಾಸಕತ್ವವೆಂದರೆ ವಿದೂಷಕತನವೆಂದು

ನಂಬಿದಂತಿದ್ದ ರಿಪಬ್ಲಿಕನ್ ಪಕ್ಷದ ರಾಜೇಂದ್ರನ್) ನಾಟಕ ಬಹು ಕಾಲ ನಡೆಯದೆಂದು ಎಚ್ಚರಿಸಿದೆ. 'ಸರ್ವೋದಯ ಕರ್ನಾಟಕ' ಮತ್ತು 'ಸುವರ್ಣಯುಗ'ಗಳೆಂಬ ಪಕ್ಷಗಳಿಗೆ ರಾಜಕಾರಣವೆಂದರೆ ಬರೀ ಜಾಣ ಮಾತುಗಳು ಅಥವಾ ಸದಾಶಯಗಳಷ್ಟೇ ಅಲ್ಲ, ನಿರಂತರ ಕ್ರಿಯಾಶೀಲತೆಯೂ ಅಗತ್ಯ ಎಂಬುದನ್ನು ತೋರಿಸಿ ಕೊಟ್ಟಿದೆ. ಎಲ್ಲಕ್ಕಿಂತ ಮುಖ್ಯವಾಗಿ, 'ಪ್ರಗತಿಪರತೆ' ಎಂದರೆ ಬಿಜೆಪಿ ವಿರೋಧಿ ರಾಜಕಾರಣವಷ್ಟೇ ಎಂದು ನಂಬಿ ಸುಲಭ ರಾಜಕಾರಣ ಮಾಡಬಯಸುವವರಿಗೆ, ಅದು ವಾಪಸ್ ಕೂಡಾ ಹೊಡೆಯಬಲ್ಲದು ಎಂದು ಸಾಬೀತು ಮಾಡಿದೆ.

ಹಾಗೆಂದ ಮಾತ್ರಕ್ಕೆ ಈ ಚುನಾವಣೆಗಳಲ್ಲಿ ಎಲ್ಲವೂ ಒಳ್ಳೆಯದೇ ಆಗಿದೆಯೆಂದು ಹೇಳಲಾಗದು. ನಿಜ, ಸೋಲಲಾರೆಂದೇ ಭಾವಿಸಲಾಗಿದ್ದ ಹಲವು ದುಷ್ಟರು ಮತ್ತು ಭ್ರಷ್ಟರು ಈ ಚುನಾವಣೆಗಳಲ್ಲಿ ಸೋತಿದ್ದಾರೆ. ಅದರ ಜೊತೆಯಲ್ಲೇ ಕೆಲವು ಒಳ್ಳೆಯ ನಾಯಕರೂ ಕೊಚ್ಚಿ ಹೋಗಿದ್ದಾರೆ ಮತ್ತು ಕೆಲವು ಕೆಟ್ಟ ನಾಯಕರೂ ಗೆದ್ದು ಬಂದಿದ್ದಾರೆ ಎಂಬುದನ್ನೂ ನಾವು ಗಮನಿಸಬೇಕು. ಇದು ನಮ್ಮ ಚುನಾವಣಾ ವ್ಯವಸ್ಥೆಯಲ್ಲಿ–ಅದೆಷ್ಟೇ ಕಟ್ಟುನಿಟ್ಟು ಮಾಡಿದರೂ–ಎಲ್ಲವೂ ಸರಿಯಿಲ್ಲ ಎಂಬುದನ್ನು ತೋರಿಸುತ್ತದೆ. ಮುಖ್ಯವಾಗಿ, ಬಿಜೆಪಿ ಪರವಾಗಿ ಗಣಿ ಉದ್ಯಮದ ಹಾಗೂ ಭೂವ್ಯವಹಾರಗಳ ಹಣ ಮತ್ತು ಜಾತಿ ರಾಜಕಾರಣ ಈ ಚುನಾವಣೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದನ್ನು ಎಲ್ಲರೂ ಬಲ್ಲರು. ಇದೇ ಮುಂದೆ ಕರ್ನಾಟಕದಲ್ಲಿ ಬಿಜೆಪಿಯ ಪತನಕ್ಕೂ ಕಾರಣವಾದರೆ ಆಶ್ಚರ್ಯವಿಲ್ಲ!

(೬ ಜೂನ್ ೨೦೦೮)

■

೫. ಬಿಜೆಪಿಯ ಕಾಂಗ್ರೆಸ್ ರಾಜಕಾರಣ!

ಯಡಿಯೂರಪ್ಪನವರ ನೇತೃತ್ವದದಲ್ಲಿ ಸಚಿವ ಸಂಪುಟ ಪ್ರಮಾಣ ವಚನ ಸ್ವೀಕರಿಸುತ್ತಿದ್ದ ಸಮಾರಂಭದ ಸಂಭ್ರಮದಿಂದ ಸ್ವಲ್ಪ ಮತ್ತೇರಿದಂತಿದ್ದ ನನ್ನ ಸ್ನೇಹಿತರೊಬ್ಬರು, ಯಡಿಯೂರಪ್ಪ ನಿಜವಾಗಿ ಒಂದು ಒಳ್ಳೆಯ ಸರ್ಕಾರ ನೀಡಿದರೆ ಈ ಕಾಂಗ್ರೆಸ್ಸಿಗರು ಒಂದಿಪ್ಪತ್ತು ವರ್ಷ ಅಧಿಕಾರದ ಕಡೆ ಮುಖ ಕೂಡ ಹಾಕಿ ಮಲಗಲಾರರು ಎಂದಾಗ, ನನ್ನ ತುಟಿಗಳಲ್ಲಿ ನನಗೆ ಗೊತ್ತಿಲ್ಲದಂತೆಯೇ ಒಂದು ಮುಗುಳ್ನಗೆ ಹಾದು ಹೋಯಿತು! ಯಡಿಯೂರಪ್ಪನವರ ಕಷ್ಟ ಯಡಿಯೂರಪ್ಪನವರಿಗಷ್ಟೇ ಗೊತ್ತು!! ಐದು ಶನಿಗಳನ್ನು ಹೆಗಲೇರಿಸಿಕೊಂಡು ಹೊರಟಿರುವ ಯಡಿಯೂರಪ್ಪ ಐದು ವರ್ಷಗಳ ಪೂರ್ಣಾವಧಿಯನ್ನು ನೆಮ್ಮದಿಯಿಂದ ಮುಗಿಸಿದರೇ ಸಾಕಾಗಿದೆ ಎನ್ನುವಷ್ಟು ಸಂಕಷ್ಟಗಳಿಗೆ ಆ ಪಕ್ಷ ಆರಂಭದಲ್ಲೇ ಎದುರಾಗಿದೆ. ಇದನ್ನು ಆ ನನ್ನ ಸ್ನೇಹಿತರಿಗೆ ಹೇಳಿದಾಗ, ಅವರು ಇದೆಲ್ಲ ಬಿಜೆಪಿ ವಿರೋಧಿ ಮನೋಭಾವನೆಯ ಊಹೆಗಳಷ್ಟೆ ಎಂದು ಬೇಸರ ಮಾಡಿಕೊಂಡು ಎದ್ದು ಹೋದರು.

ಹಾಗೆ ನೋಡಿದರೆ ಈಗ ಯಾರಿಗೇ ಆಗಲಿ, ಕಟ್ಟಾ ಬಿಜೆಪಿ ವಿರೋಧಿಯಾಗಲು ಅಂತಹ ಕಾರಣಗಳೇ ಇಲ್ಲ. ಈಗ ಆ ಪಕ್ಷದ ತುಂಬಾ-ಸದ್ಯದ ಅದರ ಶಾಸಕಾಂಗ ಪಕ್ಷವೂ ಸೇರಿದಂತೆ-ಅರ್ಧಕ್ಕರ್ಧ ಬಿಜೆಪಿಯೇತರ ಪಕ್ಷಗಳಿಂದ(ಮುಖ್ಯವಾಗಿ ಕಾಂಗ್ರೆಸ್ಸಿನಿಂದ) ಬಂದವರೇ ಇದ್ದಾರೆ. ಇವರ್ಯಾರಿಗೂ ನಾವು ಬಿಜೆಪಿಯನ್ನು ವಿರೋಧಿಸಲು ಮುಖ್ಯ ಕಾರಣವನ್ನು ಒದಗಿಸಿದ್ದ ಆರ್.ಎಸ್.ಎಸ್.ನ ತಾತ್ವಿಕ ಹಿನ್ನೆಲೆ ಇಲ್ಲ. ಅವರಲ್ಲಿ ಬಹಳಷ್ಟು ಜನ ಬಿಜೆಪಿ ಸೇರಿರುವುದು, ಇತರ ಪಕ್ಷಗಳಲ್ಲಿ ಸರಿಯಾದ ಜಾಗ ದೊರೆಯದಾಗಲೋ ಅಥವಾ ಆ ಪಕ್ಷಗಳಲ್ಲಿ ತಾವು ಇನ್ನು ಇರಲಾಗದಷ್ಟು ಪರಿಸ್ಥಿತಿ ಬಿಗಡಾಯಿಸಿದಾಗಲೋ! ಅಷ್ಟೇ ಅಲ್ಲ, ಆರೆಸ್ಸೆಸ್ ಹಿನ್ನೆಲೆಯಿಂದ ಬಂದ ನಾಯಕರೂ ಕಳೆದ ಇಪ್ಪತ್ತು ವರ್ಷಗಳಲ್ಲಿ ಆ ಪಕ್ಷ ಕಂಡ ಅಧಿಕಾರದ ನಿರೀಕ್ಷೆ ಮತ್ತು ರುಚಿಗಳಿಂದ ಎಷ್ಟು 'ಮಾಗಿ' ಹೋಗಿದ್ದಾರೆಂದರೆ, ಅವರ ಪಾಲಿಗೆ ಆರೆಸ್ಸೆಸ್ ಈಗ ಮನೆಯಲ್ಲಿ ಮೂಲೆ ಹಿಡಿದು ಸಾಂಕೇತಿಕ ಗೌರವಕ್ಕೇ ಅರ್ಹರಾದ ಹಿರಿಯರಂತಾಗಿದೆ! ಇಲ್ಲದಿದ್ದರೆ, ಲಾಠಿ ಹಿಡಿದೇ ಬಿಜೆಪಿ ಪ್ರವೇಶಿಸಿದ ಯಡಿಯೂರಪ್ಪನವರಂತಹ ಯಡಿಯೂರಪ್ಪನವರೇ–ಅವರೇ ಒಮ್ಮೆ ವಿಷಾದಪೂರ್ಣವಾಗಿ ಒಪ್ಪಿಕೊಂಡಂತೆ–ಅಧಿಕಾರದ ಚಕ್ರವ್ಯೂಹದಲ್ಲಿ ದಾರಿಗಾಣದಂತಾಗಿದ್ದಾಗ ಜೆಡಿಎಸ್ ಸೇರಲು ಮುಂದಾಗುತ್ತಿದ್ದರೇಕೆ?

ಹಾಗಾಗಿ ನಾನು ಯಡಿಯೂರಪ್ಪನವರ ಸರ್ಕಾರದ ಸುಭದ್ರತೆಯ ಬಗ್ಗೆ ಅನುಮಾನ

ವ್ಯಕ್ತಪಡಿಸಲು ಕಾರಣ, ಬಿಜೆಪಿ ವಿರೋಧಿ ಮನೋಭಾವನೆಯಲ್ಲ. ಬದಲಿಗೆ, ಬಿಜೆಪಿ ಕೆಲವರು ಭಾವಿಸಿದಂತೆ ದೇವಗಣದಿಂದಾಗಲೀ, ರಾಕ್ಷಸರಿಂದಾಗಲೀ ಕೂಡಿದ ಪಕ್ಷವೇನಲ್ಲ; ಅದೂ ಎಲ್ಲ ಪಕ್ಷಗಳಂತೆ ಉಪ್ಪು-ಖಾರ ತಿಂದ ಮನುಷ್ಯರನ್ನೊಳಗೊಂಡ ಪಕ್ಷವಾಗಿದೆ ಎಂಬುದೇ ಆಗಿದೆ. ಅದಕ್ಕೂ ಅಧಿಕಾರದ ಆಮಿಷಗಳಿಂದ ಭ್ರಷ್ಟಗೊಳ್ಳುವ ಎಲ್ಲ ಅವಕಾಶಗಳೂ, 'ಹಕ್ಕು'ಗಳೂ ಇವೆ! ಹಾಗಾಗಿಯೇ ಐದು ಜನ ಪಕ್ಷೇತರರಿಗೆ ಸಂಪುಟ ಸಚಿವ ಸ್ಥಾನ ನೀಡಿಯೇ ಸರ್ಕಾರ ರಚಿಸಬೇಕಾದ 'ದುಃಸ್ಥಿತಿ'ಗೆ ಈಡಾಗಿರುವ ಪಕ್ಷ, ತನ್ನ ಸರಳ ಬಹುಮತದೊಂದಿಗೆ ಮುಂದಿನ ಐದು ವರ್ಷಗಳ ಆಡಳಿತಾವಧಿಯಲ್ಲಿ ಉದ್ಭವಿಸಬಹುದಾದ ಎಲ್ಲ ರೀತಿಯ ಸಂಕಷ್ಟಗಳನ್ನು ಎದುರಿಸಲು ಬಹಳ ಅವಸರದ ಮತ್ತು ಸುಲಭ ಪರಿಹಾರ ಮಾರ್ಗವನ್ನು ಕಂಡುಕೊಂಡಂತಿದೆ. ಈ ಐವ್ವರು ಪಕ್ಷೇತರರಲ್ಲಿ ಮುವ್ವರು ಮೂಲತಃ ಕಾಂಗ್ರೆಸ್ಸಿಗರು ಹಾಗೂ ಓರ್ವ ಜೆಡಿಎಸ್‌ನವರು ಮತ್ತು ಇವರೆಲ್ಲ ಆ ಪಕ್ಷಗಳ ಕೆಲವು ಪ್ರಬಲ ನಾಯಕರಿಗೆ ವ್ಯಕ್ತಿಶಃ ನಿಷ್ಠರಾಗಿರುವವರು ಎಂಬ ಮುಖ್ಯ ಸಂಗತಿಯನ್ನೇ ಬಿಜೆಪಿ ನಾಯಕತ್ವ ಸರ್ಕಾರ ರಚಿಸುವ ತರಾತುರಿಯಲ್ಲಿ ನಿರ್ಲಕ್ಷಿಸಿದಂತಿದೆ.

ಇದಕ್ಕಾಗಿ ಮುಂದೆ ಅದು ಎರಡು ನೆಲೆಗಳಲ್ಲಿ ದೊಡ್ಡ ಬೆಲೆಯನ್ನೇ ತೆರಬೇಕಾಗಬಹುದು. ಒಂದು: ಈ ಪಕ್ಷೇತರರು ಅಂತಹ ರಾಜಕೀಯ ಅನುಭವಿಗಳೇನಲ್ಲ. ತಮಗೊಂದು ರಾಜಕೀಯ ವ್ಯಕ್ತಿತ್ವ ನೀಡಿದ್ದ ಪಕ್ಷಗಳ ವಿರುದ್ಧವೇ ಸೇಡಿನ ಮೇಲೆ ತಿರುಗಿ ಬಿದ್ದ ಇವರ ತಾತ್ವಿಕ ಹಾಗೂ ವೈಯುಕ್ತಿಕ ನಿಷ್ಠೆಗಳೆರಡೂ ಯಾವಾಗಲೂ ಅನುಮಾನಾಸ್ಪದವೇ. ಕಷ್ಟ ಕಾಲದಲ್ಲಂತೂ ಇವರನ್ನು ಯಾವ ಕಾರಣದ ಮೇಲೂ ನೆಚ್ಚುವಂತಿಲ್ಲ. ಇನ್ನು ಇವರಲ್ಲಿ ಕೆಲವರಂತೂ ತಮ್ಮ ಅದೃಷ್ಟ ಕುಲಾಯಿಸಿದ ವೇಗಕ್ಕೆ ಸಿಕ್ಕಿ ಬುದ್ಧಿ ಭ್ರಮಣೆಗೆ ಒಳಗಾದವರಂತಿದ್ದು, ಅವರು ತಮ್ಮ ಸಚಿವ ಸ್ಥಾನಕ್ಕೆ ಯಾವ ನ್ಯಾಯ ಅಥವಾ ಘನತೆ ಒದಗಿಸುವರೋ ತಿಳಿಯದಾಗಿದೆ! ಎರಡು: ಈ ಐವರಿಗೆ ಸಚಿವ ಸ್ಥಾನ ಕೊಟ್ಟಿದ್ದರಿಂದಾಗಿ ಪಕ್ಷದೊಳಗಿನ ಕೆಲವು ನಿಷ್ಠಾವಂತರಿಗೆ ಮತ್ತು ಮುಖ್ಯರಿಗೆ ಸಚಿವ ಸ್ಥಾನ ಸಿಗದಂತಾಗಿದ್ದು, ಈ ಸಂಬಂಧ ಈಗಾಗಲೇ ಭಿನ್ನಮತ ಭುಗಿಲೆದ್ದಿದೆ. ಅದೂ 'ಕಾಂಗ್ರೆಸ್' ಶೈಲಿಯಲ್ಲಿ-ಬಹಿರಂಗ ಕೆಸರೆರಚಾಟ ಮತ್ತು ಸಾರ್ವಜನಿಕ ಆಸ್ತಿ ಪಾಸ್ತಿ ನಷ್ಟದ ಪುಂಡಾಟಿಕೆಗಳ ರೂಪದಲ್ಲಿ. ಜಗದೀಶ ಶೆಟ್ಟರ ಭಿನ್ನಮತವಂತೂ–ಅದು ಹಿರಿಯ ರಾಷ್ಟ್ರೀಯ ನಾಯಕರ ಮಧ್ಯಸ್ಥಿಕೆಯಿಂದ ಸದ್ಯಕ್ಕೆ ಶಮನಗೊಂಡರೂ–ಮುಂದಿನ ದಿನಗಳಲ್ಲಿ ಪಕ್ಷದ ರಾಜ್ಯ ಘಟಕವನ್ನು ಉದ್ದನೆ ಸೀಳುವಂತಹ ಆಳದ ಪಿತೂರಿ ರಾಜಕಾರಣವನ್ನು ಒಳಗೊಂಡಂತೆ ತೋರುತ್ತದೆ.

ವಿಧಾನಸಭಾಧ್ಯಕ್ಷ ಸ್ಥಾನದಂತಹ ಅತ್ಯುನ್ನತ ಗೌರವ ಸ್ಥಾನವನ್ನು ಶೆಟ್ಟರ್ ಏಕೆ ಹೀಗೆ ಕಡ್ಡಿ ಮುರಿದಂತೆ ನಿರಾಕರಿಸುತ್ತಿದ್ದಾರೆ? ಬರೀ ಶಾಸಕನಾಗಿ ಕೂತೇನು, ಈ ಸ್ಥಾನ ಬೇಕಿಲ್ಲ ಎನ್ನುತ್ತಿದ್ದಾರೆ? ತಮ್ಮ ರಾಜಕೀಯ ಜೀವನವನ್ನು ಮೊಟಕುಗೊಳಿಸಲೆಂದೇ, ತಮ್ಮ ರಾಜಕೀಯ ಕೈ ಕಾಲುಗಳನ್ನು ಕಟ್ಟಿಹಾಕಲೆಂದೇ ಉದ್ದೇಶಪೂರ್ವಕವಾಗಿ ಈ 'ಸ್ಥಾನಮಾನ'ವನ್ನು ತಮಗೆ ನೀಡಲಾಗುತ್ತಿದೆ ಎಂದು ಅವರು ಭಾವಿಸಿರುವುದೇ ಇದಕ್ಕೆ ಕಾರಣವಾಗಿದೆ. ಅಷ್ಟೇ

ಅಲ್ಲ, ಇದೀಗ ತಾನೇ ಪಕ್ಷಕ್ಕೆ ಸೇರಿರುವ ತಮ್ಮದೇ 'ನೆರೆಹೊರೆ'ಯ ಬಸವರಾಜ ಬೊಮ್ಮಾಯಿಯವರಿಗೆ ಸಚಿವ ಸ್ಥಾನ ನೀಡಿ ಅವರನ್ನು 'ಪ್ರೋತ್ಸಾಹಿಸಿ'ರುವುದೂ ಶೆಟ್ಟರ್ ಅವರ ಅನುಮಾನಗಳಿಗೆ ಪುಷ್ಟಿ ನೀಡಿದೆ. ಇದು, ಮೇಲ್ನೋಟಕ್ಕೆ ಅಬಾಧಿತವಾಗಿದ್ದಂತೆ ಕಾಣುವ ಯಡಿಯೂರಪ್ಪನವರ ನಾಯಕತ್ವ ಒಳಗಿಂದೊಳಗೇ ಎದುರಿಸುತ್ತಿರುವ ಆತಂಕಗಳ ಸೂಚನೆಯೂ ಆಗಿದೆ. ಹಾಗೇ ಇದು ಲಿಂಗಾಯಿತ ಜಾತಿ ನಾಯಕತ್ವವೆಂಬುದು ರಾಜಕೀಯ ಅಧಿಕಾರ ಪಡೆಯುವವರೆಗೆ ಒಂದೇ ಅಲಗಿನ ಕತ್ತಿಯಂತೆ ಕಾಣುತ್ತಿದ್ದುದು; ಅಧಿಕಾರ ಪಡೆದೊಡನೆ ಎರಡಲ್ಲ, ಹಲವು ಅಲಗುಗಳ ಕತ್ತಿಯಾಗಬಲ್ಲುದು ಎಂಬುದರ ಸೂಚನೆಯೂ ಆಗಿದೆ!

ಅಲ್ಲದೆ, ಯಡಿಯೂರಪ್ಪ ತಮ್ಮ ಸಂಪುಟವನ್ನು ದಕ್ಷತೆಗಿಂತ ಹೆಚ್ಚಾಗಿ ವೈಯಕ್ತಿಕ ನಿಷ್ಠೆಯ ಆಧಾರದ ಮೇಲೆ ರಚಿಸಿಕೊಂಡಿದ್ದಾರೆ ಎಂಬ ಆರೋಪವೂ ಕೆಲವೆಡೆಯಿಂದ ಕೇಳಿ ಬರುತ್ತಿದೆ. ಅವರು ಮುಖ್ಯವಾಗಿ ಹಣವಂತ ಶಾಸಕರನ್ನು ಸಚಿವರನ್ನಾಗಿ ಮಾಡಿ ಪಕ್ಷದಲ್ಲಿ ತಮ್ಮ ಬೆಂಬಲವನ್ನು ಕಾಯ್ದುಕೊಂಡಿದ್ದಾರೆ ಎನ್ನಲಾಗಿದೆ. ಬಳ್ಳಾರಿ ರೆಡ್ಡಿ ಗುಂಪಿನ ಮುವ್ವರನ್ನು ಮತ್ತು ನಿರಾಣಿಯಂತಹ ಅನಾಮಿಕರನ್ನು ಸಚಿವರನ್ನಾಗಿ ಮಾಡಿರುವುದು ಇದಕ್ಕೊಂದು ದೊಡ್ಡ ಉದಾಹರಣೆ ಎಂದು ಹೇಳಲಾಗುತ್ತಿದೆ. ಇದು ನಿಜವೇ ಆಗಿದ್ದಲ್ಲಿ ಯಡಿಯೂರಪ್ಪ, ನನ್ನ ಸ್ನೇಹಿತರು ನಿರೀಕ್ಷಿಸಿದಂತೆ ಕಾಂಗ್ರೆಸ್ ಇಪ್ಪತ್ತು ವರ್ಷಗಳ ಕಾಲ ಅಧಿಕಾರದ ಕಡೆ ಮುಖ ಕೂಡ ಹಾಕದಂತಹ 'ನಿಜವಾದ' ಒಳ್ಳೆಯ ಸರ್ಕಾರ ನೀಡುವುದು ಕನಸಿನ ಮಾತೇ ಸರಿ!

ಬಿಜೆಪಿಯಲ್ಲಿ ಭುಗಿಲೆದ್ದಿರುವ ಭಿನ್ನಮತದ ಸ್ವರೂಪವನ್ನೇ ನೋಡಿ. ಜಗದೀಶ್ ಶೆಟ್ಟರ್ ಬೆಂಬಲಕ್ಕೆ ಹುಬ್ಬಳ್ಳಿಯ ಪ್ರಮುಖ ವೀರಶೈವ ಮಠಾಧೀಶರೊಬ್ಬರು ಮುಂದೆ ಬಂದು ನಿಂತಿದ್ದಾರೆ. ವೀರಶೈವ ನಾಯಕತ್ವವಿರುವ ಸ್ಥಳೀಯ ವಕೀಲರ ಸಂಘವೂ ನ್ಯಾಯಾಲಯ ಕಲಾಪ ಬಹಿಷ್ಕರಿಸಿ, ಶೆಟ್ಟರ್ ಪರವಾಗಿ ಮತ ಪ್ರದರ್ಶನ ನಡೆಸಿದೆ. ವೀರಶೈವ ಮಹಿಳೆಯರೂ ಪಕ್ಷದ ಮಹಿಳಾ ಮೋರ್ಚಾದ ಹೆಸರಿನಲ್ಲಿ ಬೀದಿಗೆ ಬಂದಿದ್ದಾರೆ. ಇದು ಇತರ ಜಾತಿಯವರಿಗೆ, ಜಗದೀಶ ಶೆಟ್ಟರನ್ನು ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಬೆಳೆಸಿ ಯಡಿಯೂರಪ್ಪನವರ ನಂತರವೂ ರಾಜಕೀಯ ಅಧಿಕಾರವನ್ನು ತಮ್ಮ ಕೈಯಲ್ಲೇ ಇರಿಸಿಕೊಳ್ಳುವ ಒಂದು ಜಾತಿಯ ಹುನ್ನಾರವಾಗಿ ಕಂಡರೆ ಆಶ್ಚರ್ಯವಿಲ್ಲ. ಇದು ಬಿಜೆಪಿಗೆ ಕೋಮುವಾದಿ ಎಂಬ ಬಿರುದಿನೊಂದಿಗೆ ಜಾತಿವಾದಿ ಎಂಬ ಬಿರುದನ್ನೂ ದಯಪಾಲಿಸುವುದಾದರೆ, ಆ ಪಕ್ಷದ ಸದ್ಯದ ಅರ್ಧ ತಳಹದಿ ನಾಶವಾದಂತೆಯೇ!

ಇನ್ನು, ಪ್ರಬಲವಾಗಿ ವ್ಯಕ್ತವಾಗುತ್ತಿರುವ ಇನ್ನಿಬ್ಬರ ಭಿನ್ನಮತವನ್ನು ನೋಡಿ. ಮೈಸೂರಿನ ಎಚ್.ಎಸ್ ಶಂಕರಲಿಂಗೇಗೌಡರದ್ದು ವಿಚಿತ್ರ ಭಿನ್ನಮತ. ಮಿತಿಯಿಲ್ಲದ ಮದ್ಯಪಾನದ ಖಯಾಲಿಯ ಹೊರತಾಗಿ ಇನ್ನಾವ ದೌರ್ಬಲ್ಯವನ್ನೂ ಹೊಂದಿರದಂತೆ ತೋರುವ ಗೌಡರು, ತಮ್ಮ 'ಪಾರದರ್ಶಕ' ವ್ಯಕ್ತಿತ್ವದ ಬಗ್ಗೆ ತಾವೇ ಹೊಂದಿರುವ ನಿಷ್ಠೆಯ

ಹೊರತಾಗಿ ಇನ್ನಾವುದಕ್ಕೂ ಅಂತಿಮ ನಿಷ್ಠೆ ವ್ಯಕ್ತಪಡಿಸದಿರುವುದೇ ಅವರ ರಾಜಕೀಯ ಭವಿಷ್ಯಕ್ಕೆ ಮುಳುವಾದಂತಿದೆ. ಹಾಗಾಗಿಯೇ ಅವರ ಪರವಾದ ಭಿನ್ನಮತ-ಬಿಜೆಪಿ ಜಾಯಮಾನಕ್ಕೆ ವಿರುದ್ಧವಾಗಿ ಮೌನವ್ರತ, ಮೌನ ಮೆರವಣಿಗೆ, ವಿಷಸೇವನೆಯ ಪ್ರಯತ್ನ ಇತ್ಯಾದಿಗಳ ರೂಪದಲ್ಲಿ-ವ್ಯಕ್ತವಾಗುತ್ತಿರುವುದು ಅವರ ವೈಯುಕ್ತಿಕ ಅಭಿಮಾನಿಗಳಿಂದಲೇ ಹೊರತು ಪಕ್ಷದ ನೆಲೆಯಲ್ಲಲ್ಲ! ಆನೇಕಲ್‌ನ ನಾರಾಯಣಸ್ವಾಮಿಯವರ ಪರವಾಗಿ ಭಿನ್ನಮತ ವ್ಯಕ್ತವಾಗುತ್ತಿರುವುದೂ ಈ ನೆಲೆಯಲ್ಲೇ. ಆದರೆ ಬಸ್ಸುಗಳಿಗೆ ಕಲ್ಲು ಹೊಡೆದು ಸಾರ್ವಜನಿಕ ಜೀವನವನ್ನು ಅಸ್ತವ್ಯಸ್ತಗೊಳಿಸುವ ಪುಂಡಾಟಿಕೆಯ ರೂಪದಲ್ಲಿ. ಇವರು ನಾಲ್ಕು ಬಾರಿ ಸತತವಾಗಿ ಗೆದ್ದಿರುವುದೇ ಇವರು ಮಂತ್ರಿಯಾಗಲು ಇರುವ ಅರ್ಹತೆಯಾಗಿದೆ! ಪರಿಶಿಷ್ಟರ ಈ ಸರಳ ಬೇಡಿಕೆಯನ್ನು ಈಡೇರಿಸುವುದೂ ಯಡಿಯೂರಪ್ಪನವರಿಗೆ ಈಗ ಕಷ್ಟವಾಗಿದೆ. ಏಕೆಂದರೆ ಸಂಪುಟ ಸೇರಿರುವ ಐವ್ವರು ಪಕ್ಷೇತರರಲ್ಲಿ ನಾಲ್ವರು ಪರಿಶಿಷ್ಟ ಜಾತಿ-ವರ್ಗಗಳಿಗೆ ಸೇರಿರುವುದರಿಂದ, ಅವರ ಕೋಟಾ ಪೂರ್ಣವಾಗಿದೆ!

ಈ ಎಲ್ಲದರಿಂದಾಗಿ ಯಡಿಯೂರಪ್ಪ ಸಚಿವ ಸಂಪುಟ ರಚಿಸುವ ಹಂತದಲ್ಲೇ ಕಷ್ಟಗಳಿಗೆ ಸಿಕ್ಕಿ ಹಾಕಿಕೊಂಡಿದ್ದಾರೆ. ಅವರ ಪೂರ್ವಯೋಜಿತ ರಾಜಕಾರಣವೆಲ್ಲ ದಿಕ್ಕೆಟ್ಟಂತಾಗಿದೆ. ಅವರು ತಮ್ಮ ನಾಯಕತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ, ಭದ್ರಪಡಿಸಿಕೊಳ್ಳುವುದಕ್ಕಾಗಿ ಕಾಂಗ್ರೆಸ್ ತಂತ್ರಗಳಿಗೇ ಮೊರೆ ಹೋಗಬೇಕಾದ ಪರಿಸ್ಥಿತಿಗೆ ಈಡಾಗಿದ್ದಾರೆ! ಕಾಂಗ್ರೆಸ್‌ನಲ್ಲಿ ಸದಾ ಕೇಳಿಸುವಂತಹ ನಿಷ್ಠರಿಗೆ, ಹಿರಿಯರಿಗೆ ಸ್ಥಾನವಿಲ್ಲದೆ ಹೋಗಿದೆ ಎಂಬ ಕೂಗು ಅವರ ಪಕ್ಷದಲ್ಲೂ ಈಗ ದಟ್ಟವಾಗುತ್ತಿದೆ. ಡಿ.ಎಚ್. ಶಂಕರಮೂರ್ತಿ ಹಾಗೂ ವಿಮಲಾಗೌಡರಂತಹ ಹಿರಿಯರೂ ಬಹಿರಂಗವಾಗಿ ಪ್ರತಿಭಟಿಸಿದ್ದಾರೆ. ಕೆಲವರು ಮೌನವಾಗಿ ತಮ್ಮ ಕಾರ್ಯ ತಂತ್ರ ಹೆಣೆಯುತ್ತಿದ್ದಾರೆ. ಇದನ್ನರಿತೇ ಯಡಿಯೂರಪ್ಪ ನಾಲ್ಕು ಸಚಿವ ಸ್ಥಾನಗಳನ್ನು ಹಾಗೇ ಖಾಲಿಯಿಟ್ಟು, ಸಚಿವ ಖಾತೆಗಳ ಪ್ರಕಟಣೆಯನ್ನು ಬಹುಮತ ಸಾಬೀತಿನ ನಂತರದ ದಿನಗಳಿಗೆ ಮುಂದೂಡಿದ್ದಾರೆ. ಹೀಗೆ ತಮ್ಮ ಸರ್ಕಾರದ ಸುಭದ್ರತೆಯ ಬಗ್ಗೆ ತಮ್ಮಲ್ಲೇ ಅನುಮಾನ-ಗೊಂದಲ-ಆತಂಕಗಳನ್ನಿಟ್ಟುಕೊಂಡಿರುವ ಪಕ್ಷ, ಬಹುಮತ ಸಾಬೀತಿನ ನಂತರವಷ್ಟೇ ನಿಮ್ಮ ಸರ್ಕಾರದ ಪ್ರತಿನಿಧಿಯಾಗಿ ನನ್ನ ಭಾಷಣ ಎಂದಿರುವ ರಾಜ್ಯಪಾಲರ ಮೇಲೇಕೆ ಅಸಭ್ಯ ರೀತಿಯಲ್ಲಿ ಹರಿಹಾಯಿತ್ತಿದೆಯೋ ತಿಳಿಯದಾಗಿದೆ. ಈ ವಿಷಯದಲ್ಲಿ ಮುಂದುವರೆದು, ತುಟಿ ಮೀರಿ (ಹಲ್ಲು ಮೀರಿ?) ಅನುಚಿತ ಶಬ್ದಗಳನ್ನುದುರಿಸುತ್ತಿರುವ ಪಕ್ಷದ ಅಧ್ಯಕ್ಷ ಸದಾನಂದಗೌಡರಿಗೆ ಆರೆಸ್ಸೆಸ್ ಮುಖಂಡರಾದರೂ ಬುದ್ಧಿ ಹೇಳಬೇಕಿದೆ. ತಮಗೆ ಪ್ರತಿಕೂಲವಾದ ತೀರ್ಮಾನವನ್ನು ತೆಗೆದುಕೊಳ್ಳುವವರನ್ನೆಲ್ಲ ಕಾಂಗ್ರೆಸ್ ಏಜೆಂಟರೆಂದು ಕರೆಯುವ ಇವರ ಚಟ ಸಾರ್ವಜನಿಕ ಜೀವನದ ಅಭಿರುಚಿಯನ್ನೇ ಕೆಡಿಸುವಂತಿದೆ. ಇವರು ಚುನಾವಣೆಗಳ ಪ್ರಕಟಣೆಯ ಮುನ್ನ ಚುನಾವಣಾ ಆಯೋಗವನ್ನೂ ಕಾಂಗ್ರೆಸ್ ಏಜೆಂಟ್ ಎಂದು ಕರೆದಿದ್ದರು!

ಬಿಜೆಪಿ ಹೀಗೆ ಅಧಿಕಾರದ ಹೊಸ್ತಿಲಲ್ಲೇ ಮುಗ್ಗರಿಸುತ್ತಿರುವಂತೆ ತೋರುತ್ತಿರುವಾಗ

ಪ್ರಮುಖ ವಿರೋಧ ಪಕ್ಷವೆನಿಸಿರುವ ಕಾಂಗ್ರೆಸ್ಸಾದರೂ ಏನು ಮಾಡುತ್ತಿದೆ? ಬಿಜೆಪಿಯೂ ತನ್ನ ಸೋದರ ಪಕ್ಷದಂತಾಗುತ್ತಿರುವ ಬೆಳವಣಿಗೆಯ ಮಜಾ ತೆಗೆದುಕೊಳ್ಳುತ್ತಿದೆಯೆ? ಹಾಗೆ ಮಜಾ ತೆಗೆದುಕೊಳ್ಳುವುದಕ್ಕೂ ಒಂದು ಜೀವಂತಿಕೆ ಬೇಕು! ಖರ್ಗೆಯವರ ಮುಖದಲ್ಲಿ ಸಂಪೂರ್ಣ ಕತ್ತಲು ಆವರಿಸಿಬಿಟ್ಟಿದೆ–ಅವರ ಪಕ್ಷದ ವರಿಷ್ಠ ನಾಯಕತ್ವ ಅವರಿಗೆ ಸಾಕಷ್ಟು ವಿರೋಧದ ನಡುವೆಯೂ ಶಾಸಕಾಂಗ ಪಕ್ಷದ, ಅಂದರೆ ವಿರೋಧ ಪಕ್ಷದ ನಾಯಕನ ಸ್ಥಾನ-ಮಾನವನ್ನು ದಯಪಾಲಿಸಿದ ಮೇಲೂ! ಇದಕ್ಕೆ ಕಾರಣ, ಪಕ್ಷದ ಸೋಲಿಗೆ ಕಾರಣವಾದ ಅನೈಕ್ಯತೆ ಹಾಗೂ ಪರಸ್ಪರ ದ್ವೇಷಾಸೂಯೆಗಳು ಸೋಲಿನ ನಂತರವೂ ಮುಂದುವರೆದಿರುವುದು. ಚುನಾವಣೆಗಳ ನಂತರ ಶಾಸಕಾಂಗ ಪಕ್ಷದಲ್ಲಿ ಸಿದ್ಧರಾಮಯ್ಯನವರ ಪ್ರಾಬಲ್ಯ ಹೆಚ್ಚಿದೆ. ಅದನ್ನು ಇರುವುದಕ್ಕಿಂತ ದೊಡ್ಡದಾಗಿ ಪ್ರತಿಬಿಂಬಿಸಲು ಯತ್ನಿಸುತ್ತಿರುವ ಅವರ ಗುಂಪಿನ ಆರ್ಭಟ ಮತ್ತು ಪಕ್ಷಕ್ಕೆ ಹೊಸದಾಗಿ ಬಂದಿರುವವರ ನಾಯಕತ್ವದ ಈ ಗುಂಪಿಗೆ ಪಕ್ಷವನ್ನು ಒಪ್ಪಿಸಲು ಸಿದ್ಧರಿರದ ಹಳೆಯ ನಾಯಕತ್ವದ ಹಠದ ನಡುವೆ; ಪಕ್ಷ ತನ್ನ ನೈತಿಕ ಸ್ಥೈರ್ಯವನ್ನೇ ಕಳೆದುಕೊಳ್ಳುತ್ತಿದೆ.

ಶಾಸಕಾಂಗ ಪಕ್ಷವಾಗಿ ಸಾಕಷ್ಟು ಸಬಲವಾಗಿಯೇ ಇರುವ ಮತ್ತು ರಾಜಕೀಯ ತುರ್ತುಗಳಿಗಾಗಿ ಸದಾ ಸನ್ನದ್ಧವಾಗಿರಬೇಕಾಗಿರುವ ಈ ಸಂದರ್ಭದಲ್ಲಿ, ಸಿದ್ಧರಾಮಯ್ಯ ಒಂದಿಷ್ಟು ಸಹನೆ ಮತ್ತು ಖರ್ಗೆಯವರು ಒಂದಿಷ್ಟು ಪ್ರಬುದ್ಧತೆಯನ್ನು ಪ್ರದರ್ಶಿಸಿ ಪಕ್ಷವನ್ನು ಮುಂದಿನ ಸವಾಲುಗಳಿಗಾಗಿ ಬಲಪಡಿಸುವ ಕಡೆ ಗಮನ ಹರಿಸಬೇಕಿದೆ. ಆದರೆ ಪಕ್ಷದ ವರಿಷ್ಠ ನಾಯಕತ್ವ ಇದಾವುದರ ಪರಿವೆಯೇ ಇಲ್ಲದಂತೆ ಮೊದ್ದು ಮೊದ್ದಾಗಿ ವರ್ತಿಸುತ್ತಿರುವುದೇಕೋ ತಿಳಿಯದಾಗಿದೆ! ಅದು ಪಕ್ಷದ ಸೋಲನ್ನು ಪರಾಮರ್ಶಿಸಲು ರಚಿಸಿರುವ ಸಮಿತಿಯನ್ನೇ ನೋಡಿ. ಅದಕ್ಕೆ ರಾಜ್ಯದಲ್ಲಿ ನಿಜವಾದ ನಾಯಕರಾರು ಎಂಬುದೇ ಇನ್ನೂ ತಿಳಿಯದೇ ಹೋಗಿದೆ. ಹಾಗಾಗಿಯೇ ಅದು ಕಳ್ಳರನ್ನು ಹಿಡಿಯಲು ಕಳ್ಳರನ್ನೇ ನೇಮಿಸಿದೆ!

(೧೩ ಜೂನ್ ೨೦೦೮)

■

೬. ಬೆಲೆ ಏರಿಕೆಯೆಂಬ ವಿಷವ್ಯೂಹ

ಮುಂಗಾರು ಆರಂಭವಾಗುತ್ತಿದ್ದಂತೆ ರಾಜ್ಯಾದ್ಯಂತ ರಸಗೊಬ್ಬರ ಪೂರೈಕೆ ಸಂಬಂಧವಾಗಿ ಹಾಹಾಕಾರ ಆರಂಭವಾಗಿದೆ. ಬಿತ್ತನೆ ಬೀಜ ಪೂರೈಕೆ ಕುರಿತಂತೆಯೂ ರೈತರ ದೂರು-ದುಮ್ಮಾನಗಳು ಪ್ರಕಟಗೊಳ್ಳತೊಡಗಿವೆ. ದಾವಣಗೆರೆ ಮತ್ತು ಧಾರವಾಡಗಳಲ್ಲಂತೂ ಹಾಹಾಕಾರ ಮುಗಿಲು ಮುಟ್ಟಿ, ಸಾರ್ವಜನಿಕ ಜೀವನ ಅಸ್ತವ್ಯಸ್ತಗೊಂಡು ಅಶಾಂತಿ ತಾಂಡವವಾಡಿದೆ. ಇದಕ್ಕೆ ಕೇಂದ್ರ ಸರ್ಕಾರ ರಸಗೊಬ್ಬರ ಕಾರ್ಖಾನೆಗಳ ಬಾಕಿ ತೀರಿಸದೇ ಪೂರೈಕೆ ಕಡಿತಗೊಂಡಿರುವುದೇ ಕಾರಣವೆಂದು ಮುಖ್ಯಮಂತ್ರಿ ಹೇಳುತ್ತಿದ್ದರೆ, ಕೇಂದ್ರ ರಸಗೊಬ್ಬರ ಖಾತೆಯ ಕಾರ್ಯದರ್ಶಿ ಇದನ್ನು ತಳ್ಳಿ ಹಾಕಿ; ರಾಜ್ಯ ಸರ್ಕಾರ ಬಿತ್ತನೆ ಕಾಲಕ್ಕಾಗಿ ಮಾಡಿಕೊಂಡ ಅಸಮರ್ಪಕ ಸಿದ್ಧತೆಯೇ ಕಾರಣವೆಂದು ಹೇಳುತ್ತಿದ್ದಾರೆ. ಕೆಲವೆಡೆ ಕೃಷಿ ಅಧಿಕಾರಿಗಳು ವ್ಯಾಪಾರಿಗಳೊಂದಿಗೆ ಶಾಮೀಲಾಗಿ ರಸಗೊಬ್ಬರದ ಅಕ್ರಮ ದಾಸ್ತಾನಿಗೆ ಕಾರಣರಾಗಿದ್ದಾರೆ ಎಂಬ ವದಂತಿಗಳೂ ಕೇಳಿ ಬರುತ್ತಿವೆ. ಇದಕ್ಕೆ ತಕ್ಕುನಾಗಿ ಅನೇಕ ಕಡೆ ರೈತರೇ ಅಕ್ರಮ ದಾಸ್ತಾನುಗಳನ್ನು ಕಂಡು ಹಿಡಿದು ಜಿಲ್ಲಾಡಳಿತದ ಸಹಾಯದಿಂದ ಅದನ್ನು ಮಾರಾಟಕ್ಕೆ ಬಿಡುಗಡೆ ಮಾಡಿಸುತ್ತಿರುವ ವರದಿಗಳೂ ಬರುತ್ತಿವೆ. ಮುಖ್ಯಮಂತ್ರಿಗಳೇನೋ ಎಲ್ಲ ಜಿಲ್ಲಾಧಿಕಾರಿಗಳಿಗೆ ರಸಗೊಬ್ಬರ ಪೂರೈಕೆ ಸಂಬಂಧ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದ್ದಾರೆ. ಆದರೆ ಪರಿಸ್ಥಿತಿ ಅಷ್ಟೇನೂ ಸುಧಾರಿಸಿದಂತಿಲ್ಲ. ರೈತರಿಗೆ ಅಗತ್ಯವಿರುವಷ್ಟು ಗೊಬ್ಬರ-ಬಿತ್ತನೆ ಬೀಜ ಸಿಗುತ್ತಿಲ್ಲ.

ಈ ಎಲ್ಲ ಹಾಹಾಕಾರ-ಅಶಾಂತಿ-ಗೊಂದಲಗಳಿಗೆ ಮುಖ್ಯ ಕಾರಣ, ರಸಗೊಬ್ಬರದ ಉತ್ಪಾದನೆಯೇ ಕಡಿಮೆಯಾಗುತ್ತಿರುವುದು ಎಂದು ಹೇಳಲಾಗುತ್ತಿದೆ. ಇದು ಕರ್ನಾಟಕದಲ್ಲಿ ಅಥವಾ ಭಾರತದಲ್ಲಿ ಮಾತ್ರವಲ್ಲ, ಆರ್ಥಿಕ ಉದಾರೀಕರಣದ ನಂತರದ ದಿನಗಳಲ್ಲಿ ಎಲ್ಲ ವಿಷಯಗಳಿಗೂ ಸಂಬಂಧಿಸಿದಂತೆ ಹೇಳಲಾಗುವಂತೆ, ಜಾಗತಿಕವಾಗಿ ಕೂಡಾ ರಸಗೊಬ್ಬರದ ಉತ್ಪಾದನೆ ಬಿದ್ದು ಹೋಗಿದೆ; ಬೆಲೆಗಳು ಏರಿವೆ. ಈ ಉತ್ಪಾದನೆ ಕುಸಿತಕ್ಕೂ ಬೆಲೆ ಏರಿಕೆಗೂ ಸಹಜವಾಗಿಯೇ ಸಂಬಂಧವಿದ್ದು, ಈ ಬೆಲೆ ಏರಿಕೆ ಇಂದು ನಾವು ಜಗತ್ತಿನಾದ್ಯಂತ ಕಾಣುತ್ತಿರುವ ಸಾರ್ವತ್ರಿಕ ಬೆಲೆ ಏರಿಕೆಯೊಂದಿಗೂ ಸಂಬಂಧ ಹೊಂದಿದೆ ಎಂದು ತಜ್ಞರು ಹೇಳುತ್ತಿದ್ದಾರೆ. ಇದೀಗ ತಾನೇ ಭಾರತ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸಿ, ಈ ಜಾಗತಿಕ ಬೆಲೆ ಏರಿಕೆ ದೇಶದ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರದಂತೆ

ತಡೆಯಲು ಯತ್ನಿಸಿದೆ. ಆದರೆ ಆ ಮೂಲಕ ಮತ್ತಷ್ಟು ಸಾರ್ವತ್ರಿಕ ಬೆಲೆ ಏರಿಕೆಗೆ ಕಾರಣವಾಗಿದೆ! ಹೀಗಾಗಿ ಇಂದು ಬೆಲೆ ಏರಿಕೆಯೆಂಬುದು ಒಂದು ಜಾಗತಿಕ ವಿಷವ್ಯೂಹವಾಗಿ ಪರಿಣಮಿಸಿದೆ. ಇದರ ತಲೆ-ತುದಿಗಳು ಒಂದಕ್ಕೊಂದು ಹೆಣೆದುಕೊಂಡು; ಪರಿಣಾಮವೇ ಕಾರಣವಾಗಿ, ಮತ್ತೆ ಕಾರಣವೇ ಪರಿಣಾಮವಾಗಿ ಬೆಲೆ ಏರಿಕೆಯ ಚಕ್ರ ಕಳೆದ ಆರು ತಿಂಗಳುಗಳಿಂದ ತನ್ನೊಳಗೆ ತಾನೇ ಸುತ್ತಿಕೊಳ್ಳುತ್ತಾ ಪರಿಣಾಮದಲ್ಲಿ ವಿಸ್ತರಿಸುತ್ತಿದೆ.

ಬೆಲೆ ಏರಿಕೆಯನ್ನು ಸೂಚಿಸುವ ಹಣದುಬ್ಬರದ ಸೂಚ್ಯಂಕ ಭಾರತದಲ್ಲಿ ಕಳೆದ ನಾಲ್ಕೈದು ವರ್ಷಗಳಲ್ಲೇ ಅತಿ ಹೆಚ್ಚಿನದಾಗಿರುವ ಶೇ. ಎಂಟೂವರೆ ದರವನ್ನು ಮುಟ್ಟಿದೆ. ಹಣದುಬ್ಬರ ಸೂಚ್ಯಂಕಕ್ಕೂ ತಮ್ಮ ಆದಾಯಕ್ಕೂ ಸಂಬಂಧವೇ ಇನ್ನೂ ಸ್ಥಾಪಿವಾಗದಂತಹ ಅಪಾರ ಪ್ರಮಾಣದ ಅಸಂಘಟಿತ ದುಡಿಯುವ ವರ್ಗವನ್ನೊಳಗೊಂಡ ಅವ್ಯವಸ್ಥಿತ ಆರ್ಥಿಕತೆಯ ಭಾರತದಲ್ಲಂತೂ ಇದರ ಪರಿಣಾಮ ಭೀಕರವಾಗಿದೆ. ಈ ಭೀಕರತೆ ಅಷ್ಟಾಗಿ ಎದ್ದು ಕಾಣುವಂತಾಗದಿರಲು ಮುಖ್ಯ ಕಾರಣ; ಬೆಲೆ ಏರಿಕೆಯ ಭೀಕರತೆಯನ್ನು ಈ ಹಿಂದೆ ಸಾರ್ವತ್ರಿಕವಾಗಿ ಪರಿಣಾಮಕಾರಿಯಾಗಿ ಬಿಂಬಿಸಿ ಹಾಹಾಕಾರವೆಬ್ಬಿಸುತ್ತಿದ್ದ ಮಧ್ಯಮ ವರ್ಗ–ಇದರಲ್ಲಿ ಬುದ್ಧಿಜೀವಿಗಳೂ, ಮಾಧ್ಯಮ ಪ್ರತಿನಿಧಿಗಳೂ ಸೇರಿದ್ದಾರೆ–ಈಗ ಇಂತಹ ಬೆಲೆ ಏರಿಕೆಯಂತಹ 'ಸಾಮಾನ್ಯ' ಸಮಸ್ಯೆಗಳಿಂದ ಮುಕ್ತಗೊಳ್ಳುವಷ್ಟು ಆರ್ಥಿಕ ಚೇತನ ಪಡೆದುಕೊಂಡು ಸಾಮಾಜಿಕ ಏಣಿಯ ಮೇಲೇರಿ ಹೋಗಿರುವುದೇ ಆಗಿದೆ. ಇದು ಈ ವರ್ಗಗಳ ಪಾಲಿಗೆ ಸಾಧ್ಯವಾಗಿರುವುದು, ಆರ್ಥಿಕ ಉದಾರೀಕರಣದ ಪರಿಣಾಮಗಳಿಂದ.

ಈ ಆರ್ಥಿಕ ಉದಾರೀಕರಣದ ಮುಖ್ಯ ತೊಂದರೆ ಎಂದರೆ, ಇದು ಸಮಾಜದ ಕೆಲವು ವರ್ಗಗಳಿಗೆ ಸಂಬಂಧಿಸಿದಂತೆ ಮಾತ್ರ 'ಉದಾರ'ವಾಗಿರುವುದು! ವಿಶೇಷವಾಗಿ ಇದು 'ಕೈಗಾರಿಕೋದ್ಯಮ'ದ ಸ್ವರೂಪ ಪಡೆದಿರುವ ಕ್ಷೇತ್ರಗಳಿಗೆ ಅಪಾರ ಮತ್ತು ಅನಿರ್ಬಂಧಿತ ಲಾಭಾಂಶಕ್ಕೆ ಅವಕಾಶ ಮಾಡಿಕೊಟ್ಟಿದೆ. ಅಷ್ಟೇ ಅಲ್ಲ, ಅದು 'ಮಧ್ಯವರ್ತಿ' ಕೆಲಸಗಳನ್ನು 'ಸೇವೆ' ಎಂಬ ಹೊಸ ಹೆಸರಿನಿಂದ ಕರೆದು, ಅದನ್ನೂ ಕೈಗಾರಿಕೋದ್ಯಮದ ಅವಿಭಾಜ್ಯ ಅಂಗವನ್ನಾಗಿ ಮಾಡಿ, ಅದಕ್ಕೂ ಈ ಅನಿರ್ಬಂಧಿತ ಲಾಭಾಂಶದಲ್ಲಿ ಪಾಲು ದೊರಕಿಸಿಕೊಟ್ಟಿದೆ. ಆ ಮೂಲಕ ಮಧ್ಯವರ್ತಿಗಳ ಹೊಸದೊಂದು ಮಧ್ಯಮ ವರ್ಗವನ್ನು ಸೃಷ್ಟಿಸಿ, ಸಮಾಜವನ್ನು ನಿರ್ಣಾಯಕವಾಗಿ ಒಡೆದಿದೆ. ಇದರಿಂದಾಗಿ ಕೃಷಿ ಮತ್ತು ಸಂಬಂಧಿತ ದೇಶಿ ಉದ್ಯೋಗಗಳನ್ನವ ಲಂಬಿಸಿದ ಜನವರ್ಗ-ಇದರ ವ್ಯಾಪ್ತಿಗೆ ಅಪಾರ ಪ್ರಮಾಣದಲ್ಲಿರುವ ಅಸಂಘಟಿತ ಕಾರ್ಮಿಕ ವರ್ಗವೂ ಸೇರುತ್ತದೆ-ಆರ್ಥಿಕ 'ಅಸ್ಪೃಶ್ಯತೆ'ಗೆ ಒಳಗಾಗಿ, ಅವರ ಆರ್ಥಿಕತೆ ರಾಷ್ಟ್ರದ (ಅಥವಾ ಜಗತ್ತಿನ) 'ಅಧಿಕೃತ' ಆರ್ಥಿಕತೆಯಿಂದ ಬೇರ್ಪಟ್ಟಂತಾಗಿ, ಈ ವರ್ಗಗಳು ದಿನೇ ದಿನೇ ಆರ್ಥಿಕವಾಗಿ ಪಾತಾಳ ಮುಟ್ಟುತ್ತಿವೆ.

ಈ ಮುನ್ನ ಇದೇ ಆರ್ಥಿಕ ಉದಾರೀಕರಣದ ಅಂಗವಾಗಿ ಸರ್ಕಾರ ಪಡಿತರ ಪದ್ಧತಿಯ ಸುಧಾರಣೆಯ ಹೆಸರಿನಲ್ಲಿ ಒಂದು ದೊಡ್ಡ ಜನವರ್ಗವನ್ನೇ ಅದರ ವ್ಯಾಪ್ತಿಯಿಂದ ಹೊರಕ್ಕೆ ಹಾಕಿತು. ಇದಕ್ಕಾಗಿ ಬಡತನವನ್ನು ಪುನರ್ವ್ಯಾಖ್ಯಾನಿಸಿ, ದಿನಕ್ಕೆ ತಲಾ ಹನ್ನೆರಡು

ರೂಪಾಯಿಗಳ ಆದಾಯದ ಹೊಸ ಬಡತನ ಸೀಮಾರೇಖೆಯೊಂದನ್ನು ಸೃಷ್ಟಿಸಿತು. ಇದರ ಆಧಾರದ ಮೇಲೆ ದೇಶದಲ್ಲಿ ಬಡತನ ಶೇಕಡಾ ೪೦ ರಷ್ಟು ಕಡಿಮೆಯಾಗಿರುವುದಾಗಿ ಹೇಳಿಕೊಂಡಿತು. ಆದರೆ ಜಾಗತಿಕವಾಗಿ ಬಡತನವನ್ನು ಅಳೆಯುವ ತಲಾ ದಿನವಹಿ ೨೪೦೦ ಕ್ಯಾಲರಿ ಪೌಷ್ಠಿಕ ಆಹಾರ ಲಭ್ಯತೆಯ ಅಳತೆಗೋಲಿನ ಪ್ರಕಾರ ಭಾರತದ ಶೇಕಡಾ ೮೭ರಷ್ಟು ಜನ ಬಡವರೇ ಆಗಿದ್ದಾರೆ. ಸರ್ಕಾರ ನೇಮಿಸಿದ ಅರ್ಜುನ ಸೇನಗುಪ್ತ ಸಮಿತಿ ವರದಿಯೇ ದಿನಕ್ಕೆ ೨೦ ರೂಪಾಯಿಗಳಿಗಿಂತ ಕಡಿಮೆ ಆದಾಯದಲ್ಲಿ ಬದುಕುತ್ತಿರುವ ಜನರ ಸಂಖ್ಯೆ ದೇಶದಲ್ಲಿ ಶೇ.೭೭ ಎಂದು ತಿಳಿಸಿದೆ. ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಈಗ ಪಡಿತರ ಪದ್ಧತಿಯಿಂದ ಬಹಿಷ್ಕೃತರಾದವರೇ ಆಗಿದ್ದಾರೆ.

ಹೀಗೆ ಪಡಿತರ ವ್ಯವಸ್ಥೆಯನ್ನು ದುರ್ಬಲಗೊಳಿಸಿದ ಸರ್ಕಾರ ಸಹಜವಾಗಿಯೇ ಇದಕ್ಕಾಗಿ ಒಂದು ನಿಗದಿತ ಬೆಲೆಗೆ ರೈತರಿಂದ ಖರೀದಿಸುತ್ತಿದ್ದ ಆಹಾರಧಾನ್ಯದ ಪ್ರಮಾಣವನ್ನು ಕಡಿತಗೊಳಿಸಿತು. ಇದರ ಜೊತೆಗೇ ಜಾಗತಿಕ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಿದ್ದರ ಪರಿಣಾಮವಾಗಿ ಆಹಾರ ಧಾನ್ಯಗಳ ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಮುಕ್ತ ಅವಕಾಶ ದೊರೆತು, ದೇಶಿ ಮಾರುಕಟ್ಟೆಯಲ್ಲಿ ಬೆಲೆಗಳ ಸ್ಥಿರತೆ ಯಾರ ಹಿಡಿತಕ್ಕೂ ಸಿಕ್ಕದೇ ಹೋಯಿತು. 'ಆಹಾರ ಸ್ವಾವಲಂಬನೆ' ಮತ್ತು 'ಆಹಾರ ಸುರಕ್ಷತೆ'ಗಳೆಂಬ ರಾಷ್ಟ್ರೀಯ ಗುರಿಗಳೇ ಅಪ್ರಸ್ತುತಗೊಂಡವು. ಈ ಮಧ್ಯೆ 'ವಾಯಿದೆ ವ್ಯಾಪಾರ' ಎಂಬ ಬಂಡವಾಳಶಾಹಿ ವ್ಯಾಪಾರ ಪದ್ಧತಿಯ ಮೇಲಿದ್ದ ನಿರ್ಬಂಧಗಳನ್ನೂ ಈ ಹಿಂದಿನ ಎನ್.ಡಿ.ಎ. ಸರ್ಕಾರ ತೆಗೆದು ಹಾಕಿ, ಆಹಾರ ಧಾನ್ಯಗಳ ವ್ಯಾಪಾರ ಸಂಪೂರ್ಣ ಸಟ್ಟಾ ವ್ಯಾಪಾರವಾಗಲು ಅನುವು ಮಾಡಿಕೊಟ್ಟಿತು. ಇದರಿಂದಾಗಿ ಅಂತಾರಾಷ್ಟ್ರೀಯ ಹಣವಂತ ಸಂಸ್ಥೆಗಳು ಆಹಾರ ಧಾನ್ಯಗಳನ್ನು ಸಂಗ್ರಹಿಸಿಟ್ಟುಕೊಂಡು ಜಾಗತಿಕ ಕೊರತೆಯನ್ನುಂಟು ಮಾಡಿ ಇಂದು ಅಪಾರ ಬೆಲೆ ಏರಿಕೆಗೆ ಕಾರಣವಾಗಿವೆ. ಈಗಿನ ಸರ್ಕಾರ ಇಂದಿನ ಈ ಸಂಕಟವನ್ನು ಎದುರಿಸಲು ಈಗ ಆ ಕಾನೂನನ್ನು ಸರಿಪಡಿಸಲು ಯತ್ನಿಸುತ್ತಿದೆ!

ಕೊರತೆ ಮತ್ತು ಬೆಲೆ ಏರಿಕೆ ಜೊತೆ ಜೊತೆಗೆ ಸೃಷ್ಟಿಯಾಗುವುದು, ಮುಕ್ತ ಮಾರುಕಟ್ಟೆ ಅಥವಾ ಮುಕ್ತ ಬಂಡವಾಳಶಾಹಿ ಆರ್ಥಿಕತೆಯ ಒಂದು ಪ್ರಧಾನ ಲಕ್ಷಣ. ಹಾಗೇ ಇಂತಹ ಆರ್ಥಿಕತೆಯ ಶಕ್ತಿ ಕೇಂದ್ರವಾಗಿರುವ ಸಮಾಜ ನಿಯಮಿತವಾಗಿ ಆರ್ಥಿಕ ಹಿಂಜರಿತಕ್ಕೊಳಗಾಗುವುದೂ (ವಿಪರೀತ 'ತಿನ್ನುವ' ವ್ಯವಸ್ಥೆಯ ಅಜೀರ್ಣ ಕಾಲ ಎಂದೂ ಇದನ್ನು ಕರೆಯಬಹುದು!) ಇದರ ಇನ್ನೊಂದು ಲಕ್ಷಣ. ಅಮೆರಿಕಾ ಈಗ ಒಂದು ದೊಡ್ಡ ಆರ್ಥಿಕ ಹಿಂಜರಿತವನ್ನು ಅನುಭವಿಸುತ್ತಿದೆ. ಇದರ ಅಂಗವಾಗಿ ಅದು ಕೂಡಾ ಆಹಾರದ ಕೊರತೆಯನ್ನೂ, ಬೆಲೆ ಏರಿಕೆಯನ್ನೂ ಅನುಭವಿಸುತ್ತಿದ್ದು, ಅದರ ಅಧ್ಯಕ್ಷ ಜಾರ್ಜ್ ಬುಷ್ ಇದಕ್ಕೊಂದು ವಿಚಿತ್ರ ಕಾರಣವೊಂದನ್ನು ಕಂಡುಕೊಂಡಿದ್ದಾರೆ. ಅದೆಂದರೆ, ಆರ್ಥಿಕ ಉದಾರೀಕರಣದ ಲಾಭ ಪಡೆದ ಭಾರತ ಮತ್ತು ಚೀನಾಗಳ ಜನ ತಿನ್ನುವುದನ್ನು ಹೆಚ್ಚು ಮಾಡಿದ್ದಾರೆ! ಇದನ್ನು ಕೆಲವರು ಖಂಡಿಸಿ, ಕೆಲವರು ಗೇಲಿ ಮಾಡಿದರಾದರೂ, ಇದು

ಸತ್ಯವೂ ಹೌದು. ಆದರೆ ಅರ್ಧ ಸತ್ಯ ಮಾತ್ರ! ಚೀನಾ ಮತ್ತು ಭಾರತಗಳಲ್ಲಿ ಆಹಾರ ಧಾನ್ಯಗಳ ಬಳಕೆ ಹೆಚ್ಚಿದೆ, ನಿಜ. ಆದರೆ ಕೆಲವು ವರ್ಗಗಳಲ್ಲಿ ಮಾತ್ರ. ಇದು ಬುಷ್ ಅವರ ಬಂಡವಾಳಶಾಹಿ ಆರ್ಥಿಕ ನೋಟದಿಂದ ತಪ್ಪಿಸಿಕೊಂಡು ಹೋದದ್ದು ಸಹಜವೇ ಆಗಿದೆ.

ಆರ್ಥಿಕ ಉದಾರೀಕರಣ ಆರಂಭವಾದ ಕಳೆದ ಶತಮಾನದ ತೊಂಭತ್ತರ ದಶಕದಿಂದೀಚೆಗೆ ಆಹಾರ ಧಾನ್ಯಗಳ ಜಾಗತಿಕ ಉತ್ಪಾದನೆಯ ವರ್ಷಾವಾರು ಹೆಚ್ಚಳದ ದರ ಕಡಿಮೆಯಾಗುತ್ತಾ ಬಂದಿದೆ. ಈಗದು ಜನಸಂಖ್ಯಾ ಹೆಚ್ಚಳದ ದರಕ್ಕಿಂತ ತೀರಾ ಕಡಿಮೆಯಾಗಿದೆ. ಹಾಗಾಗಿ, ಜಗತ್ತಿನಾದ್ಯಂತ ಆಹಾರ ಕೊರತೆ ಉಂಟಾಗಿರುವುದು ಸಹಜವೇ ಆಗಿದೆ. ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆಯಾಗಲು ಕಾರಣಗಳು ಹಲವಾರು. ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ಸರ್ಕಾರ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಸಹಾಯಧನಗಳನ್ನು ಕಡಿತಗೊಳಿಸುತ್ತಿರುವುದು, ಈ ಕ್ಷೇತ್ರದಲ್ಲಿ ಸಂಶೋಧನೆ ಹಾಗೂ ವಿಸ್ತರಣೆಗಾಗಿ ಸರ್ಕಾರಿ ಹೂಡಿಕೆ ಹೆಚ್ಚೂ ಕಡಿಮೆ ಬತ್ತಿ ಹೋಗಿರುವುದು ಮತ್ತು ರೈತರಿಂದ ಆಹಾರ ಧಾನ್ಯಗಳ ಖರೀದಿಯನ್ನು ಗಣನೀಯವಾಗಿ ಕಡಿತಗೊಳಿಸಿ ಜಾಗತಿಕ ಮಾರುಕಟ್ಟೆಯ ಲಾಭ ಪಡೆಯಲು ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸಿದ್ದು–ಇವುಗಳಿಂದಾಗಿ ಭಾರತದಲ್ಲಿ ಆಹಾರ ಧಾನ್ಯಗಳ ಬೇಸಾಯ ಕ್ರಮೇಣ ಕಡಿಮೆಯಾಗುತ್ತಾ ಹೋಗಿದೆ. ಇದರ ಲಾಭ ಪಡೆದ ಅಂತಾರಾಷ್ಟ್ರೀಯ ಬಂಡವಾಳ ಸಂಸ್ಥೆಗಳು ಸ್ಥಳೀಯ ಮಧ್ಯವರ್ತಿಗಳ ಮೂಲಕ ರೈತರಿಂದ ಕೊಂಡ ಆಹಾರ ಧಾನ್ಯಗಳ ಅನಿರ್ಬಂಧಿತ ಸಟ್ಟಾ ವ್ಯಾಪಾರಕ್ಕೆ ಇಳಿದಿವೆ. ಇದರಿಂದಾಗಿ ಭಾರತ ಸರ್ಕಾರ ಇಂದು ತನ್ನ ಜನಕ್ಕೆ ಗೋಧಿ ಪೂರೈಸಲು ತಾನು ತನ್ನ ರೈತರಿಗೆ ನೀಡುತ್ತಿದ್ದ ಬೆಲೆಗಿಂತ ಬಹುಪಾಲು ಹೆಚ್ಚಿನ ಬೆಲೆ ತೆತ್ತು ಅದನ್ನು ಆಮದು ಮಾಡಿಕೊಳ್ಳುವ ದುಃಸ್ಥಿತಿಗೆ ಈಡಾಗಿದೆ.

ಇನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ, ವಿಶೇಷವಾಗಿ ಅಭಿವೃದ್ಧಿಗೊಂಡ ದೇಶಗಳಲ್ಲಿ (ಜೈವಿಕ)ಇಂಧನ ತಯಾರಿಕೆಗಾಗಿ ಅಪಾರ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯತೊಡಗಿದ್ದಾರೆ. ಅಮೆರಿಕಾದಲ್ಲಿ ಶೇ. ೨೫ರಷ್ಟು ಆಹಾರ ಧಾನ್ಯಗಳು ಎಥೆನಾಲ್ ತಯಾರಿಕೆಗೆ ಬಳಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಸುಲಭ ಬೆಲೆ ಹಾಗೂ ಲಭ್ಯತೆಯ ಇಂಧನದ ಹಿಂದೆ ಬಿದ್ದಿರುವ ಅಭಿವೃದ್ಧಿಗೊಂಡಿರುವ ದೇಶಗಳು, ಹೆಚ್ಚೆಚ್ಚು ಭೂಮಿಯನ್ನು ಜೈವಿಕ ಇಂಧನಕ್ಕೆ ಬೇಕಾದ ಧಾನ್ಯಗಳನ್ನು ಬೆಳೆಯಲು ಕೃಷಿಗೆ ಒಳಪಡಿಸತೊಡಗಿದ್ದಾರೆ. ಜೊತೆಗೆ ಜಗತ್ತಿನಲ್ಲಿ ಮಾಂಸದ ಬೇಡಿಕೆ ಹೆಚ್ಚುತ್ತಿದ್ದು, ಹೆಚ್ಚೆಚ್ಚು ಮಾಂಸದ ಪ್ರಾಣಿಗಳನ್ನು ಸಾಕಲು ಬೇಕಾದ ಆಹಾರ ಬೆಳೆಯಲೂ ಹೆಚ್ಚೆಚ್ಚು ಭೂಮಿಯನ್ನು ಬಳಸತೊಡಗಿದ್ದಾರೆ. ಇದರಿಂದಾಗಿ ಮತ್ತು ಅಭಿವೃದ್ಧಿ ದೇಶಗಳಲ್ಲಿನ ವಾಣಿಜ್ಯ ಬೆಳೆ ಕೃಷಿಯ ಹೆಚ್ಚಳದಿಂದಾಗಿ ರಸಗೊಬ್ಬರದ ಬೇಡಿಕೆ ವಿಪರೀತ ಪ್ರಮಾಣದಲ್ಲಿ ಹೆಚ್ಚಿದೆ. ಇದು ರಸಗೊಬ್ಬರದ ಬೆಲೆ ಏರಿಕೆ ಹಾಗೂ ಕೊರತೆಗೆ ಕಾರಣವಾಗಿದೆ.

ಇದೆಲ್ಲದರ ಹಿಂದಿರುವ ಖಳನಾಯಕನೆಂದರೆ ಪೆಟ್ರೋಲ್! ಸದ್ಯದ ವಿಶ್ವದ ಆರ್ಥಿಕತೆಯ ಇಂಜಿನ್ ನಡೆಯುತ್ತಿರುವುದೇ ಪೆಟ್ರೋಲಿಯಂ ಉತ್ಪನ್ನಗಳಿಂದ ಎಂದು

ಅರಿತಿರುವ ಪೆಟ್ರೋಲಿಯಂ ಉತ್ಪಾದನಾ ದೇಶಗಳ ಸಂಸ್ಥೆ, ಕಳೆದ ಒಂದೂವರೆ ದಶಕದಿಂದ ಪೆಟ್ರೋಲಿಯಂ ಉತ್ಪಾದನೆಯನ್ನು ನಿಯಮಿತಗೊಳಿಸಿ, ಅದರ ಬೆಲೆಗಳು ಸದಾ ಏರು ಗತಿಯಲ್ಲಿರುವಂತೆ ನೋಡಿಕೊಂಡಿದ್ದಾರೆ. ಜೊತೆಗೆ ನೈಜೀರಿಯಾದ ರಾಜಕೀಯ ಅಶಾಂತಿಯಿಂದಾಗಿ ಅಲ್ಲಿನ ತೈಲ ಬಾವಿಗಳು ಸ್ಥಗಿತಗೊಂಡಿವೆ ಹಾಗೂ ಅಮೆರಿಕಾದ ಆಕ್ರಮಣಕ್ಕೆ ಸಿಕ್ಕಿರುವ ಇರಾಕ್‌ನ ತೈಲ ಉತ್ಪಾದನೆಯೂ ಧಕ್ಕೆಗೊಳಗಾಗಿದೆ. ಇದೆಲ್ಲದಕ್ಕಿಂತ ಹೆಚ್ಚಾಗಿ ಜಾಗತಿಕ ಆರ್ಥಿಕತೆ ಯಾವುದೇ ಮಿತಿಯಿಲ್ಲದೆ, ಮನುಷ್ಯ ಜೀವನವನ್ನು ಹೆಚ್ಚೆಚ್ಚು 'ಸುಖಮಯ'ವನ್ನಾಗಿ ಮಾಡುವ ಖಯಾಲಿಗೆ ಸಿಕ್ಕು, ತನ್ನ ಇಂಧನ ಬೇಡಿಕೆಯನ್ನು ನಿರಂತರವಾಗಿ ಹೆಚ್ಚಿಸಿಕೊಳ್ಳುತ್ತಿರುವ ವೇಗಕ್ಕೆ ತಕ್ಕನಾಗಿ ಅದರ ಬೆಲೆ ಏರಿಕೆಯ ವೇಗವೂ ಹೆಚ್ಚುತ್ತಿದೆ!

ಈ ರಹಸ್ಯವನ್ನರಿತ ಬಂಡವಾಳಿಗರು ಪೆಟ್ರೋಲಿಯಂ ಉತ್ಪನ್ನಗಳ ಸಟ್ಟಾ ವ್ಯಾಪಾರದಲ್ಲಿ ತೊಡಗಿ ಅದರ ಬೆಲೆಗಳು ಈಗ ಮುಗಿಲು ಮುಟ್ಟುವಂತೆ ಮಾಡಿದ್ದಾರೆ. ಆರ್ಥಿಕ ಉದಾರೀಕರಣದ ಮೂಲಕ ಇದೇ ಖಯಾಲಿಗೆ ಸಿಕ್ಕಿರುವ ಭಾರತದ ಆರ್ಥಿಕತೆ ಇದರ ಪರಿಣಾಮಗಳಿಂದ ತಪ್ಪಿಸಿಕೊಳ್ಳದಾಗಿದೆ. ಈ ಪರಿಣಾಮಗಳ ವ್ಯಾಪ್ತಿ ಮತ್ತು ಆಳ ಎಷ್ಟು ಭಯಾನಕ ವಿಸ್ತಾರದ್ದೆಂದರೆ, ಈ ದೇಶದ ರಾಜಕೀಯ ಇತಿಹಾಸದಲ್ಲೇ ಪ್ರಥಮ ಬಾರಿಗೆ ನಮ್ಮ ಪ್ರಧಾನ ಮಂತ್ರಿ ಪೆಟ್ರೋಲಿಯಂ ಬೆಲೆ ಏರಿಕೆಯನ್ನು–ಅದೂ ಜಾಗತಿಕ ಏರಿಕೆಯ ಶೇ.೧೦ಕ್ಕೂ ಕಡಿಮೆ–ಸಮರ್ಥಿಸಿಕೊಳ್ಳಲು, ಅದರ ಅನಿವಾರ್ಯತೆಯನ್ನು ವಿವರಿಸಲು ರಾಷ್ಟ್ರವನ್ನುದ್ದೇಶಿಸಿ ಪ್ರಸಾರ ಭಾಷಣ ಮಾಡುವ ಒತ್ತಾಯಕ್ಕೆ ಒಳಗಾಗಬೇಕಾಯಿತು! ಆರ್ಥಿಕ ಉದಾರೀಕರಣದ ಪಿತಾಮಹರೆನಿಸಿರುವ ಡಾ॥ ಮನಮೋಹನ ಸಿಂಗರು ಅದರ ದುಷ್ಪರಿಣಾಮಗಳ ರಾಜಕೀಯ ಬಿಸಿಯನ್ನೂ ಅನುಭವಿಸಬೇಕಾಗಿ ಬಂದಿರುವುದು ಸಹಜ ನ್ಯಾಯವೇ ಆಗಿದೆ!

ಭಾರತ ಸರ್ಕಾರ ಬೆಲೆ ಏರಿಕೆಯನ್ನು ಒಂದು ರೋಗಚಿಹ್ನೆಯೆಂದು ಪರಿಗಣಿಸಿ, ಕೆಲವು ವಸ್ತುಗಳ ಮೇಲಿನ ಆಮದು ಸುಂಕವನ್ನು ಕಡಿಮೆ ಮಾಡುವ ಮೂಲಕ ಅದನ್ನು ನಿವಾರಿಸಿಕೊಳ್ಳಲು ಯತ್ನಿಸುತ್ತಿದೆ. ಆದರೆ ಈ ಸಂಕೀರ್ಣ ಸ್ವರೂಪದ ಬೆಲೆ ಏರಿಕೆ ಯಾವ ರೋಗದ ಚಿಹ್ನೆಯೆಂದು ಅದಕ್ಕಿನ್ನೂ ಮನವರಿಕೆಯಾದಂತಿಲ್ಲ. ಆರ್ಥಿಕ ಉದಾರೀಕರಣ ಸೃಷ್ಟಿಸಿರುವ ಸಂಪತ್ತಿನ ಅಮಲಿನಲ್ಲಿರುವ ಸರ್ಕಾರ, ಈ ಸಂಪತ್ತು ಸೃಷ್ಟಿಸಿರುವ ಸಾಮಾಜಿಕ ಒಡಕು ಹಾಗೂ ಅಪರಾಧ ವೈವಿಧ್ಯಗಳ ಆತ್ಯಂತಿಕ ಪರಿಣಾಮಗಳ ಬಗ್ಗೆ ಯೋಚಿಸಲೂ ಸಾಧ್ಯವಾಗಿಲ್ಲ. ಶೇಕಡಾ ಎಂಟೂವರೆ ಬೆಳವಣಿಗೆ ದರದ ಜೊತೆಯಲ್ಲೇ ಶೇ.೮೭ ಜನಕ್ಕೆ ಕನಿಷ್ಠ ಅಗತ್ಯ ಪೌಷ್ಠಿಕ ಆಹಾರ ದೊರಕುತ್ತಿಲ್ಲ;ಹಾಗೇ ಜಾಗತಿಕ ಮಾನವ ಅಭಿವೃದ್ಧಿ ಸೂಚ್ಯಂಕ ಪಟ್ಟಿಯಲ್ಲಿ ನಮ್ಮ ರಾಷ್ಟ್ರದ ಸ್ಥಾನ ಕೆಳ ಕೆಳಕ್ಕೆ ಇಳಿದು, ಈಗ ೧೨೮ನೇ ಸ್ಥಾನ ತಲುಪಿದೆ ಎಂಬುದರ ಪರಿವೆಯೂ ಅದಕ್ಕೆ ಇದ್ದಂತಿಲ್ಲ.

ಮನಮೋಹನ ಸಿಂಗರಿಂದ ಅನಾವರಣಗೊಂಡ ಹಾಗೂ ಅನಂತರ ಅಪವಾದವಿಲ್ಲದಂತೆ

ರಾಷ್ಟ್ರದ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳೂ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳೊಂದಿಗೆ ಅನುಮೋದಿಸಿ ಮುಂದುವರೆಸಿರುವ ಈ ಹೊಸ ಆರ್ಥಿಕ ನೀತಿ, ದುಡಿಮೆ ಮತ್ತು ವ್ಯಾಪಾರಗಳ ಎಲ್ಲ ನೈತಿಕತೆಯನ್ನೂ ಅಪ್ರಸ್ತುತಗೊಳಿಸಿ, ಸಾರ್ವಜನಿಕ ಜೀವನದಲ್ಲಿ ಹಣವೊಂದನ್ನೇ ಪರಮ ಮೌಲ್ಯವಾಗಿ ಸ್ಥಾಪಿಸಿದೆ. ಹಣ ಮಾಡುವುದೊಂದೇ ಬದುಕಿನ ಗುರಿ ಎಂದು ಸಾರಿ ಹೇಳುತ್ತಿದೆ. ಹಾಗಾಗಿಯೇ ಇಂದು ಎಲ್ಲ ಕ್ಷೇತ್ರಗಳೂ ಒಂದಲ್ಲ ಒಂದು ರೂಪದಲ್ಲಿ ಸಟ್ಟಾ ವ್ಯಾಪಾರ ಕ್ಷೇತ್ರಗಳಾಗಿವೆ. ಮನಮೋಹನ ಸಿಂಗರು ಈ ಸಟ್ಟಾ ವ್ಯಾಪಾರಿಗಳಿಗೆ ಸರಳ ಬದುಕು ನಡೆಸುವಂತೆ ಮತ್ತು ಸಾಮಾಜಿಕ ದಾನ-ಧರ್ಮಗಳ ಕೆಲಸಗಳಲ್ಲಿ ತೊಡಗುವಂತೆ ಬೋಧಿಸುತ್ತಾ ಇಂದಿನ ಆರ್ಥಿಕ ಸಂಕಟಗಳನ್ನು ಪರಿಹರಿಸಲು ಯತ್ನಿಸುತ್ತಿದ್ದಾರೆ! ತಾವೇ ಸೃಷ್ಟಿಸಿದ ರಾಕ್ಷಸರಿಗೆ ಇವರು ಈಗ ಧರ್ಮ ಬೋಧನೆ ಮಾಡತೊಡಗಿದ್ದಾರೆ. ಇದೊಂದು ದೊಡ್ಡ ಹಾಸ್ಯ ನಾಟಕದಂತೆ ಕಾಣುತ್ತಿದೆ. ಆದರದು ಮನಮೋಹನಸಿಂಗರಿಗೆ ಗೊತ್ತಿದ್ದಂತಿಲ್ಲ. ಅದೇ ರಾಷ್ಟ್ರದ ಸದ್ಯದ ದುರಂತ.

(೨೦ ಜೂನ್, ೨೦೦೮)

■

೭. ಎಚ್ಚರ! ಬರುತ್ತಿದೆ ಮಾಧ್ಯಮಗಳ ಸರ್ವಾಧಿಕಾರ!!

ಚುನಾವಣೆಗಳು ಮುಗಿದಿವೆ. ಹೊಸ ಸರ್ಕಾರವೂ ರಚನೆಯಾಗಿದೆ. ಅದು, ಸಂಪುಟ ರಚಿಸಿಕೊಂಡು ಅಧಿಕಾರದ ಕುರ್ಚಿಯ ಮೇಲೆ ಸರಿಯಾಗಿ ಕೂರುವ ಮುನ್ನವೇ ಎರಡು ಬಲಿಗಳನ್ನೂ ತೆಗೆದುಕೊಂಡಿದೆ. ಒಂದು ನೇರವಾಗಿ–ಹಾವೇರಿಯಲ್ಲಿ, ತನ್ನ ಬೆಂಬಲಿಗನೇ ಆದ ಅಮಾಯಕ ರೈತನೊಬ್ಬನನ್ನು. ಇನ್ನೊಂದು, ತನ್ನದೇ ಶಾಸಕನೊಬ್ಬನ ಪತ್ನಿಯನ್ನು. ಸರ್ಕಾರ ರಚನೆಯಾದಾಗಿನಿಂದ ಮುಖ್ಯಮಂತ್ರಿಯೂ ಸೇರಿದಂತೆ ಅವರ ಸಚಿವ ಸಂಪುಟದ ಬಹುಪಾಲು ಸದಸ್ಯರು ಅಧಿಕಾರ ಸ್ವೀಕರಿಸುವ ಸಂದರ್ಭದಲ್ಲಿ ಎಲ್ಲ ಅಧಿಕೃತ ಮರ್ಯಾದೆಗಳನ್ನೂ ಮೀರಿ ನಡೆಸಿದ ಪೂಜೆ-ಪುನಸ್ಕಾರ-ಹೋಮ-ಹವನಗಳ ಸಂಭ್ರಮಗಳನ್ನು ಗಮನಿಸಿದವರಿಗೆ ಈ ಎರಡು ಸಾವುಗಳು ಇವರ ಮೌಢ್ಯಾಚರಣೆಗಳ ಮುಂದುವರಿಕೆಯಾಗಿ ಆದ ಬಲಿಗಳಂತೆ ಕಂಡರೆ ಆಶ್ಚರ್ಯವಿಲ್ಲ.

ಏಕೆಂದರೆ, ಈ ಎರಡೂ ಸಾವುಗಳು ಸದ್ಯಕ್ಕಂತೂ ಇನ್ನೂ ನಿಗೂಢವಾಗಿಯೇ ಇವೆ. ರೈತ ಸಿದ್ಧಲಿಂಗಪ್ಪ ಚೂರಿಯ ಸಾವಿಗೆ ಕಾರಣವಾದ ಪೋಲೀಸ್ ಗೋಲೀಬಾರಿಗೆ ಪ್ರಚೋದನೆಯಾದರೂ ಏನು, ಅದಕ್ಕೆ ಆಜ್ಞೆ ಮಾಡಿದವರಾರು ಎಂಬುದು ಒಂದು ವಾರ ಕಳೆದರೂ ಸ್ಪಷ್ಟವಾಗಿಲ್ಲ. ಹಾಗೇ ಪದ್ಮಪ್ರಿಯ ಅವರ ಕಣ್ಮರೆ ಮತ್ತು ಸಾವಿನ ವಿವರಗಳು ಇನ್ನೂ ಬಹಿರಂಗಗೊಂಡಿಲ್ಲ. ಬದಲಿಗೆ, ಕೆಟ್ಟ ವದಂತಿಗಳು ಹಬ್ಬುವ ದುರದೃಷ್ಟಕರ ಸನ್ನಿವೇಶ ಸೃಷ್ಟಿಯಾಗುತ್ತಿದೆ. ಮೊದಲ ಸಾವಿನ ಬಗೆಗೆ ಆದೇಶಿಸಿದಂತೆ, ಮುಖ್ಯಮಂತ್ರಿಯವರು ಎರಡನೇ ಸಾವಿನ ಬಗೆಗೂ ನ್ಯಾಯಾಂಗ ವಿಚಾರಣೆಗೆ ಆದೇಶಿಸುವ ಒತ್ತಡಕ್ಕೆ ಒಳಗಾದರೂ ಆಶ್ಚರ್ಯವಿಲ್ಲ. ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರ ಕೂತಿರುವುದು ಅಧಿಕಾರದ ಕುರ್ಚಿಯ ಮೇಲೋ, ಉರಿಯತ್ತಿರುವ ಒಲೆಯ ಮೇಲೋ ಗೊತ್ತಾಗದಷ್ಟು ಪರಿಸ್ಥಿತಿ ಆರಂಭದಲ್ಲೇ ಪ್ರತಿಕೂಲವಾಗಿದೆ. ಇದಕ್ಕಾಗಿ ಯಡಿಯೂರಪ್ಪನವರ ಬಗ್ಗೆ ನಮ್ಮ ಸಹಾನುಭೂತಿ ಇದೆ!

ಆದರೆ, ಅಧಿಕಾರ ಸ್ವೀಕರಿಸಿದೊಡನೆ ಸೋತ ಧರ್ಮಸಿಂಗರೂ ಸೇರಿದಂತೆ ವಿರೋಧ ಪಕ್ಷಗಳ ಎಲ್ಲ ಮುಖ್ಯ ನಾಯಕರನ್ನು ಭೇಟಿ ಮಾಡಿ ಸಹಕಾರ ಕೋರುವ ಮೂಲಕ ಯಡಿಯೂರಪ್ಪ ಪ್ರದರ್ಶಿಸಿದ ಅಪರೂಪದ ಸಜ್ಜನಿಕೆ, ಅಧಿಕಾರ ನಿರ್ವಹಣೆಯ ಕಷ್ಟಗಳು ಬಂದೆರಗಲಾರಂಭಿಸಿದೊಡನೆ ಕಾಣೆಯಾಗತೊಡಗಿದೆ. ರಾಜ್ಯಪಾಲರ ಮೇಲೆ, ವಿರೋಧ

ಪಕ್ಷಗಳ ಮೇಲೆ, ಕೇಂದ್ರ ಸರ್ಕಾರದ ಮೇಲೆ ಅವರು ಅನುಚಿತವಾಗಿ ಹರಿಹಾಯತೊಡಗಿದ್ದಾರೆ. ಇದು ಪ್ರಬುದ್ಧ ನಾಯಕತ್ವದ ಲಕ್ಷಣವಲ್ಲ. ಮುಂಗಾರು ಬಿತ್ತನೆಗೆ ಬೇಕಾದ ಸಿದ್ಧತೆ ರಾಜ್ಯಪಾಲರ ಆಡಳಿತಾವಧಿಯ ಕಾಲದಲ್ಲಿ ಸಮರ್ಪಕವಾಗಿ ಆಗಿಲ್ಲ ಎಂದೇ ಇಟ್ಟುಕೊಳ್ಳೋಣ. ಆದರೆ ತಾವು ಅಧಿಕಾರ ವಹಿಸಿಕೊಂಡಾದ ನಂತರ ಹಾಸನ ಮತ್ತು ದಾವಣಗೆರೆಗಳಲ್ಲಿ ರೈತರು ಬೀಜ ಮತ್ತು ಗೊಬ್ಬರಗಳಿಗಾಗಿ ಮಾಡಿದ ಹಾಹಾಕಾರದ ಎರಡು ಮೂರು ದಿನಗಳ ನಂತರವೂ ಏನೂ ಕ್ರಮ ಕ್ರಮ ಕೈಗೊಳ್ಳಲಿಲ್ಲ ಎಂದರೆ ಏನರ್ಥ? ಹಾವೇರಿ ಅನಾಹುತದ ನಂತರ ಎರಡೇ ದಿನಗಳಲ್ಲಿ ಪರಿಸ್ಥಿತಿ ಸುಧಾರಿಸುವಷ್ಟು ತ್ವರೆಯಿಂದ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುವುದಾದರೆ, ಇದೇ ಕ್ರಮಗಳನ್ನು ಮೊದಲೇ ಏಕೆ ಕೈಗೊಳ್ಳಲಾಗಲಿಲ್ಲ?

ಶಾಸಕ ರಘುಪತಿ ಭಟ್ ಅವರ ಪತ್ನಿ ಪದ್ಮಪ್ರಿಯರ ಸಾವನ್ನೇ ನೋಡಿ. ಹೇಳಿ ಕೇಳಿ ಅವರು ಶಾಸಕರ ಪತ್ನಿ. ಅವರು ಮನೆಯಿಂದ ತಾಯಿಯ ಮನೆಗೆ ಪಯಣ ಬೆಳೆಸಲು ಕೊಂಡೊಯ್ದಿದ್ದರೆಂದು ಹೇಳಲಾದ ಕಾರು ಎರಡು ದಿನಗಳ ನಂತರ ನಿರ್ಜನ ಪ್ರದೇಶವೊಂದರಲ್ಲಿ ಆಕಸ್ಮಿಕವಾಗಿ ಪೋಲೀಸರ ಕಣ್ಣಿಗೆ ಬೀಳುವ ತನಕ ಒಂದು ಪೋಲೀಸು ದೂರೂ ಇಲ್ಲ ಎಂದರೆ ಏನು ಹೇಳುವುದು? ನಂತರ ಅವರು ಸಂಬಂಧವಿಲ್ಲದ ಮಾಲೂರಿನಲ್ಲಿ ಪತ್ತೆಯಾಗಿದ್ದು, ಪ್ರಕರಣ ಸುಖಾಂತ್ಯ ಕಾಣಲಿದೆ ಎಂದು ಸ್ವತಃ ರಾಜ್ಯದ ಗೃಹ ಮಂತ್ರಿಗಳೇ ಸೂಚನೆ ನೀಡಿದ ಮರುದಿನವೇ ದೂರದ ದೆಹಲಿಯಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಬಹಿರಂಗಗೊಳ್ಳುತ್ತದೆಂದರೆ ಯಾರನ್ನು ನಂಬುವುದು? ಏನನ್ನು ನಂಬುವುದು? ಇದರ ವಿವರಗಳು ಒಂದು ಕುಟುಂಬದ, ಅದರ ಸದಸ್ಯರ ಖಾಸಗಿ ಜೀವನ ಮತ್ತು ಭಾವನೆಗಳಿಗೆ ಸಂಬಂಧಿಸಿವೆ ಹಾಗೂ ಅವು ಖಂಡಿತ ಸಾರ್ವಜನಿಕವಾಗಿ ಚರ್ಚೆಯಾಗುವ ಅಗತ್ಯವಿಲ್ಲ, ನಿಜ. ಆದರೆ ಇಡೀ ಪ್ರಕರಣವನ್ನು ನಮ್ಮ ಪೋಲೀಸರು ನಿರ್ವಹಿಸಿದ ಅಥವಾ ಅದಕ್ಕಾಗಿ ಅವರಿಗೆ ಅವಕಾಶ ನೀಡಿದ ರೀತಿ ಖಂಡಿತ ರಾಜ್ಯ ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತರುವಂತಹುದಲ್ಲ. ಬದಲಿಗೆ ಸಾರ್ವಜನಿಕ ರಕ್ಷಣೆಯ ಅದರ ಬದ್ಧತೆ, ದಕ್ಷತೆ ಹಾಗೂ ಪ್ರಾಮಾಣಿಕತೆಗಳು ಸಂದೇಹಾಸ್ಪದಗೊಂಡಿವೆ.

ಯಡಿಯೂರಪ್ಪನವರಿಗೆ ಇದು ನಿಜವಾಗಿಯೂ ಕಷ್ಟದ ಕಾಲ. ಆದರೆ ಈ ಕಷ್ಟಗಳನ್ನೆಲ್ಲ ಅವರೇ ತಂದುಕೊಂಡಿರುವಂತಹವು ಮತ್ತು ಬಹುಶಃ ಈಗಲೇ ಕೊನೆಗೊಳ್ಳದಂತಹವು ಕೂಡಾ. ಏಕೆಂದರೆ, ಸರ್ಕಾರ ಮತ್ತು ಸಚಿವ ಸಂಪುಟ ರಚನೆ ಹಾಗೂ ಖಾತೆ ಹಂಚಿಕೆಯ ರೀತಿ ನೀತಿಗಳಲ್ಲಿ ಕಂಡ ಅವರ ವೈಯುಕ್ತಿಕ ಶಕ್ತಿ ವರ್ಧನೆಯ ರಾಜಕಾರಣ, ನಿನ್ನೆಯವರೆಗೂ ಕಾಂಗ್ರೆಸ್ಸಿನಲ್ಲಿದ್ದ ಲಿಂಗಾಯಿತ ನಾಯಕ ಪ್ರಭಾಕರ ಕೋರೆಯವರನ್ನು ಇಂದು ತಮ್ಮ ಪಕ್ಷದ ರಾಜ್ಯಸಭಾ ಅಭ್ಯರ್ಥಿಯನ್ನಾಗಿ ಕರೆ ತಂದಿರುವುದರವರೆಗೂ ವಿಸ್ತರಿಸಿದೆ. ಯಡಿಯೂರಪ್ಪ ತಮ್ಮ ಸ್ಥಾನದ ಅಭದ್ರತೆಯ ಆತಂಕವನ್ನು ಹೀಗೆ ವೈಯುಕ್ತಿಕ ನಿಷ್ಠೆಯ ನೆಲೆಯಲ್ಲೇ ಪರಿಹರಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಿದಷ್ಟೂ ಅವರ ಆತಂಕಗಳು ಹೆಚ್ಚುತ್ತಾ ಹೋಗುತ್ತವೆ. ಅಧಿಕಾರವೆಂಬುದು ಜನಸೇವೆಯ ಮೂಲಕ ವ್ಯಕ್ತಿತ್ವವನ್ನು ಅರಳಿಸುವ

ಉತ್ಸಾಹವಾಗದೆ, ಬೆಂಬಿಡದ ಭೂತವಾಗಿ ಕಾಡತೊಡಗುತ್ತದೆ. ಈಗಾಗಲೇ ಸಿದ್ಧಲಿಂಗಪ್ಪ ಮತ್ತು ಪದ್ಮಪ್ರಿಯರ ಭೂತಗಳು ಅವರ ಬೆನ್ನಿಗೆ ಬಿದ್ದಿವೆ. ಅವುಗಳ ಕಾಟದಿಂದ ತಪ್ಪಿಸಿಕೊಳ್ಳಲು ಸಿದ್ಧಲಿಂಗಪ್ಪನವರ ಪುತ್ಥಳಿಯನ್ನು ಸ್ಥಾಪಿಸುವುದಾಗಿ ಈಗಾಗಲೇ ಹೇಳಿರುವ ಯಡಿಯೂರಪ್ಪ, ಪದ್ಮಪ್ರಿಯ ಅವರ ಪುತ್ಥಳಿಯನ್ನೂ ಸ್ಥಾಪಿಸುವರೇನೋ ಇನ್ನೂ ತಿಳಿಯದು! ಓ! ನಮ್ಮ ಚರಿತ್ರೆಯಲ್ಲಿನ ಎಲ್ಲ ವೀರಗಲ್ಲುಗಳ ಹಿಂದಿನ ಕರುಣ ಕಥೆಯೂ ಇದೇ ಏನೋ...

ಇರಲಿ, ಯಡಿಯೂರಪ್ಪನವರ ಹಿಂದೆ ಬಿದ್ದಿರುವುದು ಸಿದ್ಧಲಿಂಗಪ್ಪ ಮತ್ತು ಪದ್ಮಪ್ರಿಯರ ಭೂತಗಳು ಮಾತ್ರವಲ್ಲ. ಬಹುಪಾಲು ಮಾಧ್ಯಮಗಳೂ ಅವರ ವಿರುದ್ಧ ತಿರುಗಿ ಬಿದ್ದಂತೆ ತೋರುತ್ತಿದೆ. ಒಂದೆರಡು ದಿನಪತ್ರಿಕೆಗಳು ಯಡಿಯೂರಪ್ಪನವರ ಸಚಿವ ಸಂಪುಟ ರಚನೆ ಮತ್ತು ಖಾತೆ ಹಂಚಿಕೆಯ ರೀತಿ ನೀತಿಗಳನ್ನು ತಾವು ಸಾರ್ವಜನಿಕ ಮಾಧ್ಯಮವೆಂಬುದನ್ನೇ ಮರೆತಂತೆ, ಸುದ್ದಿ ಮತ್ತು ಸುದ್ದಿ ವಿಶ್ಲೇಷಣೆಯ ಗೆರೆಗಳನ್ನೇ ಅಳಿಸಿ ಹಾಕಿದಂತೆ, ಆಡಳಿತ ಪಕ್ಷದೊಳಗಿನ ಭಿನ್ನಮತೀಯ ಗುಂಪೊಂದರ ಕರಪತ್ರದ ಮಟ್ಟಕ್ಕಿಳಿದು ದೂಷಿಸಿದವು. ಇದು ಯಡಿಯೂರಪ್ಪನವರ ಜಾತಿ ರಾಜಕಾರಣಕ್ಕೆ ಪ್ರತಿಯಾದ ಜಾತಿ ರಾಜಕಾರಣವೆಂಬುದು ಎದ್ದು ಕಾಣುವಂತಿತ್ತು. ನಮ್ಮ ಮಾಧ್ಯಮಗಳ ಈ ಅವನತಿ, ಸಾರ್ವಜನಿಕ ಚರ್ಚೆಯ ದಿಕ್ಕು ದೆಸೆಗಳನ್ನೇ ನಿರ್ಣಾಯಕವಾಗಿ ಬದಲಿಸುವಷ್ಟು ಮೂಲಭೂತ ವಾದದ್ದು. ಇದು ನಿಜವಾದ ಅಪಾಯದ ಸೂಚನೆ. ಈ ಅಪಾಯ, ಹಾವೇರಿ ಗೋಲೀಬಾರ್ ಮತ್ತು ಪದ್ಮಪ್ರಿಯ ಸಾವಿನ ಪ್ರಕರಣಗಳನ್ನು ಟಿ.ವಿ. ವಾಹಿನಿಗಳು ವರದಿ ಮಾಡಿದ ರೀತಿಯಲ್ಲಿ ಹೊಸ ಆಯಾಮಗಳನ್ನೇ ಪಡೆದುಕೊಂಡಿತು. ಕಸ್ತೂರಿ ವಾರ್ತೆ ಹಾವೇರಿ ಗೋಲಿಬಾರ್ ಪ್ರಕರಣದ ಸುದ್ದಿ ಪ್ರಸಾರದ ಹಿಂದೆ ಶೋಕ ಸಂಗೀತವನ್ನು ಅಳವಡಿಸಿ ಅದನ್ನು ಭಾವನಾತ್ಮಕಗೊಳಿಸುವ ವಿಶೇಷ ಪ್ರಯತ್ನ ಮಾಡಿತಲ್ಲದೆ, ರಸಗೊಬ್ಬರದ ಸಮಸ್ಯೆಗೆ ಯಾರ್ಯಾರು ಶೇಕಡಾವಾರು ಎಷ್ಟೆಷ್ಟು ಕಾರಣರು ಎಂದು ಲೆಕ್ಕ ಹಾಕಿ (ಇದಕ್ಕೆ ಆಧಾರಗಳೇನು ಎಂಬುದನ್ನು ಮಾತ್ರ ಅದು ಹೇಳಲಿಲ್ಲ!) ನಕ್ಷೆ ತೋರಿಸಿ ತೀರ್ಪು ನೀಡುವಂತಹ ಅಗ್ಗದ ರಾಜಕಾರಣಕ್ಕೆ ಕೈಹಾಕಿತು. ಇನ್ನು ಈವರೆಗೆ ತನ್ನ ಘನತೆಯನ್ನು ಕಾಯ್ದುಕೊಂಡು ಬಂದಿದ್ದ ಈ-ಟಿವಿ ವಾರ್ತೆ ಈ ದುರದೃಷ್ಟಕರ ಪ್ರಸಂಗವನ್ನು ಎಂತಹ ಒಂದು ಜಿಗುಪ್ಸೆಕರ ಮೆಲೋಡ್ರಾಮಾವಾಗಿ ಪರಿವರ್ತಿಸಿತೆಂದರೆ, ಅದರ ಪ್ರಸಾರವನ್ನು ಹಾಡು, ಗುಂಡಿನ ಸದ್ದು, ಸಂದರ್ಶನಗಳು ಮತ್ತು ಅರ್ಧಜೀವವಾಗಿ ಬಿದ್ದಿದ್ದ ರೈತರ ಶವಗಳ ದೃಶ್ಯಗಳನ್ನು ಹೃದಯ ವಿದ್ರಾವಕ 'ಹದ'ದಲ್ಲಿ ಮಿಶ್ರಮಾಡಿ ಒಂದು ಭಾವೋದ್ರೇಕ ಹುಟ್ಟಿಸುವ ರೂಪಕದಂತೆ ಪದೇ ಪದೇ ಪ್ರಸ್ತುತಪಡಿಸಿ, ಸುದ್ದಿಯೆಂಬುದರ ಪಾವಿತ್ರ್ಯತೆಯನ್ನೇ ಹಾಳು ಮಾಡಿತು.

ಪದ್ಮಪ್ರಿಯ ಸಾವಿನ ಪ್ರಕರಣವನ್ನಂತೂ ಟಿವಿ-೯, ಸಾವಿನ ಸುದ್ದಿ ಬಹಿರಂಗಗೊಂಡ ಕ್ಷಣದಿಂದ ಭಾರಿ ಶಿಕಾರಿ ಸಿಕ್ಕ ಮೃಗದಂತೆ ಹಗಲೂ ರಾತ್ರಿ ಪ್ರಕರಣದ ವ್ಯಾಖ್ಯಾನ-ವಿಶ್ಲೇಷಣೆಗಳ ಮೂಲಕ ಅದನ್ನೇ ಬಗೆಯುತ್ತಾ ತಿಂದು ಚಪ್ಪರಿಸತೊಡಗಿತು. ಪದ್ಮಪ್ರಿಯರ ಕುಟುಂಬ ಜೀವನದ ವಿವರಗಳಿಗೆ ಮೆಲ್ಲಗೆ ಕೈಹಾಕಿದ ಈ ವಾಹಿನಿ, ಅವರ ಶವ ದೆಹಲಿಯ

ಶವಾಗಾರದಲ್ಲಿ ಕೇಳುವವರಿಲ್ಲದೆ ಅನಾಥವಾಗಿ ಬಿದ್ದಿದೆ ಎಂದು ಸಾರ್ವಜನಿಕರ ಪರವಾಗಿ ಕಂಬನಿ ಮಿಡಿಯುವ ನೆಪದಲ್ಲಿ ಇಡೀ ಪ್ರಕರಣವನ್ನು ಒಂದು ಭಾವನಾತ್ಮಕ 'ಕಥೆ'ಯಾಗಿ ಕಟ್ಟುವ ಎಲ್ಲ ಪ್ರಯತ್ನಗಳನ್ನು ಮಾಡಿತು. ಇದು ಮಾಧ್ಯಮಗಳ ಮಾರುಕಟ್ಟೆ ರಾಜಕೀಯದ ಒಂದು ಅಶ್ಲೀಲ ಪಟ್ಟಲ್ಲದೆ ಮತ್ತೇನಲ್ಲ. ನಿಜ, ಈ ಪ್ರಕರಣ ಅದು ಶಾಸಕರೊಬ್ಬರ ಪತ್ನಿಯ ನಿಗೂಢ ಸಾವಿಗೆ ಸಂಬಂಧಿಸಿದೆ ಎಂಬ ಕಾರಣಕ್ಕಾಗಿ ಸಾರ್ವಜನಿಕರ ಕುತೂಹಲ ಕೆರಳಿಸಿದೆ. ಅವರ ಕಣ್ಮರೆ ಮತ್ತು ಸಾವಿನ ಹಿಂದೆ ಯಾವ ಷಡ್ಯಂತ್ರ್ಯ ಅಥವಾ ಸಂಚಿದೆ ಎಂಬುದರ ಸುಳಿವನ್ನು ಸಾರ್ವಜನಿಕರಿಗೆ ನೀಡುವುದು ತನ್ನ ಕರ್ತವ್ಯವೆಂದು ಸುದ್ದಿ ವಾಹಿನಿ ಭಾವಿಸಬಹುದು. ಆದರೆ ಒಂದು ಕುಟುಂಬದ ಖಾಸಗಿ ಜೀವನದ ವಿವರಗಳನ್ನು–ಅದೂ, ಅವಿನ್ನೂ ಅಸ್ಪಷ್ಟವಾಗಿದ್ದಾಗ–ಸಾರ್ವಜನಿಕ ಚರ್ಚೆಗೆ ಎಳೆಯುವುದು, ಅನುಮಾನಾಸ್ಪಗೊಳಿಸುವುದು ಅನೈತಿಕವೆನಿಸಿಕೊಳ್ಳುತ್ತದೆ. ಯಾರದೇ ಬದುಕಿನ ಖಾಸಗಿತನದೊಳಕ್ಕೆ ಸಂಬಂಧಪಟ್ಟವರ ಅಪ್ಪಣೆ ಇಲ್ಲದೆ ಪ್ರವೇಶಿಸುವುದು ಅಸಭ್ಯವಷ್ಟೇ ಅಲ್ಲ, ಅಪರಾಧ ಕೂಡ. ದೆಹಲಿಯಲ್ಲಿ ಪದ್ಮಪ್ರಿಯ ವಾಸಿಸುತ್ತಿದ್ದ ಮನೆಯ ಬಾಗಿಲನ್ನು ಒಡೆದು ಪೋಲೀಸರು ಒಳ ಪ್ರವೇಶಿಸಿದಾಗ ಅವರ ಶವವಿದ್ದ ಕೋಣೆಯಲ್ಲಿ ಟಿವಿ-೯ ವಾಹಿನಿ ಆನ್ ಆಗಿಯೇ ಇತ್ತೆಂದು ವರದಿಯೊಂದು ತಿಳಿಸುತ್ತದೆ. ಇದು ನಿಜವೇ ಆಗಿದ್ದಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಆರಂಭದಿಂದ ತಾನು ಪ್ರಸಾರ ಮಾಡುತ್ತಾ ಬಂದ ಸುದ್ದಿಯ ಸ್ವರೂಪವನ್ನೊಮ್ಮೆ ಅದು ವಿಮರ್ಶೆಗೆ ಒಳಪಡಿಸಿಕೊಳ್ಳುವುದು ಒಳ್ಳೆಯದು.

ಇಂದು ಮಾಧ್ಯಮಗಳು ರಾಜಕಾರಣಿಗಳಿಗಿಂತ ಹೆಚ್ಚಿನ ರಾಜಕಾರಣ ಮಾಡುತ್ತಿವೆ ಎಂಬುದು ಹೊಸ ಮಾತೇನಲ್ಲ. ರಾಜಕಾರಣ ಮಿತಿ ಮೀರಿದ ಹಣದ ವ್ಯವಹಾರವಾಗಿ ಪರಿವರ್ತಿತವಾದಾಗಿನಿಂದ ಅನೇಕ ರಾಜಕಾರಣಿಗಳ ವೈಯುಕ್ತಿಕ ಮತ್ತು ಕುಟುಂಬ ಜೀವನ ಅಸ್ತವ್ಯಸ್ತವಾಗಿದೆ. ಅವರು ಆಂತರಿಕವಾಗಿ ದುರ್ಬಲರೂ, ಅಸಹಾಯಕರೂ ಆಗತೊಡಗಿದ್ದಾರೆ. ಇದನ್ನರಿತಿರುವ ಮಾಧ್ಯಮ ಅಧಿಪತಿಗಳು ಮತ್ತು ಪ್ರತಿನಿಧಿಗಳು ತಮ್ಮ 'ಬುದ್ಧಿ' ಮತ್ತು 'ಬಲ'ವನ್ನು ಬಳಸಿಕೊಂಡು ರಾಜಕಾರಣಿಗಳನ್ನು ಆಟವಾಡಿಸತೊಡಗಿದ್ದಾರೆ. ಸರ್ಕಾರಗಳೂ ಈ ಹಾವಳಿಯಿಂದ ರಕ್ಷಣೆ ಪಡೆಯಲು ಅವರಿಗೆ ಬೆಲೆ ಬಾಳುವ ನಿವೇಶನ, ಮನೆ ಹಾಗೂ ಇನ್ನಿತರ ರೀತಿಯ ಉಡುಗೊರೆಗಳನ್ನು ಆಗಾಗ್ಗೆ ನೀಡುತ್ತಾ ಅವರ ವೃತ್ತಿವಂತಿಕೆಯನ್ನೇ ನಾಶ ಮಾಡಿವೆ. ಇವರಲ್ಲಿ ಕೆಲವರಂತೂ ರಾಜಕಾರಣಿಗಳ ಆಸ್ಥಾನ ವಿದ್ವಾಂಸರಾಗಿ, ಸಲಹಾಕಾರರಾಗಿ ಅನತಿ ಕಾಲದಲ್ಲೇ ಕೋಟ್ಯಾಧೀಶ್ವರರಾಗಿದ್ದಾರೆ. ಟಿವಿ ವಾಹಿನಿಗಳಂತೂ ತಮ್ಮ ಟಿ.ಆರ್.ಪಿ ಹೆಚ್ಚಿಸಿಕೊಳ್ಳಲು ಸುದ್ದಿಯನ್ನು ಹೆಚ್ಚೆಚ್ಚು ರೋಚಕ ಮತ್ತು ರಂಜಕಗೊಳಿಸುತ್ತಾ, ನಿಧಾನವಾಗಿ ಅದನ್ನು ಸಾಮಾಜಿಕ ಅಭಿವೃದ್ಧಿ ಸಂಪನ್ಮೂಲದ ಸ್ಥಾನದಿಂದ ಒಂದು ಗ್ರಾಹಕ ವಸ್ತುವಿನ ಮಟ್ಟಕ್ಕೆ ಇಳಿಸತೊಡಗಿದೆ. ಬೇಲಿಯೇ ಎದ್ದು ಹೊಲ ಮೇಯತೊಡಗಿರುವ ವಿಪರ್ಯಾಸದ ದೃಶ್ಯವಿದು. ಈ ಬಗ್ಗೆ ಬಹುಬೇಗ ರಾಜಕಾರಣಿಗಳು ಎಚ್ಚೆತ್ತುಕೊಳ್ಳಬೇಕಿದೆ. ಈ ಸಂಬಂಧ ಗೃಹ ಸಚಿವ ವಿ.ಎಸ್.ಆಚಾರ್ಯರು ಪದ್ಮಪ್ರಿಯ ಪ್ರಕರಣದಲ್ಲಿ ನೀಡಿರುವ ಒಂದು ಹೇಳಿಕೆ

ಗಮನಾರ್ಹವಾಗಿದೆ: ಆಕೆಯನ್ನು ಟಿವಿ ಮಾಧ್ಯಮದ ಪ್ರತಿಕೂಲ ಪ್ರಚಾರದ ಪ್ರಭಾವದಿಂದ ಕಾಪಾಡಲೆಂದೇ ಆಕೆ ಮಾಲೂರಿನಲ್ಲಿದ್ದಾಳೆಂದು ಹೇಳಲಾಯಿತು ಎಂದಿದ್ದಾರೆ. ಆದರೆ ಅವರು ಅದರಲ್ಲಿ ವಿಫಲವಾಗಿದ್ದಾರೆ ಎಂಬುದು ಬೇರೆ ವಿಷಯ.

ಮಾಧ್ಯಮಗಳು ಸರ್ವಾಂತರ್ಯಾಮಿ, ಸರ್ವಶಕ್ತವಾಗತೊಡಗಿವೆ. ಅವು ೨೪ ತಾಸುಗಳ ಕಾಲ ಪ್ರತಿ ಪ್ರಪಂಚವೊಂದನ್ನು ಸೃಷ್ಟಿಸುತ್ತಾ, ನಿಜ ಪ್ರಪಂಚದ ಭಾವನೆಯನ್ನೇ ದುರ್ಬಲಗೊಳಿಸತೊಡಗಿವೆ. ಮಾರುಕಟ್ಟೆಯಲ್ಲಿ ಗೆಲ್ಲಲು ಎಲ್ಲವನ್ನೂ ರೋಚಕ-ರಂಜಕಗೊಳಿಸಿ ಮತ್ತು ಅದನ್ನೇ recycle ಮಾಡಿ, ಹೇಳಿದ್ದನ್ನೇ ಹೇಳುತ್ತಾ ಮತ್ತು ತೋರಿಸಿದ್ದನ್ನೇ ತೋರಿಸುತ್ತಾ, ನಮ್ಮ ಸಂವೇದನಾ ಸೂಕ್ಷ್ಮಗಳನ್ನೇ ಮೊಂಡುಗೊಳಿಸುತ್ತಿವೆ. ಆ ಮೂಲಕ ನಾವು ವಾಸ್ತವದಲ್ಲಿ ಯಾವುದಕ್ಕೂ ಸ್ಪಂದಿಸುವ ಶಕ್ತಿಯನ್ನೇ ಕಳೆದುಕೊಳ್ಳುವಂತೆ ಮಾಡುತ್ತಿವೆ. ಶಾಸನ ಸರ್ವಾಧಿಕಾರದ ಆತಂಕವಾಯಿತು. ಅಧಿಕಾರಶಾಹಿ ಸರ್ವಾಧಿಕಾರದ ಆತಂಕವಾಯಿತು. ನಂತರ ನ್ಯಾಯಾಂಗ ಸರ್ವಾಧಿಕಾರದ ಆತಂಕವಾಯಿತು. ಈಗ ಮಾಧ್ಯಮಗಳ ಸರ್ವಾಧಿಕಾರದ ಆತಂಕ ಕಾಣಬರುತ್ತಿದೆ. ಈ ಎಲ್ಲ ಆತಂಕಗಳೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವೇ. ಹಾಗಾಗಿ ಈ ಮೊದಲ ಮೂರು ಆತಂಕವನ್ನು ನಿವಾರಿಸಿಕೊಳ್ಳಲು ಸಾಧ್ಯವಾದಂತೆಯೇ ಈ ಹೊಸ ಸರ್ವಾಧಿಕಾರದ ಆತಂಕವನ್ನು ನಿವಾರಿಸಿಕೊಳ್ಳುವ ಪ್ರಯತ್ನಗಳನ್ನು ಮಾಡುವ ಕಾಲವೀಗ ಬಂದಂತೆ ತೋರುತ್ತದೆ. ಇದರಲ್ಲಿ ಸರ್ಕಾರ ಮತ್ತು ಸಾರ್ವಜನಿಕರ ಜೊತೆ, ಇನ್ನೂ ತನ್ನ ವಿಶ್ವಾಸಾರ್ಹತೆ ಮತ್ತು ಪಾವಿತ್ರ್ಯಗಳನ್ನು ಉಳಿಸಿಕೊಂಡಿರುವ ಮಾಧ್ಯಮ ಸಂಸ್ಥೆಗಳು ಮತ್ತು ಪ್ರತಿನಿಧಿಗಳು ಕೈ ಜೋಡಿಸಬೇಕಿದೆ.

(೨೭ ಜೂನ್, ೨೦೦೮)

■

೮. ಎಲ್ಲರದೂ ಒಂದೇ ದಾರಿ, ಅದು ಅಡ್ಡದಾರಿ...

ರಸಗೊಬ್ಬರದ ಬಗ್ಗೆ ರಾಜ್ಯಾದ್ಯಂತ ಎದ್ದಿರುವ ನಿಲ್ಲದ ಹಾಹಾಕಾರದ ಮಧ್ಯೆ ನನಗೆ ಮತ್ತೆ ಮತ್ತೆ ನೆನಪಾಗುತ್ತಿರುವುದು ಮೈಸೂರಿನ ಗೆಳೆಯ ಸ್ವಾಮಿ ಆನಂದ್. ನಾಲ್ಕು ವರ್ಷಗಳ ಹಿಂದೆ ಶೂನ್ಯ ಬಂಡವಾಳದ ಪಾಳೇಕರ್ ಕೃಷಿ ಪದ್ಧತಿಯನ್ನು ನಿಜವಾಗಿಯೂ ಒಂದು ಆಂದೋಲನ ರೂಪದಲ್ಲಿ ಏಕಾಕಿಯಾಗಿ ಆರಂಭಿಸಿದ್ದ ಇವರು, ಇತ್ತೀಚಿನವರೆಗೆ ರಾಜ್ಯಾದ್ಯಂತ ಅನೇಕ ಶಿಬಿರಗಳನ್ನು ನಡೆಸಿ ಹೆಮ್ಮೆಯಿಂದ ಬೀಗುತ್ತಿದ್ದರು. ಈ ಕೃಷಿ ಪದ್ಧತಿ ಬಗ್ಗೆ ಪುಸ್ತಕವೊಂದನ್ನು ಬರೆದು ಅದು ಹಲವು ಮುದ್ರಣಗಳನ್ನು ಕಂಡು ಬಹು ಜನಪ್ರಿಯವೂ ಆಗಿತ್ತು. ನಾನೂ ಇವರ ಒಂದೆರಡು ಶಿಬಿರಗಳಲ್ಲಿ ಅತಿಥಿಯಾಗಿ ಭಾಗವಹಿಸಿದ್ದ ಸಂದರ್ಭದಲ್ಲಿ, ಅದರಲ್ಲಿ ಪಾಲ್ಗೊಂಡಿದ್ದ ರೈತರ ಉತ್ಸಾಹ ಕಂಡು, ಇಪ್ಪತ್ತು ವರ್ಷಗಳಲ್ಲಿ ರೈತಸಂಘ ಮಾಡಲಾಗದ ಕ್ರಾಂತಿಯನ್ನು ಇದು ಮಾಡಬಹುದು ಎಂದು ನನಗನ್ನಿಸಿತ್ತು. ಆಗ ಸ್ವಾಮಿ ಆನಂದ್ ಹೇಳಿದ್ದರು: 'ನೋಡ್ತಿರಿ ಸರ್, ಇನ್ನು ಐದು ಹತ್ತು ವರ್ಷಗಳಲ್ಲಿ ಈ ರಸಗೊಬ್ಬರ ಮತ್ತು ಕೀಟನಾಶಕ ಕಂಪನಿಗಳೆಲ್ಲ ಹೇಗೆ ಗುಳೆ ಎದ್ದು ಹೋಗ್ತವೆ ಅಂತ. ಆಮೇಲೆ ರೈತರ ಸಾಲ ಅನ್ನುವ ಮಾತೇ ಇರುವುದಿಲ್ಲ!'

ಆದರೆ ಇಂದು ರಾಜ್ಯಾದ್ಯಂತ ರೈತರು ಬೀಜ-ಗೊಬ್ಬರಗಳಿಗಾಗಿ ಹಾಹಾಕಾರ ಎಬ್ಬಿಸಿ ಅವರಲ್ಲಿ ಕೆಲವರು ಹತಾಶರಾಗಿ ಆತ್ಮಹತ್ಯೆ ಮಾಡಿಕೊಳ್ಳತೊಡಗಿರುವಾಗ ಸ್ವಾಮಿ ಆನಂದರ ಸುದ್ದಿಯೇ ಇಲ್ಲ! ತಮ್ಮ ಆಂದೋಲನ ನಡೆಸಲು ಅವರು ಮತ್ತು ಅವರ ಗೆಳೆಯರು ಸೇರಿ ಮಾಡಿಕೊಂಡಿದ್ದ ರಾಜ್ಯ ಮಟ್ಟದ ವೇದಿಕೆ ಎಲ್ಲಿದೆಯೋ, ಏನು ಮಾಡುತ್ತಿದೆಯೋ ಯಾರಿಗೂ ತಿಳಿಯದು. ಆ ವೇದಿಕೆಯೇನಾದರೂ ಇಂದು ಅಸ್ತಿತ್ವದಲ್ಲಿದ್ದರೆ, ಅದು ಇಂದಿನ ರೈತರ ಹಾಹಾಕಾರಕ್ಕೆ ಸ್ಪಂದಿಸಬೇಕಿತ್ತು. ಸಾಂತ್ವನ ಶಿಬಿರಗಳನ್ನು ನಡೆಸಿ, ತನ್ನ ವಿಚಾರಗಳನ್ನು ಹರಡಲು ಇದು ಸಕಾಲವೆಂದು ಅದರಲ್ಲಿ ಉದ್ಯುಕ್ತವಾಗಬೇಕಿತ್ತು. ಅವರು ಅಂದು ಆಯೋಜಿಸುತ್ತಿದ್ದ ಭರ್ಜರಿ ಶಿಬಿರಗಳಲ್ಲಿ ಅವರು ಆಡುತ್ತಿದ್ದ ಮಾತಿನ ಮತ್ತು ವ್ಯಕ್ತಪಡಿಸುತ್ತಿದ್ದ ಭರವಸೆಗಳ ರಭಸ ನೋಡಿ ನನ್ನಲ್ಲಿ ಹುಟ್ಟಿದ ನಿರೀಕ್ಷೆಯಿದು. ಆದರೆ ಅವರೂ, ಅವರ ವೇದಿಕೆಯೂ ಇಂದು ನಮ್ಮ ಕಣ್ಮುಂದಿನ ಚಿತ್ರದಿಂದ ಕಾಣೆಯಾಗಿದ್ದಾರೆ. ಇದಕ್ಕೆ ಪಾಳೇಕರರೊಂದಿಗೆ ಅವರಿಗೆ ಉಂಟಾದ ಭಿನ್ನಾಭಿಪ್ರಾಯವೇ ಕಾರಣವೆಂದು ಹೇಳಲಾಗುತ್ತಿದೆ. ಈ ಮಧ್ಯೆ ಅವರು ತಮ್ಮ ಈ ಆಂದೋಲನವನ್ನು ಅಮಾನತ್ತಿನಲ್ಲಿಟ್ಟು, ಯಾರೋ ಓರ್ವ

ಅನಾಮಿಕ ಸ್ವಾಮಿಯ ಹಿಂದೆ ಬಿದ್ದು, ಪರ್ಯಾಯ ವೈದ್ಯ ಪದ್ಧತಿ ಕ್ಷೇತ್ರಕ್ಕೆ ಕಾಲಿಟ್ಟಿದ್ದಾರೆಂದು ಕೇಳಲ್ಪಟ್ಟಿರುವೆ. ಅಲ್ಲೂ ಎಷ್ಟು ವರ್ಷ 'ಕ್ರಿಯಾಶೀಲ'ರಾಗಿರುವರೋ ತಿಳಿಯದು! ಅಥವಾ ಅದೂ ಈಗ ಸ್ತಬ್ಧಗೊಂಡಿದೆಯೋ? ಏಕೆಂದರೆ ಈಚೆಗೆ ಅವರ ಸುದ್ದಿಯೇ ಇಲ್ಲ...

ಇನ್ನು ಈ ಪಾಳೇಕರ್ ಕೃಷಿ ಪದ್ಧತಿಯನ್ನು ತನ್ನ ಪ್ರಣಾಳಿಕೆಯನ್ನಾಗಿ ಮಾಡಿಕೊಳ್ಳಲು ನಿಶ್ಚಯಿಸಿ ಅದರ ಮೊದಲ ಶಿಬಿರವನ್ನು ಬಹು ವೈಭವದಿಂದ ಆಯೋಜಿಸಿದ್ದ ರಾಜ್ಯ ರೈತಸಂಘಕ್ಕೆ ಬಹುಶಃ ಅದೇ ಕೊನೆಯ ಶಿಬಿರವೂ ಆಯಿತು. ಏಕೆ ಎಂಬುದು ಇಂದಿಗೂ ತಿಳಿಯದು! ನಂತರದಲ್ಲಿ ರೈತ ಸಂಘದ ಮತ್ತು ಅದರ ರಾಜಕೀಯ ಮುಖವೆಂದು ಹೇಳಲಾದ ಸರ್ವೋದಯ ಕರ್ನಾಟಕ ಪಕ್ಷದ ಮುಖಂಡರು ಈ ಕೃಷಿ ಪದ್ಧತಿ ಬಗ್ಗೆ 'ಖಾಸಗಿ'ಯಾಗಿ ಪ್ರೋತ್ಸಾಹಕರ ಮಾತುಗಳನ್ನಾಡುತ್ತಿದ್ದರಾದರೂ, ಆ ದಿಸೆಯಲ್ಲಿ ಯಾವುದೇ ಪ್ರಚಾರಾಂದೋಲನವನ್ನು ಹಮ್ಮಿಕೊಳ್ಳಲಿಲ್ಲ. ಹೋಗಲಿ. ಈಗ ರೈತರು ರಸಗೊಬ್ಬರ ಸಿಗದೆ ಪರದಾಡುತ್ತಿದ್ದಾರೆ, ಹಿಂಸಾಚಾರಕ್ಕೆ ಇಳಿದಿದ್ದಾರೆ, ಸಾರ್ವಜನಿಕ ಆಸ್ತಿಪಾಸ್ತಿಯನ್ನು ಹಾಳು ಮಾಡುತ್ತಿದ್ದಾರೆ, ಆತ್ಮಹತ್ಯೆಗೂ ಶರಣಾಗುತ್ತಿದ್ದಾರೆ ಮತ್ತು ಕೆಲವರು ರಸಗೊಬ್ಬರದ ಕಳ್ಳಸಂತೆಯಲ್ಲೂ ತೊಡಗಿದ್ದಾರೆ. ಇಂತಹ ಸಮಯದಲ್ಲಿ ರೈತ ಸಂಘ ಏನು ಮಾಡುತ್ತಿದೆ? ಸರ್ವೋದಯ ಕರ್ನಾಟಕ ಏನು ಮಾಡುತ್ತಿದೆ? ಗಲಾಟೆಯ ಮಧ್ಯೆ ಅಲ್ಲಲ್ಲಿ ಹಸಿರು ಶಾಲುಗಳೇನೋ ಕಾಣುವುವು. ಆದರೆ ರೈತ ಸಂಘ ಮಾತ್ರ ಕಾಣುತ್ತಿಲ್ಲ–ಅವರ ನಾಯಕರಿಬ್ಬರು ಒಂದೆರಡು ಸರ್ಕಾರ ವಿರೋಧಿ ಹೇಳಿಕೆಗಳನ್ನು ನೀಡಿದ್ದರ ಹೊರತಾಗಿ. ಬಹುಶಃ ಅವರು ಚುನಾವಣೆಗಳಲ್ಲಿ ಸೋತು ಸದ್ಯಕ್ಕೆ ಇನ್ನೇನೂ ಮಾಡಲಾಗದಷ್ಟು ಸುಸ್ತಾಗಿದ್ದಾರೆಂದು ಕಾಣುತ್ತದೆ!

ಮುಖ್ಯವಾಹಿನಿ ರಾಜಕೀಯ ಪಕ್ಷಗಳಿಗೆ ಯಾವುದೇ ಸ್ಪಷ್ಟ ರಾಜಕೀಯ ನೀತಿಯಾಗಲೀ, ಕಾರ್ಯಕ್ರಮವಾಗಲಿ ಇಲ್ಲವೆಂದು ಹೇಳುತ್ತಾ ಪರ್ಯಾಯ ರಾಜಕಾರಣ ಮಾಡಲು ಹೊರಟ ರೈತ ಸಂಘಕ್ಕಾದರೂ ಯಾವ ನೀತಿ ಅಥವಾ ಕಾರ್ಯಕ್ರಮವಿದೆ? ಅದಕ್ಕೇನಾದರೂ ರೈತರಿಗೆ ಸಂಬಂಧಿಸಿದಂತೆಯೇ ಒಂದು ಸ್ಪಷ್ಟ ಕಾರ್ಯಕ್ರಮವಿದ್ದಿದ್ದಲ್ಲಿ, ಅದು ಈಗ ಹೀಗೆ ನಾಪತ್ತೆಯಾಗುತ್ತಿರಲಿಲ್ಲ. ಬದಲಿಗೆ, ರೈತರ ಮಧ್ಯೆ ಕಾಣಿಸಿಕೊಂಡು, ಅವರ ಕಷ್ಟ ಸುಖಗಳನ್ನು ವಿಚಾರಿಸುತ್ತಾ, ಇವೊತ್ತಿನ ಸಂಕಟಗಳನ್ನು ಎದುರಿಸಲು ಅಸಹಾಯಕರಾಗಿ ಹಿಡಿದಿರುವ ಹಿಂಸಾಚಾರ, ಸಾರ್ವಜನಿಕ ಆಸ್ತಿಪಾಸ್ತಿ ನಷ್ಟ, ಆತ್ಮಹತ್ಯೆಗಳಂತಹ ವಿನಾಶಕಾರಿ ದಾರಿಯಿಂದ ಅವರನ್ನು ವಿಮುಖಗೊಳಿಸಿ ರಚನಾತ್ಮಕ ದಾರಿಯೊಂದನ್ನು ಕಂಡುಕೊಳ್ಳುವ ಸಂಘಟನಾತ್ಮಕ ಪ್ರಯತ್ನಗಳಲ್ಲಿ ತೊಡಗುತ್ತಿತ್ತು. ಆದರೆ ಇವರೆಲ್ಲರಿಗೂ(ಇವರ ಜೊತೆ ಸೇರಿರುವ ದಲಿತ ಸಂಘರ್ಷ ಸಮಿತಿಯವರಿಗೂ) ಸಂಘಟನೆಯ ಕಲ್ಪನೆಯಲ್ಲೇ ನಂಬಿಕೆ ಹೋಗಿದೆ. ಹಾಗಾಗಿಯೇ ಇದ್ದ ತಮ್ಮ ಸಂಘಟನೆಗಳನ್ನೂ ನಾಶ ಮಾಡಿಕೊಂಡಿರುವ ಇವರಿಗೆ ಚುನಾವಣೆಗಳ ಹೊತ್ತಿಗಷ್ಟೇ ಸಂಘಟನೆಯ ಅಗತ್ಯ ಕಾಣತೊಡಗುವುದು. ಆಗ ಒಂದಷ್ಟು ಜನವನ್ನು ಸೇರಿಸಿಕೊಂಡು ನಾಯಕತ್ವಕ್ಕಾಗಿ ಹಳೆಯ ಗಾಯಗಳನ್ನೆಲ್ಲ ಕೆದಕಿಕೊಂಡು ಜಗಳಾಡಿ, ಇನ್ನು ಹೆಚ್ಚು ಸಮಯವಿಲ್ಲವೆಂಬ ಒತ್ತಡದಲ್ಲಿ ಹೇಗೋ ಒಂದಾಗುವ ನಾಟಕವನ್ನು ಸಾರ್ವಜನಿಕರ

ಮುಂದೆ ಅಭಿನಯಿಸುವುದು ಮತ್ತು ಆನಂತರ ಕಾಣೆಯಾಗುವುದು ಇವರಿಗೆ ಅಭ್ಯಾಸವಾಗಿ ಹೋಗಿದೆ. ಹಾಗಾಗಿ ಜನ ಕೂಡಾ ಇವರನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ.

ಇವರಿಗೆ ಚುನಾವಣೆಗಳಲ್ಲಿ ಒಂದೆರಡು ಕಡೆ ಗಣನೀಯವಾಗಿ ಮತ ಬೀಳುತ್ತಿರುವುದೂ ಆಯಾ ಅಭ್ಯರ್ಥಿಗಳ ವೈಯುಕ್ತಿಕ ಪ್ರಭಾವದಿಂದಲೇ ಹೊರತು ರೈತ ಸಂಘ ಅಥವಾ ಸರ್ವೋದಯ ಕರ್ನಾಟಕ ಎಂಬ ಪಕ್ಷದ ವರ್ಚಸ್ಸಿನಿಂದಲ್ಲ. ಈಚಿನ ಚುನಾವಣೆಗಳ ಸಂದರ್ಭದಲ್ಲಿ ಈ ಪಕ್ಷದ ವರಿಷ್ಠ ನಾಯಕರೊಬ್ಬರೊಂದಿಗೆ ನಾನು ಮಾತನಾಡಿದ ಸಂದರ್ಭದಲ್ಲಿ ಅವರಾಡಿದ ಮಾತಿನಿಂದಾಗಿ ನನ್ನಲ್ಲಿ ಪರ್ಯಾಯ ರಾಜಕಾರಣದ ಬಗ್ಗೆ ಅಳಿದುಳಿದಿದ್ದ ಆಸೆಯೂ ಕಮರಿ ಹೋಯಿತು: 'ನಾವು ಚುನಾವಣೆ ಸಂದರ್ಭದಲ್ಲಿ, ಏನು ಮಾಡುತ್ತೇವೆ ಎಂಬುದು ಮುಖ್ಯವೇ ಹೊರತು, ಈ ಹಿಂದೆ ಏನು, ಎಷ್ಟು ಕೆಲಸ ಮಾಡಿದ್ದೆವು ಎಂಬುದು ಮುಖ್ಯವಾಗುವುದಿಲ್ಲ!'. ಸರ್ವೋದಯ ಕರ್ನಾಟಕ ಪಕ್ಷವನ್ನು ಅದು ಸ್ಥಾಪನೆಯಾದ ದಿನದಿಂದಲೂ ಸಮರ್ಥವಾಗಿ ಕಟ್ಟಿ ಬೆಳೆಸಿದ್ದರೆ, ಮುಖ್ಯವಾಹಿನಿ ಪಕ್ಷಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಎದುರಿಸಬಹುದಿತ್ತಲ್ಲವೇ ಎಂಬ ನನ್ನ ಪ್ರಶ್ನೆಗೆ ಅವರು ನೀಡಿದ ಉತ್ತರವಿದು! ನಾವು ಮುಖ್ಯವಾಹಿನಿ ಪಕ್ಷಗಳನ್ನು ಜನತೆಯ ಶತ್ರುಗಳು ಎಂದು ಸುಲಭವಾಗಿ ಕರೆದುಬಿಡಬಹುದು. ಆದರೆ ಪರ್ಯಾಯ ರಾಜಕಾರಣ ಮಾಡಹೊರಟ ಪಕ್ಷ ಅಥವಾ ಸಂಘಟನೆಗಳು ಹಿಡಿದಿರುವ ದಾರಿಯಾದರೂ ಯಾವುದು? ಸುಮ್ಮನೆ ಎಷ್ಟು ಕಾಲ ಇವು ತಮ್ಮನ್ನು ನಂಬಿದ ಮುಗ್ಧ ಜನಕ್ಕೆ ಮೋಸ ಮಾಡುತ್ತಾ ಹೋಗುವುದು?

ಈಗ ಎಲ್ಲರದೂ ಒಂದೇ ದಾರಿ. ಅದು ಅಡ್ಡದಾರಿ. ಸುಲಭ ಮಾತು, ಸುಲಭ ಹಣ, ಸುಲಭ ಸುಖ, ಸುಲಭ ಜಯ, ಸುಲಭ ಅಧಿಕಾರ, ಸುಲಭ ಕೀರ್ತಿಯ ದಾರಿ. ಹಾಗಾಗಿಯೇ ಇಂದು ಈ ಜನಪರ, ಜನವಿರೋಧಿ, ಜೀವಪರ, ಜೀವ ವಿರೋಧಿ, ಬಂಡವಾಳಶಾಹಿ, ಊಳಿಗಮಾನ್ಯಶಾಹಿ ಇತ್ಯಾದಿ ಮಾತುಗಳೆಲ್ಲ ಕ್ಲೀಷೆಯಾಗಿವೆ. ಈ ಮಾತುಗಳನ್ನು ಆಡುವವರ ಬಾಯಿಗಳು, ಕೇಳುವವರ ಕಿವಿಗಳೂ ಮಲಿನವಾಗಿ ಹೋಗಿವೆ. ಎಪ್ಪತ್ತು-ಎಂಭತ್ತರ ದಶಕದಲ್ಲಿ 'ಜನಪರತೆ' ಮತ್ತು 'ಜೀವಪರತೆ'ಯ ಘೋಷಣೆಗಳೊಂದಿಗೆ ಆರಂಭವಾದ ಚಳುವಳಿಗಳು ಇಂದು ಏನಾಗಿವೆ ಎಂದು ನೋಡಿದರೆ ನನ್ನ ಈ ಮಾತುಗಳು ಹೆಚ್ಚು ಸ್ಪಷ್ಟವಾದೀತು. ದಲಿತ ಕವಿ ಸಿದ್ಧಲಿಂಗಯ್ಯ ಇಂದು ತಲುಪಿರುವ ಸ್ಥಿತಿಯೇ ಈ ಎಲ್ಲವನ್ನೂ ಸ್ಪಷ್ಟಪಡಿಸೀತು. ಅವರು ಬಿಜೆಪಿ ಸರ್ಕಾರಕ್ಕೂ ತಮ್ಮ ಅಮೂಲ್ಯ 'ದಲಿತ'ಸೇವೆ ಸಲ್ಲಿಸಲು ತಯಾರಾಗಿದ್ದಾರೆಂಬ ಅರ್ಥದಲ್ಲಿ ನಾನು ಈ ಮಾತು ಹೇಳುತ್ತಿಲ್ಲ. ಅವರು ಯಾವುದೇ ಸರ್ಕಾರ ಬರಲಿ, ನಿರ್ಭಿಡೆಯಿಂದ ತಮ್ಮ 'ಸೇವೆ' ಸಲ್ಲಿಸಲು ಕಾದು ನಿಂತಿರುವ ಇಂದಿನ ಅವರ ದುಃ'ಸ್ಥಿತಿ'ಯ ಬಗ್ಗೆ ಈ ಮಾತು. ನಮ್ಮ ಪ್ರಗತಿಪರರ, ಕ್ರಾಂತಿಕಾರರ ಪಯಣ ಎಲ್ಲಿಂದ ಎಲ್ಲಿಗೆ ಬಂದು ಮುಟ್ಟಿದೆ!

ಇದಕ್ಕೆ ನಮ್ಮಲ್ಲಿ ಬಹುಪಾಲು ಜನರಲ್ಲಿ ಒಂದಲ್ಲ ಒಂದು ಪ್ರಮಾಣದಲ್ಲಿ ಇರುವ 'ಸಿದ್ಧಲಿಂಗಯ್ಯತನ'ವೇ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಸಿದ್ಧಲಿಂಗಯ್ಯ ಪೂರ್ತಿ

ಕೊಳೆತು ಹೋಗಿರಬಹುದು. ಆದರೆ ನಾವೂ ಸ್ವಲ್ಪ ಸ್ವಲ್ಪ ಕೊಳೆತು; ಅದಕ್ಕೆಲ್ಲ ಜಾಣ ವಿವರಣೆಗಳನ್ನು ಕಂಡುಕೊಳ್ಳುತ್ತಾ, ಇದನ್ನೆಲ್ಲ ಸಹಿಸಿಕೊಳ್ಳುತ್ತಾ ಬಂದಿದ್ದೇವೆ. ಹಾಗಾಗಿಯೇ ಇತ್ತೀಚೆಗೆ, ಸಮಾಜವಾದಿ ರಾಜಕಾರಣದಲ್ಲಿ ತೀವ್ರ ಆಸಕ್ತಿ ಇರುವ ಹಿರಿಯ ಲೇಖಕರೊಬ್ಬರು ದೂರವಾಣಿಯಲ್ಲಿ ಮಾತನಾಡುತ್ತಾ, "ನಮ್ಮ ಕಣ್ಮುಂದೆಯೇ ನಮ್ಮ ರಾಜ್ಯದಲ್ಲೂ ಬಿಜೆಪಿ ಅಧಿಕಾರಕ್ಕೆ ಬರುವಂತಾಯಿತಲ್ಲ?" ಎಂದು ಅಲವತ್ತುಕೊಂಡಾಗ, ಇದು ನಮ್ಮೆಲ್ಲರ ಪಾಪದ ಫಲ ಎಂದು ಹೇಳಬೇಕೆನಿಸಿತ್ತು. ಆದರೆ ಅವರ ವಯಸ್ಸು ಇದನ್ನು ತಡೆದುಕೊಳ್ಳಲಾರ ದೆಂದು ಅಂಜಿ ಸುಮ್ಮನಾದೆ. ಪರಿಸ್ಥಿತಿ ಹೀಗಿರುವಾಗ ಇಂತಹ ಯಾವ ಹಣೆಪಟ್ಟಿಯನ್ನೂ ಹಚ್ಚಿಕೊಳ್ಳದ ಸಿದ್ಧರಾಮಯ್ಯ ಬಿಜೆಪಿ ಸೇರುವ ಸಂಭವ ಇದೆ ಎಂದರೆ, ಯಾರಾದರೂ ಯಾಕೆ ಆಶ್ಚರ್ಯ ಪಡಬೇಕು? ಅವರು ಮುಖ್ಯಮಂತ್ರಿಯಾಗಲೆಂದೇ ರಾಜಕಾರಣ ಮಾಡುತ್ತಿರುವವರು. ಅವರ ರಾಜಕಾರಣಕ್ಕೆ ಅದೊಂದೇ ಉದ್ದೇಶವೆಂದು ಎಂದೋ ಸ್ಪಷ್ಟವಾಗಿದೆ. ಹಾಗಿರುವಾಗ ಆ ಉದ್ದೇಶವಿಟ್ಟುಕೊಂಡು ಅವರು ಎಲ್ಲಿಗಾದರೂ ಹೋಗಿಯಾರು! ಕಾಂಗ್ರೆಸ್ಸಿನಲ್ಲಿ ಉಳಿದರೂ ಅದಕ್ಕಾಗಿಯೇ ಉಳಿದಾರು! ಮತ್ತು ಅಳಿದಾರೂ ಕೂಡಾ... ಆದರೆ ಅನ್ಯ ಉದ್ದೇಶಗಳಿಗಲ್ಲ!!

ಈಗ ಅನ್ಯ ಉದ್ದೇಶಗಳೆಂಬುವಾದರೂ ರಾಜಕೀಯದಲ್ಲಿ ಎಲ್ಲಿವೆ? ಪ್ರಾಣ ಕಳೆದುಕೊಂಡ ರೈತರ ಮನೆಗಳಿಗೆ ವಿವಿಧ ರಾಜಕೀಯ ಪಕ್ಷಗಳು ಮುಗಿ ಬೀಳುತ್ತಿರುವ ಧಾವಂತವನ್ನು ನೋಡಿ. ಅವರು ಆ ಕುಟುಂಬಗಳಿಗೆ ಪರಿಹಾರ ಧನ ವಿತರಿಸುವಲ್ಲಿ ಸ್ಪರ್ಧೆಗಿಳಿದಿದ್ದಾರೆ. ಜೊತೆಗೆ ಪರಸ್ಪರ ಕೆಸರೆರಚಾಟವನ್ನೂ ನಡೆಸಿದ್ದಾರೆ. ಇದರಿಂದಾಗಿ ಶಿಕಾರಿಪುರದ ಬಳಿ ದೊಡ್ಡ ಹೊಡೆದಾಟವೇ ನಡೆದು ಹೋಗಿದೆ. ಸಾಯುತ್ತಿರುವವರು ರೈತರಲ್ಲ ಎಂದು ಯಡಿಯೂರಪ್ಪ ತಮ್ಮ ಗುಪ್ತಚರ ಇಲಾಖೆಯ ಮಾಹಿತಿ ಆಧರಿಸಿ ಹೇಳುತ್ತಿದ್ದರೆ. ಮಲ್ಲಿಕಾರ್ಜುನ ಖರ್ಗೆಯವರು ಇದರ ಬಗ್ಗೆ ತನಿಖೆಯಾಗಲಿ ಎಂದು ಗುಡುಗುತ್ತಿದ್ದಾರೆ. ಮಣ್ಣಿನ ಮಗ ದೇವೇಗೌಡರಂತೂ ಸಾರ್ವಜನಿಕವಾಗಿ ಕಣ್ಣೀರು ಹರಿಸುತ್ತಾ ಯಡಿಯೂರಪ್ಪನವರ ಸರ್ಕಾರಕ್ಕೆ 'ಅಯೋಗ್ಯರ ಸರ್ಕಾರ' ಎಂದು ಹಿಡಿಶಾಪ ಹಾಕುತ್ತಿದ್ದಾರೆ. ಆದರೆ ಇಂತಹ 'ಅಯೋಗ್ಯ' ಸರ್ಕಾರ ಬರಲು ತಮ್ಮಂತಹವರ ಇನ್ನಷ್ಟು ಅಯೋಗ್ಯವಾದ ರಾಜಕಾರಣವೇ ಕಾರಣವೆಂದು ಗೊತ್ತಾಗದಷ್ಟು ಅವರು ಅಮಾಯಕರೇನಲ್ಲ. ಇದನ್ನು ಮರೆಮಾಚಲೆಂದೇ ಇವರು ಈಗ ಮತ್ತೆ ಕಾಂಗ್ರೆಸ್‌ನೊಡನೆ ಮೈತ್ರಿ ರಾಜಕಾರಣದ ಹೊಸ ಆಟ ಆರಂಭಿಸಿದ್ದಾರೆ.

ಎಲ್ಲಿ ಬೇಕಾದರೂ ಸಲ್ಲುವ ಅನಿಲ್ ಲಾಡ್ ಮತ್ತು ರಾಜಶೇಖರನ್ ಎಂಬ ತಮ್ಮ ಎರಡು 'ಆಯ್ಕೆ'ಗಳನ್ನೇ ರಾಜ್ಯಸಭೆ ಮತ್ತು ವಿಧಾನಪರಿಷತ್ತುಗಳಿಗೆ ಕಾಂಗ್ರೆಸ್‌ನ ಆಯ್ಕೆಯಾಗಿಯೂ ಪರಿವರ್ತಿಸುವ ಜಾಣ ರಾಜಕಾರಣ ಮಾಡಿರುವ ದೇವೇಗೌಡರು, ರಾಜ್ಯ ರಾಜಕಾರಣದ ಮುಂದಿನ ನಡೆಗಳನ್ನು ತಮ್ಮ ಕೈಯಲ್ಲೇ ಭದ್ರಪಡಿಸಿಕೊಂಡಿದ್ದಾರೆ. ಚುನಾವಣಾ ಸೋಲಿನಿಂದ ಇನ್ನೂ ಸುಧಾರಿಸಿಕೊಳ್ಳಲಾಗದ ರಾಜ್ಯ ಕಾಂಗ್ರೆಸ್ ನಾಯಕರು, ಸದ್ಯ ಅಧಿಕಾರ

ಬರುವುದಾದರೆ ಹೇಗಾದರೂ ಬರಲಿ ಎಂದು ಈ ರಾಜಕೀಯ ಚೌಕಾಶಿಯಲ್ಲಿ ತಮ್ಮ ಪಾಲಿನ ವಿಧಾನ ಪರಿಷತ್ತಿನ ಒಂದು ಸ್ಥಾನವನ್ನೂ ದೇವೇಗೌಡರಿಗೆ ಧಾರೆ ಎರೆದಿದ್ದಾರೆ! ಆದರೆ ಕರ್ನಾಟಕ ಹೇಗೂ ಹೋಯಿತು, ಮುಂದೆ ಬರಲಿರುವ ಅನ್ಯ ರಾಜ್ಯಗಳ ಚುನಾವಣೆಗಳನ್ನಾದರೂ ಗೆಲ್ಲಲು ಹಣ ಹೊಂದಿಸಿಕೊಳ್ಳುವ ತರಾತುರಿಯಲ್ಲಿರುವ ಕಾಂಗ್ರೆಸ್‌ನ ವರಿಷ್ಠ ನಾಯಕತ್ವ ರಾಜ್ಯದ ಕಾಂಗ್ರೆಸ್ ಭವಿಷ್ಯವನ್ನು ದೇವೇಗೌಡರಿಗೆ ಒಪ್ಪಿಸಿ, ತನ್ನ ಪಾಲಿನ ಕಪ್ಪ ವಸೂಲಿ ಮಾಡಿಕೊಂಡು ಹೋಗಿದೆ! ಇಲ್ಲಿ ಸಿದ್ಧರಾಮಯ್ಯನವರ ಅಸಹಾಯಕತೆ ಮಲ್ಲಿಕಾರ್ಜುನ ಖರ್ಗೆಯವರ ಅಸಹಾಯಕತೆಯನ್ನು ಹೆಚ್ಚಿಸಿದೆಯಷ್ಟೆ! ಉತ್ತರ ಪ್ರದೇಶದಲ್ಲಿ ಇಪ್ಪತ್ತೈದು ವರ್ಷಗಳ ಹಿಂದೆ ಕಾಂಗ್ರೆಸ್ ಅವನತಿ ಹೀಗೇ ಶುರುವಾದದ್ದು ಎಂಬುದು ಖರ್ಗೆಯವರಿಗೆ ಗೊತ್ತೆ?

ಇಂತಹ, ಮುನ್ನೋಟವೇ ಇಲ್ಲದ ತಾಕ್ಷಣಿಕ ರಾಜಕಾರಣದ ವಾತಾವರಣದಲ್ಲಿ ಸಹಜವಾಗಿಯೇ ರೈತರ ಸರಣಿ ಸಾವುಗಳಿಗಾಗಲೀ, ಇಂದು ಎರಡಂಕಿ ಮುಟ್ಟಿ ವಿಷದಂತೆ ಏರುತ್ತಿರುವ ಹಣದುಬ್ಬರಕ್ಕಾಗಲೀ ನಿಜವಾಗಿ ಏನು ಕಾರಣ ಎಂದು ಯೋಚಿಸಲು ಯಾರಿಗೂ ವ್ಯವಧಾನವೇ ಇಲ್ಲದಾಗಿದೆ. ಎಂತಹುದೇ ಕಾರ್ಯಕ್ರಮಗಳನ್ನು ಪ್ರಕಟಿಸಿದರೂ ರೈತರ ಆತ್ಮಹತ್ಯೆ ನಿಲ್ಲುತ್ತಿಲ್ಲ. ಎಂತಹುದೇ ಬೆಲೆ ರಿಯಾಯ್ತಿ ಪ್ರಕಟಿಸಿದರೂ ಹಣದುಬ್ಬರ ಹತೋಟಿಗೆ ಸಿಗುತ್ತಿಲ್ಲ. ಏಕೆ? ಈ ಪ್ರಶ್ನೆಗೆ ಯಾರೂ ಉತ್ತರ ಕೊಡುತ್ತಿಲ್ಲ. ಸುಮ್ಮನೆ ಈ ಬಗ್ಗೆ ಗಲಾಟೆ ಮಾಡುತ್ತಿರುವ ಬಿಜೆಪಿ ಮತ್ತು ಇತರೆ ವಿರೋಧ ಪಕ್ಷಗಳ ನಾಯಕರಿಗೂ ಇದಕ್ಕೆ ಉತ್ತರ ಗೊತ್ತಿಲ್ಲ. ಏಕೆಂದರೆ ಇವರೆಲ್ಲರೂ ಮರುಳಾಗಿ ಅನುಸರಿಸುತ್ತಿರುವ ಆರ್ಥಿಕ ನೀತಿ, ಸಣ್ಣ ಪುಟ್ಟ ವಿವರಗಳ ಹೊರತಾಗಿ, ಒಂದೇ ಆಗಿದೆ. ಹಾಗೆ ನೋಡಿದರೆ ಇದಕ್ಕೆ ನಿಜವಾಗಿ ಉತ್ತರ ಕೊಡಬೇಕಾದ ಪ್ರಧಾನಿ ಮನಮೋಹನ ಸಿಂಗರು ಇದಕ್ಕೆಲ್ಲ ಅಮೆರಿಕಾದೊಡನೆಯ ಅಣು ಒಪ್ಪಂದದ ಜಾರಿಯೇ ಪರಿಹಾರವೆಂಬಂತೆ ಅದಕ್ಕಾಗಿ ತಮ್ಮ ಸರ್ಕಾರವನ್ನೇ ಬಲಿಕೊಡಲು ಸಿದ್ಧರಾಗುತ್ತಿದ್ದಾರೆ! ಬಹುಶಃ ಅವರಿಗೆ ಈಗ ಅಧಿಕಾರ ಬೇಡವಾಗಿದೆ. ಅವರು ಆರಂಭಿಸಿದ ಹೊಸ ಆರ್ಥಿಕ ನೀತಿ ತನ್ನೆಲ್ಲ ಫಲಗಳನ್ನು ನೀಡಬೇಕಾದವರಿಗೆ ನೀಡಿ, ಈಗ ಅವರ ಕೊರಳಿಗೇ ಸುತ್ತಿಕೊಳ್ಳುತ್ತಿರುವ ಹಾವಾಗಿ ಪರಿಣಮಿಸಿದೆ. ಹೀಗಾಗಿ ಇನ್ನು ಕೆಲವೇ ದಿನಗಳಲ್ಲಿ ರೈತರೊಂದಿಗೆ ಮಧ್ಯಮ ವರ್ಗವೂ ಬೀದಿಗೆ ಬಂದರೂ ಆಶ್ಚರ್ಯವಿಲ್ಲ. ಏಕೆಂದರೆ, ಹಣಕಾಸಿನ ಮಂತ್ರಿ ಚಿದಂಬರಂ ಅವರೇ ಹೇಳಿದ್ದಾರಲ್ಲ, ಈ ಬೆಲೆ ಏರಿಕೆ ನಿರೀಕ್ಷಿತ ಮತ್ತು ಇದಕ್ಕೆ ಸದ್ಯಕ್ಕೆ ಪರಿಹಾರವಿಲ್ಲವೆಂದು? ಸದ್ಯದ ಪರಿಸ್ಥಿತಿಯಲ್ಲಿ ಇದಕ್ಕಿಂತ ಭಂಡ ಮತ್ತು ನಿರ್ಲಜ್ಜ ಹೇಳಿಕೆ ಇನ್ನೊಂದಿರಲಾರದು.

(೪ ಜುಲೈ, ೨೦೦೮)

■

೯. ಮುಖ್ಯಮಂತ್ರಿ ಚಂದ್ರು ಅವರಿಗೊಂದು ಬಹಿರಂಗ ಪತ್ರ

ಪ್ರಿಯ ಶ್ರೀ 'ಚಂದ್ರು' ಅವರೇ,

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ವಹಿಸಿಕೊಂಡು ಬಹು ಉತ್ಸಾಹದಿಂದ ಕೆಲಸ ಆರಂಭಿಸಿರುವ ಸೂಚನೆ ನೀಡಿರುವ ನಿಮಗೆ 'ವಿಕ್ರಾಂತ ಕರ್ನಾಟಕ'ದ ಓದುಗರ ಪರವಾಗಿ ಅಭಿನಂದನೆಗಳು. ನೀವು ಇತ್ತೀಚಿನ ದೂರದರ್ಶನದ ಕಾರ್ಯಕ್ರಮವೊಂದರಲ್ಲಿ ಹೇಳಿದಂತೆ, ಕನ್ನಡ ನಾಡಿನಲ್ಲಿ 'ಕನ್ನಡ ಅಭಿವೃದ್ಧಿ ಪ್ರಾಧಿಕಾರ'ವೆಂಬುದೊಂದು ಇದೆ ಎನ್ನುವುದೇ ಕನ್ನಡದ ಸ್ಥಿತಿಗತಿಯನ್ನು ಸೂಚಿಸುವಂತಿದೆ. ಆದರೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಯಾದ ಎರಡು ದಶಕಗಳ ನಂತರವೂ ಅದರ ಸ್ಥಾಪನೆಯ ಉದ್ದೇಶಗಳು ಅಲ್ಪ ಪ್ರಮಾಣದಲ್ಲಾದರೂ, ನಿಜಾರ್ಥದಲ್ಲಿ ಈಡೇರಿರುವ ಸಾಕ್ಷ್ಯಗಳು ನಮಗಿನ್ನೂ ದೊರೆಯಬೇಕಾಗಿದೆ ಎಂದರೆ ಏನು ಹೇಳುವುದು? ಬದಲಿಗೆ ವರ್ಷೇ ವರ್ಷೇ, ಸಾರ್ವಜನಿಕವಾಗಿ ಕನ್ನಡದ ಸ್ಥಾನ ಮಾನ ಅವನತಿಯತ್ತಲೇ ಸಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹೀಗಾಗಿಯೇ ರಾಜ್ಯದಲ್ಲಿ ಸರ್ಕಾರದ 'ಪ್ರಯತ್ನ'ಗಳಿಗೆ ಪರ್ಯಾಯವಾಗಿ, ಕನ್ನಡ ರಕ್ಷಣೆಯ ವೀರ ಪ್ರತಿಜ್ಞೆಗೈಯುತ್ತಾ ಹಲವು ಸಂಘ ಸಂಸ್ಥೆಗಳು, ವೇದಿಕೆಗಳು, ಸೇನೆಗಳು ಒಂದೇ ಸಮನೆ ತಲೆಯೆತ್ತುತ್ತಿವೆ. ಅಲ್ಲದೆ, ಈವರೆಗೆ ಪ್ರಾಧಿಕಾರದ ಅಧ್ಯಕ್ಷರಾಗಿದ್ದವರಲ್ಲಿ ಅನೇಕರು 'ಕನ್ನಡ ವೀರ'ರೇ ಆಗಿದ್ದರೂ, ಈ ಸ್ಥಿತಿ ಏಕುಂಟಾಯಿತೆಂದು ನೀವು ಯೋಚಿಸಬೇಕಿದೆ. ಅಧಿಕಾರ ಕೊಡುವ ಸುಖ-ಸವಲತ್ತುಗಳು ಯಾರನ್ನಾದರೂ ಮೆತ್ತಗಾಗಿಸಬಲ್ಲುದು. ಇದನ್ನು ಮರೆಮಾಚಲು ಅಧಿಕಾರ ಬಿಡುವ ಹೊತ್ತಿನಲ್ಲಿ, ತಾವು ಕೈಗೊಳ್ಳಲು ಸಾಧ್ಯವಾದ ಕೆಲವು ಔಪಚಾರಿಕ ಕಾರ್ಯಕ್ರಮಗಳನ್ನು ಒಳಗೊಂಡ ಪ್ರಗತಿ ನಕ್ಷೆಯೊಂದನ್ನು ಬಿಡುಗಡೆ ಮಾಡುವ ಹಾಸ್ಯಾಸ್ಪದ ಕ್ರಮಕ್ಕೆ ಕೆಲವರು ಕೈಹಾಕಿದ್ದೂ ಉಂಟು! ಇಂತಹ ಅಸಹಾಯಕತೆಗೆ ಒಳಗಾಗದಂತೆ, ಆರಂಭದಿಂದಲೇ ನಿಮ್ಮದೇ ಕಾರ್ಯಕ್ರಮಗಳ ನಕ್ಷೆಯೊಂದನ್ನು ತಯಾರು ಮಾಡಿಕೊಂಡು ನೀವು ಕೆಲಸ ಆರಂಭಿಸಬೇಕಿದೆ. ನಿಮ್ಮ ಈ ಕಾರ್ಯಕ್ರಮಗಳ ಹಿಂದೆ ಒಂದು ಸ್ಪಷ್ಟ ಮುನ್ನೋಟ, ಚಿಂತನೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಹಠ ಇರುವುದು ಅತ್ಯಗತ್ಯ.

ನಾನು ಹೀಗೆ ನಿಮ್ಮನ್ನು ವೈಯುಕ್ತಿಕವಾಗಿ ಉದ್ದೇಶಿಸಿ ಬರೆಯಲೂ ಒಂದು ಕಾರಣವಿದೆ. ಕನ್ನಡ ಸಿನೆಮಾಗಳಲ್ಲಿ ಹಾಸ್ಯ (ಮತ್ತು ಕೆಲವೊಮ್ಮೆ ಹಾಸ್ಯಾಸ್ಪದ) ಪಾತ್ರಗಳಲ್ಲಿ

ಮಾತ್ರ ನೋಡುತ್ತಿದ್ದ ನಿಮ್ಮನ್ನು ನಾನು ಇತ್ತೀಚೆಗೆ ಬೆಂಗಳೂರಲ್ಲಿ ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ಭೇಟಿಯಾದಾಗ, ನೀವು ಆ ಸಿನೆಮಾಗಳಲ್ಲಿ ಕಂಡಂತೆ 'ಹಗುರ' ವ್ಯಕ್ತಿತ್ವದವರೇನಲ್ಲ ಎಂದೆನಿಸಿತು. ಜೊತೆಗೆ, ಈ ಹಿಂದೆ ನಮ್ಮ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಕನ್ನಡ ಕಲಿಸುವ ಆಜ್ಞೆಗೆ ಸಿದ್ಧತೆ ನಡೆಯುತ್ತಿದ್ದಾಗ ಶಾಸನ ಸಭೆಯಲ್ಲಿ ಅದನ್ನು ದಿಟ್ಟವಾಗಿ ವಿರೋಧಿಸಿದ ಕೆಲವೇ ಕೆಲವರಲ್ಲಿ ನೀವೂ ಒಬ್ಬರು ಎಂಬುದು ನೆನಪಿಗೆ ಬಂತು. ಕನ್ನಡದ ಬಗ್ಗೆ ಆಳವಾದ ನಿಷ್ಠೆ-ನಂಬಿಕೆಯುಳ್ಳವರು ಮಾತ್ರ ಹೀಗೆ, ಹಲವು ವಕ್ರ ವಿವರಣೆಗಳೊಂದಿಗೆ ಇಂದು ಸೃಷ್ಟಿಸಲಾಗುತ್ತಿರುವ ಕನ್ನಡ ವಿರೋಧಿ ಪ್ರವಾಹದ ವಿರುದ್ಧ ಈಜಬಲ್ಲರು. ನಿಮ್ಮನ್ನು ಆ ಸಮಾರಂಭದಲ್ಲಿ ಸಂಘಟಕರೊಬ್ಬರು 'ಕೋಮುವಾದಿ ಪಕ್ಷದ ಸದಸ್ಯರಾದರೂ...' ಎಂಬ ಮಾತುಗಳೊಂದಿಗೆ ಪರಿಚಯಿಸಿದ್ದಕ್ಕೆ ನೀವು ಪ್ರತಿಕ್ರಿಯಿಸುತ್ತಾ, 'ಅದೆಲ್ಲ ಇಂದಿನ ರಾಜಕೀಯದ ಸನ್ನಿವೇಶದಲ್ಲಿ ಅಪ್ರಸ್ತುತವಾದ ಮಾತು. ನಾನು ಮೂಲತಃ ಸಮಾಜವಾದಿ' ಎಂದು ಹೇಳಿದ್ದೂ ನನ್ನ ಮನದಲ್ಲಿದೆ. ಏಕೆಂದರೆ, ಇಂದು ಯಾರಾದರೂ ಸಮಾಜವಾದಿ ಎಂದು ಬಹಿರಂಗವಾಗಿ ಹೇಳಿಕೊಳ್ಳಲು ಹಿಂಜರಿಯಬೇಕಾದಂತಹ ಪರಿಸ್ಥಿತಿ ಇರುವಾಗ, ನೀವು ಹಾಗೆ ಹೇಳಿಕೊಳ್ಳುವಲ್ಲಿ ತೋರಿದ ಧೈರ್ಯದಲ್ಲಿ ಒಂದಷ್ಟು ಮುಗ್ಧತೆಯ ಜೊತೆಗೆ ಸಮಾಜವಾದಿ ತತ್ವದ ಬಗ್ಗೆ ಆಳವಾದ ನಂಬಿಕೆಯೂ ಇದೆ ಎಂದು ಭಾವಿಸಿದ್ದೇನೆ. ಒಂದು ಕಾಲದಲ್ಲಿ ಕನ್ನಡ ಚಳುವಳಿಗೆ ಒಂದು ತಾತ್ವಿಕ ಭಿತ್ತಿ ಒದಗಿಸಿ, ಆ ಮೂಲಕ ಅದಕ್ಕೊಂದು ಘನತೆಯನ್ನೂ ಪ್ರದಾನ ಮಾಡಿದ ಸಮಾಜವಾದಿಗಳೇ; ಇಂದು ಬಹಿರಂಗದಲ್ಲದಿದ್ದರೂ, ಅಂತರಂಗದಲ್ಲಿ ಕನ್ನಡದ ಕಾಲ ಮುಗಿಯಿತೋ ಏನೋ ಎಂಬ ಅನುಮಾನದಿಂದ ಇಂಗ್ಲಿಷ್ ಕೈಯನ್ನು ಹಿಡಿದು ಹೊರಟಿರುವಾಗ, ನಿಮ್ಮ ಈ ಸಮಾಜವಾದಿ ಕನ್ನಡ ಬದ್ಧತೆ ನನ್ನಲ್ಲಿ ಒಂದಿಷ್ಟು ಆಸೆ ಹುಟ್ಟಿಸಿದೆ. ಅದಕ್ಕಾಗಿ ಈ ಪತ್ರ.

ಸಮಾಜವಾದಿ ಕನ್ನಡ ಬದ್ಧತೆ ಎಂದೆ. ಇದರರ್ಥ ಇಷ್ಟೆ: ಸ್ವಾತಂತ್ರ್ಯೋತ್ತರ ಭಾರತದ ಪುನಾರಚನೆಗೆ, ಅದೆಂದೂ ಮತ್ತೆ ಯಾವುದೇ ರೀತಿಯ ಗುಲಾಮಗಿರಿಗೆ ಅಥವಾ ವಸಾಹತು ಶೋಷಣೆಗೆ ಒಳಗಾಗದಂತೆ ರಾಷ್ಟ್ರಜೀವನವನ್ನು ರೂಪಿಸಲು ಭಾರತೀಯ ಸಮಾಜವಾದ ಅತ್ಯಗತ್ಯವೆಂದು ಕಂಡುಕೊಂಡ ಮೂಲಾಧಾರಗಳಲ್ಲಿ ಒಂದು, ಭಾರತೀಯ ಭಾಷಾ ಆಂದೋಲನ. ಇದರ ಬೀಜ, ಸ್ವಾತಂತ್ರ್ಯ ಹೋರಾಟದ ಮೊದಲ ಮಜಲಿನಂತಿರುವ ಅಸಹಕಾರ ಸತ್ಯಾಗ್ರಹದ ಅಂಗವಾಗಿ ಆರಂಭಿಸಲಾಗಿದ್ದ ದೇಶಿ ಶಿಕ್ಷಣ ಆಂದೋಲನದಲ್ಲಿಯೇ ಇದೆ. ಆದರೆ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ನೆಹರೂ ಸರ್ಕಾರ ಜನ ಸಾಮಾನ್ಯರ ನಿರೀಕ್ಷೆಗೆ ವಿರುದ್ಧವಾಗಿ ದೇಶಾದ್ಯಂತ ಏಕ ಸ್ತರದ ಸಾಮಾನ್ಯ ಶಿಕ್ಷಣವನ್ನು ಜಾರಿಗೆ ತರಲು ವಿಫಲವಾದಾಗ, ಸಮಾಜವಾದಿಗಳು ಸಮಾನ ಶಿಕ್ಷಣದ ಆದರ್ಶದೊಂದಿಗೆ 'ಅಂಗ್ರೇಜಿ ಹಟಾವೋ!' ಚಳುವಳಿಯನ್ನು ಹಮ್ಮಿಕೊಳ್ಳಬೇಕಾಯಿತು. ಈ ಚಳುವಳಿಯ ಹಿಂದೆ ಇಂಗ್ಲಿಷ್ ಭಾಷೆಯ ವಿರೋಧಕ್ಕಿಂತ, ಅದು ಪ್ರತಿಸಿಧಿಸುತ್ತಿದ್ದ ಪ್ರತ್ಯೇಕತಾ ಸಾಮಾಜಿಕ ಪ್ರತಿಷ್ಠೆ, ಜನದೂರವಾದ ಆಡಳಿತ ಮತ್ತು ದೇಶೀ ವಿವೇಕವನ್ನು ಹತ್ತಿಕ್ಕುವ ಮೂಲಕ ಬೆಳೆಯುವ

ಬಂಡವಾಳಶಾಹಿ ತಂತ್ರಜ್ಞಾನದ ರಾಕ್ಷಸೀ ಪರಿಣಾಮಗಳ ಬಗೆಗಿನ ಆತಂಕವಿತ್ತು.

ಇಂದು ಈ ಪರಿಣಾಮಗಳು ಇಷ್ಟು ವರ್ಷಗಳ ನಂತರ, ಮನುಷ್ಯರನ್ನು ಹಂದಿಗಳನ್ನಾಗಿ ಮಾಡುತ್ತಿರುವ ಜಾಗತೀಕರಣವೆಂಬ ಹೊಸ ಆರ್ಥಿಕ ನೀತಿಯ ಹೆಸರಲ್ಲಿ ಅವತಾರ ತಾಳಿ ನಮ್ಮ ಮುಂದೆ ನಿಂತಿವೆ. ಅವು ಬಡವರ-ಶ್ರೀಮಂತರ ಅಂತರದ ಸ್ಫೋಟಕ ಹೆಚ್ಚಳ, ಅಶ್ಲೀಲ ಶ್ರೀಮಂತಿಕೆಯ ದ್ವೀಪಗಳು ಉಂಟು ಮಾಡುತ್ತಿರುವ ಆತಂಕಕಾರಿ ಸಾಮಾಜಿಕ ವಿಕ್ಷಿಪ್ತತೆಗಳು, ಒಂದೇ ಸಮನೆ ಹೆಚ್ಚುತ್ತಿರುವ ಹಿಂಸಾಚಾರ ಮತ್ತು ಅಪರಾಧ ವೈವಿಧ್ಯಗಳು ಮತ್ತು ಇವುಗಳಿಗೆ ಸಾಮಾನ್ಯ ಜನತೆ ಪ್ರಜಾಸತ್ತಾತ್ಮಕ ವಿಧಾನಗಳನ್ನು ಧಿಕ್ಕರಿಸಿ ವ್ಯಕ್ತಪಡಿಸುತ್ತಿರುವ ಪ್ರತಿಕ್ರಿಯೆಗಳ ವ್ಯಗ್ರ ರೂಪಗಳಲ್ಲಿ ಕಾಣತೊಡಗಿವೆ. ಒಟ್ಟಾರೆಯಾಗಿ ಇವುಗಳು ಉಂಟು ಮಾಡುತ್ತಿರುವ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಒತ್ತಡಗಳನ್ನು ತಾಳಲಾರದೆ, ಭಾರತೀಯ ಸಮಾಜದ ಅಡಿಗಲ್ಲಿನಂತಿರುವ ರೈತ ಸಮುದಾಯ ಒಂದೇ ಸಮನೆ ಆತ್ಮಹತ್ಯೆಗೆ ಶರಣಾಗುತ್ತಿದೆ. ಈ ಪ್ರಕ್ರಿಯೆಗೆ ತನ್ನದೇ ತರ್ಕವಿದ್ದು, ಅದು ತಂತಾನೇ ಹಿಮ್ಮೊಗವಾಗಲಾರದು ಎಂಬುದನ್ನು ಸದ್ಯದ ಅಭೂತಪೂರ್ವ ಜಾಗತಿಕ ಹಣದುಬ್ಬರದ ಹಿಂದಿನ ಕಾರಣಗಳು ಸೂಚಿಸುತ್ತಿವೆ.

ರಾಷ್ಟ್ರಜೀವನದ ಈ ಅನಾಹುತಕಾರಿ ಸ್ಥಿತ್ಯಂತರದ ಹಿಂದೆ, ಸಾರತಃ ಸಾಂಸ್ಕೃತಿಕವೆಂದು ಕರೆಯಬಹುದಾದ ಒಂದು 'ವಿಸ್ಮೃತಿ' ಇದೆ. ಈ ವಿಸ್ಮೃತಿ ಉಂಟಾಗಿರುವುದು 'ನಮ್ಮತನ'ವೆಂಬ ನಿಜವಾದ ಸಂಪನ್ಮೂಲವನ್ನು ಕಡೆಯಾಗಿ ನೋಡಿ, 'ಪರತನ'ದ ಆಕರ್ಷಣೆಗೆ ಒಳಗಾಗಿದ್ದರಿಂದ. ಈ ನಮ್ಮತನವನ್ನು ಖಂಡಿತ ನಾನು ಒಂದು ಒಣ ಅಭಿಮಾನದ ವಿಷಯವಾಗಿ ಪ್ರಸ್ತುತಪಡಿಸುತ್ತಿಲ್ಲ. ಬದಲಾಗಿ ಅದು, ಈ ನೆಲದೊಡನೆಯ, ನಮ್ಮ ಸಮಾಜದೊಡನೆಯ ನಮ್ಮ ಸಂಬಂಧಗಳ ಸಮತೋಲನ ಶಕ್ತಿಯೇ ಆಗಿದೆ. ಮೇಲೆ ವಿವರಿಸಿದಂತಹ ಇಂದಿನ ಅಭಿವೃದ್ಧಿ ಅನಾಹುತಗಳಿಗೆ ಈ ಸಮತೋಲನ ಶಕ್ತಿಯ ನಾಶವೇ ಕಾರಣವಾಗಿದೆ. ಈ ಸಮತೋಲನ ಶಕ್ತಿ ಹರಳುಗಟ್ಟಿರುವುದು, ಈ ನೆಲ ಹಾಗೂ ಇಲ್ಲಿನ ಜನಗಳ ಸಂಬಂಧಗಳಲ್ಲಿ ವಿನ್ಯಾಸಗೊಂಡಿರುವ ಸ್ಥಳೀಯ ವಿವೇಕದಲ್ಲಿ ಮತ್ತು ಅದು ಅಭಿವ್ಯಕ್ತಿಗೊಂಡಿರುವ ಭಾಷಾ ಮಾತೃಕೆಗಳಲ್ಲಿ. ಹಾಗಾಗಿ ಚರಿತ್ರೆಯ ನಡಿಗೆಯಲ್ಲಿ ನಮ್ಮ 'ಸ್ಥಿತಿ'ಯನ್ನು ಸ್ವಯಂಮರುಕಕ್ಕೊಳಪಡಿಸಿ ಪರಾಕರ್ಷಣೆಯ ಹಪಾಹಪಿಯನ್ನು ಸೃಷ್ಟಿಸದೆ, ಸಮತೋಲಿತ 'ಪ್ರಗತಿ'ಯೆಡೆಗೆ ನಮ್ಮನ್ನು ಒಯ್ಯಬಲ್ಲ ಶಕ್ತಿ ಇರುವುದು ನಮ್ಮ ಭಾಷೆಗೇ. ಅದರ ವ್ಯಾಕರಣ ಮತ್ತು ನುಡಿಗಟ್ಟುಗಳಲ್ಲಿ ಮೂಡುವ ವಿಚಾರ-ವಿವೇಕಗಳಲ್ಲೇ.

ಏಕೆಂದರೆ, ಅದು ನಮ್ಮದೇ ಜೀವ ಕೇಂದ್ರದಿಂದ ಹೊಮ್ಮಿ, ನಮ್ಮನ್ನು ಸರ್ವ ಸಂಕಟಗಳಲ್ಲೂ ಪೊರೆಯಬಲ್ಲ 'ಸಾವಯವ' ಗುಣ ಹೊಂದಿರುತ್ತದೆ. ಅದು, ಹೊರಗಿನ ವಿಚಾರಗಳ, ಪರಾಕರ್ಷಣೆಗಳ ಸುಲಭ ಮರುಳಿಗೆ ಒಳಗಾಗದೆ; ಆದರೆ, ಅವುಗಳ ಎಲ್ಲ 'ಪ್ರಗತಿಪರ' ಚೈತನ್ಯವನ್ನೂ ತನ್ನ ವ್ಯಾಕರಣಕ್ಕೆ, ನುಡಿಗಟ್ಟಿಗೆ ತನ್ನದೇ ರೀತಿಯಲ್ಲಿ ಅಳವಡಿಸಿಕೊಂಡು ತನ್ನದನ್ನೇ ಮಾಡಿಕೊಳ್ಳುವ ಜಾಣ್ಮೆ ಅದರಲ್ಲಿ ಅಂತರ್ಗತವಾಗಿರುತ್ತದೆ.

ಹಾಗಾಗಿ ಇಂದಿನ ಜಾಗತೀಕರಣದ ಅನುಕೂಲಗಳನ್ನು ಕ್ರೋಢೀಕರಿಸಿಕೊಳ್ಳಲು ಮತ್ತು ಅದೇ ಸಮಯದಲ್ಲಿ ಅದು ನಮ್ಮಲ್ಲಿ ಸೃಷ್ಟಿಸುವ 'ಹಂದಿತನ'ವನ್ನು ನಿವಾರಿಸಿಕೊಳ್ಳಲು; ಅಂದರೆ, ಆಧುನಿಕ ವಿಜ್ಞಾನ-ತಂತ್ರಜ್ಞಾನಗಳ ಫಲಗಳ ಪರಿಣಾಮಗಳು ನಮ್ಮ ವ್ಯಕ್ತಿತ್ವ ಮತ್ತು ಸಮಾಜದ ಮೇಲೆ ಸಮತೋಲಿತವಾಗಿರುವಂತೆ ನೋಡಿಕೊಳ್ಳಲು ಹಾಗೂ ಆ ಮೂಲಕ ನಮ್ಮನ್ನು ಒಂದು ರಾಷ್ಟ್ರವಾಗಿ, ಸಮಾಜವಾಗಿ ಉಳಿಸಲು ದೇಶ ಭಾಷೆಗಳು–ನಮಗೆ ಕನ್ನಡ–ಒಂದು ಸಂವಹನ ಮಾಧ್ಯಮವಾಗಿ ಮಾತ್ರವಲ್ಲ, ಒಂದು ಸಾಂಸ್ಕೃತಿಕ ಸಾಧನವಾಗಿ ಕೂಡಾ ಅತ್ಯವಶ್ಯಕವಾಗಿದೆ.

ಹೀಗಾಗಿ 'ಚಂದ್ರು' ಅವರೇ, ನೀವು ಈ ಯಾವುದರಿಂದಲೂ ವಿಚಲಿತರಾಗದೆ ಕನ್ನಡದ ಅಭಿವೃದ್ಧಿಯನ್ನು ಒಂದು ಸಮಗ್ರ ಹಾಗೂ ಪರ್ಯಾಯ ರಾಜಕೀಯ ಕಾರ್ಯಕ್ರಮ ದಂತೆಯೇ ಆಯೋಜಿಸಿ, ಜಾರಿಗೆ ತರಲು ಸಿದ್ಧವಾಗುವುದು ನಿಮ್ಮ ಆದ್ಯ ಕರ್ತವ್ಯವಾಗಿದೆ. ಕನ್ನಡ ಉಳಿದು ಬೆಳೆಯುವುದು ಕನ್ನಡಿಗರು ಅದನ್ನು ಸಕಲ ಕ್ಷೇತ್ರಗಳಲ್ಲಿ ಬಳಸಿ ಬೆಳೆಸಿದಾಗ ಮಾತ್ರ. ಅದಕ್ಕಾಗಿ ಮುಖ್ಯವಾಗಿ ಶಿಕ್ಷಣ, ಆಡಳಿತ ಮತ್ತು ಉತ್ಪಾದನೆ-ಉದ್ಯಮ ಕ್ಷೇತ್ರಗಳಲ್ಲಿ ಕನ್ನಡದ 'ಅಭಿವೃದಿ'ಯನ್ನು ಸಾಧಿಸುವುದರ ಕಡೆ ತೀವ್ರ ಗಮನ ಹರಿಸಬೇಕಿದೆ. ಅದಕ್ಕಾಗಿ ನೀವು ಆದ್ಯತೆಯ ಮೇಲೆ ಮಾಡಬೇಕಾದ ಕೆಲಸಗಳೆಂದರೆ:

೧. ರಾಜ್ಯಾದ್ಯಂತ, ವಿಶೇಷವಾಗಿ ಬೆಂಗಳೂರು ನಗರದಲ್ಲಿ ಸರ್ಕಾರಿ ಕನ್ನಡ ಶಾಲೆಗಳನ್ನು ಶೀಘ್ರವಾಗಿ ಸುಧಾರಿಸಬೇಕಿದೆ. ಅವು ಮೂಲಭೂತ ಸೌಕರ್ಯಗಳಲ್ಲಾಗಲೀ, ಬೋಧನೆಯ ಗುಣ ಮಟ್ಟದಲ್ಲಾಗಲೀ, ಶಿಸ್ತು ಪಾಲನೆಯಲ್ಲಾಗಲೀ, ಯಾವುದೇ ಖಾಸಗಿ ಶಾಲೆಗೆ ಕಡಿಮೆಯಿಲ್ಲದಂತೆ ನೋಡಿಕೊಳ್ಳುವ ವ್ಯವಸ್ಥೆಯನ್ನು ಒಂದು ಕಾಲಬದ್ಧ ಕಾರ್ಯಕ್ರಮವಾಗಿ ಜಾರಿಗೆ ತರುವಂತೆ ಸರ್ಕಾರದ ಶಾಲಾ ಶಿಕ್ಷಣ ಸಚಿವರ ಮನವೊಲಿಸಬೇಕಿದೆ. ಆ ಮೂಲಕ ಮತ್ತೆ ಎಲ್ಲ ವರ್ಗಗಳ ಮಕ್ಕಳು ಕನ್ನಡ ಶಾಲೆಗೆ ಬರುವಂತೆ ಮಾಡಬೇಕಿದೆ.

ಇದರ ಜೊತೆಗೇ ಬರೀ ಅನ್ಯಭಾಷಿಕರ ವಿರುದ್ಧವಷ್ಟೇ ಹೋರಾಡುತ್ತಿರುವಂತೆ ತೋರುವ ಕನ್ನಡ ಚಳುವಳಿಯ ಎಲ್ಲ ಸಂಘಟನೆಗಳ ಸಭೆ ಕರೆದು, ಇಂದು ಹೇಗೆ ಕನ್ನಡ ಶಾಲೆಗಳ ಪುನರುದ್ಧಾರದ ಚಳುವಳಿಯ ಮೂಲಕ ಮಾತ್ರ ಕನ್ನಡ ಉಳಿಯಬಲ್ಲುದೆಂದು, ಅಗತ್ಯವಿದ್ದರೆ ಅವರಿಗೆ ಒಂದು ಕಾರ್ಯಾಗಾರದ ಮೂಲಕ ವಿವರಿಸಿಬೇಕು. ಹಾಗೂ ಅವರನ್ನು ಕನ್ನಡ ಮಾಧ್ಯಮ ಶಾಲಾ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು.

೨. ಕನ್ನಡ ಶಿಕ್ಷಣ ಮಾಧ್ಯಮ ಕುರಿತಂತೆ ಹೈಕೋರ್ಟಿನಲ್ಲಿರುವ ತಡೆಯಾಜ್ಞೆಗೆ ಸಂಬಂಧಿಸಿದಂತೆ ವಾದ-ಪ್ರತಿವಾದಗಳು ಮುಗಿದು ಎರಡು ವರ್ಷಗಳಾಗುತ್ತಿದ್ದರೂ, ತೀರ್ಪು ಹೊರಬಿದ್ದಿಲ್ಲ! ತೀರ್ಪು ಕೂಡಲೇ ಹೊರಬೀಳುವಂತೆ ಕ್ರಮ ಕೈಗೊಳ್ಳಬೇಕು. ಆ ತೀರ್ಪಿನ ಪ್ರಕಾರ ಶಾಲಾ ಶಿಕ್ಷಣ ಮಾಧ್ಯಮ ನೀತಿಯನ್ನು ಅಸಂದಿಗ್ಧವಾಗಿ ರಾಜ್ಯಾದ್ಯಂತ ಜಾರಿಗೆ ತರಲು ಮತ್ತು ಯಾವುದೇ ಶಿಕ್ಷಣ ಸಂಸ್ಥೆ ಕನ್ನಡ ಶಿಕ್ಷಣದ ವ್ಯಾಪ್ತಿಯಿಂದ ತಪ್ಪಿಸಿಕೊಳ್ಳಲೆಂದೇ

ಕೇಂದ್ರೀಯ ಶಿಕ್ಷಣ ಪಠ್ಯಕ್ರಮವನ್ನು ಆಯ್ದುಕೊಳ್ಳಲು ಅವಕಾಶವಿರದಂತೆ, ಕಾನೂನು ತಿದ್ದುಪಡಿಗೆ ಶಿಫಾರ್ಸು ಮಾಡಬೇಕು.*

ಹಾಗೇ ಭಾಷಾ ಅಲ್ಪಸಂಖ್ಯಾತರ ಶಾಲೆಗಳ ಹೊರತಾಗಿ, ರಾಜ್ಯದ ಎಲ್ಲ ಶಾಲೆಗಳಲ್ಲಿ ಕನಿಷ್ಠ ಏಳನೇ ತರಗತಿಯವರೆಗಾದರೂ ಕನ್ನಡ ಮಾಧ್ಯಮ ಕಡ್ಡಾಯವಾಗಿರುವಂತೆ ಮಾಡುವ ನೀತಿ ರೂಪಿಸಿ, ಹಂತಾನುಹಂತವಾಗಿ ಇದನ್ನು ಜಾರಿಗೆ ತರುವಂತೆ ರಾಜ್ಯ ಸರ್ಕಾರದ ಮನವೊಲಿಸಬೇಕು. ಅಲ್ಲಿಯವರೆಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಪದ್ಧತಿಯನ್ನು ಅಮಾನತ್ತಿನಲ್ಲಿಟ್ಟು, ಮೂರನೆಯ ತರಗತಿಯಿಂದ ಅದನ್ನು, ಸಂವಹನ ಇಂಗ್ಲಿಷ್ ಕಲಿಸುವಲ್ಲಿ ವಿಶೇಷ ಪರಿಣತಿಯುಳ್ಳ ಸಿಬ್ಬಂದಿಯ ನೇಮಕದ ಮೂಲಕ ಆರಂಭಿಸಬೇಕು.

ಅಂದರೆ, ಯಾವುದೇ ಕಾರಣಕ್ಕೂ ಕನ್ನಡದ ಮಕ್ಕಳಿಗೆ ಶಾಲೆಗಳಲ್ಲಿ ಇಂಗ್ಲಿಷನ್ನು ಕನ್ನಡದ ಸಮಾನಾಂತರ ಭಾಷೆಯಾಗಿ ಕಲಿಸುವ ವ್ಯವಸ್ಥೆ ಇರಕೂಡದು. ಇಂಗ್ಲಿಷ್ ಏನಿದ್ದರೂ ಕನ್ನಡಕ್ಕೆ ಪೂರಕ ಭಾಷೆಯಾಗಿ ಮಾತ್ರ ಕಲಿಸಲ್ಪಡಬೇಕು. ಇದು ರಾಜ್ಯ ಸರ್ಕಾರದ ಭಾಷಾ ನೀತಿಯ ಅವಿಭಾಜ್ಯ ಅಂಗವಾಗಿರುಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ನೋಡಿಕೊಳ್ಳಬೇಕು.

೩. ಇಂದು ಎಲ್ಲ ಕ್ಷೇತ್ರಗಳಲ್ಲಿ ಗಣಕಯಂತ್ರದ ಬಳಕೆ ಅನಿವಾರ್ಯವೂ ಉಪಯುಕ್ತವೂ ಆಗಿ ಕಂಡುಬಂದಿರುವುದರಿಂದ, ಗಣಕ ಯಂತ್ರ ವಿದ್ಯೆ ನಿರ್ವಹಿಸಲು ಇಂಗ್ಲಿಷ್ ಜ್ಞಾನ ಅಗತ್ಯವಿಲ್ಲದಂತಹ ಕನ್ನಡ ತಂತ್ರಾಂಶದ ಅಭಿವೃದ್ಧಿಯ ಕಡೆ ತುರ್ತು ಗಮನ ಹರಿಸಬೇಕಿದೆ. ಕನ್ನಡ ಇಂದು–ಜಾಗತೀಕರಣದ ದಿನಗಳಲ್ಲಿ–ಹಿಂದುಳಿಯಲು ಇಂತಹ ತಂತ್ರಾಂಶ ಇಲ್ಲದಿರುವುದೇ ಒಂದು ಪ್ರಮುಖ ಕಾರಣವಾಗಿದೆ. ಇದನ್ನು ಆದಷ್ಟು ಬೇಗ ಅಭಿವೃದ್ಧಿಗೊಳಿಸಿ ಸರ್ಕಾರದ ಗಣಕ ಯಂತ್ರ ಜಾಲದಲ್ಲಿ ಅಳವಡಿಸುವ ಮೂಲಕ ಜನಪ್ರಿಯಗೊಳಿಸಬೇಕಿದೆ. ನಂತರ ಅದು ತಂತಾನೇ ಸ್ಥಳೀಯ ವಾಣಿಜ್ಯ-ವ್ಯವಹಾರ ನಿರ್ವಹಣೆಗೂ ಹರಡುತ್ತದೆ. ಜಗತ್ತಿನ ತಂತ್ರಾಂಶ ಅಭಿವೃದ್ಧಿಯ ರಾಜಧಾನಿಯೆನಿಸಿರುವ ಕನ್ನಡ ನಾಡಿನ ರಾಜಧಾನಿ ಬೆಂಗಳೂರಿನಲ್ಲಿ ಇದು ಕಷ್ಟದ ಕೆಲಸವಾಗಲಾರದು. ಸಂಕಲ್ಪ ಮತ್ತು ಹಠ ಬೇಕಷ್ಟೆ.

೪. ಆಡಳಿತ ಭಾಷೆಯಾಗಿ ಕನ್ನಡ ಜಾರಿಯ ಸಮಸ್ಯೆ ಇರುವುದು ವಿಧಾನ ಸೌಧದ ಮಟ್ಟದಲ್ಲಷ್ಟೆ. ಬಾಯಿಬಿಟ್ಟರೆ ಇಂಗ್ಲಿಷ್ ಮಾತನಾಡುವ ಮುಖ್ಯಮಂತ್ರಿ ಅಥವಾ ಮಂತ್ರಿಗಳು ಸದ್ಯದ ಸಚಿವ ಸಂಪುಟದಲ್ಲಿ ಇಲ್ಲವಾದ್ದರಿಂದ, ಈ ಸಮಸ್ಯೆಯನ್ನು ಪರಿಹರಿಸಲು ಅಗತ್ಯವಾದ ವಾತಾವರಣ ನಿಮ್ಮ ಸರ್ಕಾರದಲ್ಲಿದೆ. ಆದುದರಿಂದ ಆಡಳಿತ ಭಾಷಾ ನೀತಿಯನ್ನು ಉಲ್ಲಂಘಿಸುವ ಅಧಿಕಾರಿಗಳಿಗೆ ಬರೀ ಎಚ್ಚರಿಕೆಯಲ್ಲ, ಶಿಕ್ಷೆಯನ್ನೂ ನೀಡುವ ಅಧಿಕಾರವನ್ನು ಪ್ರಾಧಿಕಾರಕ್ಕೆ ಒದಗಿಸುವ ಕಡೆ ನೀವು ಕ್ರಮ ಕೈಗೊಳ್ಳಬೇಕಾದ ಕಾಲವೀಗ

---

* ಈಗ ತೀರ್ಪು ಹೊರಬಿದ್ದಿದೆ. ಈ ಸಂಪುಟದ ೫೦ನೇ ಅಧ್ಯಾಯದ ೭ನೇ ಪ್ರತಿಕ್ರಿಯೆ ನೋಡಿ

ಬಂದಿದೆ. ಕಾನೂನು ಮಂತ್ರಿ ಸುರೇಶ್ ಕುಮಾರ್ ಅವರು ಈಗಾಗಲೇ ನ್ಯಾಯಾಂಗದ ಎಲ್ಲ ಸ್ತರಗಳಲ್ಲಿ ಕನ್ನಡ ಜಾರಿಗೆ ತರಲು ಸಿದ್ಧತೆ ನಡೆಸುತ್ತಿರುವುದರಿಂದ, ಅವರ ಕನ್ನಡ ಪ್ರೀತಿಯನ್ನು ಬಳಸಿಕೊಂಡು ನೀವು ಈ ಕೆಲಸ ಮಾಡಬಹುದಾಗಿದೆ. ನಿಮ್ಮ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ವಿಶೇಷವಾಗಿ ಪ್ರಸ್ತಾಪಿಸಿರುವ ಕನ್ನಡ ಬದ್ಧತೆಯ ಸ್ಫೂರ್ತಿಯಿಂದ ಈ ಕೆಲಸವನ್ನು ಸರ್ಕಾರದಿಂದ ಆಗುಮಾಡಿಸಿಕೊಳ್ಳುವುದು ನಿಮ್ಮ ಜವಾಬ್ದಾರಿಯಾಗಿದೆ.

ಇದರ ಜೊತೆಗೇ ಆಡಳಿತ ಭಾಷೆಯಾಗಿ ಕನ್ನಡವನ್ನು ಇನ್ನಷ್ಟು ತಿಳಿಗೊಳಿಸಿ, ಜನ ಸಾಮಾನ್ಯರಿಗೂ ಸುಲಭವಾಗಿ ಅರ್ಥವಾಗುವಂತೆ ಸರಳ-ಸಾಮಾನ್ಯಗೊಳಿಸುವ ಕಡೆ ಕ್ರಮ ಕೈಗೊಳ್ಳಬೇಕಿದೆ.

೫. ಇನ್ನು ಮುಖ್ಯವಾಗಿ, ಕೇಂದ್ರ-ರಾಜ್ಯ ಸಂಬಂಧಗಳ ಪುನಾರಚನೆ ಕಡೆ ಕೂಡಾ ನೀವು ಗಮನ ಹರಿಸಬೇಕಿದೆ. ಏಕೆಂದರೆ, ರಾಜ್ಯಗಳು ದುರ್ಬಲವಾದಷ್ಟೂ ಆಯಾ ರಾಜ್ಯಗಳ ಭಾಷೆಗಳು ದುರ್ಬಲಗೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹೆಸರು ಒಕ್ಕೂಟವೆಂತಿದ್ದರೂ, ಭಾರತವು ಕೇಂದ್ರ-ಬಲಿಷ್ಠ ರಾಷ್ಟ್ರವಾಗುತ್ತಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅನೇಕ ಕಾನೂನು ತಿದ್ದುಪಡಿಗಳ ಮೂಲಕ ರಾಜ್ಯಗಳ ಹಲವು ಸ್ವಯಮಾಧಿಕಾರಗಳನ್ನು ಮೊಟಕುಗೊಳಿಸಲಾಗಿದೆ. ನಮ್ಮ ಆಡಳಿತ ನಡೆಸಲು, ನಮ್ಮ ಜಗಳಗಳನ್ನು ತೀರ್ಮಾನಿಸಲು, ಬೇರೆ ರಾಜ್ಯಗಳ ಮತ್ತು ಬೇರೆ ಭಾಷೆಗಳ ರಾಜ್ಯಪಾಲರಾಗಲೀ, ಅಧಿಕಾರಿಗಳಾಗಲೀ, ನ್ಯಾಯಾಧೀಶರಾಗಲೀ ಏಕೆ ಬೇಕು? ಕೇಂದ್ರದ ಮೇಲುಗೈಯೇ ರಾಷ್ಟ್ರೀಯತೆ; ಸ್ಥಳೀಯತೆ ಎಂದರೆ ಸಂಕುಚಿತತೆ ಎಂಬಂತಾಗಿದೆ. ಲಾಭಕೋರತನಕ್ಕಾಗಿ ಸದಾ ವಲಸೆಯಲ್ಲಿರುವ ವ್ಯಾಪಾರೋದ್ಯಮಿಗಳ ಹಿತ ರಕ್ಷಣೆಗಾಗಿ ರಾಷ್ಟ್ರೀಯತೆಯ ಹೆಸರಿನಲ್ಲಿ, ಸ್ಥಳಿಯ ಜನರ ಭಾಷೆ, ಸಂಸ್ಕೃತಿ ಮತ್ತು ಉದ್ಯೋಗ–ಅಭಿವೃದ್ಧಿಯ ಕೆಲಸಗಳಿಗೆ ತಡೆಯೊಡ್ಡುವಂತಹ ಕಾನೂನುಗಳನ್ನು ಜಾರಿಗೊಳಿಸಲಾಗಿದೆ. ಶಾಲಾ ಶಿಕ್ಷಣ ಮಾಧ್ಯಮದ ಪ್ರಶ್ನೆ, ಸರೋಜಿನಿ ಮಹಿಷಿ ವರದಿಯ ಅನುಷ್ಠಾನದ ಸಮಸ್ಯೆ ಇದಕ್ಕೆ ಎರಡು ಜ್ವಲಂತ ಉದಾಹರಣೆಗಳಷ್ಟೆ. ಇದು ಸ್ವಾತಂತ್ರ್ಯ ಹೋರಾಟದಲ್ಲಿ ಮೂಡಿದ ರಾಷ್ಟ್ರೀಯತೆಯ ವಿಕ್ಷಿಪ್ತ ರೂಪವಾಗಿದೆ.

ಭಾಷಾ ರಾಷ್ಟ್ರೀಯತೆಗಳೇ ಭಾರತದ ನಿಜವಾದ ರಾಷ್ಟ್ರೀಯತೆಗಳಾಗಿದ್ದು, ಸ್ವಾತಂತ್ರ್ಯ ಹೋರಾಟ ಇವನ್ನೆಲ್ಲ ಜೋಡಿಸಿ ಆ ತಂತ್ರವನ್ನಷ್ಟೆ ರಾಷ್ಟ್ರವೆಂದು ಕರೆಯಿತು. ಆದರಿಂದು ತಂತ್ರವೇ ರಾಷ್ಟ್ರವಾಗಿ, ನೆಲ ಮತ್ತು ಜನಗಳನ್ನೊಳಗೊಂಡ ರಾಷ್ಟ್ರೀಯತೆಗಳನ್ನು 'ಇಂತೀ ತಮ್ಮ ವಿಧೇಯ' ಸ್ಥಾನಕ್ಕೆ ಇಳಿಸಲಾಗಿದೆ. ಇದರ ವಿರುದ್ಧ ಅಸಮಧಾನಗಳು ಅನೇಕ ಬಾರಿ ಅನೇಕ ರೂಪಗಳಲ್ಲಿ ಭುಗಿಲೆದ್ದಿವೆ. ಆದರೆ ರಾಷ್ಟ್ರೀಯತೆಯ ಹೆಸರಿನಲ್ಲಿ ಅವನ್ನು ದಮನ ಮಾಡಲಾಗಿದೆ. ಆದರೀಗ ಅದನ್ನು ರಾಷ್ಟ್ರವನ್ನು ಬಲಪಡಿಸುವ ಭಾವನೆಯೊಂದಿಗೆ, ಪ್ರಜಾಸತ್ತಾತ್ಮಕ ರೀತಿಯಲ್ಲೇ ಬಗೆಹರಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಬೇಕಿದೆ.

ಆಶ್ಚರ್ಯವೆಂದರೆ ಇದರ ಮೊದಲ ಪ್ರಯತ್ನ, ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಅಸಂಗತ ಮಟ್ಟಕ್ಕೆ ಒಯ್ದಿರುವ ನಿಮ್ಮ ಪಕ್ಷದ ಮುಖ್ಯಮಂತ್ರಿಯೊಬ್ಬರಿಂದಲೇ ಆರಂಭವಾಗಿದೆ!

ನಿಮ್ಮ ಪಕ್ಷದ ಕಾರ್ಯಕರ್ತರ ಆರಾಧ್ಯ ದೈವವೆನಿಸಿರುವ ನರೇಂದ್ರ ಮೋದಿ, ಕೇಂದ್ರದ ಆರ್ಥಿಕತೆಯಿಂದ ಗುಜರಾತ್ ರಾಜ್ಯದ ಆರ್ಥಿಕತೆಯ ವಿಮೋಚನೆ ಬಯಸಿದ್ದಾರೆ. ಈ ಬಯಕೆಯನ್ನು ವ್ಯಕ್ತಪಡಿಸಿದ್ದಕ್ಕಾಗಿ ಅಫ್ಜಲ್ ಗುರುವಿನೊಡನೆ ನೇಣು ಏರಲೂ ಅವರು ಸಿದ್ಧವಾಗಿದ್ದಾರೆ! ಇನ್ನು ಈ ವಿಷಯದಲ್ಲಿ ಎಲ್ಲರಿಗೂ ಮುಂದಿರುವ ತಮಿಳ್ನಾಡಂತೂ ಈಗಾಗಲೇ ರಾಜ್ಯ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳಲು ಸಂವಿಧಾನ ಪರಿಷ್ಕಾರಕ್ಕಾಗಿ ಒತ್ತಾಯಿಸುವ ಬೇಡಿಕೆಯನ್ನು ತನ್ನ ರಾಜ್ಯಪಾಲರ ಭಾಷಣದ ಮೂಲಕವೇ ಮಂಡಿಸಿ, ಶಾಸನ ಸಭೆಯ ಒಪ್ಪಿಗೆಯನ್ನೂ ಪಡೆದಿದೆ. ಇಂತಹ ಸಂದರ್ಭದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವೂ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಜನರ ಅಭಿವೃದ್ಧಿಗೆ ಭಂಗ ತರುವಂತಿರುವ ಕೇಂದ್ರ-ರಾಜ್ಯ ಸಂಬಂಧದ ನೆಲೆಗಳ ಬಗ್ಗೆ ಅಧ್ಯಯನ ನಡೆಸಲು ಸಂವಿಧಾನ ತಜ್ಞರ ಒಂದು ತಂಡ ರಚಿಸಿ, ಸೂಕ್ತ ಶಿಫಾರ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸುವ ವ್ಯವಸ್ಥೆ ಮಾಡಬೇಕು. ಇದನ್ನು, ಎಂದೋ ಮುಂದೊಂದು ದಿನ ಆಗಬೇಕಾದ ಕೆಲಸದ ಆರಂಭವನ್ನಷ್ಟೆ ನಾವು ಮಾಡುತ್ತಿದ್ದೇವೆ ಎಂಬ ತಿಳುವಳಿಕೆಯೊಂದಿಗೆ ಮಾಡಬೇಕು.

–ಇದೆಲ್ಲ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯವ್ಯಾಪ್ತಿಗೆ ಬರುವುದೋ ಇಲ್ಲವೋ ನನಗೆ ತಿಳಿಯದು. ಆದರೆ ಕನ್ನಡದ ನಿಜವಾದ ಅಭಿವೃದ್ಧಿಗೆ ಇವುಗಳೇ ಮೂಲಭೂತ ಆಧಾರಗಳಾಗಿರುವುದರಿಂದ, ಈ ಕೆಲಸಗಳನ್ನು ನಿಮ್ಮ ಸರ್ಕಾರದ ಸಂಬಂಧಪಟ್ಟ ಯಾವುದೇ ಇಲಾಖೆಯಿಂದಲಾದರೂ ಮಾಡಿಸುವ ಜವಾಬ್ದಾರಿ ನಿಮ್ಮದಾಗಿರುತ್ತದೆ. ಇಂತಹ ಆಧಾರಭೂತ ಕೆಲಸಗಳನ್ನು ಮಾಡದೆ, ಸುಮ್ಮನೆ ಟಿಎ, ಡಿಎ ಲೆಕ್ಕದಲ್ಲಿ ಊರೂರು ತಿರುಗುತ್ತಾ, ಸರ್ಕಾರಿ ಕಛೇರಿಗಳ ಕಡತಗಳನ್ನು ತಡಕುತ್ತಾ, ನಿಷ್ಪ್ರಯೋಜಕ ಎಚ್ಚರಿಕೆಯ ಸುತ್ತೋಲೆಗಳನ್ನು ಹೊರಡಿಸುವ ಹಾಸ್ಯಾಸ್ಪದ ಕೆಲಸಗಳನ್ನು ಮಾಡುತ್ತಾ, ಆದರೆ ಸಾರ್ವಜನಿಕ ಭಾಷಣಗಳಲ್ಲಿ ವೀರಾವೇಶದ ಮಾತುಗಳನ್ನಾಡುತ್ತಾ ಕಾಲ ಕಳೆದು, ಕೊನೆಗೆ ಅಧಿಕಾರ ಬಿಡಬೇಕಾದ ಸಂದರ್ಭದಲ್ಲಿ, ಅಧಿಕಾರಗಳೇ ಇಲ್ಲದ ಪ್ರಾಧಿಕಾರವಿದು-ನಿಜವಾದ ಅರ್ಥದಲ್ಲಿ ಏನು ಮಾಡಲೂ ಸಾಧ್ಯವಿಲ್ಲವೆಂದು; ಮೊದಲೇ ಗೊತ್ತಿದ್ದ ಸತ್ಯವನ್ನು ಕೊನೆಯಲ್ಲಿ ಹೇಳುವ ಆತ್ಮದ್ರೋಹಿ ಕೆಲಸ ಮಾಡುವ ಬದಲು, ಸ್ಪಷ್ಟ ಗುರಿ ಮತ್ತು ಕಾರ್ಯಕ್ರಮಗಳೊಂದಿಗೆ ಸರ್ಕಾರದ ಮೇಲೆ ಒತ್ತಡ ಹೇರಿ ನಿಜವಾಗಿ ಕನ್ನಡದ ಕೆಲಸ ಮಾಡಲು ಪ್ರಯತ್ನಿಸಬೇಕು. ಇದು ಸಾಧ್ಯವಿಲ್ಲ ಎನ್ನಿಸುವುದಾದರೆ, ಅಧಿಕಾರ ಬಿಸಾಕಿ ಹೊರಗೆ ಬಂದು, ಅಲ್ಲಿ ಸಾಧ್ಯವಾಗುವ ಕನ್ನಡದ ಕೆಲಸವನ್ನು ಆರಂಭಿಸಬೇಕು.

ಇದು ಸಾಧ್ಯವೇ ನಿಮಗೆ 'ಚಂದ್ರು' ಅವರೇ?

ವಿಶ್ವಾಸದ

ಡಿ. ಎಸ್. ನಾಗಭೂಷಣ

(೧೧ ಜುಲೈ ೨೦೦೮)

೧೦. 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ'

ತಮಿಳಿಗೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಕೇಂದ್ರ ಸರ್ಕಾರ ಪ್ರಕಟಿಸಿದಾಗಿನಿಂದ ವೀರ ಕನ್ನಡಿಗರ ತಳಮಳ ಹೇಳತೀರದಾಗಿದೆ. ನಾಲ್ಕು ವರ್ಷಗಳಿಂದ ಈ ಕನ್ನಡಿಗರ ಅಸಮಾಧಾನ ಒಂದೇ ಸಮನೆ ಹಲವಾರು ರೂಪಗಳಲ್ಲಿ ಭುಗಿಲೇಳುತ್ತಲೇ ಇದೆ. ಕನ್ನಡಕ್ಕೂ ಆ ಸ್ಥಾನಮಾನ ನೀಡಬೇಕೆಂಬ ಬೇಡಿಕೆ ರಾಜ್ಯಾದ್ಯಂತ ಪ್ರತಿಧ್ವನಿಸುತ್ತಿದೆ. ಇನ್ನು ಈ ಕನ್ನಡದ ಸ್ಥಾನಮಾನಕ್ಕಾಗಿ ಹೋರಾಟ ಮಾಡಲು ಮುಂದೆ ಬರದಿರುವ ರಾಜಕೀಯ ಪಕ್ಷವೇ ಇಲ್ಲವೆನ್ನುವಂತಾಗಿದೆ. ಆದರೆ, ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದ ಮೂರೂ ರಾಜಕೀಯ ಪಕ್ಷಗಳು ಅಧಿಕಾರ ನಡೆಸಿದ್ದರೂ, ಅವು ಈ ದಿಸೆಯಲ್ಲಿ ಏನೂ ಮಾಡಲಾಗದಾಗಿವೆ. ಇದರ ಜವಾಬ್ದಾರಿಯನ್ನು ಹೊತ್ತಿದ್ದಂತೆ ಅಥವಾ ಹೊರಿಸಲಾಗಿದ್ದಂತೆ ತೋರಿದ ಎಂ.ವಿ. ರಾಜಶೇಖರನ್ ಕೇಂದ್ರದಲ್ಲಿ ಮಂತ್ರಿ ಪದವಿ ಕಳೆದುಕೊಂಡು ವಿಧಾನ ಪರಿಷತ್ತಿಗೆ ಬಂದಿದ್ದಾರೆ! ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕನ್ನಡ ಅಭಿವೃದ್ಧಿಯ ವಿಶೇಷ ಪ್ರಸ್ತಾಪ ಮಾಡಿದ್ದ ಬಿಜೆಪಿ, ಅದಕ್ಕೆ ತಕ್ಕಂತೆ ಈಗ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ನೀಡುವಂತೆ ಪ್ರಧಾನಿಯನ್ನು ಒತ್ತಾಯಿಸಲು ಹಿರಿಯ ಸಾಹಿತಿಗಳ ನಿಯೋಗವೊಂದನ್ನು ದೆಹಲಿಗೆ ಕರೆದುಕೊಂಡು ಹೋಗಿ, ಈ ಸಾಹಿತಿಗಳಿಗೆ ಪ್ರಧಾನಿಯ ಭೇಟಿ ಲಭ್ಯವಾಗದ ಮುಜುಗರದೊಡನೆ ಹಿಂತಿರುಗಿದ್ದೂ ಆಗಿದೆ! ಅಂತೂ ಕನ್ನಡಿಗರ ಕಸಿವಿಸಿಗೆ ಕೊನೆಯಿಲ್ಲದಂತಾಗಿದೆ.

ತಮಿಳರಿಗೆ ಸಿಗುವುದೆಲ್ಲ ಕನ್ನಡಿಗರಿಗೂ ಸಿಗಬೇಕು. ಇದು ಕರ್ನಾಟಕ ಏಕೀಕರಣೋತ್ತರದಲ್ಲಿ ಕಂಡುಬರುತ್ತಿರುವ 'ಕನ್ನಡತನ'ದ ಒಂದು ಸ್ಥಾಯೀಭಾವವಾಗಿಬಿಟ್ಟಿದೆ! ತಮಿಳಿಗೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ನೀಡುವವರೆಗೂ ಕನ್ನಡಿಗರಿಗೆ ಶಾಸ್ತ್ರೀಯ ಭಾಷೆಯ ಕಲ್ಪನೆಯಾಗಲೀ, ಆ ಸ್ಥಾನಮಾನ ಕನ್ನಡಕ್ಕೆ ಒದಗಬೇಕೆಂಬ ಆಶಯವಾಗಲೀ ಇದ್ದುದು ಎಲ್ಲೂ ದಾಖಲಾದಂತಿಲ್ಲ. ತಮಿಳಿಗೆ ಆ ಸ್ಥಾನಮಾನ ದೊರೆತ ಮೇಲೇ ಕನ್ನಡಿಗರು, ಕನ್ನಡ ವಿದ್ವಾಂಸರು ಮತ್ತು ಸಂಶೋಧಕರು ಹಾಗೆಂದರೇನು ಎಂದು ತಿಳಿದುಕೊಳ್ಳಲು ಆಸಕ್ತಿ ವಹಿಸತೊಡಗಿದ್ದು. ಇನ್ನು ಇದಕ್ಕಾಗಿ ವ್ಯಗ್ರರಾಗಿ ಆಗಾಗ್ಗೆ ಚಳುವಳಿ ಹೂಡುತ್ತಿರುವ ಹೋರಾಟಗಾರರಿಗಂತೂ ನಾಲ್ಕು ವರ್ಷಗಳ ನಂತರವೂ ಶಾಸ್ತ್ರೀಯ ಭಾಷೆ ಎಂದರೇನು ಎಂಬುದು ತಿಳಿದಂತಿಲ್ಲ. ತಿಳಿದಿದ್ದರೆ, ಅದಕ್ಕಾಗಿ ಸ್ವಾಭಿಮಾನ ತೊರೆದು ಹೀಗೆ ಕಾಡಿ ಬೇಡುವ ಕೆಲಸಗಳಲ್ಲಿ ತೊಡಗುತ್ತಿರಲಿಲ್ಲ. ಬದಲಿಗೆ, ತಮಿಳಿಗೆ ಈ ಸ್ಥಾನಮಾನ ಹೇಗೆ ಮತ್ತು ಏಕೆ ದೊರಕಿತು ಎಂಬುದನ್ನು ತಿಳಿಯುವ

ಕಡೆ ಗಮನ ನೀಡಿ, ಕನ್ನಡ ಭಾಷೆಯನ್ನು ಅದಕ್ಕಾಗಿ ಸಿದ್ಧಪಡಿಸುವ ರೀತಿಯಲ್ಲಿ ತನ್ನ ಚಳುವಳಿಯನ್ನು ಪುನರೂಪಿಸಿಕೊಳ್ಳುತ್ತಿತ್ತು. ಆದರೆ ತಮಿಳಿಗೆ ಕೊಟ್ಟ ಮೇಲೆ ನಮಗೇಕೆ ಕೊಡಬಾರದು, ನಾವು ಅವರಿಗಿಂತ ಏನು ಕಡಿಮೆ ಎಂಬ ಮತ್ಸರಪೂರಿತ ಮನೋಭಾವನೆಯಷ್ಟೇ ಕನ್ನಡ ಹೋರಾಟಗಾರರ–ಇದರಲ್ಲಿ ಕೆಲ ಹಿರಿಯ 'ಸಾಹಿತಿ'ಗಳೂ ಸೇರಿದ್ದಾರೆ–ಚಳುವಳಿಯನ್ನು ನಿಯಂತ್ರಿಸುತ್ತಿರುವಂತೆ ತೋರುತ್ತಿದೆ.

ಹೌದು, ರಾಜ್ಯ ಸರ್ಕಾರ ಕನ್ನಡವೂ ಶಾಸ್ತ್ರೀಯ ಭಾಷೆಯ ಸ್ಥಾನಮಾನಕ್ಕೆ ಅರ್ಹವಾಗಿದೆ ಎಂದು ಸಾಬೀತುಪಡಿಸುವಂತಹ ದಾಖಲೆಗಳನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಕೇಂದ್ರದ ಸಂಸ್ಕೃತಿ ಇಲಾಖೆ ಇವುಗಳ ಪರಿಶೀಲನೆಗಾಗಿ ಒಂದು ಸಮಿತಿಯನ್ನೂ ರಚಿಸಿದೆ. ಕನ್ನಡದವರ ಗಲಾಟೆಯಿಂದ ಸ್ಫೂರ್ತಿಗೊಂಡ ತೆಲುಗಿನವರೂ, ತಮ್ಮ ಭಾಷೆಗೂ ಶಾಸ್ತ್ರೀಯ ಸ್ಥಾನಮಾನ ಬೇಕೆಂದು ಮನವಿ-ದಾಖಲೆಗಳನ್ನು ಸಲ್ಲಿಸಿದ್ದಾರೆ. ಸಮಿತಿ ಬರುವ ಆಗಸ್ಟ್‌ನಲ್ಲಿ ಸಭೆ ಸೇರಿ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವುದೆಂದು ಈ ಸಮಿತಿಯ ಓರ್ವ ಸದಸ್ಯರಾದ ಮೈಸೂರಿನ ಕೇಂದ್ರೀಯ ಭಾಷಾ ಸಂಸ್ಥಾನದ ನಿರ್ದೇಶಕ ಉದಯನಾರಾಯಣ ಸಿಂಗ್ ಹೇಳಿದ್ದಾರೆ. ಆದರೆ ಸಮಿತಿಯೊಳಗೇ ಈ ಎರಡೂ ಭಾಷೆಗಳಿಗೆ ಶಾಸ್ತ್ರೀಯ ಸ್ಥಾನಮಾನ ನೀಡುವ ಬಗ್ಗೆ ವಿರೋಧವಿದೆ ಎಂದು ಹೇಳಲಾಗಿದೆ. ಕಾರಣ, ಶಾಸ್ತ್ರೀಯ ಸ್ಥಾನಮಾನ ನೀಡಿಕೆ ರಾಜಕೀಯ ಮೇಲಾಟದ ವಿಷಯವಾಗದೆ, ಅದು ಅಂತಾರಾಷ್ಟ್ರೀಯ-ಯುನೆಸ್ಕೋ-ಮಟ್ಟದಲ್ಲೂ ತನ್ನ ಘನತೆ ಉಳಿಸಿಕೊಳ್ಳುವ ಜಾಗತಿಕ ಭಾಷಾ ಪರಂಪರೆ ರಕ್ಷಣೆಯ ವಿಶಿಷ್ಟ ಕೆಲಸವೂ ಅನ್ನಿಸಿಕೊಳ್ಳಬೇಕಾಗಿದೆ. ಏಕೆಂದರೆ, ಶಾಸ್ತ್ರೀಯ ಭಾಷೆ ಎಂಬುದೇ ಅಂತಾರಾಷ್ಟ್ರೀಯ ಶೈಕ್ಷಣಿಕ ವಲಯದ ಒಂದು ಪರಿಕಲ್ಪನೆಯಾಗಿದ್ದು, ಅದರ ಪಾವಿತ್ರ್ಯ ನಿಕಷಕ್ಕೊಡ್ಡಲ್ಪಡುವುದು ಆ ಮಟ್ಟದಲ್ಲೇ. ಹಾಗೆ ನೋಡಿದರೆ, ತಮಿಳು ಶಾಸ್ತ್ರೀಯ ಭಾಷೆಯ ಸ್ಥಾನಕ್ಕೆ ಅರ್ಹವೆಂಬ ಧ್ವನಿ ಕೇಳಿಬಂದದ್ದು ಅಂತಾರಾಷ್ಟ್ರೀಯ ಮಟ್ಟದ-ಅದೂ ವಿದೇಶೀ-ಭಾಷಾ ಶಾಸ್ತ್ರಜ್ಞರಿಂದಲೇ ಎಂಬುದನ್ನು ನಾವು ಗಮನಿಸಬೇಕು.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಕೊಡಲ್ಪಡುತ್ತದೆ ಎಂದೇ ಆಶಿಸೋಣ. ಆದರೆ ಅದಕ್ಕೆ ಕನ್ನಡ ಒಂದು ಭಾಷೆಯಾಗಿ, ಸಂಸ್ಕೃತಿಯಾಗಿ ಸಿದ್ಧವಾಗಿದೆಯೇ? ಶಾಸ್ತ್ರೀಯ ಸ್ಥಾನಮಾನ ಪಡೆದಿರುವ ತಮಿಳು ಭಾಷೆ ಈ ಸಂಬಂಧ ಎದುರಿಸುತ್ತಿರುವ ಬಿಕ್ಕಟ್ಟನ್ನು, ಮೊನ್ನೆ ಇದಕ್ಕೆ ಸಂಬಂಧಪಟ್ಟ ಯೋಜನೆಗಳ ಪರಿಚಯವಿರುವ ಕನ್ನಡದ ವಿದ್ವಾಂಸರೊಬ್ಬರು ವಿವರಿಸುತ್ತಿದ್ದರು. ಈ ಸ್ಥಾನಮಾನ ಒದಗಿಸುವ ಸವಲತ್ತುಗಳನ್ನು ನಿರ್ವಹಿಸಲು ತಮಿಳು ಶೈಕ್ಷಣಿಕ ವಲಯದಲ್ಲಿ ಆ ಗುಣಮಟ್ಟದ ವಿದ್ವಾಂಸರೇ ಇಲ್ಲವಾಗಿದ್ದಾರೆ! ಈ ವಿಷಯದಲ್ಲಿ ಕನ್ನಡದ ಸ್ಥಿತಿಗತಿಯೇನೂ ಭಿನ್ನವಾಗಿಲ್ಲ. ಇಂದು ನಮ್ಮ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವ ಭಾಷೆ ಮತ್ತು ಸಂಸ್ಕೃತಿ ಸಂಶೋಧನೆಯ ಗುಣಮಟ್ಟವನ್ನು ಗಮನಿಸಿದರೆ, ವಿದ್ವತ್ತೆಂಬುದು ಕಾಣೆಯಾಗಿ ಬಹಳ ವರ್ಷಗಳೇ ಆಗಿವೆ ಎಂಬುದು ಗೊತ್ತಾಗುತ್ತದೆ. ಅದರ ಜಾಗವನ್ನು ಪುಢಾರಿಗಿರಿ, ವಶೀಲಿಬಾಜಿ ಆಕ್ರಮಿಸಿಕೊಂಡಿವೆ. ಇರುವ ನಾಲ್ಕಾರು ಜನ ವಿದ್ವಾಂಸರನ್ನೇ ಕೇಳಿ ನೋಡಿ.

ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಈಗಿರುವ ಯೋಜನೆಗಳನ್ನು ಗುಣಮಟ್ಟ ಕಾಪಾಡಿಕೊಂಡು ಮುಗಿಸಿದರೇ ಸಾಕಾಗಿದೆ ಎನ್ನುತ್ತಿದ್ದಾರೆ ಅವರು.

ಆದರೆ ಇದಾವುದೂ ಗೊತ್ತಿಲ್ಲದ ಸಾಮಾನ್ಯ ಕನ್ನಡಿಗರು ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಕನ್ನಡ ಭುವನೇಶ್ವರಿಯ ಕೊರಳಿಂದ ವಂಚಿತವಾಗಿರುವ ಕಂಠೀಹಾರದಂತೆ ಪರಿಗಣಿಸಿ, ಹಾಹಾಕಾರವೆಬ್ಬಿಸುತ್ತಿದ್ದಾರೆ! ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ತಮಿಳಿಗೆ ನೀಡಲು ಕಾರಣವಾಗಿದೆಯೆಂದು ಕೆಲವು ವಲಯಗಳಲ್ಲಿ ಭಾವಿಸಲಾಗಿರುವ ರಾಜಕೀಯ ಕಾರಣದ ಮೇಲೆ; ತಮಿಳಿಗೆ ಬದಲಾಗಿ, ಹಿಂದಿಗೋ, ಬಂಗಾಳಿಗೋ ನೀಡಿದ್ದರೆ, ಕನ್ನಡಿಗರು ಇಷ್ಟು ಚಿಂತಿತರಾಗಿ, ವ್ಯಗ್ರರಾಗಿ ಗಲಾಟೆ ಮಾಡುತ್ತಿದ್ದರೆ? ಏಕೀಕರಣದ ನಂತರ ಕನ್ನಡ ಸ್ವಾಭಿಮಾನಿ ಚಳುವಳಿ ಬೆಳೆದು ಬಂದಿರುವ ಬಗೆಯನ್ನು ಗಮನಿಸಿದರೆ ಇದು ಅನುಮಾನ ವೆನಿಸುತ್ತದೆ. ಕನ್ನಡ ಸ್ವಾಭಿಮಾನಿ ಚಳುವಳಿ ಜನಪ್ರಿಯ ನೆಲೆಯಲ್ಲಿ ತಮಿಳು ಕೇಂದ್ರಿತವಾಗಿಯೇ, ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ತಮಿಳು ವಿರೋಧಿಯಾಗಿಯೇ ತನ್ನನ್ನು ಕಟ್ಟಿಕೊಳ್ಳುತ್ತಾ ಬಂದಿದೆ. ಇದಕ್ಕೆ ಕನ್ನಡ ಚಳುವಳಿ ಮೂಲತಃ ಬೆಂಗಳೂರು ಕೇಂದ್ರಿತವಾಗಿ ಆರಂಭವಾಗಿ, ಪುಢಾರಿಗಿರಿಯ ರಾಜಕೀಯ ನೆಲೆಗಳನ್ನು ಪಡೆದು ಬೆಳೆದದ್ದೇ ಕಾರಣವಾಗಿರಬಹುದು. ಅದರ ಪರಿಣಾಮವನ್ನು ನಾವಿಂದು ನೋಡುತ್ತಿದ್ದೇವೆ. ಬೆಂಗಳೂರು ಇಂದು ಯಾವ ಪ್ರಾದೇಶಿಕ ಪರಿಮಳವನ್ನೂ ಉಳಿಸಿಕೊಳ್ಳಲಾಗದೆ ಕನ್ನಡಿಗರ ಕೈಬಿಟ್ಟು ಹೋಗುತ್ತಿದೆ. ಅದಕ್ಕೆ-ಬೃಹತ್ ನಗರದ ಅಸಂಸ್ಕೃತಿಗೆ-ಕನ್ನಡಿಗರೂ ನಿಧಾನವಾಗಿ ಹೊಂದಿಕೊಳ್ಳುತ್ತಿದ್ದಾರೆ.

ಸಾಮಾನ್ಯವಾಗಿ ನಿರಭಿಮಾನಿಗಳೆಂದೇ ಹೆಸರಾಗಿರುವ, ಆದರೆ ಸ್ವಾಭಿಮಾನ ಪ್ರಕಟಿಸುವ ಸಂದರ್ಭ ಬಂದಾಗಲೆಲ್ಲ ಅದು ತಮಿಳು ವಿರೋಧಿಯಾಗಿಯೇ ಹೊರ ಹೊಮ್ಮುವಂತಿರುವ ಬೆಂಗಳೂರು ಹಾಗೂ ಅದರ ಸುತ್ತಮುತ್ತಲಿನ ಕನ್ನಡಿಗರ ಈ ವಿಚಿತ್ರ ನಡಾವಳಿಯ ಬಗ್ಗೆ ನನಗೊಂದು ಹೊಸ ಹೊಳಹು ಸಿಕ್ಕಿದ್ದು, ಇತ್ತೀಚೆಗೆ ಪ್ರಕಟವಾದ ಹಿರಿಯ ಇತಿಹಾಸಜ್ಞ ಷ. ಶೆಟ್ಟರ್ ಅವರ 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ' (ಪ್ರ: 'ಅಭಿನವ', ಬೆಂಗಳೂರು) ಎಂಬ ಪುಸ್ತಕವನ್ನು ಓದಿದಾಗ. ಆರಂಭ ಕಾಲದ ದ್ರಾವಿಡ ಸಂಬಂಧಗಳ ಚಿಂತನೆಯನ್ನು ಪರಿಚಯಿಸುವ ಉದ್ದೇಶವುಳ್ಳ ಈ ಪುಸ್ತಕ, ಇಂದು ತಮಿಳ್ನಾಡು ಎಂದು ಕರೆಯಲಾಗುವ ಪ್ರಾಚೀನ 'ತಮಿಳಗಂ'ನ ಪ್ರಾಗೈತಿಹಾಸಿಕ ಹಿನ್ನೆಲೆ ನೀಡುತ್ತಾ, ಇದರ ಒಡಲಾಳದಿಂದಲೇ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳು ತಮ್ಮನ್ನು ಕಟ್ಟಿಕೊಂಡ ಪರಿಯ ಬಗ್ಗೆ ಹಲವು ಹೊಸ ಒಳನೋಟಗಳನ್ನು ನೀಡುತ್ತದೆ. ಆ ಮೂಲಕ ಈವರೆಗೆ ಬೆಳಕೇ ಕಾಣದ ಕನ್ನಡ-ತಮಿಳು ಸಂಬಂಧಗಳ ಹಲವು ನೆಲೆಗಳನ್ನು, ತಮಿಳಿನ 'ಶಂಗಂ' ಸಾಹಿತ್ಯವನ್ನು ನಿರ್ಮಿಸಿದ ಸಾಂಸ್ಕೃತಿಕ ಶಕ್ತಿಗಳ ಹಿನ್ನೆಲೆಯಲ್ಲಿ ಪರಿಚಯಿಸುತ್ತದೆ. ಮುಖ್ಯವಾಗಿ, ಕನ್ನಡ ನುಡಿ ಮತ್ತು ಸಂಸ್ಕೃತಿಗಳ ವಿಕಾಸವನ್ನು ಸಂಸ್ಕೃತದ ಪ್ರಭಾವದ ನೆಲೆಯಲ್ಲಷ್ಟೇ ಅರ್ಥ ಮಾಡಿಕೊಂಡು ಕನ್ನಡ ಸಂಸ್ಕೃತಿ ಚರಿತ್ರೆಯನ್ನು ಕಟ್ಟಿಕೊಂಡಿದ್ದ ನಾವು, ಇದರಿಂದ ಪಡೆದದ್ದೆಷ್ಟು, ಕಳಕೊಂಡಿದ್ದೆಷ್ಟು ಮತ್ತು ಏನು ಎಂಬುದರ ಬಗ್ಗೆ ಚಿಂತನೆ ಮಾಡುವಂತೆ ನಮ್ಮನ್ನು ಪ್ರೇರೇಪಿಸುತ್ತದೆ.

ಕನ್ನಡಕ್ಕೆ 'ಕವಿರಾಜ ಮಾರ್ಗ'ವಿರುವಂತೆ ತಮಿಳಿಗೆ 'ತೊಲ್ಕಾಪ್ಪಿಯಮ್' ಒಂದು ಸಂಸ್ಕೃತಿ ಲಕ್ಷಣ ಗ್ರಂಥ. ಆದರೆ ಅದು ತಮಿಳು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಪ್ರಭಾವಿಸಿರುವಷ್ಟು ಆಳವಾಗಿ 'ಕವಿರಾಜ ಮಾರ್ಗ' ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಪ್ರಭಾವಿಸಿಲ್ಲ ಏಕೆ ಎಂಬುದನ್ನು ಈ ಪುಸ್ತಕ, ಸೂಕ್ಷ್ಮವಾಗಿ ಶೋಧಿಸುವ ಪ್ರಯತ್ನ ಮಾಡುತ್ತದೆ. ಆ ಪ್ರಯತ್ನದ ಮೂಲಕ 'ಕವಿರಾಜ ಮಾರ್ಗ' ಹೇಗೆ 'ದೇಸಿ'ಗೆ ಸ್ಫೂರ್ತಿ ನೀಡದೆ, 'ತಿರುಳ್ಗನ್ನಡ'ದ ಕಲ್ಪನೆಯೊಂದಿಗೆ 'ಮಾರ್ಗ'ದ ಕಡೆಗೇ ಕನ್ನಡ ಸಂಸ್ಕೃತಿಯ ನಡಿಗೆಯನ್ನು ನಿರ್ದೇಶಿಸುವಂತಾಯಿತು ಎಂಬುದರ ಹಿಂದಿನ ರಾಜಕಾರಣದ ಒಳಸುಳಿಗಳ ಪರಿಚಯ ಮಾಡಿಕೊಡುತ್ತದೆ. ಈ ದಿಸೆಯಲ್ಲಿ ನಿರ್ಣಾಯಕ ತೀರ್ಮಾನಗಳನ್ನು ಕೊಡುವಷ್ಟು ಖಚಿತ ಆಕರಗಳು ದೊರೆಯುತ್ತಿಲ್ಲವಾದ್ದರಿಂದ, ಶೆಟ್ಟರ್ ಈ ರಾಜಕಾರಣವನ್ನು 'ಯುಗಧರ್ಮ'ವೆಂದು ಕರೆಯುತ್ತಾರೆ. ಆದರೆ, ಅಶೋಕನ ಕಾಲದ ಆಸುಪಾಸಿನಲ್ಲಿ ಉತ್ತರದ ಮೌರ್ಯ ಸಾಮ್ರಾಜ್ಯ ದಕ್ಷಿಣದ 'ತಮಿಳಗಂ' ಕಡೆಗೆ ವಿಸ್ತರಿಸಲು ಮಾಡಿದ ಪ್ರಯತ್ನಗಳಲ್ಲಿ 'ವಡುಗ'ರೆಂಬ ತಮಿಳೇತರ ದಕ್ಷಿಣ ಕುಲಗಳು ವಹಿಸಿದ 'ಮಧ್ಯವರ್ತಿ' ಪಾತ್ರವೇ, ಕನ್ನಡ ಭಾಷೆ ಮತ್ತು ರಾಜ್ಯಗಳು ಒಡಮೂಡಿದ್ದರ ಹಿಂದಿನ ರಾಜಕಾರಣವನ್ನೂ ಸೃಷ್ಟಿಸಿತು ಎಂಬುದನ್ನು ಅವರು ಪರೋಕ್ಷವಾಗಿ ಸೂಚಿಸುತ್ತಾರೆ.

ಈ ರಾಜಕಾರಣದ ಫಲವಾಗಿ, ತಮಿಳರಿಗೆ ಅರ್ಥವಾಗದ 'ಅಶುದ್ಧ' ತಮಿಳಿನಂತೆ ಕೇಳಿಸುತ್ತಿದ್ದ ಹಲವು ಭಾಷೆಗಳನ್ನಾಡುವ ಒಕ್ಕೂಟದಂತಿದ್ದ ಈ ವಡುಗರಲ್ಲಿ ಕನ್ನಡ, ಲಿಪಿ ಪಡೆದುಕೊಂಡ ಮೊದಲ ಭಾಷೆಯಾಗಿ ಮೂಡಿತು. ಇದರಿಂದಾಗಿ ಕನ್ನಡ ಇನ್ನೂ ತನ್ನದೇ ಲಿಪಿ ಪಡೆಯದ ತಮಿಳು ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನಲ್ಲದೆ ರಾಜಕಾರಣವನ್ನೂ ಪ್ರಭಾವಿಸುವಷ್ಟರ ಮಟ್ಟಿಗೆ ಒಂದು ಸಮಾನಾಂತರ ರಾಜಕೀಯ ಶಕ್ತಿಯಾಗಿಯೂ ಹೇಗೆ ಒಡಮೂಡಿತು ಎಂಬುದರ ಸೂಕ್ಷ್ಮ ವಿವರಗಳನ್ನು ಶೆಟ್ಟರ್ ಈ ಪುಸ್ತಕದಲ್ಲಿ ನೀಡುತ್ತಾರೆ. ಈ ರಾಜಕಾರಣ, ಸಂಸ್ಕೃತಿಯ ನೆಲೆಯಲ್ಲಿ ಇನ್ನಷ್ಟು ಸ್ಪಷ್ಟಗೊಳ್ಳುವುದು, ಈ ಎರಡು ಭಾಷೆಗಳು ಹೊರಗಿಂದ ಬಂದ ಸಂಸ್ಕೃತ ಶಬ್ದಗಳಿಗೆ ತೆರೆದುಕೊಳ್ಳಬೇಕಾದ ರೀತಿ ನೀತಿಗಳ ಬಗ್ಗೆ 'ಕವಿರಾಜ ಮಾರ್ಗ' ಮತ್ತು 'ತೊಲ್ಕಾಪ್ಪಿಯಮ್'ಗಳು ನಿರೂಪಿಸುವ ನಿಯಮಗಳ ವಿಭಿನ್ನ ಸ್ವರೂಪದಲ್ಲಿ. ಈ ಸಂಕೀರ್ಣ ರಾಜಕಾರಣವೇ ಕಾವೇರಿಯೆಂಬ ಒಂದೇ ನದಿಯ ಕಣಿವೆಗಳಲ್ಲಿ ಹುಟ್ಟಿದ ಭಾಷೆಗಳಾಗಿದ್ದ ತಮಿಳು ಮತ್ತು ಕನ್ನಡಗಳನ್ನು, ಕಾಲಾನಂತರದಲ್ಲಿ ವಿರುದ್ಧ ಸಾಂಸ್ಕೃತಿಕ ದಿಕ್ಕುಗಳೆಡೆಗೆ ಎಳೆದುಕೊಂಡು ಹೋದದ್ದು. ಕನ್ನಡದ ಮೂಲ ನೆಲೆಯಲ್ಲಿನ ಈ ಸಾಂಸ್ಕೃತಿಕ ಪಲ್ಲಟವೇ, ಕನ್ನಡಿಗರು ಮತ್ತು ತಮಿಳರ ನಡುವೆ ಇಂದಿಗೂ ಕಾಣುವ ಅಸಹಜ ಸಾಂಸ್ಕೃತಿಕ ಬಿಗುವನ್ನು ಸೃಷ್ಟಿಸಿರುವುದು.

ಇತಿಹಾಸದಲ್ಲಿ ಹೀಗೆ ಕನ್ನಡ ತನ್ನ ಕರುಳ ಬಳ್ಳಿ ಸಂಬಂಧವನ್ನು ಕಳೆದುಕೊಳ್ಳುವಂತಾದ, ಪರಾಕರ್ಷಣೆಯ–'ಆಧುನೀಕರಣ'ದ(?)–ರಾಜಕಾರಣಕ್ಕೆ ಸಿಕ್ಕ ದುರಂತವೇ, ಇಂದು ಕರ್ನಾಟಕದ ಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೊಳಿಸುವ ಸರ್ಕಾರದ ಕ್ರಮವನ್ನು

ಅನೂರ್ಜಿತಗೊಳಿಸಿರುವ ರಾಜ್ಯ ಹೈಕೋರ್ಟ್ ತೀರ್ಪನ್ನು ಅನೇಕ ಕನ್ನಡಿಗರು ವಿಜಯ ಚಿಹ್ನೆ ತೋರಿಸುತ್ತಾ, ಸಂಭ್ರಮದಿಂದ ಹಲ್ಕಿರಿದು ಸ್ವಾಗತಿಸುವಂತೆ ಮಾಡಿರುವುದು ಕೂಡಾ ಎಂದರೆ ತಪ್ಪಾಗಲಾರದು. ಅದೇನೇ ಇರಲಿ, ಕನ್ನಡ ಮಾಧ್ಯಮದ ಆಜ್ಞೆ ಅನೂರ್ಜಿತಗೊಂಡಿತೆಂದು ನೆಮ್ಮದಿಯ ನಿಟ್ಟುಸಿರು ಬಿಡುವ ಕನ್ನಡಿಗರೇ ತಮ್ಮ ಭಾಷೆಗೆ ಶಾಸ್ತ್ರೀಯ ಭಾಷಾ ಸ್ಥಾನಮಾನಕ್ಕಾಗಿಯೂ ಹೊಡೆದಾಡಬಲ್ಲರು ಎಂಬುದೇ ಇಲ್ಲಿನ ವಿಪರ್ಯಾಸ! ತಮ್ಮ ಭಾಷೆಯ ಸ್ಥಾನಮಾನವನ್ನು ತಮಿಳಿನ ಸ್ಥಾನಮಾನದೊಂದಿಗಷ್ಟೇ ಹೋಲಿಸಿಕೊಂಡು ಅದನ್ನು ಸಂರಕ್ಷಿಸಿಕೊಳ್ಳುವಷ್ಟು ಮಾನಧನರಾದ ಕನ್ನಡಿಗರು, ತಮ್ಮ ಭಾಷೆಯ ಬಗ್ಗೆ ನಿಜವಾಗಿ ಎಷ್ಟು ಆಳವಾದ ಅಭಿಮಾನವನ್ನು ಹೊಂದಿದ್ದಾರೆ ಎಂಬುದನ್ನು ಷ. ಶೆಟ್ಟರ್ ಅವರು ತಮ್ಮ ಪುಸ್ತಕದಲ್ಲಿ ಸೂಚಿಸಿರುವುದು ಹೀಗೆ: ‘ತಮ್ಮ ಸಾಹಿತ್ಯವನ್ನು ಪರಭಾಷೀಯರಿಗೆ ಪರಿಚಯಿಸುವ ಕಾರ್ಯವನ್ನು ತಮಿಳು ಭಾಷಾ ಪಂಡಿತರು ಬಹುಶಃ ಉಳಿದೆಲ್ಲ ಭಾಷಾ ಪಂಡಿತರಿಗಿಂತಲೂ– ಖಂಡಿತವಾಗಿಯೂ ಕನ್ನಡ ಕೃತಿಗಳನ್ನು ಪರಿಚಯಿಸಲು ಮಾಡಿದ ನಮ್ಮ ಪರಿಶ್ರಮಕ್ಕಿಂತಲೂ ಸರಿ ಸುಮಾರು ನೂರು ಪಟ್ಟು-ಹೆಚ್ಚು ಶ್ರಮ ಮತ್ತು ಶ್ರದ್ಧೆಯಿಂದ ಪೂರೈಸಿಕೊಟ್ಟಿರುವರು.’

ತಮಿಳರಂತೆ ತಮ್ಮ ಭಾಷೆಯ ಬಗ್ಗೆ ನಿಜವಾದ ಶ್ರದ್ಧೆಯನ್ನಾಗಲೀ, ಪರಿಶ್ರಮವನ್ನಾಗಲೀ ಪ್ರದರ್ಶಿಸದ ಕನ್ನಡಿಗರು ತಮ್ಮ ಭಾಷೆಗೆ ತಮ್ಮದೇ ಬದುಕಿನಲ್ಲಿ ತಾವು ಕೊಡಲಾಗದ ಮಾನ್ಯತೆಯನ್ನು ಇತರರು ಕೊಡಬೇಕೆಂದು ಬಯಸುವ ಹುಸಿ ಆತ್ಮಾಭಿಮಾನದ ರೋಗಕ್ಕೆ ತುತ್ತಾಗಿ ಬಳಲುತ್ತಿದ್ದಾರೆ. ಈ ರೋಗದಿಂದ ಮುಕ್ತರಾಗದ ಹೊರತು ಕನ್ನಡಿಗರಿಗೆ ಮತ್ತು ಕನ್ನಡಿಗರಿಗೆ ಮುಕ್ತಿಯಿಲ್ಲ. ಇದೇ ‘ಶಂಗಂ ತಮಿಳಗಂ’ ಪುಸ್ತಕ ನೀಡುವ ಮುಖ್ಯ ಸಾಂಸ್ಕೃತಿಕ ಹೊಳಹು ಕೂಡಾ ಎಂದು ನಾನು ಭಾವಿಸಿದ್ದೇನೆ.

(೧೮ ಜುಲೈ ೨೦೦೮)

■

೧೧. ರಾಷ್ಟ್ರ ಭಕ್ತರ ರಾಷ್ಟ್ರದ್ರೋಹ!

ಬಿಜೆಪಿ ತನ್ನನ್ನು ರಾಷ್ಟ್ರೀಯ ಪಕ್ಷ ಎಂದು ಕರೆದುಕೊಳ್ಳುತ್ತದೆ. ಅಷ್ಟೇ ಅಲ್ಲ, ರಾಷ್ಟ್ರೀಯತೆಯನ್ನು ಗುತ್ತಿಗೆ ಹಿಡಿದ ಪಕ್ಷದಂತೆಯೂ ವರ್ತಿಸುತ್ತಾ ಬಂದಿದೆ. 'ಭಾರತ ಮಾತೆ' ಎಂದು ಅದು ಕಲ್ಪಿಸಿಕೊಂಡ ಚಿತ್ರಕ್ಕೆ ಪೂಜೆ ಮಾಡುತ್ತ ತನ್ನನ್ನು ರಾಷ್ಟ್ರ ಭಕ್ತರ ಪಕ್ಷವೆಂದೂ ಕರೆದುಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ 'ಸಾಂಸ್ಕೃತಿಕ ರಾಷ್ಟ್ರೀಯತೆ' ಎಂಬುದೊಂದನ್ನು ನಿರೂಪಿಸಿಕೊಂಡು ರಾಷ್ಟ್ರಾದ್ಯಂತ ಅನೇಕ ರೀತಿಯ ಧಾರ್ಮಿಕ ಮೆರವಣಿಗೆಗಳನ್ನೂ, ಜಾಥಾಗಳನ್ನೂ, ಅಭಿಯಾನಗಳನ್ನೂ ನಡೆಸಿ, ಕೆಲವೇ ರಾಜ್ಯಗಳಲ್ಲಿದ್ದ ತನ್ನ ಪ್ರಭಾವವನ್ನು ಹಲವು ರಾಜ್ಯಗಳಿಗೆ ವಿಸ್ತರಿಸಿಕೊಂಡು, ಕೇಂದ್ರದಲ್ಲೂ ಒಮ್ಮೆ ಅಧಿಕಾರ ನಡೆಸಿದೆ. ಈಗ ಕರ್ನಾಟಕದ ಮೂಲಕ ಈವರೆಗೆ ಕಾಲಿಡಲಾಗದಿದ್ದ ದಕ್ಷಿಣ ಭಾರತಕ್ಕೂ ಅಧಿಕಾರದ ಕಾಲು ಇಟ್ಟಿದೆ. ಆದರೆ ಅದು ಹಾಗೆ ಕಾಲಿಡುವಾಗ, ಮೊದಲ ಹೆಜ್ಜೆಯಲ್ಲೇ ತನ್ನ ಮುಖಕ್ಕೆ ಪೂರ್ತಿ ಮಸಿ ಬಳಿದುಕೊಂಡೇ ಕಾಲಿಟ್ಟಿದೆ. ಪಕ್ಷೇತರರನ್ನು ಬಿಜೆಪಿ ಅಕ್ಷರಶಃ (ಗಣಿ ಧಣಿಗಳ ಹೆಲಿಕಾಪ್ಟರುಗಳಲ್ಲಿ)'ಹಾರಿಸಿಕೊಂಡು' ಬಂದ 'ಬಗೆ'ಗಳನ್ನು ಜನತೆ ಇನ್ನೂ ಜೀರ್ಣಿಸಿಕೊಳ್ಳುತ್ತಿರುವಾಗಲೇ, ಅದು ಇತರ ಪಕ್ಷಗಳ ಐವ್ವರು ಶಾಸಕರನ್ನು ಭೂಗತ ಕಾರ್ಯಾಚರಣೆಯ ಮೂಲಕ 'ಅಪಹರಿಸಿ'ಕೊಂಡು ಬಂದಿರುವ ಬಗೆ ಎಲ್ಲರನ್ನೂ ಬೆಚ್ಚಿ ಬೀಳಿಸಿದೆ. ತಾನು 'ವಿಭಿನ್ನ' ಎಂದು ಹೇಳಿಕೊಂಡು ಅಧಿಕಾರದ ಹತ್ತಿರಕ್ಕೆ ಬಂದ ಪಕ್ಷ ಈಗ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಬಹಿರಂಗವಾಗಿಯೇ, ತಾನು ಇತರ ಪಕ್ಷಗಳಿಂದ ಕಲಿಯಬೇಕಾದ್ದೆನ್ನೆಲ್ಲ ಕಲಿತು ಅವುಗಳನ್ನು ಚಾಲ್ತಿಗೆ ತರಲು ಸಿದ್ಧವಾಗಿರುವುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುವ ಭಂಡ ಧೈರ್ಯ ಪ್ರದರ್ಶಿಸಿದೆ. ಅಲ್ಲದೆ, ಅವನ್ನು ಕೂಡಲೇ ಚಾಲ್ತಿಗೂ ತಂದು ತನ್ನ ಅಧಿಕಾರವನ್ನು ಸ್ಥಿರಗೊಳಿಸಿಕೊಳ್ಳುವ ಪ್ರಯತ್ನ ಮಾಡಿದೆ! ನಿಜವಾಗಿಯೂ ಈ ಪಕ್ಷ 'ವಿಭಿನ್ನ'ವೇ!!

ಪಕ್ಷಾಂತರ ನಮ್ಮ ರಾಜಕಾರಣದಲ್ಲಿ ಹೊಸದೇನಲ್ಲ. ಕೆಲವು ಪಕ್ಷಾಂತರಗಳು ನಿಜವಾಗಿಯೂ ತಾತ್ವಿಕ ಕಾರಣಗಳ ಮೇಲೆ ಅನಿವಾರ್ಯವೆಂಬಂತೆ ನಡೆದಿದ್ದಿರೆ, ಬಹಳಷ್ಟು ಪಕ್ಷಾಂತರಗಳು ಹಣ-ಅಧಿಕಾರಗಳಿಗೆಂದೇ ದಿಢೀರನೆ ನಡೆದಿವೆ ಹಾಗೂ ಅವು ಸಹಜವಾಗಿಯೇ ಖಂಡನೆಗೆ ಒಳಗಾಗಿವೆ. ಆದರೆ ಕರ್ನಾಟಕದಲ್ಲಿ ಈಗ ನಡೆದಿರುವುದು ಇಂತಹ ಹಳೆಯ ಶೈಲಿಯ ಪಕ್ಷಾಂತರವಲ್ಲ. ಬದಲಿಗೆ ಅದು, ನಮ್ಮ ಪ್ರಜಾಪ್ರಭುತ್ವದ ಮೂಲಾಧಾರವಾದ ಪಕ್ಷ ರಾಜಕಾರಣವನ್ನೇ ಅಸಂಗತ ಮತ್ತು ಹಾಸ್ಯಾಸ್ಪದಗೊಳಿಸುವಂತಹ ಬುಡಮೇಲು ಕೃತ್ಯ.

ತಾವು ಚುನಾಯಿತರಾದ ಒಂದೂವರೆ ತಿಂಗಳಲ್ಲೇ ತಮ್ಮನ್ನು ಪೋಷಿಸಿದ ಪಕ್ಷಕ್ಕೆ ಮತ್ತು ಆರಿಸಿದ ಜನರ ಕಪಾಳಕ್ಕೆ ಬಾರಿಸಿದಂತೆ ಪಕ್ಷಾಂತರ ಮಾಡಿರುವ ಈ ಶಾಸಕರು, ತಮ್ಮ ಈ ಪಕ್ಷಾಂತರಕ್ಕೆ ನೀಡಿರುವ ಕಾರಣಗಳು ಇಲ್ಲಿ ಪ್ರಸ್ತಾಪಿಸುವುದೂ ಅನವಶ್ಯಕವೆನ್ನಿಸುವಷ್ಟರ ಮಟ್ಟಿಗೆ ಬೇಜವಾಬ್ದಾರಿಯವೂ, ಕ್ಷುದ್ರವೂ ಆಗಿವೆ. ಪಕ್ಷಾಂತರ ಮಾಡಿದ ತಕ್ಷಣ ಅವರು ಅಲಂಕರಿಸಿರುವ ಅಧಿಕಾರ ಸ್ಥಾನಗಳೇ ಈ ಪಕ್ಷಾಂತರಿಗಳ ನೀಚ ಉದ್ದೇಶಗಳನ್ನು ಸ್ಪಷ್ಟಪಡಿಸುತ್ತವೆ. ಆದರೆ ಇದಕ್ಕಿಂತ ಹೆಚ್ಚಾಗಿ, ಈ ಪಕ್ಷಾಂತರಗಳನ್ನು ಅವರವರ ಶಾಸಕ ಸ್ಥಾನಗಳಿಗೆ ರಾಜೀನಾಮೆ ನೀಡಿಸಿ ಮತ್ತೆ ಮರುಚುನಾವಣೆಗಳಲ್ಲಿ ಅವರನ್ನು ಗೆಲ್ಲಿಸಿಕೊಡುವ ಭರವಸೆಯೊಂದಿಗೆ ಮಾಡಲಾಗಿದೆ ಎಂಬುದೇ ಈ ವಿದ್ಯಮಾನದ ಅತ್ಯಂತ ಭಯಾನಕವೆನಿಸುವ ಮುಖವಾಗಿದೆ. ಅಂದಹಾಗೆ, ತಮ್ಮನ್ನು ಆರಿಸಿದ ಮತದಾರರ ಮುಖಕ್ಕೆ ಬಾರಿಸಿದಂತೆ ರಾಜೀನಾಮೆ ನೀಡಿರುವ ಈ ಶಾಸಕರು, ಅನತಿ ಕಾಲದಲ್ಲೇ ಅದೇ ಮತದಾರರಿಂದ ಮತ್ತೆ ಆರಿಸಿ ಬರುವ ಭರವಸೆಯನ್ನಾದರೂ ಯಾವ ಧೈರ್ಯದ ಮೇಲೆ ಹೊಂದಿದ್ದಾರೆ?

ಅದು ಹಣದ ಭರವಸೆ. ಮತದಾರರ ಎಂತಹ ನೈತಿಕ ಕ್ರೋಧವನ್ನೂ ಮಣಿಸಬಲ್ಲ, ತಣಿಸಬಲ್ಲ ಹಣದ ರಾಶಿ ರಾಶಿಯ ಭರವಸೆ. ಈವರೆಗೆ ಮತದಾರರ ಕಲ್ಪನೆಗೂ ಸಿಗದಿದ್ದಷ್ಟು ಹಣವನ್ನು ಚೆಲ್ಲಿದರೆ, ಎಂತಹ ಕಷ್ಟದ ಕ್ಷೇತ್ರವನ್ನಾದರೂ ಸುಲಭವಾಗಿ ಗೆಲ್ಲಬಹುದು ಎಂಬುದು ಕಳೆದ ಚುನಾವಣೆಗಳಲ್ಲಿ ಬಿಜೆಪಿಗೆ ಸಾಬೀತಾಗಿ ಹೋಗಿದೆ. ಹಾಗೆ–ಇತರ ಪಕ್ಷಗಳು ಈವರೆಗೆ ಕಲ್ಪಿಸಿಕೊಳ್ಳಲೂ ಆಗದಷ್ಟು–ಹಣವನ್ನು ಸರಬರಾಜು ಮಾಡಬಲ್ಲವರು ಇಂದು ಆ ಪಕ್ಷದ ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿಕೊಂಡಿದ್ದಾರೆ. ಜೊತೆಗೆ ಕೆಲವು ವೀರಶೈವ ಮಠಾಧೀಶರೂ ಈ ಕಾರ್ಯಾಚರಣೆಗೆ ಕುಮ್ಮಕ್ಕು ನೀಡುತ್ತಿರುವ ಸುದ್ದಿಗಳಿವೆ. ಹೀಗಾಗಿ ಪ್ರಜಾಪ್ರಭುತ್ವದ ಮೂಲ ಮೌಲ್ಯಗಳನ್ನು ಬಹಿರಂಗವಾಗಿಯೇ ಧಿಕ್ಕರಿಸುವ ಧಾರ್ಷ್ಟ್ಯ ಈ ಪಕ್ಷಕ್ಕೆ ಬಂದಿದೆ. ಜನಾಭಿಪ್ರಾಯವೆಂಬುದನ್ನೇ ಅಸಂಬದ್ಧ, ಭ್ರಷ್ಟ ಮತ್ತು ಅಪವಿತ್ರಗೊಳಿಸಲೆಣಿಸುವ ಬಿಜೆಪಿಯ ಈ ದುಸ್ಸಾಹಸ, ತನಗೆ ಸ್ಪಷ್ಟ ಬಹುಮತ ನೀಡದ ರಾಜ್ಯದ ಜನತೆಗೆ ತಕ್ಕ ಪಾಠ ಕಲಿಸುವ ಸೇಡಿನ ಕ್ರಮದಂತೆಯೂ ಇದೆ! ಹಾಗೇ, ಹೀಗೆ ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯನ್ನೇ ಅಪಹಾಸ್ಯಕ್ಕೀಡು ಮಾಡುವಂತಹ ರಾಜಕಾರಣ ಮಾಡುವವರು ಸಂಸದೀಯ ಪ್ರಜಾಪ್ರಭುತ್ವದ ವಿಶ್ವಸನೀಯತೆಯ ಬಗ್ಗೆಯೇ ಸಂದೇಹ ಹರಡುತ್ತಿರುವ ನಕ್ಸಲೀಯರನ್ನು ಯಾವ ನೈತಿಕತೆಯ ಮೇಲೆ ವಿರೋಧಿಸುವರೋ ತಿಳಿಯದಾಗಿದೆ!

ಹಾಗೆ ನೋಡಿದರೆ, ಇದು ಮೂಲತಃ ರಾಷ್ಟ್ರದ್ರೋಹಿ ಕೆಲಸವೇ ಆಗಿದೆ. ಏಕೆಂದರೆ, ನಮ್ಮ ರಾಷ್ಟ್ರ, ರಾಷ್ಟ್ರೀಯತೆಗಳೆಂಬ ಪರಿಕಲ್ಪನೆಗಳು ರೂಪುಗೊಂಡಿರುವುದೇ ನಮ್ಮ ಸಂವಿಧಾನದ ಮೂಲಕ ಒಂದು ಪ್ರಜಾಸತ್ತಾತ್ಮಕ ಗಣತಂತ್ರ ವ್ಯವಸ್ಥೆಗೆ ನಮ್ಮನ್ನು ನಾವು ಒಪ್ಪಿಸಿಕೊಂಡಿರುವುದರಿಂದಾಗಿ. ಆದರೆ ಹಣ ಬಲ ಬಳಸಿಕೊಂಡು ಈ ವ್ಯವಸ್ಥೆಗೆ ಸವಾಲೆಸೆಯುವ, ಅದನ್ನು ಅಪಹಾಸ್ಯಗೊಳಿಸುವ ಕರ್ನಾಟಕದ ಈ ಭಂಡ ಪಕ್ಷಾಂತರ ಪ್ರಕರಣ, ನಿಜವಾಗಿ ಒಂದು ರಾಷ್ಟ್ರದ್ರೋಹಿ ಕೆಲಸವೇ ಆಗಿದೆ. ಇದನ್ನು ಆರೆಸ್ಸೆಸ್

ರಾಷ್ಟ್ರಭಕ್ತರೂ ಸಹಿಸುತ್ತಿರುವುದು ಆಶ್ಚರ್ಯಕರವೇನಲ್ಲ. ಏಕೆಂದರೆ, ನಮ್ಮ ಸಂವಿಧಾನ ನಿರೂಪಿಸುವ ರಾಷ್ಟ್ರೀಯತೆಯನ್ನು ಕಟ್ಟಿದ ಸ್ವಾತಂತ್ರ್ಯ ಹೋರಾಟದಲ್ಲಿ ಇವರ್ಯಾರೂ ಭಾಗವಹಿಸಿದವರಲ್ಲ. ಇವರ ಇಂದಿನ ರಾಜಕೀಯ ಮುಖವಾದ ಬಿಜೆಪಿ ಬೆಳೆದಿರುವುದೇ ನಮ್ಮ ರಾಷ್ಟ್ರೀಯ ಹೋರಾಟದ ಆದರ್ಶಗಳ ವಿರುದ್ಧವಿದ್ದ ಪಟ್ಟಭದ್ರ ಹಿತಾಸಕ್ತಿಗಳ ಬೆಂಬಲದಿಂದ. ಹಾಗಾಗಿಯೇ ಯಡಿಯೂರಪ್ಪನವರು ತಾವು ಪ್ರಜಾಪ್ರಭುತ್ವ ವ್ಯವಸ್ಥೆ ಯಿಂದಾಗಿಯೇ ಮುಖ್ಯಮಂತ್ರಿಯಾಗಿರುವುದು ಎಂಬುದನ್ನು ಮರೆತಂತೆ, ಮಧ್ಯಯುಗೀನ ಸಾಮ್ರಾಜ್ಯಶಾಹಿ ರಾಜಕಾರಣದ ಒತ್ತಡಗಳಲ್ಲಿ ಮೂಡಿದ ಚಾಣಕ್ಯನ ತಂತ್ರಗಳ ಹೆಸರಿನಲ್ಲಿ ಈ ಅಸಹ್ಯ ರಾಜಕಾರಣವನ್ನು ಸಮರ್ಥಿಸಿಕೊಳ್ಳಲು ಮುಂದಾಗಿರುವುದು. ಪ್ರಜಾಪ್ರಭುತ್ವದ, ರಾಷ್ಟ್ರ ವ್ಯವಸ್ಥೆಯ ಬುನಾದಿಗೇ ಗೊತ್ತಿದ್ದೋ, ಗೊತ್ತಿಲ್ಲದೆಯೋ ಹೀಗೆ ಕತ್ತಿ ಬೀಸಿರುವ ಯಡಿಯೂರಪ್ಪ ಒಂದಲ್ಲ ಒಂದು ದಿನ ಆ ಕತ್ತಿಗೆ ತಾವೇ ಬಲಿಯಾದರೆ ಆಶ್ಚರ್ಯವಿಲ್ಲ!

ಇಂತಹ ಪರಿಸ್ಥಿತಿಯಲ್ಲಿ ಈ ಪಕ್ಷಾಂತರ ಪ್ರಕರಣವನ್ನು ಖಂಡಿಸಿಯೂ, ಅದು ಕ್ಷಮಾರ್ಹವೆಂದೂ ಧ್ವನಿಸುವ ರೀತಿಯಲ್ಲಿ ಗೌ॥ ಸಂ. ರವೀಂದ್ರ ರೇಷ್ಮೆಯವರು ಇದನ್ನು ಈ ಹಿಂದೆ ಮಹಾರಾಷ್ಟ್ರದಲ್ಲಿ ನಡೆದ ರಾಣೆ ರಾಜೀನಾಮೆ ಪ್ರಕರಣಕ್ಕೆ ಹೋಲಿಸಿ ಲೇಖನ ಬರೆದಿರುವುದು ಮಾತ್ರ ನಿಜವಾಗಿಯೂ ದುಃಖಕರ ಸಂಗತಿ. ಏಕೆಂದರೆ ಅಲ್ಲಿ ನಡೆದದ್ದು, ಇಲ್ಲಿ ನಡೆದಂತಹ ಮಂತ್ರಿ ಪದವಿ ಆಮಿಷಾಧಾರಿತವಾದ ವೈಯುಕ್ತಿಕ ಮಟ್ಟದ ಪಕ್ಷಾಂತರ ಪ್ರಚೋದನೆಯಲ್ಲ. ಅಲ್ಲಿ ರಾಣೆ ಮತ್ತು ಅವರ ಸಮಾನ ಮನಸ್ಕ ಗೆಳೆಯರ ರಾಜೀನಾಮೆಯನ್ನು ಪ್ರಚೋದಿಸಿದ್ದು, ಅವರ ಪಕ್ಷವಾಗಿದ್ದ ಶಿವಸೇನೆಯೊಳಗೆ ಅದರದ್ದೇ ಆದ ಕಾರಣಗಳಿಂದಾಗಿ ಭುಗಿಲೆದ್ದಿದ್ದ ಆಂತರಿಕ ರಾಜಕಾರಣ. ಅದರ ಫಲವನ್ನು ಕಾಂಗ್ರೆಸ್ ತನ್ನ ಲಾಭಕ್ಕಾಗಿ ಬಳಸಿಕೊಂಡಿತಷ್ಟೆ. ಹಾಗೇ, ಅಲ್ಲಿ ರಾಜೀನಾಮೆ ನೀಡಿದವರು ತಮ್ಮ ದೀರ್ಘ ರಾಜಕೀಯ ಅನುಭವದ ಸಾಮರ್ಥ್ಯದ ಆಧಾರದ ಮೇಲೇ ಮರುಚುನಾವಣೆಯನ್ನು ಎದುರಿಸಬಲ್ಲ ಮತ್ತು ಸಚಿವರಾಗಬಲ್ಲ ಸಹಜ ಅರ್ಹತೆಗಳಿದ್ದ ರಾಣೆಯವರಂತಹ ಹಿರಿಯ ನಾಯಕರೇ ಹೊರತು; ಇಲ್ಲಿನಂತೆ, ತಮ್ಮದು ಅಧಿಕಾರ ಪಕ್ಷವಲ್ಲವೆಂದು ಗೊತ್ತಾದೊಡನೆ ವಿಚಲಿತರಾಗಿ ಇತರ ಪಕ್ಷಗಳ ಕಡೆ ಹಣಕುವ ಅನಾಮಿಕ ರಾಜಕೀಯ ಪಡ್ಡೆಗಳಲ್ಲ. ಅಲ್ಲಿನ ಪಕ್ಷಾಂತರದ ಹಿಂದೆ ಕಣ್ಣಿಗೆ ಕಾಣುವಂತಹ ಒಂದು–ರಾಜಕೀಯ ಭಿನ್ನಾಭಿಪ್ರಾಯದ–ತಾತ್ವಿಕ ಕಾರಣವಿತ್ತು. ಆದರೆ ಇಲ್ಲಿ ಹಣ, ಅಧಿಕಾರದ ಆಮಿಷಗಳ ಹೊರತಾಗಿ ಇನ್ನೇನಿತ್ತು? ಇದನ್ನು ಸಿದ್ಧರಾಮಯ್ಯನವರಂತಹ ಸಿದ್ಧರಾಮಯ್ಯನವರೇ 'ದೇವೇಗೌಡ್ರು ಪಕ್ಷಾಂತರ ಮಾಡಿಸಿಲ್ಲವೇನ್ರಿ?' ಎಂದು ಅಸಂಗತವಾಗಿ ತಮ್ಮ ದೇವೇಗೌಡ ಕೇಂದ್ರಿತ ರಾಜಕಾರಣದ ವರಸೆಯಲ್ಲಿ ಕೇಳುತ್ತಾ ತಮ್ಮ ಮುಂದಿನ ರಾಜಕೀಯ ದಾರಿಗೆ ಒಂದು ಸಾಧುತ್ವವನ್ನು ಗಳಿಸಿಕೊಳ್ಳಲು ಹಾಸ್ಯಾಸ್ಪದ ರೀತಿಯಲ್ಲಿ ಯತ್ನಿಸುತ್ತಿರುವಾಗ, ರೇಷ್ಮೆಯರಂತಹವರೂ ಇದರಿಂದ ವಿಚಲಿತರಾದುದರಲ್ಲಿ ಆಶ್ಚರ್ಯವೇನು?

ಅದೇನೇ ಇರಲಿ, ಈ ಅಸಹ್ಯ ರಾಜಕಾರಣದ ಅಪಕೀರ್ತಿಯಲ್ಲಿ ಒಂದು ಪಾಲನ್ನು ಇತರ ಪಕ್ಷಗಳೂ ಹೊರಬೇಕಿದೆ. ಈಗ ಪಕ್ಷಾಂತರ ಮಾಡಿರುವ (ಮತ್ತು ಮಾಡಲು

ಸಿದ್ಧರಿರುವ) ಎಲ್ಲ ಶಾಸಕರೂ ಹಣ ಮತ್ತು ಅಧಿಕಾರದ ಉದ್ದೇಶಗಳಿಂದಲೇ ಆಯಾ ಪಕ್ಷಗಳಲ್ಲಿದ್ದವರು ಮತ್ತು ಇರುವವರು. ಅವರಿಗೆ ಅವರ ಪಕ್ಷಗಳು ಕಳೆದ ಚುನಾವಣೆಗಳಲ್ಲಿ ಟಿಕೆಟ್ ನೀಡಿದ್ದೇ ಅವರ ಹಣ (ಮತ್ತು ಬಹುಶಃ ಜಾತಿಯ) ಬಲದ ಕಾರಣದಿಂದಾಗಿ. ಹೀಗೆ ರಾಜಕೀಯ ತತ್ವವಿರಲಿ, ರಾಜಕೀಯ ಮರ್ಯಾದೆಯ ಮೂಲ ಪಾಠಗಳೂ ಪರಿಚಯವಿಲ್ಲದಂತಹ ಬಹುಪಾಲು ಇಂತಹ ಲಫಂಗರನ್ನು ಕಟ್ಟಿಕೊಂಡು ರಾಜಕಾರಣ ಮಾಡಹೊರಟಿರುವ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು, ಗಣಿ ಹಣ ಮತ್ತು ಕೆಲವು ವೀರಶೈವ ಮಠಾಧೀಶರ ಜಾತೀಯ 'ಕೃಪಾಶೀರ್ವಾದ'ದ ಮೇಲೇ ತನ್ನ ರಾಜಕಾರಣವನ್ನು ಕಟ್ಟಿಕೊಳ್ಳುತ್ತಿರುವ ಬಿಜೆಪಿಯಲ್ಲಿ, ಎಲ್ಲ ವಿಷಯಗಳಲ್ಲೂ ಈಗ ತಮಗೆ ಸೇರಿಗೆ ಸವ್ವಾ ಸೇರು ಹೇಳುವಂತಹ ತಕ್ಕ ಪ್ರತಿಸ್ಪರ್ಧಿಯನ್ನೇ ಕಂಡುಕೊಂಡಿದೆ ಎಂದು ಹೇಳಬೇಕು! ಈಗಲಾದರೂ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಎಚ್ಚೆತ್ತುಕೊಂಡು ತಮ್ಮದೇ ಎನ್ನುವ ವಿಶಿಷ್ಟ ರಾಜಕೀಯ ತತ್ವ ಮತ್ತು ಆದರ್ಶಗಳ ಮೇಲೆ ಮತ್ತು ಅವುಗಳಿಂದ ಆಕರ್ಷಿತರಾಗಿ ಬರುವ ಜನರ ಬೆಂಬಲದ ಮೇಲೆ ಪಕ್ಷ ಕಟ್ಟುವ ಕೆಲಸದಲ್ಲಿ ತೊಡಗದಿದ್ದರೆ, ಅವು ಅನತಿ ಕಾಲದಲ್ಲೇ ಸರ್ವನಾಶವಾಗುವುದು ಖಂಡಿತ. ಅವು ಅನಿಲ್ ಲಾಡ್‌ರಂತಹ ಸಮಾನಾಂತರ ಗಣಿ ಧಣಿಯನ್ನು ನೆಚ್ಚಿಕೊಂಡರೂ ಬಹುಕಾಲ ಉಳಿಯಲಾರವು. ಏಕೆಂದರೆ ಈ ಅನಿಲ್ ಲಾಡ್ ಅಥವಾ ಇತರ ಲಾಡ್‌ಗಳು ಅಧಿಕಾರವಿಲ್ಲದೆಡೆ ಬಹುಕಾಲ ಉಳಿಯಲಾರವು!

ಇದು ಬರಲಿರುವ ಲೋಕಸಭಾ ಚುನಾವಣೆಗಳ ಹೊತ್ತಿಗೆ ಕಾಂಗ್ರೆಸ್ಸಿಗರಿಗೆ ಇನ್ನಷ್ಟು ಸ್ಪಷ್ಟವಾಗಬಹುದು. ಪ್ರಧಾನಿ ಮನಮೋಹನ ಸಿಂಗ್ ಅವರ ಸದ್ಯದ ಅವಸರ ನೋಡಿದರೆ, ಅದು ನಿರೀಕ್ಷಿಸಿದುದಕ್ಕಿಂತ ಬಹು ಬೇಗ ಬರುವಂತೆ ತೋರುತ್ತಿದೆ! ಏಕೆಂದರೆ, ಈ 'ಆಧುನಿಕ' ರಾಷ್ಟ್ರಭಕ್ತರ ರಾಜಕಾರಣ, ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಹಿತ ದೃಷ್ಟಿಯಿಂದ ನೋಡಿದಾಗ, ಪಾರಂಪರಿಕ ರಾಷ್ಟ್ರ ಭಕ್ತಿಯ ಬಿಜೆಪಿಯವರ ರಾಜಕಾರಣಕ್ಕಿಂತ ಕಡಿಮೆ ಅಪಾಯಕಾರಿಯಾಗೇನೂ ಕಾಣುತ್ತಿಲ್ಲ. ಕಳೆದ ಚುನಾವಣೆಗಳಲ್ಲಿ ಸರ್ಕಾರ ರಚಿಸುವಷ್ಟು ಬಹುಮತವಿಲ್ಲದೆ ಒದ್ದಾಡುತ್ತಿದ್ದಾಗ ಬೆಂಬಲ ನೀಡಿ ನಾಲ್ಕು ವರ್ಷಗಳ ಕಾಲ ಆಡಳಿತ ನಡೆಸಲು ಸಹಕರಿಸಿದ ಎಡ ಪಕ್ಷಗಳ ಸ್ನೇಹಕ್ಕಿಂತ, ಈಗ ತನ್ನ ಅಧಿಕಾರಾವಧಿ ಮುಗಿಯುವ ಹೊತ್ತಿನಲ್ಲಿ ಮನಮೋಹನ ಸಿಂಗರಿಗೆ ಅಮೆರಿಕಾದ ಅಧ್ಯಕ್ಷ ಬುಷ್‌ರೊಡನೆಯ ವೈಯುಕ್ತಿಕ ಸ್ನೇಹವೇ ಹೆಚ್ಚು ಪವಿತ್ರವೆನಿಸತೊಡಗಿದೆ! ಜಾಗತಿಕ ರಾಜಕಾರಣದಲ್ಲಿ ತನ್ನ ಅಧಿಕಾರಾವಧಿಯುದ್ದಕ್ಕೂ ಕಿಂಚಿತ್ತೂ ವಿಶ್ವಾಸಾರ್ಹವೆನಿಸಿಕೊಳ್ಳದ ಬುಷ್ ಆಡಳಿತದೊಂದಿಗೆ ತಾವು ಸಂಧಾನ ಮಾಡಿಕೊಂಡ ಅಣು ಒಪ್ಪಂದ ಜಾರಿಯಾಗದಿದ್ದರೆ, ಈ ಮನಮೋಹನ ಸಿಂಗರಿಗೆ ಮುಖಭಂಗವಾಗುವುದಂತೆ! ಜಾಗತಿಕವಾಗಿ ಭಾರತದ ವಿಶ್ವಸನೀಯತೆಗೆ ಕುಂದುಂಟಾಗುವುದಂತೆ! ರಾಷ್ಟ್ರ ಈಗ ಸಾಧಿಸಿರುವ ಅಭೂತಪೂರ್ವ ಪ್ರಗತಿ ದರವನ್ನು ಕಾಪಾಡಿಕೊಳ್ಳಲಾಗುವುದಿಲ್ಲವಂತೆ! ಇದನ್ನೆಲ್ಲ ನಂಬಿ, ತಮ್ಮ ಆಡಳಿತಕ್ಕೆ ಜನಪರತೆಯ ಬಿಂಬ ನೀಡಿ ಕಾಪಾಡಿದ ಎಡ ಪಕ್ಷಗಳಿಗೆ ಮನಮೋಹನರು ಎಲ್ಲ ರಾಜಕೀಯ

ಸಭ್ಯತೆಯನ್ನೂ ಮೀರಿ ಹೇಳಿರುವ ಧಿಕ್ಕಾರವನ್ನು, ಕಾಂಗ್ರೆಸ್ ಮತ್ತು ಅದರ ಮೈತ್ರಿ ಪಕ್ಷಗಳು ಬೆಂಬಲಿಸಿವೆ!

ಭಾರತದ ಸದ್ಯದ ಅಭೂತಪೂರ್ವ ಪ್ರಗತಿ ದರದ ಬಂಡವಾಳ ಈಗಾಗಲೇ ಅಭೂತಪೂರ್ವ ಹಣದುಬ್ಬರ ದರ ಮತ್ತು ಅಭೂತಪೂರ್ವ ರೈತರ ಆತ್ಮಹತ್ಯೆ ದರಗಳ ಮೂಲಕ ಬಯಲಾಗಿದೆ. ಅದನ್ನು ಮರೆಮಾಚಲೋ ಎಂಬಂತೆ, ಮನಮೋಹನ ಸಿಂಗರು ಈಗ ಇದ್ದಕ್ಕಿದ್ದಂತೆ ಭಾರತದ ಭವಿಷ್ಯದ ಇಂಧನ ಅಗತ್ಯಗಳ ಆತಂಕ ಹುಟ್ಟಿಸಿ, ರಾಷ್ಟ್ರೀಯ ಹಿತಾಸಕ್ತಿಯ ಹೆಸರಲ್ಲಿ ತಮ್ಮ ಕೆಲವು ಸಹೋದ್ಯೋಗಿಗಳನ್ನೂ ಯಾಮಾರಿಸಿ ಈ ಅಣು ಒಪ್ಪಂದವನ್ನು ಜಾರಿಗೊಳಿಸುವ ಮೊದಲ ಕ್ರಮಕ್ಕೆ-ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆಗೆ ಸುರಕ್ಷತಾ ಒಪ್ಪಂದದ ಕರಡು ಸಲ್ಲಿಸಿ-ಚಾಲನೆ ನೀಡಿದ್ದಾರೆ. ನಮ್ಮ ಅಣುಶಕ್ತಿ ಸಂಶೋಧನಾ ಕ್ಷೇತ್ರದ ಪ್ರಮುಖ ವಿಜ್ಞಾನಿಗಳು ಈ ಒಪ್ಪಂದ ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಿದೆ ಮತ್ತು ನಮ್ಮ ಅಣುಶಕ್ತಿ ಕಾರ್ಯಕ್ರಮಗಳನ್ನು ಅಸ್ತವ್ಯಸ್ತಗೊಳಿಸುತ್ತದೆ ಎಂದು ಹೇಳುತ್ತಿದ್ದರೂ, ಅವಕ್ಕೆ ಸ್ಪಷ್ಟ ಉತ್ತರ ಕೊಡುವ ವ್ಯವಧಾನವೂ ಇಲ್ಲದೆ ಪ್ರಧಾನಿ ಈ ಅವಸರದ ಹೆಜ್ಜೆ ಇಡುತ್ತಿರುವುದರ ಹಿಂದಿನ ಒತ್ತಡಗಳದರೂ ಯಾವುವು? ವಿಶ್ವಬ್ಯಾಂಕಿನ ಮಾಜಿ ಉದ್ಯೋಗಿಯಾದ ಈ ಮನಮೋಹನ ಸಿಂಗ್ ಮೂಲತಃ ಪಶ್ಚಿಮದ ಬಂಡವಾಳಶಾಹಿ ಆರ್ಥಿಕತೆಯ ಕುರುಡು ಅಭಿಮಾನಿ ಎಂಬ ನಂಬಿಕೆ ಈಗ ಇನ್ನಷ್ಟು ನಿಜವಾಗುತ್ತಿರುವಂತಿದೆ. ಆದರೆ ಮೂಲ ಕಾಂಗ್ರೆಸ್ಸಿಗರೇನು ಮಾಡುತ್ತಿದ್ದಾರೆ? ಅವರು ತನ್ನನ್ನು ಸಮಾಜವಾದಿ ಎಂದು ಕರೆದುಕೊಳ್ಳುವ ಅಮರ ಸಿಂಗ್ ಎಂಬ ದೇಶೀ ಬಂಡವಾಳಶಾಹಿ ವ್ಯವಸ್ಥೆಯ ದಲ್ಲಾಳಿಯೊಂದಿಗೆ ರಾಜಕೀಯ ಚಕ್ಕಂದ ಆರಂಭಿಸಿದ್ದಾರೆ!

ಇದು ಕಾಂಗ್ರೆಸ್ಸಿನ ಎಂದಿನ ದುರಂತ ಕಥೆ.

(೨೫, ಜುಲೈ ೨೦೦೮)

■

೧೨. ಅಣು ಒಪ್ಪಂದದ ಹಿಂದಿನ ಅನೈತಿಕ ರಾಜಕಾರಣ

ಈ ಅಂಕಣ ಬರಹವನ್ನು ನೀವು ಓದುವ ಹೊತ್ತಿಗೆ ಮನಮೋಹನ ಸಿಂಗ್ ಅವರ ಸರ್ಕಾರದ ಭವಿಷ್ಯ ನಿರ್ಧಾರವಾಗಿರುತ್ತದೆ. ಸರ್ಕಾರ ಉಳಿದಿದ್ದರೂ, ಅಳಿದಿದ್ದರೂ ಈ ಅಳಿವು ಉಳಿವಿನ ಪರೀಕ್ಷೆಗೆ ಕಾರಣವಾದ ರಾಷ್ಟ್ರೀಯ ಮಹತ್ವದ ಅನೇಕ ಪ್ರಶ್ನೆಗಳು ಮಾತ್ರ ಹಾಗೇ ಉಳಿದಿರುತ್ತವೆ. ಅಷ್ಟೇ ಅಲ್ಲ, ಇನ್ನೂ ಕೆಲವು ಹೊಸ ಪ್ರಶ್ನೆಗಳನ್ನು ಎತ್ತಿರುತ್ತವೆ ಕೂಡ.

ಸರ್ಕಾರದ ಈ ಶಕ್ತಿ ಪರೀಕ್ಷೆಗೆ ಕಾರಣವಾದ ಅಮೆರಿಕಾದೊಡನೆಯ ಅಣು ಒಪ್ಪಂದವನ್ನೇ ತೆಗೆದುಕೊಳ್ಳಿ. ಇದನ್ನು ಬೆಂಬಲಿಸುವವರು, ಇದು ಭಾರತದ ಭವಿಷ್ಯದ ಇಂಧನ ಅಗತ್ಯಗಳನ್ನು ಈಡೇರಿಸುವುದೆಂದೂ ಹಾಗೂ ಇದರಿಂದಾಗಿ ದೇಶದ ಸದ್ಯದ ಅಭೂತಪೂರ್ವ ಪ್ರಗತಿ ದರವನ್ನು ಮುಂದುವರೆಸಿಕೊಂಡು ಹೋಗಿ ಭಾರತ ಒಂದು ಜಾಗತಿಕ ಶಕ್ತಿಯಾಗಿ ಮೂಡಲು ಸಾಧ್ಯಮಾಡುವುದೆಂದು ಹೇಳುತ್ತಿದ್ದಾರೆ. ಆದರೆ ಈ ವಾದ ಎಷ್ಟು ಸಾಧು ಮತ್ತು ವಾಸ್ತವಾಂಶಗಳನ್ನು ಅವಲಂಬಿಸಿದೆ ಎಂಬುದನ್ನು ವಸ್ತುನಿಷ್ಠವಾಗಿ ಪರಿಶೀಲಿಸುವ ಪ್ರಯತ್ನವೇ ಈವರೆಗೆ ಸಾರ್ವಜನಿಕ ವಲಯದಲ್ಲಿ ನಡೆದಿಲ್ಲ. ನಿಜ, ಈ ಒಪ್ಪಂದದ ಒಳ ವಿವರಗಳು ಸಾಮಾನ್ಯ ಪ್ರಜೆಗೆ ಸುಲಭವಾಗಿ ಅರ್ಥವಾಗದಂತಹ ವೈಜ್ಞಾನಿಕ ಹಾಗೂ ತಾಂತ್ರಿಕ ಪರಿಕಲ್ಪನೆಗಳಿಂದಲೂ ಮತ್ತು ಅಂತಾರಾಷ್ಟ್ರೀಯ ಒಪ್ಪಂದಗಳ ಜಟಿಲ ಪರಿಭಾಷೆಯಿಂದಲೂ ಕೂಡಿದೆ. ಆದರೆ, ಇದರ ರಾಷ್ಟ್ರೀಯ ಮಹತ್ವ ಮತ್ತು ದಟ್ಟ ವಿವಾದಾತ್ಮಕತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ಥೂಲವಾಗಿಯಾದರೂ ಇದರ ಹಿನ್ನೆಲೆ ಮತ್ತು ಆಶಯ ಮತ್ತು ಶರತ್ತುಗಳನ್ನು ವಿವರಿಸುವ ಪ್ರಯತ್ನ ಮಾಡುವುದು ಸರ್ಕಾರದ ಕರ್ತವ್ಯವಾಗ ಬೇಕಿತ್ತು. ಏಕೆಂದರೆ, ಸರ್ಕಾರದ ಬಹುಮತಕ್ಕೆ ಕಾರಣವಾಗಿದ್ದ ಎಡ ಪಕ್ಷಗಳೂ ಸೇರಿದಂತೆ, ಹೆಚ್ಚು ಕಡಿಮೆ ಎಲ್ಲ ವಿರೋಧ ಪಕ್ಷಗಳೂ ಈ ಒಪ್ಪಂದ ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾಗಿದೆಯೆಂದು ತೀವ್ರ ವಿರೋಧ ವ್ಯಕ್ತಪಡಿಸಿದ್ದವು.

ಆದರೆ ಸರ್ಕಾರ ಅಂತಾರಾಷ್ಟ್ರೀಯ ಒಪ್ಪಂದಗಳ ವಿವರಗಳು ಅವು ಅಂತಿಮವಾಗುವ ವರೆಗೂ ಗುಟ್ಟಾಗಿರಬೇಕೆಂಬ ಇಲ್ಲದ ನೆಪವೊಡ್ಡಿ ಅದರ ವಿವರಗಳನ್ನು ಸಾರ್ವಜನಿಕರಿಂದ ಮುಚ್ಚಿಡುವ ಕೆಲಸ ಮಾಡಿತು. ಇನ್ನು, ತಾವು ಬೆಂಬಲಿಸುತ್ತಿದ್ದ ಸರ್ಕಾರವನ್ನು ಬೀಳಿಸಲು ಮುಂದಾಗುವಷ್ಟರ ಮಟ್ಟಿಗೆ ಈ ಒಪ್ಪಂದದ ಬಗ್ಗೆ ಭಿನ್ನಾಭಿಪ್ರಾಯವನ್ನು ಹೊಂದಿದ್ದ ಎಡ

ಪಕ್ಷಗಳು ಕೂಡಾ ಈ ಸಂಬಂಧ ಸರ್ಕಾರದೊಂದಿಗೆ ತನ್ನ ಸಂಧಾನಗಳನ್ನು ಸುಮ್ಮನೆ ಎಳೆಯುತ್ತಾ ಬಂದವೇ ಹೊರತು, ತನ್ನ ನಿಲುವಿನ ಹಿಂದಿರುವ ಆತಂಕಗಳಿಗೆ ಕಾರಣವಾದ ಒಪ್ಪಂದದ ವಿವರಗಳನ್ನು ಸಾರ್ವಜನಿಕವಾಗಿ ಚರ್ಚಿಸಲು ಮುಂದಾಗಲಿಲ್ಲ. ಮನಮೋಹನ ಸಿಂಗರ ಹಠದಿಂದಾಗಿ ಕೊನೆಗೂ ಕಡಿದು ಬಿದ್ದ ಇವರಿಬ್ಬರ ನಡುವಣ ಮಾತುಕತೆಗಳು ರಾಜಕೀಯ ಅನಿಶ್ಚಿತತೆಯನ್ನು ಸೃಷ್ಟಿಸಿ, ಈ ಒಪ್ಪಂದದ ಭವಿಷ್ಯ ಸದ್ಯಕ್ಕಾದರೂ ನಿರ್ಣಯವಾಗಬೇಕು ಎಂಬ ವಾತಾವರಣ ನಿರ್ಮಾಣವಾದಾಗಷ್ಟೇ ಈ ಒಪ್ಪಂದದ ಬಗ್ಗೆ ಸಾರ್ವಜನಿಕರಿಗೆ ಹಲವು ವಿವರಗಳು ದೊರಕಲಾರಂಭಿಸಿವೆ. ಆಶ್ಚರ್ಯವೆಂದರೆ ತಾಂತ್ರಿಕ ವಿವರಗಳಿಂದಲೇ ತುಂಬಿ ಹೋಗಿರುವ ಈ ಒಪ್ಪಂದದ ಬಗ್ಗೆ ತೀವ್ರ ವಾದ ವಿವಾದಗಳಲ್ಲಿ ತೊಡಗಿರುವವರು ಹೆಚ್ಚಾಗಿ ರಾಜಕಾರಣಿಗಳು ಮತ್ತು ರಾಜಕೀಯ ವಿಶ್ಲೇಷಕರೇ ಆಗಿದ್ದಾರೆ! ಆದರೆ ತಾಂತ್ರಿಕ ವಿವರಗಳೊಂದಿಗೆ ಮಾತಾಡಿರುವ ಇಬ್ಬರು ವಿಜ್ಞಾನಿಗಳೂ ಒಪ್ಪಂದವನ್ನು ಸಾರಾಸಗಟಾಗಿ ವಿರೋಧಿಸಿದ್ದಾರೆ.

ಈ ವಿಜ್ಞಾನಿಗಳು, ಈ ಒಪ್ಪಂದ ಸಕ್ರಿಯಗೊಳ್ಳುವ ಮುನ್ನ ಚರ್ಚೆಯಾಗಬೇಕಾದುದು ಮುಖ್ಯವಾಗಿ ಅದರ ತಾಂತ್ರಿಕ ವಿವರಗಳ ನೆಲೆಯಲ್ಲಿ; ನಂತರವಷ್ಟೇ ಅದರ ರಾಜಕೀಯ ಪರಿಣಾಮಗಳ ನೆಲೆಯಲ್ಲಿ ಎಂದು ಆಗ್ರಹಪಡಿಸುತ್ತಿದ್ದರೂ, ನಾವು ಮಾತ್ರ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಕಪಿಲ್ ಸಿಬಾಲ್, ಲಾಲೂ, ಮುಲಾಯಂ, ಅಮರಸಿಂಗ್, ಪ್ರಕಾಶ್ ಕಾರಟ್, ಬರ್ಧನ್, ದೇವೇಗೌಡ, ಮಾಯಾವತಿ, ಅದ್ವಾನಿ, ಯಶವಂತ ಸಿನ್ಹ, ಚಂದ್ರಬಾಬು ನಾಯ್ಡು ಇತ್ಯಾದಿಗಳ ಅಭಿಪ್ರಾಯಗಳ ಆಧಾರದ ಮೇಲೆ ನಮ್ಮ ನಿಲುವನ್ನು ರೂಪಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ! ಇಂತಹ ಪರಿಸ್ಥಿತಿಯಲ್ಲಿ ಈ ಗೊಂದಲದ ಕೇಂದ್ರ ಬಿಂದುವಾಗಿರುವ ಮನಮೋಹನ ಸಿಂಗರು ನಮ್ಮ ರಾಜಕೀಯ ವಿಶ್ಲೇಷಕರಿಗೆ ತಮ್ಮ ವಿಶ್ಲೇಷಣೆಯ ಅನುಕೂಲತೆಗೆ ತಕ್ಕಂತೆ, ಒಮ್ಮೆ ರಾಜಕಾರಣದ ಪಾಪದ ಲೇಪವೇ ಇಲ್ಲದ ಪರಿಶುದ್ಧ ತಂತ್ರಸತ್ತಾಧಾರಿ(Technocrat)ಯಾಗಿ ಕಂಡರೆ, ಇನ್ನೊಮ್ಮೆ ದಟ್ಟ ನೈತಿಕತೆಯ ಗಟ್ಟಿ–ಜನತೆಯಿಂದ ನೇರವಾಗಿ ಆಯ್ಕೆಯಾಗದಿದ್ದರೂ ಸರಿ–ರಾಜಕಾರಣಿಯಾಗಿ ಕಾಣುತ್ತಾರೆ! ರಾಷ್ಟ್ರವೊಂದರ ಪ್ರಧಾನಿ ಸ್ಥಾನದಲ್ಲಿರುವವರ ನೈತಿಕತೆ ನಿರ್ಧಾರವಾಗಬೇಕಿರುವುದು ಅವರ ವೈಯುಕ್ತಿಕ ಬದುಕಿನ ನೆಲೆಯಲ್ಲಲ್ಲ; ಬದಲಿಗೆ ಅವರು ತಮ್ಮ ರಾಜಕಾರಣವನ್ನು ನಿರ್ವಹಿಸುವ ರೀತಿ ನೀತಿಗಳಲ್ಲಿ, ಅದರ ವಿವರಗಳಲ್ಲಿ, ದಿಕ್ಕುಗಳಲ್ಲಿ ಎಂಬುದನ್ನು ಇವರಿಗೆ ಹೇಳುವವರಾದರೂ ಯಾರು? ಹಾಗೆ ನೋಡಿದರೆ, ಇಂದಿನ ದುಷ್ಟ ಮತ್ತು ಭ್ರಷ್ಟ ರಾಜಕಾರಣದ ದಿನಗಳಲ್ಲೂ ವೈಯುಕ್ತಿಕ ನೆಲೆಯ ನೈತಿಕತೆಯನ್ನು ಕಾಪಾಡಿಕೊಂಡಿರುವ ಎಷ್ಟು ಜನ ರಾಜಕಾರಣಿಗಳಿಲ್ಲ? ಮನಮೋಹನ ಸಿಂಗರಿಗಷ್ಟೇ ಏಕೆ ಈ ಬಿರುದು?

ಇದು ಮನಮೋಹನ ಸಿಂಗರು ಪ್ರತಿನಿಧಿಸುವ ಜಾಗತಿಕ ರಾಜಕಾರಣದ ಪ್ರಾಯೋಜಕರು ಮತ್ತು ಫಲಾನುಭವಿಗಳಿಬ್ಬರೂ ಸೇರಿ ಈಗ ರಾಷ್ಟ್ರೀಯ ರಾಜಕಾರಣದ ಹೊಸ ಮೌಲ್ಯಗಳನ್ನಳೆಯಲು ಸೃಷ್ಟಿಸಿರುವ ಮಾನದಂಡಗಳ ಫಲ! ಇವರಿಗೆ ಶೇ.೧೦ ಅಥವಾ

೧೧೧ರ ರಾಷ್ಟ್ರೀಯ ಪ್ರಗತಿ ದರ ಉಂಟು ಮಾಡುತ್ತಿರುವ ರಾಷ್ಟ್ರೀಯ ಅನಾಹುತಗಳ ಪರಿವೆಯೇ ಇಲ್ಲ. ಇವರಿಗೆ ರಾಷ್ಟ್ರ ಮತ್ತು ಪ್ರಗತಿ ಎಂದರೆ, ಕೆಲವರ ಎಗ್ಗಿಲ್ಲದ ಲೌಕಿಕ ಅಭಿವೃದ್ಧಿ. ಈ ಅಭಿವೃದ್ಧಿ ದೇಶದ ೮೩ ಕೋಟಿ ಜನರನ್ನು ಇನ್ನೂ ದಿನವಹಿ ೨೦ ರೂಪಾಯಿಗಳ ಆದಾಯದ ಸ್ಥಿತಿಯಲ್ಲೇ ಇಟ್ಟಿದೆ ಮತ್ತು ಇವರಲ್ಲಿ ಕೆಲವರ ಸ್ಥಿತಿ ಈ ಅಭೂತಪೂರ್ವ ಹಣದುಬ್ಬರದ ದಿನಗಳಲ್ಲಿ ಪ್ರಾಣಿಗಳಿಗಿಂತಲೂ ಕಡೆಯಾಗಿದೆ ಎಂಬುದು ಇವರ ಅರಿವಿಗೆ ಬಂದಂತಿಲ್ಲ. ಇವರ ದೃಷ್ಟಿ ದಿಗಂತವೇ ಸಂಕುಚಿತವಾಗಿದೆ–ತನ್ನ ವರ್ಗದ ಆಸುಪಾಸಿನ ಜನರ ಹೆಚ್ಚುತ್ತಿರುವ ಸುಖ ಸಂತೋಷಗಳೇ ಇವರಿಗೆ ರಾಷ್ಟ್ರೀಯ ಪ್ರಗತಿಯಾಗಿದೆ! ಹೋಗಲಿ, ಇಂತಹ ವರ್ಗೀಯ ಪ್ರಗತಿಯ ಗುಣಮಟ್ಟವಾದರೂ ಯಾವುದು? ಅದು ಒಟ್ಟಾರೆಯಾಗಿ ಮತ್ತು ಆತ್ಯಂತಿಕವಾಗಿ ಎಂತಹ ಸಮಾಜವನ್ನು ನಿರ್ಮಿಸಲು–ಯಾರ್ಯಾರನ್ನು ಏಕೆ ಮತ್ತು ಹೇಗೆ ಸರಣಿ ಸರಣಿಯಾಗಿ ಅಥವಾ ನಿಧ ನಿಧಾನವಾಗಿ ಕೊಲ್ಲಲು–ಹೊರಟಿದೆ ಎಂಬುದರ ಅಂದಾಜಾದರೂ ಇವರಿಗೆ ಇದ್ದಂತಿಲ್ಲ.

ಹಾಗಾಗಿಯೇ ಕರಣ್ ಥಾಪರ್ ಎಂಬ ಸಂದರ್ಶಕನೊಬ್ಬ ಇತ್ತೀಚೆಗೆ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರೂ, ಅತಿ ಜಾಣ ವಕೀಲರೂ ಆದ ಕಪಿಲ್ ಸಿಬಾಲ್‌ರೊಡನೆಯ ಮಾತುಕತೆಯಲ್ಲಿ; ಮತ ಪರೀಕ್ಷೆಯಲ್ಲಿ ಸರ್ಕಾರ ಸೋತು ಹೋದರೂ, ಉಸ್ತುವಾರಿ ಸರ್ಕಾರವಾಗಿ ಅದು ಅಣು ಒಪ್ಪಂದದ ವಿಧಿ ವಿಧಾನಗಳನ್ನು ಮುಂದುವರಿಸಬಹುದಲ್ಲವೇ ಎಂದು ಪದೇ ಪದೇ ಕೇಳಿದ್ದಲ್ಲದೆ, ಸೂಚನೆಯನ್ನೂ ನೀಡತೊಡಗಿದ್ದು. ತಾನು ಸಂದರ್ಶಿಸುತ್ತಿರುವವರನ್ನು ಕಾಡುವುದನ್ನೇ ಒಳ್ಳೆಯ ಸಂದರ್ಶನ ಎಂದು ಭಾವಿಸುವ ಈ ಹುಟ್ಟಾ ತಲೆಹೋಕ ಟಿ.ವಿ.ಸಂದರ್ಶಕ, ಈ ಸಂದರ್ಶನದಲ್ಲಿ ಮಾತ್ರ ಕಪಿಲ್ ಸಿಬಾಲರನ್ನು, ಅವರ ಮುಜುಗರದ ನಡುವೆಯೂ ತನ್ನ ಸೂಚನೆಯನ್ನು ಪರಿಗಣಿಸುವಂತೆ ಓಲೈಸತೊಡಗಿದ್ದ! ಈತನ ಪ್ರಕಾರ ಸರ್ಕಾರಕ್ಕೆ ಸೋಲುಂಟಾದರೂ, ಅದು ತಾಂತ್ರಿಕ ಸೋಲು ಮಾತ್ರ. ನೈತಿಕ ಜಯ ಸರ್ಕಾರದ್ದೇ. ಏಕೆಂದರೆ, ಮತ್ತೆ ಈತನ ಪ್ರಕಾರವೇ ಬಹಳಷ್ಟು ಲೋಕಸಭಾ ಸದಸ್ಯರು ಮನದಲ್ಲಿ ಒಪ್ಪಂದದ ಪರವಿದ್ದರೂ, ತಂತಮ್ಮ ಪಕ್ಷಗಳ ನಿಲುವಿಗೆ ಕಟ್ಟುಬಿದ್ದು ಸರ್ಕಾರದ ವಿರುದ್ಧ ಮತ ಹಾಕಿರುತ್ತಾರಷ್ಟೆ! ರಾಜಕಾರಣಿಗಳ ರಾಜಕಾರಣವನ್ನೂ ಮೀರಿಸುವ ನಮ್ಮ ಮಾಧ್ಯಮ ಏಜೆಂಟರ ನಿರ್ಲಜ್ಜ ರಾಜಕಾರಣವೆಂದರೆ ಇದೇ!

ಪ್ರಗತಿ ಎಂಬುದು ಕೇವಲ ಒಂದು ಆರ್ಥಿಕ ವಿದ್ಯಮಾನವಲ್ಲ. ಅದು ಸಾಮಾಜಿಕ, ಸಾಂಸ್ಕೃತಿಕ ಮತ್ತು ನೈತಿಕ ಲೆಕ್ಕ ಪರೀಕ್ಷೆಯಲ್ಲಿ ತೇರ್ಗಡೆಯಾದರೆ ಮಾತ್ರ ನಿಜವಾದ ಪ್ರಗತಿಯೆನಿಸಿಕೊಳ್ಳಬಲ್ಲುದು. ಒಂದು ವರ್ಗದ ಆರ್ಥಿಕ ಪ್ರಗತಿ ಮುಂದೊಂದು ದಿನ ಎಲ್ಲರ ಪ್ರಗತಿಗೂ ಕಾರಣವಾಗಬಲ್ಲುದು ಮತ್ತು ಅದು ಆತ್ಯಂತಿಕವಾಗಿ ಸಮಾಜದಲ್ಲಿ ಸಾರ್ವತ್ರಿಕ ಶಾಂತಿಯನ್ನುಂಟು ಮಾಡಬಲ್ಲುದು ಎಂದು ನಂಬಿರುವವರಿಗೆ, ಮಾರ್ಗವೇ ಗುರಿಯಾಗದ ಹೊರತು, ಗುರಿ ಎಂಬುದು ಮರೀಚಿಕೆಯಾಗಿ ಮಾತ್ರ ಉಳಿಯಬಲ್ಲುದು ಎಂಬ ಚಾರಿತ್ರಿಕ ಸತ್ಯವೇ ಗೊತ್ತಿದ್ದಂತಿಲ್ಲ. ಚರಿತ್ರೆ ಗೊತ್ತಿಲ್ಲದವರು ಭವಿಷ್ಯವನ್ನೂ ನಿರ್ಮಿಸಲಾರರು. ಹಾಗಾಗಿ

ಇಂದಿನ ಪ್ರಗತಿ ದರದ ಕಾರಣ ಇಟ್ಟುಕೊಂಡು ಅಣು ಒಪ್ಪಂದವನ್ನು ಬೆಂಬಲಿಸುವುದು ಹೃದಯಹೀನ ಪ್ರಗತಿಯ ಸಮರ್ಥನೆ ಮಾತ್ರ ಆಗುತ್ತದೆ. ಹಾಗೆ ನೋಡಿದರೆ, ಮಾಜಿ ರಾಷ್ಟ್ರಪತಿ ಹಾಗೂ ಕ್ಷಿಪಣಿ ವಿಜ್ಞಾನಿ ಕಲಾಂ ಅವರು ಈ ಅಣು ಒಪ್ಪಂದವನ್ನು ಬೆಂಬಲಿಸುತ್ತಿರುವುದು ಆಶ್ಚರ್ಯವೇನಲ್ಲ. ಏಕೆಂದರೆ ಈ ಮಾಜಿ ರಾಷ್ಟ್ರಪತಿಯೂ ನಮ್ಮ ಸದ್ಯದ ಪ್ರಧಾನ ಮಂತ್ರಿಯಂತೆ, ಏರುತ್ತಾ ಹೋಗುವ ಪ್ರಗತಿ ದರದ ಆಧಾರದ ಮೇಲೆ ಒಂದಲ್ಲ ಒಂದು ದಿನ ಭಾರತ ಒಂದು 'ಜಾಗತಿಕ ಶಕ್ತಿ'ಯಾಗುವ ಕುರುಡು ಹಂಬಲವುಳ್ಳವರು!

ಅದೇನೇ ಇರಲಿ, ನಾವು ಅಣು ಒಪ್ಪಂದದ ಸಾಧಕ-ಬಾಧಕಗಳ ಬಗ್ಗೆ ವಸ್ತುನಿಷ್ಠವಾಗಿ ವಿವೇಚಿಸಲು, ಭಾರತದ ಅಣುಶಕ್ತಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ವಿಜ್ಞಾನಿಗಳ ಮತ್ತು ತಂತ್ರಜ್ಞರ ವಾದಗಳನ್ನು ಅವಲಂಬಿಸಬೇಕಾಗುತ್ತದೆ. ಈ ದೃಷ್ಟಿಯಿಂದ, ಕಲಾಂರಂತೆ ಯಾವುದೇ ರಾಜಕೀಯ 'ತರಂಗಾಂತರ'ಗಳ ಮಧ್ಯೆ ಸಿಕ್ಕಿಹಾಕಿಕೊಂಡಿರದ ಭಾಭಾ ಅಣು ಸಂಶೋಧನಾ ಸಂಸ್ಥೆಯ ಈ ಹಿಂದಿನ ಇಬ್ಬರು ಅಧ್ಯಕ್ಷರುಗಳಾದ ಡಾ|| ಪಿ.ಕೆ. ಐಯ್ಯಂಗಾರ್ ಮತ್ತು ಡಾ|| ಎ.ಎನ್. ಪ್ರಸಾದ್ ಅವರು ನೀಡಿರುವ ಅಂಕಿ ಅಂಶಗಳು ಮತ್ತು ಮಂಡಿಸಿರುವ ವಾದ ಸರ್ಕಾರದ ಪರವಾದ ಎಲ್ಲ ವಾದಗಳನ್ನೂ ಪರಿಣಾಮಕಾರಿಯಾಗಿ ಅಲ್ಲಗೆಳೆಯುವಂತಿವೆ ಎಂಬುದನ್ನು ನಾವು ಗಮನಿಸಬೇಕು. ಇವರ ಪ್ರಕಾರ ಒಪ್ಪಂದ ಅದರ ಕಾಲಬದ್ಧತೆಗನುಗುಣವಾಗಿಯೇ ಅನುಷ್ಠಾನಗೊಂಡು ಗುರಿ ಮುಟ್ಟಿದರೂ, ೨೦೨೦ರ ವೇಳೆಗೆ ನಮ್ಮ ಪರಮಾಣು ವಿದ್ಯುತ್ ನಮ್ಮ ಒಟ್ಟಾರೆ ವಿದ್ಯುತ್ಪಾದನೆಯ ಶೇ. ಏಳನ್ನು ದಾಟುವುದಿಲ್ಲ. ಹಾಗಾಗಿ ಇದು ಭೂ-ತಾಪಮಾನ ಏರಿಕೆಗೆ ಕಾರಣವಾಗುವ ಕಲ್ಲಿದ್ದಲು ಉರಿಯುವಿಕೆಯಲ್ಲಿ ಭಾರತದ ಪಾಲೇನೂ ಗಣನೀಯವಾಗಿ ಕಡಿಮೆ ಮಾಡುವುದಿಲ್ಲ. ಮೊದಲಾಗಿ ಈ ಒಪ್ಪಂದದ ಗುರಿಯಾದ ೨೦೨೦ರ ವೇಳೆಗೆ ೨೦ಸಾವಿರ ಮೆಗಾವಾಟ್ ಪರಮಾಣು ವಿದ್ಯುತ್ ಉತ್ಪಾದನೆ (ಇದನ್ನೀಗ ಒಪ್ಪಂದಕ್ಕೆ ಬೆಂಬಲ ಕ್ರೋಢೀಕರಿಸಲು ಇದ್ದಕ್ಕಿದ್ದಂತೆ ಮತ್ತು ಮೇಲ್ನೋಟಕ್ಕೇ ಅವಾಸ್ತವಿಕವೆನಿಸುವ ೪೦ಸಾವಿರ ಮೆಗಾವಾಟ್‌ಗೆ ಏರಿಸಲಾಗಿದೆ!) ಅಸಂಭವನೀಯ. ಏಕೆಂದರೆ, ಇದಕ್ಕೆ ಅಗತ್ಯವಾದ ಪರಮಾಣು ಶಕ್ತಿ ಯಂತ್ರಗಳ ವ್ಯಾಪಾರ, ಅವುಗಳ ಸ್ಥಾಪನೆ, ಅವುಗಳ ನಿರ್ವಹಣೆಗೆ ಬೇಕಾದ ಸಿಬ್ಬಂದಿಯ ತರಬೇತಿ ಮತ್ತು ಅವುಗಳಿಗೆ ಬೇಕಾದ ಯುರೇನಿಯಂ ಪಡೆದುಕೊಳ್ಳಲು ಈ ಒಪ್ಪಂದದ ಪ್ರಕಾರವೇ ಹಾದು ಹೋಗಬೇಕಾದ ವಿಧಿ ವಿಧಾನಗಳಿಗೆ ಸಾಕಷ್ಟು ಸಮಯ ಹಿಡಿಯುತ್ತದೆ.

ಮುಂದಿನ ಸರ್ಕಾರವೂ ಮನಮೋಹನ ಸಿಂಗರ ನೇತೃತ್ವದಲ್ಲೇ ರಚಿತವಾಗುತ್ತದೆಂದು ನಂಬಿ, ಅದು ಈ ಎಲ್ಲ ವ್ಯಾಪಾರ, ವ್ಯವಹಾರಗಳನ್ನು ಬಹು ಮುತುವರ್ಜಿಯಿಂದಲೇ ಕೈಗೊಂಡು ಸಕಾಲದಲ್ಲೇ ವಿದ್ಯುತ್ ಉತ್ಪಾದನೆಯನ್ನು ಆರಂಭಿಸಿತೆಂದೇ ಇಟ್ಟುಕೊಳ್ಳೋಣ. ಆಗಲೂ, ಅದರ ಖರ್ಚು ವೆಚ್ಚ ಲೆಕ್ಕ ಹಾಕಿದರೆ ಅದು ಸದ್ಯದ ಸಾಂಪ್ರದಾಯಿಕ ವಿದ್ಯುತ್‌ಗಿಂತ ಅಗ್ಗವೇನೂ ಆಗಿರುವುದಿಲ್ಲ. ಬದಲಿಗೆ ಅದು ಬಹು ದುಬಾರಿಯೇ ಆಗಿರುತ್ತದೆ. ಇಂದಿನ

ಆರ್ಥಿಕತೆಯ ಮಾನದಂಡಗಳನ್ನೇ ಇಟ್ಟುಕೊಂಡರೂ, ಪ್ರತಿ ಯೂನಿಟ್‌ಗೆ ೯ ರೂ ಎಂದು ಲೆಕ್ಕ ಹಾಕಲಾಗಿದೆ. ಇದು ಹತ್ತು ಹದಿನೈದು ವರ್ಷಗಳ ಹಿಂದೆ ಮಹಾರಾಷ್ಟ್ರದಲ್ಲಿ ಅತ್ಯುತ್ಸಾಹದಿಂದ ಸ್ಥಾಪಿಸಿದ ಅಮೆರಿಕಾ ಮೂಲದ ಎನ್ರೋನ್ ಕಂಪನಿಯ ವಿದ್ಯುತ್ ಸ್ಥಾವರದ ವ್ಯವಹಾರಗಳನ್ನು ನೆನಪಿಗೆ ತಂದರೆ ಆಶ್ಚರ್ಯವಿಲ್ಲ. ಅನೇಕ ಜನಪರ ಸಂಘಟನೆಗಳ ಪ್ರಬಲ ವಿರೋಧದ ನಡುವೆಯೂ, ಶಿವಸೇನೆ ಮತ್ತು ರಾಷ್ಟ್ರೀಯ ಕಾಂಗ್ರೆಸ್ ಪಕ್ಷಗಳ ಕುಮ್ಮಕ್ಕಿನೊಂದಿಗೆ ಸ್ಥಾಪಿಸಿಲಾಗಿದ್ದ ಈ ಸ್ಥಾವರವನ್ನು, ಕೆಲವೇ ವರ್ಷಗಳಲ್ಲಿ ಅದರ ವಿದ್ಯುತ್ ಬೆಲೆಯೂ ಸೇರಿದಂತೆ ಅದರೊಡನೆಯ ಒಪ್ಪಂದದ ಷರತ್ತುಗಳನ್ನು ಭರಿಸಲಾಗದೆ, ಸ್ಥಾಪನೆಯ ವೆಚ್ಚಕ್ಕಿಂತ ಹೆಚ್ಚು ಪರಿಹಾರ ಧನ ನೀಡಬೇಕಾದ ಪರಿಸ್ಥಿತಿಯಲ್ಲಿ ಮುಚ್ಚಿಸಬೇಕಾಯಿತು!

ಇನ್ನೂ ಮುಖ್ಯ ವಿಷಯವೆಂದರೆ, ಈ ಒಪ್ಪಂದ ಬಹುಕಾಲದಿಂದ ಸುವ್ಯವಸ್ಥಿತವಾಗಿ ರೂಪುಗೊಂಡಿರುವ ನಮ್ಮದೇ ಅಣುಶಕ್ತಿ ತಂತ್ರಜ್ಞಾನವನ್ನು ಅಸ್ತವ್ಯಸ್ತಗೊಳಿಸುವ ಅಪಾಯವನ್ನು ಒಳಗೊಂಡಿದೆ ಎನ್ನುವುದು. ಈ ಒಪ್ಪಂದ ನಮ್ಮಲ್ಲಿ ಯುರೇನಿಯಂ ನಿಕ್ಷೇಪ ತುಂಬಾ ಕಡಿಮೆಯಿರುವ ಹಿನ್ನೆಲೆಯಲ್ಲಿ ಅನಿವಾರ್ಯವಾಗಿದೆ ಎಂದು ಸರ್ಕಾರ ಹೇಳುತ್ತಿದೆಯಾದರೂ, ಈ ವಾಸ್ತವವನ್ನು ತಿಳಿದೇ ನಮ್ಮ ವಿಜ್ಞಾನಿಗಳು ನಮ್ಮಲ್ಲಿ ಸಮೃದ್ಧವಾಗಿ ದೊರೆಯುವ ಥೋರಿಯಂ ಆಧಾರಿತ ತಂತ್ರಜಾನವನ್ನು ಅಭಿವೃದ್ಧಿಪಡಿಸಿ, ಅದನ್ನೀಗ ಮತ್ತಷ್ಟು ಸುಧಾರಿಸುವ ಪ್ರಯತ್ನಗಳನ್ನೂ ನಡೆಸಿದ್ದಾರೆ. ಈಗ ಈ ಒಪ್ಪಂದ, ರಾಷ್ಟ್ರದ ಈ ಸ್ವಾವಲಂಬಿ ಅಣುಶಕ್ತಿ ಉತ್ಪಾದನಾ ಯೋಜನೆಯಲ್ಲಿ ತೊಡಗಿರುವ ನಮ್ಮ ವಿಜ್ಞಾನಿಗಳ ನೈತಿಕ ಸ್ಥೈರ್ಯವನ್ನೇ ಉಡುಗಿಸುವಂತಿದೆ. ಇನ್ನು ಬಾಹ್ಯ ದೇಶಗಳ ಪ್ರತಿನಿಧಿಗಳಿಗೆ ನಮ್ಮ ಅಣುಶಕ್ತಿ ಕೇಂದ್ರಗಳ ಪರಿವೀಕ್ಷಣೆ ಮತ್ತು ಅದರ ಆಧಾರದ ಮೇಲೆ ಯುರೇನಿಯಂ ಸರಬರಾಜನ್ನು ನಿಲ್ಲಿಸುವ ನಿರ್ದಿಷ್ಟ ಅಧಿಕಾರಗಳನ್ನೂ ಈ ಒಪ್ಪಂದ ಒಳಗೊಂಡಿರುವುದರಿಂದ, ಈ ಒಪ್ಪಂದದ ಪ್ರಕಾರವೇ ಸ್ಥಾಪಿಸಬೇಕಾದ ಯುರೇನಿಯಂ ಆಧಾರಿತ ಅಣು ಸ್ಥಾವರಗಳ ಮೇಲೆ ನಾವು ಯಾವ ಭರವಸೆಯ ಮೇಲೆ ಕೊಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕು? ಇನ್ನೂ ಮುಖ್ಯವಾಗಿ, ನಮ್ಮ ಈಚಿನ ರಕ್ಷಣಾ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರುವ ನಮ್ಮದೇ ಪರಮಾಣು ಶಸ್ತ್ರಾಸ್ತ್ರ ಕಾರ್ಯಕ್ರಮದ ಭವಿಷ್ಯ ಈಗ ಎಷ್ಟು ನಿಶ್ಚಿತ? ಇವು ರಾಜಕಾರಣಿಗಳು ಕೇಳುತ್ತಿರುವ ಪ್ರಶ್ನೆಗಳಲ್ಲ. ಈ ಕ್ಷೇತ್ರಗಳಿಗೆ ತಮ್ಮದೇ ವಿಶಿಷ್ಟ ಕೊಡುಗೆ ಸಲ್ಲಿಸಿರುವ ಉನ್ನತ ವಿಜ್ಞಾನಿಗಳು ಮತ್ತು ಆಡಳಿತಗಾರರು ಕೇಳುತ್ತಿರುವ ಪ್ರಶ್ನೆಗಳು.

ಇವರಿಗೆ ಉತ್ತರ ಕೊಡುವ ಸಹನೆಯನ್ನಾಗಲೀ, ವ್ಯವಧಾನವನ್ನಾಗಲೀ ಪ್ರದರ್ಶಿಸದ ಮನಮೋಹನ ಸಿಂಗರ ನೈತಿಕತೆಯ ವ್ಯಾಖ್ಯಾನವಾದರೂ ಯಾವುದು? ಅವರೇಕೆ ಹೀಗೆ ಈ ಒಪ್ಪಂದದ ಪರವಾಗಿ, ಇದು ಒಂದು ರಾಷ್ಟ್ರದ ಸಾವು-ಬದುಕಿನ ತುರ್ತು ಪ್ರಶ್ನೆಯೆಂಬಂತೆ ಮುಸ್ಸುಗ್ಗುತ್ತಿದ್ದಾರೆ? ಅಮೆರಿಕಾವಾದರೂ ಏಕೆ ಹೀಗೆ, ಅಂತಾರಾಷ್ಟ್ರೀಯ ಪರಮಾಣುಶಕ್ತಿ ಕ್ಷೇತ್ರದಿಂದ ತಾನೇ ಬಹಿಷ್ಕೃತಗೊಳಿಸಿದ್ದ ದೇಶದ ಬಗ್ಗೆ ಈಗ ಇದ್ದಕ್ಕಿದ್ದಂತೆ ಒಲವು ಮೂಡಿ, ಅದಕ್ಕೆ ತನ್ನ ಅತ್ಯಾಧುನಿಕ ಅಣು ತಂತ್ರಜ್ಞಾನವನ್ನು ವರ್ಗಾಯಿಸಲು ಇಷ್ಟು ಆಸಕ್ತಿ

ತೋರಿಸುತ್ತಿದೆ? ಭವಿಷ್ಯದ ಜಾಗತಿಕ ಶಕ್ತಿ ರಾಜಕಾರಣದಲ್ಲಿ ಭಾರತವನ್ನು ತನ್ನ ಸಹವರ್ತಿಯನ್ನಾಗಿ ಮಾಡಿಕೊಳ್ಳಲಲ್ಲವೆ? ಪ್ರಾದೇಶಿಕ ರಕ್ಷಣೆಯ ಉದ್ದೇಶದಿಂದ ರೂಪುಗೊಂಡ NATO ವ್ಯವಸ್ಥೆಯನ್ನೀಗ ರಷ್ಯಾ ಮತ್ತು ಚೀನಾ ಗಡಿಗಳಲ್ಲಿ ಖಂಡಾಂತರ ಕ್ಷಿಪಣಿಗಳನ್ನು ಸ್ಥಾಪಿಸುವ ಮೂಲಕ 'ಜಾಗತಿಕ ಜನತಾ ವಿಮೋಚನೆ'ಯ ಉದ್ದೇಶಕ್ಕೆ ಒಗ್ಗಿಸುವ ಪ್ರಯತ್ನದಲ್ಲಿ ತೊಡಗಿರುವ ಅಮೆರಿಕಾದ ಸಹವರ್ತಿಯಾಗುವುದೆಂದರೆ ಏನೆಂಬುದರ ಕಲ್ಪನೆ ಈ ಸರ್ಕಾರಕ್ಕಿದ್ದಂತಿಲ್ಲ. ಭಾರತದ ರಾಷ್ಟ್ರೀಯ ಸಾರ್ವಭೌಮತೆಯನ್ನು ಎತ್ತಿ ಹಿಡಿಯುತ್ತಾ ಬಂದಿರುವ ನಮ್ಮ ಅಲಿಪ್ತ ಮತ್ತು ಸ್ವತಂತ್ರ ವಿದೇಶಾಂಗ ನೀತಿಗೆ ಇದೊಂದು ಕೊಡಲಿ ಪೆಟ್ಟು ಮಾತ್ರವಲ್ಲ, ಭವಿಷ್ಯದಲ್ಲಿ ಈ ಸಂಬಂಧ ರಾಷ್ಟ್ರ ಎದುರಿಸಬೇಕಾಗಿ ಬರಬಹುದಾದ ಅಂತಾರಾಷ್ಟ್ರೀಯ ಅನಾಹುತಗಳಿಗೆ ಆಹ್ವಾನವೂ ಹೌದು. ಜೊತೆಗೆ ಈ ಒಪ್ಪಂದ ಪ್ರಸ್ತಾಪಿಸುವ ೧೦೦ ಶತಕೋಟಿ ಡಾಲರ್‌ಗಳಷ್ಟು ಅಪಾರ ವೆಚ್ಚದ ೪೦ ಪರಮಾಣು ಶಕ್ತಿ ಯಂತ್ರಗಳ ಆಮದು ತೆರೆಯುವ; ಮತ್ತು ಇದರ ಭಾಗವಾಗಿಯೇ ನಮಗೆ ವರ್ಗಾವಣೆಯಾಗುವ ಹೊಸ ಅಣು ತಂತ್ರಜ್ಞಾನದ ಆಧಾರದ ಮೇಲೆ ನಾವು ಆರಂಭಿಸಬಹುದಾದ ಅಣುಶಕ್ತಿ ಯಂತ್ರಗಳ ತಯಾರಿಕೆ ಮತ್ತು ರಫ್ತು ವ್ಯವಹಾರ, ಜಾಗತಿಕ ಶಕ್ತಿ ರಾಜಕಾರಣದಲ್ಲಿ ಅಮೆರಿಕಾದ ಮಿತ್ರರಾಗಿ ಮುಂದೆ ನಮ್ಮನ್ನೆಲ್ಲಿಗೆ ತಲುಪಿಸಬಹುದು ಎಂಬುದರ ಬಗ್ಗೆಯೂ ನಾವೀಗ ಗಂಭೀರವಾಗಿ ಆಲೋಚಿಸಬೇಕಿದೆ. ಏಕೆಂದರೆ, ಈ ಅಣು ಒಪ್ಪಂದ ಅಮೆರಿಕಾದ ವಿದೇಶಾಂಗ ನೀತಿಯ ಹಿತಾಸಕ್ತಿಗಳನ್ನೂ ಕಾಯುವಂತಿರಬೇಕೆಂದು ಈ ಒಪ್ಪಂದದ ಹಿನ್ನೆಲೆಯಲ್ಲಿರುವ ಹೈಡ್ ಕಾಯಿದೆ ಸೂಚಿಸುತ್ತದೆ.

ದಟ್ಟ ನೈತಿಕತೆಯ ಮನಮೋಹನ ಸಿಂಗರ ಈ ರಾಜಕಾರಣ ತಮ್ಮ ಸರ್ಕಾರದ ಅಲ್ಪಾವಧಿ ಉಳಿವಿಗಾಗಿ ರಾಷ್ಟ್ರ ರಾಜಕಾರಣದ ಮೇಲೆ ಉಂಟು ಮಾಡಿರುವ ಒತ್ತಡಗಳ ದೀರ್ಘಕಾಲಿಕ ಪರಿಣಾಮಗಳನ್ನೂ ನಾವು ಗಮನಿಸಬೇಕಾಗಿದೆ. ಕಾಂಗ್ರೆಸ್, ಬಿಜೆಪಿ ಮತ್ತು ಕಮ್ಯುನಿಸ್ಟ್ ಪಕ್ಷಗಳೂ ಸೇರಿದಂತೆ ರಾಷ್ಟ್ರದ ಎಲ್ಲ ಪಕ್ಷಗಳಲ್ಲೂ ಬಂಡಾಯ ಸ್ಫೋಟಗೊಂಡಿದೆ. ಇನ್ನುಳಿದಿರುವ ಆರೇಳು ತಿಂಗಳುಗಳ ಸಂಸತ್ ಸದಸ್ಯತ್ವಕ್ಕಿಂತ ಎರಡೂ ಕಡೆಯವರು ಒಡ್ಡಿರುವ ಹಣ ಮತ್ತು ಅಧಿಕಾರದ ಆಮಿಷಗಳೇ ಹೆಚ್ಚು ಆಕರ್ಷಕವೆನಿಸಿವೆ. ಇದರಿಂದಾಗಿ ಸಣ್ಣಪುಟ್ಟ ರಾಜಕೀಯ ಪಕ್ಷಗಳ ಮತ್ತು ಪಕ್ಷೇತರರ ನೀತಿ ನೆಲಗಟ್ಟುಗಳೇ ಇದ್ದಕ್ಕಿದ್ದಂತೆ ಬದಲಾಗುತ್ತಾ ಹೋಗಿವೆ! ಸಿ.ಬಿ.ಐ. ರಾಜಕೀಯ ಸೇಡಿನ ಸಾಧನವಾಗಿ ಮತ್ತೊಮ್ಮೆ ತನ್ನ ಘನತೆಯನ್ನು ಕಳೆದುಕೊಳ್ಳುವಂತಾಗಿದೆ. ಕಾಂಗ್ರೆಸ್ ಕಣ್ಣಲ್ಲಿ ಈವರೆಗೆ ದುಷ್ಟ ಮತ್ತು ಭ್ರಷ್ಟ ಜೋಡಿಯೆನಿಸಿದ್ದ ಮುಲಾಯಂ-ಅಮರಸಿಂಗ್, ಈಗ ರಾಷ್ಟ್ರ ಹಿತಾಸಕ್ತಿಯ ರಕ್ಷಕ ಜೋಡಿಯಾಗಿ ಪರಿವರ್ತಿತವಾಗಿದೆ! ಕಾಂಗೆಸ್ಸಿನ ನಿಜವಾದ ದುರಂತವೆಂದರೆ, ಗಾಂಧೀಜಿಯನ್ನು ತನ್ನ ಪರಂಪರೆಯ ಪ್ರತೀಕ ಎಂದು ಇನ್ನೂ ಹೇಳಿಕೊಳ್ಳುತ್ತಿರುವ ಈ ಪಕ್ಷದ ಒಬ್ಬ ಸದಸ್ಯನೂ, ಸಾರಾ ಸಗಟಾಗಿ ನಾವು ಜಾಗತಿಕ ಶಕ್ತಿಯಾಗುವುದೂ ಬೇಡ, ಅದಕ್ಕಾಗಿ ಈ ಪರಮಾಣು ಶಕ್ತಿಯ ರಾಜಕಾರಣವೂ ಬೇಡ ಎಂದು ಹೇಳುವ ವಿವೇಕವನ್ನಾಗಲೀ, ಧೈರ್ಯವನ್ನಾಗಲೀ

ಪ್ರದರ್ಶಿಸದೇ ಹೋದದ್ದು. ಕಾಂಗ್ರೆಸ್ ಪೂರ್ತಿಯಾಗಿ ಈಗ ಬೇರೆ ಗಾಂಧಿಗಳನ್ನೇ ತನ್ನ ಪ್ರತೀಕಗಳನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿದಂತಿದೆ!

ಇನ್ನು, ತಾನೇ ಆರಂಭಿಸಿದ್ದೆಂದು ಹೇಳಿಕೊಳ್ಳುತ್ತಾ, ಈ ಅಣುಶಕ್ತಿ ಒಪ್ಪಂದವನ್ನು ಮೊನ್ನೆ ಮೊನ್ನೆಯವರೆಗೆ ಸಮರ್ಥಿಸಿಕೊಳ್ಳುತ್ತಿದ್ದ ಬಿಜೆಪಿಯ ಕಣ್ಣುಗಳು ಈಗ ಇದ್ದಕ್ಕಿದ್ದಂತೆ ಅದರ ವಿವರಗಳಲ್ಲಿ ದೋಷಗಳು ಕಾಣುವಷ್ಟು ಸೂಕ್ಷ್ಮವಾಗಿಬಿಟ್ಟವೆ! ಇನ್ನು ನಮ್ಮ ದೇವೇಗೌಡರಿಗೆ 'ಎಡ ಪಕ್ಷಗಳು ನಮ್ಮ ಸಹಜ ಮಿತ್ರರು' ಎಂಬ ಹಳೆಯ ಸತ್ಯ ಮನಮೋಹನ ಸಿಂಗರನ್ನು ಭೇಟಿ ಮಾಡಿ ಬರಿಗೈಲಿ ಹಿಂದಿರುಗಿದ ಮೇಲಷ್ಟೇ ಮತ್ತೆ ನೆನಪಿಗೆ ಬಂದದ್ದು! ಎಡ ಪಕ್ಷಗಳಾದರೋ ಎಲ್ಲ ರಾಜಕೀಯ ಮರ್ಯಾದೆಯನ್ನು ಧಿಕ್ಕರಿಸಿ ಅಣು ಒಪ್ಪಂದ ಮುಸ್ಲಿಂ ವಿರೋಧಿ ಎಂಬ ಅಗ್ಗದ ರಾಜಕೀಯ ಪ್ರಚಾರಕ್ಕೆ ಮುಂದಾದವಲ್ಲದೆ, ಲೋಕಸಭಾಧ್ಯಕರ್ಷ ಸ್ಥಾನಮಾನಕ್ಕೇ ಧಕ್ಕೆ ತರುವ ಘಾತುಕ ರಾಜಕಾರಣಕ್ಕೂ ಕೈಹಾಕಿದವು. ಇದರಿಂದ ಸ್ಫೂರ್ತಿಗೊಂಡಂತೆ, ಇತ್ತೀಚಿನವರೆಗೆ ಇದೇ ಎಡ ಪಕ್ಷಗಳ ಪ್ರಕಾರವೇ ತತ್ವ ದರಿದ್ರವಾದ ಜಾತಿವಾದಿ ರಾಜಕಾರಣ ಮಾಡುತ್ತಿದ್ದ ಮಾಯಾವತಿ ಇದ್ದಕ್ಕಿದ್ದಂತೆ ಅಣುಶಾಸ್ತ್ರ ಮತ್ತು ಧರ್ಮಶಾಸ್ತ್ರ ಸಂಪನ್ನೆಯಾಗಿ ಈ ಒಪ್ಪಂದ ಮುಸ್ಲಿಂ ವಿರೋಧಿಯೆಂಬುದನ್ನು ತಾನೂ ಕಂಡುಕೊಂಡು ಅವರ ಅಮೂಲ್ಯ ಜೊತೆಗಾತಿಯಾಗಿಬಿಟ್ಟಿದ್ದಾರೆ! ಇದರ ಪರಿಣಾಮವಾಗಿ ಅವರು ರಾಷ್ಟ್ರದ ಪ್ರಧಾನಿಯಾಗುವ ತಮ್ಮ ಒಂದಂಶದ ಕಾರ್ಯಕ್ರಮದ ಯಶಸ್ಸಿನ ಸಾಧ್ಯತೆಗಳನ್ನು, ಸರ್ಕಾರ ಉರುಳಿಸುವ ಎಡ ಪಕ್ಷಗಳ ಒಂದಂಶದ ಕಾರ್ಯಕ್ರಮದಲ್ಲಿ ಕಂಡುಕೊಳ್ಳಲಾರಂಭಿಸಿದ್ದಾರೆ!!

ಮನಮೋಹನರು ಸೃಷ್ಟಿಸಿರುವ ಇಂತಹ ದಟ್ಟ ನೈತಿಕತೆಯ ಗಟ್ಟಿ ರಾಜಕಾರಣದ ವಾತಾವರಣದಿಂದಾಗಿಯೇ, ನಮ್ಮ ಮುಖ್ಯಮಂತ್ರಿ ಯಡಿಯೂರಪ್ಪನವರು ರಾಜ್ಯದ ಸುಸ್ಥಿರ ಅಭಿವೃದ್ಧಿಯ ಲಕ್ಷ್ಯಗಳನ್ನೇ ಧಿಕ್ಕರಿಸಿ ರೂಪಿಸಿರುವ ತಮ್ಮ ದಾನ ಪತ್ರವನ್ನು, ರಾಜ್ಯದ ಆಯವ್ಯಯ ಪತ್ರವೆಂದು ಮಂಡಿಸುವ ಧೈರ್ಯ ಮಾಡಿ, ಜನರ ಚಪ್ಪಾಳೆಯನ್ನೂ ಗಿಟ್ಟಿಸಿಕೊಳ್ಳುವಂತಾಗಿರುವುದು! ಅಂದಹಾಗೆ, ಇದು ಜನಕ್ಕೆ ತಕ್ಕ ರಾಜಕಾರಣದ ಕಾಲವಲ್ಲ; ರಾಜಕಾರಣಕ್ಕೆ ತಕ್ಕ ಜನರ ಕಾಲ!! ಇದರರ್ಥ ಇಷ್ಟೆ: ಇಲ್ಲಿ ಪ್ರಜಾಪ್ರಭುತ್ವ ತಲೆಕೆಳಕಾಗತೊಡಗಿದೆ...

ಯಾರಿಗಾದರೂ ಈ ಮಾತು ಕೇಳಿಸುತ್ತಿದೆಯೆ?

(೧ ಆಗಸ್ಟ್, ೨೦೦೮)

■

೧೩. ಅಶ್ಲೀಲ ರಾಜಕಾರಣದ ಅಶಾಂತ ಸಮಾಜ

ಬೆಂಗಳೂರು ಉತ್ತರ ಕ್ಷೇತ್ರದ ಲೋಕಸಭಾ ಸದಸ್ಯ ಎಚ್.ಟಿ.ಸಾಂಗ್ಲಿಯಾನ ಅವರ ಕಛೇರಿಯ ಮೇಲೆ ರಾಜಕೀಯ ನೈತಿಕತೆಯೇ ಮೈಮೇಲೆ ಬಂದಂತೆ ಆಕ್ರೋಶ ವ್ಯಕ್ತಪಡಿಸುತ್ತಾ ದಾಳಿ ನಡೆಸಿದ ಬಿಜೆಪಿ ಕಾರ್ಯಕರ್ತರನ್ನು ನೋಡಿದರೆ, ಯಾರಿಗಾದರೂ ಅಯ್ಯೋ ಪಾಪ ಎನಿಸದಿರದು! ಮೊನ್ನೆ ಮೊನ್ನೆ ತಾನೇ ಇದೇ ಬಿಜೆಪಿಯವರು ರಾಜ್ಯದಲ್ಲಿ ವಿರೋಧ ಪಕ್ಷಗಳಿಂದ ಆಯ್ಕೆಯಾಗಿದ್ದ ಐವ್ವರು ಶಾಸಕರನ್ನು 'ಜಾತಿ' ಕೆಡಿಸಿ ನಡೆಸಿದ ರಾಜಕೀಯ ವ್ಯಭಿಚಾರದ ಮುಂದೆ ಸಾಂಗ್ಲಿಯಾನಾ ಮತ್ತು ಇತರೆ ಕೆಲವು ಬಿಜೆಪಿ ಸದಸ್ಯರು ಮೊನ್ನೆಯ ಲೋಕಸಭಾ ಮತ ಪರೀಕ್ಷೆಯಲ್ಲಿ ವ್ಯಕ್ತಪಡಿಸಿರುವ ಭಿನ್ನಾಭಿಪ್ರಾಯ ಏನೇನೂ ಅಲ್ಲ ಎಂದೇ ಹೇಳಬೇಕು. ಅವರು ತಮ್ಮ ಆತ್ಮಸಾಕ್ಷಿಗನುಗುಣವಾಗಿ, ಪರಮಾಣು ಒಪ್ಪಂದ ಭಾರತದ ಹಿತಕ್ಕೆ ಪೂರಕವಾಗಿದೆ ಎಂದು ನಂಬಿಯೇ ಮತ ಹಾಕಿರುವ ಎಲ್ಲ ಸಾಧ್ಯತೆಗಳಿವೆ. ನಿಜ, ಅವರು ತಮ್ಮ ನಿಲುವನ್ನು ತಮ್ಮ ಪಕ್ಷದ ಸಂಸದೀಯ ಸಭೆಯಲ್ಲಿ ಪ್ರಸ್ತಾಪ ಮಾಡಿ, ತಮ್ಮ ಅಂತಿಮ ನಿರ್ಧಾರವನ್ನು ಪ್ರಕಟಿಸಬಹುದಿತ್ತು. ಅಥವಾ ತಮ್ಮ ಪಕ್ಷದ ನಿಲುವನ್ನು ಪ್ರತಿಭಟಿಸಿ, ಪಕ್ಷಕ್ಕೆ ರಾಜೀನಾಮೆ ನೀಡಬಹುದಿತ್ತು. ಆದರೆ, ಈ ನೈತಿಕ ಸೂಕ್ಷ್ಮಗಳೆಲ್ಲ ಓಬೀರಾಯನ ಕಾಲದವೆಂದೂ; ಹಣ-ಅಧಿಕಾರಗಳ ಬೆಂಬಲವಿದ್ದರೆ, ಯಾರು, ಯಾವಾಗ ಬೇಕಾದರೂ–ಆಯ್ಕೆಯಾದ ಮರುದಿನವೇ ಬೇಕಾದರೂ–ಯಾವುದೇ ಪಕ್ಷದಲ್ಲಿರಲು ಸ್ವತಂತ್ರರೆಂದು ಅವರ ಪಕ್ಷವೇ ಇತ್ತೀಚೆಗೆ ಸಾರಿ ಹೇಳಿದೆಯಲ್ಲ?

ರಸಿಕತೆಗೂ, ವ್ಯಭಿಚಾರಕ್ಕೂ ಅಂತಹ ವ್ಯತ್ಯಾಸವೇನಿಲ್ಲ–ತನ್ನ ಮನೆಯ ಮಗ ಮಾಡಿದರೆ ರಸಿಕತೆ, ಪಕ್ಕದ ಮನೆಯವರ ಮಗ ಮಾಡಿದರೆ ವ್ಯಭಿಚಾರ ಎಂದು ಹೇಳಿದಂತಿದೆ ಬಿಜೆಪಿಯವರ ಈಗಿನ 'ನೈತಿಕ' ನಿಲವು! ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತರ ಧಮನಿಗಳಲ್ಲಿ ನಿಜವಾಗಿ ನೈತಿಕ ಆಕ್ರೋಶ ಉಕ್ಕೇರುತ್ತಿದ್ದರೆ, ಅವರು ಈಗ ಹಿಡಿದಿರುವ ಕಲ್ಲು, ಬಡಿಗೆ, ಚಪ್ಪಲಿಗಳೊಂದಿಗೆ ಮೊದಲು ಧಾವಿಸಬೇಕಾದ್ದು ತಮ್ಮದೇ ಪಕ್ಷದ ನಾಯಕರೆಡೆಗೇ! ರಾಜಕೀಯ ನೈತಿಕತೆಯನ್ನು ಒಂದಿಷ್ಟಾದರೂ ಕಾಪಾಡಲು ನಮ್ಮ ಸಂಸತ್ತು ರೂಪಿಸಿದ್ದ ಪಕ್ಷಾಂತರ ನಿಷೇಧ ಕಾನೂನನ್ನೇ ಅಪಹಾಸ್ಯಕ್ಕೀಡುಮಾಡುವಂತೆ ಇತ್ತೀಚೆಗೆ ಕರ್ನಾಟಕದಲ್ಲಿ ನಡೆದ ಅತ್ಯಂತ ಭಂಡವೆನಿಸಿದ ಪಕ್ಷಾಂತರವನ್ನು ಪ್ರಚೋದಿಸಿದವರ ಮನೆಗಳ ಕಡೆಗೆ! ಆಗ ಅವರ ರಕ್ಷಣೆಗಾಗಿ ಈ ಬಿಜೆಪಿ ನಾಯಕರೇ ಹೋಗುತ್ತಾರೋ ಅಥವಾ

ಈಗ ದಾಳಿಗೀಡಾಗಿರುವ ಭಿನ್ನಮತೀಯ ಬಿಜೆಪಿ ಸದಸ್ಯರಿಗೆ ಅವರು ಅಸಭ್ಯವಾಗಿ ಸೂಚಿಸಿರುವಂತೆ, ರಕ್ಷಣೆಗಾಗಿ ೧೦, ಜನಪಥ್‌ನ ಮೊರೆ ಹೋಗಬೇಕೆಂದು ಹೇಳುತ್ತಾರೋ ನೋಡಬೇಕು!

ದೇಶ ವಿಭಜನೆಯ ಸಂದರ್ಭದಲ್ಲಿ ಭುಗಿಲೆದ್ದಿದ್ದ ಕೋಮು ಹಿಂಸಾಚಾರದ ಸಂದರ್ಭದಲ್ಲಿ, ಸಮಾಜವಾದಿಗಳ ನೇತೃತ್ವ ವಹಿಸಿಕೊಳ್ಳುವಂತೆ ಕೋರಲು ತಮ್ಮನ್ನು ಭೇಟಿ ಮಾಡಿದ ಸಮಾಜವಾದಿಗಳ ನಿಯೋಗಕ್ಕೆ ಗಾಂಧೀಜಿ, ಈ ಹಿಂಸಾಚಾರಕ್ಕೆ ನೀವೂ ಕಾರಣರೆಂದು ಹೇಳಿದಾಗ ನಿಯೋಗದಲ್ಲಿದ್ದವರು ಬೆಚ್ಚಿ ಬಿದ್ದರಂತೆ. ಆಗ ಗಾಂಧಿ ಹೇಳಿದ್ದು: ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯನ್ನು ಹಿಂಸಾತ್ಮಕಗೊಳಿಸಿದ ನೀವು ಅಹಿಂಸೆಯ ಆದರ್ಶವನ್ನು ಅಪಮೌಲ್ಯಗೊಳಿಸಿ, ಹಿಂಸೆಗೆ ರಾಷ್ಟ್ರ ಜೀವನದಲ್ಲಿ ಒಂದು ಸಾಧುತ್ವ ಹಾಗೂ ಸಮ್ಮತಿಯನ್ನು ಒದಗಿಸುವ ಮೂಲಕ ಈ ಹಿಂಸಾಚಾರಕ್ಕೆ ನೀವೂ ಕಾರಣರಾಗಿದ್ದೀರಿ! ಹಾಗೇ, ಇತ್ತೀಚೆಗೆ ರಾಜಕೀಯ ನೈತಿಕತೆಯ ಮೈಮೇಲಿನ ಕೊನೆಯ ಬಟ್ಟೆಯನ್ನೂ ಕಿತ್ತೆಸೆದು ರಾಜ್ಯದ ರಾಜಕೀಯ ವಾತಾವರಣವನ್ನು ಪೂರ್ತಿಯಾಗಿ ಅಪವಿತ್ರಗೊಳಿಸಿದಲ್ಲದೆ, ಅದನ್ನು ಭಂಡತನದಿಂದ ಸಮರ್ಥಿಸಿಕೊಳ್ಳಲು ಮುಂದಾದ ಬಿಜೆಪಿಯವರೇ ಸಾಂಗ್ಲಿಯಾನ, ಮಂಜುನಾಥ ಕುನ್ನೂರು, ಶಿವಣ್ಣ ಮತ್ತು ಮನೋರಮಾ ಅವರಿಗೆ ರಾಜಕೀಯ ನೈತಿಕತೆಯ ಗೆರೆಯನ್ನು ದಾಟುವ ಧೈರ್ಯ-ಸಮರ್ಥನೆಗಳೆರಡನ್ನೂ ಒದಗಿಸಿದ್ದಾರೆ ಎಂದು ಹೇಳಬೇಕು! ಬಿಜೆಪಿಯವರಿಗೆ–ಹಾಗೆ ನೋಡಿದರೆ ಎಲ್ಲರಿಗೂ–ಮೊದಲು ತಿಳಿಯಬೇಕಾದದ್ದು, ರಾಜಕೀಯ ಶೀಲ ಎನ್ನುವುದು ಇಡಿಯಾದದ್ದು. ಅದನ್ನು ಒಡೆದು ಸಮರ್ಥಿಸಿಕೊಳ್ಳಲಾಗುವುದಿಲ್ಲ. ಅದು ಅಶ್ಲೀಲವವೆನಿಸಿಕೊಳ್ಳುತ್ತದೆ.

ಅಂದ ಮಾತ್ರಕ್ಕೆ ಸಾಂಗ್ಲಿಯಾನ ಮತ್ತು ಅವರ ಮಿತ್ರರು ಮಾಡಿದ್ದು ಕ್ಷಮಾರ್ಹವೆಂದಲ್ಲ. ಮೊದಲೇ ಹೇಳಿದ ಹಾಗೆ ಅವರು ಪಕ್ಷಕ್ಕೆ ರಾಜೀನಾಮೆ ನೀಡುವ ಮೂಲಕ ತಮ್ಮ ನಿಲುವನ್ನು ಬಹಿರಂಗವಾಗಿ ಸಮರ್ಥಿಸಿಕೊಳ್ಳಬಹುದಿತ್ತು. ಆದರೆ ಹಾಗೆ ರಾಜೀನಾಮೆ ನೀಡಲು ಇವರಿಗೆಲ್ಲ ಮೂಲತಃ ಪಕ್ಷದ ಬಗ್ಗೆ ನಿಷ್ಠೆ ಇತ್ತೇ ಎಂಬುದು ಪ್ರಶ್ನೆ. ಮತ ಪರೀಕ್ಷೆ ಸಮಯದಲ್ಲಿ ಪಕ್ಷದ ಆಜ್ಞೆಯನ್ನು ಉಲ್ಲಂಘಿಸಿ ಮತ ಹಾಕಿದ ಅಥವಾ ತಟಸ್ಥವಾಗುಳಿದ ರಾಜ್ಯದ ಲೋಕಸಭಾ ಸದಸ್ಯರೆಲ್ಲರೂ, ತಾತ್ವಿಕ ಕಾರಣಗಳ ಮೇಲೆ ಬಿಜೆಪಿಯಲ್ಲಿ ಅಥವಾ ಜೆಡಿಎಸ್‌ನಲ್ಲಿ ಇದ್ದವರಲ್ಲ ಎಂಬುದು ಅವರ ರಾಜಕೀಯ ಚರಿತ್ರೆಯನ್ನು ಬಲ್ಲ ಯಾರಿಗಾದರೂ ಸ್ಪಷ್ಟವಾಗುತ್ತದೆ. ಇವರಿಗೆಲ್ಲ, ಈಗ ಹಲ್ಲಲ್ಲು ಕಡಿಯುತ್ತಿರುವ ರಾಜಕೀಯ ಪಕ್ಷಗಳೇ ಆಗ ತಂತಮ್ಮ ರಾಜಕೀಯ ಅನುಕೂಲಗಳಿಗೆ ತಕ್ಕಂತೆ ಕರೆ ನೀಡಿ ಮಣೆ ಹಾಕಿದ್ದುದು. ಆ ರಾಜಕೀಯ ಬೇಜವಾಬ್ದಾರಿತನದ ಫಲವನ್ನು ಈ ಪಕ್ಷಗಳು ಈಗ ಅನುಭವಿಸುತ್ತಿವೆ ಅಷ್ಟೆ.

ಈ ಮತ ಪರೀಕ್ಷೆಯಲ್ಲಿ ಅತಿ ಹೆಚ್ಚು ಆಘಾತಕ್ಕೊಳಗಾಗಿರುವುದು, ತನ್ನನ್ನು ತಾನು ತಾತ್ವಿಕ ಪಕ್ಷವೆಂದು ಬಹು ಹೆಮ್ಮೆಯಿಂದ ಕರೆದುಕೊಳ್ಳುತ್ತಿದ್ದ ಬಿಜೆಪಿಯೇ. ಪಕ್ಷದ ಆಜ್ಞೆ ಉಲ್ಲಂಘಿಸಿದ ಅತಿ ಹೆಚು–ಒಟ್ಟು ಎಂಟು ಜನ–ಸದಸ್ಯರು ಈ ಪಕ್ಷಕ್ಕೆ ಸೇರಿದವರು. ಈ

ಮತ ಪರೀಕ್ಷೆ ಬಿಜೆಪಿಯನ್ನು ರಾಷ್ಟ್ರೀಯ ರಾಜಕಾರಣದಲ್ಲಿ ಒಂಟಿಯಾಗಿಸಿಬಿಟ್ಟಿದೆ. ಹಾಗೇ, ಅದರ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ ಕೂಟ ಛಿದ್ರವಾಗಿ ಹೋಗಿದೆ. ಬಿಹಾರದ ಜೆಡಿಯು, ಮಹಾರಾಷ್ಟ್ರದ ಶಿವಸೇನೆ ಮತ್ತು ಪಂಜಾಬಿನ ಅಕಾಲಿ ದಳದ ಹೊರತಾಗಿ ಮಿಕ್ಕೆಲ್ಲ ಪಕ್ಷಗಳೂ ಮಾಯಾವತಿ ನೇತೃತ್ವದ ಹೊಸ ತೃತೀಯ ರಂಗದೆಡೆಗೆ ವಲಸೆ ಹೋಗಿವೆ. ಏಕೆ ಹೀಗೆ ಎಂದು ಯೋಚಿಸುವ ಕಾಲ ಬಿಜೆಪಿಗೆ ಬಂದಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ತನ್ನ ತಾತ್ವಿಕ ರಾಜಕಾರಣವನ್ನು ಅಧಿಕಾರದ ಆತುರದಲ್ಲಿ ದ್ವೇಷದ ರಾಜಕಾರಣವನ್ನಾಗಿ ಪರಿವರ್ತಿಸಿಕೊಂಡು, ಅದಕ್ಕೆ ತಕ್ಕಂತೆ ಸಿಕ್ಕ ಸಿಕ್ಕವರನ್ನೆಲ್ಲ ಪಕ್ಷಕ್ಕೆ ಆಹ್ವಾನಿಸುತ್ತಾ ಹೇಗೋ ಅಧಿಕಾರದ ಹತ್ತಿರ ಧಾವಿಸುವ ರಾಜಕಾರಣ ಮಾಡಲು ಹೊರಟ ಬಿಜೆಪಿ, ಅತಿ ಬೇಗ ಒಂದು ರೂಕ್ಷ ಪಕ್ಷವಾಗಿ ರೂಪುಗೊಂಡು ಇತರೆಲ್ಲ ಪಕ್ಷಗಳಿಗಿಂತ ಹೆಚ್ಚು ನಿರ್ಣಾಯಕವಾದ ನೈತಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ರಾಷ್ಟ್ರದ ಅತಿ ದೊಡ್ಡ ಪಕ್ಷಗಳಲ್ಲೊಂದಾಗಿರುವ ಈ ಪಕ್ಷದ ಈ ನೈತಿಕ ಬಿಕ್ಕಟ್ಟು, ಬರೀ ಆ ಪಕ್ಷದ ಬಿಕ್ಕಟ್ಟಾಗಿರಲು ಸಾಧ್ಯವಿಲ್ಲ. ರಾಷ್ಟ್ರೀಯತೆಯನ್ನು ಸಂಸ್ಕೃತಿಯ ನೆಲೆಯಲ್ಲಿ ಪ್ರತಿಪಾದಿಸುವ ಈ ಪಕ್ಷವೀಗ ತನ್ನ ರಾಜಕೀಯ ಸಂಸ್ಕೃತಿಯ ಬಗೆಗೇ ಗಂಭೀರವಾಗಿ ಆಲೋಚಿಸುವ ಕಾಲ ಬಂದಿದೆ.

ಇನ್ನು ಮತ ಪರೀಕ್ಷೆಯಲ್ಲಿ ಗೆದ್ದಿರುವ ಕಾಂಗ್ರೆಸ್ಸಿನ ಮುಂದಿರುವ ದಾರಿಯ ಕಡೆ ನೋಡೋಣ. ಅದು ಈ ಮತ ಪರೀಕ್ಷೆಯನ್ನು ಗೆದ್ದು ಒಂದು ಮಹಾ ಚುನಾವಣೆಯನ್ನೇ ಗೆದ್ದ ಸಂಭ್ರಮದಿಂದ ಬೀಗುತ್ತಿದೆ! ಆದರೆ ಹಾಗೆ ಬೀಗಲು ಕಾರಣಗಳೇ ಇಲ್ಲವೆಂದು ಇದೇ ಮತ ಪರೀಕ್ಷೆಯ ಸಮಯದಲ್ಲಿ ಸದನದಲ್ಲೇ ಬಹಿರಂಗಗೊಂಡ ಕೋಟ್ಯಾಂತರ ರೂಪಾಯಿಗಳ ನಗದು ಹಗರಣ ಸ್ಪಷ್ಟವಾಗಿ ಹೇಳುತ್ತಿದೆ. ಹಾಗೆ ನೋಡಿದರೆ, 'ಡೆಕ್ಕನ್ ಹೆರಾಲ್ಡ್' ಪತ್ರಿಕೆ ಬಹು ಪರಿಣಾಮಕಾರಿಯಾಗಿ ಹೇಳಿದಂತೆ; ಈ 'ಟ್ರಸ್ಟ್ ವೋಟ್'ನಲ್ಲಿ ಸರ್ಕಾರ ವೋಟ್ ಗೆದ್ದು, ಟ್ರಸ್ಟ್ ಕಳೆದುಕೊಂಡಿದೆ! ಈ ಇಡೀ ಮತ ಪರೀಕ್ಷೆಯ ಪ್ರಸಂಗ, ರಾಷ್ಟ್ರ ರಾಜಕಾರಣದ ಶುಚಿ ರುಚಿಗಳನ್ನೇ ಕೆಡಿಸಿದೆ. ಅದು ಡಿ.ಎಂ.ಕೆ. ಹೊರತಾಗಿ ಸರಿಸುಮಾರು ಎಲ್ಲ-ಕಾಂಗ್ರೆಸ್ಸೂ ಸೇರಿದಂತೆ-ಪಕ್ಷಗಳಲ್ಲೂ 'ಬಂಡಾಯ' ಭುಗಿಲೇಳಲು ಕಾರಣವಾಗಿದೆ. ಈ ಬಂಡಾಯದ ಹಿಂದೆ ಇರುವುದು ಖಂಡಿತ ಪರಮಾಣು ಒಪ್ಪಂದದ ಬಗೆಗಿರುವ ನಿಲುವುಗಳಲ್ಲ. ಏಕೆಂದರೆ ಈ ಒಪ್ಪಂದ ಲಾಲೂ ತಮ್ಮ ಭಾಷಣದಲ್ಲಿ ಹೇಳಿದಂತೆ, ಯಾವ ಸಾಮಾನ್ಯ ಸದಸ್ಯನಿಗೂ ಅರ್ಥವಾಗದಷ್ಟು ಕುಟಿಜಟಿಲವಾಗಿದೆ. ಬದಲಿಗೆ, ಪಕ್ಷಗಳೊಳಗೆ ಬಹು ದಿನಗಳಿಂದಲೂ ಹೊಗೆಯಾಡುತ್ತಿದ್ದ ಅಸಮಧಾನಗಳು ಈಗ ಈ 'ರಾಷ್ಟ್ರೀಯ ಹಿತಾಸಕ್ತಿ'ಯ ನೆಪದಲ್ಲಿ ಲಾಭದಾಯಕ ರೂಪಗಳಲ್ಲಿ ಹೊರಬಂದಿವೆ: ತಮ್ಮ ಅಪರಾಧ ಹಿನ್ನೆಲೆಗಳಿಂದಾಗಿ ಹಿನ್ನೆಲೆಗೆ ಸರಿದಿದ್ದ ಒಂದಿಬ್ಬರು ಸದ್ಯದಲ್ಲೇ ಕೇಂದ್ರ ಮಂತ್ರಿಗಳಾಗಲಿದ್ದಾರೆ. ಇನ್ನೊಂದಿಬ್ಬರು ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರದ ಮೊಕದ್ದಮೆಯ ಬಲೆಯಿಂದ ಸದ್ಯಕ್ಕಂತೂ ಪಾರಾಗಲಿದ್ದಾರೆ. ಇದರಿಂದಾಗಿ ಸರ್ಕಾರದ ಭ್ರಷ್ಟಾಚಾರ ವಿರೋಧಿ ಕಾರ್ಯಾಚರಣೆಯ ವಿಶ್ವಾಸಾರ್ಹತೆ ಭಂಗಗೊಳ್ಳುವುದನ್ನು ತಪ್ಪಿಸಲು, ಈ ಹಿಂದೆ ಸರ್ಕಾರದ ಅನುಕೂಲಕ್ಕಾಗಿಯೇ ಇಂತಹುದೇ

ಭ್ರಷ್ಟಾಚಾರದ ಮೊಕದ್ದಮೆಯ ಬಲೆಯಿಂದ ಹೆಚ್ಚೂ ಕಡಿಮೆ ಬಿಡುಗಡೆಗೊಂಡಿದ್ದ ಇವರ ಪ್ರಬಲ ರಾಜಕೀಯ ವಿರೋಧಿಯೊಬ್ಬರನ್ನು ಮತ್ತೆ ಬಲೆಗೆ ಕೆಡವಲು ಸಿದ್ಧತೆಗಳು ನಡೆದಿವೆ!

ಅಷ್ಟೇ ಅಲ್ಲ, ರಾಷ್ಟ್ರೀಯ ಹಿತ ದೃಷ್ಟಿಯಿಂದ ಈಶಾನ್ಯ ರಾಜ್ಯಗಳ ಗಡಿಯನ್ನು ಪರಿಷ್ಕರಿಸದಿರಲು ಬಹುಕಾಲದಿಂದ ಬದ್ಧವಾಗಿದ್ದ ಸರ್ಕಾರ ಈಗ ಆ ನೀತಿಯನ್ನು ಪುನರ್ವಿಮರ್ಶಿಸಲು ಸಿದ್ಧವಾಗಿದೆ! ಹೀಗೆ ಒಂಟಿ ಅಥವಾ ಪಕ್ಷೇತರ ಸದಸ್ಯರು ಈ ಅಣು ಒಪ್ಪಂದಿಂದ ಪಡೆದಿರಬಹುದಾದ 'ಪ್ರಯೋಜನ'ಗಳ ಪರಿಣಾಮವನ್ನು ಅರಿಯಬೇಕಿದ್ದರೆ, ತಸ್ಲೀಮಾ ನಸ್ರೀನ್ ಮೇಲೆ ಹೈದರಾಬಾದ್‌ನಲ್ಲಿ ದಾಳಿ ನಡೆಸಿದ ಎಂ.ಐ.ಎಂ. ಎಂಬ ಮುಸ್ಲಿಂ ಕೋಮುವಾದಿ ಪಕ್ಷದ ತರುಣ ಸದಸ್ಯ ಒವಾಸಿಸ್ ಎಂಬಾತ ಈ ಅಧಿವೇಶನದಲ್ಲಿ ಪ್ರದರ್ಶಿಸಿದ ನಡಾವಳಿಯನ್ನು ಗಮನವಿಟ್ಟು ನೋಡಬೇಕಿತ್ತು. ಈತ ಪರಮಾಣು ಒಪ್ಪಂದದ ಬಗ್ಗೆ ಒಂದೂ ಮಾತಾಡದೆ, ಬಿಜೆಪಿ ಮತ್ತು ಎಡ ಪಕ್ಷಗಳ ಮೇಲೆ ಬೈಗುಳಗಳ ಮಳೆಯನ್ನೇ ಸುರಿಸಿದ್ದಲ್ಲದೆ, ಇದ್ದಕ್ಕಿದ್ದಂತೆ ತಮ್ಮ ನಿಲುವನ್ನು ಸರ್ಕಾರದ ಪರವಾಗಿ ಬದಲಾಯಿಸಿದ ಈಶಾನ್ಯ ರಾಜ್ಯಗಳ ಒಂಟಿ ಸದಸ್ಯರ ಹಿಂದೆ ಬಾಯಗಲಿಸಿ ಕೂತು ಅವರಿಗೆ ಕುಮ್ಮಕ್ಕು ನೀಡುತ್ತಿದ್ದ. ಅವರನ್ನು ವಿರೋಧಿಸಿ ಕೂಗಾಡುತ್ತಿದ್ದ ಎಡ ಪಕ್ಷಗಳ ಸದಸ್ಯರ ಮೇಲೆ ಈತ ಏಕಾಂಗಿ ವೀರನಂತೆ ದೊಡ್ಡ ಗಂಟಲಿನಲ್ಲಿ ಹರಿಹಾಯುತ್ತಿದ್ದ. ಟಿ.ವಿ.ಯಲ್ಲಿ ಕಂಡ ಈ ದೃಶ್ಯಗಳು, ಮನಮೋಹನ ಸಿಂಗರ ನೇತೃತ್ವದ ಸರ್ಕಾರದ ನೈತಿಕ ಕೈ ಎಲ್ಲೆಲ್ಲಿ ಯಾವಾವ ರೂಪದಲ್ಲಿ ಕೆಲಸ ಮಾಡಿತ್ತು ಎಂಬುದನ್ನು ಸೂಚ್ಯವಾಗಿ ಹೇಳುವಂತಿದ್ದವು! ತನ್ನ ತಂದೆಗೆ ಹೋಲಿಸಿದರೆ, ಇದ್ದುದರಲ್ಲಿ ಸಭ್ಯ ರಾಜಕಾರಣಿಯೆನಿಸಿದ ಒಮರ್ ಅಬ್ದುಲ್ಲಾ ಕೂಡಾ ಅಂದು ಮಾತಾಡಿದ್ದು, ಪರಮಾಣು ಒಪ್ಪಂದದ ಸಾಧಕ-ಬಾಧಕಗಳ ಮೇಲಲ್ಲ. ತಮ್ಮ ಪಕ್ಷ ಇತ್ತೀಚಿನವರೆಗೆ ಮೈತ್ರಿ ಮಾಡಿಕೊಂಡಿದ್ದ ಬಿಜೆಪಿ ಮತ್ತು ಎಡ ಪಕ್ಷಗಳ 'ಅಪಾಯಕಾರಿ' ರಾಜಕಾರಣದ ಬಗ್ಗೆ!

ಈ ಭಾಷಣಗಳನ್ನು ನಮ್ಮ ರಾಷ್ಟ್ರೀಯ ಮಾಧ್ಯಮಗಳು ಪ್ರಚಂಡ ಭಾಷಣಗಳೆಂದು ಕರೆದವು. ಪರಮಾಣು ಒಪ್ಪಂದವನ್ನು ವಿರೋಧಿಸುತ್ತಿರುವವರು ಇಂಧನ ಅಗತ್ಯಗಳ ವಾಸ್ತವವನ್ನು ನಿರಾಕರಿಸುತ್ತಿಲ್ಲ ಎಂಬ ಪ್ರಾಥಮಿಕ ಅರಿವೂ ಇಲ್ಲದೆ ರಾಹುಲ್ ಗಾಂಧಿ ಬಾಲಿಶವಾಗಿ ಹೇಳಿದ 'ಕಲಾವತಿ ಕಥೆ'*ಯನ್ನು ಅದ್ಭುತವೆಂದು ವರ್ಣಿಸಿದವು! ಎಡ ಪಕ್ಷಗಳು ಮತ ಹಾಕುತ್ತಿರುವುದು ಅಣು ಒಪ್ಪಂದದ ವಿರುದ್ಧವಾಗಿಯೇ ಹೊರತು, ಬಿಜೆಪಿ ಪರವಾಗಿ ಅಲ್ಲ ಎಂಬುದು ಗೊತ್ತಿದ್ದೂ, ನೀವು ಕೋಮುವಾದಿ ಬಿಜೆಪಿ ಜೊತೆ ಸೇರಿ ಸರ್ಕಾರದ ವಿರುದ್ಧ ಮತ ಹಾಕುವಿರಾ ಎಂದು ಎಡ ಪಕ್ಷಗಳ ನಾಯಕರನ್ನು ಕೇಳಿ ಅವರನ್ನು ಮುಜುಗರಕ್ಕೀಡು ಮಾಡುವ ಪ್ರಯತ್ನ ಮಾಡಿದವು. ಅಣು ಒಪ್ಪಂದದ ಹಿಂದೆ ಎಂತೆಂತಹ

---

* ಇದು ರಾಹುಲ್‌ಗಾಂಧಿ ಭೇಟಿ ನೀಡಿದ ಮಹಾರಾಷ್ಟ್ರದಲ್ಲಿನ ಹಳ್ಳಿಯೊಂದರಲ್ಲಿ ವಿದ್ಯುತ್ ಇಲ್ಲದೆ ಕಲಾವತಿ ಎಂಬ ಮಹಿಳೆ ಪಡುತ್ತಿದ್ದ ಪಡಿಪಾಟಲಿನ ವಿವರಗಳು!

ಶಕ್ತಿಗಳು ಇದ್ದವೆಂದರೆ, ಸರ್ಕಾರ ಮತ ಪರೀಕ್ಷೆಯಲ್ಲಿ ಗೆದ್ದ ದಿನ ನಮ್ಮ ಷೇರುಪೇಟೆ ಸೂಚ್ಯಂಕ ಅಭೂತಪೂರ್ವ ಏರಿಕೆ ಕಂಡಿತು! ಮರುದಿನ ಅದು ಹಾಗೇ ಬಿದ್ದು ಹೋಯಿತು ಕೂಡಾ! ಅಷ್ಟೇ ಅಲ್ಲ, ಸರ್ಕಾರದ ಗೆಲುವಿನಿಂದಾಗಿ ಹಣದುಬ್ಬರ ದರ ಶೇ. ೧೧.೯೧ರಿಂದ ಶೇ.೧೧.೮೯ಕ್ಕೆ ಇಳಿದು ಹೋಯಿತಂತೆ! ಈ ಅಧಿವೇಶನದಲ್ಲಿ ಎದ್ದು ಕಂಡ ಕಾಂಗೆಸ್ಸಿನ ನಿಜವಾದ ದುರಂತವೆಂದರೆ, ಗಾಂಧೀಜಿಯನ್ನು ತನ್ನ ಪರಂಪರೆಯ ಆದಿ ಪ್ರತೀಕ ಎಂದು ಇನ್ನೂ ಹೇಳಿಕೊಳ್ಳುತ್ತಿರುವ ಈ ಪಕ್ಷದ ಒಬ್ಬ ಸದಸ್ಯನೂ, ಸಾರಾ ಸಗಟಾಗಿ ನಾವು ಜಾಗತಿಕ ಶಕ್ತಿಯಾಗುವುದೂ ಬೇಡ, ಅದಕ್ಕಾಗಿ ಈ ಪರಮಾಣು ಶಕ್ತಿಯ ರಾಜಕಾರಣವೂ ಬೇಡ ಎಂದು ಹೇಳುವ ವಿವೇಕವನ್ನಾಗಲೀ, ಧೈರ್ಯವನ್ನಾಗಲೀ ಪ್ರದರ್ಶಿಸದೇ ಹೋದದ್ದು. ಕಾಂಗ್ರೆಸ್ ಪೂರ್ತಿಯಾಗಿ ಈಗ ಬೇರೆ ಗಾಂಧಿಗಳನ್ನೇ ತನ್ನ ಪ್ರತೀಕಗಳನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿದಂತಿದೆ!

ಅದೇನೇ ಇರಲಿ, ಲೋಕಸಭಾ ಚುನಾವಣೆಗಳು ಬಹು ಹತ್ತಿರದಲ್ಲಿದ್ದಾಗ ಮನಮೋಹನ ಸಿಂಗ್ ಅವರು ರಾಷ್ಟ್ರದ ಮೇಲೆ ಅನಗತ್ಯವಾಗಿ ಹೇರಿದ ಈ ಮತ ಪರೀಕ್ಷೆ ಹುಟ್ಟು ಹಾಕಿರುವ ಈ ಮೂರು ಅಂಶಗಳು ಮುಂದಿನ ರಾಷ್ಟ್ರ ರಾಜಕಾರಣಕ್ಕೆ ಮಾರಕವೆನಿಸುವುದಂತೂ ಖಂಡಿತ:

೧. ಕಾಂಗ್ರೆಸ್ಸಿನಲ್ಲಿ ಮನಮೋಹನ ಸಿಂಗರ ಬಲ ಹೆಚ್ಚಲಿದ್ದು, ಅವರ ಗುಂಪು ಪ್ರತಿಪಾದಿಸುವ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಗಳನ್ನು ವಿಮರ್ಶಿಸಿ ನಿಯಂತ್ರಿಸಬಲ್ಲ ಪಕ್ಷದೊಳಗಿನ ಮಧ್ಯಮ ಮಾರ್ಗಿ ಗುಂಪು, ಈಗ ಎಡ ಪಕ್ಷಗಳು ದೂರವಾಗುವುದರೊಂದಿಗೆ ದುರ್ಬಲವಾಗಲಿದೆ. ಇದರಿಂದಾಗಿ ಕಾಂಗ್ರೆಸ್ ತನ್ನ ಗಾಂಧಿ-ನೆಹ್ರೂ ವಾರಸುದಾರಿಕೆಯನ್ನು ಪೂರ್ತಿಯಾಗಿ ಕಳೆದುಕೊಂಡು, ರಾಷ್ಟ್ರ ರಾಜಕಾರಣದಲ್ಲಿ ಮಧ್ಯಮ ಮಾರ್ಗಿಯಾದ ಒಂದೂ ಪಕ್ಷ ಇಲ್ಲವಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ.

೨. ಚೀನಾ ಪರವೆಂಬ ಅಪವಾದದ ನಡುವೆಯೂ, ಇದ್ದುದರಲ್ಲಿ ವೈಯುಕ್ತಿಕ ಪರಿಶುದ್ಧತೆಯ ನಾಯಕತ್ವ ಮತ್ತು ಜನಪರ ತಾತ್ವಿಕತೆಯನ್ನು ಇನ್ನೂ ಉಳಿಸಿಕೊಂಡಂತೆ ತೋರುತ್ತಿರುವ ಎಡ ಪಕ್ಷಗಳು ಈಗ ತನ್ನ ಹಿರಿಯ ನಾಯಕ ಸೋಮನಾಥ ಚಟರ್ಜಿಯವರನ್ನು ಪಕ್ಷದಿಂದಲೇ ಉಚ್ಛಾಟಿಸುವಷ್ಟು ಕ್ರುದ್ಧವಾಗಿವೆ. ಈ ಕ್ರುದ್ಧತೆಯಲ್ಲಿ ಅವು, ತತ್ವಕ್ಕೂ ರಾಜಕಾರಣಕ್ಕೂ ಸಂಬಂಧವಿಲ್ಲವೆಂದು ನಿರ್ಭಿಡೆಯಿಂದ ಘೋಷಿಸಬಲ್ಲ ಖ್ಯಾತಿ ಸಾಧಿಸಿರುವ ಮಾಯಾವತಿಯವರನ್ನು ರಾಷ್ಟ್ರದ ಪ್ರಧಾನ ಮಂತ್ರಿ ಅಭ್ಯರ್ಥಿಯೆಂದು ಘೋಷಿಸಿರುವ ಕೆಲವು ಚಿಲ್ಲರೆ ಅವಕಾಶವಾದಿ ರಾಜಕೀಯ ಪಕ್ಷಗಳ ಜೊತೆ ಸೇರುವಂತಹ ಇಕ್ಕಟ್ಟಿನ ರಾಜಕಾರಣಕ್ಕೆ ಸಿಕ್ಕಿವೆ.

೩. ಮುಂದಿನ ಪ್ರಧಾನ ಮಂತ್ರಿ ತಮ್ಮ ನಾಯಕ ಅದ್ವಾನಿಯವರೇ ಎಂದು ಈವರೆಗೆ ನಂಬಿಕೊಂಡು ಬಂದಿದ್ದ ಬಿಜೆಪಿ ಈಗ ಒಳಗಿಂದಲೂ, ಹೊರಗಿಂದಲೂ ಒಮ್ಮೆಗೇ ಹೀನಾಯವಾಗಿ ಕೆಣಕಲ್ಪಟ್ಟಿದೆ. ಹೀಗಾಗಿ ಅದು, ಸದ್ಯದ ಈ ಗೊಂದಲದಲ್ಲಿ ಕೈ

ತಪ್ಪಿಹೋದಂತೆ ಕಾಣುತ್ತಿರುವ ತನ್ನ ಗುರಿಯನ್ನು ಸಾಧಿಸಿಕೊಳ್ಳಲು ಈಗಾಗಲೇ ಉದ್ವಿಗ್ನಗೊಂಡಿರುವ ರಾಜಕೀಯ ವಾತಾವರಣವನ್ನು ಇನ್ನಾವ 'ರಾಷ್ಟ್ರೀಯತಾ ಅಭಿಯಾನ'ವನ್ನು ಆರಂಭಿಸಿ ಇನ್ನೆಷ್ಟು ಉದ್ವಿಗ್ನಗೊಳಿಸುವುದೋ ಎಂಬ ಆತಂಕ ಸೃಷ್ಟಿಯಾಗಿದೆ.

ಇದೆಲ್ಲದಕ್ಕೂ, ಬಡ ಮತ್ತು ಅಸಮ ಸಮಾಜ ಮಾತ್ರವಾಗಿದ್ದ ಭಾರತವನ್ನು, ಅಶಾಂತ ಮತ್ತು ಅಶ್ಲೀಲ ಸಮಾಜವನ್ನಾಗಿಯೂ ಪರಿವರ್ತಿಸತೊಡಗಿರುವ ಮನಮೋಹನ ಸಿಂಗರ ಅಪಕ್ವ ಆರ್ಥಿಕ ನೀತಿಗಳ ಹಠವಾದಿ ರಾಜಕಾರಣವೇ ಕಾರಣವಾಗಿದೆ. ಇತ್ತೀಚೆಗೆ ಬೆಂಗಳೂರಿನಲ್ಲೂ ಸಂಭವಿಸಲಾರಂಭಿಸಿರುವ ಸರಣಿ ಬಾಂಬ್ ಸ್ಫೋಟಗಳು ಇಂತಹ ರಾಜಕಾರಣದ ಫಲವೇ ಆಗಿದೆ. ಇದನ್ನು ನಂಬಲಾಗದವರಷ್ಟೇ ಮನಮೋಹನ ಸಿಂಗರ ಆರ್ಥಿಕ ನೀತಿ ಮತ್ತು ರಾಜಕಾರಣವನ್ನು ಇಡಿಯಾಗಿ ಮತ್ತು ಮುಕ್ತವಾಗಿ ಬೆಂಬಲಿಸುವರು.

(೮ ಆಗಸ್ಟ್ ೨೦೦೮)

■

೧೪. ನನ್ನ ಆ 'ಸ್ಕೂಲ್ ಮಾಸ್ಟರ್'!

ಗೆಳೆಯ ಕೆ. ಪುಟ್ಟಸ್ವಾಮಿಯವರು 'ಕನ್ನಡ ಚಿತ್ರರಂಗ-೭೫' ಮಾಲಿಕೆಯಲ್ಲಿ ಬರೆಯುತ್ತಿರುವ ಲೇಖನಗಳನ್ನು ಓದುತ್ತಿದ್ದಂತೆ, ನನ್ನ ಬಾಲ್ಯದ ದಟ್ಟ ನೆನಪುಗಳು ನಿಧಾನವಾಗಿ ಬಿಚ್ಚಿಕೊಳ್ಳುತ್ತಿವೆ.

ನನ್ನ ಬಾಲ್ಯದ ಎರಡು ವಿಶೇಷ ಆಕರ್ಷಣೆಗಳೆಂದರೆ ಶಾಲಾ ಪರೀಕ್ಷೆಗಳು ಮತ್ತು ಕನ್ನಡ ಚಲನಚಿತ್ರಗಳು! ಏಕೋ ಏನೋ, ಪರೀಕ್ಷೆಗಳು ಎಂದರೆ ನನ್ನೆಲ್ಲ ಸ್ನೇಹಿತರು ಹೆದರಿದಂತೆ ತೋರುತ್ತಿದ್ದರೆ, ನಾನು ಅವುಗಳನ್ನು–ಆಗ ವರ್ಷಕ್ಕೆರಡೇ ಪರೀಕ್ಷೆಗಳು: ಮಧ್ಯವಾರ್ಷಿಕ ಚಿಕ್ಕ ಪರೀಕ್ಷೆ ಮತ್ತು ವರ್ಷಾಂತ್ಯದ ದೊಡ್ಡ ಪರೀಕ್ಷೆ–ಆಕರ್ಷಕ ಸವಾಲುಗಳಂತೆ ಎದುರು ನೋಡುತ್ತಿದ್ದೆ! ಸಂಕ್ರಾಂತಿ ಹಬ್ಬಕ್ಕೆ ರೈತರು ತಮ್ಮ ದನಕರುಗಳನ್ನು ಸಿಂಗರಿಸುವಂತೆ, ನಾನು ವಾರದ ಮೊದಲೇ ನನ್ನ ಪರೀಕ್ಷೆ ರಟ್ಟನ್ನು ಬಣ್ಣದ ಕಾಗದದ ಚೂರುಗಳಿಂದ ಮತ್ತು ನನ್ನದೇ ಕೈಯ್ಯಿನ ಚಿತ್ತಾರಗಳಿಂದ ಸಿಂಗರಿಸುತ್ತಿದ್ದೆ. ನನ್ನ ತಂದೆ ಆಗ ನಮಗೆ ಹಾಗೂ ಮನೆಗೆ ಬರುತ್ತಿದ್ದ ನೆಂಟರಿಷ್ಟರ ಮತ್ತು ಸಹೋದ್ಯೋಗಿಗಳ ಮಕ್ಕಳಿಗೆ ವಿದ್ಯೆಯೊಂದೇ ಬಡತನಕ್ಕೆ ಉತ್ತರ ಎಂದು ಪದೇ ಪದೇ ಹೇಳುತ್ತಿದ್ದುದು, ನಾನು ವಿದ್ಯೆಯನ್ನು–ಪರೀಕ್ಷೆಗಳ ರೂಪದಲ್ಲಿಯೇ ಆದರೂ–ಸವಾಲಾಗಿ ಸ್ವೀಕರಿಸಲು ಪ್ರಚೋದಿಸಿತ್ತೆಂದು ಕಾಣುತ್ತದೆ. ಅವರನ್ನು ವಿದ್ಯೆಯೆಡೆಗೆ ಪ್ರಚೋದಿಸಿದ್ದುದು, ತಮ್ಮ ತಾರುಣ್ಯದಲ್ಲಿ ಕೇಳಿದ್ದ ಗಾಂಧಿ ಭಾಷಣವಂತೆ–ವಿಶೇಷವಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಮಹತ್ವದ ಬಗ್ಗೆ. ಅದನ್ನವರು ತಮಗೂ ಅನ್ವಯಿಸಿಕೊಂಡು ತಮ್ಮ ತಂದೆಯ ವಿರುದ್ಧ ಬಂಡೆದ್ದು, ಕುಲ ಕಸಬು ಬಿಟ್ಟು ಕೂಲಿ ನಾಲಿಯ ಮೂಲಕ ನಾಲ್ಕಕ್ಷರ ಕಲಿಯುವ ಸಾಹಸ ಮಾಡಿ, ಪ್ರಾಥಮಿಕ ಶಾಲಾ ಮಾಸ್ತರಾಗಿದ್ದರು.

ಅದಂತಿರಲಿ, ನನ್ನ ಶಾಲಾ ವಿದ್ಯಾಭ್ಯಾಸದುದ್ದಕ್ಕೂ ಎಲ್ಲ ಪರೀಕ್ಷೆಗಳಲ್ಲಿ ತರಗತಿಗೆ ಮೊದಲಿಗನಾಗಿ ತೇರ್ಗಡೆ ಹೊಂದುತ್ತಿದ್ದುದು, ನಾನು ಈ ಸವಾಲನ್ನು ಯಶಸ್ವಿಯಾಗಿ ಎದುರಿಸುತ್ತಿದ್ದೆ ಎಂಬುದನ್ನು ಸೂಚಿಸುವಂತಿತ್ತು. ಇದು ನಮ್ಮ ತಂದೆಗೆ ಅಪಾರ ತೃಪ್ತಿಯನ್ನು ತರುತ್ತಿತ್ತಲ್ಲದೆ, ನನ್ನ ಇನ್ನೊಂದು ಆಕರ್ಷಣೆಯಾಗಿದ್ದ ಸಿನಿಮಾ ವ್ಯಾಮೋಹದ ಬಗೆಗೆ ಅವರು ಮೃದುವಾಗಿರಲೂ ಕಾರಣವಾಗಿತ್ತು. ನಾಟಕದ ಮಾಸ್ತರೂ ಆಗಿದ್ದ ನಮ್ಮ ತಂದೆ ಸ್ವತಃ ಸಿನಿಮಾ ಪ್ರಿಯರೇ ಆಗಿದ್ದರೂ, ಹಣಕಾಸಿನ ಮುಗ್ಗಟ್ಟಿನ ಕಾರಣ ಅವರು ಎಲ್ಲ ಸಿನಿಮಾಗಳನ್ನೇನೂ ನೋಡುತ್ತಿರಲಿಲ್ಲ. ಏಕೆಂದರೆ ಅವರು ಹೊರಟರೆ, ಮನೆಯವರೆಲ್ಲರೂ ಹೊರಡುತ್ತಿದ್ದರಲ್ಲ! ನನಗಾದರೋ ಬಂದ ಎಲ್ಲ ಕನ್ನಡ ಸಿನೆಮಾಗಳನ್ನು ನೋಡುವ ಆಸೆ,

ಆತುರ. ಬೆಂಗಳೂರಿನಲ್ಲಿ ಓದುತ್ತಿದ್ದ ನಮ್ಮಣ್ಣ ಊರಿಗೆ ಬಂದಾಗಲೆಲ್ಲ ಶಿಫಾರ್ಸು ಮಾಡುತ್ತಿದ್ದ ಸಿನೆಮಾಗಳು ಬಂದರಂತೂ ನನಗೆ ಮೊದಲ ದಿನವೇ ನೋಡುವ ಕಾತುರ. ನಮ್ಮ ತಂದೆ ಆದಷ್ಟೂ ನನ್ನ ಆಸೆ-ಆತುರ-ಕಾತುರಗಳನ್ನು ಈಡೇರಿಸುತ್ತಿದ್ದರು.

ಅತ್ತ ಹಳ್ಳಿಯೂ ಅಲ್ಲದ. ಇತ್ತ ಪಟ್ಟಣವೂ ಅಲ್ಲದ ತ್ಯಾಮಗೊಂಡ್ಲು ಎಂಬ ಊರಿನ ಸಂತೆಮಾಳದ ಪಕ್ಕದ ಬಯಲಿನಲ್ಲಿ ವರ್ಷದ ಆರು ತಿಂಗಳು ಅಥವಾ ಅದಕ್ಕೂ ಹೆಚ್ಚು ಕಾಲ ಬೀಡು ಬಿಟ್ಟಿರುತ್ತಿದ್ದ 'ಮಾರುತಿ ಟೂರಿಂಗ್ ಟಾಕೀಸ್'ನಲ್ಲಿ ನಾನು ಅದೆಷ್ಟು ಚಿತ್ರಗಳನ್ನು ನೋಡಿ ಸಂತೋಷ-ಸಂಭ್ರಮ ಪಟ್ಟಿದ್ದೇನೋ! ಈ ವಾರ ಯಾವ ಸಿನೆಮಾ ಎಂದು ತಿಳಿಯುವ ಕುತೂಹಲದಿಂದ ಹೊಸ ಸಿನಿಮಾ ಡಬ್ಬ ಬರುವ ನಮ್ಮೂರಿನ ಕೊನೆಯ ಷಟಲ್ ಬಸ್ಸನ್ನು ಕಾಯುತ್ತಾ, ಮನೆಗೆ ಮಲಗಲು ತಡವಾಗಿ ಬಂದು ನಮ್ಮ ತಂದೆಯಿಂದ ಅದೆಷ್ಟು ಬಾರಿ ಎಷ್ಟು ಏಟು ತಿಂದಿದ್ದೇನೋ ಲೆಕ್ಕವೇ ಇಲ್ಲ! ಆದರೆ ಅದನ್ನು ಆಗಲೇ ಮರೆತು, ಮತ್ತೆ ಮಾರನೆಯ ಬೆಳ್ಳಂ-ಬೆಳಿಗ್ಗೆ ಹೊಸ ಸಿನೆಮಾದ ಪೋಸ್ಟರ್ ನೋಡಲು ಊರಿನ ಸರ್ಕಲ್ ಬಳಿ ಓಡುತ್ತಿದ್ದೆ. ಅಲ್ಲಿ ಟಾಕೀಸ್ ಕೆಲಸಕ್ಕೆ ಸಹಾಯಕರಾಗಿ ಸೇರಿರುತ್ತಿದ್ದ ಹೊಲೇರ ವೆಂಕಟ ಮತ್ತು ಅಂಜನಿ ಎಂಬ ನನ್ನ ಗೆಳೆಯರು ದೊಡ್ಡ ಪೋಸ್ಟರಿನ ನಾಲ್ಕು ಭಾಗಗಳನ್ನು, ಈಗಲೂ ತನ್ನ ಒಗರು ವಾಸನೆಯ ನೆನಪಿನೊಂದಿಗೆ ನನ್ನ ಮೂಗರಳಿಸುವ ಬಿಸಿ ಬಿಸಿ ಪೇಸ್ಟ್‌ನೊಂದಿಗೆ ಬಿದಿರಿನ ತಡಿಕೆಯಿಂದ ಮಾಡಿದ ವಿಶಾಲ ಬೋರ್ಡಿನ ಮೇಲೆ ತಮ್ಮ ಕೌಶಲ್ಯವನ್ನೆಲ್ಲ ಪ್ರದರ್ಶಿಸುತ್ತಾ ಜೋಡಿಸುತ್ತಿರುತ್ತಿದ್ದರು. ಅವರ ಆ ಕರಾಮತ್ತಿನಲ್ಲಿ ಮೂಡುವ ನನ್ನ ನೆಚ್ಚಿನ ನಟ ನಟಿಯರ ಭಾವಪೂರ್ಣ ಚಿತ್ರಗಳನ್ನೂ, ವಿಚಿತ್ರ ವಿನ್ಯಾಸಗಳಲ್ಲಿರುತ್ತಿದ್ದ ಚಿತ್ರದ ಶೀರ್ಷಿಕೆಗಳನ್ನೂ ನೋಡಿ ಸಂತೋಷಪಟ್ಟು ನಮ್ಮ ತಂದೆಯವರಿಂದ ಇನ್ನೊಂದು ಸುತ್ತಿನ ಹೊಡೆತಗಳಿಗೆ ತಯಾರಾಗಿಯೇ ನಾನು ಮನೆಗೆ ಬರುತ್ತಿದ್ದೆ. ಈ ಹೊಡೆತಗಳೆಂದೂ ನನ್ನನ್ನು ಆಗ ಸಿನೆಮಾ ವ್ಯಾಮೋಹದಿಂದ ದೂರ ಸರಿಯುವಂತೆ ಮಾಡಲಿಲ್ಲ. ಹಾಗೇ ನನ್ನ ಆ ಹವ್ಯಾಸವೂ ನಮ್ಮ ತಂದೆಯವರನ್ನು, ಸಿನೆಮಾಗಳಿಂದ ನನ್ನನ್ನು ದೂರ ಇಡುವಂತೆ ಪ್ರೇರೇಪಿಸಲಿಲ್ಲ. ಇದೆಲ್ಲವೂ ದಿನನಿತ್ಯದ ಮಾಮೂಲಿನಂತೆ ನಡೆದುಹೋಗುತ್ತಿತ್ತಷ್ಟೆ!

ಈ ವ್ಯಾಮೋಹದ ಆ ದಿನಗಳಲ್ಲಿ ನಾನು ಅನಿವಾರ್ಯ ಕಾರಣಗಳಿಂದ-ಮನೆಗೆ ನೆಂಟರು ಬಂದಿದ್ದರಿಂದಲೋ, ನಮ್ಮ ತಂದೆ ಊರಿನಲ್ಲಿರಲಿಲ್ಲದಿದ್ದರಿಂದಲೋ, ತೀರಾ ಹಣಕಾಸಿನ ಮುಗ್ಗಟ್ಟಿನಿಂದಾಗಿಯೊ–ನಾನು ಕೆಲವು ಚಿತ್ರಗಳನ್ನು ನೋಡಲಾಗದಿದ್ದ ಬೇಸರ ನನ್ನ ಬಾಲ್ಯದುದ್ದಕ್ಕೂ ನನ್ನನ್ನು ಕಾಡಿಸಿ, ಅವುಗಳ ಹೆಸರುಗಳು ಈಗಲೂ ನನ್ನ ಸ್ಮೃತಿಯಲ್ಲಿ ಉಳಿಯುವಂತೆ ಮಾಡಿವೆ! ಅವೆಂದರೆ, 'ಜಾತಕಫಲ', 'ಮೊದಲ ತೇದಿ', 'ಶಿವಶರಣೆ ನಂಬಿಯಕ್ಕ', 'ಬೆಟ್ಟದ ಕಳ್ಳ', 'ವೀರಕೇಸರಿ' ಇತ್ಯಾದಿ. ಇವುಗಳಲ್ಲಿ ಕೆಲವನ್ನಾದರೂ, ಈಚೆಗೆ ಟಿವಿಯಲ್ಲಿ ನೋಡಿದೆನಾದರೂ, ಆ 'ರುಚಿ' ಸಿಕ್ಕದೆ ನಿರಾಶನಾಗಿದ್ದೇನೆ! ಆಗ ಆ 'ರುಚಿ'ಯಲ್ಲೇ ಸಿನೆಮಾ ನೋಡಿದರೂ, ಸಿನೆಮಾ ಚೆನ್ನಾಗಿತ್ತೋ ಇಲ್ಲವೋ ಎಂಬುದನ್ನು ಮಾತ್ರ ನಮ್ಮ ತಂದೆಯವರನ್ನು ಕೇಳಿ ಖಚಿತಪಡಿಸಿಕೊಂಡಾದ ಮೇಲಷ್ಟೆ ನಾನು ನನ್ನ ಸ್ನೇಹಿತರೊಂದಿಗೆ

ಅದರ ಬಗ್ಗೆ ಚರ್ಚೆ ಅಥವಾ ವಾದ ಮಾಡುತ್ತಿದ್ದೆ! ಇದನ್ನು ನೆನೆಸಿಕೊಂಡರೆ, ಸಿನೆಮಾ ಕಡೆ ಆಗ ನನ್ನನ್ನು ಅಥವಾ ನನ್ನಂತಹ ಇತರರನ್ನು ಸೆಳೆಯುತ್ತಿದ್ದ ಅಂಶಗಳು ಯಾವುವು ಎಂಬ ಬಗ್ಗೆ ನನ್ನಲ್ಲಿ ಇನ್ನೂ ಕುತೂಹಲ ಉಳಿದೇ ಇದೆ!

ಟೆಂಟ್ ಎಂಬ ಆ ಹಲವಾರು ಕಂಭಗಳು ಮತ್ತು ಹಗ್ಗಗಳ ಸಮತೋಲನದಲ್ಲಿ ಹರಡಿ ನಿಂತಿರುತ್ತಿದ್ದ ಆ ವಿಶಾಲ ಗುಡಾರದ ಕೆಳಗೆ ಆ ಕತ್ತಲೆಯಲ್ಲಿ ಗೋಣಿ ಚೀಲ ಹಾಸಿ, ಕಡಲೆಕಾಯಿ ಮೆಲ್ಲುತ್ತಾ; ವಿಭಿನ್ನ ಚಹರೆಯ, ನಡಾವಳಿಗಳ ನೂರಾರು ಜನರೊಂದಿಗೆ ಸಮನಾಗಿ ಕೂತು (ನಮ್ಮೂರಿನ ಸಾಹುಕಾರ ಶೆಟ್ಟರ ಕುಟುಂಬದವರು ನೆಲದ ಟಿಕೆಟ್ ಪಡೆದು, ಅಲ್ಲಿ ಮನೆಯಿಂದ ತಂದ ಕುರ್ಚಿಗಳನ್ನು ಹಾಕಿಸಿಕೊಂಡು ಕೂರುತ್ತಿದ್ದರು!), ಎದುರಿನ ಎರಡು ಆಯಾಮಗಳ ತೆರೆಯ ಮೇಲೆ ಮೂರು ಆಯಾಮಗಳಲ್ಲಿರುವಂತೆ ಮೂಡುತ್ತಿದ್ದ ಚಿತ್ರಗಳು ಮನ ಮುಟ್ಟುವ ಸಾಹಿತ್ಯ ಮತ್ತು ಮುದ ಕೊಡುವ ಸಂಗೀತಗಳೊಂದಿಗೆ ಕಟ್ಟುತ್ತಿದ್ದ ಒಂದು ನಾಟಕೀಯ ಪ್ರತಿ-ಪ್ರಪಂಚದಲ್ಲಿ ಮುಳುಗಿ ಹೋಗುವ ರೋಮಾಂಚನವೆ ಅದು? ಈಗಲೂ ನನಗೆ ಆ ಹಳೆಯ-ಕಪ್ಪು ಬಿಳುಪು-ಕನ್ನಡ ಚಿತ್ರಗಳನ್ನು ನೋಡುತ್ತಿರುವಾಗ ಆ ಹಳೆಯ ರೋಮಾಂಚನ ಮರುಕಳಿಸುತ್ತದೆ! ನನಗೆ ಗೊತ್ತಿಲ್ಲದೆಯೇ, ಭಾವಾವೇಶಕ್ಕೆ ಸಿಕ್ಕಿ ಕಣ್ಣು ಮಂಜಾಗುತ್ತವೆ. ಕಷ್ಟದ ಆ ದಿನಗಳಲ್ಲಿ ತಮ್ಮ ಮೌಲ್ಯಾದರ್ಶಗಳ ಸಂದೇಶಗಳೊಂದಿಗೆ ನಮ್ಮಲ್ಲಿ ಆಸೆ-ಭರವಸೆಗಳನ್ನು ತುಂಬಿ, ನಮ್ಮನ್ನು ಸಾಂತ್ವನಗೊಳಿಸುತ್ತಿದ್ದ ಆ ಕನಸಿನ ಚೂರುಗಳನ್ನು ಮರೆಯುವುದಾದರೂ ಹೇಗೆ?

ಹಾಗೆ ನನ್ನ ಪಾಲಿಗೆ ಮರೆಯಲಾಗದ ಕೆಲವು ಕನಸಿನ ಚೂರುಗಳೆಂದರೆ, 'ಸ್ಕೂಲ್ ಮಾಸ್ಟರ್', 'ಅಣ್ಣ ತಂಗಿ', 'ರಣಧೀರ ಕಂಠೀರವ' ಮತ್ತು 'ಭಕ್ತ ಕನಕದಾಸ'. ಇವು ನನ್ನ ವ್ಯಕ್ತಿತ್ವಕ್ಕೆ ಅಡಿಪಾಯ ಹಾಕಿದ ಚಿತ್ರಗಳೆಂದರೂ ನಡೆಯುತ್ತದೆ. ನಾನು ಈ ಐವತ್ತು ವರ್ಷಗಳಲ್ಲಿ ವಿವಿಧ ಭಾಷೆಗಳ ಜಗತ್ತಿನ ಅತ್ಯುತ್ತಮ ಚಿತ್ರಗಳನ್ನು ನೋಡಿ ಸಂತೋಷಪಟ್ಟು, ಬಹಳಷ್ಟನ್ನು ಮರೆತಿದ್ದೇನೆ. ಆದರೆ ಈ ನಾಲ್ಕು ಚಿತ್ರಗಳು ಮೂಡಿಸಿದ ಪರಿಣಾಮ ನನ್ನ ಮನಸ್ಸಿನ ಮೇಲೆ ಈಗಲೂ ಅಚ್ಚೊತ್ತಿದಂತಿದೆ-ಒಂದೊಂದೂ, ಒಂದೊಂದು ಕಾರಣಕ್ಕೆ. ಆದರೆ ನನ್ನ ಪಾಲಿಗೆ ಇವೆಲ್ಲವುಗಳ ಸಾಮಾನ್ಯ ಆಕರ್ಷಣೆ ಎಂದರೆ, ಸ್ವಾತಂತ್ರ್ಯೋತ್ತರ ಭಾರತದ ಸ್ಫೂರ್ತಿ ಕೇಂದ್ರಗಳನ್ನು ಇವು ಬಹು ಪರಿಣಾಮಕಾರಿಯಾಗಿ ಗುರುತಿಸಿದ್ದುದು. ನನ್ನ ಬಾಳನ್ನು ಕಟ್ಟಕೊಳ್ಳಲು ನನ್ನ ಬಾಲ್ಯದಲ್ಲೇ ಕೆಲವು ಘನ ಮೌಲ್ಯಗಳನ್ನೂ, ಪರಿಣಾಮಕಾರಿ ಸೂಚನೆಗಳನ್ನೂ ನೀಡಿದ್ದುದು.

ಸದ್ಯಕ್ಕೆ ನಾನು 'ಸ್ಕೂಲ್ ಮಾಸ್ಟರ್' ಚಿತ್ರದ ಬಗ್ಗೆಯಷ್ಟೇ ಬರೆಯುವೆ. ಏಕೆಂದರೆ, ಇದು ನನ್ನನ್ನು ರೂಪಿಸಿದ ನನ್ನ ತಂದೆಯನ್ನು, ಅವರ ಸಂದರ್ಭವನ್ನು ಮತ್ತು ಆ ಸಂದರ್ಭವನ್ನು ಸೃಷ್ಟಿಸಿದ ರಾಷ್ಟ್ರೀಯ ಪರಿಸ್ಥಿತಿಯನ್ನೂ ಅರ್ಥ ಮಾಡಿಕೊಳ್ಳಲು ನನಗೆ ಈಗಲೂ ನೆರವಾಗುತ್ತಿರುವ ಸಿನಿಮಾ. ಈ ಚಿತ್ರವನ್ನು ಪ್ರಥಮ ಬಾರಿಗೆ ನೋಡಿ ಈಗಾಗಲೇ ೪೮ ವರ್ಷಗಳಾಗಿವೆ. ಆಗ ನೋಡಿದಾಗ ಯಾವ ಪ್ರಭಾವವನ್ನು ಬೀರಿತ್ತೋ ಅದೇ–ಅಥವಾ

ಅದಕ್ಕಿಂತ ಹೆಚ್ಚು–ಪ್ರಭಾವವನ್ನು ಈಗ ಮತ್ತೆ ಮತ್ತೆ ನೋಡಿದಾಗಲೂ ನನ್ನ ಮೇಲೆ ಬೀರುತ್ತಲೇ ಇದೆ. ಕಾರಣ: ಸ್ವಾತಂತ್ರ್ಯ ಸಾಧನೆಯ ಹುರುಪು ದೇಶಾದ್ಯಂತ ಹರಡಿದ್ದ ಹೊಸ ಭರವಸೆಯ, ಹೊಸ ಬದ್ಧತೆಯ ಗಾಳಿ ಈ ಚಿತ್ರದುದ್ದಕ್ಕೂ ಬೀಸುತ್ತಾ, ಇಂದೂ–ಇಂದಿನ ಜಾಗತೀಕರಣದ ದಿನಗಳಲ್ಲಿ–ನಮ್ಮನ್ನು ಕೆಣಕುವಂತಿದೆ. ಮುಖ್ಯವೆಂದರೆ ಈ ಹೊಸ ಭರವಸೆ, ಬದ್ಧತೆಗಳು ವ್ಯಕ್ತವಾಗುವುದು ಈ ರಾಷ್ಟ್ರದ ಸಾಮಾನ್ಯ ಪ್ರಜೆಯೆನಿಸಿದ ಒಬ್ಬ ಪ್ರಾಥಮಿಕ ಶಾಲಾ ಮಾಸ್ತರನ ಮೂಲಕ. ಈತ ತನ್ನ ಹಳ್ಳಿಯನ್ನು, ಆ ಹಳ್ಳಿಯ ಶಾಲೆಯನ್ನು ಕಟ್ಟುವುದರೊಂದಿಗೇ ತನ್ನ ಕುಟುಂಬವನ್ನೂ ಕಟ್ಟುವ ರೀತಿ ಮತ್ತು ಆ ಹಾದಿಯಲ್ಲಿ ಎದುರಾಗುವ ಬಿಕ್ಕಟ್ಟುಗಳನ್ನು ಎದುರಿಸುವಲ್ಲಿ ತೋರುವ ಛಲ, ವಿವೇಕ ಹಾಗೂ ಸಂಯಮಗಳ ಪ್ರತಿ ವಿವರಗಳಲ್ಲೂ, ಈ ಚಿತ್ರ ನವಭಾರತದ ಬೀಜಾಂಕುರದ ಸಂಭ್ರಮ ಮತ್ತು ಹೆರಿಗೆಯ ಸಂಕಟಗಳೆರಡನ್ನೂ ಸರಳ ಲಯದಲ್ಲಿ ಕಟ್ಟಿಕೊಡುತ್ತದೆ. ನಮ್ಮ ಈ ೬೦ ವರ್ಷಗಳ 'ಪ್ರಗತಿ'ಯ ಬಗ್ಗೆ ಒಂದು ಹಿನ್ನೋಟ ಬೀರಲು ಈ ಚಿತ್ರ ಒಂದು ಆಕರ ಬಿಂದುವನಂತಿದೆ ಎಂದರೆ ತಪ್ಪಾಗಲಾರದು.

ಈ ಚಿತ್ರವನ್ನು ಹಾಗೆ ಆಕರ ಬಿಂದುವಿನಂತೆ ನೋಡಿದಾಗಲೇ ನನ್ನ ಕಣ್ಣುಗಳು ಮಂಜಾಗುವುದು: ಎಲ್ಲಿಂದ ಎಲ್ಲಿಗೆ ನಾವು ಬಂದಿದ್ದೇವೆ, ಎಷ್ಟು ಬದಲಾಗಿದ್ದೇವೆ! ಆ ಚಿತ್ರದ ಸ್ಕೂಲ್ ಮಾಸ್ಟರ್ ರಂಗಣ್ಣ ನಮ್ಮ ತಂದೆಯೇ ಅಲ್ಲವೆ? ಹೊರ ರೂಪದಲ್ಲೂ-ಅದೇ ಪೇಟ, ಕೋಟು, ಕಚ್ಚೆ ಪಂಚೆ-ಮತ್ತು ಒಳರೂಪದಲ್ಲೂ-ಕೆಲಸದಲ್ಲಿನ ಅದೇ ಶ್ರದ್ಧೆ, ಕಟ್ಟುನಿಟ್ಟು ಮತ್ತು ಕುಟುಂಬದ ಬಗ್ಗೆ ಬದ್ಧತೆ-ಆ ಸಿನಿಮಾದ ರಂಗಣ್ಣನೇ ಆಗಿದ್ದ ಅವರ ಸರಳ ಅಚ್ಚುಕಟ್ಟು ಮತ್ತು ನಿಷ್ಠುರ ಆದರ್ಶಗಳ ಮೇಲೇ ನಮ್ಮ ಬದುಕನ್ನು ಕಟ್ಟಿಕೊಂಡಿದ್ದು ಅಲ್ಲವೆ? ಇದು ನಮ್ಮದೇ-ನಮ್ಮಂತಹ ಬಹು ಜನರ-ಹಾಡು ಪಾಡಿನ ಕಥೆಯೇ ಅಲ್ಲವೆ? ೧೯೫೮ರಲ್ಲಿ ನನ್ನಣ್ಣನನ್ನು ಬೆಂಗಳೂರಿನ ಕಾಲೇಜೊಂದರಲ್ಲಿ ಪಿಯುಸಿಗೆ ಸೇರಿಸಿ ಈ ಚಿತ್ರವನ್ನು ನೋಡಿ ಬಂದಿದ್ದ ನಮ್ಮ ತಂದೆಯ ಆ ಉತ್ಸಾಹ ನನಗಿನ್ನೂ ಕಣ್ಣಿಗೆ ಕಟ್ಟಿದಂತಿವೆ. ಅವರು ಅಡಿಗೆ ಮನೆಯಲ್ಲಿ ಕೂತು ಚಿತ್ರದ ಕಥೆಯನ್ನು ನಮ್ಮ ತಾಯಿಗೆ ಬಹು ಉಮೇದಿನಿಂದ ಹೇಳುತ್ತಿದ್ದರು. ಜೊತೆಗೆ ಎರಡು ಎಚ್ಚರಿಕೆಗಳನ್ನೂ ಹೇಳಿದ್ದು ನೆನಪಿದೆ. ಒಂದು: ಪಟ್ಟಣಕ್ಕೆ ಓದಲು ಹೋದ ಮಕ್ಕಳ ಬಗ್ಗೆ ಸದಾ ಜಾಗೃತರಾಗಿರಬೇಕು. ಎರಡು: ಹೆಂಗಸರೂ ಅಕ್ಷರ ಕಲಿಯಬೇಕು. ಇವು ನನಗೆ ಇಂದು ಹೊಸದಾಗಿ ಆಧುನಿಕತೆಗೆ ಕಾಲಿಡುತ್ತಿರುವ ಸಮಾಜವೊಂದು ಅಂದು ವಹಿಸಬೇಕಾಗಿದ್ದ ಎರಡು ಪ್ರಾಥಮಿಕ ಎಚ್ಚರಗಳಾಗಿ ಕಾಣುತ್ತಿವೆ. ನಮ್ಮ ತಂದೆ ಆ ಸಿನಿಮಾವನ್ನು ಎಷ್ಟು ಎಚ್ಚರಿಕೆಯಿಂದ ಗಮನಿಸಿದ್ದರು ಎಂದು ಈಗ ನನಗೆ ಆಶ್ಚರ್ಯವಾಗುತ್ತದೆ! ಅವರು ತಮ್ಮ ಬದುಕಿನಲ್ಲಿ ಈ ಎರಡು ಎಚ್ಚರಗಳನ್ನೂ ಪಾಲಿಸಿದರು. ನನ್ನಣ್ಣನನ್ನು ತಮ್ಮೆಲ್ಲ ಎಚ್ಚರದೊಂದಿಗೆ ಬೆಳೆಸಿದರು ಮತ್ತು ನನ್ನ ತಾಯಿಗೆ ಅಕ್ಷರಗಳನ್ನೂ ಕಲಿಸಿದರು. ಹಾಗಾಗಿ ರಂಗಣ್ಣನ ಕುಟುಂಬದಂತೆ ನಮ್ಮ ಕುಟುಂಬ ದುರಂತವನ್ನು ಎದುರಿಸಲಿಲ್ಲ.

ಆದರೆ ಈ ಚಿತ್ರದ ನಿರ್ದೇಶಕ ಮತ್ತು ನಾಯಕ ನಟ ಬಿ.ಆರ್. ಪಂತಲು ತಮ್ಮ

ನೆಚ್ಚಿನ ಶಿಷ್ಯ ಶಿವಾಜಿ ಗಣೇಶನ್‌ರ ವಿಶೇಷ ಪಾತ್ರದ ಮೂಲಕ ಈ ಚಿತ್ರದಲ್ಲಿನ ದುರಂತವನ್ನು ಸುಖಾಂತ್ಯ ಮಾಡಿರುವ ರೀತಿ ಒಂದು ವಿಶಿಷ್ಟ melancholyಯನ್ನು ಸೃಷ್ಟಿಸುತ್ತದೆ. ಆ ಮೂಲಕ ನವಭಾರತದ ಯಶಸ್ಸಿನ ಗುಟ್ಟು, ಸಣ್ಣ ಕ್ಷಮೆಗಳಲ್ಲಿದೆ ಎಂಬ ದೊಡ್ಡ ಸತ್ಯವವನ್ನೂ ಹೇಳುತ್ತದೆನಿಸುತ್ತದೆ. ಈ ದೃಷ್ಟಿಯಿಂದಲೂ ಈ ಚಿತ್ರ ಇಂದು ಗಮನಾರ್ಹವೆನಿಸುತ್ತದೆ. ಹಾಗೆ ನೋಡಿದರೆ, ಕನ್ನಡ ಸಿನಿಮಾ ಇರುವವರೆಗೂ ಈ 'ಸ್ಕೂಲ್ ಮಾಸ್ಟರ್'; ಆ ಪಂತಲು, ಆ ರಾಜಮ್ಮ, ಆ ಬಾಲಕೃಷ್ಣ, ಆ ನರಸಿಂಹರಾಜು, ಆ ಢಿಕ್ಕಿ ಮಾಧವರಾವ್, ಆ ಶಿವಾಜಿ ಗಣೇಶನ್ ಮತ್ತು ಆ ಬಿ. ಸರೋಜಾ ದೇವಿ ಅವರೊಂದಿಗೆ ಇದ್ದೇ ಇರುತ್ತಾರೆ. ಹಾಗೇ ಕನ್ನಡದ ಜನ 'ಭಾಮೆಯ ನೋಡಲು ತಾ ಬಂದ', 'ಸೊಂಪಾದ ಸಂಜೆ ವೇಳೆ', 'ಅತಿ ಮಧುರ ಅನುರಾಗ', 'ನಾನೂ ನೀನೂ ಜೋಡಿ ಈ ಜೀವನ ಎತ್ತಿನ ಗಾಡಿ' ಮುಂತಾದ ಸರಳ ಸುಮಧುರ ಗೀತೆಗಳನ್ನು ಗುನುಗುತ್ತಲೇ ಇರುತ್ತಾರೆ!

(೧೫ ಆಗಸ್ಟ್, ೨೦೦೮)

■

೧೫. ಕಾಶ್ಮೀರದ ಬೆಂಕಿ: ಎಚ್ಚರವಿರಲಿ!

ಜಮ್ಮು ಕಳೆದ ಮೂರು ವಾರಗಳಿಂದ ಹೊತ್ತಿ ಉರಿಯುತ್ತಿದೆ. ಜನ, ಮಕ್ಕಳು ಮಹಿಳೆಯರೆನ್ನದೆ ಬೀದಿಗೆ ಬಂದು ಮೈಯಲ್ಲಿ ದೆವ್ವ ಹೊಕ್ಕಂತೆ ಕುಣಿಯತೊಡಗಿದ್ದಾರೆ, ಸಾರ್ವಜನಿಕ ಆಸ್ತಿಪಾಸ್ತಿಗೆ ಬೆಂಕಿ ಇಡತೊಡಗಿದ್ದಾರೆ. ಅಲ್ಲಿಯ ನಾಗರಿಕ ಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ. ಜನ, ಪೋಲೀಸ್ ಇಬ್ಬರೂ ಹಿಂಸಾಚಾರಕ್ಕೆ ಬಲಿಯಾಗಿದ್ದಾರೆ. ದೇಶದ ಇತರ ಭಾಗಗಳೊಡನೆ ಕಾಶ್ಮೀರ ಕಣಿವೆಯ ಸಂಪರ್ಕ ತಪ್ಪಿ ಹೋಗಿದೆ. ಅಲ್ಲಿನ ಜನ ಅವಶ್ಯಕ ಸಾಮಗ್ರಿಗಳ ಪೂರೈಕೆ–ವಿಶೇಷವಾಗಿ ಅತ್ಯವಶ್ಯಕ ಔಷಧಿ ಸಾಮಗ್ರಿಗಳು–ಇಲ್ಲದೆ ಸಂಕಷ್ಟಕ್ಕೆ ಸಿಕ್ಕಿದ್ದಾರೆ. ಅವರ ಸೇಬು ಮತ್ತಿತರ ಸರಕು ತುಂಬಿದ ಲಾರಿಗಳು ಜಮ್ಮು ಬಳಿ ತಡೆಯಲ್ಪಟ್ಟಿದ್ದು, ಹಣ್ಣುಗಳು ಕೊಳೆಯತೊಡಗಿವೆ.

ಇಷ್ಟೆಲ್ಲ ಆದರೂ ದೆಹಲಿಯಲ್ಲಿನ ಸಂಯುಕ್ತ ಸರ್ಕಾರ ಮೂಕ ಪ್ರೇಕ್ಷಕನಂತೆ ಕೂತಿದ್ದು, ಅಲ್ಲಿ ಹಿಂಸಾಚಾರ ಪೋಲೀಸರನ್ನೇ ಬಲಿ ತೆಗೆದುಕೊಳ್ಳಲಾರಂಭಿಸಿದ ಮೇಲಷ್ಟೇ ಎಚ್ಚೆತ್ತುಕೊಂಡು ಸರ್ವಪಕ್ಷಗಳ ನಿಯೋಗವೊಂದನ್ನು ಮಾತುಕತೆಗಾಗಿ ಜಮ್ಮು-ಶ್ರೀನಗರಗಳಿಗೆ ಕಳಿಸಿ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡುತ್ತಿದೆ. ಆದರೆ ಗಲಭೆ ಮುಂದುವರೆದಿದೆ. ಆಗಸ್ಟ್ ೧೪ರವರೆಗೂ ತನ್ನ ಪ್ರತಿಭಟನೆಯನ್ನು ಮುಂದುವರೆಸಲು ನಿರ್ಧರಿಸಿರುವ ಅಮರನಾಥ ಸಂಘರ್ಷ ಸಮಿತಿ ೬೨ನೇ ಸ್ವಾತಂತ್ರ್ಯೋತ್ಸವಕ್ಕೆ ತನ್ನ ವಿಶಿಷ್ಟ ಕೊಡುಗೆಯನ್ನು ಸಲ್ಲಿಸಿದೆ ಎಂದೇ ಹೇಳಬೇಕು. ರಾಜ್ಯದ ಈವರೆಗಿನ ರಾಜಕಾರಣ; ಕಾಶ್ಮೀರ ಕಣಿವೆ ಮುಸ್ಲಿಮರದ್ದೂ, ಜಮ್ಮು ತಪ್ಪಲು ಹಿಂದೂಗಳದ್ದು ಎಂಬ ವಿಭಾಗೀಕರಣಕ್ಕೆ ಕಾರಣವಾಗಿರುವುದರಿಂದ ಸದ್ಯದ ಈ ಸಮಸ್ಯೆಗೆ ದಟ್ಟ ಕೋಮು ಬಣ್ಣ ಕೂಡಾ ಬಂದಿದೆ. ಇದರಿಂದ ನಿರಂತರವಾಗಿ ಲಾಭ ಪಡೆಯುತ್ತಿರುವವರೆಂದರೆ, ಕಾಶ್ಮೀರದ ಪ್ರತ್ಯೇಕತಾವಾದಿ ಗುಂಪುಗಳು ಮತ್ತು ಉಗ್ರವಾದಿ ಸಂಸ್ಥೆಗಳು. ಮೊನ್ನೆ ಜಮ್ಮು ಬಂದ್ ವಿರುದ್ಧ ಶ್ರೀನಗರದಲ್ಲಿ ನಡೆದ ಮೆರವಣಿಗೆಯಲ್ಲಿ ಅನೇಕ ಉಗ್ರವಾದಿ ಗುಂಪುಗಳು ಬಹಿರಂಗವಾಗಿ ಕಾಣಿಸಿಕೊಂಡು, ರಾಷ್ಟ್ರವಿರೋಧಿ ಘೋಷಣೆಗಳನ್ನು ಕೂಗತೊಡಗಿದ್ದು ಮತ್ತು ಇದನ್ನು ನಮ್ಮ ಭದ್ರತಾ ಪಡೆಗಳು ಮೂಕ ಪ್ರೇಕ್ಷಕರಾಗಿ ನೋಡುತ್ತಾ ನಿಲ್ಲುವಂತಾದದ್ದು ಇದಕ್ಕೊಂದು ಉದಾಹರಣೆ.

ಭಾರತದ ಸ್ವಾತಂತ್ರ್ಯ ಘೋಷಣೆಯೊಂದಿಗೇ ಕಾಶ್ಮೀರ ಸಮಸ್ಯೆ ಆರಂಭವಾಯಿತೆಂದು ಹೇಳಬಹುದಾದರೂ, ಅಂತಾರಾಷ್ಟ್ರೀಯ ಒತ್ತಡಗಳ ಪರಿಣಾಮವಾಗಿ ಅದು ಬಹುಕಾಲ

ಶಮನಗೊಂಡಿತ್ತು. ಆದರೆ ೭೦-೮೦ರ ದಶಕದಲ್ಲಿ ಇಂದಿರಾ ಗಾಂಧಿಯವರ ನೇತೃತ್ವದಲ್ಲಿನ ಸಂಯುಕ್ತ ಸರ್ಕಾರ ತನ್ನ ಅಧಿಕಾರದ ಅತ್ಯುತ್ಸಾಹದಲ್ಲಿ ಸಮಸ್ಯೆಯನ್ನು ತನ್ನದೇ ರೀತಿಯಲ್ಲಿ ಬಗೆಹರಿಸುವ ಪ್ರಯತ್ನ ನಡೆಸಿತು. ಅಲ್ಲಿ ಅದು ತನ್ನ ಕೈಗೊಂಬೆ ಸರ್ಕಾರಗಳನ್ನು ಸ್ಥಾಪಿಸಲು ಚುನಾವಣೆಗಳಲ್ಲಿ ಪದೇ ಪದೇ ಹಸ್ತಕ್ಷೇಪ ಮಾಡಿ, ಜನತೆಯ ವಿಶ್ವಾಸಕ್ಕೆ ಎರವಾಗುತ್ತಾ ಬಂತು. ಇದರ ಪರಿಣಾಮವಾಗಿ ಪುನರಾರಂಭವಾದ ಅಶಾಂತಿ ಇಂದಿಗೂ ಕೊನೆ ಮುಟ್ಟಿಲ್ಲ. ಬಾಬ್ರಿ ಮಸೀದಿ ನಾಶ ಹಾಗೂ ಆಫ್ಘನಿಸ್ಥಾನ ಮತ್ತು ಇರಾಕ್‌ಗಳ ಮೇಲಿನ ಅಮೆರಿಕಾದ ಆಕ್ರಮಣಗಳ ನಂತರವಂತೂ ಈ ಸಮಸ್ಯೆಗೆ ಜಾಗತಿಕ ಆಯಾಮ ದೊರೆತು, ಪ್ರತ್ಯೇಕತಾವಾದ ಕೋಮುವಾದವಾಗಿ ಪರಿವರ್ತಿತವಾಗಿ, ಸಮಸ್ಯೆಯನ್ನು ಉಲ್ಬಣಗೊಳಿಸಿದೆ. ಸ್ವಾತಂತ್ರ್ಯ ಘೋಷಣೆಯ ಸಮಯದಲ್ಲಿ ಈ ರಾಜ್ಯವನ್ನು ಆಳುತ್ತಿದ್ದ ಹಿಂದೂ ದೊರೆ ಹರಿ ಸಿಂಗ್ ಕೆಲವು ಷರತ್ತುಗಳ ಮೇಲೆ ಅದನ್ನು ಭಾರತದಲ್ಲಿ ವಿಲೀನಗೊಳಿಸಲು ಇಚ್ಛಿಸಿದ್ದರಿಂದ ಮಾತ್ರ ಮುಸ್ಲಿಂ ಜನಸಂಖ್ಯಾ ಪ್ರಾಬಲ್ಯವಿರುವ ಈ ರಾಜ್ಯ ಪಾಕಿಸ್ತಾನಕ್ಕೆ ಬದಲಾಗಿ ಭಾರತಕ್ಕೆ ಸೇರಿತು. ಆದರೆ ಅನಂತರ ಅದು ಭಾರತದ ರಾಷ್ಟ್ರ ರಚನೆಯ ಆಧಾರ ಮೌಲ್ಯಗಳಲ್ಲೊಂದಾದ ಸೆಕ್ಯುಲರ್ ರಾಜಕಾರಣವನ್ನು ಪದೇ ಪದೇ ಅಗ್ನಿ ಪರೀಕ್ಷೆಗೆ ಒಳಪಡಿಸುತ್ತಲೇ ಇದೆ. ಹಾಗೇ, ಈ ರಾಜ್ಯದ ಒಳಗೂ ಮತ್ತು ಗಡಿ ಪ್ರದೇಶದುದ್ದಕ್ಕೂ ನಮ್ಮ ಲಕ್ಷಾಂತರ ಮಂದಿ ಸೈನಿಕರು ನೆಲೆ ನಿಂತು ಭಾರತದ ಭೂಭಾಗ ಮತ್ತು ಅದರ ಸೆಕ್ಯುಲರಿಸಂ ಎರಡನ್ನೂ ಕಾವಲು ಕಾಯುವ ಮುಜುಗರದ ಪರಿಸ್ಥಿತಿ ಉಂಟಾಗಿದೆ!

ಜಗತ್ತಿನ ನೆತ್ತಿಯ ಎರಡು ಹಸಿಗಾಯಗಳೆಂದು ಜಾಗತಿಕ ರಾಜತಂತ್ರಜ್ಞರಿಂದ ವರ್ಣಿಸಲ್ಪಡುವ ಇಸ್ರೇಲ್ ಮತ್ತು ಕಾಶ್ಮೀರ ಸಮಸ್ಯೆಗಳಲ್ಲಿ ಇಸ್ರೇಲ್; ಈಗ ಕೊಂಚ ಹಿನ್ನೆಲೆಗೆ ಸರಿದಂತಾಗಿ ಕಾಶ್ಮೀರ ಎಲ್ಲರ ಗಮನ ಸೆಳೆಯುಂತಾಗಿದೆ. ಅದಕ್ಕೆ ಕಾರಣ, ಭಾರತ ಈ ಸಮಸ್ಯೆಯನ್ನು ಹಿಂದೂ-ಮುಸ್ಲಿಂ ಸಮಸ್ಯೆ ಎಂದೇ ಪರಿಗಣಿಸಿ ಎರಡೂ ಕೋಮುಗಳನ್ನು ಸರದಿಯ ಮೇಲೆ ಓಲೈಸುವ ರಾಜಕಾರಣ ಮಾಡುವುದನ್ನು ಮುಂದುವರಿಸಿರುವುದೇ ಆಗಿದೆ. ಜಮ್ಮು-ಕಾಶ್ಮೀರ ಎಂಬ ಈ ಪ್ರದೇಶದ ಜನತೆ ಎಂದೂ–ಸ್ವಾತಂತ್ರ್ಯ ಹೋರಾಟದ ಕೊನೆಯ ವರ್ಷಗಳ ಕೋಮುವಾದಿ ರಾಜಕಾರಣದ ಅವಧಿಯಲ್ಲೂ–ಕೋಮುವಾದಿ ಯಾಗಿರಲಿಲ್ಲ ಎಂಬುದನ್ನು ನಾವು ನೆನಪಿಡಬೇಕು. ಚಾರಿತ್ರಿಕವಾಗಿ ಬೌದ್ಧ, ಶೈವ ಮತ್ತು ಅನಂತರ ಸೂಫಿ ಸಂಪ್ರದಾಯದ ನೆಲವೀಡಾಗಿದ್ದ ಈ ಪ್ರದೇಶದಲ್ಲಿ ಹಿಂದೂ, ಮುಸ್ಲಿಂ ಹಾಗೂ ಬೌದ್ಧ ಮತ್ತು ಇತ್ತೀಚೆಗೆ ಸಿಕ್ಖರು ಒಂದೇ ಸಂಸ್ಕೃತಿಯ ಮೂರು ಸಂಪ್ರದಾಯಗಳ ಅನುಯಾಯಿಗಳಾಗಿದ್ದರು. ಕಾಶ್ಮೀರದ ರಾಜಧಾನಿ ಶ್ರೀನಗರ, ಚರಿತ್ರೆಯಲ್ಲಿ ಅದರ ಬದಲಾಗದ ಹೆಸರೇ ಸೂಚಿಸುವಂತೆ, ಹಿಂದೂ-ಬೌದ್ಧ-ಸೂಫಿ ಸಂಪ್ರದಾಯಗಳ ಒಂದು ಸಾಮಾನ್ಯ ಅಮೂರ್ತ ನೆಲೆಯನ್ನು ಸಂಕೇತಿಸುವ ಶ್ರೀಚಕ್ರದ ಆರಾಧನಾ ಕೇಂದ್ರವಾಗಿತ್ತು.

ಆದರೆ ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣ ರಾಷ್ಟ್ರೀಯ ಏಕತೆಯ ಹೆಸರಿನಲ್ಲಿ, ಸಂವಿಧಾನ ಪ್ರತಿಪಾದಿಸಿದ್ದ ಒಕ್ಕೂಟ ರಾಷ್ಟ್ರದ ಭಾವನೆಯ ವಿರುದ್ಧ ಕೇಂದ್ರೀಕೃತ ಆಡಳಿತ

ನೀತಿಯನ್ನೇ ಆಚರಿಸಿಕೊಂಡು ಬರುತ್ತಿದೆ. ಇದರ ಫಲವಾಗಿ ವಿವಿಧ ರಾಜ್ಯಗಳ ಭಾಷೆ-ಸಂಸ್ಕೃತಿ-ಸಂಪ್ರದಾಯಗಳು ಘಾಸಿಗೊಂಡಿರುವಂತೆ, ಇಲ್ಲೂ ಆ ಬಹು-ಸಂಸ್ಕೃತಿಯ ಸಂಪ್ರದಾಯ ಘಾಸಿಗೊಂಡಿದೆ. ಸ್ಥಳೀಯ ಸಂಸ್ಕೃತಿಯ ಪರಿಮಳ ನಾಶವಾಗಿ ಈ ಮುಸ್ಲಿಂ ಬಹುಸಂಖ್ಯಾತರ ರಾಜ್ಯ, ರಾಷ್ಟ್ರೀಯತೆಯ ಅತಿಗಳಿಗೆ ಸಿಕ್ಕಿ ಕೋಮುವಾದಕ್ಕೆ ಬಲಿಯಾಗಿದೆ. ಇದರಿಂದಾಗಿ, ಭಾರತದ ಬಹು ಸಂಪ್ರದಾಯಗಳ ಸಂಸ್ಕೃತಿಗೆ ಹತ್ತಿರವಿದ್ದ ಕಾರಣದಿಂದಾಗಿ ಭಾರತದಲ್ಲಿ ಸಹಜವಾಗಿ ಒಂದಾಗಬೇಕಿದ್ದ ಈ ರಾಜ್ಯ, ಈಗ ತನ್ನ ಮುಕ್ತಿಗಾಗಿ ಪಾಕಿಸ್ತಾನದ ಕಡೆ ನೋಡುವಂತಾಗಿದೆ. ಜೊತೆಗೆ ೧೯೪೭ರ ಪಾಕಿಸ್ತಾನೀ ಬುಡಕಟ್ಟಿನ ಜನರ ಆಕ್ರಮಣದ ಫಲವಾಗಿ ಈಗಾಗಲೇ ಕಾಶ್ಮೀರದ ಮೂರನೇ ಒಂದು ಭಾಗ ಪಾಕಿಸ್ತಾನದ ವಶದಲ್ಲಿದ್ದು, ಅದು 'ಆಜಾದ್(ಸ್ವತಂತ್ರ) ಕಾಶ್ಮೀರ'ದ ಹೆಸರಲ್ಲಿ ಸ್ವಾಯತ್ತ ಪ್ರಾಂತ್ಯದ ಸ್ಥಾನಮಾನ ಅನುಭವಿಸುತ್ತಿದ್ದು, ನಮ್ಮ ಕಾಶ್ಮೀರವನ್ನು ತನ್ನೆಡೆಗೆ ಸೆಳೆಯುತ್ತಿದೆ.

ಹಾಗಾಗಿಯೇ, ಈಗ ಜಮ್ಮು ಕಡೆ ವಾಹನ ಸಂಚಾರ ಸ್ತಬ್ಧಗೊಂಡಿರುವ ಹಿನ್ನೆಲೆಯಲ್ಲಿ ಕಾಶ್ಮೀರಿ ವ್ಯಾಪಾರಿಗಳು ತಮ್ಮ ಸರಕಿನ ಉಳಿವಿಗಾಗಿ ಅದನ್ನು ಈ 'ಆಜಾದ್ ಕಾಶ್ಮೀರ'ದೆಡೆಗೆ ತಿರುಗಿಸದೆ ವಿಧಿಯಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಇದನ್ನು ರಾಷ್ಟ್ರ ವಿರೋಧಿ ಕ್ರಮ ಎಂದು ಕರೆದಿರುವ ಅಮರನಾಥ ಸಂಘರ್ಷ ಸಮಿತಿಗೆ, ತಾನು ನಿರಂತರ ಬಂದ್ ಹೆಸರಿನಲ್ಲಿ ರಸ್ತೆ ತಡೆ ನಡೆಸುತ್ತಾ ಕಾಶ್ಮೀರಕ್ಕೆ ಆರ್ಥಿಕ ದಿಗ್ಬಂಧನ ಹೇರಿರುವುದು ಕೂಡಾ ರಾಷ್ಟ್ರ ವಿರೋಧಿ ಕ್ರಮ ಎಂದು ಅನ್ನಿಸದೇ ಹೋಗಿದೆ! ಇಂತಹ ಒಡೆದ ಮಾನಸಿಕತೆಯೇ ಕಾಶ್ಮೀರ ಸಮಸ್ಯೆ ದಿನೇ ದಿನೇ ಜಟಿಲಗೊಳ್ಳುವುದಕ್ಕೆ ಕಾರಣವಾಗಿದೆ. ಇದು, ಹಿಂದೂ ಬಹುಸಂಖ್ಯಾತತೆಯ ಮೇಲೆ ಕಟ್ಟಲ್ಪಟ್ಟಿರುವ ಭಾರತದ ಮಾನಸಿಕತೆಗೆ ತನ್ನ ಮುಸ್ಲಿಂ ಬಹುಸಂಖ್ಯಾತವಾದ ಕಾಶ್ಮೀರದ ಬಗೆಗೆ ಭಿನ್ನವಾಗಿ ಯೋಚಿಸಬೇಕಾಗಿದೆ ಎಂಬ ಪರಿವೆಯೇ ಇಲ್ಲದಿರುವ ಸೂಚನೆಯಾಗಿದೆ. ಕಾಶ್ಮೀರದ ಬಗೆಗೂ ಮುಸ್ಲಿಮರ ತುಷ್ಟೀಕರಣದ ನೆಲೆಯಲ್ಲೇ ಯೋಚಿಸಿಸುವುದಾದರೆ, ನಾವು–ಹಿಂದೂ ಕೋಮುವಾದಿಗಳು ಹೇಳಿಕೊಳ್ಳುವಂತೆ–ಎಂತಹ ಹುಟ್ಟಾ ಸೆಕ್ಯುಲರಿಸ್ಟರಾದೇವು?

ಸದ್ಯದ ಸಮಸ್ಯೆಗೆ ಕಾರಣವಾಗಿರುವ ಅಮರನಾಥ ದೇವಾಲಯದ ಜಮೀನು ವರ್ಗಾವಣೆ ಪ್ರಕರಣವನ್ನೇ ತೆಗೆದುಕೊಳ್ಳಿ. ಅಮರನಾಥ ದೇಗುಲವೆಂದು ಈಗ ಪ್ರಸಿದ್ಧವಾಗಿರುವ ಗುಹೆಯೊಂದರಲ್ಲಿ ಸುಮಾರು ನೂರೈವತ್ತು ವರ್ಷಗಳ ಹಿಂದೆ ಹಿಮಲಿಂಗವನ್ನು ಪ್ರಥಮ ಬಾರಿಗೆ ನೋಡಿ ಅದನ್ನು ಪ್ರಚುರಪಡಿಸಿದವನೇ ಒಬ್ಬ ಮುಸ್ಲಿ ತುರುಗಾಹಿ. ಅಂದಿನಿಂದ ಇಂದಿನವರೆಗೆ ಈ ಲಿಂಗವನ್ನು ನೋಡಲು ದೇಶದ ವಿವಿಧ ಭಾಗಗಳಿಂದ ಬಂದು ಹೋಗಿರುವ ಕೋಟ್ಯಾಂತರ ಅಮರನಾಥ ಯಾತ್ರಿಗಳ ಕಷ್ಟ ಸುಖಗಳನ್ನು ದಾರಿಯುದ್ದಕ್ಕೂ ನೋಡಿಕೊಂಡಿರುವವರು ಮುಸ್ಲಿಮರೇ. ಹದಿನೈದು ವರ್ಷಗಳ ಹಿಂದೆ ಈ ಯಾತ್ರೆ ನೂಕುಸಿತ ಮತ್ತು ಬಿರುಮಳೆಗಳ ನೈಸರ್ಗಿಕ ಅನಾಹುತಗಳಿಗೆ ಸಿಕ್ಕಾಗಲೂ, ಈ ಹಿಂದೂ ಯಾತ್ರಿಗಳ ರಕ್ಷಣೆಗೆ ಧಾವಿಸಿದವರೂ ಸ್ಥಳೀಯ ಮುಸ್ಲಿಮರೇ. ಹಾಗೆ ನೋಡಿದರೆ

ಅಮರನಾಥ ಯಾತ್ರೆಯನ್ನು ನಿರ್ವಹಿಸುವುದು ಕಾಶ್ಮೀರಿ ಮುಸ್ಲಿಮರ ಒಂದು ವಾರ್ಷಿಕ ಸಂಪ್ರದಾಯವೇ ಆಗಿ ಹೋಗಿದೆ. ಆದರೆ ಈ ನೈಸರ್ಗಿಕ ಅನಾಹುತದಲ್ಲಿ ನೂರಾರು ಯಾತ್ರಿಗಳು ಸಾವನ್ನಪ್ಪಿದ ನಂತರ ಎಚ್ಚೆತ್ತುಕೊಂಡ ಆಗಿನ ಫರೂಕ್ ಅಬ್ದುಲ್ಲಾರ ನ್ಯಾಷನಲ್ ಕಾನ್‌ಫರೆನ್ಸ್ ಸರ್ಕಾರ, ಯಾತ್ರೆಯ ವ್ಯವಸ್ಥಿತ ನಿರ್ವಹಣೆಗಾಗಿ ಅಮರನಾಥ ದೇವಸ್ಥಾನ ಮಂಡಳಿಯೊಂದನ್ನು ರಚಿಸಿ, ಯಾತ್ರೆ ಕಾಲದ ತಾತ್ಕಾಲಿಕ ಉಪಯೋಗಕ್ಕಾಗಿ ೪೦ ಹೆಕ್ಟೇರ್ ಅರಣ್ಯ ಭೂಮಿಯನ್ನೂ ಒದಗಿಸಿತು.

ಆದರೆ ಈ ಹಿಂದಿನ ರಾಜ್ಯಪಾಲ ಲೆ॥ ಜ॥ ಎಸ್.ಕೆ. ಸಿನ್ಹಾ ತಾನು ಅಧಿಕಾರ ತ್ಯಜಿಸುವ ಮುನ್ನ ಸರ್ಕಾರಿ ಖರ್ಚಿನಲ್ಲಿ 'ಪುಣ್ಯ'ದ ಕೆಲಸವೊಂದನ್ನು ಮಾಡುವ ಆತುರದಲ್ಲಿ ದೇವಸ್ಥಾನದ ಮಂಡಳಿಯನ್ನು ಪುನಾರಚಿಸಿ, ರಾಜ್ಯಪಾಲ ಹಿಂದೂ ಆಗಿದ್ದರೆ ಅದರ ಅಧ್ಯಕ್ಷತೆಯನ್ನು ಅವರೇ ವಹಿಸಬಹುದೆಂಬ ಕೋಮು ಅಂಶವೊಂದನ್ನು ಅದಕ್ಕೆ ಸೇರಿಸಿದರಲ್ಲದೆ, ಯಾತ್ರಾ ಸಮಯ ಮತ್ತು ಅನುಕೂಲಗಳಿಗಾಗಿ ಮಾತ್ರ ಒದಗಿಸಿದ್ದ ಭೂಮಿಯನ್ನು ಶಾಶ್ವತವಾಗಿ ದೇವಸ್ಥಾನದ ಮಂಡಳಿಗೆ ವರ್ಗಾಯಿಸುವಂತೆ ರಾಜ್ಯ ಸರ್ಕಾರಕ್ಕೆ ಶಿಫಾರ್ಸು ಮಾಡಿದರು. ಅಧಿಕಾರದಲ್ಲಿದ್ದ-ಜಮ್ಮುವಿನವರೇ ಆದ-ಕಾಂಗ್ರೆಸ್ಸಿನ ಗುಲಾಂ ನಬಿ ಆಜಾದರ ನೇತೃತ್ವದ ಸಮ್ಮಿಶ್ರ ಸರ್ಕಾರವೂ, ಇದು ಜಮ್ಮುವಿನ ಹಿಂದೂ ಮತದಾರರನ್ನು ತನ್ನೆಡೆಗೆ ಸೆಳೆದೀತು ಎಂಬ ಆಸೆಯಲ್ಲಿಯೋ ಏನೋ, ಅವಸರವಸರದಲ್ಲಿ ಈ ಸಂಬಂಧ ಆಜ್ಞೆಯನ್ನೂ ಹೊರಡಿಸಿತು. ಆದರೆ ಈವರೆಗೆ ಸ್ಥಳೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಒಂದು ಧಾರ್ಮಿಕ ವಿದ್ಯಮಾನದಂತೆ ಮಾತ್ರ ನಡೆಯುತ್ತಿದ್ದ ಅಮರನಾಥ ಯಾತ್ರೆ ರಾಷ್ಟ್ರ ಮಟ್ಟದಲ್ಲಿ ಒಂದು ಮತೀಯ ಬಣ್ಣ ಪಡೆಯುತ್ತಿರುವ ವಾಸನೆ ಹಿಡಿದ ಕಾಶ್ಮೀರಿ ಮುಸ್ಲಿಮರು, ಸಹಜವಾಗಿಯೇ ಸಿಟ್ಟಿಗೆದ್ದರು. ಇದಕ್ಕೆ ಪ್ರತ್ಯೇಕತಾವಾದಿಗಳ ಮತ್ತು ಉಗ್ರರ ಕುಮ್ಮಕ್ಕೂ ದೊರಕಿತು. ಈ ಮಧ್ಯೆ, ತನ್ನ ರಾಜಕೀಯ ನೆಲೆಯಾದ ಕಾಶ್ಮೀರಿ ಮುಸ್ಲಿಮರ ಬೆಂಬಲ ಕಳೆದುಕೊಳ್ಳುವ ಆತಂಕದಲ್ಲಿ ಕಾಂಗ್ರೆಸ್‌ನ ಸಹ ಪಕ್ಷ ಪಿ.ಡಿ.ಎಫ್., ತನ್ನ ಗಮನಕ್ಕೆ ತಾರದೆ ಆಜ್ಞೆ ಹೊರಡಿಸಲಾಗಿತ್ತೆಂದು ಹೇಳಿ ಸರ್ಕಾರಕ್ಕೆ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿತು. ಇದರ ಪರಿಣಾಮವಾಗಿ ಗುಲಾಂ ನಬಿ ಸರ್ಕಾರ ದಾರಿಗಾಣದೆ ರಾಜೀನಾಮೆ ನೀಡಬೇಕಾಯಿತು.

ಯಾತ್ರೆಯ ದಾರಿಯುದ್ದಕ್ಕೂ ಶಾಶ್ವತ ವಸತಿ ಮತ್ತು ವಿಹಾರ ಕೇಂದ್ರಗಳನ್ನು ಕಟ್ಟಲು ಅನುವು ಮಾಡಕೊಡುವ ಸರ್ಕಾರದ ಈ ಆಜ್ಞೆ, ಕೇಂದ್ರ ಸರ್ಕಾರ ಯಾತ್ರಿಗಳ ಸುರಕ್ಷತೆಯ ದೃಷ್ಟಿಯಿಂದ ಯಾತ್ರೆಯ ವಿವಿಧ ಆಯಾಮಗಳನ್ನು ಕುರಿತು ಅಧ್ಯಯನ ಮಾಡಲು ನೇಮಿಸಿದ್ದ ನಿತೀಶ್ ಸೇನಗುಪ್ತ ಸಮಿತಿಯ ಶಿಫಾರ್ಸುಗಳಿಗೂ ವಿರುದ್ಧವಿತ್ತು. ಈ ಸಮಿತಿ, ಯಾತ್ರೆಯ ದಾರಿಯಿರುವ ಪ್ರದೇಶ ಜೀವ ಪರಿಸರ ದೃಷ್ಟಿಯಿಂದ ತುಂಬಾ ಸೂಕ್ಷ್ಮವಾಗಿದ್ದು, ಅನಿಯಂತ್ರಿತ ಯಾತ್ರೆ ಇನ್ನಷ್ಟು ಪರಿಸರ ಮತ್ತು ಮಾನವ ಅವಘಡಗಳಿಗೆ ಕಾರಣವಾಗುತ್ತದೆ ಎಂದು ಎಚ್ಚರಿಸಿತ್ತು ಹಾಗೂ ಯಾತ್ರೆಯ ಅವಧಿಯನ್ನು ಒಂದು ತಿಂಗಳಿಗೆ ಮತ್ತು ಯಾತ್ರಿಕರನ್ನು ಒಂದು ಲಕ್ಷಕ್ಕೆ ಸೀಮಿತಗೊಳಿಸಬೇಕೆಂದು ಶಿಫಾರ್ಸು ಮಾಡಿತ್ತು. ಈ

ಹಿನ್ನೆಲೆಯಲ್ಲೂ ರಾಜ್ಯ ಸರ್ಕಾರದ ಆಜ್ಞೆ ವಿರುದ್ಧ ಕಾಶ್ಮೀರಿಗಳ ಪ್ರತಿಭಟನೆ ತೀವ್ರಗೊಂಡಿತು. ಅದು ಹಿಂಸಾತ್ಮಕವಾಗಿ ಅಪಾರ ಪ್ರಮಾಣದ ಪ್ರಾಣಹಾನಿಯೂ ಆಗತೊಡಗಿದಾಗ, ಹೊಸ ರಾಜ್ಯಪಾಲ ಎನ್.ಎನ್. ವೋಹ್ರಾ ಸರ್ಕಾರ ತನ್ನ ಆಜ್ಞೆಯನ್ನು ಹಿಂದೆಗೆದುಕೊಳ್ಳುವಂತೆ ಸೂಚಿಸಿದರು. ಇದರಿಂದಾಗಿ ಕಾಶ್ಮೀರವೇನೋ ಶಾಂತವಾಗತೊಡಗಿತು. ಆದರೆ ಜಮ್ಮುವಿನಲ್ಲಿ ಪ್ರತಿಭಟನೆಗಳು ಆರಂಭವಾದವು.

ಸರ್ಕಾರ ಮುಸ್ಲಿಮರ ಒತ್ತಡಕ್ಕೆ ಮಣಿದು ಹಿಂದೂಗಳಿಗೆ ಅನ್ಯಾಯ ಮಾಡಿದೆ ಎಂದು ಜಮ್ಮುವಿನ ಹಿಂದೂ ಸಂಘಟನೆಗಳು ಅಮರನಾಥ ಸಂಘರ್ಷ ಸಮಿತಿ ಹೆಸರಿನಲ್ಲಿ ಕಳೆದ ಒಂದು ತಿಂಗಳಿಂದ ಅಲ್ಲಿ ಬಂದ್ ಆಚರಿಸುತ್ತಾ, ರೈಲು ಬಸ್ಸು ಅಂಗಡಿ ಮುಂಗಟ್ಟುಗಳಿಗೆ ಬೆಂಕಿ ಹಚ್ಚುತ್ತಾ, ಕಾಶ್ಮೀರಕ್ಕೆ ಯಾವುದೇ ವಸ್ತುಗಳು ಸಾಗಾಟವಾಗದಂತೆ ನಿರ್ಬಂಧ ಹೇರಿ, ಕಾಶ್ಮೀರ ವಿರೋಧಿ ಆಂದೋಲನವನ್ನು ಬೆಳೆಸುತ್ತಿವೆ. ಹೇಗೋ ಏನೋ ಈವರೆಗೆ ತಾತ್ಕಾಲಿಕ ಅಡೆ ತಡೆಗಳನ್ನು ಎದುರಿಸುತ್ತಾ ಪಾರಂಪರಿಕ ನೆನಪುಗಳ ಆಧಾರದ ಮೇಲೆ ಒಂದಾಗಿ ಇದ್ದ ಇಡೀ ರಾಜ್ಯ, ಈಗ ಹಿಂದು-ಮುಸ್ಲಿಂ ಎಂದು ನಿರ್ಣಾಯಕವಾಗಿ ಒಡೆದು ಹೋಗುವ ಸ್ಥಿತಿ ತಲುಪಿದೆ. ಹಾಗೆ ನೋಡಿದರೆ, ೧೯೫೦ರಲ್ಲಿ ನೆಹರೂ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿ ಆರ್.ಎಸ್.ಎಸ್.ನ ಕುಮ್ಮಕ್ಕಿನೊಂದಿಗೆ ಭಾರತೀಯ ಜನಸಂಘವೆಂಬ ರಾಜಕೀಯ ಪಕ್ಷವನ್ನು ಸ್ಥಾಪಿಸಿದ ಅಧ್ಯಕ್ಷ ಶ್ಯಾಮ ಪ್ರಸಾದ ಮುಖರ್ಜಿ, ಅದರ ಅಧ್ಯಕ್ಷರಾಗಿ ೧೯೫೧ರಲ್ಲಿ ಜಮ್ಮುವಿಗೆ ಭೇಟಿ ನೀಡಿದಾಗಿನಿಂದಲೇ ಈ ಒಡಕು ಆರಂಭವಾಯಿತೆಂದು ಮೊನ್ನೆ ಟಿ.ವಿ. ಚರ್ಚೆಯೊಂದರಲ್ಲಿ ಭಾಗವಹಿಸಿದ್ದ ಜಮ್ಮುವಿನ ಪತ್ರಕರ್ತ ಮನೋಹರ ಜೋಷಿ ಹೇಳುತ್ತಾರೆ. ಇಡೀ ಜಮು-ಕಾಶ್ಮೀರವೇ ಭಾರತದ ಕೈಬಿಟ್ಟು ಹೋಗುವ ಭಯದಲ್ಲಿ ಮುಖರ್ಜಿ, ರಾಜ್ಯವನ್ನು ಮತೀಯ-ಮುಸ್ಲಿಂ ಕಾಶ್ಮೀರ, ಹಿಂದೂ ಜಮ್ಮು, ಬೌದ್ಧ ಲಡಖ್-ಆಧಾರದ ಮೇಲೆ ತ್ರಿಭಜಿಸಬೇಕೆಂಬ ಪ್ರಚಾರಾಂದೋಲನ ಆರಂಭಿಸಿ ಜಮ್ಮು ಮುಕ್ತಿ ವಾಹಿನಿ ಎಂಬ ಸಂಘಟನೆಗೆ ಕಾರಣರಾಗಿದ್ದರು. ಇಂದು ಅಮರನಾಥ ಸಂಘರ್ಷ ಸಮಿತಿಯಲ್ಲಿರುವ ಬಹುಪಾಲು ಜನರು ಅಂದು ಆರಂಭವಾದ ಜಮ್ಮು ಮುಕ್ತಿ ವಾಹಿನಿಯ ಸದಸ್ಯರೇ ಆಗಿದ್ದಾರೆ ಎಂದು ಮನೋಹರ ಜೋಷಿ ಸೂಚಿಸುತ್ತಾರೆ. ಅಷ್ಟೇ ಅಲ್ಲ, ಹದಿನೈದು ವರ್ಷಗಳ ಹಿಂದೆ ಶ್ರೀನಗರದಲ್ಲಿ ಸ್ಫೋಟಿಸಿದ ಕಟ್ಟಾ ಮುಸ್ಲಿಂವಾದಿಗಳ ದಂಗೆಯನ್ನು ನಿಯಂತ್ರಿಸಲು ಕೈಗೊಂಡಂತಹ ನಿರ್ದಾಕ್ಷಿಣ್ಯ ಮಿಲಿಟರಿ ಕಾರ್ಯಾಚರಣೆಯನ್ನು ಇಲ್ಲೂ ಕೈಗೊಳ್ಳದಿದ್ದಲ್ಲಿ, ಜಮ್ಮು-ಕಾಶ್ಮೀರದ ವಿಭಜನೆ ಮತ್ತು ವಿಘಟನೆಗೆ ದಾರಿ ಮಾಡಿಕೊಟ್ಟ ಅಕ್ಷಮ್ಯ ಅಪರಾಧಕ್ಕೆ ಸಂಯುಕ್ತ ಸರ್ಕಾರ ಗುರಿಯಾಗಬೇಕಾಗುತ್ತದೆಂದು ಅವರು ಎಚ್ಚರಿಸಿದ್ದಾರೆ.

ಈ ಎಚ್ಚರಿಕೆಯ ಹಿಂದೆ ಕಾಶ್ಮೀರಕ್ಕೆ ಸಂಬಂಧಿಸಿದಂತೆ ಕಳೆದ ಅರವತ್ತು ವರ್ಷಗಳಿಂದಲೂ ನಮ್ಮ ಮುಖ್ಯವಾಹಿನಿ ರಾಜಕೀಯ ಪಕ್ಷಗಳು ಅನುಸರಿಸುತ್ತಾ ಬಂದಿರುವ ಅಪ್ರಾಮಾಣಿಕ ರಾಜಕಾರಣವನ್ನು ಕುರಿತ ವಿಷಾದವಿದೆ. ಇಂದು ಜಮ್ಮು-ಕಾಶ್ಮೀರ ತಲುಪಿರುವ ಸ್ಥಿತಿ ನೋಡಿದರೆ, ಕಾಂಗ್ರಸ್‌ನೊಳಗೊಂದು ಬಿಜೆಪಿ ಮತ್ತು ಬಿಜೆಪಿಯೊಳಗೊಂದು ಕಾಂಗ್ರೆಸ್

ಇದ್ದಂತೆ ತೋರುತ್ತಿದೆ. ನಿಜ, ಇಂದು ಕಾಶ್ಮೀರದಲ್ಲಿ ಕಿಡಿ ಹೊತ್ತಿಸಿದ್ದು ಕಾಂಗ್ರೆಸ್ಸಿನ ಅಜಾಗರೂಕ ಮತ್ತು ಸಮಯ ಸಾಧಕ ರಾಜಕಾರಣವೇ. ಆದರೆ ಬಿಜೆಪಿ ಆ ಕಿಡಿಯನ್ನು ಜಮ್ಮುವಿನಲ್ಲಿ ಬೆಂಕಿ ಮಾಡಿ, ಈಗ ಅದನ್ನು ರಾಷ್ಟ್ರಾದ್ಯಂತ ಹಚ್ಚುವ ತನ್ನ ಹಿಂದೂ ಅಭಿಯಾನದ ಎರಡನೇ ಸುತ್ತಿಗೆ ಸಜ್ಜಾಗುತ್ತಿದೆ. ಇದು ರಾಷ್ಟ್ರವನ್ನು ಎಲ್ಲಿಗೆ ಒಯ್ಯಬಹುದು ಎಂಬ ಅರಿವು ಈ ಪಕ್ಷಕ್ಕಿದ್ದಂತಿಲ್ಲ. ಜಮ್ಮು ಮತ್ತು ಕಾಶ್ಮೀರಗಳ ನಡುವಣ ಕುಸಿದು ಬಿದ್ದರೆ, ಕಾಶ್ಮೀರ ಮತ್ತು ದೇಶದ ಇತರ ಭಾಗಗಳ ನಡುವಣ ಸಂಬಂಧ ಕುಸಿದುಬಿದ್ದಂತೆಯೇ. ಹಾಗೇನಾದರೂ ಕಾಶ್ಮೀರ ನಮ್ಮ ಕೈಬಿಟ್ಟರೆ, ನಮ್ಮ ರಾಷ್ಟ್ರವನ್ನು ಬಂಧಿಸಿರುವ ಸೆಕ್ಯುಲರಿಸಂ–ರಾಷ್ಟ್ರೀಯತೆಗೆ ಭಂಗ ಬರದಂತೆ ಎಲ್ಲ ಧರ್ಮಗಳೂ ಒಟ್ಟಿಗೆ ಇರಬಲ್ಲವೆಂಬ ನಂಬಿಕೆ–ತನ್ನೆಲ್ಲ ವಿಶ್ವಾಸಾರ್ಹತೆಯನ್ನು ಅಂತಿಮವಾಗಿ ಕಳೆದುಕೊಂಡಂತೆಯೇ. ಅಲ್ಲಿಂದಾಚೆಗೆ ನಮ್ಮನ್ನಾಳುವವರು ವಿಚ್ಛಿದ್ರಕಾರಕ ಧರ್ಮ ರಾಕ್ಷಸರೇ. ಎಚ್ಚರವಿರಲಿ!

(೨೨ ಆಗಸ್ಟ್, ೨೦೦೮)

ಒಂದು ಪ್ರತಿಸ್ಪಂದನ:*

ನನ್ನ 'ಕಾಶ್ಮೀರದ ಬೆಂಕಿ: ಎಚ್ಚರವಿರಲಿ' ಲೇಖನಕ್ಕೆ ಬಂದಿರುವ ಪ್ರತಿಕ್ರಿಯೆಗಳನ್ನು ಗಮನಿಸಿರುವೆ. ಆಸಕ್ತಿಯಿಂದ ಓದಿ, ವಿವಿಧ ರೀತಿ ಹಾಗೂ ಭಾವಗಳೊಂದಿಗೆ ಪ್ರತಿಕ್ರಿಯಿಸಿರುವ ಎಲ್ಲರಿಗೂ ಧನ್ಯವಾದಗಳು. ಒಬ್ಬ ಓದುಗರು ಆಕ್ಷೇಪಿಸಿರುವಂತೆ, ನಾನು ನನ್ನ ಲೇಖನಗಳಿಗೆ ಬರುವ ಪ್ರತಿಕ್ರಿಯೆಗಳಿಗೆ ಸಾಮಾನ್ಯವಾಗಿ ಉತ್ತರಿಸುವುದಿಲ್ಲ ಎಂಬುದು ನಿಜ. ಇದಕ್ಕೆ ಕಾರಣ: ನಾನು ಗಮನಿಸಿರುವಂತೆ, ಅಂತರ್ಜಾಲದಲ್ಲಿ ನಡೆಯುವ ಬಹುತೇಕ ಚರ್ಚೆ ವೈಯುಕ್ತಿಕ ಮಟ್ಟದಲ್ಲಿರುತ್ತದೆ. ವಿಚಾರ ಪ್ರಚೋದಕವಾಗಿರುವುದಕ್ಕಿಂತ ಹೆಚ್ಚಾಗಿ, ವಾದದಲ್ಲಿ ಗೆಲ್ಲುವ ಹವಣಿಕೆಯೇ ಉದ್ದೇಶವಾಗಿರುವ 'ಚರ್ಚಾಕೂಟ'ದ ಶೈಲಿಯಲ್ಲಿರುತ್ತದೆ. ಅಥವಾ ವ್ಯಂಗ್ಯ-ವಿಡಂಬನೆ-ದುರುದ್ದೇಶಪೂರ್ವಕ ಟೀಕೆಗಳಿಂದ ತುಂಬಿದ ವಾಗ್ಯುದ್ಧದ ರೂಪದಲ್ಲಿರುತ್ತದೆ. ಇದರಿಂದ ನನಗೇನೂ ಪ್ರಯೋಜನವಾಗದಿರುವುದರಿಂದ ಉತ್ತರಿಸುವ ಗೋಜಿಗೆ ಹೋಗುವುದಿಲ್ಲ. ನನ್ನ ಲೇಖನ ಮತ್ತು ಅದಕ್ಕೆ ಬರುವ ಪ್ರತಿಕ್ರಿಯೆಗಳು–ಈ ಎರಡನ್ನೂ ಓದಿದ ಜನ ಒಂದು ತೀರ್ಮಾನಕ್ಕೆ ಬರಬಹುದೆಂದು ಸುಮ್ಮನಾಗುತ್ತೇನೆ. ಆದರೆ ನನ್ನ ಲೇಖನದ ಬಗ್ಗೆ ಪ್ರಾಮಾಣಿಕ ಅನುಮಾನಗಳನ್ನು ವ್ಯಕ್ತಪಡಿಸಿದಾಗ ಅಥವಾ ನನ್ನ ನಿಲುವುಗಳನ್ನು ಬದಲಿಸಿಕೊಳ್ಳಲು ಸಹಾಯಕವಾಗುವಂತಹ ಮಾಹಿತಿ ನೀಡಿ ವಿಮರ್ಶಿಸಿದಾಗ ನಾನು ಪ್ರತಿಕ್ರಿಯಿಸಿರುವೆ. ಇತ್ತೀಚಿನ ಉದಾಹರಣೆ: 'ಕಲ್ಯಾಣ ಕ್ರಾಂತಿ' ಕುರಿತ ನನ್ನ ಲೇಖನಕ್ಕೆ ಬಂದ ಪ್ರತಿಕ್ರಿಯೆಗಳಿಗೆ ನೀಡಿದ ಉತ್ತರ.

---

* 'ಇದು ಮೂಲ ಲೇಖನಕ್ಕೆ 'ನಾಗಸಂಪದ' ಬ್ಲಾಗ್‌ನಲ್ಲಿ ವ್ಯಕ್ತವಾದ ಕೆಲವು ಪ್ರತಿಕ್ರಿಯೆಗಳಿಗೆ ಪ್ರತಿಸ್ಪಂದನ.

ಇನ್ನು 'ಕಾಶ್ಮೀರದ ಬೆಂಕಿ' ಲೇಖನ ಕುರಿತ ಪ್ರತಿಕ್ರಿಯೆಗಳ ಕಡೆ ಈ 'ಬ್ಲಾಗ್'ಗೆ ಕಾರಣರಾಗಿರುವ ಶ್ರೀನಿವಾಸ ಮೂರ್ತಿಯವರು ನನ್ನ ಗಮನ ಸೆಳೆದಿರುವುದರಿಂದ ಮತ್ತು ಕೆಲವು ಓದುಗರು ತಮ್ಮ ಪ್ರಾಮಾಣಿಕ ಅನುಮಾನಗಳನ್ನು–ಕೆಲವರ ಭಾಷೆ ಅವರ ನಿಲುವಿಗನುಸರವಾಗಿ ಖಾರವಾಗಿದೆಯಾದರೂ–ವ್ಯಕ್ತಪಡಿಸಿರುವದರಿಂದ ಇವಕ್ಕೆ (ಮತ್ತೆ ಶ್ರೀನಿವಾಸ ಮೂರ್ತಿಯವರ ನೆರವಿನಿಂದಲೇ)ಉತ್ತರಿಸುವುದು ನನ್ನ ಕರ್ತವ್ಯವೆಂದು ಭಾವಿಸಿ ಬರೆಯಲು ಹೊರಟಾಗ ಚಾಮರಾಜ ಸವಡಿ ಎಂಬುವವರ ಎರಡನೇ ಪ್ರತಿಕ್ರಿಯೆ ಬಂದಿದೆ. ಇದರ ಶೈಲಿ ಮತ್ತು ಭಾವ ನನ್ನ ಉತ್ಸಾಹಕ್ಕೆ ತಣ್ಣೀರೆರಚಿದೆ ಎಂದೇ ಹೇಳಬೇಕು. ಇವರೀಗಾಗಲೇ ನನ್ನ ಬಗ್ಗೆ ತೀರ್ಮಾನಗಳಿಗೆ ಬಂದಿರುವುದರಿಂದ (ಹಾಗೆ ಬರಲು ನನ್ನ ಲೇಖನ ಅವರಲ್ಲಿ ಹುಟ್ಟಿಸಿರುವ ಆತಂಕಗಳೇ ಕಾರಣವಿರಬೇಕು), ಮುಖ್ಯವಾಗಿ ಅವರ ಮೊದಲ ಪ್ರತಿಕ್ರಿಯೆಗೇ ವಿವರವಾಗಿ-ಕಾಶ್ಮೀರ ಭಾರತಕ್ಕೆ ಸೇರಿದ ಪ್ರಕ್ರಿಯೆ ಮತ್ತು ಆನಂತರದ ಬೆಳವಣಿಗೆಗಳನ್ನು ಕುರಿತಂತೆ–ಪ್ರತಿಕ್ರಿಯಿಸಬೇಕೆಂದಿದ್ದ ನಾನು, ಅದರಿಂದ ಪ್ರಯೋಜನವಿಲ್ಲವೆಂದು ಇಲ್ಲಿ ಸಂಕ್ಷಿಪ್ತವಾಗಿ ಮಾತ್ರ ಪ್ರತಿಕ್ರಿಯಿಸುತ್ತಿರುವೆ.

ಬಹಳಷ್ಟು ಓದುಗರು–ಚಾಮರಾಜ ಸವಡಿಯವರೂ ಸೇರಿದಂತೆ–ಕಾಶ್ಮೀರದ ರಾಜಕೀಯ ಪ್ರಶ್ನೆಯನ್ನು ಅದರ ಕೋಮು ಆಯಾಮದಲ್ಲಿ ಮಾತ್ರ ಗ್ರಹಿಸಿ ಪ್ರತಿಕ್ರಿಯಿಸಿದಂತಿದೆ. ಉದಾಹರಣೆಗೆ, ಓರ್ವ ಓದುಗರು ದ.ಕ.ದಲ್ಲೆಲ್ಲೋ ನಡೆದಿದೆಯೆಂದು ಹೇಳಲಾದ ಪುಂಡಾಟಿಕೆಯ ಪ್ರಕರಣವನ್ನು ಕಾಶ್ಮೀರದ ಪ್ರಶ್ನೆಗೆ ಜೋಡಿಸಿ ಪ್ರಶ್ನೆಗಳನ್ನೆತ್ತಿರುವುದು. ಇವನ್ನು ಮುಸ್ಲಿಂ ಪುಂಡಾಟಿಕೆ ಎನ್ನುವುದಾದರೆ, ಇದೇ ಭಾವನೆಯಲ್ಲಿ ಹಿಂದೂ ಪುಂಡಾಟಿಕೆಯೆಂದು ಕರೆಯಬಹುದಾದ ಎಷ್ಟು ಪ್ರಕರಣಗಳು ವರದಿಯಾಗಿಲ್ಲ? ಇವನ್ನೇನಿದ್ದರೂ ಕಾನೂನು ಮತ್ತು ಶಿಸ್ತಿನ ಪ್ರಕರಣಗಳಾಗಿ ಮಾತ್ರ ನೋಡುವುದು ಸಾಮಾಜಿಕ ಶಾಂತಿಯ ದೃಷ್ಟಿಯಿಂದ ಒಳ್ಳೆಯದು. ಇಲ್ಲದೇ ಹೋದರೆ, ಅದು ಮುಗಿಯದ (ಮಾನಸಿಕ ಮತ್ತು ಸಾಮಾಜಿಕ) ಅಶಾಂತಿಗೆ ಕಾರಣವಾದೀತು!

ಕಾಶ್ಮೀರ ವಿವಾದದ ಬಗ್ಗೆ ನಾವು ಸಾಹಿತ್ಯ ಕೃತಿಯೊಂದಕ್ಕೆ ಅಥವಾ ವೈಚಾರಿಕ ಪ್ರಮೇಯವೊಂದಕ್ಕೆ ಸ್ಪಂದಿಸಿದಂತೆ ಭಾವನಾತ್ಮಕ ನೆಲೆಯಲ್ಲಿ ಸ್ಪಂದಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ, ಅದೊಂದು ಲಕ್ಷಾಂತರ ಜನರ ಸುಖ-ದುಃಖಗಳನ್ನು ಮತ್ತು ಸಾವು-ಬದುಕುಗಳನ್ನು ನಿರ್ಧರಿಸುವ ಜೀವಂತ ವಾಸ್ತವದ ಪ್ರಶ್ನೆ. ಹಾಗಾಗಿ, ಅದನ್ನು ಮಾನವೀಯವಾಗಿ ಹೇಗೆ ಪರಿಹರಿಸಿ ಹೆಚ್ಚು ಜನರ ಸುಖ-ನೆಮ್ಮದಿಗಳಿಗೆ ಹೇಗೆ ಕಾರಣವಾಗಬಹುದು ಎಂಬ ಕಡೆಗೆ ನಮ್ಮ ಗಮನವಿರಬೇಕೇ ಹೊರತು, ರಾಷ್ಟ್ರೀಯತೆಯ ಭಾವಾವೇಶದೊಂದಿಗೋ ಅಥವಾ ನಾವು ಸೇರಿದ ಕೋಮಿನ ಬಗೆಗಿನ ಅಭಿಮಾನದಿಂದಲೋ ವಾದ ಮಾಡುವುದರಿಂದ ನಂನಮ್ಮ ಅಹಂಕಾರಗಳನ್ನು ತಣಿಸಿಕೊಳ್ಳುವುದರ ಹೊರತಾಗಿ ಮತ್ತಾವ ಪ್ರಯೋಜನವೂ ಆಗದು. ಹೆಚ್ಚೆಂದರೆ, ಅಲ್ಲಿನ ಹಿಂಸಾಚಾರದಲ್ಲಿ–ಭಯೋತ್ಪಾದನೆಯಲ್ಲಿ

ಕೊನೆಗೂ ಯಾರು ಗೆಲ್ಲುವರೋ ಅವರದೇ (ಅರಣ್ಯ)ನ್ಯಾಯ ಎಂಬಂತಹ ಸಾಮಾಜಿಕ ಪರಿಸ್ಥಿತಿಗೆ ನಮ್ಮದೂ ಸಣ್ಣ ಕೊಡುಗೆಯನ್ನು ಸಲ್ಲಿಸಿದಂತಾಗುತ್ತದಷ್ಟೆ!

ಮೊದಲಾಗಿ, ನಾವು ಕಾಶ್ಮೀರದ ಬಗ್ಗೆ ಮಾತನಾಡತೊಡಗುವ ಮುನ್ನ ಅರಿಯಬೇಕಾದುದೇನೆಂದರೆ, ಆ ರಾಜ್ಯ ಮಿಕ್ಕೆಲ್ಲ ರಾಜ್ಯಗಳಂತೆ ನಮ್ಮ ರಾಷ್ಟ್ರೀಯತೆಯ ಸಹಜ ಕೂಸಲ್ಲ. ಅದಕ್ಕೆ ತನ್ನದೇ ಆದ ಸಂವಿಧಾನವಿದೆ ಹಾಗೂ ಅದರಡಿ ತನ್ನದೇ ಆದ ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳು ಮತ್ತು ಕಾನೂನುಗಳಿವೆ. ಭಾರತದ ಸಂವಿಧಾನದಡಿ ಆ ರಾಜ್ಯಕ್ಕೆ ೩೭೦ನೇ ಕಲಮಿನ ಪ್ರಕಾರ ವಿಶೇಷ ಸ್ಥಾನಮಾನ ನೀಡಿ ಈ ಸ್ವಾಯತ್ತತೆ ಕಲ್ಪಿಸಲಾಗಿದೆ. ರಾಷ್ಟ್ರ ವಿಭಜನೆಗೆ ಆಧಾರವಾಗಿದ್ದ ಧಾರ್ಮಿಕ ಬಹುಸಂಖ್ಯಾತತೆಯ ಆಧಾರದ ಮೇಲೆ ಈ ರಾಜ್ಯದ ಮುಂದೆ ಪಾಕಿಸ್ತಾನಕ್ಕೆ ಸೇರುವ ಅಥವಾ ಸ್ವತಂತ್ರ ರಾಷ್ಟ್ರವಾಗುಳಿಯುವ(ಇದಕ್ಕೆ ಗಣನೀಯ ಸಂಖ್ಯೆಯ ಹಿಂದೂಗಳ ಬೆಂಬಲವಿತ್ತು ಎಂಬುದೂ ಗಮನಾರ್ಹ) ಸಾಧ್ಯತೆಗಳೂ ಇದ್ದವು ಎಂಬುದನ್ನೂ ನಾವು ನೆನಪಿಡಬೇಕು. ಆದರೂ, ಚರಿತ್ರೆಯ ಆಕಸ್ಮಿಕದಿಂದಾಗಿ–ಅದರ ಹಿಂದೂ ದೊರೆಯ ನಿರ್ಧಾರ ಮತ್ತು ಆ ಸಂಸ್ಥಾನದ ಪ್ರಧಾನಮಂತ್ರಿಯಾಗಿದ್ದ ಜಾತ್ಯತೀತ ಮುಸ್ಲಿಂ ಜನನಾಯಕ ಷೇಕ್ ಅಬ್ದುಲ್ಲಾರ ಮುತ್ಸದ್ದಿತನದಿಂದಾಗಿ–ಅದು ಭಾರತದ ಒಕ್ಕೂಟಕ್ಕೆ ಸೇರಿತು. (ಹೀಗೆ ಸೇರಿದ ಮೇಲೆ ಅದು ಪ್ರಜಾಪ್ರಭುತ್ವವಾದಿ ಆಡಳಿತಕ್ಕನುಗುಣವಾಗಿ ಬಹುಸಂಖ್ಯಾತ ಮುಸ್ಲಿಂ ನಾಯಕತ್ವಕ್ಕೆ ಒಳಗಾಗುವ ಸೂಚನೆ ಸಿಕ್ಕೊಡನೆ, ಹಿಂದೂ ದೊರೆ ಭಾರತದೊಡನೆಯ ವಿಲೀನವನ್ನು ರದ್ದುಗೊಳಿಸಲೂ ಯತ್ನಿಸಿದ್ದುಂಟು!)

ಹಾಗಾಗಿ, ಮೊದಲು ಅದು ಹಾಗೆ ಸೇರಲು ಮಾಡಿಕೊಂಡ ಒಪ್ಪಂದವನ್ನು ನಾವು ಗೌರವಿಸುವ ನಾಗರಿಕ ಪ್ರಜೆಗಳಾಗಿ; ನಂತರ ಅಲ್ಲಿನ ಜನತೆಯ ವಿಶ್ವಾಸಕ್ಕೆ ತೆಗೆದುಕೊಂಡು, ಅದರ ವಿವರಗಳ ಈಗಿನ ಸಾಧುತ್ವದ ಅಥವಾ ಅಗತ್ಯ ಬದಲಾವಣೆಗಳ ಬಗ್ಗೆ ಮಾತನಾಡಬೇಕು. ಬದಲಿಗೆ ಕಾಶ್ಮೀರವೊಂದು ನಮ್ಮ ವಸಾಹತು ಎಂಬಂತೆ ಏಕಪಕ್ಷೀಯವಾಗಿ, 'ಅರವತ್ತು ವರ್ಷಗಳ ನಂತರವೂ ಅದನ್ನು ಸ್ವಾಯತ್ತವಾಗಿ ಇರಿಸಿರುವ ಅಪಾಯ'ದ ಬಗ್ಗೆ (ಸವದಿಯವರಂತೆ) ಮಾತನಾಡತೊಡಗಿರುವವರ ಕಾರ್ಯಕ್ರಮವಾದರೂ ಏನು? ಇಂತಹ ರಾಷ್ಟ್ರೀಯತೆಯ 'ಗುತ್ತೇದಾರ'ರೇ ರಾಷ್ಟ್ರಕ್ಕೆ ಹೆಚ್ಚು ಅಪಾಯಕಾರಿ ಎಂದು ನಾನು ಭಾವಿಸಿದ್ದೇನೆ. ಸಾವಿರಾರು ಹಿಂದೂ ಪಂಡಿತರನ್ನು ಕಾಶ್ಮೀರದಿಂದ ಹೊರಗಟ್ಟಲಾಗಿದೆ ಎಂದು ಪದೇ ಪದೇ ಅರಚಿಕೊಳ್ಳುವ ಇವರು, ಇದು ಆದದ್ದು ಇವರ ನಾಯಕ ಅಡ್ವಾಣಿಯವರ ಶಿಫಾರ್ಸಿನ ಮೇರೆಗೆ ಪ್ರಧಾನಿ ವಿ.ಪಿ.ಸಿಂಗ್ ಈ ರಾಜ್ಯಕ್ಕೆ ರಾಜ್ಯಪಾಲರಾಗಿ ನೇಮಕ ಮಾಡಿದ ಹಿಂದೂವಾದಿಗಳ ಕಣ್ಮಣಿ ಜಗಮೋಹನ್‌ರ ಕಾಲದಲ್ಲಿ ಮತ್ತು ಅವರ ದಮನಕಾರಿ ಆಡಳಿತ ಶೈಲಿಯಿಂದಾಗಿ ಎಂಬುದನ್ನು ಅರಿತರೆ ಒಳ್ಳೆಯದು.

ಹಾಗೆಂದು ಈ ದುರಂತ-ದಮನಗಳನ್ನು ಮನ್ನಿಸಬೇಕೆಂದಲ್ಲ. ಆದರೆ ದೆಹಲಿಯ ಘಾತುಕ ರಾಜಕೀಯ ನೀತಿಯಿಂದಾಗಿ ಜಮ್ಮು ಮತ್ತು ಕಾಶ್ಮೀರದ ಇತ್ತೀಚಿನ ಇತಿಹಾಸ ಇಂತಹ ಅನೇಕ ಮಾನವೀಯ ದುರಂತ-ದಮನಗಳಿಂದ ತುಂಬಿ ಹೋಗಿದೆ ಎಂಬುದನ್ನು

ನಾವು ಗಮನಿಸಬೇಕು. ೧೯೪೭ರ ಅಕ್ಟೋಬರ್‌ನಲ್ಲಿ ಹಿಂದೂ ದೊರೆ ಹರಿ ಸಿಂಗ್ ಜಮ್ಮುವಿನಲ್ಲಿ ಹಿಂದೂ ಬಹುಸಂಖ್ಯಾತತೆಯನ್ನು ಸ್ಥಾಪಿಸಲು ನಡೆಸಿದ ಮುಸ್ಲಿಮರ ನರಮೇಧ ಮತ್ತು ಮುಸ್ಲಿಂ ಮಹಿಳೆಯರ ಸಾಮೂಹಿಕ ಮಾನಭಂಗದ ಪ್ರಕರಣವನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಮಹಾತ್ಮ ಗಾಂಧಿಯವರ ಹೊರತಾಗಿ, ನೆಹರೂ ಪಟೇಲರಾದಿಯಾಗಿ ಯಾವ ಹಿಂದೂ ಸೆಕ್ಯುಲರಿಸ್ಟ್ ನಾಯಕನೂ ಈ ಬಗ್ಗೆ ತುಟಿಕ್ ಪಿಟಿಕ್ ಎನ್ನಲಿಲ್ಲ! ಈ ನರಮೇಧದಲ್ಲಿ ಕೊಲ್ಲಲ್ಪಟ್ಟ ಅಥವಾ ಕಾಣೆಯಾದ ಮುಸ್ಲಿಮರ ಸಂಖ್ಯೆ ಎರಡು ಲಕ್ಷ ಮುವ್ವತ್ತೇಳು ಸಾವಿರ! ಇದರ ನಂತರದ ಪರಿಣಾಮವಾಗಿ, ೧೯೪೮ರಲ್ಲಿ ಜಮ್ಮುವಿನಲ್ಲಿ ಶೇ.೬೧ರಷ್ಟಿದ್ದ ಮುಸ್ಲಿಂ ಜನಸಂಖ್ಯೆ ೧೯೬೧ರ ಹೊತ್ತಿಗೆ ಶೆ. ೩೮ಕ್ಕೆ ಇಳಿದಿತ್ತು!(ಇದರ ವಿವರಗಳಿಗಾಗಿ ಫ್ರಂಟ್‌ಲೈನ್ ಪಾಕ್ಷಿಕದ ೨೦೦೮ರ ಸೆಪ್ಟಂಬರ್ ೨೬ರ ಸಂಚಿಕೆಯಲ್ಲಿನ ಎ.ಜಿ. ನೂರಾನಿಯವರ 'Why Jammu errupts?' ಲೇಖನವನ್ನು ಓದಬಹುದು) ಕಳೆದ ಅರವತ್ತು ವರ್ಷಗಳಿಂದ ಅನುಸರಿಸಿಕೊಂಡು ಬಂದಿರುವ ಇಂತಹ ಘಾತುಕ ರಾಷ್ಟ್ರೀಯತೆಯೇ, ಕಾಶ್ಮೀರವನ್ನು ಅದರ ತುಂಬಾ ಮಿಲಿಟರಿ ಇಟ್ಟುಕೊಂಡೇ ನಿರ್ವಹಿಸುವಂತಹ ಅಂತಾರಾಷ್ಟ್ರೀಯ ಮುಜುಗರದ ಪರಿಸ್ಥಿತಿಯನ್ನು ನಮ್ಮಲ್ಲಿ ಉಂಟುಮಾಡಿರುವುದು! ಇದರಿಂದಾಗಿ ಅಲ್ಲಿ ಪ್ರತ್ಯೇಕತಾವಾದಿಗಳ ಮತ್ತು ಉಗ್ರರ ಅಬ್ಬರ ಹೆಚ್ಚುತ್ತಾ ಹೋಗಿ, ಇಂದು ಕಾಶ್ಮೀರ ನಮ್ಮ ಕೈಬಿಟ್ಟು ಹೋಗುವುದೇನೋ ಎಂಬ ಆತಂಕ ಹುಟ್ಟಿಸಿರುವುದು... ಇಂತಹವರು ನಮ್ಮನ್ನು ಹುಸಿ ಜಾತ್ಯತೀತವಾದಿಗಳಂದೋ ಕೋಮುವಾದಿ ಕನ್ನಡಕ ಹಾಕಿಕೊಂಡಿರುವವರೆಂದೋ ಕರೆಯುವುದು ಎಂತಹ ವಿಪರ್ಯಾಸ!

ಮಿಕ್ಕಂತೆ ಸವಡಿಯವರು ಅಮರನಾಥ ದೇವಸ್ಥಾನ ಮಂಡಳಿಯ ಬಗ್ಗೆ ಕೊಟ್ಟಿರುವ ಮಾಹಿತಿ–ಸಂಬಂಧಪಟ್ಟ ಮೂಲ ಕಾಯಿದೆಯ ವಿವರಗಳು ಮತ್ತು ನ್ಯಾಯಾಲಯದ ತೀರ್ಪಿನ ವಿವರಗಳು–ಅವರ ವಾದಕ್ಕೇ ವಿರುದ್ಧವಾಗಿರುವುದನ್ನು ಓದುಗರು ಗಮನಿಸಬಹುದು. ಇವರು ಫರೂಕ್ ಅಬ್ದುಲ್ಲಾರ ಮುಖ್ಯಮಂತ್ರಿತ್ವ ಕಾಲದಲ್ಲಿ ಅನುಮೋದಿತವಾದ ೨೦೦೦ರ ಅಮರನಾಥ ದೇಗುಲ ಕಾಯ್ದೆಯ ವಿವರಗಳನ್ನು ನೀಡಿ ಇದರಲ್ಲಿ ತಪ್ಪೇನಿದೆ ಎಂದು ಕೇಳಿದ್ದಾರೆ. ಅದರಲ್ಲಿ ತಪ್ಪೇನಿಲ್ಲ. ಸರಿಯಾಗಿಯೇ ಇದೆ. ಅದರೆ ಅದನ್ನು ಇತ್ತೀಚೆಗೆ ತಿದ್ದಿ, ದೇವಸ್ಥಾನ ಮಂಡಳಿಯನ್ನು ಕೋಮುವಾರು ಆಧಾರದ ಮೇಲೆ ಪುನಾರಚಿಸಿ(ಹಜ್ ಯಾತ್ರೆ ವಿದೇಶಾಂಗ ಖಾತೆಯಡಿ ನಡೆಯುತ್ತಿದ್ದು, ಸಂಬಂಧಪಟ್ಟ ಖಾತೆ ಅಥವಾ ಇಲಾಖೆಯ ಮುಖ್ಯಸ್ಥರು ಮುಸ್ಲಿಮರೇ ಆಗಿರಬೇಕೇಂಬ ನಿಯಮವೇನೂ ಇಲ್ಲ!)ಮೂಲ ಕಾಯ್ದೆಯಲ್ಲಿ ತಾತ್ಕಾಲಿಕ ವ್ಯವಸ್ಥೆಗಾಗಿ ಎಂದಿದ್ದ ಭೂಮಿಯನ್ನು ಶಾಶ್ವತ ವ್ಯವಸ್ಥೆಗಾಗಿ ದೇವಸ್ಥಾನ ಮಂಡಳಿಗೆ ಮಂಜೂರು ಮಾಡುವಂತೆ ಆಜ್ಞೆ ಹೊರಡಿಸಿದ್ದು ಮಾತ್ರ ತಪ್ಪಾಗಿದೆ! ಅಲ್ಲದೆ ಇದು, ಇವರು ತಮ್ಮ ವಾದ ಸಮರ್ಥನೆಗಾಗಿ ಉಲ್ಲೇಖಿಸಿರುವ ನ್ಯಾಯಾಯಲಯದ ತೀರ್ಪಿಗೂ ವಿರುದ್ಧವಾಗಿದೆ ಎಂಬುದನ್ನೂ ಗಮನಿಸಬಹುದು!

ದೇವಸ್ಥಾನ ಮಂಡಳಿಗೆ ಭೂಮಿಯ ಶಾಶ್ವತ ವರ್ಗಾವಣೆಯಾಗದಿರುವುದರಿಂದ

ಅಮರನಾಥ ಯಾತ್ರೆಗೆ ಯಾವುದೇ ತೊಂದರೆಯಾಗಿತ್ತೆ? ಈ ಬಗ್ಗೆ ಅಧಿಕೃತ ದೂರುಗಳಿದ್ದವೆ? ಇಲ್ಲವಲ್ಲ! ಬದಲಿಗೆ ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಈ ಯಾತ್ರೆಯನ್ನು–ಅಲ್ಲಿ ಶಾಶ್ವತ ವಸತಿ ಅಥವಾ ಕಛೇರಿಗಳನ್ನು ನಿರ್ಮಿಸಲು ಅವಕಾಶ ಕೊಡದೆ–ಕಾಲ ಮತ್ತು ಸಂಖ್ಯೆಯ ನೆಲೆಯಲ್ಲಿ ಸೀಮಿತಗೊಳಿಸಬೇಕೆಂದು ಸರ್ಕಾರವೇ ರಚಿಸಿದ್ದ ಸಮಿತಿ ಶಿಫಾರ್ಸು ಮಾಡಿತ್ತಲ್ಲ? ಆದರೂ ಭೂಮಿ ವರ್ಗಾವಣೆಯ ದಿಢೀರ್ ನಿರ್ಧಾರವೇಕೆ? ಇದರ ಉದ್ದೇಶವಾದರೂ ಏನು? ಈ ಬಗೆಗಿನ ಅನುಮಾನಗಳೇ ಇಂದು ಕಾಶ್ಮೀರಕ್ಕೆ ಮತ್ತು ನಂತರ ಜಮ್ಮುವಿಗೆ ಬೆಂಕಿ ಹಚ್ಚಿರುವುದು. ನಿಜ, ಕಾಶ್ಮೀರದ ನಿರ್ವಹಣೆಯ ಕಷ್ಟದಿಂದಾಗಿ ಜಮ್ಮುವಿಗೆ ಅಭಿವೃದ್ಧಿಯ ನೆಲೆಯಲ್ಲಿ ಅನ್ಯಾಯವಾಗಿದೆ. ಆದರೆ ಅದನ್ನು ಪ್ರತಿಭಟಿಸಲು ಅಮರನಾಥ ಭೂಮಿ ವರ್ಗಾವಣೆ ಸಮಸ್ಯೆಯನ್ನು ಎತ್ತಿಕೊಂಡು ಅದನ್ನು ಜಟಿಲಗೊಳಿಸುವ, ಮತೀಯಗೊಳಿಸುವ ಹಾಗೂ ಜಮ್ಮು ಮತ್ತು ಕಾಶ್ಮೀರಗಳ ನಡುವೆ ಈಗಾಗಲೇ ಹದಗೆಟ್ಟಿರುವ ಭಾವನಾತ್ಮಕ ಸಂಬಂಧವನ್ನು ಇನ್ನಷ್ಟು ಹದಗೆಡಿಸುವ ಯತ್ನ ಮಾಡುವುದು ರಾಷ್ಟ್ರಘಾತುಕ ಕೃತ್ಯವೇ ಆಗುತ್ತದೆ. ಇದನ್ನೇ ನಾನು ನನ್ನ ಮೂಲ ಲೇಖನದಲ್ಲಿ ಹೇಳಿದ್ದುದು.

ಈಗ ರಾಷ್ಟ್ರೀಯರ ಮುಂದಿರುವ ಪ್ರಶ್ನೆ ಒಂದೇ: ಭೌಗೋಳಿಕ ಮತ್ತು ಸಾಂವಿಧಾನಿಕ ಭಾರತದ ಕಿರೀಟದಂತಿರುವ ಅಥವಾ ಮಹಾತ್ಮ ಗಾಂಧಿಯವರಿಗೆ ಕೋಮುವಾದಿ 'ಕಗ್ಗತ್ತಲೆಯ ಮಧ್ಯದ ಏಕೈಕ ಆಶಾಕಿರಣ'ದಂತೆ ಕಂಡ ಕಾಶ್ಮೀರವನ್ನು ಉಳಿಸಿಕೊಳ್ಳುವುದು ಹೇಗೆ? ಕಳೆದ ಐವತ್ತೈದು ವರ್ಷಗಳಲ್ಲಿ (ಜಮ್ಮು ಮತ್ತು ಕಾಶ್ಮೀರ ಭಾರತದ ಒಕ್ಕೂಟಕ್ಕೆ 'ಅಧಿಕೃತ'ವಾಗಿ ಸೇರಿದ್ದು ೧೯೫೨ರಲ್ಲಿ–ಸ್ವಾತಂತ್ರ್ಯ ಘೋಷಣೆಯ ಐದು ವರ್ಷಗಳ ಮತ್ತು ನಮ್ಮ ಸಂವಿಧಾನ ಜಾರಿಗೆ ಬಂದ ಎರಡು ವರ್ಷಗಳ ನಂತರ) ಪ್ರತ್ಯೇಕತಾವಾದಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚುವಂತೆ ಮಾಡಿ, ಬಹು ಹಿಂದೆಯೇ ವಿಶ್ವಸಂಸ್ಥೆಯಡಿಯಲ್ಲಿ ಅದನ್ನೊಂದು ಜನಮತಗಣನೆಯ ಮೂಲಕ ಇತ್ಯರ್ಥವಾಗಬೇಕಾದ ಅಂತಾರಾಷ್ಟ್ರೀಯ ವಿವಾದಿತ ಪ್ರದೇಶವನ್ನಾಗಿ ಪರಿವರ್ತಿಸಿಕೊಂಡಿರುವ ಈವರೆಗಿನ ಅಪ್ರಬುದ್ಧ ಪಿತೂರಿ ರಾಜಕಾರಣದ ಮತ್ತು ಬಲಪ್ರಯೋಗದ ಕಾಶ್ಮೀರ ನೀತಿಯನ್ನು ಮುಂದುವರಿಸಿಕೊಂಡು ಹೋಗಬೇಕೆ? ಅಥವಾ ನಮ್ಮನ್ನು ಸೇರಿಕೊಳ್ಳುವ ಮುನ್ನ ಆ ಜನಕ್ಕೆ ಕೊಟ್ಟ ವಚನದಂತೆ ಅವರ ಸ್ವಾಯತ್ತತೆಗೆ ಭಂಗ ಬರದ ರೀತಿಯಲ್ಲಿ ನಡೆದುಕೊಳ್ಳುತ್ತಾ, ಆ ವಿಶ್ವಾಸದ ವಾತಾವರಣದಲ್ಲಿ ಮಾತುಕತೆ ನಡೆಸುವ ಮೂಲಕವೇ ಆ ರಾಜ್ಯವನ್ನು ನಮ್ಮ ಒಕ್ಕೂಟದ ಸಾಮಾನ್ಯ ರಾಜ್ಯವನ್ನಾಗಿ ಪರಿವರ್ತಿಸಿಕೊಳ್ಳುವ ಪ್ರಜಾಸತ್ತಾತ್ಮಕ ಮುತ್ಸದ್ದಿತನದ ನೀತಿಯನ್ನು ಅನುಸರಿಸಬೇಕೆ? ಇದನ್ನು ಆದಷ್ಟು ಬೇಗ ತೀರ್ಮಾನಿಸುವ ಕಾಲವೀಗ ಬಂದಿದೆ.

'ಕಾಶ್ಮೀರ ನಮ್ಮದು! ನಾವು ಅದನ್ನು ಬಿಡೆವು!!' ಅಥವಾ 'ಪಾಕಿಸ್ತಾನಕ್ಕೆ ಹೋಗಬಯಸುವವರನ್ನು ಇಲ್ಲಿಂದ ಒದ್ದೋಡಿಸಿ!' ಎಂದು ಎದೆ ಬಡಿದುಕೊಳ್ಳುತ್ತಾ ಇಲ್ಲಿ ಅದೆಷ್ಟೇ ಕೂಗಿಕೊಂಡರೂ, ಅಲ್ಲಿನ ವಾಸ್ತವವೇನೂ ಬದಲಾಗದು. ಇಂತಹ ಕೂಗುಮಾರಿಗಳ ಒತ್ತಡದಿಂದಾಗಿಯೇ ಅವರಿಗೆ ಪಾಕಿಸ್ತಾನಕ್ಕೆ ಹೋಗುವ ಅಥವಾ ಸ್ವತಂತ್ರ ರಾಷ್ಟ್ರ

ರಚಿಸಿಕೊಳ್ಳುವ ಅವಕಾಶ ಸೃಷ್ಟಿಯಾದರೆ, ಅವರು ನೂರಾರು ವರ್ಷಗಳಿಂದ ವಾಸಿಸುತ್ತಾ ಬಂದಿರುವ ತಮ್ಮ ನೆಲದೊಂದಿಗೇ ಹೋಗಲು ಬದ್ಧರಾದವರು ಎಂಬುದು, ಕಳೆದ ಐವತ್ತು ವರ್ಷಗಳಿಂದ ಅಲ್ಲಿ ನಿರಂತರವಾಗಿ ನಡೆದಿರುವ ಪ್ರತಿಭಟನೆ ಸಾಬೀತು ಮಾಡಿದೆ. ಇದನ್ನು ಶ್ರೀನಗರದಲ್ಲಿ ವಿಶ್ವಸಂಸ್ಥೆಯ ಮಿಲಿಟರಿ ಕಛೇರಿ ಇರುವಂತಹ ಪರಿಸ್ಥಿತಿ ನಿರ್ಮಿಸಿಕೊಂಡಿರುವ ನಾವು, ಬಲಪ್ರಯೋಗದ ಮೂಲಕ ಹತ್ತಿಕ್ಕಲೂ ಸಾಧ್ಯವಿಲ್ಲ ಎಂಬುದು ನೆನಪಿರಲಿ. ಹಾಗೇನಾದರೂ ಸಾಧ್ಯವಿದ್ದಲ್ಲಿ ೧೯೪೮ರಲ್ಲೇ ಪಾಕಿಸ್ತಾನದ ಬುಡಕಟ್ಟು ಜನ ಆಕ್ರಮಿಸಿಕೊಂಡು; ಪಾಕಿಸ್ತಾನದ ಸಹಕಾರದಿಂದ ಅದರಲ್ಲಿ ಚೀನಾಕ್ಕೂ ಒಂದಿಷ್ಟು ನೆಲ ಬಿಟ್ಟುಕೊಟ್ಟು ಸ್ಥಾಪಿತವಾಗಿರುವ–ಮೂಲ ಕಾಶ್ಮೀರದ ಮೂರನೇ ಒಂದು ಭಾಗದಷ್ಟಿರುವ–'ಆಜಾದ್ ಕಾಶ್ಮೀರ'ವನ್ನು ನಾವು ಮರುವಶಪಡಿಸಿಕೊಳ್ಳಬಹುದಿತ್ತಲ್ಲ? ಇದನ್ನು ನಾವು 'ಪಾಕ್ ಆಕ್ರಮಿತ ಕಾಶ್ಮೀರ'ವೆಂದು ಕರೆಯುತ್ತಲೇ ಅದರ ರಾಜಧಾನಿ ಮುಝಫರಾಬಾದ್‌ಗೆ ಸಂಬಂಧ ಸುಧಾರಣೆಗಳ ಹೆಸರಿನಲ್ಲಿ ಬಸ್ ಸಂಪರ್ಕ ಕಲ್ಪಿಸಿಕೊಂಡು, ಅದಕ್ಕೆ ಅರ್ಧ ಮಾನ್ಯತೆಯನ್ನೂ ನೀಡಿದ್ದೇವಲ್ಲ?

ಹಾಗಾಗಿ, ನೀತಿ ಸ್ಥಿತ್ಯಂತರ ಅನಿವಾರ್ಯವಾಗಿರುವ ಇಂತಹ ಸಂದರ್ಭದಲ್ಲಿ ನಾವು ಯಾವುದೇ ನಿಲುವು ರೂಪಿಸಿಕೊಳ್ಳುವ ಮುನ್ನ ಅದು ಅನುಷ್ಠಾನ ಸಾಧ್ಯವೇ; ಸಾಧ್ಯವೇ ಆಗುವುದಾದರೆ, ಅದರ ಆತ್ಯಂತಿಕ ಪರಿಣಾಮಗಳೇನು ಎಂಬುದನ್ನು ಯೋಚಿಸಬೇಕು.

ಇಷ್ಟು ಹೇಳಿದ ನಂತರವೂ ನಾನು ಧಿಕ್ಕಾರಕ್ಕೆ ಅರ್ಹನಾಗಿದ್ದರೆ, ಅದನ್ನು ಹೆಮ್ಮೆ-ಸಂತೋಷಗಳಿಂದಲೇ ಸ್ವೀಕರಿಸುವೆ.

■

೧೬. ಮಾರುಕಟ್ಟೆ ಮತ್ತು ಮೌಢ್ಯಾಚಾರ

ಅಂದು ನನ್ನ ಗೆಳೆಯರೊಬ್ಬರು ತಮ್ಮ ಮಗ ಪಿಯುಸಿಯಲ್ಲಿ ಪದೇ ಪದೇ ಫೇಲಾಗುತ್ತಿದ್ದ ಸಮಸ್ಯೆಯನ್ನು ಬಗೆಹರಿಸಲು ಬೆಂಗಳೂರಿನ ಸುಪ್ರಸಿದ್ಧ ವಾಸ್ತು ತಜ್ಞರ ಸಲಹೆಯ ಮೇರೆಗೆ ಅವನ 'ಓದುವ ಕೋಣೆ'ಯ ವಾಸ್ತುವನ್ನು ಬದಲಿಸಿ ಸರಿ ಮಾಡಿದ್ದರೂ, ಆತ ಮತ್ತೆ ಫೇಲಾಗಿ ಉಂಟಾಗಿದ್ದ ಅಸಂಗತ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಸುಸ್ತಾಗಿ ಮನೆಗೆ ಬಂದೆ. ವಾರ್ತೆಗಳಿಗಾಗಿ ಟಿವಿ ಹಾಕಿದರೆ, 'ಕಸ್ತೂರಿ ವಾರ್ತೆ'ಯಲ್ಲಿ ಸೊಟ್ಟ ಮೂತಿಯ ಹೋರಾಶಾಸ್ತ್ರಿಯೊಬ್ಬ 'ಅಭಿನವ್ ಬಿಂದ್ರಾಗೆ ಒಲಪಿಂಕ್ಸ್‌ನಲ್ಲಿ ಚಿನ್ನದ ಪದಕ ಬಂದದ್ದೇ ಬರಲಿರುವ ಚಂದ್ರಗ್ರಹಣದ ಪ್ರಭಾವದಿಂದ ಎಂದರೆ ನೀವು ನಂಬುತ್ತೀರಾ?' ಎಂಬ ಅಪದ್ಧ ವಿಶ್ಲೇಷಣೆಯನ್ನು ಆಸ್ಫೋಟಕ ಶೈಲಿಯಲ್ಲಿ ಆರಂಭಿಸಿದ್ದ. ದೇವೇಗೌಡರ ಮನೆತನದ ಮೌಢ್ಯ ಅವರ ಒಡೆತನದ ವಾಹಿನಿಗೂ ಹರಡಿದೆ ಎನಿಸಿ ಬೇರೆ ವಾಹಿನಿ ಹಾಕಿದರೆ, ಅಲ್ಲಿಯೂ ಇನ್ನೊಬ್ಬ ಬುರುಡೆದಾಸ ಚಂದ್ರ ಗ್ರಹಣದ ಫಲಾಫಲಗಳನ್ನು ವಿವರಿಸುತ್ತಿದ್ದ! ಯಾವ ಯಾವ ರಾಶಿಯವರು ಯಾವ ಯಾವ ದೋಷಕ್ಕಾಗಿ ಯಾವ ಯಾವ ದೇವರ ಬಳಿ ಯಾವ ಯಾವ ಶಾಂತಿಗಳನ್ನು ಮಾಡಿಸಿಕೊಳ್ಳಬೇಕೆಂಬುದರ ವಿವರಗಳನ್ನು ದೊಡ್ಡ ಗಂಟಲಲ್ಲಿ ಬೊಗಳುತ್ತಿದ್ದ.

ನನ್ನ ಈ ಒರಟು ಭಾಷೆಗಾಗಿ ಕ್ಷಮಿಸಿ. ನನಗೆ ತಲೆ ಕೆಟ್ಟಂತಾಗಿತ್ತು. ನಿಧಾನವಾಗಿ ಯೋಚಿಸಿದಾಗ ತಲೆ ಕೆಟ್ಟಿರುವುದು ನನಗಲ್ಲ, ಈ ದೇಶಕ್ಕೆ ಅನಿಸಿತು. ಇನ್ನೂ ನಿಧಾನವಾಗಿ ಯೋಚಿಸಿದಾಗ ತಲೆ ಕೆಟ್ಟಿರುವುದು ದೇಶಕ್ಕಲ್ಲ, ಈ ದೇಶವನ್ನು ತಮ್ಮ ಕೈಗೆ ತೆಗೆದುಕೊಂಡಿರುವ ಕೆಲವು ವರ್ಗಗಳಿಗೆ ಎನಿಸಿತು: ಇತ್ತೀಚಿನ ಸೂರ್ಯಗ್ರಹಣದ ಸಂದರ್ಭದಲ್ಲಿ ಯಾವುದೋ ತುರ್ತು ಕೆಲಸದ ಮೇಲೆ ಹೊರ ಹೋಗಿದ್ದ ನನ್ನ ಹೆಂಡತಿ, ಇಡೀ ಊರು ಶೋಕಾಚರಣೆಯಲ್ಲಿ ತೊಡಗಿರುವಂತೆ, ಮನೆ-ಅಂಗಡಿಗಳೆಲ್ಲ ಮುಚ್ಚಿ; ಬೀದಿಗಳು ಬಿಕೋ ಎನ್ನುತ್ತಿದ್ದುದನ್ನು ಕಂಡು ಗಾಬರಿಯಾಗಿ, ತನ್ನ ಕೆಲಸ ಮುಗಿಸಲಾರದೆ ವಾಪಸ್ ಬಂದಿದ್ದಳು. ಅವಳು, 'ಇದೇ ಊರಿನಲ್ಲಿ ಹುಟ್ಟಿ ಬೆಳೆದ ನನಗೆ ಎಂದೂ ಗ್ರಹಣದ ದಿನ ಈ ತರಹ ಸೂತಕದ ವಾತಾವರಣ ಕಂಡಿರಲಿಲ್ಲ. ಈ ದೇಶಕ್ಕೆ ಯಾವುದೋ ಮಹಾ ಸೂತಕ ಕಾದಿದೆ!' ಎಂದು ತನ್ನ ಊರಿನ ಮೇಲಿನ ಸಿಟ್ಟನ್ನು ದೇಶದ ಮೇಲೆ ಹಾಕುತ್ತಾ, ನನ್ನ ಹೊಟ್ಟೆ ತಣಿವನ್ನು ಪೂರೈಸುವ ಸಲುವಾಗಿ ಸಂಜೆಯ ತಿಂಡಿ ಮಾಡಲು ಅಣಿಯಾದಳು. ಅವಳಿಗೆ ತನ್ನೂರು ಮಾತ್ರವಲ್ಲ, ಇಡೀ

ದೇಶವೇ ಸೂತಕದಲ್ಲಿದ್ದಂತಿತ್ತು ಎಂಬುದು ಗೊತ್ತಿರಲಿಲ್ಲವೆಂದಲ್ಲ. ತನ್ನೂರು ಶಿವಮೊಗ್ಗವೂ ಹೀಗಾಯಿತಲ್ಲ ಎಂಬ ವಿಷಾದವಷ್ಟೆ ಅವಳದು!

ನನ್ನ ಹೆಂಡತಿ ದೈವಭಕ್ತೆಯಲ್ಲದಿದ್ದರೂ, ವಿಚಾರವಾದಿಯಂತೂ ಅಲ್ಲ. ಇಡೀ ಜಗತ್ತು ಯಾವುದೋ ಒಂದು ದೊಡ್ಡ ಶಕ್ತಿಯಿಂದ ನಡೆಸಲ್ಪಡುತ್ತಿದೆ ಎಂದು ನಂಬಿದವಳು. ಕಂಡ ಕಂಡಲ್ಲೆಲ್ಲ ಅಲ್ಲದಿದ್ದರೂ, ಶ್ರದ್ಧೆ ಕಂಡೆಡೆ ಕೈಮುಗಿಯುವವಳು. ತನ್ನ ಕುಟುಂಬದ ಹಿನ್ನೆಲೆಯ ಆರ್ಯಸಮಾಜದ ತತ್ವಗಳ ನೆರಳಿನಲ್ಲಿ ಬೆಳೆದವಳು. ರಾಮಕೃಷ್ಣ ಪರಮಹಂಸ ಮತ್ತು ರಮಣ ಮಹರ್ಷಿಗಳಲ್ಲದೆ ದೊಡ್ಡೇರಿಯ ಸತ್‌ಉಪಾಸಿ ಮಲ್ಲಣ್ಣನವರ ಉಪದೇಶಗಳಲ್ಲಿಯೂ ತನ್ನ ಪಾಲಿನ ಸತ್ಯವನ್ನು ಕಂಡುಕೊಂಡವಳು. ಹಾಗಾಗಿ, ಈ ಗ್ರಹಣಗಳ ಆಚರಣೆಗಳ ಕುರಿತ ಅವಳ ಈ ಅತೀವ ಬೇಸರದ ಬಗ್ಗೆ ನಾನು ಮೌನವಾಗಿ ಆಲೋಚಿಸುತ್ತಾ, ಗ್ರಹಣದ ಸಮಯದಲ್ಲಿ ಅವಳು ಮಾಡಿಕೊಟ್ಟ ನನ್ನ ಪ್ರೀತಿಯ ಉಪ್ಪಿಟ್ಟನ್ನು ತಿಂದು ಮುಗಿಸುತ್ತಿದ್ದಂತೆ, ಪಕ್ಕದ ಗಣಪತಿ ದೇವಸ್ಥಾನದಲ್ಲಿ ಘಂಟೆ ಮೊಳಗಿತು. ಗ್ರಹಣ ಮುಗಿದಿತ್ತು. ಬೀದಿಯಲ್ಲಿ ಜನ ಕಾಣಿಸತೊಡಗಿದರು. ನಾನು ಮತ್ತು ನನ್ನ ಹೆಂಡತಿ ಅನ್ಯ ಮನಸ್ಕರಾಗಿ ಗಾಳಿ ಸೇವನೆಗೆ ಹೊರಟೆವು.

ಗಣಪತಿ ದೇವಸ್ಥಾನದ ಬಳಿ ಜನವೋ ಜನ. ಜನ ತಮ್ಮ ನಂಬಿಕೆಗಳಿಗನುಸಾರ ವಿಭೂತಿಯನ್ನೂ ಗಂಧವನ್ನೋ ಧರಿಸಿ, ಅಲ್ಲಿ ಮಂತ್ರಘೋಷಗಳ ಮೊಳಗಿನೊಂದಿಗೆ ಭರ್ಜರಿಯಾಗಿ ನಡೆದಿದ್ದ ಗ್ರಹಣ ದೋಷ ಪರಿಹಾರದ ಹೋಮ-ಹವನ-ಶಾಂತಿ ಪೂಜೆಗಳ ಫಲ ಸ್ವೀಕರಿಸಲು ಕಾತುರರಾಗಿ ನೆಲದ ಮೇಲೇ ನಿಸ್ಸಂಕೋಚವಾಗಿ ಆಸೀನರಾಗಿದ್ದರು. ಕುತೂಹಲದಿಂದ ಆ ಜನಸ್ತೋಮವನ್ನು ಗಮನಿಸಿದಾಗ, ಅಲ್ಲಿನ ಅರ್ಧ ಭಾಗ ತರುಣ ತರುಣಿಯರಿಂದಲೇ ತುಂಬಿಹೋಗಿದ್ದುದನ್ನು ಕಂಡು ಕೊಂಚ ಗಾಬರಿಯೇ ಆಯಿತು. ಅದನ್ನು ನನ್ನ ಹೆಂಡತಿಯ ಗಮನಕ್ಕೆ ತಂದಾಗ ಅವಳು ನನ್ನ ಆಶ್ಚರ್ಯಕ್ಕೆ ಉತ್ತರಕೊಡುವಂತೆ, 'ಅದಿರಲಿ, ಅಲ್ಲಿರುವವರು ಯಾವ ತರಹದ ಜನ ಗಮನಿಸಿ' ಎಂದಳು. ನಾನು ಸುಮ್ಮನೆ ನೋಡಿದೆ. ಹೆಚ್ಚೂ ಕಡಿಮೆ ಅಲ್ಲಿದ್ದವರೆಲ್ಲರೂ ನಮ್ಮ ಕಾಲೋನಿಯ ಅನುಕೂಲಸ್ಥರ ಮನೆಗಳವರೇ! ಬಡವರಂತೆ ಕಂಡವರು ಬಾಲ್ಯದಲ್ಲಿನ ನಮ್ಮಂತಯೇ, ಪ್ರಸಾದವೇನಾದರೂ ವಿನಿಯೋಗವಾಗುತ್ತದೇನೋ ಎಂದು ಗುಡಿಯ ಸುತ್ತ ಸಂಕೋಚದಿಂದ ಸುಳಿದಾಡುತ್ತಿದ್ದರಷ್ಟೆ... ಮನಸ್ಸು ಖಿನ್ನವಾಯಿತು. ಗಾಳಿ ಇದ್ದಕ್ಕಿದ್ದಂತೆ ತನ್ನ ಚಲನೆ ಕಳೆದುಕೊಂಡಂತಾಗಿ, ನಿಧಾನವಾಗಿ ಉಸಿರುಗಟ್ಟಿದ ಅನುಭವವಾಗಿ; ಅರ್ಧ ಬೇಸರ-ಅರ್ಧ ವಿಷಾದದಿಂದ ನಾವು ಗಾಳಿ ಸೇವನೆಗೆ ಮುಂದುವರಿಯದೆ, ಮನೆಗೆ ವಾಪಸ್ಸು ಬಂದೆವು. ಟಿವಿಯಲ್ಲಿ ಬೆಂಗಳೂರಿನಲ್ಲಿ ನ್ಯಾಷನಲ್ ಕಾಲೇಜಿನ ಮುಂದೆ ಎಚ್ಚೆನ್ ಶಿಷ್ಯರು ಈ ಮಡ್ಡರನ್ನು ಗೇಲಿಮಾಡಲೆಂಬಂತೆ ಗ್ರಹಣದ ಸಮಯದಲ್ಲೇ ತಿನ್ನಲು ಕಡಲೆ ಪುರಿ ಹಂಚುತ್ತಿದ್ದುದರ ಸುದ್ದಿ ಪ್ರಸಾರವಾಗುತ್ತಿತ್ತು. ಇಲ್ಲ, ಈ ಸಮಾಜದಲ್ಲಿ ಇನ್ನೂ 'ಜೀವ'ವಿದೆ ಎನ್ನಿಸಿ, ಮನಸ್ಸು ಸ್ವಲ್ಪ ನಿಸೂರಾಯಿತು.

ನಾನು ಹಳ್ಳಿಯಲ್ಲಿ ಗುಡಿ-ಗುಂಡಾರಗಳು, ಊರ ಪರವು, ತೇರು, ಹಬ್ಬ-ಹರಿದಿನಗಳ

ಮಧ್ಯೆಯೇ; ಬ್ರಾಹ್ಮಣ ಮತ್ತು ವೈಶ್ಯರ ಸನಿಹದಲ್ಲೇ ಬೆಳೆದು ಬಂದವನಾದರೂ, ಈಗ–ಕಳೆದ ಐದು ಹತ್ತು ವರ್ಷಗಳಲ್ಲಿ–ನೋಡುತ್ತಿರುವಂತಹ ಮೌಢ್ಯಾಚರಣೆಗಳನ್ನು–ಅದೂ ಈ ವೈದಿಕ ವೈಭವಗಳೊಂದಿಗೆ–ನಾನೆಂದೂ ನೋಡಿಲ್ಲ. ಬಾಲ್ಯದಲ್ಲಿ ನೋಡುತ್ತಿದ್ದ ಆಚರಣೆಗಳಲ್ಲಿ ಹೆಚ್ಚಿನವು ಸಾಮೂಹಿಕವಾಗಿರುತ್ತಿದ್ದವು ಮತ್ತು ಆ ಕಾರಣದಿಂದಾಗಿಯೋ ಏನೋ, ಧಾರ್ಮಿಕಕ್ಕಿಂತ ಹೆಚ್ಚಾಗಿ ಸಾಂಸ್ಕೃತಿಕ ಹುರುಪು ಹುಟ್ಟಿಸುವಂತಿದ್ದವು. ಇನ್ನು ನಾನು ಬೆಳೆದ ಕಾಲ, ವೈಚಾರಿಕತೆಯ ಕಾಲ. ಕಾಲೇಜು ದಿನಗಳಲ್ಲಂತೂ, ಪೆರಿಯಾರ್, ಕೋವೂರ್, ಧರ್ಮಲಿಂಗಂ, ಎಂಡಿಎನ್‌ರಲ್ಲದೆ ನಮ್ಮ ಅಧ್ಯಾಪಕರುಗಳೇ ಆದ ಎಚ್ಚೆನ್, ಜಿಟಿಎನ್ ಮತ್ತು ಜೆ.ಆರ್ ಲಕ್ಷ್ಮಣರಾವ್ ಅಂತಹವರು ವಿವಿಧ ಸ್ತರಗಳ ವಿಚಾರವಾದಿ ಚರ್ಚೆಗಳನ್ನು ಹುಟ್ಟು ಹಾಕಿದ್ದ ಕಾಲ. ಇವುಗಳ ಮಧ್ಯೆ ನನ್ನಂತಹವರು ದೇವರು ಧರ್ಮಗಳ ಬಗ್ಗೆ ಅನುಮಾನಗಳನ್ನು ಬೆಳೆಸಿಕೊಂಡರೂ; ಮನುಷ್ಯ ಬರೀ ಭೌತಿಕ ಜೀವಿಯಾಗಿ ಬದುಕಲಾರನೇನೋ ಎಂಬ ಅನುಮಾನದಲ್ಲಿದ್ದಾಗ, ಕುವೆಂಪು, ಕಾರಂತ, ತೇಜಸ್ವಿ, ಅನಂತಮೂರ್ತಿ, ಲಂಕೇಶ್ ಮುಂತಾದವರು ಬೇರೆ ಬೇರೆ ತರಂಗಾಂತರಗಳಲ್ಲಾದರೂ, ಒಟ್ಟು ಪರಿಣಾಮದಲ್ಲಿ ಈ ಒಣ ಭೌತಿಕ ತಾರ್ಕಿಕತೆಗೆ ಒಂದು ಸೃಜನಶೀಲ ಸ್ಪಂದನವನ್ನು ನೀಡಿ ನಮ್ಮನ್ನು ಆಕರ್ಷಿಸಿದ್ದರು.

ಹಾಗಾಗಿಯೇ ನನ್ನಂತಹವರು, ತಮ್ಮನ್ನು ವೈಯುಕ್ತಿಕವಾಗಿ ನಾಸ್ತಿಕನೆಂದು ಕರೆದುಕೊಂಡರೂ, ಸಾರ್ವಜನಿಕ ಜೀವನದಲ್ಲಿ ಆಜ್ಞೇಯತಾವಾದಿಯಾಗಿ ನಮ್ಮ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಅಪಾರ ಜ್ಞಾನವನ್ನೂ, ಹೆಮ್ಮೆಯನ್ನೂ, ಕಾಳಜಿಯನ್ನೂ ಹೊಂದಿದ್ದ ಡಾ॥ ರಾಮಮನೋಹರ ಲೋಹಿಯಾರ ಸಮಾಜವಾದಿ ಚಿಂತನೆ ಕಡೆ ಸೆಳೆಯಲ್ಪಟ್ಟಿದ್ದು. ಅವರು ನಮ್ಮ ಧರ್ಮ-ಸಂಸ್ಕೃತಿ-ಪರಂಪರೆಗಳ ಬಗ್ಗೆ ಕಟು ವಿಮರ್ಶೆ ಮಾಡುತ್ತಿದ್ದರಾದರೂ (ಉದಾ: 'ಭಾರತವೆಂಬುದು ಅಲ್ಲಲ್ಲಿ ಸುಂದರವಾಗಿ ಅರಳಿದ ತಾವರೆಗಳಿರುವ ದೊಡ್ಡ ಕೊಚ್ಚೆ ಕೊಳ'), ರಾಮಾಯಣ ಕಥೆಯ ಸ್ಥಿತ್ಯಂತರ ಬಿಂದುವಿನಂತಿರುವ 'ಚಿತ್ರಕೂಟ'ವನ್ನು ಗುರುತಿಸಿ; ಅಲ್ಲಿ ತಮ್ಮ ಪಕ್ಷದ ವತಿಯಿಂದ 'ರಾಮಾಯಣ ಮೇಳ'ವನ್ನೂ ಆಯೋಜಿಸುತ್ತಿದ್ದರು. ಎಡಪಂಥೀಯರೆನಿಸಿಕೊಂಡವರು ಧಾರ್ಮಿಕ ಕ್ಷೇತ್ರಗಳ ಬಗ್ಗೆ ಮಾತಾಡುವುದೇ ಪಂಥ ವಿರೋಧಿ ಎಂದು ಭಾವಿಸಿದ್ದಾಗ, ಅವರು ಜನತೆಯ ಆರೋಗ್ಯದ ದೃಷ್ಟಿಯಿಂದ ಅಜ್ಮೇರ್ ಸೇರಿದಂತೆ ದೇಶದ ಎಲ್ಲ ಯಾತ್ರಾ ಸ್ಥಳಗಳನ್ನೂ ನಾಗರಿಕ ಸೌಲಭ್ಯಗಳನ್ನೊದಗಿಸಿ ಅಭಿವೃದ್ಧಿಪಡಿಸಬೇಕೆಂದೂ, ಅಲ್ಲಿನ ನದಿಗಳನ್ನು ಸ್ವಚ್ಛಗೊಳಿಸಬೇಕೆಂದೂ ಆಗ್ರಹಿಸಿದ್ದರು. ಆದರೆ ವಾರಾಣಸಿಯಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು 'ಪರಂಪರೆ'ಯ ಹೆಸರಿನಲ್ಲಿ ಸಾರ್ವಜನಿಕವಾಗಿ ೧೦೧ ಜನ ಬ್ರಾಹ್ಮಣರ ಪಾದ ಪೂಜೆಯಲ್ಲಿ ತೊಡಗಿದಾಗ, ಅದೊಂದು ಹೀನ ಅಭಿರುಚಿಯ, ರಾಷ್ಟ್ರೀಯ ನಾಚಿಕೆಗೇಡಿನ ಅನಾಚಾರ ಎಂದು ಕಿಡಿಕಿಡಿಯಾದರು. ಹಾಗೆ ಪಾದಪೂಜೆಗೆಂದು ಆಯ್ಕೆಯಾಗಿ ಅಲ್ಲಿಗೆ ಹೋಗಿ, ಆದರೆ ಅಲ್ಲಿನ ದೃಶ್ಯ ಭೀಭತ್ಸವೆನಿಸಿ ವಾಪಸು ಬಂದು ವಿಷಯ ತಿಳಿಸಿದ ಓರ್ವ ಬ್ರಾಹ್ಮಣನನ್ನು ರಾಷ್ಟ್ರದ ಶ್ರೇಷ್ಠ ಪ್ರಜೆಯೆಂದು

ಬಣ್ಣಿಸಿದ ಲೋಹಿಯಾ, ಇಂತಹವರಿಂದಲೇ ರಾಷ್ಟ್ರದ ಪರಂಪರೆ ಸ್ವಚ್ಛವಾದೀತೆಂದು ಆಶಿಸಿದರು.

ಆದರೆ ಇಂತಹ ಭೀಭತ್ಸ ಧರ್ಮಾಚರಣೆಯಲ್ಲಿ ಪಾದಪೂಜೆ ಮಾಡಿಸಿಕೊಂಡು ಬಂದವರಲ್ಲೊಬ್ಬರಾದ ನಮ್ಮ ದೇವುಡು ನರಸಿಂಹಶಾಸ್ತ್ರಿ ನಮ್ಮ ಕೆಲವು ಸಾಂಸ್ಕೃತಿಕ ವಕ್ತಾರರ ಪ್ರಕಾರ ನಮ್ಮ ಶ್ರೇಷ್ಠ ಧಾರ್ಮಿಕ ಪಂಡಿತ ಮತ್ತು ಲೇಖಕ! ಈ ಶ್ರೇಷ್ಠ ವಿಪ್ರೋತ್ತಮರೇ ಕುವೆಂಪು ಅವರ 'ನಿರಂಕುಶಮತಿಗಳಾಗಿ' ಎಂಬ–ಆಧುನಿಕ ಕನ್ನಡ ಪ್ರಜ್ಞೆ ಎಂಬುದೇನಾದರೂ ಇದ್ದರೆ, ಅದರ ಬಾಗಿಲು ತೆಗೆದ–ಭಾಷಣದ ವಿರುದ್ಧ ಸರ್ಕಾರಕ್ಕೆ ದೂರು ಸಲ್ಲಿಸಿ, ಅವರನ್ನು ಸೇವೆಯಿಂದ ಅಮಾನತುಗೊಳಿಸುವಂತೆ ಕೋರಿದ್ದುದು! ಇಂತಹ ಮೂಢ ಪುರೋಹಿತರನ್ನು ನಮ್ಮ ಸಾಂಸ್ಕೃತಿಕ ಸಂಪತ್ತೆಂದು ಕೊಂಡಾಡುವ ಸಂತತಿಗೆ ಮತ್ತೆ ಬಲ ಬಂದಿರುವುದರಿಂದಲೇ ಮತ್ತೆ ಇಂದು ಈ ಮತಿಹೀನ ಮತಾಚರಣೆಗಳ ಆರ್ಭಟ ಜೋರಾಗಿರುವುದು. ಹಾಗೆ ನೋಡಿದರೆ, ಈ ಸಂತತಿಯನ್ನು ಈಗ ಸಾಕುತ್ತಿರುವವರಾದರೂ ಯಾರು? ದೇವಸ್ಥಾನಗಳಿಗೆ, ಮಠಗಳಿಗೆ, ಸಾಹಿತ್ಯ ಪ್ರತಿಷ್ಠಾನಗಳ ಹೆಸರಲ್ಲಿನ ಜಾತಿ ಗೂಡುಗಳಿಗೆ ಸರ್ಕಾರದ ಖಜಾನೆಯಿಂದ ಕೋಟಿಗಟ್ಟಲೆ ಹಣ ಹಂಚುತ್ತಿರುವ ಶೂದ್ರ ಗುಗ್ಗುಗಳೇ. ತಮ್ಮ ಕಂಠಪಾಠ ಪಾಂಡಿತ್ಯವನ್ನು ಮೆರೆಯುತ್ತಾ ಯಾರಿಗೂ ಅರ್ಥವಾಗದ ಮಂತ್ರಗಳನ್ನು ಅರಚುವ ಕಳ್ಳ ಪೂಜಾರಿಗಳ ಮತ್ತು ಅವರು ಸಾಕಿಕೊಂಡಿರುವ ಸುಳ್ಳು ದೇವರುಗಳ ಮುಂದೆ; ರೇಷ್ಮೆ ಶಾಲು-ಪಂಚೆಗಳ ಹುಸಿ ಮಡಿ ಮತ್ತು ಹಸಿ ರೋಮಾಂಚನದಲ್ಲಿ, ರಾಜ್ಯಕ್ಕೆ ಬಡಿದಿರುವ ದೋಷ ಪರಿಹಾರಕ್ಕಾಗಿಯೋ ಅಥವಾ ತಮ್ಮ ಹಳೆಯ ಪಾಪ ಪರಿಹಾರಕ್ಕಾಗಿಯೋ; ಹರಕೆಯ ಕುರಿಗಳಂತೆ ತಲೆಬಾಗಿ ನಿಲ್ಲುತ್ತಿರುವ ಭ್ರಷ್ಟ ಶೂದ್ರ ನಾಯಕರೇ. ಹಳೆಯ ಎಂಜಿನಿಯರುಗಳು ಗಾಳಿ ಬೆಳಕುಗಳ ಅಗತ್ಯ ನೋಡಿ ಕಟ್ಟಿರುವ ಅಧಿಕೃತ ಮನೆಗಳನ್ನು, ತಮ್ಮ ಅಧಿಕಾರ ಸಂಪತ್ತುಗಳ ಅಭದ್ರತೆಯ ಭಯದಿಂದ ವಾಸ್ತು ತಜ್ಞರೆಂಬ ಆಧುನಿಕ ಪುರೋಹಿತಶಾಹಿಯ ಉಪದೇಶಗಳ ಮೇರೆಗೆ ಪದೇ ಪದೇ ಒಡೆಸಿ, ಸಾರ್ವಜನಿಕ ಹಣದಲ್ಲಿ ಅವನ್ನು ಬದಲಾಯಿಸಿಕೊಂಡು ಹುಸಿ ರಕ್ಷಣೆಯ ಭಾವನೆಯಲ್ಲಿ ಮುಳುಗಿರುವ ಶೂದ್ರಶ್ರೀಗಳೇ!

ಲೌಕಿಕ ನೈತಿಕತೆಯೇ ದೇವರು ಧರ್ಮಗಳೆಂಬ ಪಾರಮಾರ್ಥಿಕ ಪರಿಕಲ್ಪನೆಯ ಮೂಲ ತಳಹದಿ ಎಂಬುದನ್ನೇ ಅರಿಯದ ಈ 'ದೇಶಪ್ರೇಮಿ' ಮತ್ತು 'ಧರ್ಮಪ್ರೇಮಿ'ಗಳ ಮೌಢ್ಯ, ದೇಶಘಾತುಕವೂ ಧರ್ಮಘಾತುಕವೂ ಆಗಿದೆ. ಕುವೆಂಪು ಎಪ್ಪತ್ತರ ದಶಕದಲ್ಲಿ ಎಲ್ಲ ತರಹದ ಪುರೋಹಿತಶಾಹಿಯ ವಿರುದ್ಧ ಸಮರ ಸಾರಿದ್ದ 'ಒಕ್ಕೂಟ'ದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ, 'ಮೊದಲು ಕ್ಲೀನ್ ಆಗಬೇಕಾದದ್ದು ನಿಮ್ಮ... ನಿಮ್ಮ... ತಲೆಗಳೇ' ಎಂದಿದ್ದುದು ಬಹುಶಃ ಇಂತಹವರನ್ನು ಗಮನದಲ್ಲಿಟ್ಟುಕೊಂಡೇ. ಆದರೆ ಇಂದು ಘಾತುಕ ವೈದಿಕರೂ, ಖೂಳ ಶೂದ್ರರೂ ಸೇರಿ ಇಂದು ದೇಶವನ್ನು ಮೌಢ್ಯಾಚಾರಗಳ

ನರಕವನ್ನಾಗಿಸುತ್ತದ್ದಾರೆ. ಇವರು ತಮ್ಮ ರಾಜಕೀಯ ಅಧಿಕಾರ ಮತ್ತು ಸಂಪತ್ತುಗಳನ್ನು ರಕ್ಷಿಸಿಕೊಳ್ಳಲು, ನಮ್ಮ ನವೋದಯದ ಭಾಗವಾಗಿ ಮೂಡಿದ ವೈಚಾರಿಕ ಆಂದೋಲನದ ಫಲಗಳನ್ನು ನಾಶಗೊಳಿಸುತ್ತಿದ್ದಾರೆ.

ನಮ್ಮ ಮನೆಗಳು, ಊರು, ರಾಜ್ಯ ಮತ್ತು ದೇಶದ ಇತ್ತೀಚಿನ ಬೆಳವಣಿಗೆಗಳನ್ನು ನೋಡಿದರೆ, ಶಾಂತಿ ನೆಮ್ಮದಿಗಳ ಮೂಲವಾಗಿದ್ದ ಧರ್ಮಾಚರಣೆಗಳು ಸಂಪತ್ತು ಮತ್ತು ಅಧಿಕಾರದ ಸಂಪರ್ಕ ದೊರೆತೊಡನೆ, ಮತಿಹೀನ ಮತಾಚರಣೆಗಳಾಗಿ ಮಾರ್ಪಾಡಾಗಿ, ಸಾರ್ವಜನಿಕ ಅಶಾಂತಿಗೆ ಕಾರಣವಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಮಾರುಕಟ್ಟೆ ಮತ್ತು ಮತಿಹೀನತೆ ಒಟ್ಟೊಟ್ಟಿಗೆ ಬೆಳೆಯುತ್ತಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಹೆಚ್ಚೂ ಕಡಿಮೆ ನಿಂತೇ ಹೋಗಿದ್ದ ಬಲಿ ಆಚರಣೆಗಳು ಇಂದು ಊರ ದೇವತೆ ಹಬ್ಬದ ಹೆಸರಿನಲ್ಲಿ ಸಾಮೂಹಿಕ ಪ್ರಾಣಿ ಬಲಿಯ ಮೂಲಕ ಇಡೀ ಊರ ರಸ್ತೆಗಳನ್ನು ರಕ್ತದಿಂದ ತೊಯ್ಸಿ ಭಯಾನಕ ದೃಶ್ಯ ನಿರ್ಮಿಸುತ್ತಿವೆ. ಇದಕ್ಕೆ ತಕ್ಕಂತೆ, ಇದು ಶೂದ್ರ ಜಾತಿಗಳ ಸಾಂಸ್ಕೃತಿಕ ಮರುಸ್ಥಾಪನೆಯ ಪ್ರತೀಕ ಎಂದು ವಿಶ್ಲೇಷಿಸುವ ಶೂದ್ರ ಸಂಸ್ಕೃತಿ ಚಿಂತಕರೂ ನಮ್ಮಲ್ಲಿ ತಯಾರಾಗಿದ್ದಾರೆ. ಹಾಗೇ ವೈದಿಕ ಪುರೋಹಿತಶಾಹಿಯಿಂದ ಹೊಸ ಹೊಸ ಹಬ್ಬ ಹರಿದಿನಗಳು ಆವಿಷ್ಕಾರಗೊಳ್ಳುತ್ತಾ, ಹೊಸ ಹೊಸ ಸಿದ್ಧಿಗಳು ಪ್ರಚುರಗೊಂಡು, ಹೊಸ ಹೊಸ ವಿಶೇಷ ಪೂಜೆಗಳು ವಿನ್ಯಾಸಗೊಳ್ಳುತ್ತಿವೆ. ಇದಕ್ಕೆ ತಕ್ಕಂತೆ ಮಾರುಕಟ್ಟೆಗಳು ಸದಾ ಗಿಜುಗುಡುತ್ತಾ, ದೇವಸ್ಥಾನಗಳ ಮತ್ತು ತೀರ್ಥಕ್ಷೇತ್ರಗಳ ಬಳಿ ಜನರ ನೂಕು ನುಗ್ಗಲು ಹೆಚ್ಚಿ; ಜನರ ಪುಣ್ಯಾರ್ಜನೆಯ ಕೆಲಸ, ಸರ್ಕಾರದ ಪಾಲಿಗೆ ಶಾಂತಿ ಮತ್ತು ಸುವ್ಯವಸ್ಥೆಯ ಗಂಭೀರ ಸಮಸ್ಯೆಯಾಗಿ ಮಾರ್ಪಾಡಾಗಿದೆ. ಇನ್ನು ನಮ್ಮ ಮದುವೆ-ಮುಂಜಿ-ನಾಮಕರಣ-ತಿಥಿ ಇತ್ಯಾದಿಗಳೆಲ್ಲ ಕೌಟುಂಬಿಕತೆಯ ಆತ್ಮೀಯ ಸ್ಪರ್ಶವನ್ನೇ ಕಳೆದುಕೊಂಡು, ಅಸಭ್ಯ ಸಂಪತ್ತಿನ ಅಶ್ಲೀಲ ಪ್ರದರ್ಶನಗಳಿಗೆ ವೇದಿಕೆಗಳಾಗಿವೆ. ಆದರೆ ಇದನ್ನು ನಮ್ಮ ಶತಾವಧಾನಿಗಳು, ಅಷ್ಟಾವಧಾನಿಗಳು ನಮ್ಮ ಸಾಂಸ್ಕೃತಿಕ ಶ್ರೀಮಂತಿಕೆಯ ಪುನರುತ್ಥಾನವೆಂದು ವರ್ಣಿಸುತ್ತಾ, ನಮ್ಮ ಭ್ರಷ್ಟ ಆಡಳಿತಗಾರರನ್ನೂ, ಅವರ ಚೇಲಾಗಳನ್ನೂ ಇನ್ನಷ್ಟು ಭ್ರಷ್ಟಗೊಳಿಸುವ ಕೆಲಸ ಮಾಡುತ್ತಿದ್ದಾರೆ.

ಇದಕ್ಕೆಲ್ಲ ಮೂಲ ಕಾರಣ, ಮಾರುಕಟ್ಟೆಯ ಅಸಹಜ ವಿಸ್ತರಣೆ ಮನುಷ್ಯನ ಆಸೆ-ಆಕಾಂಕ್ಷೆಗಳ ಮಟ್ಟವನ್ನು ಅಸಹಜವಾಗಿ ಏರಿಸುತ್ತಾ, ಇದರ ಪರಿಣಾಮವಾಗಿ ಅವನ ವಿವೇಕದ ಮಟ್ಟವನ್ನು ಕಡಿಮೆ ಮಾಡುತ್ತಾ; ಅವನನ್ನು ಹೆಚ್ಚೆಚ್ಚು ಅಭದ್ರ, ಅಸ್ಥಿರ ಮತ್ತು ಅಶಾಂತನನ್ನಾಗಿ ಮಾಡುತ್ತಿರುವುದೇ ಆಗಿದೆ. ಇದರ ಪ್ರತಿಬಿಂಬವೇ ಈ ಬಲಿ, ಹವನ, ಹೋಮ ಶಾಂತಿ, ವಾಸ್ತು ಇತ್ಯಾದಿ ಅನುಮಾನಾಸ್ಪದ ಆಚರಣೆಗಳ ಹೆಚ್ಚಳ. ಇದು ನಮ್ಮ ಹಳೆಯ ಊಳಿಗಮಾನ್ಯಶಾಹಿ ವ್ಯವಸ್ಥೆಯ 'ಆಧುನಿಕ' ರೂಪವಷ್ಟೆ. ನಾವು ಹೊರ ರೂಪದಲ್ಲಿ ಆಧುನಿಕರಾಗಿದ್ದೇವೆಯೇ ಹೊರತು, ಒಳ ರೂಪದಲ್ಲಿ ಹಾಗೇ ಇದ್ದೇವೆ: ಅದೇ ಮತಿಗೆಟ್ಟ ಶೂದ್ರ 'ರಾಜ'ರು ಮತ್ತು ಅವರಿಗೆ ಕುಂಕುಮ ಹಚ್ಚಿ ಕುಣಿಸುವ ಪ್ರಳಯಾಂತಕ ಬುದ್ಧಿಯ

ಪುರೋಹಿತರು! ಹಾಗಾಗಿ, ಇಂದಿನ ಈ ಮತಿಹೀನ, ಆತಂಕಕಾರಿ, ಅವೈಚಾರಿಕ ಆಚರಣೆಗಳನ್ನು ನಮ್ಮ ಟೊಳ್ಳು ಆಧುನಿಕತೆಯ ಪೊಳ್ಳು ಫಲಗಳೆಂದೇ ನಾನು ಕರೆಯಬಯಸುತ್ತೇನೆ. ಮನುಷ್ಯನ ಹೊರ ಅಗತ್ಯಗಳ ಕಡೆ ಕೊಟ್ಟಷ್ಟು ಗಮನವನ್ನು ಒಳ ಅಗತ್ಯಗಳ ಕಡೆ ಕೊಡಲಾಗದ ಈ ಆಧುನಿಕತೆ, ಸಹಜವಾಗಿಯೇ ಇವೆರಡರ ಮಧ್ಯೆ ಸಮತೋಲನ ಸಾಧಿಸುವಲ್ಲಿ ಸೋತಿದೆ. ಇದಕ್ಕೆ ಮುಖ್ಯ ಕಾರಣ, ಈ ಆಧುನಿಕತೆ ತನ್ನ ಹಿಂದಿನ ಪರಂಪರೆಯ ಶೀಲವನ್ನು ಅಸಿಂಧುಗೊಳಿಸುತ್ತಾ ಹೋದಂತೆ, ತನ್ನದೇ ಶೀಲವೊಂದನ್ನು ಕಟ್ಟಿಕೊಳ್ಳುವ ಕಡೆ ಗಮನ ಹರಿಸದೇ ಹೋದದ್ದು; ಸಂಸ್ಕೃತಿಯ ಕಡೆ ಅದರ ಗಮನ ಅಷ್ಟಾಗಿ ಹೋಗದೇ ಹೋದದ್ದು. ಹಾಗಾಗಿ ಅದನ್ನು ಈಗ ಹಳೆಯ ಪರಂಪರೆಯಿಂದಲೇ recycle ಮಾಡಿ ತುಂಬಿಕೊಳ್ಳುವ ಅಸಂಗತ ಮತ್ತು ಅಪದ್ಧ ಪ್ರಯತ್ನಗಳು ನಡೆದಿವೆ.

ಆಧುನಿಕತೆಯ ಮುಖಾಮುಖಿಯಲ್ಲಿ ಹುಟ್ಟಿದ ವರ್ಡ್ಸ್‌ವರ್ತ್ ಅಥವಾ ಬ್ಲೇಕ್‌ರ ವಿಷಣ್ಣ ಉದ್ಗಾರಗಳ ಹಿಂದಿನ ಒಳನೋಟಗಳಿಂದಾಗಲಿ; ನಮ್ಮವರೇ ಆದ ಡಿವಿಜಿಯವರ 'ಹೊಸ ಚಿಗುರು ಹಳೆ ಬೇರು' ಅಥವಾ ಕುವೆಂಪು ಅವರ 'ಹಳೆಯ ಆಭರಣಗಳ ಹೊಸ ವಿನ್ಯಾಸ'ದ ತತ್ವಗಳಿಂದಾಗಲೀ, ಆಧುನಿಕತೆಯ shockಗಳನ್ನು ಹೀರಿಕೊಳ್ಳಬಲ್ಲ ಸಾಂಸ್ಕೃತಿಕ ಆಕೃತಿಗಳನ್ನು ರೂಪಿಸಿಕೊಳ್ಳಲಾಗದಷ್ಟು ನಾವು ಮೈಮರೆತು ಬಾಳಿದ್ದೇವೆ. ಹಾಗಾಗಿ ಈಗ, ಮೌಢ್ಯ ಸಾಮ್ರಾಜ್ಯದ ಪ್ರಜೆಗಳಾಗುವ ಖಂಡನೆಯನ್ನು ಎದುರಿಸಲು ಅರ್ಹರೇ ಆಗಿದ್ದೇವೆ.

(೨೯ ಆಗಸ್ಟ್, ೨೦೦೮)

■

೧೭. ಮಾನವತೆಯ ಬೆಳೆಗಾರ ಫುಕುವೋಕಾ

ನಮ್ಮ ಬಹು ಪ್ರಾಚೀನ 'ಪ್ರಗತಿಪರ' ರೈತರಾದ ಶಿವಮೊಗ್ಗದ ಪ್ರಫುಲ್ಲಚಂದ್ರ ಕೊನೆಗೂ ತಮ್ಮ ಗದ್ದೆಯ ಕೂಳೆಯನ್ನು ಕಡಿದು ಹಾಕಿದ ದಿನವೇ, ಕೃಷಿ ಋಷಿ ಮಸನೊಬು ಫುಕುವೊಕಾ ನಿಧರಾದ ಸುದ್ದಿ ಬಂದಿದೆ! ಪ್ರಫುಲ್ಲಚಂದ್ರ ೨೮ ವರ್ಷಗಳ ಕಾಲ ಕಬ್ಬಿನ ಕೂಳೆ ಕಡಿಯದೆ, ಅದರ ಮೇಲೇ ಕಬ್ಬು ಬೆಳೆಯುತ್ತಾ, ಹೆಚ್ಚಿನ ಇಳುವರಿಯ ಸಾಧನೆಯನ್ನೂ ಮಾಡಿ ನಮ್ಮೆಲ್ಲರ ಗಮನ ಸೆಳೆದಿದ್ದವರು. ನಮಗೆ ಅವರೇ ೬೦ರ ದಶಕದಲ್ಲಿ ಫುಕುವೊಕಾರ ಕೃಷಿ 'ದರ್ಶನ'ವಾಗುವ ಮುನ್ನ ಪ್ರಾಕೃತಿಕ ಬೇಸಾಯದ ಮರ್ಮವನ್ನು ತಮ್ಮ 'ಪ್ರಯೋಗಶೀಲತೆ'ಯ ಮೂಲಕ ಪರಿಚಯ ಮಾಡಿಕೊಟ್ಟಿದ್ದವರು.

ಆದರೆ ಫುಕೊವೊಕಾ ತಮ್ಮ 'ಒಂದು ಹುಲ್ಲಿನ ಕ್ರಾಂತಿ'ಯ ಮೂಲಕ (ಕನ್ನಡ ಅನುವಾದ: ಸಂತೋಷ ಕೌಲಗಿ ಪ್ರ: ಜನಪದ ಸೇವಾಟ್ರಸ್ಟ್, ಮೇಲುಕೋಟೆ) ನಮಗೆ ಪರಿಚಯವಾದ ಮೇಲೆ, 'ಪ್ರಗತಿಪರತೆ' ಮತ್ತು 'ಪ್ರಯೋಗಶೀಲತೆ' ಎಂಬ ಶಬ್ದಗಳ ಅರ್ಥಗಳೇ ಸಂಪೂರ್ಣ ಪಲ್ಲಟಗೊಂಡಿವೆ. ಹಾಗೆ ನೋಡಿದರೆ, ಫುಕೊವುಕಾರನ್ನು ಕೃಷಿ ಋಷಿ ಅಥವಾ ಅವರ ವಿಚಾರಗಳನ್ನು ಕೃಷಿ ದರ್ಶನ ಎಂದು ಕರೆಯುವುದು ಫುಕುವೊಕಾರಿಗೆ ಅನ್ಯಾಯ ಮಾಡಿದಂತೆ. ಏಕೆಂದರೆ, ನಾನೇನೂ ರೈತನಲ್ಲ. ಆದರೆ ಅವರ 'ಒಂದು ಹುಲ್ಲಿನ ಕ್ರಾಂತಿ' ಓದಿದ ನಂತರ ಬದುಕನ್ನು ಕುರಿತ ನನ್ನ ನೋಟವೇ ನಿರ್ಣಾಯಕ ರೀತಿಯಲ್ಲಿ ಬದಲಾಯಿತು. ನನ್ನ ಗ್ರಂಥ ಭಂಡಾರದಲ್ಲಿ ನೂರಾರು ಪುಸ್ತಕಗಳಿವೆ. ಅದರಲ್ಲಿನ ಅತಿ ಶ್ರೇಷ್ಠ ಪುಸ್ತಕ ಯಾವುದು ಎಂದು ಯಾರಾದರೂ ಕೇಳಿದರೆ, ನನ್ನ ಸರಳ ಉತ್ತರ: 'ಒಂದು ಹುಲ್ಲಿನ ಕ್ರಾಂತಿ'. ಭತ್ತದ ಬೆಳೆಯ ಪ್ರಾಕೃತಿಕ ಕೃಷಿಯ ತತ್ವಗಳನ್ನು ಪರಿಚಯಿಸುತ್ತಾ ಹೊರಡುವ ಈ ಪುಟ್ಟ ಪುಸ್ತಕ ಸಹಜ ಕಾವ್ಯದಂತೆ ನಮ್ಮನ್ನು ಸೆಳೆಯುತ್ತಾ, ಬುದ್ಧ ದರ್ಶನದೊಂದಿಗೆ ಕೊನೆಗೊಳ್ಳುತ್ತದೆ. ಇದನ್ನು ನಾನು ಒಂದಲ್ಲ ಒಂದು ನೆಪದಲ್ಲಿ ವರ್ಷಕ್ಕೆರಡು ಬಾರಿ ಕಡ್ಡಾಯವಾಗಿ ಓದುತ್ತೇನೆ. ದಿನನಿತ್ಯದ ವ್ಯವಹಾರಗಳಲ್ಲಿ ಮನಸ್ಸಿನ ಮೇಲೆ ಬೀಳುವ ಧೂಳು ಮತ್ತು ಕಟ್ಟಿಕೊಳ್ಳುವ ಕಿಟ್ಟವನ್ನು ಸ್ವಚ್ಛಗೊಳಿಸಿಕೊಳ್ಳಲು!

ಈ ಕೃತಿಯನ್ನು ತಮ್ಮ 'ಸಹಜ ಕೃಷಿ' ಎಂಬ ಪುಟ್ಟ ಪುಸ್ತಕದಲ್ಲಿ ಕೆಲವು ಟಿಪ್ಪಣಿಗಳೊಂದಿಗೆ ಪರಿಚಯಿಸಿರುವ ಪೂರ್ಣಚಂದ್ರ ತೇಜಸ್ವಿ, ಸದ್ಯಕ್ಕೆ ಇದರ ತಾತ್ವಿಕ ದರ್ಶನವೆಲ್ಲ ಬೇಡ; ಖರ್ಚುಗಳಿಲ್ಲದ ಅವರ ಕೃಷಿ ತಂತ್ರಗಳ ಪ್ರಯೋಗ ತುರ್ತಾಗಿ

ಆಗಬೇಕಾಗಿದೆ ಎನ್ನುತ್ತಾರೆ. ಆದರೆ ಹೀಗೆ ತಮಗೇ ವಿಶಿಷ್ಟವಾದ ಉಡಾಫೆಯಿಂದ ಈ ಮಾತನ್ನು ಹೇಳುವಾಗ ತೇಜಸ್ವಿ, ಫುಕುವೋಕಾರ ಈ ಮಾತನ್ನು ಮರೆತಿದ್ದಾರೆಂದೆನಿಸುತ್ತದೆ: 'ನಿಜ ಹೇಳಬೇಕೆಂದರೆ, ಈ ವ್ಯವಸಾಯ ಪದ್ಧತಿಯಲ್ಲಿ ಹೆಚ್ಚು ಪರಿಣಾಮ ಬೀರುವುದು ರೈತ ಅನುಸರಿಸುವ ತಂತ್ರಗಳಿಗಿಂತ ಹೆಚ್ಚಾಗಿ ಅವನ ಮನೋಭೂಮಿಕೆ'. ಸ್ಥೂಲವಾಗಿ ಹೇಳುವುದಾದರೆ, ಫುಕುವೊಕಾರ ಪ್ರಕಾರ ಈ ಸರಿಯಾದ ಮನೋಭೂಮಿಕೆ ಎಂದರೆ; ಇಂದಿನ ವಿಜ್ಞಾನದ ಹಮ್ಮನ್ನು ಧಿಕ್ಕರಿಸಿ ನಿಲ್ಲಬಲ್ಲ, ಯಾವುದೇ ಆವರಣದ ದಾಕ್ಷಿಣ್ಯಕ್ಕೆ ಸಿಕ್ಕದ ಪ್ರಕೃತಿ ಸಹಜವಾದ ಮನಸ್ಸು. ಇದೇ ಪುಸ್ತಕದಲ್ಲಿ ತೇಜಸ್ವಿ, ತಾವೂ ಹಲವಾರು ವರ್ಷಗಳ ಕಾಲ ಪ್ರಕೃತಿಯ ಮಧ್ಯೆಯೇ ಇದ್ದು ಅದರ ಚಲನಶೀಲತೆಯನ್ನು ಇವರಂತೆಯೇ ಗಮನಿಸುತ್ತಿದ್ದರೂ, ಪ್ರಕೃತಿ ಮನುಷ್ಯನ ಬುದ್ಧಿಯ ಹಸ್ತಕ್ಷೇಪವಿಲ್ಲದೇ ಹೆಚ್ಚು ಫಲವೀಯಬಲ್ಲುದು ಎಂಬುದೇಕೆ ತಮಗೆ ಹೊಳೆಯಲಿಲ್ಲ ಎಂದು ಆಶ್ಚರ್ಯಪಡುತ್ತಾರೆ. ಇದಕ್ಕೆ ಕಾರಣ, ಅವರಿನ್ನೂ ನಮ್ಮ ಕಾಲದ ಬಹು ಜನರಂತೆಯೇ 'ಆಧುನಿಕತೆ'ಯ ಅವಿಭಾಜ್ಯ ಅಂಗವಾದ ವಿಚಾರವಾದದ ಭಾರದಿಂದ ಇನ್ನೂ ಕಳಚಿಕೊಳ್ಳದೇ ಇದ್ದುದು.

ಫುಕುವೋಕೋ ಮೂಲತಃ ಸೂಕ್ಷ್ಮ ಜೀವಶಾಸ್ತ್ರ ವಿಜ್ಞಾನಿ. ಆದರೆ ತಮ್ಮ ತಾರುಣ್ಯದಲ್ಲೇ ನಿರಂತರ ಪ್ರಯೋಗಶೀಲತೆಯ ಮೂಲಕ ಬಹು ಬೇಗ ವಿಜ್ಞಾನಾನುಭವದ ಅತಿಗಳನ್ನು ಮುಟ್ಟಿದರು. ಹಾಗಿರುವಾಗ ಒಂದು ಮಂಜು ಮುಸುಕಿದ ಬೆಳಿಗ್ಗೆ ಕಡಲ ತೀರದಲ್ಲಿ ಕೊಕ್ಕರೆಗಳು ಸಾಲು ಸಾಲಾಗಿ ಗಗನಕ್ಕೆ ನೆಗೆದುದನ್ನು ನೋಡ ನೋಡುತ್ತಾ ಫುಕುವೋಕಾ-ನಮ್ಮ ಗದಾಧರ ಗದ್ದೆ ಬಯಲಲ್ಲಿ ಹಂಸಗಳು ಹಾರಿ ಹೋಗುತ್ತಿದ್ದುದನ್ನು ನೋಡುತ್ತಾ ಪರಮಹಂಸರಾದಂತೆಯೇ-ಮಾನವ ಅನುಭವದ ಇನ್ನೊಂದು ತುದಿಗೆ ತೆರೆದುಕೊಂಡರು. ಆ ಕ್ಷಣದಲ್ಲಿ ತಮಗೆ ಪಂಚೇಂದ್ರಿಯಗಳ ಲೋಕ ಕೇವಲ ಕ್ಷಣಭಂಗುರವೆನಿಸಿ, 'ಸತ್ಯವಾದ ಪ್ರಕೃತಿ'ಯ ಗಾಢ ಅರಿವುಂಟಾಯಿತೆಂದು ಅವರು ಹೇಳುತ್ತಾರೆ. ಈ ಅರಿವಿನ ಸ್ಫೂರ್ತಿಯಲ್ಲೇ 'ಆಕಾರ, ನಿರಾಕಾರ ಎರಡೂ ಒಂದೇ' ಎಂಬ ಬುದ್ಧನ ಮೂಲಸತ್ಯವೊಂದರ ಆಧಾರದ ಮೇಲೆ ತಮ್ಮ ದರ್ಶನವನ್ನು ಕಟ್ಟಿಕೊಂಡ ಫುಕುವೊಕಾ, ಪ್ರಕೃತಿ ಕೂಡಾ ಮನಸ್ಸಿನ ಸೃಷ್ಟಿಯೇ ಎಂದು ಇದನ್ನು ಅರ್ಥೈಸುತ್ತಾರೆ. ಹೀಗೆ ಅರ್ಥೈಸಿಕೊಂಡಾಗಲೇ ಪ್ರಕೃತಿಯನ್ನು ಅರಿಯುವ, ಗೆಲ್ಲುವ ಪ್ರಯತ್ನ ವ್ಯರ್ಥವೆಂದು ಗೊತ್ತಾಗುತ್ತದೆ ಮತ್ತು ಹೀಗೆ ಅರಿಯುವ ಯತ್ನದಲ್ಲಿಯೇ ವಿಜ್ಞಾನ ಆಧುನಿಕ ಮನುಷ್ಯನ ಮನಸ್ಸಿನ ಮೇಲೆ ಎಳೆದಿರುವ ಮಾಯೆಯ ಮುಸುಕಿನ ಅರಿವು ಆಗುತ್ತದೆ ಎನ್ನುತ್ತಾರೆ.

ಇದನ್ನು ಅವರು ಆಧುನಿಕ ಕೃಷಿ ಪದ್ಧತಿ ರೂಢಿಸಿರುವ ಹಲವು 'ಭ್ರಮೆ'ಗಳ ನಿದರ್ಶನಗಳೊಂದಿಗೆ ವಿಷದೀಕರಿಸುತ್ತಾರೆ. ಉದಾಹರಣೆಗೆ, ಉಳುಮೆ, ಗೊಬ್ಬರ, ಕಳೆ ಮತ್ತು ಕೀಟನಾಶಕ ರಸಾಯನಿಕಗಳನ್ನು ಕುರಿತ ಆಧುನಿಕ ಬೇಸಾಯದ ಪರಿಕಲ್ಪನೆಗಳು ಹೇಗೆ ಭೂಮಿಯ ಅದಮ್ಯ ಫಲವತ್ತತೆಯನ್ನೇ ಅನುಮಾನಾಸ್ಪದಗೊಳಿಸಿ ರೂಪುಗೊಂಡಿವೆ ಎಂದು ವಿವರಿಸುತ್ತಾರೆ. ಈ ಪರಿಕಲ್ಪನೆಗಳನ್ನು ನಂಬಿಕೊಂಡೇ ವ್ಯವಸಾಯ ಮಾಡುತ್ತಾ ನಾವು

ಭೂಮಿಯನ್ನು ಅದರ ಆವರಣದೊಂದಿಗೆ ಹಾಳು ಮಾಡಿ, ನಾವೂ ಹಾಳಾಗುತ್ತಿದ್ದೇವೆ ಎನ್ನುತ್ತಾರೆ. ಅಷ್ಟೇ ಅಲ್ಲ, ಉಳುಮೆ, ಗೊಬ್ಬರ, ಕಳೆ ಅಥವಾ ಕೀನಾಶಕಗಳ ಅಗತ್ಯವೇ ಇಲ್ಲದೆ, ಪ್ರಕೃತಿಯ ಪಿಸುಮಾತಿಗೆ ಸರಿಯಾಗಿ ಕಿವಿಗೊಡುವುದಷ್ಟರಿಂದಲೇ ಹೇಗೆ 'ವೈಜ್ಞಾನಿಕ ಕೃಷಿ'ಯ ಪ್ರಮಾಣದಲ್ಲಿ ಬೆಳೆ ತೆಗೆಯಬಹುದು ಎಂಬುದನ್ನು ತಮ್ಮ ಗದ್ದೆ ತೋಟಗಳಲ್ಲಿ ಮಾಡಿ ತೋರಿಸಿದ್ದಾರೆ. ಇದನ್ನು 'ಏನೂ ಮಾಡದ ಕೃಷಿ' ಎಂಬ ಬೆರಗಿನ ಹೆಸರಿನಿಂದ ಕರೆದು ಎಲ್ಲರಲ್ಲಿ ಕುತೂಹಲ ಹುಟ್ಟಿಸಿದ್ದಾರೆ. ಇಂದು ಕರ್ನಾಟಕದಾದ್ಯಂತ ಪ್ರಚಲಿತವಾಗುತ್ತಿರುವ ಪಾಳೇಕರರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಇದರಿಂದಲೇ ಸ್ಫೂರ್ತಿ ಪಡೆದದ್ದಾಗಿದೆ.

ಇಂದಿನ ರೈತನ ದುರಂತವೆಂದರೆ ಅವನು ಆಧುನಿಕತೆ ಹುಟ್ಟಿಸಿರುವ 'ಸಮೃದ್ಧಿ'ಯೆಂಬ ಹುಚ್ಚು ಕುದುರೆಯ ಹಿಂದೆ ಬಿದ್ದಿದ್ದಾನೆ. ಇದರಿಂದಾಗಿ ಅವನು ಹೆಚ್ಚು ಬೆಳೆಯುವ ಹಪಾಹಪಿಗೆ ಅಥವಾ ಬೆಳೆ ಕಡಿಮೆಯಾಗುವ ಆತಂಕಕ್ಕೆ ಸಿಕ್ಕಿ, ಪ್ರಕೃತಿಯ ಪಿಸುಮಾತುಗಳನ್ನು ಆಲಿಸುವ ಸೂಕ್ಷ್ಮತೆಯನ್ನು ಕಳೆದುಕೊಂಡು; ಏನೇನೋ ತಾಂತ್ರಿಕ ಕಸರತ್ತುಗಳನ್ನು ಮಾಡಿ ಸುಸ್ತಾಗುತ್ತಿದ್ದಾನೆ. ಅವನಿಗೆ ಕಾವ್ಯ, ನಾಟಕ, ಸಂಗೀತ ಏನೂ ಬೇಡವಾಗಿ ಬರಡಾಗಿದ್ದಾನೆ ಎನ್ನುವ ಫುಕುವೋಕಾ, ಜಪಾನ್‌ನ ತಮ್ಮ ಹಳ್ಳಿಯಲ್ಲಿ ಇಂತಹ 'ಏನೂ ಮಾಡದ' ಬೇಸಾಯ ಮತ್ತು ಜೀವನ ಕ್ರಮವನ್ನು ರೂಢಿಸಲೆಂದೇ, ಅದನ್ನು ಜನಸಾಮಾನ್ಯರ ಮಧ್ಯೆ ವಿಶ್ವಾಸಾರ್ಹಗೊಳಿಸಲೆಂದೇ ಅಂತಾರಾಷ್ಟ್ರೀಯ ಕೃಷಿ ಜೀವನ ಶಾಲೆಯೊಂದನ್ನು ಹುಟ್ಟು ಹಾಕಿದ್ದಾರೆ. ಅಲ್ಲಿನ ಅನುಭವದ ಬಗ್ಗೆ ಅವರು ಹೇಳುವುದು: 'ಈ ತೋಟದಲ್ಲಿ ನಾವು ಶ್ರಮರಹಿತ ಕೃಷಿ ಮಾಡುತ್ತೇವೆ. ಪರಿಪೂರ್ಣವಾದ, ಸ್ವಾದಯುಕ್ತ ಧಾನ್ಯಗಳನ್ನು, ಹಣ್ಣುಗಳನ್ನು ತಿನ್ನುತ್ತೇವೆ. ನಮ್ಮೆಲ್ಲ ಚಟುವಟಿಕೆಗಳ ಹಿಂದಿರುವ ಜಗ ಹೃದಯಕ್ಕೆ ನಾವು ಹತ್ತಿರವಾದಷ್ಟೂ ಅದಕ್ಕೆ ಅರ್ಥವಿದೆ, ಅದರೊಂದಿಗೆ ಆತ್ಮತೃಪ್ತಿಯಿದೆ. ಇಲ್ಲಿ ಜೀವನ ಒಂದು ಕಾವ್ಯವೇ!' ಹಾಗಾಗಿ, ಫುಕುವೋಕಾ ಕರ್ನಾಟಕದ ನಮ್ಮ ಪ್ರಯೋಗಶೀಲ ರೈತ ನಾರಾಯಣ ರೆಡ್ಡಿಯವರನ್ನು ಭೇಟಿ ಮಾಡಲು ಬಂದವರು, ಅವರ ತೋಟ ಬಿಟ್ಟು ಪಕ್ಕದಲ್ಲಿ ಹರಿಯುತ್ತಿದ್ದ ತೊರೆ ಮತ್ತು ಅದರ ದಡದಲ್ಲಿ ಸೊಂಪಾಗಿ ಬೆಳೆದಿದ್ದ ಮರ ನೆಳಲಿನಲ್ಲೇ ಹೆಚ್ಚು ಕಾಲ ಕಳೆದದ್ದು ಆಶ್ಚರ್ಯವೇನಲ್ಲ!

ಆಧುನಿಕ ವಿಜ್ಞಾನಿಯ ಎಲ್ಲ ಅನ್ವೇಷಣೆಗಳ ಮೂಲಾಧಾರ 'ಪ್ರಕೃತಿ ಎಂದರೆ ಏನು?' ಎಂಬ ಪ್ರಶ್ನೆಯೇ ಆಗಿದೆ. ಆದರೆ ಇದರ ಸಮಸ್ಯೆ ಎಂದರೆ, ಇದೊಂದು ಅಪೂರ್ಣವಾದ ಪ್ರಶ್ನೆಯಾಗಿರುವುದು. ಈ ಪ್ರಶ್ನೆ ಪೂರ್ಣವಾಗುವುದು, ಅದರಲ್ಲಿ 'ಏನು' ಎಂಬುದು ಬರೀ ಪ್ರಕೃತಿಯನ್ನು ಉದ್ದೇಶಿಸಿದರೆ ಸಾಲದು; ಆ ಪ್ರಶ್ನೆಯ ಮಾಧ್ಯಮವಾಗಿರುವ ಮನುಷ್ಯನನ್ನೂ ಉದ್ದೇಶಿಸಿರಬೇಕು. ಹಾಗೇ, 'ಏನು' ಎಂಬ ಪದವನ್ನೂ ಉದ್ದೇಶಿಸಿರಬೇಕು (ಅಂದರೆ, ಮನುಷ್ಯ ಎಂದರೆ ಏನು ಮತ್ತು ಏನು ಎಂದರೆ ಏನು ಎಂಬ ಪ್ರಶ್ನೆಗಳನ್ನೂ ಅದು ಒಳಗೊಂಡಿರಬೇಕು!) ಎನ್ನುವ ಫುಕುವೋಕಾ, ಆ ಪೂರ್ಣ ಪ್ರಶ್ನೆಯನ್ನು ಎದುರಿಸುವಂತಾದಾಗ ಮಾತ್ರ ವಿಜ್ಞಾನ ಪೂರ್ಣಜ್ಞಾನ ಎನ್ನಿಸಿಕೊಳ್ಳುತ್ತದೆ. ಅಲ್ಲಿಯವರೆಗೆ ಈ ಅಪೂರ್ಣ ಜ್ಞಾನ ತನ್ನ ಪೂರ್ಣಜ್ಞಾನದ ಹಮ್ಮಿನಲ್ಲಿ ನಮ್ಮ ಆಲೋಚನಾ ಕ್ರಮವನ್ನು ದಾರಿ ತಪ್ಪಿಸುತ್ತಿರುತ್ತದೆ

ಎಂದು ಎಚ್ಚರಿಸುತ್ತಾರೆ: "ಒಂದು ಪುಟ್ಟ ಗಿಡದಲ್ಲಿ ತಲೆ ಎತ್ತುತ್ತಿರುವ ಒಂದು ಚಿಗುರನ್ನು ಚಿವುಟಿ ಹಾಕುವುದು ಕೂಡಾ ಭರಿಸಲಾಗದಷ್ಟು ದೊಡ್ಡ ತಪ್ಪು. ಮನುಷ್ಯನ ಚೇಷ್ಟೆಗೆ ಸಿಗದಿದ್ದ ಗಿಡದಲ್ಲಿ ಹೊರಡುವ ಕೊಂಬೆಗಳು ವ್ಯವಸ್ಥಿತವಾಗಿ ಒಂದರ ನಂತರ ಮತ್ತೊಂದು ಬಂದು, ಎಲ್ಲಾ ಕೊಂಬೆಗಳೂ ಸರಿಯಾದ ಪ್ರಮಾಣದಲ್ಲಿ ಶಾಖವನ್ನು ಪಡೆಯುತ್ತವೆ. ಆದರೆ ಒಮ್ಮೆ ಈ ವ್ಯವಸ್ಥೆಯನ್ನು ತಪ್ಪಿಸಿದರೆ ಆ ಕೊಂಬೆಗಳಲ್ಲೇ ಪೈಪೋಟಿ ಉಂಟಾಗಿ ಅವು ಒಂದರ ಮೇಲೊಂದು ಬೆಳೆದು ಸೂರ್ಯನ ಶಾಖ ಸರಿಯಾಗಿ ಹಂಚಿಕೆಯಾಗದೆ ಸಾಕಷ್ಟು ಪ್ರಮಾಣದಲ್ಲಿ ಶಾಖ ಪಡೆಯದ ಎಲೆಗಳು ಉದುರುತ್ತವೆ; ಕ್ರಿಮಿಗಳು ಹಾವಳಿ ನಡೆಸುತ್ತವೆ; ಮತ್ತೆ ಕೊಂಬೆಗಳನ್ನು ಕತ್ತರಿಸದಿದ್ದರೆ ಮುಂದಿನ ದಿನಗಲ್ಲಿ ಕೊಂಬೆಗಳು ಬಾಡಿ ಬೆಂಡಾಗುತ್ತವೆ.

ಮನುಷ್ಯ ತನ್ನ ಕೊಳಕು ಕೈ ಆಡಿಸಿ ಪ್ರಕೃತಿಯ ತಾಳಬದ್ಧವಾದ ಸಂಗೀತವನ್ನು ಹಾಳು ಮಾಡುತ್ತಾನೆ. ಅದನ್ನು ತಿದ್ದಲಾರದೆ ಸುಮ್ಮನಾಗಿ ಬಿಡುತ್ತಾನೆ. ಮುಂದೆ ಎಂದೋ ಒಂದು ದಿನ ಆ ತಪ್ಪು ಅವನ ಬುಡಕ್ಕೇ ಬಂದಾಗ ಅದನ್ನು ಸರಿಪಡಿಸಲು ತನ್ನ ಸರ್ವ ಸಾಮರ್ಥ್ಯವನ್ನು ಉಪಯೋಗಿಸುತ್ತಾನೆ. ಈ ಪ್ರಯತ್ನದಲ್ಲಿ ಅವನು ಸ್ವಲ್ಪ ಜಯಶಾಲಿಯಾದಂತೆ ಕಂಡರೆ ಅವನನ್ನು ಹಿಡಿದು ನಿಲ್ಲಿಸುವುದೇ ಅಸಾಧ್ಯವಾಗುತ್ತದೆ. ಮನುಷ್ಯ ಪದೇ ಪದೇ ಹೀಗೇ ಮಾಡುತ್ತಾನೆ. ಇದು ಬೇಸಿಗೆಯಲ್ಲಿ ತನ್ನ ಮನೆಯ ಹೆಂಚುಗಳನ್ನೆಲ್ಲ ಒಡೆದು ಹಾಕಿ, ಮಳೆಗಾಲದಲ್ಲಿ ಮನೆ ಸೋರಲು ಆರಂಭಿಸಿದಾಗ ಎದ್ದೆನೋ ಬಿದ್ದೆನೋ ಎನ್ನುತ್ತಾ ಹೆಂಚುಗಳನ್ನು ಸರಿಪಡಿಸಿ, ಮನೆ ಸೋರುವುದು ನಿಂತಾಗ ದೊಡ್ಡ ಸಾಧನೆ ಮಾಡಿದೆನೆಂದು ಬೆನ್ನು ತಟ್ಟಿಕೊಂಡಷ್ಟೇ ಮೂರ್ಖತನ.

ನಮ್ಮ ವಿಜ್ಞಾನಿಗಳ ಕಥೆಯೂ ಹೀಗೇ ಆಗಿದೆ. ಹಗಲಿರುಳೆನ್ನದೆ ತಮ್ಮ ಕಣ್ಣುಗಳು ಹಾಳಾಗುವಷ್ಟು ಪುಸ್ತಕಗಳನ್ನು ಓದಿ ಓದಿ ಅವರು ಸಂಶೋಧಿಸುತ್ತಿರುವುದಾದರೂ ಏನನ್ನು? ತಮ್ಮ ಸಮೀಪ ದೃಷ್ಟಿ ದೋಷ ನಿವಾರಣೆಗಾಗಿ ಹೊಸ ರೀತಿಯ ಗಾಜನ್ನು!"

ಹಲವು ಅಪೂರ್ಣಗಳನ್ನು ಜೋಡಿಸಿ ಒಂದು ಪೂರ್ಣವನ್ನು ಸೃಷ್ಟಿಸಲು ಹೆಣಗುತ್ತಿರುವ ಇಂದಿನ ವಿಜ್ಞಾನಕ್ಕೆ, ಈ ವಿಧಾನದ ಮೂಲಕ ಪೂರ್ಣ ಸ್ಥಿತಿಯಲ್ಲಿರುವ ಪ್ರಕೃತಿಯನ್ನು ಅರಿಯಲು ಅಸಾಧ್ಯ. ಈ ಅರಿವು ಮೂಡಿದಾಗಲೇ 'ಏನೂ ಮಾಡದ' ಜೀವನ ದರ್ಶನ ಮತ್ತು ಶೈಲಿಯನ್ನು ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ. ಪ್ರಾಣಿಗಳು ಹೀಗೆ 'ಏನೂ ಮಾಡದೆ' ಪ್ರಕೃತಿಯ ಬೆರಗುಗಳಂತೆ ಸುಮ್ಮನೆ ಬದುಕುತ್ತಿದ್ದರೆ, ಮನುಷ್ಯ ಏನೇನನ್ನೋ ಮಾಡುತ್ತಾ ತನ್ನ ಸರಳ ಪ್ರಾಕೃತಿಕ ನೆಮ್ಮದಿಯನ್ನು ಕಳೆದುಕೊಂಡು; ಮತ್ತೆ ಅದನ್ನು ಗಳಿಸಿಕೊಳ್ಳಲು ಸದಾ ಮತ್ತೇನನ್ನೋ ಮಾಡುತ್ತಲೇ ಇರುವ 'ದುಡಿಮೆ'ಯ ವಿಷವ್ಯೂಹಕ್ಕೆ ಸಿಕ್ಕಿಹಾಕಿಕೊಂಡಿದ್ದಾನೆ ಎನ್ನುತ್ತಾರೆ ಫುಕುವೋಕಾ. 'ಏನೂ ಮಾಡದ' ಜೀವನ ಎಂದರೆ ನಿಷ್ಕ್ರಿಯತೆಯ ಅಥವಾ ಆಲಸ್ಯದ ಜೀವನ ಎಂದಲ್ಲ. ಇರುವ ಪ್ರಕೃತಿಯ ಪೂರ್ಣತೆಯ ಮತ್ತು ಅದರ ರಚನೆಯಲ್ಲಿರುವ ಸಾಮರಸ್ಯದ ತಿಳುವಳಿಕೆಯಲ್ಲಿ ಹುಟ್ಟುವ; ಮಾಡಿದರೂ ಮಾಡದಂತಿರುವ ('ಮಾಡಿದರೂ ಮಾಡದಂತಿರಬೇಕು;ಮಾಡಿದ ಮಾಟದಲ್ಲಿ ತಾನಿಲ್ಲದಿರಬೇಕು': ಬಸವಣ್ಣ)

ಕೌಶಲ್ಯಪೂರ್ಣ ಕ್ರಿಯಾಶೀಲ ಜೀವನ. ಹಾಗಾಗಿಯೇ ಫುಕುವೋಕಾರನ್ನು ಓದುತ್ತ ಹೋದಂತೆ, 'ಶೂನ್ಯತೆ'ಯ ಬುದ್ಧ ಮತ್ತು 'ನಾನು ಯಾರು?' ಪ್ರಶ್ನೆಯ ರಮಣರ ಜೊತೆಗೇ, ಅಹಿಂಸಾತ್ಮಕ ಸತ್ಯಾಗ್ರಹದ ಗಾಂಧೀಜಿಯೂ ನೆನಪಾಗುತ್ತಾರೆ. ಸ್ವತಃ ಫುಕುವೋಕಾ ತಮ್ಮ ಜೀವನ ದರ್ಶನದ ಭಾಗವಾಗಿ ಗಾಂಧೀಜಿಯ ಅಹಿಂಸಾ ದರ್ಶನದ-ಏಕದಶಾ ವ್ರತಗಳ-ಪ್ರಸ್ತಾಪ ಮಾಡುತ್ತಾರೆ.

ಗಾಂಧೀಜಿ ಭಾರತವನ್ನು ಯಾವ ಅರಿವಿನಿಂದ ಗ್ರಾಮಸ್ವರಾಜ್ಯವನ್ನಾಗಿ ರೂಪಿಸಲು ಬಯಸಿದ್ದರೋ, ಅದೇ ಅರಿವಿನಿಂದ ಫುಕುವೋಕಾ ಜಪಾನ್ ರೈತ ಸಮಾಜವಾಗಿಯೇ ಉಳಿಯಬೇಕೆಂದು ಬಯಸಿದ್ದರು. ಯೂರೋಪ್ ಮತ್ತು ಅಮೆರಿಕಾಗಳಂತೆ ಜಪಾನ್‌ನಲ್ಲಿಯೂ ರೈತರ ಸಂಖ್ಯೆಯನ್ನು ಶೇ.೧೦ಕ್ಕೆ ಇಳಿಸುವ ನಗರೀಕರಣ ಮತ್ತು ಕೈಗಾರಿಕೀಕರಣಗಳನ್ನು, "ಹಿಂದೆ ಮನುಷ್ಯನಿಗೆ 'ಅಭಿವೃದ್ಧಿ' ಎಂಬ ಶಬ್ದದ ಪರಿಚಯವೇ ಇರಲಿಲ್ಲ. ಇಂದು 'ಅಭಿವೃದ್ಧಿ' ಶಬ್ದದ ಪರಿಚಯವೂ, ಪರಿಣಾಮಗಳೂ ನಮಗೆ ಗೊತ್ತಾಗಿದೆ. ಅದರ ವಿರುದ್ಧ ಹೋರಾಟಕ್ಕೆ ಅಣಿಯಾಗಬೇಕಾದದ್ದು ಅನಿವಾರ್ಯವಾಗಿದೆ" ಎಂಬ ಧೀರ ಕರೆಯ ಮೂಲಕ ವಿರೋಧಿಸಿದ್ದ ಅವರು, ಜಪಾನ್ ನೂರಕ್ಕೆ ನೂರು ರೈತರ ದೇಶವಾಗಬೇಕೆಂದು ಆಶಿಸಿದ್ದರು. ಹಾಗಾದಾಗ, ಪ್ರತಿ ಸರಾಸರಿ ಜಪಾನಿ ಕುಟುಂಬಕ್ಕೂ ಒಂದೂ ಕಾಲು ಎಕರೆ ಜಮೀನು ಸಿಗಲಿದ್ದು, ಅದರ ನೈಸರ್ಗಿಕ ಕೃಷಿಯಿಂದ ವರ್ಷದ ಎಲ್ಲ ಕೌಟುಂಬಿಕ ಅಗತ್ಯಗಳನ್ನು ಪೂರೈಸಿಕೊಳ್ಳಬಹುದಲ್ಲದೆ, ಆಧುನಿಕ ನಾಗರೀಕತೆಯಲ್ಲಿ ಅಲಭ್ಯವಾಗತೊಡಗಿರುವ ಸಂತೋಷ ನೆಮ್ಮದಿಗಳನ್ನೂ ಗಳಿಸಿಕೊಳ್ಳಬಹುದು ಎಂದು ಭಾವಿಸಿದ್ದರು. ಇದು ಗಾಂಧೀಜಿಯ ಗ್ರಾಮಸ್ವರಾಜ್ಯದ ಕನಸಿನಂತೆಯೇ ಇಂದು ಅವಾಸ್ತವಿಕ ಎನಿಸಬಹುದು. ಆದರೆ ಫುಕುವೋಕಾ ಅವರ ಜೀವನ ದರ್ಶನದ ಪೂರ್ಣತೆಯಲ್ಲಿ ನೋಡಿದಾಗ, ಅಭಿವೃದ್ಧಿಯ ಹೆಸರಲ್ಲಿ ತನ್ನನ್ನು ತಾನೇ ತಿಂದುಕೊಳ್ಳುತ್ತಿರುವ ಜಗತ್ತಿಗೆ ಇದು, ದೂರದಲ್ಲಾದರೂ ಕಾಣುವ ಪರ್ಯಾಯ ಮಾರ್ಗವೆನಿಸದಿರದು.

ಗಾಂಧೀಜಿಯಂತೆಯೇ ಮನುಷ್ಯನ ಅಂತಿಮ ಗುರಿ ತನ್ನಲ್ಲಿರುವ ದೈವಿಕತೆಯನ್ನು ಕಂಡುಕೊಳ್ಳುವುದು ಎಂದು ನಂಬಿದ್ದ ಫುಕುವೋಕಾ, ತಮ್ಮ ೯೫ವರ್ಷಗಳ 'ತುಂಬು' ಜೀವನದಲ್ಲಿ ಕೃಷಿ ಸಂಸ್ಕೃತಿಯ ಮೂಲಕವೇ ಇದು ಸಾಧ್ಯ ಎಂದು ಮನಗಂಡಿದ್ದರು. ಹಾಗಾಗಿಯೇ ಅವರು ಹೇಳಿದ್ದು: 'ಹರ್ಷ ಮತ್ತು ನೆಮ್ಮದಿಯನ್ನು ಪಡೆಯಲು ಪ್ರಯತ್ನಗಳನ್ನು ನಡೆಸಿಯೇ ಮನುಷ್ಯರು ಅವುಗಳನ್ನು ಕಳೆದುಕೊಳ್ಳುತ್ತಾರೆ ಎಂಬುದರಲ್ಲಿಯೇ ನೈಸರ್ಗಿಕ ಕೃಷಿ ವಿಚಾರದ ತಿರುಳು ಅಡಗಿದೆ. ಕೃಷಿಯ ಅಂತಿಮ ಗುರಿ, ಬರೀ ಹೊಲ ಗದ್ದೆಗಳಲ್ಲಿ ಬೆಳೆ ಬೆಳೆಯುವುದಲ್ಲ, ಮಾನವತೆಯ ಬೆಳೆ ತೆಗೆಯುವುದೇ ಆಗಿದೆ ಮತ್ತು ಅದನ್ನು ಉತ್ತಮಪಡಿಸುತ್ತಾ ಹೋಗುವುದೇ ಆಗಿದೆ.'

(೫ ಸೆಪ್ಟೆಂಬರ್, ೨೦೦೮)

■

೧೮. ಎರಡು ರಾಜಕೀಯ ಟಿಪ್ಪಣಿಗಳು

೧. ಇವರಿಗೆ ಅಧಿಕಾರವೇ ಸಿದ್ಧಾಂತ!

ಬೆಳ್ಳುಬ್ಬಿ ರಾಜೀನಾಮೆ ಪ್ರಕರಣ* ಕಳೆದ ಹತ್ತು ವರ್ಷಗಳಲ್ಲಿ–ಎಸ್.ಎಂ.ಕೃಷ್ಣರ ಮುಖ್ಯಮಂತ್ರಿತ್ವದ ಕಾಲದಿಂದ–ಅತಿ ಭ್ರಷ್ಟಗೊಳ್ಳುತ್ತಾ ಬಂದ ಕರ್ನಾಟಕ ರಾಜಕಾರಣದ ನಿರ್ಣಾಯಕ ಘಟ್ಟ ಎಂದು ನಾನು ಭಾವಿಸಿದ್ದೇನೆ. ಭ್ರಷ್ಟರಿಗೆ ಜಾಗ ಮಾಡಿಕೊಡಲು ಸಜ್ಜನರ ಬಲಿ ಬೇಡುವ ಈ ರಾಜಕಾರಣ ಎಲ್ಲ ನೈತಿಕತೆಯನ್ನೂ ಕಳೆದುಕೊಂಡಿದೆ. ಇಷ್ಟರವರೆಗೆ ಯಾರೆಲ್ಲ, ಎಷ್ಟೇ ಭ್ರಷ್ಟ ರಾಜಕಾರಣ ಮಾಡಿದ್ದರೂ, ನಮ್ಮ ರಾಜಕಾರಣಿಗಳು ರಾಜಕೀಯ ನೈತಿಕತೆಯ ಬಗ್ಗೆ ಬಹಿರಂಗದಲ್ಲಾದರೂ ಕಾಳಜಿ ವ್ಯಕ್ತಪಡಿಸುತ್ತಾ, ಅದರ ಉಸಿರನ್ನಾದರೂ ಉಳಿಸಿದ್ದರು. ಆದರೆ ಈ ವಿಷಯದಲ್ಲಿ ಯಡಿಯೂರಪ್ಪನವರು ಮತ್ತು ಅವರ ಪಕ್ಷದ ಅಧ್ಯಕ್ಷರು ಸಾರ್ವಜನಿಕರ ಮತ್ತು ಮಾಧ್ಯಮಗಳ ಸತತ ಛೀಮಾರಿಯ ನಡುವೆಯೂ ಪ್ರದರ್ಶಿಸುತ್ತಿರುವ ಭಂಡತನ, ರಾಜ್ಯದ ರಾಜಕಾರಣದ ಮಟ್ಟವನ್ನು ಒಮ್ಮೆಗೇ ರಸಾತಳ-ಪಾತಾಳಕ್ಕೆ ಇಳಿಸಿದೆ. ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವುದೇ ದೈವ ಕೃಪೆಯಿಂದಾಗಿ ಎಂದು ನಂಬಿದಂತಿರುವ ಯಡಿಯೂರಪ್ಪ, ಈ ದೈವ ಕೃಪೆಯನ್ನು ಕಾಪಾಡಿಕೊಂಡು ಹೋಗಲು ಮಾಡುವುದೆಲ್ಲವೂ ದೇವರ ಕೆಲಸವೇ ಎಂದು ತಿಳಿದು ಈ ರಾಜಕೀಯ ಅನಾಚಾರಕ್ಕೆ ಕೈ ಹಾಕಿದಂತಿದ್ದಾರೆ. ಹೀಗಾಗಿ, ಬಿಜೆಪಿಯವರ ಈ ದೈವ-ಧರ್ಮಗಳ ಮಾತೇ ಎಷ್ಟು ವಿಕ್ಷಿಪ್ತತೆಯಿಂದ ಕೂಡಿದುದು ಎಂಬುದು ಗೊತ್ತಾಗುತ್ತದೆ. ಸಂಘಪರಿವಾರದ ಧರ್ಮದುರಂಧರರಿಗೆ ನೈತಿಕತೆ–ಅನೈತಿಕತೆಗಳೆಲ್ಲ ಇತರರ ಬಗ್ಗೆ ಮಾತನಾಡುವುದಕ್ಕಷ್ಟೇ ಇರುವುದೆಂದು ತೋರುತ್ತದೆ.

ಯಡಿಯೂರಪ್ಪ ತಾವು ಮುಖ್ಯಮಂತ್ರಿಯಾಗಿ ಈವರೆಗೆ ಯಾರೂ ಮಾಡದ ಸಾಧನೆಯನ್ನು ಮಾಡಹೊರಟಿರುವುದಾಗಿಯೂ, ಇದಕ್ಕೆ ಸುಭದ್ರ ಸರ್ಕಾರ ಅಗತ್ಯವಾಗಿದೆ ಯೆಂದೂ; ತಮ್ಮ ಪಕ್ಷದ ತತ್ವ-ಸಿದ್ಧಾಂತಗಳನ್ನು ಒಪ್ಪಿ ತಮ್ಮೆಡೆಗೆ ಬರುತ್ತಿರುವವರಿಗೆ ಜಾಗ ಕಲ್ಪಿಸಿಕೊಡಲು ಸ್ವಲ್ಪ ಮಟ್ಟಿನ ತ್ಯಾಗ ಅಗತ್ಯವೆಂದು ತಮ್ಮ ಪಕ್ಷದ ಇತರ

---

* ಪಕ್ಷಾಂತರಿಯೊಬ್ಬರಿಗೆ ಸಚಿವ ಸ್ಥಾನಕ್ಕೆ ಅವಕಾಶ ಮಾಡಿಕೊಡಲು ಬೆಳ್ಳುಬ್ಬಿ ಎಂಬ ಸರಳ-ಸಜ್ಜನ ಸಚಿವ ರಾಜೀನಾಮೆ ನೀಡಬೇಕಾದ ಪ್ರಕರಣ!

ನಾಯಕರಿಗೆ–ಕಾರ್ಯಕರ್ತರಿಗೆ ಬುದ್ಧಿ ಹೇಳುತ್ತಿದ್ದಾರೆ. ಇವರು ಜನ ಕಿವಿಯಲ್ಲಿ ಹೂವಿಟ್ಟುಕೊಂಡು ಕೂತಿದ್ದಾರೆ ಎಂದು ಭಾವಿಸಿದಂತಿದೆ. ಇವರ ಪಕ್ಷಕ್ಕೆ ಬರುತ್ತಿರುವ ಲಫಂಗರು ನಿನ್ನೆ ಮೊನ್ನೆಯವರೆಗೆ ಒಪ್ಪಿದ್ದ ಸಿದ್ಧಾಂತವನ್ನು ಇದ್ದಕ್ಕಿದ್ದಂತೆ ತಿರಸ್ಕರಿಸಿ ಈಗ ಯಾವ ಸಿದ್ಧಾಂತವನ್ನು ಒಪ್ಪಿ ಬರುತ್ತಿದ್ದಾರೆ ಎಂಬುದು, ಬಂದೊಡನೆ ಅವರಿಗೆ ನೀಡಲಾಗುತ್ತಿರುವ ಅಧಿಕಾರದ ಸ್ಥಾನಮಾನಗಳೇ ಸಾರಿ ಹೇಳುತ್ತಿವೆ. ಸಾರ್ವಜನಿಕ ಹಣ ಲೂಟಿ ಮಾಡಿ ತಂತಮ್ಮ ಕ್ಷೇತ್ರಗಳಲ್ಲಿ ಆಧುನಿಕ ಪಾಳೇಗಾರರಾಗಿ ಮೆರೆಯಬಯಸುವ ಇವರ ಘಾತುಕತನವನ್ನೇ ಯಡಿಯೂರಪ್ಪ ಒಂದು ಸಿದ್ಧಾಂತವನ್ನಾಗಿ ಪರಿವರ್ತಿಸಿ, ತಮ್ಮ ಪಕ್ಷದ ಕಾರ್ಯಕರ್ತರೂ ಸೇರಿದಂತೆ ಜನ ಬಡಿದುಕೊಳ್ಳಬಾರದ್ದನ್ನು ಬಡಿದುಕೊಂಡು ನಗುವಂತೆ ಮಾಡಿದ್ದಾರೆ! ಆ ಮೂಲಕ ತಮ್ಮ ಪಕ್ಷ ಮತ್ತು ಅದರ ಸಿದ್ಧಾಂತಗಳೆರಡನ್ನೂ ಅಪಹಾಸ್ಯಕ್ಕೀಡುಮಾಡಿದ್ದಾರೆ. 'ವಿಜಯ ಕರ್ನಾಟಕ'ದ ತ್ಯಾಗರಾಜ್ ಕೇಳಿರುವಂತೆ, ಸಿದ್ಧರಾಮಯ್ಯ ಇವರ ಸಿದ್ಧಾಂತವನ್ನೊಪ್ಪಿ ಇವರ ಪಕ್ಷವನ್ನು ಬಲಪಡಿಸಲು ಬರುವುದಾದರೆ, ಯಡಿಯೂರಪ್ಪ ತಮ್ಮ ಮುಖ್ಯಮಂತ್ರಿ ಸ್ಥಾನವನ್ನು ತ್ಯಾಗ ಮಾಡಲು ಸಿದ್ಧರಾಗಿದ್ದಾರೆಯೇ?

ಯಡಿಯೂರಪ್ಪ, ತಮ್ಮ ಪಕ್ಷಕ್ಕೆ ಜನತೆ ಪೂರ್ಣ ಬಹುಮತ ಕೊಡದಿದ್ದುದರಿಂದ ಇದು ಅಗತ್ಯವಾಗಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ! ಜನತೆಗೆ ತಮ್ಮ ಪಕ್ಷದ ಮೇಲೆ ಪೂರ್ಣ ನಂಬಿಕೆ ಇಲ್ಲದಿದ್ದುದರಿಂದಲೇ ಪೂರ್ಣ ಬಹುಮತ ನೀಡಿಲ್ಲ ಎಂಬ ಸರಳ ಸತ್ಯವನ್ನು ಅರಿಯಲಾಗದ ಇವರು, ಜನತೆಯ ತೀರ್ಪನ್ನೇ 'ಖರೀದಿ'ಯ ಮೂಲಕ ಬದಲಾಯಿಸಹೊರಟು, ಪ್ರಜಾಪ್ರಭುತ್ವದ ಮೂಲಾಧಾರಗಳನ್ನೇ ಅಲುಗಾಡಿಸತೊಡಗಿದ್ದಾರೆ. ಈ ಬಾರಿ ಬಿಜೆಪಿಗೆ ಅಷ್ಟೊಂದು ಸ್ಥಾನಗಳು ದೊರಕಿರುವುದು ತಮ್ಮ ಮತ್ತು ತಮ್ಮ ಪಕ್ಷದ ಮೇಲಿನ ಜನತೆಯ ಅಭಿಮಾನದಿಂದಾಗಿ ಎಂದು ಯಡಿಯೂರಪ್ಪನವರು ನಂಬಿದ್ದರೆ, ಆ ನಂಬಿಕೆಯಿಂದ ಅವರು ಆದಷ್ಟು ಬೇಗ ಹೊರಬರುವುದು ಅವರ ಮತ್ತು ಅವರ ಪಕ್ಷದ ಹಿತದೃಷ್ಟಿಯಿಂದ ಒಳ್ಳೆಯದು. ದೇವೇಗೌಡರ ಕುಟುಂಬ ರಾಜಕಾರಣದಿಂದಾಗಿ ಯಡಿಯೂರಪ್ಪನವರಿಗೆ ದ್ರೋಹವೆಸಗಲಾಗಿದೆ ಎಂದು ಸಾಮಾನ್ಯ ಜನತೆ, ವಿಶೇಷವಾಗಿ ಲಿಂಗಾಯಿತ ಸಮುದಾಯ ಭಾವಿಸಿದ್ದರಿಂದಾಗಿ ಮತ್ತು ಕಾಂಗ್ರೆಸ್ ತನ್ನ ಅಭ್ಯರ್ಥಿಗಳ ಆಯ್ಕೆ ಮತ್ತು ಪ್ರಚಾರ ಕಾರ್ಯದಲ್ಲಿ ತನ್ನ ಹಳೆಯ ಚಾಳಿಗಳನ್ನು ಬಿಡಲು ನಿರಾಕರಿಸಿದ್ದರಿಂದಾಗಿ, ಬಿಜೆಪಿ ಅಧಿಕಾರದ ಹೊಸ್ತಿಲಿಗೆ ಬಂದು ನಿಲ್ಲುವಂತಾಯಿತಷ್ಟೆ. ಈ ಸುಸಂದರ್ಭವನ್ನು ದೀರ್ಘಕಾಲಿಕ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಸದುಪಯೋಗಪಡಿಸಿಕೊಳ್ಳುವ ಬದಲು, ಯಡಿಯೂರಪ್ಪ ಅಲ್ಪಕಾಲಿಕ ರಾಜಕೀಯ ಕಾರ್ಯಕ್ರಮಗಳ ಮೂಲಕ ಹಾಳುಗೆಡಿಹಿಕೊಳ್ಳುತ್ತಿದ್ದಾರೆ.

ನೈತಿಕ ಸೂಕ್ಷ್ಮಗಳಿಲ್ಲದ ಯಾವ ರಾಜಕಾರಣವೂ ಬಹುಕಾಲ ಬಾಳುವುದಿಲ್ಲ. ಅದು ಜನತೆಯ ನೈತಿಕತೆಯನ್ನೂ ಅಸೂಕ್ಷ್ಮಗೊಳಿಸಿ ಸ್ವಲ್ಪ ಕಾಲ ಬಾಳಬಹುದಷ್ಟೆ. ಇದು ಈಗಾಗಲೇ ಇತ್ತೀಚಿನ ಕಾಂಗ್ರೆಸ್ ಮತ್ತು ಜೆಡಿಎಸ್ ನೇತೃತ್ವದ ಸಮ್ಮಿಶ್ರ ಸರ್ಕಾರಗಳ ಆಡಳಿತಗಳಲ್ಲೇ ಸಾಬೀತಾಗಿದೆ. ಈಗ ಬಿಜೆಪಿ, ಅಧಿಕಾರದ ಮೊದಲ ಅವಕಾಶದಲ್ಲೇ ಆ

ಆಟಕ್ಕಿಳಿದಂತಿದೆ. ಅಷ್ಟೇ ಅಲ್ಲ, ತನ್ನ 'ಸರ್ವಶ್ರೇಷ್ಠತನ'ದ ಹುಸಿ ಹಮ್ಮಿನಲ್ಲಿ ಅತಿ ಭಂಡತನ ಪ್ರದರ್ಶಿಸುತ್ತಾ, ಈ ಆಟದಲ್ಲಿ ಎಲ್ಲರನ್ನೂ ಮೀರಿಸಿದೆ. ಇದು ಇಂತಹ ಆಟಗಳನ್ನು ಆರಂಭಿಸಿದ ಕಾಂಗ್ರೆಸ್ ಮತ್ತು ಜೆಡಿಎಸ್‌ನವರಿಗೆ ಒಳ್ಳೆಯ ಪಾಠವೂ ಹೌದು. ಹಾಗೆ ನೋಡಿದರೆ, ಇನ್ನೊಂದು ರೀತಿಯಲ್ಲಿ ಇದು ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ನಿರ್ಮಲೀಕರಣ ಕಾರ್ಯಕ್ರಮವೂ ಆಗಬಹುದು. ಆದರೆ ಈ ನಿರ್ಮಲೀಕರಣ ಹೀಗೇ ಮುಂದುವರೆದರೆ, ಈ ಎರಡೂ ಪಕ್ಷಗಳ ನಿರ್ಮೂಲನೀಕರಣವೂ ಆದರೆ ಆಶ್ಚರ್ಯವಿಲ್ಲ! ಆದುದರಿಂದ ಈ ಎರಡೂ ಪಕ್ಷಗಳು ಈಗಲಾದರೂ ಅತಿಯಾದ ವ್ಯಾವಹಾರಿಕ ರಾಜಕಾರಣವನ್ನು ತೊರೆದು–ಕಷ್ಟದ ಸಮಯದಲ್ಲಿ ಎಲ್ಲ ಪಕ್ಷಗಳನ್ನೂ ಕಾಪಾಡಬಲ್ಲ–ಒಂದಿಷ್ಟು ನೀತಿ ರಾಜಕಾರಣವನ್ನೂ ಅಳವಡಿಸಿಕೊಳ್ಳಲಾರಂಭಿಸಿದರೆ ಒಳ್ಳೆಯದು.

ಬೆಳ್ಳುಬ್ಬಿ ರಾಜೀನಾಮೆ ಅವರೂರಿನಲ್ಲಿ ಪಕ್ಷದ ಕೆಲವು ತರುಣ ಕಾರ್ಯಕರ್ತರನ್ನು ದುರದೃಷ್ಟವಶಾತ್, ವಿಷ ಸೇವಿಸುವಷ್ಟರ ಮಟ್ಟಿಗೆ ಪ್ರೇರೇಪಿಸಿದೆ. ಇದು ಜಾತಿ ಅಭಿಮಾನದಿಂದ ಉಂಟಾದುದೋ ಅಥವಾ ಪಕ್ಷದ ಅಭಿಮಾನದಿಂದ ಉಂಟಾದುದೋ ತಿಳಿಯದು! ಪಕ್ಷದ ಅಭಿಮಾನದಿಂದಲೇ ಉಂಟಾಗಿದ್ದರೆ, ಅದು ನಮ್ಮಲ್ಲಿ ನೀತಿ ರಾಜಕಾರಣದ ಜೀವ ಇನ್ನೂ ಉಳಿದಿರುವ ಸೂಚನೆಯೆಂದೇ ನಾನು ಭಾವಿಸಿದ್ದೇನೆ. ಆದರೆ ಈ ಬೆಳ್ಳುಬ್ಬಿ ಪ್ರಕರಣದಲ್ಲಿ ಅಂತರ್ಗತವಾಗಿರುವ ಅನೀತಿಯತ ರಾಜಕಾರಣವನ್ನು ಬಿಜೆಪಿಯ ಯಾವೊಬ್ಬ ನಾಯಕನೂ ಕ್ರಿಯಾತ್ಮಕವಾಗಿ ಪ್ರತಿಭಟಿಸದಿರುವುದು, ಆ ಪಕ್ಷವನ್ನು ಆವರಿಸಿಕೊಂಡಿರುವ ಅಧಿಕಾರದ ಅಮಲು ಎಂತಹುದು ಎಂಬುದರ ಸೂಚನೆಯೇ ಆಗಿದೆ. ಹಾಗಾಗಿ ಇದು ಪಕ್ಷ ಹೇಳಿಕೊಂಡಂತೆ 'ಆಪರೇಷನ್ ಕಮಲ' ಅಲ್ಲ, ನಮ್ಮ ಎಚ್. ಆನಂದರಾಮ ಶಾಸ್ತ್ರಿಗಳು ಮೊನ್ನೆ 'ಪ್ರಜಾವಾಣಿ'ಯಲ್ಲಿ ಅಣಕವಾಡಿದಂತೆ 'ಆಪರೇಷನ್ ಮಲ'!

ಅದೇನೇ ಇರಲಿ, ಈ ಆಪರೇಷನ್–ಈಗಾಗಲೇ ಹಬ್ಬಿರುವ ವದಂತಿಗಳಂತೆ–ತಿರುಗುಬಾಣವಾಗಿಯೇನಾದರೂ ಪರಿಣಮಿಸಿದರೆ, ಆಗ ಬಿಜೆಪಿ ಸರ್ಕಾರದ ಪರವಾಗಿ ಕಿರುಚಲು ಅಥವಾ ಅಳಲು ಯಾರೂ ಇರುವುದಿಲ್ಲ ಎಂಬುದು ಆ ಪಕ್ಷದ ನಾಯಕರಿಗೆ ತಿಳಿದಿದ್ದರೆ ಒಳ್ಳೆಯದು.

(೫ ಸೆಪ್ಟಂಬರ್, ೨೦೦೮)

೨. ಶೂದ್ರ ರಾಜಕಾರಣದ ದುರಂತ ನಾಯಕರು...

ಕಾಗೋಡು ತಿಮ್ಮಪ್ಪನವರು ಚುನಾವಣಾ ರಾಜಕಾರಣದಿಂದ ನಿವೃತ್ತಿ ಘೋಷಿಸಿದ್ದಾರೆ. ತಾವಿನ್ನು ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ತೊಡಗಿಕೊಳ್ಳುವುದಾಗಿ ಹೇಳಿದ್ದಾರೆ. ಈವರೆಗೆ ಈ ಕೆಲಸದಲ್ಲಿ ಗಂಭೀರವಾಗಿ ತೊಡಗಿಕೊಳ್ಳದಿದ್ದುದರಿಂದಲೇ ಅವರು ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಿಸಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ ಎಂದು ಪಕ್ಷದೊಳಗೇ

ಇರುವ ಅವರ ರಾಜಕೀಯ ಶತ್ರುಗಳು ಹೇಳುತ್ತಿದ್ದಾರೆ! ಕಳೆದೆರಡು ಚುನಾವಣೆಗಳ ಸೋಲು ತಿಮ್ಮಪ್ಪನವರನ್ನು ಕಂಗೆಡಿಸಿದೆ. ಈ ಬಾರಿಯ ಸೋಲಂತೂ ಅವರನ್ನು ಮೌನಕ್ಕೆ ತಳ್ಳಿಬಿಟ್ಟಿದೆ. ಯಾಕೆ ಹೀಗಾಯಿತು ಎಂದು ಈವರೆಗೆ ತಮ್ಮನ್ನು ತಾವೇ ಕೇಳಿಕೊಳ್ಳುತ್ತಲೇ ಇದ್ದು, ಕೊನೆಗೂ ಉತ್ತರ ಸಿಗದೆ ಅವರು ನಿವೃತ್ತಿ ಘೋಷಿಸಿದಂತಿದೆ.

ಹಾಗೆ ನೋಡಿದರೆ, ಇಂದಿನ ರಾಜಕೀಯ ಸಂದರ್ಭದಲ್ಲಿ ತಿಮ್ಮಪ್ಪ ಸೋಲಿಸ್ಪಡಬೇಕಾದ ರಾಜಕಾರಣೀಯೇನೂ ಅಲ್ಲ. ಇವರು ಮಂತ್ರಿಯಾಗಿದ್ದಾಗ ಮಾತ್ರವಲ್ಲ, ಬರೀ ಶಾಸಕರಾಗಿದ್ದಾಗಲೂ ಕ್ಷೇತ್ರಕ್ಕೆ ಕೆಲಸ ಮಾಡಿದವರು. ಮಂತ್ರಿಯಾಗಿ ದಕ್ಷರೆನಿಸಿಕೊಂಡಿದ್ದವರು ಕೂಡ. ಭ್ರಷ್ಟತೆಯ ವಿಷಯಕ್ಕೆ ಬಂದರೆ, ಇಂದಿನ ರಾಜಕಾರಣಿಗಳಿಗೆ ಹೋಲಿಸಿದರೆ, ಅಷ್ಟೇನೂ ಹೆಸರು ಕೆಡಿಸಿಕೊಳ್ಳದ ವ್ಯಕ್ತಿ. ಆದರೂ ಅವರು ಹೀಗೆ ಸತತವಾಗಿ ಸೋತರೇಕೆ? ಈ ಹಿಂದಿನ ಸೋಲಿಗೆ, ಚುನಾವಣೆಗೆ ಮುನ್ನ ಸಾಗರದಲ್ಲಿ ಕೋಮು ಗಲಭೆ ಸಂಭವಿಸಿ ಮತ್ತು ಅದೇ ಸಂದರ್ಭದಲ್ಲಿ ಬಂಗಾರಪ್ಪ ಬಿಜೆಪಿ ಸೇರಿ ಆ ಪಕ್ಷದ ಪರ ಅಲೆ ಸೃಷ್ಟಿಯಾದದ್ದು ಕಾರಣ ಎಂದು ಹೇಳಲಾಗುತ್ತಿದ್ದರೆ, ಈ ಬಾರಿ? ಅದೂ, ಕಳೆದ ಮೂರು ವರ್ಷಗಳಲ್ಲಿ ಮೂರು ಪಕ್ಷಗಳ ಹೊಸ್ತಿಲು ತುಳಿದು ವಿಶ್ವಾಸಾರ್ಹತೆ ಕಳೆದುಕೊಂಡಿದ್ದ ತಮ್ಮೆದುರಿನ ರಾಜಕೀಯ ಬಚ್ಚಾ ಹಾಗೂ ತಮ್ಮ ಭಾವಮೈದುನನ ಎದುರು ಮತ್ತೆ ಸೋಲುವುದೆಂದರೆ?

ಇದಕ್ಕೂ ಅವರ ಅಭಿಮಾನಿಗಳು ಮತ್ತು ಶತ್ರುಗಳು ಹಲವಾರು ಕಾರಣಗಳನ್ನು ಕೊಡುತ್ತಾರೆ. ಅಭಿಮಾನಿಗಳು ಕೊಡುವ ಒಂದು ಕಾರಣವೆಂದರೆ, ಕ್ಷೇತ್ರ ಪುನಾರಚನೆಯಲ್ಲಿ ಹೊಸದಾಗಿ ಸೇರಿದ ಪ್ರದೇಶಗಳಲ್ಲಿ ಚುನಾವಣಾ ಪ್ರಚಾರ ಸರಿಯಾಗಿ ಆಗದೇ ಇದ್ದದ್ದು. ಇನ್ನೊಂದು, ಪಕ್ಕದ ಶಿಕಾರಿಪುರ ಕ್ಷೇತ್ರದಲ್ಲಿ ತಮ್ಮ ಪಾರಂಪರಿಕ ಶತ್ರು ಬಂಗಾರಪ್ಪನವರ ಸಮಾಜವಾದಿ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡ ಫಲವಾಗಿ ಬಂಗಾರಪ್ಪ ಮತ್ತು ಅವರ ಮಗ ಕಾಂಗ್ರೆಸ್ಸಿನವರೇ ಆದ ಕುಮಾರ್ ಬಂಗಾರಪ್ಪನವರ ನಡುವಣ ರಾಜಕೀಯ ಕದನದ ಅಡ್ಡ ಪರಿಣಾಮಗಳಿಗೆ ಇವರು ಸಿಕ್ಕಿಕೊಂಡರು ಎಂಬುದು. ಇನ್ನು ಇವರ ಶತ್ರುಗಳು ಕೊಡುವ ಕಾರಣವೆಂದರೆ, ತಿಮ್ಮಪ್ಪ ಶ್ರೀಸಾಮಾನ್ಯರ ಜೊತೆ ಬೆರೆಯದೆ ತಮ್ಮದೇ ಆಪ್ತಕೂಟವೊಂದರಲ್ಲಿ ಸೆರೆಯಾಗಿ ಗತ್ತಿನ ರಾಜಕಾರಣ ಮಾಡುತ್ತಲೇ ಹೋದದ್ದು!

ಇವೆಲ್ಲವೂ ನಿಜವಿರಬಹುದು. ಆದರೆ ಆಳವಾಗಿ ನೋಡಿದರೆ, ತಿಮ್ಮಪ್ಪನವರ (ಚುನಾವಣಾ)ರಾಜಕೀಯ ಜೀವನದ ಇಂತಹ ಅಶೋಭಾಯಮಾನ ಅಂತ್ಯಕ್ಕೆ ಜಿಲ್ಲೆಯ ಚಾರಿತ್ರಿಕ ರಾಜಕೀಯ ಕಾರಣವೂ ಇದ್ದಂತೆ ಕಾಣುತ್ತದೆ. ತಿಮ್ಮಪ್ಪ ಸುಪ್ರಸಿದ್ಧ ಕಾಗೋಡು ಸತ್ಯಾಗ್ರಹದ ಸಮಾಜವಾದಿ ಉತ್ಪನ್ನ. ಕರ್ನಾಟಕದ ಸಮಾಜವಾದಿ ಚಳುವಳಿಯ ಪಿತಾಮಹ ಶಾಂತವೇರಿ ಗೋಪಾಲಗೌಡರ ಗರಡಿಯಲ್ಲಿ ಯುವನಾಯಕನಾಗಿ ಬೆಳೆದ ರಾಜಕಾರಣಿ. ಆದರೆ ಗೋಪಾಲ ಗೌಡರು ಇವರ ಕೈಯಲ್ಲಿಟ್ಟು ಹೋದ ಸಮಾಜವಾದಿ ಆಂದೋಲನ ವನ್ನಾಗಲೀ, ಪಕ್ಷವನ್ನಾಗಲೀ ಕಾಗೋಡು ತಿಮ್ಮಪ್ಪ ಮತ್ತು ಅವರ ಗೆಳೆಯರಿಗೆ ಬೆಳೆಸುವುದು ಹೋಗಲಿ, ಉಳಿಸಲೂ ಸಾಧ್ಯವಾಗಲಿಲ್ಲ. ಗೌಡರು ನಿಧನರಾದ ನಂತರದಲ್ಲೇ ನಡೆದ

ಚುನಾವಣೆಗಳಲ್ಲಿ ಇವರ ಪಕ್ಷ ಎಂದೂ ಗೆಲ್ಲಲಾಗದಿದ್ದಷ್ಟು ಸ್ಥಾನಗಳನ್ನು ಗೆದ್ದು, ವಿಧಾನಸಭೆಯಲ್ಲಿ ಗೌಡರಿಂದ ಕಲಿತ ಎಲ್ಲ ಶಾಸನಾತ್ಮಕ ರಾಜಕೀಯ ಪ್ರತಿಭೆಯನ್ನೂ ಪ್ರದರ್ಶಿಸುವ ಮೂಲಕ ಇಡೀ ರಾಜ್ಯದ ಜನರ ಗಮನ ಸೆಳೆಯುಂತಾಗಿದ್ದಾಗ, ಪಕ್ಷ ಒಡೆಯಿತು. ಇದಕ್ಕೆ ತಿಮ್ಮಪ್ಪ ಮತ್ತು ಬಂಗಾರಪ್ಪನವರ ನಡುವಣ ವೈಯುಕ್ತಿಕ ಜಿದ್ದಾಜಿದ್ದಿಯೇ ಕಾರಣವೆಂದು ಹೇಳಲಾಗುತ್ತದೆ. ಅಂದು ಪಕ್ಷದ ನಾಶವನ್ನು ಆರಂಭಿಸಿದ ಈ ವೈಯುಕ್ತಿಕ ಜಿದ್ದಾಜಿದ್ದಿ ಇಂದಿನವರೆಗೂ ಹಲವು ರೂಪಗಳಲ್ಲಿ ಬೆಳೆಯುತ್ತಾ ಬಂದು, ಈ ಇಬ್ಬರು ಪ್ರತಿಭಾವಂತ ಶೂದ್ರ ಜನ ನಾಯಕರ ರಾಜಕೀಯ ಜೀವನವನ್ನೇ–ಬಂಗಾರಪ್ಪನವರ ಈ ಬಾರಿಯ ಸೋಲು 'ಸ್ವಯಂಪ್ರೇರಿತ' ಮತ್ತು 'ಪೂರ್ವ ನಿಯೋಜಿತ' ಎಂದು ಹೇಳಲಾಗುತ್ತಿದ್ದರೂ-ವಿಷಣ್ಣಮಯವಾದ ಅಂತ್ಯಕ್ಕೆ ಒಯ್ದಿದೆ.

ಲೋಹಿಯಾ, ಶೂದ್ರರು ಬೀಜವಾಗಿ ದ್ವಿಜರು–ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ–ಗೊಬ್ಬರವಾಗಿ ಹೊಸ ಭಾರತದ ಬೆಳೆ ಬೆಳೆಯಬೇಕೆಂದು ಆಶಿಸಿದ್ದರು. ಹೀಗೆ ಹಿಂದುಳಿದ ವರ್ಗಗಳ ಚಳುವಳಿ ಎಲ್ಲ ಜಾತಿ-ಜನವರ್ಗಗಳ ಚಳುವಳಿಯಾಗಿ, ಸಮಾಜವಾದಿ ಸಮಾಜವನ್ನು ನಿರ್ಮಿಸುವಲ್ಲಿ ನೆರವಾಗಬೇಕೆಂದು ಬಯಸಿದ್ದರು. ಅದು ಶಿವಮೊಗ್ಗ ಜಿಲ್ಲೆಯ ಮಟ್ಟಕ್ಕೆ ನಿಜವೂ ಆಗಿತ್ತು. ಎಷ್ಟೊಂದು ಜನ ದ್ವಿಜರು ಗೋಪಾಲಗೌಡ ಮತ್ತು ಅವರ ಶೂದ್ರ ಶಿಷ್ಯರ ಮೇಲೆ ಅಭಿಮಾನ ಮತ್ತು ವಿಶ್ವಾಸಗಳನ್ನಿಟ್ಟು, ತಾವು ಹಿಂದೆ ನಿಂತು ಅವರನ್ನು ಬೆಳೆಸಿದರು... ಆದರೆ ಗೋಪಾಲಗೌಡರ ನಂತರ ಅವರ ಈ ಶಿಷ್ಯರು ಅವರು ಬಳುವಳಿಯಾಗಿ ಬಿಟ್ಟುಹೋಗಿದ್ದ ಸಮಾಜವಾದಿ ವಾತಾವರಣದಲ್ಲಿ ಸಮೃದ್ಧವಾಗಿ ಬೆಳೆದು, ಕ್ರಮೇಣ ಸಮಾಜವಾದವನ್ನೇ ಮರೆತರು! ಈ ಬೆಳವಣಿಗೆಯ ಹಿಂದೆ ಎದ್ದು ಕಾಣುವುದು, ಶೂದ್ರ ಜಾತಿಗಳು–ಅವೆಷ್ಟೇ ಕೆಳ ಸ್ತರಕ್ಕೆ ಸೇರಿ ಕಷ್ಟ ಅವಮಾನಗಳನ್ನು ಅನುಭವಿಸಿದ್ದರೂ–ಅಧಿಕಾರ ಮತ್ತು ಸಂಪತ್ತಿನ ಸಂಪರ್ಕಕ್ಕೆ ಬಂದೊಡನೆ ಎಲ್ಲ ಮರೆತು, ವೈಯುಕ್ತಿಕ ಠೇಂಕಾರದ ಊಳಿಗಮಾನ್ಯಶಾಹಿಯಾಗಿ ಪರಿವರ್ತಿತವಾಗುವ ವೈಚಿತ್ರ್ಯ! ನಮ್ಮ ಈ ಸಮಾಜವಾದಿ ನಾಯಕರೂ–ಅಖಿಲ ಭಾರತ ಮಟ್ಟದಲ್ಲಿ, ಕರ್ಪೂರಿ ಠಾಕೂರ್ ಮತು ನಿತೀಶ್ ಕುಮಾರ್ ಎಂಬೆರಡು ಅಪವಾದಗಳನ್ನು ಬಿಟ್ಟು–ಇದರಿಂದ ಹೊರತಾಗಲಿಲ್ಲ. ರಾಜ್ಯದಲ್ಲಿ ಸಮಾಜವಾದಿಗಳ ಮಧ್ಯೆ ಮುಖ್ಯಮಂತ್ರಿಯಾಗಲು ನನ್ನ ಪ್ರಕಾರ ಜೆ.ಎಚ್.ಪಟೇಲರಗಿಂತ ಹಲವು ನೆಲೆಗಳಲ್ಲಿ ಹೆಚ್ಚು ಅರ್ಹರಾಗಿದ್ದ ಕಾಗೋಡು ತಿಮ್ಮಪ್ಪ, ಜಿಲ್ಲಾ ಮಟ್ಟದ ನಾಯಕರಾಗಿಯೇ ಉಳಿದು ಹೀಗೆ ಕರಗಿ ಹೋಗುವಂತಾಗಿರುವುದರ ಹಿಂದಿನ ಕಾರಣ, ಈ ವೈಯುಕ್ತಿಕ ಅಹಂಕಾರ ಮತ್ತು ಠೇಂಕಾರಗಳ ಶೂದ್ರ ರಾಜಕಾರಣವೇ ಆಗಿದೆ.

ಇದು ಸಮಾಜವಾದಿ ಚಳುವಳಿಯ ಜಾತಿ ನೀತಿಯ ಬಗ್ಗೆಯೇ ಇಂದು ಅನೇಕ ಪ್ರಶ್ನೆಗಳನ್ನು ಎತ್ತುತ್ತದೆ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ, ಈ ನೀತಿಯ ವೈಫಲ್ಯದಿಂದಾಗಿಯೇ ಇಂದು ಯಾವುದನ್ನು ಸಮಾಜವಾದಿ ಚಳುವಳಿ ಹಿಂದೂ ಧರ್ಮದ ಸಂಕುಚಿತ ಧಾರೆಯೆಂದು ಕರೆದಿತ್ತೋ ಮತ್ತು ಯಾವ ಅಪಾಯದ ವಿರುದ್ಧ ಎಚ್ಚರಿಕೆಯಾಗಿ

ತನ್ನ ಜಾತಿ ನೀತಿಯನ್ನು ರೂಪಿಸಿತ್ತೋ ಅದು; ದ್ವಿಜರೇ ಬೀಜವಾಗಿ, ಶೂದ್ರರನ್ನು ಗೊಬ್ಬರವಾಗಿ ಬಳಸಿಕೊಂಡು ರಾಜ್ಯದಲ್ಲಿ ಕೋಮುವಾದಿ ರಾಜಕಾರಣದ ರೂಪದಲ್ಲಿ ಉಗ್ರವಾಗಿ ತಲೆ ಎತ್ತಿದೆ. ಇದರ ಜವಾಬ್ದಾರಿಯನ್ನು ಶಿವಮೊಗ್ಗ ಜಿಲ್ಲೆಯ ಮಟ್ಟಿಗಾದರೂ ಬಂಗಾರಪ್ಪ ಮತ್ತು ತಿಮ್ಮಪ್ಪ ಹೊರಬೇಕಾಗಿದೆ. ಇವರು ರಾಜಕಾರಣಕ್ಕೇ ತಿಲಾಂಜಲಿ ನೀಡುವ ಮುನ್ನ ಈ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಿದೆ.

(೧೨ ಸೆಪ್ಟಂಬರ್, ೨೦೦೮)

■

೧೯. ಜೀವ ಕಾಯುವುದೇತಕೆ?

ಅದು ೧೯೯೫ರ ಫೆಬ್ರುವರಿ. ಬಿಜಾಪುರದ ನವರಸಪುರ ಉತ್ಸವದ ಕವಿಗೋಷ್ಠಿಯಲ್ಲಿ ಭಾಗವಹಿಸಲು ಆಹ್ವಾನಿತಳಾಗಿದ್ದ ನನ್ನ ಹೆಂಡತಿ ಜೊತೆ ನಾನೂ ಹೋಗಿದ್ದೆ. ಕವಿಗೋಷ್ಠಿಯ ನಂತರ ಸ್ನೇಹಿತರೊಂದಿಗೆ ಬಿಜಾಪುರ ನೋಡಿ, ಮಾರನೆಯ ದಿನ ಐಹೊಳೆ-ಪಟ್ಟದಕಲ್ಲು-ಕೂಡಲ ಸಂಗಮ-ಬಾದಾಮಿಗೆ ಹೋದೆವು. ಅಲ್ಲಿ ನೋಡಿದ್ದೆಲ್ಲ ಆದ ಮೇಲೆ ಬಾದಾಮಿಯಿಂದ ಹುಬ್ಬಳ್ಳಿಗೆ ಬಂದು, ಅಲ್ಲಿಂದ ಆಗ ನಾವಿದ್ದ ಮಡಿಕೇರಿಗೆ ಹೋಗುವ ಯೋಚನೆ ನಮ್ಮದಾಗಿತ್ತು. ಆದರೆ ಬಾದಾಮಿಯಿಂದ ನಾರಾಯಣಪುರ ಅಣೆಕಟ್ಟೆ ನೋಡಲು ಹೋದ ನನಗೆ, ಏಕೋ ಏನೋ ಬಾದಾಮಿಗೆ ಹಿಂದಿರುಗಲು ಮನಸ್ಸಾಗದೆ, ನಾರಾಯಣಪುರದ ಬಳಿ ಬಂದ ಬೆಂಗಳೂರು ಬಸ್ ಹತ್ತಲು ನಿರ್ಧರಿಸಿದೆ. ನನ್ನ ಆಶ್ಚರ್ಯಕ್ಕೆ ನನ್ನ ಹೆಂಡತಿಯೂ 'ಹೂಂ' ಎಂದಳು. ಅದೃಷ್ಟವಶಾತ್ ನಮ್ಮಿಬ್ಬರಿಗೂ ಸೀಟ್ ಸಿಕ್ಕಿ, ಮಾರನೆಯ ಬೆಳಿಗ್ಗೆ ಬೆಂಗಳೂರು ತಲುಪಿದೆವು.

ಆಗ ನಮ್ಮ ತಂದೆಗೆ ೮೫ ವರ್ಷ ವಯಸ್ಸು. ಬಹಳ ವರ್ಷಗಳ ಕಾಲ ರಕ್ತದೊತ್ತಡಕ್ಕೆ ಸಿಕ್ಕಿದ ಕಾರಣದಿಂದಾಗಿ ಕಣ್ಣಿಗೆ ಮಂಜು ಮುಸುಕಿ ಹಣ್ಣಾಗಿದ್ದರು. ಒಂದೆರಡು ವರ್ಷಗಳಿಂದ ನಾನು ಭೇಟಿಯಾದಾಗಲೆಲ್ಲ, 'ಇನ್ನೇನು ಎಲ್ಲ ಮುಗಿಯುತ್ತಾ ಬಂತಪ್ಪಾ!' ಎನ್ನುತ್ತಿದ್ದರು. ಆಗ ನನ್ನ ಕಣ್ಣಲ್ಲಿ ನೀರಾಡತೊಡಗಿ, ಹಾಗೆ ಮಾತಾಡಬಾರದು ಎಂದು ಅವರನ್ನು ಕೇಳಿಕೊಳ್ಳುತ್ತಿದ್ದೆ. ಆದರೆ ಅವರು ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳದಂತೆ ಯಾವುದಕ್ಕೋ ಸಿದ್ಧವಾಗುತ್ತಿದ್ದವರಂತೆ ಮೌನವಾಗಿಬಿಡುತ್ತಿದ್ದರು. ಅಂದು ಇದ್ದಕ್ಕಿದ್ದಂತೆ ಬೆಂಗಳೂರಿಗೆ ಬಂದು, ನನ್ನಣ್ಣನ ಮನೆಯಲ್ಲಿದ್ದ ಅವರನ್ನು ಬೆಳ್ಳಂಬೆಳಿಗ್ಗೆ 'ಏನಣ್ಣಾ ಚೆನ್ನಾಗಿದ್ದೀರಾ?' ಎಂದು ಔಪಚಾರಿಕವಾಗಿ ಮಾತನಾಡಿಸಿದಾಗ, ಎಂದಿನಂತೆ ಧ್ವನಿಯ ಮೇಲೆ ಗುರುತಿಸುತ್ತಾ, 'ಏನು ನಾಗಭೂಷಣನಾ?' ಎಂದು ಮಲಗಿದ್ದವರು ಎದ್ದು ಕೂತರು. ನಾನು ಅವರ ಬಳಿ ಹೋಗಿ ಅವರ ಹಾಸಿಗೆಯ ಮೇಲೆ ಕೂತೆ. ಅವರು ನನ್ನನ್ನು ಹೊಸದಾಗಿ ಮುಟ್ಟುವಂತೆ ಮುಟ್ಟಿದರು. 'ಏನು ಇದ್ದಕ್ಕಿದ್ದಂತೆ ಬಂದೆ?' ಎಂದರು. ನಾನು, 'ಯಾಕೋ ಬರಬೇಕಿನಿಸಿತು, ಬಂದೆ' ಎಂದು ನನ್ನ ಪ್ರಯಾಣದ ವಿವರ ತಿಳಿಸಿದೆ. 'ಒಳ್ಳೆದಪ್ಪಾ, ನಿನಗೂ ನಿನ್ನ ಹೆಂಡತಿಗೂ ಒಳ್ಳೇದಾಗಲಿ' ಎಂದು ಆಶೀರ್ವದಿಸಿದರು. ನಂತರ ನಾನು ನನ್ನ ತಾಯಿಯನ್ನು ಮಾತನಾಡಿಸಲು ಹೋದೆ. ಅವರು ನನ್ನ ಹೆಂಡತಿಯೊಂದಿಗೆ ಮಾತಿಗೆ ತೊಡಗಿದರು.

ಅಂದು ಇಡೀ ದಿನ ಅವರ ಜೊತೆಗಿದ್ದು, ಅವರ ಆಶೀರ್ವಾದ ಪಡೆದು ರಾತ್ರಿ ಮಡಿಕೇರಿಗೆ ಹೊರಟೆ. ಮಾರನೆಯ ಬೆಳಿಗ್ಗೆ ಮಡಿಕೇರಿ ತಲುಪುವ ಹೊತ್ತಿಗೆ ಸುದ್ದಿ ಬಂತು... ನನ್ನ ತಂದೆ ಇನ್ನಿಲ್ಲವೆಂದು...

ನಾರಾಯಣಪುರದಿಂದ ಇದ್ದಕ್ಕಿದ್ದಂತೆ ನಮ್ಮನ್ನು ಬೆಂಗಳೂರಿಗೆ ಎಳೆ ತಂದ ಶಕ್ತಿ ಯಾವುದು?

*

೧೯೯೯ರ ಜೂನ್. ಆಗ ಚಿತ್ರದುರ್ಗದಲ್ಲಿದ್ದೆವು. ಒಂದು ಬೆಳಿಗ್ಗೆ ನನ್ನಣ್ಣನಿಂದ ಫೋನ್ ಬಂತು. ನಿಮ್ಮ ತಾಯಿ ನಿನ್ನನ್ನು ತುರ್ತಾಗಿ ನೋಡಬೇಕಂತೆ ಎಂದು. ಅಷ್ಟೇನೂ ಅನಾರೋಗ್ಯದಲ್ಲಿಲ್ಲದ ನಮ್ಮ ತಾಯಿಗೆ ಇದ್ದಕ್ಕಿದ್ದಂತೆ ಏನಾಯಿತೆಂದು, ನಾನು ನನ್ನ ಹೆಂಡತಿ ಗಾಬರಿಯಿಂದ ತಕ್ಷಣ ಬೆಂಗಳೂರಿಗೆ ಹೊರಟೆವು. ಅಂದು ಸಂಜೆಯೇ ನನ್ನ ತಂಗಿಯ ಮನೆಯಲ್ಲಿ ಅವಳ ಗಂಡ ಡಾ|| ಸಿ. ಆರ್. ಚಂದ್ರಶೇಖರ್ ಮತ್ತು ಅವರ ತಾಯಿಯ ಆರೈಕೆಯಲ್ಲಿದ್ದ ನಮ್ಮ ತಾಯಿಯನ್ನು ಕಂಡೆವು. ಅವರು ನಮ್ಮನ್ನು ನೋಡಿ ಸಂತೋಷಪಟ್ಟರಲ್ಲದೆ, ಎಂದಿನಂತೆ ನನ್ನ ಹೆಂಡತಿಯನ್ನು 'ಈ ತುಂಟ ನನ್ಮಗನನ್ನು ಕಟ್ಟಿಕೊಂಡು ಹೆಂಗೆ ಏಗ್ತೀದ್ದೀಯಮ್ಮಾ!' ಎಂದು ಛೇಡಿಸಿದರು! ಅವರು ಡಿಮೆನ್ಷಿಯಾಕ್ಕೆ ಒಳಗಾಗಿದ್ದು, ಸ್ವಲ್ಪ ಮಾತು ಮರೆತವರಂತೆ ಮಾತಾಡುತ್ತಿದ್ದರು. ಅದು ಸ್ವಲ್ಪ ನಮಗೆ ತಮಾಷೆಯಾಗಿಯೂ ಕಾಣುತ್ತಿತ್ತು. ಅವರು ನಾನು ಹೋದಾಗಲೆಲ್ಲ ನಾನು ಕೊಡುವ ಹಣ ಸಾಲದೆಂದು ತಕರಾರು ಮಾಡುವುದು ಒಂದು ರೂಢಿಯೇ ಆಗಿಹೋಗಿತ್ತು. ಆ ಹಣ ಅವರ ಖರ್ಚಿಗಾಗಿ ಅಲ್ಲ. ನಮ್ಮಣ್ಣ ಅವರನ್ನು ಏನೂ ಕೊರತೆ ಇರದಂತೆ ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ. ಆದರೆ, ಅಜ್ಜಿಯಾಗಿ ತನ್ನ ಮೊಮ್ಮಕ್ಕಳಿಗೆ ಏನಾದರೂ ಕೊಡಿಸಿ ಸಂತೋಷಪಡುವ ಆಸೆ ಅವರಿಗೆ. ಜೀವನಪೂರ್ತಿ ಬಡ ಸ್ಕೂಲ್‌ಮಾಸ್ಟರ್ ಹೆಂಡತಿಯಾಗಿ, ಕೈಯಲ್ಲಿ ಮೂರು ಕಾಸೂ ಇಲ್ಲದೆ ಬದುಕಿದ ಹೆಂಗಸದು. ಈಗ ಇಬ್ಬರು ಗಂಡು ಮಕ್ಕಳಿಂದಲೂ ಒಂದಿಷ್ಟು ಹಣ ಪಡೆದು ಮೊಮ್ಮಕ್ಕಳಿಗೆ ಸಣ್ಣ ಪುಟ್ಟ ಚಿನ್ನ, ಬಟ್ಟೆಬರೆ ಎಂದು ಖರ್ಚು ಮಾಡಿ ಸಂತೋಷ ಪಡುತ್ತಿದ್ದರು. ಹಾಗಾಗಿ ಅಂದು ನಾನು ಕೊಟ್ಟ ಹಣವನ್ನು ಕೈಯಲ್ಲೇ ಇರಿಸಿಕೊಂಡು, 'ನನ್ನ ಚಿಕ್ಕಮಗ ನನಗೆ ಇವತ್ತು ಒಂದು ಸಾವಿರ ರೂಪಾಯಿ ಕೊಟ್ಟವನಮ್ಮಾ!' ಎಂದು ನನ್ನ ತಂಗಿಗೆ ಪದೇ ಪದೇ ಹೇಳುತ್ತಾ (ವಾಸ್ತವಾಗಿ ನಾನು ಅಷ್ಟು ಹಣ ಕೊಟ್ಟಿರಲಿಲ್ಲ!) ನಿಧಾನವಾಗಿ ಹಾಗೇ ಮಲಗಿದರು. ನಿದ್ದೆ ಮಾಡಲಿ ಎಂದು, ನಾವು ನಾಳೆ ಬರುವುದಾಗಿ ನನ್ನ ತಂಗಿಗೆ ಹೇಳಿ ನಮ್ಮಣ್ಣನ ಮನೆಗೆ ಆ ರಾತ್ರಿಯೇ ವಾಪಸ್ ಬಂದೆವು.

ಬೆಳಿಗ್ಗೆ ಏಳುವ ಮುನ್ನವೇ ನಮ್ಮ ತಾಯಿ ಇನ್ನಿಲ್ಲ ಎಂಬ ಸುದ್ದಿ ಬಂತು... ನಮ್ಮ ತಾಯಿ ನಮ್ಮನ್ನು ನೋಡಲೆಂದೇ ಅಂದು ಸಂಜೆಯವರೆಗೆ ತಮ್ಮ ಪ್ರಾಣವನ್ನು ಹಿಡಿದಿಟ್ಟುಕೊಂಡಿದ್ದರಾ? ಅದನ್ನು ಅವರಿಗೆ ಸಾಧ್ಯ ಮಾಡಿದ ಶಕ್ತಿ ಯಾವುದು?

*

ಇದೆಲ್ಲ ಬಹಳ ದಿನಗಳ ನಂತರ ಹೀಗೆ ನೆನಪಾಗುತ್ತಿರುವುದಕ್ಕೆ ಕಾರಣ, ಮೊನ್ನೆ ನಮ್ಮ ಮನೆಯಲ್ಲಿ ಒಂದು ತಿಂಗಳಷ್ಟೇ ಇದ್ದು, ತನ್ನ ತುಂಟ ಮತ್ತು ತುಂಬು ಜೀವನೋತ್ಸಾಹದ 'ಆಟಪಾಟ'ಗಳ ಮೂಲಕ ನಮ್ಮನ್ನೆಲ್ಲ ಹಗಲೂ(-ರಾತ್ರಿ) ಆನಂದೋತ್ಸಾಹದಲ್ಲಿ ಮುಳುಗಿಸಿದ್ದ 'ಪುಟಾಣಿ' ಎಂಬ ಪುಟ್ಟ ಬೆಕ್ಕಿನ ಮರಿ ಸಾವಿಗೀಡಾದ ಪ್ರಕರಣ. ಆ ಕಥೆಯನ್ನು ನಿಮಗೆ ವಿವರವಾಗಿ ಹೇಳದೆ ಆ ಪುಟ್ಟ ಬೆಕ್ಕಿನ ನೆನಪು ನನ್ನನ್ನು ಕಾಡುವುದನ್ನು ನಿಲ್ಲಿಸದೇನೋ...

ಈ ಪುಟ್ಟ ಮರಿ ಒಂದು ತಿಂಗಳ ಹಿಂದೆ ಇದ್ದಕ್ಕಿದ್ದಂತೆ ಒಂದು ಬೆಳಿಗ್ಗೆ ನಮ್ಮ ಕಾರ್ ಗ್ಯಾರೇಜಿನಲ್ಲಿ 'ಮ್ಯೀಂ.. ಮ್ಯೀಂ..' ಎಂದು ಕೂಗುತ್ತಾ ಕಾಣಿಸಿಕೊಂಡಿತ್ತು. ಅದು ಇಲ್ಲಿಗೆ ಹೇಗೆ ಬಂದಿತೋ ಅಥವಾ ಯಾರಾದರೂ ತಮ್ಮ ಮನೆಯಲ್ಲಿ ಮರಿಗಳು ಜಾಸ್ತಿಯೆನಿಸಿ ಇಲ್ಲಿ ತಂದುಬಿಟ್ಟರೋ ತಿಳಿಯದು! ಶಿವಮೊಗ್ಗದಲ್ಲಿ ವೀರಶೈವರ ಬೆಕ್ಕಿನ ಕಲ್ಮಠವೆಂಬುದೊಂದಿದೆ. ಆದರೆ ನಿಜವಾದ ಬೆಕ್ಕಿನ ಕಲ್ಮಠ ನಮ್ಮ ಮನೆಯೆಂದು ಯಾವಾಗಲೂ ನಾನು ನನ್ನ ಹೆಂಡತಿಗೆ ಹೇಳುತ್ತಿರುತ್ತೇನೆ. ಏಕೆಂದರೆ, ದಿನದ ಯಾವ ಸಮಯದಲ್ಲಾದರೂ ನಮ್ಮ ಮನೆಯಲ್ಲಿ ಒಂದೆರಡು ಬೆಕ್ಕುಗಳಾದರೂ ಅಲ್ಲಿಂದಿಲ್ಲಿಗೆ ಠಳಾಯಿಸುತ್ತಿರುತ್ತವೆ. ಒಮ್ಮೊಮ್ಮೆ ಐದಾರು ದೊಡ್ಡ ಬೆಕ್ಕುಗಳು ಮತ್ತು ಅವುಗಳ ಪರಿವಾರವೂ ಕಾಣಿಸಿಕೊಳ್ಳುವುದುಂಟು! ನನ್ನ ಹೆಂಡತಿ ಪ್ರಕಾರ, ಪ್ರತಿ ಪ್ರಾಣಿಗೂ ಊರಿನಲ್ಲಿ ಸಂಚಾರ ಮಾರ್ಗವೆಂಬುದೊಂದಿರುತ್ತದಂತೆ-ಕೋತಿಗಳಿಗೆ, ಹಾವುಗಳಿಗೆ, ಬೆಕ್ಕುಗಳಿಗೆ ಇತ್ಯಾದಿಯಾಗಿ. ಹಾಗೆ ನಮ್ಮ ಮನೆ ಬೆಕ್ಕಿನ ಸಂಚಾರ ಮಾರ್ಗದಲ್ಲಿರುವುದರಿಂದ ನಮ್ಮ ಮನೆಗೆ ಬೆಕ್ಕುಗಳು ಬರುವುದು ಹೆಚ್ಚೆಂದು ನೆಪ ಹೂಡಿ, ಬರುವ ಬೆಕ್ಕುಗಳಿಗೆಲ್ಲ ಅವಳು ಹಾಲು ಸರಬರಾಜು ಮಾಡುತ್ತಾಳೆ. ಅಷ್ಟೇ ಅಲ್ಲ, ನಂದಿನಿ ಹಾಲಿಗೆ ವಾಸನೆ ಇರುವುದಿಲ್ಲವಾದ್ದರಿಂದ, ಕೆಲವು ಬೆಕ್ಕುಗಳು ಹಾಲು ಕುಡಿಯದೇ ಹೋಗುತ್ತವೆ ಎಂಬ ದುಃಖ ಬೇರೆ ಅವಳಿಗೆ! ಆದರೆ ವಾಸ್ತವ ಸಂಗತಿ ಎಂದರೆ, ನಾವು ವಾಸಿಸುವ ವಿನೋಬ ನಗರ ಬೆಕ್ಕುಗಳ ನಗರವೇ ಆಗಿದ್ದು, ಅವುಗಳ ಕಾಟ ತಡೆಯಲಾರದೆ ಎಲ್ಲ ಮನೆಯವರೂ ಯಾವಾಗಲೂ ಕಿಟಕಿ ಬಾಗಿಲುಗಳನ್ನು ಹಾಕಿಕೊಂಡಿರುತ್ತಾರೆ. ಆದರೆ ಗಾಳಿ ಬೆಳಕು ಬರಲೆಂದು ನಾವು ತೆರೆದಿಟ್ಟಿರುತ್ತೇವಾದ್ದರಿಂದ, ಇದನ್ನು ದುರುಪಯೋಗ ಪಡಿಸಿಕೊಂಡು ಈ ಹಾಳು ಬೆಕ್ಕುಗಳು ಬಂದು ನಮ್ಮ ಮನೆಯಲ್ಲಿ ಬಿಡಾರ ಹೂಡುತ್ತವೆ!

ಅದೇನೇ ಇರಲಿ, ಇತ್ತೀಚೆಗೆ ನಮ್ಮ ಮನೆಯಲ್ಲಿಯೇ ಹುಟ್ಟಿ ಬೆಳೆದು ವಾಸ ಮಾಡುತ್ತಿದ್ದ ಮೂರು ಬೆಕ್ಕುಗಳಲ್ಲಿ ಒಂದು ನಾಯಿ ಪಾಲಾಗಿ, ಇನ್ನೆರಡು ನಾವು ಪ್ರವಾಸ ಹೋಗಿದ್ದಾಗ ಕಾಣೆಯಾಗಿದ್ದರಿಂದಾಗಿ; ಮನೆಯಲ್ಲಿ ಬೆಕ್ಕೊಂದಿರಲಿ–ಹಾವು ಹುಳ ಸುಳಿಯುವುದಿಲ್ಲ (ಹಾಗೆ ನೋಡಿದರೆ ನಮ್ಮ ಮನೆ ಹಾವುಗಳ ಸಂಚಾರ ಮಾರ್ಗದಲ್ಲಿಯೂ ಇದ್ದು; ಅವು ಏಕೋ ನಮಗೆ ದರ್ಶನ ನೀಡದೆ, ನಮ್ಮ ಅಕ್ಕಪಕ್ಕದ ಮನೆಯವರಿಗೆ ದರ್ಶನ ನೀಡಿವೆ!) ಎಂದು ನನ್ನ ಹೆಂಡತಿ ಆ ಪುಟ್ಟ ಮರಿಗೆ ಒಂದು ಪುಟ್ಟ ಬಟ್ಟಲು ಹಾಲು ಇಡಲಾರಂಭಿಸಿದಳು.

ಅದು ಹಾಲು ಕುಡಿದು ಒಂದು ವಾರ ಭಯದಿಂದ ನಮ್ಮಿಂದ ತಪ್ಪಿಸಿಕೊಂಡೇ ಓಡಾಡುತ್ತಿತ್ತಾದರೂ, ಒಂದು ಮಧ್ಯಾಹ್ನ ಇದ್ದಕ್ಕಿದ್ದಂತೆ ಊಟದ ಮನೆಯಲ್ಲಿ ನಾನೇನೋ ಬರೆಯುತ್ತಾ ಕೂತಿದ್ದಾಗ, ಗ್ಯಾರೇಜ್ ಕಿಟಕಿಯಿಂದ ಊಟದ ಮನೆಗೆ ಮೂತಿ ತೂರಿಸುತ್ತಾ 'ಮ್ಮೀಂ..' ಎಂದಿತು. ನನಗೆ ಅದರ ಧ್ವನಿಯಿಂದಲೇ ಇದ್ದಕ್ಕಿದ್ದಂತೆ ಮುದ್ದು ಬಂದಂತಾಗಿ ಸುಮ್ಮನೆ, 'ಓ! ಬಾರೋ ಪುಟಾಣಿ' ಎಂದೆ. ಅದು ಅದರ ಜನ್ಮಜನ್ಮಾಂತರಗಳ ಹೆಸರೋ ಎಂಬಂತೆ ನನ್ನ ಕರೆಗೆ ಓಗೊಟ್ಟು, ಮೆಲ್ಲಗೆ ಒಳಕ್ಕೆ ಒಂದು ಹೆಜ್ಜೆ ಇಟ್ಟಿತು. ನಂತರ ನನ್ನ ಮೌನವನ್ನು ಸಮ್ಮತಿಯೆಂದೇ ಬಗೆದು, ಊಟದ ಮೇಜಿನ ಮೇಲೆ ಪುಟಕ್ಕನೆ ಹಾರಿ ಕೂತು ನನ್ನನ್ನೇ ನೋಡತೊಡಗಿತು. 'ಎಲಾ ಇದರ!' ಎಂದು ನಾನೂ ಅದನ್ನು ದಿಟ್ಟಿಸಿ ನೋಡತೊಡಗಿದೆ. ಅಷ್ಟು ಹತ್ತಿರದಿಂದ ನಾನು ಈವರೆಗೆ ಅದನ್ನು ನೋಡಿರಲಿಲ್ಲ. ಅದರ ಪುಟ್ಟ ಗಾತ್ರ ಮುದ್ದಾಗಿತ್ತಾದರೂ, ಅದರ ಚಿರತೆಯಂತಹ ಕ್ರೂರ ಮುಖ, ಕಂದು ಹಳದಿ ಕಣ್ಣುಗಳು, 'ಮ್ಮೀಂ..' ಎಂದಾಗ ತೋಳದಂತೆ ತೆರೆದುಕೊಳ್ಳುವ ಪುಟ್ಟ ಬಾಯಿ ನನ್ನಲ್ಲಿ ಜಿಗುಪ್ಸೆಯನ್ನೇ ಹುಟ್ಟಿಸಿತು. ಕಾಣೆಯಾದ ನಮ್ಮ ಒಂದು ಬೆಕ್ಕಿನ ಅಪೂರ್ವ ಸೌಂದರ್ಯದ ಮುಂದೆ (ಅದು ಗಂಡು ಬೆಕ್ಕಾಗಿದ್ದರೂ ಅದಕ್ಕೆ ಐಶ್ವರ್ಯ ರೈ ಎಂದು ಹೆಸರಿಟ್ಟಿದ್ದೆವು!) ಇದು ಒಳ್ಳೆ ದೃಷ್ಟಿ ಬೊಟ್ಟಿನಂತಿತ್ತು!

ಹಾಗೆಂದು ನಾನು ಯೋಚಿಸುತ್ತಿರುವಾಗಲೇ, ಅದು ಚಂಗನೆ ಹಾರಿ ನನ್ನ ತೊಡೆಯ ಮೇಲೆ ಬಂದು ಕೂತಿತು. ನಾನು 'ಅಯ್ಯೋ' ಎಂದು ನೋವಿನಿಂದ ಕಿರುಚಿದ್ದನ್ನು ಕೇಳಿ, ನನ್ನ ಹೆಂಡತಿ ಗಾಬರಿಯಿಂದ ಓಡಿ ಬಂದಳು. ಪುಟಾಣಿ ನನ್ನ ತೊಡೆಗಳ ಮೇಲೆ ನಿಯಂತ್ರಣ ಸಾಧಿಸಲು ತನ್ನ ಉಗುರುಗಳನ್ನು ಊರಿತ್ತು! ಅಂದು ನಾನು ತೊಟ್ಟಿದ್ದ ದಪ್ಪ ಜೀನ್ಸ್ ಪ್ಯಾಂಟ್ ನನ್ನನ್ನು ಅಂದು ಚೂಪಾದ ಗಾಯಗಳಿಂದ ರಕ್ಷಿಸಿತ್ತು. ಹಾಲು ನೀಡುವಾಗ ಒಂದೆರಡು ಬಾರಿ ಅದರ ತಲೆ ಸವರಿ ಪರಿಚಯ ಮಾಡಿಕೊಂಡಿದ್ದ ನನ್ನ ಹೆಂಡತಿ, ನಾನು ಬೆಕ್ಕಿಗೆ ಹೆದರುವವನು ಎಂಬಂತೆ ನನ್ನನ್ನು ಛೇಡಿಸುತ್ತಾ ಅದನ್ನು ಎತ್ತಿಕೊಳ್ಳಲು ಹೋದರೆ, ಅದು ಬಿಡುತ್ತಲೇ ಇಲ್ಲ! ತನ್ನ ಉಗುರುಗಳಿಂದ ನನ್ನ ಪ್ಯಾಂಟನ್ನು ಹಿಡಿದುಬಿಟ್ಟಿದೆ.... ಆ ಕ್ಷಣದಲ್ಲೇ–ಆ ಬಂಧನದಲ್ಲೇ–ನಮ್ಮಿಬ್ಬರ ನಡುವೆ ಒಂದು ವಿಶಿಷ್ಟ ಸಂಬಂಧ ಸ್ಥಾಪಿತ ವಾಯಿತೆಂದು ಕಾಣುತ್ತದೆ.

ಅದು ಹಾಗೆ ನನ್ನನ್ನು ಹಚ್ಚಿಕೊಂಡ ಬೆಕ್ಕು, ನನ್ನನ್ನು ಬಿಡಲೇ ಇಲ್ಲ. ನಾನು ಮನೆಯಲ್ಲಿ ಓದಲು, ಬರೆಯಲು, ಟಿವಿ ನೋಡಲು, ಉಣ್ಣಲು ಕೂರುವುದೇ ಕಷ್ಟವಾಯಿತು. ಕೂತೊಡನೆ, ಎಲ್ಲಿರುತ್ತಿತ್ತೋ, ಚಂಗನೆ ಹಾರಿ ನನ್ನ ಮಡಿಲಲ್ಲಿ ಆಸೀನವಾಗಿಬಿಡುತ್ತಿತ್ತು. ಆದರೆ ಕ್ರಮೇಣ ತನ್ನ ಉಗುರುಗಳನ್ನು ಊರುವುದನ್ನು ಕಡಿಮೆ ಮಾಡುತ್ತಾ ಹೋಯಿತು. ನಾನು ಅದರಿಂದ ತಪ್ಪಿಸಿಕೊಳ್ಳಲು ನನ್ನ ಕೂರುವ ಭಂಗಿಯನ್ನು ಬದಲಾಯಿಸುತ್ತಾ ಹೋದಂತೆ, ಅದು ನನ್ನ ಸುತ್ತಾ ಸ್ಥಳ ಪರೀಕ್ಷೆ ಮಾಡುತ್ತಾ ನನ್ನ ಮಡಿಲು ಸೇರಲು, ಹಾರುವ ಹೊಸ ಹೊಸ ಆಕಾಶ ಮಾರ್ಗಗಳನ್ನು ಹುಡುಕುತ್ತಿತ್ತು. ನಾನು ಆ ಕಡೆ ಈ ಕಡೆ ಮಿಸುಕಿದಾಗ

ಅರೆ ಕ್ಷಣದಲ್ಲಿ ನನ್ನ ತೊಡೆ ಏರಿ ಕೂರುತ್ತಿತ್ತು! ಕೆಲಸಗಳ ಒತ್ತಡದಲ್ಲಿ, ಇದೊಳ್ಳೆ ಶನಿಯ ಕಾಟವಾಯ್ತಲ್ಲಾ ಎಂದು ನಾನು 'ಛೀ.. ಇಳಿ..ಇಳಿ..' ಎಂದು ಎಷ್ಟೇ ಹೆದರಿಸಿದರೂ, ಅದು ಮತ್ತಷ್ಟು ಪಟ್ಟಾಗಿ ಕೂರುತ್ತಿತ್ತೇ ಹೊರತು, ಇಳಿಯುವ ಮನಸ್ಸೇ ಮಾಡುತ್ತಿರಲಿಲ್ಲ! ನನ್ನ ಹೆಂಡತಿ ಅಥವಾ ನಮ್ಮ ಮನೆಯ ಹುಡುಗಿಯರಾದ ಲಕ್ಷ್ಮಿ ಅಥವಾ ಮಂಜುಳಾ ಅದನ್ನು ಬಲವಂತವಾಗಿ ಎತ್ತಿಕೊಂಡು ಹೋಗಬೇಕಾಗುತ್ತಿತ್ತು.

ಆದರೆ ಒಂದೆರಡು ದಿನಗಳಲ್ಲಿ ಅದಕ್ಕೆ ಮನೆಯೆಲ್ಲ ಪರಿಚಯವಾದಂತಾಗಿ; ಮನೆಯಲ್ಲಿದ್ದುದನ್ನೆಲ್ಲ ಮೂಸಿ ಮೂಸಿ, ಇನ್ನು ಇದು ತನ್ನದೇ ಮನೆಯಂತೆ ಕೋಣೆಗಳಲ್ಲೆಲ್ಲಾ ಓಡಾಡತೊಡಗಿತು. ಸಿಕ್ಕಿ ಸಿಕ್ಕಿದ್ದನ್ನೆಲ್ಲ ಕಚ್ಚಿ ಎಳೆದಾಡತೊಡಗಿತು. ಇಳಿ ಬಿದ್ದಿದ್ದ ಬಾಗಿಲ ತೆರೆ, ಕಿಟಕಿ ತೆರೆ, ಕಪ್ಪೆ ಚಿಪ್ಪಿನ ತೂಗುಗಳನ್ನೆಲ್ಲ ಹಿಡಿದು ಉಯ್ಯಾಲೆಯಾಡತೊಡಗಿತು. ಮನೆಗೆ ಬರುವ ಹಿರಿಯ ಬೆಕ್ಕುಗಳ ಬಾಲಗಳನ್ನೆಳೆದು ಅವುಗಳಿಂದ ಸಣ್ಣಪುಟ್ಟ ದಾಳಿಗಳನ್ನೂ ಧೈರ್ಯದಿಂದ ಎದುರಿಸಿತು! ಅಷ್ಟೇ ಅಲ್ಲ, ಅವುಗಳೊಂದಿಗೆ ಯಾವ ಭಯವೂ ಇಲ್ಲದೆ ಸಮಾನವಾಗಿ ವರ್ತಿಸುತ್ತಾ, ಅವುಗಳ ಜೊತೆಯಲ್ಲೇ ಹಾಲು ಕುಡಿಯುವ ಮತ್ತು ಮಲಗಲು ಜಾಗ ಮಾಡಿಕೊಳ್ಳುವ ದಿಟ್ಟತನ ತೋರಿಸಿತು. ಒಂದು ಪುಟ್ಟ ಚೆಂಡನ್ನು ತಂದುಕೊಟ್ಟೆವು. ಸುಸ್ತಾಗುವವರೆಗೆ ಅದರೊಡನೆ ಆಡಿತು. ಕೆಲವೇ ದಿನಗಳಲ್ಲಿ ಒಂದು ಇಲಿಯನ್ನು ಹಿಡಿದು ತಂದು ಆಟವಾಡಿಸುತ್ತಲೇ ತಿಂದು ಮುಗಿಸಿತು. ಮನೆಯೊಳಗೆ ಒಂದು ಹುಳು ಹುಪ್ಪಟೆ ಇಲ್ಲದಂತೆ ಭಕ್ಷಿಸಿ, ನಾವು ಇಡುತ್ತಿದ್ದ ಹಾಲನ್ನು ಸುಮ್ಮನೆ ಒಮ್ಮೆ ನೆಕ್ಕಿ ನಿರ್ಲಕ್ಷದಿಂದ ನೋಡತೊಡಗಿತು!

ನಾವು ಎಷ್ಟೋ ಬೆಕ್ಕು ಸಾಕಿದ್ದೆವು. ಆದರೆ ಈ ವಯಸ್ಸಿನ ಈ ರೀತಿಯ ಪ್ರಳಯಾಂತಕ ಬೆಕ್ಕನ್ನು ನಾವು ನೋಡಿರಲಿಲ್ಲ. ನನ್ನ ಹೆಂಡತಿ, 'ಇದಾವುದೋ ದರಿದ್ರ ಕಾಡು ಬೆಕ್ಕು ಕಣ್ರೀ' ಎನ್ನುತ್ತಲೇ ಅದನ್ನು ಮುದ್ದಿಸುತ್ತಿದ್ದಳು. ಅದರ civil mannersಗಳನ್ನು ನೋಡಿಯೇ ಸಂತೋಷ ಪಡಬೇಕು. ನಿಸರ್ಗ ಕರೆಗಳಿಗೆಲ್ಲ ಅದು ಮನೆಯ ಹೊರಗೇ ಹೋಗುತ್ತಿತ್ತಾದರೂ, ಮನೆಯ ಬಾಗಿಲು ಕಿಟಕಿಗಳನ್ನು ಮುಚ್ಚಿರುವ ಸಮಯದಲ್ಲಿ ಬಚ್ಚಲು ಮನೆಯ ಜಾಲರಿಯಲ್ಲಿ ಕೂತು ಕೆಲಸ ಮುಗಿಸಿ ಬರುತ್ತಿತ್ತು! ಇದನ್ನೆಲ್ಲ ಯಾರು ಹೇಳಿಕೊಟ್ಟರು ಇದಕ್ಕೆ? Dogs are humble and begging whereas cats are stylish and selfish ಎಂಬೊಂದು ಮಾತಿದೆ. ಆದರೆ ನಮ್ಮ ಪುಟಾಣಿ ಮಾತ್ರ ಈ ಮಾತಿಗೆ ಅಪವಾದವೆಂಬಂತೆ ಹೊರನೋಟಕ್ಕೆ ಒಡ್ಡ; ಆದರೆ ಅಷ್ಟೇ ಪ್ರೀತಿಪಾತ್ರ. ನಾನು ರಾತ್ರಿ ಎಲ್ಲ ಮಲಗಿದ ಮೇಲೆ ಏನಾದರೂ ಓದುತ್ತಾ ಅಥವಾ ಬರೆಯುತ್ತಾ ಕೂತರೆ, ಅದು ಹಾರಿ ನನ್ನ ತೊಡೆಯ ಮೇಲೆ ಕೂತು ನಿದ್ರಿಸುತ್ತಿತ್ತು. ನನಗೆ ತೊಂದರೆ ಎನಿಸಿ ಬಲವಂತವಾಗಿ ಇಳಿಸಿದರೆ, ನನ್ನ ಕುರ್ಚಿಯ ಸುತ್ತಲೇ ತನ್ನ ಪುಟ್ಟ ಕಾಲುಗಳಲ್ಲಿ ಪುಟಪುಟನೆ ಓಡಾಡುತ್ತಾ, ಗೋಡೆಯ ಮೇಲೆ ಕಾಣುವ ಕ್ರಿಮಿ ಕೀಟಗಳನ್ನು ಹಿಡಿಯಲು ಹಾರುವ ಹರಸಾಹಸ ಮಾಡುತ್ತಾ, ಆಗದಿದ್ದಾಗ ನನ್ನ ಕಾಲ ಬಳಿ ಬಂದು ಸಹಾಯಕ್ಕಾಗಿ 'ಮ್ಯಿಂ.. ಮ್ಯಿಂ..' ಎಂದು ಕೂಗುತ್ತಾ, ನಾನು ನಿದ್ರಿಸಲು

ಹೋಗುವವರೆಗೂ ನನ್ನ ಬಳಿಯೇ ಸುಳಿದಾಡುತ್ತಿರುತ್ತಿತ್ತು. ನಾನು ನಮ್ಮ ಕೋಣೆಯ ಬಾಗಿಲು ಮುಚ್ಚುತ್ತಿದ್ದಂತೆ ತನ್ನ ಸ್ವಸ್ಥಾನಕ್ಕೆ ಹೋಗಿ ಮಲಗುತ್ತಿತ್ತು. ಪ್ರತಿದಿನ ನಾನು ಎದ್ದ ಕೂಡಲೇ ಕೇಳುತ್ತಿದ್ದ ಮೊದಲ ಪ್ರಶ್ನೆ: 'ಪುಟಾಣಿ ಎಲ್ಲಿ?'. ಅದು ಎಲ್ಲಿಂದಲೋ ತಕ್ಷಣ ಪ್ರತ್ಯಕ್ಷವಾಗಿ 'ಪ್ಮೀಂ..' ಎಂದು ತನ್ನ ರಣಕಹಳೆ ಮೊಳಗಿಸಿ, ನನ್ನ ಹಾಸಿಗೆಯ ಮೇಲಕ್ಕೆ ಚಂಗನೆ ಹಾರಿ ಬರುತ್ತಿತ್ತು. ಇದನ್ನು ಒಂದೆರಡು ತಿಂಗಳ ಮರಿ ಎಂದು ಹೇಗೆ ಹೇಳುವುದು? ಅದಕ್ಕೆ 'ಪ್ರಚಂಡ ಪುಟಾಣಿ' ಎಂದು ಬಿರುದು ನೀಡಿದೆವು!

ಕೆಲವೇ ದಿನಗಳಲ್ಲಿ ಈ ಪ್ರಚಂಡ ಪುಟಾಣಿಯ ಕಾಲುಗಳು ಗಟ್ಟಿಯಾಗಿ, ಅದಕ್ಕೆ ಲೋಕಸಂಚಾರದ ಆಸೆ ಹುಟ್ಟಿತು. ನಮ್ಮ ಮನೆಯ ಸಸ್ಯಾಹಾರ ಬೇಸರ ಬಂದು, ಅಕ್ಕಪಕ್ಕದ ಮನೆಗಳಲ್ಲಿ ಮೀನು ಹುರಿಯುವ ವಾಸನೆಗೆ ಬಲಿ ಬಿದ್ದಿತು. ಇದರಿಂದಾಗಿ ದಿನದ ಒಂದೆರಡು ಗಂಟೆಗಳ ಕಾಲ ಮನೆಯಿಂದ ಕಾಣೆಯಾಗತೊಡಗಿತು. ನಾವು ಕೂಡಾ ಅದು ತನಗೆ ಪ್ರಿಯವಾದ ಆಹಾರವನ್ನು ತಿನ್ನುವ ಹಕ್ಕನ್ನು ಚಲಾಯಿಸಿಕೊಳ್ಳಲಿ ಮತ್ತು ಇದು ನಾವು ನಮ್ಮ ಕೆಲಸಗಳನ್ನು ಸ್ವಲ್ಪ ನಿರಾಳವಾಗಿ ಮಾಡಿಕೊಳ್ಳಲು ಅದು ನಮಗೆ ದಯಪಾಲಿಸಿರುವ 'ವಿಶ್ರಾಂತಿ'ಯ ಕಾಲವೆಂದು ಪರಿಗಣಿಸಿ, ಸುಮ್ಮನಾದೆವು. ಹೀಗಿದ್ದ ಒಂದು ರಾತ್ರಿ, ಮನೆಯ ಹೊರಗಿಂದ ಬೆಕ್ಕಿನ ಚೀತ್ಕಾರ ಕೇಳಿದಂತಾಗಿ ಮನೆಯವರೆಲ್ಲ ಹೊರಗೆ ಧಾವಿಸಿ ನೋಡಿದರೆ, ನಮ್ಮ ಪುಟಾಣಿಯನ್ನು ಪಕ್ಕದ ಮನೆಯ ನಾಯಿ ಜಿಮ್ಮಿ ಹಿಡಿದೆಸಿದಿತ್ತು. ಆ ರಭಸಕ್ಕೆ ಅದು ಮನೆ ಮುಂದಿನ ಮುಚ್ಚಿದ ಚರಂಡಿಯೊಳಗೆ ಹೋಗಿ ಬಿದ್ದಿತ್ತು. ಬ್ಯಾಟರಿ ಹಾಕಿ ಎಷ್ಟು ಕರೆದರೂ ಬರದೆ, ಬಹಳ ಹೊತ್ತು ಅಲ್ಲೇ ನಡುಗುತ್ತಾ ಕೂತಿತ್ತು. ಕರೆದು ಕರೆದು ಬೇಸರವಾಗಿ ನಾವು ಮನೆಯಲ್ಲಿ ಅದಕ್ಕಾಗಿ ಕಾಯುತ್ತಾ ಕೂತೆವು. ಸ್ವಲ್ಪ ಸಮಯದಲ್ಲಿ ಅದು ಬಂದೇ ಬಂತು, ಆದರೆ ರಕ್ತಸಿಕ್ತವಾಗಿ.... ನನಗೆ ಮೈ ಜುಮ್ಮೆಂದಿತು... ಗಾಬರಿಯಾದ ನನ್ನ ಹೆಂಡತಿ ಮತ್ತು ಲಕ್ಷ್ಮಿ ಹಾಗೂ ಮಂಜುಳಾ ಕೂಡಲೇ ಅದರ ಬಾಲ, ಕಾಲು, ಹೊಟ್ಟೆಗಳ ಮೇಲಿದ್ದ ರಕ್ತ ಒರೆಸಿ, ಗಾಯಗಳಾಗಿದ್ದ ಕಡೆ ಅರಿಶಿನ ಹಚ್ಚಿದರು. ಅದು ಎಲ್ಲ ಉಪಚಾರವನ್ನು ಸದ್ದಿಲ್ಲದೆ ಮಾಡಿಸಿಕೊಂಡಿತು. ಪಶುವೈದ್ಯರೊಬ್ಬರ ಸಲಹೆಯಂತೆ ಹಾಲಿಗೆ ಮನೆಯಲ್ಲಿದ್ದ ನೋವು ನಿವಾರಕ ಮಾತ್ರೆಯೊಂದನ್ನು ಬೆರೆಸಿ ಕುಡಿಸಿದೆವು. ಅದು ಕುಡಿದು ನಿದ್ದೆಗೆ ಸಂದಿತು.

ಮಾರನೆಯ ದಿನ ನೋಡಿದರೆ, ನಮ್ಮ ಪುಟಾಣಿ ಏನೂ ಆಗದಂತೆ ಬಾತುಕೊಂಡ ಹೊಟ್ಟೆ ಮತ್ತು ಕುಂಟು ಕಾಲುಗಳಲ್ಲೇ ಮನೆ ತುಂಬಾ ಓಡಾಡಲಾರಂಭಿಸಿತ್ತು! ಒಂದೆರಡು ಬಾರಿ ಮನೆಯ ಬಾಗಿಲ ಬಳಿ ಹೋಗಿ ಸಮೀಕ್ಷೆಯನ್ನೂ ಮಾಡಿಕೊಂಡು ಬಂತು. ನಂತರ ಹಿತ್ತಲ ಕಡೆ ಓಡಿ ಅಲ್ಲಿ ಬಹಳ ದಿನಗಳಿಂದ ಓಡಾಡಿಕೊಂಡಿದ್ದ ಒಂದೆರಡು ಕಪ್ಪೆ ಮರಿಗಳನ್ನು ಒಂದೇ ಸಮನೆ ಹುಡುಕಿ ತಿಂದಿತು. ನಮಗೆ ಗಾಬರಿಯಾಗಿ, ಅದನ್ನು ಹಿಡಿದು ಸುಮ್ಮನೇ ಕೂರಿಸುವುದೇ ಕಷ್ಟವಾಗತೊಡಗಿತು. ನಾವೆಲ್ಲರೂ ಅದನ್ನು ಸರತಿ ಮೇಲೆ ಒಂದೊಂದಷ್ಟು ಸಮಯ ಹೊತ್ತುಕೊಂಡು ಸುಧಾರಿಸಿದೆವು. ಆ ಸಮಯದಲ್ಲಿ ಅದು ಪ್ರದರ್ಶಿಸಿದ ಶಾಂತಿ ಮತ್ತು ಮೌನಗಳನ್ನು ನೋಡಿ ನನಗೆ ಒಳಗೇ ಹೆದರಿಕೆ ಶುರುವಾಯಿತು.

ಅಂದು ಸಂಜೆ ಅದನ್ನು ಮಲಗಿಸಿ ಉಪಚರಿಸುತ್ತಿದ್ದ ನನ್ನ ಹೆಂಡತಿ ಒಮ್ಮೆಗೇ ಅಳಲಾರಂಭಿಸಿದಾಗ, ನನಗೆ ಎದೆಯೇ ಒಡೆದು ಹೋದಂತಾಯಿತು. ಹೋಗಿ ನೋಡಿದರೆ, ಪುಟಾಣಿಯ ಹೊಟ್ಟೆಯ ಗಾಯ ಬಿರಿದು ರಕ್ತ ಸುರಿಯಲಾರಂಭಿಸಿತ್ತು. ಜೊತೆಯಲ್ಲೇ ಮಲಮೂತ್ರಗಳು ಮಿಶ್ರವಾಗಿ ಬರಲಾರಂಭಿಸಿತ್ತು. ಪುಟಾಣಿ ಮಾತ್ರ ಸದ್ದಿಲ್ಲದೆ ಮಲಗಿ, ಎಲ್ಲವನ್ನೂ ಬೆರಗುಗಣ್ಣುಗಳಿಂದ ನೋಡುತ್ತಿತ್ತು. ಒತ್ತಿ ಬರುತ್ತಿದ್ದ ದುಃಖವನ್ನು ತಡೆದುಕೊಂಡು ನನ್ನ ಹೆಂಡತಿ ಮತ್ತು ಹುಡುಗಿಯರು ಎಲ್ಲವನ್ನು ಸ್ವಚ್ಛಗೊಳಿಸಿ, ಮುಂದೇನು ಎಂಬಂತೆ ನನ್ನತ್ತ ನೋಡತೊಡಗಿದರು. ಸ್ವಲ್ಪ ದೂರದಲ್ಲಿದ್ದ ನಾಯಿ-ಬೆಕ್ಕುಗಳ ವೈದ್ಯರ ಹತ್ತಿರ ಹೋಗುವುದೇ ನಮಗೀಗ ಉಳಿದಿದ್ದ ದಾರಿ. ಪುಟಾಣಿಯನ್ನು ಬಟ್ಟೆಯಲ್ಲಿ ಸುತ್ತಿಟ್ಟಕೊಂಡು ತಕ್ಷಣ ವೈದ್ಯರ ಹತ್ತಿರ ಒಯ್ಯಲಾಯಿತು. ವೈದ್ಯರು ಈ ಕಾಡು ಬೆಕ್ಕನ್ನು ಇವರೇಕೆ ಇಷ್ಟೊಂದು ಹಚ್ಚಿಕೊಂಡಿದ್ದಾರೆ ಎಂದು ಆಶ್ಚರ್ಯಪಡುತ್ತಲೇ ಪರೀಕ್ಷಿಸಿ, ನಮ್ಮ ಪುಟಾಣಿಯ ಧೈರ್ಯ ಸಾಹಸಗಳನ್ನು ಮೆಚ್ಚಿದರು. ನಾಯಿ ಬಾಯಿಗೆ ಸಿಕ್ಕ ಬೆಕ್ಕು ಉಳಿಯುವುದೇ ಕಷ್ಟವಾಗಿರುವಾಗ ಈ ಮರಿಬೆಕ್ಕಿನದು ಗಟ್ಟಿ ಜೀವವೆಂದೇ ಹೊಗಳಿ, ನಾಳೆ ಬೆಳಿಗ್ಗೆ ಶಸ್ತ್ರಚಿಕಿತ್ಸೆ ಮಾಡುವುದಾಗಿ ಹೇಳಿ ಅದರ ಹೊಟ್ಟೆಗೆ ಬ್ಯಾಂಡೇಜೊಂದನ್ನು ಕಟ್ಟಿ ಮನೆಗೆ ಕಳಿಸಿದರು.

ಆದರೆ ಬೆಳಿಗ್ಗೆಯವರೆಗೆ? ಅದೋ ಬ್ಯಾಂಡೇಜನ್ನೂ ಲೆಕ್ಕಿಸದೆ ಮಲಗಿಸಿದ್ದ ಹಾಸಿನಿಂದ ನೆಗೆ ನೆಗೆದು ಮನೆ ತುಂಬಾ ಓಡಾಡಲು ಹವಣಿಸುತ್ತಿತ್ತು. ಹಾಗೆ ಮಾಡುವಾಗ ಸಮತೋಲ ತಪ್ಪಿ, ವಾಲುತ್ತಲೋ, ಮುಗ್ಗರಿಸಿಯೋ ಬೀಳುತ್ತಿತ್ತು. ನನಗೆ ಏನೂ ತೋಚದೆ ನಾನು ನಂಬಿರುವ ಗುರು ರಮಣರನ್ನು ಅದನ್ನು ಉಳಿಸಿಕೊಡುವಂತೆ ಆರ್ದ್ರನಾಗಿ ಬೇಡಿಕೊಂಡೆ. ಅಷ್ಟರಲ್ಲಿ ಅದು ತನ್ನ ಚಲನವಲನಗಳನ್ನು ಇದ್ದಕ್ಕಿದ್ದಂತೆ ನಿಲ್ಲಿಸಿ, ನಮ್ಮ ಸುಪರ್ದಿಗೆ ಬಂತು. ನನ್ನ ಹೆಂಡತಿ ಅದನ್ನು ಮತ್ತೆ ಹಾಸಿನ ಮೇಲೆ ಮಲಗಿಸಿ ನೀರಿನಲ್ಲಿ ಜೇನು ಬೆರೆಸಿ ಕುಡಿಸಲಾರಂಭಿಸಿದಳು. ನಾನು 'ಪುಟಾಣೀ, ನಾಳೆ ನಿನಗೆ ಆಪರೇಷನ್ ಮರಿ! Best of luck!!' ಎಂದೆ. ಎನ್ನುವಷ್ಟರಲ್ಲಿ ಉಸಿರುಕಟ್ಟಿ ಬಂದಂತಾಗಿ, ನನ್ನನ್ನು ನಾನೇ ಸುಧಾರಿಸಿಕೊಳ್ಳಲು ಸುಮ್ಮನೆ ಹೋಗಿ ಮಲಗಿದೆ. ನನಗೆ ನಿಜವಾಗಿಯೂ ಜೀವನ ಒಂದು dead endಗೆ ಬಂದಂತೆನಿಸಿತ್ತು... ನಾನು ಓದಿಕೊಂಡ ಎಲ್ಲ ತತ್ವಜ್ಞಾನವೂ ಬರಡೆನಿಸತೊಡಗಿ, ಅನೇಕ ಹೊಸ ಪ್ರಶ್ನೆಗಳು ಏಳಲಾರಂಭಿಸಿದ್ದವು. ನನ್ನ ಹೆಂಡತಿ, ಲಕ್ಷ್ಮಿ-ಮಂಜುಳಾರೊಂದಿಗೆ ಪುಟಾಣಿಯನ್ನು ಮೌನವಾಗಿ ಉಪಚರಿಸುತ್ತಲೇ ಇದ್ದಳು, ನನ್ನನ್ನು ನಿದ್ರೆಯ ಜೋಂಪು ಆವರಿಸುವವರೆಗೆ....

ಬೆಳಿಗ್ಗೆ ನನ್ನ ಹೆಂಡತಿ, 'ಏಳಿ, ಪುಟಾಣಿ ಸತ್ತುಹೋಗಿದೆ' ಎಂದು ಎಬ್ಬಿಸಿದಾಗ, ನಾನು ಬೆಚ್ಚಿ ಬಿದ್ದು ಎದ್ದು ಕೂತೆ. ಆ ಬೆಚ್ಚಿನಲ್ಲಿಯೇ ನನ್ನನ್ನು ನಾನೇ ಒಂದುಗೂಡಿಸಿಕೊಳ್ಳುತ್ತಾ, 'ಹೇಗೆ, ಯಾವಾಗ ಸತ್ತಿತು?' ಎಂದು ಕೇಳಿದೆ. ಎಂದಿನಂತೆ ಬೆಳಿಗ್ಗೆ ಆರು ಗಂಟೆಗೆ ಎದ್ದ ನನ್ನ ಹೆಂಡತಿ, ರಾತ್ರಿ ಬಹು ಹೊತ್ತಿನವರೆಗೆ ಅದನ್ನು ಉಪಚರಿಸಿ ಮಹಡಿಯಲ್ಲಿ ಮಲಗುವ ಲಕ್ಷ್ಮಿ-ಮಂಜುಳಾರ ಬಳಿ ಬಿಟ್ಟು ಬಂದಿದ್ದ ಅದನ್ನು ನೋಡಲು ಹೋದಾಗ, ಅದು

ಇವಳಿಗಾಗಿಯೇ ಕಾಯುತ್ತಿದ್ದಂತೆ ಮೆಲ್ಲಗೆ ಕಣ್ಣು ಬಿಟ್ಟಿತಂತೆ. ಇವಳು ತಾನು ತೆಗೆದುಕೊಂಡು ಹೋಗಿದ್ದ ಜೇನಿನ ನೀರನ್ನು ಎರಡು ಗುಟುಕು ಕುಡಿಯಿತಂತೆ. ಹಾಗೇ ಮೈಯೆಲ್ಲ ಒಮ್ಮೆ ನಡುಗಿ ಇವಳನ್ನೇ ಒಮ್ಮೆ ದಿಟ್ಟಿಸಿ ನೋಡುತ್ತಾ ಕಣ್ಮುಚ್ಚಿತಂತೆ. ಅದೇ ಅದರ ಕೊನೆ. ನನಗೆ ಉಸಿರು ಕಟ್ಟಿದಂತಾಗಿ, 'ನನ್ನನ್ನೇಕೆ ಕರೆಯಲಿಲ್ಲ?' ಎಂದು ಕೂಗಿದೆ. ನನ್ನ ಹೆಂಡತಿ ಅಷ್ಟೇ ತಣ್ಣಗೆ, 'ನೀವು ಬಂದಿದ್ದರೆ, ನಿಮಗೆ ತಡೆಯಲಾಗುತ್ತಿರಲಿಲ್ಲ' ಎಂದಳು. ಅವಳ ಗಂಟಲೂ ಕಟ್ಟತೊಡಗಿತ್ತು. ನನ್ನ ಕಣ್ಣೀರ ಕಟ್ಟೆ ಒಡೆಯಿತು. 'ಅಯ್ಯೋ ರಮಣರಿಗೆ ಕೂಡಾ ನಮ್ಮ ಪುಟಾಣಿಯನ್ನು ಒಂದು ದಿನದ ಮಟ್ಟಿಗೆ ಉಳಿಸಲಾಗಲಿಲ್ಲವೇ!' ಎಂದು ರೋಧಿಸತೊಡಗಿದೆ. ನನ್ನ ಹೆಂಡತಿ ತನ್ನ ದುಃಖವನ್ನೆಲ್ಲ ತಡೆದುಕೊಳ್ಳುತ್ತಾ, 'ಹಾಗೆನ್ನಬೇಡಿ. ಅದನ್ನು ಆದಷ್ಟು ಬೇಗ ಕರೆದುಕೊಳ್ಳುವಂತೆ ನಾನು ರಮಣರನ್ನು ಬೇಡಿದ್ದೆ' ಎಂದು ನನ್ನನ್ನು ದಂಗು ಬಡಿಸಿದಳು. ನಂತರ ನನ್ನನ್ನು ಸಮಾಧಾನಪಡಿಸುತ್ತಾ ಮುಂದುವರೆಸಿದಳು: 'ಬದುಕಿದ್ದರೆ ಅದು ನೋವು ತಿನ್ನುತ್ತಲೇ, ಮುಂದೂ ಕಷ್ಟದಲ್ಲೇ ದಿನ ದೂಕಬೇಕಿತ್ತು. ಹೋಗಿದ್ದು ಒಳ್ಳೆಯದಾಯಿತು ಬಿಡಿ. ರಮಣರ ಆಶೀರ್ವಾದದಿಂದ ಅದಕ್ಕೆ ಒಳ್ಳೆಯ ಜನ್ಮ ಸಿಗುತ್ತದೆ'. ಇವಳ ತತ್ವಜ್ಞಾನದ ಮಾತುಗಳು ನನ್ನನ್ನು ರೇಗಿಸತೊಡಗಿದ್ದವು.

ನನಗೆ ರಮಣರೂ ಬೇಕಿರಲಿಲ್ಲ. ಅವರ ಹುಟ್ಟು ಸಾವುಗಳ ತತ್ವಜ್ಞಾನವೂ ಬೇಕಿರಲಿಲ್ಲ. ಹುಟ್ಟು ಸಾವುಗಳೇ ಇಲ್ಲವಂತೆ! ಅವೆಲ್ಲ ಆತ್ಮ ಸಾಮ್ರಾಜ್ಯದಲ್ಲಿನ ದೇಹ ಭಾವಗಳ ಉದಯಾಸ್ತಮಾನಗಳಷ್ಟೇ ಅಂತೆ!! ಈ ಅಂತೆ ಕಂತೆಗಳ ಬೊಂತೆ ಯಾಕೆ ಬೇಕು, ಕಣ್ಣೆದುರಿನ ಈ ದಾರುಣ ವಾಸ್ತವ ನನ್ನನ್ನು ಜೀವಸಹಿತ ಅಲ್ಲಾಡಿಸುತ್ತಿರುವಾಗ? ನನ್ನ ತಂದೆ ತಾಯಿ ಸತ್ತಾಗ ನನ್ನಲ್ಲಿ ಈ ಪ್ರಶ್ನೆಗಳು ಎದ್ದಿರಲಿಲ್ಲ. ಅವರು ಸಹಜ ಸಾವನ್ನಪ್ಪಿದ್ದರು. ಅವರು ತಮ್ಮ ಪಾಲಿನ ಆಟ ಮುಗಿಸಿ ಹೋಗಿದ್ದರು. ಆದರೆ ಯಾವ ತಪ್ಪು ಮಾಡಿತ್ತು ನಮ್ಮ ಪುಟಾಣಿ, ಇದ್ದಕ್ಕಿದ್ದಂತೆ ಹೀಗೆ ಸಾವಿನ ಪಾಲಾಗಲು? ಈ ಪುಟ್ಟ ಜೀವ ಅದೆಷ್ಟು ಜೀವನೋತ್ಸಾಹ ಪ್ರಕಟಿಸಿತ್ತು ಮತ್ತು ತನ್ನ ಈ ಬಾಲ ಸಹಜ ಆಟ ವಿನೋದಗಳ ಮೂಲಕ ಅದೆಷ್ಟು ಜನರಲ್ಲಿ ಅಂತಹುದೇ ಜೀವನೋತ್ಸಾಹವನ್ನು ಪುಟಿದೆಬ್ಬಿಸಿತ್ತು! ಅದಕ್ಕೇಕೆ ಈ ನೋವು ತುಂಬಿದ ದಾರುಣ ಅಂತ್ಯ?

ಜಗತ್ತೆಲ್ಲವೂ ಒಂದು ಪರಿಪೂರ್ಣ ಯೋಜನೆಯಂತೆ ನಡೆಯುತ್ತಿದೆಯಂತೆ! ಹಾಗಾದರೆ ಯಾವ ಯೋಜನೆಯ ಯಾವ ಮಹಾನ್ ಉದ್ದೇಶಕ್ಕಾಗಿ ನಮ್ಮ ಪುಟಾಣಿಯ ಈ ಅನ್ಯಾಯದ ಸಾವು ಸಂಭವಿಸಿತು? ಈ ಜಗತ್ತಿಗೆ ದಾತರೆಂಬುವರು ಯಾರಾದರೂ ಇದ್ದಾರೆಯೇ? ಅಥವಾ ಇದೊಂದು ಅಸಂಗತ ನಾಟಕ ರಂಗವೇ? ಈ ಸಂಬಂಧಗಳ ಜಾಲವಾದರೂ ಏಕೆ ನಿರ್ಮಾಣಗೊಂಡು, ಇದ್ದಕ್ಕಿದ್ದಂತೆ ಛಿದ್ರವಾಗುತ್ತಾ ಹೋಗುತ್ತದೆ? ಸಂಬಂಧವೆಂಬುದಾದರೂ ಏನು? ಆತ್ಮಗಳಿಗೆ ತಾಕುವಂತಹ ಪರಸ್ಪರ ಪ್ರೀತಿಯನ್ನಾಧರಿಸಿದ ಪರಸ್ಪರ ಅವಲಂಬನೆಯ ಜೀವ ಭಾವವೇ ಅಲ್ಲವೇ? ಲೋಕದಲ್ಲಿ ಇಂತಹ ಸಂಬಂಧಗಳು ಸ್ಥಾಪಿತವಾಗುವುದು ಆಕಸ್ಮಿಕವಾಗಿಯೋ ಅಥವಾ ಇದೆಲ್ಲ ಪೂರ್ವನಿಯೋಜಿತವೋ? ಈ

ಪುಟಾಣಿ ಎಲ್ಲಿಂದಲೋ ನಮ್ಮ ಬಳಿಗೇ ಬಂದು ಏಕೆ ಹೀಗೆ ಸಾಯಬೇಕಿತ್ತು? ನಮಗೂ ಇದಕ್ಕೂ ಏತರ ಸಂಬಂಧ? ಸಾವನ್ನು, ಮೊದಲು ತನ್ನ ನಿಲ್ಲದ ಚಟುವಟಿಕೆಗಳಿಂದಲೇ, ನಂತರ ಮೌನವಾಗಿ ಘನತೆಯಿಂದ ಎದುರಿಸಿದ ನಮ್ಮ ಪುಟಾಣಿ ನನ್ನ ಹೆಂಡತಿಯ ಆಗಮನಕ್ಕಾಗಿ ಬೆಳಗಿನವರೆಗೂ ಏಕೆ ಜೀವ ಹಿಡಿದಿಟ್ಟುಕೊಂಡು ಕಾದು ಕೂತಿತ್ತು? ಸಂಬಂಧಗಳಿಗಾಗಿ ಕೃತಜ್ಞತೆ ಸಲ್ಲಿಸಲೆಂದೆ? ಚಿತ್ರದುರ್ಗದಲ್ಲಿ ನಾವು ಸಾಕಿದ್ದ ನಾಯಿ ಮರಿಯೊಂದು ಹೀಗೇ ಸಾಯುವ ಮುನ್ನ ಅಂತಿಮ ದರ್ಶನ ನೀಡಿ ಹೋಗಿತ್ತಲ್ಲವೆ? ಯಾವುದೋ ದಾರುಣ ಕಾಯಿಲೆಗೆ ಒಳಗಾಗಿ ಬಹು ದಿನಗಳಿಂದ ಕಾಣೆಯಾಗಿದ್ದ ಅದು, ಒಂದು ರಾತ್ರಿ ಕಷ್ಟದಿಂದ ನಾವಿದ್ದ ಮಹಡಿ ಹತ್ತಿ ಬಾಗಿಲ ಬಳಿ ಬಂದು, ಆಶ್ಚರ್ಯ ಮತ್ತು ಸಂತೋಷಗಳಿಂದ ನಾವಿಟ್ಟ ಹಾಲು ನೆಕ್ಕಿ, ಕೆಳಗಿಳಿದು ಹೋಗಿ ಕೊನೆಯುಸಿರು ಎಳೆದಿತ್ತಲ್ಲ?

ಮಹಾ ತತ್ವಜ್ಞಾನಿ ಎಂದುಕೊಂಡಿದ್ದ ನಾನು ಹೀಗೆ ಉತ್ತರ ಕಾಣದ ಪ್ರಶ್ನೆಗಳ ಸುಳಿಗೆ ಸಿಕ್ಕಿ ದಿಕ್ಕೆಟ್ಟು ಕಣ್ಣೀರಿಡುತ್ತಿದ್ದಂತೆ, ನನ್ನ ಹೆಂಡತಿ ಮತ್ತು ಮಂಜುಳಾ ನಿರ್ಭಾವರಾಗಿ ನಮ್ಮ ಮನೆಯ ಮುಂದಿನ ಪುಟ್ಟ ಹೂವಿನ ತೋಟದಲ್ಲಿ ಒಂದು ಪುಟ್ಟ ಹಳ್ಳ ತೋಡಿ ಚಿರನಿದ್ದೆಗೆ ಸಂದಿದ್ದ ನಮ್ಮ ಪುಟಾಣಿಯನ್ನು ಅದರಲ್ಲಿರಿಸಿ, ಮಣ್ಣು ಮುಚ್ಚಿದರು. ನನ್ನ ಹೆಂಡತಿ ಪಕ್ಕದ ದಾಸವಾಳದ ಗಿಡದಿಂದ ಕೊಂಬೆಯೊಂದನ್ನು ಮುರಿದು ಅದರ ಮೇಲೆ ನೆಟ್ಟಳು.

ಅದರಲ್ಲೊಂದು ಹೂ ಬಿಡುವ ದಿನಕ್ಕಾಗಿ ನಾನು ಕಾಯುತ್ತಿದ್ದೇನೆ.

*

ಈ ಸಾಲುಗಳನ್ನು ಬರೆಯುತ್ತಿರುವ ಹೊತ್ತಿನಲ್ಲೇ ಹೊಟ್ಟೆಯಲ್ಲಿ ಒಂದು ಹಿಂಡು ಮರಿಗಳನ್ನು ತುಂಬಿಕೊಂಡಂತೆ ತೋರುವ ತಾಯಿ ಬೆಕ್ಕೊಂದು, ಒಂದೇ ಸಮನೆ ನನ್ನ ಕಾಲುಗಳನ್ನು ನೇವರಿಸುತ್ತಾ, ಮರಿ ಹಾಕಲು ನನ್ನ ಮನೆಯಲ್ಲಿ ಜಾಗ ಬೇಡುತ್ತಿದೆ. ಹೇಳಿ, ನಾನು ಏನು ಮಾಡಲಿ?

(೧೨ ಸೆಪ್ಟಂಬರ್, ೨೦೦೮)

■

೨೦. ಮತಾಂತರದ ಅವಾಂತರಗಳು

ಕೆಲವು ತಿಂಗಳುಗಳ ಹಿಂದೆ ನನ್ನ ಕೆಲವು ಸ್ನೇಹಿತರು ಹಿಂದೂ ಧರ್ಮದಿಂದ ಬೌದ್ಧಧರ್ಮಕ್ಕೆ ಮತಾಂತರಗೊಂಡಾಗ ನಾನು ಅದನ್ನು ವಿರೋಧಿಸಿದ್ದೆ. ಮತಾಂತರದ ಮೂಲಕ ನಾವು ನಮ್ಮ ಬದುಕಿನಲ್ಲಿ ಮತಕ್ಕೆ ಸಲ್ಲದ ಪ್ರಾಧಾನ್ಯ ಕೊಟ್ಟಂತಾಗುತ್ತದೆ ಎಂಬುದು ನನ್ನ ವಾದವಾಗಿತ್ತು. ಅಲ್ಲದೆ, ಹಿಂದೂವಾಗಿದ್ದುಕೊಂಡೇ ಬೌದ್ಧನೂ ಆಗಿರಬಹುದು ಎಂಬುದು ನನ್ನ ತಿಳುವಳಿಕೆಯಾಗಿತ್ತು. ಆದರೆ, ಆಗ ಮತಾಂತರಗೊಂಡ ನನ್ನ ಆ ಬಹುತೇಕ ಗೆಳೆಯರು ದಲಿತರೇ ಆಗಿದ್ದುದರಿಂದ, ಆ ಬಗ್ಗೆ ನಾನು ಅವರೊಂದಿಗೆ ಹೆಚ್ಚಿನ ವಾದಕ್ಕೇನೂ ಇಳಿಯಲಿಲ್ಲ. ಏಕೆಂದರೆ ಹಿಂದೂ ಧರ್ಮದಲ್ಲಿ ಉದಾರವಾದಿ ಮತ್ತು ಸಂಕುಚಿತವಾದಿ ಎಂಬ ಎರಡು ಧಾರೆಗಳಿದ್ದು, ಮೊದಲನೆಯದು ಪ್ರಮುಖವಾಗಿ ಬೌದ್ಧಸ್ಫೂರ್ತಿಯೊಂದಿಗೆ ಕ್ರಿಯಾಶೀಲವಾಗಿದ್ದರೆ, ಎರಡನೆಯದು ಪ್ರಮುಖವಾಗಿ ವೈದಿಕ ಸ್ಫೂರ್ತಿಯೊಂದಿಗೆ ಕ್ರಿಯಾಶೀಲವಾಗಿದೆ ಎಂದು ನಂಬಿದವನು ನಾನು. ಅಂದ ಮಾತ್ರಕ್ಕೆ ಈ ಎರಡೂ ಪೂರ್ಣ ಪ್ರತ್ಯೇಕ ಧಾರೆಗಳೆಂದು ನಾನು ಹೇಳುತ್ತಿಲ್ಲ. ಅವು ಸ್ಥೂಲ ವಿಂಗಡಣೆಗಳಷ್ಟೆ.

ಆದರೆ ಕಳೆದ ಕೆಲವು ವರ್ಷಗಳಿಂದೀಚೆಗೆ ಎರಡನೆಯ ಧಾರೆ ಮೊದಲನೆಯ ಧಾರೆಯನ್ನು ನುಂಗಲಾರಂಭಿಸಿದ್ದು, ಇದರಿಂದಾಗಿ ಹೆಚ್ಚಾಗಿ ಕಷ್ಟಕ್ಕೆ ಸಿಲುಕಿಕೊಂಡವರು ದಲಿತ ನಾಯಕರು. ವಿಶೇಷವಾಗಿ, ಗಾಂಧಿವಾದಿ ದಲಿತ ನಾಯಕರು. ಇವರಿಗೆ ಇಂದಿನ 'ಹಿಂದೂ ಜಾಗೃತಿ'ಯ ಹೆಸರಿನಲ್ಲಿ ಮೂಡುತ್ತಿರುವ ಹಿಂದೂ ಧಾರ್ಮಿಕ ಚೌಕಟ್ಟಿನಲ್ಲಿ ದಲಿತರಿಗೆ ಮತ್ತು ಅಕ್ಕಪಕ್ಕದ ಶೂದ್ರ ಜಾತಿಗಳಿಗೆ ಮಾನಸಿಕ ಜೀತದಿಂದ (ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಅಸಮಾನ ಜಾತಿ ಬಂಧನಗಳಿಂದ ಮತ್ತು ಅಷ್ಟರಮಟ್ಟಿಗಿನ ಅವಕಾಶ ವಂಚನೆಯಿಂದ) ಬಿಡುಗಡೆ ಸಾಧ್ಯವೇ ಇಲ್ಲವೆಂದೆನಿಸಿ, ಅವರು ಬೌದ್ಧಮತಕ್ಕೆ ಮತಾಂತರ ಹೊಂದಿರಬಹುದೆಂದು ನಾನು ಭಾವಿಸಿದೆ. ಅಂಬೇಡ್ಕರ್ ಐವತ್ತು ವರ್ಷಗಳ ಹಿಂದೆ ಅವಸರದಲ್ಲಿ–ತಾವು ಹಿಂದೂವಾಗಿ ಸಾಯಲಾರೆ ಎಂದು ಹಿಂದೊಮ್ಮೆ ಹೇಳಿದ ಮಾತನ್ನು ಅಸು ನೀಗುವ ಮುನ್ನ ಪರಿಪಾಲಿಸಲೋ ಎಂಬಂತೆ–ಮಾಡಿದ್ದನ್ನು, ನನ್ನ ಸ್ನೇಹಿತರು ಅಂಬೇಡ್ಕರರ ಈ ಆಘಾತ ಚಿಕಿತ್ಸೆಯಿಂದ ಹಿಂದೂಗಳು ಸುಧಾರಿಸುತ್ತಾರೇನೋ ಎಂದು ನೋಡೀ ನೋಡೀ, ಕಾದೂ ಕಾದೂ ಸುಸ್ತಾಗಿ ಈಗ ಮಾಡುತ್ತಿದ್ದಾರಷ್ಟೆ ಎಂದು ಸಮಾಧಾನ ಪಟ್ಟುಕೊಂಡೆ. ಅಲ್ಲದೆ

ಅವರು ಮತಾಂತರವಾದದ್ದು ಭಾರತೀಯ ಮೂಲ ಸಂಸ್ಕೃತಿಯಲ್ಲೇ ಹುಟ್ಟಿದ ಬೌದ್ಧ ಧರ್ಮಕ್ಕೇ ಎಂಬುದು ಇನ್ನೊಂದು ಕಾರಣವಿರಬಹುದು.

ಅಂಬೇಡ್ಕರ್ ಮತಾಂತರಕ್ಕಾಗಿ ಬಹಳ ವರ್ಷಗಳ ಕಾಲ ಅಧ್ಯಯನ ಮಾಡಿ, ಇತರ ಆಯ್ಕೆಗಳೊಂದಿಗೆ ತೂಗಿ ನೋಡಿ ಬೌದ್ಧ ಧರ್ಮವನ್ನು ಆಯ್ಕೆ ಮಾಡಿದ್ದರು. ಅಪಾರ ಮತ್ತು ಅಮಾನವೀಯ ಕಷ್ಟ-ಅವಮಾನಗಳನ್ನು ಸಹಿಸಿ ಮೇಲೆ ಬಂದಿದ್ದ ಅಂಬೇಡ್ಕರ್, ಬಹು ಸೂಕ್ಷ್ಮ ಹೃದಯಿಯೂ ಆಗಿದ್ದುದರಿಂದ; ರಾಜಕೀಯವಾಗಿ ಕ್ರಿಯಾಶೀಲರಾಗಿ ಉಳಿಯಲು ಹೊರಗೆ 'ದ್ವೇಷವೇ ನನ್ನ ಶಕ್ತಿ' ಎಂದು ಹೇಳುತ್ತಿದ್ದರಾದರೂ, ಒಳಗೆ ತಮ್ಮನ್ನು ತಾವೇ ಸಂರಕ್ಷಿಸಿಕೊಳ್ಳಲು ಮೃದು ಹೃದಯಿಯೂ ಆಗಿದ್ದರು. ಹಾಗಾಗಿಯೇ ಅವರು ತಮ್ಮ ತೀವ್ರ ರಾಜಕೀಯ ಕಾರ್ಯಾಚರಣೆಯಿಂದ ತಮ್ಮ ಅಪಾರ ಸಂಖ್ಯೆಯ ಅನುಯಾಯಿಗಳು ತಮ್ಮ ಸಾಂಸ್ಕೃತಿಕ ಬೇರುಗಳನ್ನು ಕಳೆದುಕೊಳ್ಳದಂತೆ ಎಚ್ಚರ ವಹಿಸಿದ್ದರು. ಇದರ ಭಾಗವಾಗಿಯೇ, ಯಾವುದನ್ನು ತಾವು ಹಿಂದೂ ಧರ್ಮವೆಂದು ಗುರುತಿಸಿದ್ದರೋ ಆ ಹಿಂದೂ ಧರ್ಮದ ವೈದಿಕ ಧಾರೆಯ ಅವೈಚಾರಿಕತೆಯನ್ನೂ, ಅಮಾನವೀಯತೆಯನ್ನೂ ತನ್ನ ಶೂನ್ಯ ಮೀಮಾಂಸೆಯ ಮೂಲಕ ಎತ್ತಿ ತೋರಿಸಿ ಸತ್ಯದ ಹೊಸ ದಾರಿಯನ್ನು ತೋರುವ ಮೂಲಕ ಆ ಧರ್ಮವನ್ನು ಯಾವ ಮಹಾಪುರುಷ ಪುನರುಜ್ಜೀವನಗೊಳಿಸಿದನೋ, ಆ ಬುದ್ಧನನ್ನೇ ತಮ್ಮ ಅನುಯಾಯಿಗಳು ಸಾಂಸ್ಕೃತಿಕ ಸ್ಫೂರ್ತಿಯನ್ನಾಗಿ ಮಾಡಿಕೊಳ್ಳುವಂತೆ ನೋಡಿಕೊಂಡಿದ್ದರು. ನಿಜ, ಅವರು ತಮ್ಮದೇ ಶೈಲಿಯಲ್ಲಿ ಬುದ್ಧ ಧರ್ಮವನ್ನು ನಿರೂಪಿಸಿಕೊಂಡು ಅದು ದಲಿತರ ಮೂಲ ಮತ್ತು ಸಹಜ ಧರ್ಮವೆಂದು ಪ್ರತಿಪಾದಿಸಿದ್ದರು ಮತ್ತು ಅದಕ್ಕಾಗಿ ಕೆಲವು ಬೌದ್ಧ ಧರ್ಮಗುರುಗಳಿಂದ ಆಕ್ಷೇಪಣೆಗಳನ್ನೂ ಎದುರಿಸಿದ್ದರು.

ಧರ್ಮವೊಂದರಲ್ಲಿ ಇಕ್ಕಟ್ಟಿಗೆ ಸಿಕ್ಕ ಜನಸಮುದಾಯಗಳು ಉಳಿಯಲು, ಬೆಳೆಯಲು ಅನುಸರಿಸುವ ಮಾರ್ಗವೇ ಅದು. ಅವು ತಾವಿರುವ ಸಂಸ್ಕೃತಿಯೊಳಗೇ ಸುರಂಗವೊಂದನ್ನು ತೋಡಿಕೊಂಡು, ಅಲ್ಲಿ ಸುಭದ್ರತೆಯ (ಹುಸಿ) ಭಾವನೆಯಲ್ಲಿ ಬದುಕತೊಡಗುತ್ತವೆ. ಹಿಂದೂ ಧರ್ಮದ ಭಕ್ತಿ ಪಂಥದಿಂದ ಚೂರುಪಾರು ಸಾಂತ್ವನ ಪಡೆದುಕೊಂಡ ನಮ್ಮ ಅನೇಕ ಶೂದ್ರ ಜಾತಿಗಳು ತಂತಮ್ಮ ನಂಬಿಕೆ-ಆಚರಣೆಗಳ ಮೂಲಕ ಸ್ವತಃ ಒಂದೊಂದು ಧರ್ಮದಂತೆ ಕಾಣುತ್ತಿರುವುದೂ ಈ ಕಾರಣಕ್ಕಾಗಿಯೇ. ಹಾಗಾಗಿಯೇ ಅವುಗಳನ್ನು ಜಾತಿ ಬಂಧನಗಳಿಂದ ಬಿಡಿಸಿಕೊಂಡು ಬಂದು ನಿಜವಾದ ಆಧುನಿಕ ಸಮಾಜ ಕಟ್ಟಲು ಯಾವುದೇ ಪ್ರಗತಿಪರ ಚಳುವಳಿಗೆ ಸಾಧ್ಯವಾಗದೇ ಇರುವುದು ಕೂಡಾ. ಆದರೆ ಈಗ ಹಿಂದೂ ಸಂಕುಚಿತ ಧಾರೆ ಈ ಶೂದ್ರ ಜಾತಿಗಳಿಗೆ ಆ ಅವರದೇ ನಂಬಿಕೆ-ಆಚರಣೆಗಳ ತಿರುಮಂತ್ರ ಹಾಕಿ ಅವರ ಸುರಂಗಗಳಿಂದ ಹೊರತಂದು ತಮ್ಮ ತಾಳಗಳಿಗೆ ತಕ್ಕಂತೆ ಕುಣಿಸತೊಡಗಿದ್ದಾರೆ. ಅವರಿಗೆ ಇಂದಿನ ಸಂದರ್ಭದಲ್ಲಿ ಈ ಸಂಕುಚಿತ ಧಾರೆಯ ವೈದಿಕ ನಾಯಕರಿಗಿಂತ ಹೆಚ್ಚು ವಿಶ್ವಾಸಾರ್ಹ ನಾಯಕರು ಕಾಣುತ್ತಿಲ್ಲ. ಕನಿಷ್ಠ ಈ ನಾಯಕರು ತಮ್ಮ ರಾಜಕೀಯ ಸ್ವಾರ್ಥಕ್ಕೇ ಆದರೂ, ಅವರ ಭಾವನಾತ್ಮಕ ಅಗತ್ಯಗಳನ್ನಾದರೂ ಪೂರೈಸುತ್ತಿದ್ದಾರೆ. ಆದರೆ ಹಿಂದೂ ಉದಾರವಾದಿ

ಧಾರೆಯ ನಾಯಕರು ಅವರನ್ನು ಅವರ ಸಂಸ್ಕೃತಿಯ ಪರಿಧಿಯಾಚೆಗೆ ಎಳೆದು ತಂದು ನಂತರ ದಿಕ್ಕೆಡಿಸಿ ಬಿಟ್ಟು ಹೋಗುವ ಎಡಬಿಡಂಗಿಗಳೆನಿಸಿಕೊಂಡಿದ್ದಾರೆ.

ಇದಕ್ಕೆ ಕಾರಣ ಹಿಂದೂ ಉದಾರವಾದದ ಆಸರೆಯೂ, ಆಶ್ವಾಸನೆಯೂ ಆಗಿದ್ದ ಗಾಂಧಿ ಈಗಿಲ್ಲದಿರುವುದು. ಭೌತಿಕವಾಗಿಯಷ್ಟೇ ಅಲ್ಲ, ಅವರು ಸ್ಫೂರ್ತಿಯೂ ಆಗಿ ಉಳಿಯದಿರುವುದು. ಹೀಗೆ ಉದಾರವಾದಿಗಳು ಕೈಬಿಟ್ಟ ಗಾಂಧಿಯನ್ನು ಹಿಂದೂ ಧರ್ಮದ ಯಾವ ಸಂಕುಚಿತ ಧಾರೆ ತಮ್ಮ ಹಿತಾಸಕ್ತಿಗಳನ್ನು ಭಂಗೊಳಿಸುತ್ತಿರುವ ನಾಯಕ ಎಂದು ಕೊಂದಿತ್ತೋ, ಅದರ ಅನುಯಾಯಿಗಳೇ ಈಗ ಸಾರ್ವತ್ರಿಕ ಸಾಮಾಜಿಕ ಮಾನ್ಯತೆಗಾಗಿ ಅವರನ್ನು ತಮ್ಮ 'ಪ್ರಾತಃಸ್ಮರಣೀಯ'ರಲ್ಲೊಬ್ಬರನ್ನಾಗಿ ಪ್ರತಿಷ್ಠಾಪಿಸಿಕೊಂಡಿದ್ದಾರೆ ಮತ್ತು ತಮ್ಮ ವಿಚಾರಗಳನ್ನು ಹರಡಲು ಅವರ ಬಿಡಿ ಬಿಡಿ ಹೇಳಿಕೆಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಇದಕ್ಕೆ ಮತ್ತೆ ಕಾರಣ, ಉದಾರವಾದಿಗಳೆನಿಸಿಕೊಂಡವರು ಕ್ರಮೇಣ ಗಾಂಧಿಯನ್ನು ಮರೆಯುತ್ತಾ ಬಂದು, ಆಧುನಿಕತೆಯ ಹುರುಪಿನಲ್ಲಿ ಪಶ್ಚಿಮದ 'ಸೆಕ್ಯುಲರ್' ಎಂದು ಹೇಳಲಾಗುವ ಚಿಂತಕರನ್ನೇ ತಮ್ಮ ಚಿಂತನೆಯ ಆದರ್ಶಗಳನ್ನಾಗಿ, ಅಧ್ಯಯನದ ಮಾದರಿಗಳನ್ನಾಗಿ ಮಾಡಿಕೊಂಡು ಜನಜೀವನದ ಮುಖ್ಯವಾಹಿನಿಯ ಸೂಕ್ಷ್ಮಗಳಿಂದ ದೂರವಾಗತೊಡಗಿದ್ದು. ಇದು ನೆಹರೂ ಅವರ ಒಂದೆಡೆಯ ನಾಸ್ತಿಕವಾದಿ ವೈಜ್ಞಾನಿಕತೆ, ಮತ್ತೊಂದೆಡೆಯ ಆಸ್ತಿಕವಾದಿ ಪರಂಪರೆ ಬಗೆಗಿನ ಮೆಚ್ಚುಗೆಗಳ ನಡುವಣ ದ್ವಂದ್ವವನ್ನು ಪರಿಹರಿಸಿಕೊಳ್ಳಲಾಗದೇ ಹೋದ; ಆಧುನಿಕ ಚಿಂತನಾ ಲಹರಿಯ ಬಿಕ್ಕಟ್ಟಿನ ಫಲವೇ ಆಗಿದೆ.

ನೆಹರೂ ಪ್ರಣೀತ ಆಧುನಿಕತೆಯ ಈ ಬಿಕ್ಕಟ್ಟನ್ನು ಗುರುತಿಸಿದ್ದ ಭಾರತೀಯ ಸಮಾಜವಾದಿ ಚಳುವಳಿಯು ಇದನ್ನು ಶೂದ್ರ ಜಾಗೃತಿಯ ಮೂಲಕ ಎದುರಿಸಲು ಹೋಗಿ, ಅದರ ರಾಜಕಾರಣದಲ್ಲಿ ಸಿಕ್ಕಿಹಾಕಿಕೊಂಡು; ಸಮಾಜವಾದವನ್ನೇ ಮರೆತಿದ್ದರಿಂದಾಗಿ, ಅದು ಬರೀ ಶೂದ್ರವಾದವಾಗಿ ಕೊನೆಗೊಂಡು ಚದುರಿಹೋಗುವಂತಾಯಿತು. ಇನ್ನು ನಮ್ಮ ಕಮ್ಯುನಿಸ್ಟರಾದರೋ, ತಮ್ಮ ಭೌತವಾದಿ ನಂಬಿಕೆಗಳ ಮೂಲಕ ಸಂಸ್ಕೃತಿಯ ಪ್ರಶ್ನೆಯನ್ನು ಅಪ್ರಸ್ತುತಗೊಳಿಸಿಕೊಂಡು ರಾಷ್ಟ್ರದ ಸಾಂಸ್ಕೃತಿಕ ಜೀವನದ ಹತ್ತಿರಕ್ಕೂ ಬರಲಾಗದಾದರು. ಹೀಗಾಗಿ ಇಂದು ಭಾರತದಲ್ಲಿ ಧಾರ್ಮಿಕ ಉದಾರವಾದವೆಂಬುದೇ ವಿಶ್ವಾಸಾರ್ಹ ನಾಯಕತ್ವ ಮತ್ತು ಅನುಕರಣಾರ್ಹ ಸಾಮಾಜಿಕ ಮತ್ತು ಸಂಸ್ಕೃತಿಕ ರೂಪಗಳ ಕೊರತೆಯಿಂದಾಗಿ ಅನುಮಾನಾಸ್ಪದವೂ, ಅವ್ಯಾವಹಾರಿಕವೂ ಎನಿಸಿ, ಹಿನ್ನೆಲೆಗೆ ಸರಿಯುವಂತಾಗಿದೆ.

ದುರಂತವೆಂದರೆ, ಇದು ಹಿಂದೂ ಧರ್ಮಕ್ಕೆ ಮಾತ್ರ ಸಂಬಂಧಿತವಾದ ಬೆಳವಣಿಗೆಯಾಗಿಲ್ಲ. ಭಾರತದ ಇನ್ನೆರಡು ಪ್ರಮುಖ ಧರ್ಮಗಳಾದ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಲ್ಲೂ ಈ ಬೆಳವಣಿಗೆ ಸಂಭವಿಸಿದೆ. ಬಹು ಸಂಸ್ಕೃತಿಯ ಹಿಂದೂ ಧರ್ಮಕ್ಕಿಂತ, ಸ್ಥೂಲವಾಗಿಯಾದರೂ ಏಕ ಸಂಸ್ಕೃತಿರೂಪಿಯಾಗಿರುವ ಈ ಎರಡೂ ಧರ್ಮಗಳಲ್ಲೇ, ಈ ಬೆಳವಣಿಗೆ ಬಹು ತ್ವರೆ ಮತ್ತು ತೀವ್ರತೆಯಿಂದ ನಡೆದಿದೆ. ಇದು, ಹೊರನೋಟಕ್ಕೆ ಬಹು ಉದಾರವೆಂದು ತೋರುವ ಕ್ರೈಸ್ತ ಧರ್ಮ ಜಗತ್ತಿನಾದ್ಯಂತ ಇತರರನ್ನು ಮತಾಂತರಿಸಿ

'ಉದ್ಧಾರ' ಮಾಡಲು ನಡೆಸುತ್ತಾ ಬಂದಿರುವ ಅದರ ಮೇಲರಿಮೆಯ ಹಿಂದಿನ ಸಂಕುಚಿತ ಲೋಕದೃಷ್ಟಿಯಲ್ಲೇ ನಿರಂತರವಾಗಿ ವ್ಯಕ್ತವಾಗುತ್ತಿದೆ. ಇನ್ನು ಇತ್ತೀಚಿನ ವರ್ಷಗಳಲ್ಲಿ ಇಸ್ಲಾಂನ ಸಂಕುಚೀಕರಣವಂತೂ ಕಣ್ಣಿಗೆ ರಾಚುವಷ್ಟು ಜಗತ್ಪ್ರಸಿದ್ಧವಾಗಿದೆ. ಹಾಗೆ ನೋಡಿದರೆ, ದೈವಿಕ ಸತ್ಯದ ಏಕಸ್ವಾಮ್ಯ ಪಡೆದಂತೆ ವರ್ತಿಸತೊಡಗಿರುವ ಮರಳುಭೂಮಿಯ ಈ ಎರಡೂ ಧರ್ಮಗಳು, ಜಾಗತಿಕ ಶಕ್ತಿ ರಾಜಕಾರಣದ ಒಳಸುಳಿಗಳಿಗೆ ಸಿಕ್ಕಿ–ಈವರೆಗೆ ತಾವೂ ಸೇರಿ ಪರಸ್ಪರ ಅನುಸಂಧಾನದಲ್ಲಿ ಸೃಷ್ಟಿಸಿದ್ದ–ಭಾರತೀಯ ಸಂಸ್ಕೃತಿಯ ಬಹುತ್ವದ ಪ್ರತೀಕವಾದ ಧಾರ್ಮಿಕ ಉದಾರತೆಯನ್ನೇ ಘಾಸಿಗೊಳಿಸಿವೆ ಮತ್ತು ಧಾರ್ಮಿಕ ಶತತ್ವ ಬೆಳೆಯಲು ಕಾರಣವಾಗಿವೆ.

ಇದರ ಇತಿಹಾಸದ ಇತ್ತೀಚಿನ ಉದಾಹರಣೆಯೆಂದರೆ, ಷಾ ಬಾನು ಪ್ರಕರಣದಲ್ಲಿ ಮುಸ್ಲಿಂ ಪುರೋಹಿತಶಾಹಿಯಷ್ಟೇ ಅಲ್ಲ, ಅದರ ಬುದ್ಧಿಜೀವಿ ವರ್ಗ–ಅಂತಹುದೇನಾದರೂ ಅದರಲ್ಲಿ ಜೀವಂತವಿದ್ದರೆ–ಸೇರಿದಂತೆ, ಇಡಿಯಾಗಿ ಮುಸ್ಲಿಂ ಸಮಾಜ ತಳೆದ ನೀತಿ. ಅದಕ್ಕೂ ಮುಖ್ಯವಾಗಿ, ಇದಕ್ಕೆ ರಾಷ್ಟ್ರವನ್ನು ಅತ್ಯಾಧುನಿಕತೆಯೆಡೆಗೆ ಕೊಂಡೊಯ್ಯುವ ಸಂಕಲ್ಪ ಮಾಡಿದ್ದ ಆಗಿನ ನಮ್ಮ ರಾಜಕೀಯ ನಾಯಕತ್ವ ಪ್ರತಿಸ್ಪಂದಿಸಿದ ರೀತಿ. ಇವೆರಡೂ ಸೇರಿ ಆವರೆಗೆ ಉದಾರವಾದಿ ಧಾರೆ ತನ್ನೆಲ್ಲ ಬೌದ್ಧಿಕ ವಯ್ಯಾರಗಳ ಹೊರತಾಗಿಯೂ ಯಾವುದನ್ನು ನಿಯಂತ್ರಿಸಿಕೊಂಡು ಬಂದಿತ್ತೋ ಆ ಸಂಕುಚಿತ ಧಾರೆ, ಗಾಂಧಿ ಕೊಲೆಯ ಹಿನ್ನೆಲೆಯಲ್ಲಿ ಸಂಶಯಕ್ಕೀಡಾಗಿ ಆವರೆಗೆ ಸಾರ್ವಜನಿಕವಾಗಿ ಬಾಯಿ ಮುಚ್ಚಿಕೊಂಡಿದ್ದುದು, ಜನ ಬೆಂಬಲದೊಂದಿಗೆ ಒಮ್ಮೆಗೇ ಸ್ಫೋಟಿಸಿತು. ಉದಾರವಾದಿಗಳ ತಾತ್ವಿಕತೆ ಮತ್ತು ಅದರ ರಾಜಕೀಯ ವಾರಸುದಾರರಂತಿದ್ದ ಸೆಕ್ಯುಲರ್ ಪಕ್ಷಗಳ ರಾಜಕಾರಣ ಒಟ್ಟಿಗೇ ದಿವಾಳಿ ಎದ್ದ ಸಂದರ್ಭವದು. ನೆಹರೂ ಪ್ರಣೀತ ರಾಜಕೀಯ ಆಧುನಿಕತೆಯ ಅವಿಭಾಜ್ಯ ಅಂಗವಾಗಿದ್ದ ಸೆಕ್ಯುಲರಿಸಂ, ಅವರ ಮೊಮ್ಮಗನ–ರಾಜೀವ್ ಗಾಂಧಿಯವರ ರಾಜಕಾರಣದ ಕಾಲಕ್ಕೆ ತನ್ನೆಲ್ಲ ಆಧುನಿಕತೆಯನ್ನು ಕಳೆದುಕೊಂಡು ಕೇವಲ ಒಂದು ಪೆದ್ದು ಪರಿಕಲ್ಪನೆಯ ಮಟ್ಟಕ್ಕೆ ಇಳಿಯಿತು ಮತ್ತು ಸಾಮಾನ್ಯ ಜನರ ಕಣ್ಣಲ್ಲಿ ಹಾಸ್ಯಾಸ್ಪದ ರಾಜಕೀಯ ಉಪಕರಣ ವೆಂದೆನಿಸಿಕೊಂಡಿತು. 'ಖೋಟಾ ಸೆಕ್ಯುಲರಿಸಂ' ಎಂಬುದು ಭಾರತದ ರಾಜಕೀಯ ಜೀವನದಲ್ಲಿ ಒಂದು ವಿಶ್ವಾಸಾರ್ಹ ಶಬ್ದವಾಗಿ ಚಲಾವಣೆಯಾಗ ತೊಡಗಿದ್ದು ಆಗಿನಿಂದಲೇ.

ಇಂತಹ ಖೋಟಾ ಸೆಕ್ಯಲರಿಸಮ್ಮನ್ನು ಸೃಷ್ಟಿಸಿದ ಖೋಟಾ ಆಧುನಿಕತೆಯೇ, ಇಂದು ಒರಿಸ್ಸಾದ ಕಂಧಮಹಲ್‌ನಲ್ಲಿ ಮತಾಂತರ ರಾಜಕಾರಣದ ಹಿನ್ನೆಲೆಯಲ್ಲಿ ಸೃಷ್ಟಿಯಾಗಿರುವ ಕೋಮು ಹಿಂಸಾಚಾರಕ್ಕೂ ಕಾರಣವಾಗಿರುವುದು. ಏಕೆಂದರೆ, ಮಿಷನರಿಗಳು ಮತಾಂತರಕ್ಕಾಗಿ ಆಯ್ಕೆ ಮಾಡುತ್ತಿರುವುದು ನಮ್ಮ ಆಧುನೀಕರಣದ ಯಾವ ಕಾರ್ಯಾಚರಣೆಗಳೂ ಮುಟ್ಟದ ಇಂತಹ ಅತಿ ಹಿಂದುಳಿದ ಪ್ರದೇಶಗಳ ಅತಿ ಹಿಂದುಳಿದ-ದಲಿತ ಮತ್ತು ಬುಡಕಟ್ಟು-ಸಮುದಾಯಗಳನ್ನೇ. ಹಾಗಾಗಿ, ಕ್ರೈಸ್ತ ಸಂಸ್ಥೆಗಳು ತಮ್ಮ ಮತಾಂತರಗಳ ಮೂಲಕ ಯಾವ ಜನಸಮುದಾಯಗಳಿಗೆ ಸಾಮಾಜಿಕ ಚೇತರಿಕೆ ನೀಡಲಾರಂಭಿಸಿವೆಯೋ, ಆ ಜನಸಮುದಾಯ

ಗಳನ್ನು ನಮ್ಮ ಆಧುನೀಕರಣದ ಯೋಜನೆಗಳು ಈವರೆಗೆ ಏಕೆ ಮುಟ್ಟಲಾಗಿಲ್ಲ ಮತ್ತು ಚೇತರಿಸಲಾಗಿಲ್ಲ ಎಂಬ ಪ್ರಶ್ನೆಯನ್ನೂ ನಾವಿಲ್ಲಿ ಕೇಳಿಕೊಳ್ಳಬೇಕಾಗಿದೆ. ಇದು ನಮ್ಮ ಆಧುನೀಕರಣ ಎಷ್ಟು ಖೋಟಾ ಆಗಿದೆ ಎಂಬುದನ್ನಷ್ಟೇ ಬಯಲುಗೊಳಿಸುತ್ತದೆ. ನಾವು ಆರಿಸಿಕೊಂಡಿರುವ ಆಧುನಿಕತೆ ಸ್ವಯಂಚಾಲಿತವಾಗಿದ್ದು, ಅದು ಅಗತ್ಯಗಳ ಮಾನವೀಯ ಸಂದರ್ಭಗಳನ್ನು ಗುರುತಿಸಿ ಅಲ್ಲಿ ಚೇತರಿಕೆಯನ್ನುಂಟುಮಾಡುವಂತಹ ಆಯ್ಕೆಯ ಅಥವಾ ಮಾದರಿಗಳ ಅವಕಾಶಗಳನ್ನೇ ಹೊಂದಿಲ್ಲ. ಹಾಗೆ ಹೊಂದಿದ್ದರೆ ಇಂದು ಭಾರತದಲ್ಲಾಗುತ್ತಿರುವಂತೆ ಚೇತರಿಕೆಯ ಸಮೃದ್ಧ ದ್ವೀಪಗಳು ಒಂದೆಡೆ ಮತ್ತು ಬರೀ ನಿರಾಶೆ-ನಿಟ್ಟುಸಿರುಗಳ ವಿಶಾಲ ಸ್ಮಶಾನಗಳು ಇನ್ನೊಂದೆಡೆ ಸೃಷ್ಟಿಯಾಗುತ್ತಿರಲಿಲ್ಲ. ಇದು ಕೋಮು ವೈರ ಮತ್ತು ಹಿಂಸಾಚಾರಗಳಿಗೆ ಫಲವತ್ತಾದ ರಾಜಕೀಯ ಸಂದರ್ಭಗಳನ್ನು ಹುಟ್ಟು ಹಾಕಬಲ್ಲ ಬೆಳವಣಿಗೆಯೇ ಆಗಿದೆ.

ಕಂಧಮಹಲ್‌ನಲ್ಲಿ ಈಗ ಸೃಷ್ಟಿಯಾಗಿರುವದು ಇಂತಹ ರಾಜಕೀಯ ಸಂದರ್ಭವೇ. ಲಕ್ಷ್ಮಣಾನಂದ ಸರಸ್ವತಿ ಎಂಬ ಹಿಂದೂ ಸ್ವಾಮೀಜಿಯೊಬ್ಬರ ಕೊಲೆಯ ನೆಪದೊಂದಿಗೆ ಆರಂಭವಾಗಿ, ಕ್ರೈಸ್ತ ದೇವಾಲಯ ಹಾಗೂ ಅನಾಥಾಲಯಗಳ ನಾಶವೂ ಸೇರಿದಂತೆ ಓರ್ವ ಕ್ರೈಸ್ತ ಸನ್ಯಾಸಿನಿಯ ಜೀವಂತ ದಹನ ಮತ್ತು ಅನೇಕ ಬಡ ಕ್ರೈಸ್ತರ ಸಾವು ನೋವುಗಳಿಗೆ ಕಾರಣವಾಗಿರುವ ಈ ಬರ್ಬರ ಹಿಂಸಾಚಾರನ್ನು, ಹಿಂದೂ ಸಂಕುಚಿತ ಧಾರೆಯ ಪ್ರತಿನಿಧಿಗಳಾಗಿರುವ ಸಂಘ ಪರಿವಾರದ ಸಂಸ್ಥೆಗಳು ನಾಚಿಕೆಗೆಟ್ಟು ಸ್ವಾಮೀಜಿಯ ಕೊಲೆಗೆ ಮತಾಂಧ ಕ್ರೈಸ್ತರೇ ಕಾರಣರೆಂಬ ಸುಳ್ಳು ಸುದ್ದಿ ಹರಡುತ್ತಾ ಸಮರ್ಥಿಸಿಕೊಳ್ಳುತ್ತಿದ್ದಾರೆ. ಇವರದು ನಾಚಿಕೆಗೇಡುತನ ಎನ್ನುವುದಕ್ಕೆ ಎರಡು ಕಾರಣಗಳಿವೆ. ಒಂದು, ಇವರ ಪಕ್ಷ ಬಿಜೆಪಿಯೂ ಭಾಗಿಯಾಗಿರುವ ಒರಿಸ್ಸಾ ಸರ್ಕಾರವೇ ಸ್ವಾಮಿಜಿಯ ಕೊಲೆಗೆ ನಕ್ಸಲೈಟರು ಕಾರಣವೆಂದು ಹೇಳಿದೆ ಮತ್ತು ಅದನ್ನು ಖಚಿತಪಡಿಸಿಕೊಳ್ಳಲು ತನಿಖೆಯೊಂದಕ್ಕಾಗಿ ಆಜ್ಞಾಪಿಸಿದೆ. ಎರಡು: ಅಲ್ಲಿ ಮತಾಂತರಕ್ಕೊಳಗಾಗುತ್ತಿರುವವರು ಹಿಂದೂ ಸಂಕುಚಿತವಾದಿ ಮತಾಚರಣೆಗಳಿಂದ ಶಾಪಗ್ರಸ್ತರಾಗಿ ದಟ್ಟ ದರಿದ್ರ ಸ್ಥಿತಿಯಲ್ಲಿರುವ ಅಸ್ಪೃಶ್ಯರು. ನಾವು ಕೈಬಿಟ್ಟಿರುವ ಜನರನ್ನು ಇತರರು ಕೈ ಹಿಡಿಯಲು ಬಂದರೆ ಅದನ್ನು ಪ್ರತಿಭಟಿಸುವುದು ಅಮಾನವೀಯವಾಗುತ್ತದೆ. ಆದರೆ ಸೆಕ್ಯುಲರಿಸಂ ಸತ್ತುಬಿದ್ದಿರುವ ಇಂದಿನ ಪರಿಸ್ಥಿತಿಯಲ್ಲಿ ಮತಾಂತರ ಒಂದು ಒಂದು ಮತೀಯ ಆಚರಣೆ ಮಾತ್ರವಾಗಿ ಪರಿಗಣಿತವಾಗದೆ, ಒಂದು ರಾಜಕೀಯ ವಿದ್ಯಮಾನವೂ ಆಗಿ ಪ್ರಸ್ತುತಗೊಳ್ಳುವಂತಾಗಿದೆ. ಹಾಗಾಗಿ ಇಲ್ಲಿ ಮಾನವೀಯ ದೃಷ್ಟಿಕೋನಕ್ಕೆ ಆಸ್ಪದವೇ ಇಲ್ಲವಾಗಿದೆ. ಇದು ನಿಜವಾದ ದುರಂತ.

ಹಿಂದೂ ಸಾಮ್ರಾಜ್ಯ ಸ್ಥಾಪನೆಗಾಗಿ ಹಿಂದೂ ಸಂಕುಚಿತವಾದಿಗಳು ಆರಂಭಿಸಿರುವ ಯುದ್ಧಕ್ಕೆ ಕಾಲಾಳುಗಳು ಬೇಕಿದೆ. ಹಾಗಾಗಿಯೇ ಇವರು ಈ ಮತಾಂತರ ವಿರೋಧಿ ಕಾರ್ಯಾಚರಣೆಯಲ್ಲಿ ಅಸ್ಪೃಶ್ಯರ ವಿರುದ್ಧ ಎತ್ತಿ ಕಟ್ಟಿರುವುದು ಸ್ಥಳೀಯ ಬುಡಕಟ್ಟಿನವರನ್ನೇ. ಹೀಗೆ ಈ ಮತಾಂತರದ ಅವಾಂತರದಲ್ಲಿ ಹೊಡೆದಾಡಿ ಸಾಯುತ್ತಿರುವುದು ಎರಡು ದಲಿತ

ಸಮುದಾಯಗಳೇ ಆಗಿವೆ. ಹಿಂದೂ ಸಂಕುಚಿತವಾದಿ ರಾಜಕಾರಣದಲ್ಲಿ ಅಡಗಿರುವ ಕ್ರೌರ್ಯವಿದು. ಅಸ್ಪೃಶ್ಯತೆ ಹಿಂದೂ ಧರ್ಮದ ಅವಿಭಾಜ್ಯ ಅಂಗವೆಂದು ಬಹಿರಂಗವಾಗಿ ಸಾರಬಲ್ಲ ಪುರಿಯ ಶಂಕರಾಚಾರ್ಯರ ವಿರುದ್ಧ ಒಂದು ಪ್ರತಿಭಟನೆಯನ್ನೂ ಸಂಘಟಿಸಲಾಗದ ಇವರಿಗೆ, ಈ ಮತಾಂತರದ ವಿರುದ್ಧ ಪ್ರತಿಭಟಿಸುವ ಯಾವ ನೈತಿಕ ಹಕ್ಕೂ ಇಲ್ಲ. ಹಾಗೆಂದು ಹೇಳಿದರೆ ಇವರಿಗೆ ಅರ್ಥವೂ ಆಗುವುದಿಲ್ಲ. ಏಕೆಂದರೆ ಅಂತಹ ನೈತಿಕ ಪ್ರಜ್ಞೆ ಏನಾದರೂ ಇವರಿಗಿದ್ದದ್ದಲ್ಲಿ, ವರ್ಷಾನುಗಟ್ಟಲೆ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಅನೇಕ 'ಧಾರ್ಮಿಕ' ಅಭಿಯಾನಗಳನ್ನು ನಡೆಸುತ್ತಿರುವ ಇವರು, ತಮ್ಮ ಹಿಂದೂ ಸಾಮ್ರಾಜ್ಯ ಸ್ಥಾಪನೆಯ ಯೋಜನೆಯ ಅಂಗವಾಗಿಯಾದರೂ ಈ ಹೊತ್ತಿಗೆ ಓರ್ವ ಶಂಕರಾಚಾರ್ಯರ ಸ್ಥಾನಕ್ಕೆ ಅಸ್ಪೃಶ್ಯನೊಬ್ಬನ್ನು ತಯಾರು ಮಾಡುವ ಅಭಿಯಾನವೊಂದನ್ನು ಆರಂಭಿಸಬೇಕಿತ್ತು. ಅಂತಹ ಯಾವ–ಕನಿಷ್ಠ, ಸಾರ್ವತ್ರಿಕ ದೇವಾಲಯಗಳಲ್ಲಿ ಕೆಲವದರಲ್ಲಾದರೂ ಅಸ್ಪೃಶ್ಯರನ್ನೂ, ಶೂದ್ರರನ್ನೂ ಅರ್ಚಕರನ್ನಾಗಿ ನಿಯಮಿಸುವ–ಅಭಿಯಾನವನ್ನು ಆರಂಭಿಸದ ಇವರು ಕಟ್ಟುವ ಹಿಂದೂ ಸಾಮ್ರಾಜ್ಯವು ಹಾಗಾಗಿ, ಬುದ್ಧಪೂರ್ವ ಯುಗದ್ದೇ ಆಗಿದೆ. ಆದ್ದರಿಂದ ಇವರ ಮತಾಂತರ ವಿರೋಧಿ ಕಾರ್ಯಾಚರಣೆ ಯಾವ ಮತ್ತು ಯಾರ ಸಹಾನುಭೂತಿಗೂ ಅರ್ಹವಾಗದಾಗಿದೆ.

(೧೯ ಸೆಪ್ಟಂಬರ್, ೨೦೦೮)

■

೨೧. ವಸಿಷ್ಠರು ಮತ್ತು ವಾಲ್ಮೀಕಿಯರು

ದೆಹಲಿಯಲ್ಲಿ ಮತ್ತೆ ಉಗ್ರರು ತಮ್ಮ ಅಟ್ಟಹಾಸ ಮೆರೆದಿದ್ದಾರೆ. ಆದರೆ ಈ ಉಗ್ರರು, ನಾವು ಸಾಮಾನ್ಯವಾಗಿ ಊಹಿಸಿವಂತೆ ಮುಸ್ಲಿಂ ಮೂಲಭೂತವಾದಿ ಉಗ್ರರೋ ಅಥವಾ ಹಿಂದೂ ಕೋಮುವಾದಿ ಉಗ್ರರೋ ಎಂಬುದನ್ನಿನ್ನೂ ಖಚಿತಪಡಿಸಿಕೊಳ್ಳಬೇಕಿದೆ. ಏಕೆಂದರೆ, ಈಚೆಗೆ ಹಿಂದೂ ಕೋಮುವಾದಿ ಸಂಸ್ಥೆಗಳ ಉಗ್ರಗಾಮಿ ಕಾರ್ಯಾಚರಣೆಗಳೂ ಆರಂಭವಾಗಿರುವ ಖಚಿತ ಸೂಚನೆಗಳು ಸರ್ಕಾರಕ್ಕೆ ದೊರೆತಿವೆ. ಈ ಗೊಂದಲದಲ್ಲಿ ಸಿಕ್ಕಿ, ಜನತೆ ತಲ್ಲಣಗೊಂಡಿದೆ. ಭಾರತ ಕಂಡ ಅತ್ಯಂತ ದುರ್ಬಲ ಗೃಹ ಮಂತ್ರಿ ಎನಿಸಿಕೊಂಡಿರುವ ಶಿವರಾಜ ಪಾಟೀಲ್ ಎಂದಿನಂತೆ ಉಗ್ರರನ್ನು ಮಟ್ಟ ಹಾಕುವುದಾಗಿ ಗುಡುಗಿದ್ದಾರೆ. ಆದರೆ ಇವರನ್ನು ನಂಬಲು ಯಾರೂ ತಯಾರಿಲ್ಲ. ಏಕೆಂದರೆ, ಅದೇ ಉಸಿರಿನಲ್ಲಿ ಅವರು ದೆಹಲಿಯಂತಹ ಜನ ನಿಬಿಡ ಊರುಗಳಲ್ಲಿ ಭಯೋತ್ಪಾದನಾ ಕೃತ್ಯಗಳನ್ನು ತಡೆಯಲು ಸಾಧ್ಯವಿಲ್ಲ ಎಂದೂ ಹೇಳಿದ್ದಾರೆ. ಅದು ನಿಜವೂ ಹೌದು. ೨೪ ತಾಸೂ ದೇಶದ ಮೂಲೆ ಮೂಲೆಯನ್ನೂ ಕಾಯುವುದು ದುಸ್ಸಾಧ್ಯವೇ. ಹಾಗಾಗಿ ಭಯೋತ್ಪಾದನೆಯನ್ನು ಕೇವಲ ಕಾನೂನು ಮತ್ತು ಶಿಸ್ತಿನ ಉಪಕರಣಗಳ ಮೂಲಕ ತಡೆಯಲು ಅಸಾಧ್ಯವೆನ್ನಿಸುವ ಮಟ್ಟಿಗೆ ಅದು ಅವನ್ನು ಮೀರಿ ಬೆಳೆದಿದೆ. ಎರಡೂ ಕಡೆ ಮನಸ್ಸು ಕೆಟ್ಟಿದೆ. ಅದನ್ನು ಸರಿ ಮಾಡುವ ಕಡೆ ಗಮನ ಕೊಡದ ಹೊರತು ಈ ಬರ್ಬರ ಹಿಂಸಾಚಾರ ನಿಲ್ಲುವ ಸಾಧ್ಯತೆ ಕಡಿಮೆ.

ಭಯೋತ್ಪಾದನೆಯನ್ನು ತಡೆಯಲು ವಿಫಲಗೊಂಡಿರುವುದೆಂದು ಸದ್ಯದ ಸಂಯುಕ್ತ ಸರ್ಕಾರವನ್ನು ಖಂಡಿಸುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರದ ಕಾಲದಲ್ಲೂ ಉಗ್ರರ ದುಷ್ಕೃತ್ಯಗಳೇನೂ ಕಡಿಮೆಯಾಗಿರಲಿಲ್ಲ. ಹಾಗೆ ನೋಡಿದರೆ, ಅವರ ಕಾಲದಲ್ಲೇ ಹೆಚ್ಚು ಉಗ್ರಗಾಮಿ ಚಟುವಟಿಕೆಗಳು ಮತ್ತು ಮುಗ್ಧರ ಸಾವುಗಳು ದಾಖಲಾಗಿರುವುದು. ಇವರ ವಿದೇಶಾಂಗ ಮಂತ್ರಿಯೇ ಅಲ್ಲವೇ, ಭಯೋತ್ಪಾದಕರ ಬೇಡಿಕೆಗಳಿಗೆ ಮಣಿದು ಸೆರೆಯಲ್ಲಿದ್ದ ಉಗ್ರಗಾಮಿಗಳನ್ನು ಬಿಡುಗಡೆಗೊಳಿಸಿ, ಸ್ವತಃ ತಾವೇ ಅವರನ್ನು ವಿಮಾನದಲ್ಲಿ ಒಯ್ದು ಕಾಬೂಲ್‌ಗೆ ಬಿಟ್ಟು ಬಂದದ್ದು? ಇವರ ಕಾಲದಲ್ಲೇ ಅಲ್ಲವೇ, ಉಗ್ರರು ನಮ್ಮ ಸಂಸತ್ ಭವನದ ಭದ್ರತಾ ಕೋಟೆಯನ್ನು ಭೇದಿಸಿ ಬಂದು, ಅದರ ಮೇಲೆ ದಾಳಿ ನಡೆಸಲು ಸಾಧ್ಯವಾದದ್ದು? ಇವರ 'ಆದರ್ಶ' ರಾಜಕಾರಣಿ ನರೇಂದ್ರ ಮೋದಿ ಮುಖ್ಯಮಂತ್ರಿ ಆಗಿರುವ ರಾಜ್ಯದಲ್ಲಿ ಇತ್ತೀಚೆಗಷ್ಟೇ ಸಂಭವಿಸಿದ ಬಾಂಬ್ ಸ್ಫೋಟದ ಸರಣಿಯ ಮುಂದಿನ

ಭಾಗವಾಗಿಯೇ ಅಲ್ಲವೇ, ಈಗ ಬಾಂಬುಗಳು ಸ್ಫೋಟಿಸಿರುವುದು? ಆದರೂ ಇವರ ವೀರಾವೇಶದ ಮಾತುಗಳ ಬಡಾಯಿಗೆ ಕೊನೆಯಿಲ್ಲದಾಗಿದೆ!

ಹಾಗಾಗಿ, ಇದು ಯಾವುದೇ ನಿರ್ದಿಷ್ಟ ಸರ್ಕಾರದ ವೈಫಲ್ಯದ ಪ್ರಶ್ನೆಯ ನೆಲೆಯಲ್ಲಿ ಪರಿಹಾರ ಕಾಣಲಾಗದಂತಹ ಸಮಸ್ಯೆಯಾಗಿದೆ. ಇದನ್ನು ಮನಗಾಣದ ಹೊರತು, ಈ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಾಗದು ಎಂಬುದು ನಮಗೆ ಮೊದಲು ಅರಿವಾಗಬೇಕಿದೆ. ಏಕೆಂದರೆ, ಹಾಗೆ ಪಕ್ಷ ರಾಜಕಾರಣದ ಮೇಲಾಟದ ಪ್ರಶ್ನೆಯಾಗಿ ನೋಡಿಯೇ ನಾವು ಇದನ್ನು ಪರಿಹರಿಸಲಾಗದೆ, ತಬ್ಬಿಬ್ಬಾಗಿ ಕೂತಿದ್ದೇವೆ. ಈ ಸಂಬಂಧ ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರು ಅಪರೂಪಕ್ಕೆಂಬಂತೆ ಆಳವಾದ ಒಳನೋಟವುಳ್ಳ ಮಾತೊಂದನ್ನು ಆಡಿದ್ದಾರೆ: 'ಈ ಬಾಂಬ್ ಸ್ಫೋಟಗಳಿಗೆ ಬಿಜೆಪಿಯ ಅಧಿಕಾರ ದಾಹವೇ ಕಾರಣವಾಗಿದೆ.' ಇದನ್ನು ತಮ್ಮ ಇತ್ತೀಚಿನ ಬಿಜೆಪಿ ವಿರೋಧಿ ರಾಜಕಾರಣದ ಭಾಗವಾಗಿಯೇ ಆಡಿರುವರಾದರೂ, ಅದರಲ್ಲಿ ಇಂದಿನ ಹಿಂಸಾಮಯ ವಾತಾವರಣವನ್ನು ವಿವರಿಸುವ ಅರ್ಧ ಸತ್ಯವಾದರೂ ಅಡಗಿದೆ. ಬಿಜೆಪಿ, ಮುಸ್ಲಿಂ ಮತಾಂಧತೆಯನ್ನು ಮಟ್ಟ ಹಾಕಲು ಆರಿಸಿಕೊಂಡಿರುವ ಹಿಂದೂ ಮತಾಂಧತೆಯ ಮಾರ್ಗವೇ, ಈಚಿನ ವರ್ಷಗಳ ಇಂತಹ ಬರ್ಬರ ಹಿಂಸಾಚಾರದ ರಾಜಕಾರಣಕ್ಕೆ ಕಾರಣವಾಗಿದೆ.

ಇದಕ್ಕೆ ಸಂಬಂಧಿಸಿದಂತೆಯೇ, 'ವಿಕ್ರಾಂತ ಕರ್ನಾಟಕ'ದ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿರುವ ಎರಡು ಲೇಖನಗಳು ನನ್ನ ಗಮನ ಸೆಳೆದವು. ಅವೆಂದರೆ, ಸರ್ ಎಂ. ವಿಶ್ವೇಶ್ವರಯ್ಯನವರ ಪುಸ್ತಕವೊಂದಕ್ಕೆ ಡಾ|| ರಾಮಮನೋಹರ ಲೋಹಿಯಾ ಅವರು ಬರೆದಿದ್ದ ವಿಮರ್ಶೆಯನ್ನೊಳಗೊಂಡ ಕೆ. ಸತ್ಯನಾರಾಯಣ ಅವರ ಲೇಖನ ಮತ್ತು ದಿ|| ಎಚ್.ವೈ. ಶಾರದಾ ಪ್ರಸಾದರ ಬಗ್ಗೆ ಸುಗತಾ ಬರೆದಿರುವ ಲೇಖನ. ಲೋಹಿಯಾ ತಮ್ಮ 'ವಸಿಷ್ಠರು ಮತ್ತು ವಾಲ್ಮೀಕಿಯರು' ಎಂಬ ಲೇಖನದಲ್ಲಿ (ಅದು ವಾಸ್ತವಾಗಿ, ಸ್ವತಂತ್ರ ಭಾರತದಲ್ಲಿ ರೈತರ ನೀರಿನ ಸುಂಕ ಏರಿಸಿದ್ದರ ವಿರುದ್ಧ ಅವರು ನಡೆಸಿದ ನಾಗರಿಕ ಸತ್ಯಾಗ್ರಹದ ಕಾರಣವಾಗಿ ಬಂಧನದಲ್ಲಿದ್ದ ಲಕ್ನೋ ಸೆರೆಮನೆಯಲ್ಲಿ ಓದಿದ ಶಂಭೂಕ ವಧೆಯ ಬಗ್ಗೆ ಸೀತೆ ಮತ್ತು ವಸಿಷ್ಠರ ನಡುವೆ ನಡೆಯುವ ಸಂವಾದವನ್ನೊಳಗೊಂಡ ಮರಾಠಿ ನಾಟಕವೊಂದನ್ನು ನೆಪ ಮಾಡಿಕೊಂಡು, ಅಲ್ಲಿನ ಅನಾಗರಿಕ ವಾತಾವರಣದ ಬಗ್ಗೆ ಉತ್ತರ ಪ್ರದೇಶದ ಸೆರೆಮನೆ ಮಂತ್ರಿಗೆ ಬರೆದಿದ್ದ ಪತ್ರ.) ಭಾರತದ ಸಾಮಾಜಿಕ ನ್ಯಾಯ ಪರಂಪರೆಯ ವಿಶ್ಲೇಷಣೆ ಮಾಡುತ್ತಾ. ವಿಶ್ವೇಶರಯ್ಯನವರನ್ನು ವಾಲ್ಮೀಕಿ ಪರಂಪರೆಗೆ ಸೇರಿದವರು ಎಂದು ಗುರುತಿಸಿದ್ದರು. 'ಮಾತೃಹಂತಕ ಪರುಶರಾಮನಿಂದ ಹಿಡಿದು ರಾಷ್ಟ್ರ ಹಂತಕ ನೆಹರೂ ತನಕ ಅಂಧ ನ್ಯಾಯದ ವಸಿಷ್ಠ ಪರಂಪರೆ ಹಬ್ಬಿಕೊಂಡಿದ್ದರೆ, ವಿಶ್ವಾಮಿತ್ರನಿಂದ ಹಿಡಿದು ವಿಶ್ವೇಶ್ವರಯ್ಯನವರ ತನಕ ಉದಾರವಾದಿಯಾದ ವಾಲ್ಮೀಕಿ ಪರಂಪರೆ ಹಬ್ಬಿಕೊಂಡಿದೆ' ಎಂಬುದು ಅವರ ಪ್ರಸಿದ್ಧವಾದ ಮಾತು.

ಲೋಹಿಯಾ ಈಗಿದ್ದಿದ್ದರೆ, ಬಹುಶಃ ಶಾರದಾ ಪ್ರಸಾದರನ್ನೂ ಈ ಉದಾರವಾದಿ ವಾಲ್ಮೀಕಿ ಪರಂಪರೆಗೆ ಸೇರಿಸುತ್ತಿದ್ದರು. ಏಕೆಂದರೆ, ಅವರು ಭಾರತದಲ್ಲಿ ಕಾಲದ ಅಗತ್ಯಗಳಿಗೆ ತಕ್ಕಂತೆ ಸಂಪ್ರದಾಯಗಳನ್ನು ಸುಧಾರಿಸುತ್ತಾ, ತಮ್ಮ ಪ್ರಯೋಗಶೀಲತೆಯ ಮೂಲಕ 'ರಾಜ್ಯಭಾರ'ದ ಕ್ರಮಗಳನ್ನು ಉದಾರಗೊಳಿಸುತ್ತಾ ಸದಾ ಚಲನಶೀಲವಾಗಿರುವ ಮತ್ತು ಲೋಕಹಿತಕಾರಿಯಾಗಿರುವ ಮಾರ್ದವತೆಯನ್ನು ವಾಲ್ಮೀಕಿ ಪರಂಪರೆ ಎಂದು ಗುರುತಿಸಿದ್ದರು. ಇದಕ್ಕೆ ವಿರುದ್ಧವಾಗಿ, ಕುಲ ಶ್ರೇಷ್ಠತೆ, ಕುಲ ಶುದ್ಧತೆ ಮತ್ತು ಕುಲ ಪ್ರತ್ಯೇಕತೆಯ ನೀತಿ ಸಂಹಿತೆಯನ್ನಾಧರಿಸಿದ 'ರಾಜ್ಯಭಾರ'ವನ್ನು ದೇಶ ಭ್ರಷ್ಠತೆ, ಶಿರಚ್ಛೇದ ಮುಂತಾದ ನಿರ್ಮಮ ದಂಡನೆಗಳ ಮೂಲಕ ಎತ್ತಿ ಹಿಡಿಯುವ ಕುಲಸ್ವಾರ್ಥಿ ಪುರೋಹಿತಶಾಹಿಯನ್ನು ವಸಿಷ್ಠ ಪರಂಪರೆ ಎಂದು ಗುರುತಿಸಿದ್ದರು. ಅವರು ನೆಹರೂರನ್ನು ವಸಿಷ್ಠ ಪರಂಪರೆಗೆ ಸೇರಿಸಲು ಮುಖ್ಯ ಕಾರಣ, ವಾಲ್ಮೀಕಿ ಪರಂಪರೆಗೆ ಸೇರಿದ್ದ ಗಾಂಧೀಜಿಯನ್ನು ಜಾಣ ಸಮನ್ವಯದ ಮಾತುಗಳ ಮೂಲಕ ಅವರು ಕ್ರಮೇಣ ಕೈಬಿಡುತ್ತಾ ಹೋದದ್ದು. ಅದೇನೇ ಇರಲಿ, ಇಂದು ಈ ವಸಿಷ್ಠ ಪರಂಪರೆ ಕಾಶ್ಮೀರದಿಂದ ಹಿಡಿದು ಒರಿಸ್ಸಾದ ಕಂಧಮಹಲ್‌ವರೆಗೆ ತನ್ನ ಅಂಕೆಗೆ ಸಿಗದಿದ್ದವರನ್ನೆಲ್ಲ ದೇಶಭ್ರಷ್ಟತೆ, ಶಿರಚ್ಛೇಧಗಳ ಈ ಅಂಧನ್ಯಾಯ ಪರಂಪರೆಯ ಪ್ರಯೋಗಗಳಿಗೆ ಬಲಿ ಕೊಡುತ್ತಾ, ತನ್ನ ಈ ಪ್ರಯೋಗ-ಪ್ರಾತ್ಯಕ್ಷಿಕೆಗಳನ್ನು ಇಂದು ನಮ್ಮದೇ ದಾವಣಗೆರೆ, ಮಂಗಳೂರು ಮತ್ತು ಚಿಕ್ಕಮಗಳೂರುಗಳವರೆಗೆ ತಂದು ಮುಟ್ಟಿಸಿದೆ. ಆದರೆ, ಇದೀಗ ತಾನೇ ತಮ್ಮ ೧೦೦ ದಿನಗಳ ರಾಜ್ಯಭಾರವನ್ನು ಸಂಭ್ರಮದಿಂದ ಆಚರಿಸಿಕೊಳ್ಳುವ ಮೂಲಕ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಸಾಕಷ್ಟು ಹಾಸ್ಯಾಸ್ಪದರಾಗಿರುವ ಮುಖ್ಯಮಂತ್ರಿ ಯಡಿಯೂರಪ್ಪ, ಈ ಪ್ರಾತ್ಯಕ್ಷಿಕೆಗಳಿಗೂ ತಮ್ಮ ಪಕ್ಷ-ಪರಿವಾರಕ್ಕೂ ಯಾವುದೇ ಸಂಬಂಧವಿಲ್ಲವೆಂದು ಘೋಷಿಸಿ, ಇನ್ನಷ್ಟು ಹಾಸ್ಯಾಸ್ಪದರಾಗಿದ್ದಾರೆ.

ಕಾಶ್ಮೀರ ಕಣಿವೆಯನ್ನು ಪ್ರಚೋದಿಸಿ ತೃಪ್ತಿಯಾಗದೆ, ಕಂಧಮಹಲ್‌ನಲ್ಲಿ ನಡೆಸಿದ ಬರ್ಬರ 'ಧರ್ಮಯುದ್ಧ' ಹುಟ್ಟಿಸಿರುವ ರಾಷ್ಟ್ರೀಯ ಅಸಹ್ಯ ಮತ್ತು ಜಿಗುಪ್ಸೆಗಳನ್ನು ತೊಡೆದುಕೊಳ್ಳಲು, ಇವರು ಕಂಡಕಂಡ ಕಡೆಯಲ್ಲೆಲ್ಲಾ ದಿಢೀರನೆ 'ಮತಾಂತರ'ಗಳ ಹುಯಿಲೆಬ್ಬಿಸಿ ಜನರ ಸಹಾನುಭೂತಿ ಗಳಿಸಲೆತ್ನಿಸುತ್ತಿದ್ದಾರೆ. ಮುಂದಿನ ಲೋಕಸಭಾ ಚುನಾವಣೆಗಳ ಮೇಲೆ ಕಣ್ಣಿಟ್ಟು ನಡೆಸಲಾಗುತ್ತಿರುವ ವಸಿಷ್ಠ ಶಿಷ್ಯರ ಈ ಕಾರ್ಯಾಚರಣೆ ಎಷ್ಟು ನಾಚಿಕೆಗೆಟ್ಟು ಹೋಗಿದೆ ಎಂದರೆ, ಪ್ರಜಾಪ್ರಭುತ್ವದ ಮೂಲಾಧಾರಗಳಲ್ಲಿ ಒಂದಾದ ಪತ್ರಿಕೋದ್ಯಮದ ಮೂಲ ತತ್ವಗಳಿಗೆ ತಿಲಾಂಜಲಿ ನೀಡಲೂ ಇವರು ಹಿಂಜರಿಯರು. ಎಲ್ಲ ಮಾಧ್ಯಮಗಳಲ್ಲೂ ಈ ಶಿಷ್ಯೋತ್ತಮರು ತುಂಬಿ ಹೋಗಿದ್ದು, ಅವುಗಳ ವಿಶ್ವಾಸಾರ್ಹತೆಯನ್ನು ಹಾಳು ಮಾಡುವುದನ್ನೇ ತಮ್ಮ ಕಾಯಕ ಮಾಡಿಕೊಂಡಿದ್ದು, ಶ್ರೀರಾಮನ ಹೆಸರಿನಲ್ಲಿ ತಾವು ಸ್ಥಾಪಿಸಲುದ್ದೇಶಿರುವ ವಸಿಷ್ಠ ಪ್ರಭುತ್ವದಲ್ಲಿ ಮಾಧ್ಯಮಗಳು ಹೇಗಿರುವುವು ಎಂಬುದರ

ಸೂಚನೆಗಳನ್ನು ನೀಡತೊಡಗಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ನನ್ನದೇ ಅನುಭವ ಹೇಳಿದರೆ, ಈ ವಸಿಷ್ಠತನವೆಂದರೇನೆಂದು ಅರ್ಥವಾದೀತು.

ಸುಗತಾ ಹೋದ ವಾರ ಶಾರದಾ ಪ್ರಸಾದರ ಬಗ್ಗೆ ಬರೆಯುತ್ತಾ, ಪ್ರಸಾದರು ಇಂಗ್ಲಿಷ್ ಪತ್ರಿಕೆಯೊಂದಕ್ಕಾಗಿ ಬರೆಯುತ್ತಿದ್ದ ಅಂಕಣಗಳನ್ನು ತನ್ನ ಪತ್ರಿಕೆಗಾಗಿ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿಕೊಂಡು, ಅವನ್ನು ಅವರು ತನ್ನ ಮೇಲಿನ ವಿಶ್ವಾಸಕ್ಕಾಗಿಯೇ ಬರೆಯುತ್ತಿದ್ದಾರೆಂದು ಪ್ರಚಾರ ಮಾಡಿಕೊಂಡಿದ್ದಲ್ಲದೆ; ಅವರಿಗೆ ಕೊಡಬೇಕಾದ ಸಂಭಾವನೆಗೆ ಸತಾಯಿಸಿ, ಕೊನೆಗೆ ಅವರ ಸ್ನೇಹಿತರ ಆಗ್ರಹದ ಮೇರೆಗೆ ಸಂಭಾವನೆ ಕೊಡಬೇಕಾಗಿ ಬಂದರೂ, ಅದನ್ನು ಅವರು ಬೇಡ ಬೇಡವೆಂದರೂ ತಾನು ಒತ್ತಾಯಪೂರ್ವಕವಾಗಿ ಕಳಿಸಿದ್ದಾಗಿ ಅವರ ಸಾವಿನ ನಂತರ ಯಾವ ಸಂಪಾದಕ ಮಹಾಶಯರು ಬರೆದುಕೊಂಡು ಪತ್ರಿಕೋದ್ಯಮವನ್ನು 'ಬುರುಡೆ' ಮಟ್ಟಕ್ಕೆ ಇಳಿಸಿದ್ದಾರೋ; ಅವರ ಪತ್ರಿಕೆಯಲ್ಲಿ ಇತ್ತೀಚೆಗೆ ಅಂಕಣ ಬರಹವೊಂದು ಪ್ರಕಟವಾಯಿತು. ಬರೀ ಸುಳ್ಳು ಮತ್ತು ಅಪ್ರಬುದ್ಧ ಪ್ರಲಾಪಗಳಿಂದಲೇ ತುಂಬಿಹೋಗಿದ್ದ ಈ ಬರಹ ಇಂದಿನ ಸೂಕ್ಷ್ಮ ಕೋಮು ಪರಿಸ್ಥಿತಿಯಲ್ಲಿ ಅದು ಉಂಟುಮಾಡಬಹುದಾದ ಅಪಾಯವನ್ನು ಗಮನದಲ್ಲಿಟ್ಟುಕೊಂಡು ನಾನು ಅದಕ್ಕೆ ಪ್ರತಿಕ್ರಿಯೆಯೊಂದನ್ನು ಬರೆದು, ಆ ಸಂಪಾದಕ ಮಹಾಶಯರ ವಿಳಾಸಕ್ಕೇ ಈ ಮೇಲ್ ಮಾಡಿದೆ. ಅದನ್ನು ಪತ್ರಿಕೋದ್ಯಮದ ಮೂಲ ತತ್ವಗಳ ಬಗ್ಗೆ ಪ್ರತಿವಾರ ತನ್ನ ಅಂಕಣವೊಂದರಲ್ಲಿ ಬುರುಡೆ ಹೊಡೆಯುವ ಈ ಸಂಪಾದಕ ಮಹಾಶಯ ಪ್ರಕಟಿಸಲಿಲ್ಲ. ಕಾರಣ, ಅದನ್ನು ನೀವೇ ಓದಿದರೆ ಅರ್ಥವಾದೀತು:

'ಮಾನ್ಯರೇ,

ತಮ್ಮ ಪತ್ರಿಕೆಯ ೬.೯.೨೦೦೮ರ ಸಂಚಿಕೆಯಲ್ಲಿ ಪ್ರತಾಪಸಿಂಹ ಎಂಬುವವರು 'ಬೆತ್ತಲೆ ಜಗತ್ತು' ಅಂಕಣದಲ್ಲಿ ಬರೆದಿರುವ 'ನಮಗೆ ಬೇಕಿರುವುದು ಪಿಳ್ಳಂಗೋವಿ ಕೃಷ್ಣನಲ್ಲ' ಎಂಬ ಬರಹ ಓದಿದೆ. ಅಂಕಣಕಾರ ತನ್ನ ಬರಹದಲ್ಲಿ ಯಾವುದೇ ವಿಷಯದ ಬಗ್ಗೆ ತನ್ನ ಅಭಿಪ್ರಾಯ-ಆಲೋಚನೆಗಳನ್ನು ಮಂಡಿಸಬಹುದೇ ಹೊರತು, ಸುಳ್ಳುಗಳನ್ನು ಹರಡಲು ಅಂಕಣವನ್ನು ಬಳಸಬಾರದು ಎಂಬುದನ್ನು ನೀವೂ ಒಪ್ಪುತ್ತೀರೆಂದು ಭಾವಿಸಿ ಈ ಪತ್ರ ಬರೆಯುತ್ತಿದ್ದೇನೆ. ಪ್ರಸ್ತಾಪಿತ ಬರಹದಲ್ಲಿ ಲೇಖಕರು ಎರಡು ಪ್ರಚೋದನಕಾರಿ ಸುಳ್ಳುಗಳನ್ನು ಹೇಳಿದ್ದಾರೆ. ಒಂದು: ಒರಿಸ್ಸಾದಲ್ಲಿ ಸ್ವಾಮಿ ಲಕ್ಷ್ಮಣಾನಂದ ಸರಸ್ವತಿ ಅವರನ್ನು ಮತಾಂಧ ಕ್ರೈಸ್ತರು ಕೊಂದಿದ್ದಾರೆ ಎಂದು. ಎರಡು: ನಮ್ಮ ದೇಶದ ಅಧಃಪತನ ಪ್ರಾರಂಭವಾಗಿದ್ದೇ ಬೌದ್ಧ ಧರ್ಮದ ಪ್ರಗತಿಯೊಂದಿಗೆ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆಂದು.

ಪ್ರತಾಪಸಿಂಹರಂತೆಯೇ ಕಟ್ಟಾ ಹಿಂದೂವಾದಿಯಾದ ಬಿಜೆಪಿ ಭಾಗಿಯಾಗಿರುವ ಒರಿಸ್ಸಾ ಸರ್ಕಾರವೇ ತನ್ನಲ್ಲಿರುವ ಮಾಹಿತಿಯನ್ನಾಧರಿಸಿ ಲಕ್ಷ್ಮಣಾನಂದ ಸರಸ್ವತಿಯವರನ್ನು ಕೊಂದಿರುವುದು ನಕ್ಸಲೈಟರು ಎಂದು ಹೇಳಿದೆ ಮತ್ತು ಅದನ್ನು

ಖಚಿತ ಪಡಿಸಿಕೊಳ್ಳಲು ಮುಂದಿನ ತನಿಖೆಗೆ ಆಜ್ಞಾಪಿಸಿದೆ. ಹೀಗಿರುವಾಗ ಇವರು ಕರ್ನಾಟಕದಲ್ಲಿ ಕೂತು ಒರಿಸ್ಸಾದ ಆ ಘಟನೆ ಬಗ್ಗೆ ತಮ್ಮದೇ ಊಹೆಯ ಮೇಲೆ ತೀರ್ಪು ನೀಡಿದ್ದಾರೆ. ಒರಿಸ್ಸಾದಲ್ಲಿ ಈ ಕೊಲೆಯನ್ನು ನೆಪವಾಗಿಸಿಕೊಂಡು ಹಿಂದೂವಾದಿ ಎಂದು ಹೇಳಿಕೊಳ್ಳುವ ಕೆಲವು ಸಂಘಟನೆಗಳು ಕ್ರಿಶ್ಚಿಯನ್ನರ ಮೇಲೆ ನಡೆಸಿದ ಅಮಾನವೀಯ ಹಿಂಸಾಚಾರವನ್ನು ಸಮರ್ಥಿಸಿಕೊಳ್ಳಲು ಪ್ರತಾಪಸಿಂಹರು ಈ 'ತೀರ್ಪು' ನೀಡುವುದು ಅಗತ್ಯವಾಗಿತ್ತೆಂದೇ ತೋರುತ್ತದೆ. ಅದರ ಆಧಾರದ ಮೇಲೇ ಅವರು ತಮ್ಮ ಬರಹದಲ್ಲಿ ಮುಂದೆ 'ಗಂಡು ಹಿಂದೂ ಧರ್ಮ'ವೆಂಬುದೊಂದನ್ನು ನಿರೂಪಿಸಿಕೊಂಡು, 'ರಜೋ' ಗುಣದ ಮಾತು ಗಳನ್ನಾಡುತ್ತಾ, ಜನರಲ್ಲಿ 'ತಮೋ' ಗುಣಗಳನ್ನು ಪ್ರಚೋದಿಸುವ ಅತಿ ಜಾಣ ಪ್ರಯತ್ನ ಮಾಡಿದ್ದಾರೆ. ಹಿಂದೂ ಧರ್ಮ ಅಪಾಯದಲ್ಲಿದೆ ಎಂದು ಕೂಗು ಹಾಕುತ್ತಿರುವ ಇವರಿಗೆ, ಹಿಂದೂ ಧರ್ಮದ ಧಾರ್ಮಿಕ ಪರಿಭಾಷೆಯ ಪ್ರಾಥಮಿಕ ಪರಿಚಯವೂ ಇದ್ದಂತಿಲ್ಲ. ಹಾಗಾಗಿಯೇ ಇವರು ಆತ್ಮವೆಂದರೇನು ಎಂದು ತಿಳಿಯದೆಯೇ (ಇಂದಿನ ತುರ್ತಿನಲ್ಲಿ ಇದನ್ನೆಲ್ಲ ತಿಳಿಯುವ ಅಗತ್ಯವಿಲ್ಲ ಎಂದು ಇವರು ಹೇಳಿದರೂ ಹೇಳಿಯಾರು!) ಇವರು, 'ದೈವ ಸಾಕ್ಷಾತ್ಕಾರ'ಕ್ಕೆ ಮುನ್ನ 'ಆತ್ಮಸಾಕ್ಷಾತ್ಕಾರ'ವಾಗಬೇಕೆಂದು ಉಪದೇಶ ಮಾಡಹೊರಟಿದ್ದಾರೆ! ಏನನ್ನೂ ಸರಿಯಾಗಿ ಓದದ, ಯೋಚಿಸಲಾಗದ ಮೂರ್ಖರನ್ನು ಅಥವಾ ಕಿಡಿಗೇಡಿಗಳನ್ನಷ್ಟೇ ಇಂತಹ ಪ್ರಯತ್ನಗಳು ಪ್ರಚೋದಿಸಬಲ್ಲವು. ಅಂತಹವರು ಹಿಂದೂ ಧರ್ಮದಲ್ಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆಂದು ಎಂಬುದು ಪ್ರತಾಪ ಸಿಂಹರಂತಹವರಿಗೆ ಗೊತ್ತಿರುವಂತಿದೆ ಮತ್ತು ಅಂತಹವರ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ ಇವರು ಹಿಂದೂ ಧರ್ಮವನ್ನು ಉದ್ಧಾರ ಮಾಡಲು ಹೊರಟಿದ್ದಾರೆ!

ಹಾಗಾಗಿಯೇ ಅವರು, ತಮ್ಮ ಸೇನೆಗಳಲ್ಲಿ ಅನ್ಯಮತೀಯರನ್ನು ಮುಖ್ಯ ಸ್ಥಾನಗಳಲ್ಲಿ ಮತ್ತು ಗಣನೀಯ ಸಂಖ್ಯೆಯಲ್ಲಿ ಹೊಂದಿದ್ದ ಶಿವಾಜಿ ಮತ್ತು ರಾಣಾ ಪ್ರತಾಪರಂತಹವರು ತಮ್ಮ ರಾಜ್ಯ ಸಂರಕ್ಷಣೆಗಾಗಿ ನಡೆಸಿದ ವೀರ ಹೋರಾಟಗಳನ್ನು, ಯಾವುದೋ ಒಂದು ಧರ್ಮದ ಸಂರಕ್ಷಣೆಗಾಗಿ ನಡೆಸಿದ ಹೋರಾಟಗಳಂತೆ ಪ್ರಸ್ತುತ ಪಡಿಸಿದ್ದಾರೆ. ಇವರು ಹೇಳುವ ಹಾಗೆ 'ಧರ್ಮೋ ರಕ್ಷತಿ ರಕ್ಷತಃ' ಎನ್ನುವುದರಲ್ಲಿ ಧರ್ಮ ಎಂದರೆ ಹಿಂದೂ, ಕ್ರಿಶ್ಚಿಯನ್, ಮುಸ್ಲಿಂ ಮುಂತಾದ ಮತ ರೂಪಿ ಧರ್ಮಗಳಲ್ಲ;ಬದಲಿಗೆ, ಸೃಷ್ಟಿಯ ಧಾರಕ ಶಕ್ತಿಯ ಬಗ್ಗೆ ಹೇಳುವ–ಎಲ್ಲ ಮತಗಳ ಮನುಷ್ಯರಿಗೂ ಅನ್ವಯಿಸುವ–ಆದಿ ಧರ್ಮ. ಹಾಗೇ ಇವರು, ಸೋಮನಾಥ ದೇವಸ್ಥಾನದ ಸುತ್ತ ಅಷ್ಟಬಂಧ ಹಾಕಿ ಅದನ್ನು ಯಾರೂ ಅತಿಕ್ರಮಿಸಲಾರರು ಎಂದು ತಮ್ಮ ರಾಜರನ್ನು ನಂಬಿಸಿದ್ದ ಮಧ್ಯಯುಗದ ಮೂಢ ಪುರೋಹಿತರನ್ನು 'ದೇವಾಲಯಕ್ಕೆ ನುಗ್ಗುವ ಮುನ್ನ ನಮ್ಮನ್ನು ಕೊಲ್ಲಿ' ಎಂದು ದೇವಾಲಯದ ಸುತ್ತ ನಿಂತಿದ್ದರೆಂದ್ದು ಹೇಳುತ್ತಾ, ಅವರನ್ನು ಗಾಂಧಿ ಯುಗದ ವೀರ

ಸತ್ಯಾಗ್ರಹಿಗಳಂತೆ ಬಿಂಬಿಸಿದ್ದಾರೆ! ಇದಕ್ಕೆ ತಕ್ಕ ಹಾಗೇ, ಅಹಿಂಸೆಯ ಸ್ವರೂಪವನ್ನು ಮತ್ತು ಶಕ್ತಿಯನ್ನು ನಿರೂಪಿಸಲು ಗಾಂಧಿ ಹೇಳಿದ ಮಾತನ್ನು ಹಿಂಸೆಯನ್ನು ಸಮರ್ಥಿಸಲು ಬಳಸಿಕೊಂಡಿದ್ದಾರೆ. ಇದೆಲ್ಲವೂ ಇತಿಹಾಸಕ್ಕೆ, ನಮ್ಮ ಧರ್ಮ ಮೀಮಾಂಸೆಗೆ, ಗಾಂಧೀಜಿಗೆ ಮಾಡಿದ ಅಪಚಾರವೇ ಆಗಿದೆ.

ಇನ್ನು ಭಾರತದ ಅಧಃಪತನ ಬೌದ್ಧಧರ್ಮದಿಂದ ಆರಂಭವಾಯಿತೆಂದು ವಿವೇಕಾನಂದರು ಎಲ್ಲಿ ಹೇಳಿದ್ದಾರೆಂದು ಪ್ರತಾಪ ಸಿಂಹರೇ ಹೇಳಬೇಕು. ಬುದ್ಧನ ಮುನ್ನ ಭಾರತ ಯಾವ ಸ್ಥಿತಿಯಲ್ಲಿತ್ತು ಮತ್ತು ಅವನ ಕಾಲದಲ್ಲಿ ಮತ್ತು ಆನಂತರ ಯಾವ ಸ್ಥಿತಿ ತಲುಪಿತು ಎಂಬುದನ್ನು ಇತಿಹಾಸವೇ ಸ್ಪಷ್ಟಪಡಿಸುತ್ತದೆ. ಭಾರತದ ಧರ್ಮ, ಸಂಸ್ಕೃತಿ, ಕಲೆ, ತತ್ವಶಾಸ್ತ್ರ, ರಾಜಕಾರಣ ಇತ್ಯಾದಿಗಳೆಲ್ಲವೂ ಪ್ರವರ್ಧಮಾನಕ್ಕೆ ಬಂದು ಹೊರ ದೇಶಗಳಿಗೆ ಹರಡಲಾರಂಭಿಸಿದ್ದು ಯಾವಾಗ ಎಂಬುದನ್ನೂ ಇದು ತಿಳಿಸುತ್ತದೆ. ಅಷ್ಟೇ ಅಲ್ಲ, ಭಾರತದ ಇತಿಹಾಸದಲ್ಲಿನ ಇಬ್ಬರು ಅತಿ ದೊಡ್ಡ ಮತ್ತು ಘನ ಸಾಮ್ರಾಟರು ಅಶೋಕ ಮತ್ತು ಅಕ್ಬರ್, 'ಹಿಂದೂ'ಯೇತರರೇ ಆಗಿದ್ದರು ಎಂಬುದನ್ನು ಕೂಡಾ. ಪ್ರತಾಪ ಸಿಂಹರು ಹೇಳುವ ಹಿಂದೂ ಧರ್ಮ ಬುದ್ಧನ ಪೂರ್ವದಲ್ಲಿ ಇರಲಿಲ್ಲ. ಆಗ ಧರ್ಮವೆಂಬುದೇನಾದರೂ ಇದ್ದಿದ್ದರೆ, ಅದು ವೈದಿಕ ಧರ್ಮ. ಅದನ್ನು ಹಲವು ನೆಲೆಗಳಲ್ಲಿ ಪ್ರಶ್ನಿಸಲಾರಂಭಿಸಿದ್ದ ಶ್ರಮಣ ಪರಂಪರೆಯಲ್ಲಿ ಬಂದ ಬುದ್ಧ, ವೈದಿಕ ಧರ್ಮದ ಮೌಢ್ಯಗಳನ್ನೂ, ಕ್ರೂರ ಆಚರಣೆಗಳನ್ನೂ, ಸಾಮಾಜಿಕ ಅಸಮಾನತೆಗಳನ್ನೂ, ತನ್ನ ಜ್ಞಾನ-ಕರುಣೆಗಳ ಮೂಲಕ ಶುಚಿಗೊಳಿಸದನಷ್ಟೆ. ಬುದ್ಧನ ನಂತರದ ಎಷ್ಟೋ ವರ್ಷಗಳಲ್ಲಿ ವೈದಿಕ, ಬೌದ್ಧವೂ ಸೇರಿದಂತೆ ಇಲ್ಲಿನ ಜನಜೀವನದಲ್ಲಿ ಹುಟ್ಟಿಕೊಂಡ ಅನೇಕ ಸಂಪ್ರದಾಯಗಳು ಪರಸ್ಪರ ಹಾಸುಹೊಕ್ಕಾಗಿ ಮೂಡಿದ್ದ 'ಸಮ್ಮಿಶ್ರ ಧರ್ಮ'ವನ್ನಾಚರಿಸುವವರನ್ನು ಹೊರಗಿನವರು 'ಹಿಂದೂ'ಗಳೆಂದು(ಸಿಂಧೂ ನದಿಯ ಆ ಕಡೆಯವರು ಎಂಬರ್ಥದಲ್ಲಿ) ಕರೆದರಷ್ಟೆ.

ಹಾಗೆ ನೋಡಿದರೆ, ಇಂದಿನ ಹಿಂದೂ ಧರ್ಮವೆಂಬ ಅಖಂಡ ಕಲ್ಪನೆಯೇ; ಕ್ರಿಶ್ಚಿಯನ್, ಇಸ್ಲಾಂ ಮುಂತಾದ ಏಕ-ದೈವ, ಏಕ-ಪ್ರವಾದಿ ಮತ್ತು ಏಕ-ಧರ್ಮ ಗ್ರಂಥಾಧಾರಿತವಾದ ಮರುಭೂಮಿ ಧರ್ಮಗಳ ಎರಕದಲ್ಲಿ ಹುಟ್ಟಿದ ಆಧುನಿಕ ಕಲ್ಪನೆ ಎಂದೂ ಕೆಲವರು ವಾದಿಸುತ್ತಿದ್ದಾರೆ. ಅದೇನೇ ಇರಲಿ, ಬುದ್ಧನ ಧಾರ್ಮಿಕ ಶುಚೀಕರಣವನ್ನು ಸಹಿಸದ ಪಟ್ಟಭದ್ರರು ಬುದ್ಧನ ಕಾಲದಿಂದ ಈ ಕಾಲದವರೆಗೂ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಬುದ್ಧನ ವಿರುದ್ಧ ಅಪಪ್ರಚಾರವನ್ನು ನಡೆಸುತ್ತಲೇ ಬಂದಿದ್ದಾರೆ ಮತ್ತು ಬುದ್ಧನಿಲ್ಲದ ಹಿಂದೂ ಧರ್ಮವನ್ನು ಕಟ್ಟಲು ತಮ್ಮ ಪ್ರಯತ್ನಗಳನ್ನು ಮುಂದುವರೆಸಿದ್ದಾರೆ. ಅಂತಹವರಲ್ಲಿ ಪ್ರತಾಪಸಿಂಹರೂ ಒಬ್ಬರಷ್ಟೆ. ವಿವೇಕಾನಂದರು ತಮ್ಮೆಲ್ಲ ಭಾಷಣಗಳಲ್ಲಿ ಬುದ್ಧನನ್ನು 'ಭಗವಾನ್ ಬುದ್ಧದೇವ'ನೆಂದೇ ಸಂಬೋಧಿಸುತ್ತಿದ್ದರು ಮತ್ತು ತಮ್ಮ ಆರಾಧ್ಯ ದೈವವೆಂದು

ನಂಬಿದ್ದರು. ಅಲ್ಲದೆ, ಆತನನ್ನು, ಹಿಂದೂ ಧರ್ಮ ಯಾವುದನ್ನು ಸನಾತನ ಧರ್ಮವೆಂದು ಕರೆಯುವುದ್ರೋ ಅದರ ಉದ್ಧಾರಕ ಮತ್ತು ಭಾರತದ ಬೆಳಕು ಎಂದೇ ಹೇಳುತ್ತಾ ಬಂದಿದ್ದರು. ಅಂತಹ ವಿವೇಕಾನಂದರನ್ನು ಪ್ರತಾಪ ಸಿಂಹರಂತಹವರು ಬೌದ್ಧ ಧರ್ಮದ ನಿಂದಕರೆಂದು ಚಿತ್ರಿಸ ಹೊರಟಿರುವುದು, ಅನ್ಯಮತಗಳ ಹಾವಳಿಯನ್ನು ಎದುರಿಸುವ ನೆಪದಲ್ಲಿ ಇವರು ನಡೆಸುತ್ತಿರುವ ಧಾರ್ಮಿಕ ರಾಜಕಾರಣ ಎಷ್ಟು ಘಾತುಕತನದಿಂದ ಕೂಡಿದೆ ಎಂಬುದನ್ನಷ್ಟೇ ತೋರಿಸುತ್ತದೆ. ಇಂತಹವರಿಗೆ ಮತ್ತೇನೂ ಹೇಳಿಯೂ ಉಪಯೋಗವಿಲ್ಲವಾದ್ದರಿಂದ, ಅವರಿಗೆ ವಿವೇಕಾನಂದರ ಢಾಕ್ಕಾ ಭಾಷಣದ ಈ ಮಾತುಗಳನ್ನೇ ನೆನಪಿಸುವುದು ಉಚಿತವೆಂದು ಇಲ್ಲಿ ಉದ್ಧರಿಸುತ್ತಿದ್ದೇನೆ:

"....ನಿಮ್ಮ ಪೂರ್ವಿಕರ ಮಾತಿನಲ್ಲಿ ನಿಮಗೆ ನಂಬಿಕೆ ಇನ್ನೂ ಇದ್ದರೆ, ಈ ಕ್ಷಣವೇ ಹಿಂದೆ ಕುಮಾರಿಲ ಭಟ್ಟ ತನ್ನ ಬಗ್ಗೆ ಸುಳ್ಳು ಹೇಳಿಕೊಂಡು ಒಬ್ಬ ಬೌದ್ಧ ಗುರುವಿನಲ್ಲಿ ಕಲಿತದ್ದರ ಆಧಾರದ ಮೇಲೆ, ಆ ಗುರುವನ್ನೇ ವಾದದಲ್ಲಿ ಸೋಲಿಸಿ; ಆನಂತರ, ಸುಳ್ಳು ಹೇಳಿ ಗೈದ ಆ ಗುರು ದ್ರೋಹದ ಪ್ರಾಯಶ್ಚಿತ್ತಕ್ಕಾಗಿ ತುಷಾನಲದಲ್ಲಿ ಬಿದ್ದಂತೆ, ನೀವೂ ಬಿದ್ದು ಪ್ರಾಯಶ್ಚಿತ್ತ ಮಾಡಿಕೊಳ್ಳಿ. ಇದನ್ನು ಮಾಡುವುದಕ್ಕೆ ನಿಮಗೆ ಧೈರ್ಯವಿಲ್ಲದೇ ಇದ್ದಲ್ಲಿ, ನಿಮ್ಮ ತಪ್ಪನ್ನು ಒಪ್ಪಿಕೊಂಡು ಎಲ್ಲರಿಗೂ ಸಹಾಯ ಮಾಡಿ. ಜ್ಞಾನಾಗಾರದ ಬಾಗಿಲನ್ನು ಎಲ್ಲರಿಗೂ ತೆರೆದು ಸಹಾಯ ಮಾಡಿ. ದುರ್ಬಲ ಜನ ಸಾಮಾನ್ಯರಿಗೆ ಮತ್ತೊಮ್ಮೆ ಅವರಿಗೆ ನ್ಯಾಯವಾಗಿ ಸಲ್ಲುವ ಹಕ್ಕು ಬಾಧ್ಯತೆಗಳನ್ನು ಕೊಡಿ."

ವಿವೇಕಾನಂದರ ಈ ಎಚ್ಚರಿಕೆಯ ಮಾತುಗಳಿಗೆ ಕಿವಿಗೊಡದೆ ತಮ್ಮ ಭೋಜನ- ಬೈಠಕ್ಕುಗಳಲ್ಲೇ ಕಾಲ ಕಳೆದ ಬುದ್ಧ ನಿಂದಕರು, ತಾವು ಮಾಡದ ಕೆಲಸವನ್ನು ಕ್ರಿಶ್ಚಿಯನ್ ಮಿಷನರಿಗಳು ಮಾಡತೊಡಗಿದಾಗ, ತಮ್ಮ ಸಾಮ್ರಾಜ್ಯ ಕುಸಿಯುತ್ತಿರುವ ಆತಂಕದಲ್ಲಿ ಈಗ ದೇಶ ಪ್ರೇಮ ಹಾಗೂ ಧರ್ಮ ಪ್ರೇಮದ ಬೊಬ್ಬೆ ಹೊಡೆಯತೊಡಗಿದ್ದಾರೆ. ಪ್ರತಾಪಸಿಂಹರದೂ ಅಂತಹ ಒಂದು ಬೊಬ್ಬೆಯೇ ಆಗಿದೆ. ಇಂತಹ ಬೊಬ್ಬೆಯಿಂದ ಮತಾಂತರವೂ ನಿಲ್ಲದು, ಹಿಂದೂ ಧರ್ಮವೂ ಉದ್ಧಾರವಾಗದು.'

–ಡಿ.ಎಸ್. ನಾಗಭೂಷಣ

*

ಈ ನನ್ನ ಪತ್ರದ ನಂತರವೂ ಈ ಪತ್ರಿಕೆ, ನಾನು ಈ ಪತ್ರದಲ್ಲಿ ಉಲ್ಲೇಖಿಸಿರುವ ಸುಳ್ಳುಗಳನ್ನು ಒಳಗೊಂಡ ಮತ್ತು ಈ ಹಿಂದೂ ದೇಶದಲ್ಲಿ ಹಿಂದೂಗಳಿಗೇ ರಕ್ಷಣೆಯಿಲ್ಲ ಎಂದು ಬೊಬ್ಬೆ ಹಾಕುವ ಓದುಗರ ಪತ್ರಗಳನ್ನು ಮತ್ತೆ ಮತ್ತೆ ಪ್ರಕಟಿಸುತ್ತಲೇ ಇದೆ ಎಂದರೆ, ಇದರ ಉದ್ದೇಶ ಏನೆಂಬುದು ಸ್ಪಷ್ಟವಾದೀತು. ಇದೇ ಪತ್ರಿಕೆ ಗೋಕರ್ಣ ದೇವಸ್ಥಾನದ

ಹಸ್ತಾಂತರದ ವಿರುದ್ಧ ಗೋಕರ್ಣದಲ್ಲಿ ವ್ಯಾಪಕ ಪ್ರತಿಭಟನೆ ನಡೆದಿದ್ದರೂ, ಅದರ ಬಗ್ಗೆ ಒಂದು ಸಾಲೂ ಪ್ರಕಟಿಸಿದೆ, ನಾಲ್ಕು ದಿನ ನಿರಂತರವಾಗಿ ಹಸ್ತಾಂತರ ಸುಗಮ, ಎಲ್ಲರಿಗೂ ಸಂತೋಷ ತಂದಿದೆ ಎಂದು ಏಕೆ ಪ್ರಕಟಿಸುತ್ತಿದೆ ಎಂದು ವಿಚಾರಿಸಿದಾಗ ಗೊತ್ತಾದದ್ದು ಇದರ ಸಂಪಾದಕ ಮಹಾಶಯನೂ ರಾಮಚಂದ್ರಾಪುರ ಮಠದ ಬಾಧ್ಯಸ್ಥನೇ ಎಂದು! ಇದು ನಮ್ಮ ವಸಿಷ್ಠ ಪರಂಪರೆಯ ಒಂದು ಮಾದರಿ. ಮೊನ್ನೆ ನನ್ನ ಸ್ನೇಹಿತರೊಬ್ಬರು ಈ ಪತ್ರಿಕೆಯ ವ್ಯಾಪಕ ಪ್ರಸಾರದ ಬಗ್ಗೆ ತಮ್ಮ ಆತಂಕವನ್ನು ವ್ಯಕ್ತಪಡಿಸುತ್ತಾ, ತಮ್ಮ ತಂದೆಗೆ ಈ ಪತ್ರಿಕೆಯಲ್ಲಿ ಬರುವುದೆಲ್ಲವೂ ವೇದವಾಕ್ಯವಾಗಿದೆ ಎಂದು ಅಲವತ್ತುಕೊಂಡಾಗ, ನನಗೆ 'ವೇದವಾಕ್ಯ'ವೆಂಬುದರ ನಿಜವಾದ ಅರ್ಥ ಗೊತ್ತಾದಂತಾಗಿ ಗಾಬರಿಯಾದೆ!

(ಸೆಪ್ಟೆಂಬರ್ ೨೬, ೨೦೦೮)

■

೨೨. ಶಾರದಾ ಪ್ರಸಾದ್: ಮೂರು ಭೇಟಿಗಳು ಮತ್ತು ಒಂದು ಪ್ರಶ್ನೆ!

ನಾನು ದೆಹಲಿಯಲ್ಲಿದ್ದ ಅವಧಿಯಲ್ಲಿ(೧೯೭೫ರಿಂದ ೧೯೮೧) ಶಾರದಾ ಪ್ರಸಾದರನ್ನು ಭೇಟಿಯಾದದ್ದು ಮೂರೇ ಮೂರು ಬಾರಿ. ನಾನು ೧೯೭೫ರಲ್ಲಿ ದೆಹಲಿಗೆ ಆಕಾಶವಾಣಿ ವಾರ್ತಾ ವಿಭಾಗದ ಕೆಲಸದ ಮೇಲೆ ಹೋದಾಗ, ಅವರು ಪ್ರಧಾನ ಮಂತ್ರಿ ಕಾರ್ಯಾಲಯದಲ್ಲಿ ಪ್ರಧಾನ ಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿದ್ದು; ದೆಹಲಿಯಲ್ಲಿದ್ದ ಕನ್ನಡದ ಅಧಿಕಾರಿಗಳಲ್ಲಿ ಅಧಿಕಾರ ಕೇಂದ್ರಕ್ಕೆ ಬಹು ಹತ್ತಿರವಿದ್ದ ಅಧಿಕಾರಿ ಅವರೇ ಆಗಿದ್ದರು. ಹಾಗಾಗಿ ಅವರನ್ನು ಭೇಟಿ ಮಾಡುವುದು ಅಷ್ಟು ಸುಲಭದ ಅಥವಾ ಸುಗಮವಾದ ಕೆಲಸವಾಗಿರಲಿಲ್ಲ. ಆದರೆ ಅವರು ಆಗಾಗ್ಗೆ ದೆಹಲಿ ಕನ್ನಡ ಸಂಘದ ಸಮಾರಂಭಗಳಲ್ಲಿ ಕಾಣಿಸಿಕೊಳ್ಳುತ್ತಿದ್ದುದೂ ಉಂಟು. ಅಂತಹ ಸಂದರ್ಭದಲ್ಲಿ ನಾನು ಮೊದಲ ಬಾರಿಗೆ ಅವರನ್ನು ಕಂಡದ್ದು.

೧೯೭೫ರಲ್ಲಿ, ತುರ್ತು ಪರಿಸ್ಥಿತಿ ಘೋಷಣೆಯಾಗುವ ಸ್ವಲ್ಪ ಮುನ್ನ ಆಕಾಶವಾಣಿಯ ನನ್ನ ಹಿರಿಯ ಸಹೋದ್ಯೋಗಿ ಎಚ್.ಕೆ. ರಾಮಕೃಷ್ಣ ಅವರು ನನ್ನನ್ನು ಅಂತಹ ಸಮಾರಂಭ ವೊಂದರಲ್ಲಿ 'ಕನ್ನಡ ಲೇಖಕ' ಎಂದು ಶಾರದಾ ಪ್ರಸಾದರಿಗೆ ಪರಿಚಯಿಸಿದರು. ತಕ್ಷಣ ಅವರು 'ಸಾಕ್ಷಿ'ಯಲ್ಲಿ ಸಿನೆಮಾ ಬಗ್ಗೆ ಬರೆದಿರುವವರು ನೀವೇ ಅಲ್ಲವೇ ಎಂದು ವಿಚಾರಿಸಿಕೊಂಡು, ನೀವು ದೆಹಲಿಗೆ ಬಂದಿರುವುದು ಸಂತೋಷ ಎಂದು ನನ್ನ ಕೈ ಕುಲಕಿ ತಮ್ಮ ಪಕ್ಕದಲ್ಲಿ ಕೂರಿಸಿಕೊಂಡರು. ಆ ಹಿರಿಯ ಅಧಿಕಾರಿ ನನ್ನಂತಹ ಕಿರಿಯನನ್ನು ಅಷ್ಟೊಂದು ಆದರ ಮತ್ತು ಆತ್ಮೀಯತೆಯಿಂದ ಮಾತನಾಡಿಸಿದ್ದು ನನಗೆ ಸಂಭ್ರಮದ ಜೊತೆಗೆ ಸ್ವಲ್ಪ ಗಾಬರಿಯೂ ಉಂಟಾಗಿತ್ತು. ಏಕೆಂದರೆ, ಅಧಿಕಾರಿಗಳ ಸನಿಹ ಎಂದರೆ ನನಗೆ ಮೊದಲಿಂದಲೂ ಮುಜುಗರದ ವಿಷಯವೇ! ಆಗ ನಾನು ಗೋಪಾಲಕೃಷ್ಣ ಅಡಿಗರ ಸಂಪಾದಕತ್ವದಲ್ಲಿ ಕೆ.ವಿ.ಸುಬ್ಬಣ್ಣ ಅವರು ಪ್ರಕಟಿಸುತ್ತಿದ್ದ 'ಸಾಕ್ಷಿ' ಪತ್ರಿಕೆಯಲ್ಲಿ ಅಂದು ನವ್ಯ ಸಾಹಿತ್ಯದ ಜೊತೆಗೇ ಬೆಳೆಯುತ್ತಿದ್ದ ಹೊಸ ಸಿನೆಮಾ ಚಳುವಳಿಯ ಬಗ್ಗೆ ಉತ್ಸಾಹದಿಂದ ಬರೆದಿದ್ದೆ. ಅದನ್ನು ಗಮನಿಸಿದ್ದ ಅವರು ನಿಮಗೆ ಸಿನೆಮಾಗಳಲ್ಲಿ ಅಷ್ಟೊಂದು ಆಸಕ್ತಿಯಿದ್ದರೆ, 'ದೆಹಲಿ ಫಿಲ್ಮ್ ಸೊಸೈಟಿ'ಗೆ ಸದಸ್ಯನಾಗುವಂತೆಯೂ, ಅದಕ್ಕೆ ತಾವು ಪರಿಚಯ ಪತ್ರ

ನೀಡುವುದಾಗಿಯೂ ಹೇಳಿದರು. ಅಲ್ಲದೆ, ನನ್ನ ಸಾಹಿತ್ಯ ಓದಿನ ಬಗ್ಗೆ ಕುತೂಹಲದಿಂದ ವಿಚಾರಿಸಿಕೊಂಡು, ರವೀಂದ್ರ ಭವನದಲ್ಲಿ ಒಳ್ಳೆಯ ಕನ್ನಡ ಪುಸ್ತಕಗಳ ಸಂಗ್ರಹ ಇರುವುದಾಗಿಯೂ, ಅಲ್ಲಿ ನನ್ನ ಓದನ್ನು ಮುಂದುವರಿಸಬೇಕೆಂದೂ ಸೂಚಿಸಿ ಮತ್ತೆ ಕೈಕುಲುಕಿ ಬೀಳ್ಕೊಟ್ಟರು.

ಆದರೆ ಒಂದೆರಡು ವರ್ಷಗಳ ನಂತರವಷ್ಟೇ ನಾನು ಅವರನ್ನು ಮತ್ತೆ ಕಾಣಲು ಸಾಧ್ಯವಾದದ್ದು. ಕನ್ನಡ ಸಂಘದ ಸಮಾರಂಭವೊಂದಕ್ಕೆ ತಡವಾಗಿ ಹೋದ ನಾನು ಆಸನಗಳ ಸಾಲುಗಳ ಮಧ್ಯೆ ಜಾಗ ಹುಡುಕುತ್ತಾ ಹೊರಟಿದ್ದಾಗ, ವೇದಿಕೆಯ ಮೇಲಿದ್ದ ಶಾರದಾ ಪ್ರಸಾದರು ಅಲ್ಲಿಂದಲೇ ಕೈ ಬೀಸಿ ಪರಿಚಯದ ನಗೆ ನಕ್ಕರು. ನಾನು ತಬ್ಬಿಬ್ಬಾಗಿ, ಬಹುಶಃ ಅವರು ನನ್ನ ಬೆನ್ನ ಹಿಂದಿನ ಸಾಲುಗಳಲ್ಲಿ ಕೂತಿರುವ ಮತ್ಯಾರೋ ಮುಖ್ಯ ವ್ಯಕ್ತಿ ಅಥವಾ ಪರಿಚಿತರನ್ನು ಗುರುತಿಸಿ ಕೈಬೀಸಿರಬೇಕೆಂದುಕೊಂಡು ಹಿಂದಕ್ಕೆ ನೋಡಲು ಯತ್ನಿಸುತ್ತಿದ್ದಂತೆಯೇ, ಅವರು ಮತ್ತೆ ನನ್ನತ್ತಲೇ ಕೈ ಆಡಿಸುತ್ತಾ, ನಕ್ಕರು. ಎರಡು ವರ್ಷಗಳ ಕಾಲ ಅವರನ್ನು ಭೇಟಿಯೇ ಆಗದ ನಾನು ಅವರಿಗೆ ಅಷ್ಟು ಮುಖ್ಯ ವ್ಯಕ್ತಿಯಾಗಿರಲು ಹೇಗೆ ಸಾಧ್ಯ ಹಾಗೂ ಏನು ಕಾರಣ ಎಂದು ಯೋಚಿಸುತ್ತಲೇ, ಅರ್ಧ ಸಂಭ್ರಮ-ಅರ್ಧ ಗೊಂದಲದಲ್ಲಿ ಸಮಾರಂಭದುದ್ದಕ್ಕೂ ಕೂತಿದ್ದೆ. ಸಮಾರಂಭದ ನಂತರ ದಡಬಡನೆ ಹೋಗಿ ಭೇಟಿಯಾದೆ.

ಉಭಯ ಕುಶಲೋಪರಿಯ ನಂತರ ಅವರಿಂದ ಹೊರಟ ಉದ್ಗಾರ: 'So you are turning political!'. ನನಗೆ ಅಂದಿನ ನನ್ನ ಅಂದಿನ ಚಟುವಟಿಕೆಗಳ ಹಿನ್ನೆಲೆಯಲ್ಲಿ ಗಾಬರಿಯಾಗಿ, 'ಯಾಕೆ ಸರ್?' ಎಂದೆ. ಅವರು 'ನಿಮ್ಮ ಸಖೋರೋವ್ ಲೇಖನ ಓದಿದೆ' ಎಂದು ಕಂಡೂ ಕಾಣದಂತೆ ನಕ್ಕರು. ನಾನು ಸಮಾಧಾನದ ನಿಟ್ಟುಸಿರಿಟ್ಟೆ! ಅದು ಆ ದಿನಗಳಲ್ಲಿ ಸುದ್ದಿಯಾಗಿದ್ದ ಸೋವಿಯತ್ ಒಕ್ಕೂಟದ ಭಿನ್ನಮತೀಯ ವಿಜ್ಞಾನಿ ಸಖರೋವ್ ಬಗ್ಗೆ ನಾನು ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ 'ಸಾಕ್ಷಿ'ಯಲ್ಲಿ ಬರೆದಿದ್ದ ಲೇಖನ. ನಂತರ ಆ ಲೇಖನದ ಬಗ್ಗೆ ಏನೂ ಮಾತಾಡದೆ ಇದ್ದಕ್ಕಿದ್ದಂತೆ, 'ದೆಹಲಿ ಫಿಲ್ಮ್ ಸೊಸೈಟಿಗೆ ಸದಸ್ಯರಾದಿರಾ?' ಎಂದು ಕೇಳಿದರು. ಅವರ ನೆನಪು ಹಾಗೂ ಈ ಆತ್ಮೀಯತೆ ನನ್ನನ್ನು ದಂಗು ಬಡಿಸಿತು. ಆ ಹೊತ್ತಿಗೆ ತುರ್ತು ಪರಿಸ್ಥಿತಿ ಘೋಷಣೆಯಾಗಿ ನಾನು ಹಲವು ಗೆಳೆಯರ ಸ್ಫೂರ್ತಿಯಲ್ಲಿ ಆಗ ನನ್ನೆಲ್ಲಾ ಆಸಕ್ತಿಯನ್ನು ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದುದರಿಂದ, 'ಕ್ಷಮಿಸಿ ಸರ್, ಆಗಲಿಲ್ಲ' ಎಂದೆ. ಅವರು ಏಕೆ ಎಂದೇನೂ ಕೇಳಲಿಲ್ಲ. 'Bad boy!' ಎಂದಷ್ಟೇ ಹೇಳಿ ಇತರರೊಂದಿಗೆ ಮಾತಿಗೆ ಹೊರಳಿದರು.

ಮತ್ತೆ ಅವರನ್ನು ನಾನು ಭೇಟಿ ಮಾಡಿದ್ದು ಪ್ರಧಾನ ಮಂತ್ರಿಯ ಕಾರ್ಯಾಲಯದಲ್ಲಿ. ೧೯೭೮ರಲ್ಲೋ ೭೯ರಲ್ಲೋ ಎಂದು ಕಾಣುತ್ತದೆ. ಆ ಹೊತ್ತಿಗೆ ಇಂದಿರಾ ಗಾಂಧಿ ಪದಚ್ಯುತರಾಗಿ ಮೊರಾರ್ಜಿ ದೇಸಾಯಿ ಪ್ರಧಾನ ಮಂತ್ರಿಯಾಗಿ, ಅವರು ಶಾರದಾ ಪ್ರಸಾದರನ್ನೇ ತಮ್ಮ ಮಾಧ್ಯಮ ಸಲಹಾಗಾರರನ್ನಾಗಿ ನೇಮಿಸಿಕೊಂಡಿದ್ದರು. ಬೆಂಗಳೂರಿನಿಂದ ಬಂದಿದ್ದ ನನ್ನ ಗಣಿತಶಾಸ್ತ್ರ ಪ್ರಾಧ್ಯಾಪಕ ಪ್ರೊ॥ ರಮೇಶನ್ ಅವರು ತಮ್ಮ ಸಹಪಾಠಿ ಶಾರದಾ ಪ್ರಸಾದರನ್ನು ಭೇಟಿ ಮಾಡಬೇಕೆಂದಾಗ. ನಾನು ಫೋನ್ ಮಾಡಿ ಸಚಿವಾಲಯದಲ್ಲಿದ್ದ

ಅವರ ಕಛೇರಿಗೆ ಹೋದೆವು. ಅವರು ತಮ್ಮ ಕಛೇರಿಯ ಬಾಗಿಲ ಬಳಿಯೇ ಬಂದು ನಮ್ಮನ್ನು ಬರಮಾಡಿಕೊಂಡರು. ನನ್ನ ಪ್ರಾಧ್ಯಾಪಕರು ನನ್ನ ಬಗ್ಗೆ 'ಇವರು ನಿಮಗೆ ಗೊತ್ತೇ?' ಎಂದು ಕೇಳಿದಾಗ, ಅವರು ಸಣ್ಣಗೆ ನಕ್ಕು, 'Oh Yes, he is the bad boy of Delhi Kannada World!' ಎಂದೆನ್ನುತ್ತಾ ನನ್ನಲ್ಲಿ ಕೊಂಚ ಗಾಬರಿಯನ್ನೇ ಉಂಟು ಮಾಡಿದರು. ಏಕೆಂದರೆ ಕೆಲವೇ ದಿನಗಳ ಹಿಂದೆ ನಾವು ಕೆಲವು ಸಮಾಜವಾದಿ ಗೆಳೆಯರು, ಜನತಾ ಸರ್ಕಾರ ಜೆಪಿಯವರ ಸೂಚನೆಗಳನ್ನು ನಿರ್ಲಕ್ಷಿಸುತ್ತಿರುವುದರ ವಿರುದ್ಧ ರಾಜಘಾಟ್‌ನಲ್ಲಿ ಹಿರಿಯ ಪತ್ರಕರ್ತ ಕುಲದೀಪ್ ನಯ್ಯಾರ್‌ರ ನೇತೃತ್ವದಲ್ಲಿ ಧರಣಿ ಕೂತಿದ್ದರ ಚಿತ್ರ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಮುಖಪುಟದಲ್ಲೇ ಪ್ರಕಟವಾಗಿ, ನನ್ನ ಸಹೋದ್ಯೋಗಿಗಳೂ ಸೇರಿದಂತೆ ನನ್ನ ಪರಿಚಿತರೆಲ್ಲರ ಗಮನ ಸೆಳೆದಿತ್ತು.

ಆದರೆ ಶಾರದಾ ಪ್ರಸಾದರು, 'ಅಲ್ಲಪ್ಪಾ, ನಿಮ್ಮನ್ನು ಸಾಹಿತ್ಯ ಗೊತ್ತಿರುವವರು ಎಂದು ಸಾಹಿತ್ಯ ಸಮ್ಮೇಳನದ ಸಮಿತಿಯೊಂದಕ್ಕೆ ಹಾಕಿದರೆ, ನೀವು ಆ ಕಡೆ ಸುಳಿಯಲೇ ಇಲ್ಲವಂತೆ!' ಎಂದು ಆಗ ದೆಹಲಿಯಲ್ಲಿ ನಡೆದಿದ್ದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಬಗ್ಗೆ ಪ್ರಸ್ತಾಪಿಸಿ ನನ್ನನ್ನು ಛೇಡಿಸಿದಾಗ, ನಾನು 'ಸದ್ಯ!' ಎಂದು ನಿಟ್ಟುಸಿರುಬಿಟ್ಟೆ. ಅಡಿಗರು ಸಾಹಿತ್ಯ ಪರಿಷತ್ತಿನ ಅಪ್ರಸ್ತುತತೆ ಮತ್ತು ಅನಾಚಾರಗಳ ಬಗ್ಗೆ ಬರೆದಿದ್ದುದನ್ನು ಓದಿದ್ದ ನಾನು ಆಗ ಆ ಕಡೆ ಸುಳಿಯುವುದೇ ಸಾಂಸ್ಕೃತಿಕ ಪಾಪವೆಂದೇ ಪರಿಗಣಿಸಿ ದೂರವಿದ್ದೆ. (ನಂತರ ಅಡಿಗರೇ ಉಲ್ಟಾ ಹೊಡೆದು, ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಒಪ್ಪಿ ನಮ್ಮನ್ನೆಲ್ಲ ಮುಜುಗರಕ್ಕೀಡು ಮಾಡಿದ್ದು ಬೇರೆ ವಿಷಯ!) ಅದನ್ನು ಅವರಿಗೆ ಹೇಳಿದಾಗ, 'ಇರಬಹುದು. ಆದರೆ ನಿಮ್ಮಂತಹವರು ಅಲ್ಲಿ ಕೆಲಸ ಮಾಡಿ ಅದಕ್ಕೆ ಒಳ್ಳೆಯ ಹೆಸರು ತರಬಹುದಲ್ಲ!' ಎಂದು ಪ್ರತಿಕ್ರಿಯಿಸಿ, ನಂತರ ಅದೆಲ್ಲ ಮುಖ್ಯವಲ್ಲವೆಂಬಂತೆ ನನ್ನ ಪ್ರಾಧ್ಯಾಪಕ ಮತ್ತು ಅವರ ಗೆಳೆಯ ಪ್ರೊ|| ರಮೇಶನ್‌ರೊಂದಿಗೆ ತಮ್ಮ ಹಳೆಯ ನೆನುಪುಗಳ ಬುತ್ತಿಯನ್ನು ಬಿಚ್ಚಿಕೊಂಡು ಮಾತಿಗೆ ತೊಡಗಿದರು. ಮುಖ್ಯವಾಗಿ ಬ್ರಿಟಿಷ್ ಆಡಳಿತದ ಮತ್ತು ಸ್ವಾತಂತ್ರ್ಯ ಹೋರಾಟದ ಕಾಲದ ನೆನಪುಗಳು.

ನಾನು ಸುಮ್ಮನೆ ಇದನ್ನು ಕೂತು ಕೇಳುತ್ತಾ ಇದ್ದಂತೆ, ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿ ನಾಯಕರಾಗಿ ಸ್ವತಃ ಭಾಗವಹಿಸಿದ್ದ ಶಾರದಾ ಪ್ರಸಾದರನ್ನು ನನ್ನನ್ನು ಬಹು ದಿನಗಳಿಂದ ಕಾಡುತ್ತಿದ್ದ ಪ್ರಶ್ನೆಯನ್ನು ಕೇಳುವ ತೀವ್ರ ತುಡಿತ ಉಂಟಾಯಿತು. ತಡೆಯಲಾರದೆ, ಅಲ್ಲಿಂದ ಹೊರಡುವ ಮುನ್ನ ಅವರ ಅನುಮತಿ ಬೇಡಿ ಕೇಳಿಯೇ ಬಿಟ್ಟೆ: 'ಸರ್ ನೀವೇಕೆ ತುರ್ತು ಪರಿಸ್ಥಿತಿ ಸಮಯದಲ್ಲಿ ನಿಮ್ಮ ಕೆಲಸಕ್ಕೆ ರಾಜೀನಾಮೆ ನೀಡಲಿಲ್ಲ ಅಥವಾ ಕೆಲಸ ಬದಲಾಯಿಸಿಕೊಳ್ಳಲಿಲ್ಲ?' ಅವರು ಕೊಂಚವೂ ಮುಜುಗರಕ್ಕೊಳಗಾಗದೆ ಅಥವಾ ಅಪ್ರತಿಭರಾಗದೆ, ಈ ಕಿರಿಯನ ತಲೆ ಪ್ರತಿಷ್ಠೆಯ ಪ್ರಶ್ನೆಗೆ ಥಣ್ಣಗೆ ಹೀಗೆ ಉತ್ತರಿಸಿದರು: 'ನೀವು ಏಕೆ ರಾಜೀನಾಮೆ ಕೊಡಲಾಗಲಿಲ್ಲವೋ ಅಥವಾ ಕೆಲಸ ಬದಲಾಯಿಸಿಕೊಳ್ಳಲಿಲ್ಲವೋ ಅದೇ ಕಾರಣಕ್ಕೆ!'

ಶಾರದಾ ಪ್ರಸಾದರು ಎಂದೂ ತಾವಿದ್ದ ಉನ್ನತ ಹುದ್ದೆಯನ್ನು ಅಧಿಕಾರ ಸ್ಥಾನವೆಂದು ಭಾವಿಸಿಕೊಳ್ಳಲಿಲ್ಲ ಮತ್ತು ತಮ್ಮನ್ನು ಎಂದೂ ಇತರರಿಗಿಂತ ಸ್ಥಾನಮಾನಗಳಲ್ಲಿ ದೊಡ್ಡವನು ಎಂದು ಪರಿಗಣಿಸಿಕೊಂಡಿರಲಿಲ್ಲ. ಹಾಗಾಗಿಯೇ ಅವರಿಗೆ ನನ್ನಂತಹ ಕಿರಿಯನೊಂದಿಗೆ ಮತ್ತು ಸ್ಥಾನಮಾನಗಳಲ್ಲಿ ತಮಗಿಂತ ಬಹಳ ಕೆಳಗಿದ್ದವನೊಂದಿಗೆ ತಮ್ಮನ್ನು ಹೋಲಿಸಿಕೊಂಡು ಆ ಉತ್ತರ ಕೊಡಲು ಸಾಧ್ಯವಾಗಿತ್ತು. ಅಷ್ಟೇ ಅಲ್ಲ, ಅವರ ಉತ್ತರ ಅನ್ಯರಿಂದ ಮಾತ್ರ 'ಆದರ್ಶ' ನಿರೀಕ್ಷಿಸುವ ಅಂದಿನ ನನ್ನ ಅಪ್ರಬುದ್ಧತೆಯನ್ನೂ ಎತ್ತಿ ತೋರಿಸಿತ್ತು. ನನಗೆ ನಾಚಿಕೆಯಾದಂತಾಗಿ, ಆ ಹಿರಿಯ ಹಾಗೂ ಸ್ಥಿತಪ್ರಜ್ಞನಿಗೆ ನಮಿಸಿ ಅವರ ಕಾರ್ಯಾಲಯದಿಂದ ಹೊರಬಂದೆ.

(೨೬ ಸೆಪ್ಟಂಬರ್, ೨೦೦೮)

■

೨೩. ಹರ ಕೊಲ್ಲಲ್ ಪರ ಕಾಯ್ವನೆ?

'**ಗೆ**ದ್ದವನು ಸೋತ, ಸೋತವನು ಸತ್ತ!' ಇದು ನಮ್ಮ ನ್ಯಾಯದಾನ ಪದ್ಧತಿ ಕುರಿತಂತೆ ಪ್ರಚಲಿತವಿರುವ ಜನಪ್ರಿಯ ಗಾದೆ. ಇದನ್ನು ಇತ್ತೀಚೆಗೆ ನ್ಯಾಯಾಲಯದ ಮೆಟ್ಟಿಲನ್ನು ಅನಿವಾರ್ಯವಾಗಿ ಏರಬೇಕಾಗಿ ಬಂದು, ಹಲವು ವರ್ಷಗಳ ಕಾಲ ಕಟಕಟೆಯಲ್ಲಿ ನಿಂತೂ ನಿಂತೂ ಸುಸ್ತಾಗಿ ಹೋಗಿರುವ ನನ್ನ ಸ್ನೇಹಿತರೊಬ್ಬರು ಇನ್ನಷ್ಟು ಸುಧಾರಿಸಿ ಹೇಳಿದ್ದು ಹೀಗೆ: 'ಕೋರ್ಟಿಗೆ ಹೋದ ಯಾರಿಗಾದರೂ ದೇವರಲ್ಲಿ ನಂಬಿಕೆ ಬಂದುಬಿಡುತ್ತದೆ!' ಏಕೆಂದರೆ, ಅಲ್ಲಿನ ವಿಧಿ ವಿಧಾನಗಳ ಮಧ್ಯೆ ಸಿಕ್ಕಿಹಾಕಿಕೊಂಡವರನ್ನು ದೇವರು ಮಾತ್ರ ರಕ್ಷಿಸಬಲ್ಲ! ಅಲ್ಲದೆ, ಪ್ರಕರಣಗಳ ದಾಖಲು, ಸ್ವೀಕೃತಿ, ಮುಂದೂಡಿಕೆ, ಮುಂದೂಡಿಕೆಗೆ ಕೊಡುವ ಕಾರಣಗಳು, ಅವನ್ನು ಒಪ್ಪಲು ಇರುವ ಅವಕಾಶಗಳು, ಕೊನೆಯಿಲ್ಲದಂತೆ ಎಳೆದುಕೊಂಡು ಹೋಗುವ ವಿಚಾರಣೆ, ಇದೆಲ್ಲ ಆದ ಮೇಲೆ ನೀಡಲಾಗುವ ನ್ಯಾಯ, ಅದಕ್ಕೆ ಮೇಲಿನ ನ್ಯಾಯಾಲಯಗಳಿಂದ ಸಿಗುವ ತಡೆಯಾಜ್ಞೆ, ಅದರ ತೆರವು, ಮತ್ತೆ ವಿಚಾರಣೆಗಳು, ಮುಂದೂಡಿಕೆಗಳು–ಈ ವಿಷವ್ಯೂಹದ ತರ್ಕದ ಗೋಜಲಿನ ಹಿಂದಿನ 'ನ್ಯಾಯ ಪ್ರಜ್ಞೆ'ಯನ್ನು ಸರ್ವಜ್ಞನಾದ ಆ ದೇವರು ಮಾತ್ರ ವಿವರಿಸಬಲ್ಲ! ನಾನೊಮ್ಮೆ ನನ್ನ ಸೇವಾ ವಿಷಯದಲ್ಲಿ ನ್ಯಾಯಾಲಯಕ್ಕೆ ಹೋಗಬೇಕಾಗುವುದೇನೋ ಎಂದು, ಹಾಗೆ ನ್ಯಾಯಾಧಿಕಾರವೊಂದರ ಮೊರೆ ಹೊಕ್ಕಿದ್ದ ನನ್ನ ಹಿರಿಯ ಸ್ನೇಹಿತರೊಬ್ಬರ ಬಳಿ ನನ್ನ ಆತಂಕ ವ್ಯಕ್ತಪಡಿಸಿದಾಗ, ಅವರು ತಮ್ಮ ಬೋಳು ಮಂಡೆಯನ್ನು ಸವರಿಕೊಳ್ಳುತ್ತಾ ನೀಡಿದ ಉಪದೇಶ: 'ಯಾವ ಕಾರಣಕ್ಕೂ ಪೋಲೀಸ್ ಠಾಣೆ ಅಥವಾ ನ್ಯಾಯಾಲಯದ ಮೆಟ್ಟಿಲೇರುವ ದುಸ್ಸಾಹಸ ಮಾಡಬೇಡ. ಅಲ್ಲಿಂದ ನೀನು ಗೆದ್ದೋ, ಸೋತೋ ಹೊರಬರುವ ವೇಳೆಗೆ ನುಣ್ಣಗಾಗಿ ಹೋಗಿರುತ್ತೀಯಾ!' ಇದು ನಮ್ಮ ಕಾನೂನು ಮತ್ತು ಶಿಸ್ತಿನ 'ವ್ಯವಸ್ಥೆ' ಬಗೆಗೆ ಜನಸಾಮಾನ್ಯರಲ್ಲಿ ಇರುವ ಭಯಮಿಶ್ರಿತ ಗೌರವಕ್ಕೊಂದು ಉದಾಹರಣೆ!

ಆದರೂ ಜನ ಪೋಲಿಸ್ ಠಾಣೆಗಳಲ್ಲಿ ದೂರುಗಳನ್ನು ಮತ್ತು ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಿ; ವರ್ಷಗಟ್ಟಲೆ ಅಲ್ಲಿಂದಿಲ್ಲಿಗೆ ಅಲೆದಾಡುತ್ತಾ, ಅವುಗಳಲ್ಲಿ ಸೋತೋ ಗೆದ್ದೋ ಬಸವಳಿಯುತ್ತಿದ್ದಾರೆ. ಇದಕ್ಕೆ ಕಾರಣ, ಜನ ನಿರಂತರವಾಗಿ ಅನ್ಯಾಯಕ್ಕೊಳಗಾಗುತ್ತಿದ್ದಾರೆ ಅಥವಾ ಹಾಗೆ ಭಾವಿಸುವ ವಾತಾವರಣವಿದೆ ಎಂಬುದೇ ಆಗಿದೆ. ಈ ಅನ್ಯಾಯಗಳಿಗೆ ಪೋಲೀಸು, ನ್ಯಾಯಾಲಯಗಳ ಮೂಲಕ ಪರಿಹಾರ ಸುಲಭ

ಮತ್ತು ಸುಗಮವಲ್ಲ ಎಂಬುದು ಅನುಭವದಿಂದ ಗೊತ್ತಿದ್ದರೂ ಜನ ಅವಕ್ಕೆ ಮುಗಿಬೀಳುವುದನ್ನು ಮುಂದುವರೆಸಿದ್ದರೆ, ಅದಕ್ಕೆ ಮುಖ್ಯ ಕಾರಣಗಳು ಎರಡು: ಒಂದು, ಸಮಾಜದಲ್ಲಿ ಅನ್ಯಾಯಗಳು ನಡೆಯದಂತೆ ಅಥವಾ ಆ ಭಾವನೆ ಉಂಟಾಗದಂತೆ ನೋಡಿಕೊಳ್ಳುವುದರಲ್ಲಿ ನಮ್ಮ ಕಾನೂನು ಮತ್ತು ಶಿಸ್ತಿನ ವ್ಯವಸ್ಥೆ ವಿಫಲಗೊಂಡಿರುವುದು. ಎರಡು, ಅನ್ಯಾಯಗಳನ್ನು ಸ್ಥಳೀಯವಾಗಿಯೇ ಬಗೆಹರಿಸಿಕೊಳ್ಳುವ ವಿವೇಕವನ್ನು ನಮ್ಮ ಆಧುನಿಕ ಸಾಮಾಜಿಕ ರಚನೆ ಕಳೆದುಕೊಂಡಿರುವುದು. ಹೀಗಾಗಿ ವರ್ಷೇ ವರ್ಷೇ ಪೊಲೀಸು ಠಾಣೆಗಳಲ್ಲಿ ಮತ್ತು ನ್ಯಾಯಾಲಯಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಹಾಗೇ ಬಾಕಿ ಪ್ರಕರಣಗಳ ಸಂಖ್ಯೆ ಕೂಡ ಹೆಚ್ಚುತ್ತಾ, ನ್ಯಾಯಕ್ಕಾಗಿ ಜನ ಕಾದೂ ಕಾದೂ ಕಂಗಾಲಾಗಿ ಹೋಗಿದ್ದಾರೆ. ಇನ್ನು ಪೋಲೀಸು ಪ್ರಕರಣಗಳಲ್ಲಿ ಅಂತಿಮವಾಗಿ ಶಿಕ್ಷೆಗೆ ಒಳಗಾಗುವ ಪ್ರಕರಣಗಳು ಶೇ.೧೦ಕ್ಕೂ ಕಡಿಮೆ ಎಂಬುದು ಈಗಾಗಲೇ ಜಗಜ್ಜಾಹೀರಾಗಿ ಅಪರಾಧಗಳಿಗೆ ಕುಮ್ಮಕ್ಕು ಸಿಕ್ಕಂತಾಗಿದೆ. ಹಾಗೇ, ಇತ್ತೀಚಿನ ಸಮೀಕ್ಷೆಯೊಂದರ ಪ್ರಕಾರ ಪೋಲೀಸ್ ಇಲಾಖೆ ನಮ್ಮ ರಾಜ್ಯದ ಅತ್ಯಂತ ಭ್ರಷ್ಠ ಇಲಾಖೆ-ಅಂದರೆ ಅಷ್ಟು ಲಂಚ ತಿಂದಿದೆ–ಎಂಬ ಕುಖ್ಯಾತಿಗೂ ಒಳಗಾಗಿದೆ. ಆದರೆ ಇದಕ್ಕೆ ಪೋಲೀಸರು ಮಾತ್ರ ಕಾರಣರಲ್ಲ ಎಂಬುದು ಸ್ಪಷ್ಟ. ಏಕೆಂದರೆ, ಅವರು ಪ್ರಚಲಿತ ಭ್ರಷ್ಟ ವ್ಯವಸ್ಥೆಯ ಒಂದು ಭಾಗವೇ ಆಗಿದ್ದು, ಈ ಭ್ರಷ್ಟತೆಯಿಂದ ಹೊರಬರಲು ಅವರು ಪ್ರಯತ್ನ ಪಟ್ಟರೂ ಅದು ಅಸಾಧ್ಯವೆನ್ನುವಂತಾಗಿರುವ ಪರಿಸ್ಥಿತಿ ಇಂದು ಉಂಟಾಗಿದೆ.

ಆದರೆ ಇದೇ ಮಾತನ್ನು ನ್ಯಾಯಾಲಯಗಳ ಬಗ್ಗೆ ಹೇಳಬಹುದೆ? ನಮ್ಮ ಸಂವಿಧಾನದ ಕಟ್ಟುನಿಟ್ಟುಗಳ ಚೌಕಟ್ಟಿನಲ್ಲಿ ಇದನ್ನು ಹೇಳಲಾಗದು. ಏಕೆಂದರೆ ನಮ್ಮ ಸಂವಿಧಾನ, ನ್ಯಾಯಾಂಗವನ್ನು ನಮ್ಮ 'ವ್ಯವಸ್ಥೆ'ಯ ಮೇಲೆ ನಿಗಾ ಇಡಲೆಂದೇ, ಅದರ ಭ್ರಷ್ಟತೆಯ ಸಾಧ್ಯತೆಗಳ ವಿರುದ್ಧ ರಕ್ಷಣೆ ನೀಡಲೆಂದೇ, ಅದರಿಂದ ಒಂದು 'ದೂರ' ಕಾಪಾಡಿಕೊಂಡಿರುವ ಹಾಗೆ ಅದನ್ನು ರೂಪಿಸಿದೆ. ಆದರೂ ಈ ದೂರ ದಿನೇ ದಿನೇ ಕಡಿಮೆಯಾಗುತ್ತಿರುವ; ಅದೂ 'ವ್ಯವಸ್ಥೆ'ಯಿಂದ ಪ್ರಭಾವಿತವಾಗುತ್ತಿರುವ ಸೂಚನೆಗಳು ಕಾಣತೊಡಗಿವೆ. ಇದು ಅತ್ಯಂತ ಆತಂಕಕಾರಿ ಬೆಳವಣಿಗೆಯೇ ಆಗಿದೆ. ಹೀಗಾಗಿಯೇ ಈಚೆಗೆ ನಮ್ಮ ಪ್ರಧಾನ ಮಂತ್ರಿಯವರು ನ್ಯಾಯಾಂಗ ನಿರ್ವಹಣೆಯಲ್ಲಿ ಪಾರದರ್ಶಕತೆಯ ಅಗತ್ಯದ ಬಗ್ಗೆ ಮಾತನಾಡುತ್ತಾ, ನ್ಯಾಯಾಂಗ ನೇಮಕಾತಿಗಳಲ್ಲಿ ಕಾರ್ಯಾಂಗದ ಪಾತ್ರವೂ ಅನಿವಾರ್ಯವಾಗುವ ಸ್ಥಿತಿ ಉಂಟಾಗುತ್ತಿರುವುದರ ಪರೋಕ್ಷ ಸೂಚನೆ ನೀಡಿ, ತಮ್ಮ ಕಳವಳ ವ್ಯಕ್ತಪಡಿಸಿರುವುದು. ಪ್ರಧಾನಮಂತ್ರಿಯವರ ಈ ಕಳವಳಕ್ಕೆ ಕಾರಣವಾಗಿರುವುದು, ನ್ಯಾಯಾಂಗ ಕ್ಷೇತ್ರದಲ್ಲಿ ಇತ್ತೀಚೆಗೆ ಒಂದಾದರಮೇಲೊಂದರಂತೆ ಬಹಿರಂಗವಾಗುತ್ತಿರುವ ಭ್ರಷ್ಟಾಚಾರದ ಪ್ರಕರಣಗಳು!

ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ಮಾತು ನಮ್ಮ ಸಮಾಜಕ್ಕೇನೂ ಹೊಸದಲ್ಲ. ಕೆಳಹಂತದ ಕೋರ್ಟುಗಳಲ್ಲಿ ಬೆಂಚ್ ಕ್ಲರ್ಕ್‌ನಿಂದ ಆರಂಭವಾಗುವ ಲಂಚಾವತಾರ, ಎಲ್ಲಿಯವರೆಗೆ ಮುಟ್ಟಬಹುದೆಂಬುದು ಈ ಕೋರ್ಟುಗಳಲ್ಲಿ ವ್ಯವಹಾರ ಮಾಡಿರುವ

ಎಲ್ಲರಿಗೂ ಗೊತ್ತೇ ಇದೆ. ಸ್ವತಃ ಸರ್ವೋನ್ನತ ನ್ಯಾಯಾಯಲಯದ ಹಿಂದಿನ ಮುಖ್ಯ ನ್ಯಾಯಾಧೀಶರೊಬ್ಬರು ಕೆಳ ಹಂತದ ನ್ಯಾಯಾಲಯಗಳಲ್ಲಿನ ಭ್ರಷ್ಟತೆಯ ಶೇಕಡಾವಾರನ್ನೂ ಅಂದಾಜು ಮಾಡಿ ಈ ಹಿಂದೆ ಆತಂಕ ವ್ಯಕ್ತಪಡಿಸಿರಲಿಲ್ಲವೆ? ಆದರೆ ನ್ಯಾಯಾಂಗದ ಎಲ್ಲ ಸಿಬ್ಬಂದಿಯ ಮಟ್ಟದಲ್ಲಲ್ಲದಿದ್ದರೂ, ಎಲ್ಲ ಹಂತಗಳಲ್ಲಂತೂ ವಿವಿಧ ರೂಪಗಳ ಭ್ರಷ್ಟಾಚಾರವಿದೆ ಎಂಬುದು ಫಿರ್ಯಾದಿದಾರರನೇಕರ ಅನುಮಾನವಾಗಿತ್ತು. ಆದರೆ ಅದನ್ನು ಬಹಿರಂಗವಾಗಿ ಹೇಳಲಾಗದಿದ್ದ ಸಂಕಟವೀಗ, ಉನ್ನತ ಹಂತಗಳ ನ್ಯಾಯಾಧೀಶರ ವಿರುದ್ಧ ನಡೆಯ ಲಾರಂಭಿಸಿರುವ ಭ್ರಷ್ಟಾಚಾರದ ವಿಚಾರಣೆಗಳಿಂದ ತಾತ್ಕಾಲಿಕವಾಗಿಯಾದರೂ ಶಮನಗೊಳ್ಳು ವಂತಾಗಿದೆ.

ನ್ಯಾಯಾಂಗದ ಉನ್ನತ ಮಟ್ಟಗಳಲ್ಲಿ ಸ್ಫೋಟಿಸಿ ಇಂದು ಸಾರ್ವಜನಿಕವಾಗಿ ಚರ್ಚೆ ಯಾಗುತ್ತಿರುವ ಪ್ರಕರಣಗಳನ್ನೇ ನೋಡಿ. ಹಾದಿ ತಪ್ಪಿದ ನ್ಯಾಯಾಧೀಶರ ಪ್ರಕರಣಗಳಿಗೆ ಕುಪ್ರಸಿದ್ಧವಾಗಿರುವ ಪಂಜಾಬ್ ಮತ್ತು ಹರ್ಯಾಣ ಶ್ರೇಷ್ಠ ನ್ಯಾಯಾಲಯದ ಓರ್ವ (ಮಹಿಳಾ) ನ್ಯಾಯಾಧೀಶರೊಬ್ಬರ ಮನೆಗೆ ಸಂಜೀವ್ ಬನ್ಸಾಲ್ ಎಂಬ ಹೆಚ್ಚುವರಿ ಅಡ್ವೊಕೇಟ್ ಜನರಲ್‌ನ ಸಹಾಯಕನೊಬ್ಬನ ಮೂಲಕವೇ ೧೫ ಲಕ್ಷ ರೂಪಾಯಿಗಳ ನಗದಿದ್ದ ಪೊಟ್ಟಣವೊಂದು ಬಂದು ಬೀಳುತ್ತದೆ! ಹೆಸರಿನ ಗೊಂದಲದಿಂದಾಗಿ ಅದು ತಪ್ಪಾದ ನ್ಯಾಯಾಧೀಶರ ಮನೆ ಬಾಗಿಲು ತಲುಪಿ, ಅಲ್ಲಿನ ಭದ್ರತಾ ಸಿಬ್ಬಂದಿಯ ತಪಾಸಣೆಗೊಳಗಾದ್ದರಿಂದ ಮಾತ್ರ ಈ ಪ್ರಕರಣ ಹೊರಬಿದ್ದುದು ಮತ್ತು ಇದು ದೆಹಲಿಯ ಹೋಟೆಲ್ ಉದ್ಯಮಿಯೊಬ್ಬ ಕಳಿಸಿದ್ದೆಂದು ಗೊತ್ತಾದುದು. ರವೀಂದ್ರ ಖನ್ನ ಎಂಬ ಈ ಹೋಟೆಲ್ ಉದ್ಯಮಿ ಹಲವು ವಣಿಜರ ಪರವಾಗಿ ಸಂಜೀವ್ ಬನ್ಸಾಲನನ್ನು ಬಳಸಿಕೊಂಡು ನ್ಯಾಯಾಧೀಶರು, ವಕೀಲರು ಮತ್ತು ವಾಣಿಜ್ಯೋದ್ಯಮಿಗಳ ನಡುವೆ ಈ ಹಿಂದಿನಿಂದಲೂ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದ್ದ ಎಂಬುದು ಈಗ ಪ್ರಾಥಮಿಕ ತನಿಖೆಯಿಂದ ಬಹಿರಂಗಗೊಂಡಿದೆ. ಆಪಾದಿತ ನ್ಯಾಯಾಧೀಶೆ ನಿರ್ಮಲ್ ಯಾದವ್ ರಜೆ ಮೇಲೆ ಹೋಗಿದ್ದಾರೆ. ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ವಹಿಸಲಾಗಿದೆ.

ಇನ್ನು ಸರ್ವೋನ್ನತ ನ್ಯಾಯಾಯಲಯದ ಮುಖ್ಯ ನ್ಯಾಯಾಧೀಶರೇ ಸಂಸತ್ತಿನ 'ಛೀಮಾರಿ'ಗೆ ಶಿಫಾರ್ಸು ಮಾಡಿರುವ ಪಶ್ಚಿಮ ಬಂಗಾಳದ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶ ಸೌಮಿತ್ರ ಸೇನ್ ಪ್ರಕರಣವಂತೂ ನ್ಯಾಯಾಂಗದಲ್ಲೂ ಎಷ್ಟು ನಾಚಿಕೆಗೆಟ್ಟವರೂ ಸೇರಿಬಿಟ್ಟಿದ್ದಾರೆ ಎಂಬುದನ್ನು ಶ್ರುತಪಡಿಸುತ್ತದೆ. ಈ ಹಿಂದೆ ಇದೇ ನ್ಯಾಯಾಯಲಯದಲ್ಲಿ ವಕೀಲರಾಗಿದ್ದಾಗ ಮೊಕದ್ದಮೆಯೊಂದರಲ್ಲಿ ಆಸ್ತಿ ನಿರ್ವಾಹಕರಾಗಿ (ರಿಸೀವರ್) ನೇಮಕವಾಗಿದ್ದ ಆಗಿದ್ದ ಸೇನ್, ಆ ಸಂಬಂಧ ಲಕ್ಷಾಂತರ ರೂಪಾಯಿಗಳನ್ನು ತನ್ನ ವೈಯುಕ್ತಿಕ ಖಾತೆಗೆ ಜಮಾ ಮಾಡಿಕೊಂಡು ದುರುಪಯೋಗಪಡಿಸಿಕೊಂಡ ಪ್ರಕರಣ ತನಿಖೆಗೊಳಗಾಗಿ ಅವರು ಅಪರಾಧಿಯೆಂದು ಸಾಬೀತಾಗಿದೆ. ಆದರೆ ಈ ನ್ಯಾಯಾಧೀಶ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಅಥವಾ ಸ್ವಯಂ ನಿವೃತ್ತಿ ಪಡೆಯಬೇಕೆಂಬ ಸರ್ವೋನ್ನತ ನ್ಯಾಯಾಲಯದ

ಮುಖ್ಯ ನ್ಯಾಯಾಧೀಶರ ಸೂಚನೆಗೆ ಸೆಡ್ಡು ಹೊಡೆದು ನಿಲ್ಲುವ ಭಂಡತನ ಪ್ರದರ್ಶಿಸಿದ್ದಾರೆ! ಬಹುಶಃ ೯೦ರ ದಶಕದ ನ್ಯಾಯಮೂರ್ತಿ ರಾಮಸ್ವಾಮಿ ಅವರ 'ಛೀಮಾರಿ' ಪ್ರಕರಣ ಅವರಿಗೆ ಸ್ಫೂರ್ತಿ ನೀಡಿರಬಹುದು! ಹೀಗೇ ಭ್ರಷ್ಟಾಚಾರದ ಪ್ರಕರಣವೊಂದರಲ್ಲಿ ಸರ್ವೋನ್ನತ ನ್ಯಾಯಾಲಯದ ಸೂಚನೆಗೆ ಸೆಡ್ಡು ಹೊಡೆದು ನಿಂತಿದ್ದ ನ್ಯಾ|| ರಾಮಸ್ವಾಮಿ, ಸಂಸತ್ ಸದಸ್ಯರ ಪ್ರಾಂತೀಯ ಭಾವನೆಗಳ ಮತ್ತು ಈಗಿನ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಿ ಕಪಿಲ್ ಸಿಬಾಲ್ ಆಗ ತಮ್ಮ ಪರ ವಕೀಲರಾಗಿ ಮಂಡಿಸಿದ ವಾದದ ಲಾಭ ಪಡೆದು ಛೀಮಾರಿಯಿಂದ ಪಾರಾದರು! ಇದು ನ್ಯಾಯಾಂಗದ ಭ್ರಷ್ಟಾಚಾರ ಕುರಿತು ನಮ್ಮ ಸಂಸತ್ತಿನ ಧೋರಣೆ!

ಇನ್ನು ಘಾಜಿಯಾಬಾದ್ ಜಿಲ್ಲಾ ನ್ಯಾಯಾಲಯದ ನಾಲ್ಕನೇ ದರ್ಜೆ ನೌಕರರ ಪ್ರಾವಿಡೆಂಟ್ ನಿಧಿಯ ದುರುಪಯೋಗ ಪ್ರಕರಣವಂತೂ ಗಾಬರಿ ಹುಟ್ಟಿಸುವಂತಹುದು. ೨೦೦೨ ಮತ್ತು ೨೦೦೭ರ ನಡುವೆ ನ್ಯಾಯಾಲಯದ ಅಶುತೋಶ್ ಆಸ್ಥಾನ ಎಂಬ ಖಜಾನೆ ಅಧಿಕಾರಿ ಸುಳ್ಳು ಸಹಿ ಮಾಡಿ ನಿಧಿಯಿಂದ ಈವರೆಗೆ ೨೩ ಕೋಟಿ ರೂಪಾಯಿಗಳನ್ನು ಹೊರ ತೆಗೆದು ತಾನೂ ತಿಂದಿದ್ದಲ್ಲದೆ, ವಿವಿಧ ಹಂತಗಳ ನ್ಯಾಯಾಧೀಶರಿಗೂ ವಿವಿಧ ರೂಪಗಳ 'ಉಡುಗೊರೆ'ಗಳ ಮೂಲಕ ತಿನ್ನಿಸಿದ್ದಾನೆ. ಇದು ಅದೇ ನ್ಯಾಯಾಲಯದ ಈಗಿನ ನ್ಯಾಯಾಧೀಶೆ ರಮಾ ಜೈನ್ ಅವರು ಆಜ್ಞಾಪಿಸಿದ ತನಿಖೆ ಬಹಿರಂಗಪಡಿಸಿದೆ. ಇವರಲ್ಲಿ ಉತ್ತರ ಪ್ರದೇಶದ ಶ್ರೇಷ್ಠ ನ್ಯಾಯಾಲಯಗಳಲ್ಲಿನ ಹಲವು ನ್ಯಾಯಾಧೀಶರುಗಳಲ್ಲದೆ, ಸರ್ವೋನ್ನತ ನ್ಯಾಯಾಲಯದ ಈಗಿನ ಒಬ್ಬ ನ್ಯಾಯಾಧೀಶರೂ ಫಲಾನುಭವಿಗಳಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಪ್ರಕರಣ ಬಹಿರಂಗ ವಿಚಾರಣೆಗೆ ಒಳಪಡದಂತೆ ನ್ಯಾಯಾಂಗ ಅಧಿಕಾರಿಗಳ ಮಟ್ಟದಲ್ಲಿ ಪ್ರಯತ್ನಗಳು ನಡೆದಾಗ, ಆಡಳಿತ ಪಾರದರ್ಶಕತೆಯನ್ನು ಕುರಿತ ಸ್ವಯಂಸೇವಾ ಸಂಸ್ಥೆಯೊಂದು ಸರ್ವೋನ್ನತ ನ್ಯಾಯಾಲಯದಲ್ಲಿ ಸಿ.ಬಿ.ಐ. ತನಿಖೆಗಾಗಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯೊಂದನ್ನು ದಾಖಲಿಸಿತು. ಅದರ ಪರವಾಗಿ, ರಾಷ್ಟ್ರ ಕಂಡ ಅತ್ಯುತ್ತಮ ಕಾನೂನು ಮಂತ್ರಿಗಳಲೊಬ್ಬರಾದ ಸುಪ್ರಸಿದ್ಧ ಸಾರ್ವಜನಿಕ ಹಿತಾಸಕ್ತಿಯ ವಕೀಲ ಶಾಂತಿಭೂಷಣ್ ಮತ್ತು ಅವರ ಪರಂಪರೆಯನ್ನು ಮುಂದುವರೆಸಿರುವ ಅವರ ಪುತ್ರ ಪ್ರಶಾಂತ್ ಭೂಷಣ್ ಮಂಡಿಸಿದ ವಾದ ನ್ಯಾಯಾಧೀಶರುಗಳನ್ನೂ ತಲ್ಲಣಗೊಳಿಸುವಂತಿತ್ತು! ಈ ಸಂಬಂಧದಲ್ಲಿ ನಡೆದ ತಂದೆ-ಮಗ ಮತ್ತು ನ್ಯಾಯಾಧೀಶರ ನಡುವಣ ವಾಗ್ವಾದ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು, ಸದ್ಯದ ನಮ್ಮ ನ್ಯಾಯಾಂಗದ ಸಂದಿಗ್ಧತೆ ಮತ್ತು ಸಂಕಟಗಳೆರಡನ್ನೂ ಪ್ರತಿಬಿಂಬಿಸುವಂತಿತ್ತು. 'ನ್ಯಾಯಾಧೀಶರೇನೂ ದೇವಲೋಕದಿಂದ ಇಳಿದು ಬಂದಿಲ್ಲ! ಅವರೂ ಸಾರ್ವಜನಿಕ ಪರಿಶೀಲನೆಗೆ ಒಳಗಾಗಬೇಕು ಮತ್ತು ಸಾರ್ವಜನಿಕ ಹಣಕಾಸಿಗೆ ಜವಾಬ್ದಾರರಾಗಬೇಕು' ಎಂಬುದು ಭೂಷಣ್‌ದ್ವಯರ ವಾದವಾದರೆ, ಇಂತಹ ಮಾತುಗಳು ಮಿತಿ ಮೀರಿದವು ಮತ್ತು ನ್ಯಾಯಾಂಗ ನಿಂದನೆಗೆ ದಾರಿ

ಮಾಡಿಕೊಟ್ಟಾವು ಎಂಬುದು ನ್ಯಾಯಾಧೀಶರ ಎಚ್ಚರಿಕೆ! ಈ ಪ್ರಕರಣವೀಗ ಕೆಲವು ಷರತ್ತುಗಳೊಡನೆ ಸಿ.ಬಿ.ಐ. ವಿಚಾರಣೆಗೆ ಒಳಪಟ್ಟಿದೆ.

ಇದೇ ಸಂದರ್ಭದಲ್ಲಿ ಪ್ರಸ್ತಾಪಿಸಬಹುದಾದ ಇನ್ನೊಂದು ಪ್ರಕರಣವೆಂದರೆ, ನಮ್ಮ ನೌಕಾದಳದ ಮಾಜಿ ಮುಖ್ಯಸ್ಥ ಮತ್ತು ಈಗಿನ ದೊಡ್ಡ ಶಸ್ತ್ರಾಸ್ತ್ರ ವ್ಯಾಪಾರಿ ಜ|| ನಂದಾ ಅವರ ಮಗ ಸಂಜೀವ ನಂದಾ ತನ್ನ ಸ್ನೇಹಿತರೊಂದಿಗೆ ಕುಡಿದು ನಾಲ್ಕಾರು ಜನರ ಮೇಲೆ ತನ್ನ ವೈಭವೋಪೇತ ಬಿ.ಎಂ.ಡಬ್ಲ್ಯು. ವಾಹನವನ್ನು ಹರಿಸಿಕೊಂಡುಹೋದ ಮೊಕದ್ದಮೆ. ಇದರಲ್ಲಿ ಆಪಾದಿತರ ಪರ ವಕಾಲತ್ತು ವಹಿಸಿದ್ದ ಹಿರಿಯ ವಕೀಲ ಆನಂದ್, ಸರ್ಕಾರದ ಪರವಾಗಿ ವಕಾಲತ್ತು ವಹಿಸಿದ್ದ ಇನ್ನೋರ್ವ ಹಿರಿಯ ವಕೀಲ ಅಯೂಬ್ ಖಾನ್‌ರೊಂದಿಗೆ ಶಾಮೀಲಾಗಿ ಸಾಕ್ಷಿಯನ್ನು 'ಖರೀದಿ' ಮಾಡಲಿ ನಡೆಸಿದ ಪ್ರಯತ್ನ. ಇದು ಮಾಧ್ಯಮವೊಂದರ ಕುಟುಕು ಕಾರ್ಯಾಚರಣೆಯಿಂದಾಗಿ ಬಯಲಾಗಿ ಈ ಇಬ್ಬರೂ ಈಗ ಆರು ತಿಂಗಳುಗಳ ಕಾಲ ನ್ಯಾಯಾಲಯಗಳಿಂದ ಬಹಿಷ್ಕರಿಸಲ್ಪಟ್ಟಿರುವುದು. ಇವರಿಗೆ ಈ ಶಿಕ್ಷೆ ಸಾಕೆ ಎಂಬುದು ಬೇರೆ ಪ್ರಶ್ನೆಯಾದರೂ, ಇದು ನಮ್ಮ ನ್ಯಾಯಪದ್ಧತಿ ತನ್ನ ವೃತ್ತಿಪರತೆಯನ್ನೂ, ಅದಕ್ಕಿಂತ ಹೆಚ್ಚಾಗಿ ತನ್ನ ಆತ್ಮಸಾಕ್ಷಿಯನ್ನೂ ಕಳೆದುಕೊಂಡು ಒಂದು ವ್ಯಾಪಾರ ಮಾತ್ರವಾಗಿ ಪರಿವರ್ತಿತವಾಗುತ್ತಿರುವುದರ ಸೂಚನೆಯಾಗಿದೆ.

ಇವೆಲ್ಲವೂ ಸ್ಪಷ್ಟಪಡಿಸುವುದೇನೆಂದರೆ. ಶಾಂತಿಭೂಷಣ್ ಹೇಳಿದಂತೆ ನ್ಯಾಯಾಧೀಶರೂ ಹುಲುಮಾನವರಾಗಿದ್ದು, ಅವರ ವಿಶೇಷ ರೀತಿಯ ಕರ್ತವ್ಯಗಳ ಕಾರಣದಿಂದಾಗಿ ಅವರನ್ನು ವಿಶೇಷ ಸ್ಥಾನಮಾನಗಳಲ್ಲಿರಿಸಿದ್ದ ರಕ್ಷಣಾ ಗೋಡೆಗಳು ಕುಸಿಯತೊಡಗಿದ್ದು, ಅವರೂ ಹೊರಗಿನ ಸಾಮಾಜಿಕ ವಾತಾವರಣದ ಮಾಲಿನ್ಯಕ್ಕೆ ತೆರೆದುಕೊಡಂತಾಗಿದೆ. ಇತ್ತೀಚೆಗಂತೂ ನಮ್ಮ ನ್ಯಾಯಾಂಗ, ಸಂವಿಧಾನದ ಭಾವನೆಗಳಿಗಿಂತ ಹೆಚ್ಚಾಗಿ ಜಾಗತೀಕರಣದ ಒತ್ತಡಗಳಿಂದ ಪ್ರಭಾವಿತವಾಗುತ್ತಿದೆ ಎನ್ನಿಸತೊಡಗಿದೆ. ರಾಜ್ಯಸಭೆ ಚುನಾವಣಾ ನಿಯಮಗಳಿಗೆ ತಂದ ತಿದ್ದುಪಡಿಯನ್ನು ಸಂವಿಧಾನಬದ್ಧ ಎಂದು ಸರ್ವೋನ್ನತ ನ್ಯಾಯಾಲಯ ಎತ್ತಿಹಿಡಿದಿರುವ ಮತ್ತು ವಿದ್ಯಾರ್ಥಿಗಳ ಶಿಕ್ಷಣ ಮಾಧ್ಯಮದ ಪ್ರಶ್ನೆಯನ್ನು ಮೂಲಭೂತ ಸ್ವಾತಂತ್ರ್ಯಗಳ ಪರಿಮಿತಿಯಲ್ಲಿ ಪರಿಶೀಲಿಸಿ ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯ ನೀಡಿರುವ ತೀರ್ಪುಗಳು ಇದಕ್ಕೆ ಎರಡು ಉದಾಹರಣೆಗಳಷ್ಟೆ.

ಪರಿಸ್ಥಿತಿ ಈ ಮಟ್ಟ ತಲುಪಿರುವಾಗ ಪ್ರಜಾಪ್ರಭುತ್ವ ವ್ಯವಸ್ಥೆಯೊಂದರಲ್ಲಿ ಸಾಮಾನ್ಯ ಜನತೆಯ ಹಕ್ಕು ಬಾಧ್ಯತೆಗಳ ರಕ್ಷಣೆಗೆ ಕೊನೆಯ ಪರಿಹಾರ ವೇದಿಕೆಯಾಗಿರುವ 'ನ್ಯಾಯಾಂಗ'ವನ್ನು ತುರ್ತು ಕ್ರಮಗಳ ಮೂಲಕ ರಕ್ಷಿಸಿಕೊಳ್ಳುವ ತುರ್ತು ಅಗತ್ಯ ಉಂಟಾಗಿದೆ. ಅದರಲ್ಲೂ ವಿಶೇಷವಾಗಿ ಸಾಮಾನ್ಯ ಆಡಳಿತ ಮಟ್ಟ ಎಲ್ಲ ಕ್ಷೇತ್ರಗಳಲ್ಲೂ ಕುಸಿಯುತ್ತಿದ್ದು, ಸರ್ಕಾರವೂ ತನ್ನ ಹತೋಟಿಯ ವ್ಯಾಪ್ತಿಯನ್ನು ಕ್ರಮೇಣ ಖಾಸಗಿಯವರಿಗೆ ಬಿಟ್ಟುಕೊಡುತ್ತಿರುವ ಕಾರಣದಿಂದಾಗಿ, ಜನತೆ ಗತಿ ಕಾಣದೆ ಹೆಚ್ಚೆಚ್ಚು ಸಂಖ್ಯೆಯಲ್ಲಿ ಮತ್ತು ನೆಲೆಗಳಲ್ಲಿ ನ್ಯಾಯಾಂಗದ ಮೊರೆ ಹೋಗಲಾರಂಭಿಸಿರುವ ಈ ಸಂದರ್ಭದಲ್ಲಿ ಸಾರ್ವಜನಿಕರು

'ಹರ ಕೊಲ್ಲಲ್ ಪರ ಕಾಯ್ವನೇ!' ಎಂದು ಆತಂಕ ಪಡುವಂತಾಗಿದೆ! ಹಾಗಾಗಿ, ಧೂಳು ತಿನ್ನುತ್ತಿರುವ ಧರ್ಮವೀರ ನೇತೃತ್ವದ ಪೊಲೀಸ್ ಸುಧಾರಣಾ ಆಯೋಗ ಮತ್ತು ನ್ಯಾ।। ವಿ.ಎಸ್ ಮಳಿಮಠರ ನೇತೃತ್ವದ ಭಾರತೀಯ ದಂಡಸಂಹಿತೆ ಸುಧಾರಣಾ ಆಯೋಗಗಳ ಶಿಫಾರ್ಸುಗಳನ್ನಲ್ಲದೆ, ನ್ಯಾಯಾಂಗ ಪ್ರಾಧಿಕಾರವೊಂದರ ರಚನೆಯ ಮೂಲಕ ಉನ್ನತ ನ್ಯಾಯಾಂಗದ ಕಾರ್ಯನಿರ್ವಹಣೆಯ ಮೇಲೆ ನಿಗಾ ಇಡುವ ಸಲಹೆಯನ್ನು ಈಗಲಾದರೂ ಸಕ್ರಿಯವಾಗಿ ಪರಿಶೀಲಿಸುವ ಕಡೆ ಸರ್ಕಾರದ ಗಮನ ಹರಿಸಬೇಕಿದೆ. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಬಲ್ಲ ಕೆಲವರಾದರೂ ಇಂದು ನ್ಯಾಯಾಂಗದ ಉನ್ನತ ಸ್ಥಾನಗಳಲ್ಲಿರುವುದು ನಮ್ಮ ಸುಯೋಗವೆಂದೇ ಭಾವಿಸಿ, ಈ ಸಮಗ್ರ ಸ್ವಚ್ಛತಾ ಕಾರ್ಯಾಚರಣೆಯನ್ನು ತುರ್ತಾಗಿ ಆರಂಭಿಸಬೇಕಿದೆ.

(೩-೧೦ ಆಕ್ಟೋಬರ್, ೨೦೦೮)

■

೨೪. ಸ್ವಾತಂತ್ರ್ಯ ಮತ್ತು ಸ್ವರಾಜ್ಯ

ಹೆಗ್ಗೋಡಿನ 'ನೀನಾಸಂ' ಬಗ್ಗೆ, ಅದು ನಡೆಸುವ ಚಟುವಟಿಕೆಗಳ ಸ್ವರೂಪ ಮತ್ತು ಸಾರ್ಥಕತೆಯ ಬಗ್ಗೆ ಹಲವರ ಅನೇಕ ರೀತಿಯ ಅಭಿಪ್ರಾಯ-ಭಿನ್ನಾಭಿಪ್ರಾಯಗಳಿವೆ. ಆದರೆ, ಭಾರತದ ಈ ಹಳ್ಳಿ ಮೂಲೆಯಲ್ಲಿ ರಾಷ್ಟ್ರದ ಪ್ರಮುಖ ಚಿಂತಕರನೇಕರು ವರ್ಷಕ್ಕೊಮ್ಮೆ ಕರ್ನಾಟಕದ ನೂರಾರು ಎಳೆಯರೊಂದಿಗೆ ಒಂದೇ ಸೂರಿನಡಿ ಕುಳಿತು ವಿಚಾರ ವಿನಿಮಯ ಮಾಡಿಕೊಳ್ಳುವ ಘಟನೆ, ಅದರ ಕೆಲ ಭಾಗಗಳ ಮಟ್ಟಿಗಾದರೂ ನನಗೆ ಹಲವು ಬಾರಿ ರೋಮಾಂಚನ ತಂದಿದೆ. ಈ ಬಾರಿ ಅದು ತನ್ನ ಇಂತಹ ಅನನ್ಯ ವಾರ್ಷಿಕ ಸಾಂಸ್ಕೃತಿಕ ಶಿಬಿರ (ಅಕ್ಟೋ. ೫ರಿಂದ ೧೧ರವರೆಗೆ)ಕ್ಕಾಗಿ 'ಹಿಂದ್ ಸ್ವರಾಜ್'ನ್ನು ಚರ್ಚೆಯ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡಿದೆ. ಗಾಂಧಿ ಈ ಕೃತಿಯನ್ನು ಮೊದಲಿಗೆ ೧೯೦೮ರಲ್ಲಿ ಗುಜರಾತಿಯಲ್ಲಿ ಬರೆದರಾದರೂ, ಅದು ಪ್ರಥಮ ಬಾರಿಗೆ ಸಾರ್ವಜನಿಕವಾಗಿ ಪ್ರಕಟವಾದದ್ದು ೧೯೦೯ರಲ್ಲಿ. ಅವರ ಸಂಪಾದಕತ್ವದ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ಧಾರಾವಾಹಿಯಾಗಿ; ಅವರ ಗೆಳೆಯ ಕಲೆನ್‌ಬಾಕ್‌ಗೋಸ್ಕರ ಅವರೇ ಮಾಡಿದ ಇಂಗ್ಲಿಷ್ ಭಾಷಾಂತರದಲ್ಲಿ. ಆದರೂ, ಗಾಂಧಿವಾದದ ಬೈಬಲ್ ಎನಿಸಿರುವ ಈ ಕೃತಿಗೆ ಈಗ ನೂರು ವರ್ಷ ತುಂಬುತ್ತಿದೆಯೆಂದು 'ನೀನಾಸಂ' ಇದನ್ನು 'ಮನೋಭೂಮಿಕೆಯಲ್ಲಿ ಸ್ವರಾಜ್ಯ' ಎಂಬ ಶೀರ್ಷಿಕೆಯಡಿ ಚರ್ಚೆಗೆ ಎತ್ತಿಕೊಂಡಿರುವುದು, ಇಂದಿನ ಸಂದರ್ಭದ ರಾಜಕೀಯ ತುರ್ತನ್ನು ಸೂಚಿಸುತ್ತದೆ ಎಂದೇ ನಾನು ಭಾವಿಸಿದ್ದೇನೆ.

ಹಾಗೆ ನೋಡಿದರೆ, ಇತ್ತೀಚಿನವರೆಗೆ ಗಾಂಧಿ ಕೃತಿಗಳಲ್ಲೆಲ್ಲ ಅತ್ಯಂತ ಹೆಚ್ಚು ಔದಾಸೀನ್ಯಕ್ಕೆ ಒಳಗಾಗಿದ್ದಂತೆ ತೋರುತ್ತಿದ್ದ ಈ ಕೃತಿ, ಕಳೆದ ಹತ್ತು-ಹದಿನೈದು ವರ್ಷಗಳಲ್ಲಿ ಇದ್ದಕ್ಕಿದ್ದಂತೆ ಮತ್ತೆ ಮತ್ತೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಒಳಗಾಗುತ್ತಿದೆ. ಇಪ್ಪತ್ತನೇ ಶತಮಾನದ ಆರಂಭದ ದಶಕದ ಹೊತ್ತಿಗೆ ಹಿಂದೂ ಪುರುತ್ಥಾನವಾದಿಗಳು, ಸಾಂಸ್ಕೃತಿಕ ರಾಷ್ಟ್ರೀಯವಾದಿಗಳು ಮತ್ತು ಹಿಂಸಾವಾದಿ ಕ್ರಾಂತಿಕಾರಿಗಳು ಲಂಡನ್‌ನಲ್ಲಿ ಒಟ್ಟುಗೂಡಿ ಭಾರತದ ಸ್ವಾತಂತ್ರ್ಯವನ್ನು ಆಗಿನ ಕಾಂಗ್ರೆಸ್‌ನ 'ಸಂವಿಧಾನಾತ್ಮಕ' ಮಾರ್ಗದ ಮೂಲಕ ಪಡೆಯುವ ಪ್ರಯತ್ನಗಳಿಗೆ ಪ್ರತಿಯಾಗಿ, ಹಿಂಸೆಯೂ ಸೇರಿದಂತೆ ತೀವ್ರವಾದಿ ಮಾರ್ಗಗಳ ಮೂಲಕ ಪಡೆಯುವ ಪ್ರಯತ್ನಗಳಿಗೆ ಭೂಮಿಕೆಯನ್ನು ಸಿದ್ಧಪಡಿಸುತ್ತಿದ್ದರು. ಆಗ ಇವರೊಂದಿಗೆ ಸಂಪರ್ಕಕ್ಕೆ ಬಂದ ಗಾಂಧಿ, ಇಂತಹ ಪ್ರಯತ್ನಗಳು

ಏಕೆ ನಿಷ್ಪ್ರಯೋಜಕ ಮತ್ತು ಹೇಗೆ ನಿಜವಾದ ಸ್ವಾತಂತ್ರ್ಯವನ್ನು ತಂದುಕೊಡಲಾರವು ಎಂದು ದ.ಆಫ್ರಿಕಾದಲ್ಲಿನ ಜನಾಂಗವಾದಿ ಸರ್ಕಾರವನ್ನೆದುರಿಸಿದ ತಮ್ಮ ಅನುಭವಗಳ ಆಧಾರದ ಮೇಲೆ ವಿವರಿಸಿ ಈ ಪುಸ್ತಕ ಬರೆದರು. ಈ ಪುಸ್ತಕವನ್ನು ಅವರು ೧೯೦೮ರಲ್ಲಿ ಇಂಗ್ಲೆಂಡ್‌ನಿಂದ ದ.ಆಫ್ರಿಕಾಕ್ಕೆ ಸಮುದ್ರಯಾನ ಮಾಡುತ್ತಿದ್ದಾಗ ಎಂತಹ ಅದಮ್ಯ ಹುರುಪಿನಲ್ಲಿ ಬರೆದರೆಂದರೆ, ಅದನ್ನು ಪೂರ್ಣಗೊಳಿಸಲು ಬಲಗೈಗೆ ಆಯಾಸವಾದಾಗ ಎಡಗೈಯನ್ನೂ ಬಳಸಬೇಕಾಯಿತಂತೆ!

ಆದರೆ, ಆಗ ಅವಸರದ ಮತ್ತು ಅಪಕ್ವ ಬರವಣಿಗೆಯೆಂದು ತಮ್ಮ ಗುರು ತಿಲಕರಿಂದಲೇ ತಿರಸ್ಕರಿಸಲ್ಪಟ್ಟಿದ್ದ ಈ ಪುಸ್ತಕ; ತಿಲಕರಂತೆಯೇ ಅನೇಕರಿಂದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಟೀಕೆಗಳಿಗೊಳಪಟ್ಟಿದ್ದರೂ, ಗಾಂಧಿ ತಮ್ಮ ಉಸಿರಿನ ಕೊನೆಯವರೆಗೂ ಅದಕ್ಕೆ ಎಷ್ಟು ಕಟಿ ಬದ್ಧರಾಗಿದ್ದರೆಂದರೆ, ಬ್ರಿಟಿಷ್ ಪಾರ್ಲಿಮೆಂಟನ್ನು 'ವೇಶ್ಯೆ' ಎಂದು ಕರೆದ ಶಬ್ದದ ಹೊರತಾಗಿ ಅದರ ಒಂದು ಶಬ್ದವನ್ನೂ ಬದಲಿಸಲಾರೆ ಎಂದು ಸ್ಪಷ್ಟಪಡಿಸಿದ್ದರು. ಈ ತಮ್ಮ ಕೃತಿಯ ಮೂಲ ತಾತ್ವಿಕತೆ ಬಗ್ಗೆ ಗಾಂಧೀಜಿಗೆ ಎಷ್ಟು ದೃಢ ನಂಬಿಕೆ ಇತ್ತೆಂದರೆ, ೧೯೪೫ರಲ್ಲಿ ನೆಹರೂ ವೈಸ್‌ರಾಯ್ ಆಡಳಿತ ಮಂಡಳಿಯ ಉಪಾಧ್ಯಕ್ಷರಾಗಿ ಸ್ವತಂತ್ರ ಭಾರತದ ಪ್ರಧಾನಮಂತ್ರಿ ಎಂದು ಬಿಂಬಿತವಾಗಿದ್ದಾಗಲೇ ಅವರು 'ಹಿಂದ್ ಸ್ವರಾಜ್' ಕಡೆ ನೆಹರೂ ಅವರ ಗಮನ ಸೆಳೆಯುತ್ತಾರೆ. ಆದರೆ ನೆಹರೂ ಅದನ್ನು, ಜಗತ್ತು ಮುಂದಕ್ಕೆ ಹೆಜ್ಜೆ ಹಾಕುತ್ತಿರುವಾಗ ಹಿಂದಕ್ಕೆ ಹೆಜ್ಜೆ ಹಾಕೆನ್ನುವ ಅಪ್ರಸ್ತುತ ಕೃತಿ ಎಂದು ತಿರಸ್ಕರಿಸಿದಾಗ, ಗಾಂಧೀಜಿಯ ಮನಸ್ಸಿನಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸನ್ನು ಒಂದು ರಾಜಕೀಯ ಪಕ್ಷವಾಗಿ ವಿಸರ್ಜಿಸಿ ಅದನ್ನೊಂದು ಸ್ವಯಂಸೇವಾ ಸಂಘಟನೆಯನ್ನಾಗಿ ಪರಿವರ್ತಿಸಬೇಕೆಂಬ ಆಲೋಚನೆ ಹಾದು ಹೋಗುತ್ತದೆ! ನಂತರದ ದಿನಗಳಲ್ಲಿ ಕಾಂಗ್ರೆಸ್‌ನ ರಾಜಕೀಯ ನಾಯಕತ್ವದ ಬಗ್ಗೆ ತಮ್ಮಂತೆಯೇ ಭ್ರಮನಿರಸನಗೊಂಡಿದ್ದ ಮತ್ತು ರಾಷ್ಟ್ರ ವಿಭಜನೆಯ ಕೋಮು ಹಿಂಸಾಚಾರವನ್ನು ತಣಿಸುವ ತಮ್ಮ ಪ್ರಯತ್ನದ ಯಾತ್ರೆಯುದ್ದಕ್ಕೂ ತಮ್ಮೊಡನಿದ್ದ ಕಾಂಗ್ರೆಸ್ ಸೋಶಲಿಸ್ಟ್ ನಾಯಕರಲ್ಲೊಬ್ಬರಾಗಿದ್ದ ಡಾ॥ ರಾಮಮನೋಹರ ಲೋಹಿಯಾ ಅವರೊಂದಿಗೆ ಈ ಬಗ್ಗೆ ಪ್ರಸ್ತಾಪವನ್ನೂ ಮಾಡುತ್ತಾರೆ. ಆದರೆ ಅದಕ್ಕೆ ಅಂತಿಮ ರೂಪ ಕೊಡುವ ಮುನ್ನವೇ ಗಾಂಧಿ ಹಿಂದೂ ಕೋಮುವಾದಿಯ ಗುಂಡಿಗೆ ಬಲಿಯಾಗುತ್ತಾರೆ.

ಗಾಂಧೀಜಿಗೆ ಇಷ್ಟು ಮುಖ್ಯವೆನಿಸಿದ್ದ ಮತ್ತು ಅದನ್ನು ಅನುಷ್ಠಾನಗೊಳಿಸಬೇಕೆಂದು ಅವರು ಬಯಸಿದ ತಮ್ಮ ರಾಜಕೀಯ ವಾರಸುದಾರರ ಕಣ್ಣಲ್ಲಿ ಶುದ್ಧ ಅವ್ಯವಾಹಾರಿಕವೆನಿಸಿದ; ಹಾಗಾಗಿ ತಮ್ಮ ರಾಜಕೀಯ ವಾರಸುದಾರಿಕೆಯ ಬಗ್ಗೆಯೇ ಅವರನ್ನು ಪುನರಾಲೋಚನೆಗೆ ಒಡ್ಡಿದ ಈ ಕೃತಿಯಲ್ಲಿ ನಿಜವಾಗಿ ಏನಿದೆ?

'ಇಂಡಿಯನ್ ಒಪಿನಿಯನ್' ಪತ್ರಿಕೆಯ ಸಂಪಾದಕರಾಗಿದ್ದ ಗಾಂಧಿ, ತಾವು

ಸಂಪಾದಕರಾಗಿ ಓದುಗರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವ ಧಾಟಿಯಲ್ಲಿ ಬರೆಯಲಾಗಿರುವ ಈ ಪುಸ್ತಕ, ಪತ್ರಿಕೋದ್ಯಮ ಬರವಣಿಗೆಯ ಒಂದು ಅತ್ಯುತ್ತಮ ಮಾದರಿಯಂತಿದೆ. ಅಷ್ಟೇ ಅಲ್ಲ, ತೀವ್ರವಾದಿ ಸ್ವಾತಂತ್ರ್ಯ ಹೋರಾಟಗಾರರ ಪರವಾಗಿ ಪ್ರಶ್ನೆಗಳನ್ನು ತಾವೇ ಹಾಕಿಕೊಳ್ಳುತ್ತಾ; ಅದಕ್ಕೆ ನೀಡಲಾಗುವ ಉತ್ತರಗಳಿಂದ ಅವರಲ್ಲಿ ಏಳಬಹುದಾದ ಸಂಶಯಗಳನ್ನು ಉಪ ಪ್ರಶ್ನೆಗಳ ರೂಪದಲ್ಲಿ ಪ್ರಸ್ತುತಪಡಿಸುತ್ತಾ, ಅವಕ್ಕೂ ಉತ್ತರ ನೀಡುವ ಮೂಲಕ ವಿಚಾರ ವೃತ್ತವೊಂದನ್ನು ಪೂರ್ಣ ಮಾಡುತ್ತಾರೆ. ಗಾಂಧಿಯವರ ಈ ಶೈಲಿ, ರಾಜಕೀಯ ಸಂವಾದದ ಅತ್ಯುತ್ತಮ ಮಾದರಿಯೂ ಹೌದು. ಈ ಸಂವಾದದ ಮೂಲಕ ಅವರು ಪಶ್ಚಿಮದಲ್ಲಿ ಆಗ ರೂಪುಗೊಳ್ಳುತ್ತಿದ್ದ ರಾಷ್ಟ್ರ ಕಲ್ಪನೆಯ ಹಿನ್ನೆಲೆಯಲ್ಲಿ ಚಲಾವಣೆಗೆ ಬಂದಿದ್ದ ರಾಷ್ಟ್ರೀಯ ಸ್ವಾತಂತ್ರ್ಯದ ಪರಿಕಲ್ಪನೆಗೆ ಭಾರತೀಯ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು, 'ಸ್ವರಾಜ್ಯ' ಎಂಬ ಅರ್ಥ ವಿಸ್ತರಣೆ ಒದಗಿಸಿದರು. ಸ್ವಾತಂತ್ರ್ಯ ಎನ್ನುವುದು ಸಮೂಹವೊಂದು ಹೊರಗಿನಿಂದ ಪಡೆದುಕೊಳ್ಳುವಂತಹುದಾಗಿದ್ದು, ಅದು ಪೂರ್ಣ ಸ್ವಾತಂತ್ರ್ಯವೆನಿಸಿಕೊಳ್ಳುವುದಿಲ್ಲ. ಅದರೊಂದಿಗೆ ವ್ಯಕ್ತಿ ಒಳಗಿಂದ ಸಾಧಿಸಿಕೊಳ್ಳುವ ಸಾತಂತ್ರ್ಯವೂ ಸೇರಿದಾಗ ಮಾತ್ರ ಪೂರ್ಣವಾಗುತ್ತದೆ ಎಂದು ಭಾವಿಸಿದ ಗಾಂಧಿ, ಅದನ್ನು 'ಸ್ವರಾಜ್ಯ' ಎಂದು ಕರೆದರು. ಸ್ವಾತಂತ್ರ್ಯ ಎನ್ನುವುದು ಪ್ರಜೆಗಳ ಹಕ್ಕುಗಳನ್ನಷ್ಟೇ ಮೂಲ ಕಾಳಜಿಯನ್ನಾಗಿರಿಸಿಕೊಂಡಿದ್ದರೆ; ಗಾಂಧಿ ರೂಪಿಸಿದ 'ಸ್ವರಾಜ್ಯ' ಪರಿಕಲ್ಪನೆಯು ಕರ್ತವ್ಯ ಪಾಲನೆಯಿಂದಷ್ಟೇ ಹಕ್ಕುಗಳು ದೊರೆಯುವುವು ಎಂದು ಪ್ರತಿಪಾದಿಸುವ ಮೂಲಕ ಸ್ವಾತಂತ್ರ್ಯ ಸ್ವಚ್ಛಂದವಾಗದಂತೆ ತಡೆಯುತ್ತಾ, ಒಂದು ಜವಾಬ್ದಾರಿಯುಳ್ಳ ರಾಷ್ಟ್ರದ ಪರಿಕಲ್ಪನೆಯನ್ನು ಮುಂದಿಡುತ್ತದೆ.

ಪ್ರತಿಯೊಂದು ಜನಸಮುದಾಯಕ್ಕೂ ಒಂದು ಪ್ರತಿಭಾ ವೈಶಿಷ್ಟ್ಯ (Genius) ವಿರುತ್ತದೆ. ಅದೇ ಅವರ ಜೀವಶಕ್ತಿ ಕೂಡ. ಅದನ್ನು ಭಂಗಗೊಳಿಸಿದರೆ, ಅವರ ಎಲ್ಲವನ್ನೂ ಭಂಗಗೊಳಿಸಿದಂತೆಯೇ. ಬ್ರಿಟಿಷ್ ವಸಾಹತುಶಾಹಿ ತನ್ನ ಆಡಳಿತ, ಶಿಕ್ಷಣ ಮತ್ತು ಉದ್ಯೋಗ ನೀತಿಗಳ ಮೂಲಕ ಮಾಡುತ್ತಿರುವುದು ಅದನ್ನೇ. ಹಾಗಾಗಿ ಬ್ರಿಟಿಷ್ ವಸಾಹತುಶಾಹಿಯಿಂದ ಬಿಡುಗಡೆ ಎಂದರೆ ಕೇವಲ ಬ್ರಿಟಿಷ್ ಆಳ್ವಿಕೆಯಿಂದ ಬಿಡುಗಡೆಯಲ್ಲ; ಅದು ನಡೆಸಿರುವ ಈ ವಿನಾಶಕಾರಿ ಕಾರ್ಯಾಚರಣೆ ಮತ್ತು ಅದರ ದುಷ್ಪರಿಣಾಮಗಳಿಂದ ಕೂಡ ಬಿಡುಗಡೆ ಆಗಬೇಕು. ಅದರಿಂದ, ನಮ್ಮ ಭವಿಷ್ಯವನ್ನು ನಮ್ಮ ಪ್ರತಿಭಾ ವೈಶಿಷ್ಟ್ಯಗಳ ಸೃಜನಶೀಲ ಅನ್ವಯಗಳಿಂದಲೇ ರೂಪಿಸಿಕೊಳ್ಳುವ ಸಂಕಲ್ಪವೂ ಮೂಡಬೇಕು. ಹಾಗಾಗಿ ಬ್ರಿಟಿಷರಷ್ಟೇ ಹೋದರೆ ಸಾಲದು; ಬ್ರಿಟಿಷತ್ವವೂ ಹೋಗಬೇಕು. ಇದು ಗಾಂಧಿ ಮಂಡಿಸಿದ 'ಸ್ವರಾಜ್ಯ' ಕಲ್ಪನೆಯ ಮೂಲ ತಾತ್ವಿಕತೆ.

ಈ ಬ್ರಿಟಿಷತ್ವವನ್ನು ಗಾಂಧಿ ಆಗ ಯಾವುದನ್ನು ಆಧುನಿಕ ನಾಗರೀಕತೆ ಎಂದು ಕರೆಯಲಾಗುತ್ತಿತ್ತೋ ಅದರಲ್ಲಿ ಗುರುತಿಸುತ್ತಾರೆ. 'ಹಿಂದೂಸ್ತಾನ ತಿಣುಕುತ್ತಿರುವುದು ಬ್ರಿಟಿಷರ ಭಾರದಿಂದಲ್ಲ, ಆಧುನಿಕ ನಾಗರೀಕತೆಯ ರಾಕ್ಷಸ ಭಾರದಿಂದ' ಎಂಬುದು 'ಹಿಂದ್

ಸ್ವರಾಜ್'ನ ಬೀಜವಾಕ್ಯ. ಆತ್ಮಶಕ್ತಿ ಸಂವರ್ಧನೆಗೆ ಬದಲಾಗಿ ಶರೀರ ಸುಖ ಸಂವರ್ಧನೆಯನ್ನಷ್ಟೇ ತನ್ನ ಗುರಿಯನ್ನಾಗಿಸಿಕೊಂಡಿದೆ ಎಂದು ಅವರು ಆಧುನಿಕ ನಾಗರೀಕತೆಯನ್ನು ಒಂದು 'ರೋಗ' ಎಂದು ಕರೆಯುತ್ತಾರೆ. ಈ ಸಂಬಂಧವಾಗಿ ಅವರು ಬ್ರಿಟಿಷರ ಕೈಗಾರಿಕಾ ಉತ್ಪನ್ನಗಳಿಗೆ ನಾವು ಮರುಳಾದುದೇ ನಮ್ಮ ಸ್ವಾತಂತ್ರ್ಯ ಹರಣಕ್ಕೆ ನಾಂದಿಯಾಯಿತೆಂದು ಹೇಳುತ್ತಾರೆ. ಹಾಗಾಗಿ, ಅವರ ಪ್ರಕಾರ ಆತ್ಮ ಸಂಯಮವಿಲ್ಲದೆ, ತನ್ನ ಅಗತ್ಯಗಳ ಬಗ್ಗೆ ಸ್ಪಷ್ಟ ಕಲ್ಪನೆಯಿಲ್ಲದೆ, ಯಾವ ರೀತಿಯ ಸ್ವಾತಂತ್ರ್ಯ ಸಂರಕ್ಷಣೆಯೂ ಸಾಧ್ಯವಿಲ್ಲ. ಪ್ರಜೆ ತನ್ನ ಧರ್ಮವೆಂದು ರಾಷ್ಟ್ರ ಕುರಿತ ತನ್ನ ಕರ್ತವ್ಯಗಳನ್ನು ಪಾಲಿಸದ ಹೊರತು, ಸ್ವಾತಂತ್ರ್ಯವೆನ್ನುವುದು ಹಕ್ಕುಗಳ ಹೆಸರಲ್ಲಿ ಬಲಾಢ್ಯರ ಪಾಲಾಗಿ ಎಲ್ಲ ನೆಲೆಗಳಲ್ಲೂ ಹಾನಿಗೀಡಾಗುತ್ತದೆಂದು ಗಾಂಧಿ ವಾದಿಸುತ್ತಾರೆ. ಹಾಗಾಗಿ ಆತ್ಮದ (ಅಂದರೆ ಆತ್ಮಸಾಕ್ಷಿಯ) ಪ್ರಜ್ಞೆ ಕಳೆದುಕೊಳ್ಳದಂತಹ ಪ್ರಜೆಗಳನ್ನುಳ್ಳ ರಾಷ್ಟ್ರವನ್ನು ಪಡೆಯುವುದೇ ನಿಜವಾದ ಮತ್ತು ಪರಿಪೂರ್ಣ ಸ್ವಾತಂತ್ರ್ಯವೆಂದು ಅವರು ಅಭಿಪ್ರಾಯಪಡುತ್ತಾರೆ. ಇದನ್ನು ಸತ್ಯ ಮತ್ತು ಅಹಿಂಸೆಗಳ ಮೂಲಕ ಆಳುವವರ ಮತ್ತು ಆಳಿಸಿಕೊಳ್ಳುವವರ ಆತ್ಮಸಾಕ್ಷಿಯನ್ನು ಮುಟ್ಟುವಂತಹ 'ಸತ್ಯಾಗ್ರಹ'ದ ಮೂಲಕ ಮಾತ್ರ ಪಡೆಯಲು ಸಾಧ್ಯ ಎಂಬ ನಂಬಿಕೆಯೂ ಸೇರಿಕೊಂಡು ಗಾಂಧೀಜಿಯ ಸ್ವರಾಜ್ಯದ ಕಲ್ಪನೆ ಪೂರ್ಣಗೊಳ್ಳುತ್ತದೆ.

ಇದು ಸಾಧ್ಯವಾಗುವುದು, ಆಧುನಿಕತೆಯ ಆಕರ್ಷಣೆಗಳಿಗೆ ಸಿಕ್ಕಿ ತನ್ನ ಪ್ರತಿಭಾ ವೈಶಿಷ್ಟ್ಯದ ಬಗ್ಗೆಯೇ ಕೀಳರಿಮೆ ಬೆಳೆಸಿಕೊಂಡಿರುವ–ಆಗ 'ಹಿಂದೂಸ್ತಾನ'ವೆಂದು ಕರೆಯಲ್ಪಡುತ್ತಿದ್ದ–ಭಾರತ, ಈ ಸಂದಿಗ್ಧ ಉಂಟಾದುದೇಕೆಂದು ಯೋಚಿಸಿದಾಗ ಮತ್ತು ತನ್ನ ಪ್ರತಿಭಾ ವೈಶಿಷ್ಟ್ಯ ಸೃಷ್ಟಿಸಿರುವ ಪರಂಪರೆಯ ದೋಷಗಳನ್ನು ತಿದ್ದಿಕೊಂಡು ಅದರ ಆಧಾರದ ಮೇಲೆ ತನ್ನದೇ ರಾಷ್ಟ್ರವನ್ನು ಪುನಾರಚಿಸಿಕೊಂಡಾಗ ಮಾತ್ರ. ಹಾಗಾಗಿ ಗಾಂಧಿ ಪ್ರತಿಪಾದಿಸಿದ ಸ್ವರಾಜ್ಯ 'ಹಿಂದ್ ಸ್ವರಾಜ್' ಎನಿಸಿಕೊಂಡಿತಷ್ಟೆ. ಇದನ್ನು ಯಾವುದೇ ಕಾರಣಕ್ಕೂ ಹಿಂದೂ ಸ್ವರಾಜ್ಯ ಎಂದು ಗೊಂದಲ ಮಾಡಿಕೊಳ್ಳಬಾರದು! ಏಕೆಂದರೆ, ಆಗ (ಮತ್ತು ಈಗಲೂ) ಹಿಂದೂ ರಾಷ್ಟ್ರೀಯತೆ ಆರ್ಯಸಂಸ್ಕೃತಿ, ಪವಿತ್ರಭೂಮಿ, ಪಿತೃಭೂಮಿ, ಮಾತೃಭೂಮಿ ಇತ್ಯಾದಿ ಪೌರಾಣಿಕ ಪರಿಕಲ್ಪನೆಗಳಿಂದ ಪ್ರೇರಿತವಾದ ಜನಾಂಗವಾದ ಹಾಗೂ ಅನ್ಯಮತ ಅಸಹನೆ(ಹಿಂದೂಗಳಲ್ಲದವರೆಲ್ಲರೂ ಇಲ್ಲಿನ 'ಅತಿಥಿ'ಗಳಷ್ಟೆ!) ಮತ್ತು ಅವಕ್ಕೆ ಪೂರಕವಾಗಿ ರಾಜಕಾರಣದ ಹಿಂದೂಕರಣ ಹಾಗೂ ಹಿಂದೂ ಧರ್ಮದ ಸೇನೀಕರಣಗಳನ್ನು ಪ್ರತಿಪಾದಿಸುತ್ತಿತ್ತು. ಆದರೆ ಇದಕ್ಕೆ ಪ್ರತಿಯಾಗಿ ಗಾಂಧಿ ಹಿಂದೂ ಧರ್ಮದ ಸನಾತನ ತಿರುಳೆನಿಸಿದ ಒಬ್ಬೊಬ್ಬನದೂ ಒಂದೊಂದು ಮತ ಎನ್ನುವ ಬಹು ಸಂಸ್ಕೃತಿತ್ವ ಮತ್ತು ನೈಸರ್ಗಿಕ ಧರ್ಮಪಾಲನೆಯನ್ನಾಧರಿಸಿದ ಸಮುದಾಯ ಪ್ರಜ್ಞೆಯ ಹೊಸ ರಾಷ್ಟ್ರೀಯತೆಯನ್ನು ರೂಪಿಸುವ ಪ್ರಯತ್ನದಲ್ಲಿ ತೊಡಗಿದ್ದರು. ಆ ಮೂಲಕ ಸ್ವಾತಂತ್ರ್ಯ ಹೋರಾಟವನ್ನು ಸ್ವರಾಜ್ಯ ಸ್ಥಾಪನೆಯ ಕಾರ್ಯಾಚರಣೆಯನ್ನಾಗಿ ಮತ್ತು ಹಿಂದೂ ಧರ್ಮವನ್ನು ಎಲ್ಲರ– ಪ್ರಜಾಸತ್ತಾತ್ಮಕ– ಧರ್ಮವನ್ನಾಗಿ ಪರಿವರ್ತಿಸುವ ಉದ್ದೇಶವನ್ನೂ ಹೊಂದಿದ್ದರು. ಹಿಂದೂವಾದಿಗಳೆನಿಸಿ

ಕೊಂಡವರಿಗೆ ಹಿಂದುತ್ವವೆನ್ನುವುದು, ಹಿಂದೂ ಧರ್ಮ ಕಾಲಾನುಕಾಲದಲ್ಲಿ ರೂಢಿಸಿಕೊಂಡ ರಾಜಕೀಯ ಸ್ವರೂಪವನ್ನಷ್ಟೇ ಸಂರಕ್ಷಿಸಿಕೊಳ್ಳುವ ಸಾಧನವಾಗಿದ್ದರೆ, ಗಾಂಧೀಜಿಗೆ ತಮ್ಮ ರಾಜಕಾರಣ ಹಿಂದೂ ಧರ್ಮವನ್ನು ಉದಾರಗೊಳಿಸುವ ಮೂಲಕ ಸುಧಾರಿಸಿ ಅದರ ಧಾರಣ ಶಕ್ತಿಯನ್ನು ಸಂವರ್ಧಿಸಿಕೊಳ್ಳುವ ಸಾಧನವಾಗಿತ್ತು. ದೇವರು, ದೇವಸ್ಥಾನ, ಜಾತಿ, ಕರ್ಮ, ಸಂಸ್ಕಾರ, ಇತಿಹಾಸ ಇತ್ಯಾದಿಗಳ ಬಗ್ಗೆ ಗಾಂಧೀಜಿಯ ಧೋರಣೆಗಳನ್ನು ಹಿಂದೂವಾದಿಗಳ ಧೋರಣೆಗಳೊಂದಿಗೆ ಹೋಲಿಸಿ ನೋಡಿದರೆ ಇದು ಇನ್ನಷ್ಟು ಸ್ಪಷ್ಟವಾದೀತು.

ಹಾಗಾಗಿಯೇ ಗಾಂಧಿ ಹಿಂದ್ ಸ್ವರಾಜ್ ಸ್ಥಾಪನೆಗಾಗಿ ಮುದ್ರಣ ಯಂತ್ರ, ರೈಲೂ ಸೇರಿದಂತೆ ಎಲ್ಲ ಆಧುನಿಕ ಯಂತ್ರ ಸಾಮಗ್ರಿಗಳ ವಿರುದ್ಧ, ವಕೀಲಿಕೆಯನ್ನಾಧರಿಸಿದ ಆಧುನಿಕ ನ್ಯಾಯ ಪದ್ಧತಿಯ ವಿರುದ್ಧ , ಔಷಧ ಕೈಗಾರಿಕೆಯ ಸಾಮ್ರಾಜ್ಯ ಸ್ಥಾಪಿಸುವ ಆಧುನಿಕ ವೈದ್ಯ ಪದ್ಧತಿಯ ವಿರುದ್ಧ, ಒಂದು ಧರ್ಮದವರ ವಿರುದ್ಧ ಇನ್ನೊಂದು ಧರ್ಮದವರನ್ನು ಎತ್ತಿಕಟ್ಟುವ ಆಧುನಿಕ ಚರಿತ್ರಕಾರಿಕೆಯ ವಿರುದ್ಧ ತಮ್ಮ ವಾದಗಳನ್ನು ಮಂಡಿಸಿದರು. ಆಧುನಿಕ ನಾಗರೀಕತೆಯ ತಾತ್ವಿಕ ಹೆಗ್ಗುರುತುಗಳೆನಿಸಿದ್ದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ತಮ್ಮ ಸ್ವರಾಜ್ಯದ ತಾತ್ವಿಕ ಪರಿಕಲ್ಪನೆಗೆ ಪೂರಕವಾಗಿ ಅಳವಡಿಸಿಕೊಂಡಿದ್ದ ಗಾಂಧಿ; ಅದೇ ನಾಗರೀಕತೆಯ ತಾಂತ್ರಿಕ ಹೆಗ್ಗುರುತಗಳೆನಿಸಿದ್ದ ಯಂತ್ರ, ರೈಲು, ವಕೀಲಿಕೆ, ರಸಾಯನಿಕ ಔಷಧ ಪದ್ಧತಿ ಇತ್ಯಾದಿಗಳನ್ನು ಮಾರಕವೆಂದೇತಕೆ ಪರಿಗಣಿಸಿದರೆಂದು ನಾವು ಚಿಂತಿಸಬೇಕು. ಮನುಷ್ಯ ತನ್ನೊಳಗಿನ ದೈವಿಕತೆಯನ್ನು ಕಂಡುಕೊಳ್ಳುವುದೇ ಆತನ ಬದುಕಿನ ಪರಮ ಗುರಿ ಮತ್ತು ಸಾರ್ಥಕತೆಯಾಗಿದೆ ಮತ್ತು ಅದಕ್ಕೆ ದೇಹವೊಂದು (ಕರ್ಮ)ಮಾಧ್ಯಮವಾಗಿದೆ ಎಂದು ಗಾಂಧಿ ಭಾವಿಸಿದ್ದರು. ಇದಕ್ಕೆ ಅಡಚಣೆ ಉಂಟುಮಾಡುವ ಎಲ್ಲವನ್ನೂ ಅನುಮಾನದಿಂದ ನೋಡುತ್ತಿದ್ದ ಅವರು, ಆಧುನಿಕ ನಾಗರೀಕತೆಯ ಈ ಎಲ್ಲ ತಾಂತ್ರಿಕತೆಗಳು ಮನುಷ್ಯನ ದೇಹದ ಆರೋಗ್ಯ ಮತ್ತು ಆತ್ಮದ ಘನತೆಯನ್ನು ಹಾಳುಗೆಡುಹುವ ಮೂಲಕ ಅವನನ್ನು ತನ್ನ ಪರಮ ಗುರಿಯಿಂದ ಚ್ಯುತಿಗೊಳಿಸುವುವೆಂದು ಬಲವಾಗಿ ನಂಬಿದ್ದರು.

ಆದರೆ ಗಾಂಧಿ ಇವುಗಳ ವಿರುದ್ಧ ತಮ್ಮ ಸತ್ಯಾಗ್ರಹದ ಸಾಧನವನ್ನೇಕೆ ಬಳಸಲಿಲ್ಲ ಎಂಬುದನ್ನೂ ನಾವು ಯೋಚಿಸಬೇಕು. ಹಾಗೆ ಯೋಚಿಸಿದಾಗ ಗೊತ್ತಾಗುವುದು, ಗಾಂಧಿ ಇವುಗಳ ವಿರುದ್ಧ ಮಾತನಾಡುತ್ತಿದ್ದುದು ರೂಪಕ ಭಾಷೆಯಲ್ಲಿ ಎಂದು. ಪ್ರತಿ ಹಂತದಲ್ಲೂ ಆಧುನಿಕ ನಾಗರೀಕತೆಯನ್ನು ಪ್ರಶ್ನಿಸಿಯೇ ಅದರ ಒಳಿತುಗಳನ್ನು ಅಳವಡಿಸಿಕೊಳ್ಳಬೇಕೆಂಬುದು ಅವರ ಆಶಯವಾಗಿತ್ತು. ಇದನ್ನರಿಯದ ಪ್ರಗತಿಪರರೆನ್ನಿಸಿಕೊಂಡ ಕೆಲವು ಮೂಢರು ಗಾಂಧೀಜಿಯನ್ನು ಯಥಾಸ್ಥಿತಿವಾದಿ, ಪ್ರತಿಗಾಮಿ, ಸನಾತನಿ ಎಂದೆಲ್ಲ ಟೀಕಿಸುವರು. ಆದರೆ ಇಂದು ಜಾಗತೀಕರಣದ ರೂಪ ತಳೆದು ನಮ್ಮೆದುರಿಗೆ ನಿಂತಿರುವ ಆಧುನಿಕ ನಾಗರೀಕತೆ ನಮ್ಮನ್ನು ವ್ಯಕ್ತಿಗಳನ್ನಾಗಿ ಮತ್ತು ಸಮೂಹವನ್ನಾಗಿ ನೈಸರ್ಗಿಕ ಮತ್ತು ನೈತಿಕ ನೆಲೆಗಳಲ್ಲಿ ಎಲ್ಲಿಗೆ ಮತ್ತು ಎಂತಹ ಸಂದಿಗ್ಧಗಳಲ್ಲಿ ತಂದು ನಿಲ್ಲಿಸಿದೆ ಎಂಬುದನ್ನು ಯೋಚಿಸಿದಾಗ ಇಂತಹ ಟೀಕೆಗಳ ಹುಸಿತನದ ಅರಿವಾದೀತು.

ಗಾಂಧಿ ಬಹು ಹಿಂದೆಯೇ ಸ್ಪಷ್ಟಪಡಿಸಿದ್ದರು, 'ನಾನು ಯಂತ್ರ ವಿರೋಧಿಯಲ್ಲ, ಯಂತ್ರ ನಾಗರೀಕತೆಯ ವಿರೋಧಿ'. ವಿಚಾರಗಳಲ್ಲಿ ಆಧುನಿಕರಲ್ಲಿ ಅತ್ಯಾಧುನಿಕರೆನಿಸಿದ್ದ ಗಾಂಧೀಜಿಯ ಈ ಮಾತಿನ ಮರ್ಮವನ್ನರಿಯುವ ಕಾಲವೀಗ ಬಂದಿದೆ. ಹಾಗಾಗಿಯೇ ಇಂದು ಜಗತ್ತಿನಾದ್ಯಂತ 'ಹಿಂದ್ ಸ್ವರಾಜ್' ಬಗ್ಗೆ ಹೊಸ ಕುತೂಹಲ ಹುಟ್ಟಿದೆ. ಅಧ್ಯಯನ, ಚರ್ಚೆ, ಸಂವಾದಗಳು ನಡೆದಿವೆ. ಗಾಂಧಿಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಲಾಗುತ್ತಿದೆ. ಆದರೆ, ಗಾಂಧೀಜಿಯನ್ನು ರಾಷ್ಟ್ರಪಿತನೆಂದು ಕರೆದುಕೊಳ್ಳುತ್ತಿರುವ ನಾವು?

(೧೭ ಅಕ್ಟೋಬರ್, ೨೦೦೮)

■

೨೫. ಗಾಂಧಿ ಮತ್ತು ಸಮಾಜವಾದಿಗಳು*

ಸ್ನೇಹಿತರೇ,

ಇಂದಿಗೆ ಡಾ॥ ರಾಮಮನೋಹರ ಲೋಹಿಯಾ ನಿಧನರಾಗಿ ೪೧ ವರ್ಷಗಳು ತುಂಬುತ್ತಿವೆ. ಅವರು ಹೇಗೆ ಮತ್ತು ಏಕೆ ನಿಧನರಾದರು ಎಂಬುದು ನಿಮಗೆಲ್ಲ ಗೊತ್ತೇ ಇದೆ. ಬ್ರಿಟಿಷ್ ಪ್ರಭುತ್ವದ ವಿರುದ್ಧ ತಮ್ಮದೇ ರೀತಿಯಲ್ಲಿ ದಿಟ್ಟವಾಗಿ-ಧೀರರಾಗಿ ಹೋರಾಡಿ ಹಿಂಸೆ ಅನುಭವಿಸಿದ ಅವರು, ಸ್ವತಂತ್ರ ಭಾರತದಲ್ಲಿ ಅದಕ್ಕಿಂತ ಹೆಚ್ಚು ಹಿಂಸೆ ಅನುಭವಿಸಿದರು. ಬ್ರಿಟಿಷ್ ಪ್ರಭುತ್ವದ ವಿರುದ್ಧ ಯಾವ ಉದ್ದೇಶಗಳಿಂದ ತಾವು ಹೋರಾಡಿದ್ದರೋ ಅವುಗಳಿಗೆ ತದ್ವಿರುದ್ಧ ತತ್ವಗಳ ಆಧಾರದ ಮೇಲೆ ಸ್ವತಂತ್ರ ಭಾರತವನ್ನು ಕಟ್ಟುತ್ತಿರುವುದರ ಬಗ್ಗೆ ದನಿ ಎತ್ತಿದ್ದಕ್ಕಾಗಿ, ಪ್ರತಿಭಟಿಸಿದ್ದಕ್ಕಾಗಿ ಅವರು ಯಾವ ರಾಜಕೀಯ ನಾಯಕನೂ ಹೋಗದಿದ್ದಷ್ಟು ಬಾರಿ ಸೆರೆಮನೆಗೆ ಹೋಗಬೇಕಾಯಿತು. ಅವರಷ್ಟು ಮಹತ್ವದ ಸ್ವಾತಂತ್ರ್ಯ ಹೋರಾಟಗಾರನಾರೂ ಎದುರಿಸದಂತಹ ರಾಜಕೀಯ ಮತ್ತು ಪೊಲೀಸ್ ದುರ್ವರ್ತನೆಯನ್ನು ಅವರು ಎದುರಿಸಬೇಕಾಯಿತು. ಅದರ ಪರಿಣಾಮವಾಗಿ ಅವರ ಇಡೀ ದೇಹ ಮತ್ತು ಅದರೊಳಗಿನ ಚೈತನ್ಯ ಘಾಸಿಗೊಂಡಿತ್ತು. ಈ ಸ್ಥಿತಿಯಲ್ಲಿ ಅವರು ರೂಪಿಸಿದ 'ಕಾಂಗ್ರೆಸ್ಸೇತರವಾದ', ಬಿಜೆಪಿಯನ್ನು ಇಂದು ಭಾರತದ ರಾಜಕಾರಣದ ಮುನ್ನೆಲೆಗೆ ತಂದು ನಿಲ್ಲಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ! ಲೋಹಿಯಾ ತಮ್ಮ ೫೭ನೇ ವಯಸ್ಸಿನಲ್ಲಿ ಅವರು ತಾವು ನಂಬಿದ್ದ ಸಮಾಜವಾದಿ ರಾಜಕಾರಣಕ್ಕೆ ತಕ್ಕಂತೆ, ಭಾರತದ ಶ್ರೀಸಾಮಾನ್ಯನಿಗೆ ದಕ್ಕದ ಯಾವುದೇ ವಿಶೇಷ ವೈದ್ಯೋಪಚಾರ ತಮಗೂ ಬೇಡವೆಂದು ಹಠ ಮಾಡಿ ಸರ್ಕಾರಿ ಆಸ್ಪತ್ರೆ ಸೇರಿದರು. ಅಲ್ಲಿನ ವೈದ್ಯೋಪಚಾರದ ಮಿತಿಗಳಿಂದಾಗಿ ಅವರು ಅಕ್ಟೋಬರ್ ೧೨ರಂದು ಅಸು ನೀಗಿದರು.

ಲೋಹಿಯಾ ಅಸು ನೀಗಿದ ನಂತರದ ಈ ನಾಲ್ಕು ದಶಕಗಳಲ್ಲಿ ಸಾರ್ವಜನಿಕ ಜೀವನದ ದಿಕ್ಕು ದೆಸೆಗಳೇ ಬದಲಾಗಿವೆ. ಅವರು ಪ್ರತಿಪಾದಿಸಿದ ರಾಜಕೀಯ ತಾತ್ವಿಕತೆ ಮತ್ತು ಕಾರ್ಯಾಚರಣೆಯ ರೀತಿ ನೀತಿಗಳೇ ಅಪ್ರಸ್ತುತವೆನ್ನಿಸತೊಡಗಿವೆ. ಆದರೂ

---

* ಇದೇ ಅಕ್ಟೋಬರ್ ೧೨ರಂದು ಮೈಸೂರಿನಲ್ಲಿ ನಡೆದ 'ಲೋಹಿಯಾ ನೆನಪು' ಸಮಾರಂಭದಲ್ಲಿ ಆಡಿದ ಮಾತುಗಳು.

ಲೋಹಿಯಾ ಎಂದೊಡನೆ ಕಿವಿ ಅರಳಿಸುವ ಸಾಕಷ್ಟು ಜನ ನಮ್ಮಲ್ಲಿ ಈಗಲೂ ಇದ್ದಾರೆ. ಅವರಲ್ಲಿ ಎಲ್ಲರೂ ಲೋಹಿಯಾ ರಾಜಕಾರಣವನ್ನು ಈಗಲೂ ನಂಬಿರುವವರೇನಲ್ಲ. ಅವರಲ್ಲಿ ಅರ್ಧ ಜನ ಇಂದಿನ ಜಾಗತೀಕರಣ ಸೃಷ್ಟಿಸುತ್ತಿರುವ ಸಂದಿಗ್ಧಗಳಿಗೆ ಲೋಹಿಯಾ ಚಿಂತನೆಯಲ್ಲಿ ಏನಾದರೂ ಪರಿಹಾರದ ಬೀಜಗಳಿರಬಹುದೇ ಎಂಬ ಕುತೂಹಲ ಇರುವವರೂ, ಇನ್ನರ್ಧ ಜನ ತಾವು ಲೋಹಿಯಾ ರಾಜಕಾರಣದಿಂದ ದೂರ ಸರಿದಿದ್ದರಿಂದಾಗಿಯೇ ಈ ಸಂದಿಗ್ಧತೆಗಳು ಉಂಟಾಗಿವೆಯೇನೋ ಎಂಬ ಅನುಮಾನದಲ್ಲಿ ಪಾಪ ಪರಿಹಾರಾರ್ಥವಾಗಿ ಲೋಹಿಯಾ ಹೆಸರು ಜಪಿಸುತ್ತಿರುವವರು. ಲೋಹಿಯಾ ತಮ್ಮ ಕಾಲದಲ್ಲೇ ಭಾರತದ ಅತ್ಯುತ್ತಮ ಮನಸ್ಸುಗಳನ್ನು ತಮ್ಮೆಡೆಗೆ ಆಕರ್ಷಿಸಿದ್ದರು. ಅವರ ಕಾಫಿ ಹೌಸ್ ಬೈಠಕ್‌ಗಳಲ್ಲಿ ಭಾಗವಹಿಸದ ಲೇಖಕ, ಕಲಾವಿದ, ಬುದ್ಧಿಜೀವಿಗಳೇ ಇರಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ಲೋಹಿಯಾ ತಮ್ಮ ರಾಜಕಾರಣದಲ್ಲಿ ಗೆದ್ದರೆ ಎಂದು ಕೇಳಿದರೆ, ಹೌದು ಎಂದು ಹೇಳುವುದು ಕಷ್ಟವಾಗುತ್ತದೆ.

ಲೋಹಿಯಾರನ್ನು ಇಂದು ನೆನಪಿಸಿಕೊಳ್ಳುವುದೆಂದರೆ, ಈ ಪ್ರಶ್ನೆಯನ್ನು ಪದೇ ಪದೇ ಕೇಳೀಕೊಳ್ಳುವುದೇ ಆಗಿದೆ. ಗಾಂಧಿ ನಂತರ ಅತ್ಯುತ್ತಮ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳನ್ನು ಪ್ರತಿಪಾದಿಸಿ, ಅತ್ಯುತ್ತಮ ಮನಸ್ಸುಗಳನ್ನು ಆಕರ್ಷಿಸಿ, ಭಾರತದ ಅತ್ಯುತ್ತಮ ರಾಜಕೀಯ ಹೋರಾಟಗಳನ್ನು ಮಾಡಿದ ಲೋಹಿಯಾ ಅತ್ಯುತ್ತಮ ರಾಜಕೀಯ ಪರ್ಯಾಯವನ್ನೇಕೆ ಸೃಷ್ಟಿಸಲಾಗಲಿಲ್ಲ? ಅವರು ತಮ್ಮ ರಾಜಕೀಯ ಜೀವನದ ಅತ್ಯುತ್ತಮ ದಿನಗಳನ್ನು ತಲುಪಲಾರಂಭಿಸಿದ ಘಟ್ಟದಲ್ಲಿ ನಿಧನರಾದದ್ದೇ ಇದಕ್ಕೆ ಕಾರಣ ಎನ್ನುವುದು ಬಹು ಸುಲಭದ ಉತ್ತರ. ಆಗ ಅವರು ಅತ್ಯುತ್ತಮ ರಾಜಕೀಯ ವಾರಸುದಾರಿಕೆಯನ್ನು ನಿರ್ಮಿಸದೇ ಹೋದ ಆರೋಪಕ್ಕೆ ಗುರಿಯಾಗಬೇಕಾಗುತ್ತದೆ! ಇಂದು ಸಮಾಜವಾದ ಅಥವಾ ಸಮಾಜವಾದಿಗಳೆಂದರೆ, ಜನ ಸಾಮಾನ್ಯರು ವಿಚಿತ್ರ ಜಿಗುಪ್ಸೆಯಿಂದ ನೋಡುವುದು ಇಂತಹ ವಾರಸುದಾರಿಕೆಯ ಲೋಪದಿಂದಲೇ ಎಂದರೆ ತಪ್ಪಾಗಲಾರದು.

ಆದರೂ ನಮ್ಮಂತಹವರು 'ಮರಳಿ ಬರಲಿದೆ ಸಮಾಜವಾದ!' ಎಂದು ಹಲವರ ಕಿಚಾವಣೆ ಮತ್ತು ವ್ಯಂಗ್ಯಗಳ ನಡುವೆಯೂ ಧೈರ್ಯವಾಗಿ ಘೋಷಿಸಲು ನಮ್ಮದೇ ಆದ ಕಾರಣಗಳಿವೆ. ಏಕೆಂದರೆ, ಸಮಾಜವಾದವೆಂಬುದು ಕೇವಲ ಒಂದು ರಾಜಕೀಯ ಸಿದ್ಧಾಂತ ವಾಗಿರದೆ, ಅದೊಂದು ಜೀವನ ದೃಷ್ಟಿಯೂ ಆಗಿದೆ ಎಂಬುದು ನಮ್ಮ ತಿಳುವಳಿಕೆಯಾಗಿದೆ. ದೀರ್ಘಕಾಲಿಕವಾದ ಈ ತಿಳುವಳಿಕೆಯಿಲ್ಲದೆ, ಸಮಾಜವಾದದ ಹೆಸರು ಹೇಳಿಕೊಂಡು ಅಲ್ಪಕಾಲಿಕವಾದ ಮತ್ತೇನನ್ನೋ ಮಾಡಿದ ಕೆಲವರ ರಾಜಕಾರಣದಿಂದಾಗಿ ಅದಕ್ಕೆ ಕೆಟ್ಟ ಹೆಸರು ಬಂದುದರಿಂದ, ಅದರ ಕಾಲ ಮುಗಿಯಿತೆಂದು ಘೋಷಿಸಿದವರೇ ಇಂದು ಬಂಡವಾಳಷಾಹಿ ರಾಜಕಾರಣ ಸಮಾಜವಾದಿ ರಾಜಕಾರಣದಿಂದ ಕೆಲವು ಪಾಠಗಳನ್ನಾದರೂ ಕಲಿಯಬೇಕಾಗಿದೆ ಎಂದು ಹೇಳುವಂತಾಗಿದೆ. ಅಮೆರಿಕಾ ಮತ್ತದರ ಮಿತ್ರ ದೇಶಗಳು ಇಂದು ಕಾಣುತ್ತಿರುವ ಭಯಂಕರ ಆರ್ಥಿಕ ಕುಸಿತದ ಸಂದರ್ಭದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ

ಅರ್ಥಶಾಸ್ತ್ರಜ್ಞ ಹಾಗು ವಿಶ್ವಬ್ಯಾಂಕ್‌ನ ಮಾಜಿ ಆರ್ಥಿಕ ಸಲಹೆಗಾರ ಜೋಸೆಫ್ ಸ್ಟಿಗ್ಲಿಟ್ಜ್ ಅವರ ಬಾಯಿಂದಲೇ ಈ ಮಾತು ಹೊರಬಂದಿದೆ! ಇದು ಸಮಾಜವಾದ ಮರಳಿ ಬರಲಿರುವುದರ ಮುನ್ಸೂಚನೆ ಎಂದೇ ನಾನು ಭಾವಿಸಿದ್ದೇನೆ.

ಹಾಗೆ ನೋಡಿದರೆ, ಸಮಾಜವಾದ ಭಾರತದ ಮಟ್ಟಿಗಾದರೂ ಇನ್ನೂ ಜೀವಂತವಿದೆ ಎಂದು ನಂಬಿದವನು ನಾನು. ಮನಮೋಹನ ಸಿಂಗ್ ಮತ್ತು ಮೊಂಟೆಕ್ ಸಿಂಗ ಅಹ್ಲೂವಾಲಿಯಾರಂತಹ ಅಪ್ಪಟ ಮುಕ್ತ ಮಾರುಕಟ್ಟೆವಾದಿಗಳೂ 'ಆವೃತ' ಅಭಿವೃದ್ಧಿಯ ಮಾತನಾಡಿಯೇ ತಮ್ಮ ರಾಜಕಾರಣವನ್ನು ಮುಂದುವರೆಸಿಕೊಂಡು ಹೋಗಬೇಕಾದ ಪರಿಸ್ಥಿತಿ ಉಂಟಾಗಿದೆ ಎಂದರೆ ಇನ್ನೇನರ್ಥ? ನಿರ್ದಿಷ್ಟ ರೂಪದ–ಸೂತ್ರಗಳ–ಕಾರ್ಯಕ್ರಮಗಳ ಸಮಾಜವಾದ ಅಪ್ರಸ್ತುತಗೊಂಡಿರಬಹುದು. ಆದರೆ ಭಾರತದಂತಹ ಅತೀವ ಮತ್ತು ಹಲವು ನೆಲೆಗಳ ಅಸಮಾನತೆಗಳ ರಾಷ್ಟ್ರದಲ್ಲಿ ಸಮಾಜವಾದ ಒಂದು ಭಾವನೆಯಾಗಿ, ಆದರ್ಶವಾಗಿ, ಹುರುಪಾಗಿ ಕಣ್ಮರೆಯಾಗಲು ಸದ್ಯಕ್ಕಂತೂ ಕಾರಣಗಳೇ ಇಲ್ಲ. ಇದರ ಮೂಲಕ ನಾನು ಏನು ಹೇಳುತ್ತಿದ್ದೇನೆಂದರೆ, ಸಮಾಜವಾದವನ್ನು ನಮ್ಮ ಕಾಲಕ್ಕೆ ನಾವೇ ಪುನರನ್ವೇಷಿಸಿಕೊಳ್ಳ ಬೇಕಾಗಿದೆ. ಇದನ್ನು ಮಾಡಲಾಗದ ಸಮಾಜವಾದಿಗಳು ಇಂದು ಅವಶೇಷಗಳ ರೂಪದಲ್ಲಿ, ವ್ಯಂಗ್ಯಚಿತ್ರಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತಿರುವುದು ಆಶ್ಚರ್ಯವೇನಲ್ಲ.

ಇಂತಹ ಪುನರನ್ವೇಷಣೆಯ ಸಣ್ಣ ಪ್ರಯತ್ನವನ್ನು ನಾನು ನನ್ನ ಮಿತಿಯಲ್ಲೇ ಮಾಡುತ್ತಾ ಬರುತ್ತಿದ್ದೇನೆ. ಅದಕ್ಕಾಗಿ, ದಿವಾಳಿಯೆದ್ದಿರುವ ಸಮಾಜವಾದಿ ಸಾಮ್ರಾಜ್ಯದ ಯಜಮಾನರುಗಳಿಂದ ಟೀಕೆಗೊಳಪಡುತ್ತಲೇ ಬಂದಿದ್ದೇನೆ. ಆದರೂ, ಇಂದು ಬಿಡುಗಡೆಯಾದ 'ರೈತಭಾರತ: ಅವಸಾನದ ಅಂಚಿನಲ್ಲಿ' ಮತ್ತು 'ಆ ಗಣರಾಜ್ಯ-ಈ ಕರ್ನಾಟಕ' ಪುಸ್ತಕಗಳಲ್ಲಿ ನಾನು ಇದನ್ನು ಮುಂದುವರಿಸಿದ್ದರೆ ಅದಕ್ಕೆ ಕಾರಣ, ಸಮಾಜವಾದವನ್ನು ಜೀವಂತವಾಗಿಡುವ ರೀತಿಯೇ ಇದು ಎಂಬ ನನ್ನ ದೃಢ ನಂಬಿಕೆ. 'ರೈತ ಭಾರತ: ಅವಸಾನದ ಅಂಚಿನಲ್ಲಿ' ಕಿರು ಪುಸ್ತಕದಲ್ಲಿ, ಜಾಗತೀಕರಣ ಒಂದು ಜೀವನ ಕ್ರಮದ ನಾಶದ ಪ್ರಕ್ರಿಯೆಯಾಗಿ ಒಂದು ರಾಷ್ಟ್ರದ ನಾಶಕ್ಕೆ ಹೇಗೆ ಕಾರಣವಾಗಬಲ್ಲುದು ಎಂಬುದರ ವಿಷದೀಕರಣವಿದ್ದರೆ, 'ಈ ಗಣರಾಜ್ಯ-ಆ ಕರ್ನಾಟಕ' ಕೃತಿಯು ಭಾಷಾ ರಾಷ್ಟ್ರೀಯತೆಗಳನ್ನು ಹತ್ತಿಕ್ಕುವ ನಮ್ಮ ಆಧುನಿಕ ರಾಷ್ಟ್ರೀಯತೆಯ ಪರಿಕಲ್ಪನೆ ಹೇಗೆ ಇಂದು ಇಂತಹ ಜಾಗತೀಕರಣಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ಸೂಚಿಸುವ ಪ್ರಯತ್ನ ಮಾಡುತ್ತದೆ. ಜೊತೆಗೆ ಐವತ್ತು ವರ್ಷಗಳ ಕರ್ನಾಟಕದಲ್ಲಿ ಕನ್ನಡ ಭಾಷಾ ರಾಷ್ಟ್ರೀಯತೆ ತನ್ನ ಈ ಪರಿಮಿತಿಗಳಲ್ಲೇ ತನ್ನನ್ನು ತಾನು ಹೇಗೆ ಅಭಿವ್ಯಕ್ತಿಸಿಕೊಳ್ಳುವ ಪ್ರಯತ್ನ ಮಾಡಿದೆ ಎಂಬುದರ ಒಂದು ಸ್ಥೂಲ ಚಿತ್ರವನ್ನೂ ಕೊಡುತ್ತದೆ. ಈ ದೃಷ್ಟಿಯಿಂದ ಇವೆರಡೂ ಸಮಾಜವಾದಿ ಕೃತಿಗಳೇ! ಮತ್ತು ಇವು ಈ 'ಲೋಹಿಯಾ ನೆನಪು' ಕಾರ್ಯಕ್ರಮದ ಭಾಗವಾಗಿ ಬಿಡುಗಡೆಯಾಗಿದ್ದು ಉಚಿತವೇ ಆಗಿದೆ ಎಂದು ನಾನು ಭಾವಿಸಿದ್ದೇನೆ

ಸಮಾಜವಾದ, ನಿರ್ದಿಷ್ಟವಾಗಿ ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಏಕೆ

ನಮ್ಮ ರಾಜಕಾರಣವನ್ನು ಅದರ ವಿಚಾರಗಳ ಮತ್ತು ಹೋರಾಟಗಳ ತೀವ್ರತೆಯ ಲೆಕ್ಕದಲ್ಲಿ, ಆಳವಾಗಿ ಪ್ರಭಾವಿಸಲಿಲ್ಲ ಎಂಬ ಪ್ರಶ್ನೆಯನ್ನು ಆರಂಭದಲ್ಲಿ ಎತ್ತಿದ್ದೆ. ಇಲ್ಲ, ಅದು ನಮ್ಮ ರಾಜಕಾರಣವನ್ನು ಆಳವಾಗಿ ಪ್ರಭಾವಿಸಿದೆ ಎಂದು ವಾದಿಸುವವರೂ ಇದ್ದಾರೆ ಎಂಬ ಅರಿವಿನಲ್ಲೇ ನಾನು ಈ ಪ್ರಶ್ನೆಯನ್ನು ಎತ್ತಿದ್ದೇನೆ. ಇಂದು, ಬಿಜೆಪಿ, ಕಮ್ಯುನಿಸ್ಟ್ ಪಕ್ಷಗಳೂ ಸೇರಿದಂತೆ ರಾಷ್ಟ್ರದ ಸರಿಸುಮಾರು ಎಲ್ಲ ಪಕ್ಷಗಳಲ್ಲೂ ಸಮಾಜವಾದಿಗಳು ಹರಡಿಕೊಂಡಿದ್ದಾರೆ ಎಂಬುದು ಹೀಗೆ ವಾದಿಸುವವರು ತಮ್ಮ ವಾದಕ್ಕೆ ನೀಡುವ ಸಮರ್ಥನೆ. ಆದರೆ ಈ ಸಮರ್ಥನೆಯೇ ನನ್ನ ಈ ಮೇಲಿನ ಪ್ರಶ್ನೆಯ ಹುಟ್ಟಿಗೆ ಕಾರಣವೂ ಆಗಿದೆಯಲ್ಲವೆ? ಏಕೆಂದರೆ, ಇವರು ಹೀಗೆ ಏಕೆ ಹರಡಿ ಹೋಗುವಂತಾಯಿತು ಹಾಗೆ ಹರಡಿ ಹೋದವರು ಏಕೆ ಅವುಗಳಲ್ಲೇ ಲೀನವಾಗಿ ಹೋಗುವಂತಾಯಿತು ಎಂಬುದು ಸಮಾಜವಾದಿ ಚಳುವಳಿಯ ಇತಿಹಾಸವನ್ನು ಗಮನಿಸಿದವರಿಗೆ ಎದುರಾಗುವ ಮುಖ್ಯ ಪ್ರಶ್ನೆ. ಈ ಪ್ರಶ್ನೆಗೆ ಸಮಗ್ರವಾಗಿ ಉತ್ತರ ಕೊಡಬಹುದಾದ್ದೆಂದು, ಕಳೆದ ಹತ್ತು ವರ್ಷಗಳಲ್ಲಿ ಈ ಬಗ್ಗೆ ಯೋಚಿಸುತ್ತಿರುವ, ಅಧ್ಯಯನ ಮಾಡುತ್ತಿರುವ ಮತ್ತು ಅಳಿದುಳಿದ ಸಮಾಜವಾದಿ ಗೆಳೆಯರ ನಡಾವಳಿಯನ್ನು ಗಮನಿಸುತ್ತಿರುವ ನನಗೆ ತೋಚಿರುವ ಸಂಗತಿ ಎಂದರೆ, ಅದು ತಾನು ರೂಪುಗೊಂಡ ಮೂಸೆಯ ನೆನಪನ್ನೇ ಕ್ರಮೇಣ ಅಳಿಸಿಕೊಳ್ಳುವಂತಹ ರಾಜಕಾರಣ ಮಾಡುತ್ತಾ ಹೋದದ್ದು.

ಸಮಾಜವಾದದ ಪರಿಕಲ್ಪನೆಯ ಹುಟ್ಟು ಎಲ್ಲೇ ಆಗಿರಲಿ, ಭಾರತೀಯ ಸಮಾಜವಾದ ತನ್ನ ಚೈತನ್ಯವನ್ನು ಪಡೆದುಕೊಂಡದ್ದು ಗಾಂಧಿ ರಾಜಕಾರಣದ ಮೂಸೆಯಲ್ಲಿ. ಆರಂಭದಲ್ಲಿ ಭಾರತೀಯ ಸಮಾಜವಾದ ಮಾರ್ಕ್ಸ್‌ವಾದಿ ತಾತ್ವಿಕತೆಯನ್ನು ನಂಬಿ ಬೆಳೆಯಿತಾದರೂ, ಅದೊಂದು ಚಳುವಳಿಯಾಗಿ–ಕಾಂಗ್ರೆಸ್‌ನ ಅಡಿಯಲ್ಲಿಯೇ ಅದರ ಒಂದು ಒಳ ಪಕ್ಷವಾಗಿ–ರೂಪುಗೊಂಡುದು ಗಾಂಧೀಜಿಯ ಪ್ರಭಾವದಲ್ಲಿಯೇ. ಭಾರತದ ಸಮಾಜವಾದಿಗಳು, ಮುಖ್ಯವಾಗಿ ಜೆಪಿ, ಲೋಹಿಯಾ, ಆಚಾರ್ಯ ನರೇಂದ್ರದೇವ, ಅಚ್ಯುತ ಪಟವರ್ಧನ್, ಅಶೋಕ ಮೆಹ್ತಾ, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದವರು ಗಾಂಧೀಜಿಯೊಂದಿಗೆ 'ಜಗಳ' ಮಾಡಿಕೊಂಡೇ ತಮ್ಮ ಸಮಾಜವಾದಿ ಪಾಠಗಳನ್ನು ಕಲಿಯುತ್ತಾ ಹೋದದ್ದು ಮತ್ತು ತಮ್ಮ ಸಮಾಜವಾದಿ ಚಟುವಟಿಕೆಗಳನ್ನು ರೂಪಿಸಿಕೊಳ್ಳುತ್ತ ಹೋದದ್ದು! ಕೊನೆಗೆ ಗಾಂಧಿ ಹತ್ಯೆಯ ನಂತರ ಕಾಂಗ್ರೆಸ್, ಇವರ ಭಿನ್ನಾಭಿಪ್ರಾಯಗಳ 'ಗಲಾಟೆ' ತಾಳಲಾರದೆ ಇವರು ಹೊರ ಹೋಗಿ ಸ್ವತಂತ್ರವಾದ ತಮ್ಮದೇ ಸಮಾಜವಾದಿ ಪಕ್ಷ ಸ್ಥಾಪಿಸಿಕೊಳ್ಳುವಂತಹ ಪರಿಸ್ಥಿತಿಯನ್ನುಂಟು ಮಾಡಿದಾಗ, ಅದು ತನ್ನ ತಾತ್ವಿಕ ಸ್ಫೂರ್ತಿಯೆಂದು ಒಪ್ಪಿಕೊಂಡದ್ದು ಗಾಂಧಿವಾದವನ್ನೇ. ಮೊದಲ ಸಾರ್ವತ್ರಿಕ ಚುನಾವಣೆಗಳ ಭಾರಿ ಸೋಲೂ ಇಲ್ಲಿ ಕೆಲಸ ಮಾಡಿರಲೂಬಹುದು! ಅದೇನೇ ಇರಲಿ, ಇದನ್ನವರು ತಮ್ಮನ್ನು ಬಂಡಾಯ ಗಾಂಧಿವಾದಿಗಳೆಂದು ಕರೆದುಕೊಂಡು ಸಮರ್ಥಿಸಿಕೊಂಡರು. ತಮ್ಮ ಮೂಲ ವಂಶಸ್ಥರಾದ ಕಾಂಗ್ರೆಸ್ಸಿಗರನ್ನು ಸರ್ಕಾರಿ ಗಾಂಧಿವಾದಿಗಳೆಂದೂ, ಅವರೊಂದಿಗೆ ಅನುಸಂಧಾನದಲ್ಲಿದ್ದ ಸರ್ವೋದಯ ಕಾರ್ಯಕರ್ತರನ್ನು ಮಠೀಯ ಗಾಂಧಿವಾದಿಗಳೆಂದು ಕರೆದು ತಮ್ಮ ವಿಶಿಷ್ಟತೆಯನ್ನು ಮೆರೆದುಕೊಂಡರು!

ಅದಕ್ಕೆ ತಕ್ಕ ಹಾಗೇ, ಸಮಾಜವಾದಿಗಳು ಗಾಂಧಿ ಸಿದ್ಧಾಂತವನ್ನು ವಿಮರ್ಶೆಗೆ ಒಳಪಡಿಸಿದರು. ಅದರ ಮೂಲ ಭಾವನೆಯನ್ನುಳಿಸಿಕೊಂಡೇ ಅದರ ಕಾರ್ಯಕ್ರಮಗಳನ್ನು ಆಧುನಿಕ ಸಂದರ್ಭಕ್ಕೆ ಅಳವಡಿಸುವ ಪ್ರಯತ್ನ ಮಾಡಿದರು. ಸ್ವಯಂ ಸಂಕಷ್ಟದ ಮತ್ತು ಶುದ್ಧೀಕರಣದ ಅಹಿಂಸಾ ತತ್ವವನ್ನಾಧರಿಸಿದ ಸತ್ಯಾಗ್ರಹಕ್ಕೆ, ಸಾತ್ವಿಕ ಕ್ರೋಧದ ಹೆಸರಿನಲ್ಲಿ ಸಾಮೂಹಿಕ ಪ್ರತಿಭಟನೆಯ ರೂಪ ನೀಡಿದರು. ಚರಕಾ ಪ್ರತಿನಿಧಿಸುವ ಅತಿ ವೈಯುಕ್ತಿಕ ಸ್ತರದ ದೈಹಿಕ ದುಡಿಮೆಯ ಸಂಸ್ಕೃತಿಯನ್ನು ವಿಸ್ತರಿಸಿ, ವಿದ್ಯುತ್ ಮತ್ತು ಇತರೆ ನೈಸರ್ಗಿಕ ಇಂಧನಗಳಿಂದ ಚಾಲಿತವಾಗುವ ಸಣ್ಣ ಪ್ರಮಾಣದ ಸ್ಥಳೀಯ ಯಂತ್ರ ಸಂಸ್ಕೃತಿಯನ್ನು ಪ್ರತಿಪಾದಿಸಿದರು. ಆದರೆ ಹೀಗೆ ಪ್ರತಿಪಾದಿಸುವಾಗ, ಆ ಪ್ರತಿಪಾದನೆಯ ಸರ್ವಶ್ರೇಷ್ಠತೆಯ ಹಮ್ಮಿನಲ್ಲಿ ತಮ್ಮನ್ನು ತಾವೇ ಕಳೆದುಕೊಂಡರು. ಹಾಗೇ, ತಮ್ಮ ಪ್ರಜ್ಞೆಯ ಗಾಂಧಿ ಕೇಂದ್ರವನ್ನು ಕೂಡಾ! ಇದು ಅವರು ತಮಗೆ ತಾವೇ ವಿಧಿಸಿಕೊಂಡ ಆಧುನಿಕತೆಯ ಶಾಪ. ಇದು ಆಧುನಿಕ ಜ್ಞಾನದಲ್ಲೇ ಅಂತರ್ಗತವಾಗಿರುವ ಹಮ್ಮಿನ ಪರಿಣಾಮ. ಗಾಂಧಿ ದೇವರಲ್ಲಿನ ತಮ್ಮ ನಂಬಿಕೆಯ ಮೂಲಕ ರಕ್ಷಣೆ ಪಡೆಯಲೆತ್ನಿಸಿದ್ದು ಇಂತಹ ಪರಿಣಾಮಗಳ ವಿರುದ್ಧವೇ. ಈ ರಕ್ಷಣೆಗಾಗಿ ಅವರು ರೂಪಿಸಿಕೊಂಡ ನಿಯಮಗಳನ್ನೇ ಅವರು ಧರ್ಮ ಎಂದು ಕರೆದದ್ದು. ಆಧುನಿಕತೆಯ ವೈಚಾರಿಕ ಶಿಶುಗಳಾದ ಫ್ಯಾಸಿಸ್ಟರಿಗೆ ಮತ್ತು ಕಮ್ಯುನಿಸ್ಟರಿಗೆ ಉತ್ತರವಾಗಲು ಹೋದ ಸಮಾಜವಾದಿಗಳೂ ಈ ಶಿಶುತ್ವಕ್ಕೆ ಬಲಿಯಾದದ್ದೊಂದು ವಿಪರ್ಯಾಸ!

ಆದರೆ ಸಮಾಜವಾದಿಗಳು ಗಾಂಧೀಜಿಯ ಈ ದೇವರನ್ನೂ, ಧರ್ಮವನ್ನೂ ನಂಬದೇ ಹೋದರು. ಇವುಗಳ ಬಗ್ಗೆ ಅವರ ಔದಾಸೀನ್ಯ ಎಷ್ಟಿತ್ತೆಂದರೆ, ಈ ದೇವರು ಮತ್ತು ಧರ್ಮಗಳನ್ನು ಸಮಾಜವಾದಿ ರಾಜಕಾರಣಕ್ಕೆ ತಮ್ಮದೇ ರೀತಿಯಲ್ಲಿ ಅಳವಡಿಸಿಕೊಳ್ಳುವ ಎಚ್ಚರವನ್ನೂ ವಹಿಸದೇ ಹೋದರು. ಇದು ಗಾಂಧಿ ಕಂಡುಕೊಂಡಿದ್ದ, ರಾಜಕಾರಣಕ್ಕೆ ಅಗತ್ಯವಾದ ಅಧ್ಯಾತ್ಮಿಕತೆಯ ನಾಶವೇ ಆಗಿತ್ತು. ಈ ಬಗ್ಗೆ ಗಾಂಧಿ ಸಮಾಜವಾದಿಗಳಿಗೆ ವೈಯುಕ್ತಿಕವಾಗಿ ಮತ್ತು ಸಾಮಾಜಿಕವಾಗಿ 'ಬುದ್ಧಿ' ಹೇಳುತ್ತಲೇ ಇದ್ದರೂ, ಅವರು ತಾವು ಬೆಳೆಸಿಕೊಂಡಿದ್ದ ಕಾಂಗ್ರೆಸ್ ವೈರದ ಅಂಧತೆಯಲ್ಲೋ ಅಥವಾ ತಮ್ಮ ತಾತ್ವಿಕ ವಿಶಿಷ್ಟತೆಯ ಹುರುಪಿನಲ್ಲೋ ಅದನ್ನು ಆಳದಲ್ಲಿ ಅರ್ಥ ಮಾಡಿಕೊಳ್ಳದೇ ಹೋದರು. ಉದಾಹರಣೆಗೆ, ಗಾಂಧಿ-ಲೋಹಿಯಾರ ಮೊದಲ ವೈಚಾರಿಕ ಮುಖಾಮುಖಿಯಲ್ಲೇ ಸಮಾಜವಾದಿಗಳಿಗೆ ಒಂದು ದೊಡ್ಡ ಪಾಠವಿತ್ತು. ೧೯೩೫ರಲ್ಲಿ ಲೋಹಿಯಾ ತಾವು ಕಾಂಗ್ರೆಸ್ ಸೋಶಲಿಸ್ಟ್ ಪಕ್ಷಕ್ಕಾಗಿ ಸಂಪಾದಿಸುತ್ತಿದ್ದ ಅದೇ ಹೆಸರಿನ ಪತ್ರಿಕೆಯಲ್ಲಿ, ಗಾಂಧಿ ಆಗ ತಮ್ಮ ಚಳುವಳಿಗೆ ಆಗಿದ್ದ ಹಿನ್ನಡೆಯನ್ನು ತುಂಬಿಕೊಳ್ಳಲು ಬಲವಾಗಿ ಪ್ರತಿಪಾದಿಸುತ್ತಿದ್ದ ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಯಕ್ರಮವನ್ನು ಕಟುವಾಗಿ ಟೀಕಿಸಿ ಬರೆದರು. ಆ ಲೇಖನದ ಪ್ರತಿಯೊಂದನ್ನು ಗಾಂಧೀಜಿಗೆ ಕಳಿಸಿ ಅವರ ಪ್ರತಿಕ್ರಿಯೆಯನ್ನು ಕೋರಿದ್ದರು. ಆದರೆ ಗಾಂಧಿ

ಉತ್ತರಿಸಲಿಲ್ಲ. ಗಾಬರಿಯಾದ ಲೋಹಿಯಾ ಏಕೆಂದು ವಿಚಾರಿಸಿದಾಗ ಗಾಂಧಿ ಪ್ರತಿಕ್ರಿಯಿಸಿದ್ದು ಹೀಗೆ: 'ಎದುರು ಪಕ್ಷದ ವಾದವನ್ನು ಆಲಿಸುವ ತಾಳ್ಮೆ ಇಲ್ಲದವರೊಂದಿಗೆ ನನ್ನಂಥವರಿಗೆ ಸಂವಾದ ಅಸಾಧ್ಯ'.

ಲೋಹಿಯಾ ತಮ್ಮ ಲೇಖನದಲ್ಲಿ ಬಳಸಿದ್ದ ಒರಟು ಭಾಷೆಗಾಗಿ ವಿಷಾದ ವ್ಯಕ್ತಪಡಿಸಿ ನಂತರದ ದಿನಗಳಲ್ಲಿ ಗಾಂಧೀಜಿಯ ಆಪ್ತ ಶಿಷ್ಯರಾದರು. ಇದಷ್ಟೇ ಅಲ್ಲ, 'ಕಾಂಗ್ರೆಸ್ ಸೋಶಲಿಸ್ಟ್' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ತಮ್ಮ ಲೇಖನಗಳನ್ನು ಗಾಂಧೀಜಿ ತಮ್ಮ 'ಹರಿಜನ' ಪತ್ರಿಕೆಯಲ್ಲಿ ಪುನರ್ಮುದ್ರಿಸತೊಡಗಿದಾಗ ಲೋಹಿಯಾ ವ್ಯಕ್ತಪಡಿಸಿದ ಸಂತೋಷ ಮತ್ತು ಆಶ್ಚರ್ಯಗಳಿಗೆ ಗಾಂಧಿ ಪ್ರತಿಕ್ರಿಯಿಸಿದ್ದು ಹೀಗೆ: 'ಕಲಿಯಬೇಕಾದ್ದು ರಾವಣನಲ್ಲೂ ಸಾಕಷ್ಟಿದೆ. ಎಷ್ಟಾದರೂ ರಾವಣ ಮಹಾ ವಿದ್ಯಾವಂತ!' ಲೋಹಿಯಾ ಇದರಿಂದ ಸ್ವಲ್ಪ ಮುಜುಗರಕ್ಕೊಳಗಾದರೂ, ಗಾಂಧಿಯಿಂದ ವಿದ್ಯಾವಂತನೆಂದೆನಿಸಿಕೊಂಡ ಹೆಮ್ಮೆಯಲ್ಲಿಯೇ ಮುಳುಗಿ ಹೋದರೆಂದು ಕಾಣಿಸುತ್ತದೆ. ಏಕೆಂದರೆ ಸಮಾಜವಾದಿಗಳಲ್ಲಿ–ವಿಶೇಷವಾಗಿ ಲೋಹಿಯಾ ಶಿಷ್ಯರಲ್ಲಿ–ಈ ತಾಳ್ಮೆಗೇಡಿತನ ಸುಧಾರಿಸಲೇ ಇಲ್ಲ.

ಸ್ವಾತಂತ್ರ್ಯಪೂರ್ವದಲ್ಲೇ ನೆಹರೂ ನೇತೃತ್ವದ ಕಾಂಗ್ರೆಸ್ ಉಸ್ತುವಾರಿ ಸರ್ಕಾರ ಕೋಮು ಹಿಂಸಾಚಾರವನ್ನು ಹತ್ತಿಕ್ಕುವಲ್ಲಿ ಮತ್ತು ಸಾಮಾನ್ಯ ಆಡಳಿತದಲ್ಲಿ ಅನುಸರಿಸತೊಡಗಿದ್ದ ನೀತಿಗಳನ್ನು ಕಂಡು ಗಾಂಧೀಜಿ ವಿಚಲಿತರಾಗಿದ್ದರು. ಆ ಸಂದರ್ಭದಲ್ಲಿ ಅವರ ಬಳಿ ಹೋದ ಸಮಾಜವಾದಿಗಳ ನಿಯೋಗವೊಂದು, ತಮ್ಮ ನೇತೃತ್ವವನ್ನು ಅವರು ವಹಿಸಿಕೊಳ್ಳುವಂತೆ ಕೋರಿತ್ತು. ನಿಜ, ಕಾಂಗ್ರೆಸ್ಸಿಗರ ಬಗ್ಗೆ ನಂಬಿಕೆ ಕಳೆದುಕೊಳ್ಳಲಾರಂಭಿಸಿದ್ದ ಗಾಂಧಿ ಆಗ ಸಮಾಜವಾದಿಗಳೊಂದಿಗೆ ಹಲವು ನೆಲೆಗಳಲ್ಲಿ ಮಾತುಕತೆ ಆರಂಭಿಸಿದ್ದರು. ಆದರೆ ಈ ಸಂದರ್ಭದಲ್ಲಿ ಅವರು ಸಮಾಜವಾದಿಗಳಿಗೆ ಹೇಳಿದ್ದು: 'ನಾನು ಹುಟ್ಟಾ ಸಮಾಜವಾದಿ. ೧೯೪೨ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ನೀವು ತೋರಿದ ಧೀರತೆಯನ್ನು ಮೆಚ್ಚುವೆನಾದರೂ, ನೀವು ತಲೆಮರೆಸಿಕೊಂಡು ನಡೆಸಿದ ವಿಧ್ವಂಸಕ ಕೃತ್ಯಗಳ ಮೂಲಕ ಹಿಂಸೆಗೆ ನೀಡಿದ ಮಾನ್ಯತೆಯೇ ಇಂದು ಕೋಮು ಹಿಂಸಾಚಾರಕ್ಕೆ ಅವಕಾಶ ನೀಡಿರುವುದು ಎಂಬುದು ನನ್ನ ಖಚಿತ ನಂಬಿಕೆ. ಇದನ್ನರ್ಥ ಮಾಡಿಕೊಂಡು ನೀವು ಅಹಿಂಸೆಗೆ ಬದ್ಧರಾಗಿ, ದೇವರಲ್ಲಿ ನಂಬಿಕೆಯಿಟ್ಟು ಹಳ್ಳಿಗಳಿಗೆ ತೆರಳಿ. ಅಸ್ಪೃಶ್ಯರು ಮತ್ತು ಮಹಿಳೆಯರ ನಡುವೆ ಕೆಲಸ ಮಾಡಲಾರಂಭಿಸಿ. ಅಂದೇ ನಾನು ನಿಮ್ಮ ಪಕ್ಷದ ಅಧ್ಯಕ್ಷನಾಗುವೆ.'

ಆಗಲೂ, ತಮ್ಮನ್ನು ಸಮಾಜವಾದಿ ಎಂದು ಕರೆದುಕೊಳ್ಳುವಷ್ಟು ಬದಲಾಗಿದ್ದ ಗಾಂಧಿ ಏನು ಹೇಳುತ್ತಿದ್ದಾರೆಂದು ಸಮಾಜವಾದಿಗಳು ತಾಳ್ಮೆಯಿಂದ ಕೇಳುವ ಮತ್ತು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಲೇ ಇಲ್ಲ. ಅವರಿಗೆ ಇವೆಲ್ಲ ತಮ್ಮ 'ವಿಶಿಷ್ಟತೆ'ಯನ್ನು ಹಾಳು ಮಾಡುವ ಸನಾತನಿ ಮುದುಕನೊಬ್ಬನ ಅರಳು ಮರುಳು ಮಾತುಗಳಾಗಷ್ಟೆ ಕೇಳಿಸಿರಬೇಕು. ನಂತರವೂ ಅಷ್ಟೆ, ತಮ್ಮ ಅಂತಿಮ ದಿನಗಳ ನೌಖಾಲಿ ಯಾತ್ರೆಯ ಹೊತ್ತಿಗೆ ಗಾಂಧಿ ಲೋಹಿಯಾರೊಂದಿಗೆ ನಡೆಸಿದ ಖಾಸಗಿ ಮಾತುಕತೆಗಳೂ, ಸಮಾಜವಾದಿಗಳು

ಗಾಂಧೀಜಿಯ ಅಧ್ಯಾತ್ಮಿಕತೆಯನ್ನು ಅನುಮಾನದಿಂದಲೇ ನೋಡುತ್ತಿದ್ದರು ಎಂಬುದನ್ನು ಸೂಚಿಸುತ್ತದೆ. ಗಾಂಧಿ ಲೋಹಿಯಾರಲ್ಲಿ ದೊಡ್ಡ ಜನನಾಯಕನಾಗುವ ಲಕ್ಷಣಗಳನ್ನು ಗುರುತಿಸಿ, ಅದಕ್ಕಾಗಿ ದೇವರಲ್ಲಿ ನಂಬಿಕೆ ಇರಬೇಕು, ಸಿಗರೇಟ್-ಚಹಾ-ಕಾಫಿ ಸೇವನೆಯನ್ನು ಬಿಡಬೇಕು ಎಂದು ಈ ಮಾತುಕತೆಯಲ್ಲಿ ಅವರಿಗೆ ಸೂಚಿಸಿದ್ದರು. ಸಮಾಜವಾದಿಯೊಬ್ಬ ಜನರೊಂದಿಗೆ ಗುರುತಿಸಿಕೊಳ್ಳಲು ಇವೆಲ್ಲ ಅಗತ್ಯವೆಂದು ಗಾಂಧಿ ಭಾವಿಸಿದ್ದರು. ಲೋಹಿಯಾಗೆ ಗಾಂಧಿ ದೇವರೆಂದು ನಂಬಿದ್ದುದು ಏನನ್ನು ಮತ್ತು ಸಿಗರೇಟ್ ಇತ್ಯಾದಿಗಳ ಸೇವನೆಯ ತ್ಯಾಗದ ಸೂಚನೆಯ ಹಿಂದಿನ ಸಂದೇಶವೇನು ಎಂಬುದೂ ಗೊತ್ತಿತ್ತು. ಅದರೂ ಅಸ್ತಿತ್ವವಾದಿ ದ್ವಂದ್ವಕ್ಕೆ ಸಿಕ್ಕ ಅವರು ಈ ವಿಷಯವಾಗಿ ಗಾಂಧಿಗೆ ಉತ್ತರ ಕೊಡಲು ಮೂರು ದಿನಗಳ ಕಾಲಾವಕಾಶ ಕೇಳಿದರು. ಆದರೆ ಆ ಮೂರು ದಿನಗಳಲ್ಲಿ ಗಾಂಧೀಜಿಯ ಕೊಲೆಯಾಗಿತ್ತು...

ಗಾಂಧೀಜಿಯೇ ಇಲ್ಲವಾದ ನಂತರ, ಈ ವಿಷಯಗಳ ಬಗೆಗೆಲ್ಲ ಯಾರಿಗಾಗಿ ಯೋಚಿಸಬೇಕು ಎಂಬ ಹತಾಶೆಯಲ್ಲಿ ಲೋಹಿಯಾ 'ನನ್ನಂತೆ ನಾನು' ಎಂಬ ಅಸ್ತಿತ್ವವಾದಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿದರು! ಅದನ್ನು ತಮ್ಮ ಸಮಾಜವಾದಿ ಚಳುವಳಿಯ ಒಂದು ಭಾಗವಾಗಿ ಅಳವಡಿಸಿ, ಮನುಷ್ಯನ ಖಾಸಗಿತನದ ರಕ್ಷಣೆಯನ್ನು ಒಂದು ಆಧುನಿಕ ಮೌಲ್ಯವಾಗಿ ಪ್ರತಿಪಾದಿಸಿದರು. ಗಾಂಧೀಜಿಯೂ ಮನುಷ್ಯನ ಖಾಸಗಿತನವನ್ನು ಗೌರವಿಸುತ್ತಿದ್ದರು. ಆದರೆ ಅವರು ಈ ಸ್ವಾತಂತ್ರ್ಯವನ್ನು ತಮ್ಮ 'ಸ್ವರಾಜ್ಯ' ಕಲ್ಪನೆಯ ಭಾಗವನ್ನಾಗಿ ನಿರೂಪಿಸಿದ್ದರು: ಮನುಷ್ಯ ತನ್ನ ಸಾಮಾಜಿಕ ಧರ್ಮವನ್ನು ಅನುಸರಿಸುವ ಕರ್ತವ್ಯದ ಭಾಗವಾಗಿಯೇ ಇಂತಹ ವೈಯುಕ್ತಿಕ ಹಕ್ಕುಗಳನ್ನು ಕಂಡುಕೊಂಡು ಆನಂದಿಸಬೇಕು ಎಂದವರು ನಂಬಿದ್ದರು.

ಸಮಾಜವಾದಿಗಳಿಗೆ ಇದು ಅರ್ಥವಾದಂತೆ ತೋರಲಿಲ್ಲ. ಹಾಗಾಗಿಯೇ ಅವರು ಕೆಟ್ಟದ್ದನ್ನು ಕೆಡವಲು ಯತ್ನಿಸಿದರೇ ಹೊರತು, ಒಳ್ಳೆಯದನ್ನು ಕಟ್ಟುವುದರ ಭಾಗವಾಗಿಯೇ ಕೆಟ್ಟದ್ದನ್ನು ಕೆಡವಬೇಕೆಂಬ ಎಂಬ ಅರಿವು ಅವರಲ್ಲಿ ಮೂಡಲಿಲ್ಲ. ನಮಗಾದರೂ ಇದು ಅರ್ಥವಾಗುತ್ತಿರುವುದು ಇಷ್ಟು ವರ್ಷಗಳ ನಂತರ: ಗಾಂಧಿ ಇದನ್ನು ತಮ್ಮ 'ಹಿಂದ್ ಸ್ವರಾಜ್'ನಲ್ಲಿ ಹೇಳಿದ ನೂರು ವರ್ಷಗಳ ನಂತರ! ನಮ್ಮ ಒಟ್ಟು ಬದುಕು, ಈ ಜಾಗತೀಕರಣದ ಹಲವು ಸುಖಗಳ ಮಧ್ಯೆಯೂ ಮೂಲತಃ ದುಃಖಮಯವೇ ಆಗಿದೆ ಏಕೆ ಎಂಬ ಪ್ರಶ್ನೆಯನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ.

ಹಾಗಾಗಿ ಅಳಿದುಳಿದಿರುವ ಸಮಾಜವಾದಿಗಳು ಇಂದು ತಮ್ಮಲ್ಲಿ ಅಳಿದುಳಿದಿರುವ ಸಮಾಜವಾದಿ ನಂಬಿಕೆಯನ್ನು ಪುರ್ನಸಂಘಟಿಸಿಕೊಳ್ಳಲು ಇರುವ ಏಕೈಕ ಮಾರ್ಗವೆಂದರೆ ಗಾಂಧಿಯನ್ನು ಇಂದಿನ ಸಂದರ್ಭಕ್ಕೆ ಪುನರನ್ವೇಷಿಸಿಕೊಳ್ಳುವುದೇ ಆಗಿದೆ.

(೨೪-೩೧ ಅಕ್ಟೋಬರ್, ೨೦೦೮)

■

೨೬. ಮುಕ್ತ ಮಾರುಕಟ್ಟೆ ಎಂಬ ಮಹಾ ಮೋಸ!

ವಿಶ್ವ ಆರ್ಥಿಕತೆಯ ಬಲೂನು ಒಡೆದಿದೆ. ಕಳೆದ ಕೆಲವು ವರ್ಷಗಳಿಂದ ಒಂದೇ ಸಮನೆ ಊದುತ್ತಿದ್ದ ಈ ಬಲೂನಿನ ಅಂದ ಚೆಂದ, ಆಕಾಶ ಮಾರ್ಗದಲ್ಲಿನ ಅದರ ಹಾರಾಟದ ಬೆಡಗು-ಬಿನ್ನಾಣಗಳನ್ನು ಕಂಡು ಕೇಕೆ ಹಾಕಿ ಚಪ್ಪಾಳೆ ತಟ್ಟಿ ಆನಂದಿಸುತ್ತಿದ್ದ ಹೊಸ ವಿಶ್ವ ಆರ್ಥಿಕತೆಯ ಮಕ್ಕಳು ಒಮ್ಮೆಗೇ ಬೆಪ್ಪು ಹಿಡಿದಂತೆ ನೆಲ ಕಚ್ಚಿ ಕೂತು ಬಿಟ್ಟಿವೆ. ಇಪ್ಪತ್ತು ದಿನಗಳ ಹಿಂದೆ ನ್ಯೂಯಾರ್ಕ್‌ನ ವಾಲ್‌ಸ್ಟ್ರೀಟ್‌ನಲ್ಲಿನ ಲೆಹ್‌ಮನ್ ಬ್ರದರ್ಸ್ ಬ್ಯಾಂಕ್ ದಿವಾಳಿಯಾದಾಗ ಹಿಡಿದ ಈ ಬೆಪ್ಪಿನಿಂದ ಅವರಿನ್ನೂ ಹೊರಬರಲಾಗಿಲ್ಲ! ಏಕೆಂದರೆ ಇದರ ಸರಣಿ ಪರಿಣಾಮವಾಗಿ ಅಮೆರಿಕಾದ ಹೆಚ್ಚು ಕಡಿಮೆ ಎಲ್ಲ ವಾಣಿಜ್ಯ ಬ್ಯಾಂಕುಗಳೂ ಕುಸಿದು ಬಿದ್ದಿವೆ. ಅಷ್ಟೇ ಅಲ್ಲ, ರಷ್ಯಾವೂ ಸೇರಿದಂತೆ ಯೂರೋಪಿನ ಎಲ್ಲ ಬ್ಯಾಂಕುಗಳ ನಗದು ಕೋಣೆಗಳ ಗೋಡೆಗಳೂ ಬಿರುಕು ಬಿಡತೊಡಗಿವೆ... ಈ ದೇಶಗಳ, ವಿಶೇಷವಾಗಿ ಅಮೆರಿಕಾದ 'ಉದ್ಯಮಿ'ಗಳ ಕೈಯಲ್ಲಿ ನಿಜವಾದ ಹಣ (ಅಂದರೆ ನಗದು) ಇಲ್ಲದೆ, ಜಾಗತಿಕ ಮಾರುಕಟ್ಟೆ ಹಾಳು ಬೀಳತೊಡಗಿದೆ... ಈ ವರ್ಷ ಅಮೆರಿಕಾದ ಅಭಿವೃದ್ಧಿ ದರ ಸೊನ್ನೆಯಾಗಿರುತ್ತದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿಯೂ ಸೇರಿದಂತೆ ಜಾಗತಿಕ ಹಣಕಾಸು ಸಂಸ್ಥೆಗಳು ಮುನ್ಸೂಚನೆ ನೀಡಿ ಆತಂಕ ಹುಟ್ಟಿಸಿವೆ. ಸೋವಿಯತ್ ಒಕ್ಕೂಟದ ಪತನಾನಂತರ ಮತ್ತು ಅದರ ಪರಿಣಾಮವಾಗಿ ಪ್ರತಿಪಾದಿಸಲ್ಪಟ್ಟ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯ ಗುಳ್ಳೆ ಇಪ್ಪತ್ತೈದು ವರ್ಷಗಳ ನಂತರ ಒಡೆದು ಹೋಗಿದೆ! ಕಾರ್ಪೋರೇಟ್ ಬಂಡವಾಳಶಾಹಿಯ ಅನಿವಾರ್ಯತೆ ಮತ್ತು ಹಿರಿಮೆಯನ್ನು ಹಾಡಿ ಹೊಗಳುತ್ತಿದ್ದವರೆಲ್ಲರ ಬಾಯಿಗಳು ಸದ್ಯಕ್ಕೆ ಬಂದ್ ಆಗಿಬಿಟ್ಟಿವೆ...

ಈ ಎಲ್ಲ ಅನಾಹುತಕ್ಕೆ, ಅರ್ಥಶಾಸ್ತ್ರಜ್ಞರು ಜನ ಸಾಮಾನ್ಯರಿಗೆ ಅರ್ಥವಾಗದ toxic assets (ಅನುಮಾನಾಸ್ಪದ ಆಸ್ತಿಗಳು) sub prime market (ಅಭದ್ರ ಸಾಲಗಾರರ ವಲಯ), derivatives (ಅಗ್ಗದ ಹಣ ಸೃಷ್ಟಿ ಮಾಡುವ ಆರ್ಥಿಕ ಆಡಳಿತ ತಂತ್ರಗಳು), virtual money (ಲೆಕ್ಕ ಪುಸ್ತಕಗಳಲ್ಲಿನ-ಮಿಥ್ಯಾ-ಹಣ) ಇತ್ಯಾದಿ ಪಾರಿಭಾಷಿಕ ಪದಗಳ ಮೂಲಕ ವಿವರಣೆ ಕೊಡುವ ವ್ಯರ್ಥ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆದರೆ ಆರ್ಥಿಕತೆಯನ್ನು ಹೀಗೆ ಜನ ಸಾಮಾನ್ಯರ ಅರಿವಿಗೆ ಸಿಕ್ಕದ ಹಾಗೆ ಜಟಿಲ, ಕುಟಿಲ ಮತ್ತು ಅಮೂರ್ತಗೊಳಿಸಿ ಬೆಳೆಸಿದ್ದರಿಂದಲೇ ಈ ದುರಂತ ಸಂಭವಿಸಿದೆ ಎಂದು ಯಾರಾದರೂ ಇಂದು ಹೇಳಿದರೆ

ಅದನ್ನು ತಪ್ಪೆನ್ನಲಾಗದ ಪರಿಸ್ಥಿತಿ ಉಂಟಾಗಿದೆ. ಅರ್ಥಶಾಸ್ತ್ರದ ವಿಶ್ವಾಸಾರ್ಹತೆಯೇ ಅನುಮಾನಾಸ್ಪದವಾಗತೊಡಗಿದೆ! ಹಾಗಾಗಿಯೇ ಇಂದು, ಗಾಂಧಿ ಕಾಲದ ಎಷ್ಟೋ ವರ್ಷಗಳ ನಂತರ ಈ ಅಮೂರ್ತ ಅರ್ಥಶಾಸ್ತ್ರದ ಬದಲಿಗೆ ವಾಸ್ತವ ಮತ್ತು ಸರಳ ಅರ್ಥಶಾಸ್ತ್ರದ ಅಗತ್ಯದ ಮಾತುಗಳು ಕೇಳತೊಡಗಿವೆ.

ಅದೇನೇ ಇರಲಿ, ಇದೆಲ್ಲ ಆದದ್ದಾದರೂ ಹೇಗೆ? ಮತ್ತು ಏಕೆ? ಅಮೆರಿಕಾದಲ್ಲಿ ಮನೆ ಕೊಳ್ಳುವವರಿಗೆ ಬ್ಯಾಂಕುಗಳು ಅವರ ನಿಜವಾದ 'ಯೋಗ್ಯತೆ'ಯ ಅರಿವಿಲ್ಲದೆ ಸಾಲ ಕೊಟ್ಟದ್ದೇ ಈ ಮಹಾ ಕುಸಿತಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಆದರೆ ಇದು ನಂಬುವಂತಹ ಮಾತೇ? ಇದೊಂದು ನೆಪವಷ್ಟೆ. ಮನೆ ಸಾಲ ಪಡೆದವರು ಅವನ್ನು ತೀರಿಸಲಿಕ್ಕಾಗದಾಗ, ಅವುಗಳಿಗಾಗಿ ಸಾಲಗಾರರಿಂದ ಅಡ ಇರಿಸಿಕೊಳ್ಳಲಾಗಿದ್ದ ಆಸ್ತಿಗಳನ್ನು ಬ್ಯಾಂಕುಗಳು ಮಾರಲು ಹೋದಾಗ ಬೆಳಕಿಗೆ ಬಂದ ಸತ್ಯವೇ ಈ ಮಹಾಕುಸಿತಕ್ಕೆ ಕಾರಣವೆಂದು ಸೂಚಿಸಲಾಗುತ್ತಿದೆ. ವಾಸ್ತವವಾಗಿ ಆ ಆಸ್ತಿಗಳೆಲ್ಲವನ್ನು ಉತ್ಪ್ರೇಕ್ಷಿತ ದರಗಳಲ್ಲಿ ಮೌಲ್ಯಮಾಪನ ಮಾಡಲಾಗಿದ್ದು, ಇವೆಲ್ಲವೂ ಒಂದೇ ಏಟಿಗೆ ಮಾರುಕಟ್ಟೆಗೆ ಬಂದ ಪರಿಣಾಮವಾಗಿ ಅವುಗಳ ವಾಸ್ತವ ಮೌಲ್ಯವೂ ಕುಸಿದು ಬ್ಯಾಂಕುಗಳು ದಿವಾಳಿ ಏಳಬೇಕಾಯಿತೆಂದು ಈಗ ವಿವರಣೆ ನೀಡಲಾಗುತ್ತಿದೆ.

ಆದರೆ ನಿಜ ಸಂಗತಿಯೆಂದರೆ, ಮನೆ ಮಾರುಕಟ್ಟೆಯನ್ನು ಅವಾಸ್ತವ ಮಟ್ಟದಲ್ಲಿ ಮಂಡಿಸಿ ಅಪಾರ ಸಾಲದ ಅವಕಾಶಗಳನ್ನು ಕೃತಕವಾಗಿ ಸೃಷ್ಟಿಸಿದ ಅಡಮಾನ ಸಂಸ್ಥೆಗಳನ್ನು, ಮನೆ ಸಾಲ ನೀಡಿಕೆಯ ಈ ಬ್ಯಾಂಕುಗಳು ನಂಬಿದ್ದೇ ಈ ಮಹಾ ದುರಂತಕ್ಕೆ ಕಾರಣವಾಗಿದೆ. ಅತಿ ಲಾಭದ ದುರಾಶೆಯಿಂದ ಈ ಬ್ಯಾಂಕುಗಳು ಅವಾಸ್ತವಿಕವೆನ್ನಿಸುವ ಬಡ್ಡಿ ದರಗಳಲ್ಲಿ ಇತರ ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆದು, ಅದಕ್ಕೂ ಮೀರಿದ ಬಡ್ಡಿ ದರಗಳಲ್ಲಿ ಸಾಲ ವಿತರಿಸಿ ಮಣ್ಣು ಮುಕ್ಕಿವೆ ಹಾಗೂ ತಮಗೆ ಸಾಲ ಕೊಟ್ಟ ಬ್ಯಾಂಕುಗಳಿಗೂ ಮಣ್ಣು ಮುಕ್ಕಿಸಿವೆ. ಅಷ್ಟೇ ಅಲ್ಲ, ಈ ಬ್ಯಾಂಕುಗಳಲ್ಲಿ ಹಣ ತೊಡಗಿಸಿದ್ದ ಅಥವಾ ವ್ಯವಹಾರ ಮಾಡುತ್ತಿದ್ದ ಭಾರತವೂ ಸೇರಿದಂತೆ ಅನೇಕ ದೇಶಗಳ ಬ್ಯಾಂಕುಗಳೂ ಈಗ ತೊಂದರೆಗೆ ಸಿಕ್ಕಿವೆ. ಈ ಮಹಾ ಕುಸಿತದಿಂದ ಅಮೆರಿಕಾವೊಂದರಲ್ಲೇ ಕೊಚ್ಚಿ ಹೋಗಿರುವ ಹಣ ಮೂರು ಶತಕೋಟಿಯಷ್ಟು ದಶ ಲಕ್ಷ(ಟ್ರಿಲ್ಲಿಯನ್) ಡಾಲರ್‌ಗಳಂತೆ! ನಿಮ್ಮ ಕಲ್ಪನೆಗೆ ಸಿಗುವಂತಿದೆಯೇ?

ಇದೆಲ್ಲದರ ಜಾಗತಿಕ ಪರಿಣಾಮವೆಂದರೆ, ಹಣ ಕಳೆದುಕೊಂಡಿರುವ ಯೂರೋಪಿನ ಮತ್ತು ಅಮೆರಿಕಾದ ಉದ್ಯಮಿಗಳು ಮತ್ತು ಹಣಕಾಸು ಸಂಸ್ಥೆಗಳು ಈಗ ದಾರಿಗಾಣದೆ ತಮ್ಮ ಹಣಕಾಸಿನ ಅಗತ್ಯಗಳಿಗಾಗಿ ಇತರ ದೇಶಗಳ ಷೇರುಪೇಟೆಯಲ್ಲಿ ತಾವು ಹೂಡಿದ್ದ ಹಣವನ್ನು ವಾಪಸ್ ಪಡೆಯಲಾರಂಭಿಸಿರುವುದು. ಇದರಿಂದಾಗಿ ಕಳೆದ ಹದಿನೈದು ದಿನಗಳಲ್ಲಿ ನಮ್ಮ ಷೇರು ಪೇಟೆಯಲ್ಲಿ 'ರಕ್ತದ ಕೋಡಿ' ಹರಿದಿದೆ. ನಮ್ಮ ರಿಸರ್ವ್ ಬ್ಯಾಂಕು ಕೆಲವು ಆಡಳಿತಾತ್ಮಕ ಕ್ರಮಗಳ ಮೂಲಕ ಪೇಟೆಗೆ ಹೆಚ್ಚು ಹಣವನ್ನು ನಗದಿನ ರೂಪದಲ್ಲಿ ಬಿಡುಗಡೆ ಮಾಡಿತಾದರೂ, ಷೇರುಪೇಟೆ ಅರ್ಧದಷ್ಟು ಕುಸಿದಿದೆ. ಭಾರತದ ಸಣ್ಣ ಮತ್ತು ದೊಡ್ಡ

ಹೂಡಿಕೆದಾರರಿಬ್ಬರೂ, ಏನಾಗುತ್ತಿದೆ ಎಂದು ಯೋಚಿಸುವ ಮುನ್ನವೇ ಅವರ ಬಹಳಷ್ಟು ಹಣ–ಸದ್ವಕ್ಕೆ ನಾಲ್ಕು ಟ್ರಿಲಿಯನ್(ದಶಕೋಟಿ ದಶ ಲಕ್ಷಗಳಷ್ಟು) ರೂಪಾಯಿಗಳಷ್ಟು–ಕೊಚ್ಚಿ ಹೋಗಿದೆ. ಒಮ್ಮೆಗೇ ಹೀಗೆ ಕೋಟ್ಯಾಂತರ ರೂಪಾಯಿಗಳನ್ನು ಕಳೆದುಕೊಂಡ ದೊಡ್ಡ ಹೂಡಿಕೆದಾರರು ಆತ್ಮಹತ್ಯೆಯ ದಾರಿ ಹಿಡಿದಿದ್ದರೆ, ಮಧ್ಯಮ ಮತ್ತು ಕೆಳ ಮಧ್ಯಮ ವರ್ಗಗಳ ಸಣ್ಣ ಹೂಡಿಕೆದಾರರರು ತಮ್ಮೆಲ್ಲ 'ಉಳಿತಾಯ'ದ ಬಹಳಷ್ಟನ್ನು ಈ 'ಸಟ್ಟಾ ವ್ಯಾಪಾರ'ದಲ್ಲಿ ಕಳೆದುಕೊಂಡು ದಿಗ್ಭ್ರಾಂತರಾಗಿದ್ದಾರೆ.

ಹೌದು, ಇದು ಸಟ್ಟಾ ವ್ಯಾಪಾರವೇ. ನಮ್ಮ ಷೇರುಪೇಟೆ ಮಾತ್ರವಲ್ಲ, ಇಡೀ ವಿಶ್ವ ಆರ್ಥಿಕತೆಯೇ ಸಟ್ಟಾ ವ್ಯಾಪಾರವಾಗಿ ಹೋಗಿದೆ. ಅರ್ಥಶಾಸ್ತ್ರದ ಮೂಲ ಕಲ್ಪನೆಗಳೆನಿಸಿದ ದುಡಿಮೆ, ಉತ್ಪಾದನೆ ಮತ್ತು ಬಳಕೆಯ ನಡುವಣ ಸಮೀಕರಣವೇ ಅಸ್ತವ್ಯಸ್ತಗೊಡು, ಅವು ಮಧ್ಯವರ್ತಿಗಳ ಸಟ್ಟಾ ವ್ಯಾಪಾರ ಲೋಕದಲ್ಲಿ ಅಪ್ರಸ್ತುತವಾಗಿ ಹೋಗಿವೆ. ಅರ್ಥಶಾಸ್ತ್ರವೆಂದರೆ ಬರೀ ಲಾಭಕೋರತನದ ಶಾಸ್ತ್ರವಾಗಿ ಪರಿವರ್ತಿತವಾಗಿ, ಆ ಲಾಭಕೋರತನವನ್ನು ಹೆಚ್ಚಿಸುವುದಷ್ಟೇ ಅಲ್ಲ, ಅದಕ್ಕೊಂದು ಅರ್ಥಶಾಸ್ತ್ರೀಯ ಮಾನ್ಯತೆ ನೀಡುವ ಕೈಗಾರಿಕೆಯೇ 'ಸೇವೆ'(Services) ಎಂಬ ಹೆಸರಿನಲ್ಲಿ ವಿಜೃಂಭಿಸುತ್ತಾ ಇಂದು ವಿಶ್ವ ಆರ್ಥಿಕತೆಯ ಮಹಾ ಕುಸಿತಕ್ಕೆ ಕಾರಣವಾಗಿದೆ. ಇದು ಈಗ ಅಮೆರಿಕಾದ ಗೃಹ ಸಾಲ 'ಸೇವಾ' ವ್ಯವಸ್ಥೆಯ ವೈಫಲ್ಯದಿಂದ ಎದ್ದು ಕಾಣುವಂತಾಗಿದೆ. ಅಮೆರಿಕಾದ ಅರ್ಥಶಾಸ್ತ್ರಜ್ಞರ ಪ್ರಕಾರ ಈ ವೈಫಲ್ಯಕ್ಕೆ ಕಾರಣ, ಈ ಸೇವಾ ಸಂಸ್ಥೆಗಳು ಲಾಭವೊಂದನ್ನೇ ಮುಖ್ಯ ಗುರಿ ಮಾಡಿಕೊಂಡು ಆರ್ಥಿಕತೆಯೊಂದರ ಮೂಲ ಸತ್ಯಗಳ ಅರಿವೇ ಮರೆಯಾಗುವಷ್ಟರ ಮಟ್ಟಿಗೆ, ತಮ್ಮದೇ ಸಾಂಸ್ಥಿಕ ಸ್ವಾಯತ್ತತೆಯನ್ನೂ, ಪ್ರತ್ಯೇಕತೆಯನ್ನೂ ಸ್ಥಾಪಿಸಿಕೊಳ್ಳಲು ಅವಕಾಶ ಉಂಟಾದದ್ದು.

ಇದುವರೆಗೆ ಇದನ್ನು ಮಾರುಕಟ್ಟೆಯ 'ಮುಕ್ತತೆ'ಯೆಂದು ಗೌರವಯುತವಾಗಿ ಕರೆಯಲಾಗುತ್ತಿತ್ತು. ಈ ಮುಕ್ತ ವಾತಾವರಣವೇ ಈ ಸೇವಾ ಮಧ್ಯವರ್ತಿಗಳು, ಹಿತಾಸಕ್ತ ಗುಂಪುಗಳ (cartels) ಮತ್ತು hedge funds (ಕಳ್ಳ ಹಣ)ಗಳ ಮೂಲಕ ಮಾರುಕಟ್ಟೆಯಲ್ಲಿ ಕೃತಕ ಏರಿಳಿತಗಳನ್ನು ಸೃಷ್ಟಿಸುತ್ತಾ ಲಾಭಗಳ ಗುಡ್ಡೆಗಳನ್ನೇ ಬಾಚಿಕೊಳ್ಳುವುದಕ್ಕೆ ಅನುವು ಮಾಡಿಕೊಟ್ಟಿದ್ದುದು. ಇದು ಇಂದು ಗೃಹ ಸಾಲ ವ್ಯವಸ್ಥೆಯ ದಿವಾಳಿಯ ರೂಪದಲ್ಲಿ ತನ್ನ ಅತಿಯನ್ನು ಮುಟ್ಟಿ, ವಿಶ್ವ ಆರ್ಥಿಕತೆಯ ಮಹಾ ಕುಸಿತಕ್ಕೆ ಕಾರಣವಾಗಿದೆ. ಇದರಲ್ಲಡಗಿದ ಅನೈತಿಕ ವ್ಯಾಪಾರ ಪ್ರವೃತ್ತಿಗಳನ್ನು ಗುರುತಿಸಲು ನಿರಾಕರಿಸಿರುವ ಬಂಡವಾಳವಾದಿಗಳು, ಇದನ್ನೀಗ ಬಂಡವಾಳವಾದದ ಹೊಸ ಬಿಕ್ಕಟ್ಟು ಎಂಬ ಗೌರವಯುತ ಹೆಸರಿನಲ್ಲಿ ಕರೆಯಲಾರಂಭಿಸಿದ್ದಾರೆ! ಆದರೆ ಇಲ್ಲಿನ ಸಮಾಧಾನದ ಸಂಗತಿಯೆಂದರೆ, ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಬಂಡವಾಳದಾರರರು ಆತ್ಮಶೋಧನೆ ಮಾಡಿಕೊಳ್ಳಬೇಕಾಗಿದೆಯೆಂದೂ ಇವರು ಕರೆಕೊಡಲಾರಂಭಿಸಿರುವುದು. ಇತ್ತೀಚಿನ ಇಬ್ಬರು ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರರಾದ ಜೋಸೆಫ್ ಸ್ಟಿಗ್ಲಿಟ್ಜ್ ಮತ್ತು ಪಾಲ್ ಕ್ರುಗ್‌ಮನ್ ಅವರು ಒಂದು ಹೆಜ್ಜೆ ಮುಂದೆ ಹೋಗಿ, ಬಂಡವಾಳವಾದಿ ಅರ್ಥಶಾಸ್ತ್ರಜ್ಞರು ಎಡಪಂಥೀಯ ರಾಜಕಾರಣದಿಂದ

ಕೆಲವು ಪಾಠಗಳನ್ನಾದರೂ ಕಲಿಯುವ ಕಾಲವೀಗ ಬಂದಿದೆ ಎನ್ನ ತೊಡಗಿದ್ದಾರೆ. ಸಮಾಜವಾದವೆಂದರೆ ಸಮಾಜ ವಿರೋಧಿ ತತ್ವವೆಂಬಂತೆ ಹೌಹಾರುತ್ತಿದ್ದ ಅಮೆರಿಕಾದ ಅಭಿಪ್ರಾಯ ಮುಖಂಡರು, ಈಗ ಕ್ರುಗ್‌ಮನ್ ಅವರನ್ನು 'ಸಮಾಜವಾದಿ ಅರ್ಥಶಾಸ್ತ್ರಜ್ಞ' ಎಂದು ಅರ್ಧ ಹೆಮ್ಮೆಯ ಮತ್ತು ಅರ್ಧ ಪಶ್ಚಾತ್ತಾಪದ ದನಿಯಲ್ಲಿ ಕರೆಯತೊಡಗಿದ್ದಾರೆ!

ಆದರೆ, ಮುಕ್ತ ಮಾರುಕಟ್ಟೆಯ ಮುಕ್ತ ಬೆಂಬಲಿಗರಾದ ನಮ್ಮ ಪ್ರಧಾನ ಮಂತ್ರಿ ಮತ್ತು ಹಣಕಾಸಿನ ಮಂತ್ರಿಯ ಮುಖಗಳನ್ನು ನೋಡಿ. ಅವರು ದೇಶದ ಜನತೆಗೆ ಆತಂಕ ಪಡುವ ಅಗತ್ಯವಿಲ್ಲ, ನಮ್ಮ ದೇಶದ ಆರ್ಥಿಕತೆಯ ಮೂಲ ನೆಲಗಟ್ಟು ಸುಭದ್ರವಾಗಿದೆ ಎಂದು ಆಶ್ವಾಸನೆ ಕೊಡುವುದರಲ್ಲೇ ಸುಸ್ತಾಗಿ ಹೋಗಿದ್ದಾರೆ. ಯಾವುದು ತಮ್ಮ ಹೊಸ ಆರ್ಥಿಕ ನೀತಿಯ ಯಶಸ್ಸಿನ ಸಂಕೇತವೆಂದು ಇವರು ಹೇಳುತ್ತಿದ್ದರೋ, ಆ ಷೇರು ಪೇಟೆಯ ಸಮೃದ್ಧಿ ಜನರ ಕಣ್ಮುಂದೆಯೇ ನಾಶವಾಗತೊಡಗಿರುವುದು ಅವರ ಧೃತಿಗೆಡಿಸಿದಂತಿದೆ. ಹೊಸ ಜಾಗತಿಕ ಆರ್ಥಿಕತೆಯ ವಿಜೃಂಭಣೆಯ ಸಂಕೇತವಾಗಿ ಜನರ ಕಣ್ಣಿಗೆ ಕಾಣುತ್ತಿದ್ದ ಐ.ಸಿ.ಐ.ಸಿ.ಐ. ಎಂಬ ಜಾಗತಿಕ ಮಟ್ಟದ ಬ್ಯಾಂಕ್ ದಿವಾಳಿ ಎದ್ದಿದೆ ಎಂಬ ಸುದ್ದಿ ಹರಡಿ ಠೇವಣಿದಾರರು ಒಮ್ಮೆಗೇ ಬ್ಯಾಂಕ್ ಮುಂದೆ ಠೇವಣಿ ವಾಪಸ್ ಪಡೆಯಲು ಸಾಲು ನಿಲ್ಲುವಷ್ಟು ಜನ ಆತಂಕಿತರಾಗಿದ್ದಾರೆ. ಹೀಗಾಗಿ ಹಣಕಾಸಿನ ಮಂತ್ರಿ ಚಿದಂಬರಂ ಅವರು ರಾಷ್ಟ್ರದ ಎಲ್ಲ ಬ್ಯಾಂಕುಗಳ ಠೇವಣಿಗಳೂ ಸುಭದ್ರವಾಗಿವೆ ಎಂಬ ಭರವಸೆಯನ್ನು ಜನರಿಗೆ ಪದೇ ಪದೇ ನೀಡುವ ಪರಿಸ್ಥಿತಿ ಉಂಟಾಗಿದೆ.

ಇನ್ನು ಈ ಹೊಸ ಆರ್ಥಿಕತೆಯ ಹರಿಕಾರರಾದ ಮನಮೋಹನಸಿಂಗರು ಈಗ ಇದ್ದಕ್ಕಿದ್ದಂತೆ ರಾಗ ಬದಲಿಸಿ, ಅಭಿವೃದ್ಧಿಗೊಂಡ ದೇಶಗಳು ಮತ್ತು ಐ.ಎಂ.ಎಫ್.ನಂತಹ ಜಾಗತಿಕ ಹಣಕಾಸು ಸಂಸ್ಥೆಗಳು ಅನುಸರಿಸಿದ ತಪ್ಪು ನೀತಿಗಳೇ ಈ ಮಹಾಕುಸಿತಕ್ಕೆ ಕಾರಣವೆಂದು ಅವುಗಳ ವಿರುದ್ಧ ಹರಿಹಾಯತೊಡಗಿದ್ದಾರೆ!. ಈವರೆಗೆ ಅವರು ಆರ್ಥಿಕ ಸುಧಾರಣೆಗಳ (ಅಂದರೆ ಸರ್ಕಾರದ ನಿಯಂತ್ರಣ ಮತ್ತು ಮೇಲ್ವಿಚಾರಣಾ ಕ್ರಮಗಳ ಸಡಿಲಿಕೆ) ಮತ್ತು ಅಂತಾರಾಷ್ಟ್ರೀಯ ಬಂಡವಾಳ ಮಾರುಕಟ್ಟೆಯಲ್ಲಿ ರೂಪಾಯಿಯ ಸಂಪೂರ್ಣ ಮೌಲ್ಯಪರಿವರ್ತನೆಯ ಕಡೆಗಿನ ಕ್ರಮಗಳ ವೇಗ, ಎಡಪಂಥೀಯರ ಅಡೆ ತಡೆ ರಾಜಕಾರಣದಿಂದಾಗಿ ಕುಗ್ಗುತ್ತಿದೆ ಎಂದು ಆತಂಕ ವ್ಯಕ್ತಡಿಸಿ ಮಧ್ಯಮ ವರ್ಗಗಳ ಸಹಾನುಭೂತಿ ಗಿಟ್ಟಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ ಅವರೀಗ, ಪಶ್ಚಿಮದ ದೇಶಗಳ ಸರ್ಕಾರಗಳು ತಮ್ಮ ಆರ್ಥಿಕತೆಗಳನ್ನು ಸಕಾಲಿಕ ಹಸ್ತಕ್ಷೇಪಗಳ ಮೂಲಕ ಸಮರ್ಪಕವಾಗಿ ಮೇಲ್ವಿಚಾರಣೆಗೆ ಒಳಪಡಿಸದಿದ್ದುದೇ ಇಂದಿನ ದುರಂತಕ್ಕೆ ಕಾರಣವೆಂದು ವಿಶ್ಲೇಷಿಸತೊಡಗಿದ್ದಾರೆ! ಅಷ್ಟೇ ಅಲ್ಲ, ಅಭಿವೃದ್ಧಿಶೀಲ ರಾಷ್ಟ್ರಗಳು ವಿಶ್ವ ಆರ್ಥಿಕತೆಯೊಡನೆ ಅತಿಯಾಗಿ ಜೋಡಣೆಗೊಳ್ಳಲು ಯತ್ನಿಸಬಾರದೆಂದು ಎಚ್ಚರಿಸಿದ್ದಾರೆ... ಎಂತಹ ಜ್ಞಾನೋದಯ! ಹೀಗಾಗಿಯೇ ಏನೋ, ಇವರ ಗೆಳೆಯ, ಮಾರ್ಗದರ್ಶಿ ಹಾಗೂ ತತ್ವಜ್ಞಾನಿ ಮೊಂಟೇಕ್ ಸಿಂಗ್ ಅಹ್ಲೂವಾಲಿಯಾರ ಮುಖವೇ ಎಲ್ಲೂ ಕಾಣದಾಗಿದೆ!

ಹೀಗೆ ತಲೆಕೆಳಗಾಗುತ್ತಿರುವ ವಿಶ್ವ ಆರ್ಥಿಕತೆಯ ಪರಿಣಾಮಗಳು ಭಾರತದ ಆರ್ಥಿಕತೆ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ ಎಂದು ಭಾರತದ ಅರ್ಥಶಾಸ್ತ್ರಜ್ಞರೂ ಸೇರಿದಂತೆ ಜಾಗತಿಕ ಅರ್ಥಶಾಸ್ತ್ರಜ್ಞರೇನೋ ಹೇಳುತ್ತಿದ್ದಾರೆ. ಆದರೆ ಹೆಚ್ಚಿನ ಪರಿಣಾಮವೆಂದರೇನು ಎಂಬುದನ್ನು ಅವರು ನಿರ್ದಿಷ್ಟವಾಗಿ ವಿವರಿಸುತ್ತಿಲ್ಲ. ಮನಮೋಹನಸಿಂಗ್ ಮತ್ತು ಅವರ ಪರಿವಾರದವರ ಕೈಲಾದ ಎಲ್ಲ ಪ್ರಯತ್ನಗಳ ಹೊರತಾಗಿಯೂ ಅದೃಷ್ಟವಶಾತ್, ಗಾಂಧಿಯುಗದ ಪಳೆಯುಳಿಕೆಯಂತಿರುವ ನಮ್ಮ ವೈವಿಧ್ಯಮಯ ಮತ್ತು ಬಹುಮುಖ ರಾಜಕಾರಣದಿಂದಾಗಿ ಭಾರತದ ಆರ್ಥಿಕತೆ ವಿಶ್ವ ಆರ್ಥಿಕತೆಯೊಂದಿಗೆ ತನ್ನನ್ನು ಸಂಪೂರ್ಣ ಬೆಸೆದುಕೊಂಡಿಲ್ಲ. ಚೀನಾದ ಬಹಳಷ್ಟು ಬ್ಯಾಂಕುಗಳಂತೆ ನಮ್ಮ ಬ್ಯಾಂಕುಗಳು ಜಾಗತಿಕ ವಾಣಿಜ್ಯ ಬ್ಯಾಂಕುಗಳೊಂದಿಗೆ ಅಷ್ಟಾಗಿ ವ್ಯಾವಹಾರಿಕ ಸಂಬಂಧಗಳನ್ನು ಹೊಂದಿಲ್ಲ. ಹಾಗೇ, ಚೀನಾದಂತೆ ನಮ್ಮದು ಪ್ರಧಾನವಾಗಿ ರಫ್ತು ಆಧಾರಿತ ಆರ್ಥಿಕತೆಯಲ್ಲ. ಹಾಗಾಗಿ, ಸದ್ಯದ ವಿಶ್ವ ಆರ್ಥಿಕ ಕುಸಿತದಿಂದಾಗಿ ಚೀನಾದ ಮೇಲೆ ಆದಷ್ಟು ದುಷ್ಪರಿಣಾಮ ನಮ್ಮ ಮೇಲೆ ಆಗದು ಎಂದು ಹೇಳಲಾಗುತ್ತಿದೆ. ಅಭಿವೃದ್ಧಿಶೀಲ ದೇಶವೊಂದು ಆರ್ಥಿಕತೆಯನ್ನು ಹೇಗೆ ಬೆಳೆಸಬೇಕು ಎಂಬುದನ್ನು ಚೀನಾವನ್ನು ನೋಡಿ ಕಲಿಯಿರಿ ಎಂದು ಹೇಳುತ್ತಿದ್ದವರು ಸಹಜವಾಗಿಯೇ ಸದ್ಯಕ್ಕೆ ಬಾಯಿ ಮುಚ್ಚಿಕೊಂಡಿದ್ದಾರೆ.

ಆದರೆ ನಮ್ಮ ಷೇರುಪೇಟೆ ಕುಸಿತದ ಪರಿಣಾಮವಾಗಿ ಡಾಲರ್ ಎದುರು ರೂಪಾಯಿ ಹಿಂದೆಂದೂ ಕುಸಿಯದಷ್ಟು ಪ್ರಮಾಣದಲ್ಲಿ ಕುಸಿದಿರುವುದರಿಂದಾಗಿ, ಈವರೆಗೆ ಎಲ್ಲ ಅಂತಾರಾಷ್ಟ್ರೀಯ ಆರ್ಥಿಕ ಅನಾಹುತಗಳ ಎದುರು ನಮಗೆ ರಕ್ಷಣಾ ಗೋಡೆಯಂತಿದ್ದ ನಮ್ಮ ವಿದೇಶಿ ವಿನಿಮಯ ದಾಖಲೆ ಸಂಗ್ರಹ ಈಗ ಇಳಿಗತಿಯಲ್ಲಿ ಸಾಗತೊಡಗಿದ್ದು ಆತಂಕ ಹುಟ್ಟಿಸಿದೆ. ಇದರ ಪರೋಕ್ಷ ಪರಿಣಾಮವಾಗಿ ನಮ್ಮ ಔದ್ಯಮಿಕ ವ್ಯಾಪಾರ ವಹಿವಾಟುಗಳೂ ಇಳಿಗತಿಗೆ ಈಡಾಗಿವೆ. ನಮ್ಮ ಆರ್ಥಿಕತೆಗೆ ಹೊಸ ಚೈತನ್ಯ ನೀಡತೊಡಗಿದ್ದ ರಿಯಲ್ ಎಸ್ಟೇಟ್, ಗಣಿ ಉದ್ಯಮ, ಮಾಹಿತಿ ತಂತ್ರಜ್ಞಾನ, ಹೊರಗುತ್ತಿಗೆ, ಪ್ರವಾಸೋದ್ಯಮ ಇತ್ಯಾದಿ ವಲಯಗಳ ಲಾಭಾಂಶ ತೀವ್ರ ಇಳಿಗತಿಗೆ ಸಿಕ್ಕಿವೆ. ಈಗಾಗಲೇ ಅನೇಕ ಸುಪ್ರಸಿದ್ಧ ಕಂಪನಿಗಳು ತಮ್ಮ ನೌಕರಬಲವನ್ನು ಕುಗ್ಗಿಸುವ ಪ್ರಯತ್ನದಲ್ಲಿವೆ. ಅಮೆರಿಕಾ ಮತ್ತು ಯೂರೋಪಿನಿಂದ ಕೆಲಸ ಕಳೆದುಕೊಂಡ ಭಾರತೀಯರು ವಾಪಸಾಗತೊಡಗಿದ್ದಾರೆ. ಇದರ ದೀರ್ಘ ಪರಿಣಾಮಗಳನ್ನು ಈಗಲೇ ಊಹಿಸಲಾಗವುದಿಲ್ಲವಾದರೂ. ಒಂದಂತೂ ನಿಜ. ಈ ಹತ್ತು ವರ್ಷಗಳಲ್ಲಿ ಭಾರತ ಕಂಡ 'ಧಾಂಧೂಂ' ಆರ್ಥಿಕತೆ ತನ್ನ ಅಸಹಜ ಭಾರದಿಂದಲೇ ಕುಸಿಯತೊಡಗಿದೆ. ಏರಿದ್ದ ಆರ್ಥಿಕತೆಯ ನಿಶೆ ಇಳಿಯತೊಡಗಿದೆ. ಶ್ರೀಮಂತರಿಗೆ ಮತ್ತು ಮಧ್ಯಮ ವರ್ಗದವರಿಗೆ ಅತಿಲಾಭ ತಂದುಕೊಟ್ಟ ಸರಕಿನ ಈ ಆರ್ಥಿಕತೆ, ಬಡವರನ್ನು ಮತ್ತಷ್ಟು ಅನಾಥರನ್ನಾಗಿ ಮಾಡಿ ತನ್ನ ಹೆಜ್ಜೆಗಳನ್ನು ಹಿಂದಿಡುತ್ತಿರುವಂತೆ ತೋರುತ್ತಿದೆ.

ಈ ಬಗ್ಗೆ ಹೆಚ್ಚು ದುಃಖ ಪಡುವ ಅಗತ್ಯವಿಲ್ಲ. ಭೂಮಿ ಬಿಟ್ಟು ಮೇಲೇರಿದ್ದೆಲ್ಲ ಮತ್ತೆ ಭೂಮಿಯ ವಾಸ್ತವಕ್ಕೆ ಇಳಿದು ಬರಲೇಬೇಕು! ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ಎಲ್ಲರ

ಅಗತ್ಯಗಳನ್ನು ನಿರ್ಲಕ್ಷಿಸಿ ಕೆಲವರ ಚಪಲಗಳನ್ನು ಪೂರೈಸುವ ಅಡ್ಡದಾರಿ ಹಿಡಿದ ವಿಶ್ವ ಆರ್ಥಿಕತೆ ತನ್ನ ವಾಸ್ತವ ಪ್ರಜ್ಞೆಯನ್ನು ಮರಳಿ ಪಡೆದುಕೊಳ್ಳುವಂತಹ ಆಘಾತವನ್ನು ಈಗ ಅನುಭವಿಸಿರುವುದು ಒಳ್ಳೆಯದಕ್ಕೇ ಎಂದು ನಾವು ಭಾವಿಸಬೇಕು. ಇಂದು ಅಮೆರಿಕಾ ನುಚ್ಚು ನೂರಾಗಿರುವ ತನ್ನ ಆರ್ಥಿಕತೆಯನ್ನು ಪುನಾರಚಿಸಿಕೊಳ್ಳಲು ೭೦೦ ದಶಲಕ್ಷ ಡಾಲರ್ ಸರ್ಕಾರಿ ಹಣವನ್ನು ಸಾರ್ವಜನಿಕ ಹೂಡಿಕೆಗೆ ಬಿಡುಗಡೆ ಮಾಡುವ ಪ್ರಯತ್ನದಲ್ಲಿದೆ. ೨೫೦ ದಶಲಕ್ಷ ಡಾಲರಗಳನ್ನು ತನ್ನ ಕುಸಿದಿರುವ ಬ್ಯಾಂಕುಗಳ ಪುನಶ್ಚೇತನಕ್ಕಾಗಿ ನೀಡಲು ನಿರ್ಧರಿಸಿದೆ. ಬ್ರಿಟನ್ ಎಲ್ಲರಿಗಿಂತ ಮುಂಚೆಯೇ ತನ್ನ ಬ್ಯಾಂಕುಗಳ ಸುರಕ್ಷತೆಗಾಗಿ ನಗದು ಪೂರೈಕೆಯ ದೊಡ್ಡ ಯೋಜನೆಯನ್ನೇ ಪ್ರಕಟಿಸಿದೆ. ರಷ್ಯಾ ತನ್ನ ದೇಶದ ಬ್ಯಾಂಕುಗಳ ಠೇವಣಿದಾರರಿಗೆ ವಿಮಾ ಸೌಲಭ್ಯ ಒದಗಿಸಲು ಮುಂದೆ ಬಂದಿದೆ. ಐರೋಪ್ಯ ರಾಷ್ಟ್ರಗಳಂತೂ ತಮ್ಮ ದೇಶದ ಬ್ಯಾಂಕುಗಳಿಗೆ ಠೇವಣಿ ಸೆಳೆಯಲು ವೈವಿಧ್ಯಮಯ ಉಡುಗೊರೆಗಳ ಆಕರ್ಷಣೆ ಒಡ್ಡಿವೆ! ಅಂತೂ ಈಗ ಜಗತ್ತಿನಾದ್ಯಂತ ಸರ್ಕಾರಗಳು ಮುಕ್ತ ಮಾರುಕಟ್ಟೆಯ ಅನಾಹುತಗಳಿಗೆ ಎಚ್ಚೆತ್ತುಕೊಂಡು, ದೇಶದ ಆರ್ಥಿಕತೆಯಲ್ಲಿ ಸರ್ಕಾರದ ಹಸ್ತಕ್ಷೇಪ ಮತ್ತು ನಿಯಂತ್ರಣಗಳ ಅಗತ್ಯಗಳನ್ನು ಮನಗಂಡಿವೆ. ಸಮಾಜವಾದದ ಕಾಲ ಮುಗಿಯಿತೆಂದು ಅವಸರದಲ್ಲಿ ಅಂದವರೀಗ ನಾಲಿಗೆ ಕಚ್ಚಿಕೊಳ್ಳತೊಡಗಿದ್ದಾರೆ!

ಮುಕ್ತ ಮಾರುಕಟ್ಟೆ ಎಂದರೆ ಲಾಭಕೋರ ಬಂಡವಾಳವಾದದ ಅನಿಯಂತ್ರಿತ ಮತ್ತು ಅನೈತಿಕ ಬೆಳವಣಿಗೆಯಾಗಿದೆ. ಅದು ಬರೀ ಹಣದ ವ್ಯವಹಾರವಾಗಿ, ಮಾನವೀಯ ಸಂದರ್ಭದ ಆಯಾಮವನ್ನೇ ಕಳೆದುಕೊಂಡು ಮನುಷ್ಯನನ್ನು ಎಲ್ಲ ರೀತಿಯ ದಿವಾಳಿಯೆಡೆಗೆ ಕೊಂಡೊಯ್ಯುವುದು ಎಂಬುದೀಗ ಸಾಬೀತಾಗಿದೆ. ಹಾಗೇ ಇಂತಹ ಮಾರುಕಟ್ಟೆಯ ತತ್ವ ಚಾಲ್ತಿಗೆ ಬಂದುದೂ, ಸರ್ಕಾರೀ ಹಸ್ತಕ್ಷೇಪದ ವಿಪರೀತ ಪರಿಣಾಮಗಳಿಗೆ ದಾರಿ ಮಾಡಿಕೊಟ್ಟ ಹುಸಿ-ಸಮಾಜವಾದವೊಂದರ ವೈಫಲ್ಯದಿಂದಲೇ ಎಂಬುದನ್ನೂ ನಾವು ಈಗ ಅರಿಯಬೇಕಿದೆ. ಹಾಗಾಗಿ ಇಂದು ಅಗತ್ಯವಾಗಿರುವುದು, ಇವೆರಡೂ ಅನುಭವಗಳಿಂದ ಪಾಠ ಕಲಿತು ರೂಪಿತವಾಗಬೇಕಾದ ಒಂದು ಮಧ್ಯಮ ಮಾರ್ಗ. ಇದು ಬಂಡವಾಳವನ್ನು ಒಂದು ಮಾನವ ಸಂದರ್ಭದಲ್ಲಿ ಉಳಿಸಿ, ಬೆಳೆಸಬಲ್ಲ ವಿಕೇಂದ್ರೀಕೃತ ಅರ್ಥ ವ್ಯವಸ್ಥೆಯಾಗಿದ್ದೀತು. ಇದರ ರಾಜಕೀಯ ರೂಪಗಳನ್ನು ನಾವಿನ್ನೂ ಆವಿಷ್ಕರಿಸಿಕೊಳ್ಳಬೇಕಿದೆ. ಅದಕ್ಕೆ, ಭಾರತದ ಮಟ್ಟಿಗೆ ಗಾಂಧಿ ಮತ್ತು ಲೋಹಿಯಾ ವಿಚಾರಗಳು ಸ್ಫೂರ್ತಿಯಾದಾವು ಎಂಬುದು ನನ್ನ ನಂಬಿಕೆ.

(೭ ನವೆಂಬರ್, ೨೦೦೮)

■

೨೭. ಭಾಷಾಭಿಮಾನ, ರಾಷ್ಟ್ರೀಯತೆ, ಸಾಮಾಜಿಕ ಬದ್ಧತೆ ಇತ್ಯಾದಿ...

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಪ್ರಕಟವಾಗುತ್ತಿದ್ದಂತೆ ಕನ್ನಡ ರಾಜ್ಯೋತ್ಸವದ ಸಂಭ್ರಮ ರಾಜ್ಯಾದ್ಯಂತ ಮುಗಿಲು ಮುಟ್ಟಿದೆಯೆಂದು ಕನ್ನಡ ಟಿ.ವಿ. ವಾಹಿನಿಗಳು ವರದಿ ಮಾಡಿವೆ. ಈ ಕನ್ನಡ ಟಿ.ವಿ. ವಾಹಿನಿಗಳು ಭಾಷೆಯನ್ನು ಕಳೆದುಕೊಂಡು ಬಹಳ ದಿನಗಳೇ ಆಗಿರುವುದರಿಂದ, ಅವು ಮುಗಿಲು ಮುಟ್ಟಿದೆ ಎಂದರೂ ಒಂದೇ, ನೆಲ ಕಚ್ಚಿದೆ ಎಂದರೂ ಒಂದೇ ಅರ್ಥ ಎಂಬಂತಾಗಿದೆ! ಇದು, ಕನ್ನಡಿಗರು ಕನ್ನಡದ ಬಗ್ಗೆ ಬೆಳೆಸಿಕೊಂಡು ಬಂದಿರುವ ಹುಸಿ ಅಭಿಮಾನದ ಸಂಕೇತವೂ ಆಗಿದೆ ಎಂದರೆ ತಪ್ಪಾಗಲಾರದು. ಕನ್ನಡ ಸೇನಾನಿಗಳು ಪಟಾಕಿ ಹಚ್ಚಿ ಅದರ ಸುತ್ತಾ ಕನ್ನಡ ಬಾವುಟವಾಡಿಸುತ್ತಾ ಕುಣಿದಿದ್ದೇನು, ನಮ್ಮ ಮುಖ್ಯಮಂತ್ರಿಗಳು ಟಿ.ವಿ. ಕ್ಯಾಮರಾಗಳ ಮುಂದೆಯೇ ಬಾಯಿ ಇಷ್ಟಗಲ ಮಾಡಿಕೊಂಡು ಈ ಬಾರಿ ರಾಜ್ಯೋತ್ಸವ ಸಂಭ್ರಮವನ್ನು ರಾಜ್ಯಾದ್ಯಂತ ವಿಶೇಷವಾಗಿ (ಶಾಸ್ತ್ರೀಯ ಸ್ಥಾನಮಾನಕ್ಕೆ ತಕ್ಕಂತೆ?) ಆಚರಿಸುವಂತೆ ಜಿಲ್ಲಾಧಿಕಾರಿಗಳಿಗೆ ದೂರವಾಣಿ ಮೂಲಕ ಸೂಚಿಸಿದ್ದೇನು! ಆಹಾ, ಇದೇ ಅಲ್ಲವೇ ಕನ್ನಡಾಭಿಮಾನವೆಂದರೆ? ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕುವಂತೆ ಮಾಡಲು ಹೋರಾಡಿದವರಿಗೆ ಸನ್ಮಾನ ಮಾಡುವುದಾಗಿಯೂ ಯಡಿಯೂರಪ್ಪನವರು ಈ ಸಂದರ್ಭದಲ್ಲಿ ಪ್ರಕಟಿಸಿದ್ದಾರೆ.

ಆದರೆ ಯಾವ ಹೋರಾಟ? ಹಲವು ಬಾರಿ ಒಂದು ದಿನದ ಅಮರಣಾಂತ ಉಪವಾಸ ಗೈದಿದ್ದೆ? ಹಣೆ ತುಂಬ ತಿಲಕ ಹಚ್ಚಿಕೊಂಡು ಊರೂರುಗಳಲ್ಲಿ ಬೀದಿ ತುಂಬಾ ಕೂಗುತ್ತಾ ಮೆರವಣಿಗೆ ತೆಗೆದದ್ದೆ? ಇವುಗಳಿಂದ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದೆಯೆಂದು ಇವರು ನಂಬಿದ್ದರೆ ಅದಕ್ಕಿಂತ ದೊಡ್ಡ ಭ್ರಮೆ ಇನ್ನೊಂದಿರಲಾರದು! ಏಕೆಂದರೆ ತೆಲುಗಿನವರು ಯಾವ ಉಪವಾಸವನ್ನೂ ಮಾಡದೆ, ಯಾವ ಬೀದಿ ಮೆರವಣಿಗೆಯನ್ನೂ ತೆಗೆಯದೆ ತಮ್ಮ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಗಿಟ್ಟಿಸಿಕೊಂಡಿದ್ದಾರೆ! ಇದು ಹೇಗೆ ಸಾಧ್ಯವಾಯಿತು? ತೆಲುಗಿನವರು ಸ್ವಾಭಿಮಾನಿಗಳಂತೆ ವರ್ತಿಸಿ ಮಾಡಬೇಕಾದ ರೀತಿಯಲ್ಲಿ ಭಾಷಾ ರಾಜಕಾರಣ ಮಾಡಿ ತಮಗೆ ಬೇಕಾದುದನ್ನು ಘನತೆಯಿಂದ ಪಡೆದಿದ್ದಾರೆ. ಆದರೆ ಕನ್ನಡಿಗರು? ಕೂಗಾಡಿ, ಬೈದು, ರಚ್ಚೆ ಮಾಡಿ, ಬೆದರಿಕೆ ಹಾಕಿ, ಅವುಗಳಿಂದಲೇ ಪಡೆಯಬೇಕಾದುದನ್ನೆಲ್ಲ ಪಡೆದುಕೊಂಡಂತೆ, ಈಗ ಸನ್ಮಾನಕ್ಕೆ ಬೇರೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ!

ಇನ್ನು ಯಾರಾರನ್ನೆಲ್ಲ ಸನ್ಮಾನಿಸಬಹುದೆಂದು ನಮ್ಮ ರಾಷ್ಟ್ರ ಕವಿಗಳು ಪರೋಕ್ಷವಾಗಿ ಸೂಚಿಸಿಯೂ ಬಿಟ್ಟಿದ್ದಾರೆ. ಇವರು ಶಿಫಾರ್ಸು ಮಾಡಿರುವ ಹೋರಾಟಗಾರರನ್ನೊಮ್ಮೆ ನೋಡಿದರೆ, ಕನ್ನಡದ ಭವಿಷ್ಯ ನಿಜವಾಗಿಯೂ ಆತಂಕದಲ್ಲಿದೆ ಎಂದೇ ಹೇಳಬೇಕು!

ಈ ಮುಗಿಲು ಮುಟ್ಟಿದ ಸಂಭ್ರಮದ ರಾಜ್ಯೋತ್ಸವದ ಎರಡು ದಿನಗಳ ಹಿಂದಷ್ಟೆ ನಮ್ಮ ಉಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರು ಕರ್ನಾಟಕದಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡುವಂತೆ ಆದೇಶಿಸುತ್ತಾ, ಈ ಆದೇಶದೊಂದಿಗೆ ಮಕ್ಕಳಿಗೆ ಇಂಗ್ಲಿಷ್ ಕಲಿಸುವುದು ತಂದೆ ತಾಯಿಗಳ ಹಕ್ಕಷ್ಟೇ ಅಲ್ಲ, ಕರ್ತವ್ಯವೂ ಎಂಬಂತೆ ಪ್ರವಚನ ನೀಡಿದ್ದಾರೆ ಎಂಬುದನ್ನೂ ನಾವು ಗಮನಿಸಬೇಕು. ನಮ್ಮ ನ್ಯಾಯಾಧೀಶರುಗಳು ನ್ಯಾಯ ನೀಡುವ ಅಧಿಕಾರವನ್ನಷ್ಟೇ ಅಲ್ಲ, ಹೊಸ ಕಾಲದ ಪ್ರವಾದಿತ್ವವನ್ನೂ ತಮ್ಮ ಮೇಲೆ ಆರೋಪಿಸಿಕೊಂಡಂತಿದೆ! ಆದರೆ ಅವರು ಸಂವಿಧಾನವನ್ನು ಸೂಕ್ತವಾಗಿ ಅರ್ಥೈಸುವುದರ ಹೊರತಾಗಿ ಮತ್ತಾವ ಕೆಲಸಕ್ಕೂ ಅಧಿಕಾರಸ್ಥರೂ ಅಲ್ಲ, ಅರ್ಹರೂ ಅಲ್ಲ ಎಂಬುದು ಅನೇಕ ವೇಳೆ ಅನೇಕರಿಂದ ವಿಷದೀಕರಿಸಲ್ಪಟ್ಟಿದೆ. ಆದರೂ, ಅವರು ಇತ್ತೀಚಿನ ದಿನಗಳಲ್ಲಿ ತಮ್ಮ ಈ ಅಧಿಕಾರ-ಅರ್ಹತೆಗಳನ್ನೂ ಮೀರಿ ತಮ್ಮ ತೀರ್ಪಿನ ಜೊತೆಯಲ್ಲಿ ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ ನಿರ್ಣಯಾತ್ಮಕ ರೂಪದ ಹೇಳಿಕೆಗಳನ್ನು ನೀಡುವುದು, ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಸಾಮಾನ್ಯವಾಗಿ ಹೋಗಿರುವುದನ್ನು ನಮ್ಮ ಅನೇಕ ಕಾನೂನು ಪಂಡಿತರು ವಿಷಾದದಿಂದ ಗಮನಿಸಿದ್ದಾರೆ. ಅದಕ್ಕೆ ಕಾರಣ ಹೊಸ ಆರ್ಥಿಕತೆಯ ಗಾಳಿಗೆ ಅವರೂ ತಮ್ಮ ಮೈಮನಗಳನ್ನು ತೆರೆದುಕೊಂಡಿರುವುದೇ ಆಗಿದೆ. ಅದರ ದುಷ್ಪರಿಣಾಮಗಳನ್ನು ನಾವು ನ್ಯಾಯಾಂಗದ ಇತ್ತೀಚಿನ ಹಲವಾರು ಭ್ರಷ್ಟಾಚಾರದ ಪ್ರಕರಣಗಳ ವರದಿಗಳಲ್ಲಿ ನೋಡಬಹುದಾಗಿದೆ. ಸದರಿ ನ್ಯಾಯಾಧೀಶರ ತೀರ್ಪನ್ನು ಕುರಿತ ಪತ್ರಿಕಾ ವರದಿಗಳನ್ನೇ ಆಧರಿಸಿ ಹೇಳುವುದಾದರೆ, ಈ ನ್ಯಾಯಾಧೀಶರಿಗೆ ಶಿಕ್ಷಣದ ಮಾಧ್ಯಮದ ಪ್ರಶ್ನೆಯೇ ಬೇರೆ, ಇಂಗ್ಲಿಷ್ ಕಲಿಕೆಯ ಅಗತ್ಯದ ಪ್ರಶ್ನೆಯೇ ಬೇರೆ ಎಂಬುದು ಅರ್ಥವಾದಂತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಆದರೆ ಇದಕ್ಕಿಂತ ಹೆಚ್ಚಿನ ವಿಷಾದದ ಸಂಗತಿಯೆಂದರೆ, ಶಾಸ್ತ್ರೀಯ ಭಾಷಾ ಸ್ಥಾನಮಾನದ ಬಗ್ಗೆ ಸಂಭ್ರಮ ಪಡುತ್ತಿರುವ ವೀರ ಕನ್ನಡಿಗರಾರೂ ಸಾರ್ವಜನಿಕವಾಗಿ ಕನ್ನಡ ಎದುರಿಸುತ್ತಿರುವ ಈ ಮುಜುಗರದ ಬಗ್ಗೆ ತಲೆ ಕೆಡಿಸಿಕೊಳ್ಳದೇ ಇರುವುದು. ಕನ್ನಡದ ತಂದೆ ತಾಯಿಗಳೇ ತಮ್ಮ ಮಕ್ಕಳಿಗೆ ಕನ್ನಡದಲ್ಲಿ ಶಾಲಾ ಶಿಕ್ಷಣವೂ ಬೇಡವೆಂದು ಘಂಟಾಘೋಷವಾಗಿ ಹೇಳಿಕೊಂಡು, ಅದಕ್ಕೆ ನಮ್ಮ ನ್ಯಾಯಾಲಯಗಳ ಮನ್ನಣೆಯನ್ನೂ ಪಡೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ, ಕನ್ನಡ ರಾಜ್ಯೋತ್ಸವ ಮುಗಿಲು ಮುಟ್ಟಿದೆ ಎಂದರೆ, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದೆಯೆಂದು ಕನ್ನಡಿಗರು ಬೀದಿ ಬೀದಿಗಳಲ್ಲಿ ಹುಚ್ಚೆದ್ದು ಕುಣಿಯಲಾರಂಭಿಸಿದ್ದಾರೆ ಎಂದರೆ; ಕನ್ನಡಾಭಿಮಾನವೆಂಬುದು ಈಗ ಎಷ್ಟು ವಿಕ್ಷಿಪ್ತವಾಗಿ ಹೋಗಿರಬೇಕು ಎಂದು ಯೋಚಿಸಿ! ಒಂದು ಭಾಷೆ ಉಳಿಯುವುದು, ಬೆಳೆಯುವುದು ಅದರ ಸಾರ್ವಜನಿಕ

ಬಳಕೆವಾರಿಕೆಯ ವೈವಿಧ್ಯದಲ್ಲಿ. ಹಾಗಾಗಿ, ಕನ್ನಡದ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನೂ ಕನ್ನಡದ ಮೂಲಕ ಕಲಿಯುವುದು ಅವರ ಭವಿಷ್ಯದ ದೃಷ್ಟಿಯಿಂದ ಆತಂಕಕಾರಿ ಎಂಬ ಸಾಮಾಜಿಕ ಸಂದರ್ಭವನ್ನುಂಟುಮಾಡಿರುವ ನಮ್ಮ ಸಾಮಾಜಿಕ ನಾಯಕರಿಗೆ ಮತ್ತು ಸರ್ಕಾರಕ್ಕೆ ರಾಜ್ಯೋತ್ಸವ ಆಚರಿಸುವ ಯಾವ ನೈತಿಕ ಹಕ್ಕೂ ಇಲ್ಲ ಎಂದು ಹೇಳಬೇಕಾಗಿದೆ. ಕನ್ನಡದ ಮಕ್ಕಳು ಕನ್ನಡದಲ್ಲಿ ಶಿಕ್ಷಣ ಪಡೆಯುವುದು ಅವರ ಧರ್ಮ ಮತ್ತು ಹಾಗಾಗಿ ಅವರ ಹಕ್ಕು ಎಂಬ ಪ್ರಜಾಸತ್ತಾತ್ಮಕ ಸಾರ್ವಜನಿಕ ಸಮ್ಮತಿಯನ್ನು ಸಂಘಟಿಸಲಾಗದ ಯಾವುದೇ ಸರ್ಕಾರ, ಕನ್ನಡಕ್ಕೆ ತನ್ನ ಬದ್ಧತೆಯನ್ನು ಮತ್ತು ಕನ್ನಡ ಭಾಷಾಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿಗಳ ಅನುದಾನ ಘೋಷಿಸಿವುದು ದೊಡ್ಡ ಆತ್ಮವಂಚನೆಯಲ್ಲದೆ ಮತ್ತೇನಲ್ಲ. ಹಾಗೇ ಅಂತಹ ಸರ್ಕಾರದಿಂದ ಸನ್ಮಾನಕ್ಕೆ ಸಿದ್ಧರಾಗುತ್ತಿರುವವರ ಕೃತಾರ್ಥತೆ ಕೂಡಾ ಇದಕ್ಕೆ ಹೊರತಲ್ಲ.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿದ್ದರಿಂದಾಗಿ ಕೋಟ್ಯಾಂತರ ರೂಪಾಯಿ ಮೌಲ್ಯದ ಸಂಶೋಧನಾ ಯೋಜನೆಗಳು ಮಂಜೂರಾಗುವುವಂತೆ. ತಮಿಳು ಶಾಸ್ತ್ರೀಯ ಭಾಷಾ ಯೋಜನೆಗಳಲ್ಲಿ ಕೆಲಸ ಮಾಡುತ್ತಿರುವ ಅನುಭವಿಗಳೊಬ್ಬರ ಮಾತನ್ನೇ ನಂಬುವುದಾದರೆ, ಅವರಿಗೆ ಈ ಯೋಜನೆಗಳನ್ನು ನಿರ್ವಹಿಸಬಲ್ಲ ವಿದ್ವಾಂಸರೇ ಸಿಗುತ್ತಿಲ್ಲವಂತೆ. ಇನ್ನು ಇವೊತ್ತು ಕನ್ನಡದಲ್ಲಿ ನಡೆಯುತ್ತಿರುವ ಸಂಶೋಧನೆಗಳ ಗುಣಮಟ್ಟವನ್ನು ನೋಡಿದರೆ, ಈ ಹೊಸ ಯೋಜನೆಗಳಿಂದ ಈ ಮಟ್ಟ ಇನ್ನಷ್ಟು ಕುಸಿದು, ಕನ್ನಡ ಪಾಂಡಿತ್ಯ ಕ್ಷೇತ್ರವೆಂಬುದು ಸಂಶೋಧನೆಯ ಹೆಸರಿನಲ್ಲಿ ಹಣ ಲಪಾಟಿಯಿಸುವ ದುಷ್ಟರ ಮತ್ತು ಭ್ರಷ್ಟರ ದೊಡ್ಡ ಜಾಲವಾಗಿ ಪರಿವರ್ತಿತವಾದರೆ ಆಶ್ಚರ್ಯವೇನಿಲ್ಲ. ಕನ್ನಡವನ್ನು ಬಳಸುವ ಮತ್ತು ಬೆಳಸುವ ಕೆಲಸಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ, ಅದರ ಪ್ರಾಚೀನ ವೈಭವವನ್ನಷ್ಟೇ ಆಚರಿಸಲೆಣಿಸುವವರ ಈ ಪ್ರಯತ್ನ ಆತ್ಮಘಾತುಕವೇ ಆಗಿದೆ ಎಂದರೆ ತಪ್ಪಾಗಲಾರದು.

ಒಂದು ಕಡೆ ಈ ವಿಪರ್ಯಾಸವಿದ್ದರೆ, ಇನ್ನೊಂದು ಕಡೆ ಒಂದು ಭಾಷೆ ಮತ್ತು ಆ ಭಾಷೆಯನ್ನಾಡುವ ಜನರ ಹಿತದ ಬಗ್ಗೆ ಮಾತನಾಡುವುದೇ ಸಂಕುಚಿತತೆ ಎನ್ನಿಸಿಕೊಳ್ಳಲಾರಂಭಿಸಿರುವುದು ಇನ್ನೊಂದು ವಿಪರ್ಯಾಸ. ಮಹರಾಷ್ಟ್ರ ನವನಿರ್ಮಾಣ ಸೇನೆಯ ರಾಜ್ ಠಾಕ್ರೆಯ ಭಾಷಾಭಿಮಾನ ಪ್ರಕಟಣೆಯ ಮಾರ್ಗಗಳು ಯಾರೂ ಒಪ್ಪಲಾಗದಂತಹವು, ನಿಜ. ಹಾಗಾಗಿಯೇ ಈ ಹಿಂಸಾ ಮಾರ್ಗಗಳಿಗೆ ಬಲಿಯಾದ ಭಾಷಾ ರಾಜ್ಯಗಳ ಜನರೂ ಪ್ರತಿಹಿಂಸೆಗೆ ಇಳಿದಿದ್ದಾರೆ. ಭಾರತ ಒಂದು ರಾಷ್ಟ್ರವಾಗಿ ಭಾರತೀಯರೆನ್ನಿಸಿಕೊಂಡವರು ಯಾವುದೇ ಪ್ರದೇಶದಲ್ಲಿ ಉದ್ಯೋಗ ಮಾಡುವ, ನೆಲಸುವ ಹಕ್ಕನ್ನು ಪಡೆದಿದ್ದಾರೆ ಎಂಬುದೂ ನಿಜ. ಆದರೆ ಈ ಹಕ್ಕು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎಷ್ಟು ದುರುಪಯೋಗವಾಗಿದೆ ಎಂದರೆ, ನಮ್ಮ ರಾಷ್ಟ್ರ ನಿರ್ಮಾಪಕರು ಭಾಷಾ ರಾಷ್ಟ್ರೀಯತೆಗಳ ವಾಸ್ತವವನ್ನು ಮನಗಂಡು ರಚಿಸಿದ ಭಾಷಾಧಾರಿತ ರಾಜ್ಯಗಳ ಒಕ್ಕೂಟದ ಪರಿಕಲ್ಪನೆಯೇ ಇದರಿಂದ ಘಾಸಿಗೊಳ್ಳಲಾರಂಭಿಸಿದೆ. ಇದು ಸಮುದಾಯ ವಿಶಿಷ್ಟತೆಯನ್ನು ನಾಶ ಮಾಡುತ್ತಾ, ಭಾರತವೆಂಬುದನ್ನು

ರಾಜಕೀಯ ಬಲ ಸಂಘಟಿಸಿಕೊಳ್ಳಬಲ್ಲ ಸಮುದಾಯಗಳ 'ಸಾಮ್ರಾಜ್ಯಶಾಹಿ' ಪ್ರವೃತ್ತಿಗಳ ಆಡೊಂಬಲವನ್ನಾಗಿ ಪರಿವರ್ತಿಸುತ್ತಿದೆ. ಭಾರತ ಒಂದು ರಾಷ್ಟ್ರವಾಗಿ ಉಳಿಯುವುದು ಮತ್ತು ಉಳಿಯಬೇಕಾದದ್ದು, ತನ್ನ ವೈವಿಧ್ಯತೆ ಬಲಗೊಳ್ಳುವ ಏಕತೆಯಲ್ಲಿ;ಏಕತೆಯ ಒತ್ತಡದಲ್ಲಿ ನಲುಗುವ ವೈವಿಧ್ಯತೆಯಲ್ಲಲ್ಲ. ಭಾರತದ ಒಕ್ಕೂಟವನ್ನು ಬಲಪಡಿಸುವುದೆಂದರೆ, ಆ ಒಕ್ಕೂಟ ಯಾವುದರಿಂದ ನಿರ್ಮಿತವಾಗಿದೆಯೋ ಆ ರಾಜ್ಯಗಳ ಆಧಾರಗಳನ್ನು ಬಲಪಡಿಸುವುದು. ಅಂದರೆ ಆಯಾ ಭಾಷಾ ಸಮುದಾಯಗಳ ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಅಸ್ತಿವಾರಗಳನ್ನು ಬಲಗೊಳಿಸುವುದು. ಆದರೆ ಈಗ ಆಗುತ್ತಿರುವುದಾದರೂ ಏನು?

ಉದಾಹರಣೆಗೆ, ಈ ಮೊದಲು ಕರ್ನಾಟಕದಲ್ಲಿ ಮತ್ತು ಈಗ ಮಹಾರಾಷ್ಟ್ರದಲ್ಲಿ ಗಲಾಟೆಗೆ ಕಾರಣವಾಗಿರುವ ರೈಲ್ವೇ ನೇಮಕಾತಿಗಳ ವಿಷಯವನ್ನೇ ತೆಗೆದುಕೊಳ್ಳಿ. ಈ ನೇಮಕಾತಿಯ ಪ್ರಕ್ರಿಯೆಯನ್ನು ರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ, ಕೇಂದ್ರಗಳಲ್ಲಿ ನಡೆಸುವ ಉದ್ದೇಶವಾದರೂ ಏನು? ಎಲ್ಲ ಪ್ರದೇಶಗಳ ಜನ ರೈಲ್ವೇ ಎಂಬ ರಾಷ್ಟ್ರೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವಂತಾಗಬೇಕೆಂದು ತಾನೆ? ಆದರೆ ಬೆಂಗಳೂರಿನಲ್ಲಿಯೋ, ಮುಂಬೈನಲ್ಲಿಯೋ ನಡೆಯುವ ನೇಮಕಾತಿ ಪ್ರಕ್ರಿಯೆಯಲ್ಲಿ ದೂರದ ಉತ್ತರ ಪ್ರದೇಶ, ಬಿಹಾರ, ಬಂಗಾಳ, ಅಸ್ಸಾಂಗಳ ಜನರೂ ಪಾಲ್ಗೊಳ್ಳಬಹುದೆಂದರೆ, ಇಂತಹ ನೇಮಕಾತಿ ಪ್ರಕ್ರಿಯೆಯ ಹಿಂದಿನ ಈ ರಾಷ್ಟ್ರೀಯ ಉದ್ದೇಶವೇ ವಿಫಲವಾದಂತಲ್ಲವೆ? ಕಳೆದೆರಡು ದಶಕಗಳಿಂದ ರೈಲ್ವೇ ಮಂತ್ರಿಗಳಾಗಿರುವವರ ರಾಜ್ಯವಾದ ಬಿಹಾರದಿಂದಲೇ ಅಭ್ಯರ್ಥಿಗಳು ಪ್ರವಾಹದೋಪಾದಿಯಲ್ಲಿ ರಾಷ್ಟ್ರದ ಬೇರೆ ಬೇರೆ ಕೇಂದ್ರಗಳಲ್ಲಿ ನಡೆಯುವ ನೇಮಕಾತಿಗಳಿಗೆ ಬರಲಾರಂಭಿಸಿದ್ದಾರೆ ಎಂದರೆ, ಇದರಲ್ಲಿ ಅರಾಷ್ಟ್ರೀಯವಾದದ್ದೇನೋ ನಡೆಯುತ್ತಿದೆ ಎಂದೇ ಅಲ್ಲವೆ? ಒಂದು ಕೇಂದ್ರದಲ್ಲಿ ನೇಮಕಾತಿ ಎಂದರೆ, ಆ ಕೇಂದ್ರದ ನೆರೆಹೊರೆಯ ಜನ–ಅವರು ಯಾವುದೇ ಭಾಷೆಯ ಸಮುದಾಯದವರಾಗಿರಲಿ–ಅದರಲ್ಲಿ ಭಾಗವಹಿಸಿ ಉದ್ಯೋಗ ಪಡೆಯುವ ಅವಕಾಶ ಹೊಂದಿರಬೇಕು ಎಂಬುದು ಅದರ ಆಶಯವಾಗಿರುತ್ತದೆ. ಆದರೆ ಇಂದು ಈ ಆಶಯವನ್ನು ರಾಷ್ಟ್ರೀಯತೆಯ ಹೆಸರಿನಲ್ಲಿ ಭಂಗಗೊಳಿಸಲಾಗುತ್ತಿದೆ. ಇದು ತಲೆಕೆಳಗಾದ ರಾಷ್ಟ್ರೀಯತೆಯಲ್ಲದೆ ಮತ್ತೇನಲ್ಲ.

ಇದನ್ನು ಸಹಜವಾಗಿಯೇ ಇಂದು ಹಲವು ಕಡೆ ಪ್ರಶ್ನಿಸಲಾಗುತ್ತಿದೆ. ಆದರೆ ಇದನ್ನು ಒರಟೊರಟಾಗಿ ಮಾಡುತ್ತಿರುವ ರಾಜ್ ಠಾಕ್ರೆಯನ್ನು ರಾಷ್ಟ್ರ ವಿರೋಧಿ ಎಂದು ಕರೆಯಲಾಗುತ್ತಿದೆ. ಅಷ್ಟೇ ಅಲ್ಲ, ಆತನ ಪ್ರತಿಭಟನೆಯನ್ನು 'ಗೂಂಡಾರಾಜ್' ಎಂದೂ ಇಂಗ್ಲಿಷ್ ಟಿ.ವಿ. ವಾಹಿನಿಗಳು ಕರೆಯುತ್ತಿವೆ. ಆದರೆ ಆಳವಾಗಿ ನೋಡಿದಾಗ, ಈ ಗೂಂಡಾರಾಜ್‌ನ ಮೂಲಕರ್ತೃ ಆತನಲ್ಲ. ಬದಲಿಗೆ, ಭಾರತದ ಭಾಷಾ ಸಮುದಾಯಗಳ ಸಾಂಸ್ಕೃತಿಕ ಅಸ್ಮಿತೆಯನ್ನಷ್ಟೇ ಅಲ್ಲ, ಅವುಗಳ ಸಾಮಾಜಿಕ ಭದ್ರತೆಯನ್ನೂ; ತಮ್ಮ ತಲೆಕೆಳಗಾದ ರಾಷ್ಟ್ರೀಯತೆಯನ್ನು ಅವುಗಳ ಮೇಲೆ ಹೇರಲಾರಂಭಿಸಿ ಆತಂಕಕ್ಕೀಡು ಮಾಡತೊಡಗಿರುವವರೇ ಆಗಿದ್ದಾರೆ ಎಂಬುದು ಗೊತ್ತಾಗುತ್ತದೆ. ಯಾವುದೇ ತೆರೆನ

ಸ್ಥಳೀಯತೆಯ ಅಡೆತಡೆಯಿಲ್ಲದೆ ರಾಷ್ಟದುದ್ದಗಲಕ್ಕೂ ತಮ್ಮ ವ್ಯಾಪಾರೋದ್ಯಮಗಳ ಜಾಲ ವಿಸ್ತರಿಸಿಕೊಳ್ಳಬಯಸುವ ಎಲ್ಲ ಆಸೆಬುರುಕ ವಣಿಜರೂ, ಅವರ ಗುಲಾಮರಾಗಿರುವ ನಮ್ಮ ರಾಜಕಾರಣಿಗಳೂ ಕಟ್ಟತೊಡಗಿರುವ ಹೊಸ ರೀತಿಯ-ತಲೆಕೆಳಗಾದ-ರಾಷ್ಟ್ರೀಯತೆ ಇದು.

ಈ ಪ್ರವೃತ್ತಿಯ ವಿರುದ್ಧ ಪ್ರತಿಭಟಿಸುವುದೇ ಇಂದು ನಿಜವಾದ ರಾಷ್ಟ್ರೀಯತೆ ಎನ್ನಿಸಿಕೊಳ್ಳಬೇಕು. ಆದರೆ ಇಂತಹ ಪ್ರತಿಭಟನೆಯನ್ನು ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ಮತ್ತು ಮಹಾರಾಷ್ಟ್ರ ನವ ನಿರ್ಮಾಣ ಸೇನೆಗಳಂತಹ ಪ್ರಾದೇಶಿಕ ಸಂಘಟನೆಗಳು ಗಲಭೆ ಮತ್ತು ಹಿಂಸೆಯ ಮೂಲಕ ಕೈಗೊಂಡು ಅದರ ವಿಶ್ವಾಸಾರ್ಹತೆಯನ್ನೇ ಹಾಳುಗೆಡಹಿವೆ. ಅವು ಸಾಮೂಹಿಕ ಸತ್ಯಾಗ್ರಹ ಮಾರ್ಗವನ್ನು ತಮ್ಮ ಪ್ರತಿಭಟನೆಯ ಮಾರ್ಗವಾಗಿ ಆಯ್ದುಕೊಳ್ಳುವುದಾದರೆ, ಅವಕ್ಕೆ ಇಡೀ ರಾಜ್ಯದ–ಅವರು ಯಾವುದೇ ಭಾಷೆ ಮಾತನಾಡುವವರಾಗಿರಲಿ–ಜನತೆಯ ಸಹಾನುಭೂತಿ, ಬೆಂಬಲ ದೊರಕುತ್ತದೆ ಮತ್ತು ದೀರ್ಘಕಾಲಿಕ ರಾಜಕೀಯ ಪರಿಣಾಮಗಳಿಗೆ ಕಾರಣವಾಗುತ್ತದೆ. ಆದರೆ ಇದು ಸಾಧ್ಯವಾಗುವುದು ಅಲ್ಪಕಾಲಿಕ ರಾಜಕೀಯ ಲಾಭವನ್ನು ಮೀರಿದ ಉದ್ದೇಶಗಳಿಂದ ಈ ಚಳುವಳಿಗಳ ನಾಯಕತ್ವ ರೂಪುಗೊಂಡಾಗ ಮಾತ್ರ. ಕರವೇ ಮತ್ತು ಮನಸೇಗಳಿಗೆ ಈ ದೀರ್ಘಕಾಲಿಕ ಮತ್ತು ಘನ ಉದ್ದೇಶಗಳಿದ್ದಂತಿಲ್ಲ ಎಂಬುದೇ ಅವುಗಳ ದೊಡ್ಡ ಮತ್ತು ಮುಖ್ಯ ಕೊರತೆಯಾಗಿದೆ.

ಅದೇನೇ ಇರಲಿ, ದಿನೇ ದಿನೇ ಹೆಚ್ಚುತ್ತಿರುವ ಇಂತಹ ಸಾಮಾಜಿಕ ಗಲಭೆ-ಗೊಂದಲಗಳಿಂದಾಗಿ ನಮ್ಮ ಸೂಕ್ಷ್ಮ ಮನಸ್ಸಿನ ಬುದ್ಧಿಜೀವಿಗಳ ಖಿನ್ನತೆ ಹೆಚ್ಚುತ್ತಾ ಹೋಗುತ್ತದೆಂದು ಕಾಣುತ್ತದೆ. ಈ ಖಿನ್ನತೆಯ ಪರಿಣಾಮವೆಂದರೆ, ನಮ್ಮ ದೃಷ್ಟಿದೂರ ಸಂಕುಚಿತವಾಗುತ್ತಾ ಹೋಗುವುದು! 'ವಿಕ್ರಾಂತ ಕರ್ನಾಟಕ'ದ ಅಕ್ಟೋಬರ್ ೧೭ರ ಸಂಚಿಕೆಯ 'ಹನಿ ಕಷಾಯ' ಪುಟದಲ್ಲಿ ನಮ್ಮ ಕ್ರಾಂತಿಕಾರಿ ಉಪ ಸಂಪಾದಕರಾದ ಮಲ್ಲನಗೌಡರು ಆಯ್ದು ಪ್ರಕಟಿಸಿರುವ ಜಿ.ರಾಜಶೇಖರರ ಮಾತುಗಳು ಇದಕ್ಕೊಂದು ಉದಾಹರಣೆಯಂತಿದೆ. ಜಿ.ವಿ.ಆನಂದಮೂರ್ತಿಯವರ ಕವನ ಸಂಕಲನವೊಂದಕ್ಕೆ ಅವರು ಬರೆದಿರುವ ಮುನ್ನುಡಿಯಿಂದ ಆಯ್ದ ಈ ಮಾತುಗಳನ್ನು ಮಲ್ಲನಗೌಡರು ಸದ್ಯದ ಕನ್ನಡ ಸಾಹಿತಿಗಳ, ನಿರ್ದಿಷ್ಟವಾಗಿ ಕವಿಗಳ ಸಾಮಾಜಿಕ ಬದ್ಧತೆಯ ದಿವಾಳಿತನವನ್ನು ಎತ್ತಿ ತೋರಿಸಿ ತಮ್ಮ ಸಂತೋಷವನ್ನೋ, ದುಃಖವನ್ನೋ ಪ್ರದರ್ಶಿಸಲು ಪ್ರಕಟಿಸಿದಂತಿದೆ! ನಮ್ಮ ಮಲ್ಲನಗೌಡರಿಗೇನೋ ಸಾಹಿತ್ಯ-ಗೀಹಿತ್ಯವೆಲ್ಲ ಕ್ರಾಂತಿಗೆ ಬೇಕಾದ ಬಂದೂಕು-ಮದ್ದು ಗುಂಡುಗಳೆಂಬ ಕಲ್ಪನೆ ಇರಬಹುದು. ಆದರೆ ನಮ್ಮ ನಡುವಿನ ಬಹುಸೂಕ್ಷ್ಮ ಚಿಂತಕರೆನಿಸಿದ ರಾಜಶೇಖರರಿಗೆ?

ಕನ್ನಡದ ಇಂದಿನ ಬಹಳಷ್ಟು ಕವಿಗಳು ಮರುಕಕ್ಕೆ ಮಾತ್ರ ಅರ್ಹರಿರಬಹುದು. ಆದರೆ ಅದಕ್ಕೆ ಬೆಂಬಲವಾಗಿ ಅವರನ್ನು ಕುರಿತು ರಾಜಶೇಖರರು ಆಡಿರುವ ಮಾತುಗಳೂ ಅಷ್ಟೇ ಮರುಕಕ್ಕೆ ಅರ್ಹವಾಗಿವೆ. ಏಕೆಂದರೆ, ಸಾಹಿತ್ಯ ಯಾರದೇ ನಿರೀಕ್ಷೆಗಳಿಗೆ, ಆದೇಶಗಳಿಗೆ, ನಿರ್ದೇಶನಗಳಿಗೆ ತಕ್ಕಂತೆ ನಿರ್ಮಾಣವಾಗಲಾರದು. ಅದು ಅದರ ತತ್ಕಾಲೀನ ಸಾಮಾಜಿಕ

ಸಂದರ್ಭವನ್ನು ಮೀರಿದ ಶಕ್ತಿಗಳಿಂದ ನಿರ್ಮಾಣವಾಗುವ ಸಮಷ್ಠಿಯ ನೆಲೆಯಲ್ಲಿ ಉಕ್ಕುವಂತಹುದು. ಇವೊತ್ತಿನ ಕಾವ್ಯದಲ್ಲಿ ಸಮಕಾಲೀನ ಸಂದರ್ಭದ ಒತ್ತಡಗಳು ಪ್ರತಿಬಿಂಬಿತವಾಗಿಲ್ಲವೆಂದರೆ, ಆ ಒತ್ತಡಗಳು ಕಾವ್ಯಾಭಿವ್ಯಕ್ತಿಗೆ ಸೂಕ್ತವಾದ ಸಮಷ್ಠಿಯನ್ನು ಇನ್ನೂ ನಿರ್ಮಾಣ ಮಾಡಿಲ್ಲವೆಂದೇ ಅರ್ಥ. ಹೀಗೆ ಸಮಷ್ಠಿ ನಿರ್ಮಾಣದ ಭಾಗವಾಗಿ ವ್ಯಕ್ತವಾಗದ ಅದೆಷ್ಟೋ ಕಾವ್ಯಾಭಿವ್ಯಕ್ತಿಯನ್ನು ಕನ್ನಡ ಕಂಡಿದೆ, ನಿಜ. ಆದರೆ ಅದೆಂದೂ ಊರ್ಜಿತವಾಗದ ಕೆಟ್ಟ ಕಾವ್ಯ ಮಾತ್ರವಾಗಿದೆ. ಹಾಗೇ, ಈ ಹಿಂದೆ ಸಂದರ್ಭೋಚಿತವಾಗಿ ಊರ್ಜಿತವಾದಂತೆ ತೋರಿದ ಕಾವ್ಯವೂ ಬದಲಾದ ಇಂದಿನ ಸಾಮಾಜಿಕ ಸಂದರ್ಭದಲ್ಲಿ ಸಂಶಯಾಸ್ಪದವಾಗಿ ತೋರತೊಡಗಿರುವುದನ್ನೂ ರಾಜಶೇಖರರು ಗಮನಿಸಬೇಕು. ಇಂತಹ ವಿದ್ಯಮಾನಗಳಿಂದ ಕನ್ನಡ ಕಾವ್ಯ ಪರಂಪರೆಗೆ ಆಗುವ ಆಘಾತ ಕಡಿಮೆ ಪ್ರಮಾಣದ್ದಲ್ಲ. (ಕರಾವಳಿಯ)ಕೋಮು ಹಿಂಸಾಚಾರಗಳಿಂದ ತಲ್ಲಣಗೊಂಡ ಕಾವ್ಯವೇಕೆ ಇಂದು ಬರುತ್ತಿಲ್ಲ ಎಂದು ವ್ಯಗ್ರರಾಗಿ ಕೇಳುತ್ತಿರುವಂತೆ ತೋರುವ ಜಿ.ರಾಜಶೇಖರರ ಮಾತುಗಳಲ್ಲಿ ನನಗೆ ಇಂತಹ ಆಘಾತವನ್ನು ಆಹ್ವಾನಿಸುತ್ತಿರುವ ಸೂಚನೆ ಕಾಣುತ್ತದೆ.

ಇನ್ನು ಪ್ರಕೃತಿಯೊಳಗಿನ ವಿಸ್ಮಯವನ್ನು ಅಭಿವ್ಯಕ್ತಿಸುವ ಕವಿಗಳ ಮೇಲೆ ರಾಜಶೇಖರರು ಹರಿಹಾಯ್ದಿರುವ ರೀತಿಯಂತೂ ಅತ್ಯಂತ ಅಸಾಹಿತ್ಯಕವೂ, ಅಸಾಮಾಜಿಕವೂ ಆಗಿದೆ. ಏಕೆಂದರೆ, ಪ್ರಕೃತಿಯನ್ನು ಕುರಿತ ಮನುಷ್ಯನ ವಿಸ್ಮಯಕ್ಕೆ ಒಂದು ಕೊನೆಯಿದೆ, ಕೊನೆಯಿರಬೇಕು ಎಂದು ಇವರು ಭಾವಿಸಿದಂತಿದೆ. ಅನಂತದ ಭಾವನೆಯ ಭಾಗವಾಗಿಯೇ ಸದ್ಯದ ಭಾವನೆಯ ತೀವ್ರತೆಯೂ ಸೃಷ್ಟಿಯಾಗುವುದು ಎಂಬುದನ್ನು ಅವರು ಮರೆತಂತಿದೆ. ಈ ಸಂಬಂಧವಾಗಿ, ಈ ಹಿಂದೆ ತುರ್ತು ಪರಿಸ್ಥಿತಿಯ ರಾಜಕೀಯ ನೆಲೆಗಳಿಗೆ ಬಂಧಿತರಾಗಿ ಡಿ.ಆರ್. ನಾಗರಾಜ್ ಚಂಪಾ ಅವರ ಕವನ ಸಂಕಲನವೊಂದಕ್ಕೆ ಬರೆದ ಬೆನ್ನುಡಿಯ ಕೆಲವು ಮಾತುಗಳಿಗೆ ಯಶವಂತ ಚಿತ್ತಾಲರು ಬರೆದ ಪ್ರತಿಕ್ರಿಯೆ ನೆನಪಾಗುತ್ತಿದೆ. ನೆರೂಡಾನಿಂದ ಮೇಲ್ಸ್ಫೂರ್ತಿಯಲ್ಲಿ ಸ್ಫೂರ್ತಿಗೊಂಡಂತೆ ಡಿ.ಆರ್., ಬೀದಿಯಲ್ಲಿ ರಕ್ತ ಚೆಲ್ಲುತ್ತಿರುವಾಗ ಗುಲಾಬಿಯ ಸೌಂದರ್ಯದಲ್ಲಿ ಮಗ್ನರಾಗಿದ್ದಾರೆ ಎಂದು ಕೆಲವು ಕವಿಗಳನ್ನು ಟೀಕಿಸಿದ್ದರು. ಅದಕ್ಕೆ ಚಿತ್ತಾಲರ ಪ್ರತಿಕ್ರಿಯೆ: ಗುಲಾಬಿಯ ಸೌಂದರ್ಯದಲ್ಲಿ ಮಗ್ನವಾಗಬಲ್ಲ ಮನಸ್ಸು ಮಾತ್ರ ಬೀದಿಯಲ್ಲಿ ರಕ್ತ ಕಂಡು ತಲ್ಲಣಿಸಬಲ್ಲುದು. ಕಾವ್ಯ ಮನಸ್ಸು ಅಖಂಡವಾದದ್ದು. ಜಿ.ರಾಜಶೇಖರ್ ತಮ್ಮದೇ ಆದ ಸಾಮಾಜಿಕ ಅವಸರದಲ್ಲಿ ಅದನ್ನು ಒಡೆಯ ಹೊರಟಂತಿದೆ.

(೧೪ ನವೆಂಬರ್, ೨೦೦೮)

■

೨೮. ಅಮೆರಿಕಾದ ಕ್ರಾಂತಿ! ಭಾರತದ ಭ್ರಾಂತಿ!!

ಅಮೆರಿಕಾದಲ್ಲಿ ಸ್ವಾತಂತ್ರ್ಯ ಯುದ್ಧದ ಹೆಸರಿನಲ್ಲಿ ೧೮೬೫ರಲ್ಲಿ ನಡೆದದದ್ದು ನಿಜವಾದ ಕ್ರಾಂತಿಯಲ್ಲ. ಒಬಾಮಾ ಆ ರಾಷ್ಟ್ರದ ಅಧ್ಯಕ್ಷನಾಗಿ ಆಯ್ಕೆಯಾಗಿರುವುದೇ ಆ ದೇಶದಲ್ಲಿ ಸಂಭವಿಸಿರುವ ನಿಜವಾದ ಕ್ರಾಂತಿ ಎಂದು ಜಾಗತಿಕ ರಾಜಕೀಯ ವಿಶ್ಲೇಷಕರು ಹೇಳತೊಡಗಿದ್ದಾರೆ. ಇದನ್ನು ಇನ್ನಷ್ಟು ತಿದ್ದಿ ಹೇಳುವುದಾದರೆ, ಅಮೆರಿಕಾದ ನಿಜವಾದ ಕ್ರಾಂತಿ ಈಗ ಆರಂಭವಾಗಿದೆ! ಅದರ ಯಶಸ್ಸು ಒಬಾಮಾರ ಆಡಳಿತದ ಯಶಸ್ಸನ್ನು ಅವಲಂಬಿಸಿರುತ್ತದೆ. ಬರಾಕ್ ಹುಸೇನ್ ಒಬಾಮಾ ಅಮೆರಿಕಾದ ಜನರ ವ್ಯಕ್ತಿತ್ವದಲ್ಲೇ ಅಂತರ್ಗತವಾಗಿರುವ ಸಾಹಸಶೀಲತೆ, ಸ್ವಾತಂತ್ರ್ಯಪ್ರಿಯತೆ ಮತ್ತು ಆಧುನಿಕತೆಗಳ ಪ್ರತೀಕ. ಅಮೆರಿಕಾ ಮೂಲದ ಕ್ರಿಶ್ಚಿಯನ್ ಅಮ್ಮ ಮತ್ತು ಕೀನ್ಯಾ ಮೂಲದ ಮುಸ್ಲಿಂ ಅಪ್ಪನ ಮಗನಾಗಿ ಹುಟ್ಟಿದ ಬರಾಕ್, ತನ್ನ ತಾಯಿಯ ಎರಡನೇ ಗಂಡನ ದೇಶವಾದ ಇಂಡೋನೇಷ್ಯಾದಲ್ಲಿ ತನ್ನ ಬಾಲ್ಯವನ್ನು ಕಳೆದವರಾಗಿ ಆ ದೇಶದೊಂದಿಗೂ ಸಂಬಂಧ ಹೊಂದಿದವರು. ಹೀಗೆ ಅಮೆರಿಕಾ, ಆಫ್ರಿಕಾ ಮತ್ತು ಏಷ್ಯಾದ ಸಂಸ್ಕೃತಿಗಳಲ್ಲಿ ತಮ್ಮ ವ್ಯಕ್ತಿತ್ವ ರೂಪಿಸಿಕೊಂಡಿರುವ ಒಬಮಾ, ನಿಜವಾದ ಅರ್ಥದಲ್ಲಿ ಜಾಗತಿಕ ಪ್ರಜೆ. ಹೀಗಾಗಿ ಈವರೆಗೆ ಜಾಗತಿಕ ಯಜಮಾನಿಕೆಯ ರಾಷ್ಟ್ರವೆನಿಸಿದ್ದ ಅಮೆರಿಕಾಕ್ಕೆ ಈಗ ನಿಜವಾದ ಜಾಗತಿಕ ಪ್ರಜೆಯೊಬ್ಬನ ಯಜಮಾನಿಕೆಯೂ ಸಿಕ್ಕಿದೆ. ಆದರೆ ವಿಪರ್ಯಾಸವೆಂದರೆ, ಜಾಗತಿಕ ಪ್ರಜೆಯೊಬ್ಬನ ಅಧ್ಯಕ್ಷತೆಯನ್ನು ಈ ದೇಶ ಹೊಂದುವ ಹೊತ್ತಿಗೆ, ಅದರ ಜಾಗತಿಕ ಯಜಮಾನಿಕೆ ಎನ್ನುವುದೇ ಕಳಚಿ ಬಿದ್ದಿದೆ! ಅಥವಾ ಅಂತಹ ಸಂದರ್ಭವೇ ಒಬಾಮಾರಂತಹವರು ಅಧ್ಯಕ್ಷರಾಗಿ ಆಯ್ಕೆಯಾಗುವುದನ್ನು ಅನುವು ಮಾಡಿಕೊಟ್ಟಿದೆಯೇ?

ಮೊದಲು ಅನಾಗರಿಕ ಗುಲಾಮಗಿರಿ, ಅದು ನಿಷೇಧಿತವಾದ ನಂತರವೂ ಮುಂದುವರೆದಿದ್ದ ಅಸಭ್ಯ ಜನಾಂಗವಾದಗಳ ವಿರುದ್ಧ ಎರಡು ಶತಮಾನಗಳಿಂದಲೂ ಹೋರಾಡುತ್ತಲೇ ಬಂದ ಅಮೆರಿಕದ ಕಪ್ಪು ಜನ ಫ್ರೆಡ್ರಿಕ್ ಡೌಗ್ಲಾಸ್, ರೋಸಾ ಪಾರ್ಕ್ ಮತ್ತು ಮಾರ್ಟಿನ್ ಲೂಥರ್ ಕಿಂಗ್(ಜೂ) ನಂತರ ಇದ್ದಕ್ಕಿದ್ದಂತೆ ಬರಾಕ್ ಒಬಾಮಾರಲ್ಲಿ ತಮ್ಮ ಹೊಸ ನಾಯಕನನ್ನು ಕಂಡುಕೊಂಡಿದ್ದಾರೆ. ಹಾಗಾಗಿ ಅವರು ಇವರೆಲ್ಲರಿಗಿಂತ ಭಿನ್ನರೂ ಆಗಿದ್ದಾರೆ. ಈ ಹಿಂದಿನವರೆಲ್ಲರ ಹೋರಾಟದ ಮಾಗಿದ ಫಲವೆನ್ನಿಸಿರುವ ಒಬಾಮಾ, ಬರೀ ಕಪ್ಪುಜನರ ನಾಯಕನಲ್ಲ. ಅಮೆರಿಕಾ ಬದಲಾಗುವ ಕಾಲ ಬಂದಿದೆ

ಎಂಬ ತೀವ್ರ ಅನ್ನಿಸಿಕೆಗೆ ಒಳಗಾಗಿರುವ ಎಲ್ಲ ಜನಾಂಗಳ, ಧರ್ಮಗಳ, ಬಣ್ಣಗಳ ಅಮೆರಿಕನ್ ಪ್ರಜೆಗಳ ನಾಯಕರಾಗಿದ್ದಾರೆ. ಹಾಗಾಗಿಯೇ ಅವರು ಈ ರಾಷ್ಟ್ರದ ಅಧ್ಯಕ್ಷೀಯ ಚುನಾವಣೆಗಳಲ್ಲಿ ಇತ್ತೀಚೆಗೆ ಕಾಣದಿದ್ದಂತಹ ಭಾರಿ ಜಯವನ್ನು ಗಳಿಸಲು ಸಾಧ್ಯವಾಗಿದೆ. ಹೆಚ್ಚು ಕಡಿಮೆ ರಾಷ್ಟ್ರದ ಎಲ್ಲ ಭಾಗಗಳಿಂದ ಇವರಿಗೆ ಬೆಂಬಲ ದೊರಕಿದೆ. ಅಮೆರಿಕಾ ನಿರ್ಣಾಯಕವೆನ್ನಿಸುವಂತೆ ಈ ಚುನಾವಣೆಯಲ್ಲಿ ತನ್ನೆಲ್ಲ ಆಧುನಿಕತೆ ಮತ್ತು ಪ್ರಗತಿಪರತೆಯ ಹಿಂದೆ, ಕಂಡೂ ಕಾಣದಂತೆ ಅಡಗಿಸಿಟ್ಟುಕೊಂಡಂತಿದ್ದ ವರ್ಣಭೇದವೆಂಬ ಅನಿಷ್ಟವನ್ನು ಬಹಿರಂಗವಾಗಿಯಾದರೂ ದೂರೀಕರಿಸಿದೆ. ಒಬಾಮಾರನ್ನು ಚುನಾವಣೆಯ ಮುನ್ನವೇ ಕೊಲ್ಲಲು ಕೆಲವು ಬಿಳಿಯ ಜನಾಂಗವಾದಿಗಳು ಯತ್ನಿಸಿದ್ದರು ಎಂಬುದನ್ನು ನಾವು ಮರೆಯಬಾರದು.

ಒಬಾಮಾರ ಆಯ್ಕೆ, ಅಮೆರಿಕಾ ಈವರೆಗೆ ಎತ್ತಿ ಹಿಡಿಯುತ್ತಾ ಬಂದಿರುವ ವ್ಯಕ್ತಿತ್ವ ಬೆಳವಣಿಗೆಯ ಮುಕ್ತ ವಾತಾವರಣದಲ್ಲೂ ಅಡಗಿದ್ದ ಎಲ್ಲ ಪಾರಂಪರಿಕ ಅಡೆ ತಡೆಗಳು ನಾಶವಾಗುವ ಕಾಲ ಬಂದಿದೆ ಎಂಬ ಸಂದೇಶದ ಪ್ರತೀಕವೂ ಆಗಿದೆ ಎಂದು ಹೇಳಬೇಕು. ಏಕೆಂದರೆ ಒಬಾಮಾ, ಶ್ರೀಮಂತ ಅಥವಾ ಪ್ರತಿಷ್ಠಿತ ಕೌಟುಂಬಿಕ ಹಿನ್ನೆಲೆಯಿಂದ ಬಂದವರಲ್ಲ. ಯಾವುದೇ ಕ್ಷೇತ್ರದಲ್ಲೂ–ತಾವು ಶಿಕ್ಷಣ ಮತ್ತು ವೃತ್ತಿಗಾಗಿ ಆಯ್ದುಕೊಂಡ ಕಾನೂನು ಶಾಸ್ತ್ರದಲ್ಲೂ–ಪರಿಣತರೆನಿಸಿಕೊಂಡವರಲ್ಲ. ಮೊದಲ ಬಾರಿಗಷ್ಟೇ ರಾಷ್ಟ್ರದ ಸೆನೆಟ್‌ಗೆ ಆಯ್ಕೆಯಾದವರು! ಆದರೆ ತಮ್ಮ ಇಂತಹ ಸಾಮಾನ್ಯತೆಯಲ್ಲಿ ಹುಟ್ಟಿದ ಸಾಮಾನ್ಯ ಪರಿಜ್ಞಾನದಿಂದಲೇ, ಇಂದಿನ ಜಾಗತಿಕ ಸಂದರ್ಭದಲ್ಲಿ ಅಮೆರಿಕಾಕ್ಕೆ ಏನಾಗುತ್ತಿದೆ ಎಂಬುದನ್ನು ಸರಿಯಾಗಿ ಗ್ರಹಿಸಿ, ಅದನ್ನು ಸರಿಯಾದ ಭಾಷೆಯಲ್ಲಿ ಮತ್ತು ಸರಿಯಾದ ಭಾವನೆಯಲ್ಲಿ ಜನರಿಗೆ ಮನವರಿಕೆ ಮಾಡಿಕೊಡುವ ಮೂಲಕ ನಾಯಕರೆನಿಸಿಕೊಂಡವರೀತ. ಅಮೆರಿಕಾದ ಮತದಾರರಲ್ಲಿ ಶೇ.೬೬ ಜನ ಅತಿ ತೂಕದವರಂತೆ. ಶೇ. ೩೨ ಜನ ಬೊಜ್ಜಿಗರಂತೆ. ಇದು ಅಮೆರಿಕಾದ ಇಂದಿನ ಸಾಮಾಜಿಕ-ಆರ್ಥಿಕ ಸಂದರ್ಭದ ಪ್ರತೀಕವೂ ಹೌದು! ಅದೊಂದು, ಬೊಜ್ಜು ಹೆಚ್ಚಾಗಿ ಏದುಸಿರು ಬಿಡುತ್ತಿರುವ ದೇಶ. ಈ ದೇಶ ಹೀಗೇಕಾಯಿತು ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮತ್ತು ಅದಕ್ಕೆ ಪರಿಹಾರವಾದರೂ ಏನು ಎಂಬುದನ್ನು ಸೂಚಿಸುವಂತಿರುವ ಮಿಶ್ರ ಜನಾಂಗದ, ಸಾಮಾನ್ಯ ಕೌಟುಂಬಿಕ ಹಿನ್ನೆಲೆಯ, ಸರಿಯಾದ ಎತ್ತರ ಮತ್ತು ಅದಕ್ಕೆ ಸರಿಯಾದ ತೂಕದ ಸದ್ಗೃಹಸ್ಥರೊಬ್ಬರನ್ನು ಅಮೆರಿಕಾದ ಜನತೆ ಆಯ್ಕೆ ಮಾಡಿಕೊಂಡು ತನ್ನ ವಿವೇಕವನ್ನು ಮೆರೆದಿದೆ!

ಆದರೆ ಒಬಮಾರ ಮುಂದಿರುವ ದಾರಿ ಸುಗಮವಾದ್ದೇನಲ್ಲ. ಕಳೆದ ಮೂರು ತಿಂಗಳಲ್ಲಿ ಶೇ. -೩ರ ಅವಪ್ರಗತಿಗೆ ಸಿಕ್ಕಿರುವ ಅಮೆರಿಕಾದ ಈ ಸಂಕಷ್ಟದ ದಿನಗಳಲ್ಲಿ ಅದರ ನಾಯಕತ್ವ ವಹಿಸಬೇಕಾದ ಅಗ್ನಿ ಪರೀಕ್ಷೆಯನ್ನು ಅವರು ಎದುರಿಸಬೇಕಾಗಿದೆ. ಅಥವಾ ಅದಕ್ಕಾಗಿಯೇ ಅಮೆರಿಕಾದ ಜನ ಅವರನ್ನು ಆಯ್ಕೆ ಮಾಡಿದೆ ಎಂದರೆ ಸರಿಯಾದೀತೇನೋ! ಅಮೆರಿಕಾಕ್ಕೆ ಇದೊಂದು 'ಪರ್ವಕಾಲ ಎನ್ನಲಾಗುತ್ತಿದೆ. ಅದು ತನ್ನ ಭಾರದಿಂದ ತಾನೇ

ಕುಸಿದು ಬಿದ್ದಿದ್ದು, ಈಗ ತನ್ನ ವಿವಿಧ ಅಂಗಾಂಗಳಲ್ಲಿ ಶೇಖರಗೊಂಡಿರುವ ಅಸಹಜ ಮತ್ತು ಅನಗತ್ಯ ಕೊಬ್ಬನ್ನು ಕರಗಿಸಿಕೊಂಡು ಮತ್ತೆ ಎದ್ದು ನಿಲ್ಲಲು ಬೇಕಾದ ವಿವೇಕವನ್ನೂ, ಜಾಣ್ಮೆಯನ್ನೂ ಮತ್ತು ಪ್ರಬುದ್ಧತೆಯನ್ನು ಪ್ರದರ್ಶಿಸಬೇಕಿದೆ. ಕಾಲ-ದೇಶಗಳು ತನ್ನ ನಾಯಕನ್ನು ತಾವೇ ಆಯ್ದುಕೊಳ್ಳುವಂತೆ, ಅಮೆರಿಕಾದ ಕಾಲ-ದೇಶಗಳು ಒಬಾಮರನ್ನು ತನ್ನ ನಾಯಕನನ್ನು ಆಯ್ದುಕೊಂಡಿದೆ. ಈವರೆಗಿನ ಒಬಾಮಾರ ಹೇಳಿಕೆಗಳು, ಅಭಿಪ್ರಾಯಗಳು ಈ ಆಯ್ಕೆ ಜಗತ್ತಿನ ಹಿತ ದೃಷ್ಟಿಯಿಂದಲೂ ಸಮರ್ಪಕವಾಗಿಯೇ ಇದೆ ಎನ್ನಿಸಿದೆ. ಶ್ರೀಮಂತಿಕೆಯ ಮೇಲಿನ ನಿಯಂತ್ರಣ, ಬಡವರ ಮತ್ತು ಮಧ್ಯಮ ವರ್ಗದವರ ಕ್ಷೇಮಾಭ್ಯುದಯಕ್ಕೆ ಹೆಚ್ಚಿನ ಹಣ, ಭೂಗ್ರಹವನ್ನು ಅವನತಿಯತ್ತ ಕೊಂಡೊಯ್ಯುತ್ತಿರುವ ಕೈಗಾರಿಕಾ ಮಾಲಿನ್ಯಕ್ಕೆ ತಡೆಗೆ ಬದ್ಧತೆ, ಅಮೆರಿಕಾದ ಜಾಗತಿಕ ಯಜಮಾನಿಕೆಗೆ ಕೊನೆ, ಮತೀಯ ಭಯೋತ್ಪಾದನೆಯ ನಿರ್ಮೂಲನ, ಮಾನವ ಹಕ್ಕುಗಳ ರಕ್ಷಣೆ ಇತ್ಯಾದಿ ವಿಷಯಗಳ ಬಗೆಗಿನ ಅವರ ಧೋರಣೆಗಳು ರೇಗನ್-ಥ್ಯಾಚರ್ ಕಾಲದಿಂದ ಆರಂಭವಾದಂತೆ ಜಗತ್ತನ್ನು ಆಳತೊಡಗಿದ್ದ ಮತ್ತು ಜಗತ್ತಿನ ಇಂದಿನ ಮಹಾ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಿರುವ ಶೀಲಗೆಟ್ಟ ನವ-ಉದಾರವಾದಿ ಬಂಡವಾಳಶಾಹಿ ಜೀವನ ದೃಷ್ಟಿಗೆ ವಿರುದ್ಧವಾಗಿಯೇ ಇವೆ.

ಒಬಾಮಾ ತನ್ನ ಸ್ಫೂರ್ತಿಗಳಲ್ಲಿ ಒಬ್ಬರಾದ ಮಾರ್ಟಿನ್ ಲೂಥರ್ ಕಿಂಗ್ ಅವರಿಗೆ ಯಾರು ದೊಡ್ಡ ಆದರ್ಶವಾಗಿದ್ದರೋ, ಆ ಮಹಾತ್ಮ ಗಾಂಧಿ ತಮಗೂ ಆದರ್ಶವಾಗಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಈ ಚುನಾವಣೆಗಳ ಎರಡು-ಮೂರು ದಿಗಳ ಹಿಂದಷ್ಟೇ ನಿಧನರಾದ ತಮ್ಮ ಅಜ್ಜಿ (ತಂದೆಯ ತಾಯಿ)ಯಿಂದ ತಾವು ಗಾಂಧಿ ವಿಚಾರಗಳನ್ನು ಮತ್ತು ಮಹಾಭಾರತದ ಕಥೆಗಳನ್ನು ಕೇಳಿ ಪ್ರಭಾವಿತರಾಗಿರುವುದಾಗಿಯೂ ಅವರು ಹೇಳಿದ್ದಾರೆ. ಆದರೆ ಈ ಮಹಾಭಾರತ ಮತ್ತು ಗಾಂಧಿಗಳಿಗೆ ಜನ್ಮ ನೀಡಿದ ಭಾರತದ ನವ ಶ್ರೀಮಂತ ವರ್ಗ, ಒಬಾಮಾರ ರಾಷ್ಟ್ರೀಯ ಪುನಶ್ಚೇತನ ಕಾರ್ಯಕ್ರಮಗಳಿಂದ ತಮಗೆ ತೊಂದರೆ ಯುಂಟಾಗುವುದೆಂಬ ಆತಂಕದಲ್ಲಿ ಅವರ ಆಯ್ಕೆಯನ್ನು ಅರ್ಧ ಮನಸ್ಸಿನಿಂದಲೇ ಸ್ವಾಗತಿಸಿದ್ದಾರೆ! ಎಲ್ಲ ಅಂಗಗಳಲ್ಲಿ ಕೊಬ್ಬು ತುಂಬಿಕೊಂಡಿದ್ದ ಅಮೆರಿಕಾ ತನ್ನ ಈ ಕೊಬ್ಬನ್ನು ಇಳಿಸಿಕೊಳ್ಳಲು ತಯಾರಾಗುತ್ತಿದ್ದಂತೆ, ಇತ್ತೀಚಿನ ವರ್ಷಗಳಲ್ಲಿ ತನ್ನ ಕೆಲವು ಅಂಗಾಂಗಗಳಲ್ಲಿ ಮಾತ್ರ ಕೊಬ್ಬು ತುಂಬಿಕೊಂಡು ವಿಕಾರವಾಗತೊಡಗಿದ್ದ ಭಾರತವೂ, ತನ್ನ ಸಾರ್ವತ್ರಿಕ ಆರೋಗ್ಯದ ದೃಷ್ಟಿಯಿಂದ ಆ ಕೊಬ್ಬನ್ನು ಇಳಿಸಿಕೊಳ್ಳಲೇ ಬೇಕಾದ ಪರಿಸ್ಥಿತಿ ಉಂಟಾಗಿದೆ. ಅದಕ್ಕಾಗಿಯಾದರೂ ಅದು ಒಬಾಮರಿಗೆ ಕೃತಜ್ಞವಾಗಿರಬೇಕಾಗಿದೆ.

ಹೀಗೆ ಅಮೆರಿಕಾದಲ್ಲಿ ನವ ಉದಾರವಾದಿ ಜೀವನ ದೃಷ್ಟಿಕೋನದ ವಿರುದ್ಧ ಹೊಸ ಜಾಗತಿಕ ಕ್ರಾಂತಿಯ ಸಿದ್ಧತೆ ಎಂಬಂತೆ 'ಬದಲಾವಣೆ'ಯ ಸಂದೇಶ ಬಿತ್ತರವಾಗುತ್ತಿದ್ದಂತೆ, ಅದೇ ದೇಶದಿಂದ ನಮ್ಮ ಎಸ್.ಎಲ್. ಭೈರಪ್ಪನವರು ತಮ್ಮ ಹಳಸಿದ ಹಿಂದೂ ನವ ಉದಾರವಾದಿ ಕ್ರಾಂತಿಯ ಕಹಳೆಯೂದಿ ನಮ್ಮ ಸಂಪ್ರದಾಯವಾದಿಗಳನ್ನೂ, ಬಂಡಾಯಗಾರ

ರನ್ನೂ ಒಟ್ಟಿಗೇ ಬಡಿದೆಬ್ಬಿಸಿದ್ದಾರೆ! ಮೊದಲಾಗಿ ಈ ಲೇಖನವನ್ನು, ಮತಾಂತರದ ಗಲಭೆಯು ಪುಂಡ ಹಿಂದೂವಾದಿಗಳ ಬಗೆಗಿನ ಸಾರ್ವತ್ರಿಕ ಖಂಡನೆ ಮತ್ತು ಮುಖಭಂಗ ದೊಂದಿಗೆ ಮುಕ್ತಾಯ ವಾಗುತ್ತಿದೆ ಎಂಬ ಆತಂಕದಲ್ಲಿ ಬರೆದಂತಿದೆ ಮತ್ತು ಪ್ರಕಟಿಸಿದಂತಿದೆ. ಆದರೆ ಈ ಲೇಖನಕ್ಕೆ ನಮ್ಮ ಬಂಡಾಯಗಾರರು ಮತ್ತು ಪ್ರಗತಿಪರರು ಎನ್ನಿಸಿಕೊಂಡವರು ಮುಗಿಬಿದ್ದು ಪ್ರತಿಕ್ರಿಯಿಸುತ್ತಾ, ಭೈರಪ್ಪನವರ ಮತ್ತು ಅದನ್ನು ಪ್ರಕಟಿಸಿದ ಪತ್ರಿಕೆಯ ಸಂಪಾದಕನ ಉದ್ದೇಶವನ್ನು ಅವರ ನಿರೀಕ್ಷೆಗೂ ಮೀರಿ ಈಡೇರಿಸುತ್ತಿರುವ ದೃಶ್ಯ ನಿಜವಾಗಿಯೂ ಭಯಾನಕವಾಗಿದೆ. ಅವರಲ್ಲಿ ಕೆಲವರಂತೂ ಈ ಪ್ರತಿಕ್ರಿಯೆಯ ಮೂಲಕ ಎಂತಹ ಮೂರ್ಖ ಕೃತಾರ್ಥತೆಯನ್ನು ಅನುಭವಿಸುತ್ತಿದ್ದಾರೆಂದರೆ–'ಆವರಣ'ದಷ್ಟೇ ದುರುದ್ದೇಶಪೂರಿತ ಮತ್ತು mediocre ಆಗಿರುವ–ಈ ಲೇಖನವನ್ನು ಪ್ರಕಟಿಸುವ ಮೂಲಕ ಆರೋಗ್ಯಪೂರ್ಣ ಮತ್ತು ಮುಕ್ತ ಚರ್ಚೆಗೆ ಅನುವು ಮಾಡಿಕೊಟ್ಟಿದ್ದಾರೆಂದು ಸಂಬಂಧಪಟ್ಟ ಪತ್ರಿಕೆಯ ಸಂಪಾದಕರಿಗೆ ತಮ್ಮ ಕೃತಜ್ಞತೆಯನ್ನೂ ಸೂಚಿಸಿದ್ದಾರೆ! ಬಹುಶಃ ಇದಕ್ಕಿಂತ ನಯವಂಚನೆಯ 'ಪ್ರಗತಿಪರ' ನಾಟಕ ಇನ್ನೊಂದಿರಲಾರದು.

ಸುಳ್ಳುಗಳನ್ನು ಸೃಷ್ಟಿಸುವುದು ಮತ್ತು ಹರಡುವುದೇ ನಮ್ಮ ಎಲ್ಲ ಧರ್ಮಗಳ ಪುರೋಹಿತಶಾಹಿಯ ಕೆಲಸ. ಕೆಲವರು ಹಳೆಯ ಸುಳ್ಳುಗಳನ್ನು ಪುನರಾವರ್ತಿಸುತ್ತಾ ಹಾಸ್ಯಾಸ್ಪದರಾಗಿದ್ದರೆ, ಇನ್ನು ಕೆಲವರು ಹೊಸ ಸುಳ್ಳುಗಳನ್ನು ಹೆಣೆದು ಹೇಳುವ ಮೂಲಕ ಜಾಣರೆನಿಸಿಕೊಂಡಿದ್ದಾರೆ! ಇಂತಹ ಜಾಣ ಪುರೋಹಿತರಲ್ಲಿ ಒಬ್ಬರು ನಮ್ಮ ಪೇಜಾವರ ಸ್ವಾಮಿಗಳು. ಸದಾ ಸುದ್ದಿಯಲ್ಲಿದ್ದು ಸಮಕಾಲೀನ ನಾಯಕರೆನಿಸಿಕೊಳ್ಳುವ ತವಕದಲ್ಲಿದ್ದಂತೆ ತೋರುವ ವಿಶ್ವೇಶ್ವರ ತೀರ್ಥರು, ಜಗತ್ತು ಅಸತ್ಯವೆಂದು ಬುದ್ಧ ಹೇಳಿದ್ದಾನೆ ಎಂದು ಹೊಸ ಸಂಶೋಧನೆಯನ್ನು ಕೈಗೊಂಡು ಭಾರತೀಯ ತತ್ವಜ್ಞಾನವನ್ನು ಕುರಿತ ತಮ್ಮ ಅಜ್ಞಾನವನ್ನೂ ಮತ್ತು ತಮ್ಮ ಮಠೀಯ ಸ್ಥಾನಮಾನದಿಂದ ಮಾತ್ರ ಸೃಷ್ಟಿಸಿಕೊಂಡಂತೆ ತೋರುವ ಭಂಡ ಧೈರ್ಯವನ್ನೂ ಪ್ರದರ್ಶಿಸಿದ್ದಾರೆ. ಬಹುಶಃ ಇದು, ತಾವು (ಆಕಸ್ಮಿಕವಾಗಿಯಷ್ಟೇ) ಹುಟ್ಟಿದ ಜಾತಿ ಕಾರಣದಿಂದಲೇ ನಂಬಬೇಕಾಗಿರುವ ಮಾಧ್ವ ಮತವು ಶಂಕರರ ಅದ್ವೈತವನ್ನು ಖಂಡಿಸಲು ಬಳಸುವ ತರ್ಕದಿಂದ ಉದ್ಭವವವಾದದ್ದು.

ಹಾಗೆ ನೋಡಿದರೆ ಶಂಕರ ಬುದ್ಧನ ತಾತ್ವಿಕ ಅನುಯಾಯಿ ಎಂದೇ ಹೇಳಬೇಕು. ಮಾನುಷ ಅನುಭವದ ಪರಿಪೂರ್ಣತೆಯನ್ನು ಬುದ್ಧ, ಅದರ ಪರಿಣಾಮದ ಹೆಸರಿನಲ್ಲಿ 'ಮಹಾಮೌನ' ಅಥವಾ 'ಶೂನ್ಯತಾ' ಎಂದು ಕರೆದ. ಆದರೆ ಮುಂದೆ ಈ 'ಶೂನ್ಯ' (ಸಾಮಾನ್ಯ ಜನರ ನೆಲೆಯಲ್ಲಿ) ಅಪಾರ್ಥಕ್ಕೀಡಾಗಿ, ತಾತ್ವಿಕ ಅರಾಜಕತೆಗೆ ಮತ್ತು ಆನಂತರ ಅನೇಕ ಲೌಕಿಕ ಅನಾಚಾರಗಳಿಗೆ ಕಾರಣವಾದಾಗ, ನಂತರ ಬಂದ ಶಂಕರರು ಅದಕ್ಕೆ ರಚನಾತ್ಮಕ ಅರ್ಥ ನೀಡಿ 'ಆತ್ಮ' ಅಥವಾ 'ಭಗವಂತ' (ಎಲ್ಲ ಹುಟ್ಟಿ, ಮತ್ತೆ ಎಲ್ಲ ಮರಳುವ ಜಾಗ) ಎಂದು ಕರೆದರು. ಇದರಿಂದ ಆದ ಲೌಕಿಕ ಹಾಗೂ ಪಾರಮಾರ್ಥಿಕ ಅನಾಹುತಗಳು ಈ ಹಿಂದಿನ ಅನಾಹುತಗಳನ್ನು ಮೀರಿಸಿದಂತಹವು ಎಂಬುದು ಬೇರೆ ವಿಷಯ! ಇವನ್ನು

ತಹಬಂದಿಗೆ ತರಲು ನಂತರ ನಡೆದ ಅಪೂರ್ಣ ಮತ್ತು ವಿಫಲ ತಾತ್ವಿಕ ಪ್ರಯತ್ನಗಳೇ ವಿಶಿಷ್ಟಾದ್ವೈತ ಮತ್ತು ದ್ವೈತಗಳು. ಅಂತಿಮವಾಗಿ ಇವೆಲ್ಲ ಬುದ್ಧನ ನಂತರ ದುರ್ಬಲಗೊಂಡಿದ್ದ ಪುರೋಹಿತಶಾಹಿಯನ್ನು ಇನ್ನಷ್ಟು ಸಬಲ ಮತ್ತು ವ್ಯವಸ್ಥಿತಗೊಳಿಸಿ ಮತ್ತಷ್ಟು ಸಾಮಾಜಿಕ ಅನಾಹುತಗಳನ್ನೂ, ತಾತ್ವಿಕ ಗೋಜಲನ್ನೂ ಸೃಷ್ಟಿಸಿದವಷ್ಟೆ.

ಈ ವಿವಿಧ ತಾತ್ವಿಕ ಜಿಜ್ಞಾಸೆಗಳ ಮೂಲ ಆಚಾರ್ಯರ ಸತ್ಯಾನ್ವೇಷಣೆಯ ಪ್ರಯತ್ನಗಳ ಕಳಕಳಿ ಮತ್ತು ಪ್ರಾಮಾಣಿಕತೆಯನ್ನು ಯಾರೂ ಪ್ರಶ್ನಿಸಲಾರರು. ಆದರೆ, ಇವುಗಳನ್ನು ಆಧರಿಸಿ ಅವರ ಅನುಯಾಯಿಗಳು ನಡೆಸುತ್ತಾ ಬಂದಿರುವ ಧಾರ್ಮಿಕ ರಾಜಕಾರಣ ಇಂದಿನ ರಾಜಕಾರಣದ ಪುಢಾರಿತನಕ್ಕೆ ಯಾವ ರೀತಿಯಲ್ಲೂ ಕಡಿಮೆಯದಲ್ಲ! ಪೇಜಾವರರದು ಇಂತಹ ಅಪ್ಪಟ ಪುಢಾರಿತನ. ಅವರು ಮಾಧ್ವ ಸಾಹಿತ್ಯವನ್ನು ಜಡವಾಗಿ ಓದಿಕೊಂಡಿರುವುದರ ಹೊರತಾಗಿ, ಇನ್ನೇನ್ನಾದರೂ ಸಹಾನುಭೂತಿಯಿಂದ ಓದಿದ್ದಾರೆಯೇ ಎಂದು ಯಾರಾದರೂ ಅನುಮಾನಪಡುವಷ್ಟು ಭಂಡ ಧೈರ್ಯ ಅವರ ಸದ್ಯದ ಮಾತುಗಳಲ್ಲಿ ಎದ್ದು ಕಾಣುತ್ತದೆ. ಬೌದ್ಧ ಧರ್ಮ ಎಲ್ಲಿ ಮತ್ತು ಹೇಗೆ ಜಗತ್ತು ಅಸತ್ಯ ಎಂದು ಹೇಳುತ್ತದೆ ಎಂಬುದನ್ನು ಪೇಜಾವರರು ಸ್ಪಷ್ಟಪಡಿಸುವವರೆಗೂ ಅವರನ್ನು ಸುಳ್ಳುಬುರುಕರೆಂದೇ ಕರೆಯಬೇಕಾಗುತ್ತದೆ. ಬುದ್ಧನ ನಾಲ್ಕು ಆರ್ಯ ಸತ್ಯಗಳಲ್ಲಿ ಮೊದಲನೆಯ ಸತ್ಯವಾದ 'ಸಂಸಾರ ದುಃಖಮಯ' ಎಂಬುದರಲ್ಲೇ ಜಗತ್ತಿನ ಸತ್ಯತೆಯ ವ್ಯಾಖ್ಯಾನವಿದೆ. ಈ ದುಃಖವನ್ನು ನಿವಾರಿಸಿಕೊಳ್ಳುವ ನೆಮ್ಮದಿಯ ಮಾರ್ಗವೇ ಬೌದ್ಧ ಧರ್ಮ ಎನ್ನಿಸಿಕೊಂಡಿರುವುದು. ಹೀಗಾಗಿ ಬೌದ್ಧ ಧರ್ಮವೆನ್ನುವುದು ಅಪ್ಪಟ ಲೋಕ ಧರ್ಮ. ಇನ್ನು ಪೇಜಾವರರು ನೆಚ್ಚಿರುವ ಮಾಧ್ವ ಸಿದ್ಧಾಂತ ಹೇಳುವ ಲೋಕ ಸತ್ಯತೆ, ಹಣದ ಲೇವಾದೇವಿ ಮತ್ತು ಅದನ್ನು ಗೂಂಡಾಗಿರಿಯ ಮೂಲಕ ರಕ್ಷಿಸಿಕೊಳ್ಳುವಷ್ಟು ಅಪ್ಪಟ 'ವಾಸ್ತವವಾದಿ'ಯಾದದ್ದು ಎಂಬುದು ಬೇರೆ ವಿಷಯ!

ಪೇಜಾವರರು ದಲಿತರು ಬೌದ್ಧಮತಕ್ಕೆ ಬದಲಾಗಿ ಜಾತಿ ಪದ್ಧತಿಯಿಲ್ಲದ್ದೆಂದು ಹೇಳಲಾಗುವ ಆರ್ಯ ಸಮಾಜವನ್ನು ಸೇರಿಕೊಳ್ಳಲು ಕರೆ ನೀಡಿದ್ದಾರೆ! ಅಂದರೆ ಜಾತಿ ಪದ್ಧತಿಯಿಲ್ಲದೆ ಹಿಂದೂ ಧರ್ಮವಿರಲಾರದು ಎಂದೇ ಅವರು ಹೇಳುತ್ತಿರುವುದು! ಈಗ ಹೇಳಿ ವೀರ ಹಿಂದೂವಾದಿಗಳೇ, ಹಿಂದೂ ಧರ್ಮದ ನಿಜವಾದ ಶತ್ರುಗಳು ಕ್ರಿಶ್ಚಿಯನ್ನರೋ, ಮುಸ್ಲಿಮರೋ ಅಥವಾ (ಅಂತರ್ಜಾತಿ ವಿವಾಹಗಳಿಗೆ ಮತ್ತು ವಿಧವಾ ವಿವಾಹಗಳಿಗೆ ಶಾಸ್ತ್ರ ಸಮ್ಮತಿ ಇಲ್ಲದಿರುವುದರಿಂದ ಅವಕ್ಕೆ ತಮ್ಮ ಅನುಮೋದನೆಯೂ ಇಲ್ಲವೆಂದು ಬಹು ಹಿಂದೆಯೇ ಸ್ಪಷ್ಟಪಡಿಸಿರುವ) ಇಂತಹ ಭಂಡ ಮಠಾಧಿಪತಿಗಳೋ? ಇವರ ಜಾತಿ ಪದ್ಧತಿಯನ್ನು ಒಪ್ಪದವರು ಯಾವ ಧರ್ಮಕ್ಕೆ ಹೋದರೆ ಇವರಿಗೇನು? ಅವರ ಉಸಾಬರಿ ಇವರಿಗೇಕೆ? ಆರ್ಯ ಸಮಾಜದಲ್ಲಿ ಜಾತಿ ಪದ್ಧತಿ ಇಲ್ಲವಂತೆ! ಎಲ್ಲಿದೆ ಅಂತಹ ಆರ್ಯ ಸಮಾಜ? ಶೂದ್ರರೂ ಜನಿವಾರ ಹಾಕಿಕೊಂಡು ಮೂರನೆಯ ಅಥವಾ ನಾಲ್ಕನೇ ದರ್ಜೆಯ ಬ್ರಾಹ್ಮಣರೆನಿಸಿಕೊಳ್ಳುವುದರ ಹೊರತಾಗಿ ಇನ್ನಾವ 'ಸಾರ್ಥಕತೆ'ಯೂ ಈ ಆರ್ಯ

ಸಮಾಜದಿಂದ ದೊರೆಯದು! ಇದು ಹಿಂದೂ ಧರ್ಮದ ಶೂದ್ರರಿಗೆ ಮತ್ತು ಅಸ್ಪೃಶ್ಯರಿಗೆ ನಿರ್ಮಿಸಲಾಗಿರುವ special cell ಅಷ್ಟೆ!

ಪಶ್ಚಿಮ ಉತ್ತರ ಪ್ರದೇಶ ಮತ್ತು ಹರ್ಯಾಣದ ಬಹುಭಾಗ ಆರ್ಯಸಮಾಜದ ದೀಕ್ಷೆ ಪಡೆದ ಸಮಾಜವೇ ಆಗಿದೆ. ಆದರೆ ಜಾತಿ ಮೀರಿ ಸ್ನೇಹ ಮಾಡಿದ್ದಾರೆಂದೋ, ಪ್ರೇಮಿಸಿದ್ದಾರೆಂದೋ ತಂದೆ ತಾಯಿಗಳೇ ಅಥವಾ ಸೋದರರೇ ಆ ಮಕ್ಕಳನ್ನು ಗುಂಡಿಟ್ಟು ಅಥವಾ ಬಹಿರಂಗವಾಗಿ ಊರ ಮುಂದಿನ ಮರಕ್ಕೆ ನೇಣು ಹಾಕಿ ಕೊಲ್ಲುವ ಪರಮ ನೀಚ ಕುಟುಂಬಗಳೂ ಆರ್ಯ ಸಮಾಜದ ಹಿನ್ನೆಲೆ ಹೊಂದಿದವೇ! ಇವನ್ನು ಊರ ಹಿರಿಯರು 'ಮರ್ಯಾದೆ ಕೊಲೆ' (Honour Killing) ಎಂದು ನಿರ್ಲಜ್ಜವಾಗಿ ಕರೆದುಕೊಂಡು ಹೆಮ್ಮೆ ಪಡುವುದೂ ಉಂಟು! ಹಾಗಾಗಿ ಮೊದಲು ಪೇಜಾವರರು ಅಲ್ಲಿಗೆ (ಇತ್ತೀಚೆಗೆ ತಾನೇ ದೆಹಲಿ ಪಕ್ಕದ ಹಳ್ಳಿಯೊಂದರಲ್ಲಿ ಇಂತಹ ಘಟನೆ ನಡೆದಿದೆ) ಅಥವಾ ಮೂಲತಃ ದಲಿತರೇ ಆದ ಬಡ ಕ್ರಿಶ್ಚಿಯನ್ನರ ಮೇಲೆ ವಿವಿಧ ರೀತಿಯ ಅತ್ಯಾಚಾರಗಳು ನಡೆಯುತ್ತಿರುವ ಕಂಧಮಹಲ್‌ಗೆ ಹೋಗಿ ಅಲ್ಲಿ ತಮ್ಮ ರಾಕ್ಷಸ ಕುಲದವರಿಗೆ ಶಾಂತಿ ದೀಕ್ಷೆ ನೀಡಲಿ. ನಂತರ ಇವರು ಕೊಡುವುದಾಗಿ ಹೇಳುವ 'ಬ್ರಹ್ಮ ದೀಕ್ಷೆ'ಗೆ ಎಷ್ಟು ಜನ ದಲಿತರು ಸಾಲುಗಟ್ಟಿ ನಿಲ್ಲುವರೋ ನೋಡೋಣ!

ಪೇಜಾವರರ ಇಂತಹ ಭಂಡ ಧೈರ್ಯದ ನೆರಳಿನಲ್ಲಿಯೇ ಯಡಿಯೂರಪ್ಪನವರಂತಹ ಮೂಢರು ದೇವರಿಗೆ ಮುವ್ವತ್ತು ಲಕ್ಷ ರೂಪಾಯಿಗಳ ಬೆಲೆಯ ಆನೆಯೊಂದನ್ನು ಲಂಚವಾಗಿ ನೀಡುವ ಧೈರ್ಯ ಮಾಡಿರುವುದು. ಇದು ತಾವು ಮುಖ್ಯಮಂತ್ರಿಯಾದರೆ ತೀರಿಸುವುದಾಗಿ ಮಾಡಿಕೊಂಡಿದ್ದ ಹರಕೆಯಂತೆ! ಇಷ್ಟು ದೊಡ್ಡ ಬೆಲೆಯ ಹರಕೆ ಮಾಡಿಕೊಂಡು ಮುಖ್ಯ ಮಂತ್ರಿಯಾಗುವುದರ ಉದ್ದೇಶವಾದರೂ ಏನು? ಉದ್ದೇಶ ಜನಸೇವೆಯೇ ಆಗಿದ್ದರೆ, ಭಗವಂತ ಯಾವ ಲಂಚವೂ ಇಲ್ಲದೆ ಆ ಕೆಲಸಕ್ಕಾಗಿ ಯಡಿಯೂರಪ್ಪನವರನ್ನು ಆಯುತ್ತಿದ್ದ. ನಿಜವಾದ ಭಗವಂತನ ಕೆಲಸವೇ ಅದಲ್ಲವೇ? ಆದರೆ ಯಡಿಯೂರಪ್ಪ ದೇವರಿಗೇ ಲಂಚದ ಆಸೆ ತೋರಿಸಿ ಅವನನ್ನು ಯಾಮಾರಿಸುವ ಪ್ರಯತ್ನ ಮಾಡಿ, ದೇವರ ಕಲ್ಪನೆಯನ್ನೇ ಭ್ರಷ್ಟಗೊಳಿಸಿದ್ದಾರೆ ಮತ್ತು ತಾವೂ ತಮ್ಮ (ಸಂಘ) ಪರಿವಾರವೂ ಎಗ್ಗಿಲ್ಲದೆ ತಿಂದು ತೇಗಲು ಮುಕ್ತ ಪರವಾನಗಿ ಪಡೆದುಕೊಂಡಿದ್ದಾರೆ. ಕರ್ನಾಟಕದ ಮಟ್ಟಿಗೆ ಆಧುನಿಕ ಕಾಲದಲ್ಲಿ ಧರ್ಮ ಸಾಮ್ರಾಜ್ಯ ಬಹುಶಃ ಇಷ್ಟೊಂದು ದುಷ್ಟ ಮತ್ತು ಭ್ರಷ್ಟ ಎಂದೂ ಆಗಿರಲಿಲ್ಲವೆಂದು ಕಾಣುತ್ತದೆ. ಇದನ್ನು ಸುಮ್ಮನೆ ಕೂತು ನೋಡುತ್ತಿರುವ ಕರ್ನಾಟಕದ ಜನತೆ ಇದರ ದುಷ್ಪರಿಣಾಮಗಳನ್ನು ಒಂದಲ್ಲ ಒಂದು ದಿನ ಎದುರಿಸಲೇ ಬೇಕಾಗುತ್ತದೆ. ಆ ದಿನಗಳೇನೂ ದೂರವಿದ್ದಂತೆ ಕಾಣುವುದಿಲ್ಲ.

(೨೧ ನವೆಂಬರ್, ೨೦೦೮)

■

೨೯. ಈಗ... ಭಯೋತ್ಪಾದಕರೆಲ್ಲ ಮುಸ್ಲಿಮರಲ್ಲ....!

ಕಳೆದ ಎರಡು ಮೂರು ವರ್ಷಗಳ ಹಿಂದಿನಿಂದ ಹಿಂದೂವಾದಿಗಳು ಚಾಲ್ತಿಯಲ್ಲಿಟ್ಟಿದ್ದ 'ಎಲ್ಲ ಮುಸ್ಲಿಮರೂ ಭಯೋತ್ಪಾದಕರಲ್ಲ. ಆದರೆ ಭಯೋತ್ಪಾದಕರೆಲ್ಲರೂ ಮುಸ್ಲಿಮರು' ಎಂಬ ಸಂಚಾರಿ ಸಂದೇಶದ ವಿಶ್ವಾಸಾರ್ಹತೆಗೆ ಈಗ ಭಂಗ ಬಂದಿದೆ. ಹಿಂದೂವಾದಿ ಗುಂಪುಗಳೂ ಭಯೋತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ಸಂಗತಿ ಈಗ ನಿಧಾನವಾಗಿಯಾದರೂ ಬೆಳಕಿಗೆ ಬರುತ್ತಿದೆ. ಇದೇ ಸೆಪ್ಟಂಬರ್ ೨೯ರಂದು ಮಹಾರಾಷ್ಟ್ರದ ಮುಸ್ಲಿಂ ಬಹುಸಂಖ್ಯಾತ ಪಟ್ಟಣವಾದ ಮಾಲೆಗಾಂವ್‌ನಲ್ಲಿ ನಡೆದ ಆಸ್ಫೋಟವಷ್ಟೇ ಅಲ್ಲ, ಈ ಹಿಂದಿನ ವರ್ಷಗಳಲ್ಲಿ ಅದೇ ರಾಜ್ಯದ ನಾಂದೇಡ್, ಜಲ್ನ, ಪರ್ಭಾಣಿ, ಪೂರ್ನ ಮತ್ತು ಗುಜರಾತ್‌ನ ಮೊಸಾದ್ ಇತ್ಯಾದಿ ಸ್ಥಳಗಳಲ್ಲಿ ನಡೆದ ಬಾಂಬ್ ಸ್ಫೋಟಗಳಲ್ಲೂ ಈ ಗುಂಪುಗಳ ಕೈವಾಡವಿದೆ ಎಂದು ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳ ಹೇಳುತ್ತಿದೆ. ಭಾರತ ಮತ್ತು ಪಾಕಿಸ್ತಾನದ ನಡುವೆ ಓಡಾಡುವ ರೈಲಾದ ಸಂಝೋತಾ ಎಕ್ಸ್‌ಪ್ರೆಸ್‌ನಲ್ಲಿ ಎರಡು ವರ್ಷಗಳ ಹಿಂದೆ ನಡೆದ ಅರವತ್ತೆಂಟು ಜನರ (ಹೆಚ್ಚಾಗಿ ಪಾಕಿಸ್ಥಾನಿ ಮುಸ್ಲಿಮರೇ) ಪ್ರಾಣವನ್ನು ಆಹುತಿ ತೆಗೆದುಕೊಂಡ ಮತ್ತು ನೂರಾರು ಜನರನ್ನು ಪ್ರಾಣಾಂತಿಕವಾಗಿ ಗಾಯಗೊಳಿಸಿದ ಬಾಂಬ್ ಸ್ಫೋಟದ ಹಿಂದೆಯೂ ಈ ಗುಂಪುಗಳ ಕೈವಾಡವೇ ಇದ್ದಂತೆ ಕಾಣುತ್ತಿದೆ ಎಂದು ಈ ದಳ ಹೇಳುತ್ತಿದೆ.

ಹಾಗೆ ನೋಡಿದರೆ ಭಯೋತ್ಪಾದಕರೆಲ್ಲರೂ ಮುಸ್ಲಿಮರೇ ಎಂಬುದು ಈ ಹಿಂದೆಯೂ ನಿಜವಾದ ಸಂಗತಿಯೇನಾಗಿರಲಿಲ್ಲ. ಏಕೆಂದರೆ, ಭಾರತದ ನಕ್ಸಲರು ಅಥವಾ ಮಾವೋವಾದಿಗಳು, ಶ್ರೀಲಂಕಾದ ಎಲ್ಟಿಟಿಯವರೂ ಮಾಡುತ್ತಿರುವುದೂ ಭಯೋತ್ಪಾದನೆಯೇ ಮತ್ತು ಅವರೆಲ್ಲರೂ ಬಹುತೇಕ ಹಿಂದೂಗಳೇ! ಆದರೆ ಭಯೋತ್ಪಾದನೆ ಎಂದರೆ ಕೋಮು ಭಯೋತ್ಪಾದನೆಯೇ ಎಂಬ ಅರ್ಥ ಸದ್ಯಕ್ಕೆ ಚಾಲ್ತಿಯಲ್ಲಿರುವುದರಿಂದ ಬೇರೆ ಕಾರಣಗಳ, ಉದ್ದೇಶಗಳ ಹಿಂಸಾಚಾರ ಭಯೋತ್ಪಾದನೆ ಎನ್ನಿಸಿಕೊಂಡಿಲ್ಲವಷ್ಟೆ. ಜನರ ಸಾಂವಿಧಾನಿಕ ಒಪ್ಪಿಗೆ ಇಲ್ಲದ ಉದ್ದೇಶಪೂರ್ವಕ ಮತ್ತು ವೈರಪೂರಿತವಾದ ಎಲ್ಲ ಹಿಂಸೆಯೂ ಭಯೋತ್ಪಾದನೆಯೇ ಅಲ್ಲವೆ? ಹಾಗಾಗಿ, ಈಗ ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳದ ಕೈಗೆ ಸಿಕ್ಕಿ ಹಾಕಿಕೊಂಡಿರುವ ಅರ್ಧ ಡಜನ್ ಹಿಂದೂ ಭಯೋತ್ಪಾದಕರನ್ನು ರಕ್ಷಿಸಲು ಸಂಘ ಪರಿವಾರದ ಕೆಲವು ನಾಯಕರು 'ಹಿಂದೂ ಅಂದರೇನೇ ಆತ ಅಥವಾ ಆಕೆ

ಭಯೋತ್ಪಾದಕ/ಕಿ ಆಗಿರಲು ಸಾಧ್ಯವಿಲ್ಲ' ಎಂದು ಅಮಾಯಕವಾಗಿ ಹೇಳತೊಡಗಿರುವುದು ನಗೆಯನ್ನಷ್ಟೇ ಉಕ್ಕಿಸಬಲ್ಲುದು!

ಅದೇನೇ ಇರಲಿ, ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಮಾಜಿ ಪದಾಧಿಕಾರಿಯೂ, ಸದ್ಯ ಇಂದೂರಿನಲ್ಲಿ ವಂದೇ ಮಾತರಂ ಜನಕಲ್ಯಾಣ ಸಮಿತಿ ಹಾಗೂ ರಾಷ್ಟ್ರೀಯ ಜಾಗರಣ ಮಂಚ್‌ನ ಸಂಚಾಲಕಿಯೂ ಆಗಿರುವ ಸಾಧ್ವಿ ಪ್ರಗ್ಯಾಸಿಂಗ್ ಠಾಕೂರ್ ಎಂಬ ಯುವತಿಯನ್ನೂ, ಅಭಯ್ ರಹೀರ್ಕರ್, ಸಮೀರ್ ಕುಲಕರ್ಣಿ, ಶ್ಯಾಮಲಾಲ್ ಸಾಹು, ಶಿವನಾರಾಯಣ ಸಿಂಗ್ ಕಲ್ಸಂಗ್ರ, ರಾಕೇಶ್ ದಾವಡೆ, ಮೇಜರ್ ಜನರಲ್(ನಿ) ರಮೇಶ್ ಉಪಾಧ್ಯಾಯ ಎಂಬ ಆಕೆಯ ಆರು ಜನ ಸಹಚರರನ್ನೂ ಬಂಧಿಸಿ ವಿಚಾರಣೆ ನಡೆಸಿದೆ. ಇದರ ಫಲವಾಗಿ ಲೆ|| ಕ|| ಶ್ರೀಕಾಂತ್ ಪ್ರಸಾದ್ ಪುರೋಹಿತ್ ಎಂಬ ಓರ್ವ ಸೇನಾಧಿಕಾರಿಯನ್ನೂ, ನಂತರ ಈ ಇಡೀ ಜಾಲದ ಸ್ಫೂರ್ತಿ ಕೇಂದ್ರವಾಗಿದ್ದವನೆಂದು ಹೇಳಲಾಗುತ್ತಿರುವ ಉತ್ತರ ಪ್ರದೇಶದಲ್ಲೂ, ಜಮ್ಮುವಿನಲ್ಲೂ ಮಠಗಳನ್ನು ಹೊಂದಿರುವ ಸ್ವಾಮಿ ಅಮೃತಾನಂದ ಆಲಿಯಾಸ್ ದಯಾನಂದ ಪಾಂಡೆ ಆಲಿಯಾಸ್ ಸುಧಾಕರ ದ್ವಿವೇದಿ ಎಂಬ ಸ್ವಯಂಘೋಷಿತ ಶಂಕರಾಚಾರ್ಯನೊಬ್ಬನನ್ನೂ ಬಂಧಿಸಿರುವ ದಳ, ಇವರ ಮಂಪರು ಪರೀಕ್ಷೆಗೂ ಮುಂದಾಗಿದೆ. ಹೀಗೆ ಹಲವು ರಾಜ್ಯಗಳಲ್ಲಿ ತನ್ನ ಜಾಲ ಹರಡಿಕೊಂಡಿರುವ ಈ ಗುಂಪು, ಈವರೆಗೂ ಮುಸ್ಲಿಂ ಭಯೋತ್ಪಾದಕ ಗುಂಪುಗಳು ನಡೆಸಿದ್ದುವೆಂದು ನಂಬಲಾಗಿರುವ ಕೆಲವು ಸ್ಫೋಟಗಳಿಗಾದರೂ ಕಾರಣವಾಗಿದ್ದರೆ ಆಶ್ಚರ್ಯವಿಲ್ಲ ಎಂದು ಹೇಳಲಾಗುತ್ತಿದೆ.

ಈ ಜಾಲದ ಹಿಂದಿರುವ ಸ್ಫೂರ್ತಿ, ಪುಣೆಯಲ್ಲಿನ 'ಅಭಿನವ್ ಭಾರತ್' ಎಂಬ ಹಿಂದೂವಾದಿ ಸಂಸ್ಥೆ. ಹಿಂದೂ ಮಹಾ ಸಭಾದ ಸದ್ಯದ ಅಧ್ಯಕ್ಷರೂ, ನಾಥೂರಾಂ ಗೋಡ್ಸೆಯ ಸೋದರ ಗೋಪಾಲ ಗೋಡ್ಸೆಯ ಮಗಳೂ ಮತ್ತು ವೀರ ಸಾವರ್ಕರರ ಸೋದರ ಸೊಸೆಯೂ ಆದ ಹಿಮಾನಿ ಸಾವರ್ಕರ್ ಇದರ ಅಧ್ಯಕ್ಷರು. ಈಕೆಯ ಪ್ರಕಾರ ಪ್ರತಿ ಮುಸ್ಲಿಂ ಬಾಂಬ್ ಸ್ಫೋಟಕ್ಕೆ ಪ್ರತಿಯಾಗಿ ಹಿಂದೂ ಬಾಂಬ್ ಸ್ಫೋಟವೊಂದನ್ನು ಆಯೋಜಿಸಬೇಕಂತೆ! ಈಗ ಬಂಧನದಲ್ಲಿರುವ ರಮೇಶ್ ಉಪಾಧ್ಯಾಯ ಇದರ ಕಾರ್ಯಾಧ್ಯಕ್ಷ. ಈತನೇ ಈ ಸಂಸ್ಥೆಗೂ ನಮ್ಮ ಸೇನೆಯ ನಡುವೆ ಸೇತುವೆ ನಿರ್ಮಿಸಲು ಆಯೋಜಿತನಾಗಿದ್ದವನು. ತನ್ನ ಗುರಿ ರಾಷ್ಟ್ರೀಯ ಪುನರುತ್ಥಾನ ಎಂದು ಹೇಳಿಕೊಳ್ಳುವ ಈತನ ಸಂಸ್ಥೆ, ಮುಸ್ಲಿಮರನ್ನು 'ಧರ್ಮ ಶತ್ರು'ಗಳು ಎಂದು ಕರೆಯುತ್ತದೆ. ಇದರ ಒಂದು ಕರಪತ್ರ, ಶತ-ಶತಮಾನಗಳಿಂದ ಲಕ್ಷಾಂತರ ಹಿಂದೂಗಳನ್ನು ಕಗ್ಗೊಲೆ ಮಾಡಲಾಗಿದೆ ಎಂದು ಹೇಳುತ್ತಾ, ಅದರ ವಿರುದ್ಧ ಪ್ರತೀಕಾರಕ್ಕೆ ಕರೆ ಕೊಡುತ್ತದೆ. ನಮ್ಮ ರಕ್ಷಣಾ ಖಾತೆಯನ್ನು ಯುದ್ಧ ಖಾತೆಯೆಂದೂ, ನಮ್ಮ ಸೇನೆಯನ್ನು ಭಾರತೀಯ ಸಶಸ್ತ್ರ ದಳವೆಂದೂ ಪುನರ್ನಾಮಕರಣ ಮಾಡಬೇಕೆಂದು ಅದು ಆಗ್ರಹಿಸುತ್ತದೆ.

ಇಂತಹ ಅಭಿನವ ಭಾರತ್ ಸಂಸ್ಥೆಯ ಪ್ರಚೋದನೆಯಲ್ಲಿ ನಡೆದಿರುವ ಈ

ಭಯೋತ್ಪಾದನಾ ಕಾರ್ಯಾಚರಣೆಗಳು ನಿಜವಾಗಿಯೂ ಆಘಾತಕಾರಿ ಎನ್ನಿಸಿರುವುದು ಅವುಗಳ ವಿಚ್ಛಿದ್ರಕಾರಿ ಪರಿಣಾಮಗಳಿಂದಷ್ಟೇ ಅಲ್ಲ, ಈ ಕಾರ್ಯಾಚರಣೆಗಳ ಹಿಂದೆ ಭಾರತೀಯ ಸೇನಾಪಡೆಯ ಕೆಲವು ಅಧಿಕಾರಿಗಳ ಕೈವಾಡವಿದೆ ಎಂಬುದು ಸಾಬೀತಾಗುತ್ತಿದೆ ಎಂಬುದರಿಂದಾಗಿ. ಅಷ್ಟೇ ಅಲ್ಲ, ಬಾಂಬ್ ತಯಾರಿಕೆಗೆ ಬೇಕಾದ ಸ್ಫೋಟಕ ವಸ್ತುವನ್ನೂ, ತಂತ್ರಜ್ಞಾನವನ್ನೂ ಮತ್ತು ಹಣವನ್ನೂ ಸೇನೆಯ ಬಾಬ್ತುಗಳಿಂದಲೇ ಕಳ್ಳ ಸಾಗಿಸಲಾಗಿದೆ ಎಂಬುದೂ ಕೂಡ. ಇದನ್ನು ಸಂಘ ಪರಿವಾರದ ಕೆಲವು ನಾಯಕರು ಬಹಿರಂಗವಾಗಿ, ಸರ್ಕಾರ ಮುಸ್ಲಿಮರನ್ನು ಓಲೈಸುವ ಕಾರ್ಯಕ್ರಮವಾಗಿ ಮುಸ್ಲಿಂ ಗುಂಪುಗಳ ಭಯೋತ್ಪಾದನೆಯನ್ನು ಪರಿಣಾಮಕಾರಿಯಾಗಿ ತಡೆಯಲು ವಿಫಲವಾಗುತ್ತಿರುವಾಗ, ದೇಶಸೇವೆಗೆಂದೇ ತರಬೇತು ಗೊಂಡಿರುವ ಸೈನ್ಯ ಅದರಿಂದ ಪ್ರಚೋದಿತವಾಗದಿರುತ್ತದೆಯೇ?–ಎಂದು ಸಮರ್ಥಿಸುತ್ತಿರುವ ರೀತಿಯಂತೂ, ದೇಶವನ್ನು ಅರಾಜಕತೆಗೆ ಸಿಲುಕಿಸುವ ಹುನ್ನಾರದಂತೆಯೇ ಕಾಣುತ್ತದೆ. ಈ ಸಂಘ ಪರಿವಾರದವರೇ ಅಧಿಕಾರದಲ್ಲಿದ್ದಾಗ ಮುಸ್ಲಿಂ ಗುಂಪುಗಳ ಭಯೋತ್ಪಾದನೆಯನ್ನು ಎಷ್ಟರ ಮಟ್ಟಿಗೆ ಅಡಗಿಸಲು ಸಮರ್ಥರಾಗಿದ್ದರು ಎಂಬುದನ್ನು ನಾವೆಲ್ಲ ನೋಡಿದ್ದೇವೆ. ಹಾಗಾಗಿ ಈ ಅವಿವೇಕಿಗಳು, ಇವರಷ್ಟೇ ಅವಿವೇಕಿಗಳಾದ ಪ್ರಗ್ಯಾಸಿಂಗ್ ಠಾಕೂರ್, ಲೆ||ಕ|| ಪುರೋಹಿತ್ ಮತ್ತು ಅವರ ಸಹಚರರನ್ನು ರಕ್ಷಿಸಲು ಮುಸ್ಲಿಮರ ಓಲೈಕೆ ಎಂಬ ತಮ್ಮ ಈಗಾಗಲೇ ಲಡಾಸೆದ್ದಿರುವ ರಾಜಕೀಯ ಅಸ್ತ್ರವನ್ನು ಬಳಸಿ, ಸೇನೆಯಲ್ಲಿ ಕೋಮುವಾದವನ್ನು ಪ್ರೋತ್ಸಾಹಿಸುವ ಮತ್ತು ಆ ಮೂಲಕ ರಾಷ್ಟ್ರದ ಸಂವಿಧಾನಾತ್ಮಕ ನಿರ್ವಹಣೆಯನ್ನು ಬುಡಮೇಲುಗೊಳಿಸುವಂತಹ ಮಾತಗಳನ್ನಾಡುತ್ತಿರುವುದನ್ನು ರಾಷ್ಟ್ರ ದ್ರೋಹವೆಂದೇ ಪರಿಗಣಿಸಬೇಕಿದೆ. ಸೇನಾ ಮುಖ್ಯಸ್ಥ ದೀಪಕ್ ಕಪೂರರೇನೋ, ಇದೊಂದು ವಿರಳ ಪ್ರಸಂಗ; ಇಂತಹ ಪ್ರಯತ್ನಗಳ ವಿರುದ್ಧ ಈಗ ಸೇನೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ ಮತ್ತು ಸೇನೆಯ ಸಂವಿಧಾನ ಬದ್ಧತೆ ಎಂದೂ ಧಕ್ಕೆಗೊಳಗಾಗಲಾರದು ಎಂದು ಭರವಸೆ ನೀಡಿದ್ದಾರೆ. ಅದರೆ ಸೇನಾ ಮುಖ್ಯಸ್ಥರ ಈ ಭರವಸೆಯನ್ನು ಸುಲಭವಾಗಿ ನಂಬುವಷ್ಟು ಪರಿಸ್ಥಿತಿ ಹೊರಗೆ ಸರಳವಾಗಿಲ್ಲ ಎಂಬುದೇ ಇಂದಿನ ನಿಜವಾದ ಆತಂಕವಾಗಿದೆ.

ಮೊದಲಾಗಿ, ಈ ರಾಷ್ಟ್ರದ ಮತ-ನಿರಪೇಕ್ಷ(ಸೆಕ್ಯುಲರ್) ಮತ್ತು ಸಂಸದೀಯ ಪ್ರಜಾಪ್ರಭುತ್ವವಾದಿ ಸಂವಿಧಾನದಲ್ಲಿ ನಂಬಿಕೆ ಇರದ ಈ ಹಿಂದೂವಾದಿಗಳಿಗೆ ಈಗಿರುವ ರಾಷ್ಟ್ರ ಬೇಕಿಲ್ಲ. ಹಾಗಾಗಿಯೇ ಇವರು ನಕ್ಸಲರಂತೆ, ಮುಸ್ಲಿಂ ಭಯೋತ್ಪಾದಕರಂತೆ ಈ ಸಾಂವಿಧಾನಿಕ ರಾಷ್ಟ್ರವನ್ನು ನಾಶ ಮಾಡಲು ಅವಕಾಶಗಳಿಗಾಗಿ ಕಾಯುತ್ತಿದ್ದಾರೆ. ಈ ಸಂಘ ಪರಿವಾರಕ್ಕೆ ರಾವಣನನ್ನೂ ಮೀರಿ ನೂರಾರು ತಲೆಗಳು! ಧರ್ಮ, ಶಿಕ್ಷಣ, ಆರೋಗ್ಯ, ಸಂಸ್ಕೃತಿ, ಹರಿಜನ-ಆದಿವಾಸಿ ಸೇವೆ, ರಾಜಕಾರಣ, ಪರಿಸರ ಸಂರಕ್ಷಣೆ, ಮಹಿಳೆ, ಯುವಜನ, ಮಕ್ಕಳು, ನಿವೃತ್ತ ಸೈನಿಕರು-ಹೀಗೆ 'ಸೇವೆ'ಗಾಗಿ ಇದು ತೊಡಗಿಸಿಕೊಳ್ಳದ ಕ್ಷೇತ್ರವೇ ಇಲ್ಲ. ಎಲ್ಲ ಕಡೆ ಈ ಸೇವೆಯ ತೆರೆಮರೆಯಲ್ಲಿ ನಡೆಯುತ್ತಿರುವುದು ಅಪಾರ ಹಣ ಸಂಗ್ರಹ, ಸೇಸೀಕೃತ ಸಂಘಟನೆ ಮತ್ತು ಹಿಂದೂಕರಣವೆಂಬ ಹೆಸರಿನ ಪುರೋಹಿತೀಕರಣ.

ಅತಿ ಸಂಪ್ರದಾಯವಾದದಿಂದ ಹಿಡಿದು ಅತಿಸುಧಾರಣಾವಾದದವರೆಗೆ ಹಲವು ನಾಲಗೆಗಳಲ್ಲಿ ಮಾತಾಡುತ್ತಾ ಎಲ್ಲ ತರದ ಜನರನ್ನು ಆಕರ್ಷಿಸುವ ತಂತ್ರವನ್ನು ಕರಗತ ಮಾಡಿಕೊಂಡಿರುವ ಈ ಪರಿವಾರ, ತನ್ನ ನಿಜ ಮುಖವನ್ನು ತೋರಿಸುವುದು ಅಧಿಕಾರಕ್ಕೆ ಬಂದಾಗ ಮಾತ್ರ! ಇದರ ಮಾದರಿಗಳನ್ನು ಇವರು ಸ್ವತಂತ್ರವಾಗಿ ಅಧಿಕಾರಕ್ಕೆ ಬರದಿದ್ದರೂ ನಡೆಸಿದ ಎನ್‌ಡಿಎ ಮತ್ತು ಈಗಿನ ನಮ್ಮ ಯಡಿಯೂರಪ್ಪ ಸರ್ಕಾರಗಳ ಅವಧಿಯಲ್ಲಿ ಈಗಾಗಲೇ ಕಂಡಿದ್ದೇವೆ ಮತ್ತು ಕಾಣುತ್ತಿದ್ದೇವೆ. ಸಂವಿಧಾನದ ಪರಿಷ್ಕರಣೆಯ ಪ್ರಯತ್ನ, ಇತಿಹಾಸ ಪುಸ್ತಕಗಳಲ್ಲಿ ನಿರ್ಣಾಯಕ ಬದಲಾವಣೆಗಳು, ದ್ವೇಷಪೂರಿತ ಪಠ್ಯಪುಸ್ತಕಗಳು, ವಿವಿಧ ಆಕರ್ಷಣೆ ಮತ್ತು ಆಮಿಷಗಳ ಮೂಲಕ ಸಮಾಜದ ಜಾತೀಕರಣ, ದೇವಸ್ಥಾನೀಕರಣ, ಪುರೋಹಿತರ ಮತ್ತು ಮಠಾಧಿಪತಿಗಳ ಮೇಲಾಟ ಇತ್ಯಾದಿ. ಇವೆಲ್ಲವೂ ಈವರೆಗೆ ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಯೋಗದ ಮೂಲಕ ಎದ್ದೋ ಬಿದ್ದೋ, ಅಷ್ಟೋ ಇಷ್ಟೋ ಸಾಧಿಸಲಾಗಿರುವ ವೈಚಾರಿಕತೆ, ವೈಜ್ಞಾನಿಕತೆ ಮತ್ತು ಸಮಾನತೆಗಳ ಮಾರಣಹೋಮಕ್ಕೆ ದಾರಿ ಮಾಡಿಕೊಡಬಲ್ಲವಷ್ಟೆ.

ಇವರಿಗೆ ಬಿಜೆಪಿ ಎಂಬ ರಾಜಕೀಯ ಪಕ್ಷವಿದ್ದರೂ, ತಮ್ಮ ಕೆಲಸಗಳಿಗಾಗಿ ಪಕ್ಷಬೇಧವಿಲ್ಲದೆ ಎಲ್ಲ ಕಡೆ ನುಸುಳಬಲ್ಲರು. ಬಿಜೆಪಿ ಅಧಿಕಾರವಿದ್ದಾಗಲಂತೂ ಸರ್ಕಾರಿ ಯಂತ್ರದ ಎಲ್ಲ ಭಾಗಗಳಲ್ಲೂ ನುಸುಳುವುದೇ ಇವರ ಪ್ರಮುಖ ಕೆಲಸ. ಇದನ್ನು ಅವರು ಧರ್ಮದ ಕೆಲಸವೆಂದೇ ಮಾಡುವುದರಿಂದ ಅವರಿಗೆ ಅಕ್ರಮ-ಸಕ್ರಮಗಳ ಪರಿವೆಯೇ ಇರುವುದಿಲ್ಲ! ಆದರೆ ಇದರ ದೊಡ್ಡ ಅಪಾಯವೆಂದರೆ, ಈ ಜನ ತಾವು ಹಿಂದೂ ತತ್ವವೆಂದು ನಂಬಿರುವ ಮೌಲ್ಯವೇ ಸಂವಿಧಾನಕ್ಕಿಂತ ದೊಡ್ಡದು ಮತ್ತು ಪವಿತ್ರ ಎಂದು ಭಾವಿಸುವುದು! ಹಾಗೆ ನೋಡಿದರೆ ಇವರು ಮುಸ್ಲಿಂ ಮೂಲಭೂತವಾದದ ಇನ್ನೊಂದು ಮುಖವೇ ಹೌದು. ಮುಸ್ಲಿಂ ಮೂಲಭೂತವಾದಿಗಳ ಬಗೆಗೇ ಸದಾ ಚಿಂತಿಸುತ್ತಾ, ಸದಾ ಅವರನ್ನೇ ದಿಟ್ಟಿಸಿ ನೋಡುತ್ತಾ, ಅವರಂತೆಯೇ ಆದವರಿವರು! ಅವರಿಗೆ 'ಷರಿಯತ್' ಸಂವಿಧಾನವಾಗಬೇಕಿದ್ದರೆ, ಇವರಿಗೆ ಮನುಸ್ಮೃತಿಯೋ ಭಗವದ್ಗೀತೆಯೋ ಅಥವಾ ಇಂಥ 'ಪುಣ್ಯ' ಗ್ರಂಥಗಳನ್ನಾಧರಿಸಿ ಇವರ 'ಗುರೂಜಿ'ಗಳು ಬರೆದಿರುವ 'ಹಿಂದೂ ಸಂಹಿತೆ'ಯೋ ಸಂವಿಧಾನವಾಗಬೇಕು! ಇಂತಹ 'ಸಂಹಿತೆ'ಯ ತುಂಬಾ ತುಂಬಿರುವುದು ಅಸಹನೆ, ದ್ವೇಷ, ಹಿಂಸೆ, ಭಯಗಳನ್ನಾಧರಿಸಿದ ಶಿಸ್ತು ಹಾಗೂ ಸಾಮಾಜಿಕ ವ್ಯವಸ್ಥೆಯ ಕಲ್ಪನೆಗಳು; ಮತ್ತು ಮಧ್ಯಯುಗೀನ ನಂಬಿಕೆ ಹಾಗೂ ಆಚರಣೆಗಳನ್ನು ಆಧರಿಸಿದ ಜನತೆಯ ಶ್ರೇಣೀಕರಣ.

ಈಗಿರುವ ವ್ಯವಸ್ಥೆ ಕೆಟ್ಟದು. ಬುದ್ಧನ 'ಕರುಣೆ'ಯ ಉಪದೇಶಗಳನ್ನು ಕೇಳಿ ಹೇಡಿಗಳಾದ ಹಿಂದೂಗಳು ಪರಕೀಯರ ದಾಳಿಗೀಡಾದ ಕಾರಣಗಳಿಂದಾಗಿ ಸೃಷ್ಟಿಯಾಗಿರುವ ಈ ಕೆಟ್ಟ ವ್ಯವಸ್ಥೆಗೆ, ಹಿಂದೂಗಳ ಸ್ವಾಭಿಮಾನ ಸ್ಫೋಟವೇ ಉತ್ತರ. ಇಂತಹ ಬಹು ಜಡ, ಸ್ಥೂಲ, ಸರಳೀಕೃತ ಮತ್ತು ದುರುದ್ದೇಶಪೂರಿತ ಪ್ರಚಾರ ಕಾರ್ಯಕ್ರಮ ಸಹಜವಾಗಿಯೇ ಅಮಾಯಕರನ್ನು, ಈ ವ್ಯವಸ್ಥೆಯಿಂದ ನೊಂದು ದಿಕ್ಕೇ ತೋಚದಾಗಿರುವವರನ್ನು ಸುಲಭವಾಗಿ

ಸೆಳೆಯುತ್ತದೆ. ಸಂಘ ಪರಿವಾರ ತಾನು 'ಸೇವೆ' ಸಲ್ಲಿಸುತ್ತಿರುವ ಎಲ್ಲ ಕ್ಷೇತ್ರಗಳಲ್ಲಿ ಮಾಡುತ್ತಿರುವುದೇ ಈ ಪ್ರಚಾರ ಕಾರ್ಯಕ್ರಮವನ್ನು. ಸರ್ಕಾರಿ ಯಂತ್ರದೊಳಕ್ಕೆ ನುಸುಳಿ ಮಾಡುವುದೂ, ಇದೇ ಕೆಲಸವನ್ನು. ಇಂದು ನಮ್ಮ ಕಾರ್ಯಾಂಗ, ಶಾಸಕಾಂಗ ಮತ್ತು ಸ್ವಲ್ಪ ಮಟ್ಟಿಗೆ ನ್ಯಾಯಾಂಗವೂ ಇಂತಹ ಪ್ರಚಾರ ಕಾರ್ಯಕ್ರಮದ ಸುಳಿಗೆ ಸಿಕ್ಕಿ, ನಮ್ಮ ರಾಷ್ಟ್ರೀಯ ಧರ್ಮವೆನಿಸಿದ ಮತ-ನಿರಪೇಕ್ಷ ಕರ್ತವ್ಯ ಪಾಲನಾ ನೀತಿಗೆ ಚ್ಯುತಿ ತಂದುಕೊಂಡಿರುವುದನ್ನು ನಾವು ಹಲವಾರು ಬಾರಿ ಗಮನಿಸಿದ್ದೇವೆ. ಕೋಮು ಗಲಭೆಗಳನ್ನು ನಿರ್ವಹಿಸಲು ಕೆಲವು ವರ್ಷಗಳ ಹಿಂದೆಯೇ ಪೋಲೀಸರಿಗೆ ಬದಲಾಗಿ, ವಿಶೇಷ ದಳವನ್ನು ನಿರ್ಮಿಸಬೇಕಾದ ಪರಿಸ್ಥಿತಿ ಉಂಟಾದುದೂ ಇದೇ ಕಾರಣದಿಂದಲೇ. ಸಂಘ ಪರಿವಾರದ ಪ್ರಭಾವಕ್ಕೆ ಸಿಕ್ಕಿರುವ ರಾಜ್ಯಗಳ ಪೋಲೀಸ್ ದಳಗಳಂತೂ ಅಲ್ಪಸಂಖ್ಯಾತರ ಪಾಲಿಗೆ ಶತ್ರುಪಡೆಗಳೇ ಆಗಿಬಿಟ್ಟಿವೆ. ಮೊನ್ನೆ ಒರಿಸ್ಸಾದ ಕಂಧಮಹಲ್‌ನಲ್ಲಿ ಮತ್ತು ನಮ್ಮ ದಕ್ಷಿಣ ಕನ್ನಡದಲ್ಲಿ ನಡೆದ ಮತಾಂತರ ಗಲಭೆಗಳಲ್ಲಿ ಇದರ ಪರಿಣಾಮಗಳನ್ನು ಕಣ್ಣಾರೆ ನೋಡಿದ್ದೇವೆ.

ಇದು ನೇರವಾಗಿ ನಡೆಯುವ ಕೆಲಸವಲ್ಲ. ಒಂದು ವಾತಾವರಣವನ್ನು ನಿರ್ಮಿಸಿ ಅಮಾಯಕವಾಗಿ ಮಾಡಿಸಲಾಗುವ ಕೆಲಸ. ಇದನ್ನು ಆಗು ಮಾಡಿಸುವಲ್ಲಿ ನಮ್ಮ ಮತ-ನಿರಪೇಕ್ಷವೆಂದು ಹೇಳಿಕೊಳ್ಳುವ ಸಂಘಟನೆಗಳ ಮತ್ತು ರಾಜಕೀಯ ಪಕ್ಷಗಳ ಅಸ್ಥಿರ ಮತ್ತು ಅಪ್ರಾಮಾಣಿಕ ನೀತಿ-ನಿರ್ಧಾರಗಳೂ ದೊಡ್ಡ ಪಾತ್ರ ವಹಿಸಿವೆ ಎಂಬುದೂ ನಿಜ. ಉದಾಹರಣೆಗೆ ೨೦೦೬ರಲ್ಲಿ ನಾಂದೇಡ್‌ನಲ್ಲಿ ಆರ್.ಎಸ್.ಎಸ್. ಅಭಿಮಾನಿಯೊಬ್ಬನ ಮನೆಯಲ್ಲಿ ಸಂಭವಿಸಿದ ಅಕಾಲಿಕ ಬಾಂಬ್ ಸ್ಫೋಟದಲ್ಲಿ ಸಂಘ ಪರಿವಾರದ ಇಬ್ಬರು ಸದಸ್ಯರು ಸತ್ತು, ಸ್ಫೋಟದ ಸ್ಥಳದಲ್ಲಿ ಮುಸ್ಲಿಮರ ಕೃತಕ ಗಡ್ಡ, ಟೋಪಿಗಳು ಇತ್ಯಾದಿ ಸಿಕ್ಕಿದಾಗಲೇ ಅದರ ತನಿಖೆ ಆರಂಭಿಸಿದ್ದರೆ, ಈ ಹಿಂದೂ ಗುಂಪಿನ ಭಯೋತ್ಪಾದನೆಯನ್ನು ಆರಂಭದಲ್ಲೇ ಚಿವುಟಿ ಹಾಕಬಹುದಿತ್ತು. ಆದರೆ ಆಗ ವಿಚಾರಣೆಯನ್ನು ಅರ್ಧಕ್ಕೆ ಕೈಬಿಟ್ಟು, ಈಗ ರಾಜ್ಯಗಳ ವಿಧಾನಸಭಾ ಚುನಾವಣೆಗಳ ಹೊತ್ತಿಗೆ ಇದ್ದಕ್ಕಿದ್ದಂತೆ ಈ ತನಿಖೆಯನ್ನು ಚುರುಕುಗೊಳಿಸುವುದರ ಅರ್ಥವಾದರೂ ಏನು? ಅಲ್ಲದೆ ನಾಶಿಕ್ ಮತ್ತು ಪುಣೆಗಳಲ್ಲಿ ಕೆಲವು ನಿವೃತ್ತ ಸೇನಾಧಿಕಾರಿಗಳು ಮತೀಯ ಪ್ರಚೋದನೆಗಳ ಆಧಾರದ ಮೇಲೆ ಖಾಸಗಿ ಮಿಲಿಟರಿ ತರಬೇತಿ ಶಾಲೆಗಳನ್ನು ನಡೆಸುತ್ತಿದ್ದುದನ್ನೂ ಈವರೆಗೆ ಏಕೆ ಗಮನಿಸಲಾಗಿರಲಿಲ್ಲ? ಈ ಶಾಲೆಗಳೇ ಇಂದು ಮಧ್ಯ ಭಾರತದಲ್ಲಿ ಭಯೋತ್ಪಾದನೆಯ ಹಿಂದೂ ಗುಂಪುಗಳು ಹುಟ್ಟಿಕೊಳ್ಳಲು ಭೂಮಿಯನ್ನು ಫಲವತ್ತಾಗಿಸುತ್ತಿರುವುದು.

ಸಂಘ ಪರಿವಾರ ಎಲ್ಲ ಕಡೆ ಮತ್ತು ಎಲ್ಲ ನೆಲೆಗಳಲ್ಲಿ ನಿರ್ಮಿಸಿರುವ ಹಿಂದೂವಾದಿ ವಾತಾವರಣ ಇಂದು ಎಲ್ಲ ಪಕ್ಷಗಳನ್ನೂ ಧೃತಿಗೆಡಿಸಿದೆ. ಅವುಗಳ ಮತ-ನಿರಪೇಕ್ಷ ನೀತಿ ಬದ್ಧತೆಯನ್ನು ಬುಡಮಟ್ಟ ಅಲ್ಲಾಡಿಸಿವೆ. ತಮ್ಮ ತಳ ಮುಟ್ಟಿದ ಭ್ರಷ್ಟತೆಯಿಂದಾಗಿ ವೈಚಾರಿಕವಾಗಿ ದಿವಾಳಿಯೆದ್ದು ಹೋಗಿರುವ ಈ ಪಕ್ಷಗಳು, ಈಗ ತಾವೂ ಸ್ವಲ್ಪ

ಹಿಂದೂವಾದವನ್ನು ಬಳಸಿ ರಾಜಕೀಯ ಉಸಿರು ಗಳಿಸುವ ದುಃಸ್ಥಿತಿಗೆ ಈಡಾಗಿವೆ. ಹಾಗಾಗಿಯೇ, ಕೆಲವು ದಿನಗಳ ಹಿಂದೆ ದೆಹಲಿ ವಿಶ್ವವಿದ್ಯಾಲಯದಲ್ಲಿ ನಡೆದ ವಿಚಾರ ಸಂಕಿರಣವೊಂದರ ಸಂದರ್ಭದಲ್ಲಿ ಎಬಿವಿಪಿಯ ಕಾರ್ಯಕರ್ತನೊಬ್ಬ ಸಂಸತ್ ಮೇಲಿನ ದಾಳಿ ಪ್ರಕರಣದಲ್ಲಿ ನಮ್ಮ ಸರ್ವೋಚ್ಛ ನ್ಯಾಯಾಲಯದಿಂದಲೇ ನಿರಪರಾಧಿ ಎಂದು ಘೋಷಿತರಾಗಿರುವ ಪ್ರೊ॥ ಎಸ್. ಆರ್. ಗಿಲಾನಿ ಅವರ ಮುಖದ ಮೇಲೆ ಉಗುಳಿದ ಅಸಭ್ಯ ಮತ್ತು ಧಾರ್ಷ್ಟ್ಯದ ವರ್ತನೆ ನಮ್ಮ ಯಾವ ರಾಜಕೀಯ ಪಕ್ಷಗಳಲ್ಲೂ ಆತಂಕ ಮತ್ತು ಪ್ರತಿಭಟನೆಯನ್ನು ಹುಟ್ಟಿಸದಂತಾಗಿದೆ! ಇದೇ ಸಂಘ ಪರಿವಾರದ ಅತಿ ದೊಡ್ಡ ರಾಜಕೀಯ ಸಾಧನೆ ಮತ್ತು ರಾಷ್ಟ್ರದ ಮುಂದೆ ಒಡ್ಡಿರುವ ಅತಿ ದೊಡ್ಡ ಅಪಾಯ. ಹಿಂದೂ ಗುಂಪಿನ ಭಯೋತ್ಪಾದನೆಯ ಆರೋಪ ಇನ್ನೂ ಸಾಬೀತಾಗಿಲ್ಲದಿರುವಾಗ ಈ ಆತಂಕ ಅನಗತ್ಯ ಎಂದು ಕೆಲವರು ವಾದಿಸಬಹುದು. ಆದರೆ ಮುಸ್ಲಿಂ ಭಯೋತ್ಪಾದನೆಯ ಬಹಳಷ್ಟು ಪ್ರಕರಣಗಳೂ ಇನ್ನೂ ಅಂತಿಮವಾಗಿ ಸಾಬೀತಾಗಿಲ್ಲ ಎಂದು ಇವರಿಗೆ ಹೇಳಬೇಕಾಗಿದೆ. ಮುಸ್ಲಿಂ ಭಯೋತ್ಪಾದನೆಗೆ ಹೊಣೆ ಘೋಷಿಸಿಕೊಳ್ಳುವ ಗುಂಪುಗಳಾದರೂ ಇವೆ. ಆದರೆ ಈ ಹಿಂದೂ ಭಯೋತ್ಪಾದಕ ಗುಂಪುಗಳು ಆ ಹೊಣೆಯನ್ನೂ ಘೋಷಿಸಿಕೊಳ್ಳದಷ್ಟು ಹೇಡಿಗಳಾಗಿವೆ. ಆದರೂ ಅವುಗಳ ವಕ್ತಾರರ ವೀರಾವೇಶ ಹೇಳತೀರದು!

ಇಂತಹ ಸಮಯದಲ್ಲಿ, ನಮ್ಮ ಅತಿ ದೊಡ್ಡ ಮತ-ನಿರಪೇಕ್ಷ ರಾಜಕೀಯ ಪಕ್ಷವೆಂದೂ, ನಮ್ಮ ರಾಷ್ಟ್ರೀಯ ಹೋರಾಟದ ಪರಂಪರೆಯ ವಾರಸುದಾರನೂ ಎಂದು ಹೇಳಲಾಗುವ ಕಾಂಗ್ರೆಸ್ ಇಂದು ಮನಮೋಹನ ಸಿಂಗ್ ಎಂಬ ಸಂಪೂರ್ಣ ಅರಾಜಕೀಯ ವ್ಯಕ್ತಿಯ ಮತ್ತು ಸೋನಿಯಾ ಗಾಂಧಿ ಎಂಬ ರಾಷ್ಟ್ರೀಯ ಪರಂಪರೆಯ ಸ್ಮೃತಿಯಾಗಲೀ, ರಾಜಕೀಯ ಪ್ರಬುದ್ಧತೆಯಾಗಲೀ ಇಲ್ಲದ ವಿದೇಶಿ ಮಹಿಳೆಯ ನಾಯಕತ್ವಕ್ಕೆ ಸಿಕ್ಕಿರುವುದು ಪರಿಸ್ಥಿತಿಯನ್ನು ಇನ್ನಷ್ಟು ಆತಂಕಕಾರಿಗೊಳಿಸಿದೆ. ಆದರೂ, ಸೇನೆಯೊಳಕ್ಕೆ ತನ್ನ ವಿಚ್ಛಿದ್ರಕಾರಿ ಸಿದ್ಧಾಂತವನ್ನು ನುಸುಳಿಸಲು ಹಿಂದೂ ಮೂಲಭೂತವಾದಿಗಳು ಪ್ರಯತ್ನಗಳನ್ನು ನಡೆಸುತ್ತಿರುವ ಈ ಹೊತ್ತಿನಲ್ಲಿ; ಬಿಜೆಪಿಯ ಉನ್ನತ ನಾಯಕತ್ವವೂ ಸೇರಿದಂತೆ ರಾಷ್ಟ್ರದ ಎಲ್ಲ ರಾಜಕೀಯ ಪಕ್ಷಗಳೂ ಈ ಸಂಬಂಧ ಎಲ್ಲ ರಾಜಕೀಯ ಭಿನ್ನಾಭಿಪ್ರಾಯಗಳನ್ನು ತೊರೆದು, ಇಂತಹ ಪ್ರಯತ್ನಗಳನ್ನು, ಮತ್ತೂ ಮುಖ್ಯವಾಗಿ, ಅದರ ಸಮರ್ಥನೆಯನ್ನು ರಾಷ್ಟ್ರಘಾತುಕ ಎಂದು ಸ್ಪಷ್ಟ ಶಬ್ದಗಳಲ್ಲಿ ಖಂಡಿಸಬೇಕಿದೆ.

ಮುಸ್ಲಿಂ ಭಯೋತ್ಪಾದನೆಯೂ ಸೇರಿದಂತೆ ಹಲವು ರೀತಿಯ ಹಿಂಸಾಚಾರಗಳಿಗೆ ಸಿಕ್ಕಿ ತತ್ತರಿಸುತ್ತಿರುವ ನಮ್ಮ ರಾಷ್ಟ್ರ, ಇನ್ನು ಪ್ರತೀಕಾರದ ಹಿಂದೂ ಭಯೋತ್ಪಾದನೆಗೆ ಸಿಕ್ಕರೆ ಮುಗಿದಂತೆಯೇ. ಹೀಗೆಯೇ ಹಲವು ರೀತಿಯ ಹಿಂಸಾಚಾರಗಳಿಗೆ ಸಿಕ್ಕ ಪಾಕಿಸ್ಥಾನವನ್ನು ವಿಫಲ ರಾಷ್ಟ್ರ (Failed State) ಎಂದು ಕರೆಯತೊಡಗಿದ್ದ ನಾವು ಈಗ ಹಿಂದೂ ಭಯೋತ್ಪಾದನೆಯನ್ನು ಸಮರ್ಥಿಸತೊಡಗಿದರೆ ಮುಟ್ಟುವುದಾದರೂ ಎಲ್ಲಿಗೆ? ತಮ್ಮನ್ನು ಮತ-ನಿರಪೇಕ್ಷವೆಂದು ಕರೆದುಕೊಳ್ಳುವ ರಾಜಕೀಯ ಪಕ್ಷಗಳು ತಮ್ಮ ಈವರೆಗಿನ ಪಾಪಗಳ

ಪರಿಹಾರಾರ್ಥವಾಗಿಯಾದರೂ; ತಾತ್ಕಾಲಿಕ ಚುನಾವಣಾ ಸೋಲುಗಳನ್ನು ಅನುಭವಿಸಿದರೂ ಸರಿ, ದೀರ್ಘಕಾಲಿಕ ರಾಷ್ಟ್ರ ಹಿತದ ದೃಷ್ಟಿಯಿಂದ ತಮ್ಮ ಮತ-ನಿರಪೇಕ್ಷ ನೀತಿಯನ್ನು ದಿಟ್ಟವಾಗಿ, ಸ್ಪಷ್ಟವಾಗಿ, ಅಸಂದಿಗ್ಧವಾಗಿ ಎತ್ತಿ ಹಿಡಿಯುವುದು ಅತ್ಯಗತ್ಯವಾಗಿದೆ. ಅವುಗಳಿಗೆ ತಮ್ಮನ್ನು ತಾತ್ವಿಕವಾಗಿ ಶುದ್ಧೀಕರಿಸಿಕೊಳ್ಳಲೇಬೇಕಾದ ಕಾಲವೀಗ ಬಂದಿದೆ.

ನಿಜವಾಗಿಯೂ ಇದು ನಮ್ಮ ಎಲ್ಲ ರಾಜಕೀಯ ಪಕ್ಷಗಳ ಅಗ್ನಿ ಪರೀಕ್ಷೆಯ ಕಾಲ. ಹಾಗೆ ನೋಡಿದರೆ ಇದು ರಾಷ್ಟ್ರಕ್ಕೇ ಅಗ್ನಿ ಪರೀಕ್ಷೆಯ ಕಾಲ.

(೨೮ ನವೆಂಬರ್, ೨೦೦೮)

■

೩೦. ನಕ್ಸಲ್ ಚಳುವಳಿ: ಸಮಾಜದ್ದೇ ಬಳುವಳಿ?

ಈ ನವೆಂಬರ್ ೧೯ರ ಬೆಳಗಿನಜಾವ ಮುವ್ವರು ನಕ್ಸಲರು ಪೋಲೀಸರ ಗುಂಡಿಗೆ ಬಲಿಯಾಗಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಹೊರನಾಡು ಸಮೀಪ ಮಾವಿನ ಹೊಲದ ಬಳಿ ಪೋಲೀಸರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಹತರಾದ ಈ ಮುವ್ವರೂ ಮಧ್ಯ ವಯಸ್ಸನ್ನೂ ದಾಟದ ಎಳೆ ಜೀವಗಳು. ಅಭಿಷೇಕ್ ಅಲಿಯಾಸ್ ವೆಂಕಟೇಶ್ ಎಂದು ಗುರುತಿಸಲಾಗಿರುವ ತರುಣನ ವಯಸ್ಸು ಕೇವಲ ಹತ್ತೊಂಭತ್ತು ವರ್ಷಗಳು... ಈ ಸಾವುಗಳೊಂದಿಗೆ, ರಾಜ್ಯದ ಮಲೆನಾಡಿನಲ್ಲಿ ನಕ್ಸಲರಿಗೆ ಸಂಬಂಧಿಸಿದ ಹಿಂಸಾಚಾರದಲ್ಲಿ ಕಳೆದ ೫ ವರ್ಷಗಳಲ್ಲಿ ಒಟ್ಟು ೧೩ ಜನ ಬಲಿಯಾದಂತಾಗಿದೆ. ಇವರಲ್ಲಿ ಕರ್ನಾಟಕದಲ್ಲಿ ನಕ್ಸಲ್ ಚಳುವಳಿಯನ್ನು ಹುಟ್ಟು ಹಾಕಿದ ಸಾಕೇತ್ ರಾಜನ್ ಸೇರಿದಂತೆ ಏಳು ಜನ ನಕ್ಸಲರಾಗಿದ್ದರೆ, ಮುವ್ವರು ಅವರಿಗೆ ಆಶ್ರಯ ನೀಡಿದ್ದರೆಂದು ಪೋಲೀಸರಿಂದ ಸಂಶಯಕ್ಕೊಳಗಾಗಿದ್ದವರು. ಇನ್ನಿಬ್ಬರು ಪೋಲೀಸ್ ಮಾಹಿತಿದಾರರರೆಂದು ನಕ್ಸಲರಿಂದ ಸಂಶಯಕ್ಕೊಳಪಟ್ಟು ಕೊಲ್ಲಲ್ಪಟ್ಟವರು. ಇನ್ನೋರ್ವ ಮೊನ್ನೆಯ ಗುಂಡಿನ ಚಕಮಕಿಯಲ್ಲಿ ಹತನಾದ ನಕ್ಸಲ್ ನಿಗ್ರಹ ದಳದ ಪೋಲೀಸ್ ಪೇದೆ ಗುರುಪ್ರಸಾದ್.

ನಕ್ಸಲ್ ಚಳುವಳಿಯಿಂದ ಪೀಡಿತವಾಗಿರುವ ಇತರ ರಾಜ್ಯಗಳಲ್ಲಿ ಈ ಚಳುವಳಿಯಿಂದಾಗಿ ಸಂಭವಿಸುತ್ತಿರುವ ಹಿಂಸಾಚಾರಕ್ಕೆ ಹೋಲಿಸಿದರೆ, ಇವೇನೂ ಅಷ್ಟು ಆತಂಕಕಾರಿಯಾದ ಅಂಕಿ ಅಂಶಗಳಂತೆ ತೋರುವುದಿಲ್ಲ. ಆದರೆ ಈ ಚಳುವಳಿ ಕರ್ನಾಟಕದಲ್ಲಿ ಹೀಗೇ ಬೆಳೆದರೆ ಆಗಬಹುದಾದ ಅನಾಹುತ ಮಾತ್ರ ಭೀಕರವಾದುದು. ಅದನ್ನು ನಾವೀಗ ಆಂಧ್ರ, ಛತ್ತೀಸಘಡ, ಒರಿಸ್ಸಾ, ಝಾರ್ಖಂಡ್ ಮತ್ತು ಬಿಹಾರಗಳಲ್ಲಿ ನೋಡುತ್ತಿದ್ದೇವೆ. ಈಗ ಈ ರಾಜ್ಯಗಳಲ್ಲಿ ಭದ್ರವಾಗಿ ನೆಲೆಗೊಂಡಿರುವ ನಕ್ಸಲ್ ಗುಂಪುಗಳು ಈ ರಾಜ್ಯಗಳ ಅರಣ್ಯ ಪ್ರದೇಶಗಳ ಜನತೆಯನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡು, ಅಲ್ಲಿ ಬಂದೂಕಿನ ರಾಜ್ಯಗಳನ್ನು ಸ್ಥಾಪಿಸಿವೆ. ಇವರ ಮತ್ತು ಪೋಲೀಸರ ಬಂದೂಕಗಳ ನಡುವೆ ಸಿಕ್ಕ ಈ ಜನತೆ ಯಾವ ನಾಗರಿಕ ಹಕ್ಕು ಮತ್ತು ಸೌಲಭ್ಯಗಳಿಗೂ ಬಾಧ್ಯರಾಗದೆ, ಅಸಹಾಯಕ ಸ್ಥಿತಿಯಲ್ಲಿದ್ದಾರೆ. ಇನ್ನು ಈ ಗುಂಪುಗಳೊಳಗೇ ಸೈದ್ಧಾಂತಿಕ ಅಥವಾ ವಸೂಲಿ ಸಂಬಂಧಿತ ಭಿನ್ನಾಭಿಪ್ರಾಯಗಳಿಂದಾಗಿ ಸೃಷ್ಟಿಯಾಗುವ ಒಳಗುಂಪುಗಳ ನಡುವೆ ನಡೆಯುವ ಕದನಗಳ ಮಧ್ಯೆ ಸಿಕ್ಕಿ ಹತರಾಗುವ ಅಮಾಯಕರ ಸುದ್ದಿ, ನಾಗರಿಕ ಲೋಕಕ್ಕೆ ತಲುಪುವುದೇ ಇಲ್ಲ. ನಕ್ಸಲ್ ಹಿಂಸಾಚಾರಕ್ಕೆ

ಅತಿ ಹೆಚ್ಚು ಬಲಿಯಾಗುತ್ತಿರುವವರು ಭ್ರಷ್ಟ ರಾಜಕಾರಣಿಗಳೂ ಅಲ್ಲ, ದುಷ್ಟ ಜಮೀನುದಾರರೂ ಅಲ್ಲ;ಬದಲಿಗೆ, ಕರ್ತವ್ಯ ನಿರತ ಬಡ ಪೋಲಿಸ್ ಸಿಬ್ಬಂದಿ. ಇಂತಹ ಮೊದಲ ಬಲಿ, ಕರ್ನಾಟಕದ ನಕ್ಸಲರಿಂದ ಈಗ ದಾಖಲಾಗಿದೆ. ಇದು ಈ ನಕ್ಸಲರು ಈಗ ಎಷ್ಟರ ಮಟ್ಟಿಗೆ ಶಸ್ತ್ರಸಜ್ಜಿತರಾಗಿದ್ದಾರೆ ಎಂಬುದನ್ನು ತೋರಿಸುತ್ತದೆ. ಈ ಸೂಚನೆಯನ್ನು ಆಧರಿಸಿ, ನಕ್ಸಲ್ ನಿಗ್ರಹ ಪೋಲೀಸ್ ಕಾರ್ಯಾಚರಣೆ ಇನ್ನಷ್ಟು ತೀವ್ರ ಮತ್ತು ವ್ಯಾಪಕವಾದರೆ ಆಶ್ಚರ್ಯವಿಲ್ಲ. ಇದಂತೂ ಕರ್ನಾಟಕದ ಸಾರ್ವಜನಿಕ ಶಾಂತಿಯ ಹಿತದೃಷ್ಟಿಯಿಂದ ಶುಭ ಸೂಚನೆಯಲ್ಲ.

ಕರ್ನಾಟಕದ ಮಟ್ಟಿಗಂತೂ, ನಕ್ಸಲರು ಹತರಾದಾಗಲೆಲ್ಲ ಸಾಮಾನ್ಯ ಜನ ಮೊದಲ ಪ್ರತಿಕ್ರಿಯೆಯಾಗಿ ಅವರ ಬಗ್ಗೆ ಮರುಗುವುದೇ ಹೆಚ್ಚು. ಏಕೆಂದರೆ ಅವರೆಲ್ಲ ಯಾವುದೇ ವೈಯುಕ್ತಿಕ ಪ್ರತಿಫಲಾಪೇಕ್ಷೆ ಇಲ್ಲದೆ ತಮ್ಮ ಪರವಾಗಿ ಅನ್ಯಾಯಗಳ ವಿರುದ್ಧ ಪ್ರತಿಭಟಿಸುತ್ತಾ, ಸಮಗ್ರ ಸಾಮಾಜಿಕ ಬದಲಾವಣೆಗಾಗಿ ಕಾರ್ಯಾಚರಣೆ ನಡೆಸುತ್ತಾ ಪ್ರಾಣ ತೆತ್ತವರು ಎಂದವರು ಭಾವಿಸುತ್ತಾರೆ. ಅವರಲ್ಲಿ ಬಹಳಷ್ಟು ಜನ ಬಡವರ ಮಕ್ಕಳು. ಈ ಬಡತನಕ್ಕೆ ಈಗಿರುವ ರಾಜಕೀಯ ವ್ಯವಸ್ಥೆಯಿಂದ ಪರಿಹಾರ ಅಸಾಧ್ಯವೆಂದು ತೀರ್ಮಾನಿಸಿ, ಈ ವ್ಯವಸ್ಥೆಗೆ ಕಾರಣರಾಗಿರುವ ವರ್ಗ ಶತ್ರುಗಳನ್ನು ಹತ ಮಾಡುವ ಮೂಲಕ ಹೊಸ ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸಬಹುದೆಂದು ನಂಬಿದ ಅರೆ-ಮುಗ್ಧರಿವರು. ಇಂದಿನ ರಾಜಕೀಯ ವ್ಯವಸ್ಥೆ ಸಾಂವಿಧಾನಿಕ ಹೋರಾಟಗಳ ಮೂಲಕ ರಿಪೇರಿಯ ಸಾಧ್ಯತೆಗಳನ್ನು ಅಲ್ಲಗೆಳೆಯುವಷ್ಟು ಅವನತಿಗೊಂಡಿದೆ, ನಿಜ. ಆದರೆ ಈ ರಾಜಕೀಯ ವ್ಯವಸ್ಥೆಯ ಜಾಗದಲ್ಲಿ ಇವರು ತರಬಯಸುವ ವ್ಯವಸ್ಥೆ ಇದಕ್ಕಿಂತ ಹೆಚ್ಚು ಘೋರವಾಗಿರುವ ಮತ್ತು ಅದರ ವಿರುದ್ಧ ದನಿ ಎತ್ತುವ ಅವಕಾಶವೇ ಇಲ್ಲದಿರುವ ವ್ಯವಸ್ಥೆಯಾಗಿರುವ ಸಾಧ್ಯತೆಯೇ ಹೆಚ್ಚು. ಆಲೋಚನೆ ಮತ್ತು ವಿವೇಕ ಕೊನೆಗೊಂಡಾಗ ಆರಂಭವಾಗುವುದೆಂದು ಹೇಳಲಾಗುವ ಹಿಂಸೆ ಸಾಮಾಜಿಕ ಬದಲಾವಣೆಯ ಒಂದು ಅಂಗೀಕಾರ್ಹ ಅಸ್ತ್ರ ಎಂಬ ಅವರ ನಂಬಿಕೆಯಲ್ಲೇ ಈ ಸಾಧ್ಯತೆ ಅಂತರ್ಗತವಾಗಿದೆ.

ಆದರೆ ಈ ಚಳುವಳಿಯಿಂದ ಆಕರ್ಷಿತರಾಗುವ ಯುವಜನ ತಾವು ಕಟ್ಟಬೇಕೆಂದಿರುವ ಹೊಸ ಬಗೆಯ ರಾಜಕಾರಣದ ಬಗ್ಗೆ ಇಷ್ಟು ಆಳವಾಗಿ ಯೋಚಿಸುವ ವ್ಯವಧಾನವಿಲ್ಲದವರು. ಕರ್ನಾಟಕದಲ್ಲಿ ನಕ್ಸಲ್ ಚಳುವಳಿಗೆ ಒಂದು ಸಿದ್ಧಾಂತ ಮತ್ತು ಸಂಘಟನಾ ಸ್ವರೂಪವನ್ನು ನೀಡಿದ ಸಾಕೇತ್ ರಾಜನ್, ಜಾಗತಿಕ ರಾಜಕೀಯ ಹೋರಾಟಗಗಳ ಬಗೆಗೆ ಮತ್ತು ನಿರ್ದಿಷ್ಟವಾಗಿ ಕರ್ನಾಟಕದ ರಾಜಕೀಯ ಇತಿಹಾಸದ ಬಗೆಗೆ ತನ್ನದೇ ಒಳನೋಟಗಳುಳ್ಳ ಆಳವಾದ ಪಾಂಡಿತ್ಯ ಹೊಂದಿದ್ದ ಪ್ರಚಂಡ ಬುದ್ಧಿಜೀವಿ. ಹಾಗೇ ನಕ್ಸಲ್ ವಿಚಾರಧಾರೆಯೊಂದಿಗೆ ನಾವು ಸಾಮಾನ್ಯವಾಗಿ ಗುರುತಿಸುವ ಕ್ರುದ್ಧತೆಯನ್ನು ಒಂದಿಷ್ಟೂ ಬಹಿರಂಗವಾಗಿ ತೋರಿಸಿಕೊಳ್ಳದ 'ಸಜ್ಜನ' ಈತ. ಹಾಗಾಗಿಯೇ ಕರ್ನಾಟಕದ ಅನೇಕ ಸಜ್ಜನ ಹುಡುಗ-ಹುಡುಗಿಯರು ಎಲ್ಲ ಉದಾರವಾದಿ ಜನಪರ ಚಳುವಳಿಗಳು ತಮ್ಮ ವಿಶ್ವಾಸಾರ್ಹತೆ ಕಳೆದುಕೊಂಡು ಕುಸಿದು

ಬಿದ್ದಿದ್ದ ಸಂದರ್ಭದಲ್ಲಿ ಈತನ ಪ್ರಭಾವಕ್ಕೆ ಸಿಕ್ಕಿ, ತಮ್ಮ ಯೌವ್ವನದ ಆದರ್ಶಪ್ರಿಯತೆಯ ಒತ್ತಡದಲ್ಲಿ ಅವಸರದ ತೀರ್ಮಾನಗಳನ್ನು ಕೈಗೊಂಡಿದ್ದು ಸಹಜವೇ ಆಗಿತ್ತು.

ಇದಕ್ಕೆ ಇನ್ನೊಂದು ಕಾರಣವೂ ಉಂಟು. ಬಲಪಂಥೀಯ ಅತಿವಾದಿಗಳಂತೆ, ಈ ಎಡ ಪಂಥೀಯ ಅತಿವಾದಿಗಳೂ ಒಮ್ಮೆಗೇ ನೇರ ಕಾರ್ಯಾಚರಣೆಗಳಿಗೆ ಇಳಿಯುವವರಲ್ಲ. ಇವರದೇನಿದ್ದರೂ ಗುಪ್ತ ಕಾರ್ಯಾಚರಣೆಗಳು. ಮೊದಲು ಇವರು ರಾಜ್ಯಾದ್ಯಂತ ವಿದ್ಯಾರ್ಥಿ ಸಂಘಟನೆ ಕಟ್ಟಿದರು. ನಂತರ ತಮ್ಮ ಚಟುವಟಿಕೆಗಳಿಗೆ ಸೂಕ್ತವಾದ ನೆಲೆಯನ್ನು ಗುರುತಿಸಿಕೊಂಡು, ಶಿವಮೊಗ್ಗ-ಚಿಕ್ಕಮಗಳೂರು ಆಸುಪಾಸಿನಲ್ಲಿ ಜನರ ಸಹಾನುಭೂತಿ ಗಳಿಸಿದ್ದ 'ತುಂಗಾ ಉಳಿಸಿ' ಚಳುವಳಿಯನ್ನು ಹೊಕ್ಕರು. ಸಾಕೇತ್ ರಾಜನ್‌ರಿಂದ ಕಲಿತ ಸಜ್ಜನಿಕೆ ಮತ್ತು ಮತ್ತು ಸವಿನುಡಿಗಳ ಮೂಲಕ ಸಮಾಜದ ಅನೇಕ ಗಣ್ಯರ, ಉದಾರವಾದಿ ಬುದ್ಧಿಜೀವಿಗಳ ಮನ್ನಣೆ ಗಳಿಸಿದರು. ಈ ಗಣ್ಯರೂ, ಬುದ್ಧಿಜೀವಿಗಳೂ ಕಳೆದ ಕೆಲವು ವರ್ಷಗಳಿಂದ ತುಕ್ಕು ಹಿಡಿದು ಹೋಗಿದ್ದ ತಮ್ಮ 'ಪ್ರಗತಿಪರತೆ'ಯನ್ನು ಸಾಬೀತುಗೊಳಿಸಿಕೊಳ್ಳಲು ಇವರೊಂದಿಗೆ ಗುರುತಿಸಿಕೊಂಡರು. ಇದರಿಂದಾಗಿ ಸಾಕಷ್ಟು ಸಾರ್ವಜನಿಕ ಮಾನ್ಯತೆ ಮತ್ತು ಹಣದ ಬೆಂಬಲವೂ ಇವರಿಗೆ ದೊರಕಿತು. ಇದರ ಸದುಪಯೋಗಪಡಿಸಿಕೊಂಡ ಈ ಗುಂಪು ನಂತರ 'ಕೋಮು ಸೌಹಾರ್ದ ವೇದಿಕೆ' ಎಂಬ ಹೆಸರಿನಡಿ ಇನ್ನಷ್ಟು ಅಮಾಯಕರ ಬೆಂಬಲ ಗಳಿಸಿಕೊಂಡು, 'ಕುದುರೆಮುಖ ರಾಷ್ಟ್ರೀಯ ಉದ್ಯಾನವನ'ದ ಹೋರಾಟ ಆರಂಭಿಸಿ ಕರ್ನಾಟಕದಲ್ಲಿ ತನ್ನ ರಾಜಕೀಯ ನೆಲೆ ಕಂಡುಕೊಳ್ಳುವಲ್ಲಿ ಯಶಸ್ವಿಯಾಯಿತು. ಏಳೆಂಟು ವರ್ಷಗಳ ಹಿಂದೆ ಶಿವಮೊಗ್ಗ ಮತ್ತು ಕುವೆಂಪು ವಿಶ್ವವಿದ್ಯಾಲಯದ ಆವರಣದಲ್ಲಿ ಯಾವುದೇ ವಿಚಾರ ಸಂಕಿರಣ ನಡೆದರೂ ಇವರ ರಾಜಕೀಯ ಸಾಹಿತ್ಯ ಕೃತಿಗಳ ಮಾರಾಟವೇ ಅವುಗಳ ಮುಖ್ಯ ಉದ್ದೇಶ ಎನ್ನಿಸುವಷ್ಟರ ಮಟ್ಟಿಗೆ ಅಲ್ಲಿ ಇವರ ಹಾವಳಿ ಶುರುವಾಗಿತ್ತು.

ಇದರ ಹಿಂದೆ ಶಿವಮೊಗ್ಗಾದ ಅನೇಕ ಅಧ್ಯಾಪಕರ ಮತ್ತು ಬುದ್ಧಿಜೀವಿಗಳ 'ಕ್ರಾಂತಿಕಾರಕತೆ'ಯ ಭ್ರಾಂತಿಯೂ ಕೆಲಸ ಮಾಡಿತ್ತು. ಇವರು ದಾರಿ ತಪ್ಪಿದ ಆ ಹುಡುಗರನ್ನು ತಮ್ಮ ಈ ಭ್ರಾಂತಿಯಲ್ಲಿ ಅಮಾಯಕವಾಗಿ ಪ್ರೋತ್ಸಾಹಿಸಿದ್ದೂ ಉಂಟು. ಪೋಲೀಸ್ ಕಾರ್ಯಾಚರಣೆ ಶುರುವಾದ ಮೇಲೆ ಆ ತಪ್ಪಿಗಾಗಿ ಕೈ ಕೈ ಹಿಸುಕಿಕೊಳ್ಳತೊಡಗಿದ ಇವರು, ಆಗಲೇ ತಮ್ಮ ವಿವೇಕದಲ್ಲಿ ಆ ಹುಡುಗರ ಚಟುವಟಿಕೆಗಳನ್ನು ವಿವರಗಳಲ್ಲಿ ಗಮನಿಸಿ ಅವರಿಗೆ 'ಬುದ್ಧಿ' ಹೇಳಿದ್ದರೆ, ಅವರು ಹಿಡಿದಿರುವ ದಾರಿಯ ಅಪಾಯ ಮತ್ತು ನಿರರ್ಥಕತೆಗಳ ಬಗ್ಗೆ ಎಚ್ಚರಿಸಿ ನಿರುತ್ತೇಜಿಸಿದ್ದರೆ, ಸಾಕೇತ್ ರಾಜನ್ ತನ್ನ ವಿಪರೀತ ಓದಿನ ಒತ್ತಡದಲ್ಲಿ ಥಣ್ಣಗೆ ಹೊತ್ತಿಸಿದ್ದ ನಕ್ಸಲ್ ಬೆಂಕಿಗೆ ಅನೇಕ ಮುಗ್ಧ ಜೀವಗಳು ಆಹುತಿಯಾಗುವುದನ್ನು ತಪ್ಪಿಸಬಹುದಿತ್ತು.

ಈ ಚಳುವಳಿಯ ಕಾರ್ಯಸೂಚಿಗೆ ಅನುಗುಣವಾಗಿಯೋ, ಕೌಟುಂಬಿಕ ಕಾರಣ ಗಳಿಂದಾಗಿಯೋ ಅಥವಾ ಪೊಲೀಸ್ ಕಾರ್ಯಾಚರಣೆಯ ಭಯದಿಂದಾಗಿಯೋ ಕಾಡನ್ನು ಹೊಗಲಾಗದೆ ನಾಡಿನಲ್ಲೇ ಉಳಿದುಕೊಂಡು, ಈಗ ಸಾಕೇತ್ ರಾಜನ್‌ನ ಸಾವಿನ ನಂತರ

ಮತ್ತು ಸಾರ್ವಜನಿಕವಾಗಿ ತಮ್ಮನ್ನು ಮಾನ್ಯ ಮಾಡಿದ್ದ ಸ್ಥಳೀಯ ಗಣ್ಯರು ಮತ್ತು ಬುದ್ಧಿಜೀವಿಗಳು ಇದ್ದಕ್ಕಿದ್ದಂತೆ ಕೈಬಿಟ್ಟ ದಿಗ್ಭ್ರಮೆಯಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿರುವ ಈ ಹುಡುಗ-ಹುಡುಗಿಯರನ್ನು ಕಂಡರೆ ಬೇಸರವಾಗುತ್ತದೆ. ಇನ್ನೂ ಒಳಗೆ ಬೆಂಕಿ ಇಟ್ಟುಕೊಂಡೇ ಓಡಾಡುತ್ತಿರುವ ಇವರಲ್ಲಿ ಕೆಲವರು ಒಳಗೊಳಗೇ ಉರಿದು ಕರಕಲಾಗುತ್ತಿದ್ದರೆ, ಇನ್ನು ಕೆಲವರು ಈ 'ಬೆಂಕಿ'ಯನ್ನು ತಾವು ಹಿಡಿದಿರುವ ಹೊಸ 'ಉದ್ಯೋಗ'ಗಳಲ್ಲಿ ಬಳಸಿ, ದೊಡ್ಡ ವಸೂಲಿ ವೀರರಾಗಿಯೋ ಅಥವಾ ತಮಗೆ ಆಶ್ರಯ ನೀಡಿದ ಉದ್ಯಮಿಗಳ ಏಜೆಂಟರಾಗಿಯೋ ಪರಿವರ್ತಿತರಾಗಿ 'ಭಾರಿ ಕುಳ'ಗಳೆನಿಸಿದ್ದಾರೆ. ಆದರೂ ಇವರ ಕ್ರಾಂತಿಕಾರಕ ಪ್ರವಚನಗಳ 'ಬಿಸಿ'ಯೇನೂ ಕಡಿಮೆಯಾಗಿಲ್ಲ! ಕರ್ನಾಟಕದಲ್ಲಿ ನಕ್ಸಲ್ ಚಳುವಳಿ ನಿಜವಾಗಿ ಬೇರು ಬಿಡುವ ಮುನ್ನವೇ ಅದು ತನ್ನ ನಾಯಕನನ್ನು ಕಳೆದುಕೊಂಡು, ಶೀಲ ವಿಚಲಿತವಾದುದರ ಪರಿಣಾಮವಿದು.

ಇದರ ಪರಿಣಾಮವನ್ನು ಕಾಡಿನೊಳಗಿರುವ ಅದರ ಚಟುವಟಿಕೆಗಳಲ್ಲೂ ಗಮನಿಸಬಹುದು. ಎರಡು ಗುಂಪುಗಳಾಗಿ ಒಡೆದು ಹೋಗಿರುವ ಈ ಚಳುವಳಿಯ ಒಂದು ಗುಂಪು ಮಾತ್ರ ಈಗ ಕಾಡಿನೊಳಗಿದೆ ಎಂದು ಹೇಳಲಾಗುತ್ತಿದೆ. ಅದು ಕೂಡ ಒಂದು ಚಿಕ್ಕ ಗುಂಪಾಗಿದ್ದು, ನಾಡಿಗೆ ಬರಲು ಕಾತುರವಾಗಿದ್ದರೂ; ಸರ್ಕಾರದ ಮೇಲೆ, ಪೋಲೀಸರ ಮೇಲೆ ಭರವಸೆ ಇರದೆ ಕಾಡಿನೊಳಗೇ ತನ್ನ ಇರವನ್ನು ಸ್ಥಾಪಿಸಿಕೊಳ್ಳಲು ಹೆಣಗುತ್ತಿದೆ ಎಂದೂ ಹೇಳಲಾಗುತ್ತಿದೆ. ಮನೋಹರ ಎಂಬ 'ನಕ್ಸಲ'; ನಾಡಿಗೆ ಬಂದು ಪತ್ರಕರ್ತನಾಗಿ ಬಹಿರಂಗ ಬದುಕು ನಡೆಸುತ್ತಿದ್ದರೂ, ಪೋಲೀಸರ 'ಒತ್ತಡ' ತಾಳಲಾಗದೆ ಕಾಡಿಗೆ ಹಿಂತಿರುಗಿ ಇತ್ತೀಚಿನ ಪೋಲೀಸ್ ಕಾರ್ಯಾಚರಣೆಯಲ್ಲಿ ಹತನಾಗಿರುವುದು ಇದಕ್ಕೆ ಸಾಕ್ಷಿ ಎಂದು ಸ್ಥಳೀಯ ಪತ್ರಕರ್ತರು ಹೇಳುತ್ತಿದ್ದಾರೆ. ಇದು ನಿಜವಾಗಿದ್ದಲ್ಲಿ ಸದ್ಯದ ಸರ್ಕಾರದ ನೀತಿ ರಾಜಕೀಯ ಪ್ರೇರಿತವಾಗಿದೆಯೇ ಹೊರತು ಸಮಸ್ಯೆಯನ್ನು ಅದರ ಮೂಲದಲ್ಲಿ ಅರ್ಥಮಾಡಿಕೊಂಡು ಪರಿಹರಿಸಲು ನಿರಾಕರಿಸುತ್ತಿದೆ ಎಂದೇ ಹೇಳಬೇಕಾಗುತ್ತದೆ.

ಕರ್ನಾಟಕದ ನಕ್ಸಲ್ ಚಳುವಳಿ ಇತರ ರಾಜ್ಯಗಳ ನಕ್ಸಲ್ ಚಳುವಳಿಗಳಂತೆ ಹಿಂಸೆಯೊಂದೇ ಬದಲಾವಣೆಯ ಮಾರ್ಗ ಎಂದು ನಂಬಿಕೊಂಡದ್ದಲ್ಲ. ಹಾಗಾಗಿಯೇ ಅದು ಈವರೆಗೆ ತಾನಾಗಿ ಹಿಂಸಾಚಾರಕ್ಕೆ ಎಂದೂ ಇಳಿದಿಲ್ಲ. ತಾನು ಹಿಂಸೆಗೊಳಗಾದಾಗ ಮಾತ್ರ ಪ್ರತಿಹಿಂಸೆ ನಡೆಸಿದೆ ಎಂಬುದನ್ನು ಸರ್ಕಾರ ಗಮನಿಸಬೇಕು. ಹಾಗೇ ಇದು ಉಗ್ರರಿಂದ ಕೂಡಿದ ಗುಂಪಲ್ಲ. ಬದಲಿಗೆ, ವ್ಯವಸ್ಥೆಯ ಹಿಂಸೆಗೆ ನಲುಗಿ ಭಾವಾವೇಶದಲ್ಲಿ ಈ ಚಳುವಳಿಗೆ ಸೇರಿಕೊಂಡ ವಿದ್ಯಾವಂತ ಮತ್ತು ಸೂಕ್ಷ್ಮ ಮನಸ್ಸಿನ ಯುವಜನರ ಗುಂಪು ಇದು. ಹಾಗಾಗಿ ಕರ್ನಾಟಕದ ನಕ್ಸಲ್ ಸಮಸ್ಯೆಯನ್ನು ಬೇರೆ ರಾಜ್ಯಗಳ ನಕ್ಸಲ್ ಸಮಸ್ಯೆಗಿಂತ ಭಿನ್ನವಾಗಿ ನೋಡಿ ಅದನ್ನು ನಿರ್ವಹಿಸಬೇಕಿದೆ. ಹಾಗೆ ನೋಡಿದರೆ ನಕ್ಸಲ್ ಸಮಸ್ಯೆ ಎಂಬುದೇ ಇಂದಿನ ವ್ಯವಸ್ಥೆ ಸೃಷ್ಟಿಸಿರುವ ಸಮಸ್ಯೆ. ಈ ವ್ಯವಸ್ಥೆಯ ಕರಾಳತೆಯನ್ನು ಗಮನಿಸಿದ ಯಾರಿಗಾದರೂ ಒಂದು ಕ್ಷಣ, ಇದಕ್ಕೆ ಸಾಂವಿಧಾನಿಕ ಪರಿಹಾರ ಸಾಧ್ಯವೇ ಇಲ್ಲ ಎಂಬ ಆಲೋಚನೆ ಮನದ

ಮುಂದೆ ಸುಳಿಯದೇ ಹೋದಲ್ಲಿ; ಆ ವ್ಯಕ್ತಿ ಅಸೂಕ್ಷ್ಮನೋ ಅಪ್ರಾಮಾಣಿಕನೋ ಆಗಿರುತ್ತಾನೆ ಎಂದೇ ಹೇಳಬೇಕು. ಪರಿಸ್ಥಿತಿಯನ್ನು ಈ ಮಟ್ಟಕ್ಕೆ ತಂದಿರುವ ನಾವು ಅದರ ಹೊಣೆಯನ್ನೂ ಹೊರಬೇಕಾಗುತ್ತದೆ.

ಹಾಗಾಗಿ ಈಗ ಕಾಡಿನಲ್ಲಿರುವ ನಕ್ಸಲರೆಂದರೆ ಸಮಾಜ ವಿರೋಧಿಗಳೆಂದೋ, ಅಪರಾಧಿಗಳೆಂದೋ ಪರಿಗಣಿಸದೆ, ಅವರ ವಿರುದ್ಧದ ಸಶಸ್ತ್ರ ಕಾರ್ಯಾಚರಣೆಯ ಅಂತ್ಯವನ್ನು ಘೋಷಿಸಿ; ಅವರು ನಾಡಿಗೆ ಬಂದು ನೆಲೆಗೊಂಡು ಸಾಂವಿಧಾನಿಕ ಹೋರಾಟಗಳ ಮೂಲಕವೇ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಂತಹ ವಿಶ್ವಾಸದ ಪರಿಸ್ಥಿತಿಯನ್ನು ನಿರ್ಮಿಸಲು ಸರ್ಕಾರ ಮುಂದಾಗಬೇಕು. ಇದಕ್ಕಾಗಿ ಎಚ್.ಎಸ್. ದೊರೆಸ್ವಾಮಿ, ಎಚ್.ಗಣಪತಿಯಪ್ಪ, ಯು.ಆರ್.ಅನಂತಮೂರ್ತಿ, ಎಚ್.ಜಿ. ಗೋವಿಂದೇಗೌಡ, ಕಡಿದಾಳು ಶಾಮಣ್ಣ, ದೇವನೂರು ಮಹಾದೇವರಂತಹ ವಿಶ್ವಾಸಾರ್ಹ ಗಣ್ಯರ ಮಧ್ಯಸ್ಥಿಕೆಗೆ ಯತ್ನಿಸಬೇಕು. ಮೊದಲಿಗೆ ನಮ್ಮ ಮುಖ್ಯ ಮಂತ್ರಿಗಳು ಕರ್ನಾಟಕದ ಎಲ್ಲ ಮಕ್ಕಳೂ ತಮ್ಮ ಮಕ್ಕಳೇ ಎಂದು ಭಾವಿಸಿ; ಅವರಲ್ಲಿ ಕೆಲವರು ಹಾದಿ ತಪ್ಪಿದ್ದರೆ, ಅದಕ್ಕೆ ಕಾರಣ ಹುಡುಕಿ ಅವರನ್ನು ಸರಿ ದಾರಿಗೆ ತರುವ ತಂದೆಯಂತೆ ವರ್ತಿಸಬೇಕು. ಇದಕ್ಕೆ ಸಿದ್ಧತೆಯೆಂಬಂತೆ ಚಿರಂಜೀವಿ ಸಿಂಗ್ ಸಮಿತಿಯ ಶಿಫಾರ್ಸುಗಳನ್ನು ಆದ್ಯತೆಯ ಮೇಲೆ ಪ್ರಾಮಾಣಿಕವಾಗಿ ಜಾರಿಗೆ ತರಲು ಮುಂದಾಗಬೇಕು ಮತ್ತು ಚಿಕ್ಕಮಗಳೂರು ಸುತ್ತ ಮುತ್ತ ಮಠಗಳ್ಳರ ಹಾಗೂ ಮಠಳುಗಳ್ಳರ ಹಣಕಾಸಿನ ಮೇಲೆ ಕಟ್ಟಲ್ಪಟ್ಟಿರುವ ದುಷ್ಟ ಮತ್ತು ಭ್ರಷ್ಟ ರಾಜಕಾರಣಕ್ಕೆ ಅಂತ್ಯ ಹಾಡುವ ದಿಟ್ಟ ನಿರ್ಧಾರ ಕೈಗೊಳ್ಳಬೇಕು. ಹಾಗೇ ಅಸಮಾನತೆ, ಅಕ್ರಮ, ಅನ್ಯಾಯ, ಶೋಷಣೆಗಳ ವಿರುದ್ಧ ದನಿ ಎತ್ತುವವರೆಲ್ಲರನ್ನೂ 'ನಕ್ಸಲರು' ಎಂದು ಹೆಸರಿಸಿ ಕಿರುಕುಳ ಕೊಡುವ 'ಪೋಲೀಸ್ ಭಯೋತ್ಪಾದನೆ'ಯನ್ನು ನಿಲ್ಲಿಸಬೇಕು. ಇಲ್ಲವೇ ಹೋದಲ್ಲಿ ಈ ನಕ್ಸಲ್ ಚಳುವಳಿ, ಸರ್ಕಾರ ಎಷ್ಟೇ ವೀರಾವೇಶ ಪ್ರಕಟಿಸಿದರೂ, ನಿರಂತರವಾಗಿ ಬೆಳೆಯುವುದು ಖಂಡಿತ. ಏಕೆಂದರೆ, ಬೆಳೆಯಲು ಅದಕ್ಕೆ ಕಾರಣಗಳನ್ನು ನಾವೇ ಒದಗಿಸಿಕೊಟ್ಟಂತಾಗುತ್ತದೆ.

(೫ ಡಿಸೆಂಬರ್, ೨೦೦೮)

■

೩೧. ಮುಂಬೈ ದಾಳಿ: ಈ ವ್ಯವಸ್ಥೆಗೆ ಕೊನೆಯ ಎಚ್ಚರಿಕೆ!

ಎರಡು ವಾರಗಳ ಹಿಂದಷ್ಟೇ ಇದೇ ಅಂಕಣದಲ್ಲಿ ನಾನು ಹಿಂದೂವಾದಿ ಗುಂಪುಗಳ ಭಯೋತ್ಪಾದನೆಯ ಬಗ್ಗೆ ಬರೆಯುತ್ತಾ, 'ಇದು ರಾಷ್ಟ್ರಕ್ಕೆ ಅಗ್ನಿ ಪರೀಕ್ಷೆಯ ಕಾಲ' ಎಂದಿದ್ದೆ. ಆದರೆ ಅಂತಹ ಅಗ್ನಿ ಪರೀಕ್ಷೆ ಇಷ್ಟು ಬೇಗ ಹೀಗೆ ಎದುರಾಗುತ್ತದೆಂದು ನಾನು ನಿರೀಕ್ಷಿಸಿರಲಿಲ್ಲ. ನಾನೇ ಏನು, ಬಹುಶಃ ಯಾರೂ ನಿರೀಕ್ಷಿಸಿರಲಾರರು. ನವೆಂಬರ್ ೨೬ರ ಸಂಜೆ ಸಮುದ್ರದ ಮೇಲಿಂದ ಬಂದ ಭಯೋತ್ಪಾದಕರ ಗುಂಪೊಂದು ಮುಂಬೈನ ವಿವಿಧೆಡೆ ನಡೆಸಿರುವ ಹಿಂಸಾಚಾರ ಇಡೀ ದೇಶವನ್ನೇ ತಲ್ಲಣಗೊಳಿಸಿದೆ. ಛತ್ರಪತಿ ಶಿವಾಜಿ ರೈಲ್ವೇ ನಿಲ್ದಾಣ, ತಾಜ್, ಒಬೆರಾಯ್ ಹೋಟೆಲ್‌ಗಳು ಮತ್ತು ನಾರಿಮನ್ ಭವನದಲ್ಲಿದ್ದ ಅನೇಕ ವಿದೇಶೀಯರೂ ಸೇರಿದಂತೆ ಸುಮಾರು ಇನ್ನೂರು ಜನರನ್ನು ಕೊಂದು ಸುಮಾರು ಮುನ್ನೂರು ಜನರನ್ನು ಗಾಯಗೊಳಿಸಿರುವ ಈ ಗುಂಪು, ನಮ್ಮ ೨೦ ಜನ ಸಾಮಾನ್ಯ ಪೋಲೀಸರ ಜೊತೆಗೆ ಮೂವರು ಶ್ರೇಷ್ಠ ಪೋಲೀಸ್ ಅಧಿಕಾರಿಗಳನ್ನೂ ರಾಷ್ಟ್ರೀಯ ರಕ್ಷಣಾ ದಳದ ಇಬ್ಬರು ಕಮಾಂಡೋಗಳನ್ನೂ ಬಲಿ ತೆಗೆದುಕೊಂಡಿದೆ. ಭಯೋತ್ಪಾದನೆ ಎಂಬುದೀಗ ಗುಪ್ತ ಕಾರ್ಯಾಚರಣೆಯ ರೂಪವನ್ನು ಕಳಚಿಕೊಂಡು, ಬಹಿರಂಗ 'ಯುದ್ಧ'ದ ರೂಪದಲ್ಲಿ ರುದ್ರ ನರ್ತನ ನಡೆಸುವ ಧಾರ್ಷ್ಟ್ಯ ಪ್ರದರ್ಶಿಸಿದೆ.

ಇದರ ಈ ಭಂಡ ಧೈರ್ಯ, ಸುಯೋಜಿತ ರೀತಿ ನೀತಿ, ಶಸ್ತ್ರಾಸ್ತ್ರ ಪರಿಣತಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಇದರ ಛಲವನ್ನು ಗಮನಿಸಿ, ಈ ರುದ್ರ ಕಾರ್ಯಾಚರಣೆಯ ಹಿಂದೆ ಅಲ್ ಖೈದಾದ ಸ್ಫೂರ್ತಿ ಇದೆ, ಲಷ್ಕರ್ ತೊಯ್ಬಾದ ತರಬೇತಿ ಇದೆ ಮತ್ತು ಕೆಲವು ಪಾಕಿಸ್ತಾನಿ ಶಕ್ತಿಗಳ ಬೆಂಬಲವಿದೆ ಎಂದು ಸಂಶಯಿಸಲಾಗುತ್ತಿದೆ. ಆದರೆ ಯಾವುದೂ ಇನ್ನೂ ಖಚಿತವಿಲ್ಲ. ಐದು ಸಾವಿರ ಜನರನ್ನು ಕೊಲ್ಲುವ ಉದ್ದೇಶದಿಂದ ಸಾಕಷ್ಟು ಶಸ್ತ್ರಸಜ್ಜಿತವಾಗಿ ಬಂದಿತ್ತೆಂದು ಹೇಳಲಾದ ಈ ಗುಂಪು, ನಗರದೆಲ್ಲಡೆ ರಕ್ತದ ಕೋಡಿ ಹರಿಸುವ ಮುನ್ನ ಅದರ ಬೆನ್ನು ಮುರಿದ ನಮ್ಮ ಯೋಧರಿಗೆ ಇಡೀ ದೇಶ ಕೃತಜ್ಞವಾಗಬೇಕಿದೆ. ಈ ವೀರ 'ಯೋಧ'ರಲ್ಲಿ ಒಬ್ಬರಾದ ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳದ ಮುಖ್ಯಸ್ಥರಾಗಿದ್ದ ಹೇಮಂತ ಕರ್ಕರೆ, ಇತ್ತೀಚೆಗೆ ಹಿಂದೂವಾದಿ ಗುಂಪುಗಳ ಭಯೋತ್ಪಾದನೆಯ ತನಿಖೆ ನಡೆಸಿದ್ದ ಹಿನ್ನೆಲೆಯಲ್ಲಿ ಈ ಗುಂಪುಗಳಿಂದ ತೀವ್ರ ಅಪಪ್ರಚಾರಕ್ಕೆ ಮತ್ತು ಕೊಲೆ ಬೆದರಿಕೆಗಳಿಗೆ ಈಡಾಗಿದ್ದರು ಎಂಬುದನ್ನೂ ಗಮನಿಸಬೇಕಿದೆ. ಈ ಹಿನ್ನೆಲೆಯಲ್ಲಿ, ಈ ದಾಳಿಯ

ಸಂದರ್ಭವನ್ನು ರಾಜಕೀಯವಾಗಿ ದುರುಪಯೋಗಪಡಿಸಿಕೊಳ್ಳಲು ಮುಂಬೈಗೆ ಬಂದಿಳಿದ ನರೇಂದ್ರ ಮೋದಿ ಈ ಯೋಧರಿಗಾಗಿ ಪ್ರಕಟಿಸಿದ ಬೃಹತ್ ಪರಿಹಾರ ಮೊತ್ತವನ್ನು ಸ್ವೀಕರಿಸಲು ಕರ್ಕರೆಯವರ ಪತ್ನಿ ನಿರಾಕರಿಸುವುದು ಸಹಜವೇ ಆಗಿದೆ.

ಮೂರು ದಿನಗಳ ಈ ಅಪೂರ್ವ ಕಾರ್ಯಾಚರಣೆಯಲ್ಲಿ ಬಹುಶಃ ಒಬ್ಬನ ಹೊರತಾಗಿ ಮಿಕ್ಕೆಲ್ಲ ಭಯೋತ್ಪಾದಕರೂ ಸತ್ತಂತಿದೆ. ಹಾಗಾಗಿ, ವಿವಿಧ ರಾಷ್ಟ್ರೀಯತೆಗಳ ಮುಸ್ಲಿಂ ತರುಣರು ಸೇರಿ ನಡೆಸಿದಂತೆ ತೋರುವ ಈ ಅಂತಾರಾಷ್ಟ್ರೀಯ ಮಟ್ಟದ ಭಯೋತ್ಪಾದನೆಯ ಉದ್ದೇಶವಾದರೂ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಕೆಲವು ತಿಂಗಳುಗಳ ಹಿಂದೆ ಇಸ್ಲಾಮಾಬಾದ್‌ನಲ್ಲಿನ ಮ್ಯಾರಿಯೇಟ್ ಹೊಟೆಲ್‌ನಲ್ಲಿ ನಡೆದ ಆಸ್ಫೋಟದಲ್ಲಿ ವಿದೇಶೀಯರೂ ಸೇರಿದಂತೆ ನೂರಾರು ಜನ ಸಾವೀಗೀಡಾದ ಹಿನ್ನೆಲೆಯಲ್ಲಿ ಹಲವು ರಾಷ್ಟ್ರಗಳು ಆ ದೇಶಕ್ಕೆ ತಮ್ಮ ಕ್ರಿಕೆಟ್ ಪ್ರವಾಸವನ್ನು ರದ್ದುಗೊಳಿಸಿದ್ದವು. ಈಗ ಭಾರತವೂ ತನ್ನ ಪ್ರವಾಸವನ್ನು ರದ್ದುಗೊಳಿಸುವ ಸೂಚನೆ ನೀಡಿ ಆ ದೇಶವನ್ನು ಮುಜುಗರಕ್ಕೊಳಪಡಿಸಿದ್ದು, ಅದರ ಗುಪ್ತಚರ ದಳವಾದ ಐಎಸ್‌ಐನ್ನು ಈ ಕೃತ್ಯವನ್ನೆಸಗಲು ಪ್ರೇರೇಪಿಸಿದೆಯೇ? ಅಥವಾ ಇದು ಮುಸ್ಲಿಂ ಭಯೋತ್ಪಾದಕರ ಗುಂಪು, ಭಾರತದಲ್ಲಿ ಹೊಸದಾಗಿ ತಲೆ ಎತ್ತಲಾರಂಭಿಸಿರುವ ಹಿಂದೂವಾದಿ ಗುಂಪುಗಳ ಮುಸ್ಲಿಂ ವಿರೋಧಿ ಭಯೋತ್ಪಾದಕರಿಗೆ ನೀಡಲು ಯತ್ನಿಸಿದ ಎಚ್ಚರಿಕೆಯೇ? ಅಥವಾ ಪಾಕಿಸ್ತಾನದ ಹೊಸ ಪ್ರಜಾಪ್ರಭುತ್ವವಾದಿ ಸರ್ಕಾರದ ಪ್ರಧಾನಿ ಮತ್ತು ಅಧ್ಯಕ್ಷರಿಬ್ಬರೂ ಭಾರತದೊಂದಿಗೆ ಸ್ನೇಹದ ಹೊಸ ಶಕೆಯನ್ನಾರಂಭಿಸುವ ಆಶಯದೊಂದಿಗೆ ಮಾತುಕತೆಗಳಿಗೆ ಮುಂದಾಗಿರುವುದು, ಆ ದೇಶದ ಮುಸ್ಲಿಂ ಮೂಲಭೂತವಾದಿ ಗುಂಪುಗಳನ್ನು ಕೆರಳಿಸಿದೆಯೇ? ಏಕೆಂದರೆ, ಪಾಕಿಸ್ತಾನ ಸರ್ಕಾರ ಕೂಡ ನಮ್ಮ ಸರ್ಕಾರದಂತೆಯೇ ಮತೀಯ ಮೂಲಭೂತವಾದಿ ಗುಂಪುಗಳ ಭಯೋತ್ಪಾದನೆಯನ್ನು ಎದುರಿಸಲಾಗದೆ ತತ್ತರಿಸುತ್ತಿದೆ ಮತ್ತು ಪಾಕಿಸ್ತಾನದ ಪ್ರಜೆಗಳು ಕೈಗೊಳ್ಳುವ ಎಲ್ಲ ಭಯೋತ್ಪಾದನಾ ಚಟುವಟಿಕೆಗಳಲ್ಲಿ ಪಾಕಿಸ್ತಾನ ಸರ್ಕಾರದ ಕೈವಾಡವಿರುತ್ತದೆ ಎಂದು ನಂಬುವುದೂ ತಪ್ಪಾಗುತ್ತದೆ ಎಂಬುದನ್ನೂ ನಾವು ಗಮನಿಸಬೇಕು. ಹಾಗಾಗಿ, ಬಂಧನದಲ್ಲಿರುವ ಭಯೋತ್ಪಾದಕನ ವಿವರವಾದ ವಿಚಾರಣೆ ಮತ್ತು ಈವರೆಗೆ ದೊರೆತಿರುವ ಸಾಕ್ಷ್ಯಗಳ ತಾರ್ಕಿಕ ಜೋಡಣೆಯ ನಂತರವಷ್ಟೆ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ದೊರಕಬಹುದು.

ಆದರೆ ಅದಕ್ಕೆ ಮುನ್ನ ನಮ್ಮ ಕೆಲವು ಕನ್ನಡ ವಾರ್ತಾ ವಾಹಿನಿಗಳು ಮಾಡಲು ಯತ್ನಿಸಿದಂತಹ, ಅಗ್ಗದ ಭಾಷೆಯಲ್ಲಿ ಅವಸರದ ತೀರ್ಮಾನಗಳನ್ನು ಜನರಿಗೆ ಮುಟ್ಟಿಸುವಂತಹ ಕೆಲಸಗಳನ್ನು ಇಂತಹ ಸೂಕ್ಷ್ಮ ಸಂದರ್ಭಗಳಲ್ಲಿ ರಾಷ್ಟ್ರ ವಿರೋಧಿ ಕೆಲಸಗಳೆಂದೇ ಪರಿಗಣಿಸಬೇಕಾಗುತ್ತದೆ. ಉದಾಹರಣೆಗೆ, ಒಂದು ವಾಹಿನಿಯ ತಲೆಹೋಕ ನಿರೂಪಕನೊಬ್ಬ, ಸೆರೆ ಸಿಕ್ಕಿರುವ ಭಯೋತ್ಪಾದಕ ಪಾಕಿಸ್ತಾನಿ ಎಂದು ಪ್ರಕಟಿಸುತ್ತಾ; ತನ್ನ ವರದಿಗಾರನಿಗೆ ತಕ್ಷಣ ಕೇಳಿದ ಪ್ರಶ್ನೆ ಇದು: 'ಈ ಪಾಕಿಸ್ತಾನವನ್ನು ಮಟ್ಟ ಹಾಕಲು ಸಾಧ್ಯವಿಲ್ಲವಾ?' ಅದಕ್ಕೆ ಆ ಕಡೆಯಿಂದ ವಿಶೇಷ ವರದಿಗಾರನಿಂದ ಬಂದ ಪರಿಣತ ಉತ್ತರ: 'ಅಮೆರಿಕಾ ಸಹಕಾರ

ನೀಡಿದರೆ ಸಾಧ್ಯವಾಗಬಹುದು!' ಜೊತೆಗೆ ಈ ನಿರೂಪಕ, 'ಚೀನಾದಲ್ಲಿ ನೋಡಿ, ಭಯೋತ್ಪಾದನೆಯ ಸುಳಿವೇ ಇಲ್ಲ...' ಎಂದು ತನ್ನ ತನ್ನ ಅಪಾರ ಅಜ್ಞಾನದ ಬಾಗಿಲನ್ನು ಬೇರೆ ತೆರೆದಿಟ್ಟ. ಇನ್ನೊಂದು ವಾಹಿನಿ ತನ್ನ ಉಗ್ರ ರಾಷ್ಟ್ರೀಯ ವಾರ್ತೆಯಲ್ಲಿ, ಇಂಗ್ಲೆಂಡ್ ತಂಡ ತನ್ನ ಕ್ರಿಕೆಟ್ ಪ್ರವಾಸವನ್ನು ಮುಂಬೈ ಭಯೋತ್ಪಾದನೆಯ ಹಿನ್ನೆಲೆಯಲ್ಲಿ ಮೊಟಕುಗೊಳಿಸಿದ್ದನ್ನು ವರ್ಣಿಸಿದ್ದು ಹೀಗೆ: 'ಸೋತು ಸುಣ್ಣವಾದ ಇಂಗ್ಲೆಂಡ್ ತಂಡದ ಪಲಾಯನ!' ಬೀದಿಯಲ್ಲಿ ಹೋಗುವವರನ್ನೆಲ್ಲ ಅಗ್ಗದ ಸಂಬಳದ ಮೇಲೆ ನಿರೂಪಕರೆಂದೋ, ವರದಿಗಾರರೆಂದೋ ತಂದು ಕೂರಿಸುತ್ತಿರುವ ನಮ್ಮ ಕೆಲವು ವಾಹಿನಿಗಳು ಅಂತರಾಷ್ಟ್ರೀಯ ಸಂಬಂಧಗಳ ರಾಜಕಾರಣವನ್ನು ಕಡ್ಲೇಕಾಯಿ ವ್ಯಾಪಾರದ ಮಟ್ಟಕ್ಕೆ ಇಳಿಸಿರುವುದು ಹೀಗೆ.

ಅಷ್ಟೇ ಅಲ್ಲ, ಈ ವಾಹಿನಿಗಳು ಭಯೋತ್ಪಾದನೆಯ ವಿರುದ್ಧದ ಕಾರ್ಯಾಚರಣೆಯಲ್ಲಿ ಭಾಗವಹಿಸಿ ಮರಣವನ್ನಪ್ಪಿದ ವೀರ ಪೋಲೀಸ್ ಅಧಿಕಾರಿಗಳ ಮತ್ತು ಯೋಧರ ಅಂತಿಮ ಯಾತ್ರೆಯ ಸಂದರ್ಭಗಳನ್ನು; ಅವುಗಳ ವಿಷಾದ-ಗಾಂಭೀರ್ಯಗಳನ್ನು ಲೆಕ್ಕಿಸದೆ, ಮಧ್ಯಯುಗೀನ ಯುದ್ಧ ವರ್ಣನೆಯ ಪರಿಭಾಷೆಯಲ್ಲಿ ನಿರೂಪಿಸುತ್ತಾ, ಸಂಭ್ರಮಪೂರ್ಣ ದೇಶಪ್ರೇಮ ಗೀತೆಗಳ ತುಣುಕುಗಳ ಮೂಲಕ 'ಆಚರಿಸಿದ' ಶೈಲಿ ಮತ್ತು ಕೋಮುವಾದಿ ಸಂಘಟನೆಯ ಜಾಲವೊಂದು ಚಲಾಯಿಸಿದ ಎಸ್‌ಎಂಎಸ್‌ಗಳನ್ನು, ಅವು ಇಡೀ ದೇಶದ ಭಾವನೆಯನ್ನು ಪ್ರತಿಬಿಂಬಿಸುವಂತೆ ಪ್ರಸಾರಿಸಿದ ವಿಶೇಷ ರೀತಿ, ನಮ್ಮ ರಾಷ್ಟ್ರಪ್ರೇಮ ಹೇಗೆ ತನ್ನೆಲ್ಲ ಘನತೆಯನ್ನು ಕಳೆದುಕೊಂಡು ಅಗ್ಗದ ಮಾತಿನ ರಾಜಕಾರಣವಾಗಿ ಅವನತಿಗೊಂಡಿದೆ ಎಂಬುದನ್ನು ಸೂಚಿಸುವಂತಿತ್ತು. ಹಾಗೇ ಇದೇ ಸಮಯವೆಂದು, 'ದೇಶ ರಕ್ಷಿಸಬೇಕಾದ ಕಮಾಂಡೋಗಳು ಸರ್ಕಸ್‌ನಲ್ಲಿನ ವಿದೂಷಕರಂತಿರುವ ರಾಜಕಾರಣಿಗಳ ಅಂಗರಕ್ಷಕ ರಾಗುತ್ತಿದ್ದಾರೆ' ಎಂದು ತೆರೆಯ ಹಿಂದೆ ಕೂತು ಹೇಳಿಸುವ ಟಿ.ವಿ.ವಾಹಿನಿಯ ಸುದ್ದಿ ಸಂಪಾದಕನ ಸಿನಿಕತೆ ಮತು ಬೇಜವಾಬ್ದಾರಿತನ ಕೂಡಾ ಇಂತಹ ಅಗ್ಗದ ಮತ್ತು ಸುಲಭ ಮಾತಿನ ದೇಶಪ್ರೇಮದಿಂದ ಹುಟ್ಟಿದುದೇ ಆಗಿದೆ. ಮಾಧ್ಯಮಗಳ ಖಾಸಗೀಕರಣದ ನಿಜವಾದ ಅಪಾಯಗಳೇನು ಎಂಬುದು ನಮ್ಮ ಗಮನಕ್ಕೆ ಬರುವುದು ಇಂತಹ ರಾಷ್ಟ್ರ ಪರೀಕ್ಷೆಯ ಕಾಲದಲ್ಲೇ ಇರಬಹುದು....

ರಾಷ್ಟ್ರ ಮತ್ತೆ ಮತ್ತೆ ಭಯೋತ್ಪಾದನೆಗೆ ಬಲಿಯಾಗುತ್ತಿರುವುದಕ್ಕೂ, ಇಂತಹ ಅಗ್ಗದ ಮತ್ತು ಸುಲಭ ಮಾತಿನ ಉಗ್ರ ರಾಷ್ಟ್ರಪ್ರೇಮಕ್ಕೂ ಸಂಬಂಧವಿದೆ ಎನ್ನುವುದು ಇಲ್ಲಿ ಮುಖ್ಯ ಸಂಗತಿ. ನಿಜವಾಗಿ ರಾಷ್ಟ್ರವನ್ನು ಹೇಗೆ ಮತ್ತು ಯಾರಿಗಾಗಿ ಕಟ್ಟಲಾಗುತ್ತಿದೆ, ಈ ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯಲ್ಲಿ ಯಾರ ಯಾರ ಮತ್ತು ಯಾವ ಯಾವ ಆಶಯಗಳು ಅಭಿವ್ಯಕ್ತಗೊಳ್ಳುತ್ತಿವೆ ಎಂಬುದರ ಸೂಕ್ಷ್ಮ ಅವಲೋಕನವನ್ನು ಆಧರಿಸದ ಬರೀ ಟೊಳ್ಳು ಘೋಷಣೆಗಳ ರಾಷ್ಟ್ರ ಪ್ರೇಮ, ನಮ್ಮಲ್ಲಿ ಆತ್ಮಘಾತುಕವಾದ ಅಮಲನ್ನು ಮಾತ್ರ ಸೃಷ್ಟಿಸಬಲ್ಲುದು. ಈಗ ಆಗುತ್ತಿರುವಂತೆ. ಸದ್ಯದ ಮುಂಬೈ ಭಯೋತ್ಪಾದನಾ ಪ್ರಕರಣ ನಮ್ಮನ್ನು ಇಂತಹ ಆತ್ಮಘಾತುಕ ರಾಷ್ಟ್ರಪ್ರೇಮದ ಅಮಲಿನಿಂದ, ಮಂಪರಿನಿಂದ ಎಚ್ಚರಿಸಬೇಕು.

ಮುಂಬೈ ನಗರವನ್ನು ಹೊಕ್ಕಿದ್ದ ಭಯೋತ್ಪಾದಕರನ್ನು ನಮ್ಮ ವೀರ ಪೋಲೀಸರು ಮತ್ತು ಕಮಾಂಡೋಗಳು ಹುಲಿಗಳಂತೆಯೋ, ಸಿಂಹಗಳಂತೆಯೋ ಕಾದಾಡಿ ಮಣಿಸಿದ್ದಾರೆಂದು 'ಭಾರತ್ ಮಾತಾ ಕಿ ಜೈ' ಎಂದೋ, 'ವಂದೇ ಮಾತರಂ' ಎಂದೋ ಘೋಷಣೆ ಕೂಗಿ ಸುಲಭ ಮತ್ತು ಸುಕ್ಷೇಮ ವೀರಾವೇಶ ಪ್ರಕಟಿಸುವ ಬದಲು, ಈ ಭಯೋತ್ಪಾದನೆ ಮತ್ತೆ ಮತ್ತೆ ಏಕೆ ನಮ್ಮನ್ನು ಕಾಡುತ್ತಿದೆ ಮತ್ತು ಇದನ್ನು ಏಕೆ ಶಾಶ್ವತವಾಗಿ ನಿರ್ಮೂಲನ ಮಾಡಲಾಗುತ್ತಿಲ್ಲ ಎಂಬುದನ್ನು ಯೋಚಿಸಿ, ಆ ಬಗ್ಗೆ ಕ್ರಮ ಕೈಗೊಳ್ಳುವಂತಹ ವಾತಾವರಣವನ್ನು ನಿರ್ಮಿಸುವುದು ಇಂದಿನ ಸಂದರ್ಭದಲ್ಲಿ ನಿಜವಾದ ದೇಶಪ್ರೇಮದ ಅಭಿವ್ಯಕ್ತಿ ಎನಿಸಿಕೊಳ್ಳುತ್ತದೆ. ಈ ದೃಷ್ಟಿಯಿಂದ ಸದ್ಯದ ಮುಂಬೈ ಭಯೋತ್ಪಾದನೆ ಪ್ರಕರಣ ನಮ್ಮನ್ನು ಮೇಲಿನ ಈ ಎರಡೂ ಪ್ರಶ್ನೆಗಳ ಸಮೀಪಕ್ಕೆ ಕೊಂಡೊಯ್ಯುತ್ತದೆ.

ಈ ಭಯೋತ್ಪಾದಕರು ಎಷ್ಟು ಆರಾಮವಾಗಿ ಮುಂಬೈ ನಗರವನ್ನು ಪ್ರವೇಶಿಸಿ ಬಹಿರಂಗ ಹಿಂಸಾಚಾರಕ್ಕೆ ಇಳಿದರು ಎಂದರೆ, ಈ ದೇಶ ಮತ್ತು ಈ ನಗರ ಭಯೋತ್ಪಾದನೆಯ ತಲ್ಲಣವನ್ನು ಈ ಮುಂಚೆ ಎದುರಿಸಿಯೇ ಇಲ್ಲವೇನೋ ಎಂಬಷ್ಟು ನಿರಾಂತಕದಲ್ಲಿತ್ತು ಎಂಬುದನ್ನು ನಾವು ಗಮನಿಸಬೇಕು. ಸಾಮಾನ್ಯ ಜನರ, ಆಡಳಿತಗಾರರ, ರಾಜಕಾರಣಿಗಳ ಸಾರ್ವಜನಿಕ ನಿರ್ಲಕ್ಷ್ಯದ ಪರಮಾವಧಿ ಇದು. ಇದರ ಹಿಂದೆ ಇತ್ತೀಚೆಗೆ ಕಟ್ಟಲಾಗುತ್ತಿರುವ ಒಂದು ರಾಷ್ಟ್ರೀಯ ಜೀವನ ದೃಷ್ಟಿಕೋನದ ದೊಡ್ಡ ದೋಷವೇ ಇದೆ. ವಿಶೇಷವಾಗಿ ನಮ್ಮ ನಗರ-ಪಟ್ಟಣಗಳಲ್ಲಿ ಇದು ಎದ್ದು ಕಾಣುವಂತಿದೆ. ಅದೆಂದರೆ, ಜೀವನ ಇರುವುದು ಸ್ಪರ್ಧಾತ್ಮಕ ದುಡಿಮೆಯಲ್ಲಿ ಮುಳುಗಿ ಆದಷ್ಟೂ ಹೆಚ್ಚು ಸಂಪಾದಿಸುವುದು ಮತ್ತು ಇದಕ್ಕೆ ತಕ್ಕ ಹಾಗೆ ಸೃಷ್ಟಿಯಾಗುತ್ತಿರುವ ಹೊಸ ಹೊಸ ರೀತಿಯ ಮೋಜು-ಮಸ್ತಿಗಳಲ್ಲಿ ತೊಡಗಿ ಮೈಮರೆಯುವುದು. ಇದು ಎಲ್ಲರಿಗೂ ಸಾಧ್ಯವಾಗಿಲ್ಲ ಎನ್ನುವುದು ನಿಜವಾದರೂ, ಈ 'ತೀಟೆ' ಎಲ್ಲರ ಮೈ ಹೊಕ್ಕಿದೆ ಎಂಬುದಂತೂ ನಿಜ. ಹಾಗಾಗಿಯೇ ಭಯೋತ್ಪಾದಕರು ರಾಜಾರೋಷವಾಗಿ ಜನರ ಮಧ್ಯೆಯೇ ದೋಣಿಗಳಲ್ಲಿ ಬಂದಿಳಿದು, ಜನರ ಮಧ್ಯೆಯೇ ಶಸ್ತ್ರಾಸ್ತ್ರಗಳ ಚೀಲಗಳನ್ನು ಹೊತ್ತುಕೊಂಡು ತಂತಮ್ಮ ಕಾರ್ಯಾಚರಣೆಗಳ ಜಾಗಗಳನ್ನು ಸೇರಿದ್ದಾರೆ. ಅಷ್ಟೇ ಅಲ್ಲ, ತೆರೆದಿಟ್ಟಿದ್ದ ಪೋಲೀಸ್ ಜೀಪುಗಳನ್ನು ಹೊಕ್ಕು ಪರಾರಿಯಾಗಲೂ ಅವರಿಗೆ ಸಾಧ್ಯವಾಗಿದೆ. ಕುತೂಹಲಗೊಂಡ ಒಂದಿಬ್ಬರು ಭಯೋತ್ಪಾದಕರನ್ನು ಅವರು ಯಾರೆಂದು ವಿಚಾರಿಸುವ ಪ್ರಯತ್ನ ಮಾಡಿದರಾದರೂ, ಅವರು ಕೊಟ್ಟ 'ನಿಮ್ಮ ಕೆಲಸ ನೀವು ನೋಡಿಕೊಳ್ಳಿ' ಎಂಬ ಉತ್ತರದಿಂದ ಸಂತೃಪ್ತಗೊಂಡು, ಇದನ್ನು ಪೋಲೀಸರಿಗೂ ತಿಳಿಸದಷ್ಟು ನಿರಾತಂಕಿತರಾಗಿ ತಮ್ಮ ದಾರಿ ಹಿಡಿದಿದ್ದಾರೆ! ಇಂತಹ ಲೋಕಾಭಿರಾಮೀ ಜನರಿರುವ ದೇಶವನ್ನು ಭಯೋತ್ಪಾದನೆ ಪೀಡಿತ ದೇಶವೆಂದು ಕರೆಯುವುದಾದರೂ ಹೇಗೆ?

ನಗರಗಳೇ ಹಾಗೆ. ಅದರ ಕೈ ಕಾಲು, ಬಾಯಿ ಇತ್ಯಾದಿ ಅಂಗಗಳು ಸದಾ ಕ್ರಿಯಾಶೀಲವಾಗಿದ್ದರೂ, ಮನಸ್ಸು ಮಾತ್ರ ಸ್ಥಗಿತಗೊಂಡಿರುತ್ತದೆ. ನಮ್ಮ ಮಾಧ್ಯಮ ತಜ್ಞರು ಮತ್ತು ಸಾಮಾಜಿಕ ಮುಖಂಡರು ಇದನ್ನು ನಗರಜೀವನದ ವಿಶಿಷ್ಟ 'ಸ್ಥೈರ್ಯ'ವೆಂದೂ

ಕರೆಯುವುದುಂಟು! ಈ ಹಿಂದಿನ ಭಯೋತ್ಪಾದನಾ ಪ್ರಕರಣಗಳ ಸಂದರ್ಭದಲ್ಲಿ, ಭಯೋತ್ಪಾದನೆಯ ಅನಾಹುತಗಳೆಲ್ಲ ಮುಗಿದ ಒಂದೇ ದಿನದಲ್ಲೋ, ಒಂದೇ ತಾಸಿನಲ್ಲೋ ನಗರದ ಜನಜೀವನ ಮತ್ತೆ ಮಾಮೂಲು ಸ್ಥಿತಿಗೆ ಮರಳಿದೆ ಎಂದು ತಮ್ಮ ನಗರದ spiritನ್ನು ಹಾಡಿ ಹೊಗಳಿದವರೇ ಇವರೆಲ್ಲ. ಅಂದರೆ, ಇವರ ಪ್ರಕಾರ ಇವರು ಪ್ರತಿನಿಧಿಸುವ ಹಿತಾಸಕ್ತಿಗಳ ವ್ಯಾಪಾರ-ವ್ಯವಹಾರಗಳಿಗೆ ಯಾವುದೇ ಅಡೆ-ತಡೆಯಾಗದಿರುವುದೇ ನಗರದ spirit! ಇಂತಹ ಆತ್ಮಘಾತುಕ spiritನಲ್ಲಿ ಅಂತರ್ಗತವಾಗಿರುವ ವೇಗ ಮತ್ತು ಗದ್ದಲಗಳೇ ಇಂದು ಮುಂಬೈಯನ್ನು ಯುದ್ಧಭೂಮಿಯಾಗಿಸಲು ಕಾರಣವಾಗಿದ್ದುದು. ಈ ವೇಗ ಮತ್ತು ಗದ್ದಲಗಳು ನಿಂತಿರುವುದೇ ನಾವೊಂದು ಸಮಾಜ ಮತ್ತು ರಾಷ್ಟ್ರ ಎಂಬ ಮರೆವಿನ ಮೇಲೆ. ಈ ಮರೆವೇ ನಮ್ಮ ವ್ಯವಸ್ಥೆಯ ಎಲ್ಲ ಅಸಮಾನತೆ, ಭ್ರಷ್ಟತೆ, ಸಿನಿಕತೆ, ಹಿಂಸೆ ಮತ್ತು ಕೋಮುವಾದಗಳಿಗೆ ಕಾರಣವಾಗಿರುವುದು

ಈ ರೋಗಗಳಿಗೆ ಒಳಗಾದ ವ್ಯವಸ್ಥೆ, ಎಲ್ಲ ರೀತಿಯಲ್ಲೂ ಅಸೂಕ್ಷ್ಮವಾಗಿ, ಬೇಜವಾಬ್ದಾರವಾಗಿ ಹೊರಗಿನ ಆಕ್ರಮಣವನ್ನು ಎದುರಿಸುವ ಪ್ರತಿರೋಧ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಅಷ್ಟೇ ಅಲ್ಲ, ಇಂತಹ ಆಕ್ರಮಣಗಳ ಸಾಧ್ಯತೆಗೂ ಜಡವಾಗುವ ಸ್ಥಿತಿಗೆ ಈಡಾಗುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಇಂದಿನ ಅಭೂತಪೂರ್ವ ಎಂದು ಹೇಳಲಾಗುತ್ತಿರುವ 'ಪ್ರಗತಿ'ಯ ರೀತಿ ನೀತಿಗಳು ಮನುಷ್ಯರನ್ನು ಹಂದಿಗಳನ್ನಾಗಿ ಮಾಡುತ್ತಿದೆ. ಇವರಲ್ಲಿ ರಾಜಕಾರಣಿಗಳು, ಅಧಿಕಾರಿಗಳು, ಬುದ್ಧಿಜೀವಿಗಳು, ಉದ್ಯಮಿಗಳು, ನೌಕರರು, ಬೇಹುಗಾರರು, ಸಾಮಾನ್ಯ ಜನ ಎಲ್ಲ ಸೇರಿದ್ದಾರೆ. ಹೀಗಾಗಿ, ಅನಿವಾರ್ಯವಾದಾಗಲಾದರೂ ಒಂದಿಷ್ಟು ಮೌನಕ್ಕೆ, ಆತ್ಮಾವಲೋಕನಕ್ಕೆ ಅವಕಾಶವಿಲ್ಲದ 'ನಿರಂತರ ದುಡಿಮೆ ಮತ್ತು ಮಜಾ' ಸಂಸ್ಕೃತಿಯೇ ಇಂದು ರಾಷ್ಟ್ರದ ಹೆಮ್ಮೆಯ 'ಅಭಿವೃದ್ಧಿ ಸಂಸ್ಕೃತಿ' ಎನ್ನಿಸಿಕೊಂಡುಬಿಟ್ಟಿದೆ. ಅದು ನಮ್ಮ ಇಡೀ ವ್ಯವಸ್ಥೆಯನ್ನು ಬುಡದಿಂದ ತುದಿವರೆಗೆ ನೈತಿಕವಾಗಿ ದಿವಾಳಿ ಎಬ್ಬಿಸಿ, ನಮ್ಮ ನಗರಗಳು ಪದೇ ಪದೇ ಭಯೋತ್ಪಾದನೆಗೆ ಬಲಿಯಾಗುತ್ತಿರುವುದಕ್ಕೆ ಕಾರಣವಾಗಿದೆ. ಇದಕ್ಕೆ ಯಾವುದೇ ಅಪವಾದವಿಲ್ಲದೆ, ನಮ್ಮ ಎಲ್ಲ ರಾಜಕೀಯ ಪಕ್ಷಗಳ ಸಮಾನ ಕೊಡುಗೆ ಇದೆ ಎಂಬುದನ್ನೂ ನಾವು ಮರೆಯಬಾರದು

ಇನ್ನು ಈ ಬಾರಿ ಭಯೋತ್ಪಾದಕರನ್ನು ಹಿಡಿಯಲು, ಕೊಲ್ಲಲು ನಮ್ಮ ರಕ್ಷಣಾ ದಳ ಪಟ್ಟ ಪರಿಶ್ರಮವನ್ನೇ ಗಮನಿಸಿ. ಚಲಿಸುತ್ತಲೇ ಇರುವ ದಟ್ಟ ಜನಸಂದಣಿ, ಶಾಖೋಪಶಾಖೆಗಳಾಗಿ ಒಡೆದು ವಿಸ್ತರಿಸಿಕೊಳ್ಳುತ್ತಲೇ ಹೋಗುವ ಇಕ್ಕಟ್ಟಾದ ರಸ್ತೆಗಳು, ಒತ್ತೊತ್ತಾಗಿ ಕಟ್ಟಲ್ಪಟ್ಟಿರುವ ಬೃಹತ್ ಕಟ್ಟಡಗಳು, ಅಂತಾರಾಷ್ಟ್ರೀಯ ಆಡಳಿತ ಜಾಲಕ್ಕೆ ಸೇರಿದ ಮತ್ತು ಜಟಿಲ ವಾಸ್ತು ವಿನ್ಯಾಸದ ಹಲವು ಅಂತಸ್ತುಗಳ ನೂರಾರು ಕೋಣೆಗಳ ಹೋಟೆಲ್‌ಗಳು ಮತ್ತು ಭವನಗಳು. ಇವುಗಳ ಒಳಹೊಕ್ಕ ಹತ್ತು ಜನ ಭಯೋತ್ಪಾದಕರನ್ನು ಹಿಡಿಯಲು, ಕೊಲ್ಲಲು ನಮ್ಮ ಕಮಾಂಡೋಗಳಿಗೆ ನೂರಕ್ಕೂ ಹೆಚ್ಚು ಜನ ಅಮಾಯಕರ ಸಾವು ಮತ್ತು ಮೂರು ದಿನಗಳು ಬೇಕಾದವು! ಹಾಗೆ ನೋಡಿದರೆ, ನಮ್ಮ ನಗರಗಳ ಸ್ವರೂಪವೇ

ಭಯೋತ್ಪಾದಕರಿಗೆ ಆಹ್ವಾನ ನೀಡುವಂತಿದೆ. ಗಾಂಧಿ ತಮ್ಮ 'ಹಿಂದ್ ಸ್ವರಾಜ್'ನಲ್ಲಿ ನಗರಗಳು ಎಂದರೆ ಹಾವಿನ ಹುತ್ತಗಳು ಇದ್ದಂತೆ ಎಂದಿದ್ದುದು ಈ ಅರ್ಥದಲ್ಲಿಯೇ. ನಗರ ಎಂದರೆ, ಎಲ್ಲ ಕಳ್ಳಕಾಕರು, ದುಷ್ಟರು, ಭ್ರಷ್ಟರು, ತಲೆಹಿಡುಕರು ಒಬ್ಬರನ್ನೊಬ್ಬರು ಅವಲಂಬಿಸಿಕೊಂಡು ಸುರಕ್ಷಿತವಾಗಿರಲು ವಿನ್ಯಾಸ ಮಾಡಿಕೊಂಡಿರುವ ವ್ಯವಸ್ಥೆ ಎಂದು ವರ್ಣಿಸಿದ್ದರು. ಇಂತಹ ನಗರೀಕರಣವನ್ನು ಪ್ರೋತ್ಸಾಹಿಸುವ–ಆಕಾಶಕ್ಕೆ ಏಣಿ ಹಾಕಿಕೊಂಡ–ಕೈಗಾರಿಕೀಕೃತ ಅಭಿವೃದ್ಧಿಗೆ ಬದಲಾಗಿ, ತನ್ನ ಮಿತಿಗಳಲ್ಲೇ ನೆಮ್ಮದಿಯನ್ನು ಸೃಷ್ಟಿಸಬಲ್ಲ–ಈ ಭೂಮಿಗೇ ಅಂಟಿಕೊಂಡ–ಕೃಷಿ ಸಂಸ್ಕೃತಿ ಆಧಾರಿತ ಗ್ರಾಮ 'ಸ್ವರಾಜ್ಯ'ದ ಹಾದಿಯಲ್ಲಿ ನಡೆಯಬೇಕೆಂದು ಸೂಚಿಸಿದ್ದರು. ಅವರ ಮಾತುಗಳನ್ನು ಕೇಳಿ ನಕ್ಕಿದ್ದ ಭಾರತ, ಇಂದು ಆ ನಗುವಿನ ಹಿಂದಿದ್ದ ವ್ಯಂಗ್ಯಕ್ಕೆ ತಾನೇ ಈಡಾಗುತ್ತಿದೆ!

ಇಂದು ಆಧುನಿಕ ಭಾರತ 'ಪ್ರಗತಿ'ಯ ಹೆಸರಿನಲ್ಲಿ ಚಲಿಸುತ್ತಿರುವ ದಿಕ್ಕಿನಲ್ಲೇ, ಆ ಚಲನೆಯನ್ನು ನಿರ್ದೇಶಿಸುತ್ತಿರುವ ರಾಜಕಾರಣದಲ್ಲೇ ಹಿಂಸೆ ಅಂತರ್ಗತವಾಗಿದೆ. ಅದು ಎಲ್ಲ ರೂಪಗಳ ಮೂಲಕ ಹಾದುಹೋಗಿ ಈಗ ಭಯೋತ್ಪಾದನೆಯ ಅಂತಿಮರೂಪ ತಾಳಿದೆ. ಆದರೆ ಇಂದಿನ ಈ ಪ್ರಗತಿಯ ವೇಗಕ್ಕೆ ಸಿಕ್ಕಿರುವ ನಾವು, ಆ ವೇಗ ಹುಟ್ಟಿಸಿರುವ ಮನಸ್ಸಿನ 'ಗದ್ದಲ'ದಲ್ಲಿ ಇದನ್ನು ಅರ್ಥ ಮಾಡಿಕೊಳ್ಳುವ ವ್ಯವಧಾನವಾಗಲೀ, ಸಹನೆಯಾಗಲೀ ಇಲ್ಲದೆ, ಇದಕ್ಕೆ ಬೇರೇನೋ–shot cutಗಳ–ಪರಿಹಾರಗಳನ್ನು ಹುಡುಕುವ ಯತ್ನದಲ್ಲಿದ್ದೇವೆ. ಮತ್ತು ಈ ಪರಿಹಾರಗಳು ಪದೇ ಪದೇ ವಿಫಲಗೊಳ್ಳುತ್ತಿರುವುದನ್ನು ನೋಡಿ, ಇನ್ನಷ್ಟು ಹತಾಶರಾಗುತ್ತಿದ್ದೇವೆ. ಈ ಹತಾಶೆಯಲ್ಲಿ ಮನಸ್ಸಿನಲ್ಲಿ ಅಡಗಿದ್ದ ಭೂತಗಳೆಲ್ಲ ಎದ್ದು ಮನಸ್ಸಿನ ಕೋಮುವಾದೀಕರಣ, ವಿಕ್ಷಿಪ್ತೀಕರಣ, ಹಿಂಸೀಕರಣಗಳಿಗೆ ಕಾರಣವಾಗುತ್ತಿವೆ. ಮುಸ್ಲಿಂ ಭಯೋತ್ಪಾದನೆಯನ್ನು ಎದುರಿಸಲು ಹಿಂದೂ ಭಯೋತ್ಪಾದನೆಯ ಸೃಷ್ಟಿ, ಪಾಕಿಸ್ತಾನದ ನಾಶಕ್ಕೆ ಕರೆ, ಎಕೆ-೪೭ ಬಂದೂಕು ಇತ್ಯಾದಿ ಆಧುನಿಕ ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಅನುಮತಿ ನೀಡುವಂತೆ ಖಾಸಗಿ ಕಂಪನಿಗಳು ಇಡಲಾರಂಭಿಸಿರುವ ಬೇಡಿಕೆ ಇತ್ಯಾದಿಗಳು ಇದಕ್ಕೆ ಉದಾಹರಣೆಗಳಷ್ಟೆ. ಇವು ಭಯೋತ್ಪಾದನೆ ಹೊಸ ಹೊಸ ರೂಪಗಳನ್ನು ತಾಳಿ ಮತ್ತು ಇನ್ನಷ್ಟು ಉಲ್ಬಣಗೊಳ್ಳಲು ಕಾರಣವಾಗುತ್ತವಷ್ಟೆ. ಎಷ್ಟು ದಿಕ್ಕುಗಳಲ್ಲಿ ಎಷ್ಟು ಜನರನ್ನು ಕಾಯುತ್ತೀರಿ? ಎಷ್ಟು ಜನರನ್ನು ಎಷ್ಟು ದಿನಗಳವರೆಗೆ ಕೊಲ್ಲುತ್ತಾ ಹೋಗುತ್ತೀರಿ? ಎಕೆ-೪೭ ಕೊಳ್ಳಬಲ್ಲವರಿಗಷ್ಟೆ ರಕ್ಷಣೆ ಸಾಕೆ? ಸದಾ ಆತಂಕದಲ್ಲಿ, ಎಚ್ಚರಿಕೆಯಲ್ಲಿರಬೇಕಾದ ಮನಸ್ಸಿಗೆ ಶಾಂತಿ ಎಲ್ಲಿ?

ಹಾಗಾಗಿ, ಮತ್ತೆ ಮತ್ತೆ ಎದುರಾಗುವ ಭಯೋತ್ಪಾದನಾ ಪ್ರಕರಣಗಳನ್ನು ಸಶಕ್ತವಾಗಿ ಎದುರಿಸುತ್ತಲೇ, ಇದರ ಕಾರಣಗಳನ್ನು ಕೂಲಂಕಶವಾಗಿ ಪರಿಶೀಲಿಸುವ ಸಹನೆ ಮತ್ತು ವ್ಯವಧಾನವನ್ನೂ ರೂಢಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಆಗ ಈ ಗಾಂಧಿ ಸತ್ಯಗಳು ಗೋಚರವಾಗಬಹುದು: ಹಾವಿನ ಹುತ್ತಗಳಂತಹ ನಗರಗಳನ್ನು ಕಟ್ಟುವ ಅಭಿವೃದ್ಧಿ ಪಥವನ್ನು ಆದಷ್ಟು ಬೇಗ ತ್ಯಜಿಸಬೇಕು. ಜನರಲ್ಲಿ ಮಿತಿ ಮೀರಿದ ಸುಖಾಪೇಕ್ಷೆಗಳನ್ನು ಹುಟ್ಟಿಸುವಂತಹ

ಸ್ಪರ್ಧಾತ್ಮಕ ದುಡಿಮೆಯ ಮಾದರಿಗಳಿಗೆ ಕಡಿವಾಣ ಹಾಕಬೇಕು. ಭಾರತ ಜಾಗತಿಕ ಶಕ್ತಿಯಾಗಿ ಮೆರೆಯುವ ಕನಸನ್ನೂ, ಹಂಬಲವನ್ನೂ ಕೈ ಬಿಡಬೇಕು. ಇದರ ಭಾಗವಾಗಿ, ತನ್ನ ನೆರೆಹೊರೆಯ ಎಲ್ಲ ದೇಶಗಳೊಂದಿಗೆ ಸಮಾನತೆಯ ಆಧಾರದ ಮೇಲೆ ಸಂಬಂಧಗಳನ್ನು ಪುನರ್‌ವಿನ್ಯಾಸಗೊಳಿಸಿಕೊಳ್ಳಬೇಕು. ವಿಶೇಷವಾಗಿ ಪಾಕಿಸ್ತಾನದೊಡನೆಯ ಗಡಿಯನ್ನು ಅಪ್ರಸ್ತುತಗೊಳಿಸಿಕೊಳ್ಳುವ ರೀತಿಯಲ್ಲಿ, ಎರಡೂ ಕಡೆ ವಿಶ್ವಾಸವನ್ನು ಕುದುರಿಸುವ ನಿರ್ಣಾಯಕ 'ದುಸ್ಸಾಹಸ'ಕ್ಕೆ ಸಿದ್ಧವಾಗುವ ಧೈರ್ಯ ತೋರಬೇಕು. ಸಂಪತ್ತು ಮತ್ತು ಸೇನೆಯ ಶಕ್ತಿಗಿಂತ ಹೆಚ್ಚಾಗಿ ನೈತಿಕ ಶಕ್ತಿಯ ಆಧಾರದ ಮೇಲೆ ಜಾಗತಿಕವಾಗಿ ತನ್ನ ಸ್ಥಾನದ ಮಹತ್ವವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಬೇಕು. ಪಶ್ಚಿಮದ ಕೈಗಾರಿಕಾ ನಾಗರೀಕತೆ ವೈವಿಧ್ಯಮಯ ಹಿಂಸೆಯನ್ನು ಜಗತ್ತಿನಾದ್ಯಂತ ಹುಟ್ಟುಹಾಕಿ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತಿರುವ ಈ ಐತಿಹಾಸಿಕ ಸಂದರ್ಭದಲ್ಲಿ, ಇದರಿಂದಾಗಿಯೇ ಸ್ವತಃ ಅಸಹನೀಯ ಹಿಂಸೆಗೆ ಗುರಿಯಾಗಿರುವ ಭಾರತ; ಹೀಗೆ ಜಗತ್ತಿಗೆ ಒಂದು ಪರಿಹಾರದ ಮಾದರಿಯನ್ನು ನಿರ್ಮಿಸಬಹುದಾಗಿದೆ. ಇದು ಗಾಂಧಿ ಕಂಡ ಕನಸೂ ಆಗಿತ್ತು. ಅದನ್ನು ಸ್ವಲ್ಪ ತಡವಾಗಿಯಾದರೂ ಗಾಂಧಿ ನಾಡು ಮಾಡಿ ತೋರಿಸಬಹುದಾಗಿದೆ.

ಇದೊಂದೇ-ಅಸಾಧ್ಯವೆನಿಸುವಷ್ಟು-ದೂರದಲ್ಲಿಯಾದರೂ ಕಾಣುತ್ತಿರುವ ಪರಿಹಾರ ವಾಗಿದೆ.

(೧೨ ಡಿಸೆಂಬರ್, ೨೦೦೮)

■

೩.೨. ಮಠಗಳು ಮತ್ತು ಜಾತಿವ್ಯವಸ್ಥೆ

ಕರ್ನಾಟಕದಲ್ಲಿರುವ ಮಠಾಧೀಶರಲ್ಲೆಲ್ಲ, ಬಹುಶಃ ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರಘರಾಜೇಂದ್ರ ಶರಣರು ವಿಶಿಷ್ಟರು. ಇವರು ಮಠದ ಸ್ವರೂಪ ಮತ್ತು ಕಾರ್ಯಶೈಲಿಯನ್ನು ಆದಷ್ಟೂ ಆಧುನೀಕರಿಸಿ, ತಮ್ಮ ಚಿಂತನೆಯಲ್ಲೂ ಸಮಕಾಲೀನತೆಯನ್ನು ರೂಢಿಸಿಕೊಂಡವರು. ಸಾಮಾಜಿಕ ಮತ್ತು ಧಾರ್ಮಿಕ ವಿವಾದಗಳೆದ್ದಾಗಲೆಲ್ಲ ಪ್ರಾಚೀನ ಶಾಸ್ತ್ರ-ಸಂಪ್ರದಾಯಗಳ ಚೌಕಟ್ಟಿನಲ್ಲಿ ಯೋಚಿಸದೆ, ಬದಲಾಗುತ್ತಿರುವ ಜನರ ಬದುಕಿನ ಆಶೋತ್ತರಗಳು ಮತ್ತು ನಂಬಿಕೆಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಇದಕ್ಕಾಗಿ ಅವರು ತಮ್ಮ ಸಹ-ಮಠಾಧೀಶರ ಟೀಕೆ-ವ್ಯಂಗ್ಯ-ಕಟಕಿಗಳಿಗೆ ಒಳಗಾದದ್ದೂ ಉಂಟು. ಆದರೆ ಅವುಗಳಿಂದೇನೂ ಇವರು ವಿಚಲಿತರಾಗದೆ, ಮಠ ವ್ಯವಸ್ಥೆಯನ್ನೂ, ಅದರ ಚಿಂತನಾಕ್ರಮವನ್ನೂ ಆಧುನೀಕರಿಸುವ ತಮ್ಮ ಪ್ರಯತ್ನಗಳನ್ನು ಮುಂದುವರೆಸಿಯೇ ಇದ್ದಾರೆ. ಇದರಿಂದಾಗಿ ಇತರ ಮಠ ಮತ್ತು ಮಠಾಧೀಶರ ಮೇಲೂ ಒತ್ತಡಗಳು ಉಂಟಾಗುತ್ತಿದ್ದು, ಅವರೂ ಜಾತಿ, ಧರ್ಮ, ಸಮಾಜ ಕುರಿತ ತಮ್ಮ ನಿಲುವುಗಳನ್ನು ಉದಾರಗೊಳಿಸಿಕೊಳ್ಳಲು, ಆಧುನೀಕರಿಸಿಕೊಳ್ಳಲು ಒತ್ತಡಗಳು ಉಂಟಾಗುತ್ತಿವೆ.

ಅಂದ ಮಾತ್ರಕ್ಕೆ ಇತರೆ ಮಠಾಧೀಶರಿಗೆ ಹೋಲಿಸಿದರೆ, ಇವರು ಸರ್ವಶ್ರೇಷ್ಠರು ಎಂದಲ್ಲ. ಇವರಿಗಿಂತ ವಿದ್ಯಾವಂತರಾದವರು, ಪಂಡಿತರಾದವರು, ಜನಸೇವೆಯಲ್ಲಿ ತೊಡಗಿದ ಅನೇಕ ಮಠಾಧೀಶರು ಕರ್ನಾಟಕದಲ್ಲಿ ಉಂಟು. ಉದಾಹರಣೆಗೆ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿಗಳು ವಿದ್ಯಾ ಮತ್ತು ಪ್ರಸಾದ ಸೇವೆಯಿಂದಲೇ ಎಲ್ಲರಿಗಿಂತ ಶ್ರೇಷ್ಠರಾಗಿದ್ದಾರೆ. ಅವರ ಸಾಮಾಜಿಕ ಕಳಕಳಿ ಮತ್ತು ವಿದ್ವತ್ತುಗಳೂ ಶ್ರೇಷ್ಠವಾದುವೇ. ಆದರೆ ಸಾಮಾಜಿಕ ಬದಲಾವಣೆ ಕುರಿತ ಅವರ ತುಡಿತ ಅಷ್ಟೇನೂ ತೀವ್ರವಾದದ್ದಲ್ಲ. ಅವರ ಮಠ ಮತ್ತು ಜನಸೇವೆಯೂ ಜಾತಿ ಪದ್ಧತಿಯ ಬಂಧನದಿಂದ ಕಳಚಿಕೊಂಡಿದೆ ಎಂದೇನೂ ಹೇಳುವಂತಿಲ್ಲ. ಮುಖ್ಯವಾಗಿ, ಶಾಸ್ತ್ರ ಮತ್ತು ಧರ್ಮಗ್ರಂಥಗಳನ್ನು ಇಂದಿನ ಕಾಲದ ಅಗತ್ಯಗಳಿಗೆ ತಕ್ಕಂತೆ ಪುನರ್ವ್ಯಾಖ್ಯಾನಿಸಬೇಕಿದೆ ಎಂದು ಅವರಿಗೆ ಅನ್ನಿಸಿದ ಬಗ್ಗೆ ಯಾವ ಪುರಾವೆಗಳೂ ಇಲ್ಲ. ಅವರ ಮಠದ ನಾಲ್ಕಾರು ಜನ ವಿದ್ಯಾರ್ಥಿಗಳು ನನಗೆ ಶಾಲಾ ದಿನಗಳಲ್ಲಿ ಉಪಾಧ್ಯಾಯರಾಗಿ ದೊರೆತಿದ್ದರು. ಜಾತಿಪ್ರಜ್ಞೆಯೇ ಇಲ್ಲದೆ ಬದುಕುತ್ತಿದ್ದ ನನ್ನ ಬಾಲ್ಯದಲ್ಲಿ ಜಾತಿಪ್ರಜ್ಞೆಯನ್ನು ಕೆರಳಿಸಿದವರು ಇವರೇ. ರಚನಾತ್ಮಕ ಅರ್ಥದಲ್ಲಿ ಅಲ್ಲ. ಅವರ

ಲಿಂಗಾಯ್ತ ಜಾತೀಯತೆಯ ಘಾಟು ನಮ್ಮ ಉಸಿರುಗಟ್ಟಿಸುವಂತಿತ್ತು. ಸಂಸ್ಕೃತ ಉಪಾಧ್ಯಾಯರೂ ಆಗಿದ್ದ, ದೊಡ್ಡಕಣ್ಣ ದೇವರು ಎಂಬ ಅಪ್ಪಟ ಕನ್ನಡ ಹೆಸರು ಪಡೆದಿದ್ದ ಒಬ್ಬ ಉಪಾಧ್ಯಾಯರಂತೂ, ನನ್ನ ದಲಿತ ಸಹಪಾಠಿಗಳನ್ನು ಎಷ್ಟು ದಾರುಣವಾಗಿ ಗೋಳು ಹೊಯ್ದುಕೊಳ್ಳುತ್ತಿದ್ದರೆಂದರೆ, ಹಲವು ಬಾರಿ ನನಗೇ ಕಣ್ಣೀರು ಬರುತ್ತಿತ್ತು. ಸಿದ್ಧಗಂಗೆ ಮಠಾಧೀಶರು ನಮ್ಮೂರಿಗೆ ಆಗಾಗ್ಗೆ ಭಿಕ್ಷಕ್ಕೆ ಬಂದು ಮಾಡುತ್ತಿದ್ದ ಸಾರ್ವಜನಿಕ ಭಾಷಣಗಳ ಎತ್ತರ ಮತ್ತು ಅಲ್ಲಿ ತಯಾರಾದ ಈ ಶಿಷ್ಯರು ಮುಟ್ಟುತ್ತಿದ್ದ ಈ ಪಾತಾಳಗಳ ಅಂತರ ಅರ್ಥವಾಗದ ನಾನು ಅನೇಕ ಸಲ ಗೊಂದಲಗಳಿಗೆ ಒಳಗಾಗುತ್ತಿದ್ದೆ.

ಇದು ಒಂದು ಮಠದ ಉದಾಹರಣೆ ಅಷ್ಟೆ. ಇನ್ನೂ ನಾಲ್ಕಾರು ಜಾತಿಗಳ ನಾಲ್ಕಾರು ಮಠಗಳಲ್ಲಿ ತಯಾರಾದ ವಿದ್ಯಾರ್ಥಿಗಳೂ ನನ್ನ ಸ್ನೇಹಿತರಾಗಿದ್ದಾರೆ. ಅವರಿಗೆ ತಮ್ಮನ್ನು 'ತಯಾರು' ಮಾಡಿದ ಈ ಮಠಗಳ ಬಗ್ಗೆ ಕೃತಜ್ಞತೆಯ ಜೊತೆಗೇ ಸಾಕಷ್ಟು ಸಿಟ್ಟಿದೆ, ವಿಷಾದವಿದೆ. ಕೆಲವರಲ್ಲಿ ಭಯ ಕೂಡಾ ಇದೆ! ಹೀಗಿರುವಾಗ ನಾನು ಚಿತ್ರದುರ್ಗ ಆಕಾಶವಾಣಿಯಲ್ಲಿ ಐದು ವರ್ಷಗಳಿದ್ದ ಅವಧಿಯಲ್ಲಿ ಮುರುಘರಾಜೇಂದ್ರ ಮಠದೊಂದಿಗೆ ಸಂಪರ್ಕವೇರ್ಪಟ್ಟು, ನನಗೆ ಮಠಗಳ ಬಗ್ಗೆ ಇದ್ದ ಕಲ್ಪನೆಯೇ ಬದಲಾಯಿತೆಂದು ಹೇಳಬೇಕು. ನನ್ನ ಚಿತ್ರದುರ್ಗ ಸೇವಾವಧಿಯ ಕೊನೆಯಲ್ಲಿ ಸ್ವಾಮೀಜಿಯವರ ವೈಯಕ್ತಿಕ ಆಹ್ವಾನವನ್ನು ತಿರಸ್ಕರಿಸಲಾಗದೆ ಮಠಕ್ಕೊಮ್ಮೆ ಹೋಗಿ ಅವರ ಪ್ರೀತಿಯ 'ಬೀಳ್ಕೊಡುಗೆ ಸತ್ಕಾರ'ವನ್ನು ಸ್ವೀಕರಿಸಿ ಬಂದಿದ್ದರ ಹೊರತಾಗಿ, ನಾನೆಂದೂ ಅವರ ಮಠದ ಆವರಣ ಪ್ರವೇಶಿಸಿದವನಲ್ಲ. ಅವರ ಯಾವ ಕಾರ್ಯಕ್ರಮಕ್ಕೂ–ಹಲವು ಬಾರಿ ಆಹ್ವಾನವಿದ್ದರೂ–ಅತಿಥಿಯಾಗಿ ಆಗಲಿ, ಸಭಿಕನಾಗಿಯಾಗಲಿ, ಹೋಗಿಬಂದವನಲ್ಲ. ಮಠ ಪ್ರತಿವರ್ಷ ಘೋಷಿಸುವ 'ಬಸವಶ್ರೀ' ಪ್ರಶಸ್ತಿಗಾಗಿ ಅರ್ಹರನ್ನು ಮತ್ತು ನಡೆಸುವ ಶರಣ ಸಂಸ್ಕೃತಿ ಉತ್ಸವದ ಅತಿಥಿಗಳನ್ನು ನಿರ್ಣಯಿಸುವಲ್ಲಿ ಹಾಗೂ ಅವರನ್ನು ಕರೆಸುವಲ್ಲಿ ಸ್ವಾಮೀಜಿಯ ಆಪ್ತ ಬಳಗದವರು ನನ್ನ ಸಲಹೆಗಳನ್ನು, ಸಹಾಯವನ್ನು ಕೇಳುತ್ತಿದ್ದುದುಂಟು. ಮತ್ತು ಹಲವು ಬಾರಿ ನನ್ನ ಸಲಹೆಗಳನ್ನು ಅವರು ಮಾನ್ಯ ಮಾಡುತ್ತಿದ್ದುದೂ ಉಂಟು. ಹೀಗೆ ಬಸವಶ್ರೀ ಪ್ರಶಸ್ತಿ ಪಡೆದ ಮೇಧಾ ಪಾಟ್ಕರ್ ಮತ್ತು ಅಣ್ಣಾ ಹಜಾರೆ ನಮ್ಮ ಮನೆಗೂ ಬಂದು ನಮ್ಮ ಆತಿಥ್ಯ ಸ್ವೀಕರಿಸಿದ ಸೌಭಾಗ್ಯವೂ ನಮ್ಮ ಪಾಲಿನದಾಗಿತ್ತು.

ಆದರೆ ಒಂದು ಬಾರಿ ಬಸವಶ್ರೀ ಪ್ರಶಸ್ತಿಗೆ ನಿಜವಾಗಿ ಅರ್ಹರಾಗಿದ್ದ ಸಮಾಜವಾದಿ ಚಿಂತಕ ಹಾಗೂ ಹೋರಾಟಗಾರ ದಿವಂಗತ ಶ್ರೀ ಕಿಷನ್ ಪಟ್ನಾಯಕ್ ಅವರಿಗೆ, ಅವರು ಅಷ್ಟು ಪ್ರಸಿದ್ಧರಲ್ಲ ಎಂಬ ಕಾರಣದ ಮೇಲೆ ನನ್ನ ಸಲಹೆಯನ್ನು (ಇದರ ಹಿಂದೆ ದೇವನೂರು ಮಹಾದೇವರ ಶಿಫಾರ್ಸೂ ಇತ್ತು) ಮಠ ತಿರಸ್ಕರಿಸಿ, ಇಂತಹ ಪ್ರಶಸ್ತಿಗಳೆಲ್ಲವನ್ನೂ ಮೀರಿ ಬೆಳೆದಿದ್ದ ದಲೈಲಾಮಾರಿಗೆ ಕೇವಲ ತಮ್ಮ ಪ್ರಸಿದ್ಧಿಗಾಗಿ ಬಸವಶ್ರೀ ಪ್ರಶಸ್ತಿ ನೀಡಿದಾಗ, ನನಗೆ ನಿಜವಾಗಿ ಜಿಗುಪ್ಸೆಯಾಯಿತು. ಇದು ನನ್ನನ್ನು ಎಷ್ಟು ಬೇಸರಗೊಳಿಸಿತೆಂದರೆ, ಒಂದು ವರ್ಷದ ಅವಧಿಯಲ್ಲಿ ನಾನೇ ನನ್ನ ಸಮಾಜವಾದಿ ಗೆಳೆಯರ ಸಹಕಾರದಿಂದ ಬಸವಶ್ರೀ

ಇತರ ದೃಷ್ಟಿಕೋನಗಳ ಪುಸ್ತಕಗಳನ್ನು ಓದಿದರೆ ತಮ್ಮ ದೃಷ್ಟಿಕೋನ ವಿಚಲಿತವಾಗಿಬಿಡಬಹುದೆಂಬ ಆತಂಕ ವ್ಯಕ್ತಪಡಿಸಿ ನನ್ನನ್ನು ದಂಗು ಬಡಿಸಿದರು! ಆದರೆ, ಜ್ಞಾನದ ಹಸಿವೇ ದೊಡ್ಡ ಹಸಿವು; ಆ ಹಸಿವಿನ ಭಾಗವಾಗಿಯೇ ಸಾಮಾಜಿಕ ಪರಿವರ್ತನೆಯಾಗಬೇಕು ಎಂದು ಭಾವಿಸುವ ನಾವು, ಬಹಳ ಬಾರಿ ಜ್ಞಾನದ ಹಸಿವನ್ನು ಪೂರೈಸಿಕೊಳ್ಳುವ ಧಾವಂತದಲ್ಲಿ ಪರಿವರ್ತನೆಯ ಕೆಲಸವನ್ನು ಮರೆತುಬಿಟ್ಟಿರುವುದೇ ಹೆಚ್ಚು! ಹಾಗಾಗಿ ನನ್ನ ದಂಗಿನ ಹೊರತಾಗಿಯೂ ಸಾಮಾಜಿಕ ಪರಿವರ್ತನೆಯ ಕೆಲಸಕ್ಕೆ ಆದ್ಯತೆ ನೀಡಿರುವ ಶರಣರ ಬಗ್ಗೆ ನನ್ನ ಪ್ರೀತಿ-ಗೌರವ ಹಾಗೇ ಉಳಿದಿದೆ.

ಈ ಪ್ರೀತಿ ಗೌರವಗಳ ಭಾಗವಾಗಿಯೇ, ಈ ವರ್ಷದ ಅಕ್ಟೋಬರ್‌ನಲ್ಲಿ ನಡೆದ ಶರಣ ಸಂಸ್ಕೃತಿ ಉತ್ಸವದ ಭಾಗವಾಗಿ ನನ್ನನ್ನು ಮತ್ತು ನನ್ನ ಪತ್ನಿಯನ್ನು ಮುರುಘಾ ಮಠ 'ಅಂತರ್ಜಾತೀಯ ಮದುವೆಗಳು ಮತ್ತು ಸಾಮಾಜಿಕ ಪರಿವರ್ತನೆ' ಎಂಬ ಸಂವಾದ ಕಾರ್ಯಕ್ರಮಕ್ಕೆ ಆಹ್ವಾನಿಸಿದಾಗ ನಾವು ಆಹ್ವಾನವನ್ನು ನಿರಾಕರಿಸದೆ ಹೋಗಬೇಕಾಯಿತು. ಜೊತೆಗೆ ಅಂದೇ ಮಠ ಏರ್ಪಡಿಸಿದ್ದ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಗೆಳೆಯ ದೇವನೂರ ಮಹಾದೇವ ಅವರ ಮಗಳು ಮಿತಾಳ ವಿವಾಹವೂ ನಿಗದಿಯಾಗಿದ್ದುದು, ನಾವು ಆಹ್ವಾನವನ್ನು ಒಪ್ಪಲು ಕಾರಣವಾಗಿದ್ದಿರಬಹುದು. ಇದು ನಾನು ಭಾಗವಹಿಸಿದ ಮೊದಲ ಶರಣ ಸಂಸ್ಕೃತಿ ಉತ್ಸವ. ನಾನು ಈವರೆಗೆ ಇದರಲ್ಲಿ ಭಾಗವಹಿಸದಿದ್ದುದಕ್ಕೆ ಕಾರಣ, ಇದು ಸಂತೆಯ ರೀತಿಯಲ್ಲಿ ನಡೆಯುವುದೆಂದು; ಭಕ್ತರ ಹೆಸರಲ್ಲಿ ಕಳ್ಳ ಅಧಿಕಾರಿಗಳೂ, ಸುಳ್ಳ ರಾಜಕಾರಣಿಗಳೂ ಸೇರಿದಂತೆ ಎಲ್ಲ ರೀತಿಯ ಅಂಡ-ಭಂಡರು ಇದರಲ್ಲಿ ಸೇರಿಕೊಂಡು, ಶರಣರು ವರ್ಷ ಪೂರ್ತಿ ಪ್ರತಿಪಾದಿಸುವ ಜನಪರ ವಿಚಾರ ಪ್ರಣಾಳಿಯ ರುಚಿಯನ್ನೇ ಕೆಡಿಸುವರೆಂದು. ನಾನು ಈ ಹಿಂದೆ ಸೂಚಿಸಿದ ಮಠವ್ಯವಸ್ಥೆಯ ಮೂಲದಲ್ಲೇ ಇರುವ ದುರಂತವಿದು. ಆಳುವ ಪ್ರಭುಗಳನ್ನು–ಇವರಲ್ಲಿ ಬರೀ ರಾಜಕಾರಣಿಗಳೇ ಅಲ್ಲದೆ, ಅಧಿಕಾರಿಗಳು, ಉದ್ಯಮಿಗಳು, ಕಂತ್ರಾಟುದಾರರು, ಧರ್ಮಾಧಿಕಾರಿಗಳು, ಸಾಹಿತ್ಯ ಪುಢಾರಿಗಳೂ ಸೇರಿರುತ್ತಾರೆ–ದೂರವಿಟ್ಟು ಮಠ ಕೆಲಸ ಮಾಡಲಾರದು! ಕನಿಷ್ಠ ಆ ಶಕ್ತಿಯನ್ನು ಚಿತ್ರದುರ್ಗದ ಮುರುಘಾಮಠ ಇನ್ನೂ ಗಳಿಸಿಕೊಂಡಿಲ್ಲವೆಂದೇ ಹೇಳಬೇಕು. ಏಕೆಂದರೆ ಆ ಶಕ್ತಿ ಗಳಿಸಿಕೊಂಡೊಡನೆ ಅದು ಮಠವಾಗಿ ಉಳಿದಿರಲಾರದು!

ನಾನು ಅಂದು ಸಾಮೂಹಿಕ ವಿವಾಹ ಸಮಾರಂಭದ ಬಳಿಗೆ ಹೋದಾಗ, ಶರಣರು ಭಾಷಣ ಮಾಡುತ್ತಿದ್ದರು. ಅವರು ತಾವು ಪ್ರತಿ ತಿಂಗಳು ಏರ್ಪಡಿಸುತ್ತಿರುವ ಇಂತಹ ಸಾಮೂಹಿಕ ವಿವಾಹ ಸಮಾರಂಭಗಳ ಮಹತ್ವ ಮತ್ತು ವೈಶಿಷ್ಟ್ಯವನ್ನು ವಿವರಿಸುತ್ತಿದ್ದರು. ಅದರ ಕೆಲವು ಅಂಶಗಳು ನನ್ನನ್ನು ಬೆರಗುಗೊಳಿಸಿದವು. ಅವರು ರಾಹುಕಾಲದಲ್ಲಿ ವಿವಾಹ ಮಾಡಿಸುವರು. ಯಾವ ಪುರೋಹಿತನ ಮಧ್ಯಸ್ಥಿಕೆ ಇಲ್ಲದೆ, ಯಾವ ಶಾಸ್ತ್ರಾಚಾರಗಳಿಲ್ಲದೆ ಅಂತರ್ಜಾತೀಯ ಮತ್ತು ವಿಧವಾ ವಿವಾಹಗಳೂ ಸೇರಿದಂತೆ ಅನೇಕ ಸಾಮಾನ್ಯ ಕುಟುಂಬಗಳ ವಿವಾಹಗಳನ್ನು ಅವರು ನಡೆಸಿದ್ದಾರೆ. ಇಂತಹ ವಿದ್ಯಮಾನಗಳು ಮಠವೊಂದರಲ್ಲಿ

ನಡೆಯುವುದು ದೊಡ್ಡ ವಿಷಯವೇ ನಿಜ. ಆದರೆ ಅಂದು ನನಗೆ ಅದಕ್ಕಿಂತ ದೊಡ್ಡ ವಿಷಯವೆನಿಸಿದ್ದು, ಶರಣರ ಈ ಭಾಷಣವನ್ನು ಜನಸಾಮಾನ್ಯರಿಂದಲೇ ತುಂಬಿ ತುಳುಕುತ್ತಿದ್ದ ಆ ಸಭೆ ಪದೇಪದೇ ಚಪ್ಪಾಳೆ ತಟ್ಟಿ ಸ್ವಾಗತಿಸುತ್ತಿದ್ದುದು! ಅಂದಿನ ಸಮಾರಂಭದಲ್ಲಿ ಮಿತಾ ದಂಪತಿಗಳೂ ಸೇರಿದಂತೆ, ನಾಲ್ಕೈದು ಅಂತರ್ಜಾತಿ ಜೋಡಿಗಳಿದ್ದವು. ಶರಣರು ಅವರನ್ನೆಲ್ಲ ಎದ್ದು ನಿಲ್ಲಿಸಿ, ಈ ಜೋಡಿಗಳ ಕಡೆ ವಿಶೇಷ ಗಮನ ಸೆಳೆದರು. ಪರೋಕ್ಷವಾಗಿ, ಜಾತಿ ಮೀರಿದ ವಿವಾಹಗಳಿಗೆ ತಮ್ಮ ವಿಶೇಷ ಪ್ರೋತ್ಸಾಹ ಎಂಬುದನ್ನು ಸೂಚಿಸಿದರು. ನಮ್ಮ ಎಷ್ಟು ಜನ ಮಠಾಧಿಪತಿಗಳಿಗೆ ಸಾರ್ವಜನಿಕವಾಗಿ ಹೀಗೆ ಘೋಷಿಸುವ ನೈತಿಕ ಧೈರ್ಯವಿದೆ? ಅದೂ, ವಿಧವಾ ವಿವಾಹ ಮತ್ತು ಅಂತರ್ಜಾತಿ ವಿವಾಹಗಳಿಗೆ ಶಾಸ್ತ್ರ ಸಮ್ಮತಿ ಇಲ್ಲದಿರುವುದರಿಂದ ಅವುಗಳನ್ನು ಪ್ರೋತ್ಸಾಹಿಸಲಾರೆ ಎಂದು ಹೇಳುವಂತಹ ಮಠಾಧೀಶರೊಬ್ಬರು ಇಂದು ಮತಾಂತರದ ಹುಯ್ಲಿನಲ್ಲಿ ನಮ್ಮ ಮಠಾಧಿಪತಿಗಳ ನೇತೃತ್ವ ವಹಿಸುತ್ತಿರುವಾಗ!

ಮಧ್ಯಾಹ್ನ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅಂತರ್ಜಾತಿ ವಿವಾಹಿತರಾದ ನಾವು ನಾಲ್ಕೈದು ಜನ ದಂಪತಿಗಳು ಭಾಗವಹಿಸಿದ್ದೆವು. ನಮ್ಮೊಂದಿಗೆ ಇಂದಿರಾ ಕೃಷ್ಣಪ್ಪ ಸೇರಿದಂತೆ, ರವಿವರ್ಮಕುಮಾರ್, ಬಂಜಗೆರೆ ಜಯಪ್ರಕಾಶ್ ದಂಪತಿಗಳು ಮತ್ತು ಕಾರ್ಯಕ್ರಮ ನಡೆಸಿಕೊಟ್ಟ ಸ್ವಾಮಿ ಆನಂದ್ ಭಾಗವಹಿಸಿದ್ದರು. ಎಲ್ಲರೂ ಅಂತರ್ಜಾತಿ ವಿವಾಹದ ತಂತಮ್ಮ ಕಷ್ಟ ಸುಖಗಳನ್ನು ಅಲ್ಲಿ ತಂದೆ ತಾಯಿಗಳೇ ಹೆಚ್ಚಿದ್ದ ಸಭಿಕರೊಂದಿಗೆ ಹಂಚಿಕೊಂಡರು. ಎಲ್ಲರ ಮನವಿ ಒಂದೇ: ನಿಮ್ಮ ಮಕ್ಕಳನ್ನು ಜಾತಿ ವಾತಾವರಣದಿಂದ ಮುಕ್ತಗೊಳಿಸಿ ಬೆಳೆಸಿ ಹಾಗೂ ನಿಮ್ಮ ಮಕ್ಕಳು ಜಾತಿ ಮೀರಿ ಮದುವೆಯಾಗ ಬಯಸಿದರೆ, ಅವರಿಗೆ ತೊಂದರೆ ಕೊಡದೆ ನೀವೇ ನಿಂತು ಮದುವೆ ಮಾಡಿಸಿ. ಅದರಿಂದ ಸಮಾಜಕ್ಕೂ, ರಾಷ್ಟ್ರಕ್ಕೂ ಒಳಿತಿದೆ, ಸುಖವಿದೆ. ನಾನು ಹೇಳಿದ್ದು: ಜಾತಿ ಬಿಡುಗಡೆಯ ಸುಖ ಅದನ್ನು ಅನುಭವಿಸಿದವರಿಗಷ್ಟೇ ಗೊತ್ತು. ಅದು ಎಷ್ಟೊಂದು ನೆಲೆಗಳ ಬಂಧನಗಳಿಂದ ಬಿಡುಗಡೆ! ಇದು ಭಾರತದಲ್ಲಿ ಎಲ್ಲ ಬಿಡುಗಡೆಗಳಿಗಿಂತ ದೊಡ್ಡ ಬಿಡುಗಡೆ ಮತ್ತು ಎಲ್ಲ ಬಿಡುಗಡೆಗಳ ನಾಂದಿ ಬಿಡುಗಡೆ. ಅಂತರ್ಜಾತಿ ವಿವಾಹಗಳ ನಿರ್ಧಾರಗಳ ಹಿಂದೆ ಪ್ರೀತಿ ಮತ್ತು ವೈಚಾರಿಕತೆ ಎರಡೂ ಇರಬೇಕು. ಯಾವೊಂದಿಲ್ಲದಿದ್ದರೂ, ಅವು ತಮ್ಮ ಉದ್ದೇಶಗಳಲ್ಲಿ–ಸಂಪೂರ್ಣ ಸಾಮಾಜಿಕ ಬಿಡುಗಡೆಯಲ್ಲಿ–ವಿಫಲವಾಗುವ ಸಾಧ್ಯತೆ ಇದೆ. ಇಂದು ನಮ್ಮ ಸಾಮಾಜಿಕ ನ್ಯಾಯ ಚಳುವಳಿ, ಇಂತಹ ಪ್ರೀತಿ ಮತ್ತು ವೈಚಾರಿಕತೆಗಳನ್ನು ಆಧರಿಸಿದ ಅಂತರ್ಜಾತಿ ವಿವಾಹಗಳನ್ನು ತನ್ನ ಒಂದು ಭಾಗವನ್ನಾಗಿ ಮಾಡಿಕೊಳ್ಳದಿರುವುದೇ, ಅದು ಒಂದು ಜಾತೀಯ ಚಳುವಳಿಯಾಗಿ ಅವನತಿಗೊಳ್ಳಲು ಕಾರಣವಾಗಿರುವುದು.

ಈ ಹಿನ್ನೆಲೆಯಲ್ಲಿ ನನ್ನ ಅಸಮಧಾನವೊಂದನ್ನು ತೋಡಿಕೊಳ್ಳುತ್ತಾ, ಶರಣರು ಜಾತಿಗೊಂದು ಮಠ ಮತ್ತು ಮಠಾಧೀಶರನ್ನು ತಯಾರು ಮಾಡುತ್ತಿರುವುದು ವಿಷಾದನೀಯ ಎಂದೆ. ಶರಣರೇನೋ ಈ ಬಗ್ಗೆ ತಮಲ್ಲಿ ಪುನರಾಲೋಚನೆಗೆ ಅವಕಾಶವಿದೆ ಎಂಬಂತೆ ತಲೆಯಲ್ಲಾಡಿಸಿದರು. ಆದರೆ ಆದಿಜಾಂಬವರ ಮಠದ ಸ್ವಾಮೀಜಿ ಕೊನೆಯಲ್ಲಿ ಮಾತನಾಡುತ್ತಾ,

ತಮ್ಮ ಅತಿ ಅಸ್ಪೃಶ್ಯ ಜಾತಿಗೆ ಮಠದ ಆವರಣದಲ್ಲಿ ಮಾನ್ಯತೆ ನೀಡಿ ತಮ್ಮನ್ನು ಸಮಾನ ಗೌರವದಿಂದ ನೋಡಿಕೊಳ್ಳುತ್ತಿರುವುದು ನಿಜವಾದ ಪ್ರಗತಿಯ ಹೆಜ್ಜೆಯೇ ಎಂದು ಪ್ರತಿಪಾದಿಸಿದಾಗ, ನನಗೆ ಶರಣರು ಈ ಮೂಲಕ ಮಾಡುತ್ತಿರುವುದು ಹಿರಿದಾದ ಅರ್ಥದಲ್ಲಿ ಒಂದು ದೊಡ್ಡ ಅಂತರ್ಜಾತಿ 'ವಿವಾಹ'ವೇ ಎನ್ನಿಸದಿರಲಿಲ್ಲ. ಆದರೆ ಇಲ್ಲಿಗೇ ತೃಪ್ತಿಪಟ್ಟುಕೊಂಡು, ಇದನ್ನು ಜಾತಿನಾಶ ಕಾರ್ಯಕ್ರಮದ ನೆಲೆಯಲ್ಲಿ ವಿಸ್ತರಿಸದೇ ಹೋದರೆ ಒಂದು ದೊಡ್ಡ ಜಾತಿ ವಿಷವ್ಯೂಹವನ್ನೇ ನಿರ್ಮಿಸಿದ ಆರೋಪಕ್ಕೆ ಶರಣರು ಗುರಿಯಾಗಬೇಕಾಗುತ್ತದೆ ಎಂದೂ ಎನ್ನಿಸಿತು.

ಇದನ್ನು ಶರಣರಿಗೆ ತಿಳಿಸಿದಾಗ, ಅವರು 'ನೀವೆಲ್ಲ ನಮ್ಮ ಜೊತೆ ಇದ್ದರೆ ಎಲ್ಲ ಸರಿ ಹೋಗುತ್ತದೆ' ಎಂದರು. ಈಗ ಉತ್ತರಿಸುವ ಹೊಣೆ ನನ್ನದಾಗಿತ್ತು! ನಾನು ನಿಜವಾಗಿಯೂ ಕಷ್ಟಕ್ಕೆ ಸಿಲುಕಿದ್ದೆ...

(೧೯ ಡಿಸೆಂಬರ್, ೨೦೦೮)

■

೩೩. ಹೊಸ ರಾಜಕಾರಣದ ಹಂಬಲ: ಸತ್ಯ ಮತ್ತು ಮಿಥ್ಯಗಳು !

ಮುಂಬೈ ದಾಳಿಯ ನಂತರ ರಾಷ್ಟ್ರೀಯ ಮಾಧ್ಯಮಗಳ ಚರ್ಚೆಗಳಲ್ಲಿ ಕೇಳಿ ಬಂದ ಪ್ರಮುಖ ಬೇಡಿಕೆಯೆಂದರೆ, ನಮ್ಮ ರಾಜಕೀಯ ನಾಯಕತ್ವದ ಸ್ವರೂಪ ಬದಲಾಗಬೇಕು ಎಂಬುದು. ಈ ಸ್ವರೂಪದಲ್ಲಿ ರಾಜಕಾರಣಿಗಳ ವಯಸ್ಸು, ವರ್ಗ, ಶಿಕ್ಷಣ, ಸಿದ್ಧಾಂತ, ಕಾರ್ಯಶೈಲಿ ಎಲ್ಲ ಸೇರಿತ್ತು. ಈ ಬೇಡಿಕೆಯನ್ನಿಟ್ಟ ಜನವರ್ಗವನ್ನು–ಉದ್ಯಮಿಗಳು, ಖಾಸಗಿ ವಲಯಕ್ಕೆ ಸೇರಿದ ಆಡಳಿತಗಾರರು ಮತ್ತು ವೃತ್ತಿಪರರು ಇತ್ಯಾದಿ–ನೋಡಿದಾಗ, ರಾಜಕಾರಣ ಇವರ ಖಾಸಗಿ ಕಂಪನಿಗಳ ಮ್ಯಾನೇಜ್‌ಮೆಂಟ್‌ನಂತೆ ಮತ್ತು ನಮ್ಮ ರಾಜಕಾರಣಿಗಳು ಸಿ.ಇ.ಓ.ಗಳಂತೆ ಕೆಲಸ ಮಾಡಬೇಕೆಂಬುದೇ ಅವರ ನಿರೀಕ್ಷೆಯಾಗಿತ್ತು ಎಂದು ತೋರಿತು. ಒಟ್ಟಾರೆ ಇದು ಪ್ರಸಕ್ತ ಜನಪ್ರಿಯ ರಾಜಕಾರಣದ ವಿರುದ್ಧ ನಡೆದ ನಮ್ಮ ಹೊಸ ಪ್ರತಿಷ್ಠಿತ ವರ್ಗದ ದಾಳಿಯೇ ಆಗಿತ್ತು. ನಿಜ, ಮುಂಬೈ ದಾಳಿ ನಡೆದ ರೀತಿ ನೋಡಿದರೆ, ಈ ಜನಪ್ರಿಯ ರಾಜಕಾರಣ ಎಲ್ಲ ರೀತಿಯ ಭ್ರಷ್ಟತೆಯ ತುತ್ತ ತುದಿ ಮುಟ್ಟಿ, ತನ್ನ ಕರ್ತವ್ಯ ನಿರ್ವಹಿಸುವಲ್ಲಿ ಸಂಪೂರ್ಣ ಸೋತಿದೆ ಎಂಬುದು ಸ್ಪಷ್ಟವಾಗುವಂತಿತ್ತು. ಆದರೆ ಇದು ಮುಂಬೈ ದಾಳಿಯಿಂದಷ್ಟೇ ಸ್ಪಷ್ಟವಾದ ಸಂಗತಿಯೇನೂ ಆಗಿರಲಿಲ್ಲ. ಏಕೆಂದರೆ, ನಮ್ಮ ರಾಜಕಾರಣ ಎಂಬುದು ತನ್ನೆಲ್ಲ ಪ್ರಜಾಸತ್ತಾತ್ಮಕ ಗುಣಗಳನ್ನು ಕಳೆದುಕೊಂಡು ದೇಶಸೇವೆಯ ಮುತ್ಸದ್ದಿತನದ ಕೆಲಸವಾಗಿಲ್ಲದೆ; ಅದೊಂದು ದೊಡ್ಡ ಲಾಭಕೋರ ಉದ್ಯಮವಾಗಿ ಪರಿವರ್ತಿತವಾಗಿರುವುದು ಇಂದು ನಿನ್ನೆಯಷ್ಟೆ ಸ್ಪಷ್ಟವಾಗಿರುವ ಸಂಗತಿಯಲ್ಲ. ಹಾಗೇ, ಅದನ್ನು ಹೀಗೆ ಒಂದು ಲಾಭಕೋರ ಉದ್ಯಮವಾಗಿ ಪರಿವರ್ತಿಸಿರುವುದು ಜನ ಸಾಮಾನ್ಯರಲ್ಲ. ಬದಲಿಗೆ, ಇಂದು ರಾಜಕಾರಣಿಗಳನ್ನು ದೂಷಿಸುವ ಮೂಲಕ ರಾಜಕಾರಣವನ್ನು ಹೀಗಳೆಯುತ್ತಿರುವ ಈ ಉದ್ಯಮಿಗಳೇ, ಖಾಸಗಿ ವಲಯದ ಆಡಳಿತಗಾರರೇ, ವೃತ್ತಿಪರರೇ!

ತಮಗೆ ಬೇಕಾದ ರಿಯಾಯ್ತಿಗಳನ್ನು, ಅನುಕೂಲಗಳನ್ನು ಪಡೆಯಲು ರಾಜಕಾರಣಿಗಳನ್ನು ಖಾಸಗಿಯಾಗಿ ಭ್ರಷ್ಟಗೊಳಿಸಿ, ಆ ಭ್ರಷ್ಟತೆ ಸಾರ್ವಜನಿಕವಾಗಿ ಹೀಗೆ ಅದಕ್ಷ ವ್ಯವಸ್ಥೆಯ ರೂಪದಲ್ಲಿ ಭಯಾನಕ ಪರಿಣಾಮಗಳೊಂದಿಗೆ ಹೊರಹೊಮ್ಮ ತೊಡಗಿದಾಗ ಇವರು ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ನಮ್ಮ ರಾಜಕಾರಣ ಹೀಗೆ ಭ್ರಷ್ಟತೆಯ ಪರಾಕಾಷ್ಠೆ ಮುಟ್ಟಿ, ಒಂದು ದೊಡ್ಡ ಉದ್ಯಮವಾಗಿ ಸಾರ್ವಜನಿಕ ಮಾನ್ಯತೆ ಪಡೆಯಲಾರಂಭಿಸಿದ್ದೂ, ಈ ಉದ್ಯಮಿಗಳು ಪರಿಚಯಿಸಿದ ಹೊಸ ರೀತಿಯ ದುಡಿಮೆ ಮತ್ತು ಸಂಪಾದನೆಯ

ಮಾರ್ಗಗಳಿಂದಲೇ: ಸ್ಪರ್ಧಾತ್ಮಕತೆ ಸೃಷ್ಟಿಸಿದ ಹೊಸ ಪರಿಭಾಷೆಯಲ್ಲಿ ಸಹಾಯ, ಸಲಹೆ, ಸೂಚನೆ, ಮಾರ್ಗದರ್ಶನ, ಮಾಹಿತಿ ಇತ್ಯಾದಿಗಳೆಲ್ಲ 'ಸೇವೆ', 'ಉತ್ಪನ್ನ'ಗಳೆಂಬ ವ್ಯಾಪಾರಿ ಹೆಸರುಗಳನ್ನು ಪಡೆದು, ದುಬಾರಿ ಬೆಲೆಯಲ್ಲಿ ಮಾರಾಟವಾಗತೊಡಗಿದ ಮೇಲೇ. ಇಂತಹ ವ್ಯವಸ್ಥೆಯಲ್ಲಿ ನಿಜವಾಗಿ ದುಡಿಯದವರು, ನಿಜವಾಗಿ ದುಡಿಯುವವರಿಗಿಂತ ಹತ್ತು-ನೂರು-ಸಾವಿರ ಪಟ್ಟು ಸೇವಾ ಶುಲ್ಕ, ಕಮೀಷನ್, ಲಾಭ, ಲಾಭಾಂಶ ಇತ್ಯಾದಿ ಹೆಸರುಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕಮಾಯಿಸಲಾರಂಭಿಸಿದ ಮೇಲೇ.

ಇಂತಹ ಸುಲಭ ಹಾಗೂ ಸುಳ್ಳು ದುಡಿಮೆಯ ಕಳ್ಳ ಹಣ ಸೃಷ್ಟಿ ಮಾಡಿದ ವಾತಾವರಣವೇ, ಮುಂಬೈ ದಾಳಿ ಸಾಧ್ಯವಾಗುವಷ್ಟರ ಮಟ್ಟಿಗೆ ನಮ್ಮ ಸಮಾಜವನ್ನು 'ಲೋಲುಪ'ಗೊಳಿಸಿದ್ದು ಎಂಬುದು ಇವರಿಗೆ ಸುಲಭವಾಗಿ ಅರ್ಥವಾಗಲಾರದು. ಏಕೆಂದರೆ ಇವರ ಮನಸ್ಸುಗಳು ತಮ್ಮ ಕಂಪನಿ ಮಟ್ಟ ಮಾತ್ರದ ಲಾಭೋದ್ದೇಶವುಳ್ಳ ಮ್ಯಾನೇಜ್‌ಮೆಂಟ್ ಪರಿಭಾಷೆಯಲ್ಲಷ್ಟೇ ಯೋಚಿಸಬಲ್ಲವು. ಹೀಗಾಗಿ ಇವು ತಮ್ಮ ಮ್ಯಾನೇಜ್‌ಮೆಂಟ್ ಪರಿಭಾಷೆಯ ಅರ್ಥಕ್ಕೆ ಸಿಗದ ಜೀವನದ ಮತ್ತು ದುಡಿಮೆಯ ರೀತಿ ನೀತಿಗಳನ್ನು ಸಹಾನುಭೂತಿಯಿಂದ ಅರಿಯುವ ಶಕ್ತಿಯನ್ನೇ ಕಳೆದುಕೊಂಡಿರುತ್ತವೆ. ಅಷ್ಟೇ ಅಲ್ಲ, ಅವನ್ನು ಪುರಾತನ, ಅರ್ಥಹೀನ, ಅಭಿವೃದ್ಧಿ ವಿರೋಧಿಯಾದ ಮತ್ತು 'ಸುಧಾರಣೆಗೆ ಅರ್ಹವಾದ' ಮನೋಭಾವನೆಗಳೆಂದೇ ಪರಿಗಣಿಸುತ್ತವೆ. ಹಾಗಾಗಿ ಇಂತಹ ಮ್ಯಾನೇಜ್‌ಮೆಂಟ್ ಮನಸ್ಸಿನವರು ಸಮಾಜವನ್ನು ಸದಾ ಎರಡು ಭಾಗಗಳಾಗಿ–ನಾವು ಮತ್ತು 'ಇತರೆ' ಯವರು–ನೋಡುವ ತಾಂತ್ರಿಕತೆಗೆ ಸಿಕ್ಕು, ಸಮಗ್ರವಾಗಿ ಯೋಚಿಸುವ ಭಾವನೆಯನ್ನೇ ಕಳೆದುಕೊಂಡಿರುತ್ತಾರೆ. ಹಾಗಾಗಿಯೇ ಅವರು ಮುಂದಿನ ಪರಿಣಾಮಗಳನ್ನು ಯೋಚಿಸದೆ, 'ಇತರೆ'ಯವರು ನಿಯಂತ್ರಿಸುವ ಜನಪ್ರಿಯ ರಾಜಕಾರಣದ ಮೇಲೆ ಸಾರಾಸಗಟಾಗಿ ದಾಳಿ ನಡೆಸುತ್ತಾರೆ.

ಆದರೆ ಇವರಿಗೆ ನಮ್ಮ ಜನ–ಈ 'ಇತರೆ'ಯವರು–ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಥಣ್ಣಗೆ ಉತ್ತರ ಕೊಟ್ಟಿದ್ದಾರೆ. ಮುಂಬೈ ದಾಳಿ ನಡೆದ ಕೆಲವೇ ದಿನಗಳ ನಂತರ ನಡೆದ ಈ ಚುನಾವಣೆಗಳಲ್ಲಿ ಜನ ಶೇ.೬೦ಕ್ಕೂ ಹೆಚ್ಚು ಪ್ರಮಾಣದಲ್ಲಿ ಮತದಾನ ಮಾಡಿದ್ದಾರೆ. ಆ ಮೂಲಕ ಮುಂಬೈ ದಾಳಿಯನ್ನು ನೆಪ ಮಾಡಿಕೊಂಡೆಂಬಂತೆ ಈ ಮ್ಯಾನೇಜ್‌ಮೆಂಟ್ 'ಗುರು'ಗಳು ನಮ್ಮ ಜನಪ್ರಿಯ ರಾಜಕಾರಣದ ವಿಶ್ವಾಸಾರ್ಹತೆಯ ಬಗೆಗೇ ಅಪನಂಬಿಕೆ ಹುಟ್ಟಿಸಲು ಮಾಡಿದ ಯತ್ನಗಳನ್ನು ಹಾಸ್ಯಾಸ್ಪದವೆನ್ನಿಸುವಂತೆ ಮಾಡಿದ್ದಾರೆ. ಮುಂಬೈ ದಾಳಿ ಮತ್ತು ಅದರ ಪರಿಣಾಮವಾಗಿ ಕೆಲವು ವರ್ಗಗಳು ಜನಪ್ರಿಯ ಮಾಧ್ಯಮಗಳಲ್ಲಿ ನಮ್ಮ ರಾಜಕಾರಣದ ಮೂಲ ಸ್ವರೂಪದ ಬಗೆಗೇ ಹುಟ್ಟು ಹಾಕಿದ ಚರ್ಚೆಗಳ ಹಿನ್ನೆಲೆಯಲ್ಲಿ, ಈ ಚುನಾವಣೆಗಳು ರಾಷ್ಟ್ರಕ್ಕೆ ಎರಡು ಮುಖ್ಯ ಸಂದೇಶಗಳನ್ನು ನೀಡಿದಂತಿದೆ. ಒಂದು, ಸಾಮಾನ್ಯ ಜನತೆ ಪ್ರಸಕ್ತ ರಾಜಕಾರಣದ ಮೂಲ ಸ್ವರೂಪದ ಬಗೆಗೆ ನಂಬಿಕೆ ಕಳೆದುಕೊಂಡಿಲ್ಲ. ಅದಕ್ಕಿಂತ ಮುಖ್ಯವಾಗಿ ಇನ್ನೊಂದು, ರಾಜಕಾರಣದ

ಜಾತೀಕರಣ ಮತ್ತು ಕೋಮುವಾದೀಕರಣಗಳಂತಹ ಭಾವನಾತ್ಮಕ ಪ್ರಚೋದನೆಗಳನ್ನು ತಿರಸ್ಕರಿಸುವ ಪ್ರಬುದ್ಧತೆಯನ್ನು ನಮ್ಮ ಮತದಾರರು ಪ್ರದರ್ಶಿಸತೊಡಗಿದ್ದಾರೆ.

ದೆಹಲಿಯಲ್ಲಿ ಶೀಲಾ ದೀಕ್ಷಿತರ ಗೆಲುವು ಕಾಂಗ್ರೆಸ್ಸಿಗರನ್ನೇ ಗಾಬರಿಗೊಳಿಸಿದ್ದರೆ ಆಶ್ಚರ್ಯವಿಲ್ಲ! ಶೀಲಾ ದೀಕ್ಷಿತ್ ಭಾರತದಲ್ಲಿ ಇನ್ನೂ ಉಳಿದಿರುವ ಜನಪ್ರಿಯ ರಾಜಕಾರಣದ ಸೇವಾ ಘನತೆ ಮತ್ತು ಅದಕ್ಕೆ ಜನತೆ ನೀಡುತ್ತಿರುವ ಮಾನ್ಯತೆಗೆ ಸಾಕ್ಷಿ ಎಂದರೆ ತಪ್ಪಾಗಲಾರದು. ಇನ್ನು ರಾಜಸ್ಥಾನದಲ್ಲಿ ಮಾಜಿ ಯುವರಾಣಿ ವಸುಂಧರಾ ರಾಜೇ ಸಿಂಧ್ಯಾ ಅವರ ಜನ ವಿರೋಧಿ 'ಪ್ರತಿಷ್ಠಿತ' ರಾಜಕಾರಣವನ್ನು ಜನತೆ ತಿರಸ್ಕರಿಸಿ, 'ಕೆಲಸಗಾರಿಕೆ'ಯ ರಾಜಕಾರಣವನ್ನು ಹಂಬಲಿಸಿದ್ದಾರೆ. ಹೋದ ಚುನಾವಣೆಯಲ್ಲಿ ಅನಿರೀಕ್ಷಿತವಾಗಿ ಸೋಲು ಕಂಡಿದ್ದ 'ಕೆಲಸಗಾರ'ನಾದ ಕಾಂಗ್ರೆಸ್ ನಾಯಕ ಅಶೋಕ್ ಗೆಹ್ಲೋಟ್‌ಗೆ ಈಗವರು ಅವಕಾಶ ಕಲ್ಪಿಸಿದ್ದಾರೆ. ಮಿಜೊರಾಂನಲ್ಲಿ ಕಾಂಗ್ರೆಸ್ಸಿನ ವಿಜಯವಂತೂ ಅಭೂತಪೂರ್ವ ಮತ್ತು ಆಶ್ಚರ್ಯಕರ ಕೂಡ. ಹಾಗೇ, ಮಧ್ಯ ಪ್ರದೇಶ ಮತ್ತು ಛತ್ತೀಸಘಡಗಳಲ್ಲಿ ಕಾಂಗ್ರೆಸ್ ಒಡೆದ ಮನೆಗಳಾಗಿದ್ದುದು ಮತ್ತು ಅಲ್ಲಿನ ಬಿಜೆಪಿ ಮುಖ್ಯಮಂತ್ರಿಗಳು ಕೋಮುವಾದಿ ರಾಜಕಾರಣಕ್ಕಿಂತ, ಜನಪರ ಕಾರ್ಯಕ್ರಮಗಳ ಕಡೆ ಗಮನ ಹರಿಸಿದ್ದೇ ಅವರ ಸರ್ಕಾರಗಳ ಪುನರಾಯ್ಕೆಗೆ ಕಾರಣವೆಂದು ವಿಶ್ಲೇಷಿಸಲಾಗುತ್ತಿದೆ. ಶಿವರಾಜ್ ಸಿಂಗ್ ಚವ್ಹಾಣ್ ಮತ್ತು ರಮಣ ಸಿಂಗ್ ಬಿಜೆಪಿಯ ಕಳಂಕ ರಹಿತ ಹೊಸ ಮುಖಗಳು. ಇಂತಹ ಹೊಸ ಮುಖಗಳೇ ಬಿಜೆಪಿಯ ಹೊಸ ಮುಖವನ್ನೂ ರೂಪಿಸುವಂತಾದರೆ, ಅದು ರಾಷ್ಟ್ರೀಯ ರಾಜಕಾರಣದ ದೊಡ್ಡ ಪಲ್ಲಟಕ್ಕೆ ಕಾರಣವಾದೀತು.

ಆದರೆ ಕರ್ನಾಟಕದ ರಾಜಕಾರಣ ಮಾತ್ರ ಇದಾವುದರ ಪರಿವೆಯೇ ಇಲ್ಲದಂತೆ, ತನ್ನ ಹಳೆಯ ಗೌಡಿಕೆ ಶೈಲಿಯಲ್ಲೇ ಮುಂದುವರೆದಿದೆ. ರಾಜ್ಯದ ಪ್ರಮುಖ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್–ಈ ಮೂರೂ, ಜನರ ಮನೋಭಾವನೆಗಳ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದಂತೆ, ತಮ್ಮ ಭ್ರಷ್ಟ ಮತ್ತು ಜಾತಿ ರಾಜಕಾರಣದ ಮೂಲಕವೇ ಜನತೆಯ ತೀರ್ಪನ್ನು ತಮ್ಮ ಪರವಾಗಿ ನಿಭಾಯಿಸಿಕೊಳ್ಳಬಹುದು ಎಂಬ ದೃಢ ನಂಬಿಕೆಯಿಂದ ತಮ್ಮ ರಾಜಕಾರಣವನ್ನು ಮುಂದುವರೆಸಿವೆ. ಬಿಜೆಪಿಯ 'ಆಪರೇಷನ್ ಕಮಲ'ದ ಭಂಡತನ, ಕಾಂಗ್ರೆಸ್ಸಿನ ಸದ್ಯದ ಪರಿಸ್ಥಿತಿಯಲ್ಲಿ ಅದರ ಅಧ್ಯಕ್ಷ ಮತ್ತು ಕಾರ್ಯಾಧ್ಯಕ್ಷರ ಆಯ್ಕೆಯ ಹಿಂದೆ ನಡೆದ ಪಿತೂರಿ ರಾಜಕಾರಣದ ವೈಖರಿ ಮತ್ತು ಜೆಡಿಎಸ್‌ನ ಕುಟುಂಬ ರಾಜಕಾರಣ ಮುಟ್ಟಿರುವ ನಿರ್ಲಜ್ಜ ಹಂತ; ಕರ್ನಾಟಕದ ರಾಜಕಾರಣ, ರಾಜಕಾರಣಿಗಳ ಕಡೆಯಿಂದಲಂತೂ ಸದ್ಯಕ್ಕೆ ಬದಲಾಗುವಂತೆ ತೋರುತ್ತಿಲ್ಲ ಎಂಬುದನ್ನು ಸೂಚಿಸುವಂತಿವೆ. ಇದಕ್ಕೆ ಈ ಪಕ್ಷಗಳ ನಾಯಕತ್ವವಷ್ಟೇ ಕಾರಣವಲ್ಲ, ಅವುಗಳ ಕಾರ್ಯಕರ್ತರ ಗುಣಮಟ್ಟವೂ ಅವುಗಳ ಅವನತಿಗೆ ಕಾರಣವಾಗಿದೆ.

ಸದ್ಯದ ಉಪಚುನಾವಣೆಗಳ ಪ್ರಕ್ರಿಯೆಯನ್ನೇ ಗಮನಿಸಿ. ಮದ್ದೂರಿನ ಹೊರತಾಗಿ ಮಿಕ್ಕೆಲ್ಲ ಕಡೆ ನಡೆಯುತ್ತಿರುವ ಉಪಚುನಾವಣೆಗಳಿಗೆ ಬಿಜೆಪಿಯೇ ಕಾರಣವಾಗಿದೆ. ಅದು

ತನ್ನ 'ಆಪರೇಷನ್ ಕಮಲ'ದ ಮೂಲಕ ಕರ್ನಾಟಕದ ರಾಜಕಾರಣದ ಕಟ್ಟ ಕಡೆಯ ಮಾನ ಸ್ಥಾನದ ಮೇಲಿನ ಬಟ್ಟೆಯನ್ನೂ ಕಿತ್ತೆಸೆದಿದೆ! ಅಷ್ಟೇ ಅಲ್ಲ, ಅದು ತನ್ನ ಅಧಿಕಾರ ಸುಭದ್ರತೆಗಾಗಿ ಇದನ್ನು ಮಾಡುವುದು ಅನಿವಾರ್ಯವೆಂದು ಹೇಳಿಕೊಳ್ಳುವ ಭಂಡ ಧೈರ್ಯ ತೋರಿದೆ. ಇದಕ್ಕೆ ಮತ್ತೆ ಕಾರಣ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಕಳೆದ ಚುನಾವಣೆಯಲ್ಲಿ ಬಿಜೆಪಿಯ 'ಆಪರೇಷನ್ ಕಮಲ' ಸಾಧ್ಯವಾಗುವಂತಹ 'ಅಯೋಗ್ಯ'ರಿಗೆ ಟಿಕೆಟ್ ನೀಡಿ ಗೆಲ್ಲಿಸಿದ್ದೇ ಆಗಿದೆ. ಆದರೆ, ಅಂತಹ ಅಯೋಗ್ಯರನ್ನು ಬಿಜೆಪಿ, ಮಂತ್ರಿಗಿರಿ ಮತ್ತಿತರ ಆಮಿಷಗಳ ಮೂಲಕ ತನ್ನೆಡೆಗೆ ಸೆಳೆದುಕೊಂಡು ಈಗ ಅವರನ್ನೇ ತನ್ನ ಅಭ್ಯರ್ಥಿಗಳನ್ನಾಗಿ ಜನರ ಮುಂದೆ ನಿಲ್ಲಿಸುವ ಮೂಲಕ ಈ ಭ್ರಷ್ಟ ಮತ್ತು ದುಷ್ಟ ರಾಜಕಾರಣದ ವೃತ್ತವನ್ನು ಪೂರ್ಣಗೊಳಿಸಿದೆ. ಜನ ಇವರಲ್ಲಿ ಯಾರನ್ನು ಶಿಕ್ಷಿಸಬೇಕೋ ಗೊತ್ತಾಗದೆ ಗೊಂದಲಕ್ಕೆ ಸಿಕ್ಕಿ ಹಾಕಿಕೊಂಡಿದ್ದಾರೆ. ಈ ಗೊಂದಲವನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಪಕ್ಷಗಳು, ಈ ಜಾತಿ ಮತ್ತು ಹಣದ ದುಷ್ಟ ಮತ್ತು ಭ್ರಷ್ಟ ರಾಜಕಾರಣದ ವೃತ್ತವನ್ನು ವಿಸ್ತರಿಸಲು ಸನ್ನದ್ಧವಾಗಿವೆ.

ಸದಾ ಸಾವಿನ–ತಮ್ಮನ್ನು ಮುಗಿಸಲು ಹೊಂಚು ಹಾಕಲಾಗುತ್ತಿದೆ ಎಂಬ ಭಯದಲ್ಲೇ–ಬದುಕುತ್ತಾ, ಅದನ್ನೇ ನೆಪ ಮಾಡಿಕೊಂಡು ತನ್ನ ಸಮಯ ಸಾಧಕ ರಾಜಕಾರಣದ ಎಲ್ಲ ದುಷ್ಟತನ ಮತ್ತು ಭ್ರಷ್ಟತೆಯನ್ನು ಸಮರ್ಥಿಸಿಕೊಳ್ಳುತ್ತಾ ಬಂದಿರುವ ಜೆಡಿಎಸ್, ಈ ಚುನಾವಣೆಯಲ್ಲಿ ತನ್ನ ಕುಟುಂಬ ಲಂಪಟ ರಾಜಕಾರಣದ ಪರಾಕಾಷ್ಠತೆಯನ್ನು ಮುಟ್ಟಿದೆ. ಮಧುಗಿರಿ ಕ್ಷೇತ್ರದಲ್ಲಿ ಪಕ್ಷದ ಕಾರ್ಯಕರ್ತರ ನೆಪವೊಡ್ಡಿ ಅನಿತಾ ಕುಮಾರಸ್ವಾಮಿಯವರನ್ನು ಅಭ್ಯರ್ಥಿಯನ್ನಾಗಿ ಮಾಡುವ ಮೂಲಕ ಮತ್ತು ಅದನ್ನು ಕುಮಾರಸ್ವಾಮಿಯವರು, 'ನಾವು ನಮ್ಮ ಮನೆಯ ಆಳನ್ನಾದರೂ ನಿಲ್ಲಿಸುತ್ತೇವೆ. ಅದನ್ನು ಕೇಳುವ ಅಧಿಕಾರ ಯಾರಿಗೂ ಇಲ್ಲ' ಎಂದು ಘೋಷಿಸುವ ಮೂಲಕ ಪ್ರಜಾಸತ್ತೆಯನ್ನು ಒಂದು ಊಳಿಗಮಾನ್ಯಶಾಹಿಯ ಆಟವನ್ನಾಗಿ ಪರಿವರ್ತಿಸಲು ಯತ್ನಿಸಿದ್ದಾರೆ. ಅಷ್ಟೇ ಅಲ್ಲ, ಈಗಾಗಲೇ ಪಕ್ಷವನ್ನು ಕುಟುಂಬದ ಆಸ್ತಿಯನ್ನಾಗಿ ಪರಿವರ್ತಿಸಿಕೊಂಡಿರುವ ಇವರು, ಇಂತಹ ಠೇಂಕಾರದ ಅಧಿಕಾರ ರಾಜಕಾರಣದ ಮೂಲಕ ರಾಜ್ಯವನ್ನೇ ಕುಟುಂಬದ ಆಸ್ತಿಯನ್ನಾಗಿ ಮಾಡಿಕೊಳ್ಳಲು ಹವಣಿಸುತ್ತಿರುವಂತಿದೆ. ಈ ಕುಟುಂಬದ ಸದಸ್ಯರೊಬ್ಬಬ್ಬರ ಘೋಷಿತ ಆಸ್ತಿ ವಿವರಗಳೇ ಈ ಹವಣಿಕೆಯನ್ನು ಸಾಬೀತು ಪಡಿಸುವಂತಿವೆ. ರಾಜಕಾರಣವೆಂಬುದು ಇವರಿಗೆ ಒಂದು ಕೌಟುಂಬಿಕ ದಂಧೆಯಾದಂತಿದೆ. ಇದಕ್ಕೆ ಯಾವ ಮಾರ್ಗವೂ ಅಪವಿತ್ರ ಅಥವಾ ಅನೀತಿಯುತವಲ್ಲ. ಹಾಗಾಗಿಯೇ ಎರಡು ವರ್ಷಗಳ ಹಿಂದೆ, ನಿಘಂಟನ್ನೆಲ್ಲ ಹುಡುಕಿದರೂ ಸೆಕ್ಯುಲರಿಸಂ ಎಂಬ ಶಬ್ದ ಸಿಗಲಿಲ್ಲ ಎಂದು ಸಂಘ ಪರಿವಾರದವರ ಹೃದಯಗಳಲ್ಲಿ ಪುಳಕ ಹುಟ್ಟಿಸಿ ಅಧಿಕಾರ ಹಿಡಿದ ಕುಮಾರಸ್ವಾಮಿಯವರು, ಅಂಡ ಭಂಡ ರಾಜಕಾರಣ ಮಾಡಿ ಅಧಿಕಾರ ಕಳೆದುಕೊಂಡ ನಂತರ; ಈಗ ಯಾವುದೇ ಸಂಕೋಚವಿಲ್ಲದೆ ಸೆಕ್ಯುಲರಿಸಂ ತತ್ವದ ರಕ್ಷಣೆಗಾಗಿ, ಬಿಜೆಪಿ ವಿರೋಧಿ ರಾಜಕಾರಣ ಮಾಡತೊಡಗಿದ್ದಾರೆ!

ಹಾಗೆ ನೋಡಿದರೆ ಜೆಡಿಎಸ್, ರಾಜಕಾರಣವನ್ನು ಕೌಟುಂಬಿಕ ದಂಧೆ ಮಾಡಿಕೊಂಡಿರುವುದರ ಒಂದು ಅತ್ಯಂತ ಭಂಡ ಉದಾಹರಣೆಯಷ್ಟೆ. ಈ ವಿಷಯದಲ್ಲಿ ಇತರ ಪಕ್ಷಗಳೇನೂ ಹಿಂದೆ ಬಿದ್ದಿಲ್ಲ. ರಾಷ್ಟ್ರ ಮಟ್ಟದಲ್ಲಿ ಕೌಟುಂಬಿಕ ರಾಜಕಾರಣದ ಮೂಲ ಪೋಷಕನಂತಿರುವ ಕಾಂಗ್ರೆಸ್ಸಿನ ಹಲವು ನಾಯಕರು 'ಯುವ ನಾಯಕತ್ವ'ದ ಹೆಸರಿನಲ್ಲಿ ತಮ್ಮ ಮಕ್ಕಳನ್ನೇ ಈ ದಂಧೆಗೆ ಇಳಿಸಿ ಕೃತಾರ್ಥರಾಗಿದ್ದಾರೆ. ಈ ಪಕ್ಷದಲ್ಲಿನ 'ಟಿಕೆಟ್ ಮಾರಾಟ' ಹಗರಣ ಸ್ಫೋಟಗೊಂಡಿದ್ದೇ ತಮ್ಮ ಮಗನಿಗೆ ಟಿಕೆಟ್ ನೀಡಲಿಲ್ಲವೆಂಬ ಮಾರ್ಗರೆಟ್ ಆಳ್ವರ ಅಸಮಧಾನದಿಂದಲೇ ಅಲ್ಲವೇ? ಅದಿರಿಲಿ, ಈ ಪಕ್ಷದ ರಾಜ್ಯ ಅಧ್ಯಕ್ಷ ಮತ್ತು ಕಾರ್ಯಾಧ್ಯಕ್ಷರ ರಾಜಕೀಯ ಚಾರಿತ್ರ್ಯ ಮತ್ತು ಬಹುಶಃ ಆ ಕಾರಣದಿಂದಾಗಿಯೇ ಎದ್ದು ಕಾಣುವಂತಿರುವ ಅವರ ಆಸ್ತಿಯ ಪ್ರಮಾಣದ ದಿಢೀರ್ ಏರಿಕೆಯ ಗತಿಯನ್ನು ಗಮನಿಸಿದ ಯಾರಿಗಾದರೂ, ಇವರ ನೇತೃತ್ವದಲ್ಲಿ ರಾಜ್ಯ ರಾಜಕಾರಣದ ಗುಣಮಟ್ಟವನ್ನು ಸುಧಾರಿಸಬಹುದು ಎಂಬ ನಂಬಿಕೆ ಬರಲು ಸಾಧ್ಯವೇ ಇಲ್ಲ. ಇನ್ನು ಬಿಜೆಪಿ ಕೂಡ ರಾಷ್ಟ್ರ ಮತ್ತು ರಾಜ್ಯ ಮಟ್ಟಗಳೆರಡರಲ್ಲೂ ಕೌಟುಂಬಿಕ ರಾಜಕಾರಣವನ್ನು ಪೋಷಿಸುವುದರಲ್ಲಿ, ಯಾವ ಸಂಕೋಚವನ್ನೂ ಪ್ರದರ್ಶಿಸಿಲ್ಲ! ನಮ್ಮ ಮುಖ್ಯಮಂತ್ರಿ ಯಡಿಯೂರಪ್ಪನವರ ಹೆಣ್ಣು ಮತ್ತು ಗಂಡು ಮಕ್ಕಳೆಲ್ಲರೂ ಬೆಂಗಳೂರು, ಶಿವಮೊಗ್ಗ ಮತ್ತು ಶಿಕಾರಿಪುರಗಳಲ್ಲಿ ಅಪ್ಪನ ಕೋಟ್ಯಾಂತರ ರೂಪಾಯಿಗಳ ವಿವಿಧ ವ್ಯವಹಾರಗಳ ಉಸ್ತುವಾರಿ ನೋಡಿಕೊಳ್ಳುತ್ತಾ ವಿವಿಧ ಹಂತಗಳಲ್ಲಿ ರಾಜಕೀಯ ತರಬೇತಿ ಪಡೆಯುತ್ತಿದ್ದಾರೆ. ಒಬ್ಬ ಮಗ ಈಗಾಗಲೇ ತಂದೆಯ ಹಾದಿಯಲ್ಲೇ ನಡೆಯುತ್ತಾ, ಶಿಕಾರಿಪುರದ ಪುರಸಭೆಯ ಸದಸ್ಯರಾಗಿ 'ರಾಜಕೀಯ ಸೇವೆ'ಯನ್ನೂ ಆರಂಭಿಸಿದ್ದಾರೆ. ಲೋಕಸಭಾ ಚುನಾವಣೆಗೆ ಅಭ್ಯರ್ಥಿಯಾಗುವ ತಯಾರಿಯನ್ನೂ ನಡೆಸಿದ್ದಾರೆ!

ಹೀಗೆ ರಾಜಕಾರಣವೆಂದರೆ ಕುಟುಂಬದ 'ದಂಧೆ'ಯನ್ನು ಎಲ್ಲ ರಕ್ಷಣೆ ಮತ್ತು ಪೋಷಣೆಗಳೊಂದಿಗೆ ಮುಂದುವರೆಸಿಕೊಂಡು ಹೋಗುವ ಸುಲಭ ಮತ್ತು ಸುರಕ್ಷಿತ ಮಾರ್ಗವೆನಿಸಿಬಿಟ್ಟಿದೆ. ಈ ಉಪಚುನಾವಣೆಗಳಲ್ಲಿನ ಪ್ರಮುಖ ಪಕ್ಷಗಳ ಅಭ್ಯಥಿಗಳೆಲ್ಲರ ಆಸ್ತಿ ವಿವರಗಳು ಇದನ್ನು ಸಾಬೀತು ಪಡಿಸುವಂತಿವೆ. ಹಾಗೇ ಈ ಚುನಾವಣೆಗಳಲ್ಲಿ ಎಲ್ಲ ಪಕ್ಷಗಳ ವತಿಯಿಂದ ಕುಟುಂಬ ರಾಜಕಾರಣದ ಪ್ರೋತ್ಸಾಹ ನಿರ್ಲಜ್ಜವಾಗಿ ನಡೆದಿದೆ. ಚೆನ್ನಿಗಪ್ಪನಂತಹವರಿಗೆ ಟಿಕೆಟ್ ನೀಡಿ ಬಿಜೆಪಿ, ಉಳಿದಿದ್ದ ತನ್ನೆಲ್ಲ ಮಾನವನ್ನೂ ಹರಾಜು ಹಾಕಿಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಉಪಚುನಾವಣೆಗಳಲ್ಲಿ ಯಾರು ಸೋತರೂ, ಯಾರು ಗೆದ್ದರೂ ರಾಜ್ಯ ರಾಜಕಾರಣದ ಮೇಲೆ ಯಾವುದೇ ಗುಣಾತ್ಮಕ ಪರಿಣಾಮ ಆಗಲಾರದು

ಅದೇನೇ ಇರಲಿ, ನಮ್ಮ ಹೊಸ ಪ್ರತಿಷ್ಠಿತ ವರ್ಗ ಮುಂಬೈ ದಾಳಿಯ ಭಯಾನಕತೆಯ ಹಿನ್ನೆಲೆಯಲ್ಲಿ ತನ್ನ ಪ್ರಾಣ ಮತ್ತು ವ್ಯಾಪಾರ ವಹಿವಾಟುಗಳ ಭದ್ರತೆಯ ಬಗೆಗಿನ ಆತಂಕದಲ್ಲಿ, ರಾಜಕಾರಣದ ಬಗೆಗೇ ಜನತೆಯಲ್ಲಿ ಸಿನಿಕತೆ ಹುಟ್ಟಿಸುವ ಪ್ರಯತ್ನದ ಮೂಲಕ

ಅತ್ಯಂತ ಬೇಜವಾಬ್ದಾರಿತನವನ್ನು ಪ್ರದರ್ಶಿಸಿದೆ ಎಂದೇ ಹೇಳಬೇಕು. ಇವರಿಗೆ ಮತ್ತು ಇವರ ನವ ಮಧ್ಯಮ ವರ್ಗದ ಅನುಯಾಯಿಗಳಿಗೆ ಗೊತ್ತಾಗಬೇಕಾದುದೇನೆಂದರೆ, ರಾಜಕಾರಣ ಕುರಿತ ಇಂತಹ ಸಾರಾ ಸಗಟು ಸಿನಿಕತೆಯಿಂದ ಸೇನೆಯ ಅಥವಾ ಸಮಯಸಾಧಕ ರಾಜಕಾರಣದ ಸರ್ವಾಧಿಕಾರ ಸ್ಥಾಪನೆಗೆ ಪೂರಕವಾದ ವಾತಾವರಣವಷ್ಟೇ ಸೃಷ್ಟಿಯಾಗಬಲ್ಲುದು. ಇದು ಎಲ್ಲ ರೀತಿಗಳಲ್ಲಿ ಈಗಿರುವುದಕ್ಕಿಂತ ಹೆಚ್ಚು ಭಯಾನಕವಾದ ಪರಿಸ್ಥಿತಿಯನ್ನು ಮಾತ್ರ ನಿರ್ಮಿಸಬಲ್ಲುದು. ಆದುದರಿಂದ ಈ ವರ್ಗಕ್ಕೆ ವಿವೇಕ, ಪ್ರಬುದ್ಧತೆಗಳಿದ್ದರೆ ಮತ್ತು ನಿಜವಾದ ರಾಷ್ಟ್ರಪ್ರೇಮ, ನಾಗರಿಕ ಸಮಾಜದ ಕಳಕಳಿ ಇದ್ದರೆ, ಅದು ಇಂದಿನ ರಾಜಕಾರಣವನ್ನು ಸುಧಾರಿಸುವ, ಶುದ್ಧೀಕರಿಸುವ ಪ್ರಯತ್ನಗಳನ್ನು ಮಾಡುವುದು ಒಳಿತು. ಹಲವು ಮಟ್ಟಗಳಲ್ಲಿ ಸಮಾಜದ ಹಿರಿಯರ, ಸಭ್ಯರ, ಗಣ್ಯರ ಸಮಿತಿಗಳನ್ನು ರಚಿಸಿ, ಅವುಗಳ ಮೂಲಕ ಚುನಾವಣೆಗಳಿಗೆ ಒಳ್ಳೆಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ; ಅವರನ್ನು ಗೆಲ್ಲಿಸಲು ಸಾಧ್ಯವಾಗುವಂತಹ ಪ್ರಜಾಸತ್ತಾತ್ಮಕ ಸಂಘಟನೆ ಮತ್ತು ಅಗತ್ಯ ನಿಧಿ ಸ್ಥಾಪನೆಗೆ ಇವರು ಮುಂದಾಗಬೇಕು. ಇದು ಸಣ್ಣ ಮಟ್ಟದಲ್ಲೇ ಆರಂಭವಾಗಲಿ. ಆದರೆ ಅದೊಂದು ದೊಡ್ಡ ಬದಲಾವಣೆಗೆ ನಾಂದಿಯಾದೀತು. ಇದರ ಬದಲಿಗೆ ಬರೀ ರಾಜಕಾರಣಿಗಳ ವಿರುದ್ಧ, ರಾಜಕಾರಣದ ವಿರುದ್ಧ ಗುಟುರು ಹಾಕುವುದು ನಮ್ಮ ರಾಷ್ಟ್ರೀಯ ಹೋರಾಟದ ಸಾಧನೆಗಳೆಲ್ಲವನ್ನೂ ಮಣ್ಣುಗೂಡಿಸುವ ಪ್ರಯತ್ನವಾದೀತು.

(೨೬ ಡಿಸೆಂಬರ, ೨೦೦೮)

■

೩೪. ಸಾಮಾಜಿಕ ನ್ಯಾಯ ರಾಜಕಾರಣ: ವಿ.ಪಿ.ಸಿಂಗ್ ಮಾದರಿ

ಮೊನ್ನೆ ಶಿವಮೊಗ್ಗದಲ್ಲಿ 'ವಿ.ಪಿ.ಸಿಂಗ್ ನಮನ' ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡಿದ್ದ ನನಗೆ ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದ 'ಬಹುಮತ' ಸಂಘಟನೆಯ ಸಂಚಾಲಕರಾದ ಗೆಳೆಯ ಎಚ್. ಹಾಲಪ್ಪನವರು ಸ್ಮರಣಿಕೆಯಾಗಿ ವಿ.ಪಿ.ಸಿಂಗ್ ಅವರ ಭಾವಚಿತ್ರವೊಂದನ್ನು ನೀಡಿದಾಗ, ನಾನು ಸ್ವಲ್ಪ ತಬ್ಬಿಬ್ಬಾದೆ. ನನ್ನ ಮನೆಯಲ್ಲಿ ರಾಷ್ಟ್ರ ಜೀವನದ ಸಾರ್ವತ್ರಿಕ ನಾಯಕರೆನಿಸಿದ ಗಾಂಧಿ, ಲೋಹಿಯಾ, ಅಂಬೇಡ್ಕರರ ಭಾವಚಿತ್ರಗಳಿವೆ. ಅವು ಕೂಡಾ ವಿವಿಧ ಸಾರ್ವಜನಿಕ ಸಮಾರಂಭಗಳಲ್ಲಿ ಸ್ಮರಣಿಕೆಗಳಾಗಿ ನೀಡಲ್ಪಟ್ಟವೇ. ನಮ್ಮ ಮನೆಯ ಷೋ-ಕೇಸಿನಲ್ಲಿ, ಇವುಗಳ ಜೊತೆ ವಿ.ಪಿ. ಸಿಂಗ್ ಅವರ ಚಿತ್ರ ಸಮಾನ ಗೌರವದಿಂದ ನಿಲ್ಲಬಲ್ಲದೇ? ಅವರು ನಿಜವಾಗಿಯೂ ಇವರೆಲ್ಲರ ಜೊತೆ ನಮ್ಮ ಮನೆಗಳಲ್ಲಿ ನೆನೆಯಬೇಕಾದ ವ್ಯಕ್ತಿ ಎನಿಸಿದ್ದಾರೆಯೆ? ಇತ್ಯಾದಿ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಹಾದು ಹೋದವು. ಚಿತ್ರವನ್ನು ಸದ್ಯಕ್ಕಾದರೂ ಮನೆಯ ಮೂಲೆಯೊಂದರಲ್ಲಿ ಬಿಸಾಡಲು ಒಪ್ಪದ ನನ್ನ ದ್ವಂದ್ವ ಮನಃಸ್ಥಿತಿಯಲ್ಲಿ, ಈ ವಿಶ್ವನಾಥ ಪ್ರತಾಪ ಸಿಂಗರ ರಾಜಕೀಯ ಜೀವನವನ್ನೊಮ್ಮೆ ನಾನು ಸ್ವಲ್ಪ ವಿಸ್ತಾರವಾಗಿ ಮೆಲುಕು ಹಾಕುವುದು ಅನಿವಾರ್ಯವಾಯಿತು.

ವಿ.ಪಿ. ಸಿಂಗ್ ನಮ್ಮ ಕಾಲದ ದೊಡ್ಡ, ಆದರೆ ದುರದೃಷ್ಟದ ರಾಜಕಾರಣಿ. ಅವರ ರಾಜಕೀಯ ಜೀವನವೇ ಹಲವಾರು ದುರದೃಷ್ಟಕರ ತಿರುವುಗಳಿಂದ ಕೂಡಿದುದಾಗಿತ್ತು. ಅವರ ರಾಜಕೀಯ ಜೀವನ ಕೊನೆಗೊಂಡದ್ದೂ ರಾಷ್ಟ್ರಜೀವನದ ಒಂದು ದುರದೃಷ್ಟಕರ ತಿರುವುನಲ್ಲಿಯೇ. ಈ ದುರದೃಷ್ಟದ ಆಟ ಅವರನ್ನು ಸಾವಿನಲ್ಲೂ ಬೆಂಬತ್ತಿ ಬಂದಿತ್ತು. ರಾಷ್ಟ್ರ ಅವರನ್ನು ನೆನೆಯಬೇಕಾದ ರೀತಿಯಲ್ಲಿ ನೆನೆಯಲಾಗಲಿಲ್ಲ. ಮುಂಬೈ ಮೇಲಿನ ಭಯೋತ್ಪಾದಕರ ದಾಳಿ ಅವರ ಸಾವಿನ ಸುದ್ದಿಯ ಪ್ರಾಮುಖ್ಯತೆಯನ್ನು ಹಿನ್ನೆಲೆಗೆ ಸರಿಸಿತ್ತು. ಇದು ಒಂದು ರೀತಿಯಲ್ಲಿ ತಾರ್ಕಿಕ ನ್ಯಾಯವೇ ಆಗಿತ್ತೇನೋ! ತಾವು ಪ್ರಧಾನ ಮಂತ್ರಿ ಆಗಿದ್ದಾಗ ಅವರು ತಮ್ಮ ಗೃಹ ಮಂತ್ರಿ ಮುಫ್ತಿ ಮಹಮ್ಮದ್ ಸಯ್ಯೀದ್ ಅವರ ಹಿರಿಯ ಮಗಳು ರುಬೈಯಾ ಸಯ್ಯೀದ್‌ಳನ್ನು ಅಪಹರಣದಿಂದ ಪಾರು ಮಾಡಲು, ಅಪಹರಣಕಾರರ ಬೇಡಿಕೆಯನ್ನು ಮನ್ನಿಸಿ, ಭಾರತದಲ್ಲಿ ಬಂಧನದಲ್ಲಿದ್ದ ಪಾಕಿಸ್ತಾನಿ ಭಯೋತ್ಪಾದಕರನ್ನು ಬಿಡುಗಡೆ ಮಾಡುವ ನಿರ್ಧಾರ ಕೈಗೊಂಡರು. ಅವರ ಈ ಅಸಹಾಯಕ ಅಥವಾ ದುರ್ಬಲ ಘಳಿಗೆಯ ನಿರ್ಧಾರವೇ ಭಾರತದಲ್ಲಿ ಮುಂದೆ ಇಸ್ಲಾಮೀ ಭಯೋತ್ಪಾದನೆ ವ್ಯಾಪಕವಾಗಿ ಬೆಳೆಯಲು

ನಾಂದಿಯಾಯಿತೆಂದು ಆಪಾದಿಸಲಾಗುತ್ತಿದೆ. ಆದರೆ ಹೀಗೆ ಆಪಾದಿಸುವ ರಾಜಕೀಯ ಧೋರಣೆಯನ್ನು ಪ್ರತಿನಿಧಿಸುವ ಸರ್ಕಾರವೇ, ಮುಂದೆ ವಿಮಾನ ಅಪಹರಣದ ಸಂಬಂಧವಾಗಿ ಇನ್ನಷ್ಟು ಅಪಾಯಕಾರಿ ಇಸ್ಲಾಮಿ ಭಯೋತ್ಪಾದಕರನ್ನು ಕಾಬೂಲ್‌ವರೆಗೆ ಸುಕ್ಷೇಮವಾಗಿ ಬಿಟ್ಟು ಬರಲು ತನ್ನ ವಿದೇಶಾಂಗ ಮಂತ್ರಿಯನ್ನೇ ಕಳಿಸಬೇಕಾದ ಪರಿಸ್ಥಿತಿಗೆ ಸಿಕ್ಕಿತು ಎಂಬುದು ಬೇರೆ ಮಾತು.

ಬಹುಶಃ ವಿ.ಪಿ. ಸಿಂಗ್ ಅವರಿಗೆ ಆಗ–ಸುಮಾರು ಎರಡು ದಶಕಗಳ ಹಿಂದೆ–ಇಸ್ಲಾಮಿ ಭಯೋತ್ಪಾದನೆ ಈ ಪ್ರಮಾಣ ಮತ್ತು ತೀವ್ರತೆಯಲ್ಲಿ ಬೆಳೆಯಬಹುದೆಂಬ ಕಲ್ಪನೆ ಇದ್ದಿರಲಾರದು ಮತ್ತು ಅದನ್ನು ಸಮಚಿತ್ತದ ರಾಜತಾಂತ್ರಿಕ ನಡೆಗಳ ಮೂಲಕ ಕ್ರಮೇಣ ನಿಯಂತ್ರಿಸಬಹುದು ಎಂಬ ನಂಬಿಕೆ ಇದ್ದಿರಬಹುದು. ಆ ನಂಬಿಕೆಯನ್ನು ನಿಜಗೊಳಿಸಬಲ್ಲ ರಾಜಕೀಯ ಪ್ರಬುದ್ಧತೆಯೂ ಅವರಲ್ಲಿತ್ತು. ಅವರ ಪ್ರಧಾನ ಮಂತ್ರಿತ್ವದ ಕಾಲಕ್ಕೆ ಸಿಖ್ ಉಗ್ರಗಾಮಿಗಳ ಹಿಂಸಾಚಾರದಿಂದ ಹೊತ್ತಿ ಉರಿಯುತ್ತಿದ್ದ ಪಂಜಾಬನ್ನು ತಣಿಸಲು ಅವರು ಪ್ರಧಾನಿಯಾದ ಕೂಡಲೇ ಅಮೃತಸರದ ಸ್ವರ್ಣಮಂದಿರಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. 'ಆಪರೇಷನ್ ಬ್ಲೂಸ್ಟಾರ್' ಸೇನಾ ಕಾರ್ಯಾಚರಣೆಯ ತಪ್ಪಿಗಾಗಿ ಮುಕ್ತ ಮನಸ್ಸಿನಿಂದ ಸಿಖ್ಖರ ಕ್ಷಮೆ ಕೋರುವ ಮೂಲಕ ಆ ರಾಜ್ಯದಲ್ಲಿನ ಸುಮಾರು ಒಂದು ದಶಕದ ಪ್ರತ್ಯೇಕತಾವಾದಿ ಉಗ್ರಗಾಮಿ ಚಟುವಟಿಕೆಗಳನ್ನು ತಹಬಂದಿಗೆ ತಂದರು. ಕೂಡಲೇ ಅಲ್ಲಿ ಚುನಾವಣೆಗಳನ್ನು ಘೋಷಿಸುವ ಧೈರ್ಯ ಮಾಡಿ ಪಂಜಾಬ್ ಮತ್ತೆ ರಾಷ್ಟ್ರಜೀವನದ ಮುಖ್ಯ ಪ್ರವಾಹಕ್ಕೆ ಸೇರುವಂತೆ ಮಾಡಿದರು. ಅಷ್ಟೇ ಅಲ್ಲ, ರಾಜೀವ್ ಗಾಂಧಿ ಅವರ ಅಪ್ರಬುದ್ಧ ರಾಜಕೀಯ ನಿರ್ಧಾರದಿಂದಾಗಿ (ಅದಕ್ಕಾಗಿ ಅವರು ಮುಂದೆ ತಮ್ಮ ಪ್ರಾಣವನ್ನೇ ತೆರಬೇಕಾಯಿತೆಂಬುದು ಬೇರೆ ವಿಷಯ) ಶ್ರೀಲಂಕಾಗೆ ತೆರಳಿ ಅಲ್ಲಿನ ಯುದ್ಧರಂಗದಲ್ಲಿ ಅನಗತ್ಯವಾಗಿ ಸಿಕ್ಕಿ ಹಾಕಿಕೊಂಡಿದ್ದ ಭಾರತೀಯ ಶಾಂತಿಪಾಲನಾ ಪಡೆಯನ್ನು ಹಿಂದಕ್ಕೆ ಕರೆಸಿಕೊಳ್ಳುವ ದಿಟ್ಟ ರಾಜಕೀಯ ನಿರ್ಧಾರ ಕೈಗೊಂಡರು. ಆ ಮೂಲಕ ವಿ.ಪಿ.ಸಿಂಗ್ ತಾವೊಬ್ಬ ಅನುಪಮ ರಾಜಕೀಯ ಮುತ್ಸದ್ದಿಯೆಂದು ಅಧಿಕಾರದ ಅನತಿ ಕಾಲದಲ್ಲೇ ಸಾಬೀತು ಮಾಡಿದ್ದರು.

ಆದರೆ ಇಂದು ವಿ.ಪಿ.ಸಿಂಗ್ ರಾಷ್ಟ್ರ ಕಂಡ ಅಪರೂಪದ ರಾಜಕೀಯ ಮುತ್ಸದ್ದಿ ಎಂಬುದನ್ನು ರಾಷ್ಟ್ರೀಯ ಅಭಿಪ್ರಾಯ ನಿರೂಪಕರೆನಿಸಿರುವ ನಮ್ಮ ರಾಷ್ಟ್ರೀಯ ಮಾಧ್ಯಮಗಳು ನಿರಾಕರಿಸುತ್ತಿವೆ. ಅವರ ಸಾವನ್ನು ಅವು ನಿರ್ಲಕ್ಷಿಸಿದ ರೀತಿಯೇ ಅವುಗಳ ಪೂರ್ವಾಗ್ರಹಗಳನ್ನು ಸೂಚಿಸುವಂತಿವೆ. ರಾಜೀವ್ ಗಾಂಧಿ ಪ್ರಧಾನಮಂತ್ರಿತ್ವದ ಕಾಲದ ಭ್ರಷ್ಟಾಚಾರದ ಪ್ರಕರಣಗಳ ವಿರುದ್ಧ ದಿಟ್ಟ ಹೋರಾಟ ಆರಂಭಿಸಿದ ವಿ.ಪಿ.ಸಿಂಗ್ ಅವರಿಗೆ ಬೇಷರತ್ ಹಾಗೂ ವ್ಯಾಪಕ ಬೆಂಬಲ ನೀಡಿ ಅವರನ್ನು ಮಹಾತ್ಮ ಗಾಂಧಿ ವೇಷದಲ್ಲೂ ಮಂಡಿಸಿ, ರಾಷ್ಟ್ರ ನಾಯಕರನ್ನಾಗಿ ಈ ಮಾಧ್ಯಮಗಳು ಬಿಂಬಿಸಿದವು. ಆದರೆ ಅದೇ ಮಾಧ್ಯಮಗಳು ಅವರು ಪ್ರಧಾನ ಮಂತ್ರಿಯಾಗಿ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದಂತೆ,

ಹಿಂದುಳಿದ ವರ್ಗಗಳಿಗೆ ಕೇಂದ್ರ ಸರ್ಕಾರದ ನೌಕರಿಗಳಲ್ಲಿ ಮೀಸಲಾತಿ ಒದಗಿಸುವ ಮಂಡಲ್ ವರದಿಯನ್ನು ಜಾರಿಗೊಳಿಸುವ ನಿರ್ಧಾರ ಕೈಗೊಂಡ ಕೂಡಲೇ ಅವರ ವಿರುದ್ಧ ತಿರುಗಿ ಬಿದ್ದು, ಅವರನ್ನು ದೊಡ್ಡ ಖಳನಾಯಕನಂತೆ ಬಿಂಬಿಸತೊಡಗಿದವು. ಅವರ ಇತರ ಸಾಧನೆಗಳೆಲ್ಲ ಮರೆತೇ ಹೋದವು...

ಹಾಗೆ ನೋಡಿದರೆ, ಮಂಡಲ್ ಆಯೋಗವೇನೂ ವಿ.ಪಿ.ಸಿಂಗ್ ರಚಿಸಿದ್ದಲ್ಲ. ೧೯೭೭ರ ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಸರ್ಕಾರ ನೇಮಿಸಿದ್ದ ಆಯೋಗವದು. ವರದಿ ಸಿದ್ಧವಾಗಿ ವರ್ಷಗಳೇ ಕಳೆದಿದ್ದರೂ. ಯಾವ ಪ್ರಧಾನ ಮಂತ್ರಿಯೂ ಅದನ್ನು ಪರಿಶೀಲಿಸಿ ಜಾರಿ ಮಾಡುವ ಮನಸ್ಸು ಮಾಡಿರಲಿಲ್ಲ. ವಿ.ಪಿ.ಸಿಂಗ್ ಅದನ್ನು ತಮ್ಮ ರಾಜಕೀಯ ಮುತ್ಸದ್ದಿತನದಲ್ಲಿ ಮಾಡಿದರು. ಸರ್ಕಾರ ನಡೆಸುವ ವ್ಯವಸ್ಥೆಯಲ್ಲಿ ಕಣ್ಣಿಗೆ ರಾಚುವಂತೆ ಇದ್ದ ಸಾಮಾಜಿಕ ಅಸಮತೋಲನವನ್ನು ಸರಿ ಪಡಿಸಲು ಯತ್ನಿಸಿ, ವ್ಯವಸ್ಥೆಯ ಇನ್ನಷ್ಟು ಪ್ರಜಾಪ್ರಭುತ್ವೀಕರಣದ ಪ್ರಯತ್ನ ಮಾಡಿದರು. ಆದರೆ ಅದೇ ಅವರಿಗೆ ಮುಳುವಾಯಿತು. ಈ ಪ್ರಯತ್ನವನ್ನು ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಅವರ ಏಜೆಂಟರೂ ಆದ ರಾಷ್ಟ್ರೀಯ ಮಾಧ್ಯಮಗಳು–ವಿಶೇಷವಾಗಿ ಇಂಗ್ಲಿಷ್ ದಿನಪತ್ರಿಕೆಗಳು–ವಿಚ್ಛಿದ್ರಕಾರಿ ರಾಜಕಾರಣ ಎಂಬಂತೆ ಬಿಂಬಿಸಿ, ರಾಷ್ಟ್ರಾದ್ಯಂತ ಅಶಾಂತಿ ಹರಡಲು ಕಾರಣರಾದರು. ಆದರೆ ಇಂದು ಅದೇ ಮಂಡಲ್ ವರದಿಯನ್ನು, ಅದರ ಇತ್ತೀಚಿನ ವಿಸ್ತರಣೆಯನ್ನು (ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿಯೂ ಮೀಸಲಾತಿ) ಬೆಂಬಲಿಸಲು ಆಗ ಅಶಾಂತಿ ಹಬ್ಬಿಸಿದ ರಾಜಕೀಯ ಪಕ್ಷವೂ ಸೇರಿದಂತೆ ರಾಷ್ಟ್ರದ ಪ್ರತಿಯೊಂದು ರಾಜಕೀಯ ಪಕ್ಷವೂ ಮುಗಿ ಬೀಳುತ್ತಿರುವುದನ್ನು ನೋಡಿದರೆ, ವಿ.ಪಿ.ಸಿಂಗ್ ಅವರ ದೂರದೃಷ್ಟಿಯ ರಾಜಕೀಯ ಮುತ್ಸದ್ದಿತನದ ಅರಿವಾದೀತು.

ಆದರೆ ಇಂದು ವಿ.ಪಿ.ಸಿಂಗ್ ಅವರನ್ನು, ಅವರ ಅಭಿಮಾನಿಗಳೆನಿಸಿಕೊಂಡವರು ಕೇವಲ ಮಂಡಲ್ ವರದಿ ಜಾರಿಗೊಳಿಸಿದ ನಿರ್ಧಾರ ಕೈಗೊಂಡದ್ದಕ್ಕಾಗಿ ಮಾತ್ರ ಕ್ರಾಂತಿಕಾರಿ ರಾಜಕಾರಣಿ, ಸಾಮಾಜಿಕ ನ್ಯಾಯದ ಹರಿಕಾರ ಎಂದು ಹಾಡಿ ಹೊಗಳುತ್ತಿದ್ದಾರೆ. ಇದು ವಿ.ಪಿ.ಸಿಂಗ್ ಅವರಿಗೆ ಅವರ ವಿರೋಧಿಗಳು ಮಾಡುತ್ತಿರುವ ಅನ್ಯಾಯಕ್ಕಿಂತ ದೊಡ್ಡ ಅನ್ಯಾಯ. ಇವರು ಸಾಮಾಜಿಕ ನ್ಯಾಯ ಎಂಬ ಆವೃತ ರಾಜಕೀಯ ಕಲ್ಪನೆಯನ್ನು, ಹಿಂದುಳಿವೆಯೆಂದು ಹೇಳಲಾದ ಜಾತಿಗಳಿಗೆ ಉದ್ಯೋಗ ಮೀಸಲಾತಿ ಮತ್ತು ಆ ಜಾತಿಗಳ ನಾಯಕರಿಗೆ ರಾಜಕೀಯ ಅಧಿಕಾರ ನೀಡಿಕೆ ಎಂಬ ಬಹು ಸೀಮಿತ ರಾಜಕೀಯ ಕಾರ್ಯಕ್ರಮದ ಮಟ್ಟಕ್ಕೆ ಕುಬ್ಜಗೊಳಿಸುತ್ತಿರುವ ರಾಜಕೀಯ ಸ್ವಾರ್ಥಿಗಳಾಗುತ್ತಿದ್ದಾರೆ. ಸಾಮಾಜಿಕ ನ್ಯಾಯ ಎಂದರೆ ಏನು ಮತ್ತು ಏಕೆ ಎಂಬುದನ್ನೇ ಮರೆತಿರುವ ಇವರು, ತಾವು ಯಾರ ಸ್ಥಾನಗಳನ್ನು ಆಕ್ರಮಿಸಿಕೊಳ್ಳಲು ಹೊರಟಿರುವರೋ ಅವರು ಸೃಷ್ಟಿಸಿರುವ ಭ್ರಷ್ಟ ಮತ್ತು ಅದಕ್ಷ ವ್ಯವಸ್ಥೆಯ 'ಉತ್ಪತ್ತಿ'ಯಲ್ಲಿ ಸಮಪಾಲನ್ನು ಆಗ್ರಹಿಸುತ್ತಿರುವರಷ್ಟೆ! ಸಾಮಾಜಿಕ ನ್ಯಾಯವೆಂದರೆ, ಸಮಾಜದ, ರಾಷ್ಟ್ರದ ಪುನಾರಚನೆ; ತಳ ಮಟ್ಟದ ಪ್ರಜಾಪ್ರಭುತ್ವೀಕರಣ,

ಭ್ರಷ್ಟಾಚಾರ ನಿವಾರಣೆ ಮತ್ತು ಆ ಮೂಲಕ ಹೊಸ ಸಮಾಜವೊಂದರ ನಿರ್ಮಾಣ. ಇದರ ಒಂದು ಭಾಗವಾಗಿ ಮತ್ತು ಅವಿಭಾಜ್ಯ ಅಂಗವಾಗಿ ಮಾತ್ರ ಮೀಸಲಾತಿ ಮತ್ತು ರಾಜಕೀಯ ಅಧಿಕಾರದ ಅವಕಾಶಗಳನ್ನು ಕಲ್ಪಿಸಿಕೊಳ್ಳಬೇಕು. ವಿ.ಪಿ.ಸಿಂಗ್ ಸಾಮಾಜಿಕ ನ್ಯಾಯ ಕಲ್ಪನೆಯನ್ನು ತಮ್ಮದೇ ರಾಜಕೀಯ ಜೀವನದ ಉದಾಹರಣೆಯೊಂದಿಗೆ ಮಂಡಿಸಿದ್ದು ಹೀಗೆ. ಅಲ್ಲದೆ, ಸ್ವತಃ ಅವರೇ, ನಮ್ಮ ದೇವರಾಜ ಅರಸರಂತೆ ಅಥವಾ ಸಾಮಾಜಿಕ ನ್ಯಾಯಕ್ಕೊಂದು ಆಳದ ತಾತ್ವಿಕತೆ ಒದಗಿಸಿದ ಲೋಹಿಯಾರಂತೆ ಹಿಂದುಳಿದ ವರ್ಗಗಳಿಗೇನೂ ಸೇರಿದವರಾಗಿರಲಿಲ್ಲ ಎಂಬುದನ್ನೂ ಇಲ್ಲಿ ನೆನಪಿನಲ್ಲಿಡಬೇಕು.

೧೯೫೦ರ ಹೊತ್ತಿಗೆ ಮಾಂಡಾ ಸಂಸ್ಥಾನದ ಉತ್ತರಾಧಿಕಾರಿಯಾದ ವಿ.ಪಿ.ಸಿಂಗ್ ತಮ್ಮ ಒಡೆತನದ ನೂರಾರು ಎಕರೆ ಜಮೀನನ್ನು ಭೂದಾನ ಚಳುವಳಿಯ ಅಂಗವಾಗಿ ಬಡಬಗ್ಗರಿಗೆ ಹಂಚಿದರು. ಅರವತ್ತರ ದಶಕದಲ್ಲಿ ರಾಜಕೀಯ ಪ್ರವೇಶ ಮಾಡಿದ ಅವರು ೧೯೮೦ರ ಹೊತ್ತಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾದಾಗ, ಆ ರಾಜ್ಯದ ಒಂದು ಭಾಗದಲ್ಲಿ ಅತಿಯಾಗಿದ್ದ ಢಕಾಯಿತರ ಹಾವಳಿಯನ್ನು ಒಂದು ನಿರ್ದಿಷ್ಟ ಅವಧಿಯಲ್ಲಿ ನಿವಾರಿಸುವುದಾಗಿ ಜನತೆಗೆ ಮಾತು ಕೊಟ್ಟರು. ಅದು ಸಾಧ್ಯವಾಗದೆ, ಜಿಲ್ಲಾಧಿಕಾರಿಯಾಗಿದ್ದ ಅವರ ಸೋದರನೇ ಈ ಹಾವಳಿಗೆ ಬಲಿಯಾದಾಗ, ಜನತೆಗೆ ಕೊಟ್ಟ ಮಾತನ್ನು ನಡೆಸಲಾಗದ್ದಕ್ಕಾಗಿ ಅವರು ಅಧಿಕಾರ ತ್ಯಜಿಸಿದರು. ಕೆಲವು ವರ್ಷಗಳ ನಂತರ ೧೯೮೪ರಲ್ಲಿ ರಾಷ್ಟ್ರ ರಾಜಕಾರಣವನ್ನು ಪ್ರವೇಶಿಸಿದ ವಿಶ್ವನಾಥ ಪ್ರತಾಪರು ವಾಣಿಜ್ಯ ಮಂತ್ರಿಯಾಗಿ, ರಕ್ಷಣಾ ಮಂತ್ರಿಯಾಗಿ ತಮ್ಮ ಪಕ್ಷದ ಬೆಂಬಲಿಗರೇ ಆದ ತೆರಿಗೆಗಳ್ಳ ಕೈಗಾರಿಕೋದ್ಯಮಿಗಳ ವಿರುದ್ಧ, ಶಸ್ತ್ರಾಸ್ತ್ರ ಖರೀದಿಯ ಹಲವು ಅವ್ಯವಹಾರಗಳ ವಿರುದ್ಧ ದೊಡ್ಡ ಕಾರ್ಯಾಚರಣೆಯನ್ನೇ ನಡೆಸಿ ಜನಮನ ಗೆದ್ದರು. ಇವುಗಳಲ್ಲಿ ಸ್ವತಃ ತಮ್ಮ ಗೆಳೆಯ ಹಾಗೂ ಪ್ರಧಾನಿ ರಾಜೀವ್ ಗಾಂಧಿಯವರ ಪಾತ್ರವಿತ್ತೆಂದು ಹೇಳಲಾದ ಬೋಫರ್ಸ್ ಫಿರಂಗಿ ಖರೀದಿ ಹಗರಣವೂ ಸೇರಿದ್ದ ಕಾರಣದಿಂದಾಗಿ ೧೯೮೮ರ ಹೊತ್ತಿಗೆ ಅವರು ಕೇಂದ್ರ ಸಚಿವ ಸಂಪುಟವನ್ನೂ, ಆವರೆಗೆ ತಾವಿದ್ದ ಕಾಂಗ್ರೆಸ್ ಪಕ್ಷವನ್ನೂ ಬಿಡಬೇಕಾಯಿತು.

ಆನಂತರ ವಿಶ್ವನಾಥ ಪ್ರತಾಪರು ತಮ್ಮೊಡನೆ ಕಾಂಗ್ರೆಸ್ ಬಿಟ್ಟು ಬಂದ ಸಹಮನಸ್ಕರೊಡನೆ ಸೇರಿ ಜನ ಮೋರ್ಚಾ ಎಂಬ ತಮ್ಮದೇ ರಾಜಕೀಯ ವೇದಿಕೆಯೊಂದನ್ನು ರಚಿಸಿಕೊಂಡು, ಅನತಿ ಕಾಲದಲ್ಲೇ ಭ್ರಷ್ಟಾಚಾರ ವಿರೋಧಿ ಆಂದೋಲನದ ವಿಶ್ವಾಸಾರ್ಹ ನಾಯಕರಾಗಿ ಬೆಳೆದರು. ೧೯೮೯ರ ಮಹಾ ಚುನಾವಣೆಗಳನ್ನು ಎದುರಿಸಲು ಅವರು ಭಾರತದ ಒಕ್ಕೂಟ ಸ್ವರೂಪಕ್ಕೆ ತಕ್ಕನಾದ; ರಾಷ್ಟ್ರೀಯ ರಂಗ ಎಂಬ ಬಿಜೆಪಿ ಮತ್ತು ಕಮ್ಯುನಿಸ್ಟ್ ಪಕ್ಷಗಳೂ ಸೇರಿದಂತೆ, ರಾಷ್ಟ್ರದ ಎಲ್ಲ ಕಾಂಗ್ರೆಸ್ಸೇತರ ಪಕ್ಷಗಳ–ವಿಶೇಷವಾಗಿ ಡಿ.ಎಂ.ಕೆ., ತೆಲುಗು ದೇಶಂ, ಅಸ್ಸಾಂ ಗಣ ಪರಿಷತ್ ಮುಂತಾದ ಪ್ರಾದೇಶಿಕ ಪಕ್ಷಗಳ–ರಾಜಕೀಯ ಒಕ್ಕೂಟವನ್ನು ರಚಿಸಿದರು. ಅದರ ಪರಿಣಾಮವಾಗಿ ಪ್ರಧಾನ ಮಂತ್ರಿಯಾಗಿ, ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ–ಪ್ರಧಾನಿ ಮಂತ್ರಿ ಸ್ಥಾನಕ್ಕೆ

ಇನ್ನೋರ್ವ ಅಭ್ಯರ್ಥಿಯಾಗಿದ್ದ ಚಂದ್ರಶೇಖರರ ಕಡು ಮುನಿಸಿನ ನಡುವೆಯೂ-ಬಹು ವ್ಯಾಪಕವಾದ ರಾಷ್ಟ್ರೀಯ ಸಹಮತದ ರಾಜಕೀಯ ವಾತಾವರಣವೊಂದನ್ನು ನಿರ್ಮಿಸಿದರು.

ಪ್ರಾದೇಶಿಕ ಒಕ್ಕೂಟದ ಈ ಹೊಸ ರಾಜಕೀಯ ಬೆಳವಣಿಗೆಯನ್ನು ಸಹಿಸದ ಕೋಮುವಾದಿಗಳು ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಿನಲ್ಲಿ ಶ್ರೀರಾಮ ಜನ್ಮಭೂಮಿ ಆಂದೋಲನ ಆರಂಭಿಸಿ, ವಿ.ಪಿ.ಸಿಂಗರನ್ನು ನಿಯಂತ್ರಿಸಲು ಯತ್ನಿಸಿದರು. ಅದು ಸಾಧ್ಯವಾಗದೆ, ಕೊನೆಗೆ ಮಂಡಲ್ ವರದಿಯ ಶಿಫಾರ್ಸುಗಳ ವಿಷಯದಲ್ಲಿ ರಾಷ್ಟ್ರಾದ್ಯಂತ ದೊಡ್ಡ ಗೊಂದಲವೆಬ್ಬಿಸಿದಾಗ; ಅವರು ಕೋಮುವಾದಿಗಳೊಂದಿಗೆ ಮತ್ತು ಯಥಾಸ್ಥಿತಿವಾದಿಗಳೊಂದಿಗೆ ರಾಜಿಗೆ ಒಪ್ಪದೆ, ಸಂಸತ್ತಿನಲ್ಲಿ ಅವಿಶ್ವಾಸ ಗೊತ್ತುವಳಿ ಎದುರಿಸಿ ರಾಜೀನಾಮೆ ನೀಡಿದರು. ಆ ಸಂದರ್ಭದಲ್ಲಿ ಸಂಸತ್ತಿನಲ್ಲಿ ನಡೆದ ಚರ್ಚೆಯಲ್ಲಿ ಅವರು ತಮ್ಮ ರಾಜಕೀಯ ವಿರೋಧಿಗಳನ್ನು ಕೇಳಿದ 'ನೀವು ಎಂತಹ ರಾಷ್ಟ್ರ ಕಟ್ಟ ಬಯಸುತ್ತೀರಿ?' ಎಂಬ ಪ್ರಶ್ನೆ ಇಂದೂ ನಮ್ಮ ರಾಜಕೀಯ ವಲಯಗಳಲ್ಲಿ ಇನ್ನಷ್ಟು ಪ್ರಸ್ತುತತೆಯೊಂದಿಗೆ ಅನುರಣಿಸುತ್ತಿದೆ ಎಂದರೆ, ರಾಷ್ಟ್ರ ರಾಜಕಾರಣಕ್ಕೆ ವಿ.ಪಿ.ಸಿಂಗ್ ಅವರ ಕೊಡುಗೆಯ ಮಹತ್ವವೇನು ಎಂಬುದು ಅರ್ಥವಾದೀತು. ಕೇವಲ ಎರಡು ವರ್ಷ ಕೇಂದ್ರ ಮಂತ್ರಿ ಮತ್ತು ಎರಡು ವರ್ಷಗಳಿಗೂ ಕಡಿಮೆ ಅವಧಿಗೆ ಪ್ರಧಾನಮಂತ್ರಿಯಾಗಿದ್ದ ವಿ.ಪಿ.ಸಿಂಗ್, ರಾಷ್ಟ್ರ ರಾಜಕಾರಣವನ್ನು ನಿಯಂತ್ರಿಸುವ ಶಕ್ತಿಗಳ ಸಾಮಾಜಿಕ ನೆಲೆಗಳನ್ನೇ ಸಂಪೂರ್ಣವಾಗಿ ಬದಲಾಯಿಸಿಬಿಟ್ಟಿದ್ದರು! ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದಲ್ಲಿನ ದೊಡ್ಡ ಕ್ರಾಂತಿಯಿದು.

ವಿ.ಪಿ.ಸಿಂಗ್, ಮಂಡಲ್ ವರದಿಯನ್ನು ಸಾಕಷ್ಟು ಸಿದ್ಧತೆಯಿಲ್ಲದೆ ತಮ್ಮ ರಾಜಕೀಯ ಉಳಿವಿಗಾಗಷ್ಟೇ ಮಂಡಿಸಿದರು ಎಂದು ಟೀಕಿಸುವವರಿಗೆ ಗೊತ್ತಿಲ್ಲದ ವಿಷಯವೆಂದರೆ, ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದಾಗಲೇ ಮಂಡಲ್ ವರದಿಯನ್ನು ರಾಜ್ಯ ಮಟ್ಟದಲ್ಲಿ ಯಶಸ್ವಿಯಾಗಿ ಜಾರಿಗೆ ತಂದಿದ್ದರೆಂಬುದು. ಇಂತಹ ರಾಜಕಾರಣದ ಮುಂದುವರೆದ ಭಾಗವಾಗಿಯೇ ಅವರು ಮುಂದೆ ಅಪ್ಪಟ ಹಳ್ಳಿಗನೆಂದು ತಾವು ನಂಬಿದ್ದ ದೇವೇಗೌಡರನ್ನು ಪ್ರಧಾನಿ ಮಾಡಲು ಶ್ರಮಿಸಿದರು. ಆನಂತರ ತತ್ವಹೀನ ಮತ್ತು ಸಮಯಸಾಧಕ ರಾಜಕಾರಣದಿಂದ ಬೇಸತ್ತು ಸಂಸದೀಯ ರಾಜಕಾರಣ ತೊರೆದ ಮೇಲೂ, ಅವರು ಬಿಜೆಪಿ ಮತ್ತು ಕಾಂಗ್ರೆಸ್ ನೇತೃತ್ವದ ಸರ್ಕಾರಗಳ ಜನ ವಿರೋಧಿ ಆರ್ಥಿಕ ನೀತಿ ಮತ್ತು ಕಾರ್ಯಕ್ರಮಗಳ ವಿರುದ್ಧ, ಈ ಮಧ್ಯೆ ತಮ್ಮ ದೇಹಕ್ಕೆ ತಗುಲಿದ್ದ ಕ್ಯಾನ್ಸರ್ ವಿರುದ್ಧ ಹೋರಾಡಿದಷ್ಟೇ ತೀವ್ರವಾಗಿ ಹೋರಾಡಿದರು. ತಮ್ಮ ಬದುಕಿನ ಕೊನೆಯ ವರ್ಷಗಳಲ್ಲಿ ಹಾಸಿಗೆ ಹಿಡಿಯುವವರೆಗೆ, ಬಡ ಜನರನ್ನು ಅವರು ವಾಸಿಸುತ್ತಿದ್ದ ಕೊಳಚೆ ಪ್ರದೇಶಗಳಿಂದ ಮತ್ತು ರೈತರನ್ನು ಅವರ ಹೊಲಗದ್ದೆಗಳಿಂದ ಒಕ್ಕಲೆಬ್ಬಿಸುವ ಯೋಜನೆಗಳ ವಿರುದ್ಧ ಸಹಮನಸ್ಕರೊಂದಿಗೆ ಸೇರಿ ಪ್ರತಿಭಟಿಸಿದರು, ಬಂಧನಕ್ಕೂ ಒಳಗಾದರು. ಬಿಡುವಿನ ವೇಳೆಯಲ್ಲಿ ಪುಸ್ತಕಗಳನ್ನು ಓದಿದರು, ಕವಿತೆ ಬರೆದರು, ಚಿತ್ರ ಬಿಡಿಸಿದರು, ಪ್ರಾಣಿಗಳನ್ನು

ಸಲುಹಿದರು. ಅವರು ಕೇವಲ ರಾಜಕಾರಣಿಯಂತೆ ಅಲ್ಲ, ಓರ್ವ ಸಂಪೂರ್ಣ ವ್ಯಕ್ತಿಯಾಗಿ ಬಾಳಿದರು.

ಇಷ್ಟು ವ್ಯಾಪಕವಾದದ್ದು, ಆವೃತವಾದದ್ದು, ತತ್ವಬದ್ಧವಾದದ್ದು, ಪ್ರಾಮಾಣಿಕವಾದದ್ದು, ನಿಸ್ವಾರ್ಥಮಯವಾದದ್ದು ವಿ.ಪಿ.ಸಿಂಗ್ ಅವರ ಸಾಮಾಜಿಕ ನ್ಯಾಯದ ರಾಜಕಾರಣ. ಇವರ ಆದರ್ಶದ ಹೆಸರು ಹೇಳಿಕೊಂಡು ಸಾಮಾಜಿಕ ನ್ಯಾಯದ ಕೂಗು ಹಾಕುವವರು ಇಂತಹ ರಾಜಕಾರಣದ ಶೇಕಡಾ ಒಂದರಷ್ಟನ್ನಾದರೂ ಅನುಸರಿಸಿದರೆ, ಅವರ ರಾಜಕಾರಣಕ್ಕೆ ಮತ್ತು ಸಾಮಾಜಿಕ ನ್ಯಾಯ ಕಲ್ಪನೆಗೆ ಒಂದು ಘನತೆ ಒದಗೀತು. ಇಂದು ಸಾಮಾಜಿಕ ನ್ಯಾಯದ ಮಾತುಗಳನ್ನಾಡಿಕೊಂಡು ರಾಜಕಾರಣ ಮಾಡುತ್ತಿರುವ ಬಹುಪಾಲು ಎಲ್ಲರೂ–ಉತ್ತರದ ಇಬ್ಬರು ಯಾದವರು, ಪಂಜಾಬ್‌ನ ಬಾದಲ್, ದಕ್ಷಿಣದ ಕರುಣಾನಿಧಿ, ನಮ್ಮ ದೇವೇಗೌಡರು, ಬಂಗಾರಪ್ಪ ಇತ್ಯಾದಿ-ಅದನ್ನು ನಿರ್ಲಜ್ಜವಾಗಿ ಕೌಟುಂಬಿಕ ನ್ಯಾಯ ರಾಜಕಾರಣದ ಮಟ್ಟಕ್ಕೆ ಇಳಿಸಿಬಿಟ್ಟಿದ್ದಾರೆ. ಇನ್ನು 'ಅಹಿಂದ'ದ ಸ್ವಯಂಘೋಷಿತ ನಾಯಕ ಸಿದ್ಧರಾಮಯ್ಯನವರಿಗೆ ಸಾಮಾಜಿಕ ನ್ಯಾಯವೆಂದರೆ ದೇವೇಗೌಡರ ರಾಜಕೀಯ ನಾಶ ಮತ್ತು ತಮಗೆ ಮುಖ್ಯಮಂತ್ರಿ ಪಟ್ಟ ಎಂದೇ ಭಾವಿಸಿದಂತಿದೆ! ಇವೆರಡರ ಹೊರತಾಗಿ ಸದ್ಯಕ್ಕೆ ಇನ್ನಾವ ಉದ್ದೇಶಗಳೂ ಇರದಂತೆ ತೋರುವ ಇವರ ರಾಜಕಾರಣ, ಸಹಜವಾಗಿಯೇ ಯಾವುದೇ ಜಾಗತಿಕ, ರಾಷ್ಟ್ರೀಯ, ಪ್ರಾದೇಶಿಕ ರಾಜಕೀಯ ಅಥವಾ ಸಾಮಾಜಿಕ ಅಥವಾ ಆರ್ಥಿಕ ವಿದ್ಯಮಾನಗಳಿಗೆ ಸ್ಪಂದಿಸಲಾರದು. ಹೋರಾಟದ ಮಾತಂತೂ ದೂರವೇ ಉಳಿಯಿತು. ಅಷ್ಟೇ ಅಲ್ಲ, ತಾನೊಂದು ರಾಜಕೀಯ ಪಕ್ಷದ ಋಣದಲ್ಲಿದ್ದೇನೆ ಎಂಬ ಪ್ರಾಥಮಿಕ ವಿನಯ-ಸೌಜನ್ಯಗಳನ್ನೂ ಹತ್ತಿರಕ್ಕೆ ಬಿಟ್ಟುಕೊಳ್ಳಲಾರದು. ಹೀಗಾಗಿ ರಾಜಕಾರಣ ಬೇಸರವಾದಾಗ ಬದುಕು ನಡೆಸಲು ಬೇರಾವ ಹವ್ಯಾಸಗಳನ್ನೂ ಇದು ಬೆಳೆಸಿಕೊಳ್ಳಲಾರದು. ಅಧಿಕಾರದ ಹಪಾಹಪಿಯಲ್ಲಿ ಇಂತಹ ರಾಜಕೀಯ ಜಡತ್ವಕ್ಕೆ ಈಡಾಗಬಲ್ಲ ವ್ಯಕ್ತಿ ಮುಖ್ಯಮಂತ್ರಿಯಾಗಿ ಸಾಧಿಸುವುದು ಅಷ್ಟರಲ್ಲೇ ಇದೆಯೆಂದು ಜನರು ಭಾವಿಸಲಾರಂಭಿಸಿದರೆ, ಅದು ಜನರ ತಪ್ಪಾಗಲಾರದು. ಇದನ್ನು ಸಿದ್ಧರಾಮಯ್ಯ ಆದಷ್ಟು ಬೇಗ ಅರಿತರೆ, ಅವರಿಗೆ ಮತ್ತು ರಾಜ್ಯ ರಾಜಕಾರಣಕ್ಕೆ ಒಳ್ಳೆಯಾದೀತು ಹಾಗೂ ವಿ.ಪಿ.ಸಿಂಗ್ ಅವರು ಮಾಡಿದ ಕ್ರಾಂತಿಗೂ ಒಂದು ಅರ್ಥ ಬಂದೀತು.

ಇಷ್ಟೆಲ್ಲ ಯೋಚಿಸಿದ ನಾನು ಕೊನೆಗೆ, ವಿ.ಪಿ.ಸಿಂಗ್ ಅವರ ಭಾವಚಿತ್ರವನ್ನು ನನ್ನ ಗ್ರಂಥ ಭಂಡಾರದ ಕೋಣೆಯಲ್ಲಿರಿಸಲು ನಿರ್ಧರಿಸಿದೆ. ಅದಿನ್ನೂ ಮನೆಯ ಹಜಾರಕ್ಕೆ ಬರಲು ಕಾಲವಿದೆ ಎಂದೆನ್ನಿಸಿದ್ದರಿಂದ!

(೨೩ ಜನವರಿ, ೨೦೦೯)

■

೩೫. 'ಹಳ್ಳ ಬಂತು ಹಳ್ಳ': ಇತಿಹಾಸದ ಹಿಂದಿನ ಮಾನವೀಯ ಕಥನ

ಒಂದು ಕಾಲದ ಇತಿಹಾಸವನ್ನು ತಿಳಿಯಲು ಆ ಕಾಲಕ್ಕೆ ಸಂಬಂಧಿಸಿದ ಇತಿಹಾಸ ಪುಸ್ತಕಗಳನ್ನಷ್ಟೇ ಓದಿದರೆ ಸಾಲದು. ಆ ತಿಳುವಳಿಕೆ ಅಪೂರ್ಣ ಮತ್ತು ಸೀಮಿತವಾದುದಾಗಿರುತ್ತದೆ. ಅವು ಆ ಕಾಲದಲ್ಲಿ ಆಳಿದ್ದವರ ಮತ್ತು ಹೆಚ್ಚೆಂದರೆ, ಅವರ ವಿರುದ್ಧ ಪಾಳೆಯದವರ ದೃಷ್ಟಿಕೋನಗಳ ಮೂಲಕ ಅಥವಾ ಅವೆರಡರ ನಡುವಿನ ಸಂಘರ್ಷದಲ್ಲಿ ಮೂಡುವ ಬದುಕಿನ ಸ್ಥೂಲ ಚಿತ್ರವನ್ನಷ್ಟೇ ನೀಡಬಹುದು. ಈಚಿನ ದಿನಗಳಲ್ಲಿ ಇತಿಹಾಸವೆಂಬುದು ಸಾಹಿತ್ಯ, ಸಂಸ್ಕೃತಿ, ಸಮಾಜಶಾಸ್ತ್ರ ಇತ್ಯಾದಿ ನೆಲೆಗಳ ಒಂದು ಬಹುಶಿಸ್ತೀಯ ಅಧ್ಯಯನವಾಗಿ ಬೆಳೆಯುತ್ತಿರುವುದಾದರೂ, ಅದಕ್ಕಿನ್ನೂ ತಾನು ದಾಖಲಿಸುವ ಕಾಲಾವಧಿಯ ಮಾನವ ಸ್ಪಂದನೆಯ ಜೀವಂತ ಚಿತ್ರವನ್ನು ಕೊಡುವ ಶಕ್ತಿ ಸಂಪನ್ನವಾಗಿಲ್ಲ. ಬಹುಶಃ ಅದು ಅದರ ಉದ್ದೇಶವೂ ಆಗಿರಲಿಕ್ಕಿಲ್ಲ. ಅದರ ನಿಯೋಗಗಳೇ ಬೇರೆ ಇರಬಹುದು. ಆದರೆ ಒಂದು ಕಾಲಾವಧಿಯ ಔಪಚಾರಿಕ ಇತಿಹಾಸಕ್ಕೆ ಸಮಾನಂತರವಾಗಿ, ಆ ಕಾಲಾವಧಿಯ ದಾಖಲೆಯನ್ನು ಅನೌಪಚಾರಿಕವಾಗಿ ನಿರ್ಮಿಸುವ ಮನುಷ್ಯನ ಪ್ರಯತ್ನ ಅನಾದಿಯಾದದ್ದು. ಇದು ಅಧಿಕೃತವೆನ್ನಿಸುವ ಇತಿಹಾಸವನ್ನು ಧಿಕ್ಕರಿಸಬೇಕೆಂಬ ಸಾಮಾನ್ಯ ಮನುಷ್ಯನ ಆದಿಮ ತುಡಿತವೂ ಇರಬಹುದು. ಮುಖ್ಯವಾಗಿ ಈ ಧಿಕ್ಕಾರವು ದಂತಕಥೆ, ಐತಿಹ್ಯ ಮತ್ತು ವಿವಿಧ ಜಾನಪದ ರೂಪಗಳಲ್ಲಿ ಅಭಿವ್ಯಕ್ತಗೊಂಡಿದೆ. ಆಧುನಿಕ ಕಾಲದಲ್ಲಿ ಈ ಅಭಿವ್ಯಕ್ತಿ ನಾಟಕ, ಕಥೆ, ಕಾದಂಬರಿಗಳ ಮೂಲಕ ಕಾಣಿಸಿಕೊಂಡಿದೆ.

ಒಂದು ಕಾಲಾವಧಿಯ ಬದುಕಿನ ಕಥೆಯನ್ನು ಆ ಕಾಲದ ಜನವೇ ಸಾಹಿತ್ಯವಾಗಿ ಸೃಷ್ಟಿಸುವುದು ಬೇರೆ. ಆದರೆ ಆ ಕಾಲಾವಧಿಯಾಚೆ ನಿಂತು ಒಂದು ಮಾನಸಿಕ–ಇದರಲ್ಲಿ ರಾಜಕೀಯ, ಸಾಂಸ್ಕೃತಿಕವೂ ಸೇರಿರುತ್ತದೆ–ದೂರದಲ್ಲಿ ನಿಂತು, ಅದನ್ನು ಪುನರ್ಸೃಷ್ಟಿಸುವುದು ಬೇರೆ. ಮೊದಲನೆಯದರಲ್ಲಿ ಆ ಕಾಲದ ಪೂರ್ವಾಗ್ರಹಗಳು ಸೇರಿದ್ದರೆ, ಎರಡನೆಯದರಲ್ಲಿ ಈ ಕಾಲದ ಅನೇಕ ನೆಲೆಗಳ ಒತ್ತಾಯಗಳು ಸಮಾವೇಶಗೊಂಡಿರುತ್ತವೆ. ಆ ಕಾಲದ ಸತ್ಯದ ರೂಪಗಳನ್ನು ನಾವು ಬಹುಶಃ ಇವೆರಡರ ನಡುವೆ ಹುಡುಕಬೇಕಾಗುತ್ತದೆ. ಮನುಷ್ಯ ತನ್ನ ಇಂದಿನ ಬದುಕನ್ನು, ನಿನ್ನೆಯ ಸತ್ಯಗಳ ವಿಮರ್ಶೆ ಮಾಡುತ್ತಲೇ ಕಟ್ಟಿಕೊಳ್ಳುತ್ತಿರುತ್ತಾನೆ. ಆ ಮೂಲಕ ನಾಳೆಯ ಬದುಕಿನ ಅಸ್ತಿವಾರಗಳನ್ನೂ ಹಾಕಿಕೊಳ್ಳುತ್ತಿರುತ್ತಾನೆ. ಈ ಕಾರಣಕ್ಕಾಗಿ

ಅವನಿಗೆ ಇತಿಹಾಸ ಮುಖ್ಯವೆನಿಸಿದೆ. ಹಾಗಾಗಿಯೇ ಇತಿಹಾಸವನ್ನು ಅರಿಯುವ ಅವನ ಪ್ರಯತ್ನಗಳೂ ಹೆಚ್ಚೆಚ್ಚು ವೈವಿಧ್ಯಮಯವೂ, ಸೃಜನಶೀಲವೂ ಆಗತೊಡಗಿವೆ. ಉದಾಹರಣೆಗೆ ಕನ್ನಡ ನಾಡಿನ ಚರಿತ್ರೆಯ ವಿಶಿಷ್ಟ ಘಟ್ಟವೆನಿಸಿರುವ ೧೨ನೇ ಶತಮಾನದ ಶರಣ ಚಳುವಳಿಯ ಬಗ್ಗೆ ಆ ಕಾಲದಿಂದ ಹಿಡಿದು ಈ ಕಾಲದವರೆಗೆ ಅದೆಷ್ಟು ಸಾಹಿತ್ಯ ಸೃಷ್ಟಿಯಾಗಿಲ್ಲ? ಪಾರಂಪರಿಕ ಸಾಹಿತ್ಯವಿರಲಿ, ನಮ್ಮದೇ ಕಾಲದಲ್ಲಿ ಅದೆಷ್ಟು ಕಾದಂಬರಿಗಳು, ನಾಟಕಗಳು ಆ ಕಾಲದ ಆ ಬೆಳವಣಿಗೆಗಳನ್ನು ಈ ಕಾಲಕ್ಕೆ ತೋರುಗೈಗಳನ್ನಾಗಿ ಕಟ್ಟಿಕೊಡಲು ಯತ್ನಿಸಿಲ್ಲ? ಒಂದೊಂದರದೂ ಒಂದೊಂದು ಹೊಸ ಒಳನೋಟ. ಮುಖ್ಯವಾಗಿ ಬಿ. ಪುಟ್ಟಸ್ವಾಮಯ್ಯ, ಎಚ್.ತಿಪ್ಪೇರುದ್ರ ಸ್ವಾಮಿ, ಲಂಕೇಶ್, ಕಾರ್ನಾಡ್, ಶಿವಪ್ರಕಾಶ್ ಎಲ್ಲ ಸೇರಿ ೧೨ನೇ ಶತಮಾನದ ಆ ಮಹಾನ್ ಘಟನೆಯನ್ನು ನಮ್ಮ ಪಾಲಿಗೆ ಅರ್ಥಪೂರ್ಣಗೊಳಿಸಿಕೊಳ್ಳಲು, ಪ್ರಸ್ತುತಗೊಳಿಸಿಕೊಳ್ಳಲು ಪ್ರಯತ್ನಿಸಿರುವುದಾದರೂ ಏಕೆ?

ಈ ವರ್ಷದ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಿರುವ ಶ್ರೀನಿವಾಸ ವೈದ್ಯರ 'ಹಳ್ಳ ಬಂತು ಹಳ್ಳ' ಕಾದಂಬರಿಯನ್ನು ಇತ್ತೀಚೆಗೆ (ಎರಡನೇ ಬಾರಿಗೆ) ಓದಿದಾಗ ನನ್ನ ಮನಸ್ಸಿನಲ್ಲಿ ಹಾದು ಹೋದ ಆಲೋಚನೆಗಳಿವು. 'ಹಳ್ಳ ಬಂತು ಹಳ್ಳ' ಕೂಡ ಒಂದು ಕಾಲಾವಧಿಯ ಇತಿಹಾಸವನ್ನು ತನ್ನದೇ ರೀತಿಯಲ್ಲಿ ಹೇಳುವ ಕಾದಂಬರಿ. ಈ ಕಾಲಾವಧಿ ನಮ್ಮ ಪಾಲಿಗೆ ೧೨ನೇ ಶತಮಾನದಷ್ಟೇ ಮುಖ್ಯವಾದ ಮತ್ತು ಒಂದು ರೀತಿಯಲ್ಲಿ ನಿರ್ಣಾಯಕವಾದ ಕಾಲಾವಧಿ. ಅದು ೧೯ನೇ ಶತಮಾನದ ಮಧ್ಯ ಭಾಗದಿಂದ ೨೦ನೇ ಶತಮಾನದ ಮಧ್ಯಭಾಗದವರೆಗೆ ಚಾಚಿಕೊಂಡಿರುವ ವಸಾಹತುಶಾಹಿ ವಿರೋಧಿ ರಾಷ್ಟ್ರೀಯ–ಸ್ವಾತಂತ್ರ್ಯ–ಹೋರಾಟದ ಕಾಲಾವಧಿ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಮೊದಲನೇ ಸ್ವಾತಂತ್ರ್ಯ ಹೋರಾಟವೆಂದು ಹೇಳಲಾಗುವ ೧೮೫೭ರ ಸಿಪಾಯಿ ದಂಗೆಯ ಪ್ರತಿಧ್ವನಿಗಳೊಂದಿಗೆ ಆರಂಭವಾಗುವ ಈ ಕಥನ, ಆ ಹೋರಾಟದ ಕೊನೆಯ ಘಟ್ಟವೆಂದು ಹೇಳಬಹುದಾದ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಪ್ರತಿಧ್ವನಿಗಳೊಂದಿಗೆ–ಸ್ವಾತಂತ್ರ್ಯ ಘೋಷಣೆಯ ಅಲ್ಲೋಲ ಕಲ್ಲೋಲಗಳೊಂದಿಗೆ–ಮುಗಿಯುತ್ತದೆ.

ಈ ಕಾಲಾವಧಿಯಲ್ಲಿ ಉತ್ತರ ಕರ್ನಾಟಕದ ಬ್ರಾಹ್ಮಣ ಕುಟುಂಬವೊಂದು ಹಾದು ಹೋಗುವ ವಿವಿಧ ಸಾಮಾಜಿಕ-ಸಾಂಸ್ಕೃತಿಕ-ಆರ್ಥಿಕ ಏಳುಬೀಳುಗಳು, ಅವು ಸೃಷ್ಟಿಸುವ ವೈವಿಧ್ಯಮಯ ಮಾನವೀಯ ಸಂದರ್ಭಗಳು; ಮತ್ತೆ ಅವೆಲ್ಲ ಸೇರಿ ಕಟ್ಟಿಕೊಡುವ ಆ ಕಾಲಾವಧಿಯ ಮತ್ತೊಂದು–ಶ್ರೀಸಾಮಾನ್ಯನ–ನೆಲೆಯ ಇತಿಹಾಸ, ಈ ಕಾದಂಬರಿಗೊಂದು ವಿಶೇಷ ಬೆಡಗನ್ನು ಪ್ರದಾನ ಮಾಡುತ್ತದೆ. ಶ್ರೀಸಾಮಾನ್ಯ ಎನ್ನುವುದೇ ಆಧುನಿಕ ಕಾಲದ ಒಂದು ಸಾಮಾಜಿಕ ದೃಷ್ಟಿಕೋನವಲ್ಲವೆ? ಹಾಗಾಗಿ ಈ ಕಾದಂಬರಿ ಆಧುನಿಕತೆ ಎಂಬುದು ನಮ್ಮ ಸಮಾಜದೊಳಕ್ಕೆ ಕಾಲಿಡತೊಡಗಿದ ಹೆಜ್ಜೆಯ ಸದ್ದುಗಳನ್ನು ದಾಖಲು ಮಾಡುವ ಮೂಲಕ ನಮ್ಮ ನವೋದಯ ಕಾಲದ ತಲ್ಲಣಗಳನ್ನು ಅದರೆಲ್ಲ ಸಾಮಾಜಿಕ-ಸಾಂಸ್ಕೃತಿಕ ದಟ್ಟ ವಿವರಗಳಲ್ಲಿ ಮರುಸೃಷ್ಟಿಸುತ್ತದೆ. ಆದರೆ ಇದೊಂದು ನವೋದಯ ಕಾಲದ

ಕಾದಂಬರಿಯಂತೆ ನಮ್ಮ ಮುಂದೆ ಪ್ರಸ್ತುತಗೊಳ್ಳುವುದಿಲ್ಲ. ಇದೇ ಇದರ ನಿಜವಾದ ಹೆಚ್ಚುಗಾರಿಕೆಯಾಗಿದೆ. ಇದು ೨೧ನೇ ಶತಮಾನದ ಕಾದಂಬರಿ. ಈ ಕೃತಿ ಕಳೆದೊಂದು ಶತಮಾನದಲ್ಲಿ ಕನ್ನಡ ಕಾದಂಬರಿ ಸಾಧಿಸಿದ್ದನ್ನೆಲ್ಲ ಅರಗಿಸಿಕೊಂಡಂತೆ–ಆದರೆ, ಅದರ ಘನ ಗಂಭೀರ ಎತ್ತರಗಳಿಂದ ಕಿಂಚಿತ್ತೂ ವಿಚಲಿತವಾಗದೆ–ತನ್ನದೇ ಒಂದು ಹೊಸ ನಿರೂಪಣಾ ಶೈಲಿಯನ್ನು ಆವಿಷ್ಕರಿಸಿಕೊಂಡು, ಒಂದು ಲೋಕಾಭಿರಾಮಿ ಲಘು ನಾಟ್ಯ ಶೈಲಿಯಲ್ಲಿ ಒಂದು ಅತಿ ಗಂಭೀರ ಕಥನವನ್ನು ನಮ್ಮ ಮುಂದಿಡುತ್ತದೆ. ಇದು ಬರವಣಿಗೆಗೆ ಹೊಸಬರೆನಿಸಿರುವ ಶ್ರೀನಿವಾಸ ವೈದ್ಯರ ವಿಶಿಷ್ಟ ಸಾಧನೆ ಎಂದೇ ಹೇಳಬೇಕು. 'ಹಳ್ಳ ಬಂತು ಹಳ್ಳ' ಅವರ ಮೊದಲ ಕಾದಂಬರಿ ಮತ್ತು ಎರಡನೇ ಕೃತಿಯಷ್ಟೇ!

ಈ ಕಾದಂಬರಿ, ೧೮೫೭ರ ಸಿಪಾಯಿ ದಂಗೆಯ ಪ್ರತಿಧ್ವನಿಯಂತೆ ಎದ್ದಿದ್ದ ನರಗುಂದ ಬಂಡಾಯದ ಸಂದರ್ಭದಲ್ಲಿ ಕಾಶಿಯ ಬ್ರಾಹ್ಮಣ ತರುಣರಿಬ್ಬರು ನಾನಾ ಸಾಹೇಬನ ಸಂದೇಶವೊಂದನ್ನು ನರಗುಂದದ ದೇಸಾಯಿ ಬಾಬಾ ಸಾಹೇಬನಿಗೆ ತಲುಪಿಸುವ ಹಾದಿಯ ಕೊನೆಯಲ್ಲಿ, ನವಲಗುಂದದ ಸರದಾರ ಅಪ್ಪಾ ಸಾಹೇಬನ ಬೇಹಿನವರ ಬಂಧನಕ್ಕೆ ಒಳಗಾಗುವ ಕುತೂಹಲಕರ ಸನ್ನಿವೇಶದೊಂದಿಗೆ ಆರಂಭವಾಗುತ್ತದೆ. ಈ ತರುಣರಲ್ಲಿ ಒಬ್ಬನಾದ ಕಮಲ ಪಂತ ಅಂದಿನ ಸಂದರ್ಭದ ಅನಿವಾರ್ಯತೆಗೆ ಸಿಕ್ಕಿ, ಕಮಲಯ್ಯನಾಗಿ ನವಲಗುಂದದಲ್ಲೇ ವಿವಾಹಿತನಾಗಿ ನೆಲೆಸಬೇಕಾಗುತ್ತದೆ. ಈತನ ಕುಟುಂಬ ತನ್ನ ನಂತರದ ಎರಡು ತಲೆಮಾರುಗಳಲ್ಲಿ ಕನ್ನಡ ಸಮಾಜ-ಸಂಸ್ಕೃತಿಗಳಲ್ಲಿ ಲೀನವಾಗಿ; ಭಾರತದ ನವೋದಯದ ಭಾಗವಾಗಿ ಮೂಡಿದ ಕನ್ನಡ ಸಮಾಜದ ನವೋದಯದಲ್ಲಿ, ಹೇಗೆ ತನ್ನ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ ಎಂಬುದನ್ನು ಈ ಕಾದಂಬರಿ ಕಥನ ಕಲೆಯ ಎಲ್ಲ ಕೌಶಲ್ಯಗಳೊಂದಿಗೆ ಪ್ರಸ್ತುತ ಪಡಿಸುತ್ತದೆ.

ಈ ಕೃತಿ ಮೇಲ್ನೋಟಕ್ಕೆ ಬೇರು ಕಿತ್ತುಕೊಂಡು ಬಂದ ವ್ಯಕ್ತಿಯೊಬ್ಬನ ಕುಟುಂಬ ಮತ್ತೆ ಹೊಸ ನೆಲದಲ್ಲಿ ಬೇರಿಳಿಸಿ, ಹಲವು ಕೊಂಬೆಗಳ ವೃಕ್ಷವಾಗಿ ತನ್ನ ಆರ್ಥಿಕ ಭದ್ರತೆಯನ್ನೂ, ಸಾಮಾಜಿಕ ಸಮತೋಲನವನ್ನೂ ಕಂಡುಕೊಳ್ಳುವ ಕೌಟುಂಬಿಕ ಕಥೆಯಂತೆ ಕಾಣುತ್ತದೆ. ಆದರೆ ಆ ಕಥೆ ಕಟ್ಟಿಕೊಳ್ಳುವ ಕಾಲದ ಮಹಿಮೆಯಿಂದಾಗಿ, ಅದು ತನ್ನ ಕಥನದ ನೇಪಥ್ಯದಲ್ಲಿ ನಮ್ಮ ರಾಷ್ಟ್ರೀಯ ಹೋರಾಟದ ಕಥೆಯೂ ಆಗಿ ಬೆಳೆಯುತ್ತದೆ. ಈ ಕಾಲಾವಧಿಯ ಇತಿಹಾಸ, ಗಾಂಧಿ-ನೆಹರೂ-ಪಟೇಲ್-ಟಿಳಕ್-ಸುಭಾಷರಂತಹ 'ನಾಯಕ'ರ ನೆಲೆಯಿಂದ ರಾಷ್ಟ್ರೀಯ ಹೋರಾಟದ ಕಥೆಯನ್ನು ಹೇಳುತ್ತದೆ. ಆದರೆ ಈ ಕಾದಂಬರಿ, ಈ ಮಹಾನಾಯಕರು ಸೃಷ್ಟಿಸಿದ ಈ ಇತಿಹಾಸದ ಹೆಬ್ಬಲೆಗಳಿಗೆ ಸಿಕ್ಕ ಕಮಲ ಪಂತ, ಅಪ್ಪಾ ಸಾಹೇಬ, ಶಿವಬಸಯ್ಯ, ವಾಸುದೇವಾಚಾರ್ಯ, ಹಳ್ಳದ ಮಠದ ಅಪ್ಪನೋರು, ಆದೋನಿ ಕೃಷ್ಣಪ್ಪ, ಚೌಘಡದ ಮುಗುದುಮ, ಶಿವರುದ್ರ, ಫಾಲಾಕ್ಷಿ, ರಜಬಿಲ್ಲಿ, ವೆಂಕಣ್ಣ, ತುಳಸಕ್ಕ, ಅಂಬಕ್ಕ, ರುಕುಮಾ, ನಾರಾಯಣ, ಬೋಧ, ರಾಮ, ಕೇಶವ ಮುಂತಾದ ಎರಡು-ಮೂರು ತಲೆಮಾರುಗಳ ಹಲವು ಸಾಮಾಜಿಕ-ಆರ್ಥಿಕ ಹಿನ್ನೆಲೆಗಳ ಸಾಮಾನ್ಯ ಜನ ಎದುರಿಸಿದ

ಬದುಕಿನ ಸಂಕಟ, ಸವಾಲುಗಳ ಕಥೆ ಹೇಳುವ ಮೂಲಕ ರಾಷ್ಟ್ರೀಯ ಹೋರಾಟದ ಕಥೆಯನ್ನು ಒಂದು ಮಾನವ ಕುತೂಹಲದ ಕಥೆಯನ್ನಾಗಿ ಮಾರ್ಪಡಿಸುತ್ತದೆ. ಆ ಮೂಲಕ ಇತಿಹಾಸಕ್ಕೆ ಒಂದು ಸ್ಪಂದನಶೀಲತೆಯನ್ನು ಒದಗಿಸಿ, ಅದನ್ನು ನಮ್ಮ ಕಾಲಕ್ಕೆ ಮತ್ತೆ ಮತ್ತೆ ಪರಿಶೋಧಿಸಿಕೊಳ್ಳುವ ಸಾಧ್ಯತೆಗಳನ್ನು ತೆರೆದಿಡುತ್ತದೆ.

'ಹಳ್ಳ ಬಂತು ಹಳ್ಳ' ನಮಗಿಂದು ಮುಖ್ಯವಾಗುವುದು ಇಲ್ಲಿ. ಇಂದು ಕುಟುಂಬ ಪ್ರಜ್ಞೆ ಮತ್ತು ರಾಷ್ಟ್ರೀಯತೆಗಳು ತಮ್ಮದೇ ಸಮರ್ಥನೆಗಳೊಂದಿಗೆ ಮುಕ್ಕಾಗಿ, ವಿಕ್ಷಿಪ್ತಗೊಂಡಿವೆ. ಇದರ ಪರಿಣಾಮವಾಗಿ, ಅತಿ ಲೌಕಿಕವಾದಿಯಾದ ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಸಾಮಾನ್ಯ ಭಾರತೀಯ ತನ್ನ ಆಧ್ಯಾತ್ಮಿಕ ಅಸ್ತಿತ್ವಕ್ಕೆ ಸಂಬಂಧಿಸಿದಂತೆ ಹಲವು ಸಂದಿಗ್ಧಗಳನ್ನು ಎದುರಿಸುತ್ತಿದ್ದಾನೆ. ಅದಕ್ಕೆ ಸುಲಭ ಪರಿಹಾರವಾಗಿ ಅವನು ಧರ್ಮದ ಹೆಸರಿನಲ್ಲಿ ಮತೀಯ ಮೂಲಭೂತವಾದದೆಡೆಗೆ ಸರಿಯುತ್ತಿರುವಂತೆ ತೋರುತ್ತಿದೆ. ಇಂತಹ ಸಂದರ್ಭದಲ್ಲಿ ನಮ್ಮ ರಾಷ್ಟ್ರೀಯ ಹೋರಾಟದ ರಾಜಕೀಯ ದರ್ಶನದ ಹಿಂದಿದ್ದ ಸಾಮಾಜಿಕ ಅನುಸಂಧಾನದ ಮಾದರಿಯನ್ನು ಮತ್ತೊಮ್ಮೆ ವಿವರವಾಗಿ ಪರಿಶೋಧಿಸುವ ಅಗತ್ಯ ಕಂಡುಬರುತ್ತಿದೆ. ಇಂತಹ ಪರಿಶೋಧನೆಯ ಒಂದು ಸೃಜನಶೀಲ ಮಾದರಿಯೆಂಬಂತೆ ಈ ಕಾದಂಬರಿ ನಮ್ಮ ಗಮನ ಸೆಳೆಯುತ್ತದೆ. ಈ ಅರ್ಥದಲ್ಲೇ ನಾನು ಇದನ್ನು ೨೧ನೇ ಶತಮಾನದ ಕಾದಂಬರಿ ಎಂದದ್ದು. ಈ ಕಾದಂಬರಿಯ ಹಿಂದಿರುವ ಕಣ್ಣು, ೧೯ ಮತ್ತು ೨೦ನೇ ಶತಮಾನವನ್ನು ನೋಡಿ ತನ್ನ ದೃಷ್ಟಿ ದಿಗಂತಗಳನ್ನು ವಿಸ್ತರಿಸಿಕೊಂಡಿರುವ ೨೧ನೇ ಶತಮಾನದ್ದು.

ಈ ಕಾದಂಬರಿ ಒಂದು ಪಾರಂಪರಿಕ ನೆಲೆಯ ಕುಟುಂಬವನ್ನು ಹೊಸ ನೆಲೆಯಲ್ಲಿ–ಇಂಗ್ಲಿಷ್ ಶಿಕ್ಷಣದ ಮೂಲಕ–ಕಟ್ಟುವ ವಾಸುದೇವಾಚಾರರ ಸಾಹಸದ ಜೊತೆಗೇ, ಅವರ ಮಗ ರಾಮು ಹೊಸ ಆದರ್ಶಗಳ ಸೆಳೆತಕ್ಕೆ ಸಿಕ್ಕಿ ಪಾಲ್ಗೊಳ್ಳುವ ಹೊಸ ರಾಷ್ಟ್ರ ಕಟ್ಟುವ ಸಾಹಸವನ್ನೂ ಚಿತ್ರಿಸುತ್ತದೆ. ಇವೆರಡೂ ಕಾದಂಬರಿಯ ಹೊರ ವಿವರಗಳಲ್ಲಿ ಒಂದಕ್ಕೊಂದು ಸಂಬಂಧವಿಲ್ಲದಂತೆ (ವಾಸ್ತವವಾಗಿ ಮಗನ ಸಾಹಸ ತಂದೆಯಲ್ಲಿ ಕಿರಿಕಿರಿಯನ್ನುಂಟುಮಾಡುತ್ತದೆ) ನಡೆದರೂ, ಕಾದಂಬರಿಯಲ್ಲಿ ಹುಟ್ಟುವ ಒಳಧ್ವನಿ, ಇವೆರಡೂ ಒಂದಕ್ಕೊಂದು ಸಂಬಂಧಪಟ್ಟಂತೇ ನಡೆದಿವೆ ಎಂಬುದನ್ನೇ ಸೂಚಿಸುತ್ತದೆ. ಈ ಕೃತಿಯಲ್ಲಿ ಹಲವು ಜಾತಿಗಳ, ಧರ್ಮಗಳ ಜನರಿದ್ದಾರೆ. ಅವರು ಅವರವರ ಜಾತಿ-ಧರ್ಮಗಳ ಮಿತಿಗಳಲ್ಲೇ ಪರಸ್ಪರ ಹೊಂದಾಣಿಕೆಯ, ನೆಮ್ಮದಿಯ ಬದುಕು ನಡೆಸುತ್ತಿದ್ದಾರೆ. ಜೊತೆಗೆ ಈ ಜಾತಿ-ಧರ್ಮಗಳ ಕಟ್ಟುಗಳು ದೈಹಿಕ, ಮಾನಸಿಕ ಹಾಗೂ ಪ್ರಾಕೃತಿಕ ಒತ್ತಾಯ-ಒತ್ತಡಗಳಿಗೆ ಸಿಕ್ಕಿ ಕಡಿದು ಬೀಳತೊಡಗಿರುವ ಸೂಚನೆಗಳೂ ಇಲ್ಲಿವೆ. ಇದರ ಪರಿಣಾಮವಾಗಿ, ಈ ಕಟ್ಟುಗಳಿಗೆ ದೈವಿಕ ಅಥವಾ ವೈಚಾರಿಕ ಆಧಾರಗಳೇನೂ ಇಲ್ಲವೆಂಬ ಒಂದು ಸ್ತರದ ಅರಿವು ಮೂಡಿಸುವ ಸಾಮಾಜಿಕ ಚಿತ್ರಣವೂ ಇಲ್ಲಿದೆ. ಇಂತಹ ಅರಿವಿನ ಹಾಸು-ಬೀಸುಗಳಲ್ಲೇ ಹೊಸ ರಾಷ್ಟ್ರದ ಅಮೂರ್ತ ಅಸ್ತಿವಾರ ಮೂಡುತ್ತದೆ.

ಅದು ಬ್ರಾಹ್ಮಣ ವಿಧವೆ ಅಂಬಕ್ಕ ಕಾಣುವ ನರಕ ಸದೃಶ ಸಾವು, ಸ್ವಾತಂತ್ರ್ಯ ಹೋರಾಟಗಾರ ರಾಮುವಿನ ವೀರ ಮರಣ ಹಾಗೂ ಮುಸಲ್ಮಾನನಾಗಿ ಹುಟ್ಟಿದ ಕಾರಣಕ್ಕೇ

ಬಂದ ಬೆಳಗಿನ ಕಾಲದ ಮುಗ್ಧರು ಎದುರಿಸಬೇಕಾದ ಸ್ಥಿತಿಯ ಸಂಕೀರ್ಣತೆಯ ೩೦೮–೩೦೯ ಪುಟಗಳ ಕಾದಂಬರಿಯಲ್ಲಿ ನೆಲೆಗಳಲ್ಲಿ ಬಿಡಿಸಲ್ಪಡುತ್ತದೆ. ಇದರ ಹಿಂದೆ ಮನುಷ್ಯನ ಮನಸ್ಸನ್ನು ಮುಂದುಗೊಳಿಸುವ ಆಶಯವು ಸ್ಥಿತಿಯ ಅವಗಾಹನೆ ಇರುವುದೇ. ಪ್ಲೇಗ್ ಮಾರಿ ಎಂಬ ದುಷ್ಟಶಕ್ತಿಯ ಚಿತ್ರಣದ. ಇವೆಲ್ಲವನ್ನೂ ಪ್ರಕೃತಿಯ ಅಪಾರ ಚಿತ್ರ ಕಟ್ಟುವುದು ತನ್ನ ಭಾಷೆಯಲ್ಲಿ ಮಾರ್ಗದ, ನಿಸರ್ಗಪೂರ್ಣ ಮನ ಭಾಷ್ಯಗಳೊಂದಿಗೆ ಸಾಕಷ್ಟು ಪ್ರತಿಭಾಪೂರ್ಣವಾಗಿ ನಿರೂಪಿಸಿರುವ ಕ್ರಮವು ರೀತಿ, ಕಾದಂಬರಿಗೊಂದು ರಚನಾತ್ಮಕ ಚಿತ್ರಕ ಮತ್ತು ಉದಾರವಾದಿ ದೃಷ್ಟಿಕೋನವನ್ನು ಒದಗಿಸಿದೆ. ಇಂತಹ ಚಿತ್ರ ಮತ್ತು ದೃಷ್ಟಿಕೋನಗಳಿಂದಾಗಿಯೇ ಕಾದಂಬರಿ ಈ ಊರನ್ನು 'ದ್ವೀಪ'ವಾಗಿಸದ್ದು ಹೊರ ಜಗದ ಸಂಪರ್ಕದಿಂದ ನಿರ್ಮಾಣವಾಗುವ–ಆಧುನಿಕತೆಗೆ ತೆರೆದುಕೊಳ್ಳುವ–ಹೊಸ ಪ್ರವಾಸದ ಸೂಚನೆಯೊಂದಿಗೆ ಮುಕ್ತಾಯವಾಗುತ್ತದೆ. ಆದರೆ ಈ ಆಧುನಿಕತೆಯಾದರೂ ಎಂತಹುದು?

ಕಾದಂಬರಿಯ ಆರಂಭದಲ್ಲಿ ನಾಯಕನ ಬಾಲ್ಯದ ಗೆಳೆಯ ಇದ್ದ ಊರಲ್ಲಿ ಪತ್ರಲ್ಲಿ ಒಬ್ಬನಾಗಿದ್ದ ವಾಸುದೇವನಾಯಕ, ಕಾದಂಬರಿಯ ಕೊನೆಯ ಹೊತ್ತಿಗೆ ತನ್ನ ಹಾಗೂ ತನ್ನ ಕುಟುಂಬದ ಬದುಕು ಕಟ್ಟಿಕೊಳ್ಳುವ ಸಂಕೀರ್ಣ ಸವಾಲಿನಲ್ಲಿ, ತನ್ನ ವ್ಯಕ್ತಿತ್ವದ ಮೂಲ ಮಾತೃಕೆಗಳನ್ನು ಕಳೆದುಕೊಳ್ಳುವ ಎಲ್ಲದರಲ್ಲಿ ಬದಲಾವಣೆಗಳನ್ನು ಅವರ ಹಾದಿಯಲ್ಲಿ ಸ್ವೀಕರಿಸುತ್ತಾ ಹೋಗುವ ಮೂಲಕ ಇಡೀ ಊರಿನ ಗೌರವಕ್ಕೆ ಪಾತ್ರನಾಗುವ ಹಿರಿಯನಾಗಿ ಮೂಡುತ್ತಾರೆ. ಜೊತೆಗೆ, ಕಾದಂಬರಿಯಲ್ಲಿ ತಾನೇ ತಾನಾಗಿ ವಿಕಾಸಗೊಳ್ಳುತ್ತಾ ಹೋಗುವ ಆಧುನಿಕತೆಗೆ ಪ್ರತೀಕವಾಗಿ ನಿಲ್ಲುತ್ತಾರೆ. ಈ ಪಾತ್ರದ ಹಿಂದೆ ತುಳಸಕ್ಕಳೆಂಬ ಅವ್ವನ್ನು, ಆದರೆ ಅಪಾರ ಪಾರಂಪರಿಕ ವಿವೇಕದ ಮಹಿಳೆಯಿದ್ದಾಳೆ ಎಂಬುದನ್ನು ನಾವು ಗಮನಿಸಬೇಕು. ಬದಲಿಗೆ ಈ ಕಾದಂಬರಿಗೆ ಒಂದು ಕಾಣದಂತಹ ಒಂದು ಆಂತರಿಕ ಸಮತೋಲನವನ್ನು ಒದಗಿಸಿರುವುದು, ಕಾದಂಬರಿಯುದ್ದಕ್ಕೂ ಸದಾ ತಾಯ್ತನದ ಪ್ರತೀಕದಂತೆ ಮೂಡುವ ಈ ತುಳಸಕ್ಕನೇ. ಹಾಗಾದರೆ, ನಿಜವಾದ ಆಧುನಿಕತೆ ಎಂದರೆ ತಾಯ್ತನದೊಂದಿಗೆ ನಡೆಸುವ ಸಂವಾದಪೂರ್ಣತೆಯೇ?

ಇಂತಹ ಹಲವು ಪ್ರಶ್ನೆಗಳನ್ನೆತ್ತುವ ಮೂಲಕವೇ ಸಾಹಿತ್ಯ ಕೃತಿಯೊಂದು ಇತಿಹಾಸವನ್ನು ಕಾಲದ ಹೊಸ ಸವಾಲುಗಳೊಂದಿಗೆ ಕೆಣಕುತ್ತಾ, ಅದರಿಂದ ಹೊಸ ಅರ್ಥಗಳನ್ನು, ಸಂವೇದನೆಗಳನ್ನು ಹೊರಹೊಮ್ಮಿಸುವ ಪ್ರಯತ್ನ ಮಾಡಬಲ್ಲುದು. ಹೀಗಾಗಿ 'ಹಕ್ಕ ಬಂತು ಹಕ್ಕ' ಇತಿಹಾಸಕ್ಕೆ ಒಂದು ಹೊಸ ವಿಸ್ತಾರವನ್ನು ನೀಡಬಹುದಾದ ಒಂದು ಸಮರ್ಥ, ಶ್ರೇಷ್ಠ ಕೃತಿ ಎಂದು ಹೇಳಬಹುದು. ಬಹುಶಃ ಇದು ಎಚ್. ನಾಗವೇಣಿಯವರ 'ಗಾಂಧಿ ಬಂದ' ನಂತರ ಕನ್ನಡದಲ್ಲಿ ಬಂದಿರುವ ಅತ್ಯುತ್ತಮ ಕಾದಂಬರಿ ಕೂಡಾ. 'ಗಾಂಧಿ ಬಂದ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿಲ್ಲ. ಆದರೆ ಈ ವರ್ಷ ಅಕಾಡೆಮಿ ಅದನ್ನು 'ಹಕ್ಕ ಬಂತು ಹಕ್ಕ'ಕ್ಕೆ ನೀಡಿ ತನ್ನ ಪ್ರಶಸ್ತಿಯ ಘನತೆಯನ್ನು ಮರಳಿ ಪಡೆದಿದೆ ಎಂದು ಹೇಳಬಹುದು.

(೩೦ ಜನವರಿ. ೨೦೦೮)

೩೬. ಜಾತಿ ವ್ಯವಸ್ಥೆ ಎಲ್ಲಿದೆ? ಇಲ್ಲಿದೆ, ಇಲ್ಲಿದೆ!?

ಭಾರತದ ಜಾತಿ ವ್ಯವಸ್ಥೆ ಕುರಿತಂತೆ ಪ್ರೊ॥ ಎಸ್.ಎನ್.ಬಾಲಗಂಗಾಧರ ರಾವ್ (ಅವರ ಅಭಿಮಾನಿಗಳ ಬಾಯಲ್ಲಿ ಬಾಲು) ಎನ್ನುವವರು ನಡೆಸಿರುವ ಸಂಶೋಧನೆ ಬಹಳ ಜನಕ್ಕೆ ತಿಳಿದಿರಲಾರದು. ಈ ಸಂಶೋಧನೆ ಅಂತಾರಾಷ್ಟ್ರೀಯ ಮಟ್ಟದ ಕೆಲವು ವಲಯಗಳಲ್ಲಿ, ವೇದಿಕೆಗಳಲ್ಲಿ ಮಾತ್ರ ಚರ್ಚೆಯಾಗುತ್ತಿರುವುದೂ ಇದಕ್ಕೆ ಕಾರಣವಾಗಿರುವುದು. ಭಾರತದ 'ಜಾತಿ ವ್ಯವಸ್ಥೆ' ಎಂಬ ಕಲ್ಪನೆಯೇ ಪಾಶ್ಚಿಮಾತ್ಯ ಅಧ್ಯಯನಕಾರರು, ನಿರ್ದಿಷ್ಟವಾಗಿ ಕ್ರಿಶ್ಚಿಯನ್ ಮಿಷನರಿ ದೃಷ್ಟಿಕೋನ ಸೃಷ್ಟಿಸಿದ ಒಂದು ಕಲ್ಪನೆ ಎಂಬುದು ಇವರ ಮುಖ್ಯ ಸಂಶೋಧನೆ. ಹಿಂದೂ ಧರ್ಮವನ್ನು ಏಕ ದೇವ, ಏಕ ಪ್ರವಾದಿ, ಏಕ ಧರ್ಮಗ್ರಂಥ ಆಧಾರದ ಕ್ರಿಶ್ಚಿಯನ್ ಧರ್ಮದ ಮಾದರಿಯಲ್ಲಿ ಏಕರೂಪಿಯಾಗಿ ಗ್ರಹಿಸಿದ್ದರಿಂದಾಗಿ, ಜಾತಿಯನ್ನು ಹಿಂದೂ ಧರ್ಮದ ಒಂದು 'ವ್ಯವಸ್ಥೆ'ಯನ್ನಾಗಿ ಬಿಂಬಿಸಲಾಗಿದೆ ಎಂಬುದು ಇವರ ವಾದ. ಹೀಗಾಗಿ, ಭಾರತದಲ್ಲಿ ಜಾತಿ ಇದೆ ಮತ್ತು ಜಾತಿ ತಾರತಮ್ಯವೂ ಇದೆ; ಆದರೆ ಜಾತಿ ವ್ಯವಸ್ಥೆ ಎಂಬುದಿಲ್ಲ. ಏಕೆಂದರೆ, ಜಾತಿ ವ್ಯವಸ್ಥೆಯನ್ನು ಒಂದು ಅನನ್ಯ ಸಾಮಾಜಿಕ ವ್ಯವಸ್ಥೆಯಾಗಿ ಗುರುತಿಸಲು ಇಡೀ ಭಾರತಕ್ಕೆ ಅನ್ವಯವಾಗುವ ಸಾಮಾನ್ಯ ಚಿಹ್ನೆಯಿಲ್ಲ ಎಂಬುದು ಇವರು ಇದಕ್ಕೆ ನೀಡುವ ವಿವರಣೆ. ಇವರ ಈ ವಿವರಣೆಯಲ್ಲಿ ಅನೇಕ ತೊಂದರೆಗಳಿವೆ ಎಂಬುದು ನಿಜವಾದರೂ, ಇದು ಭಾರತೀಯ ಸಮಾಜದ ಬಗ್ಗೆ ಮರುನೋಟವೊಂದನ್ನು ಬೀರುವ ಪ್ರಯತ್ನ ಎಂಬ ದೃಷ್ಟಿಯಿಂದ ಗಮನಾರ್ಹವೇ.

ಬಾಲಗಂಗಾಧರರು ಮೂಲತಃ ಕರ್ನಾಟಕದವರು, ಕನ್ನಡಿಗರು. ೬೦-೭೦ರ ದಶಕದಲ್ಲಿ ಭಾರತದಲ್ಲಿದ್ದಾಗ ಇವರು ತೀವ್ರವಾದಿ ಕಮ್ಯುನಿಸ್ಟರಾಗಿದ್ದರಂತೆ. ಈಗ ಇವರು ಬೆಲ್ಜಿಯಂನಲ್ಲಿ ನೆಲೆಸಿದ್ದು, ಅಲ್ಲಿನ ಘೆಂಟ್ ವಿಶ್ವವಿದ್ಯಾಲಯದಲ್ಲಿ ತಮ್ಮ ಈ ಸಂಶೋಧನೆ ಕೈಗೊಂಡಿದ್ದಾರೆ ಮತ್ತು ಈ ಸಂಶೋಧನೆಯ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕೆಂಬ ದೃಷ್ಟಿಯಿಂದ ಅನೇಕ ಅಂತಾರಾಷ್ಟ್ರೀಯ ಯೋಜನೆಗಳನ್ನೂ, ಕಾರ್ಯಕ್ರಮಗಳನ್ನೂ ಇವರು ರೂಪಿಸಿದ್ದಾರೆ. ಇಂತಹ ಒಂದು ಯೋಜನೆಯ ಅಡಿಯಲ್ಲಿ ನಮ್ಮ ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರವೊಂದನ್ನು ಸ್ಥಾಪಿಸಿ, ಅವರೇ ಅದರ ಪ್ರಧಾನ ಪೋಷಕರೂ ಆಗಿದ್ದಾರೆ. ಇದಕ್ಕೆ ಈ ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ॥ ಜೆ.ಎಸ್. ಸದಾನಂದ ಸ್ಥಳೀಯ ಪೋಷಕರಾಗಿದ್ದರೆ, ಇತಿಹಾಸ ವಿಭಾಗದ

ಪ್ರಾಧ್ಯಾಪಕ ಡಾ॥ ರಾಜಾರಾಮ ಹೆಗಡೆ ನಿರ್ದೇಶಕರಾಗಿದ್ದಾರೆ. ಇವರಿಬ್ಬರೂ ನಾನು ಬಹುವಾಗಿ ಗೌರವಿಸುವ ವಿದ್ವಾಂಸರೂ ಮತ್ತು ನನ್ನ ಆಪ್ತ ಗೆಳೆಯರೂ ಆಗಿರುವುದರಿಂದ, ಬಾಲಗಂಗಾಧರರ ವಿಚಾರಗಳ ಕುರಿತಂತೆ ಕಳೆದ ಎರಡು-ಮೂರು ವರ್ಷಗಳಲ್ಲಿ ನಮ್ಮ ನಡುವೆ ಅನೇಕ ಚರ್ಚೆಗಳಾಗಿವೆ. ಪತ್ರಿಕೆಗಳ ಮೂಲಕವೂ ಸಾಕಷ್ಟು ವಾದ-ವಿವಾದಗಳು ನಡೆದಿವೆ.

ಇತ್ತೀಚಿನ ವರ್ಷಗಳಲ್ಲಿ ನಮ್ಮ ಸಾಮಾಜಿಕ ನ್ಯಾಯ ರಾಜಕಾರಣ ವಿಕ್ಷಿಪ್ತಗೊಳ್ಳುತ್ತಿರುವ ರೀತಿ-ನೀತಿಗಳ ಹಿನ್ನೆಲೆಯಲ್ಲಿ, ಜಾತಿ ವ್ಯವಸ್ಥೆ ಕುರಿತ ಈವರೆಗಿನ ಸಂಕಥನದ ಬಗ್ಗೆ ನನ್ನಲ್ಲಿ ಕೆಲವು ಸಂದೇಹಗಳು ಹುಟ್ಟಿವೆ, ನಿಜ. ಆದರೆ, ಜಾತಿ ವ್ಯವಸ್ಥೆ ಎಂಬುದೇ ಇಲ್ಲ; ಅದು ಯಾರೋ ನಮ್ಮ ಮೇಲೆ ಹೇರಿದ ಕಲ್ಪನೆ ಎಂಬ ಸಾರಾ ಸಗಟು ತೀರ್ಮಾನ (ಇದನ್ನು ಈ ಗೆಳೆಯರು ತಮ್ಮ ಪ್ರಮೇಯದ ಊಹಾ ಪ್ರತಿಜ್ಞೆ–hypothesis–ಅಷ್ಟೆ ಎಂದು ಹೇಳುವರಾದರೂ, ತಮ್ಮ ಲೇಖನಗಳಲ್ಲಿ ಇದನ್ನು ತೀರ್ಮಾನದ ರೂಪದಲ್ಲೇ 'ಸಾಧಿಸಿ' ತೋರಿಸುತ್ತಾರೆ!) ನನಗೆ ಒಂದು ಜಾಣ ಬೌದ್ಧಿಕ ವಾದದಂತೆ ಮಾತ್ರ ಕಾಣುತ್ತದೆ. ಮುಖ್ಯವಾಗಿ ಕ್ರಿಶ್ಚಿಯನ್ ಅಥವಾ ಯಾವುದೇ ಸೆಮೆಟಿಕ್ (ಮರಳುಗಾಡಿನ) ಧರ್ಮ ಏಕರೂಪಿಯಾಗಿದೆಯೆಂದು ಭಾವಿಸುವ; ಮತ್ತು ಹಿಂದೂ ಧರ್ಮವನ್ನು ಏಕರೂಪಿ ಧರ್ಮವನ್ನಾಗಿ ಮಾಡುವ ಪ್ರಯತ್ನಗಳು ನಮ್ಮ ಇತಿಹಾಸದಲ್ಲಿ ನಿರಂತರವಾಗಿ–ಈಗಲೂ–ನಡೆದಿವೆ. ಹೀಗಾಗಿ ಇವರ ವಾದಕ್ಕೆ, ಇವರು ಬಹುವಾಗಿ ಎತ್ತಿ ಹಿಡಿಯುವ 'ವೈಜ್ಞಾನಿಕ' ಆಧಾರಗಳೇನೂ ಇದ್ದಂತೆ ತೋರುವುದಿಲ್ಲ. ಇನ್ನೂ ಮುಖ್ಯವಾಗಿ, ಈ ಸಂಶೋಧನೆಯ ಕಾರಣ ಮತ್ತು ಉದ್ದೇಶವಾದರೂ ಎಂಬುದು ಇನ್ನೂ ಸ್ಪಷ್ಟವಾಗಿ ಗೊತ್ತಾಗದಾಗಿದೆ!*

ಜಾತಿ ವ್ಯವಸ್ಥೆ ಎಂಬುದು ಒಂದು ಆರೋಪಿತ ಕಲ್ಪನೆಯಾಗಿರುವುದರಿಂದ, ಇದರಿಂದ ಪ್ರಭಾವಿತರಾಗಿರುವ ಭಾರತೀಯರಿಗೆ ತಮ್ಮದೇ ಆದ ನಿಜ ಅನುಭವವೆಂಬುದು ದಕ್ಕದಾಗಿದೆ ಎಂಬ ದೊಡ್ಡ ಮಾತುಗಳನ್ನು ಈ ಗೆಳೆಯರು ಆಡುವರಾದರೂ, ಇವರ ಸಂಶೋಧನೆಯ ರೀತಿ-ನೀತಿಗಳ ಬಗ್ಗೆಯೇ ಕರ್ನಾಟಕದ ವಿದ್ವದ್ವಲಯಗಳಲ್ಲಿ ಅನೇಕ ಅನೇಕ ಸಂದೇಹಗಳೂ, ಅಸಮಾಧಾನಗಳೂ ವ್ಯಕ್ತವಾಗಿವೆ. ಇದರಿಂದಾಗಿ ಇವರ ವಾದಗಳಿಗೆ ಸೂಕ್ತ ಉತ್ತರಗಳು ವಿದ್ವದ್ವಲಯದಲ್ಲಿ ವ್ಯವಸ್ಥಿತವಾಗಿ ಮಂಡಿತವಾಗಿಲ್ಲ. ಇವರ ವಾದ ಇವರೇ ಸೃಷ್ಟಿಸಿಕೊಂಡಿರುವ ಗೊಂದಲಗಳಿಂದಾಗಿ ಮೂಡಿರುವುದರಿಂದ, ಉತ್ತರಕ್ಕೆ ಅವು ಅರ್ಹವಲ್ಲ ಎಂಬುದು ಕೆಲವರ ಅಭಿಪ್ರಾಯವಾದರೆ; ಇವರ ಇಡೀ ಗುಂಪೇ ತಲೆ ಪ್ರತಿಷ್ಠೆಯದೂ, ಇವರ ನಾಯಕ ಬಾಲಗಂಗಾಧರರು ವಿಪರೀತ ದುರಹಂಕಾರಿಯೂ ಆಗಿರುವುದರಿಂದ, ಇವರೊಂದಿಗೆ ವಾದ ಸಾಧ್ಯವಿಲ್ಲ ಎಂಬುದು ಇನ್ನು ಕೆಲವರ ಅಭಿಪ್ರಾಯ. ಹಿಂದೆ ನಡೆದ ಇಂತಹ ಚರ್ಚೆಗಳಲ್ಲಿ ಬಾಲಗಂಗಾಧರರು ತಮಗೆ ಅನಾನುಕೂಲವೆನಿಸಿದ ಸಂದರ್ಭ ಸೃಷ್ಟಿಯಾದಾಗಲೆಲ್ಲ

* ಇದೇ ಪುಸ್ತಕದಲ್ಲಿನ ಬಾಲಗಂಗಾಧರರ ಚಿಂತನೆಗಳನ್ನು ಚರ್ಚಿಸಿರುವ ೪೫ನೇ ಹಾಗೂ ೪೬ನೇ ಲೇಖನಗಳನ್ನೂ ನೋಡಿ.

ಎದುರಾಳಿಗಳ ಮೇಲೆ ಒರಟೊರಟಾಗಿ ಹರಿ ಹಾಯ್ದು, ಕೊನೆಗೆ 'ಹೊರಗೆ ಹಾಕಿ ಅವರನ್ನು' ಎಂದು ತಮ್ಮ ಶಿಷ್ಯರಿಗೆ ಆದೇಶಿಸಿದ್ದೂ ಉಂಟು ಎಂದು ಡಾ॥ ಯು.ಆರ್.ಅನಂತಮೂರ್ತಿ ಮತ್ತು ಡಾ॥ ರಾಜೇಂದ್ರ ಚೆನ್ನಿಯವರೂ ಸೇರಿದಂತೆ ಹಲವರು ನನ್ನ ಬಳಿ ಹೇಳಿದ್ದರು. ಆದರೆ ಸದಾನಂದ ಮತ್ತು ಹೆಗಡೆಯವರ ಉದಾರವಾದಿ ವರ್ತನೆಗಳ ಹಿನ್ನೆಲೆಯಲ್ಲಿ ನಾನದನ್ನು ಪೂರ್ಣವಾಗಿ ನಂಬದಾಗಿದ್ದೆ.

ಹೀಗಾಗಿ, ಇದೇ ಜನವರಿ ೧೮ ಹಾಗೂ ೧೯ರಂದು ಕುವೆಂಪು ವಿಶ್ವವಿದ್ಯಾಲಯದ ಪಿ. ವೆಂಕಟರಾಮಯ್ಯ ಸಭಾ ಭವನದಲ್ಲಿ ಈ ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ ಭಾರತದ ರಾಜಕೀಯ ಚಿಂತಕರನ್ನು ಕುರಿತಂತೆ ಏರ್ಪಡಿಸಿದ್ದ ವಿಚಾರ ಸಂಕಿರಣಕ್ಕೆ ಆಹ್ವಾನ ಬಂದಾಗ, ನಾನು ಹೋಗಬೇಕೋ ಬೇಡವೋ ಎಂಬ ಗೊಂದಲಕ್ಕೆ ಬಿದ್ದೆ. ಘೆಂಟ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಏರ್ಪಾಡಾಗಿದ್ದ ಈ ಸಮ್ಮೇಳನಕ್ಕೆ ಬಾಲಗಂಗಾಧರರೂ ಬರುವವರಿದ್ದರಿಂದಾಗಿ, ಅವರನ್ನೂ ಮುಖತಃ ನೋಡಿದಂತಾಯಿತು ಮತ್ತು ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳು ಹೇಗಿರುತ್ತವೆ ಹಾಗೂ ಯಾವ ಮಟ್ಟದ ಚರ್ಚೆ ನಡೆಯುತ್ತವೆ ಎಂಬುದು ತಿಳಿದಂತೆಯೂ ಆಯಿತು ಎಂದು ನಾನು ಒಂದು ದಿನದ ಮಟ್ಟಿಗೆ–೧೯ರಂದು– ವಿಚಾರ ಸಂಕಿರಣಕ್ಕೆ ಹೋದೆ. ಅಂದು ಗಾಂಧಿ, ತಿಲಕ್, ಲೋಹಿಯಾ, ಗೋಲ್ವಾಲ್ಕರ್ ಮತ್ತು ಧರ್ಮಪಾಲ್‌ರ ಬಗ್ಗೆ ಒಟ್ಟು ಎಂಟು ಜನ ಉಪನ್ಯಾಸಗಳನ್ನು ನೀಡಿದರು! ಒಂದಿಷ್ಟು ಚರ್ಚೆಯೂ ನಡೆಯಿತು. ಬಾಲಗಂಗಾಧರರು ತಮಗೆ ಬಿಜೆಪಿ-ಆರ್.ಎಸ್.ಎಸ್. ಬಗ್ಗೆ ಏನೂ ಗೊತ್ತಿಲ್ಲವೆಂದು ಹೇಳುತ್ತಲೇ, ಗೋಲ್ವಾಲ್ಕರರ ವಿಚಾರಗಳ ಬಗ್ಗೆ ಪ್ರಶ್ನೆ ಎತ್ತಿದ ಇತಿಹಾಸದ ಪ್ರಾಧ್ಯಾಪಕರೊಬ್ಬರ ಮೇಲೆ, ಅವರು ಪ್ರಶ್ನೆ ಎತ್ತಿರುವ ರೀತಿ ಸರಿಯಿಲ್ಲವೆಂದು ಅವಮಾನಕರ ರೀತಿಯಲ್ಲಿ ಹರಿಹಾಯ್ದು ಅವರ ಬಾಯಿ ಮುಚ್ಚಿಸಿದ್ದೂ ನಡೆಯಿತು!

ಇದಾವುದರಲ್ಲೂ ಅಂತಾರಾಷ್ಟ್ರೀಯ ಎನ್ನುವುದು ಏನೂ ಇರಲಿಲ್ಲ. ಎಲ್ಲ ನಮ್ಮ ವಿಚಾರ ಸಂಕಿರಣಗಳಂತೆಯೇ ಸಾಮಾನ್ಯ, ಅತಿ ಸಾಮಾನ್ಯ. ಆದರೆ ಈ ವಿಚಾರ ಸಂಕಿರಣದ ಕೊನೆಯಲ್ಲಿ ಬಾಲಗಂಗಾಧರರೊಂದಿಗೆ ಆಕಸ್ಮಿಕವೆಂಬಂತೆ ನಡೆದ ನನ್ನ ಸಂಕ್ಷಿಪ್ತ ಮುಖಾಮುಖಿ ಅವರ ಈ ಇಡೀ ಚಟುವಟಿಕೆಗಳ ಮೇಲೆ ವಿಶೇಷ ಬೆಳಕು ಚೆಲ್ಲುವಂತಿತ್ತು! ಎಷ್ಟರ ಮಟ್ಟಿಗೆ ಎಂದರೆ, ಈ ಹಿಂದೆ ನನ್ನ ಕೆಲವು ಗೆಳೆಯರು ಇವರ ಬಗ್ಗೆ ಹೇಳಿದ್ದಾಗ ಯಾವುದನ್ನು ನಾನು ನಂಬದಾಗಿದ್ದೆನೋ ಅದೇ, ಹಾಗೇ ನಡೆದು ಹೋಯಿತು. ೧೯ರಂದು ವಿಚಾರ ಸಂಕಿರಣ ಮುಕ್ತಾಯವಾದ ಮೇಲೆ ಎಲ್ಲರೂ ಸಭಾ ಭವನದ ಹೊರಕ್ಕೆ ಬಂದಾಗ, ಅಕಸ್ಮಾತ್ತಾಗಿ ಅವರು ಬಹು ಹತ್ತಿರದಲ್ಲಿ ನನಗೆ ಎದುರಾದಾಗ ನಾನು ಬಹು ಗೌರವದಿಂದಲೇ ನಮಸ್ಕರಿಸಿ ನನ್ನ ಹೆಸರು ಹೇಳಿದೆ. ಅವರೂ ವಿಶ್ವಾಸದಿಂದ ಕೈ ನೀಡಿ ಪ್ರತಿಸ್ಪಂದಿಸಿದಾಗ, ಜಾತಿ ಪದ್ಧತಿ ಕುರಿತ ಅವರ ಸಂಶೋಧನೆಗಳನ್ನು ಕುರಿತ ನನ್ನ ಸಂದೇಹಗಳನ್ನು ಅವರ ಮುಂದಿಡಬಹುದಲ್ಲವೇ ಎಂಬ ಯೋಚನೆಯೂ ಬಂತು. ಅಂದಿನ ಮಧ್ಯಾಹ್ನದ ಊಟದ ವೇಳೆಯಲ್ಲಿ ತೀರ್ಥಹಳ್ಳಿಯ ಗೆಳೆಯ ಶ್ರೀಧರ್ ಅವರು, ನಿಮ್ಮ ಲೇಖನಗಳ ಕೇಂದ್ರ ಪ್ರಶ್ನೆಯನ್ನು ಈಗ ಅವರನ್ನೇ ಕೇಳಿ,

ಒಳ್ಳೆಯ ಚರ್ಚೆಯಾಗಬಹುದು ಎಂದು ಒತ್ತಾಯಪೂರ್ವಕವಾಗಿ ನನಗೆ ಸೂಚಿಸಿದ್ದರು. ಆದರೆ ಈ ಸೂಚನೆಯನ್ನು ಆಗ ದೊಡ್ಡ ಮನುಷ್ಯರ ವೈಯುಕ್ತಿಕ ಸಹವಾಸ ಬೇಡವೆಂದು ತಿರಸ್ಕರಿಸಿದ್ದೆನಾದರೂ, ಈಗ ಅವರ ವಿಶ್ವಾಸದ ಪ್ರತಿಸ್ಪಂದನದ ಸಂದರ್ಭದಲ್ಲಿ ಅದನ್ನು ಕೇಳಿಯೇ ಬಿಡುವ ಉಮೇದು ಉಂಟಾಯಿತು.

ಹೀಗಾಗಿ, ನಾನು ಬಾಲಗಂಗಾಧರರಿಗೆ ನನ್ನ ('ಸಂವಾದ' ಮಾಸಿಕದಲ್ಲಿ ಪ್ರಕಟವಾಗಿದ್ದ) ಲೇಖನದಲ್ಲಿದ್ದ ನನ್ನ ಮುಖ್ಯ ಪ್ರಶ್ನೆಯನ್ನು ಯಾರೋ–ಬಹುಶಃ ಕಣ್ಣನ್ ಎಂಬುವವರು– ಅಂತರ್ಜಾಲಕ್ಕೆ ಹಾಕಿದುದನ್ನೂ, ಅದಕ್ಕೆ ಅವರು ಪ್ರಶ್ನೆಯೇ ಅರ್ಥವಾಗಿಲ್ಲ ಎಂದು ಉತ್ತರಿಸಿದುದನ್ನೂ ಸಂಕ್ಷಿಪ್ತವಾಗಿ ನೆನಪಿಸಿದೆ. ಅದು ಕೂಡಲೇ ಅವರ ನೆನಪಿಗೂ ಬಂದು, ಸಾಕಷ್ಟು ಉತ್ಸಾಹದಿಂದಲೇ ನನ್ನನ್ನು ಒಂದು ಪಕ್ಕಕ್ಕೆ ಕರೆದು ಕುರ್ಚಿಯೊಂದನ್ನು ಎಳೆದು ಕೂತು, ಈಗ ನಿಮ್ಮ ಪ್ರಶ್ನೆಯನ್ನು ನನಗೆ ವಿವರಿಸಿ ಎಂದರು. ಸರಳ ಕನ್ನಡದಲ್ಲಿದ್ದ ಎರಡು ವಾಕ್ಯಗಳ ನನ್ನ ಪ್ರಶ್ನೆಯನ್ನು ಇಂಗ್ಲಿಷಿಗೆ ಅನುವಾದಿಸಿ ಅವರಿಗೆ ತಲುಪಿಸಲು ಅವರ ಅನುಯಾಯಿಗಳೋ, ಅಭಿಮಾನಿಗಳೋ ಪಟ್ಟಿರುವ ಕಷ್ಟದ ಬಗ್ಗೆ; ಆದರೂ ಅದು ಅವರಿಗೆ ಅರ್ಥವಾಗದಂತಿರುವುದರ ಬಗ್ಗೆ ನನ್ನ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾ, ನನ್ನ ಪ್ರಶ್ನೆಯನ್ನು ಮತ್ತೆ ಅವರ ಮುಂದಿಟ್ಟೆ. ಅಲ್ಲಿಂದ ಮುಂದೆ ಕನ್ನಡದಲ್ಲೇ ನಮ್ಮಿಬ್ಬರ ನಡುವೆ ಸಂಭಾಷಣೆ ಹೀಗಿದೆ:

ನಾನು: ನನ್ನ ಪ್ರಶ್ನೆ ಇಷ್ಟೆ. ನೀವು ಜಾತಿ ಇದೆ ಎನ್ನುವುದನ್ನು ಒಪ್ಪುತ್ತೀರಿ. ಜಾತಿ ತಾರತಮ್ಯವಿದೆ ಎನ್ನುವುದನ್ನೂ ಒಪ್ಪುತ್ತೀರಿ. ಆದರೆ ಈ ತಾರತಮ್ಯ ಯಾವುದರಿಂದ ಸೃಷ್ಟಿಯಾಗುತ್ತಿದೆ? ಅದಕ್ಕೊಂದು ಕಾರಣ ಮತ್ತು ಆ ಕಾರಣ ಕಾರ್ಯರೂಪಕ್ಕೆ ಬರಲು ಒಂದು mechanism ಇರಲೇ ಬೇಕಲ್ಲವೆ?

ಬಾಲ ಗಂಗಾಧರ: ಹಾಂ! ಅದನ್ನೇ ನಾವು ನಮ್ಮ ಸಂಶೋಧನೆಯ ಮೂಲಕ ಹುಡುಕುತ್ತಿರುವುದು.

ನಾ: ಈಗಾಗಲೇ ಇಲ್ಲ ಎಂದು ನೀವೇ ಹೇಳುತ್ತಿರುವುದನ್ನು ಹುಡುಕುತ್ತಿದ್ದೇವೆ ಎಂದರೆ ಏನರ್ಥ?

ಬಾ: Caste ಅನ್ನುವುದು ಒಂದು System ರೂಪದಲ್ಲಿ ಇಲ್ಲ ಎಂದು ನಾವು ಹೇಳುತ್ತಿರುವುದು.

ನಾ: ನೀವು ಭಾರತದ ಜಾತಿ ಪದ್ಧತಿ ಎಂಬುದನ್ನು Caste System ಎಂದು ಇಂಗ್ಲಿಷ್‌ಗೆ ಅನುವಾದಿಸಿಕೊಂಡು, System ಎಂಬುದಕ್ಕೆ ಇಂಗ್ಲಿಷ್ ಸಂದರ್ಭದಲ್ಲಿ ಇರುವ ಅರ್ಥವನ್ನು ಅದಕ್ಕೆ ಆರೋಪಿಸಿಕೊಂಡಿದ್ದೀರಿ. ಹಾಗಾಗಿ, ಅದೆಲ್ಲ ಜಾತಿಗೆ ಸಂಬಂಧಿಸಿದಂತೆ ಇಲ್ಲ ಎನ್ನುತ್ತಿದ್ದೀರಿ ಎಂದು ಕಾಣುತ್ತದೆ. ಅದರಿಂದ ಏನು ಪ್ರಯೋಜನ? ವಾಸ್ತವವಾಗಿ ಇಲ್ಲಿರುವುದು ಜಾತಿ ಪದ್ಧತಿ ಅಲ್ವಾ? ಅದನ್ನಾದರೂ ಒಪ್ಪಿಕೊಳ್ಳುತ್ತೀರಾ?

ಬಾ: ಓ! ಹಾಗಾದರೆ ಪದ್ಧತಿ ಎಂದರೇನು?

ನಾ: ಪದ್ಧತಿ ಅಂದರೆ, ಪದ-ಪತಿ. ಹೆಜ್ಜೆಗಳನ್ನಿಟ್ಟು ಆದ ದಾರಿ. ನನ್ನ ತಂದೆ ಆಚರಿಸಿದ್ದನ್ನು ನಾನು ಆಚರಿಸುವುದು. ಅದನ್ನು ನನ್ನ ಮಗ ಆಚರಿಸುವುದು. ಹಿಂದಿನ ತಲೆಮಾರು ಆಚರಿಸಿದ್ದನ್ನು ಮುಂದಿನ ತಲೆಮಾರು ಆಚರಿಸುವುದು.

ಬಾ: ಜಾತಿ ಪದ್ಧತಿಗೆ ಇದು ಅನ್ವಯಿಸುವುದಿಲ್ಲವಲ್ಲ? ಜಾತಿ ಪದ್ಧತಿಗೆ ಆಚರಣೆಯ ಸಾಮಾನ್ಯ ನಿಯಮಾವಳಿ ಎಂಬುದೆಲ್ಲಿದೆ ತೋರಿಸಿ.

ನಾ: ನೀವು ಯಾವ ಮಟ್ಟದ ಸಾಮಾನ್ಯ ನಿಯಮಾವಳಿ ಬಗ್ಗೆ ಮಾತಾಡುತ್ತೀದ್ದೀರೋ ತಿಳಿಯದು. system ಎಂಬ ನಿಮ್ಮ ಕಲ್ಪನೆಗನುಸಾರವಾದ ಸಾಮಾನ್ಯ ನಿಯಮಾವಳಿ ಇಲ್ಲದಿರಬಹುದು. ಆದರೆ ಜಾತಿ ಪದ್ಧತಿ, ಇತಿಹಾಸದಲ್ಲಿ ಕಾಲ-ದೇಶ-ರಾಜಕಾರಣಕ್ಕೆ ಅನುಸಾರವಾಗಿ ಹಲವು ರೂಪಗಳನ್ನು ಪಡೆದು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಲ್ಲಿ ಕೆಲಸ ಮಾಡುತ್ತಿದೆ. ಭಾರತದಾದ್ಯಂತ ಜಾತಿ ಪದ್ಧತಿಗೆ ಒಂದೇ ನಿಯಮಾವಳಿ ಇದೆ ಎಂದು ಯಾರೂ ಹೇಳುತ್ತಿಲ್ಲ.

ಬಾ: ಹಾಗಾದರೆ ಅದನ್ನು ಪದ್ಧತಿ ಅಂತಲಾದರೂ ಹೇಗೇ ಕರೀತೀರಿ?

ನಾ: ನಿಮ್ಮಲ್ಲಿ ಭಾರತ ಎನ್ನುವುದು ಒಂದು ಸ್ಥಿರ ಕಲ್ಪನೆ ಆದಾಗ ಇಂತಹ ಪ್ರಶ್ನೆಗಳು ಹುಟ್ಟುತ್ತವೆ. ಜಾತಿ ಅನ್ನುವುದು ಒಂದು ನಿರಂತರ ಆಚರಣೆಯಾಗಿ ಇಲ್ಲಿಯವರೆಗೆ ಮುಂದುವರೆದು ಬಂದಿದೆ ಎನ್ನುವ ಅರ್ಥದಲ್ಲಿ ಅದು ಪದ್ಧತಿ. ಅದು ಬೇರೆ ಬೇರೆ ಕಡೆ ಬೇರೆ ಬೇರೆ ರೀತಿಯಲ್ಲಿ ರೂಪಾಂತರವಾಗಿರಬಹುದು.

ಬಾ: ಹಾಗಾದರೆ, ಒಂದೇ ಪ್ರದೇಶದಲ್ಲಿ ಹಲವು ಜಾತಿಗಳು ಒಂದೇ ರೀತಿಯ ಆಚರಣೆಗಳನ್ನು ಮಾಡುತ್ತಾರಲ್ಲ? ಅದನ್ನು ಹೇಗೆ ವಿವರಿಸ್ತೀರಾ? ಉತ್ತರ ಕರ್ನಾಟಕ್ಕೆ ಹೋಗಿ. ಅಲ್ಲಿ ಎಲ್ಲ ಜಾತಿಯವರೂ ಗಣಪತಿ ಪೂಜೆ ಮ್ಯಾಡ್ತಾರೆ! ನಿಮಗಿದು ಗೊತ್ತ?

ನಾ: ಮಾಡಬಹುದೇನೋ. ಅದರೆ ಅದಕ್ಕೂ ಜಾತಿ ಪದ್ಧತಿಯ ಆಚರಣೆಗೂ ಏನು ಸಂಬಂಧ?

ಬಾ: ಹಾಗಾದರೆ ಜಾತಿ ಎಂದರೆ ನಿಮ್ಮ ಪ್ರಕಾರ ಏನು?

ನಾ: ಹುಟ್ಟಿನಿಂದ ಕಸುಬು ಮತ್ತು ಸಾಮಾಜಿಕ ಸ್ಥಾನಮಾನಗಳ ನಿರ್ಧಾರ. ಅಂತಹ ಪದ್ಧತಿಯಿಂದ ಆದ ಸಾಮಾಜಿಕ ಅನಾಹುತಗಳು, ಸಮಾಜದ ಅಸಹಜ, ಅನ್ಯಾಯದ ವಿಭಾಗೀಕರಣ... ಕೆಲವರ ಕೈಯಲ್ಲೇ ಕೆಲವು ಅಧಿಕಾರಗಳು.... ಒಂದು ರೀತಿಯ heiarchy....

ಬಾ: ಯಾವ hierachyರೀ ಎಲ್ಲಿದೆ ಅದು ತೋರಿಸಿ ಮೊದಲು...

ನಾ: ಅದೆಲ್ಲ ಇಲ್ಲ ಅಂತ ನೀವು ತೀರ್ಮಾನಿಸಿಕೊಂಡು, ನೋಡೋಕ್ಕೇ ತಯಾರಿಲ್ಲದಿದ್ದರೆ ನಾವು ತೋರಿಸೋದಾದ್ರೂ ಹ್ಯಾಗೆ? ಜಾತಿಪದ್ಧತಿನೇ hierachy... ಓದು-ಬರಹ-ಅಧ್ಯಯನ ಇಂತಹವರಿಗಷ್ಟೇ ಮೀಸಲು... ಮತ್ತೊಂದು ಮತ್ತೊಬ್ಬರಿಗೆ ಮೀಸಲು..... ಬೇರೆಯವರು ಅದನ್ನು ಮಾಡುವಂತಿಲ್ಲ ಅನ್ನೋ ವಿಧಿ-ನಿಷೇಧಗಳು... ಇದರ ಪರಿಣಾಮ ಏನಾಯ್ತು?

ಕೆಲವರು ಶ್ರೇಷ್ಠರು ಅನ್ನಿಸಿಕೊಂಡ್ರು... ಇನ್ನು ಕೆಲವರು ಕೀಳು ಅನ್ನಿಸಿಕೊಂಡ್ರು... ಇದರಿಂದ ಅನೇಕ ತಾರತಮ್ಯಗಳು ಶುರುವಾದ್ವು.... ಹಾಗಾಗಿ, ಇದು ನಿಮ್ಮ ಅರ್ಥವಲ್ಲಲ್ಲದಿದ್ರೂ, ಸಾಮಾನ್ಯ ಅರ್ಥದಲ್ಲಿ ಒಂದು ವ್ಯವಸ್ಥೆಯಾಗಿಯೇ ಕೆಲಸ ಮಾಡಿದೆ ಅನ್ನುತ್ತೆ.

ಬಾ: ಸುಮ್ಮನೆ ಮಾತಾಡಬೇಡಿ.....ಇದಕ್ಕೆಲ್ಲಿದೆ ಸಾಬೀತು? ಏನು ಮಾಹಿತಿ, ಸಂಶೋಧನೆ ಇದೆ ನಿಮ್ಮತ್ರ ಈ ಬಗ್ಗೆ? ಕೇಳಿ ಇಲ್ಲಿ, ಲೆಕ್ಕ ಯಾರಿಗೆ ಬೇಕಿತ್ತು? ವೈಶ್ಯರಿಗಲ್ವ? ಅವರು ವಿದ್ಯೆ ಕಲೀದೆ ಲೆಕ್ಕ ಬಂತಾ ಅವರಿಗೆ?

ನಾ: ನೋಡಿ, ಈ ಲೆಕ್ಕ-ಪಕ್ಕಕ್ಕೆ ಸಂಬಂಧಿಸಿದ ವಿದ್ಯೆ ಬಗ್ಗೆ ಅಲ್ಲ ನಾನು ಮಾತನಾಡ್ತಿರೋದು. ಧಾರ್ಮಿಕ ಅಧ್ಯಯನ, ಧಾರ್ಮಿಕ ಕಾನೂನು, ನಿಯಮಗಳ ರಚನೆಯ ವಿಷಯ ನಾನು ಮಾತನಾಡ್ತಿರೋದು. ಅಲ್ಲೇ ತಾನೇ ಯಜಮಾನಿಕೆ, ಅಧಿಕಾರ, ಶ್ರೇಷ್ಠತೆಗಳ ಪ್ರಶ್ನೆಗಳು ಹುಟ್ಟೋದು?

ಬಾ: ಏನೂ ಅಧ್ಯಯನ ಮಾಡದೆ ಸುಮ್ಮನೆ ಮಾತನಾಡಬೇಡಿ. ಧರ್ಮಪಾಲರ 'ದಿ ಬ್ಯೂಟಿಫುಲ್ ಟ್ರೀ' ಓದಿ. ೧೮-೧೯ನೇ ಶತಮಾನದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿದ್ದ ಶಾಲೆಗಳಲ್ಲಿ ಎಷ್ಟು ಜನ ಬ್ರಾಹ್ಮಣರಿದ್ದರು, ಎಷ್ಟು ಜನ ಇತರ ಜಾತಿಯವರಿದ್ದರು ಅನ್ನೋದು ಅದರಲ್ಲಿ ಇದೆ. ಅದನ್ನು ಓದಿಕೊಂಡು ಮಾತಾಡಿ.

ನಾ: ನಾನೂ ಅದನ್ನು ಓದಿದ್ದೇನೆ. ಆದರೆ ನಾನು ಮಾತನಾಡ್ತಿರೋದು ಹೊಸ ಕಾಲದ ಶಾಲೆಗಳಲ್ಲಿನ General education ಬಗ್ಗೆ ಅಲ್ಲ. ಆ ತರದ education ಎಲ್ಲರಿಗೂ ಸಾಧ್ಯವಾಗಿದ್ದಕ್ಕೇ ನಾನು ಇವೊತ್ತು ನಿಮ್ಮತ್ರ ಹೀಗೆ ಮಾತಾಡೋಕೆ ಸಾಧ್ಯವಾಗಿರೋದು...

ಬಾ: ಆಯ್ತು ಸ್ವಾಮೀ, ಎಲ್ಲ ತಿಳ್ಕೊಂಡಿದ್ದೀರಲ್ಲ... ನೀವಿನ್ನು ಎದ್ದು ಹೋಗಬಹುದು ಇಲ್ಲಿಂದ.... ನಾನೇನೂ ನಿಮ್ಮನ್ನ ಕರೀಲಿಲ್ಲ ನನ್ನತ್ರ ಬಂದು ಮಾತಾಡೀ ಅಂತ... ಅಥವಾ ನನ್ನ ವಿಚಾರಗಳನ್ನ ಒಪ್ಪಿಕೊಳ್ಳೀಂತ ನಿಮ್ಮತ್ರ ಬಂದು ಬೇಡಿಕೊಳ್ಳಲಿಲ್ವಲ್ಲ... ಏಳಿ ಸ್ವಾಮಿ... ಏಳಿ ಸಾಕು...

ನಾ: ಅಲ್ಲಾ ಸ್ವಾಮೀ, ಸಮಾಜಕ್ಕೆ ಸಂಬಂಧಿಸಿದಂತೆ ನಾವು ಮಾಡಿರೋ ಹೊಸ ಸಂಶೋಧನೆ ನೋಡಿ ಅಂತ ನೀವು ಎಲ್ಲ ಕಡೆ ಪ್ರಚಾರ ಮಾಡಬಹುದು, ಕೇಂದ್ರಗಳನ್ನ ಸ್ಥಾಪಿಸಬಹುದು, ವಿಚಾರ ಸಂಕಿರಣ-ಸಮ್ಮೇಳನಗಳನ್ನ ಏರ್ಪಡಿಸಬಹುದು...ಸಾರ್ವಜನಿಕರ ಹಣ ಖರ್ಚು ಮಾಡಬಹುದು. ಆದರೆ ಸಮಾಜ ಅದಕ್ಕೆ ಪ್ರತಿಕ್ರಿಯಿಸಬಾರದು, ಪ್ರಶ್ನೆ ಕೇಳಬಾರದು, ಅಲ್ವಾ?

ಬಾ: ರೀ ಪ್ರಶ್ನೆ ಕೇಳೋ ಮೊದಲು ಸಂಶೋಧನೆ ಅಂದ್ರೇನು ತಿಳ್ಕೊಳ್ರೀ... ಅದಕ್ಕೂ ಮೊದಲು ಅದಕ್ಕೊಂದು scientific way ಅಂತಾ ಇದೇಂತ ತಿಳ್ಕೋಳ್ರೀ... Science ಅಂದ್ರೆ ಏನೂಂತ ಗೊತ್ತೇನ್ರಿ ನಿಮಗೆ?

ನಾ: ಸ್ವಾಮಿ ಅದನ್ನೆಲ್ಲ ನನಗೆ ಹೇಳಬೇಡಿ. ನಾನು ವಿಜ್ಞಾನದ ವಿದ್ಯಾರ್ಥಿನೇ... I hold a Masters degree in Mathematics.

ಬಾ: ಏ ಹೋಗ್ರೀ ಬಹಳ ಜನ ನೋಡಿದ್ದೀನಿ ಈ ತರ ಮೂರು ಕಾಸಿನ ಡಿಗ್ರೀಗಳನ್ನು ತಗೊಂಡವರನ್ನ...

ನಾ: ಅಯ್ಯೋ ಹೋಗ್ರೀ ನಾನೂ ನೋಡಿದ್ದೀನೀ ನಿಮ್ಮ ಥರ ತರಕಲಾಂಡಿ ಸಂಶೋಧನೆ ಮಾಡಿರೋ ಬಹಳ ಜನರನ್ನ... ಅದೇನೋ ನಿನ್ನೆ ಅಂಬೇಡ್ಕರ್ ಬಗ್ಗೆ ಮಾತಾಡ್ತಾ, ಮೀಸಲಾತಿ ಅದಕ್ಷತೆಯನ್ನ ಸೃಷ್ಟಿಸಿದೆ ಅನ್ನೋ ನಿಮ್ಮ ಸಂಶೋಧನೆಗೆ ಆಧಾರವಾಗಿ; ಎಲ್ಲ ಒಳ್ಳೆಯ ವಿಚಾರಗಳೂ ಸಮಾಜದಲ್ಲಿ ಒಳ್ಳೆಯ ಪರಿಣಾಮಗಳನ್ನೇನೂ ಉಂಟುಮಾಡೋದಿಲ್ಲ; ಹಾಗೇ ಎಲ್ಲ ಕೆಟ್ಟ ವಿಚಾರಗಳೂ ಕೆಟ್ಟ ಪರಿಣಾಮಗಳನ್ನೇನೂ ಉಂಟು ಮಾಡೋದಿಲ್ಲ ಅನ್ನೋ ಪ್ರಮೇಯವನ್ನ ಮಂಡಿಸಿದಿರಂತಲ್ಲ... ಇಂತಹ ಇನ್ನಷ್ಟು ಅದ್ಭುತ ಸಂಶೋಧನೆಗಳನ್ನು ಮಾಡಿ ಪ್ರಚಾರ ಮಾಡಿಬಿಟ್ಟರೆ ಜಗತ್ತು ಬಹು ಬೇಗ ಉದ್ಧಾರವಾಗಿ ಬಿಡುತ್ತೆ ಬಿಡಿ...

ಬಾ: ಯಾರ್ರೀ ನಿಮ್ಮನ್ನ ಇಲ್ಲಿಗೆ ಕರೆದಿದ್ದು? ನಡೀರಿ ಇಲ್ಲಿಂದ...

ನಾ: ರೀ ಸ್ವಾಮೀ,I have come here on an Invitation from your Centre... Have some manners...

ಬಾ: ಆಯ್ತು, ಮೊದಲು ಆಚೆಗೆ ನಡೀರಿ ಇಲ್ಲಿಂದ...

ನಾ: ಏನು ಮಾತಾಡ್ತಿದ್ದೀರಿ ನೀವು? ಕುವೆಂಪು ಯೂನಿವರ್ಸಿಟಿ ಕ್ಯಾಂಪಸ್ ನಿಮ್ಮ ತಾತನ ಮನೆ ಆಸ್ತಿ ಅಲ್ಲ, ಹೀಗೆಲ್ಲ order ಮಾಡೋಕೆ.... ನಿಮ್ಮನ್ನು ನೋಡಿ ನನಗೆ ಜಾತಿ ಪದ್ಧತಿ ಅಲ್ಲ, ಜಾತಿ ವ್ಯವಸ್ಥೆ ಅನ್ನೋದೇ ಇದೆ; ಅದು ನಾವು ತಿಳಿದುಕೊಂಡಿದ್ದಕ್ಕಿಂತ dirty and dangerous ಆಗಿದೆ ಅನ್ನೋದು confirm ಆಗ್ತಾ ಇದೆ...

ಬಾ: (ಹೊರಟ ನನ್ನತ್ತ ಕೈ ತೋರಿಸಿ ಕಿರುಚುತ್ತಾ): Send him out! ಹೊರಗೆ ಹಾಕ್ರೀ ಅವನನ್ನ...

ನಾ (ಎಲ್ಲರೂ ಗಾಬರಿಯಿಂದ ಸುಮ್ಮನೆ ನೋಡುತ್ತಿದ್ದಂತೆ, ಕಾರು ಹತ್ತುತ್ತಾ): ಏ ಹೋಗಯ್ಯಾ.... ಕುವೆಂಪು ಯೂನಿವರ್ಸಿಟೀನ ಪೂರ್ತಿ ಕೊಂಡುಕೊಂಡ ಮೇಲೆ ಹೀಗೆ order ಮಾಡು... ಆಗ ಯಾರಾದರೂ ನಿನ್ನ ಮಾತು ಕೇಳಬಹುದು....

*

ಇವರ ಸಂಶೋಧನೆಗಳ ಬಗ್ಗೆ ಸದ್ಯಕ್ಕೆ, ಇನ್ನು ಯಾವ ವ್ಯಾಖ್ಯಾನವೂ ಬೇಡವೆಂದು ಕಾಣುತ್ತದೆ!

(೬ ಫೆಬ್ರುವರಿ, ೨೦೦೮)

■

೩೭. ಕರ್ನಾಟಕದ ಕೇಸರೀಕರಣ: ಕವಲು ದಾರಿಯಲ್ಲಿ ರಾಜ್ಯ ರಾಜಕಾರಣ

ಮೊನ್ನೆ 'ಔಟ್ ಲುಕ್' ಪತ್ರಿಕೆಯ ಸುಗತಾ ದೂರವಾಣಿ ಕರೆ ಮಾಡಿ, 'ಕರ್ನಾಟಕದ ಕೇಸರೀಕರಣ' ಕುರಿತ ತಮ್ಮ ವಿಶೇಷ ವರದಿಗಾಗಿ; ನಿಮ್ಮ ಪ್ರಕಾರ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಕಾರಣ ಯಾರು ಎಂದು ಕೇಳಿದಾಗ, ಅದು ನನ್ನನ್ನು ಪ್ರಶ್ನೆಯಾಗಿ ಮಾತ್ರ ಕಾಡಲಿಲ್ಲ. ಅದು ತನ್ನ ವ್ಯಾಪಕತೆಯಲ್ಲಿ ಕರ್ನಾಟಕದ ಇಂದಿನ ರಾಜಕೀಯ ಸಂದರ್ಭದ ಹತ್ತಿರದ ನೋಟಕ್ಕೂ ಕಾರಣವಾಯಿತು.

ಬಿಜೆಪಿ ಕರ್ನಾಟಕದಲ್ಲಿ ಏಕಾಕಿಯಾಗಿ ಅಧಿಕಾರಕ್ಕೆ ಬಂದು ಈಗಾಗಲೇ ಆರು ತಿಂಗಳುಗಳು ಕಳೆದಿವೆ. ಈ ಅವಧಿಯಲ್ಲಿ ಕರ್ನಾಟಕದ ರಾಜಕಾರಣಕ್ಕೆ ಅದು ನೀಡಿರುವ ಕೊಡುಗೆ ಏನು ಎಂದು ಒಮ್ಮೆ ಹಿಂತಿರುಗಿ ನೋಡಿದರೆ, ಆಘಾತವೇ ಆಗುತ್ತದೆ. ಆಡಳಿತದಲ್ಲಿ ಯಾವ ವೈಶಿಷ್ಟ್ಯವನ್ನಾಗಲೀ, ವಿಶೇಷ ದಕ್ಷತೆಯನ್ನಾಗಲೀ ತೋರದ ಈ ಸರ್ಕಾರ; ಹಾವೇರಿಯಲ್ಲಿ ರೈತರ ಮೇಲಿನ ಗೋಲೀಬಾರ್‌ನಿಂದ ಹಿಡಿದು, ಇತ್ತೀಚಿನ ಸಂಪಂಗಿ ಲಂಚದ ಪ್ರಕರಣದವರೆಗೆ ರಾಜಕೀಯ ಅನಾಚಾರದ ವಿಷಯದಲ್ಲಿ ಹೊಸ ದಾಖಲೆಗಳನ್ನೇ ನಿರ್ಮಿಸಿದೆ. ಅಷ್ಟೇ ಅಲ್ಲ, ಪದ್ಮಪ್ರಿಯ ಸಾವಿನ ಪ್ರಕರಣದಿಂದ ಹಿಡಿದು ಇತ್ತೀಚಿನ ಮಂಗಳೂರು ಪಬ್ ಮೇಲಿನ ಶ್ರೀರಾಮ ಸೇನೆಯ ಗೂಂಡಾಗಿರಿ ಪ್ರಕರಣದವರೆಗೆ, ಅದು ಅಪರಾಧ ಪ್ರಕರಣಗಳ ನಿರ್ವಹಣೆಯಲ್ಲಿ ಸಂಶಯಾಸ್ಪದ ರೀತಿಯಲ್ಲೇ ವರ್ತಿಸಿದೆ. ಗಣಿ ವ್ಯವಹಾರದ ತನಿಖಾ ವರದಿ ಕುರಿತ ನಿಲುವೂ ಸೇರಿದಂತೆ ಲೋಕಾಯುಕ್ತರಿಂದ ಈ ಸರ್ಕಾರ ಇಷ್ಟು ಚಿಕ್ಕ ಅವಧಿಯಲ್ಲಿ ಎದುರಿಸಿದಷ್ಟು ಟೀಕೆ-ಖಂಡನೆ-ಅಸಮಾಧಾನಗಳನ್ನು ಇನ್ನಾವ ಸರ್ಕಾರವೂ ಎದುರಿಸಿಲ್ಲ ಎಂಬುದೂ ಗಮನಾರ್ಹ. ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವ ಇಂದಿನ ಲೋಕಾಯುಕ್ತರ ಧೃತಿಗೆಡಸಲೋ ಎಂಬಂತೆ, ಅದು ತನ್ನ ಪಕ್ಷದ ಶಾಸಕನೊಬ್ಬನನ್ನು ಲಂಚ ಸ್ವೀಕರಿಸುತ್ತಿದ್ದಾಗಲೇ ಹಿಡಿದು ಹಾಕಿದ ಮರುದಿನವೇ, ತರಾತುರಿಯಲ್ಲಿ 'ಮಂತ್ರಕ್ಕಿಂತ ಉಗುಳೇ ಜಾಸ್ತಿ' ಖ್ಯಾತಿಯ ಮಾಜಿ ಲೋಕಾಯುಕ್ತ ವೆಂಕಟಾಚಲ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮೂಲಕ ಬಿಜೆಪಿ ಭ್ರಷ್ಟಾಚಾರ ಕುರಿತ ತನ್ನ ಬದ್ಧತೆ ಎಂತಹುದೆಂಬುದನ್ನು ಸ್ಪಷ್ಟಪಡಿಸಿದೆ. ಈ ವೆಂಕಟಾಚಲ ಬೇರೆ, ಸಂದರ್ಭದ ವಿಪರ್ಯಾಸದ ಪರಿವೆಯೇ ಇಲ್ಲದಂತೆ, ತಾನು ಭ್ರಷ್ಟಾಚಾರ ನಿರ್ಮೂಲನಕ್ಕಾಗಿ ಬಿಜೆಪಿ ಸೇರಿದ್ದೇನೆ ಎಂದು ಘೋಷಿಸುವ

ಮೂಲಕ ಎಲ್ಲರ ಹುಬ್ಬೇರುವಂತೆ ಮಾಡಿದ್ದಾರೆ! ಇತರೆಲ್ಲ ರಾಜಕೀಯ ಪಕ್ಷಗಳೂ ಕಳಕಿಂತ; ತಾನು ಈ ಇತರೆಲ್ಲರಿಗಿಂತ ಭಿನ್ನವೆಂದು ಹೇಳಿಕೊಂಡು ಜನರನ್ನು ನಂಬಿಸಿ ಅಧಿಕಾರಕ್ಕೆ ಬಂದ ಈ ಪಕ್ಷದ ಸ್ಥಿತಿ ಇಂದು ನೈತಿಕವಾಗಿ ಚಿಂತಾಜನಕವಾಗಿದೆ.

ನಾನು ಈ ಹಿಂದೆ ಇದೇ ಅಂಕಣದಲ್ಲಿ ನನ್ನ ಕೆಲವು ಗೆಳೆಯರು ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆಯುವುದನ್ನೇ ತಮ್ಮ ಒಂದು ರಾಜಕೀಯ ಕಾರ್ಯಕ್ರಮವನ್ನಾಗಿ ಮಾಡಿಕೊಂಡಾಗ ಅದನ್ನು ಟೀಕಿಸಿದ್ದೆ. ಅದು ಪ್ರಜಾಪ್ರಭುತ್ವ ಪದ್ಧತಿಯ ಬಗೆಗಿನ ನಮ್ಮ ಬದ್ಧತೆಯನ್ನೇ ಪ್ರಶ್ನಾರ್ಹಗೊಳಿಸುವುದು ಮತ್ತು ಇತರ ಪಕ್ಷಗಳ ರಾಜಕೀಯ ಕಾರ್ಯಕ್ರಮಗಳ ಪ್ರಸ್ತುತತೆಯನ್ನೇ ಅಲ್ಲಗೆಳೆಯುವುದು ಎಂಬುದು ನನ್ನ ವಾದವಾಗಿತ್ತು. ಅದಕ್ಕಿಂತ ಹೆಚ್ಚಾಗಿ, ಈ ಧೋರಣೆ ರಾಜಕೀಯವಾಗಿ ತಟಸ್ಥರಾಗಿರುವ ಮತದಾರರಲ್ಲಿ ಬಿಜೆಪಿ ಬಗೆಗೆ ಅನಗತ್ಯ ಸಹಾನುಭೂತಿ ಹುಟ್ಟಿಸುವ ಮೂಲಕ ಚುನಾವಣಾ ಸಂದರ್ಭವನ್ನೇ ವಿಕೃತಗೊಳಿಸಬಹುದು ಎಂಬುದೂ ನನ್ನ ಆತಂಕವಾಗಿತ್ತು. ಅಷ್ಟೇ ಅಲ್ಲ, ಈ ಧೋರಣೆ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಅದನ್ನು ಎದುರಿಸಲಾಗದೆಂಬ ಭಯ, ಅಸಹಾಯಕತೆ ಮತ್ತು ಆಂತರಿಕ ರಾಜಕೀಯ ಶಕ್ತಿ ದಾರಿದ್ರ್ಯಗಳ ಪ್ರತೀಕವಾದೀತು ಎಂಬುದು ನನ್ನ ಅಭಿಪ್ರಾಯವಾಗಿತ್ತು. ಜೊತೆಗೆ ಜಾತ್ಯತೀತ ಪ್ರಜಾಪ್ರಭುತ್ವವಾದಿ ಸಂವಿಧಾನದ ಚೌಕಟ್ಟಿನಲ್ಲಿ ಅದು ತನ್ನ ಕೋಮುವಾದಿ ರಾಜಕಾರಣದ ಬಾಲ ಬಿಚ್ಚುವುದು ಅಷ್ಟು ಸುಲಭವಾಗಲಾರದು ಮತ್ತು ಅಧಿಕಾರ ನಡೆಸುವ ಹಾಗೂ ಉಳಿಸಿಕೊಳ್ಳುವ ಒತ್ತಡ-ಒತ್ತಾಯಗಳಲ್ಲಿ ಅದು ರಾಜಕೀಯವಾಗಿ 'ಮೆದು'ವಾಗುವುದು ಎಂಬುದು ನಮ್ಮಂತಹವರ ನಿರೀಕ್ಷೆಯಾಗಿತ್ತು. ಅದರೆ ಕಳೆದ ಆರು ತಿಂಗಳುಗಳ ಬಿಜೆಪಿ ಸರ್ಕಾರದ ವೈಖರಿ ಈ ನಿರೀಕ್ಷೆಯನ್ನು ಹುಸಿಗೊಳಿಸಿದೆ. ಬಿಜೆಪಿ ಕುರಿತ ಉದಾರವಾದಿ ಧೋರಣೆ ಬಗ್ಗೆ ನಮ್ಮಂತಹವರು ಮರುಚಿಂತನೆ ಮಾಡುವಂತೆ ಒತ್ತಾಯಿಸುತ್ತಿದೆ.

ಇದಕ್ಕೆ ಒಂದು ಕಾರಣ, ಬಿಜೆಪಿ ಈ ಅಲ್ಪಾವಧಿಯಲ್ಲೇ ಭ್ರಷ್ಟತೆ, ಜಾತಿವಾದ ಮತ್ತು ಕಾನೂನುಗಳನ್ನೇ ತಲೆಕೆಳಗು ಮಾಡುವ ನಿರ್ಲಜ್ಜ ಮಾರ್ಗಗಳಲ್ಲಿ ಎಲ್ಲ ಪಕ್ಷಗಳನ್ನೂ ಮೀರಿಸುವ ಮೂಲಕ ತನ್ನ ಸ್ಥಾನವನ್ನು ಭದ್ರ ಮಾಡಿಕೊಂಡು; ಈಗ ನಿಧಾನವಾಗಿ ತನ್ನ ಕೋಮುವಾದಿ ಬಾಲವನ್ನು ಬಿಚ್ಚತೊಡಗಿರುವುದು. ಇದಕ್ಕಿಂತ ಮುಖ್ಯವಾದ ಇನ್ನೊಂದು ಕಾರಣವೆಂದರೆ, ಇದನ್ನು ಗುರುತಿಸುವಲ್ಲಿ, ಅದರ ದೀರ್ಘಕಾಲಿಕ ಪರಿಣಾಮಗಳನ್ನು ಸ್ವತಃ ಅರ್ಥ ಮಾಡಿಕೊಳ್ಳುವಲ್ಲಿ ಹಾಗೂ ಅವುಗಳನ್ನು ಸಾಮಾನ್ಯ ಜನತೆಗೆ ಮನವರಿಕೆ ಮಾಡಿ ಅದನ್ನು ಎದುರಿಸುವಲ್ಲಿ ನಮ್ಮ ಅಧಿಕೃತ ವಿರೋಧ ಪಕ್ಷವೆನಿಸಿದ ಕಾಂಗ್ರೆಸ್ ಪ್ರದರ್ಶಿಸುತ್ತಿರುವ ಜೋಭದ್ರಗೇಡಿತನ!

ವಿಪರ್ಯಾಸವೆಂದರೆ, ಬಿಜೆಪಿ ವಿರುದ್ಧ ಈಗ ಅತಿ ಹೆಚ್ಚು ಶಬ್ದ ಮಾಡುತ್ತಿರುವ ಪಕ್ಷವೆಂದರೆ, ಅದು ಅಧಿಕಾರಕ್ಕೆ ಬರಲು ತನ್ನ ಸಮಯ ಸಾಧಕ ಹಾಗೂ ಅನೈತಿಕ ರಾಜಕಾರಣದ ಮೂಲಕ ಕಾರಣವಾದ ಜಾತ್ಯತೀತ ಜನತಾ ದಳ! ಈ ಪಕ್ಷ ತಾನು ಹುಟ್ಟಿದಾಗಿನಿಂದ ತನ್ನ ಹೆಸರಿನಲ್ಲಿರುವ 'ಜಾತ್ಯತೀತ' ಎಂಬ ತತ್ವವೂ ಸೇರಿದಂತೆ ಎಲ್ಲ

ರಾಜಕೀಯ ತತ್ವಗಳನ್ನೂ ತನ್ನ ರಾಜಕೀಯ ಉಳಿವಿನ ಹೆಸರಲ್ಲಿ ತಿಲಾಂಜಲಿ ನೀಡುತ್ತಾ ಬಂದಿದೆ. ಹಾಗಾಗಿ ಇದರ ಯಾವುದೇ ರಾಜಕೀಯ ಹೋರಾಟದ ವಿಶ್ವಾಸಾರ್ಹತೆ ಸಂಶಯಾಸ್ಪದವಾಗಿಯೇ ಉಳಿದಿದೆ. ಅಧಿಕಾರವಿಲ್ಲದಿದ್ದಾಗ ದೊಡ್ಡ ದೊಡ್ಡ ತತ್ವ ಹೇಳಿ ಜನರ ಗಮನ ಸೆಳೆಯುವ ಈ ಪಕ್ಷ, (ಅದೆಷ್ಟು ಬಾರಿ ಕರ್ನಾಟಕದ 'ಪ್ರಗತಿಪರ'ರೆಂಬುವವರು–ಇತ್ತೀಚೆಗೆ ಯು.ಆರ್.ಅನಂತಮೂರ್ತಿಯವರು–ದೇವೇಗೌಡರ ಹೋರಾಟದ ಕೆಚ್ಚಿಗೆ ಮರುಳಾಗಿ, ಆನಂತರ ಅವರ ಅಧಿಕಾರದ ಆಟ ನೋಡಿ ಪೆಚ್ಚಾಗಿಲ್ಲ?) ಅಧಿಕಾರದ ವಾಸನೆ ಹತ್ತಿದೊಡನೆ ಅಷ್ಟೇ ಸುಲಭವಾಗಿ ಈ ತತ್ವಗಳನ್ನೆಲ್ಲ ಕೈ ಬಿಡಬಲ್ಲ ತತ್ವ ನಿರ್ಲಜ್ಜ ಪಕ್ಷವಾಗಿದೆ.

ದೇವೇಗೌಡರ ಕುಟುಂಬ ರಾಜಕಾರಣದ ಸುತ್ತಲೇ ಗಿರಕಿ ಹೊಡೆಯುತ್ತಿರುವ ಈ ಪಕ್ಷ, ರಾಜ್ಯ ರಾಜಕಾರಣದ ಎಲ್ಲ ಬಿಕ್ಕಟ್ಟುಗಳ ಸಮಯದಲ್ಲೂ ಪಕ್ಷಾಂತರದ ಹಾವಳಿಗೆ ಸಿಕ್ಕಿ ತನ್ನ ಅಸ್ತಿತ್ವದ ಆತಂಕವೆನ್ನುದರಿಸುತ್ತದೆ. ಇದಕ್ಕೆ, ಅದು ಮೂಲತಃ ಸಮಯ ಸಾಧಕತ್ವದ ಮೂಲಕ ಅಧಿಕಾರ ಗಳಿಸುವ ತತ್ವವೊಂದನ್ನೇ ನಂಬಿ ಬೆಳೆದು ಉಳಿದಿರುವ ಪಕ್ಷವಾಗಿರುವುದೇ ಕಾರಣವಾಗಿದೆ. ಹಾಗಾಗಿ, ಈ ಪಕ್ಷ ಇದೇ ಸ್ಥಿತಿಯಲ್ಲಿರುವವರೆಗೂ ಕರ್ನಾಟಕದ ರಾಜಕಾರಣ ಸದ್ಯದ ಸಂಕಟದಿಂದ ಪಾರಾಗಲಾರದು. ಆದ್ದರಿಂದ ದೇವೇಗೌಡರು ತಮ್ಮ ರಾಜಕೀಯ ಜೀವಿತದ ಈ ಕೊನೆಯ ಘಟ್ಟದಲ್ಲಾದರೂ ಪಕ್ಷವನ್ನು ಕುಟುಂಬದ ನಿಯಂತ್ರಣದಿಂದ ಮುಕ್ತ ಮಾಡಿ, ಒಂದು ನಿಶ್ಚಿತ ರಾಜಕೀಯ ಸಿದ್ಧಾಂತದ ಮರ್ಯಾದೆಯ ಆಧಾರದ ಮೇಲೆ ಅದನ್ನು ಪುನಾರಚಿಸುವ ಪ್ರಯತ್ನ ಮಾಡಿದರೆ ಮಾತ್ರ ಕರ್ನಾಟಕದ ರಾಜಕಾರಣಕ್ಕೆ ಹೊಸತೊಂದು ತಿರುವು ದೊರೆತೀತು. ಅದನ್ನು ಅವರು ಮತ್ತ ಅವರ ಮಗ ಬಿಜೆಪಿಯೊಂದಿಗೆ ಸಮಯ ಸಾಧಕ ಸಖ್ಯ ಬೆಳೆಸಿ, ಅದೇ ಸಮಯ ಸಾಧಕತನದೊಂದಿಗೆ ಅದಕ್ಕೆ ಅಧಿಕಾರ ಹಸ್ತಾಂತರ ಮಾಡದೆ ಉಂಟು ಮಾಡಿರುವ ಅನಾಹುತಕ್ಕಾಗಿ, ಜನತೆಯ ಬಹಿರಂಗ ಕ್ಷಮೆ ಕೋರುವ ಮೂಲಕ ಆರಂಭಿಸಬಹುದಾಗಿದೆ. ಆಗ ಮಾತ್ರ ತಮ್ಮ ತಂದೆಯಂತಹುದೇ ದೈತ್ಯ ರಾಜಕೀಯ ಪರಿಶ್ರಮವನ್ನು ಪ್ರದರ್ಶಿಸುವ ಮೂಲಕ ಭರವಸೆ ಹುಟ್ಟಿಸಿರುವ ಕುಮಾರಸ್ವಾಮಿಯವರ ನಾಯಕತ್ವ ಒಂದು ನೈತಿಕತೆಯನ್ನೂ ಸ್ಥಾಪಿಸಿಕೊಂಡು, ರಾಜ್ಯಾದ್ಯಂತ ಎಲ್ಲರ ವಿಶ್ವಾಸಾರ್ಹತೆಯನ್ನೂ ಗಳಿಸಿ ಬೆಳೆಯಬಲ್ಲುದು.

ಇನ್ನು ವಿಧಾನಸಭಾ ಚುನಾವಣಾ ಫಲಿತಾಂಶಗಳಿಂದ ಕಂಗಾಲಾದಂತೆ ತೋರುವ ಕಾಂಗ್ರೆಸ್, ಇನ್ನೂ ಆ ಕೋಮಾದಿಂದ ಹೊರಬಂದಂತೆ ಕಾಣುವುದಿಲ್ಲ. ಕೋಮಾದಿಂದ ಹೊರ ತರಲು ಅದರ ಹೈಕಮಾಂಡ್ ಪ್ರಕಟಿಸಿದ ಹೊಸ ನಾಯಕತ್ವದಲ್ಲೂ ಯಾವುದೇ ಹೊಸತನವಿಲ್ಲದೆ, ಈ ಹೊಸ ನಾಯಕತ್ವದ ಎರಡು ಮುಖಗಳೂ ಸಾರ್ವಜನಿಕರ ಕಣ್ಣುಗಳಲ್ಲಿ ಭ್ರಷ್ಟತೆ ಮತ್ತು ದುಷ್ಟತನಗಳಿಗೆ ಬದಲೀ ಹೆಸರುಗಳಂತಾಗಿಬಿಟ್ಟಿವೆ! ಇದರ ಮಧ್ಯೆ, ತಮ್ಮ ಮಾನಕ್ಕೆ ತಕ್ಕ ಸ್ಥಾನವಿಲ್ಲವೆಂದು ಮುನಿಸಿಕೊಂಡಿರುವ ಸಿದ್ದರಾಮಯ್ಯ 'ಆಪರೇಷನ್ ಕಮಲದ' ಕಾರಣದಿಂದಾಗಿ ಸಂಭವಿಸಿದ ಉಪ ಚುನಾವಣೆಗಳಲ್ಲಿ ತಮ್ಮ ವೈಯುಕ್ತಿಕ

ಅನುಯಾಯಿಗಳನ್ನು ತಮ್ಮದೇ ಪಕ್ಷದ ವಿರುದ್ಧ ಕೆಲಸ ಮಾಡಲು ಬಿಡುವ ಮೂಲಕ ಅತ್ಯಂತ ಬೇಜವಾಬ್ದಾರಿ ರಾಜಕಾರಣವನ್ನು ಪ್ರದರ್ಶಿಸಿದ್ದಾರೆ. ಇದರಿಂದಾಗಿ ರಾಜ್ಯ ರಾಜಕಾರಣಕ್ಕೆ ಮತ್ತು ಪಕ್ಷಕ್ಕೆ ಆಗಿರುವ ಆಘಾತದ ಹೊರತಾಗಿಯೂ, ಅವರು ಆ ಪಕ್ಷದ ಆಯಕಟ್ಟಿನ ಅಧಿಕಾರ ಸ್ಥಾನಕ್ಕಾಗಿ ಪಕ್ಷದ ಹೈಕಮಾಂಡ್‌ನಿಂದ ಇನ್ನೂ ಗಂಭೀರವಾಗಿ ಪರಿಗಣಿಸಲ್ಪಡುತ್ತಿರುವ ಸನ್ನಿವೇಶವಂತೂ, ಆ ಪಕ್ಷ ನಾಯಕತ್ವದ ವಿಷಯದಲ್ಲಿ ಯಾವ ದರಿದ್ರ ಸ್ಥಿತಿಯನ್ನು ತಲುಪಿದೆ ಎಂಬುದನ್ನು ಸೂಚಿಸುತ್ತದಷ್ಟೆ. ಮೊನ್ನೆ ಕನ್ನಡ ಟಿವಿ ವಾಹಿನಿಯೊಂದರಲ್ಲಿ ಶ್ರೀರಾಮ ಸೇನೆಯ ಪಬ್ ದಾಳಿ ಕುರಿತ ಚರ್ಚೆಯಲ್ಲಿ ಬಿಜೆಪಿಯ ಹಿರಿಯ ಸಿದ್ಧಾಂತಿ ಹಾಗೂ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಆದ ಡಿ.ಎಚ್.ಶಂಕರಮೂರ್ತಿಯವರ ಎದುರು ವಾದಿಸಲು ಈ ಪಕ್ಷದ ಮಹಿಳಾ ನಾಯಕ ಮಣಿಯೊಬ್ಬರು ಪಡುತ್ತಿದ್ದ ಫಜೀತಿ, ಈ ಪಕ್ಷ ತಲುಪಿರುವ ಬುದ್ಧಿ ದಾರಿದ್ರ್ಯಕ್ಕೆ ಸಾಕ್ಷಿಯಂತಿತ್ತು. ಅತಿಯಾದ ಆತ್ಮ ವಿಶ್ವಾಸ ಮತ್ತು ಜೋರು ಬಾಯಿಯ ಹೊರತಾಗಿ ಇನ್ನಾವ ಸಂಪನ್ಮೂಲಗಳನ್ನೂ ಹೊಂದದಂತೆ ತೋರಿದ ಈ ನಾಯಕಿ, ವಿಷಯದ ಬಗ್ಗೆ ಯವುದೇ ತಿಳುವಳಿಕೆ ಇಲ್ಲದೆ ಮಹಿಳಾ ಮಂಡಳದ ಸಭೆಗಳಲ್ಲಿನ ತಮ್ಮ ಅಸಂಬದ್ಧ ಭಾಷಣವನ್ನು ಇಲ್ಲಿಯೂ ಮುಂದುವರೆಸಿದಂತಿತ್ತು! ಇದು ಇಂದು ಪ್ರತಿಬಿಂಬಿತವಾಗುತ್ತಿರುವ ರಾಜ್ಯ ಕಾಂಗ್ರೆಸ್ಸಿನ ಸಾರ್ವಜನಿಕ ಮುಖ! ಸದ್ಯಕ್ಕೆ ಕೃಷ್ಣಭೈರೇಗೌಡರ ಹೊರತಾಗಿ ಭರವಸೆ ಹುಟ್ಟಿಸುವಂತಹ ಇನ್ನಾವ ಮುಖವೂ ಅಲ್ಲಿ ಕಾಣುತ್ತಿಲ್ಲ. ಇದು ರಾಜ್ಯ ರಾಜಕಾರಣದ ನಿಜವಾದ ದುರಂತ.

ಪರಿಸ್ಥಿತಿ ಹೀಗಿರುವಾಗ ಬಿಜೆಪಿಯ ಕೋಮುವಾದಿ ರಾಜಕಾರಣವನ್ನು ತಡೆಯುವವರಾರು? ಮಂಗಳೂರಿನ ಪಬ್‌ವೊಂದರ ಆವರಣದಲ್ಲಿ ಮಹಿಳೆಯರ ಮೇಲೆ ಶ್ರೀರಾಮ ಸೇನೆಯವರು ನಡೆಸಿದ ಗೂಂಡಾಗಿರಿಯ ಬಗ್ಗೆ ದ.ಕ. ಜಿಲ್ಲೆಯ ಉಸ್ತುವಾರಿ ಮಂತ್ರಿ ಕೃಷ್ಣ ಪಾಲೇಮಾರ್‌ರ ಪ್ರತಿಕ್ರಿಯೆ ಕೇಳಿದರೆ, ಅವರು ನಾವು ಪಬ್ ಸಂಸ್ಕೃತಿಯನ್ನು ಸಹಿಸುವುದಿಲ್ಲ ಎಂದಷ್ಟೇ ಉತ್ತರಿಸುತ್ತಾರಲ್ಲಾ ಎಂದು ಡಿ.ಎಚ್.ಶಂಕರಮೂರ್ತಿಯವರನ್ನು ಪ್ರಶ್ನಿಸಿದರೆ, ಅವರು; ಸಚಿವರು ಆ ಮೂಲಕ ಮಹಿಳೆಯರ ಮೇಲಿನ ಗೂಂಡಾಗಿರಿಯನ್ನೇನೂ ಸಮರ್ಥಿಸಿಲ್ಲವಲ್ಲ ಎಂಬ ಜಾಣ ಉತ್ತರ ನೀಡುತ್ತಾರೆ! ಇದೇ ಬಿಜೆಪಿಯ ಘಾತುಕ ಜಾಣತನ. ಅದರ ಮೂಲಕವೇ ಅದು ತನ್ನ ಕೋಮುವಾದಿ ರಾಜಕಾರಣವನ್ನು ನಡೆಸಿರುವುದು. ಇಂತಹುದೇ ಘಾತುಕ ಜಾಣತನವೇ ಮುಖ್ಯಮಂತ್ರಿ ಯಡಿಯೂರಪ್ಪನವರ 'ಯಾರೇ ಕಾನೂನನ್ನು ಕೈಗೆತ್ತಿಕೊಳ್ಳುವುದನ್ನು ನಾವು ಸಹಿಸುವುದಿಲ್ಲ. ಆದರೆ ಅದೇ ಹೊತ್ತಿನಲ್ಲಿ ಪಬ್ ಸಂಸ್ಕೃತಿಯನ್ನೂ ಸಹಿಸುವುದಿಲ್ಲ' ಎಂಬ ಹೇಳಿಕೆಯಲ್ಲಿ ಎದ್ದು ಕಾಣುವುದು. ಈ ಇಡೀ ಸಂಘ ಪರಿವಾರ 'ಭಾರತೀಯ ಸಂಸ್ಕೃತಿ'ಯ ಹೆಸರಿನಲ್ಲಿ ಆಡುತ್ತಿರುವುದು ಇಂತಹ ಎರಡೆಳೆಯ ನಾಲಿಗೆಯ ಮಾತುಗಳನ್ನೇ! ಅಲ್ಲಾ ಯಡಿಯೂರಪ್ಪನವರೇ, ಶ್ರೀರಾಮ ಸೇನೆಯವರು ಅಲ್ಲಿಗೆ ಬಂದಿದ್ದುದು ಯಾವ ಕಾನೂನನ್ನು ಜಾರಿಗೆ ಮಾಡಲು? ಪಬ್‌ಗಳು ನಡೆಯುತ್ತಿರುವುದು ಕಾನೂನಿನ ಅಡಿಯಲ್ಲೇ ಎಂಬುದು ನಿಮಗೆ ಗೊತ್ತಿಲ್ಲವೆ?

ಪಬ್ ಸಂಸ್ಕೃತಿ ನಿಮಗೆ ಸಹಿಸಲಾಗದ್ದು ಎನ್ನಿಸಿರುವುದು, ಭಾರತೀಯ ಸಂಸ್ಕೃತಿಯ ನೆನಪು ಬಂದಿರುವುದು, ಅಲ್ಲಿಗೆ ಹುಡುಗಿಯರು ಮುಕ್ತವಾಗಿ ಹೋಗಲಾರಂಭಿಸಿದ ಮೇಲಷ್ಟೇ? ಹಾಗಿದ್ದಲ್ಲಿ ಕಾನೂನಿನಲ್ಲಿ ಅವಕಾಶವಿದ್ದರೆ, ಅವರ ಪ್ರವೇಶವನ್ನು ಬಹಿಷ್ಕರಿಸಿ ಅಥವಾ ಪಬ್‌ಗಳನ್ನೇ ಮುಚ್ಚಲು ಈ ಕೂಡಲೇ ಆದೇಶಿಸಿರಿ. ಆದರೆ ಯಾವುದೇ ಕಾನೂನು ಮತ್ತು ಶಿಸ್ತಿನ ಸಮಸ್ಯೆ ಸೃಷ್ಟಿಸದೆ, ತಮ್ಮ ಹಣದಲ್ಲಿ ತಾವು ಸರಿ ಕಂಡಂತೆ ಖುಷಿ ಪಡುತ್ತಿದ್ದ ಯುವಕ-ಯುವತಿಯರ ಮೇಲೆ ಸ್ವಯಂಘೋಷಿತ ಸಂಸ್ಕೃತಿ ರಕ್ಷಕರು ನಡೆಸಿದ ಅನಾಗರಿಕ ಹಲ್ಲೆಯನ್ನು ಖಂಡಿಸುವುದರ ಜೊತೆ ಜೊತೆಯಲ್ಲೇ ಸುಮ್ಮನೆ ಸಂಸ್ಕೃತಿ ರಕ್ಷಣೆಯ ಹುಸಿ ಮಾತುಗಳನ್ನೇಕೆ ಆಡುತ್ತೀರಿ? ಈ ಮೂಲಕ ನೀವು ಪರೋಕ್ಷವಾಗಿ ಹಲ್ಲೆಯನ್ನು ಸಮರ್ಥಿಸುತ್ತಿದ್ದೀರಿ ಅಲ್ಲವೇ? ನೀವು ಮೊದಲು ಸಂರಕ್ಷಿಸಬೇಕಾಗಿರುವುದು ನಮ್ಮ ಸಂವಿಧಾನವನ್ನು ಎಂಬುದು ನಿಮಗೆ ನೆನಪಿರಲಿ. ಜೊತೆಗೆ ನಮಗೂ ಶ್ರೀರಾಮ ಸೇನೆಗೂ ಯಾವ ಸಂಬಂಧವೂ ಇಲ್ಲ ಎಂಬ ನಿಮ್ಮ ಆತ್ಮದ್ರೋಹದ ಮಾತು ಬೇರೆ! ಈ ಹಲ್ಲೆ ರಾಷ್ಟ್ರಾದ್ಯಂತ ಸುದ್ದಿಯಾಗಿ ಎಲ್ಲಡೆಯಿಂದ ಖಂಡನೆ ವ್ಯಕ್ತವಾಗುತ್ತಿದ್ದಂತೆ ಈ ಸೇನೆಯ ನಾಯಕ ಪ್ರಮೋದ್ ಮುತಾಲಿಕ್, 'ಈ ಘಟನೆಯನ್ನು ಅತಿಯಾಗಿ ಪ್ರಚಾರ ಮಾಡಿ ರಾಜ್ಯ ಬಿಜೆಪಿ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಪಿತೂರಿ ನಡೆದಿದೆ' ಎಂದು ನೀಡಿರುವ ಹೇಳಿಕೆ, ನಿಮಗೂ ಅವರಿಗೂ ಇರುವ ಯಾವ ಮತ್ತು ಎಂತಹ ಸಂಬಂಧವನ್ನು ಸೂಚಿಸುತ್ತದೆ?

ನೀವು ಭಾರತೀಯ ಸಂಸ್ಕೃತಿ ರಕ್ಷಣೆಯ ಹೆಸರಲ್ಲಿ ಕಳೆದ ೨೦ ವರ್ಷಗಳಲ್ಲಿ ನಡೆಸಿಕೊಂಡು ಬರುತ್ತಿರುವ ಕೋಮುವಾದಿ ರಾಜಕಾರಣವೇ ಅನೇಕ ಇಂತಹ ತುಂಡರಸರನ್ನು ಸೃಷ್ಟಿಸಿ ಸಾರ್ವಜನಿಕ ಶಾಂತಿಭಂಗಕ್ಕೆ ಕಾರಣವಾಗಿರುವುದು. ಇವರು 'ಮನೆ ಮನೆಯಲ್ಲೂ ಬಾಂಬ್ ಹಿಡಿದಿರುವ ಪ್ರಗ್ಯಾ ಸಿಂಗ್ ಸೃಷ್ಟಿಯಾಗಲಿರುವಳು!' ಎಂದರಚುತ್ತಾ, ಕೋಮು ಹಿಂಸೆಯನ್ನು ಪ್ರಚೋದಿಸುವ ಉಗ್ರ ಭಾಷಣಗಳನ್ನು ಮಾಡುತ್ತಾ ರಾಜ್ಯಾದ್ಯಂತ ನಿರ್ಭಯವಾಗಿ ಓಡಾಡಲು ಸಾಧ್ಯವಾಗಿರುವುದು. ಇಂತಹ ಎರಡೆಳೆ ನಾಲಿಗೆಯ ನೀತಿಯಿಂದಾಗಿಯೇ ಮುತಾಲಿಕ, ಅತ್ತಾವರರಂತಹವರು ಪೋಲೀಸ್ ಬಂಧನದಲ್ಲಿದ್ದುಕೊಂಡೇ ತಾವು ಮಾಡಿದ ಕೆಲಸಕ್ಕೆ ತಾವೇ ಬೆನ್ನು ತಟ್ಟಿಕೊಳ್ಳುತ್ತಾ, 'ನಮ್ಮ ಈ ಕಾರ್ಯಕ್ರಮದ ಮೂಲಕ ಪಬ್ ಸಂಸ್ಕೃತಿಯ ಬಗ್ಗೆ ಜನತೆಯನ್ನು ಎಚ್ಚರಿಸಿದ್ದೇವೆ. ಆದ್ದರಿಂದ ನಮ್ಮ ಕೆಲಸ ಸಾರ್ಥಕವಾಗಿದೆ. ಮುಂದೆಯೂ ಇಂತಹ ಕಾರ್ಯಕ್ರಮಗಳು ಮುಂದುವರೆಯುತ್ತವೆ' ಎಂದು ಘೋಷಿಸಿಕೊಳ್ಳುವ ಧೈರ್ಯ ವಹಿಸಿರುವುದು. ನಿಮ್ಮ ಪೋಲೀಸ್ ಕಾರ್ಯಾಚರಣೆ ಇಂತಹದು! ಇದರ ಮೇಲೆ ಭಯೋತ್ಪಾದನೆಯ ವಿರುದ್ಧ ನಿಮ್ಮ ವಿದ್ಯಾರ್ಥಿ ಜಾಗೃತಿ ಆಂದೋಲನ ಬೇರೆ! ಇಂದು ಭಾರತದಲ್ಲಿ ಭಯೋತ್ಪಾದನೆ–ಶ್ರೀರಾಮ ಸೇನೆಯವರದೂ ಸೇರಿದಂತೆ–ವಿವಿಧ ರೂಪಗಳನ್ನು ತಾಳಿದೆಯೆಂದು ನಿಮಗೆ ಗೊತ್ತಿದೆಯಷ್ಟೆ? ಆದುದರಿಂದ, ಇದು ನಿಮ್ಮ ಎರಡೆಳೆ ನಾಲಿಗೆ ನೀತಿಯ ಇನ್ನೊಂದು ಅವತಾರವಷ್ಟೆ. ಇದರಲ್ಲೊಳಗೊಂಡಿರುವ ಜನ, ಈ ಸಂಬಂಧ ಕಾಲೇಜುಗಳಿಗೆ ಒದಗಿಸಿರುವ ಸಾಮಗ್ರಿಯ ವಿವರಗಳನ್ನು ನೋಡಿದರೆ, ಇದೊಂದು

ಭಯೋತ್ಪಾದನಾ ವಿರೋಧಿ ಆಂದೋಲನವಲ್ಲ; ಬದಲಿಗೆ, ಸಾರ್ವಜನಿಕರ ಹಣ ಬಳಸಿಕೊಂಡು ಸರ್ಕಾರದಿಂದ ಪ್ರಾಯೋಜಿತವಾದ ವಿದ್ಯಾರ್ಥಿಗಳ ಕೋಮುವಾದೀಕರಣ ಕಾರ್ಯಕ್ರಮ ಎಂಬುದು ಸ್ಪಷ್ಟವಾಗುವಂತಿದೆ. ಈಗಾಗಲೇ, ಇದರ ನೇತೃತ್ವ ವಹಿಸಬೇಕಾದ ಅಧ್ಯಾಪಕ ವೃಂದದಲ್ಲಿ ಈ ಬಗ್ಗೆ ಅಸಮಾಧಾನದ ಹೊಗೆ ಏಳಲಾರಂಭಿಸಿದೆ.

ಇದಕ್ಕೆ ಮುಖ್ಯ ಕಾರಣ, ಸಂಘ ಪರಿವಾರಕ್ಕೆ ಧರ್ಮ ಮತ್ತು ಸಂಸ್ಕೃತಿಗಳ ಬಗ್ಗೆ ಒಂದು ಸಂಕುಚಿತ ಮತ್ತು ಸ್ಥಿರವಾದ ಕಲ್ಪನೆ ಇರುವುದು. ಉದಾಹರಣೆಗೆ ಇವರ ಸಂಸ್ಕೃತಿಯ ವಿವರಣೆಗಾಗಿ, ಪಬ್ ದಾಳಿಯನ್ನು ಸಮರ್ಥಿಸಿಕೊಳ್ಳುತ್ತಾ ಪ್ರಮೋದ್ ಮುತಾಲಿಕ್ ಉಲ್ಲೇಖಿಸಿರುವ 'ಮಾತೃ ದೇವೋ ಭವ' ಎಂಬ ಮಾತನ್ನೇ ನೋಡಿ. ಏನಿದರ ಅರ್ಥ? ಹೆಣ್ಣು ತಾಯಿಯಾಗಿ ಮಕ್ಕಳನ್ನು ಹೆರುತ್ತಾ, ಸಾಕುತ್ತಾ ಮನೆಯಲ್ಲಿ ದೇವರಂತೆ ಪೂಜೆಗೆ ಒಳಗಾಗಿ ಕೂರಬೇಕೆಂದೆ? ಹಾಗೆ ಕೂತ ಹೆಣ್ಣು ಇಂತಹ ಮಂತ್ರ-ಶ್ಲೋಕ ಹೇಳುವವರ ನಿಯಂತ್ರಣಕ್ಕೆ ಸಿಕ್ಕಿ, ಆಧುನಿಕ ಕಾಲದ ಸಮಾಜ ಸುಧಾರಣಾ ಚಳುವಳಿ ಆರಂಭವಾಗುವ ತನಕ ಯಾವ ಯಾವ ವಿಧಿ-ನಿಷೇಧಗಳನ್ನು ಅನುಭವಿಸುತ್ತಾ, ಎಂತಹ ಸ್ಥಿತಿ ತಲುಪಿದ್ದರು ಎಂಬುದನ್ನು ನಮ್ಮ ಇತಿಹಾಸವೇ ತಿಳಿಸುತ್ತಿದೆ. ಸಂಘ ಪರಿವಾರದವರು ಸ್ವಲ್ಪ ಸಂವೇದನಾಶೀಲರಾಗಿ ಈ ಇತಿಹಾಸವನ್ನು ಓದಿಕೊಂಡರೆ ಒಳ್ಳೆಯದು. ಇಂದು ಮಹಿಳೆ ಸ್ವತಂತ್ರಳಾಗಿ, ಸಂಪ್ರದಾಯವಾದಿ ಸಮಾಜದ ಕಟ್ಟು ಕಟ್ಟಳೆಗಳನ್ನು ದಾಟಿ ಹೋಗಿದ್ದರೆ, ಅದಕ್ಕೆ ನಾವೇ ಪ್ರೀತಿಯಿಂದ ಆಹ್ವಾನಿಸಿ ಸಾಕುತ್ತಾ ಬಂದಿರುವ ಆಧುನಿಕತೆ ನಮ್ಮ ಒಟ್ಟಾರೆ ಸಮಾಜದ ನಿರೀಕ್ಷೆಯನ್ನೂ ಮೀರಿ ಬೆಳೆದಿರುವುದೇ ಕಾರಣವಾಗಿದೆ. ಹಾಗಾಗಿ ಅದನ್ನು ಇಡಿಯಾಗಿ ನಿಯಂತ್ರಿಸದೆ, ಮಹಿಳೆಯರ ಚಲನ-ವಲನಗಳನ್ನು ಮಾತ್ರ ನಿಯಂತ್ರಿಸ ಹೋಗುವುದು ಅವಿವೇಕವಷ್ಟೇ ಅಲ್ಲ, ಅನಾಗರೀಕವೂ ಆಗುತ್ತದೆ. ಇಂತಹ ಅನಾಗರೀಕತೆ, ಅನೇಕ ನೆಲೆಗಳಲ್ಲಿ ವಿಧಿ-ನಿಷೇಧ-ದಂಡನೆಗಳ ವಶಿಷ್ಠ ಸಂಪ್ರದಾಯವಾಗಿ ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಗತವಾಗಿ, ಬಹು ಕಾಲದಿಂದಲೂ ಬೆಳೆದು ಬಂದಿದೆ. ಅನೇಕ ರೀತಿಯ ಸಾಮಾಜಿಕ ಅನಾಹುತಗಳಿಗೆ ಮತ್ತು ಶೋಷಣೆಗಳಿಗೆ ಕಾರಣವಾಗಿದೆ. ಸಂಘ ಪರಿವಾರವು ಭಾರತೀಯ ಸಂಸ್ಕೃತಿಯ ಈ ಧಾರೆಯ ಪ್ರತಿನಿಧಿಯಾಗಿರುವುದರಿಂದಲೇ–ಭಾರತೀಯ ಸಂಸ್ಕೃತಿಯ ಉದಾರವಾದಿ ಬಹುಮುಖಿ ಧಾರೆಯನ್ನು ರಕ್ಷಿಸಿಕೊಳ್ಳುವ ದೃಷ್ಟಿಯಿಂದ–ಅದನ್ನು ಸದಾ ವಿಮರ್ಶೆಗೊಳಪಡಿಸಬೇಕಾದ, ಎದುರಿಸಬೇಕಾದ ಅನಿವಾರ್ಯತೆಯನ್ನುಂಟು ಮಾಡಿದೆ.

ಸಂಘ ಪರಿವಾರಕ್ಕೆ ನಿಜವಾಗಿ ಭಾರತೀಯ ಸಂಸ್ಕೃತಿಯಲ್ಲಿ ನಂಬಿಕೆ ಇದ್ದರೆ, ಅದರ ತಿರುಳು ಅದಕ್ಕೆ ಗೊತ್ತಿದ್ದರೆ, 'ಸರಳ ಜೀವನ, ಉನ್ನತ ಚಿಂತನ' ಎಂಬುದೇ ಈ ಸಂಸ್ಕೃತಿಯ ಧ್ಯೇಯ ವಾಕ್ಯ ಎಂದು ಅದು ಅರಿತಿರಬೇಕಿತ್ತು. ಆ ಆಧಾರದ ಮೇಲೆ ತನ್ನ ರಾಜಕಾರಣವನ್ನು ಕಟ್ಟಿಕೊಳ್ಳಬೇಕಿತ್ತು. ಆದರೆ ಜಗತ್ತಿಗೇ ಮಾರ್ಗದರ್ಶನ ಮಾಡುವ ಸಂಸ್ಕೃತಿ ಕುರಿತು ಮಾತಾಡುವ ಇವರು, ಜಾಗತೀಕರಣವಾದಿಗಳಂತೆಯೇ ಸ್ಪರ್ಧಾತ್ಮಕ ಜಗತ್ತಿನ ಹಿಂದೆ ಬಿದ್ದು;

'ಬಲಿಷ್ಠ ಭಾರತ'ವನ್ನು ಸೃಷ್ಟಿಸುವ ಧಾವಂತದಲ್ಲಿ ಈ ಧ್ಯೇಯ ವಾಕ್ಯವನ್ನೇ ಮರೆತು, ಕಣ್ಣು ಕುಕ್ಕುವ 'ಪ್ರಕಾಶಮಾನ ಭಾರತ'ವನ್ನು ಸೃಷ್ಟಿಸಿದ್ದಾಗಿ ಬೀಗಿದರು! ಈ 'ಪ್ರಕಾಶಮಾನ ಭಾರತ'ದ ವೈಶಿಷ್ಟ್ಯವೆಂದರೆ, ಕೆಲವು 'ಪುಣ್ಯವಂತ'ರ ಜೊತೆಗೆ ಕೆಲವು 'ಪುಣ್ಯವಂತೆ'ಯರಿಗೂ ಸ್ವತಂತ್ರವಾಗಿ ಸ್ವರ್ಗಸುಖವನ್ನು ಆಹ್ವಾನಿಸುವಂತಹ ಅಪಾರ ಆದಾಯದ ಅವಕಾಶ... ಅದೂ, ನಮ್ಮ ಸಂಸ್ಕೃತಿಯಾಗಲೀ, ಅದರಲ್ಲಿ ಮೂಡಿದ ವ್ಯಕ್ತಿತ್ವಗಳಾಗಲೀ ಜೀರ್ಣಿಸಿಕೊಳ್ಳಲಾಗದಷ್ಟು ಹಣ! ಅದನ್ನು ಅವರಾದರೂ ಏನು ಮಾಡಿಯಾರು? ಇದರ ಅನೇಕ ಪರಿಣಾಮಗಳ ಒಂದು ಸಣ್ಣ ಕಿಡಿಯಷ್ಟೇ ಪಬ್ ಸಂಸ್ಕೃತಿ!

ನಮ್ಮ ನಾಗರೀಕತೆಯಲ್ಲಿ 'ಹಣ' ಉತ್ಪತ್ತಿಯಾದದ್ದೇ 'ಸುಖ'ಕ್ಕಾಗಿ. ಈಗ ಅದು ಅತಿಯಾದ ಆಧುನಿಕತೆಗೆ ಸಿಕ್ಕಿ 'ಮಜಾ' ಆಗಿ ಪರಿವರ್ತಿತವಾಗಿದೆಯಷ್ಟೇ. ಕೆಲವರು ಈ ಹಡಬೆ ಹಣವನ್ನು ಅಧಿಕಾರ ಮತ್ತು ಪುಣ್ಯ ಸಂಪಾದನೆಗಳಿಗಾಗಿ ವೈಭವೋಪೇತ ಯಜ್ಞ-ಯಾಗ-ವಿಶೇಷ ಪೂಜೆ-ಪುನಸ್ಕಾರಗಳನ್ನು ನಡೆಸಿ 'ಮಜಾ' ಅನುಭವಿಸುತ್ತಾರೆ. ಇನ್ನು ಕೆಲವರು ಅದನ್ನು ಪಬ್ ಜೀವನ ಶೈಲಿಗಳಲ್ಲಿ ಉಡಾಯಿಸಿ 'ಮಜಾ' ತೆಗೆದುಕೊಳ್ಳುತ್ತಾರಷ್ಟೆ. ಇದು ತಮ್ಮ ಹಣವನ್ನು ರಾಜಕೀಯ ಅನಾಚಾರ ಅಥವಾ ಇತರೆ ಸಮಾಜ ವಿರೋಧಿ ಕೃತ್ಯಗಳಲ್ಲಿ ತೊಡಗಿಸುವುದಕ್ಕಿಂತ ಎಷ್ಟೋ ಉತ್ತಮವಲ್ಲವೆ? ಇದನ್ನು ತಡೆಯಲು ನೀವು ಯಾರು? ಒಮ್ಮೆ ಹಣ ಸಂಸ್ಕೃತಿಗೆ ನೀವು Yes ಎಂದರೆಂದರೆ, ಮುಂದೆ ಯಾವುದಕ್ಕೂ No ಎನ್ನಲಾರಿರಿ! No ಹೇಳಿದರೆ ಅದು ನಿಮ್ಮ ಚಿಂತನೆಯ ವಿರೋಧಾಭಾಸವಷ್ಟೆ, ಹಣ-ಸಂಸ್ಕೃತಿಯದಲ್ಲ. ಏಕೆಂದರೆ, ಮನಸ್ಸೆಂಬುದು ನಿಮಗಿರಬಹುದು, ಆದರೆ ಹಣಕ್ಕಿರುವುದಿಲ್ಲ. ಇದು ನಿಮಗೆ ಗೊತ್ತಾಗದಿದ್ದರೆ, ಭಾರತೀಯ ಸಂಸ್ಕೃತಿಯ ಎರಡು ಮುಖ್ಯ ಕಲ್ಪನೆಗಳಾದ 'ಪ್ರೇಯ' ಮತ್ತು 'ಶ್ರೇಯ'ಗಳನ್ನು ಕುರಿತು ಉಪನಿಷತ್ತುಗಳಲ್ಲಿ ಬರುವ ಚರ್ಚೆಯ ಮೇಲೊಮ್ಮೆ ಕಣ್ಣಾಡಿಸಿ!

ಆದುದರಿಂದ ಸಂಘ ಪರಿವಾರದ ನೈತಿಕ ಪಾರುಪತ್ತೇದಾರರೇ, ನಿಮ್ಮ ಈ ಪುಣ್ಯಭೂಮಿಯಲ್ಲಿ ಭಾರತೀಯ ಸಂಸ್ಕೃತಿಯನ್ನು ನೆಲೆಗೊಳಿಸುವ ಪವಿತ್ರ ಕಾರ್ಯಕ್ಕಾಗಿ ನೀವು ಮೊದಲು, ಶ್ರೀರಾಮ ಸೇನೆಯ ನಾಯಕರದೂ ಸೇರಿದಂತೆ ನಿಮ್ಮ ನಾಯಕ ಗಣದ ಆಸ್ತಿ- ಪಾಸ್ತಿ, ಅವರು ಪೋಷಿಸುತ್ತಿರುವ ಹಣ ಸಂಸ್ಕೃತಿಯ ನೈತಿಕ ಪಾರುಪತ್ತೇದಾರಿಕೆ ನಡೆಸಿ. ಅವರ ಬದುಕಿನ ಶೈಲಿಯನ್ನೊಮ್ಮೆ ಹತ್ತಿರದಿಂದ ಅವಲೋಕಿಸಿ. ನಿಮ್ಮ ಮುಖ್ಯಮಂತ್ರಿ, ಮಂತ್ರಿಗಳ ಊರುಗಳಲ್ಲಿ ಆಸ್ತಿ-ಪಾಸ್ತಿಗಳ ಬೆಲೆ ಏಕೆ ಯದ್ವಾ ತದ್ವಾ ಏರಿದೆ ಎಂಬುದನ್ನು ಸ್ವಲ್ಪ ಪರಿಶೀಲಿಸಿ. ಸಾಧ್ಯವಾದರೆ, Simple living high thinking ಎಂಬ ಭಾರತೀಯ ಸಂಸ್ಕೃತಿಯ ಕೇಂದ್ರ ಆಶಯವನ್ನು ನಿಮ್ಮ ಪರಿವಾರದಲ್ಲಿ ಬಿತ್ತಿ, ಇತರರಿಗೆ ಉದಾಹರಣೆಯಾಗಿ. ಆಗ ನೋಡುವಿರಂತೆ, ಭಾರತೀಯ ಬದುಕಿನಲ್ಲಿನ ಸಾಂಸ್ಕೃತಿಕ ಬದಲಾವಣೆಯ ಸ್ವರೂಪವನ್ನು!

ಆದರೆ ಸಂಘ ಪರಿವಾರ ತನ್ನ ಚಿಂತನೆಯ ಅಖಂಡತೆಯನ್ನು ಎಂದೋ ಕಳೆದುಕೊಂಡಿದೆ. ಅಥವಾ ಅದು ಹುಟ್ಟಿದುದೇ ಭಾರತೀಯ ಸಂಸ್ಕೃತಿ-ಅಖಂಡತೆಯ ಸೀಳು ನೋಟದಲ್ಲೇ. ಇತ್ತೀಚೆಗೆ ವಿಶ್ವವಿದ್ಯಾಲಯವೊಂದರ ಸಂಕಿರಣವೊಂದರಲ್ಲಿ ಗೋಲ್ವಾಲ್ಕರ್ ಬಗ್ಗೆ ಮಾತನಾಡುತ್ತಿದ್ದ ಸಂಘ ಪರಿವಾರದ ವಕ್ತಾರರೊಬ್ಬರು ಭಾರತೀಯತೆ ಎಂದರೆ ಏನೆಂಬುದನ್ನು ನಿರೂಪಿಸುತ್ತಾ, ಭಾರತದ ಭವ್ಯ ಪರಂಪರೆಯನ್ನು ತಮ್ಮದೆಂದು ಒಪ್ಪಿಕೊಂಡವರೇ ನಿಜವಾದ ಭಾರತೀಯರು ಎಂದು ಹೇಳಿದಾಗ, ನಾನು ಬುದ್ಧನನ್ನು ಈ ಪರಂಪರೆಯ ಭಾಗವೆಂದು ನೀವು ಒಪ್ಪಿಕೊಳ್ಳುತ್ತೀರಾ ಎಂದು ಕೇಳಬೇಕಾಯಿತು. ಅವರೇನೋ ತಕ್ಷಣವೇ ಉದಾರವಾಗಿ ಹೌದು ಎಂದು ಉತ್ತರಿಸಿದರು. ಆದರೆ ಹಾಗಾದರೆ ಗೋಲ್ವಾಲ್ಕರ್ ಸೇರಿದಂತೆ 'ಹಿಂದುತ್ವ'ವನ್ನು ನಿರೂಪಿಸುವ ನಿಮ್ಮ ತಾತ್ವಿಕರಾರೂ ಈ ಭಾರತೀಯ ಪರಂಪರೆಯ ಭಾಗವಾಗಿ ಬುದ್ಧನ ಬಗ್ಗೆ ಒಂದು ಮಾತನ್ನೂ ಆಡಿಲ್ಲವಲ್ಲ ಏಕೆ ಎಂದು ಕೇಳಿದರೆ ಅವರಿಂದ ಉತ್ತರವಿಲ್ಲ! ಅಷ್ಟೇ ಅಲ್ಲ, ಅಂದಿನ ಸಾವರ್ಕರರಿಂದ ಹಿಡಿದು ಇಂದಿನ ಪ್ರತಾಪ ಸಿಂಹನವರೆಗೆ ಇವರ ವಕ್ತಾರರನೇಕರ ಪ್ರಕಾರ; ಜಗತ್ತಿನ ಬೆಳಕು ಎಂದು ಕರೆಯಲ್ಪಡುವ ಬುದ್ಧ, ಇವರ ಭವ್ಯ ಭಾರತದ ಅವನತಿಗೆ ಕಾರಣನಾದನಂತೆ! ಏಕೆಂದರೆ ಬುದ್ಧ ತನ್ನ ವೈಚಾರಿಕ ಅಧ್ಯಾತ್ಮಿಕತೆಯ ಮೂಲಕ ಭಾರತದ ಪುರೋಹಿತಶಾಹಿ ರಾಜಕಾರಣಕ್ಕೆ–ಅದರ ಪಟ್ಟಭದ್ರ ಅಂಧ ಪರಂಪರೆಗೆ–ದೊಡ್ಡ ಆಘಾತವನ್ನುಂಟು ಮಾಡಿದ. ಅದರ ಪ್ರತಿಧ್ವನಿಗಳು ಇಂದೂ ಕೇಳಿಬರುತ್ತಿರುವುದು, ಬುದ್ಧನಿಲ್ಲದ ಭಾರತೀಯ ಪರಂಪರೆಯನ್ನು ಕಟ್ಟ ಹೊರಟಿರುವ ಸಂಘ ಪರಿವಾರದವರಿಗೆ ಸಹಿಸಲಸಾಧ್ಯವಾಗಿದೆ!

ಹೀಗೆ ಇವರು ನಮ್ಮ ಆವೃತ ಮತ್ತು ಪರಸ್ಪರ ಹಾಸುಹೊಕ್ಕಾದ ಧರ್ಮ, ಸಂಸ್ಕೃತಿ, ಪರಂಪರೆಗಳ ಅರ್ಥವನ್ನು ಅದರೆಲ್ಲ ವೈಚಾರಿಕ ಮತ್ತು ಉದಾರವಾದಿ ನೆಲೆಗಳಿಂದ ಮುಕ್ತಗೊಳಿಸಿ ಒಂದು ಕಠೋರ ಮಾದರಿಯ ಆಶಯ-ಆಲೋಚನೆ-ಆಶೋತ್ತರಗಳಿಗೆ ಸಂಕುಚಿತಗೊಳಿಸುವ ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಅದನ್ನು ಇತರೆಲ್ಲರ ಮೇಲೆ ಆದರ್ಶದ ರೂಪದಲ್ಲಿ ಹೇರತೊಡಗಿರುವ ಇವರ ರಾಜಕಾರಣ, ರಾಷ್ಟ್ರದ ಭಾವನಾತ್ಮಕ ಏಕತೆ ಹಾಗೂ ಲೌಕಿಕ ಮತ್ತು ಪಾರಮಾರ್ಥಿಕ ಏಳ್ಗೆಯ ದೃಷ್ಟಿಯಿಂದ ಅಪಾಯಕಾರಿಯೇ ಆಗಿದೆ. ಆದರೆ ಇವರ ಎರಡೆಳೆ ನಾಲಗೆ, ಈ ರಾಜಕಾರಣಕ್ಕೆ ಸಾಂಸ್ಕೃತಿಕ ರಾಷ್ಟ್ರೀಯತೆಯೆಂಬ ಬೆಡಗನ್ನು ನೀಡಿಬಿಟ್ಟಿದೆ. ಇದಕ್ಕೆ ತಕ್ಕುದಾಗಿ ಜಾಗತಿಕ ಮುಸ್ಲಿ ಮೂಲಭೂತವಾದ ಮತ್ತು ಭಯೋತ್ಪಾದನೆ ತಲೆ ಎತ್ತಿ ಇವರ ರಾಜಕಾರಣಕ್ಕೆ ಸಾಂದರ್ಭಿಕ ಪೋಷಣೆಯನ್ನೂ ಒದಗಿಸಿಬಿಟ್ಟಿದೆ. ಇದನ್ನು ವಿವರಿಸುವವರನ್ನೂ, ಈ ಬಗ್ಗೆ ಎಚ್ಚರಿಸುವವರನ್ನೂ ಹಿಂದೂ ವಿರೋಧಿಗಳೆಂದೂ, ಬುದ್ಧಿಜೀವಿಗಳೆಂದೂ ಹೆಸರಿಸಿ ಹೀಗೆಳೆಯುವ ಪ್ರಚಾರಾಂದೋಲನವನ್ನೂ ಇವರು ಆರಂಭಿಸಿದ್ದಾರೆ. ಆದರೆ ಇಂತಹ ಆಂದೋಲನ, ಬುದ್ಧಿಗೇಡಿಗಳ ರಾಷ್ಟ್ರವನ್ನು ಮಾತ್ರ ನಿರ್ಮಿಸಬಲ್ಲುದು ಎಂದು ಇವರಿಗೆ ಹೇಳ ಬಲ್ಲವರಾದರೂ ಯಾರು?

ಭಾರತದ ರಾಜಕಾರಣ, ನಿರ್ದಿಷ್ಟವಾಗಿ ಕರ್ನಾಟಕದ ರಾಜಕಾರಣ ನಿಜವಾಗಿ ಇಂದು ಕವಲು ದಾರಿಯಲ್ಲಿದ್ದಂತಿದೆ. ಭಾಜಪದಲ್ಲಿನ ಉದಾರವಾದಿಗಳೇ, ಕಾಂಗ್ರೆಸ್ಸಿಗರೇ, ದೇವೇಗೌಡರೇ, ಇದು ರಾಷ್ಟ್ರದ ಮತ್ತು ನಿರ್ದಿಷ್ಟವಾಗಿ ರಾಜ್ಯದ ಹಿತ ದೃಷ್ಟಿಯಿಂದ ನೀವೆಲ್ಲರೂ ನಿಜವಾಗಿ ಎಚ್ಚೆತ್ತುಕೊಳ್ಳಬೇಕಾದ ಕಾಲ!

(೧೩ ಫೆಬ್ರುವರಿ, ೨೦೦೮)

■

೩೮. ಒಂದು 'ಚರಕ'ದ ಕಥೆ!

ಈ ಬರಹವನ್ನು ಈಗ್ಗೆ ಎರಡು ವಾರಗಳ ಹಿಂದೆಯೇ ಬರೆಯಬೇಕಿತ್ತು. ಆದರೆ ಅದೇ ಸಮಯದಲ್ಲಿ ಅಕಸ್ಮಾತ್ತಾಗಿ 'ಸಮಾಜ ವಿಜ್ಞಾನಿ' ಬಾಲಗಂಗಾಧರರೊಂದಿಗೆ ಮುಖಾಮುಖಿಯಾಗ ಬೇಕಾಗಿ ಬಂದು, ಅದನ್ನು ದಾಖಲಿಸುವ ತುರ್ತಿನಲ್ಲಿ ಆಗಲಿಲ್ಲ. ಈಗ ನಾನು ಬರೆಯ ಹೊರಟಿರುವುದು ಹೆಗ್ಗೋಡಿನ 'ಚರಕ'ದ ಬಗ್ಗೆ. ಎರಡು ವಾರಗಳ ಹಿಂದೆ, ಅಂದರೆ ಇದೇ ಜನವರಿ ೧೬, ೧೭ ಹಾಗೂ ೧೮ರಂದು ಅಲ್ಲಿ ನಡೆದ 'ಚರಕ ಉತ್ಸವ-೨೦೦೯'ರಲ್ಲಿ ಸಕ್ರಿಯವಾಗಿ ಪಾಲ್ಗೊಂಡ ನಾನು ಅದರ ಅರ್ಥಪೂರ್ಣತೆಯನ್ನೂ, ಸಂಭ್ರಮೋಲ್ಲಾಸಗಳನ್ನೂ ಆ ಸಂದರ್ಭದಲ್ಲೇ ದಾಖಲಿಸಬೇಕಿತ್ತು. ಅದನ್ನೀಗ ಮಾಡುತ್ತಿದ್ದೇನೆ.

ಹೆಗ್ಗೋಡು ಎಂದಾಕ್ಷಣ ನಮಗೆ ನೆನಪಾಗುವುದು ನೀನಾಸಂ. ಅದು ಸಹಜ ಕೂಡ. ಅದಕ್ಕೆ ಮೂರ್ನಾಲ್ಕು ದಶಕಗಳಲ್ಲಿ ಕಟ್ಟಿಕೊಂಡ ಖ್ಯಾತಿಯ ಹಿನ್ನೆಲೆಯಿದೆ. ಅದರ ಹಿಂದೆ ಕೆ.ವಿ.ಸುಬ್ಬಣ್ಣ ಎಂಬ ಧೀಮಂತರ ದಟ್ಟ ನೆನಪಿದೆ. ಮಲೆನಾಡಿನ ಮೂಲೆಯ ಕುಗ್ರಾಮವೊಂದನ್ನು ಕೇಂದ್ರವಾಗಿಸಿಕೊಂಡು ರಂಗಭೂಮಿ ಮತ್ತು ಚಲನಚಿತ್ರ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಅವರು ಮಾಡಿದ ಅಪೂರ್ವ ಕೆಲಸಗಳ ದಾಖಲೆಯಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಪ್ರತಿ ವರ್ಷ ಅದು ನಡೆಸುವ 'ಸಂಸ್ಕೃತಿ ಶಿಬಿರ'ದ ಅಡಿಯಲ್ಲಿ ದೇಶಾದ್ಯಂತ ವಿದ್ವಾಂಸರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸಿ ಮತ್ತು ಕರ್ನಾಟಕದಾದ್ಯಂತ ವಿವಿಧ ಹಿನ್ನೆಲೆ ಹಾಗೂ ವಯೋಮಾನಗಳ ಶಿಬಿರಾರ್ಥಿಗಳನ್ನು ಆಕರ್ಷಿಸಿ ನಡೆಸುವ ಚರ್ಚೆಗಳು, ನಾಟಕ-ಸಿನೆಮಾ ಪ್ರದರ್ಶನಗಳು ಒಂದು ಅಪೂರ್ವ ಸಾಂಸ್ಕೃತಿಕ ಘಟನೆಯೇ ಸರಿ. ಆದರೆ ಇಲ್ಲಿ ನಡೆಯುವ ಚರ್ಚೆಗಳ ವಿಷಯ, ಅವನ್ನು ಸಂಘಟಿಸುವ ರೀತಿ, ಅವುಗಳ ಹಿಂದಿನ ಅತಿ ಬೌದ್ಧಿಕತೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅದರ ಚಟುವಟಿಕೆಗಳ ಹಿಂದಿನ ಖಾಸಗಿತನ ಕೆಲವರ ಟೀಕೆಗೆ ಗುರಿಯಾಗಿರುವುದೂ ಉಂಟು.

ಇದಕ್ಕೆ ಎಲ್ಲ ಅರ್ಥಗಳಲ್ಲಿ ಸಮಾನಾಂತರವಾಗಿ ನಡೆಯುತ್ತಿರುವ ಸಂಸ್ಥೆ ಚರಕ. ಇದೊಂದು ಗ್ರಾಮೀಣ ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘ. ಇದರ ಮುಖ್ಯ ಉದ್ದೇಶ, ಕೈಮಗ್ಗ ಕೈಗಾರಿಕೆಯ ಮೂಲಕ ಗ್ರಾಮೀಣ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡಿ ಅವರ ವ್ಯಕ್ತಿತ್ವವನ್ನು ಬೆಳೆಸುವುದು. ಎಂಬತ್ತರ ದಶಕದಲ್ಲಿ ನೀನಾಸಂ ಭಾಗವಾಗಿಯೇ ಇದ್ದುಕೊಂಡು ನಾಟಕ ನಿರ್ದೇಶನ, ಬರವಣಿಗೆ, ಮರಗೆಲಸ ಇತ್ಯಾದಿಗಳಲ್ಲಿ ತೊಡಗಿಕೊಂಡಿದ್ದ

ಹಿರಿಯ ರಂಗಕರ್ಮಿ ಪ್ರಸನ್ನ ಅವರ ಕನಸಿನ ಕೂಸಿದು. ತೊಂಭತ್ತರ ದಶಕದ ಹೊತ್ತಿಗೆ ನೀನಾಸಂ ತನ್ನ ವ್ಯಕ್ತಿತ್ವಕ್ಕೆ ಒಗ್ಗದ ಸಂಸ್ಥೆಯೆಂದು ಕಂಡುಕೊಂಡ ಪ್ರಸನ್ನ, ತಮ್ಮ ಚಟುವಟಿಕೆಗಳ ವಿಸ್ತರಣೆಯಾಗಿ ಚರಕ ಸ್ಥಾಪಿಸಿದರು. ನೀನಾಸಂನಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ಭೀಮನಕೋಣೆಯ ಗುಡ್ಡವೊಂದರ ಮೇಲೆ ಪಾಳು ಬಿದ್ದಿದ್ದ ಸರ್ಕಾರಿ ಕೈಗಾರಿಕಾ ಷೆಡ್ಡೊಂದನ್ನು ೧೯೯೬ರಲ್ಲಿ, ಆಗಿದ್ದ ಜನಪರ ಅಧಿಕಾರಿಗಳ ಸಹಾಯದಿಂದ ಪಡೆದುಕೊಂಡ ಅವರು; ಸರ್ಕಾರಿ ಯೋಜನೆಯೊಂದರಡಿಯಲ್ಲಿಯೇ ಅಲ್ಲಿ ಮಹಿಳೆಯರಿಗಾಗಿ ಹೊಲಿಗೆ ತರಬೇತಿ ಕೇಂದ್ರವೊಂದನ್ನು ಆರಂಭಿಸಿದರು. ಅದೀಗ ೨೬೭ ಜನ ಗ್ರಾಮೀಣ ಮಹಿಳೆಯರಿಗೆ, ಕೈಮಗ್ಗ ಮತ್ತು ಉಡುಪು ತಯಾರಿಕಾ ಕೌಶಲ್ಯಗಳನ್ನು ಕಲಿಸುವ ಮೂಲಕ ಉದ್ಯೋಗ ಒದಗಿಸಿದೆ. ಅದಕ್ಕಿಂತ ಮುಖ್ಯವಾಗಿ, ಗ್ರಾಮೀಣ ಪ್ರದೇಶದಲ್ಲಿ ಸಹಕಾರ ಸಂಸ್ಥೆಯೊಂದು ಹೇಗೆ ಮಹಿಳೆಯರಿಂದಲೇ ದಕ್ಷವಾಗಿ ಹಾಗೂ ಪರಿಣಾಮಕಾರಿಯಾಗಿ ಕೆಲಸ ಮಾಡುವುದರೊಂದಿಗೆ ವ್ಯಕ್ತಿತ್ವ ನಿರ್ಮಾಣದಲ್ಲೂ ಭಾಗಿಯಾಗಬಹುದೆಂಬುದಕ್ಕೆ ಅದು ಸಾಕ್ಷಿಯಾಗಿದೆ. ಏಕೆಂದರೆ ಅಲ್ಲಿ ಸಾಧಿತವಾಗಿರುವುದು ಆರ್ಥಿಕ ಸ್ವಾವಲಂಬನೆ ಮಾತ್ರವಲ್ಲ, ವ್ಯಕ್ತಿತ್ವ ಸ್ವಾಯತ್ತತೆಯ ವಿಕಾಸ ಕೂಡ. ಇದು ಮಹಿಳಾ ಸಹಕಾರ ಸಂಘವಾದರೂ, ಇಲ್ಲಿ ಮಹಿಳೆಯರಿಗೆ ಬೆಂಬಲವಾಗಿ ೩೬ ಜನ ಪುರುಷರೂ ಕೆಲಸ ಮಾಡುತ್ತಿದ್ದಾರೆ. ಆದರೆ ಅವರದೇನಿದ್ದರೂ ಬೆಂಬಲದ, ಪ್ರೇರಣೆಯ, ಪ್ರೋತ್ಸಾಹದ ಕೆಲಸ ಮಾತ್ರ! ಆಡಳಿತದ ಮುಂಚೂಣಿಯಲ್ಲಿರುವವರೆಲ್ಲ ಮಹಿಳೆಯರೇ.

ಸಾಮಾಜಿಕ ನ್ಯಾಯವನ್ನೂ ಗಮನದಲ್ಲಿಟ್ಟುಕೊಂಡು ಮೂರು ವರ್ಷಗಳಿಗೊಮ್ಮೆ ಒಂಭತ್ತು ಸದಸ್ಯರ ತನ್ನ ನಿರ್ದೇಶಕ ಮಂಡಳಿಯನ್ನೂ, ಅಧ್ಯಕ್ಷರನ್ನೂ ಮತ್ತು ಕಾರ್ಯದರ್ಶಿಯನ್ನೂ ಚುನಾವಣೆಗಳ ಮೂಲಕ ಆಯ್ದುಕೊಳ್ಳುವ ಚರಕದ ಸದಸ್ಯರು, ವರ್ಷಕ್ಕೊಮ್ಮೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸುತ್ತಾರೆ. ಇದಲ್ಲದೆ ಆಗಾಗ್ಗೆ ನಡೆಯುವ ನಿರ್ದೇಶಕ ಮಂಡಳಿಯ ಸಭೆಗಳ ಮೂಲಕ ತಮ್ಮ ಸಂಬಳ-ಸಾರಿಗೆ, ನೇಮಕಾತಿ, ಸಿಬ್ಬಂದಿ ಶಿಸ್ತು, ಉತ್ಪಾದನೆ, ದರ ನಿಗದಿ, ಮಾರಾಟ, ಅಭಿವೃದ್ಧಿ ಮತ್ತು ಸಂಶೋಧನೆ ಇತ್ಯಾದಿಗಳಿಗೆ ಸಂಬಂಧಪಟ್ಟ ಆಡಳಿತವನ್ನು ತಾವೇ ನಿರ್ವಹಿಸಿಕೊಳ್ಳುತ್ತಾರೆ. ಹೀಗಾಗಿ ಇಲ್ಲಿ ಎಲ್ಲ ವ್ಯವಹಾರಗಳೂ ಸಾರ್ವಜನಿಕ. ಕೇಂದ್ರದ ಜವಳಿ ಖಾತೆಯಿಂದ ಮತ್ತು ರಾಜ್ಯದ ಜಿಲ್ಲಾ ಪಂಚಾಯ್ತಿನಿಂದ ಕೈಮಗ್ಗ ಅಭಿವೃದ್ಧಿ ಯೋಜನೆಗಳಡಿ ದೊರೆಯುವ ಸಣ್ಣ ಪ್ರಮಾಣದ ಅನುದಾನದ ಹೊರತಾಗಿ ಇನ್ನಾವ ಹೊರಗಿನ ಸಹಾಯವನ್ನೂ ಪಡೆಯದ ಈ ಸಂಘ, ತನ್ನ ಹಣಕಾಸಿನ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಸದಾ ಲಾಭದಲ್ಲಿರುವುದು ಅದರ ಯಶಸ್ವೀ ಆಡಳಿತ ಶೈಲಿಯ ಸಂಕೇತವಾಗಿದೆ. ಸದಸ್ಯರು ತಂತಮ್ಮಲ್ಲೇ ಹತ್ತು ಸ್ವಸಹಾಯ ಸಂಘಗಳನ್ನು ಮಾಡಿಕೊಂಡಿದ್ದು ಅವುಗಳಿಂದ ಸಾಲ ಸೌಲಭ್ಯಗಳನ್ನೂ ಪಡೆದುಕೊಳ್ಳುತ್ತಿದ್ದಾರೆ.

ವರ್ಷೇ ವರ್ಷೇ ತನ್ನ ಕೆಲಸಗಾರರ ಸಂಖ್ಯೆಯ ಜೊತೆಗೆ ತನ್ನ ವಹಿವಾಟು ಹಾಗೂ ಲಾಭದ ಪ್ರಮಾಣವನ್ನೂ ಹೆಚ್ಚಿಸಿಕೊಳ್ಳುತ್ತಿರುವ ಚರಕ, ಈಗ ತಿಂಗಳಿಗೆ ಒಂಬತ್ತು ಲಕ್ಷ

ರೂಪಾಯಿಗಳ ವಹಿವಾಟು ಮತ್ತು ಸುಮಾರು ಎರಡು ಲಕ್ಷ ರೂಪಾಯಿಗಳ ಲಾಭ ಗಳಿಸುತ್ತಿದೆ. ಈ ಲಾಭವನ್ನು ಸಿಬ್ಬಂದಿಗೆ ರಿಯಾಯ್ತಿ ದರದಲ್ಲಿ ಊಟ, ಚಹಾ-ಕಾಫಿ-ಕಷಾಯಗಳ ಸೌಲಭ್ಯ, ಪ್ರಾವಿಡೆಂಟ್ ನಿಧಿ, ವಾರ್ಷಿಕ ಅರ್ಧ ತಿಂಗಳ ಸಂಬಳದಷ್ಟು ಬೋನಸ್, ಚರಕಾ ಉತ್ಸವಗಳ ಖರ್ಚು ಇತ್ಯಾದಿಗಳಲ್ಲದೆ ಸಂಸ್ಥೆಯ ಅಭಿವೃದ್ಧಿ ಚಟುವಟಿಕೆಗಳಿಗೂ ಬಳಸಲಾಗುತ್ತದೆ. ಈ ವರ್ಷ ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರ ನೆನಪಿನಲ್ಲಿ ಗುಡ್ಡದ ಮೇಲೆ ಬಯಲು ರಂಗ ಮಂದಿರವೊಂದನ್ನೂ, ವಿಚಾರವಾದಿ ಕೆ. ರಾಮದಾಸ್ ಅವರ ನೆನಪಿನಲ್ಲಿ ಅವರ ಮಗಳು ಸ್ನೇಹ ಮತ್ತು ಅಳಿಯ ಓಂಕಾರ್ ನೀಡಿರುವ ನಿಧಿಯೊಂದರ ನೆರವಿನಿಂದ ಚರಕದ ಆವರಣದಲ್ಲೇ ಕೈಮಗ್ಗ ಅಭಿವೃದ್ಧಿ ಘಟಕವನ್ನೂ ಸ್ಥಾಪಿಸಲು ಅಡಿಗಲ್ಲು ಹಾಕಲಾಗಿದೆ.

ನಾನು ಕಳೆದ ಮೂರು ವರ್ಷಗಳಿಂದ ಚರಕಕ್ಕೆ ಆಗಾಗ್ಗೆ ಭೇಟಿ ನೀಡುತ್ತಿರುತ್ತೇನೆ. ಪ್ರಸನ್ನ ನನ್ನ ಮೂರು ದಶಕಗಳ ಗೆಳೆಯ. ಎಪ್ಪತ್ತರ ದಶಕದಲ್ಲಿ ಕಟ್ಟಾ ಮಾರ್ಕ್ಸ್‌ವಾದಿಯಾಗಿ, ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಸದಸ್ಯರೂ ಆಗಿದ್ದ ಅವರು, 'ಸಮುದಾಯ' ಎಂಬ ಆ ಕಾಲದ ಅತ್ಯಂತ ಪ್ರಭಾವಿ ಸಾಂಸ್ಕೃತಿಕ ಸಂಘಟನೆಯನ್ನು ಕಟ್ಟಿದವರು. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಅನೇಕ ಅಪೂರ್ವ ರಂಗ ಪ್ರಯೋಗಗಳನ್ನು ಮಾಡಿ ಪ್ರತಿಭಾವಂತ ರಂಗ ನಿರ್ದೇಶಕ ಎಂದು ಹೆಸರು ಮಾಡಿದವರು. ಆದರೆ ತೊಂಬತ್ತರ ದಶಕದ ಹೊತ್ತಿಗೆ ಮಾರ್ಕ್ಸ್‌ವಾದದ 'ಅಪೂರ್ಣತೆ'ಯನ್ನು ಕಂಡುಕೊಂಡು, ಭಾರತೀಯ ಬದುಕಿನ 'ವಾಸ್ತವ' ಸತ್ಯಕ್ಕಾಗಿ ಗಾಂಧಿ ವಿಚಾರಗಳಿಂದ ಹಿಡಿದು ರಮಣ ಮಹರ್ಷಿಗಳ ಉಪದೇಶಗಳವರೆಗೆ ಅಲೆದವರು. ಇದರ ಫಲವಾಗಿ ದೇಶೀ ಚಿಂತನೆಯೆಡೆಗೆ ಆಕರ್ಷಿತರಾಗಿ, ದೇಸೀ ಜೀವನ ಪದ್ಧತಿಯಲ್ಲಿ ಪ್ರಯೋಗ ಮಾಡ ಹೊರಟವರು.

ಮೂರು ದಶಕಗಳ ಹಿಂದೆ ಪ್ರಸನ್ನರೊಂದಿಗೆ ಇದ್ದ ನನ್ನ ತಾತ್ವಿಕ ಜಗಳಗಳು ಈಗ ಒಂದು ತಹಬಂದಿಗೆ ಬಂದಿದೆ. ಅದಕ್ಕೆ ಕಾರಣ, ಅವರ ಈ ಚರಕ. ಕಳೆದ ಮೂರು ದಶಕಗಳಲ್ಲಿ ಅವರಲ್ಲಿ ನಾನು ಕಾಣುತ್ತ ಬಂದ ತಾತ್ವಿಕ ಹಾಗೂ ವೈಯುಕ್ತಿಕ ದೌರ್ಬಲ್ಯಗಳೆಲ್ಲವನ್ನೂ ಇದು ಮುಚ್ಚಿ ಹಾಕಿದೆ. ನಾವೆಲ್ಲ ಮಾತಾಡುತ್ತೇವೆ; ಬದಲಾವಣೆಯ ಸಾಧ್ಯತೆಗಳ ಬಗ್ಗೆ ನಿರಂತರ ಬೌದ್ಧಿಕ ವಿಶ್ಲೇಷಣೆ ನಡೆಸುತ್ತೇವೆ. ಅದರೆ ಪ್ರಸನ್ನ ಮಾಡಿ ತೋರಿಸಿದ್ದಾರೆ! ಚರಕದ ವಿಚಾರ ತಮ್ಮ ಮನಸ್ಸಿನಲ್ಲಿ ಮೂಡಿದ್ದು, ಮಲೆನಾಡಿನಲ್ಲಿ ಕೈಗಾರಿಕೆಗಳೇ ಇಲ್ಲದೆ ಜನ ಕೃಷಿಗಾಗಿ ಒಂದೇ ಸಮನೆ ಕಾಡನ್ನು ಕಡಿಯತೊಡಗಿದ್ದನ್ನು ಗಮನಿಸಿದಾಗ ಎನ್ನುವ ಪ್ರಸನ್ನ, ಬಟ್ಟೆ ಕೈಗಾರಿಕೆಯೇ ಗ್ರಾಮೀಣ ಆರ್ಥಿಕತೆಗೆ ನಿಜವಾದ ಆಧಾರವಾಗಬಲ್ಲುದು ಎಂಬ ಗಾಂಧಿ ನಂಬಿಕೆಯ ಸ್ಫೂರ್ತಿಯಿಂದ ಈ ಸಂಸ್ಥೆಯನ್ನು ಕಟ್ಟಿದ್ದಾರೆ. ನೇಕಾರಿಕೆಯ ಪರಂಪರೆಯೇ ಇಲ್ಲದೆಡೆ ಅದನ್ನು ಒಂದು ಜಾತಿ ಮೀರಿದ ವೃತ್ತಿಯನ್ನಾಗಿ ಇಲ್ಲಿ ಪರಿಚಯಿಸಿದ್ದಾರೆ. ಇದು ನಮ್ಮ ಗ್ರಾಮ ಜೀವನ ಸಂಸ್ಕೃತಿಯ ಸರಳ ಲಯವನ್ನೂ, ನಿರಾಳ ಚೆಲುವನ್ನೂ ಭಂಗಗೊಳಿಸದ ರೀತಿಯಲ್ಲಿ ನಮ್ಮ ಕಣ್ಮುಂದೆಯೇ ಉದ್ಯೋಗ ನಿರ್ಮಾಣ ಮಾಡತೊಡಗಿದೆ. ಭೀಮನಕೋಣೆಯ ಆಸುಪಾಸಿನ ಹಳ್ಳಿಗಳ ಹುಡುಗಿಯರು ಉದ್ಯೋಗ ಹುಡುಕಿಕೊಂಡು

ನಗರಗಳಿಗೆ ವಲಸೆ ಹೋಗಿರುವ ಉದಾಹರಣೆ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ ಇದ್ದರೆ, ಅದರ ಕೀರ್ತಿ ಚರಕಕ್ಕೇ ಸಲ್ಲಬೇಕು.

ಚರಕ ಕಾರ್ಯತಃ ಒಂದು ಕೈಮಗ್ಗ ಹಾಗೂ ಹೊಲಿಗೆ ಕೇಂದ್ರ. ಇದು ಸುತ್ತಮುತ್ತಲ ನಾಲ್ಕಾರು ಹಳ್ಳಿಗಳಲ್ಲಿ ಸ್ಥಾಪಿಸಲಾಗಿರುವ ತನ್ನದೇ ೫೫ ಮಗ್ಗಗಳಿಂದಲ್ಲದೆ ದಾವಣಗೆರೆ, ಜಗಳೂರು, ಗಜೇಂದ್ರಗಡ ಮತ್ತು ಮಹಾಲಿಂಗಪುರಗಳಲ್ಲಿನ ಸ್ಥಳೀಯ ಕೈಮಗ್ಗ ಸಂಘಗಳ ಸುಮಾರು ೪೫ ಮಗ್ಗಗಳಿಂದ ನೇಯ್ದ ಬಟ್ಟೆ ಪಡೆಯುತ್ತದೆ. ಅದರಿಂದ ಹೆಂಗಸರ ಮತ್ತು ಗಂಡಸರ ವಿವಿಧ ರೀತಿಯ ಉಡುಪುಗಳು, ಕೌದಿ ಇತ್ಯಾದಿ ಹಾಸಿಗೆ ಬಟ್ಟೆಗಳು, ವೈವಿಧ್ಯಮಯ ಚೀಲಗಳು, ಕಛೇರಿ ಕಡತ ಕವಚಗಳೂ ಸೇರಿದಂತೆ ಸುಮಾರು ೫೬ ಮಾದರಿಯ ಉತ್ಪನ್ನಗಳನ್ನು ತಯಾರು ಮಾಡುತ್ತದೆ. ಬೆಂಗಳೂರು, ಸಾಗರ, ಧಾರವಾಡಗಳಲ್ಲಿರುವ ತನ್ನ 'ದೇಸಿ' ಹೆಸರಿನ ಅಂಗಡಿಗಳ ಮೂಲಕ ಈ ಉತ್ಪನ್ನಗಳು ಮಾರಾಟವಾಗುತ್ತವೆ. ತಿಂಗಳಲ್ಲಿ ೧೩ ಸಾವಿರ ಮೀಟರ್ ಬಟ್ಟೆಯನ್ನು ಬಳಸುವ ಚರಕ, ಬಟ್ಟೆಯ ನೇಯ್ಗೆ, ನುಣುಪು, ಬಣ್ಣ ತಯಾರಿಕೆ, ವರ್ಣ ಮತ್ತು ವಸ್ತು ವಿನ್ಯಾಸಗಳನ್ನು ಕೆಲವು ಪರಿಣತರ ಮಾರ್ಗದರ್ಶನದಲ್ಲಿ ತಾನೇ ನಿರ್ವಹಿಸುತ್ತದೆ. ಚರಕದಲ್ಲಿ ತಯಾರಾಗಿ ದೇಸಿ ಮುದ್ರೆಯೊಂದಿಗೆ ಮಾರಾಟವಾಗುವ ಈ ಉತ್ಪನ್ನಗಳ ಹೆಗ್ಗಳಿಕೆಯೆಂದರೆ, ಅವುಗಳ ರಾಜಿಯಿಲ್ಲದ ಗುಣಮಟ್ಟ. ನೇಯ್ಗೆ, ವರ್ಣ ವಿನ್ಯಾಸ, ಕತ್ತರಿಸುವಿಕೆ ಮತ್ತು ಹೊಲಿಗೆ–ಈ ಎಲ್ಲ ಹಂತಗಳಲ್ಲಿ ಕಟ್ಟುನಿಟ್ಟಿನ ಗುಣಮಟ್ಟ ನಿಯಂತ್ರಣವನ್ನು ಇಲ್ಲಿ ಕೈಗೊಳ್ಳಲಾಗುತ್ತದೆ. ಅಂತಿಮವಾಗಿ ಮಾರಾಟಕ್ಕೆ ಕಳಿಸುವ ಪ್ರತಿಯೊಂದು ಉತ್ಪನ್ನವನ್ನೂ ಗುಣಮಟ್ಟ ಪರಿಶೀಲನೆಗೆ ಒಳಪಡಿಸುವುದು ಚರಕದ ವಿಶೇಷ ಎಂದೇ ಹೇಳಬಹುದು. ಹಾಗಾಗಿಯೇ ಈ ದೇಸಿ ಉತ್ಪನ್ನಗಳಿಗೆ ಎಲ್ಲಿಲ್ಲದ ಬೇಡಿಕೆ. ಎಂದೂ ಯಾವುದೇ ಉತ್ಪನ್ನದ ದಾಸ್ತಾನು ಉಳಿಯದ ದಾಖಲೆ ದೇಸಿಯದು!

ಇಷ್ಟೊಂದು ಬೇಡಿಕೆ ಇರುವಾಗ ರಾಜ್ಯಾದ್ಯಂತ ಅಥವಾ ರಾಷ್ಟ್ರಾದ್ಯಂತ ಮಾರಾಟ ಕೇಂದ್ರಗಳನ್ನು ಏಕೆ ತೆರೆಯಬಾರದು? ತೆರೆಯಬಹುದು. ಆದರೆ ಅವುಗಳ ಬೇಡಿಕೆಯನ್ನು ಪೂರೈಸುವುದು ಹೇಗೆ? ಚರಕದ ವಿಶಿಷ್ಟತೆ ಇರುವುದೇ ಇಲ್ಲಿ. ಅದು ಬೃಹತ್ ಉದ್ಯಮವಾಗಿ ಬೆಳೆಯುವ ಆಕಾಂಕ್ಷೆಯನ್ನೇ ಹೊಂದಿಲ್ಲ. ಹಾಗೆ ನೋಡಿದರೆ, ಅದರ ಹುಟ್ಟೇ ಹಾಗಿದೆ. ಅದು ತನ್ನನ್ನು ತಾನೇ ಮೀರಿ ಹೋಗದ ಅಂಕೆ-ಶಂಕೆಗಳಲ್ಲಿ ಕೆಲಸ ಮಾಡುತ್ತದೆ. ತಾನೇ ಎಲ್ಲ ಕಡೆ ಬೆಳೆದು ಹರಡುವ ಬಂಡವಾಳಶಾಹಿ ಉದ್ಯಮವಾಗಲು ನಿರಾಕರಿಸಿದೆ. ಮಾನವ ಸಂಪನ್ಮೂಲದ ಸ್ವರೂಪ, ಬಣ್ಣಗಾರಿಕೆ ಹಾಗೂ ವಸ್ತ್ರ ವಿನ್ಯಾಸ ಸೇರಿದಂತೆ ಉತ್ಪಾದನೆಯ ತಾಂತ್ರಿಕತೆ ಮತ್ತು ಆಡಳಿತ ಶೈಲಿ–ಈ ಎಲ್ಲ ವಿಷಯಗಳಲ್ಲಿ ಸ್ಥಳಿಯ ವೈಶಿಷ್ಟ್ಯವನ್ನೇ ನಂಬಿ ಬೆಳೆದಿರುವ ಚರಕ, ಈ ಸ್ಥಳೀಯತೆಯೇ ತನ್ನ ಶಕ್ತಿ, ಯಶಸ್ಸಿನ ಗುಟ್ಟು ಎಂದು ಅರಿತಿದೆ. ಒಮ್ಮೆ ಈ ಸ್ಥಳೀಯತೆಯನ್ನು ಉಲ್ಲಂಘಿಸಿದರೆ, ಎಲ್ಲವೂ ಕುಸಿಯಲಿದೆ ಎಂಬ ಎಚ್ಚರವೂ ಅದಕ್ಕಿದೆ.

ಹಾಗಾಗಿಯೇ ಚರಕ; ತನ್ನ ಯಶಸ್ಸನ್ನೂ, ಲಾಭವನ್ನೂ ಬಂಡವಾಳ ಮಾಡಿಕೊಂಡು ಎಲ್ಲ ಕಡೆ ಹರಡಿಕೊಳ್ಳುವ ಪ್ರಯತ್ನ ಮಾಡಿಲ್ಲ. ಬದಲಿಗೆ, ರಾಜ್ಯದ ಹಲವು ಕಡೆ ಸರ್ಕಾರದ ದೋಷಪೂರ್ಣ ನೀತಿ, ಭ್ರಷ್ಟಾಚಾರ ಮತ್ತು ಪಾರಂಪರಿಕ ನೇಕಾರರ ವೃತ್ತಿಪರತೆಯ ಅವನತಿ ಹಾಗೂ ಸಂಘಟನೆಯ ಕೊರತೆಯಿಂದಾಗಿ ರೋಗಗ್ರಸ್ತವಾಗಿರುವ ಕೈಮಗ್ಗ ಕೈಗಾರಿಕೆಯನ್ನು ಪುನಃಶ್ಚೇತನಗೊಳಿಸುವ ಪ್ರಯತ್ನವನ್ನು ತನ್ನ ಮಿತಿಗಳಲ್ಲೇ ಅದು ಮಾಡುತ್ತಿದೆ. ಇಂತಹ ಪ್ರಯತ್ನದ ಫಲವಾಗಿಯೇ ಅದು ಬೇರೆ ಬೇರೆ ಊರುಗಳಲ್ಲಿ ಕೈಮಗ್ಗ ಸಂಘಗಳ ರಚನೆಯಲ್ಲಿ ಪಾತ್ರ ವಹಿಸಿ, ಅವುಗಳಿಂದ ಬಟ್ಟೆ ನೇಯಿಸಿ ಖರೀದಿ ಮಾಡುವ ವ್ಯವಸ್ಥೆ ಮಾಡಿಕೊಂಡಿರುವುದು. ಹಾಗೇ, ಪ್ರಸನ್ನ ರಾಷ್ಟ್ರ ಮಟ್ಟದ ಕೈಮಗ್ಗ ಕೈಗಾರಿಕೆಯ ಪುನಃಶ್ಚೇತನ ಆಂದೋಲನದಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಾ, ಜವಳಿ ಇಲಾಖೆಯ ಕಾರ್ಯಕ್ರಮಗಳಿಗೆ ಸಲಹಾಕಾರರಾಗಿಯೂ ಕೆಲಸ ಮಾಡುತ್ತಿದ್ದಾರೆ. ಅವರ ಪ್ರಕಾರ, 'ಸರ್ಕಾರಿ ಅಧಿಕಾರಿಗಳನ್ನು ಸುಮ್ಮನೆ ಬೈಯುತ್ತಾ ಕೂರುವುದರಿಂದ ಪ್ರಯೋಜನವಿಲ್ಲ. ನಾವೂ ನಿಜವಾಗಿ ಏನೂ ಮಾಡದೆ, ಈವರೆಗೆ ಮಾಡಿದ್ದು ಬರೀ ಇದನ್ನೇ! ಸರ್ಕಾರಿ ನೌಕರರಲ್ಲೂ ಜನಪರರಾದವರೂ, ದಕ್ಷರೂ ಇದ್ದಾರೆ. ಅವರನ್ನು ಗುರುತಿಸಿ ಬಳಸಿಕೊಳ್ಳುವುದೇ ಸಾಮಾಜಿಕ ಪುನಾರಚನೆಯ ಮಾತಾಡುವ ನಾವು ಮಾಡಬೇಕಾದ ತುರ್ತು ಕೆಲಸ.' ಇಂತಹ ಸಾಮಾಜಿಕ ಪುನಾರಚನೆಯ ಒಂದು ಸಣ್ಣ ಹಾಗೂ ಸುಂದರ ಉದಾಹರಣೆಯೇ ಚರಕ.

ಇದನ್ನೇ ಈ ಬಾರಿಯ 'ಚರಕ ಉತ್ಸವ'ದ ಅಂಗವಾಗಿ ಏರ್ಪಡಿಸಲಾಗಿದ್ದ 'ನೇಕಾರರ ಸಮ್ಮೇಳನ'ದ ಗೋಷ್ಠಿಯೊಂದರಲ್ಲಿ ಮಾತನಾಡಬೇಕಾಗಿ ಬಂದ ನಾನೂ ಹೇಳಿದ್ದು. ಬಡತನದಲ್ಲಿ ತೊಯ್ದು ಬಂದಂತಿದ್ದ ನೇಕಾರರ ಪ್ರತಿನಿಧಿಗಳು ಅಂದು ತಮ್ಮ ವೃತ್ತಿ ಜೀವನದ ಬಗ್ಗೆ ಆಡಿದ ಹತಾಶೆಯ ಮಾತುಗಳನ್ನು ಕೇಳಿ ನೊಂದ ನಾನು ಅವರಿಗೆ, 'ಚರಕದ ಕಾರ್ಯಶೈಲಿಯನ್ನು ಹತ್ತಿರದಿಂದ ಗಮನಿಸಿ. ನಿಮ್ಮ ಊರುಗಳಲ್ಲೂ ಇದೇ ಮಾದರಿಯ ಸಹಕಾರ ಸಂಘ ಸ್ಥಾಪಿಸಿಕೊಳ್ಳುವ ಪ್ರಯತ್ನ ಮಾಡಿ. ನೇಕಾರರ ಸಮ್ಮೇಳನಗಳನ್ನು ಜಾತಿ ಸಮ್ಮೇಳನಗಳಂತೆ ಸಂಘಟಿಸಿ, ಸರ್ಕಾರಕ್ಕೆ ಸವಲತ್ತುಗಳಿಗಾಗಿ ಅಹವಾಲು ಸಲ್ಲಿಸುತ್ತಾ ಸರ್ಕಾರಿ ಕಛೇರಿಗಳಿಗೆ ಅಲೆಯುವ ಬದಲು; ವೃತ್ತಿಪರತೆಯನ್ನು ರೂಢಿಸಿಕೊಂಡು ಕಾಲಕ್ಕೆ ತಕ್ಕಂತಹ ಗುಣಮಟ್ಟದ ಮತ್ತು ವಿನ್ಯಾಸಗಳ ಉತ್ಪನ್ನಗಳನ್ನು ತಯಾರಿಸಿ, ನಿಮ್ಮದೇ ಮಾರಾಟ ವ್ಯವಸ್ಥೆ ಮಾಡಿಕೊಳ್ಳಿ'. ನನ್ನ ಈ ಮಾತಿಗೆ ಸ್ಫೂರ್ತಿ ಒದಗಿಸಿದ್ದು, ಗಜೇಂದ್ರಗಢದ ಹಿರಿಯ ನೇಕಾರರೊಬ್ಬರು ತಮ್ಮ ವೃತ್ತಿಬಾಂಧವರಿಗೆ ಹೇಳಿದ ಈ ಕಿವಿ ಮಾತು: 'ನೇಕಾರ ಕಲಾಕಾರನಾಗದೆ, ಕೂಲಿಕಾರನಾಗಿದ್ದೇ ನಮ್ಮ ದುಃಸ್ಥಿತಿಗೆ ಕಾರಣ. ಗಿರಾಕಿ ನಮ್ಮ ಸರಕಿನ ಬೆಲೆ ನೋಡಿ ಬೇಕಾದರೆ ಹಿಂದಕ್ಕೆ ಹೋಗಲಿ;ಆದರೆ ನಮ್ಮ ಸರಕಿನ ಗುಣಮಟ್ಟ ನೋಡಿ ಹಿಂದಕ್ಕೆ ಹೋಗುವಂತಿರಬಾರದು!'

ವಾಸ್ತವವಾಗಿ ಈ ಮಾತಿನ ಹಿಂದಿನ ಮರ್ಮವೇ ಚರಕದ ಯಶಸ್ಸಿಗೂ ಕಾರಣವಾಗಿರುವುದು. ಇಲ್ಲಿನ ಯಾವ ಹುಡುಗಿಯೂ ಕೂಲಿಕಾರಳಲ್ಲ. ಇಲ್ಲಿನ ತರಬೇತಿ,

ಕಾರ್ಯಶೈಲಿ, ಕೆಲಸದ ವಾತಾವರಣ ಅವರನ್ನು ಕಲಾಕಾರನ್ನಾಗಿ ಪರಿವರ್ತಿಸಿದೆ. ಹಾಗಾಗಿಯೇ ಅವರು ಸದಾ ಹಸನ್ಮುಖಿಗಳು, ಚೈತನ್ಯದ ಚಿಲುಮೆಗಳು. ಹಾಗೇ ಶಿಸ್ತಿನ ಸಿಪಾಯಿಗಳು ಕೂಡಾ! ಗುಡ್ಡವೊಂದರ ಹಿನ್ನೆಲೆಯಲ್ಲಿ ವಿಶಾಲವಾಗಿ ಹರಡಿಕೊಂಡಿರುವ ಆಲದ ಮರವೊಂದರ ಸುತ್ತ ಅದರ ಪ್ರಾಕೃತಿಕ ಸೌಂದರ್ಯದ ಜೊತೆ ಸಮರಸವಾಗಿರುವ ಶೈಲಿಯಲ್ಲಿ, ಸ್ಥಳೀಯ ಸಂಪನ್ಮೂಲಗಳನ್ನೇ ಬಳಸಿಕೊಂಡು ಕಟ್ಟಿರುವ ಪುಟ್ಟ ಕಟ್ಟಡಗಳನ್ನೊಳಗೊಂಡ ಚರಕದ ವಿಶಾಲ ಆವರಣವೇ ಅಲ್ಲಿಗೆ ಪ್ರವೇಶಿಸುವವರಿಗೆ ಒಂದು ವಿಶೇಷ ನೆಮ್ಮದಿಯ ಅನುಭವ ನೀಡುತ್ತದೆ. ಸೌರಶಕ್ತಿ, ಮಳೆಕೊಯ್ಲು, ಇಂಗು ಗುಂಡಿಗಳಂತಹ ನೈಸರ್ಗಿಕ ಸಂಪನ್ಮೂಲ ಸೌಲಭ್ಯಗಳಿಂದ ಸುಸಜ್ಜಿತವಾದ ಮತ್ತು ಜನಪದ ಸೊಗಡಿನ ಹಸೆ ಚಿತ್ರಗಳಿಂದ ಅಲಂಕೃತವಾದ ಈ ಆವರಣ, ಒಂದು ಅನನ್ಯ ದೇಶೀ ಸೌಂದರ್ಯದ ಪ್ರತೀಕವಾಗಿದೆ. ಗಾಂಧಿ ಅರ್ಥಶಾಸ್ತ್ರ ಮತ್ತು ಗಾಂಧಿ ಜೀವನ ಮಾದರಿ ಅವಾಸ್ತವಿಕ ಹಾಗೂ ಅವ್ಯಾವಾಹರಿಕ ಎನ್ನುವವರಿಗೆ ಇಲ್ಲಿದೆ, ಕಣ್ತೆರೆಸುವಂತಹ ಒಂದು ಜೀವಂತ ಉದಾಹರಣೆ. ಚರಕ ಕೇವಲ ಒಂದು ಉದ್ಯೋಗ ಅಥವಾ ಕೈಗಾರಿಕಾ ಸಂಸ್ಥೆಯಲ್ಲ. ಅದೊಂದು ನವೀನ ಜೀವನ ಮಾದರಿಯ ಪ್ರಯೋಗಶಾಲೆಯೂ ಹೌದು.

ಇದರ ಸ್ಪಂದನಶೀಲ ಆಚರಣೆಯನ್ನು ನೋಡಬೇಕಾದರೆ, ನೀವಿಲ್ಲಿ ಚರಕದ ಸಾಂಸ್ಕೃತಿಕ ಶಾಖೆಯಂತಿರುವ 'ಕವಿ ಕಾವ್ಯ ಟ್ರಸ್ಟ್'ನ ಆಶ್ರಯದಲ್ಲಿ ಪ್ರತಿ ವರ್ಷ ನಡೆಯುವ 'ಚರಕ ಉತ್ಸವ'ಕ್ಕೆ ಬರಬೇಕು. ಹಗಲು ಪ್ರಚಲಿತ ವಿಷಯವೊಂದರ ಬಗ್ಗೆ ಗಂಭೀರ ಚರ್ಚಾ ಗೋಷ್ಠಿಗಳು, ಸಂಜೆ ನಾಟಕ, ಯಕ್ಷಗಾನ, ಸಂಗೀತಗಳಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೊಳಗೊಂಡಿರುವ ಈ ಉತ್ಸವ; ಬಗೆ ಬಗೆಯ ತಿಂಡಿಗಳು, ಮಕ್ಕಳ ಆಟಿಕೆಗಳು, ಬಟ್ಟೆ ಮತ್ತಿತರ ಕೈಮಗ್ಗದ ಉತ್ಪನ್ನಗಳು ಮತ್ತು ಪುಸ್ತಕಗಳ ಅಂಗಡಿ-ಮುಂಗಟ್ಟುಗಳೊಂದಿಗೆ, ಊರ ಜಾತ್ರೆ ಅಥವಾ ರಥೋತ್ಸವದ ಉತ್ಸಾಹ, ಶ್ರದ್ಧೆ ಮತ್ತು ಸಂಭ್ರಮಗಳಿಂದ ಜರುಗುತ್ತದೆ! ಈ ಸಂದರ್ಭದಲ್ಲಿ ವಿವಿಧ ವಿಭಾಗಗಳ ಅತ್ಯುತ್ತಮ ಕೆಲಸಗಾರರಿಗೆ 'ಕಾಯಕ ಪ್ರಶಸ್ತಿ'ಗಳೆಂಬ ವಾರ್ಷಿಕ ಬಹುಮಾನಗಳನ್ನೂ ವಿತರಿಸಲಾಗುತ್ತದೆ. ರಾಜ್ಯದ ವಿವಿಧ ಕ್ಷೇತ್ರಗಳ ಕಾರ್ಯಕರ್ತರು, ಚಿಂತಕರು, ಕಲಾವಿದರ ಜೊತೆಗೆ ದೊಡ್ಡ ಸಂಖ್ಯೆಯಲ್ಲಿ ಜನಸಾಮಾನ್ಯರೂ ಪಾಲ್ಗೊಳ್ಳುವ ಈ ಮೂರು ದಿನಗಳ ಉತ್ಸವದ ಉಸ್ತುವಾರಿ, ಪೂರ್ತಿಯಾಗಿ ಚರಕದ ಮಹಿಳೆಯರದೇ. ಪುರುಷರ ಪಾತ್ರ ಏನಿದ್ದರೂ ನೇಪಥ್ಯದ್ದು. ಈ ಉಸ್ತುವಾರಿಯಲ್ಲಿ ತಮ್ಮ ಶಕ್ತಿ-ಸಾಮರ್ಥ್ಯಗಳ ಜೊತೆಗೆ ಈ ಹುಡುಗಿಯರು ಮಾಡುವ ಮುಗ್ಧ ತಪ್ಪುಗಳನ್ನು ನೋಡುವುದೂ ಒಂದು ಆನಂದವೇ! ಅಂದ ಚೆಂದದ ಉಡುಪು ತೊಟ್ಟ ವಿವಿಧ ವಯೋಮಾನಗಳ ಈ ಹುಡುಗಿಯರು ಅಲ್ಲಿ ತಮ್ಮ ವಿವಿಧ ತೆರನ ಕ್ರಿಯಾಶೀಲತೆಯೊಂದಿಗೆ, ಕಣ್ತುಂಬುವಂತಹ ಬಣ್ಣದ ಹೂಗಳ ತೋಟವೊಂದರ ವಾತಾವರಣವನ್ನು ನಿರ್ಮಿಸಿಬಿಡುತ್ತಾರೆ. ಇವರು ತಮ್ಮ ನಾಟಕ, ಕೋಲಾಟ, ಹಾಡುಗಳು, ಕಿರು ರೂಪಕಗಳ ಪ್ರದರ್ಶನಗಳ ಜೊತೆಗೆ ಅತಿಥಿಗಳ ಊಟ-ತಿಂಡಿ-ವಸತಿಗಳ ವ್ಯವಸ್ಥೆಯನ್ನೂ ಪ್ರೀತಿ-ಗೌರವಗಳೊಂದಿಗೆ ನೋಡಿಕೊಳ್ಳುವ ಪರಿ,

ಚರಕ ಒಂದು ವಿಶಿಷ್ಟ ಸಾಂಸ್ಕೃತಿಕ ಮಾದರಿಯಾಗಿಯೂ ಬೆಳೆಯುತ್ತಿರುವ ಸೂಚನೆ ನೀಡುತ್ತದೆ.

ಉತ್ಸವದ ಅಂಗವಾಗಿ ಕಳೆದ ವರ್ಷಗಳಲ್ಲಿ ಏರ್ಪಡಿಸಲಾಗಿದ್ದ ಲೇಖಕಿಯರ ಸಮಾವೇಶವಿರಲಿ, ಆರ್ಥಿಕ ಅಭಿವೃದ್ಧಿ ಮತ್ತು ಗ್ರಾಮೀಣ ಬಡತನ ಕುರಿತ ವಿಚಾರ ಸಂಕಿರಣವಿರಲಿ ಅಥವಾ ಈ ವರ್ಷ ಆಯೋಜಿಸಲಾಗಿದ್ದ ನೇಕಾರರ ಸಮಾವೇಶವೇ ಆಗಿರಲಿ, ಎಲ್ಲ ಚರ್ಚೆಗಳನ್ನೂ ಗಂಭೀರವಾಗಿ ಕೂತು ಆಲಿಸುವ ಮತ್ತು ಅಗತ್ಯವೆನಿಸಿದರೆ ತಮ್ಮ ಮಿತಿಗಳಲ್ಲೇ ಸಕ್ರಿಯವಾಗಿ ಭಾಗವಹಿಸುವ ಈ ಚರಕದ ಹುಡುಗಿಯರು, ನನ್ನ ಕಣ್ಮುಂದೆಯೇ ಕಳೆದ ಮೂರು ವರ್ಷಗಳಲ್ಲಿ ತಮ್ಮ ಪ್ರಸ್ತುತಿ, ಅಭಿವ್ಯಕ್ತಿ, ಆತ್ಮ ವಿಶ್ವಾಸ ಹಾಗೂ ಪ್ರತಿಭಾ ಸಂಘಟನೆಗಳ ಮೂಲಕ ತಮ್ಮ ವ್ಯಕ್ತಿತ್ವಗಳನ್ನು ಕಟ್ಟಿಕೊಂಡಿರುವ ರೀತಿ ನನ್ನಲ್ಲಿ ಆಶ್ಚರ್ಯವನ್ನೂ, ಇಂತಹ ಪ್ರಯೋಗಗಳ ಬಗೆಗೆ ಹೊಸ ಭರವಸೆಯನ್ನೂ ಹುಟ್ಟಿಸಿದೆ. ಈಗ ಇಲ್ಲಿನ ಭಾಗೀರಥಿ, ಹಸೆ ಗೌರಮ್ಮ, ಮಹಾಲಕ್ಷ್ಮಿ, ಪಾರ್ವತಿ, ಅರುಣಾ, ಗಾಯತ್ರಿ, ದಾಕ್ಷಾಯಿಣಿ, ಚೈತ್ರ, ಸುಮಿತ್ರಾ, ಚಂದ್ರಕಲಾ ಇತ್ಯಾದಿ ಮತ್ತು ಇವರ ಹಿಂದಿರುವ ಕುಲಕರ್ಣಿ, ರಮೇಶ್, ಗಣಪತಿ, ಸುಂದರ್, ರುದ್ರಪ್ಪ, ಬಸವರಾಜಪ್ಪ ಮುಂತಾದವರು ಇಲ್ಲಿಗೆ ಸ್ವಸಂತೋಷಕ್ಕಾಗಿ ಆಗಾಗ್ಗೆ ಭೇಟಿ ನೀಡುವ ನನಗೆ ಮತ್ತು ನನ್ನ ಶ್ರೀಮತಿಗೆ ಬರೀ ಹೆಸರುಗಳಾಗಿ ಉಳಿದಿಲ್ಲ!

ಶಿವಮೊಗ್ಗ-ಸಾಗರದ ಕಡೆ ಹೋದಾಗ ಒಮ್ಮೆ ಚರಕಕ್ಕೆ ಹೋಗಿ ಬನ್ನಿ. ಸಾಧ್ಯವಾದರೆ ಮಧ್ಯಾಹ್ನ ಅಲ್ಲಿ ದತ್ತ ಗಣಪತಿ ಭಟ್ಟರು ಸರಳವಾಗಿ, ಆದರೆ ರುಚಿಕಟ್ಟಾಗಿ ಮಾಡಿ ಪ್ರೀತಿಯಿಂದ ಬಡಿಸುವ ಊಟವನ್ನೂ ಸವಿದು ಬನ್ನಿ!

(೨೦ ಫೆಬ್ರುವರಿ, ೨೦೦೯)

■

೩೯. ಸಾರ್ಥಕವಾಗದ ಸಾಹಿತ್ಯ ಸಮ್ಮೇಳನಗಳು

ಇನ್ನೊಂದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಗಿದಿದೆ. ಚಿತ್ರದುರ್ಗದಲ್ಲಿ ನಡೆದ ಈ ೭೫ನೇ ಸಮ್ಮೇಳನ ಬಹು ಯಶಸ್ವಿಯೆಂದು ಅದರ ಸಂಘಟಕರೂ, ಅವ್ಯವಸ್ಥೆಯ ಆಗರವಾಗಿತ್ತೆಂದು ಮಾಧ್ಯಮದವರೂ ಹೇಳತೊಡಗಿದ್ದಾರೆ. ಸಂಘಟನೆಯ ನೇತೃತ್ವ ವಹಿಸಿದ್ದ ಜಿಲ್ಲಾಧಿಕಾರಿ ಬಿಸ್ವಾಸ್ ಸ್ಥಳೀಯ ಪುಢಾರಿಗಳನ್ನು (ಇವರಲ್ಲಿ ಸ್ಥಳೀಯ ಪತ್ರಕರ್ತರೂ, ಅವರ ಗೆಣೆಕಾರರೂ ಸೇರಿರುತ್ತಾರೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ!) ಸಂಘಟನೆಯ ಕಾರ್ಯದಲ್ಲಿ (ಅಂದರೆ ಹಣಕಾಸಿನ ವ್ಯವಹಾರಗಳಲ್ಲಿ) ತೊಡಗಿಸಿಕೊಳ್ಳದೇ ಇದ್ದುದೇ, ಮಾಧ್ಯಮಗಳಲ್ಲಿ ಪ್ರತಿಕೂಲ ವರದಿಗಳಿಗೆ ಕಾರಣವಾಗಿದೆ ಎಂದೂ ಹೇಳಲಾಗುತ್ತಿದೆ. ಗೋಷ್ಠಿಯೊಂದು ಜನವೇ ಇಲ್ಲದೆ ಭಣಗುಟ್ಟಿತೆಂದು ಸೂಚಿಸುತ್ತಾ ಕನ್ನಡದ ಪ್ರಮುಖ ಪತ್ರಿಕೆಯೊಂದು ತನ್ನ ಮುಖ ಪುಟದಲ್ಲೇ ಖಾಲಿ ಕುರ್ಚಿಗಳ ಚಿತ್ರವೊಂದನ್ನು ಪ್ರಕಟಿಸಿತ್ತು. ಆದರೆ ಈ ಗೋಷ್ಠಿಗೆ ಹೋಗಿದ್ದ ನನ್ನ ಸ್ನೇಹಿತರೊಬ್ಬರ ಪ್ರಕಾರ ಈ ಗೋಷ್ಠಿ ಸಾಕಷ್ಟು ತುಂಬಿದ ಸಭಿಕರ ನಡುವೆಯೇ ಯಶಸ್ವಿಯಾಗಿ ನಡೆದಿದ್ದು, ಪತ್ರಿಕೆಯವರು ಹಿಂಭಾಗದಲ್ಲಿ ಖಾಲಿ ಇದ್ದ ಕುರ್ಚಿಗಳ ಚಿತ್ರ ತೆಗೆದು ಪ್ರಕಟಿಸಿದ್ದಾರಷ್ಟೆ! ನಾನೂ ಒಂದು ದಿನದ ಮಟ್ಟಿಗೆ ಸಮ್ಮೇಳನಕ್ಕೆ ಹೋಗಿದ್ದೆ. ಅಲ್ಲೇನೂ ಅವ್ಯವಸ್ಥೆ ನನಗೆ ಕಾಣಲಿಲ್ಲ. ಆ ಹೊತ್ತಿಗೆ ಬಹುಶಃ ಊಟ-ವಸತಿಗಳಿಗೆ ಸಂಬಂಧಿಸಿದಂತೆ ಉದ್ಭವವಾಗಿದ್ದ ಅವ್ಯವಸ್ಥೆಯನ್ನು ಸರಿಪಡಿಸಲಾಗಿತ್ತೆಂದು ಕಾಣುತ್ತದೆ. ಅಂದು ನಡೆದ ಒಂದು ಅತಿ ಸಾಧಾರಣ ಕವಿಗೋಷ್ಠಿಯೊಂದನ್ನೂ, ಆನಂತರ ನಡೆದ ಸಮ್ಮೇಳನಾಧ್ಯಕ್ಷರೊಡನೆಯ ಸಂವಾದವನ್ನು ಬೃಹತ್ ಚಪ್ಪರದಡಿ ಸೇರಿದ್ದ ಬೃಹತ್ ಜನಸಮೂಹ ಶಾಂತ ರೀತಿಯಲ್ಲೇ ಕೇಳಿತು. ವಿಶೇಷವಾಗಿ ಎಲ್. ಬಸವರಾಜು ಅವರ ಸಹಜ ಹಾಗೂ ದಿಟ್ಟ ಮಾತುಗಾರಿಕೆಯನ್ನು ಮೆಚ್ಚಿ ಚಪ್ಪಾಳೆ ತಟ್ಟಿ ಸಂತೋಷಿಸಿತು ಕೂಡಾ.

ಅದೇನೇ ಇರಲಿ, ಈಚಿನ ವರ್ಷಗಳಲ್ಲಿ ಸಾಹಿತ್ಯ ಸಮ್ಮೇಳನಗಳು ಹೆಚ್ಚೆಚ್ಚು ಅದ್ದೂರಿಯಾಗುತ್ತಿವೆ. ಅವು ಕೋಟ್ಯಾಂತರ ರೂಪಾಯಿಗಳ ವ್ಯವಹಾರವಾಗಿ ಪರಿವರ್ತಿತವಾಗುತ್ತಿವೆ. ಹೀಗಾಗಿ ಬೃಹತ್ ಚಪ್ಪರ, ಬೃಹತ್ ವೇದಿಕೆ, ಅವುಗಳ ಬೃಹತ್ ಪ್ರಮಾಣದ ಅಲಂಕಾರ, ಲಕ್ಷಾಂತರ ಜನಕ್ಕೆ ಊಟ-ವಸತಿ, ಪುಸ್ತಕ ಮುದ್ರಣ, ಹಾರ ತುರಾಯಿ, ಸ್ಮರಣಿಕೆ ಇತ್ಯಾದಿಗಳ ಈ ಬೃಹತ್ ವ್ಯವಹಾರದಲ್ಲಿ ದಲ್ಲಾಳಿಗಳಾಗಲು ಸ್ಥಳೀಯ ಪುಢಾರಿಗಳು ಹಾತೊರೆಯುತ್ತಿರುತ್ತಾರೆ. ಆದರೆ ಈ ಬಾರಿಯ ಸಮ್ಮೇಳನದಲ್ಲಿ ಇವರೆಲ್ಲರನ್ನೂ

ದೂರವಿಟ್ಟು, ಎಲ್ಲವನ್ನೂ ತಮ್ಮ ಕಛೇರಿಯ ಸುಪರ್ದಿಯಲ್ಲೇ ಕಟ್ಟುಸಿಟ್ಟಾಗಿ ನಡೆಸಿದರೆಂದು ಹೇಳಲಾದ ಜಿಲ್ಲಾಧಿಕಾರಿ ಬಿಸ್ವಾಸ್ ಅವರೇನೋ, ಪ್ರತಿ ಗೋಷ್ಠಿಯನ್ನೂ ಕನಿಷ್ಠ ೨೦-೨೫ ಸಾವಿರ ಜನ ಕೂತು ಕೇಳಿದ್ದಾರೆ ಎಂದು ಹೇಳುತ್ತಾ ಸಮ್ಮೇಳನ ಯಶಸ್ವಿಯಾಗಿದೆ ಎಂಬ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಆದರೆ ಸಂತೆಯಂತಹ ಇಂತಹ ಸಮ್ಮೇಳನಗಳಲ್ಲಿ ಜನ ಸಾವಿರಾರು ಸಂಖ್ಯೆಯಲ್ಲಿ ಕೂತಿದ್ದರೆಂಬುದೇ ಸಮ್ಮೇಳನದ ಯಶಸ್ಸಿಗೆ ಮಾನದಂಡ ವಾಗಲಾರದು.

ಸಾಹಿತ್ಯ ಸಮ್ಮೇಳನವೆಂದರೆ ಇತ್ತೀಚೆಗೆ ಸಾಹಿತ್ಯದೊಂದಿಗೆ ಅಥವಾ ಸಾಹಿತ್ಯಕ್ಕಿಂತ ಹೆಚ್ಚಿಗೆ ಇತರ ಆಕರ್ಷಣೆಗಳು ಹೆಚ್ಚಾಗಿವೆ. ವಿಶೇಷವಾಗಿ, ಅತಿ ರಿಯಾಯ್ತಿ ದರದಲ್ಲಿ–ಪತ್ರಿಕೆಗಳು ಎಲ್ಲಕ್ಕಿಂತ ಮುಂಚೆ ಪ್ರಚಾರ ಮಾಡುವ–ಭರ್ಜರಿ ಊಟ ತಿಂಡಿಗಳ ಮತ್ತು ವಸತಿ ವ್ಯವಸ್ಥೆ, ಪರಸ್ಥಳ ಸಂದರ್ಶನದ ಸಂತೋಷ, ವೈವಿಧ್ಯಮಯ ಸರಕುಗಳ ಮಾರಾಟದ ಜನ ಜಂಗುಳಿಯ ಜಾತ್ರೆಯ ವಾತಾವರಣ, ಹಲವು ಸ್ನೇಹಿತರನ್ನು ಒಂದೆಡೆಯಲ್ಲೇ ಭೇಟಿ ಮಾಡುವ ಸದವಕಾಶ, ಸರ್ಕಾರಿ ನೌಕರರಿಗಂತೂ ವಿಶೇಷ ರಜೆಯೊಂದಿಗೆ ತಮ್ಮ ಹೆಂಡಿರು-ಮಕ್ಕಳೊಡನೆ ವಿಹಾರ ಮಾಡುವ ಸೌಲಭ್ಯ ಇತ್ಯಾದಿ. ಹೀಗಾಗಿ ಸಾವಿರಾರು, ಲಕ್ಷಾಂತರ ಜನ ಬರುತ್ತಾರೆ. ಇವರಲ್ಲಿ ಒಂದಲ್ಲ ಒಂದು ಭಾಗ, ಒಂದಲ್ಲ ಒಂದು ಸಮಯದಲ್ಲಿ ದಣಿವಾರಿಸಿಕೊಳ್ಳಲೆಂಬಂತೆ ಚಪ್ಪರದ ನೆರಳಿನಲ್ಲಿ ತಮ್ಮ ಸ್ನೇಹಿತರು ಅಥವಾ ಬಂಧು ಬಾಂಧವರೊಡಗೂಡಿ ಸಾವಿರಾರು ಸಂಖ್ಯೆಯಲ್ಲಿ ಕೂತು ಭಾಗವಹಿಸುವುದು ವಿಶೇಷ ಸಂಗತಿಯೇನಲ್ಲ. ಆದರೆ ಇದರ ಮೂಲಕ ಸಾರತಃ ಏನನ್ನು ಸಾಧಿಸಲಾಯಿತು ಎಂದು ಯೋಚಿಸಿದಾಗ ನಿರಾಸೆಯೇ ಆಗುತ್ತದೆ.

ಏಕೆಂದರೆ, ಇತ್ತೀಚಿನ ವರ್ಷಗಳಲ್ಲಿ ಅಖಿಲ ಭಾರತ (ಇದು ಅಖಿಲ ಭಾರತ ಏಕೋ, ಹೇಗೋ ತಿಳಿಯದು!) ಸಾಹಿತ್ಯ ಸಮ್ಮೇಳನಗಳ ಗೋಷ್ಠಿಗಳ ಗುಣಮಟ್ಟ ತೀರಾ ಕಳಪೆಯಾಗತೊಡಗಿದೆ. ಈ ಕಳಪೆತನಕ್ಕೆ ಯಾರ ನಿಯಂತ್ರಣಕ್ಕೂ ಸಿಗದಷ್ಟು ಸಂಖ್ಯೆಯ ಗೋಷ್ಠಿಗಳು, ಅವುಗಳಿಗೆ ನಿಶ್ಚಯಿಸಲಾಗುವ ಅತಿ ಸ್ಥೂಲವೆನಿಸುವ ವಿಷಯಗಳು ಹಾಗೂ ಅದರಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವವರ ಆಯ್ಕೆಯಲ್ಲಿನ ಅಗ್ಗದ ರಾಜಕಾರಣ, ಕಾರಣವಾಗಿದೆ. ಕವಿಗೋಷ್ಠಿಗಳಂತೂ ಕುಕವಿಗಳ ಸಂತೆಯಂತಿರುತ್ತವೆ! ಅವುಗಳಲ್ಲಿ ಆಕಸ್ಮಾತ್ ಸೇರಿರುವ ಇಬ್ಬರೋ ಮುವ್ವರೋ ಒಳ್ಳೆಯ ಕವಿಗಳ ಪಾಡಂತೂ ನಾಯಿಪಾಡೇ ಆಗಿರುತ್ತದೆ! ಇದರಿಂದಾಗಿ ಅಲ್ಲಿ ಸೇರಿರುವ ಜನಸ್ತೋಮಕ್ಕೆ ಸಾಹಿತ್ಯದ ಬಗ್ಗೆ ಒಂದು ಸುಲಭ ಮತ್ತು ಕೆಟ್ಟ ಕಲ್ಪನೆಯನ್ನು ಕೊಟ್ಟಂತಾಗುತ್ತದೆ. ಇದು ಇಂದಿನ ಸಾಹಿತ್ಯ ಸಮ್ಮೇಳನಗಳ ದೊಡ್ಡ ಅಪಾಯವೂ ಆಗಿದೆ. ಜೊತೆಗೆ, ಬಹುಪಾಲು ಗೋಷ್ಠಿಗಳು ಸಾಹಿತ್ಯೇತರ ವಿಷಯಗಳಿಗೇ ಸಂಬಂಧಿಸಿದಂತಿರುವುದು ಇತ್ತೀಚಿನ ಸಮ್ಮೇಳನಗಳ ವಿಶೇಷತೆಯಾಗಿದೆ. ನಿಜ, ಸಾಹಿತ್ಯ ಪರಿಷತ್ತು ಈಗ ಕೇವಲ ಸಾಹಿತ್ಯ ಸಂಘಟನೆಯಾಗಿ ಉಳಿದಿಲ್ಲ. ಅದು ನುಡಿಯ ಜೊತೆಗೇ ನಾಡಿನ ಹಿತವನ್ನೂ ಕಾಯ್ದುಕೊಂಡು ಹೋಗುವ ಜವಾಬ್ದಾರಿಯನ್ನೂ ಹೊತ್ತಿದೆ. ವಾಸ್ತವವಾಗಿ

ಅದು ಆರಂಭವಾದದ್ದೇ ನುಡಿ ಹಿತ ಕಾಯುವ ಮೂಲಕ ನಾಡ ಹಿತ ಕಾಯುವ ಉದ್ದೇಶದಿಂದ. ಹಾಗಾಗಿ, ನಾಡಿನ ಹಿತ ಕಾಯುವ ಈ ಜವಾಬ್ದಾರಿಯನ್ನು ನುಡಿಯ ಹಿತ ಕಾಯುವ ಕೆಲಸದ ಒಂದು ಭಾಗವಾಗಿಯೇ ನಿರ್ವಹಿಸುವ ಎಚ್ಚರವನ್ನೂ ಪರಿಷತ್ತು ಕಾಯ್ದುಕೊಂಡು ಹೋಗಬೇಕಿದೆ. ಇಲ್ಲವಾದರೆ ಸಾಹಿತ್ಯ ಪರಿಷತ್ತಿನ ವಿಶಿಷ್ಟತೆಯೇ ನಾಶವಾಗಿ, ಅದೊಂದು ಈಗಾಗಲೇ ರಾಜ್ಯದಲ್ಲಿ ತಲೆಯೆತ್ತಿರುವ ಅನೇಕ ಸಾರ್ವತ್ರಿಕ ಪುಢಾರಿ ಸಂಘಟನೆಗಳಲ್ಲೊಂದು ಮಾತ್ರವಾಗಿ, ತನ್ನೆಲ್ಲ ಘನತೆಯನ್ನೂ ಕಳೆದುಕೊಳ್ಳುತ್ತದೆ.

ಕೆಲವು ದಿನಗಳ ಹಿಂದೆ ನನ್ನ ಗೆಳೆಯರೊಬ್ಬರು, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಮತ್ತು ಶಿಕ್ಷಣ ಮಾಧ್ಯಮ ವಿಷಯಗಳಿಗೆ ಸಂಬಂಧಿಸಿಯೋ ಏನೋ; ಲೋಕಾಭಿರಾಮವಾಗಿ ಮಾತನಾಡುತ್ತಾ, ಕರ್ನಾಟಕದಲ್ಲಿ ಎಲ್ಲ ವಿಷಯಗಳಲ್ಲೂ ಸಾಹಿತಿಗಳೇ ಪರಿಣತರಂತೆ ಮಾತಾಡುವ ಪ್ರವೃತ್ತಿಯ ಬಗ್ಗೆ ವ್ಯಂಗ್ಯವಾಡಿದರು. ನಿಜ, ಎಲ್ಲ ಸಾರ್ವತ್ರಿಕ ವಿಷಯಗಳಿಗೂ ಸಾಹಿತಿಗಳೇ ವಕ್ತಾರರಾಗುವುದು ಸರಿಯಲ್ಲ. ಆದರೆ ಇಂದು ಕರ್ನಾಟಕದಲ್ಲಿ ಸಾಹಿತಿಗಳನ್ನು ಬಿಟ್ಟು ಇತರೆ ವೃತ್ತಿವಂತರಾಗಲೀ, ಸಾರ್ವಜನಿಕರಾಗಲೀ ನಾಡು-ನುಡಿಗಳ ಬಗ್ಗೆ ವಿಶೇಷವಾಗಿ ಮತ್ತು ಗಂಭೀರವಾಗಿ ಚಿಂತಿಸಿ ಮಾತಾಡುವವರು ಎಷ್ಟು ಜನರಿದ್ದಾರೆ? ಇವರೆಲ್ಲ ತಮ್ಮ ವೃತ್ತಿ ವ್ಯವಹಾರಗಳಲ್ಲೇ ಮುಳುಗಿ, ಅದಷ್ಟೇ ಬದುಕು ಎಂಬ ಭ್ರಮೆ ಸೃಷ್ಟಿಸಿದ್ದಾರಲ್ಲಾ? ಈ ಭ್ರಮೆಯನ್ನು ತೊಡೆದು ಹಾಕಲಾದರೂ ಸಾಹಿತಿಗಳು ಕರ್ನಾಟಕದ ಸಾರ್ವಜನಿಕ ಜೀವನದ ಬೇಕು ಬೇಡಗಳ ಬಗ್ಗೆ ಮಾತನಾಡುವುದು ಅನಿವಾರ್ಯವಾಗಿದೆ ಅಲ್ಲವೆ?

ಹಾಗೆ ನೋಡಿದರೆ ಇದು ಕರ್ನಾಟಕ ಏಕೀಕರಣದ ದಿನಗಳಿಂದ ನಡೆದು ಬಂದ ಪರಂಪರೆಯಾಗಿದೆ. ಏಕೆಂದರೆ, ನುಡಿಯ ಹಿತದ ಜೊತೆಗೇ ನಾಡಿನ ಜನರ ಬದುಕಿನ ಹಿತವೂ ತಳಕು ಹಾಕಿಕೊಂಡಂತೆಯೇ ನಮ್ಮೆಲ್ಲ ಹಿರಿಯ ಸಾಹಿತಿಗಳ ಚಿಂತನ ನಡೆದು ಬಂದಿದೆ. ಹಾಗಾಗಿ ಸಾಹಿತ್ಯ ಸಮ್ಮೇಳನ ಸಂಪೂರ್ಣವಾಗಿ ಸಾಹಿತ್ಯ ಸಮ್ಮೇಳನವಾಗದಿದ್ದರೂ, ಸಾಹಿತಿಗಳ ಸಮ್ಮೇಳನವಂತೂ ಆಗಬೇಕಿದೆ. ಭಾಷೆ ಮತ್ತು ಸಾಹಿತ್ಯ ಕುರಿತ ಚರ್ಚೆ ಅದರ ಮುಖ್ಯ ಕಾಳಜಿಯಾಗಿರಬೇಕು. ಅದರ ಆಧಾರದ ಮೇಲೆ ಅಥವಾ ಆ ಮೂಲಕ ಇತರ ವಿಷಯಗಳ ಚರ್ಚೆ, ಪೂರಕ ಗೋಷ್ಠಿಗಳಾಗಿ ನಡೆಯಲಿ. ಹಾಗಾದಾಗ ಮಾತ್ರ ಸಾಹಿತ್ಯ ಪರಿಷತ್ತು ಒಂದು ವಿಶೇಷ ಪರಿಣಿತ ಸಂಸ್ಥೆ ಎನಿಸಿ, ಅದರ ಧ್ವನಿಗೂ ಒಂದು ತೂಕ ಮತ್ತು ಮಾನ್ಯತೆಗಳು ಸಿಕ್ಕಾವು. ಇಲ್ಲದೇ ಹೋದರೆ, ಅದು ಪ್ರತಿ ವರ್ಷ ಕಳ್ಳರೂ ಸೇರಿದಂತೆ ಎಲ್ಲರೂ ಸೇರುವ ಸಮ್ಮೇಳನವೆಂಬ ಬೃಹತ್ ಸಂತೆ ನಡೆಸಲು ಸರ್ಕಾರ ಮತ್ತು ಮಠಾಧಿಪತಿಗಳ ಮುಂದೆ ಹಲ್ಲು ಕಿರಿದು ನಿಲ್ಲುವ ಸಂಸ್ಥೆಯಾಗಿ ಮಾತ್ರ ಜನರ ಮುಂದೆ ಪಸ್ತುತಗೊಂಡು, ಹಾಸ್ಯಾಸ್ಪದವಾಗುತ್ತದೆ. ಏಕೆಂದರೆ, ಪರಿಷತ್ತು ಈ ಸಮ್ಮೇಳನಗಳನ್ನು ನಡೆಸುವುದರ ಹೊರತಾಗಿ ನಾಡು-ನುಡಿಗೆ ಸಂಬಂಧಿಸಿದಂತೆ ಇಂದಿಗೆ ಪ್ರಸ್ತುತವೆನಿಸುವ ಇನ್ನಾವ ಘನ ಕಾರ್ಯವನ್ನೂ ಮಾಡುತ್ತಿರುವಂತೆ ತೋರುತ್ತಿಲ್ಲ.

ಇದು ಕಷ್ಟಸಾಧ್ಯ. ಕಷ್ಟ ಏಕೆಂದರೆ, ಸಾಹಿತ್ಯ ಪರಿಷತ್ತಿನ ಇಂದಿನ ರಚನೆಯೇ ಹಾಗಿದೆ.

ಇದರ ಅಧ್ಯಕ್ಷ ಸ್ಥಾನಕ್ಕೆ ಇತ್ತೀಚಿನ ವರ್ಷಗಳಲ್ಲಿ ನಡೆಯುವ ತುರಸಿನ ಸ್ಪರ್ಧೆ ನೋಡಿದರೆ ಅದೊಂದು ರಾಜಕೀಯ ಚುನಾವಣೆಯ ಎಲ್ಲ ದುಷ್ಟ ಲಕ್ಷಣಗಳನ್ನೂ ಹೊತ್ತೇ ನಡೆಯುತ್ತದೆ ಎಂಬುದು ಯಾರಿಗಾದರೂ ಸ್ಪಷ್ಟವಾಗುವಂತಿದೆ. ಹಣದ ಪ್ರಭಾವ ಅಷ್ಟಿಲ್ಲದಿದ್ದರೂ, ಜಾತಿ-ಮತಗಳ ಹಾವಳಿಯಂತೂ ಇದ್ದೇ ಇದೆ. ಕಳೆದ ಚುನಾವಣೆಯಲ್ಲಿ ಯಾರ್‍ಯಾರಿಗೆ ಎಲ್ಲೆಲ್ಲಿ ಎಷ್ಟೆಷ್ಟು ಮತ್ತು ಏಕೆ ಮತಗಳು ಬಿದ್ದಿವೆ ಎಂಬುದೇ ಒಂದು ಕುತೂಹಲಕಾರಿ ಅಧ್ಯಯನದ ವಸ್ತುವಾಗಬಲ್ಲುದು! ಆದರೆ, ಅದೃಷ್ಟವಶಾತ್ ಈವರೆಗೆ ರಾಜ್ಯ ಮಟ್ಟದಲ್ಲಿ–ಶ್ರೀಮಾನ್ ಹರಿಕೃಷ್ಣ ಪುನರೂರರ ಹೊರತಾಗಿ–ಸಾಹಿತ್ಯಾಭಿರುಚಿಯ ದೃಷ್ಟಿಯಿಂದ ಅಯೋಗ್ಯರೆಂಬುವವರು ಯಾರೂ ಆಯ್ಕೆಯಾಗಿಲ್ಲ. ಆದರೆ ಇದೇ ಮಾತನ್ನು ಜಿಲ್ಲಾ ಮಟ್ಟದ ಅಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳ ಬಗ್ಗೆ ಹೇಳುವಂತಿಲ್ಲ. ಇವರಲ್ಲಿ ಬಹಳಷ್ಟು ಜನ ಸಾಹಿತ್ಯ ಗಂಧವಿಲ್ಲದ ಸ್ಥಳೀಯ ಪುಢಾರಿಗಳು. ಇದಕ್ಕೆ ಮುಖ್ಯ ಕಾರಣ, ಸಾಹಿತ್ಯ ಪರಿಷತ್ತಿನ ಸದಸ್ಯ ಸ್ವರೂಪ ಅದರ ಕಾರ್ಯಾಚರಣೆಯ ಶೈಲಿಯಿಂದಾಗಿಯೇ ಕ್ರಮೇಣ ಅಸಾಹಿತ್ಯಕವಾಗುತ್ತಾ ಹೋದದ್ದು: ಸಾಹಿತ್ಯ ಮಾರ್ಯದೆಯುಳ್ಳ ಜನ ಇದರಿಂದ ದೂರವಾಗುತ್ತಾ, ಸದಸ್ಯರಾಗಲು ಹಿಂಜರಿಯುತ್ತಾ ಹೋಗಿ; ಬರೀ ವ್ಯಾಪಾರಿಗಳು, ಕಂಟ್ರಾಕ್ಟುದಾರರು ಮತ್ತು ಹಲವು ಜಾತಿವಾದಿ ಗುಂಪುಗಳು ಸಾಮೂಹಿಕವಾಗಿ ಸದಸ್ಯತ್ವ ಪಡೆಯುತ್ತಾ ಹೋದದ್ದು ಅಥವಾ ಅದನ್ನು ಕೆಲವರು ತಮ್ಮ ಚುನಾವಣಾ ಹಿತ ದೃಷ್ಟಿಯಿಂದ ಪ್ರಾಯೋಜಿಸುತ್ತಾ ಹೋದದ್ದು.

ಇದರಿಂದಾಗಿ ಜಿಲ್ಲಾ ಮಟ್ಟದಲ್ಲಿ ಎಂತಹ ಪ್ರಭೃತಿಗಳು ಪದಾಧಿಕಾರಗಳಲ್ಲಿ ಬಂದು ಕೂತಿದ್ದಾರೆಂದರೆ, ಅವರಿಗೆ ಸ್ಥಳೀಯ ರಾಜಕಾರಣಿಗಳ, ಮಠಾಧಿಪತಿಗಳ ಮತ್ತು ಅಧಿಕಾರಿಗಳ ಒಡನಾಟ ಉಳಿಸಿಕೊಂಡು ಹೋಗಲು ಒಂದು ಮಾಧ್ಯಮವಾಗಿಯಷ್ಟೇ ಸಾಹಿತ್ಯ ಪರಿಷತ್ತಿನ ಅಗತ್ಯವಿರುತ್ತದೆ. ಹಾಗಾಗಿ ಇವರು ನಡೆಸುವ ಸಾಹಿತ್ಯ ಸಮ್ಮೇಳನಗಳ ಗೋಷ್ಠಿಗಳಲ್ಲಿ ಹೆಚ್ಚಾಗಿ ತುಂಬಿರುವವರು ಸ್ಥಳೀಯ ಅಧಿಕಾರ ಕೇಂದ್ರಗಳ 'ಸಂಪರ್ಕ' ಹೊಂದಿದ ಚೇಲಾ 'ಸಾಹಿತಿ'ಗಳೇ. ಇಲ್ಲಿ ಗೋಷ್ಠಿಗಳಲ್ಲಿ ಭಾಗವಹಿಸುವುದಕ್ಕಿಂತ ಹೆಚ್ಚಾಗಿ ಸ್ವಾಗತ, ನಿರೂಪಣೆ, ವಂದನಾರ್ಪಣೆ ಮಾಡಲು ನೂಕುನುಗ್ಗಲು. ಆಹ್ವಾನ ಪತ್ರಿಕೆಗಳ ತುಂಬಾ ಇವರದೇ ಹಾವಳಿ! ಹೀಗಾಗಿ ಸಣ್ಣ ಊರುಗಳಲ್ಲಿ ಜನ ಅಲ್ಲಿಗೆ ಸಂತೆಗೆ ಹೋಗುವಂತೆ, ಸಾಹಿತ್ಯೋದ್ದೇಶವೊಂದರ ಹೊರತಾಗಿ ಇನ್ನೆಲ್ಲ ಉದ್ದೇಶಗಳೊಂದಿಗೆ ಸಂಭ್ರಮದಿಂದ ಹೋಗಿ ಬರುತ್ತಾರೆ. ದೊಡ್ಡ ಊರುಗಳಲ್ಲಿ ಅದೂ ಇಲ್ಲ. ಮಂತ್ರಿ ಮಹೋದಯರು ಮತ್ತು ಮಠಾಧಿಪತಿಗಳು ಭಾಗವಹಿಸುವ ಉದ್ಘಾಟನಾ ಅಥವಾ ಸಮಾರೋಪ ಕಾರ್ಯಕ್ರಮಗಳನ್ನು ಬಿಟ್ಟರೆ ಎಲ್ಲ ಭಣ ಭಣ!

ಇಂತಹ ಜಿಲ್ಲಾ ಘಟಕಗಳನ್ನು ಹೊಂದಿದ ಕೇಂದ್ರ ಸಮಿತಿ ತನ್ನ ಸಮ್ಮೇಳನದ ಗುಣಮಟ್ಟವನ್ನು ಕಾಪಾಡಿಕೊಂಡು ಹೋಗುವುದಾದರೂ ಹೇಗೆ? ಇದಕ್ಕೊಂದೇ ದಾರಿ. ರಾಜ್ಯ ಮಟ್ಟದಲ್ಲಿನ್ನೂ ಅಧ್ಯಕ್ಷ ಸ್ಥಾನದ ಅಭ್ಯರ್ಥಿಗಳ ಗುಣಮಟ್ಟ ಗಾಬರಿ ಪಡುವಷ್ಟೇನೂ ಕಳಪೆಯಾಗಿಲ್ಲದಿರುವುದರಿಂದ (ಇದೂ ಕಳಪೆಯಾದಲ್ಲಿ ಬೇರೆ ಮಾರ್ಗಗಳನ್ನು

ಹುಡುಕಬೇಕಾಗುತ್ತದೆ!) ಈ ಪ್ರತಿ ಅಭ್ಯರ್ಥಿಯೂ, ಜಿಲ್ಲಾ ಮಟ್ಟದಲ್ಲಿಯೂ ತನ್ನ ಆಯ್ಕೆಯ ಅಭ್ಯರ್ಥಿಯೊಬ್ಬರನ್ನು ನಿಲ್ಲಿಸುವ ಮತ್ತು ಅಂತಹವರು ಮಾತ್ರ ಅಭ್ಯರ್ಥಿಗಳಾಗುವ ಹಾಗೆ ಚುನಾವಣಾ ನಿಯಮಗಳನ್ನು ಬದಲಾಯಿಸುವುದು ಒಳ್ಳೆಯದು. ಆಗ, ರಾಜ್ಯ ಮಟ್ಟದಲ್ಲಿ ಆಯ್ಕೆಯಾಗುವ ಅಧ್ಯಕ್ಷರು ಮುಂದೆ ಸುಗಮ ಮತ್ತು ಗುಣ ಮಟ್ಟದ ಆಡಳಿತಕ್ಕಾಗಿ ಸುಮಾರು ತನ್ನದೇ ತಂಡವನ್ನೂ ಆಯ್ಕೆ ಮಾಡಿಕೊಂಡಂತಾಗುತ್ತದೆ. ಇಲ್ಲದೇ ಹೋದಲ್ಲಿ ಬಹಳ ಕಡೆ ಈಗಾಗುತ್ತಿರುವಂತೆ ಕೆಳ ಹಂತದ ಸಮ್ಮೇಳನಗಳು ಹಾಸ್ಯಾಸ್ಪದವಾಗುತ್ತಾ ಹೋಗುತ್ತವೆ. ಅಲ್ಲದೆ, ಈ ಜಿಲ್ಲಾ ಸಮಿತಿಗಳು, ಸಮ್ಮೇಳನಗಳ ಅಧ್ಯಕ್ಷತೆಯ ಆಯ್ಕೆಯ ವಿಷಯದಲ್ಲೂ ತಮ್ಮ ಅಪ್ರಬುದ್ಧತೆಯನ್ನು ತೋರುತ್ತಾ, ಗೋಷ್ಠಿಗಳಿಗೆ–ವಿಶೇಷವಾಗಿ ಕವಿಗೋಷ್ಠಿಗಳಿಗೆ–ತಮ್ಮ ಚೇಲಾಗಳನ್ನು ತುಂಬುವ ಒತ್ತಡ ರಾಜಕಾರಣ ಮಾಡುವ ಮೂಲಕ ಅಖಿಲ ಭಾರತ ಸಮ್ಮೇಳನಗಳನ್ನೂ ಕುಲಗೆಡಿಸುತ್ತವೆ. ಈಗ ಆಗುತ್ತಿರುವುದೂ ಹಾಗೆಯೇ. ಹಾಗಾಗಿಯೇ, ರಾಜ್ಯದ ಅಧಿಕೃತ ನುಡಿಹಬ್ಬವೆನಿಸಿರುವ ಈ ಸಮ್ಮೇಳನದತ್ತ ಆಹ್ವಾನಿತರ ಹೊರತಾಗಿ ಇನ್ನಾವ ಗಣ್ಯ ಸಾಹಿತಿಯೂ ಸುಳಿಯದಂತಾಗಿದೆ.

ಜೊತೆಗೆ, ಅಖಿಲ ಭಾರತ ಸಮ್ಮೇಳನ ತನ್ನ ಹೆಸರಿಗೆ ತಕ್ಕಂತೆ ಅಖಿಲ ಭಾರತ ಮಟ್ಟಕ್ಕಲ್ಲದಿದ್ದರೂ, ರಾಜ್ಯ ಮಟ್ಟದ ಸಮ್ಮೇಳನವಾಗಿಯಾದರೂ ನಡೆಯುವಂತೆ ನೋಡಿಕೊಳ್ಳಬೇಕಾಗಿದೆ. ಸ್ಥಳೀಯ ಸಂಘಟಕರ ಅಥವಾ ಸಾಹಿತಿಗಳ ಒತ್ತಡಕ್ಕೆ ಮಣಿದು ಜಿಲ್ಲಾ ಮಟ್ಟದ ಸಾಹಿತ್ಯ-ಸಂಸ್ಕೃತಿ-ಅಭಿವೃದ್ಧಿ ವಿಷಯಗಳ ಗೋಷ್ಠಿಗಳಿಗೆ ಇಲ್ಲಿ ಅವಕಾಶ ನೀಡಬಾರದು. ಇವನ್ನೆಲ್ಲ ಜಿಲ್ಲಾ ಸಮ್ಮೇಳನಗಳಲ್ಲಿ ನಡೆಸಿಕೊಂಡು ಹೋಗಿ ಎಂದು ಕಟ್ಟುನಿಟ್ಟಾಗಿ ಸೂಚಿಸಬೇಕು. ಇದರಿಂದಾಗಿ ಗೋಷ್ಠಿಗಳ ವಿಪರೀತ ಸಂಖ್ಯೆ, ಪ್ರತಿನಿಧಿಗಳ ತಾರಾಟ ಮತ್ತು ಸಂಘಟನೆಯ ಭಾರ ಮತ್ತು ಖರ್ಚು ವೆಚ್ಚಗಳು ಕಡಿಮೆಯಾಗುವುದಲ್ಲದೆ, ಜಿಲ್ಲಾ ಸಮ್ಮೇಳನಗಳನ್ನು ನಿಯಮಿತವಾಗಿ ನಡೆಸುವ ಒತ್ತಡವೂ ಜಿಲ್ಲಾ ಸಮಿತಿಗಳಲ್ಲಿ ನಿರ್ಮಾಣವಾಗುತ್ತದೆ. ಈಗ ಅನೇಕ ಜಿಲ್ಲೆಗಳಲ್ಲಿ–ಉದಾ: ಚಿತ್ರದುರ್ಗದಲ್ಲಿ–ಜಿಲ್ಲಾ ಸಮ್ಮೇಳನ ನಡೆದೇ ಹಲವಾರು ವರ್ಷಗಳಾಗಿವೆ. ಹಾಗಾಗಿ, ನಿಯಮಿತವಾಗಿ ಜಿಲ್ಲಾ ಸಮ್ಮೇಳನಗಳನ್ನು ನಡೆಸಲಾಗದ ಜಿಲ್ಲಾ ಸಮಿತಿಗಳ ಮಾನ್ಯತೆಯನ್ನು ಕೇಂದ್ರ ಪರಿಷತ್ತು ರದ್ದುಗೊಳಿಸುವ ಅಧಿಕಾರವನ್ನು ಪಡೆಯಬೇಕು. ಜಿಲ್ಲಾ ಸಮ್ಮೇಳನಗಳು ಅಖಿಲ ಭಾರತ ಸಮ್ಮೇಳನಕ್ಕೆ ಸಿದ್ಧತೆಯ–ಚರ್ಚಾ ವಿಷಯಗಳು ಮತ್ತು ಸಂಘಟನೆಯ ಸ್ವರೂಪ ಎರಡೂ ನೆಲೆಗಳಲ್ಲಿ–ರೂಪದಲ್ಲಿ ನಡೆಯಬೇಕು.

ರಾಜ್ಯ ಮಟ್ಟದ ಸಮ್ಮೇಳನ ಬೇಕಾದರೆ ಎರಡು ವರ್ಷಗಳಿಗೊಮ್ಮೆ ನಡೆಯಲಿ. ಅಲ್ಲಿ ಆಹ್ವಾನಿತರ ಹೊರತಾಗಿ ಬೇರಾರ ಊಟ-ವಸತಿಗಳ ವ್ಯವಸ್ಥೆಯ ಜವಾಬ್ದಾರಿಯನ್ನು ಪರಿಷತ್ತು ವಹಿಸಿಕೊಳ್ಳದಿರಲಿ. ಬೇಕಾದರೆ ಖಾಸಗಿಯವರಿಗೆ ಸರ್ಕಾರದ ಸಹಾಯ ಧನದ ವ್ಯವಸ್ಥೆ ಮಾಡಿ, ಪ್ರತಿನಿಧಿಗಳಾಗಿ ಬರಬಯಸುವವರಿಗೆ ಅವನ್ನು ನಿಗದಿತ ರಿಯಾಯ್ತಿ ದರಗಳಲ್ಲಿ ಒದಗಿಸುವಂತೆ ನೋಡಿಕೊಳ್ಳಲಿ. ಆಗ ನಿಜವಾಗಿ ನಾಡು-ನುಡಿಗಳ ಏಳಿಗೆಯಲ್ಲಿ

ಸಕ್ರಿಯ ಆಸಕ್ತಿ ಇರುವವರು ಮಾತ್ರ ಸಮ್ಮೇಳನಗಳಿಗೆ ಬರುವಂತಾಗುತ್ತದೆ. ಸಂಘಟಕರೂ ಸಾಹಿತ್ಯ ಸಮ್ಮೇಳನದ ಮುಖ್ಯ ಉದ್ದೇಶವಾದ ನಾಡು-ನುಡಿಗಳಿಗೆ ಸಂಬಂಧಿಸಿದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ಗೋಷ್ಠಿಗಳ ಕಡೆ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಾಗುತ್ತದೆ. ಆಗ ಈ ಚರ್ಚೆಗಳ ಗುಣಮಟ್ಟವೂ ಹೆಚ್ಚಿ, ಕಾರ್ಯಕ್ರಮಗಳು ಎಲ್ಲರ ವಿಶ್ವಾಸಾರ್ಹತೆಯನ್ನೂ ಗಳಿಸುವಂತಾಗಿ; ಸರ್ಕಾರ ಸಾಹಿತ್ಯ ಪರಿಷತ್ತಿನ ನಿರ್ಣಯಗಳನ್ನು ಗಂಭೀರವಾಗಿ ಪರಿಗಣಿಸುವ ಒತ್ತಡ ನಿರ್ಮಾಣವಾಗುತ್ತದೆ.

ಈ ಎಲ್ಲ ಹಿನ್ನೆಲೆಯಲ್ಲಿ ಚಿತ್ರದುರ್ಗ ಸಮ್ಮೇಳನವನ್ನು, ಒಳಗಿನವರು ಹೇಳುವ ಯಶಸ್ಸು ಅಥವಾ ಹೊರಗಿನವರು ಹೇಳುವ ವೈಫಲ್ಯಗಳ ನೆಲೆಗಳಿಗಿಂತ ಹೆಚ್ಚಾಗಿ ಸಾರ್ಥಕತೆಯ ದೃಷ್ಟಿಯಿಂದ ನೋಡಿದಾಗ, ಅದೊಂದು ದಿಕ್ಕೆಟ್ಟ ಸಮ್ಮೇಳನದಂತೆ ಕಾಣುತ್ತದೆ. ಅದು ಎಲ್. ಬಸವರಾಜು ಅವರ ಉದ್ಘಾಟನಾ ಭಾಷಣದಿಂದಲೇ ಆರಂಭವಾಯಿತೆಂದು ಹೇಳಬಹುದು. ಸಮ್ಮೇಳನದ ಚೌಕಟ್ಟಿನಾಚೆ ಇಟ್ಟು ನೋಡಿದಾಗ ಖಂಡಿತ ಮೆಚ್ಚಬಹುದಾದ ಮಾತುಗಳಾಗಿ ಕಾಣುವ ಅವು, ಸಾಹಿತ್ಯ ಸಮ್ಮೇಳನವೊಂದರ ಉದ್ಘಾಟನಾ ಮಾತುಗಳಾಗಿ ನೋಡಿದಾಗ ಅನುಚಿತವೆನಿಸುತ್ತವೆ. ಅವರು ಸಾಹಿತ್ಯ ಸಮ್ಮೇಳನವೊಂದರ ಅಧ್ಯಕ್ಷರಾಗಿ ಪ್ರಚಲಿತ ಸಾಹಿತ್ಯ-ಸಂಸ್ಕೃತಿಗಳ ಸಮಸ್ಯೆಗಳ ಬಗ್ಗೆ ಮಾತನಾಡುತ್ತಾ, ಅದರ ಮುಂದುವರಿಕೆಯಾಗಿ ಅಥವಾ ಪೂರಕವಾಗಿ ರಾಜಕಾರಣಗಳ ಮತ್ತು ಮಠಾಧೀಶರ ಪಾತ್ರಗಳ ಬಗ್ಗೆ ಟೀಕೆ-ವ್ಯಾಖ್ಯಾನ ಮಾಡಿದ್ದರೆ, ಅವುಗಳಿಗೊಂದು ಹದವಿರುತ್ತಿತ್ತು, ಅದನ್ನು ನಾವು ಒಪ್ಪಬಹುದಿತ್ತು, ಸ್ವಾಗತಿಸಬಹುದಿತ್ತು. ಬದಲಿಗೆ, ಸಿದ್ಧ ಭಾಷಣವನ್ನು ಬಿಟ್ಟು ಎದುರಿಗಿದ್ದ ಜನರಾಶಿಯನ್ನು ನೋಡಿ ಸಮಯ ಸ್ಫೂರ್ತಿಗೆ ಒಳಗಾದಂತೆ ತಮ್ಮ ಆಲೋಚನಾ ಲಹರಿಯನ್ನು ಯದ್ವಾ ತದ್ವಾ ಹರಿಸ ಹೊರಟಿದ್ದು ಅವರ ಹಿರಿತನ ಮತ್ತು ವಿದ್ವತ್ತುಗಳಿಗೆ ತಕ್ಕುದಾಗಿರಲಿಲ್ಲ. ಈ ಅವಲಕ್ಷಣದೊಂದಿಗೆ ಆರಂಭವಾದ ಸಮ್ಮೇಳನ, ಊಟ-ವಸತಿಗಳ ಗಲಾಟೆ ಮತ್ತು ಕ್ಲೀಷಾತ್ಮಕ ವಿಷಯಗಳ ಬಗೆಗಿನ ಅತಿ ಸಾಮಾನ್ಯ ಗೋಷ್ಠಿಗಳೊಂದಿಗೆ, ನಾಡು-ನುಡಿಗಳ ಪ್ರವರ್ಧನೆಗೆ ಸಂಬಂಧಿಸಿದಂತೆ ಯಾವುದೇ ಗಮನಾರ್ಹ ಉದ್ದೇಶ ಸಾಧನೆಯಿಲ್ಲದೆ ಮುಗಿಯಿತಷ್ಟೆ.

ಆದುದರಿಂದ, ಕೋಟ್ಯಾಂತರ ರೂಪಾಯಿಗಳ ಸಾರ್ವಜನಿಕ ಹಣದಿಂದ ನಡೆಯುವ ಸಾಹಿತ್ಯ ಸಮ್ಮೇಳನವೊಂದರ ಯಶಸ್ಸನ್ನು, ಅದು ನಾಡು-ನುಡಿಯ ಪ್ರವರ್ಧನೆಯ ದೃಷ್ಟಿಯಿಂದ ಎಷ್ಟು ಸಾರ್ಥಕವಾಗಿದೆ ಎಂಬ ಅಳತೆಗೋಲಿನಿಂದಷ್ಟೇ ನಿರ್ಧರಿಸುವಂತಾಗಬೇಕು. ಈ ಸಾರ್ಥಕತೆ ಸಾಧ್ಯವಾಗುವುದು, ಜಾತ್ರೆಯಂತೆ ರೂಪಿತವಾಗಿ ಊಟ-ವಸತಿ ವ್ಯವಸ್ಥೆ, ಗೋಷ್ಠಿಗಳು, ಪುಸ್ತಕ ಪ್ರದರ್ಶನ, ಮಾರಾಟ-ಈ ಎಲ್ಲ ಹಂತಗಳಲ್ಲೂ ದೊಂಬಿ ಯಾದಂತಾಗುತ್ತಿರುವ ಸಮ್ಮೇಳನಗಳ ಬೃಹತ್ ಪ್ರಮಾಣ ಮತ್ತು ವೈಭವವನ್ನು ಕಡಿಮೆ ಮಾಡಿದಾಗ ಮಾತ್ರ. ಹಾಗಾದಲ್ಲಿ, ಈ ಹಿಂದೆ ಸೂಚಿಸಿದಂತೆ ಹಣ ಮತ್ತು ಸಂಘಟನೆಯ ಅಗತ್ಯಗಳೂ ಕಡಿಮೆಯಾಗಿ, ರಾಜಕಾರಣ ಮತ್ತು ಮಠಾಧೀಶರ ಮೇಲಿನ ಅವಲಂಬನೆಯೂ

ಕಡಿಮೆಯಾಗುತ್ತದೆ. ಜೊತೆಗೆ ಇವರಿಬ್ಬರನ್ನೂ ವೇದಿಕೆಗಳಿಂದ ದೂರವಿಡಲೂ ಸಾಧ್ಯವಾಗುತ್ತದೆ. ನಾನಿದನ್ನು ಇವರಿಬ್ಬರ ಬಗ್ಗೆ ಅವಮರ್ಯಾದೆಯಿಂದ ಹೇಳುತ್ತಿಲ್ಲ. ಅವರೂ ನಮ್ಮೆಲ್ಲರಂತೆ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುವ ಎಲ್ಲ ಅಧಿಕಾರ, ಹಕ್ಕು, ಅರ್ಹತೆ ಎಲ್ಲವನ್ನೂ ಹೊಂದಿದ್ದಾರೆ. ಆದರೆ ಸಭಿಕರಾಗಿ ಅಥವಾ ತಾವು ಪರಿಣತರಾದ ವಿಷಯಗಳಿಗೆ ಸಂಬಂಧಪಟ್ಟ ಗೋಷ್ಠಿಗಳಿಗೆ ಆಹ್ವಾನಿತರಾದ ಭಾಷಣಕಾರರಾಗಿ ಮಾತ್ರ.

ಮರಾಠಿ ಸಾಹಿತ್ಯ ಸಮ್ಮೇಳನಗಳಲ್ಲಿ ಮುಖ್ಯಮಂತ್ರಿಗಳಾದಿಯಾಗಿ ಸಮಾಜದ ಎಲ್ಲ ಗಣ್ಯರೂ ಯಾವುದೇ ಮುಜುಗರ ಅಥವಾ ಬಿಗುಮಾನವಿಲ್ಲದೆ ಸಭಿಕರ ಸಾಲಿನಲ್ಲಿ ಕೂತಿರುವುದನ್ನು ನಾವು ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ಅವರು ಅಲ್ಲಿಗೆ ಸಾಹಿತ್ಯ-ಸಂಸ್ಕೃತಿಗಳ ಬಗೆಗಿನ ಆಸಕ್ತಿಯಿಂದ ಬಂದು ಕೂರುತ್ತಾರೆ. ಸಾಹಿತ್ಯ-ಸಂಸ್ಕೃತಿ ಚಿಂತಕರ ಮಾತುಗಳನ್ನು ಕೇಳಿ ಹೋಗುತ್ತಾರೆ. ಅಲ್ಲಿ ಸಾಹಿತ್ಯ-ಸಂಸ್ಕೃತಿ ಚಿಂತಕರಿಗಷ್ಟೇ ವೇದಿಕೆ. ಅಲ್ಲಿ ಅವರೇ ಅಗ್ರಗಣ್ಯರು. ವರ್ಷದಲ್ಲಿ ಒಮ್ಮೆಯಾದರೂ ಅವರಿಗೆ ಅಗ್ರ ಸ್ಥಾನ ನೀಡದಿದ್ದರೆ, ಅವರ ಮಾತುಗಳನ್ನು ಒಂದು ಮುಕ್ತ ವಾತಾವರಣದಲ್ಲಿ ಆಲಿಸಲಾಗದಿದ್ದರೆ ಒಂದು ನಾಡು ಮತ್ತು ಅದರ ಸಾಹಿತ್ಯ ಸಂಸ್ಕೃತಿಗಳಾದರೂ ಹೇಗೆ ಬೆಳೆದಾವು? ಇದು ಮಹಾರಾಷ್ಟ್ರದಲ್ಲಿ ಸಾಧ್ಯವಾಗುವುದಾದರೆ, ಕರ್ನಾಟಕದಲ್ಲಿ ಏಕೆ ಸಾಧ್ಯವಾಗಬಾರದು?

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಲ್ಲೂರು ಪ್ರಸಾದರು ಈ ದಿಸೆಯಲ್ಲಿ ಯೋಚಿಸಬಲ್ಲರೆಂಬ ನಂಬಿಕೆ ನನಗಿರುವುದರಿಂದಲೇ ಇಷ್ಟೆಲ್ಲ ಬರೆದಿದ್ದೇನೆ.

(೨೭ ಫೆಬ್ರುವರಿ, ೨೦೦೯)

■

೪೦. ಮುಸ್ಲಿಂ ಬುದ್ಧಿಜೀವಿಗಳೇ ಎಚ್ಚೆತ್ತುಕೊಳ್ಳಿ!

ಕನ್ನಡದಲ್ಲಿ ಇಸ್ಲಾಂ ಧರ್ಮ ಮತ್ತು ಇತಿಹಾಸ ಕುರಿತ ಪುಸ್ತಕಗಳು ಬಹಳ ಇಲ್ಲ. ಕುರಾನ್ ಕನ್ನಡಕ್ಕೆ ಅನುವಾದವಾಗಿದೆ. ಆದರೆ ಅದನ್ನು ಓದಲು ಅಸಾಧ್ಯವಾಗುವಷ್ಟರ ಮಟ್ಟಿಗೆ ಅದರ ಭಾಷೆ ಕನ್ನಡದ ಜಾಯಮಾನದಿಂದ ದೂರವಾಗಿದೆ. ಇನ್ನು ಮಂಗಳೂರಿನ ಶಾಂತಿ ಪ್ರಕಾಶನದವರು ಪ್ರಕಟಿಸಿರುವ ಪುಸ್ತಕಗಳು ಸುಲಭ ಮತ್ತು ಸರಳ ಕನ್ನಡದಲ್ಲಿವೆಯಾದರೂ, ಅವು ಮತ ಪ್ರಚಾರದ ದೃಷ್ಟಿಕೋನದಿಂದಲೇ ಬರೆಯಲ್ಪಟ್ಟು ಪ್ರಕಾಶಿತವಾಗುತ್ತಿರುವುದರಿಂದ ಅವುಗಳ ವಿಶ್ವಾಸಾರ್ಹತೆ ಯಾವಾಗಲೂ ಅನುಮಾನಾಸ್ಪದವೇ. ಈ ದೃಷ್ಟಿಯಿಂದ ಸಾರ್ವತ್ರಿಕ ಓದಿಗೆ ಲಭ್ಯವಿರುವ ಒಂದೇ ಒಂದು ಒಳ್ಳೆಯ ಪುಸ್ತಕವೆಂದರೆ, ಬಿ.ಎಂ.ಶ್ರೀ. ಅವರು ಅನುವಾದಿಸಿ ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿರುವ ಮಹಮ್ಮದ್ ಅಬ್ಬಾಸ್ ಷೂಸ್ತ್ರಿ ಅವರ 'ಇಸ್ಲಾಂ ಸಂಸ್ಕೃತಿ' ಎಂದು ಕಾಣುತ್ತದೆ. ಇದಕ್ಕೆ ಕುವೆಂಪು ಅವರ ಒಂದು ಅದ್ಭುತ ಮುನ್ನುಡಿಯೂ ಇದೆ. ಆದರೆ, ಇದರ ಪ್ರತಿ ಇಂದು ದುರ್ಲಭವಾಗಿದೆಯೆಂದೇ ಕೇಳಿದ್ದೇನೆ. ಹಾಗಾಗಿ ಕನ್ನಡಿಗರಾದ ಮುಸ್ಲಿಮೇತರರಿಗೆ ಇಸ್ಲಾಂ ಧರ್ಮ ಮತ್ತು ಸಂಸ್ಕೃತಿಗಳನ್ನು ಅರಿಯುವ ಅವಕಾಶ ಕಡಿಮೆಯೇ ಎಂದು ಹೇಳಬೇಕು. ದರ್ಗಾ ಮತ್ತು ಮೊಹರಂ ಸಂಸ್ಕೃತಿ ಪ್ರಚಲಿತವಿರುವ ಕೆಲವು ಗ್ರಾಮಾಂತರ ಪ್ರದೇಶಗಳ ಸಾಮಾನ್ಯ ಜನಜೀವನದ ಪಾತಳಿಯಲ್ಲಿ, ಇದು ಒಂದಷ್ಟು ಅರಿವಿಗೆ ತೆರೆದುಕೊಂಡಿರಬಹುದಷ್ಟೆ. ನಗರ ಪ್ರದೇಶಗಳಲ್ಲಂತೂ, ಮುಸ್ಲಿಮೇತರರು ಮುಸ್ಲಿಂ ಹಬ್ಬಗಳಲ್ಲಿ ತಮ್ಮ ಮುಸ್ಲಿಂ ಸ್ನೇಹಿತರ ಮನೆಗಳಲ್ಲಿ ರುಚಿಕಟ್ಟಾದ ದಂ ಬಿರಿಯಾನಿ ತಿಂದು ಬರುವುದರ ಹೊರತಾಗಿ, ಅದನ್ನು ಮೀರಿ ಅವರೊಂದಿಗೆ ಸಾಂಸ್ಕೃತಿಕ ಸಂಬಂಧಗಳನ್ನು ಸ್ಥಾಪಿಸಿಕೊಂಡ ಸುಳಿವುಗಳಿಲ್ಲ! ನಮ್ಮ ರಾಜ್ಯದಲ್ಲಿ ಕೋಮು ಪರಿಸ್ಥಿತಿ ಇಂದು ಒಂದು ಕುದಿ ಬಿಂದುವಿಗೆ ಬರುತ್ತಿರುವುದಕ್ಕೆ ಇಂತಹ ಪರಸ್ಪರ ಧಾರ್ಮಿಕ-ಸಾಂಸ್ಕೃತಿಕ ತಿಳುವಳಿಕೆಯ ಕೊರತೆಯೂ ಒಂದು ಕಾರಣವಾಗಿದ್ದರೆ ಆಶ್ಚರ್ಯವಿಲ್ಲ.

ಇಂತಹ ಸಂದರ್ಭದಲ್ಲಿ ಹಸನ್ ನಯೀಂ ಸುರಕೋಡ ಅವರು ಅನುವಾದಿಸಿರುವ 'ಇಸ್ಲಾಂ: ಹುಟ್ಟು ಮತ್ತು ವಿಕಾಸ' ಪುಸ್ತಕದ (ಪ್ರ: ಲೋಹಿಯಾ ಪ್ರಕಾಶನ, ಬಳ್ಳಾರಿ) ಮಹತ್ವ ಮತ್ತು ಪ್ರಸ್ತುತತೆ ಎದ್ದು ಕಾಣುವಂತಿದೆ. ಇಂದು ಭಾರತದಲ್ಲಿ ಅಪರೂಪವಾಗಿರುವ ಮುಸ್ಲಿಂ ವೈಚಾರಿಕರಲ್ಲಿ ಒಬ್ಬರಾದ ಅಸ್ಗರ್ ಅಲಿ ಇಂಜಿನಿಯರ್ ಅವರ 'The origin and development of Islam' ಎಂಬ ಇಂಗ್ಲಿಷ್ ಪುಸ್ತಕದ ಕನ್ನಡ ಅವತರಣಿಕೆಯಿದು.

ಸುರಕೋಡ ಬೆಳಗಾವಿ ಜಿಲ್ಲೆಯ ರಾಮದುರ್ಗವೆಂಬ ಮೂಲೆಯೂರಿನಲ್ಲಿ ತಮ್ಮ ಪಾಡಿಗೆ ತಾವು ಮೌನವಾಗಿ ಸಮಾಜವಾದಿ ಕೆಲಸಗಳಲ್ಲಿ ತೊಡಗಿಕೊಂಡವರು. ಲೋಹಿಯಾ ವ್ಯಕ್ತಿ-ವಿಚಾರಗಳನ್ನು ಕನ್ನಡಕ್ಕೆ ತರುತ್ತಿರುವ ಪ್ರಮುಖರಲ್ಲಿ ಅವರೂ ಒಬ್ಬರು. ಜೊತೆಗೆ ಭಾರತದ ಇಸ್ಲಾಮೀ ಸಂಸ್ಕೃತಿ ಮತ್ತು ಅದರ ರಾಜಕೀಯ ಮುಖಗಳನ್ನು ವಿಶ್ಲೇಷಿಸುವ ಸಾಹಿತ್ಯವನ್ನೂ ಕನ್ನಡಕ್ಕೆ ತರುತ್ತಿರುವವರು. ಇವರ ಅನುವಾದಗಳಾದ 'ಹಿಂದೂ ಮಂದಿರಗಳು ಮತ್ತು ಔರಂಗಜೇಬನ ಆದೇಶಗಳು' ಹಾಗೂ 'ಅಯೋಧ್ಯೆ: ವಿನಾಶಕಾರಿ ವೋಟ್‌ಬ್ಯಾಂಕ್ ರಾಜಕೀಯ' ಈ ದೃಷ್ಟಿಯಿಂದ ಎಲ್ಲರೂ ಗಮನಿಸಬೇಕಾದ ಪುಸ್ತಕಗಳು. ಈಗ ಸುರಕೋಡ ಅವರಿಗೆ ಅಮೃತಾ ಪ್ರೀತಂ ಅವರ ಆತ್ಮಕತೆ 'ರಸೀದಿ ಟಿಕೆಟ್' ಅನುವಾದಕ್ಕಾಗಿ ೨೦೦೮ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಅವರಿಗೆ ಅಭಿನಂದನೆಗಳು!

'ಇಸ್ಲಾಂ: ಹುಟ್ಟು ಮತ್ತು ವಿಕಾಸ', ಅದರ ಶೀರ್ಷಿಕೆಯೇ ಸೂಚಿಸುವಂತೆ ಅರೇಬಿಯಾದಲ್ಲಿ ಇಸ್ಲಾಂ ಧರ್ಮ ಹುಟ್ಟಲು ಇದ್ದ ಕಾರಣಗಳು, ಅದು ಮಹಮ್ಮದ್ ಪೈಗಂಬರರ ಮೂಲಕ ವ್ಯಕ್ತವಾದ ರೀತಿ-ನೀತಿಗಳು, ಅದು ವಿಕಾಸದ ಹಾದಿಯಲ್ಲಿ ಎದುರಿಸಿದ ಸವಾಲುಗಳು, ಬದಲಾಗುತ್ತಾ ಹೋದ ಅದರ ದೈವಶಾಸ್ತ್ರ ಹಾಗೂ ಆ ಮೂಲಕ ಇತಿಹಾಸವಲ್ಲಿ ಅದು ರೂಪಾಂತರವಾಗುತ್ತಾ ಹೋದ ಬಗೆಗಳನ್ನು ನಿರೂಪಿಸುತ್ತಾ, ಇಂದು ಈ ಧರ್ಮ ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯದ ಸೂಚನೆ ನೀಡುತ್ತಾ ಮುಕ್ತಾಯವಾಗುತ್ತದೆ. ಪಾಶ್ಚಿಮಾತ್ಯ ಇತಿಹಾಸಕಾರರ ಹಾಗೂ ಮಾರ್ಕ್ಸ್‌ವಾದಿ ವಿಶ್ಲೇಷಕರ ಸಂಕೀರ್ಣ ಮತ್ತು ಪಾರಿಭಾಷಿಕ ಉಲ್ಲೇಖಗಳಿಂದ ತುಂಬಿ ಹೋಗಿರುವ ಈ ಪುಸ್ತಕ, ಪಶ್ಚಿಮದ ಪ್ರಪಂಚಕ್ಕೆ ಹೋಲಿಸಿದಂತೆ ನಮಗೆ ಸಂಪೂರ್ಣವಾಗಿ ಅಪರಿಚಿತವಾಗಿರುವ ಪ್ರದೇಶವೊಂದರ ಇತಿಹಾಸ-ರಾಜಕಾರಣಗಳ ಹೇಳುತ್ತಿರುವುದರಿಂದಲೋ ಏನೋ, ಮೊದಮೊದಲಿಗೆ ಗ್ರಹಿಕೆಗೆ ಕ್ಲಿಷ್ಟ ಎನಿಸುತ್ತದೆ. ಆದರೆ ನಮ್ಮ ಜೊತೆಯಲ್ಲಿ ಬಾಳುತ್ತಿರುವ ದೊಡ್ಡ ಸಮುದಾಯವೊಂದರ ಆಳದ ಮಾನಸಿಕತೆಯನ್ನು ಅರಿಯುವ ಅಗತ್ಯವನ್ನು ಮನಗಾಣಬಲ್ಲ ಯಾರಾದರೂ ಸ್ವಲ್ಪ ಕಷ್ಟಪಟ್ಟಾದರೂ ಇದನ್ನು ಓದಲೇ ಬೇಕಾಗುತ್ತದೆ. ಹಾಗೆ ಓದಿ ಮುಗಿಸಿದಾಗ, ಪುಸ್ತಕ ಇಂದಿನ ಕೋಮು ಪರಿಸ್ಥಿತಿಯನ್ನು ನಾವು ನೋಡುವ, ಅರ್ಥ ಮಾಡಿಕೊಳ್ಳುವ ಮತ್ತು ವಿಶ್ಲೇಷಿಸುವ ರೀತಿ ನೀತಿಗಳಲ್ಲಿ ಗುಣಾತ್ಮಕ ಬದಲಾವಣೆಯನ್ನು ಒತ್ತಾಯಿಸುತ್ತದೆ. ಇದೇ ಪುಸ್ತಕದ ಹೆಗ್ಗಳಿಕೆಯೂ ಆಗಿದೆ.

ಐದನೇ ಶತಮಾನದಲ್ಲಿ ಮಧ್ಯಪ್ರಾಚ್ಯದ, ನಿರ್ದಿಷ್ಟವಾಗಿ ಅರೇಬಿಯಾದ ಅನೇಕ ಬುಡಕಟ್ಟುಗಳ ನಡುವೆ, ಪಶು ಸಂಗೋಪನಾ ಮತ್ತು ವ್ಯಾಪಾರಿ ಸಮುದಾಯಗಳ ನಡುವೆ, ಅಲೆಮಾರಿ ಮತ್ತು ನಗರವಾಸಿಗಳ ನಡುವೆ–ಹೀಗೆ ಹಲವು ಸ್ತರಗಳಲ್ಲಿ ನಡೆದಿದ್ದ ಕಾಳಗಗಳಿಂದಾಗಿ ಹಿಂಸಾತ್ಮಕವೂ ಮತ್ತು ಅಶಾಂತವೂ ಆಗಿದ್ದ ಒಂದು ಪ್ರದೇಶದ ಜನ ಸಮುದಾಯದ ಮಧ್ಯೆ ಮಹಮ್ಮದ್ 'ದೇವದೂತ'ರಾಗಿ ಪ್ರಸ್ತುತಗೊಂಡು, ಆ ಸಮುದಾಯದ ನೆಮ್ಮದಿ ಮತ್ತು ಐಕ್ಯತೆಗಾಗಿ ಒಂದು ಸಾಮಾಜಿಕ ಸಂಹಿತೆಯನ್ನು ಜಾರಿಗೊಳಿಸಲು

ಹೆಣಗಿದರು. ಆ ಮೂಲಕ, ಅಲ್ಲಿನ ರಣರಂಗದಲ್ಲಿ ಸೃಷ್ಟಿಯಾಗಿದ್ದ ಅಸಂಖ್ಯಾತ ಅನಾಥ ಮಕ್ಕಳ, ವಿಧವೆಯರ ಮತ್ತು ಗುಲಾಮರ ಗೋಳು-ಸಂಕಷ್ಟಗಳನ್ನು ಒಂದು ತಹಬಂದಿಗೆ ತರಲು ಯತ್ನಿಸಿದರು. ಇದಕ್ಕಾಗಿ ಮುಖ್ಯವಾಗಿ ಪ್ರವಾದಿ ಬಳಸಿದ್ದು ಏಕದೇವತೋಪಾಸನೆಯ ತತ್ವ ಮತ್ತು ಮೂರ್ತಿಭಂಜನೆಯ ಕಾರ್ಯಕ್ರಮಗಳನ್ನು. ಏಕೆಂದರೆ ಅಲ್ಲಿನ ಬುಡಕಟ್ಟುಗಳು ಹಲವಾರು ಕಲ್ಲು-ಮರಗಳ ದೇವತೆಗಳನ್ನು ಪೂಜಿಸುತ್ತ, ಮೌಢ್ಯಾಚಾರಗಳಲ್ಲಿ ಮುಳುಗಿ, ಪರಸ್ಪರ ವೈರ ಮತ್ತು ಭೀಕರ ಹಿಂಸಾಚಾರಗಳಿಗೆ ಕಾರಣವಾಗಿದ್ದವು. ಅರೇಬಿಯಾ ಮೂಲತಃ ಮರುಭೂಮಿಯದುದರಿಂದ ಅಲ್ಲಿ ಕೃಷಿ ಸಮಾಜವೆಂಬುದೇ ವಿಕಾಸವಾಗಿರಲಿಲ್ಲ. ಹಾಗಾಗಿ ಅಲ್ಲಿ ಯಾವುದೇ 'ಸಂಸ್ಕೃತಿ' ಎಂಬುದರ ಸುಳಿವಿರಲಿಲ್ಲ. ಒಂಟೆಗಳೇ ಏಕೈಕ ಜೀವನಾಧಾರವಾಗಿದ್ದ ಅಲ್ಲಿ, ಅವನ್ನು ಬಳಸಿಕೊಂಡೇ ಆಹಾರ ಮತ್ತು ಇತರ ಜೀವನಾವಶ್ಯಕತೆಗಳಿಗಾಗಿ ಖಂಡಾಂತರ ವ್ಯಾಪಾರ ಮತ್ತು ಲೂಟಿಗಳಲ್ಲಿ ತೊಡಗಿದ್ದವು. ಹಾಗಾಗಿ, ಅಲ್ಲಿನ ಬುಡಕಟ್ಟು ಗಳು ಮೂಲತಃ ಅನಾಗರಿಕವಾಗಿದ್ದವು ಮತ್ತು ಬರ್ಬರತೆಯೇ ಅವರ ಸಹಜ ಧರ್ಮವಾಗಿತ್ತು.

ಇವರಿಗೊಂದು ನಾಗರೀಕತೆಯನ್ನು ರೂಪಿಸುವ ಸಾಹಸ ಮಾಡಿದವರು ಮಹಮ್ಮದ್. ಹಾಗಾಗಿಯೇ ಇಸ್ಲಾಂ ಮೂಲತಃ ಒಂದು ಲೌಕಿಕ ಧರ್ಮವಾಗಿ, ಮನುಷ್ಯನ ಸಾಮಾಜಿಕ ಜೀವನದ ಬಗ್ಗೆ (ಊಟ, ಮದುವೆ, ದೈಹಿಕ ಶುಚಿ, ಉಡುಪಿನ ಶೈಲಿ, ಅತಿಥಿ ಸತ್ಕಾರ, ಆಸ್ತಿ ವಾರಸುದಾರಿಕೆ ಹಾಗೂ ವಿತರಣೆ, ಯುದ್ಧ ತಂತ್ರ, ಶತ್ರು ನಾಶ ಇತ್ಯಾದಿ) ವಿವರವಾದ ನಿರ್ದೇಶನಗಳನ್ನು ನೀಡುತ್ತದೆ. ಇದಕ್ಕೆ ಹಿನ್ನೆಲೆಯಾಗಿ ಮತ್ತು ಸಮರ್ಥನೆಯಾಗಷ್ಟೇ ಅದು ತನ್ನ ದೈವಶಾಸ್ತ್ರವನ್ನು ಸೃಷ್ಟಿಸಿಕೊಂಡಿದೆ. ಹಾಗಾಗಿ ಮಹಮ್ಮದರು ತಮ್ಮ ಧರ್ಮ ಪ್ರಸಾರಕ್ಕಾಗಿ ಒಬ್ಬ ಅಧ್ಯಾತ್ಮಿಕ ವ್ಯಕ್ತಿಯಾಗಿ ಮಾತ್ರವಲ್ಲ, ರಾಜಕೀಯ ನಾಯಕರಾಗಿಯೂ ಕೆಲಸ ಮಾಡಬೇಕಾಯಿತು. ಇಸ್ಲಾಂ ಧರ್ಮದೊಂದಿಗೆ ಇಸ್ಲಾಂ ರಾಜ್ಯವೊಂದನ್ನೂ ಸ್ಥಾಪಿಸಬೇಕಾಯಿತು. ಮೂಲತಃ ವ್ಯಾಪಾರಿ ಕುಟುಂಬವೊಂದರಲ್ಲಿ ಜನಿಸಿ, ಶ್ರೀಮಂತ ವ್ಯಾಪಾರಿ ಮಹಿಳೆಯೊಬ್ಬರನ್ನು ಮದುವೆಯಾದ ಮಹಮ್ಮದರು ಆಸ್ತಿಕತೆ, ಸಮಾನತೆ ಮತ್ತು ಸೋದರತೆಗಳನ್ನು ಆಧರಿಸಿದ ಸಮಾಜವೊಂದನ್ನು ಕಟ್ಟುವ ತಮ್ಮ ಪ್ರಯತ್ನದಲ್ಲಿ ಪಟ್ಟಭದ್ರ ವ್ಯಾಪಾರಿ ಮತ್ತು ಅಲೆಮಾರಿ ಬುಡಕಟ್ಟು ಈ ಎರಡೂ ಸಮುದಾಯಗಳಿಂದಲೂ ವೈರ ಮತ್ತು ದಾಳಿಗಳನ್ನು ಎದುರಿಸಬೇಕಾಯಿತು. ಹಾಗಾಗಿ ಅವರು ತಮ್ಮ ಮೂಲ ಸ್ಥಳವಾದ ಅರಬ್ಬರ ಮುಖ್ಯ ವ್ಯಾಪಾರಿ ಕೇಂದ್ರವಾಗಿದ್ದ ಮೆಕ್ಕಾದಿಂದ, ಈಗಾಗಲೇ ಯಹೂದಿ ಮತ್ತು ಕ್ರಿಶ್ಚಿಯನ್ ಧರ್ಮಗಳಿಂದ ಪ್ರಭಾವಿತವಾಗಿ ಸ್ವಲ್ಪ ವೈಚಾರಿಕ ಸ್ಪಂದನಶೀಲತೆಯನ್ನು ಬೆಳೆಸಿಕೊಂಡ, ಮಿಶ್ರ ಸಮಾಜವಿದ್ದ ಮದೀನಾಗೆ ಓಡಿ ಹೋಗಬೇಕಾಯಿತು. ಅಲ್ಲಿ ಅವರು ತಮ್ಮ ಅನುಯಾಯಿಗಳ ದೊಡ್ಡ ಗುಂಪೊಂದನ್ನು ಕಟ್ಟಿಕೊಂಡು ತಮ್ಮ ಎದುರಾಳಿಗಳನ್ನು ಹಲವು ಪ್ರತಿ ದಾಳಿ-ಲೂಟಿ ಮುಂತಾದ ಸುಯೋಜಿತ ಯುದ್ಧೋಪಾಯಗಳ ಮೂಲಕ ನಿರ್ದಯವಾಗಿ ಬಗ್ಗು ಬಡಿದು, ಈ ಲೂಟಿಗಳಲ್ಲಿ ದೋಚಿದ ಸಂಪತ್ತನ್ನು ತಮ್ಮ ಅನುಯಾಯಿಗಳಲ್ಲಿ ಹಂಚುತ್ತಾ ಮುಸ್ಲಿಂ ಸಮಾಜವೆಂಬುದೊಂದರ ಅಸ್ತಿವಾರ ಹಾಕಬೇಕಾಯಿತು.

ಇಸ್ಲಾಂ ಧರ್ಮದ ನೀತಿಶಾಸ್ತ್ರ ಮೂಲತಃ ಈ ಪ್ರಕ್ರಿಯೆಯಲ್ಲಿ ಹುಟ್ಟಿದುದು. ಅಲ್ಲಿ ದಯೆ, ಕರುಣೆ, ಕ್ಷಮೆಗಳೆನ್ನುವುದು ಸಾರ್ವತ್ರಿಕ ಅಥವಾ ನಿರಪೇಕ್ಷ ಮೌಲ್ಯಗಳಲ್ಲ. ಅವೇನಿದ್ದರೂ ವ್ಯಾವಹಾರಿಕ ಮತ್ತು ಸಾಂದರ್ಭಿಕ. ಹೀಗಾಗಿ ಇಸ್ಲಾಮನ್ನು ಇತರ ಧರ್ಮಗಳ ಎರಕದಲ್ಲಿಟ್ಟು ವಿಮರ್ಶಿಸುವುದು ಅಸಂಗತವಾದೀತು. ಈಗ ನಾವು ಮಾಡುತ್ತಿರುವ ತಪ್ಪು ಇದೇ ಆಗಿದೆ. ಮಹಮ್ಮದರ ನಂತರದ ದಿನಗಳಲ್ಲಿ, ಏಳು-ಎಂಟನೇ ಶತಮಾನಗಳ ಹೊತ್ತಿಗೆ ಇಸ್ಲಾಂ ರಾಜ್ಯ ಒಂದು ಸಾಮ್ರಾಜ್ಯವಾಗಿ ವಿಸ್ತರಿಸುತ್ತಾ, ಹಲವು ಅನ್ಯ ಸಂಸ್ಕೃತಿಗಳ–ವಿಶೇಷವಾಗಿ ಪರ್ಷಿಯನ್, ಗ್ರೀಕ್ ಮತ್ತು ಭಾರತೀಯ–ಸಂಪರ್ಕಕ್ಕೆ ಬಂದಿತು. ಇದರಿಂದಾಗಿ ಅದು ತನ್ನ ಹುಟ್ಟಿನ ಕಟು ವಾಸ್ತವದ ಸ್ಮೃತಿಗಳಾಚೆ ಬೆಳೆದು, ತನ್ನ ಹಲವಾರು ಉದಾರವಾದಿ ಆವೃತ್ತಿಗಳಲ್ಲಿ ಅನುಭಾವಿಕ ಸ್ತರಗಳನ್ನು ಮುಟ್ಟುವ ಪ್ರಯತ್ನವನ್ನೂ ಮಾಡಿತು. ಇಂತಹ ಸಂದರ್ಭಗಳಲ್ಲೇ ಮುಸ್ಲಿಂ ಸಮುದಾಯ ಸಾಹಿತ್ಯ, ಸಂಗೀತ, ವಾಸ್ತು, ವಿಜ್ಞಾನ ಇತ್ಯಾದಿ ಕ್ಷೇತ್ರಗಳಲ್ಲಿ ಅನುಪಮವೆನ್ನಬಹುದಾದ ಸಾಧನೆಗಳನ್ನು ಮಾಡಲು ಸಾಧ್ಯವಾದದ್ದು ಮತ್ತು ಅದರ ಪರಿಣಾಮವಾಗಿ ಈ ಧರ್ಮ ಕಾಲದ ಕಟ್ಟುಗಳನ್ನು ಕಳಚಿಕೊಂಡು ಸ್ಪಂದನಶೀಲವೂ ಆದದ್ದು.

ಆದರೆ, ನಿರ್ದಯ ಯುದ್ಧಗಳಲ್ಲೇ ಹುಟ್ಟಿ ಬೆಳೆದ ಈ 'ಧರ್ಮರಾಜ್ಯ'ದಲ್ಲಿ–ಅಂದರೆ ಧರ್ಮ ಮತ್ತು ಪ್ರಭುತ್ವ ಅವಿಭಾಜ್ಯವಾಗಿರುವ ವ್ಯವಸ್ಥೆಯಲ್ಲಿ–ಹಳೆಯ ಸ್ಮೃತಿಗಳನ್ನಾಧರಿಸಿದ ಗುಂಪುಗಳ ಬಂಡಾಯಗಳು ನಿರಂತರವಾಗಿ ಏಳುತ್ತಲೇ ಬಂದುದರಿಂದ ಮತ್ತು ಬರುತ್ತಿರುವುದರಿಂದ (ಉದಾ: ಇಂದಿನ 'ತಾಲಿಬಾನ್') ಇಸ್ಲಾಂ ತನ್ನೆಲ್ಲಾ ಅನುಭಾವಿಕತೆಯನ್ನು ವಿಸ್ಮೃತಿಗೆ ತಳ್ಳಿಕೊಳ್ಳುತ್ತಲೇ ಬಂದಿದೆ. ಇದರ ಪರಿಣಾಮವಾಗಿ ಅದು ಮುಲ್ಲಾಶಾಹಿ ಎಂದು ಕರೆಯಬಹುದಾದ ಪುರೋಹಿತಶಾಹಿಯೊಂದರ ಪ್ರಬಲ ಹಿಡಿತಕ್ಕೆ ಸಿಕ್ಕಿ ಹಾಕಿಕೊಂಡಿದೆ. ಹೀಗಾಗಿ ಅದು ಇತರ ಧರ್ಮೀಯರಿಗೆ ಒಂದು 'ಸಮಸ್ಯಾತ್ಮಕ' ಧರ್ಮವೇ ಆಗಿ ಬೆಳೆದು ನಿಂತಿದೆ. ಮುಖ್ಯವಾಗಿ ಪ್ರಜಾಪ್ರಭುತ್ವ ಎಂಬ ಆಧುನಿಕ ತತ್ವ ಅದಕ್ಕೊಂದು ಸಂಪೂರ್ಣವಾಗಿ ಪರಿಹರಿಸಿಕೊಳ್ಳಲಾಗದ ಸಮಸ್ಯೆಯೇ ಆಗಿಬಿಟ್ಟಿದೆ. ಅದು ಪರಿಶುದ್ಧತೆಯ ಹೆಸರಿನಲ್ಲಿ, ಕೆಲವು ಸಂಕ್ಷಿಪ್ತ ಮತ್ತು ಸ್ಪಂದನಶೀಲ ವಿರಾಮಗಳ ಹೊರತಾಗಿ, ತನ್ನ ಮಧ್ಯಯುಗೀನತೆಯನ್ನು ಕಳೆದುಕೊಳ್ಳಲು ಸದಾ ನಿರಾಕರಿಸುತ್ತಲೇ ಬಂದಿದೆ.

ಈ ಪರಿಶುದ್ಧತೆಯ ಮಾದರಿಯಲ್ಲಿ ಸಮಾನತೆ ಹಾಗೂ ಸೋದರತೆಗಳ ಮತ್ತು ಅವುಗಳ ಸ್ಥಾಪನೆಗಾಗಿ ದಯೆ-ದಾನಗಳ ಮೌಲ್ಯಗಳನ್ನು ಎತ್ತಿ ಹಿಡಿಯಲಾಗಿದೆ, ನಿಜ. ಆದರೆ, ಅವುಗಳೆಲ್ಲವೂ ಮಹಮ್ಮದರ ಕಾಲದ ಧಾರ್ಮಿಕ ಆಡಳಿತದ ಮಾದರಿ ಚೌಕಟ್ಟಿನಲ್ಲಿಯೇ ಜಾರಿಯಾಗಬೇಕೆಂಬ ನಂಬಿಕೆಯೂ ಇದರಲ್ಲಿ ಅಂತರ್ಗತವಾಗಿರುವುದರಿಂದ, ಈ ಮೌಲ್ಯಗಳು ಅವುಗಳ ಮಧ್ಯಯುಗೀನ ಅರ್ಥದಲ್ಲಿಯಷ್ಟೇ ಪ್ರಸ್ತುತಗೊಳ್ಳುತ್ತಿವೆ. ಉದಾಹರಣೆಗೆ, ಗಂಡು ಹೆಣ್ಣುಗಳಿಬ್ಬರಿಗೂ ವಿವಾಹದ ಆಯ್ಕೆಯ ಮತ್ತು ವಿಚ್ಛೇದನದ ಹಕ್ಕು ನೀಡುವ ಇಸ್ಲಾಂ, ಹೆಣ್ಣು ಗಂಡಿಗಿಂತ ಕಡಿಮೆ ದರ್ಜೆಯ ಪ್ರಾಣಿ ಎಂಬ ನಂಬಿಕೆಯನ್ನು ಬಿತ್ತುತ್ತಾ, ಅವಳಿಗೆ ಆಸ್ತಿ,

ವಿದ್ಯೆ, ಲೈಂಗಿಕತೆ, ಸಾರ್ವಜನಿಕ ಜೀವನ ಇತ್ಯಾದಿ ವಿಷಯಗಳಲ್ಲಿ ಸಮಾನತೆಯನ್ನು ನಿರಾಕರಿಸುತ್ತದೆ. ಇದು ಮಹಮ್ಮದರ ಕಾಲದಲ್ಲಿದ್ದ ಸಮಾಜದ ಸಂದರ್ಭದಲ್ಲಿ ಉಚಿತವೆನಿಸಬಹುದಾಗಿದ್ದರೂ, ಈಗ? ಜಗತ್ತಿನಾದ್ಯಂತ ಮುಸ್ಲಿಂ ಜಗತ್ತಿನಲ್ಲಿ ಇದನ್ನು ಪ್ರಶ್ನಿಸುವವರನ್ನೆಲ್ಲ ಹೇಗೆ ಹೆದರಿಸಿ ಬಾಯಿ ಮುಚ್ಚಿಸುವ ಅನಾಗರಿಕ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ.

ಇದಕ್ಕೆ ಕಾರಣ, ಮಹಮ್ಮದರ ಕಾಲದಲ್ಲೇ ಈ ಸಮಾನತೆ, ಸೋದರತೆ ಮತ್ತು ಆ ಸಂಬಂಧದ ದಯೆ-ದಾನ ಇತ್ಯಾದಿ ಉದಾರವಾದಿ ಮೌಲ್ಯಗಳನ್ನು ಮೂರ್ತ ರೂಪಗಳಲ್ಲಿ ನೆಲೆಗೊಳಿಸುವುದು ಸಾಧ್ಯವಾಗದೇ ಹೋದದ್ದು. ಇದಕ್ಕೆ ಮತ್ತೆ, ಅವರು ಧರ್ಮ ಪ್ರಸಾರಕ್ಕಾಗಿ ಅನುಸರಿಸಿದ ಮಾರ್ಗ ಮತ್ತು ಅದರಿಂದಾಗಿಯೇ ಎದುರಿಸಬೇಕಾಗಿ ಬಂದ ಸಶಸ್ತ್ರ ಬಂಡಾಯಗಳ ವಿಷಮ ಸಂದರ್ಭಗಳೇ ಕಾರಣವೆಂದು ಅಸ್ಗರ್ ಅಲಿ ಅಭಿಪ್ರಾಯ ಪಡುತ್ತಾರೆ. (ವಿವೇಕಾನಂದರು, ಪೈಗಂಬರರ ಆಧ್ಯಾತ್ಮಿಕ ಸಾಧನೆ ಒಂದು ಹಂತದಾಚೆಗೆ ದಾಟದೇ ಇದ್ದುದೇ ಇದಕ್ಕೆ ಕಾರಣವೆಂದು ಹೇಳುತ್ತಾರೆ!) ಅಸ್ಗರ್ ಪ್ರಕಾರ ಇಸ್ಲಾಂನ ಹೆಗ್ಗುರುತುಗಳೆಂದು ಹೇಳಲಾಗುವ ಸೋದರತೆ ಮತ್ತು ಸಮಾನತೆಗಳು ನಮಾಜ್‌ಗೆ ಎಲ್ಲರೂ ಒಂದೇ ಸಾಲಿನಲ್ಲಿ ಸಮಾನವಾಗಿ ನಿಲ್ಲುವುದಕ್ಕಷ್ಟೇ ಸೀಮಿತವಾಗಿದ್ದರೆ, ದಯೆ-ದಾನಗಳು ಸಾಂದರ್ಭಿಕ ಮತ್ತು ಸಾಂಕೇತಿಕ ವಿಧಿಗಳಾಗಿ ಮಾತ್ರ ಜಾರಿಯಲ್ಲಿವೆ. ಹೀಗಾಗಿ ಮುಸ್ಲಿಂ ಸಮಾಜ ಎಲ್ಲ ಸಮಾಜಗಳಂತೆಯೇ ಐತಿಹಾಸಿಕವಾಗಿ ಆರ್ಥಿಕ ಮತ್ತು ಸಾಮಾಜಿಕ ಅಸಮತೆಗಳ ಸಮಾಜವಾಗಿ ಉಳಿದುಕೊಂಡು ಬಂದಿದೆ. ಹಾಗಾಗಿಯೇ ಮಹಮ್ಮದರು ಎತ್ತಿ ಹಿಡಿದ ಮೌಲ್ಯಗಳನ್ನು ಈ ಕಾಲಕ್ಕೂ ಪ್ರಸ್ತುತಗೊಳಿಸಿಕೊಳ್ಳಲು, ಅಂದರೆ ಸೋದರತೆ, ಸಮಾನತೆಗಳನ್ನು ಸ್ಥಾಪಿಸಲು, ಇಸ್ಲಾಂ ಮೊದಲು ತನ್ನನ್ನು ತಾನು ದೇಶ-ಕಾಲಗಳ ಬಂಧನಗಳಿಂದ ಬಿಡಿಸಿಕೊಳ್ಳಬೇಕೆಂದು ಲೇಖಕರು ಸೂಚಿಸುತ್ತಾರೆ.

ಆದರೆ ಇಂದು ನಮ್ಮ ಕಣ್ಮುಂದೆಯೇ, ಬುರ್ಕಾಗಳ, ಟೋಪಿಗಳ, ವೈಭವೋಪೇತ ಮಸೀದಿಗಳ, ಮದರಸಾಗಳ ಸಂಖ್ಯೆ ಒಂದೇ ಸಮನೆ ಏರುತ್ತಿದೆ. ಇಂದು ಮೂಲೆ ಹಳ್ಳಿಗಳಲ್ಲೂ 'ತಬ್ಲೀಸ್?'(?)ಗಳೆಂದು ಹೇಳಲಾಗುವ ಪುಟ್ಟ ಹುಡುಗರಿಂದ ಹಿಡಿದು ವೃದ್ಧರವರೆಗಿನ ವಿವಿಧ ವಯೋಮಾನದವರು ಸೇರಿದ ಮತ ಪ್ರಚಾರಕರ ತಂಡ, ಮುಸ್ಲಿಮರ ಮನೆ ಮನೆಗೂ ಭೇಟಿ ನೀಡಿ ಮತೀಯ ಸಂಪ್ರದಾಯಗಳನ್ನೂ, ಭೌತಿಕ ಗುರುತುಗಳನ್ನೂ ಪುನರುಜ್ಜೀವನಗೊಳಿಸಲು; ಮತ್ತೂ ಮುಖ್ಯವಾಗಿ, ಇತರ ಧರ್ಮಗಳ ಸಂಪರ್ಕದಲ್ಲಿ ಇಸ್ಲಾಂ ರೂಢಿಸಿಕೊಂಡ ಅಷ್ಟಿಷ್ಟು ಸ್ಥಳೀಯತೆಯ ಗುಣ-ಸ್ಪರ್ಶಗಳನ್ನೂ ಅಳಿಸಿ ಹಾಕುವ ಸರ್ವ ಪ್ರಯತ್ನಗಳನ್ನೂ ಮಾಡುತ್ತಿವೆ. ಇದರಿಂದಾಗಿ, ಭಾರತದ ಸ್ವಾತಂತ್ರ್ಯೋತ್ತರ ನವೋದಯದ ಸಂದರ್ಭದಲ್ಲಿ ಕಾಲ-ದೇಶಬದ್ಧವಾದ ಹೊರ ಚಹರೆಗಳನ್ನು ಕ್ರಮೇಣ ವಿಸರ್ಜಿಸಿಕೊಳ್ಳುತ್ತಾ ಪ್ರಗತಿಪರವಾಗತೊಡಗಿದ್ದ ಭಾರತೀಯ ಮುಸ್ಲಿಂ ಸಮುದಾಯ, ಈಗ ಸಾಮಾನ್ಯ ಜನಜೀವನದ ಮುಖ್ಯವಾಹಿನಿಯ ಮಧ್ಯೆ ತನ್ನ ಮತೀಯ ಗುರುತುಗಳೊಂದಿಗೆ, ತಾನು

ಬೇರೆಯೇ ಎಂದು ಸಾರುವಂತೆ ಎದ್ದು ಕಾಣತೊಡಗಿದೆ. ಇದಕ್ಕೆ ಬಾಬ್ರಿ ಮಸೀದಿ ನಾಶದೊಂದಿಗೆ ವ್ಯಾಪಕವಾಗಿ ಸ್ಫೋಟಗೊಂಡ ಹಿಂದೂ ಕೋಮುವಾದದ ಒತ್ತಡಗಳೇ ಕಾರಣವೆಂದು ಹೇಳುವುದು ಒಂದು ಸುಲಭದ ಉತ್ತರವಾದೀತು. ಹೆಚ್ಚೆಂದರೆ, ಅದೊಂದು ನೆಪ ಮಾತ್ರ.

ಜಗತ್ತಿನಾದ್ಯಂತ ತೈಲಾಧಾರಿತ ನಾಗರೀಕತೆ ದಾಪುಗಾಲಿಟ್ಟು ಬೆಳೆಯುತ್ತಿದ್ದಂತೆ, ಮುಸ್ಲಿಂ ಮತೀಯತೆಯೂ ದಾಪುಗಾಲಿಟ್ಟು ಬೆಳೆಯತೊಡಗಿದ್ದನ್ನು ನಾವು ನೋಡುತ್ತಾ ಬಂದಿದ್ದೇವೆ. ಇದರ ಭಾಗವಾಗಿಯೇ ಮಧ್ಯ ಪ್ರಾಚ್ಯದ ಪೆಟ್ರೋ ಡಾಲರುಗಳು ಭಾರತದಾದ್ಯಂತ ಹರಿದಾಡಿ ಸಣ್ಣ ಪುಟ್ಟ ಊರುಗಳಲ್ಲೂ ವೈಭವೋಪೇತ ಮಸೀದಿಗಳು ಎದ್ದುದನ್ನೂ, ಅವುಗಳ ಜೊತೆಗೇ ಗಡ್ಡ, ಟೋಪಿ, ಬುರ್ಕಾಗಳ ಸಂಸ್ಕೃತಿ ದಟ್ಟವಾಗಿ ಬೆಳೆಯತೊಡಗಿದ್ದನ್ನೂ ನಾವು ಗಮನಿಸಿದ್ದೇವೆ. ತೊಂಭತ್ತರ ದಶಕದಲ್ಲಿ ರಾಜಕೀಯ ನೆಲೆಯಲ್ಲಿ ಅವತರಿಸಿದ ಹಿಂದೂ ಕೋಮುವಾದ ಹೆಚ್ಚೆಂದರೆ ಇದರ ವೇಗೋತ್ಕರ್ಷ ಮತ್ತು ತೀವ್ರತೆಯನ್ನು ಹೆಚ್ಚಿಸಿ, ಇದಕ್ಕೆ ಹುಸಿ ಸಮರ್ಥನೆಯೊಂದನ್ನು ಒದಗಿಸಿರಬಹುದಷ್ಟೆ. ಹಾಗೆ ನೋಡಿದರೆ, ಅಸ್ಗರ್ ಅಲಿಯವರು ತಮ್ಮ ಪುಸ್ತಕದಲ್ಲಿ; ಇತಿಹಾಸದಲ್ಲಿ ಮುಸ್ಲಿಂ ಸಾಮ್ರಾಜ್ಯ ವಿಸ್ತರಿಸುತ್ತಾ ಅದರ ಸಂಪತ್ತು ಹೆಚ್ಚಿದ ಸಂದರ್ಭದಲ್ಲೆಲ್ಲಾ ಇಸ್ಲಾಂನಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಬೆಳೆದು, ಅದು ಮೂಲಭೂತವಾದಿಯಾಗತೊಡಗಿದ್ದನ್ನು ನಮ್ಮ ಗಮನಕ್ಕೆ ತರುತ್ತಾರೆ. ಬಹುಶಃ ಇದು ಇಸ್ಲಾಂಗೆ ಮಾತ್ರ ಅನ್ವಯಿಸುವ ಮಾತಲ್ಲ. ಉದಾಹರಣೆಗೆ ಕರ್ನಾಟಕದಲ್ಲಿ ಐ.ಟಿ.-ಬಿ.ಟಿ. ಉದ್ಯಮಗಳು ವಿಪರೀತ ಗತಿಯಲ್ಲಿ ಬೆಳೆದು, ಅದರ ವೈವಿಧ್ಯಮಯ ಪರಿಣಾಮಗಳಿಂದಾಗಿ ಕೆಲವು ವರ್ಗಗಳಲ್ಲಿ ಅನುಚಿತವೆನಿಸುವಷ್ಟು ವಿಪರೀತ ಸಂಪತ್ತು ಸೃಷ್ಟಿಯಾಗುತ್ತಿದ್ದಂತೆ, ಈ ರಾಜ್ಯ ಹಿಂದೂ ಕೋಮುವಾದದ ದಟ್ಟ ಪ್ರಭಾವಕ್ಕೆ ಸಿಕ್ಕತೊಡಗಿದುದನ್ನು ಇದೇ ನೆಲೆಯಲ್ಲಿ ವಿವರಿಸಬಹುದೇನೋ!

ಆದರೆ ಹಿಂದೂ ಕೋಮುವಾದದ ಬಗ್ಗೆ ಎಚ್ಚರಿಸಲು, ಅದನ್ನು ಖಂಡಿಸಲು, ಎದುರಿಸಲು ಹಿಂದೂಗಳೆನಿಸಿಕೊಂಡ ಸಮುದಾಯದಲ್ಲೇ ಬುದ್ಧಿಜೀವಿ-ಲೇಖಕ-ಕಲಾವಿದರ ವರ್ಗವೊಂದು ಸದಾ ಕ್ರಿಯಾಶೀಲವಾಗಿರುತ್ತದೆ. ಇದು ಹಿಂದೂ ಧರ್ಮದ ಬತ್ತದ ಸೃಜನಶೀಲತೆಗೆ, ಜೀವಂತಿಕೆಗೆ, ವಿಶಿಷ್ಟ ಬಹುಮುಖ ಸೌಂದರ್ಯಕ್ಕೆ ಕಾರಣವೂ ಆಗಿದೆ. ಆದರೆ ಇಸ್ಲಾಂನಲ್ಲಿ? ಭಾರತದಲ್ಲಂತೂ ಈಗ ಅದರ ಸೆಲೆಯೇ ಕಾಣದಾಗಿದೆ. ಕರ್ನಾಟಕದ ಮಟ್ಟಿಗಂತೂ ಸಾರಾ ಅಬೂಬಕರ್ ಎಂಬ ದಿಟ್ಟ ಮತ್ತು ಸಾತ್ವಿಕ ಮಹಿಳೆಯ ಹೊರತಾಗಿ, ಇನ್ನೊಂದು ಪ್ರತಿಭಟನೆಯ ಧ್ವನಿ ಕೇಳದಾಗಿದೆ. ಶಾಬಾನು ಅವರ ಹೋರಾಟದಂತೆಯೇ, ಇವರ ಹೋರಾಟವನ್ನೂ ನಿಷ್ಕ್ರಿಯಗೊಳಿಸುವ ಪ್ರಯತ್ನಗಳು ಈಗಲೂ ನಡೆದೇ ಇವೆ. ಆಶ್ಚರ್ಯವೆಂದರೆ, ಇದರಲ್ಲಿ ಮುಸ್ಲಿಂ ಮೂಲಭೂತವಾದಿಗಳೊಂದಿಗೆ ಹಿಂದೂ ಕೋಮುವಾದಿಗಳೂ ಸೇರಿಕೊಂಡಿರುವುದು! ಯಾವಾಗಲೂ ಹಾಗೇ; ಇವರು ಇಂತಹ ಪರಸ್ಪರ ಅಂತಃಸ್ಫೂರ್ತಿಯ ಮತ್ತು ಪೂರಕ ಚಟುವಟಿಕೆಗಳ ಮೂಲಕವೇ ತಮ್ಮ ಸಾಮಾನ್ಯ

ಶತ್ರುವನ್ನು ಗುರುತಿಸಿ ನಾಶ ಮಾಡುತ್ತಾ, ಬೆಳೆಯುತ್ತಾ ಹೋಗುವುದು! ಅದೇನೇ ಇರಲಿ, ಅಸ್ಗರ್ ಅಲಿ ಇಂಜಿನಿಯರ್‌ರ ಹಾಲಿ ಪುಸ್ತಕ, ದೈವಶಾಸ್ತ್ರಜ್ಞರ ಹೊರತಾಗಿ ಇಸ್ಲಾಮನ್ನು ಐತಿಹಾಸಿಕವಾಗಿ ವಿಶ್ಲೇಷಿಸಲು ಮಾಡಿರುವ ಭಾರತೀಯನೊಬ್ಬನ ಮೊದಲ ಪ್ರಯತ್ನವಾಗಿದೆ (ಇದನ್ನು ಲೇಖಕರೇ ಹೇಳಿಕೊಂಡಿದ್ದಾರೆ) ಎಂದ ಮೇಲೆ, ಭಾರತೀಯ ಇಸ್ಲಾಮಿನ ಇಂದಿನ ಸ್ಥಿತಿಗತಿಗಳ ಬಗ್ಗೆ ಹೇಳಲು ಇನ್ನೇನು ಉಳಿದಿದೆ?

ಭಾರತದಲ್ಲಿ ಮುಸ್ಲಿಂ ಬುದ್ಧಿಜೀವಿಗಳು ಇಲ್ಲವೆಂದಲ್ಲ. ಇರ್ಫಾನ್ ಹಬೀಬ್, ಉಪರಾಷ್ಟ್ರಪತಿ ಹಮೀದ್ ಅನ್ಸಾರಿಯವರಿಂದ ಹಿಡಿದು, ಶಬನಾ ಅಜ್ಮಿಯವರೂ ಸೇರಿದಂತೆ ನಮ್ಮ ಅನೇಕ ಮುಸ್ಲಿಂ ಕನ್ನಡ ಲೇಖಕರವರೆಗೆ ಬುದ್ಧಿಜೀವಿ-ಲೇಖಕ-ಕಲಾವಿದರ ಒಂದು ದೊಡ್ಡ ದಂಡೇ ಇದೆ! ಇವರಲ್ಲಿ ಬಹಳಷ್ಟು ಜನ ಮುಸ್ಲಿಂ ಧರ್ಮದಲ್ಲಿಯೇ, ಮುಸ್ಲಿ ಸಂಪ್ರದಾಯದಂತೆಯೇ ಮದುವೆಯಾಗಿ ತಮ್ಮ ಮಕ್ಕಳನ್ನೂ ಮುಸ್ಲಿಂ ಸಂಸ್ಕೃತಿಯಲ್ಲೇ ಬೆಳೆಸುತ್ತಿದ್ದರೂ (ಅದೊಂದು ಅಪರಾಧವೆಂದು ನಾನು ಖಂಡಿತ ಹೇಳುತ್ತಿಲ್ಲ!), ತಮ್ಮನ್ನು ಮುಸ್ಲಿಂ ಬುದ್ಧಿಜೀವಿಗಳೆಂದು ಮಾತ್ರ ಕರೆಯಬಾರದೆಂದು ಆಗ್ರಹಿಸುವ ವಿಶೇಷ ಎಚ್ಚರಿಕೆ ವಹಿಸುತ್ತಾರೆ! ಬಹುಶಃ ಹಾಗೆ ಕರೆದುಬಿಟ್ಟರೆ, ಭಾರತೀಯ ಸಮಾಜದ ವಿಮರ್ಶೆ ಎಂಬ ಸ್ಥೂಲ ಹೆಸರಿನಲ್ಲಿ, ಇತರರೊಂದಿಗೆ ಸೇರಿ ಹಿಂದೂ ಜೀವನ ಪದ್ಧತಿಯ ವಿಮರ್ಶೆ ಮಾಡುವ ತಮ್ಮ ಬೌದ್ಧಿಕ ಕರ್ತವ್ಯಕ್ಕೆ ಅಡ್ಡಿಯಾಗಬಹುದೆಂದು ಇವರು ಭಾವಿಸಿರಬಹುದು! ಅದೇನೇ ಇದ್ದರೂ, ಇವರ ಭಾರತೀಯ ಸಮಾಜದ ವಿಮರ್ಶೆಯ ಭಾಗವಾಗಿ ಮುಸ್ಲಿಂ ಸಮಾಜದ ವಿಮರ್ಶೆಯೂ ಸೇರಿಕೊಂಡಿದ್ದರೆ; ಹಿಂದೂ ಜಾತಿ ಪದ್ಧತಿ, ಅಸ್ಪೃಶ್ಯತೆ, ಮಠ ವ್ಯಸ್ಥೆ, ಮೌಢ್ಯಾಚಾರಗಳನ್ನು ಟೀಕಿಸುವಂತೆಯೇ ಮುಸ್ಲಿಂ ಧರ್ಮದ ಸದ್ಯದ ಜಡತೆ, ಕಂದಾಚಾರ, ಪ್ರತಿಗಾಮಿತನಗಳನ್ನೂ ಟೀಕಿಸತೊಡಗಿದ್ದರೆ ಮುಸ್ಲಿಂ ಮುಲ್ಲಾಶಾಹಿ ಇಷ್ಟೊಂದು ಬೆಳೆಯುತ್ತಿರಲಿಲ್ಲವೇನೋ. ಹಾಗೇ, ನಮ್ಮ ಕೋಮು ಪರಿಸ್ಥಿತಿ ಕೂಡ ಇಷ್ಟೊಂದು ಬಿಗಡಾಯಿಸುತ್ತಿರಲಿಲ್ಲವೇನೋ!

ಇನ್ನು ಕರ್ನಾಟಕದ ಮುಸ್ಲಿಂ ಬುದ್ಧಿಜೀವಿಗಳಲ್ಲಿ ಕೆಲವರು ತಮ್ಮ ಹೆಂಡತಿಗೆ ಬುರ್ಕಾ ಹಾಕಿಸಿಕೊಂಡು ಓಡಾಡುತ್ತಾ, ಪ್ರಗತಿಪರ ಚಟುವಟಿಕೆಗಳಲ್ಲೂ ಮಿಂಚಲು ಯತ್ನಿಸಿದರೆ, ಇನ್ನು ಕೆಲವರು ಯಾರಿಗೂ ಕಾಣದಂತೆ ಟೋಪಿ ಏರಿಸಿಕೊಂಡು ಕಳ್ಳ ಮಾರ್ಗದಲ್ಲಿ ಮಸೀದಿಗೆ ಹೋಗಿ ಬಂದರೂ ಬಂಡಾಯದ ಬಡಾಯಿ ಕೊಚ್ಚಲು ಮಾತ್ರ ಹಿಂಜರಿಯುವುದಿಲ್ಲ! ಹೀಗಾಗಿ, ಭಾರತೀಯ ಮುಸ್ಲಿಂ ಮೂಲಭೂತವಾದದ ಅತ್ಯಂತ ನಿರ್ಲಜ್ಜ ಉದಾಹರಣೆ ಯಂತಿರುವ ಶಾಬಾನು ಪ್ರಕರಣದ ಬಗ್ಗೆ ಒಂದೂ ಸೊಲ್ಲೆತ್ತದ, ಅದರಲ್ಲಿ ಅಂತರ್ಗತವಾಗಿದ್ದ ಅಮಾನವೀಯತೆಯ ವಿರುದ್ಧ ಒಂದು ಕಾರ್ಯಕ್ರಮವನ್ನೂ ಸಂಘಟಿಸಲಾಗದ ನಮ್ಮ ಈ ಮುಸ್ಲಿಂ ಬುದ್ಧಿಜೀವಿ ವರ್ಗದ ಯಾವುದೇ ವಿದ್ವತ್ತು, ಪ್ರತಿಭೆ ಮತ್ತು ಕ್ರಾಂತಿಕಾರತ್ವಗಳು ಪ್ರದರ್ಶನದ, ಮಾರಾಟದ ಸರಕಿಗಿಂತ ಹೆಚ್ಚಿನದೇನಲ್ಲ. ಈ ದೃಷ್ಟಿಯಿಂದ ಅಸ್ಗರ್ ಅಲಿಯವರ ಪುಸ್ತಕದಲ್ಲಿ ಎದ್ದು ಕಾಣುವ ಒಂದು ಕೊರತೆ ಎಂದರೆ, ಇಸ್ಲಾಂನ ಭಾರತೀಯ

ಆವೃತ್ತಿಯ ಐತಿಹಾಸಿಕತೆ ಮತ್ತು ಅದರ ವಿಶ್ಲೇಷಣೆ ಇಲ್ಲದಿರುವುದು. ಏಕೆಂದರೆ, ಭಾರತೀಯ ಇಸ್ಲಾಂಗೆ ಎರಡು ಮುಖಗಳಿವೆ; ಒಂದು ಪಶ್ಚಿಮದ ಕಡಲ ಮೂಲಕ ಬಂದ ನಾಜೂಕಿನ ವ್ಯಾಪಾರಿ ಇಸ್ಲಾಂ, ಮತ್ತೊಂದು ವಾಯುವ್ಯ ಗಡಿ ಮೂಲಕ ಬಂದ ಆಕ್ರಮಣಕಾರಿಯಾದ ರಾಜಕೀಯ ಇಸ್ಲಾಂ ಎಂದು ಹೇಳಲಾಗುತ್ತದೆ. ಆದರೆ ಇಂದು ಈ ಸೂಕ್ಷ್ಮ ವಿಂಗಡಣೆಯೇ ಕಾಣೆಯಾಗಿ, ಇವು ಒಂದು ಅಖಂಡ ರೂಪದಲ್ಲಿ ನಮ್ಮ ಮುಂದೆ ಪ್ರಸ್ತುತಗೊಳ್ಳುತ್ತಿರುವುದರ ಹಿಂದೆ ಇರುವ ರಾಜಕಾರಣವಾದರೂ ಯಾವುದು ಎಂಬುದನ್ನೂ ಲೇಖಕರು ಚರ್ಚಿಸಿದ್ದರೆ ಪುಸ್ತಕ ಇಂದಿಗೆ ಹೆಚ್ಚು ಪ್ರಸ್ತುತವೆನಿಸುತ್ತಿತ್ತು. ಜೊತೆಗೆ ಹಿಂದೂ ಧರ್ಮದೊಡನೆಯ ಸಂಘರ್ಷ-ಸಂವಾದಗಳಲ್ಲಿ; ಜಾತಿ ಪದ್ಧತಿಯಿಂದಾಗಿ ಭ್ರಷ್ಟಗೊಂಡು ಅವನತಿಯ ಸ್ಥಿತಿಯಲ್ಲಿದ್ದ ಅದಕ್ಕೆ ಸಮಾನತೆ ಮತ್ತು ಸೋದರತೆಗಳ ಲೌಕಿಕ ಪಾಠಗಳನ್ನು ಹೇಳಿದ ಇಸ್ಲಾಂ (ಇಸ್ಲಾಂ ಪ್ರವೇಶದ ನಂತರವೇ ಹಿಂದೂ ಧರ್ಮದಲ್ಲಿ ಆತ್ಮಾವಲೋಕನ ಹಾಗೂ ಸುಧಾರಣೆಗಳ ಯುಗ ಆರಂಭವಾದುದೆಂಬುದನ್ನೂ ಇಲ್ಲಿ ಗಮನಿಸಬೇಕು), ಹಿಂದೂ ಧರ್ಮದ ಸುಧಾರಣಾಶೀಲತೆ ಮತ್ತು ಅಧ್ಯಾತ್ಮಿಕ ಸುಭಗತೆಗಳನ್ನು ಕಲಿಯದೇ ಹೋದದ್ದೇಕೆ ಎಂಬುದನ್ನೂ ವಿಶ್ಲೇಷಿಸಿದ್ದರೆ ಪುಸ್ತಕ ಹೆಚ್ಚು ಅರ್ಥಪೂರ್ಣವೆನಿಸುತ್ತಿತ್ತು.

ಅದೇನೇ ಇರಲಿ, ಈ ಪುಸ್ತಕದ ಓದನ್ನು ನೆಪವಾಗಿಸಿಕೊಂಡು ನಾನು ಇಷ್ಟೆಲ್ಲ ವಿಸ್ತೃತವಾಗಿ ಬರೆಯಲು ಎರಡು ತುರ್ತು ಕಾರಣಗಳಿವೆ. ಒಂದು, ಅನಿಯಂತ್ರಿತ ಮತ್ತು ಅವಿಮರ್ಶಿತ ಮುಸ್ಲಿಂ ಮೂಲಭೂತವಾದ ತನ್ನ ಸಮುದಾಯವನ್ನು ಕತ್ತಲ ಕೂಪಕ್ಕೆ (ಮೊದಲು ಮುಖವಾದರೂ ಕಾಣುವಂತಿದ್ದ ಬುರ್ಖಾಗಳಲ್ಲೀಗ ಕಣ್ಣುಗಳ ಕಿಂಡಿಗಳು ಮಾತ್ರ ತೆರೆದಿವೆ!) ತಳ್ಳುತ್ತಿದ್ದರೆ, ಅದರ ಸಾದೃಶ್ಯದಲ್ಲಿ ಹಿಂದೂ ಮೂಲಭೂತವಾದ ತನ್ನಲ್ಲಿ ತಾನೇ ಅಲ್ಲದೆ ಜನಸಾಮಾನ್ಯರ ಮಧ್ಯೆಯೂ ವ್ಯಾಪಕ ಸಮರ್ಥನೆ ಕಂಡುಕೊಳ್ಳುತ್ತಾ, ಹಣೆ ತುಂಬಾ ಕುಂಕುಮ ಬಳಿದುಕೊಂಡು ಭೀಕರ ರಾಜಕೀಯ ರೂಪವನ್ನು ತಾಳುತ್ತಿರುವುದು. ಈ ಬಜೆಟ್‌ನಲ್ಲಿ ನಮ್ಮ ಮುಖ್ಯಮಂತ್ರಿಗಳು ಹತ್ತಾರು ಜಾತಿ ಮಠಗಳಿಗೆ ಮತ್ತು ಸಂಸ್ಥೆಗಳಿಗೆ ಕೋಟ್ಯಾಂತರ ರೂಪಾಯಿಗಳ ನೆರವು ಘೋಷಿಸಿರುವುದು ಮತ್ತು ಶಿವರಾತ್ರಿ ಸಂದರ್ಭದಲ್ಲಿ ನಮ್ಮ ಮುಜರಾಯಿ ಮಂತ್ರಿಗಳು ಹೃಷಿಕೇಶದಿಂದ ರೈಲಿನಲ್ಲಿ ಸಾವಿರಾರು ಲೀಟರ್‌ಗಟ್ಟಲೇ ಗಂಗಾಜಲ ತರಿಸಿ, ಅದನ್ನು ಶಿವನ ಚಿತ್ರದೊಂದಿಗೆ ಯಡಿಯೂರಪ್ಪನವರ ಚಿತ್ರವೂ ಮುದ್ರಿತವಾಗಿರುವ ಕ್ಯಾಲೆಂಡೆರಿನೊಂದಿಗೆ ಶಿವ ದೇವಾಲಯಗಳಲ್ಲಿ ಹಂಚುವ ಕಾರ್ಯಕ್ರಮ ಹಾಕಿಕೊಂಡಿರುವುದು ಹಿಂದೂ ಧರ್ಮದ ಎಲ್ಲ ಅಧ್ಯಾತ್ಮಿಕತೆಯ, ಘನತೆ-ಗೌರವಗಳ ಸರ್ವನಾಶದ ಪ್ರಯತ್ನವಲ್ಲದೆ ಮತ್ತೇನಲ್ಲ. ಇನ್ನು ಸಂವಿಧಾನದ ಘನತೆ-ಗೌರವಗಳ ಪ್ರಶ್ನೆಯಂತೂ ಈ ಕೋಮುವಾದಿ ಸರ್ಕಾರಕ್ಕೆ ಲೆಕ್ಕಕ್ಕೇ ಇಲ್ಲದಂತಾಗಿದೆ. ಕಲಾವಿದರಿಗೇ ಸಂಬಂಧಪಟ್ಟ ಸಾರ್ವಜನಿಕ ಸಮಾರಂಭವೊಂದರಲ್ಲಿ ವೈದ್ಯಕೀಯ ಶಿಕ್ಷಣ ಮಂತ್ರಿ ರಾಮಚಂದ್ರೇ ಗೌಡರು (ಇವರೇಕೆ ಇಲ್ಲಿಗೆ ಬಂದರೋ ತಿಳಿಯದು!) ತಮ್ಮ ಭಾಷಣದಲ್ಲಿನ 'ಕಲಾ ವಿಮರ್ಶೆ'ಗೆ ಅಡ್ಡಿ ಬಂದರೆಂದು; 'ಎಚ್ಚರಿಕೆ! ನಾನು.... ಸರ್ಕಾರ ಮಾತಾಡುತ್ತಿರುವುದು'

ಎಂದು ಅರಚುತ್ತಾ ನಮ್ಮ ಪ್ರತಿಭಾವಂತ ಕಲಾವಿದರೊಬ್ಬರನ್ನು ಸಮಾರಂಭದಿಂದಲೇ ಹೊರಹಾಕಲು ಆಜ್ಞೆ ಮಾಡಿದ ಪ್ರಸಂಗ, ಕೋಮುವಾದವೂ ಸರ್ವಾಧಿಕಾರವೂ ಜೊತೆ ಜೊತೆಗೇ ಬೆಳೆಯುಂತಹವು ಎಂಬುದನ್ನು ಈವರೆಗೆ ಗೊತ್ತಿಲ್ಲದವರಿಗೆ ಗೊತ್ತು ಮಾಡಿದೆ.

ಇನ್ನೊಂದು, ಪಾಕಿಸ್ತಾನದ ಸರ್ಕಾರ ತನ್ನ ವಾಯುವ್ಯ ಗಡಿ ಪ್ರಾಂತ್ಯದ ಸ್ವಾತ್ ಪ್ರದೇಶದಲ್ಲಿ ತಾಲೀಬಾನ್‌ಗೆ ಮಣಿದು ಅಲ್ಲಿ, ಹೆಣ್ಣು ಮಕ್ಕಳು ಶಾಲೆಗಳಿಗೆ ಹೋಗುವುದನ್ನೂ (ಈ ಹಿಂದೆ ಇಂತಹ ಶಾಲೆಗಳ ಮೇಲೆ ಬಾಂಬ್ ಹಾಕಲಾಗಿದೆ), ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವುದನ್ನೂ ಮತ್ತು ಮಹಿಳೆಯರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದನ್ನೂ ನಿಷೇಧಿಸುವ ಹಾಗೂ ವಿವಿಧ ಅಪರಾಧಗಳಿಗೆ ತಲೆ ಕಡಿಯುವ, ಕೈ ಕತ್ತರಿಸುವ, ಕಲ್ಲೆಸೆದು ಕೊಲ್ಲುವ ಇತ್ಯಾದಿ ಅನಾಗರಿಕ ರೀತಿಯ ಶಿಕ್ಷೆಗಳನ್ನೊಳಗೊಂಡ ಷರಿಯತ್ ಕಾನೂನುಗಳ ಜಾರಿಗೆ ಅವಕಾಶ ಮಾಡಿಕೊಟ್ಟಿರುವುದು. ಪಾಕಿಸ್ತಾನ ತನ್ನ ಐತಿಹಾಸಿಕ ತಪ್ಪುಗಳಿಂದಾಗಿ ಈಗ ಇಡೀ ದೇಶಾದ್ಯಂತ ತಾಲೀಬಾನಿನ ಆಕ್ರಮಣದ ಆತಂಕವನ್ನು ಎದುರಿಸುವಂತಾಗಿದೆ. ಏಕೆಂದರೆ, ಪಾಕಿಸ್ತಾನ ತನ್ನ ರಾಷ್ಟ್ರ ಜೀವನದಲ್ಲಿ ಅನೇಕ ಆಧುನಿಕತೆಗಳನ್ನು ಅಳವಡಿಸಿಕೊಂಡಿದ್ದರೂ ಸಂವಿಧಾನಾತ್ಮಕವಾಗಿ ಇಸ್ಲಾಮೀ ರಾಷ್ಟ್ರವಾಗಿಯೇ ಉಳಿದಿದೆ. ಆದುದರಿಂದ ತಾಲೀಬಾನ್ ಕಾರ್ಯಾಚರಣೆ ಹೀಗೇ ಮುಂದುವರೆದರೆ, ಅಮೆರಿಕಾದ ಎಷ್ಟೇ ನೆರವು ಬಂದರೂ, ಅದು ತನ್ನ ಆಧುನಿಕತೆಯನ್ನೆಲ್ಲ ಕಳೆದುಕೊಂಡು ಮುಸ್ಲಿಂ ಮೂಲಭೂತವಾದಿ ರಾಷ್ಟ್ರವಾಗುವ ಅಪಾಯವನ್ನು ತನ್ನ ಹತ್ತಿರಕ್ಕೇ ತಂದುಕೊಂಡಿದೆ: ತಾಲಿಬಾನಿಗಳ ಸ್ವಾತ್, ಇಸ್ಲಾಮಾಬಾದ್‌ನಿಂದ ಕೇವಲ ೨೫೦ ಕಿಲೋಮೀಟರ್ ದೂರದಲ್ಲಿದೆ!

ಅಲ್ಲಿಂದ ಭಾರತದ ಗಡಿ ಮತ್ತೆ ಕೇವಲ ೨೫೦ ಕಿಲೋಮೀಟರುಗಳಷ್ಟೇ! ಈವರೆಗಿನ ಬೆಳವಣಿಗೆಗಳನ್ನು ನೋಡಿದರೆ, ಭಾರತದಲ್ಲಿ ತಾಲಿಬಾನಿಗಳ ಅಭಿಮಾನಿಗಳಿಗೇನೂ ಕೊರತೆ ಇರಲಾರದು! ಹಾಗಾಗಿ, ಮುಸ್ಲಿಂ ಬುದ್ಧಿಜೀವಿಗಳೇ ಈಗಲಾದರೂ ಎಚ್ಚರಗೊಳ್ಳಿ! ನಿಮಗೆ, ನಮಗೆ ಇಬ್ಬರಿಗೂ ಕಾಲ ಮಿಂಚಿ ಹೋದೀತು!

(ಮಾರ್ಚ್ ೬, ೨೦೦೯)

■

೪೧. 'ವಾರದ ಒಳನೋಟ'ಗಳ ಒಂದು ಹಿನ್ನೋಟ!

ಇದು ಸದ್ಯಕ್ಕೆ 'ವಿಕ್ರಾಂತ ಕರ್ನಾಟಕ'ಕ್ಕಾಗಿ ನಾನು ಬರೆಯುತ್ತಿರುವ ಕೊನೆಯ ಅಂಕಣ ಬರಹ. ಎರಡು ವರ್ಷಗಳ ಕಾಲ ಪ್ರತಿ ವಾರ ಬರೆದು ಸುಸ್ತಾಗಿರುವುದರಿಂದ ಒಂದಿಷ್ಟು ಬಿಡುವು ಬೇಕೆನ್ನಿಸಿದೆ. ಜೊತೆಗೆ ನಾನು ಅಂಕಣ ಬರಹಗಳ ಮೂಲಕ ನನ್ನ ಪ್ರಮುಖ ಆಸಕ್ತಿಗಳೆನಿಸಿದ ರಾಜಕಾರಣ, ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಸದ್ಯಕ್ಕೆ ಹೇಳಬೇಕಾದುದನ್ನೆಲ್ಲ ಹೇಳಿರುವೆ ಎನ್ನಿಸಿದೆ. ಈ ಸಂಬಂಧವಾಗಿ ಇತರ ಧ್ವನಿಗಳನ್ನೂ ಕೇಳಬೇಕೆನಿಸಿದೆ. ನಾನು ಪ್ರಧಾನವಾಗಿ ಆಯಾ ವಾರದ ಪ್ರಚಲಿತ ಸುದ್ದಿಯನ್ನಾಧರಿಸಿಯೇ ನನ್ನ ವಿಶ್ಲೇಷಣೆಯನ್ನು ನಡೆಸುತ್ತಿದ್ದೆನಾದರೂ, ಆ ವಿಶ್ಲೇಷಣೆಯ ಹಿಂದೆ ನಾನು ನಂಬಿದ ತಾತ್ವಿಕತೆಯೂ ಇರುತ್ತಿತ್ತೆಂದು ನಂಬಿದ್ದೇನೆ. ಎರಡು ವರ್ಷಗಳ ಹಿಂದೆ ಈ ಪತ್ರಿಕೆಯ ಸ್ಥಾಪಕ ಸಂಪಾದಕ ರವಿ ಕೃಷ್ಣಾರೆಡ್ಡಿಯವರು ನನ್ನನ್ನು ಅಂಕಣ ಬರೆಯಲು ಕೋರಿದಾಗ ನಾನು ಒಪ್ಪಿಕೊಂಡದ್ದು, ಅನುದಿನದ ಸಾರ್ವತ್ರಿಕ ಬದುಕಿನ ವಿಷಯಗಳ ಹಿನ್ನೆಲೆಯಲ್ಲಿ ನಾನು ನಂಬಿದ್ದ ಬದುಕಿನ ತಾತ್ವಿಕತೆಯ ಶೋಧನೆ ನಡೆಸುವ ಸಾಧ್ಯತೆಯನ್ನು ಮನಸ್ಸಿನಲ್ಲಿಟ್ಟುಕೊಂಡೇ. ನಂತರ ಗೌರವ ಸಂಪಾದಕರಾದ ರವೀಂದ್ರ ರೇಷ್ಮೆಯವರು ನನ್ನ ಈ ಶೋಧನೆಗೆ ತಮ್ಮ ತುಂಬು ಬೆಂಬಲದೊಂದಿಗೆ ಇಂಬು ನೀಡಿದ್ದಾರೆ-ಕೆಲವೊಮ್ಮೆ ಅವರ ನಿಲುವು, ಅಭಿಪ್ರಾಯಗಳನ್ನು ನಾನು ನೇರವಾಗಿ ಟೀಕಿಸಿದಾಗಲೂ! ಅವರಿಗೆ ನನ್ನ ಕೃತಜ್ಞತೆಗಳು.

ನಾನು ಬರೆಯಲಾರಂಭಿಸಿದ್ದು ಎರಡು ವರ್ಷಗಳ ಹಿಂದೆ ಎಂದೆ. ಅಂದರೆ ಸುಮಾರು ೧೦೦ ವಾರಗಳ ಹಿಂದೆ. ಹಾಗಾಗಿ ನನ್ನ ಒಟ್ಟು ಅಂಕಣ ಬರಹಗಳು ೧೦೦ನ್ನು ಮುಟ್ಟಬೇಕಿತ್ತು. ಆದರೆ 'ವಿಕ್ರಾಂತ' ನಾಲ್ಕಾರು ಬಾರಿ ನಿಂತು ನಡೆಯಬೇಕಾದ ತೊಂದರೆಗೊಳಗಾದುದರಿಂದ, ಇವುಗಳ ಸಂಖ್ಯೆ ಈಗ ೯೦ ಮಾತ್ರ. ಇವುಗಳಲ್ಲಿ ಮೊದಲ ಐವತ್ತನ್ನು ಮೈಸೂರಿನ ರೂಪ ಪ್ರಕಾಶನದವರು 'ಇದು ಭಾರತ! ಇದು ಭಾರತ!!' ಶೀರ್ಷಿಕೆಯಡಿ ಪುಸ್ತಕ ರೂಪದಲ್ಲಿ ಹೊರ ತಂದಿದ್ದಾರೆ. ನಂತರದ ೪೦ ಬರಹಗಳನ್ನು ನನ್ನ ಇತರ ೧೦ ಸಮಾಜವಾದಿ ಬರಹಗಳೊಂದಿಗೆ ಬಳ್ಳಾರಿಯ ಲೋಹಿಯಾ ಪ್ರಕಾಶನದವರು 'ವಸಿಷ್ಠರು ಮತ್ತು ವಾಲ್ಮೀಕಿಯರು' ಶೀರ್ಷಿಕೆಯಡಿ ಹೊರ ತರುತ್ತಿದ್ದಾರೆ. ಇದು ನನ್ನ ಸಮಾಜವಾದಿ ಸಂಕಥನಗಳ ಮೂರನೇ ಸಂಪುಟ. ಸಮಾಜವಾದ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡು, ಅದರ ಕಾಲ ಮುಗಿದಿದೆ ಎನ್ನುವ ಸಾರ್ವಜನಿಕ ಅಭಿಪ್ರಾಯವಿದೆ ಎಂದು

ಹೇಳಲಾಗುತ್ತಿರುವ ಈ ದಿನಗಳಲ್ಲಿ ನನ್ನ ಈ ಸಮಾಜವಾದಿ ಬರಹಗಳನ್ನು ನನ್ನ ಗೆಳೆಯರು ಪ್ರಕಟಿಸುತ್ತಿರುವುದೂ, ಜನ ಓದುತ್ತಿರುವುದೂ ಒಂದು ಆಶ್ಚರ್ಯವೇ ಸರಿ ಎಂದು ನನಗೆ ಅನೇಕ ಬಾರಿ ಅನ್ನಿಸಿದೆ.

ಇದಕ್ಕೆ ಕಾರಣ, ಬಹುಶಃ ನಾನು ಹಳೆಯ ಸಮಾಜವಾದವನ್ನು ಹೇಳದೆ, ನನ್ನ ಈ ಬರಹಗಳ ಮೂಲಕ ಇಂದಿನ ಹೊಸ ಜಾಗತಿಕ ಸಂದರ್ಭದಲ್ಲಿ ಹೊಸ ಸಮಾಜವಾದದ ಅನ್ವೇಷಣೆಯಲ್ಲಿ ತೊಡಗಿರುವುದೇ; ಅದರ ಭಾಗವಾಗಿಯೇ ನಾನು ಹೊರತಂದ ‘ಮರಳಿ ಬರಲಿದೆ ಸಮಾಜವಾದ’ ಎಂಬ ನನ್ನ ಪುಸ್ತಕವೊಂದರ ಶೀರ್ಷಿಕೆ ಸೂಚಿಸುವಂತೆ, ಅದು ಹೊಸ ಸಂದರ್ಭದ ಹೊಸ ತುರ್ತಾಗಿ ಮೂಡಿ ಬರುತ್ತಿರುವುದನ್ನು ಒಂದಷ್ಟು ಜನರಾದರೂ ಗಮನಿಸುತ್ತಿರುವುದೇ ಆಗಿದೆ. ಮುಕ್ತ ಮಾರುಕಟ್ಟೆ ಆರ್ಥಿಕತೆಯ ಹರಿಕಾರ್ತಿ ಎನ್ನಬಹುದಾದ ಥ್ಯಾಚರಳ ಬ್ರಿಟನ್ನಿನಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ ಈಗಾಗಲೇ ಆರಂಭವಾಗಿದ್ದರೆ, ಆಕೆಯ ರಾಜಕೀಯ ಗೆಣೆಕಾರನಾಗಿದ್ದ ರೇಗನ್ನನ ಅಮೆರಿಕಾದಲ್ಲಿ ಅದಕ್ಕಾಗಿ ಇಂದು ಒತ್ತಡ-ಒತ್ತಾಯಗಳು ಹೆಚ್ಚುತ್ತಿವೆ ಎಂಬುದೇ ಸಮಾಜವಾದದ ಅನಿವಾರ್ಯ ಪುನರಾಗಮನದ ಮೊದಲ ಸೂಚನೆಗಳು ಎಂದು ನಾನು ಭಾವಿಸಿದ್ದೇನೆ. ಸ್ವಪ್ರಶಂಸೆಯ ಆರೋಪದ ಭೀತಿಯಿಲ್ಲದೆ ಹೇಳುವುದಾದರೆ, ನನ್ನ ಈ ಅಂಕಣ ಬರಹಗಳ ಬಗ್ಗೆ, ಅದರ ಸಮಾಜವಾದಿ ಆಶಯಗಳ ಬಗ್ಗೆ ಒಂದೆರಡು ಅಪವಾದಗಳ ಹೊರತಾಗಿ, ಪತ್ರಿಕೆಯ ಸಾಮನ್ಯ ಓದುಗರಿಂದಲ್ಲದೆ, ನಾನು ಗೌರವಿಸುವ ಅನೇಕ ಗಣ್ಯ ಚಿಂತಕರಿಂದ–ಇವರಲ್ಲಿ ಖ್ಯಾತ ಸರೋದ್ ವಾದಕ ರಾಜೀವ್ ತಾರಾನಾಥರೂ ಸೇರಿದ್ದಾರೆಂದು ಇತ್ತೀಚೆಗೆ ತಿಳಿದು ನನಗಾದ ಸಂತೋಷ ಅಷ್ಟಿಷ್ಟಲ್ಲ!–ಮೆಚ್ಚುಗೆ, ಮಾನ್ಯತೆ ದೊರಕಿದೆ. ಜೊತೆಗೆ ಈ ಅಂಕಣ ಬರಹಗಳು ಅಂತರ್ಜಾಲದ ‘ಸಂಪದ’ ಬ್ಲಾಗ್‌ನ ‘ನಾಗ ಸಂಪದ’ ಎಂಬ ಉಪ ಬ್ಲಾಗಿನಲ್ಲಿ ಪ್ರಕಟವಾಗುತ್ತಿದ್ದು, ಅಲ್ಲಿ ಕೂಡಾ ಸಾವಿರಾರು ಜನ ಓದುತ್ತಾ ‘ಬಿಸಿ ಬಿಸಿ’ ಪ್ರಶ್ನೆಗಳನ್ನು ಕೇಳುತ್ತಾ ಚರ್ಚಿಸುತ್ತಿದ್ದಾರೆ! ಈ ಬ್ಲಾಗ್‌ನ ಓದುಗರಲ್ಲಿ ಸಮಾಜವಾದದ ಬಗ್ಗೆ ವಿಶ್ವಾಸ ಕಳೆದುಕೊಂಡ ಹೊಸ ಜಗತ್ತಿನ ಹೊಸ ಪ್ರಜೆಗಳೇ ಹೆಚ್ಚು ಎಂಬುದು ಒಂದು ವಿಶೇಷ.

ಹೀಗೆ ನನ್ನ ಈ ಅಂಕಣ ಬರಹಗಳ ಬಗ್ಗೆ ನಾನೇ ಒಂದು ಹಿನ್ನೋಟವನ್ನು ಬೀರುತ್ತಿರುವ ಈ ಸಂದರ್ಭದಲ್ಲಿ, ನನ್ನ ಮೊದಲ ೫೦ ‘ವಾರದ ಒಳನೋಟ’ಗಳ ಪುಸ್ತಕವಾದ ‘ಇದು ಭಾರತ! ಇದು ಭಾರತ!!’ ಕುರಿತು ಕೆಲವು ವಾರಗಳ ಹಿಂದೆ ‘ವಿಕ್ರಾಂತ ಕರ್ನಾಟಕ’ದಲ್ಲಿ ‘ಒಳನೋಟ, ಕಳಕಳಿ, ಬುದ್ಧಿವಾದ, ಪುನರುಕ್ತಿ...’ ಎಂಬ ಶೀರ್ಷಿಕೆಯಡಿ ಪ್ರಕಟವಾದ ಗೆಳೆಯ ಕೆ. ಸತ್ಯನಾರಾಯಣ ಅವರ ‘ಪುಸ್ತಕ ನೋಟ’ ನೆನಪಿಗೆ ಬರುತ್ತಿದೆ. ಸುಮಾರು ೩೦೦ ಪುಟಗಳ ಪುಸ್ತಕವನ್ನು ಕುರಿತ ಈ ವಿಮರ್ಶೆಯನ್ನು, ಒಂದು ಪುಟದ ಗಾತ್ರ ಮೀರದಂತೆ ಸಂಪಾದಕ ಸಿಬ್ಬಂದಿ ಕಟ್ಟುನಿಟ್ಟಾಗಿ ನೋಡಿಕೊಂಡ ಕಾರಣ (ಅದನ್ನು ಮೀರಲು ಇದೇನೂ ಪ್ರತಿಷ್ಠಿತ ಇಂಗ್ಲಿಷ್ ಪತ್ರಿಕೆಯ ಪ್ರತಿಷ್ಠಿತ ಇಂಗ್ಲಿಷ್ ಪತ್ರಕರ್ತ ಬರೆದ ಇಂಗ್ಲಿಷ್ ಪುಸ್ತಕವೇನೂ ಅಲ್ಲವಲ್ಲ!) ಕೆಲವು ಸಾಲುಗಳನ್ನು ಅಸಂಬದ್ಧವಾಗಿ ಕಿತ್ತು ಹಾಕಿ

ಪ್ರಕಟಿಸಲಾಗಿದೆಯಾದರೂ, ಸತ್ಯನಾರಾಯಣ ಅಲ್ಲಿನ ಬರಹಗಳನ್ನು ಸಾಕಷ್ಟು ಪ್ರೀತಿ-ಸಹಾನುಭೂತಿಗಳಿಂದಲೇ ಓದಿ ನಾಲ್ಕು ಒಳ್ಳೆಯ ಮಾತುಗಳನ್ನು ಬರೆದಿದ್ದಾರೆ ಎಂಬುದನ್ನು ಯಾರಾದರೂ ಗಮನಿಸಬಹುದು. ನನ್ನ ಮೂರು ದಶಕಗಳ ಗೆಳೆಯರಾದ ಕೆ. ಸತ್ಯನಾರಾಯಣ ಅವರೇ ಈ ಪುಸ್ತಕದ ವಿಮರ್ಶೆ ಮಾಡಿದರೆ ಚೆನ್ನ ಎಂಬ ನನ್ನ ಆಸೆಯನ್ನು ಈಡೇರಿಸಲೋ ಎಂಬಂತೆ, ಪತ್ರಿಕೆ ಅವರಿಂದಲೇ ವಿಮರ್ಶೆ ಮಾಡಿಸಿ ನನಗೆ ಉಪಕಾರ ಮಾಡಿದೆ. ಉಪಕಾರ ಏಕೆಂದರೆ, ಇಂದಿನ ಹಲವು ನೆಲೆಗಳ ಗುಂಪುಗಾರಿಕೆಯ, ವೈಯುಕ್ತಿಕ ದ್ವೇಷಾಸೂಯೆಗಳ, ಪೂರ್ವಾಗ್ರಹಗಳ ವಿಮರ್ಶೆಯ ವಿಷಮಯ ವಾತಾವರಣದಲ್ಲಿ, ವೈಯುಕ್ತಿಕ ಪ್ರೀತಿ ವಿಶ್ವಾಸಗಳೊಂದಿಗೆ ಬರೆದ ವಿಮರ್ಶೆಯೇ ಹೆಚ್ಚು ವಿಶ್ವಾಸಾರ್ಹವೆನಿಸುವಂತಹ ದುರ್ದಿನಗಳಿಗೆ ನಾವು ತಲುಪಿದ್ದೇವೆ! ವಿಶ್ವಾಸಾರ್ಹ ಎಂದರೆ ಒಪ್ಪಿಗೆ ಎಂಬರ್ಥದಲ್ಲಲ್ಲ. ಏಕೆಂದರೆ ವಿಮರ್ಶೆ ಎನ್ನುವುದೇ ಈ ಒಪ್ಪಿಗೆ-ಗಿಪ್ಪಿಗೆಗಳೆಂಬ ದಾಕ್ಷಿಣ್ಯದ ಸಂಗತಿಗಳನ್ನು ಮೀರಿದ್ದು. ಬದಲಿಗೆ, ಅಂತಹ ವಿಮರ್ಶೆ ಮಾತ್ರ ಇಂದು ಕೃತಿಯ ಬಗ್ಗೆ ಒಂದು ಆರೋಗ್ಯಕರ ಸಂವಾದಕ್ಕೆ ದಾರಿ ಮಾಡಿಕೊಡಬಲ್ಲದಾಗಿದೆ ಎಂದಷ್ಟೇ ನಾನಿಲ್ಲಿ ಹೇಳುತ್ತಿರುವುದು.

ನಮ್ಮಲ್ಲಿ ವಿಮರ್ಶೆಗೆ ಪ್ರತಿಕ್ರಿಯಿಸುವುದು, ಮಾರುತ್ತರ ನೀಡುವುದು (ಇದನ್ನು ಕುವೆಂಪುರಂತಹ ಕುವೆಂಪು ಅವರೇ ಮಾಸ್ತಿಯವರ ವಿಮರ್ಶೆಗೆ ಸಂಬಂಧಿಸಿದಂತೆ ಬಹು ಹಿಂದೆಯೇ ಮಾಡಿರುವವರಾದರೂ!) ಒಂದು ಕೆಟ್ಟ ಸಂಪ್ರದಾಯ ಎಂಬ ನಂಬಿಕೆಯನ್ನು ಬಿತ್ತಲಾಗಿದೆ! ಒಬ್ಬ ಲೇಖಕ ಒಂದು ಕೃತಿಯನ್ನು ಬರೆದು ಪ್ರಕಟಿಸಿದ ಕೂಡಲೇ ಅದು ಸಾರ್ವಜನಿಕ ಸ್ವತ್ತಾಗಿಬಿಡುತ್ತದೆ ಎಂಬುದೇ ಈ ನಂಬಿಕೆಯ ಹಿಂದಿರುವ ವಿವರಣೆ. ಆದರೆ ಒಂದು ಕೃತಿ ಸಾರ್ವಜನಿಕ ಸ್ವತ್ತಾದೊಡನೆ, ಅದರ 'ಒಡೆತನ'ದ ಜವಾಬ್ದಾರಿಗಳಿಂದೇನೂ ಲೇಖಕ ಬಿಡುಗಡೆಯಾಗುವುದಿಲ್ಲ ಅಲ್ಲವೆ? ಅಲ್ಲದೆ, ಕೃತಿ ಕುರಿತ ವಿಮರ್ಶೆಯನ್ನು ಆ ಕೃತಿಯ ಲೇಖಕನೇ ಪ್ರತಿಕ್ರಿಯಿಸುವ ಮೂಲಕ ಏಕೆ ಬೆಳಸಬಾರದು? ಸಂವಾದವೊಂದನ್ನು ಆರಂಭಿಸಬಾರದು? ಲೇಖಕನೇ ಆರಂಭಿಸಬಹುದಾದ ಇಂತಹ ಸಂವಾದವೇ, ಅದಕ್ಕೆ ಹೆಚ್ಚು ವ್ಯಾಪಕ ಮತ್ತು ಸಮರ್ಥವಾದ ನೆಲೆಗಟ್ಟನ್ನು ಒದಗಿಸಬಹುದಲ್ಲವೆ? ಹಾಗಾಗಿ ವಿಮರ್ಶೆಗೆ ಲೇಖಕ ಪ್ರತಿಕ್ರಿಯಿಸಲೇ ಬಾರದೆನ್ನುವುದು, ಸಲ್ಲದ ಸೌಜನ್ಯದ ಸಂಪ್ರದಾಯ ಎಂದೇ ನನ್ನ ಭಾವನೆ. ನಾನು ನನ್ನ ಪುಸ್ತಕದ ಸತ್ಯನಾರಾಯಣರ ವಿಮರ್ಶೆಗೆ ನಂತರದಲ್ಲೇ ಪ್ರತಿಕ್ರಿಯಿಸಬೇಕೆನ್ನಿಸಿದರೂ, ಈ ಸಂಪ್ರದಾಯವನ್ನು ಉಲ್ಲಂಘಿಸುವ ಧೈರ್ಯವಿಲ್ಲದೆ ಸುಮ್ಮನಾದೆ! ಆದರೆ ಈಗ ಈ 'ವಾರದ ಒಳನೋಟ'ಗಳನ್ನು ಒಂದು ಹಂತದಲ್ಲಿ ನಿಂತು; ಈ ಬರಹಗಳ 'ಆತ್ಮಾವಲೋಕನ'ದ ರೂಪದಲ್ಲಿ ಹಿನ್ನೋಡುತ್ತಿರುವ ಸಂದರ್ಭದಲ್ಲಿ, ಈ ವಿಮರ್ಶೆಯಲ್ಲಿ ವ್ಯಕ್ತವಾಗಿರುವ ಕೆಲವು ಅಭಿಪ್ರಾಯಗಳಿಗೆ–ಅವು ಕೆಲವು ಮುಖ್ಯ ಚರ್ಚೆಗಳನ್ನು ಎತ್ತಬಲ್ಲವಾದ್ದರಿಂದ–ಪ್ರತಿಕ್ರಿಯಿಸಿದರೆ ತಪ್ಪಾಗಲಾರದೆಂದು ಭಾವಿಸಿದ್ದೇನೆ.

ಸತ್ಯನಾರಾಯಣ ಈ ಪುಸ್ತಕಕ್ಕೆ ಬೆನ್ನುಡಿ ಬರೆದಿರುವ ಗೆಳೆಯ ಎನ್.ಎಸ್.ಶಂಕರ್ ಅವರ ಮಾತುಗಳನ್ನು ಉಲ್ಲೇಖಿಸುತ್ತಾ, ಈ ಬರಹಗಳು ಬದುಕಿನ ಹಲವು ವೈವಿಧ್ಯಗಳಿಗೆ

ಚಾಚಿಕೊಂಡು ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗಳನ್ನು ಗುರುತಿಸುತ್ತಾ; ಓದುಗರ ವಿವಿಧ ಭಾವಸ್ತರಗಳನ್ನು ಮುಟ್ಟುವಂವಂತಿದ್ದರೆ ಚೆನ್ನಿತ್ತು ಎಂದು ಸೂಚಿಸಿದ್ದಾರೆ. ಈ ಸಂಬಂಧ, ಡಿವಿಜಿ ಹಾಗೂ ಲಂಕೇಶರ ಬರವಣಿಗೆಯ ಪ್ರಸ್ತಾಪ ಮಾಡಿದ್ದಾರೆ. ಮೊದಲಿಗೆ ನಾನು ಡಿವಿಜಿ ಅಥವಾ ಲಂಕೇಶರೊಂದಿಗೆ ಹೋಲಿಕೆಗೆ ನಿಲುಕುವವನೇ ಅಲ್ಲ ಎಂದು ಸ್ಪಷ್ಟಪಡಿಸಬಯಸುವೆ. ಎರಡನೆಯದಾಗಿ, ನಿರ್ದಿಷ್ಟವಾಗಿ ಲಂಕೇಶರ ಬಗೆಗಿನ ಹೋಲಿಕೆ ಬಗ್ಗೆ ಹೇಳುವುದಾದರೆ; ಅವರು ಒಂದು ಪತ್ರಿಕೆಯ ಸಂಪಾದಕರಷ್ಟೇ ಅಲ್ಲ, ಒಡೆಯರೂ ಆಗಿದ್ದರು. ಹಾಗಾಗಿ ಅವರು ತಮ್ಮ ಪತ್ರಿಕೆಯನ್ನು ಹೇಗೆ ರೂಪಿಸಬೇಕು, ಹೇಗೆ ಓದುಗರಿಗೆ ತಲುಪಿಸಬೇಕು ಎಂಬುದನ್ನು ಕುರಿತ ತಮ್ಮ ಯೋಜನೆಗೆ ಅನುಗುಣವಾಗಿ ಏನು ಬರೆಯಲೂ, ಎಷ್ಟು ಬರೆಯಲೂ ಸ್ವತಂತ್ರರಿದ್ದರು. ಆದರೆ ನಾನು ಪತ್ರಿಕೆಯೊಂದರ ಅಂಕಣಕಾರ ಮಾತ್ರ (ರೇಷ್ಮೆಯವರು ವಿಶ್ವಾಸದಿಂದ, ಆದರೆ ನಿಷ್ಕಾರಣವಾಗಿ ನನ್ನ ಹೆಸರನ್ನು ಸಂಪಾದಕೀಯ ಸಲಹಾಗಾರರ ಹೆಸರಿನಲ್ಲಿ ಸೇರಿಸಿಕೊಂಡಿರುವರಾದರೂ!) ಮತ್ತು ನನ್ನ ಅಂಕಣದ ಮೂಲ ಉದ್ದೇಶವೇ ರಾಜಕೀಯ ವಿಶ್ಲೇಷಣೆ. ಇದನ್ನು ಬಿಟ್ಟು ಬೇರೆ ವಿಷಯಗಳ ಬಗ್ಗೆ ಆಗಾಗ್ಗೆ ಬರೆದಿದ್ದರೆ, ಆ ವಾರದಲ್ಲಿ ನಾನು ಚರ್ಚಿಸಬಹುದಾದಂತಹ ರಾಜಕೀಯ ಸುದ್ದಿ ಅಥವಾ ಬೆಳವಣಿಗೆ ಇರಲಿಲ್ಲ ಅಥವಾ ಆ ವಾರದ ರಾಜಕೀಯವನ್ನು ಮೀರಿ ಆ ವಿಷಯಗಳೇ ಮಹತ್ವ ಪಡೆದಿದ್ದವು ಎಂದೇ ಅರ್ಥ.

ಆದರೆ ಸತ್ಯನಾರಾಯಣರ ವಿಮರ್ಶೆಯ ಶೀರ್ಷಿಕೆಯಲ್ಲಿರುವ 'ಪುನರುಕ್ತಿ' ಎಂಬ ವರ್ಣನೆ ಅನುಚಿತವೆನ್ನಿಸುವಷ್ಟರ ಮಟ್ಟಿಗಾದರೂ ನಾನು ಈ ಬರಹಗಳಲ್ಲಿ, ಪ್ರಚಲಿತ ರಾಜಕಾರಣವನ್ನು ಬೇರೆ ಬೇರೆ ನೆಲೆಗಳಲ್ಲಿ ವಿಶ್ಲೇಷಿಸಿದ್ದೇನೆ ಎಂದು ಭಾವಿಸಿದ್ದೇನೆ. ಆ ಮೂಲಕ ನನ್ನ ಈ ಬರಹಗಳ ತಾತ್ವಿಕ ಭಿತ್ತಿ ಎಂದು ಸತ್ಯನಾರಾಯಣ ಗುರುತಿಸುವ ಗಾಂಧಿ-ಲೋಹಿಯಾ ವಿಚಾರಗಳನ್ನು ನನ್ನದೇ ರೀತಿಯಲ್ಲಿ ವಿಸ್ತರಿಸಲು ಯತ್ನಿಸಿದ್ದೇನೆ ಎಂದು ನಂಬಿದ್ದೇನೆ. ಇಂದಿನ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ, ಧರ್ಮ ಮತ್ತು ಚರಿತ್ರೆ ಕುರಿತ ಪ್ರಚಲಿತ ಸಮಾಜವಾದಿ ನಿಲುವುಗಳಿಗೆ ಸದೃಶವಾಗಿ ಹೊಸದೊಂದು space ನಿರ್ಮಿಸುವ ನನ್ನ ಪ್ರಯತ್ನದ significanceನ್ನು ಅವರು ಅಷ್ಟೇನೂ ವಿವರವಾಗಿ ಗಮನಿಸಿದಂತಿಲ್ಲ. ಅಲ್ಲದೆ, ರಾಜಕುಮಾರ್, ಗಾಂಧಿ, ಬೆಂಗಳೂರು, ಮಾಧ್ಯಮಗಳು, ಕನ್ನಡ-ಕರ್ನಾಟಕದ ರಕ್ಷಣಾ ದಳಗಳು, ಮಠ ಮನ್ಯಗಳು, 'ಆನುದೇವಾ...', ಕನ್ನಡ ಸಾಹಿತ್ಯ, ದಲಿತ ಚಳುವಳಿ, ಪ್ರಗತಿ ಮತ್ತು ಹಿಂಸೆ ಇತ್ಯಾದಿ ವಿಷಯಗಳನ್ನು ಕುರಿತ ಇಲ್ಲಿನ ಬರಹಗಳ ಹಿಂದಿನ ಸಾಂಸ್ಕೃತಿಕ ಆಶಯವೂ ಅವರ ಕಣ್ತಪ್ಪಿ ಹೋದಂತಿದೆ. ಹಾಗಾಗಿ ಬರಹದುದ್ದಕ್ಕೂ ನಾನು ಸೂಚಿಸಿರುವ ಔಷಧ-ಕಷಾಯ ಒಂದೇ ರೀತಿಯದು, ಸಮಾಜವಾದಿ ಹಿನ್ನೆಲೆಯದು ಎಂಬ ಅವರ ಸಾಂದರ್ಭಿಕ ಮಾತು ಕೂಡಾ ಅವಸರದ, ಸ್ಥೂಲವೆನಿಸುವ ಅಭಿಪ್ರಾಯವೇ ಆಗಿದೆ ಎಂದು ನನಗನ್ನಿಸಿದೆ ಎಂದರೆ ಸತ್ಯನಾರಾಯಣರು ತಪ್ಪು ತಿಳಿಯಲಾರರು ಎಂದು ಭಾವಿಸುವೆ.

ಜೊತೆಗೆ ಇಲ್ಲಿ ಲಂಕೇಶರ ಪತ್ರಿಕೋದ್ಯಮ ಬರವಣಿಗೆಯ ಪ್ರಸ್ತಾಪ ಬಂದಿರುವುದರಿಂದ,

ಇನ್ನೊಂದು ವಿಷಯವನ್ನೂ ಇಲ್ಲಿ ಸ್ಪಷ್ಟಪಡಿಸಬೇಕು. ಲಂಕೇಶ್ ತಮ್ಮ ಪತ್ರಿಕೆಯಲ್ಲಿ ಏನು ಬರೆದರೂ ಓದುಗರ ವೈವಿಧ್ಯಮಯ ಭಾವ ಸ್ತರಗಳನ್ನು ಮೀಟುತ್ತಾ ಮೋಹಕವಾಗಿ, ಭಾವನಾತ್ಮಕವಾಗಿ ಬರೆಯಲೆತ್ನಿಸುತ್ತಿದ್ದುದನ್ನು ನಾನು ಎಂದೂ ಒಪ್ಪುತ್ತಿರಲಿಲ್ಲ. ವಿಶೇಷವಾಗಿ ರಾಜಕೀಯ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ಆಕರ್ಷಕವಾಗಿ ಬರೆಯುವ ಭರದಲ್ಲಿ ಅವರು ಸತ್ಯ ಮತ್ತು ವಾಸ್ತವಗಳನ್ನು ತೇಲಿಸಿಕೊಂಡು ಅಥವಾ ತೆಳುವಾಗಿಸಿಕೊಂಡು, ಕೆಲವೊಮ್ಮೆ ಪೂರ್ತಾ ಪಕ್ಕಕ್ಕೆ ಸರಿಸಿಕೊಂಡೂ ಹೋಗುತ್ತಿದ್ದರೆಂದೇ ನನ್ನ 'ಲಂಕೇಶ್ ಪತ್ರಿಕೆ' ಓದಿನ ಅನುಭವ ಹೇಳುತ್ತದೆ. ಹೀಗಾಗಿ ಬಹಳ ಬಾರಿ ಅವರು ರಾಜಕೀಯ ಮತ್ತು ಸಾಮಾಜಿಕ ವಿದ್ಯಮಾನಗಳ ಆಳಕ್ಕೆ ಹೋಗಿ ಚಿಂತನೆ ಮಾಡುತ್ತಿದ್ದರೆಂದು ನನಗನ್ನಿಸುವುದಿಲ್ಲ. ಇದು ಸೃಜನಶೀಲ ಲೇಖಕನೊಬ್ಬ ಪತ್ರಕರ್ತನಾದಾಗ ಸಂಭವಿಸುವ ಅವಘಡ ಇರಬಹುದು. ಇದೇ ಅಂತಹ ಪತ್ರಿಕೆಗಳ ಜನಪ್ರಿಯತೆಯ, ಯಶಸ್ಸಿನ ಗುಟ್ಟೂ ಆಗಿರಬಹುದು. ನಾನು ಸ್ವಲ್ಪ ಕಾಲ ದೆಹಲಿಯಿಂದ ಆಕಾಶವಾಣಿಯ ಕೆಲಸ ಬಿಟ್ಟು ಬಂದು 'ಲಂಕೇಶ್ ಪತ್ರಿಕೆ'ಯ ವಿಶೇಷ ವರದಿಗಾರನಾಗಿದ್ದಾಗ, ಲಂಕೇಶ್ ನನಗೊಮ್ಮೆ ಹೇಳಿದ್ದು: 'ಆಕರ್ಷಕವಾಗಿ ಬರೆಯುವುದನ್ನು ಪೂರ್ತಿ ನನಗೆ ಬಿಟ್ಟುಬಿಡಿ. ನೀವು ಸ್ವಲ್ಪ ನೇರವಾಗಿ, matter of fact ಶೈಲಿಯಲ್ಲಿ ಬರೆಯಿರಿ! ಅದಕ್ಕೆಂದೇ ನಿಮ್ಮನ್ನು ಇಲ್ಲಿಗೆ ಕರೆಸಿಕೊಂಡಿರುವುದು!'

ಆದರೆ ನಂತರದ ದಿನಗಳಲ್ಲಿ ಬಹಳ ಜನ ಅವರ ಶಿಷ್ಯರು ಅವರನ್ನೇ ಅನುಸರಿಸಿದರು; ಈಗಲೂ ಮಾದರಿ ಎಂಬಂತೆ ಅನುಸರಿಸುತ್ತಿದ್ದಾರೆ. ಅದೇನೇ ಇರಲಿ, ಇದರ ಪರಿಣಾಮವೆಂದರೆ, ಲಂಕೇಶರಿಗೆ ತಮ್ಮಿಂದ ವೈವಿಧ್ಯಮಯ ಭಾವಸ್ತರಗಳನ್ನು ಮೀಟಿಸಿಕೊಂಡು ಸಂತೋಷ ಪಡುವ ಒಂದು ಒಂದು ದೊಡ್ಡ ಓದುಗ ವರ್ಗವೇ ಸೃಷ್ಟಿಯಾಯಿತು. ಇದರ ಒಟ್ಟು ರಾಜಕೀಯ ಪರಿಣಾಮವಾಗಿ ಕರ್ನಾಟಕದ ಮೊದಲ ಕಾಂಗ್ರೆಸ್ಸೇತರ ಸರ್ಕಾರ ರೂಪಿತವಾಯಿತು ಎಂದೂ ಹೇಳಲಾಗುತ್ತದೆ. ಆದರೆ ಇದನ್ನು ಸಾರಾಸಗಟಾಗಿ ಒಪ್ಪುವುದು ಕಷ್ಟ. ಹೆಚ್ಚೆಂದರೆ, ಅನೇಕ ಅಂಶಗಳು ಸೇರಿ ಸೃಷ್ಟಿಸಿದ್ದ ಅಂದಿನ ನಿರ್ಣಾಯಕ ರಾಜಕೀಯ ಸ್ಥಿತ್ಯಂತರ ಸಂದರ್ಭದ ಜೊತೆಗೆ ಪತ್ರಿಕೆಯೂ ಕೈಗೂಡಿಸಿ, ಪೂರಕ ಪ್ರಭಾವ ಬೀರಿರಬಹುದಷ್ಟೆ. ಏಕೆಂದರೆ, ಅದರಿಂದ ಉತ್ತೇಜಿತರಾದ ಲಂಕೇಶ್ ಆನಂತರ 'ಪ್ರಗತಿರಂಗ'ವೆಂಬ ರಾಜಕೀಯ ವೇದಿಕೆಯೊಂದನ್ನು ರೂಪಿಸಿಕೊಂಡು ಬೀದಿಗೆ ಬಂದಾಗ, ಅವರಿಗೆ ಸಿಕ್ಕ ಜನ ಬೆಂಬಲದ ಪ್ರಮಾಣ ಆಘಾತಕಾರಿಯಾಗಿತ್ತು. (ಅದು ಅವರನ್ನು ಎಷ್ಟರ ಮಟ್ಟಿಗೆ ಧೃತಿಗೆಡಿಸಿತೆಂದರೆ, ಬೆಂಗಳೂರಿನಲ್ಲಿನ ಅವರ ಮೊದಲ ಬಹಿರಂಗ ಸಭೆ ನಡೆದ ಸುದ್ದಿಯನ್ನು ಅವರು ರಾಜ್ಯದ ಮುಖ್ಯ ಪತ್ರಿಕೆಯೊಂದರಲ್ಲಿ ಜಾಹೀರಾತಿನ ರೂಪದಲ್ಲಿ ಬಿಡುಗಡೆ ಮಾಡಬೇಕಾಯಿತು! ಆನಂತರ ಲಂಕೇಶರ ಪತ್ರಿಕೋದ್ಯಮದ ಖದರೇ ಬದಲಾದದ್ದನ್ನು-ಅದು ಬಹು ಒರಟಾಗುತ್ತಾ, ಕಹಿಯಾಗುತ್ತಾ, ಹಲವು ನೆಲೆಗಳಲ್ಲಿ ಪ್ರತೀಕಾರಾತ್ಮಕವಾಗುತ್ತಾ ಹೋದುದನ್ನು–ಬಹಳ ಜನ ಗಮನಿಸಿದಂತಿಲ್ಲ.) ಹಾಗಾಗಿ, ಲಂಕೇಶರ ರಾಜಕೀಯ ಬರವಣಿಗೆ ಅಂತಿಮವಾಗಿ ಬಹಳಷ್ಟು ಜನರ ಮಟ್ಟಿಗೆ ಹೊಸ ಹುರುಪಿನ ಒಂದು ರೋಚಕ

ಓದಿನ ಅನುಭವಕ್ಕಿಂತ ಹೆಚ್ಚಿನದೇನೂ ಆಗಿದ್ದಂತೆ ನನಗೆ ತೋರುವುದಿಲ್ಲ. ಆದುದರಿಂದ ರಾಜಕೀಯ ಬರವಣಿಗೆಯ ವಿಷಯದಲ್ಲಿ ಲಂಕೇಶ್ ನನಗೆ ಮಾದರಿಯಲ್ಲ. ರಾಜಕಾರಣ ಅಥವಾ ಇನ್ನಾವುದೇ ಸಾಮಾಜಿಕ ವಿಚಾರಗಳನ್ನು ಕೇವಲ ಆನಂದದಾಯಕ ಅನುಭವಕ್ಕಾಗಿ, ಸಾಹಿತ್ಯಿಕ ರೋಮಾಂಚನಕ್ಕಾಗಿ ಓದುವವರನ್ನು ನನ್ನ ಬರವಣಿಗೆ ಗುರಿಯಾಗಿಟ್ಟುಕೊಂಡಿರುವುದಿಲ್ಲ.

ಇನ್ನು ಬಂಜಗೆರೆ ಜಯಪ್ರಕಾಶರಿಗೆ ನಾನು ಹೇಳಿದ್ದೇನೆಂದು ಸತ್ಯನಾರಾಯಣ ಅವರು ಪ್ರಸ್ತಾಪಿಸಿರುವ ಬುದ್ಧಿವಾದ ಮತ್ತು ಇಂತಹ ಬುದ್ಧಿವಾದಗಳಿಂದ 'ಸಂವಾದ ಸಂಸ್ಕೃತಿ'ಯನ್ನು ಬೆಳಸಲಾಗುವುದಿಲ್ಲ ಎಂಬ ಅವರ ಬುದ್ಧಿವಾದದ ಮಾತಿನ ಬಗ್ಗೆ ಹೇಳುವುದಾದರೆ, ನಾನಲ್ಲಿ ಒಂದು ಸಾಲಿನ ಬುದ್ಧಿವಾದವನ್ನಾದರೂ ಹೇಳಿರುವೆ ಎಂದು ನನಗನಿಸಿಲ್ಲ. ಬಂಜಗೆರೆಯವರ ಪುಸ್ತಕ ಪ್ರಕರಣ ಒಳಗೊಂಡಿದ್ದ ಸಂಗತಿಗಳ ಸಾಂಸ್ಕೃತಿಕ ಮಹತ್ವ, ಅದರ ವಿರುದ್ಧ ಜಾತಿವಾದಿಗಳು ನಡೆಸಿದ ದಾಳಿಯ ತೀವ್ರತೆ, ಅದರ ನಿಷೇಧಕ್ಕಾಗಿ ಅವರು ನಡೆಸಿದ ಹೋರಾಟಗಳ ವೈಖರಿ ಮತ್ತು ಈ ಹಿನ್ನೆಲೆಯಲ್ಲಿ ಆ ಪುಸ್ತಕವನ್ನು ಹಲವು ನೆಲೆಗಳಲ್ಲಿ ಸಕಾರಣವಾಗಿಯೇ ಸಮರ್ಥಿಸಿದ ನಮ್ಮಂತಹ ಅನೇಕ ಜನರು ಎದುರಿಸಬೇಕಾಗಿ ಬಂದ ಇಕ್ಕಟ್ಟುಗಳ ವಿವರಗಳು ಸತ್ಯನಾರಾಯಣ ಅವರಿಗೆ ಗೊತ್ತಿದ್ದರೆ, ಅವರು ಹೀಗೆ ದೂರದಲ್ಲಿ ಥಣ್ಣಗೆ ಕೂತು ಮಾತ್ರ ಆಡಬಹುದಾದ ಬುದ್ಧಿವಾದದ ಮಾತನ್ನು ಆಡುತ್ತಿರಲಿಲ್ಲವೇನೋ! ಬಂಜಗೆರೆಯವರು ಒತ್ತಡಕ್ಕೆ ಮಣಿದ ಹಿನ್ನೆಲೆ, ಅದಕ್ಕಾಗಿ ಅವರನ್ನೊಲಿಸಿದ ಜನರ ನಡಾವಳಿ ಹಾಗೂ ಅದಕ್ಕೆ ಅವರು ನೀಡಿದ ಅಸಹಾಯಕತೆಯ ಕಾರಣಗಳು, ಯಾವುವನ್ನು ನಾವು ಇಂಧಿನ ರಾಜಕೀಯ ಅವನತಿಗೆ ಪ್ರೇರಕವಾಗಿವೆ ಎನ್ನುತ್ತೇವೆಯೋ ಅವೇ ಆಗಿವೆ ಎಂಬುದೇ ನನ್ನ ಅಲ್ಲಿನ ವಿಷಾದವಾಗಿದೆ (ಅದನ್ನು ನಾನು ಆ ನನ್ನ ಲೇಖನದಲ್ಲಿಯೇ ವಿವರಿಸಿರುವೆ). ನಮ್ಮ ಇಂದಿನ ಎಲ್ಲ ಬಂಡಾಯಗಳೂ, ಪ್ರತಿಭಟನೆಗಳೂ ರಾಜಿಗಳ ನಿರೀಕ್ಷೆಗಳನ್ನಿಟ್ಟುಕೊಂಡೇ, ಅವನ್ನು ಎದುರು ನೋಡುತ್ತಲೇ, ಅದಕ್ಕಾಗಿ ಸೂಕ್ತ ಮಧ್ಯವರ್ತಿಗಳನ್ನೊಳಗೊಂಡೇ ರೂಪಗೊಂಡಿರುತ್ತವೆ. ಅವು ತಮ್ಮ ಸಾಂಸ್ಕೃತಿಕ ಪುಢಾರಿತನದಲ್ಲಿ ದೂರದ, ದೀರ್ಘಕಾಲಿಕ ಗುರಿಗಳನ್ನು ಕಳೆದುಕೊಂಡಿವೆ. ಆದುದರಿಂದಲೇ, ನಮ್ಮ ರಾಜಕೀಯ ಪುಢಾರಿಗಳ ಬಾಯಲ್ಲಿ ಕ್ಲೀಷೆಯಾಗಿ ಹೋಗಿರುವ 'ಉಗ್ರ ಹೋರಾಟ'ಗಳಿಗೂ ನಮ್ಮ ಸಾಂಸ್ಕೃತಿಕ ಉಗ್ರ ಹೋರಾಟಗಳಿಗೂ ಅಂತಹ ವ್ಯತ್ಯಾಸಗಳೇನೂ ಉಳಿದಿಲ್ಲ. ಇದನ್ನಷ್ಟೇ ನನ್ನ ಆ ಬರಹದಲ್ಲಿ ಸ್ವಲ್ಪ ವ್ಯಗ್ರತೆಯೊಂದಿಗೆ ಹೇಳಿರುವುದು ಎಂದು ನಾನು ಭಾವಿಸಿದ್ದೇನೆ. 'ಸಂವಾದ ಸಂಸ್ಕೃತಿ' ಎಂದರೆ ಸದಾ ಚರ್ಚೆ ಮಾಡುತ್ತಿರುವುದಲ್ಲ; ಅದು ಸಕಾಲದಲ್ಲಿ ಸೂಕ್ತ ತೀರ್ಮಾನಗಳನ್ನು ತೆಗೆದುಕೊಂಡು ಮುಂದುವರೆಯಲು ಇರುವ ಸಾಧನ ಮಾತ್ರ ಎಂದು ನನ್ನ ನಂಬಿಕೆ. ಆದರೆ, ಇದರ ಬಗ್ಗೆ ಸತ್ಯನಾರಾಯಣ ಅವರಿಗೆ ಒಂದು ರೊಮ್ಯಾಂಟಿಕ್ ಕಲ್ಪನೆ ಇದ್ದಂತಿದೆ!

ಕೊನೆಯಲ್ಲಿ, ಸತ್ಯನಾರಾಯಣ ನಾನು ಆಕಾಶವಾಣಿಯಲ್ಲಿದ್ದಾಗ ಮತ್ತು 'ಸಾಹಿತ್ಯ ಸಂವಾದ' ನಿಯತಕಾಲಿಕದ ಸಂಪಾದಕನಾಗಿದ್ದಾಗ ಸಾಹಿತ್ಯ ವಿಮರ್ಶೆ ನನ್ನ ಪ್ರಮುಖ ಕಾಳಜಿ ಆಗಿತ್ತು;ಆದರೆ ಈ ಬರಹಗಳನ್ನು ನೋಡಿದರೆ ಅದು ಪ್ರಾಸಂಗಿಕವಾಗಿದೆ ಎಂದಿದ್ದಾರೆ.

ಅದಕ್ಕಿಂತ ಮುಖ್ಯವಾಗಿ, 'ಇದು ನಾಗಭೂಷಣರ ಬಗ್ಗೆಯೂ, ನಮ್ಮ ಸಾಂಸ್ಕೃತಿಕ ವಾತಾವರಣದ ಬಗ್ಗೆಯೂ ಏನನ್ನು ಹೇಳುತ್ತದೆ?' ಎಂಬ ಕುತೂಹಲಕಾರಿ ಪ್ರಶ್ನೆಯೊಂದಿಗೆ ತಮ್ಮ ವಿಮರ್ಶೆಯನ್ನು ಮುಗಿಸಿದ್ದಾರೆ. ಈಗಾಗಲೇ ಹೇಳಿದಂತೆ, ರಾಜಕಾರಣದ ಬಗ್ಗೆ ಸಾಹಿತ್ಯಿಕ ಶೈಲಿಯಲ್ಲಿ ಬರೆಯುವುದು ನನ್ನ ಜಾಯಮಾನವಲ್ಲ. ಅಲ್ಲದೆ, ಎಂದೂ ನಾನು ಯಾರ ಆಹ್ವಾನವೂ ಇಲ್ಲದೆ ಸಾಹಿತ್ಯ ವಿಮರ್ಶೆ ಬರೆದವನಲ್ಲ–'ಸಾಹಿತ್ಯ ಸಂವಾದ'ಕ್ಕಾಗಿ ಅನಿವಾರ್ಯವಾಗಿ ಬರೆಯಬೇಕಾಗಿ ಬಂದ ಕೆಲವು ಸಂಕ್ಷಿಪ್ತ ವಿಮರ್ಶೆಗಳ ಹೊರತಾಗಿ. ಜೊತೆಗೆ, 'ಸಾಹಿತ್ಯ ಸಂವಾದ' ಪತ್ರಿಕೆಯ ಹತ್ತು ವರ್ಷಗಳ 'ಅನುಭವ'ವೇ ನನ್ನನ್ನು ಹೆಚ್ಚಾಗಿ ರಾಜಕೀಯ ವಿಮರ್ಶೆಯ ಕಡೆ ದೂಡಿದ್ದು ಎಂದರೆ ತಪ್ಪಾಗಲಾರದು. ಅದಕ್ಕೆ ಕಾರಣ, ರಾಜಕಾರಣ ಎಂದರೆ ಮೂಲತಃ ಸಾರ್ವತ್ರಿಕ ಶೀಲ ನಿರ್ಮಾಣದ, ಸಮಾಜದ ಅಸ್ತಿವಾರಗಳ ಪುನಾರಚನೆಯ ಕೆಲಸ ಎಂಬ ನನ್ನ ನಂಬಿಕೆ. ಏಕೆಂದರೆ, ನಮ್ಮ ಸಾಹಿತಿಗಳು–ಅವರು ಬುದ್ಧಿವಂತರೂ ಆಗಿರುವುದರಿಂದ–ತಮ್ಮ 'ಯಶಸ್ಸಿ'ಗಾಗಿ ನಡೆಸುವ ತಂತ್ರ-ಕುತಂತ್ರಗಳಲ್ಲಿ, ರಾಜಕಾರಣಿಗಳನ್ನೂ ಮೀರಿಸಬಲ್ಲವರಾಗಿದ್ದಾರೆ. ರಾಜಕಾರಣಿಗಳಿಗಾದರೂ ಜನರ ಭಯ ಮತ್ತು ಆ ಸಂಬಂಧದ ಲಜ್ಜೆಯಾದರೂ ಇದೆ. ಆದರೆ ಇವರಲ್ಲಿ ಬಹಳಷ್ಟು ಜನಕ್ಕೆ ಅವಾವುವೂ ಇಲ್ಲವಾಗಿದೆ. ಹೀಗಿರುವಾಗ ಸಾಹಿತ್ಯ ವಿಮರ್ಶೆ ಯಾರಿಗೆ ಬೇಕಾಗಿದೆ? ಜಡವೂ, ಅರಾಜಕವೂ ಆಗತೊಡಗಿದ್ದ ಆಕಾಶವಾಣಿಯಿಂದ ನಾನು ಸ್ವಯಂ ನಿವೃತ್ತಿ ಪಡೆಯಲು ನಿಶ್ಚಯಿಸಿದ್ದೇ, ಈ ಎಲ್ಲದರ ಹಿನ್ನೆಲೆಯಲ್ಲಿ ಬದುಕನ್ನು ಕುರಿತ ನನ್ನ ಆಲೋಚನೆಗಳ ನೆಲೆಗಳನ್ನು ಪುನಾರಚಿಸಿಕೊಳ್ಳುವುದಕ್ಕೆ ಮತ್ತು ಅದರ ಭಾಗವಾಗಿ ನನ್ನ ಬರವಣಿಗೆಯ ಗೊತ್ತು ಗುರಿಗಳನ್ನು ಪುನರ್ವಿಮರ್ಶಿಸಿಕೊಳ್ಳುವುದಕ್ಕೆ ಅಗತ್ಯವಾದ ವ್ಯವಧಾನಕ್ಕಾಗಿ ಎಂದು ಸತ್ಯನಾರಾಯಣರಿಗೆ ತಿಳಿಸಬಯಸುವೆ!

ಇಂದಂತೂ ಸಾಹಿತ್ಯ 'ಪೈಲ್ವಾನರು'ಗಳ ಎಷ್ಟು ಸಂಘಗಳು ಬೆಳೆದಿವೆ ಎಂದರೆ, ಸುತ್ತಮುತ್ತ ನೋಡಿಯೇ ಒಂದು ವಿಮರ್ಶೆಯ ಮಾತಾಡುವ ಧೈರ್ಯ ಮಾಡಬೇಕಿದೆ! ಸಾಹಿತಿಗಳಾರು, ಸಾಹಿತಿ ವೇಷಧಾರಿಗಳಾರು ಎಂಬುದೇ ಸುಲಭವಾಗಿ ಗೊತ್ತಾಗಲಾಗದಷ್ಟು ಈ ಸಂಘಗಳಿಂದ ವಿಮರ್ಶೆಯ ಹೆಸರಿನಲ್ಲಿ ಸಾಹಿತ್ಯ ಪ್ರಚಾರಾಂದೋಲನಗಳು ನಡೆದಿವೆ. ಸಾಹಿತ್ಯ ಅಕಾಡೆಮಿಯ ಸದಸ್ಯತ್ವ, ವಿಶ್ವವಿದ್ಯಾಲಯವೊಂದರಲ್ಲಿನ ಆಯಕಟ್ಟಿನ ಜಾಗ, ಸಾಹಿತ್ಯ ಪತ್ರಿಕೆ ಅಥವಾ ಪುರವಣಿಯೊಂದರ ಸಂಪಾದಕತ್ವಗಳು ಈಗ ಚೇಲಾಗಳ ಗುಂಪುಗಳನ್ನು ಕಟ್ಟಿಕೊಳ್ಳುವ, ಆ ಗುಂಪಿಗೆ ಸೇರಿರುವವರ ಕೃತಿಗಳಿಗೆ ಕ್ಷಿಪ್ರ ಪ್ರಚಾರ ಕೊಡುವ ಮತ್ತು ಅವನ್ನು ಎತ್ತಿ ಹಿಡಿಯುವ ಹಾಗೂ ಸಾಹಿತ್ಯ ಚರ್ಚೆಗಳನ್ನು ತಮ್ಮ ಹಿತಾಸಕ್ತಿಗಳಿಗೆ ತಕ್ಕಂತೆ ನಿರ್ದೇಶಿಸಿಕೊಳ್ಳುವ ಸಾಧನಗಳಾಗಿಬಿಟ್ಟಿವೆ. ಇನ್ನು ಜಾತಿ ಸಂಬಂಧಗಳಂತೂ–ಇದು ಎಲ್ಲ ಜಾತಿಗಳಿಗೂ ಅನ್ವಯಿಸಿದಂತೆ–ಇಂತಹ ಗುಂಪುಗಾರಿಕೆಗೆ ದೊಡ್ಡ ಸ್ಫೂರ್ತಿಯೇ ಆಗಿಬಿಟ್ಟಿದ್ದಾರೆ. ಪುಸ್ತಕ ಬಿಡುಗಡೆ ಸಮಾರಂಭಗಳು ಜಾತಿ ಸಮಾರಂಭಗಳಂತೆ ಕಂಗೊಳಿಸತೊಡಗಿವೆ! ಮಾಧ್ವ ಕವಿಯೊಬ್ಬರ ಕವನಗಳನ್ನು ಮಾಧ್ವ ಪ್ರಕಾಶಕರೊಬ್ಬರು

ಹೊರತರುತ್ತಾರೆ. ಅದರ ಬಿಡುಗಡೆಗಷ್ಟೇ ಅಲ್ಲ, ಅದರ ಪರಿಚಯಕ್ಕೂ ಮಾಧ್ವ ಲೇಖಕರೇ ಸೂಕ್ತವಾಗಿ ಕಾಣುತ್ತಾರೆ ಎಂದರೆ ಸಾಹಿತ್ಯದ ಮರ್ಯಾದೆ ಎಲ್ಲಿಗೆ ಬಂದಿದೆ? ಅಂದರೆ, ಜಾತಿಯನ್ನೇ ಒಂದು ಸಾಹಿತ್ಯ ದೃಷ್ಟಿಕೋನವನ್ನಾಗಿ ಸ್ವೀಕರಿಸಲಾಗಿದೆ ಎಂದೇ ಅರ್ಥವಲ್ಲವೆ? ಇಂತಹುದನೆಲ್ಲ ಅಸಹ್ಯದಂತೆ ನೋಡುವ ನನ್ನಂತಹವರನ್ನು ಇಂದು ಸಾಹಿತ್ಯ ಚರ್ಚೆಯಲ್ಲಿ ಒಳಗೊಳ್ಳಿಸಿಕೊಳ್ಳುವುದು ಸಾಹಿತ್ಯ ಆಡಳಿತಗಾರರಿಗೆ ಕಷ್ಟವೇ. ಅದರೂ ನನ್ನನ್ನು ಆಹ್ವಾನಿಸಿ ಮಾತನಾಡಿಸುವವರು, ಬರೆಯಿಸುವವರು ಅಲ್ಲೊಬ್ಬರು ಇಲ್ಲೊಬ್ಬರು ಇದ್ದೇ ಇದ್ದಾರೆ! ಇಂತಹ ಭಾಷಣ-ಬರಹಗಳನ್ನೊಳಗೊಂಡ ನನ್ನ ಸಾಹಿತ್ಯ ವಿಮರ್ಶೆಯ ಸಂಕಲನವೊಂದು ಸದ್ಯದಲ್ಲಿಯೇ ಹೊರಬರಲಿದೆ. ಹಾಗಾಗಿ, ನನ್ನ ಸಾಹಿತ್ಯ ಚಟುವಟಿಕೆಗಳ ಬಗ್ಗೆ ಬಹು ಹಿಂದಿನಿಂದಲೂ ಆಸಕ್ತಿ-ಕಾಳಜಿಗಳನ್ನು ವಹಿಸುತ್ತಾ ಬಂದಿರುವ ಸತ್ಯನಾರಾಯಣ ಆತಂಕ ಪಡುವ ಅಗತ್ಯವಿಲ್ಲ ಎಂದು ಹೇಳುತ್ತಾ ಈ ಬರಹವನ್ನು ಮುಗಿಸಬಯಸುವೆ.

(ಮಾರ್ಚ್ ೧೩, ೨೦೦೯)

■

೪೨. ರಾಷ್ಟ್ರ ಒಡೆಯುವ ಅಭಿವೃದ್ಧಿ

ನಾನು ಎಚ್.ಟಿ. ಕೃಷ್ಣಪ್ಪನವನ್ನು ನೋಡಿಲ್ಲ. ಆದರೆ ಅವರು ನಮ್ಮ ಗೌರವಾನ್ವಿತ ರಾಜಕಾರಣಿಗಳಾಗಿದ್ದರು ಎಂಬುದನ್ನು ಬಲ್ಲೆ. ಮಂಡ್ಯದ ಕೆ.ವಿ. ಶಂಕರೇಗೌಡರ ಪರಂಪರೆಯಲ್ಲಿನ ಅನೇಕ ರಾಜಕಾರಣಿಗಳಂತೆ ನಾಗಮಂಗಲದ ಈ ಕೃಷ್ಣಪ್ಪನವರೂ ಎಂದೂ ಸಾರ್ವಜನಿಕ ಜೀವನದಲ್ಲಿ ಸಭ್ಯತೆಯ ಎಲ್ಲೆಗಳನ್ನು ಮೀರಿ ಹೋಗಲಿಲ್ಲ. ಕಳೆದ ಶತಮಾನದ ಎಂಭತ್ತರ ದಶಕದ ರಾಜಕಾರಣ, ಒಂದು ರೀತಿಯಲ್ಲಿ ಕರ್ನಾಟಕ ರಾಜ್ಯ ರಾಜಕಾರಣದ ಸಂಕ್ರಮಣ ಘಟ್ಟ. ಎಪ್ಪತ್ತರ ದಶಕದ ಜೆ.ಪಿ. ಚಳುವಳಿ ಹುಟ್ಟಿಸಿದ ಆಸೆಗಳೆಲ್ಲ ಕಮರಿ ಹೋಗಿ, ರಾಜಕಾರಣ ಹೊಸ ನೆಲೆಗಳನ್ನು ಹುಡುಕಿಕೊಳ್ಳುತ್ತಿದ್ದ ಕಾಲವದು. ಇಂತಹ ಕಾಲದಲ್ಲಿ ಆಂತರಿಕವಾಗಿ ದುರ್ಬಲರಾದವರು ಬಹು ಸುಲಭವಾಗಿ ಆಮಿಷಗಳಿಗೆ ಸಿಕ್ಕಿ ನಾಶವಾಗುವ ಅಪಾಯವಿರುತ್ತದೆ. ಆದರೆ ಕೃಷ್ಣಪ್ಪ ಅಂತಹ ಅಪಾಯಕ್ಕೆ ಸಿಕ್ಕದಂತೆ ತಮ್ಮನ್ನು ಸಾರ್ವಜನಿಕ ಜೀವನದ ಕೆಲವು ಮೂಲಭೂತ ಮೌಲ್ಯಗಳಿಂದ ರಕ್ಷಿಸಿಕೊಂಡಿದ್ದರು ಎಂಬುದೇ ಇಂದೂ ಅವರನ್ನು ಗೌರವದಿಂದ ನೆನಪಿಸಿಕೊಳ್ಳಲು ಕಾರಣವಾಗಿದೆ. ರಾಜಕೀಯದಲ್ಲಿ ಆರಕ್ಕೇರದೆ ಮೂರಕ್ಕಿಳಿಯದೆ ಬಾಳಿದ ಇವರು, ನಿಜವಾಗಿ ಹೆಸರಾಗಿದ್ದುದು ತಮ್ಮ ಕರ್ತೃತ್ವ ಶಕ್ತಿಯಿಂದಲ್ಲ; ರಾಜಕಾರಣದಲ್ಲಿದ್ದೂ ಯಾರಿಗೂ ಏನೂ ಕೆಟ್ಟದು ಮಾಡದ ತಮ್ಮ ಸಾತ್ವಿಕ ಗುಣದಿಂದಾಗಿ. ಇಂದು ಅದೇ ಒಂದು ದೊಡ್ಡ ಗುಣವಾಗಿ ಗುರುತಿಸಲ್ಪಡುವಂತಾಗಿದೆ ಮತ್ತು ಅವರ ರಾಜಕೀಯ ನಿವೃತ್ತಿಯ ಬಹುವರ್ಷಗಳ ನಂತರ ಅವರ ಗೌರವಾರ್ಥ ಅಭಿನಂದನ ಗ್ರಂಥವೊಂದನ್ನು ತರಬೇಕೆನ್ನುವ ಒತ್ತಡ ಸಮಾಜದಲ್ಲಿ ಉಂಟಾಗಿದೆ ಎಂದರೆ, ನಮ್ಮ ರಾಜಕಾರಣ ಇಂದು ಎಷ್ಟು ಕುಲಗೆಟ್ಟು ಹೋಗಿದೆ ಎಂಬುದು ಗೊತ್ತಾಗುತ್ತದೆ.

ಇಂದು ನಾಗಮಂಗಲ ರಾಜ್ಯದಲ್ಲೇ ಅತ್ಯಂತ ರೂಕ್ಷ ರಾಜಕಾರಣಕ್ಕೆ ಹೆಸರಾಗಿದೆ. ಸಿಂಗಾರಿಗೌಡ ಮತ್ತು ಕೃಷ್ಣಪ್ಪನವರ ಸರಳ ರಾಜಕಾರಣಕ್ಕೆ ಎದುರಾಗಿ, 'ನಂಗಾನಾಚ್' ಮತ್ತು ಸಾರ್ವಜನಿಕ 'ಬಾಡೂಟ'ಗಳು ಇಲ್ಲಿನ ಹೊಸ ರಾಜಕಾರಣದ ಹೆಗ್ಗುರುತು ಗಳೆನಿಸಿಕೊಂಡಿವೆ! ಇಲ್ಲಿಂದ ಆಯ್ಕೆಯಾದ ಸಾಮಾನ್ಯ ಆರ್ಥಿಕ ನೆಲೆಗಳಿಂದ ಬಂದ ಇತ್ತೀಚಿನ ಶಾಸಕರುಗಳು ಇಂದು ಹಲವು ಕೋಟಿ ರೂಪಾಯಿಗಳ ಒಡೆಯರಾಗಿ, ಬೆಂಗಳೂರನ್ನು ತಮ್ಮ ಕಾರ್ಯಕೇಂದ್ರ ಮಾಡಿಕೊಂಡಿದ್ದಾರೆ. ಆದರೆ ನಾಗಮಂಗಲ ಕ್ಷೇತ್ರದ ಸಾಮಾನ್ಯ ಜನತೆಯ ಪಡಿಪಾಟಲು ಮಾತ್ರ ಹಾಗೇ ಮುಂದುವರೆದಿದೆ. ನಿಜ, ಈಗ ನಾಗಮಂಗಲ ನಗರದ ಮಧ್ಯೆ ಹಾದುಹೋದಾಗ, ಬದಲಾವಣೆ ಎದ್ದು ಕಾಣುವಂತಿದೆ. ಅಗಲವಾದ

ಒಳ್ಳೆಯ ರಸ್ತೆ, ಆಕರ್ಷಕ ಕಟ್ಟಡಗಳು, ಆಧುನಿಕ ಮನೆಗಳು ಹಾಗೂ ಥಳಕು ಬಳುಕಿನ ಅಂಗಡಿ ಮುಂಗಟ್ಟುಗಳಿಂದ ಕಂಗೊಳಿಸುತ್ತಿರುವ ನಾಗಮಂಗಲ, ಮುಖ್ಯರಸ್ತೆಗೆ ಸಿಗುವ ನೋಟದಲ್ಲಿ ಇಂದು ದೊಡ್ಡ ವ್ಯಾಪಾರಿ ಕೇಂದ್ರದಂತೆ ಕಂಗೊಳಿಸುತ್ತಿದೆ. ಆದರೆ ಇದರ ಸೃಷ್ಟಿಕರ್ತರೂ ಮತ್ತು ಫಲದಾಯಿಗಳಿಬ್ಬರೂ ಒಬ್ಬರೇ ಆಗಿ; ಈ 'ಪ್ರಗತಿ' ಜನಪರವಾಗಿರದೆ, ಸ್ವಾರ್ಥಪರ ಎನ್ನಿಸಿಕೊಂಡಿದೆ. ಇದೆಲ್ಲವೂ ಸೃಷ್ಟಿಯಾಗಿರುವುದು ಇತ್ತೀಚಿನ ರೂಕ್ಷ ರಾಜಕಾರಣ ಸೃಷ್ಟಿ ಮಾಡಿರುವ ಹಡಬೆ ಹಣದ ಒಡೆಯರ ಶೋಕಿಗಾಗಿ.

ಆರ್ಥಿಕ ಉದಾರೀಕರಣದ ಭಾಗವಾಗಿ 'ಸಮಾಜವಾದಿ' ಬಡ ಭಾರತವನ್ನು 'ಮುಕ್ತ ಮಾರುಕಟ್ಟೆ'ಯ ಶ್ರೀಮಂತ ಭಾರತವನ್ನಾಗಿ ಪುನಾರಚಿಸಲು ಆಗಿರುವ ಜಾಗತಿಕ ಒಪ್ಪಂದಗಳನ್ವಯ ವಿಶ್ವಬ್ಯಾಂಕ್ ಮತ್ತಿತರ ಜಾಗತಿಕ ಹಣಕಾಸು ಸಂಸ್ಥೆಗಳಿಂದ 'ಅಭಿವೃದ್ಧಿ' ಕಾಮಗಾರಿಗಳಿಗೆಂದು ಅಪಾರ ಹಣದ ರಾಶಿಯ ಪೂರೈಕೆಯಾಗುತ್ತಿದೆ. ಇದರಲ್ಲಿ ರಾಜಕಾಣಿಗಳ ಕಮಿಷನ್ ಭಾಗವಾಗಿ (ಇತರರ ಭಾಗವೂ ಉಂಟು!) ಬರುತ್ತಿರುವ ಹಡಬೆ ಹಣ ಇಂದು ಸಮಾಜದಲ್ಲಿ ಒಂದು ಹೊಸ ಐಷಾರಾಮಿ ವರ್ಗವನ್ನೇ ಸೃಷ್ಟಿಸಿದೆ. ಬೆಂಗಳೂರಿನ ರಾಜಕಾರಣಿಗಳ ಹಲವು ನೆಲೆಗಳ ಏಜೆಂಟರುಗಳಿಂದ ಕೂಡಿರುವ ಈ ವರ್ಗವು, ತಮ್ಮ ಪಾಲಿಗೆ ಬಂದ ಈ ಹಣದ ಪಾಲನ್ನು ಮಜವಾಗಿ ಖರ್ಚು ಮಾಡಲು ಮತ್ತು ಉಳಿದದ್ದನ್ನು ಲಾಭದಾಯಕವಾಗಿ ಹೂಡಲು ತಮ್ಮದೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದೆ. ಅದರ ಫಲವೇ ನಾಗಮಂಗಲದಲ್ಲಿ ಎದ್ದುಕಾಣುವ ಈ ಹೊಸ ಅಭಿವೃದ್ಧಿಯ ನೋಟ! ನಾಯಕರುಗಳು ಮತ್ತು ಅವರ ಗೆಣೆಕಾರರಾದ ಅಧಿಕಾರಿಗಳು ಮತ್ತು 'ಉದ್ಯಮಿ'ಗಳ ಪಾಲು ವಿಪರೀತ ದೊಡ್ಡದಿರುವುದರಿಂದ, ಅವರು ಬೆಂಗಳೂರು-ಮೈಸೂರುಗಳಂತಹ ದೊಡ್ಡ ಊರುಗಳಲ್ಲಿ ಅದರ ಹೂಡಿಕೆ ಮಾಡಿದ್ದರೆ, ಅವರ ಸಣ್ಣಪುಟ್ಟ ಏಜೆಂಟರುಗಳು ತಮ್ಮ ಯೋಗ್ಯತಾನುಸಾರ ತಮ್ಮ ಸ್ವಂತ ಊರುಗಳಲ್ಲಿ ಇಂತಹ ಹೂಡಿಕೆ ಮಾಡುತ್ತಿದ್ದಾರೆ. ಹಾಗಾಗಿ ಇಂದು ಅಭಿವೃದ್ಧಿ ಎಂದರೆ ಹೊಸ ವರ್ಗವೊಂದು ತನ್ನ ಸುಖ-ಶೋಕಿಗಾಗಿ ನಿರ್ಮಿಸಿಕೊಂಡಿರುವ ಹೊಸ ಕಾಲೋನಿ ಎಂಬಂತಾಗಿದೆ.

ಇದು ಬರೀ ನಾಗಮಂಗಲದ ಕಥೆಯಲ್ಲ. ಬಹುಶಃ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಕಥೆ ಇದೇ ಆಗಿದೆ. ಆದರೆ ಅದೇ ಹತ್ತಿರದ ಸಣ್ಣ ಊರು ಮತ್ತು ಹಳ್ಳಿಗಳಿಗೆ ಹೋಗಿ ನೋಡಿ, ಅದೇ ದಾರಿದ್ರ್ಯ, ಅದೇ ಕೊಳಕು, ಅದೇ ದುಃಖ-ನೋವು-ಸಂಕಟ ಮತ್ತು ಅದೇ ಅಶಾಂತಿ! ಹಳ್ಳಿಗಳಲ್ಲಿ ಇಂದು ಯುವಕ-ಯುವತಿಯರೇ ಕಾಣೆಯಾಗಿ, ಅವುಗಳೆಲ್ಲ ಹಾಳು ಸುರಿದಂತೆ ಕಾಣುತ್ತಿವೆ. ಈ ಯುವಕ ಯುವತಿಯರೆಲ್ಲ ಪಟ್ಟಣಗಳಲ್ಲಿ ತಮ್ಮ ಭವಿಷ್ಯವನ್ನರಸಿ ಹೋಗಿದ್ದಾರೆ. ಇದರಿಂದಾಗಿ ನಮ್ಮ ಪಟ್ಟಣಗಳು ಅತಿಯಾದ 'ಆರ್ಥಿಕ ಚಟುವಟಿಕೆ'ಗಳಿಂದ ಬಿರಿಯತೊಡಗಿದ್ದರೆ, ಹಳ್ಳಿಗಳು ದೆವ್ವ ಬಡಿದಂತೆ ಸ್ತಬ್ಧಗೊಳ್ಳುತ್ತಿವೆ. ಇಲ್ಲಿದೆ ಭಾರತದ ಇಂದಿನ ದುರಂತ.

ಈ ಭಾರತ ಕಳೆದ ಹತ್ತು ವರ್ಷಗಳಲ್ಲಿ ಸತತವಾಗಿ ತನ್ನ ಒಟ್ಟಾರೆ ದೇಶೀ ಉತ್ಪನ್ನದ

ಎರಡಂಕಿ ದರದ ಆಸುಪಾಸಿನಲ್ಲೇ ಅಭಿವೃದ್ಧಿಯನ್ನು ಸಾಧಿಸುತ್ತಿದೆ. ಕೆಲಕಾಲ ಉಜ್ವಲವಾಗಿ 'ಪ್ರಕಾಶಿ'ಸುತ್ತಿತ್ತು ಕೂಡಾ! ಆದರೆ ಇದೆಲ್ಲ ಆಗುತ್ತಿರುವುದು ಅದರ ಕೈಗಾರಿಕಾ, ಸೇವಾ ಹಾಗೂ ಮೂಲಭೂತ ಸೌಕರ್ಯಗಳ ವಲಯಗಳಲ್ಲಿ. ಆದರೆ ಗ್ರಾಮ ಭಾರತದ ಬಹುದೊಡ್ಡ ಚಟುವಟಿಕೆಯಾದ ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿ ಶೇಕಡಾ ಮೂರರ ಆಸುಪಾಸಿನಲ್ಲೇ ಉಳಿದುಬಿಟ್ಟಿದೆ. ಈ ಅಂತರದ ಪರಿಣಾಮವೇ, ಈ ಅವಧಿಯಲ್ಲಿ ರಾಷ್ಟ್ರ ಕಂಡ ಒಂದು ಲಕ್ಷಕ್ಕೂ ಹೆಚ್ಚು ಜನ ರೈತರ ಆತ್ಮಹತ್ಯೆ. ಅಂದರೆ ಕಳೆದ ಹತ್ತು ವರ್ಷಗಳಲ್ಲಿ ರಾಷ್ಟ್ರ ಕಂಡಿರುವ ಎರಡಂಕಿಯ ಅಭಿವೃದ್ಧಿ ದರ ರಾಷ್ಟ್ರವನ್ನು ಸ್ಫೋಟಕವಾಗಿ ಒಡೆದು ನಿಲ್ಲಿಸಿದೆ. ನಗರ-ಹಳ್ಳಿ ಎಂದಲ್ಲ. ಈ ಒಡಕು ಹಿಂದಿನಿಂದಲೂ ನೆಹರೂ ಕಾಲದಿಂದಲೂ ಇದೆ. ಆದರೆ ಇದು ಅದನ್ನು ಒಳಗೊಂಡಂತೆ ಅದಕ್ಕಿಂತ ಹೆಚ್ಚು ನಿರ್ಣಾಯಕವಾದ ಒಡಕು: ಅಶ್ಲೀಲ ಜೀವನ ಶೈಲಿಯ ಅತಿ ಶ್ರೀಮಂತರ ಮತ್ತು ಆತ್ಮಹತ್ಯೆ ಅಂಚಿನಲ್ಲಿರುವ ಅತಿ ಬಡವರ ನಡುವಣ ಒಡಕು. ಇದರರ್ಥ ಅಸಮಾನತೆಯ ಅಂತರ ಹತ್ತು-ನೂರು ಪಟ್ಟು ಇದ್ದುದು ಇಂದು ಸಾವಿರ ಪಟ್ಟಿಗೆ ಏರಿದೆ. ಇತ್ತೀಚಿನ ಸಮೀಕ್ಷೆಯೊಂದರ ಪ್ರಕಾರ, ಶೇಕಡಾ ೭೭ರಷ್ಟು ಜನ ದಿನಕ್ಕೆ ಇಪ್ಪತ್ತು ರೂಪಾಯಿಗಳಿಗೂ ಕಡಿಮೆ ಆದಾಯದಲ್ಲಿ ಬದುಕುತ್ತಿರುವ ಈ ದೇಶದಲ್ಲಿ, ಒಬ್ಬನಿಗೆ ಒಂದು ವರ್ಷಕ್ಕೆ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಸಂಬಳ ಕೊಡುವಂತಹ ಆರ್ಥಿಕತೆಯನ್ನೂ ಇಂದು ಪ್ರೋತ್ಸಾಹಿಸಲಾಗುತ್ತಿದೆ. ಇದನ್ನು ವಿಕ್ಷಿಪ್ತ, ಅಭಿವೃದ್ಧಿ ಎನ್ನದೆ ಇನ್ನೇನೆನ್ನಬೇಕು?

ಇದಕ್ಕೆ ಮುಖ್ಯ ಕಾರಣ, ಸಮಾಜದ ಸಾರ್ವತ್ರಿಕ ಕಣ್ಣುಗಳಂತಹ ನಮ್ಮ ಸಮೂಹ ಮಾಧ್ಯಮಗಳು ಮತ್ತು ಇದನ್ನು ನಿಯಂತ್ರಿಸಬಲ್ಲವರಾಗಿದ್ದ ಬುದ್ಧಿಜೀವಿಗಳು ಈಗ ಈ ಹೊಸ ಆರ್ಥಿಕತೆಯೊಡನೆ ಶಾಮೀಲಾಗಿರುವುದು. ಅದರ 'ಲಾಭ'ಗಳಲ್ಲಿ ಪಾಲುದಾರರಾಗಿರುವುದು. ಹೀಗಾಗಿ ಸಮರ್ಥ ನಾಯಕತ್ವವಿಲ್ಲದ ಸಮಾಜ, ವರ್ಷಕ್ಕೆ ಒಂದು ಕೋಟಿ ರೂಪಾಯಿಗಳ ಸಂಬಳ ಪಡೆಯುವುದನ್ನೇ ಉನ್ನತ ಆದರ್ಶವನ್ನಾಗಿ ಮಾಡಿಕೊಂಡು, ಅದಕ್ಕೆ ಬೇಕಾದ ತರಬೇತಿಗಳಿಗಾಗಿ ಹಪಹಪಿಸುತ್ತಿದೆ. ಈ ಹಪಾಹಪಿಯನ್ನೇ ಹೊಸ ರೀತಿಯ ಬಂಡವಾಳ ಮಾಡಿಕೊಂಡಿರುವ ನವ ಶ್ರೀಮಂತಶಾಹಿ, ಇವರ ತರಬೇತಿ ದಾಹವನ್ನು ತಣಿಸಲು ಹೊಸ ಹೊಸ ರೀತಿಯ 'ಕೈಗಾರಿಕಾ ಸೇವೆ'ಗಳನ್ನು ಆವಿಷ್ಕರಿಸುತ್ತಿದೆ ಹಾಗೂ ಬ್ಯುಸಿನೆಸ್‌ಗಿಂತ ಇಂದು ಬ್ಯುಸಿನೆಸ್ ಮ್ಯಾನೇಜ್‌ಮೆಂಟೇ ಒಂದು ದೊಡ್ಡ ಬ್ಯುಸಿನೆಸ್ ಆಗಿ ಬೆಳೆಯುತ್ತಿದೆ! ಇದರ ವಿವಿಧ ಅಂಗಗಳಲ್ಲಿ ನೆಲೆ ಪಡೆಯಲೆಂದೇ ಹಳ್ಳಿಗಳ ಮತ್ತು ಸಣ್ಣ ಊರುಗಳ ಯುವಕ ಯುವತಿಯರು ಪಟ್ಟಣಗಳ ಕಡೆಗೆ ಧಾವಿಸುತ್ತಿರುವುದು.

ಇವರೆಲ್ಲ ಹೀಗೆ, 'ಉತ್ಪತ್ತಿ' ವಲಯಕ್ಕಿಂತ 'ಸೇವಾ' ವಲಯದಲ್ಲೇ ನೆಲೆ ಕಾಣುವಂತಾಗಿರುವುದು, ನಿಜವಾಗಿಯೂ ಆತಂಕಕಾರಿ ವಿಷಯವಾಗಿದೆ. ಏಕೆಂದರೆ ಈ ಸೇವೆ ಒರಟೊರಟಾದ ಸಾಲ ವಸೂಲಾತಿಯಿಂದ ಹಿಡಿದು ಬಹು ನಾಜೂಕಾದ ಆತಿಥ್ಯ ನಿರ್ವಹಣೆ (Hospitality) ಎಂಬ 'ವೈವಿಧ್ಯಮಯ' ಕೆಲಸದವರೆಗೆ ಹರಡಿಕೊಂಡಿದೆ.

ಅಂದರೆ ಅತೃಪ್ತ ಯುವಜನ ವರ್ಗವನ್ನು ನವ ಶ್ರೀಮಂತಶಾಹಿ ತನ್ನೊಳಕ್ಕೆ ಅನುಸಂಧಾನಿಸಿಕೊಂಡು, ವಾಸ್ತವವಾಗಿ ತನ್ನ ವಿಧೇಯ ಸೇವಕ ವರ್ಗವನ್ನಾಗಿ ಮಾಡಿಕೊಳ್ಳುತ್ತಿರುವ ವಿದ್ಯಮಾನವದು. ಈ ವಿಧೇಯತೆಯನ್ನೇ ಇಂದು ಹೊಸ ಆರ್ಥಿಕತೆಯ ಹೊಸ ಶಿಸ್ತು ಮತ್ತು ಹೊಸ ಹುರುಪು ಎಂದು ಬಣ್ಣಿಸಲಾಗುತ್ತಿದೆ! ಏಕೆಂದರೆ ಈ ವಿಧೇಯ ವರ್ಗ ತಾನು ಗಳಿಸಿದ್ದನ್ನೆಲ್ಲ ನವ ಶ್ರೀಮಂತಶಾಹಿ ಸೃಷ್ಟಿಸುತ್ತಿರುವ ಹೊಸ ಗ್ರಾಹಕ ಸಮಾಜದ ಬೆಳವಣಿಗೆಗಾಗಿ ಖರ್ಚುಮಾಡಲು ಬದ್ಧವಾಗಿದೆ. ಅವರ ವೃತ್ತಿ ಸ್ವರೂಪವನ್ನೇ ಈ ಬದ್ಧತೆಯನ್ನುಂಟುಮಾಡುವಂತೆ ವಿನ್ಯಾಸಗೊಳಿಸಲಾಗಿದೆ. ಅವರ ಉಡುಪು, ಪ್ರಸಾಧನ, ಭಾಷೆ, ಆಹಾರ ಪದ್ಧತಿ, ಮನರಂಜನೆ ಹಾಗೂ ಒಟ್ಟಾರೆ ಅವರ ಅಭಿರುಚಿ ಮತ್ತು ಜೀವನಶೈಲಿಗಳು ಒಂದು ನಿರ್ದಿಷ್ಟ ಆರ್ಥಿಕ ಮಾದರಿಯ ಆಸುಪಾಸಿನಲ್ಲೇ ರೂಪಿತವಾಗುವಂತೆ ನೋಡಿಕೊಳ್ಳಲಾಗಿದೆ. ಆದರೆ ಸದಾ ವೃತ್ತಿ ಅನಿಶ್ಚಿತತೆಯಲ್ಲಿ ತೊಳಲಾಡುವ ಇವರು, ಯಾವುದೇ ಜೀವನ ದರ್ಶನ ರೂಪಿತವಾಗಲು ಸಾಧ್ಯವಿಲ್ಲದಂತಹ ಮಾನಸಿಕ ಅಸ್ಥಿರತೆಯಲ್ಲಿ, ಅವಕಾಶಗಳ ಹೊಸ ಬಾಗಿಲುಗಳು ತೆರೆಯುವುದನ್ನೇ ಸದಾ ಕಾಯುತ್ತಿರುವ ಆತಂಕದಲ್ಲಿರುತ್ತಾರೆ.

ಹೊಸ ಆರ್ಥಿಕ ರಾಜಕಾರಣವೆಂದರೆ ಇದು! ಪಾರಮಾರ್ಥಿಕಕ್ಕೇ ಅವಕಾಶ ಕೊಡದ ಆರ್ಥಿಕತೆ ಇದು... ಈ ಆರ್ಥಿಕತೆಯಾದರೂ ಎಂತಹುದು? ಹಳ್ಳಿಗಳಿಂದ ಪಟ್ಟಣಕ್ಕೆ ಬಂದು ಇದರಲ್ಲಿ ಪಾಲ್ಗೊಂಡಿರುವ ಈ ಬಹುತೇಕ ಶಿಕ್ಷಿತ ಜನ ಉತ್ಪತ್ತಿ ಮಾಡುತ್ತಿರುವುದು 'ಹಣ'ವನ್ನು ಮಾತ್ರ. ಅದೂ, ಕಾಣದ ತಮ್ಮ ಮಾಲೀಕರ ಸೇವೆಯಲ್ಲಿ. ಇದರಿಂದ ಸುಸ್ಥಿರವಾದ–ಆಪತ್ಕಾಲದಲ್ಲಿ ಸಾರ್ವಜನಿಕರಿಗೆ ಒಂದಲ್ಲ ಒಂದು ರೀತಿಯಲ್ಲಿ ಆಸರೆಯಾಗಬಲ್ಲ–'ಆಸ್ತಿ' ನಿರ್ಮಾಣವಾಗುತ್ತಿಲ್ಲ. ನಿಜವಾಗಿ ಇಂತಹ ಆಸ್ತಿ ನಿರ್ಮಾಣವಾಗುತ್ತಿರುವುದು ಹಳ್ಳಿಗಳಿಂದ ಬಂದ ಅಶಿಕ್ಷಿತ ಕೂಲಿಕಾರರಿಂದ. ಆದರೆ ಇವರು ಹೊಸ ಆರ್ಥಿಕ ವ್ಯವಸ್ಥೆಯ ನಿಜವಾದ ಅಸ್ಪೃಶ್ಯರು. ತಾವೇ ಕೈಯ್ಯಾರೆ ನಿರ್ಮಿಸಿದ ಆಸ್ತಿಗಳಿಂದ–ವಿಶೇಷವಾಗಿ ಮೂಲಭೂತ ಸೌಕರ್ಯಗಳಿಂದ–ಇವರು ನಿಷೇಧಿತರು. ಇವರಲ್ಲಿ ನಮ್ಮ ಸಾಂಪ್ರದಾಯಿಕ ಅಸ್ಪೃಶ್ಯರೇ ಹೆಚ್ಚು ಎಂಬುದೂ ನಿಜ. ಅಂದರೆ ಇದು ಹಳೇ ಜಾತಿವ್ಯವಸ್ಥೆಯನ್ನೊಳಗೊಂಡ ಹೊಸ ಜಾತಿವ್ಯವಸ್ಥೆ. ಈ ವ್ಯವಸ್ಥೆಯ ಶೂದ್ರರು ಮತ್ತು ಅಸ್ಪೃಶ್ಯರು ಯಾವುದೇ ಅನುಸಂಧಾನಕ್ಕೆ ಸಿಗದಂತಹವರು. ಅಂತಹ ಅವಕಾಶವೇ ತೆರೆದುಕೊಳ್ಳಲಾಗದಂತಹ ಆದಾಯ ಸ್ತರಗಳಲ್ಲಿ ಸಿಕ್ಕಿಹಾಕಿಕೊಂಡವರು. ದುಡಿಮೆಯ ಹೊಸ ರೂಪಗಳಿಗೆ ಮತ್ತು ಕೌಶಲ್ಯಗಳಿಗೆ ತೆರೆದುಕೊಳ್ಳಲಾಗದವರು. ಹೊಸ ಚರಿತ್ರೆಯಿಂದಲೂ ಶಪಿತರಾದವರು.

ಹೀಗೆ, ರೈತರೂ ಸೇರಿದಂತೆ ನಿಜವಾದ ಆಸ್ತಿ ನಿರ್ಮಾಣಕಾರರಿಗೆ–ಸಮಾಜಸೇವಕರಿಗೆ–ಮುಕ್ತಿಯೇ ಇಲ್ಲದಂತಾಗಿದೆ. ಇವರನ್ನು 'ಮುಕ್ತಿ'ಯ ಹಾದಿಯಲ್ಲಿ ಕರೆದುಕೊಂಡು ಹೋಗಬಲ್ಲವರೆಲ್ಲ–ಯುವಶಕ್ತಿಯೂ ಸೇರಿದಂತೆ ಹೊಸ ವ್ಯವಸ್ಥೆಯೊಂದಿಗೆ ಶಾಮೀಲಾಗಿದ್ದಾರೆ. ಅಷ್ಟೇ ಅಲ್ಲ, ಇದರ ರಾಜಕಾರಣವನ್ನು ಹೊಸ ಸಂಭ್ರಮದೊಂದಿಗೆ ಎತ್ತಿ ಹಿಡಿಯುತ್ತಿದ್ದಾರೆ. ಇನ್ನು ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ಹಳ್ಳಿಗಳನ್ನು 'ವಿಶೇಷ ಆರ್ಥಿಕ ವಲಯ'ಗಳ ಮೂಲಕ

ನಿರ್ನಾಮ ಮಾಡಿ ಇಡೀ ಭಾರತವನ್ನು ನಗರೀಕರಿಸಲು ಉದ್ದೇಶಿಸಿರುವ (ಇದೇನೂ ಗುಪ್ತ ಕಾರ್ಯಕ್ರಮವಲ್ಲ; ಸರ್ಕಾರದ ಘೋಷಿತ ಕಾರ್ಯಕ್ರಮವೇ ಆಗಿದೆ) ಈ ರಾಜಕಾರಣ ಕೊನೆಗೆ ಕೆಲವೇ ಕೆಲವರ ರಾಜಕಾರಣವಾಗಿ ಕೊನೆಗೊಳ್ಳುವ ಎಲ್ಲ ಸಂಭವವಿದೆ. ಇಂದಿನ ರಾಜ್ಯ ರಾಜಕಾರಣ, ಈ ಆತಂಕ ನಿರಾಧಾರವಾದದ್ದೇನೂ ಅಲ್ಲ ಎಂಬುವವರ ಸಾಕ್ಷಿಯಂತೆ ಇದೆ. ಇಂದು ಜನನಾಯಕರು ಸೃಷ್ಟಿಯಾಗುತ್ತಿರುವುದು ಜನರಿಂದ, ಜನರ ಮಧ್ಯದಿಂದ ಅಲ್ಲ; ಹಡಬೆ ಹಣದಿಂದ. ಇಂತಹ ನಾಯಕರು ಇನ್ನಷ್ಟು ಇಂತಹ ಹಡಬೆ ಹಣವನ್ನು ಸೃಷ್ಟಿಸುವಂತಹ ಹಡಬೆಗಳು ಮಾತ್ರ ಆಗಿರಲು ಸಾಧ್ಯ. ಇದರ ಸೂಚನೆಗಳನ್ನು ನಾವು ಇಂದು ವಿಷದಂತೆ ಏರುತ್ತಿರುವ ಸಾಮಾಜಿಕ ಅಭದ್ರತೆಯ ವೈವಿಧ್ಯಮಯ ಅಪರಾಧಗಳ ಮತ್ತು ಆತ್ಮಹತ್ಯೆಗಳ ಪ್ರಕರಣಗಳ ರೂಪದಲ್ಲಿ ಕಾಣುತ್ತಿದ್ದೇವೆ.

ಈ ಹೊಸ ಸಿರಿವಂತಿಕೆ, ಈ ಹೊಸ ದಾರಿದ್ರ್ಯ ಹಾಗೂ ಈ ಹೊಸ ಅವನತಿಯ ದಾರಿಗಳು ಆರಂಭವಾದದ್ದೇ, ರಾಷ್ಟ್ರ ಆವರೆಗೆ ನಂಬಿಕೊಂಡು ಬಂದಿದ್ದ 'ಸಮಾಜವಾದಿ' ಆಡಳಿತ ಶೈಲಿ ವಿಫಲವಾಗಿದೆ ಎಂಬ ಪ್ರಚಾರದಿಂದ. ತೊಂಭತ್ತರ ದಶಕದಲ್ಲಿ ರಾಷ್ಟ್ರವನ್ನು ಕಾಪುದಾಸ್ತಾನು ಚಿನ್ನವನ್ನೆಲ್ಲ ಅಡವಿಡುವಂತಹ ಸನ್ನಿವೇಶ ಸೃಷ್ಟಿಯಾದುದು ಇದಕ್ಕೆ ಪುರಾವೆಯಂತಿತ್ತು. ಆದರೆ ಇದು, ಅದಕ್ಷ ಮತ್ತು ಭ್ರಷ್ಟ ಆಡಳಿತಕ್ಕೆ 'ಸಮಾಜವಾದ'ವೆಂದು ಹೆಸರಿಟ್ಟು, ಅದರ ವಿಶ್ವಾಸಾರ್ಹತೆಯನ್ನು ಹಾಳುಮಾಡುವ ಜಾಗತಿಕ ರಾಜಕಾರಣದ ಹುನ್ನಾರವಲ್ಲದೆ ಮತ್ತೇನಲ್ಲ. ಯಾವ ಸಮಾಜವಾದವೂ ಅದಕ್ಷತೆ ಮತ್ತು ಭ್ರಷ್ಟತೆಯನ್ನು ಸಹಿಸುವುದಿಲ್ಲ. ಸಹಿಸಿತೆಂದರೆ ಅದು ಸಮಾಜವಾದವೂ ಅಲ್ಲ. ಸಮಾಜವಾದ ಸಮಾನತೆಯಲ್ಲಿ ನಂಬಿಕೆಯಿಟ್ಟ ಒಂದು ಧರ್ಮ. ಹಾಗೇ, ಅದರ ಸಾಕ್ಷಾತ್ಕಾರಕ್ಕಾಗಿ ರೂಪುಗೊಂಡಿರುವ ಒಂದು ರಾಜಕೀಯ ಸಾಧನವೂ ಹೌದು. ಅದು ಉತ್ಪಾದನೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವ ಮೂಲಕ ಸಮಾನತೆಯನ್ನು ಸಾಧಿಸ ಬಯಸುತ್ತದೆ. ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವುದು ಅದರ ಮೊದಲ ಆದ್ಯತೆ. ಅದು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಮಾತ್ರ 'ಅಭಿವೃದ್ಧಿ' ಸಾಕು ಎನ್ನುತ್ತದೆ ಅದು. ಹಾಗೆ ಎಲ್ಲರೂ ಸಮಾನ ಉತ್ಪಾದಕತೆಯೊಡನೆ ಉತ್ಪಾದನೆಯಲ್ಲಿ ತೊಡಗಲು ಸಾಧ್ಯವಿರುವಂತಹ ತಂತ್ರಜ್ಞಾನವನ್ನು ಮಾತ್ರ ಅದು ಒಪ್ಪುತ್ತದೆ. ಇದರ ಜೊತೆಗೆ, ಇದನ್ನು ಸಾಧ್ಯಮಾಡುವಂತಹ ಆಡಳಿತ ವಿಕೇಂದ್ರೀಕರಣವನ್ನು ಒತ್ತಾಯಿಸುತ್ತದೆ ಅದು. ಇಂತಹ ಸಮಾಜವಾದ ಭಾರತದಲ್ಲಿ ಎಲ್ಲಿ ಜಾರಿಯಲ್ಲಿತ್ತು? ರಷ್ಯಾ ಮತ್ತು ಅಮೆರಿಕಾದ ಅಭಿವೃದ್ಧಿ ಮಾದರಿಗಳ ಮಧ್ಯೆ ದೇಶ ತುಯ್ದಾಡುತ್ತಾ ತೊಳಲಾಡುತ್ತಾ ಕೊಳೆತದ್ದನ್ನೇ ಸಮಾಜವಾದದ ವೈಫಲ್ಯವೆಂದು ಕರೆದು, ಆ ಕಾಲ ಮುಗಿಯಿತು ಎನ್ನುತ್ತಿದ್ದಾರೆ ನವ ಶ್ರೀಮಂತಶಾಹಿ ಹಾಗೂ ಅವರ ಚೇಲಾಗಳು. ಹೋಗಲಿ, ಅವರೀಗ ನಮ್ಮನ್ನು ಕರೆದುಕೊಂಡು ಹೋಗುತ್ತಿರುವುದಾದರೂ ಎಲ್ಲಿಗೆ?

ರಾಷ್ಟ್ರ ಒಡೆಯುತ್ತಿದೆ: ಸ್ಫೋಟಕ ಅಸಮಾನತೆಯ ಅಂತರಗಳಲ್ಲಿ; ಅಶ್ಲೀಲ ಗ್ರಾಹಕವಾದದಲ್ಲಿ; ಆತಂಕಪೂರಿತವಾದ ಅಭದ್ರತೆ ಹಾಗೂ ಅಪರಾಧ ವೈವಿಧ್ಯಗಳಲ್ಲಿ. ಈ

ಒಡಕನ್ನು ಮುಚ್ಚಲು ಕಾರ್ಪೊರೇಟ್ ವಲಯವೆಂಬ ನವಶ್ರೀಮಂತಶಾಹಿ ಮುಂದೆ ಬರಬೇಕೆಂದು ಈ ಹೊಸ ಆರ್ಥಿಕತೆಯ ಹರಿಕಾರರಾದ ಪ್ರಧಾನಿ ಮನಮೋಹನಸಿಂಗರೇ ಈಗ ಪದೇ ಪದೇ ಕರೆಕೊಡುವ ಒತ್ತಾಯಕ್ಕೆ ಒಳಗಾಗಿದ್ದಾರೆ! ಏಕೆಂದರೆ ಇವರು ಒಪ್ಪಿಕೊಂಡ ಜಾಗತಿಕ ಆರ್ಥಿಕತೆ ಈಗ ದೊಡ್ಡದೊಂದು ಬಿಕ್ಕಟ್ಟಿಗೆ ಸಿಕ್ಕಿದೆ. ಹಾಗಾಗಿ ಮೇಲ್ವರ್ಗದವರ ದಾನ-ಧರ್ಮಗಳ ಮೂಲಕ ಕೆಳವರ್ಗದವರ–ವಂಚಿತರ–ಉದ್ಧಾರ! ಈ ಕಾರ್ಪೊರೇಟ್ 'ದಯಾಳು'ಗಳಾದ ಕೆಲವರು ಇದಕ್ಕೆ ತಲೆಯಲ್ಲಾಡಿಸುತ್ತಾ, ತಮ್ಮ ಸಹವರ್ತಿಗಳಿಗೆ ನಮ್ಮ ಪ್ರಾಚೀನ ಪರಂಪರೆಯ ದಾನದ ಪರಿಕಲ್ಪನೆಯನ್ನು ನೆನಪಿಸತೊಡಗಿದ್ದಾರೆ... ಕೆಲವರಂತೂ 'ಮನುಧರ್ಮ'ದಂತೆ ದಾನಗಳಲ್ಲಿ ತೊಡಗಬೇಕೆಂದು ಕರೆಕೊಡತೊಡಗಿದ್ದಾರೆ–ಆ ಧರ್ಮದ ಪ್ರಕಾರ ದಾನ ಯಾವ ಉದ್ದೇಶಗಳಿಗೆಂದು ಅರಿಯದೆ! ವಿಕಾರವೆಂದರೆ ಇದು. ಹೊಸ ಜಾತಿ ವಿಕಾರವಿದು. ಅಸಮಾನತೆ ನಿಸರ್ಗದತ್ತವಾದದ್ದು (ಅಂದರೆ ಹುಟ್ಟಿಗೆ ಸಂಬಂಧಿಸಿದ್ದು) ಮತ್ತು ಅದರ ಹಾಹಾಕಾರವನ್ನು ದಾನ ಧರ್ಮಗಳೆಂಬ ಪುಣ್ಯಕಾರ್ಯಗಳ ಮೂಲಕ ಶಮನಗೊಳಿಸಬಹುದೆಂಬ ಪ್ರಾಚೀನ ಕೌಶಲ್ಯದ ಪ್ರದರ್ಶನವಿದು. ಇದೇ, ಈ ಹೊಸ ವ್ಯವಸ್ಥೆ ನಿಜವಾಗಿ ಹೊಸದೇನಲ್ಲ ಎಂದು ಸೂಚಿಸುತ್ತಿರುವುದು; ಹಳೆಯ ವ್ಯವಸ್ಥೆಯ ಹೊಸ ರೂಪವೆಂದು ಸಾರಿ ಹೇಳುತ್ತಿರುವುದು! ಹಾಗಾಗಿ ಇದರ ಪರಿಣಾಮಗಳೂ ಹಿಂದಿನದಕ್ಕಿಂತ ಬೇರೆಯಾಗಿರಲಾರವು ಅಲ್ಲವೇ? ಆದರೆ ಹೊಸ ಸರಕು ಸಾಮ್ರಾಜ್ಯದಲ್ಲಿ ಕಳೆದುಹೋಗಿರುವವರಿಗೆ ಇದು ಅರ್ಥವಾಗಲಾರದು...

ಈ ಹಿನ್ನೆಲೆಯಲ್ಲಿ ಈಗ ಆಯ್ಕೆ ನಮ್ಮ ಮುಂದಿದೆ. ಅಭಿವೃದ್ಧಿ ಪಥದ ಆದಿಯಿಂದ ಅಂತ್ಯದವರೆಗೂ 'ಸಮಾನತೆ'ಯನ್ನೇ ಆದರ್ಶವಾಗಿರಿಸಿಕೊಂಡ ಸರಳ ಸಭ್ಯ ಜೀವನ ಮಾದರಿಯ ಸಮಾಜವಾದವನ್ನು–ಅದೇ ಹೆಸರಿನಿಂದಲೋ ಅಥವಾ ಮತ್ತೊಂದು ಹೆಸರಿನಿಂದಲೋ–ನಾವು ಪುನರ್ ಆವಿಷ್ಕರಿಸಿಕೊಳ್ಳಬೇಕೋ ಅಥವಾ ಕೆಲವರ ಸಮೃದ್ಧಿ ಕಾಲಕ್ರಮೇಣ ಇಡೀ ಸಮಾಜಕ್ಕೆ ಹರಡುವುದೆಂದು ನಂಬಿಸುತ್ತಾ ಸಮಾಜವನ್ನೇ ಅಶ್ಲೀಲತೆ, ಅಭದ್ರತೆ ಮತ್ತು ಆತ್ಮಹತ್ಯೆಗಳ ಪಾಪಕೂಪಕ್ಕೆ ತಳ್ಳುತ್ತಿರುವ ಇಂದಿನ ಮುಕ್ತಮಾರುಕಟ್ಟೆ ಆರ್ಥಿಕತೆಯೊಂದಿಗೇ ಮುಂದುವರಿಯಬೇಕೋ?

ಕಳೆದ ಹತ್ತು ವರ್ಷಗಳಲ್ಲಿ, ಈಚಿನ ದಿನಗಳಲ್ಲಿ ಮೊದಲ ಬಾರಿಗೆ ಎಲ್ಲರನ್ನೂ ಒಳಗೊಂಡೇ ನಡೆಯಬೇಕಾದ ಆವೃತ ಅಭಿವೃದ್ಧಿಯ ಮಾತುಗಳು ನಮ್ಮ ಆಡಳಿತಗಾರರಿಂದಲೇ ಕೇಳಿಬರುತ್ತಿವೆ. ಇದು ಹೊಸ ಸಮಾಜವಾದದ ಆರಂಭದ ಸೂಚನೆ ಎಂದು ನಂಬೋಣವೇ?

(ಹಿರಿಯ ರಾಜಕಾರಣಿ ಎಚ್.ಟಿ. ಕೃಷ್ಣಪ್ಪ ಅವರ ಅಭಿನಂದನ ಗ್ರಂಥಕ್ಕಾಗಿ ಬರೆದುದು)

■

೪೩. ಇಂದಿನ ರಾಜಕಾರಣ ಮತ್ತು 'ಹಿಂದ್ ಸ್ವರಾಜ್'

'ಹಿಂದ್ ಸ್ವರಾಜ್' ಒಂದು ಸಾಂದರ್ಭಿಕ ಕೃತಿ ಎಂದು ನಿಮಗೆಲ್ಲ ತಿಳಿದೇ ಇದೆ. ಇದು ಗಾಂಧೀಜಿಯ ಮೊದಲ ಕೃತಿಯೂ ಹೌದು ಎಂಬುದನ್ನೂ ನಾವು ಗಮನಿಸಬೇಕು. ಹಾಗಾಗಿ ಇದನ್ನು ಅವರ ಮುಂದಿನ ಕೃತಿ ಮತ್ತು ಕಾರ್ಯಕ್ರಮಗಳ ಹಿನ್ನೆಲೆಯಲ್ಲೇ ಅರ್ಥೈಸಿಕೊಳ್ಳಬೇಕು ಎಂಬುದೂ ನಮ್ಮ ಗಮನದಲ್ಲಿರಬೇಕು. ಮುಖ್ಯವಾಗಿ ಅವರ ಆತ್ಮಕತೆ, ರಚನಾತ್ಮಕ ಕಾರ್ಯಕ್ರಮ ಸೂಚಿ ಹಾಗೂ ಸ್ವಾತಂತ್ರ್ಯ ಘೋಷಣಾ ಪತ್ರ. ಆಗಿನ ಕಾಂಗ್ರೆಸ್‌ನ 'ಸಂವಿಧಾನಾತ್ಮಕ' ಮಾರ್ಗಗಳಿಂದ ಬೇಸತ್ತು, ಅದಕ್ಕೆ ಪ್ರತಿಯಾಗಿ ಹಿಂಸೆಯೂ ಸೇರಿದಂತೆ ತೀವ್ರವಾದಿ ಕಾರ್ಯಾಚರಣೆಗಳ ಮೂಲಕ ಸ್ವಾತಂತ್ರ್ಯ ಪಡೆಯಬೇಕೆಂಬ ಸಂಕಲ್ಪದಿಂದ ಲಂಡನ್‌ನಲ್ಲಿ ಒಟ್ಟುಗೂಡಿದ್ದ 'ಕ್ರಾಂತಿಕಾರಿ'ಗಳ ಗುಂಪೊಂದಕ್ಕೆ, ಅವರ ಮಾರ್ಗ ಏಕೆ ಮತ್ತು ಹೇಗೆ ನಿಷ್ಪ್ರಯೋಜಕ ಎಂಬುದನ್ನು ವಿವರಿಸಲು ಗಾಂಧಿ ೧೯೧೦ರಲ್ಲಿ ಬರೆದ ಪುಸ್ತಕವಿದು. ಆದರೆ ಅದು ಆನುಷಂಗಿಕವಾಗಿ ಪಶ್ಚಿಮದ ಆಧುನಿಕ ನಾಗರೀಕತೆಯನ್ನು ಕುರಿತ ಒಂದು ವ್ಯಾಪಕ ಹಾಗೂ ಆಳವಾದ ವಿಶ್ಲೇಷಣೆಯೂ ಆಗಿದೆ. ಇಂದು ಈ ಕೃತಿಯನ್ನು ನಮಗೆ ಪ್ರಸ್ತುತಗೊಳಿಸುತ್ತಿರುವುದು, ಅದರ ಈ ಆನುಷಂಗಿಕತೆಯೇ ಆಗಿದೆ ಎಂಬುದು ಒಂದು ವಿಶೇಷ.

ಈ ಕೃತಿಯ ಇಂದಿನ ಪ್ರಸ್ತುತತೆ ಎಂದೆ. ಒಮ್ಮೆಗೇ ನೋಡಿದರೆ, ಯಂತ್ರ, ರೈಲು, ವಕೀಲಿಕೆ, ಆಸ್ಪತ್ರೆ ಇತ್ಯಾದಿಗಳನ್ನು ವಿರೋಧಿಸುವ ಈ ಕೃತಿಗೂ, ದೇಶವನ್ನು ಸುಭಿಕ್ಷವಾಗಿಡಲು ಪರಮಾಣು ರಿಯಾಕ್ಟರುಗಳ ವ್ಯಾಪಾರ ಒಪ್ಪಂದ ಅನಿವಾರ್ಯ ಎನ್ನುತ್ತಿರುವ ಇಂದಿನ ರಾಜಕಾರಣಕ್ಕೂ ಎಲ್ಲಿಗೆಲ್ಲಿಯ ಸಂಬಂಧ ಎಂದು ನಿಮಗೆ ಆಶ್ಚರ್ಯವಾಗಬಹುದು. ಆದರೆ ಕಳೆದ ಹತ್ತು ಹದಿನೈದು ವರ್ಷಗಳಿಂದೀಚೆಗೆ ಜಗತ್ತಿನಾದ್ಯಂತ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಮತ್ತೆ ಮತ್ತೆ 'ಹಿಂದ್ ಸ್ವರಾಜ್' ಚರ್ಚೆ, ಅಧ್ಯಯನಗಳಿಗೆ ಒಳಗಾಗತೊಡಗಿರುವುದರ ಕಾರಣವಾದರೂ ಇದೇ–ಜಗತ್ತಿನಾದ್ಯಂತ ಅನಿವಾರ್ಯವೆಂಬಂತೆ ಬೆಳೆಯುತ್ತಿರುವ ಇಂತಹ ಅಭಿವೃದ್ಧಿ ರಾಜಕಾರಣದ ವಿವಿಧ ರೂಪಗಳೇ! ಪರಮಾಣು ರಿಯಾಕ್ಟರುಗಳ ಇಂಧನ ಮತ್ತು ವ್ಯಾಪಾರಗಳನ್ನು ಅಗತ್ಯ ಮಾಡಿರುವಂತಹ ಜಾಗತಿಕ ಅಭಿವೃದ್ಧಿಯ ರಾಜಕಾರಣ ನಮ್ಮನ್ನು–ಮಾನವ ಜನಾಂಗವನ್ನು–ಎತ್ತ ಕೊಂಡೊಯ್ಯುತ್ತಿದೆ ಎಂಬ ಬಗ್ಗೆ ಎದ್ದಿರುವ ಆತಂಕ, ಅನುಮಾನಗಳೇ!

ನಾನು ಇಲ್ಲಿ ನಮ್ಮ ರಾಜಕಾರಣದ ಸ್ವರೂಪವನ್ನು ನಿರೂಪಿಸಲು ಪರಮಾಣು ಒಪ್ಪಂದವನ್ನೇ ಏಕೆ ಉದಾಹರಣೆಯನ್ನಾಗಿ ತೆಗೆದುಕೊಂಡಿರುವೆ ಎಂದರೆ, ಇದು ಇತ್ತೀಚಿನ ರಾಷ್ಟ್ರೀಯ ಮತ್ತು ಜಾಗತಿಕ ರಾಜಕಾರಣದ ಮತ್ತು ಅವುಗಳ ನಡುವಣ ಸಂಬಂಧದ ಸಂಕೀರ್ಣ ಉದಾಹರಣೆಯಷ್ಟೇ ಅಲ್ಲ; ಈ 'ಹಿಂದ್ ಸ್ವರಾಜ್' ಅಸಂಬದ್ಧ ಮತ್ತು ಅವ್ಯವಾಹಾರಿಕ ಕೃತಿ ಎಂದು ಈ ದೇಶದ ಮೊದಲ ಪ್ರಧಾನಿ ನೆಹರೂ ಅವರಿಂದ ತಿರಸ್ಕೃತವಾದ ನಂತರದ ಅರವತ್ತು ವರ್ಷಗಳ ಈ ಸ್ವತಂತ್ರ ಭಾರತದ ರಾಜಕಾರಣದ ಶಿಖರಪ್ರಾಯ ಉದಾಹರಣೆಯಾಗಿದೆ ಎಂದೂ ಮತ್ತು ಅದರ ಎಲ್ಲ ಆಶಯ ಮತ್ತು ಕಾರ್ಯಕ್ರಮಗಳನ್ನೂ ವಿಷದೀಕರಿಸುವಂತಿದೆ ಎಂಬ ಕಾರಣಕ್ಕೆ ಕೂಡಾ. ಇದೆಲ್ಲದಕ್ಕಿಂತ ಮುಖ್ಯವಾಗಿ, ಇದರಲ್ಲಿ ಆಧುನಿಕ ನಾಗರೀಕತೆಯ ಪರಮ ಸಾಧನೆಯೆನಿಸಿರುವ ಪರಮಾಣು ಶಕ್ತಿಯೊಂದಿಗೆ ಸಾವಯವ ಸಂಬಂಧ ಹೊಂದಿರುವ ರಾಜಕಾರಣವೂ ಅಡಗಿದೆ ಎಂಬ ಕಾರಣಕ್ಕಾಗಿಯೂ.

ಈ ಒಪ್ಪಂದವನ್ನು ಒಮ್ಮೆ ಸುಮ್ಮನೆ ನೋಡಿ. ಈ ಒಪ್ಪಂದ ನಮ್ಮ ವಿದ್ಯುತ್ ಉತ್ಪಾದನೆಯನ್ನು ಇನ್ನು ಹತ್ತು-ಹನ್ನೆರಡು ವರ್ಷಗಳಲ್ಲಿ ಶೇಕಡಾ ಎರಡೂವರೆ ಅಥವಾ ಮೂರರಷ್ಟು ಹೆಚ್ಚಿಸುವುದೆಂದು ಹೇಳಲಾಗುತ್ತಿದೆ. ಆದರೆ ಇದರ ತಾಂತ್ರಿಕ ವಿವರಗಳನ್ನು ಗಮನಿಸಿದರೆ, ಇದು ನಿಜವಾಗಿಯೂ ಇಂಧನ ಒಪ್ಪಂದ ಮಾತ್ರವೋ ಅಥವಾ ತಾನು ಇಂದು ಮುಟ್ಟುತ್ತಿರುವ ಆರ್ಥಿಕ ದುಃಸ್ಥಿತಿಯಿಂದಾಗಿ ಜಾಗತಿಕ ರಾಜಕೀಯ ಮಹತ್ವ ಕಳೆದುಕೊಳ್ಳುವ ಭಯದಲ್ಲಿರುವ ಅಮೆರಿಕಾದ ಪುನರುತ್ಥಾನ ಕಾರ್ಯಾಚರಣೆಗಾಗಿ ಸಿದ್ಧಪಡಿಸಲಾಗಿರುವ ರಾಜಕೀಯ ಒಪ್ಪಂದವೋ ಎಂದು ಅನುಮಾನವಾಗುತ್ತದೆ. ಈ ಒಪ್ಪಂದದ ಪ್ರಕಾರ ತಕ್ಷಣಕ್ಕೆ ಅಮೆರಿಕಾದ ಕಂಪನಿಗಳು ೩೦ ದಶಲಕ್ಷ ಡಾಲರ್‌ಗಳಷ್ಟು ಬೆಲೆಯ ಪರಮಾಣು ರಿಯಾಕ್ಟರುಗಳನ್ನು ಭಾರತಕ್ಕೆ ಮಾರಲಿವೆಯಂತೆ. ನಂತರ ಫ್ರಾನ್ಸ್‌ನಿಂದಲೂ ಮತ್ತಷ್ಟು ಅಂತಹ ರಿಯಾಕ್ಟರುಗಳು ಖರೀದಿಯಾಗಿ ಬರಲಿವೆಯಂತೆ. ತದನಂತರ ನಾವೂ ಈ ಒಪ್ಪಂದದ ಪ್ರಕಾರ ಈ ರಿಯಾಕ್ಟರುಗಳ ತಂತ್ರಜ್ಞಾನ ಪಡೆದು ಶತ ಶತ ಕೋಟಿ ಡಾಲರ್‌ಗಳ ರಿಯಾಕ್ಟರ್ ಮಾರುಕಟ್ಟೆಯನ್ನು ಪ್ರವೇಶಿಸಿ ಸಾಕಷ್ಟು ಹಣ ಸಂಪಾದಿಸಬಹುದಂತೆ!

ಹಾಗಾಗಿ ಇದು ಮೂಲತಃ ಪರಮಾಣು ರಿಯಾಕ್ಟರುಗಳ ಜಾಗತಿಕ ಮಾರುಕಟ್ಟೆಯ ವಿಸ್ತರಣೆಗಾಗಿ workout ಮಾಡಲಾದ ಅಂತಾರಾಷ್ಟ್ರೀಯ ವ್ಯಾಪಾರ ಒಪ್ಪಂದವೇ ಆಗಿದ್ದರೆ ಆಶ್ಚರ್ಯವಿಲ್ಲ. ಹಾಗಿದ್ದಲ್ಲಿ ಇದು, ಹೊಸ ಒಡೆತನದ ಕಾನೂನುಗಳು ಮತ್ತು ಹೊಸ ಆಮದು-ರಫ್ತು ಕಾನೂಗಳ ಮೂಲಕ ಜೀವ ಜಗತ್ತನ್ನು ವೈವಿಧ್ಯಮಯ ಸರಕಿನ ಒಂದು ಮಾರುಕಟ್ಟೆಯನ್ನಾಗಿ ಪರಿವರ್ತಿಸಿರುವ ಜಾಗತೀಕರಣ ಎಂಬ ಅರೆ-ಉದಾರವಾದಿ ಹೆಸರಿನಿಂದ ಕರೆಯಲ್ಪಡುವ ಅಂತಾರಾಷ್ಟ್ರೀಯ ರಾಜಕಾರಣದ ಇನ್ನೊಂದು ಹೆಜ್ಜೆಯಷ್ಟೆ. ೩೫ ವರ್ಷಗಳ ಹಿಂದೆ ನಾವು ಅಣುಸ್ಫೋಟ ಮಾಡಿದಾಗ ಅಮೆರಿಕಾ, ನಮ್ಮ ಮೇಲೆ ಜಾಗತಿಕ ಬಹಿಷ್ಕಾರ ಹಾಕಲು ರೂಪಿಸಿದ ಕಾನೂನು ಮತ್ತು ಸಂಸ್ಥೆಗಳನ್ನೇ ಇಂದು ಈ

ಒಪ್ಪಂದದ ಮೂಲಕ; ಆ ಬಹಿಷ್ಕಾರವನ್ನು ತೆಗೆಯಲು ಬಳಸುತ್ತಿರುವುದರ ಮರ್ಮವಾದರೂ ಏನು? ನಾವು ಒಪ್ಪಂದಕ್ಕೆ ಸಹಿ ಹಾಕುವ ಮುನ್ನ ಈ ಪ್ರಶ್ನೆಯ ಬಗ್ಗೆ ಯೋಚಿಸದಂತೆ ನಮ್ಮನ್ನು ವಿವಶಗೊಳಿಸಿರುವ ಶಕ್ತಿಯಾದರೂ ಯಾವುದು?

ಈ ಒಪ್ಪಂದ ನಮ್ಮ ಶಾಂತಿಯುತ ಪರಮಾಣು ಕಾರ್ಯಕ್ರಮಕ್ಕೆ, ಬಡತನ ನಿರ್ಮೂಲನ ಮಾಡುವ ಅಭಿವೃದ್ಧಿ ಚಟುವಟಿಕೆಗಳಿಗೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಾವು ಜಾಗತಿಕ ಶಕ್ತಿಯಾಗಿ ಮೂಡಲು ಸಹಾಯ ಮಾಡುವುದೆಂದು ಪ್ರಧಾನಿ ಹೇಳುತ್ತಿದ್ದಾರೆ. ಆದರೆ ಈ ಒಪ್ಪಂದಕ್ಕೆ ಅಮೆರಿಕಾದ ಸೆನೆಟ್ ಅಂತಿಮ ಅನುಮೋದನೆ ನೀಡುವವರೆಗೆ ಹಂತಾನುಹಂತವಾಗಿ ಹೊರ ಬೀಳಲಾರಂಭಿಸಿರುವ ಒಪ್ಪಂದದ ಒಳ ವಿವರಗಳು ನಮ್ಮ ಪ್ರಧಾನಿ ಈ ಒಪ್ಪಂದದ ಬಗ್ಗೆ ಸಂಸತ್ತಿನಲ್ಲಿ ಮತ್ತು ಹೊರಗೆ ದೇಶಕ್ಕೆ ನೀಡಿದ ಮಾಹಿತಿ ಮತ್ತು ಆಶ್ವಾಸನೆಗಳನ್ನು ಒಂದೊಂದಾಗಿ ಹುಸಿಗೊಳಿಸಿವೆ. ಒಪ್ಪಂದವಿರಲಿ, ಈ ಒಪ್ಪಂದಕ್ಕೆ ಸಹಿ ಹಾಕುವ ಇಡೀ ಪ್ರಕ್ರಿಯೆಯೇ ನಮ್ಮ ಸಂಸದೀಯ ಪ್ರಜಾಪ್ರಭುತ್ವದ ವಿಶ್ವಾಸಾರ್ಹತೆಯನ್ನು ಹಾಳುಗೆಡಹಿದೆ. ಗಾಂಧಿ 'ಹಿಂದ್ ಸ್ವರಾಜ್'ನಲ್ಲಿ ನಾವೀಗ ಅನುಸರಿಸುತ್ತಿರುವ ಬ್ರಿಟಿಷ್ ಸಂಸದೀಯ ಪದ್ಧತಿಯನ್ನು, ಅದು ಸತ್ಯಕ್ಕೆ ಬದಲಾಗಿ ಆಮಿಷಗಳಿಂದ ಬದಲಾಗಬಲ್ಲ ಜನ ಪ್ರತಿನಿಧಿಗಳ ಮತವನ್ನು ನಂಬಿ ನಡೆಯುವ ಆಡಳಿತವೆಂದು, ಸೂಳೆಗಾರಿಕೆಗೆ ಹೋಲಿಸಿದ್ದರು. ಗಾಂಧಿ ನಂತರದ ದಿನಗಳಲ್ಲಿ ಈ ಕೃತಿಯಲ್ಲಿ ತಾವು ಏನನ್ನಾದರೂ ಬದಲಿಸುವುದಿದ್ದರೆ, ಈ ಅಸಭ್ಯವೆನಿಸುವ ಶಬ್ದವನ್ನು ಮಾತ್ರ ಬದಲಿಸುವುದಾಗಿ ಹೇಳಿದ್ದರು. ಆದರೆ ಮೊನ್ನೆ ಪರಮಾಣು ಒಪ್ಪಂದದ ವಿಷಯವಾಗಿ ಸಂಸತ್ತಿನಲ್ಲಿ ನಡೆದ ಮತದಾನದ ಸಂದರ್ಭದಲ್ಲಿ ಪ್ರಕಟವಾದ 'ಮತಕ್ಕಾಗಿ ನಗದು' ಹಗರಣ, ಗಾಂಧಿಯವರ ಈ ವರ್ಣನೆಯನ್ನು ಸಮರ್ಥಿಸುವಂತೆಯೇ ಇದ್ದು, ಈ ಕೃತಿಯ ಮಹತ್ವವನ್ನು ಹೆಚ್ಚಿಸಿದೆಯೆಂದೇ ಹೇಳಬೇಕು!

ಅಮೆರಿಕಾ ತನ್ನ NATO ಸೇನಾ ಮೈತ್ರಿಕೂಟವನ್ನು ರಷ್ಯಾ ಮತ್ತು ಚೀನಾ ಗಡಿಗಳಲ್ಲಿ ಖಂಡಾಂತರ ಕ್ಷಿಪಣಿಗಳನ್ನು ಸ್ಥಾಪಿಸುವ ಮೂಲಕ 'ಜಾಗತಿಕ ಜನತಾ ವಿಮೋಚನೆ' ಕಾರ್ಯಕ್ರಮವನ್ನಾಗಿ (ಇರಾಕ್ ವಿಮೋಚನೆಯಂತೆ!) ಪರಿವರ್ತಿಸುತ್ತಿರುವ ಈ ಸಂದರ್ಭದಲ್ಲಿ, ಈ ಒಪ್ಪಂದದ ಮೂಲಕ ನಾವು ಇಂಧನ ಸ್ವಾವಲಂಬನೆ ಸಾಧಿಸಿಕೊಳ್ಳಲು ಹೋಗಿ, ರಾಜಕೀಯ ಸ್ವಾಯತ್ತತೆಯನ್ನು ಕಳೆದುಕೊಳ್ಳುವ ಹಾದಿಯಲ್ಲಿದ್ದೇವೆಯೇ ಎಂಬ ಆತಂಕ ಕೆಲವರಲ್ಲಿ ಉಂಟಾಗಿದೆ. ಇಲ್ಲಿ ನಾನು ಭಾರತದ ಅಥವಾ ಅಮೆರಿಕಾದ ಯಾವುದೇ ನಿರ್ದಿಷ್ಟ ರಾಜಕೀಯ ಪಕ್ಷದ ರಾಜಕಾರಣದ ಬಗ್ಗೆ ಮಾತನಾಡುತ್ತಿಲ್ಲ. ಈ ಎಲ್ಲ ಪಕ್ಷಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯವಿರುವುದು ಒಪ್ಪಂದದ ಮೂಲ ಉದ್ದೇಶದ ಬಗೆಗಲ್ಲ, ಅದರ ಕೆಲವು ವಿವರಗಳ ಬಗ್ಗೆ ಅಷ್ಟೆ. ಅಲ್ಲದೆ, ಅಮೆರಿಕಾವೂ ಸೇರಿದಂತೆ ಬಹುಪಾಲು ಎಲ್ಲ ಮುಂದುವರಿದ ದೇಶಗಳು ಪರಮಾಣು ವಿದ್ಯುತ್ ಸ್ಥಾವರಗಳ ಅಂತರ್ಗತ ಅಪಾಯಗಳ ಅನುಭವದ ಹಿನ್ನೆಲೆಯಲ್ಲಿ ಅವುಗಳ ಸ್ಥಾಪನೆಯನ್ನು ನಿಲ್ಲಿಸುತ್ತಾ, ಇರುವ ಸ್ಥಾವರಗಳನ್ನು ಮುಚ್ಚುತ್ತಾ ಇವೆ. ಇಂತಹ ಪರಿಸ್ಥಿತಿಯಲ್ಲಿ ಭಾರತದಂತಹ ಅಭಿವೃದ್ಧಿಶೀಲ ದೇಶಗಳಿಗೆ ಸ್ವಚ್ಛ

ಇಂಧನದ ಹೆಸರಿನಲ್ಲಿ ಪರಮಾಣು ವಿದ್ಯುತನ್ನು ಏಕೆ ಶಿಫಾರ್ಸು ಮಾಡಲಾಗುತ್ತಿದೆ ಎಂಬುದನ್ನೂ ಯೋಚಿಸಲಾಗದಷ್ಟು ನಮಗೆ ಮಂಕು ಕವಿಸಿರುವ ಅಂಶವಾದರೂ ಯಾವುದು? ಅದು ಅಭಿವೃದ್ಧಿಯ ಹಪಾಹಪಿಯಲ್ಲದೆ ಮತ್ತೇನೂ ಅಲ್ಲ.

ಮೊದಲೇ ಹೇಳಿದ ಹಾಗೆ, ಈ ಒಪ್ಪಂದದ ಮೂಲ ಉದ್ದೇಶ: ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ದೇಶ ಸಾಧಿಸಿರುವ ಎರಡಂಕಿ ದರದ ಪ್ರಗತಿಯನ್ನು ಉಳಿಸಿಕೊಂಡು ಹೋಗುವುದು. ಆದರೆ ಈ ದಿಢೀರ್ ಎರಡಂಕಿ ಪ್ರಗತಿಯ ಹಿಂದಿನ ರಾಜಕೀಯ-ಆರ್ಥಿಕ ತಾತ್ವಿಕತೆ, ಅದರ ಪ್ರತಿಪಾದಕ ದೇಶವಾದ ಅಮೆರಿಕಾದಲ್ಲೇ ತನ್ನ ವಿಶ್ವಾಸಾರ್ಹತೆಯನ್ನಿಂದು ಕಳೆದುಕೊಳ್ಳುತ್ತಿದೆ. ಅಲ್ಲಿನ ಮುಕ್ತ ಮಾರುಕಟ್ಟೆ ಮತ್ತು ಕಾರ್ಪೋರೇಟ್ ಬಂಡವಾಳಶಾಹಿ ಆಧಾರಿತ ಆರ್ಥಿಕತೆ ನಿರ್ಮಿಸಿದ್ದ ದೊಡ್ಡ ದೊಡ್ಡ ಖಾಸಗಿ ಹಣಕಾಸು ಸಂಸ್ಥೆಗಳು, ಬ್ಯಾಂಕುಗಳು ಮುಳುಗಿ ಹೋಗುತ್ತಿವೆ. ಅವುಗಳ ರಕ್ಷಣೆಗಾಗಿ ಭಾರಿ ಪ್ರಮಾಣದಲ್ಲಿ ಜನರ ಅಂದರೆ ಸರ್ಕಾರದ ಹಣವನ್ನು ಹೂಡಬೇಕಾದ ಪರಿಸ್ಥಿತಿ ಅಲ್ಲಿ ಉಂಟಾಗಿದೆ! ಅಲ್ಲಿನ ಆರ್ಥಿಕ ಆಡಳಿತಗಾರರು ಈಗ ಕಾರ್ಪೋರೇಟ್ ಆಸ್ತಿಗಳ ರಾಷ್ಟ್ರೀಕರಣದ ಅಗತ್ಯವನ್ನು ಒತ್ತಿ ಹೇಳತೊಡಗಿದ್ದಾರೆ. ಅಂದರೆ ಸರಕು ಅರ್ಥಶಾಸ್ತ್ರ ತನ್ನ ಮತ್ತೊಂದು dead endಗೆ ಬಂದಿದೆ. ಸರಕು ಉತ್ಪಾದನೆ ಮತ್ತು ಲಾಭ ಮಾತ್ರವಲ್ಲ, ಮಾನವ ಕಲ್ಯಾಣವನ್ನೂ ತನ್ನ ಯಶಸ್ಸಿನ ಸಂಕೇತಮಾಡಿಕೊಳ್ಳುವ ಮಾನವ ಅರ್ಥಶಾಸ್ತ್ರ ಇಂದು ಆರಂಭವಾಗಬೇಕಿದೆ.

ಆದರೆ ಭಾರತದಲ್ಲಿ ಏನಾಗುತ್ತಿದೆ? ಎಡಪಂಥೀಯ ರಾಜಕಾರಣದ ಧೀಮಂತರೆನಿಸಿದ ಬಂಗಾಳದ ಕಮ್ಯುನಿಸ್ಟರೇ ವಿದೇಶಿ ಮತ್ತು ಖಾಸಗಿ ಬಂಡವಾಳವಿಲ್ಲದೆ ಅಭಿವೃದ್ಧಿ ಸಾಧ್ಯವಿಲ್ಲ ಎನ್ನುತ್ತಿದ್ದಾರೆ! ಇಂತಹ ಬಂಡವಾಳದ ಕ್ರೋಢೀಕರಣದ ಮೂಲಕವೇ ಪ್ರಕಾಶಮಾನ ಭಾರತವನ್ನು ಪ್ರಸ್ತುತಪಡಿಸಲು ಹೋಗಿ ಮುಗ್ಗರಿಸಿದವರ ನಂತರ 'ಆಂ ಆದ್ಮಿ'ಯನ್ನು ಗಮನದಲ್ಲಿಟ್ಟುಕೊಂಡ 'ಆವೃತ' ಅಭಿವೃದ್ಧಿಯ ಮಾತನಾಡುತ್ತ ಬಂದ ಮನಮೋಹನ ಸಿಂಗ್ ನೇತೃತ್ವದ ಪರಿವಾರ ಮಾಡುತ್ತಿರುವುದಾದರೂ ಏನು? ಇವರು SEZ ಎಂಬ gated industrial colonyಗಳ ಮೂಲಕ ದೇಶದೊಳಗೇ 'ವಿದೇಶಿ' ವಸಾಹತುಗಳನ್ನು ಸೃಷ್ಟಿಸಹೊರಟಿದ್ದಾರೆ. ಇದು ಇನ್ನು ಐವತ್ತು ವರ್ಷಗಳಲ್ಲಿ ಭಾರತವನ್ನು ಜಾಗತಿಕ ಶಕ್ತಿಯನ್ನಾಗಿ ಮಾಡಬಲ್ಲ ಈಗಿನ ಎರಡಂಕಿ ಪ್ರಗತಿ ದರವನ್ನು ಮುಂದುವರೆಸಿಕೊಂಡು ಹೋಗಲು ಅನಿವಾರ್ಯವಾಗಿರುವ ಮಾರ್ಗವಂತೆ. ಮತ್ತು ಈವರೆಗಿನ ಪ್ರಗತಿಯ ಸಹಜ ಮುಂದುವರಿಕೆಯಂತೆ! ನಮಗೆ ಪರಮಾಣು ಇಂಧನದ ತುರ್ತು ಅಗತ್ಯ ಬಿದ್ದಿರುವುದು ಇಂತಹ ಅಭಿವೃದ್ಧಿಗಾಗಿ!

ಹೋಗಲಿ, ಈ ಅಭಿವೃದ್ಧಿಯ ಫಲಗಳಾದರೂ ಏನು? ನಮ್ಮ ಸರ್ಕಾರದ ಮತ್ತು ಜಾಗತಿಕ ಸಮೀಕ್ಷಾ ಸಂಸ್ಥೆಗಳ ಅಧಿಕೃತ ಅಂಕಿ ಅಂಶಗಳೇ ಹೇಳುತ್ತಿವೆ, ದೇಶದಲ್ಲಿ ಈ ಪ್ರಗತಿ ದರ ಏರುತ್ತಿದ್ದಂತೆ ಬಡವರ ಮತ್ತು ಶ್ರೀಮಂತರ ನಡುವಣ ಅಂತರ, ಘರ್ಷಣಾತ್ಮಕ ಪ್ರಮಾಣದಲ್ಲಿ ಹೆಚ್ಚುತ್ತಿದೆ ಎಂದು. ಇದರ ಜೊತೆಗೆ ಬಡವರ ಮತ್ತು ಹಸಿದವರ ಸಂಖ್ಯೆಯೂ

ಹೆಚ್ಚಿದೆ. ಜಗತ್ತಿನ ಅರ್ಧದಷ್ಟು ಹಸಿದವರು ಭಾರತದಲ್ಲಿಯೇ ಇದ್ದಾರೆ. ಇದರಿಂದಾಗಿ ಕೋಮು ಹಿಂಸೆ, ರಾಜಕೀಯ ಹಿಂಸೆಯೂ ಸೇರಿದಂತೆ ವೈಯುಕ್ತಿಕ ಮತ್ತು ಸಾಮಾಜಿಕ ಹಿಂಸೆ, ತನ್ನ ಪ್ರಮಾಣ ಮತ್ತು ವೈವಿಧ್ಯದಲ್ಲಿ ಹೆಚ್ಚುತ್ತಿದೆ. ಎರಡಂಕಿ ಪ್ರಗತಿ ದರದ ಜೊತೆಗೇ ಹಣದುಬ್ಬರವೂ ಎರಡಂಕಿ ದಾಟಿ ಹೋಗಿ, ಬಡವರನ್ನು ಕಂಗಾಲಾಗಿಸಿದ್ದರೆ, ಕಡುಬಡವರನ್ನು ಭಿಕ್ಷಾ ಸ್ಥಿತಿಗೆ ತಳ್ಳಿದೆ.

ಇನ್ನು ಈ ಹೊಸ ಆರ್ಥಿಕತೆಯ ಅವಧಿಯಲ್ಲಿ ಭ್ರಷ್ಟಾಚಾರದ ತಃಖ್ತೆಯಲ್ಲಿ ನಮ್ಮ ದೇಶದ ಸ್ಥಾನಮಾನ ಏರುಗತಿಯಲ್ಲಿದ್ದರೆ, ಜಾಗತಿಕ ಮಾನವ ಸಂಪನ್ಮೂಲ ಅಭಿವೃದ್ಧಿ ತಃಖ್ತೆಯಲ್ಲಿ ಇಳಿಗತಿಯಲ್ಲಿದೆ! ನಿಜ, ಒಂದು ದಕ್ಷತೆಯ ಮತ್ತು ಒಂದು ವರ್ಗದ ಜನರ ಹಣಕಾಸಿನ ಭದ್ರತೆ ಸಾಕಷ್ಟು ಹೆಚ್ಚಿದೆ. ಅವರಿಂದಾಗಿ ಮಾರುಕಟ್ಟೆಯೂ ಮೈತುಂಬಿಕೊಂಡಿದೆ. ಆದರೆ ಇದರ ಜೊತೆಗೇ, ಇವರೂ ಸೇರಿದಂತೆ ಎಲ್ಲ ಜನಸಮುದಾಯಗಳ ಮಾನಸಿಕ, ಸಾಮಾಜಿಕ ಅಭದ್ರತೆ ಹೆಚ್ಚಿದೆ. Security gaurdಗಳಿಗೆ ಈಗ ಎಲ್ಲಿಲ್ಲದ ಬೇಡಿಕೆ ಬಂದಿದೆ! ಇದರ ಜೊತೆಗೇ ಸುಲಭ ಅಧ್ಯಾತ್ಮದ ಮತ್ತು ವಿಕ್ಷಿಪ್ತ ಮನರಂಜನಾ ಮಾದರಿಗಳೂ ಚಾಲ್ತಿಗೆ ಬಂದಿವೆ. ಮಕ್ಕಳಿಂದ ಮುದುಕರವರೆಗೆ, ವಿಶೇಷವಾಗಿ ಹೆಂಗಸರು ತಮ್ಮ ಮಕ್ಕಳೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಮಾಣ ಒಂದೇ ಸಮನೆ ಹೆಚ್ಚುತ್ತಿದೆ. ಇದೆಲ್ಲದಕ್ಕೆ ಮುಳ್ಳಿನ ಕಿರೀಟವಿಟ್ಟಂತೆ ರೈತರ ಆತ್ಮಹತ್ಯೆ ಮುಂದುವರಿದೇ ಇದೆ. ಕಳೆದ ಹತ್ತು ವರ್ಷಗಳಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ರೈತರು ಸಾವಿಗೆ ಶರಣಾಗಿದ್ದಾರೆ. ಅದಕ್ಕಿಂತ ಮುಖ್ಯ ವಿಷಯ ಎಂದರೆ, ಇವರಿಗೆ ಪರಿಹಾರ ಪ್ಯಾಕೇಜುಗಳನ್ನು ಘೋಷಿಸಿದಷ್ಟೂ, ಇವರ ಆತ್ಮಹತ್ಯೆ ದರ ಹೆಚ್ಚುತ್ತಾ ಹೋಗುತ್ತಿದೆ!

ಇದೀಗ ಮುಖ್ಯ ಪ್ರಶ್ನೆ: ಏಕೆ ಹೀಗೆ? ಇದಕ್ಕೆ ಉತ್ತರ ಹುಡುಕುತ್ತಾ ಹೊರಟಂತೆ ನಮಗೆ ಕತ್ತಲೆಯ ಸುರಂಗದ ಕೊನೆಯಲ್ಲಿ ಕಾಣುವುದು 'ಹಿಂದ್ ಸ್ವರಾಜ್'. 'ಹಿಂದ್ ಸ್ವರಾಜ್' ಈ ಎಲ್ಲ ಸಮಸ್ಯೆಗಳಿಗೆ ಉತ್ತರ ಕೊಡುತ್ತದೆ ಎಂಬರ್ಥದಲ್ಲಿ ಈ ಮಾತನ್ನು ನಾನು ಹೇಳುತ್ತಿಲ್ಲ. ಅದು ಆಧುನಿಕ ನಾಗರೀಕತೆಯ ತನ್ನ ವಿಶ್ಲೇಷಣೆಯಲ್ಲಿ ಈ ಸಮಸ್ಯೆಗಳನ್ನು ಮುನ್ನೋಡಿತ್ತು ಎಂಬರ್ಥದಲ್ಲಿ ಈ ಮಾತು ಹೇಳುತ್ತಿರುವೆ. 'ಹಿಂದೂಸ್ತಾನ ತಿಣುಕುತ್ತಿರುವುದು ಬ್ರಿಟಿಷರ ಭಾರದಿಂದಲ್ಲ; ಆಧುನಿಕ ನಾಗರೀಕತೆಯ ರಾಕ್ಷಸ ಭಾರದಿಂದ'. ಇದು 'ಹಿಂದ್ ಸ್ವರಾಜ್'ನ ಬೀಜವಾಕ್ಯ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು, ಗಾಂಧಿ ಆಧುನಿಕತೆಯನ್ನು ಟೀಕಿಸುತ್ತಿಲ್ಲ. ಏಕೆಂದರೆ, ಆಧುನಿಕ ರಾಜಕೀಯ ಸಂದರ್ಭದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯ ಕಲ್ಪನೆಗಳನ್ನು ಸ್ವೀಕರಿಸಿ ಅವನ್ನು ವಿಕಾಸಗೊಳಿಸುವಾಗ ಅವರು ಆಧುನಿಕರಲ್ಲಿ ಆಧುನಿಕರು. ಆದರೆ ಅವರ ವಿರೋಧವಿರುವುದು ಆಧುನಿಕ ನಾಗರೀಕತೆಗೆ. ಅಂದರೆ ಆಧುನಿಕತೆಯ ಲೌಕಿಕ ರೂಪಗಳ ಬಗೆಗೆ. ಇದಕ್ಕೆ ಕಾರಣ ಆಧುನಿಕ ನಾಗರೀಕತೆ ತನ್ನನ್ನು ಕಟ್ಟಿಕೊಳ್ಳಲು ಮಾಡಿಕೊಂಡ ಅದರ ಒಡಕಿನಲ್ಲಿಯೇ ಇದೆ. ಈ ಒಡಕಿನ ಮೂಲ ಇರುವುದು ಆಧುನಿಕ–ಅಂದರೆ ಐರೋಪ್ಯ ಪುನರುಜ್ಜೀವನ ನಿರೂಪಿಸುವ–ಕ್ರಿಶ್ಚಿಯನ್ ಮತ, ಜಗತ್ತನ್ನು

ನೋಡುವ ಬಗೆಯಲ್ಲಿ. ಈ ಮತ ಜಗತ್ತನ್ನು ದೇವರ ಕೊಡುಗೆ ಎಂದು ಭಾವಿಸುತ್ತದೆ. ಅಂದರೆ ಜಗತ್ತು ದೇವರ ಹೊರಗಿದೆ ಮತ್ತು ಜಡರೂಪಿಯಾಗಿದೆ. ಹಾಗಾಗಿ ಅದನ್ನು ಮನುಷ್ಯ ತನಗೆ ಬೇಕಾದ ಸುಖ ಫಲಗಳನ್ನು ಪಡೆದುಕೊಳ್ಳಲು ಹೇಗಾದರೂ ಬಳಸಿಕೊಳ್ಳಬಹುದು ಎಂದು ಭಾವಿಸುತ್ತದೆ. ಅಂದರೆ ಸ್ಥೂಲವಾಗಿ ಜಗತ್ತು ಎಂದರೆ ಒಂದು ಗ್ರಾಹಕ ವಸ್ತುವೇ ಆಗಿದೆ! ಈ ನಂಬಿಕೆಯೇ ಹೊಸ ವಿಜ್ಞಾನವನ್ನು, Mechanicsನ್ನು ಸೃಷ್ಟಿಸಿದ್ದು. ಆಧುನಿಕ ನಾಗರೀಕತೆ ಬೆಳೆದದ್ದೇ ಈ ಸುಖಫಲಗಳ– Mechanicನ–ಆಕರ್ಷಣೆಗಳೊಂದಿಗೇ. ಈ ಅರ್ಥದಲ್ಲಿ ಆಧುನಿಕ ನಾಗರೀಕತೆ ಎಂದರೇ ಕ್ರಿಶ್ಚಿಯನ್ ಲೋಕದೃಷ್ಟಿಯೇ ಆಗಿದೆ. (ಇದರ ಸೂಕ್ಷ್ಮ ಮತ್ತು ಸೃಜನಶೀಲ ಪರಿಶೀಲನೆಯನ್ನು ನಾವು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ನೋಡಬಹುದಾಗಿದೆ.)

ಈ ಲೋಕದೃಷ್ಟಿಯ ಒಂದು ವಿಶೇಷವೆಂದರೆ, ದೇವರನ್ನು ಹೊರಗಿಟ್ಟ ಕಾರಣದಿಂದಾಗಿ ದೇವರನ್ನೂ ಮೀರಿ ಬೆಳೆದ ಈ ವಿಜ್ಞಾನ ಮತ್ತು ಆ ದೇವರನ್ನು ನಂಬುವ ಕ್ರಿಶ್ಚಿಯನ್ ಧರ್ಮದ ನಡುವೆ ಲೋಕ ಜೀವನದಲ್ಲಿ ಘರ್ಷಣೆ ಉಂಟಾಗದಂತೆ ತಡೆಯಲು ಈರೋಪಿನ ಆಡಳಿತಗಾರರು 'ಸೆಕ್ಯುಲರಿಸಂ' ಎಂಬ ರಾಜಕೀಯ ಪರಿಕಲ್ಪನೆಯೊಂದನ್ನು ರೂಪಿಸಿಕೊಳ್ಳ ಬೇಕಾಯಿತು. ಇದು ದೇವರು-ಧರ್ಮಗಳ ಅಧಿಕಾರಗಳನ್ನೂ ಮತ್ತು ಲೌಕಿಕ ಆಡಳಿತದ ಅಧಿಕಾರಗಳನ್ನೂ ಪ್ರತ್ಯೇಕಿಸುವ ಒಪ್ಪಂದ. ಹೀಗಾಗಿ ಐರೋಪ್ಯ ರಾಜಕಾರಣ ಯಾವ ಪಾಪ ಪ್ರಜ್ಞೆಯೂ ಇಲ್ಲದೆ ವಿಜ್ಞಾನವನ್ನು ತಂತ್ರಜ್ಞಾನವನ್ನಾಗಿ ಪರಿವರ್ತಿಸಿಕೊಂಡು, ತನ್ನ ರಾಜಕಾರಣಕ್ಕೆ ಬಳಸಿಕೊಳ್ಳುತ್ತಾ ಹೋಯಿತು. ಇದೇ ವಸಾಹತುಶಾಹಿಗೆ ಕಾರಣವಾದದ್ದು.

ಗಾಂಧಿ ಇದನ್ನು ಅಧರ್ಮ ಎಂದರು. ರೋಗವೆಂದು ಕರೆದರು. ಇದಕ್ಕೆ ಮುನ್ನ, ಪ್ರವಾದಿ ಮುಹಮ್ಮದ್ ಇದನ್ನು–ಧರ್ಮದಿಂದ ವಿಮುಖವಾದ ಭೌತವಾದಿ ನಾಗರೀಕತೆಯನ್ನು– ಸೈತಾನಿ ನಾಗರೀಕತೆ ಎಂದು ಕರೆದಿದ್ದ. ಅದೇನೇ ಇರಲಿ, ಬಹುಶಃ ಇಂದಿನ ಮತೀಯ ವೈರ ಮತ್ತು ಹಿಂಸಾಚಾರಗಳ ಬೀಜವನ್ನು ಆಧುನಿಕ ನಾಗರೀಕತೆಯು ದೇವರು, ಧರ್ಮ ಮತ್ತು ಲೋಕಾಡಳಿತಗಳ ನಡುವೆ ಈ ಗೆರೆ ಎಳೆದ ರೀತಿಯಲ್ಲಿ ಗುರುತಿಸಬಹುದೇನೋ! ಆಧುನಿಕ ನಾಗರೀಕತೆಯ ಇಂದಿನ ರೂಪವಾದ ಜಾಗತೀಕರಣವನ್ನು ಇತ್ತೀಚಿನ ಚರಿತ್ರೆಕಾರನೊಬ್ಬ (ಹಟ್ಟಿಂಗ್‌ಟನ್ ಇರಬೇಕು) ನಾಗರೀಕತೆಗಳ ಸಂಘರ್ಷ ಎಂದು ಕರೆದಿದ್ದುದು ಬಹುಶಃ ಈ ಅರ್ಥದಲ್ಲೇ. ಹಾಗಾಗಿ, ಮುಸ್ಲಿಂ ಭಯೋತ್ಪಾದನೆ ಆಧುನಿಕ ನಾಗರೀಕತೆಯ ಒಂದು ಮುಖವಾಗಿದ್ದ ನಾಸ್ತಿಕ ಕಮ್ಯುನಿಸ್ಟ್ ರಷ್ಯಾದ ವಿರುದ್ಧ ಯುದ್ಧ ರೂಪದಲ್ಲಿ ಆರಂಭವಾಗಿ, ಅಂತಿಮವಾಗಿ ಈ ನಾಗರೀಕತೆಯ ಇನ್ನೊಂದು ಮುಖ ಮತ್ತು ಈಗ ಅಧಿಕೃತ ಮುಖದಂತಿರುವ ಅಮೆರಿಕಾದ ವಿರುದ್ಧವೇ ಗುರಿಯಾಗಿರುವುದನ್ನು ನೋಡಿದರೆ, ಇಂದಿನ ಮತೀಯ ಭಯೋತ್ಪಾದನೆಯೂ ಆಧುನಿಕ ನಾಗರೀಕತೆಯ ವೈರುಧ್ಯಗಳ ಫಲವೇ ಆಗಿದೆ ಎಂಬುದು ನಮಗೆ ಮನವರಿಕೆಯಾದೀತು.

ಹಾಗೇ, ಭಾರತೀಯ ಮುಸ್ಲಿಮರನ್ನೂ ಹೊರಗಿನವರೆಂದು ಕರೆದ ಹಿಂದೂವಾದದ ಮೂಲಕರ್ತ ಸಾವರ್ಕರ್ ಕ್ರಿಶ್ಚಿಯನ್ ಲೋಕದೃಷ್ಟಿಯನ್ನು ಒಪ್ಪಿಕೊಂಡ ಆಧುನಿಕ ಹಿಂದುವೇ

ಆಗಿದ್ದನು ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ಇಂದಿನ ಹಿಂದೂವಾದಿಗಳು ಮುಸ್ಲಿಮರನ್ನು ದೂರೀಕರಿಸಲು ನೀಡುವ ಪ್ರಮುಖ ಮತ್ತು ಜನಪ್ರಿಯ ಕಾರಣ ಅವರು ಅನಾಗರೀಕರೆಂಬುದು! ಅಂದರೆ ತಮ್ಮ ಕಲ್ಪನೆಯ ನಾಗರೀಕತೆಗೆ ಬದ್ಧರಾದವರಲ್ಲ ಎಂದಷ್ಟೇ ಇದರ ಅರ್ಥ. ಮುಸ್ಲಿಂ ಭಯೋತ್ಪಾದನೆ ಈಗ ಭಾರತದ ವಿರುದ್ಧ ತಿರುಗಿರುವುದು ಮೂಲತಃ ಈ ಕಾರಣಕ್ಕೇ. ಭಾರತದ ರಾಜಕಾರಣ ಈಗ ಆಧುನಿಕ ನಾಗರೀಕತೆಯ, ಅಂದರೆ ಅಮೆರಿಕಾದ ರಾಜಕಾರಣದ ತರ್ಕವನ್ನನುಸರಿಸಿ ನಡೆಯುತ್ತಿದೆ ಎಂಬ ಕಾರಣಕ್ಕೆ.

ನಮಗೆ ಗಾಂಧಿ ಮತ್ತು ಅವರ 'ಹಿಂದ್ ಸ್ವರಾಜ್' ಮುಖ್ಯವಾಗುವುದು ಇಲ್ಲಿ. ಅದರ common senseನಿಂದಾಗಿ. ಅವರು ಈ common senseನ್ನು ಒಂದು ಧರ್ಮವನ್ನಾಗಿ ಪ್ರಸ್ತುತಪಡಿಸುವ ರೀತಿ 'ಹಿಂದ್ ಸ್ವರಾಜ್'ಗೆ ಒಂದು ಬೆಡಗಿನ ಸೌಂದರ್ಯವನ್ನು ಪ್ರದಾನ ಮಾಡಿದೆ. ಈಗ ಆಧುನಿಕವೆಂದು ಕರೆಯಲಾಗುತ್ತಿರುವ ಭೌತವಾದಿ ನಾಗರೀಕತೆಯನ್ನು ಅವರು ಮಹಮ್ಮದನಂತೆ 'ಸೈತಾನಿ' ಎಂದು ಮತೀಯ absolute ಭಾಷೆಯಲ್ಲಿ ವರ್ಣಿಸಲಿಲ್ಲ. ಹಾಗಾಗಿ ಅದರ ವಿರುದ್ಧ ವ್ಯಗ್ರ ಹೋರಾಟಕ್ಕೂ ಕರೆಕೊಡಲಿಲ್ಲ. ಆ ತರಹದ ವ್ಯಗ್ರತೆ ಆ ನಾಗರೀಕತೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವಲ್ಲಿ ಅಡ್ಡಿಯುಂಟು ಮಾಡುತ್ತದೆ ಎಂದು ಅವರು ಭಾವಿಸಿದರು. ಬದಲಿಗೆ ಆಧುನಿಕ ನಾಗರೀಕತೆಯನ್ನು, ಜಗತ್ತಿನಲ್ಲಿ ಲೋಕಾಡಳಿತ evolve ಆಗುವ ಪ್ರಕ್ರಿಯೆಯಲ್ಲಿನ ಒಂದು ಅನಪೇಕ್ಷಣೀಯ ತಿರುವು ಎಂದು ಪರಿಗಣಿಸಿ, ಅದರ ಅನುಸರಣೆಯನ್ನು ರೋಗವೆಂದು ಕರೆದರು. ಅಂದರೆ ಅದು ಲಕ್ಷಣಾತ್ಮಕ ದೋಷವಾಗಿದ್ದು, ಅದು ವಾಸಿ ಮಾಡಬಹುದಾದದ್ದು.

ಇದಕ್ಕಾಗಿ ಅವರು ದೇವರ ಮತ್ತು ಧರ್ಮಗಳ ಕಲ್ಪನೆಯನ್ನು ಪುನರ್‌ನಿರೂಪಿಸಿದರು. ಈ ಪುನರ್‌ನಿರೂಪಣೆಗಾಗಿ ಅವರು ತಮ್ಮನ್ನು ಸನಾತನಿ ಎಂದು ಕರೆದುಕೊಂಡರು. ಸನಾತನಿ ಎಂದರೆ ನಮ್ಮ ವಿಚಾರವಾದಿಗಳ ಅರ್ಥದಲ್ಲಲ್ಲ; ಆದಿ ಅಂತ್ಯಗಳಿಲ್ಲದ ನಿತ್ಯ ಧರ್ಮ ಎಂದು. ಅದರ ಪ್ರಕಾರ ಈ ಹಿಂದೂ, ಬೌದ್ಧ, ಕ್ರಿಶ್ಚಿಯನ್, ಇಸ್ಲಾಂ ಇತ್ಯಾದಿಗಳೆಲ್ಲವೂ ಈ ಸನಾತನ ಧರ್ಮದ ಕಾಲ-ದೇಶ ರೂಪಗಳಷ್ಟೆ. ಈ ಅರ್ಥದಲ್ಲಿ ಗಾಂಧಿ ಮೂಲ ಅದ್ವೈತಿ. ಈ ಜಗತ್ತನ್ನು ಧಾರಣೆ ಮಾಡಿರುವ ಸತ್ವವನ್ನು ಅಂದರೆ ಆ ಸತ್ಯವನ್ನು ಅವರು ದೇವರು ಎಂದು ಗುರುತಿಸಿದರು. ಅವರು 'ದೇವರು ಸತ್ಯ' ಎನ್ನುವ ಮತೀಯವಾದಿಗಳ ವಸ್ತುನಿಷ್ಠ ನಂಬಿಕೆಯನ್ನು ತಿರುಗು ಮುರುಗಾಗಿಸಿ, 'ಸತ್ಯವೇ ದೇವರು' ಎಂದು ವ್ಯಕ್ತಿನಿಷ್ಠ ಮಾಡಿ ಅನ್ವೇಷಣಾತ್ಮಕಗೊಳಿಸಿದರು. ಇದೇ, ಪಶ್ಚಿಮದ ಆಧುನಿಕ ನಾಗರೀಕತೆಯನ್ನು ಮತ್ತು ಅದರ ಬಲೆಗೆ ಬಿದ್ದಿದ್ದ ಎಲ್ಲ ಸಂಸ್ಕೃತಿಗಳನ್ನು ಕುರಿತ ಗಾಂಧೀಜಿಯ ಮೂಲ ಮತ್ತು ಮುಖ್ಯ ಟೀಕೆ ಎಂದು ನಾನು ಭಾವಿಸಿದ್ದೇನೆ.

ಅವರ ಪ್ರಕಾರ ದೇವರು ಒಂದು ಅಖಂಡ ಹಾಗೂ ಸಾವಯವ ಅನುಭವ. ಹಾಗಾಗಿ ಈ ಜಗತ್ತು ದೇವರ ಕೊಡುಗೆ ಎಂದರೂ, ಆ ಕೊಡುಗೆಯೂ ದೈವ ಸ್ವರೂಪಿಯೇ ಆಗುತ್ತದೆ.

ಅಂದರೆ, ಈ ಜಗತ್ತೆಲ್ಲವೂ ಚೇತನಮಯವಾಗಿದ್ದು, ದೇವರೇ ಆಗಿದೆ. ಆದ್ದರಿಂದ ಈ ಜಗತ್ತಿನ ಎಲ್ಲ ವಿದ್ಯಮಾನಗಳೂ, ರಾಜಕಾರಣವೂ ಸೇರಿದಂತೆ ದೈವೀ ಚಟುವಟಿಕೆಯೇ! ಈ ನಂಬಿಕೆಯೊಂದಿಗೇ ಅವರು ತಮ್ಮ 'ಸತ್ಯಾನ್ವೇಷಣೆ' ಎಂಬ ಆತ್ಮಕಥೆಯಲ್ಲಿ ಹೀಗೆ ಹೇಳಿರುವುದು: 'ಸತ್ಯದೊಡನೆ ಮುಖಾಮುಖಿ ಎಂದರೆ, ಸೃಷ್ಟಿಯ ಅತಿ ಕ್ಷುದ್ರವನ್ನೂ ಅದು ನಾನೇ ಎಂಬಂತೆ ಅದರೊಡನೆ ಗುರುತಿಸಿಕೊಂಡು ಪ್ರೀತಿಸುವುದು. ಆದ್ದರಿಂದಲೇ ನಾನು ಬದುಕಿನ ಯಾವ ಕ್ಷೇತ್ರದಿಂದಲೂ ಹೊರಗೆ ಇರಲಾರೆ. ಇಂತಹ ಸತ್ಯನಿಷ್ಠೆಯೇ ನನ್ನನ್ನು ರಾಜಕಾರಣಕ್ಕೆ ಎಳೆದಿರುವುದು. ಹಾಗಾಗಿಯೇ ರಾಜಕಾರಣಕ್ಕೂ ಧರ್ಮಕ್ಕೂ ಸಂಬಂಧವಿಲ್ಲ ಎನ್ನುವವರಿಗೆ ಧರ್ಮವೆಂದರೇನೆಂದು ಗೊತ್ತಿಲ್ಲ ಎಂದು ಹೇಳಲು ನನಗೆ ಸಂಕೋಚವಿಲ್ಲ.'

ಹೀಗೆ ರಾಜಕಾರಣ ಮತ್ತು ಧರ್ಮದ ಪ್ರತ್ಯೇಕೀಕರಣಗಳನ್ನು ಒಪ್ಪದ ಗಾಂಧಿ ಸಹಜವಾಗಿಯೇ ಪಶ್ಚಿಮದ secularismನ್ನು ಒಪ್ಪುವುದಿಲ್ಲ. ಹಾಗೇsecularismನ ಮರೆಯಲ್ಲಿ ಮಲೆತು ಬೆಳೆದ ವಿಜ್ಞಾನದ ಅನ್ವಯ ಜ್ಞಾನವೆನಿಸಿದ ತಂತ್ರಜ್ಞಾನವನ್ನೂ. ಅದಕ್ಕೂ ಮುಖ್ಯವಾಗಿ, ಅದನ್ನು ಆಧರಿಸಿ ಬೆಳೆದ ಶೋಷಕ ವಸಾಹತುಶಾಹಿ ರಾಜಕಾರಣವನ್ನು. ಹಾಗಾಗಿಯೇ ಅವರು ಇನ್ನೊಂದು ನೆಲೆಯಲ್ಲಿ, ಅದ್ವೈತವನ್ನು ಹೇಳುತ್ತಲೇ ಜಗತ್ತನ್ನು ಪಾರಮಾರ್ಥಿಕ ಮತ್ತು ವ್ಯಾವಹಾರಿಕ ಎಂದು ವಿಭಾಗಿಸಿ ಶೋಷಕ ಜಾತಿ ರಾಜಕಾರಣಕ್ಕೆ ಆಸ್ಪದ ಮಾಡಿದ ಶಂಕರಾಚಾರ್ಯರ ಶಾಸ್ತ್ರ ಮತ್ತು ಸ್ಮೃತಿ ಆಧಾರಿತ ವೈದಿಕ ನಾಗರೀಕತೆಯನ್ನೂ ಒಪ್ಪಲಿಲ್ಲ. ಏಕೆಂದರೆ, ಅದರ ಈ ವಿಭಾಗೀಕರಣ ಕೆಳ ಮತ್ತು ಅಸ್ಪೃಶ್ಯ ಜಾತಿಗಳ ಕೇರಿಗಳೆಂಬ ವಸಾಹತುಗಳನ್ನು ಸೃಷ್ಟಿಸಿ ಶೋಷಣೆಗೆ ಕಾರಣವಾಗಿತ್ತು. ಹಾಗಾಗಿ ಗಾಂಧಿ ಎಂದೂ ಶಾಸ್ತ್ರ-ಸ್ಮೃತಿಗಳನ್ನು ಆಧರಿಸಿ ಯಾವುದು ಧರ್ಮ ಮತ್ತು ಯಾವುದು ಅಧರ್ಮ ಎಂದು ನಿರ್ಧರಿಸುತ್ತಿರಲಿಲ್ಲ. ಅವರಿಗೆ ದಿವ್ಯವಾಣಿಗಿಂತ ಎದೆಯ ದನಿ ನಿರ್ಣಾಯಕವಾಗಿತ್ತು. ಹಾಗಾಗಿ ಅವರಿಗೆ secularismನ ಅಗತ್ಯವೂ ಕಾಣಲಿಲ್ಲ! ಅವರಿಗೆ ಧರ್ಮವೆಂದರೆ ಸೃಷ್ಟಿಯ ಅಖಂಡತೆಯ ಅನುಭವ. ಹಾಗಾಗಿಯೇ ಅವರು ತಮ್ಮ ಇಂತಹ ಅಧ್ಯಾತ್ಮಿಕ ರಾಜಕಾರಣದ ಲೌಕಿಕ ರೂಪವಾಗಿ ಸಿದ್ಧಪಡಿಸಿದ್ದ ರಚನಾತ್ಮಕ ಕಾರ್ಯಕ್ರಮದಲ್ಲಿ ಇಂತಹ ಅಖಂಡ ಅನುಭವವನ್ನು ಭಂಗಗೊಳಿಸುವ ಎಲ್ಲ ಆಚರಣೆಗಳನ್ನೂ, ಭಾವನೆಗಳನ್ನೂ ನಿರ್ಮೂಲನ ಗೊಳಿಸುವ ಸಂಕಲ್ಪ ತೋರಿದ್ದರು. ಜಾತಿ ಪದ್ಧತಿ ನಿರ್ಮೂಲನ, ವಿಶೇಷವಾಗಿ ಅಸ್ಪೃಶ್ಯತಾ ನಿವಾರಣೆ ಮತ್ತು ಹಿಂದು-ಮುಸ್ಲಿಂ ಐಕ್ಯತೆಗಳು ಅದರ ಅವಿಭಾಜ್ಯ ಅಂಗಗಳಾಗಿದ್ದುದು ಈ ಕಾರಣದಿಂದಲೇ.

ಹೀಗೆ ಗಾಂಧಿ ಸನಾತನ ಧರ್ಮದಿಂದ ಸ್ಫೂರ್ತಿಗೊಂಡು ಹಿಂದೂ ಧರ್ಮವನ್ನು ಶಾಸ್ತ್ರ-ಸ್ಮೃತಿಗಳಿಂದ ಬಿಡುಗಡೆಗೊಳಿಸಿ, ತಮ್ಮ ರಚನಾತ್ಮಕ ಕಾರ್ಯಕ್ರಮದ ಮೂಲಕ ಸಮಕಾಲೀನಗೊಳಿಸಿದರು. ಅವರು ತಮ್ಮನ್ನು ಹಿಂದೂ ಎಂದು ಕರೆದುಕೊಂಡದ್ದು ಈ ಅರ್ಥದಲ್ಲಿ. ಹಾಗೆ ನೋಡಿದರೆ ಗಾಂಧಿಯನ್ನು ಓರ್ವ ಬೌದ್ಧ ಅದ್ವೈತಿ ಎಂದೂ ಕರೆಯಬಹುದು. ಏಕೆಂದರೆ ಬುದ್ಧನಂತೆಯೇ ಅವರು ಸಮಾಜದ ತಳದಲ್ಲಿ ದುಃಖವನ್ನು

ಗುರುತಿಸಿದರು. ಅದರ ನಿವಾರಣೆಯೇ ಧರ್ಮವೆಂದು ಭಾವಿಸಿದರು. ಹಾಗಾಗಿಯೇ, ತಂತ್ರಜ್ಞಾನದ ಸುಖಫಲಗಳ ಪರಿಭಾಷೆಯಲ್ಲಿ ಮಾತನಾಡುತ್ತಾ ಎಲ್ಲರನ್ನೂ ನಿರಂತರ ದಾಹಿಗಳನ್ನಾಗಿಯೂ, ಶಾಶ್ವತ ಅತೃಪ್ತರನ್ನಾಗಿಯೂ ಮಾಡತೊಡಗಿದ್ದ ಆಧುನಿಕ ನಾಗರೀಕತೆಯನ್ನು ಅವರು ತಿರಸ್ಕರಿಸಿದ್ದು, ಅಪಾಯಕಾರಿ ಎಂದು ಎಚ್ಚರಿಸಿದ್ದು. ಬುದ್ಧನಂತೆಯೇ ಅವರು ಸುಖದ ಭಾಷೆಯಲ್ಲಿ ಮಾತನಾಡಲಿಲ್ಲ. ಬುದ್ಧನ ಪ್ರಕಾರ ದುಃಖ ನಿವಾರಣೆಯೇ ಸುಖ! ಅದನ್ನು ಮಹಾಯಾನಿಗಳು 'ಮಹಾಸುಖ'ವೆಂದು ಕರೆದರು. ಗಾಂಧಿ ಇದನ್ನು ಜನಪ್ರಿಯ ಹಿಂದೂ ಪರಿಭಾಷೆಯಲ್ಲಿ ದೈವಿಕತೆಯ ಸಾಕ್ಷಾತ್ಕಾರ ಎಂದು ಕರೆದರು. ಎಲ್ಲ ಮನುಷ್ಯರ ಪರಮಗುರಿ ಇದೇ–ಅಂದರೆ, ಪ್ರತಿ ಮನುಷ್ಯನೂ ತನ್ನಲ್ಲಿನ ದೈವಿಕತೆಯನ್ನು ಕಂಡುಕೊಳ್ಳುವುದು–ಎಂದು ಅವರು ನಂಬಿದ್ದರು.

ಈ ನಂಬಿಕೆಯ ಬದುಕಿನಲ್ಲಿ ಗಾಂಧಿಯವರ ಅನುಭವಕ್ಕೆ ಬಂದದ್ದು, ಮನುಷ್ಯ ಹುಟ್ಟಿನಿಂದ ಸ್ವತಂತ್ರನು ಹೇಗೋ, ಅಂತರ್ವಲಂಬಿಯೂ ಹೌದು. He is independent but interdependent also ಎಂಬ ಸತ್ಯ. ಎರಡು ಸ್ಥಿತಿಗಳೂ ಒಂದರೊಳಗೊಂದು ಹಾಸುಹೊಕ್ಕಾಗಿರುವಂತಹದು. ಮನುಷ್ಯ ದೇಹಿಯಾಗಿ ಪ್ರತ್ಯೇಕತೆಯ ಸ್ವಾತಂತ್ರ್ಯವನ್ನು ಅನುಭವಿಸುವ ತುಡಿತ ಹೊಂದಿದ್ದಾನೆ, ನಿಜ. ಆದರೆ ಆತ ಒಂಟಿಯಾಗಿ ಹುಟ್ಟಿಲ್ಲವಾದ್ದರಿಂದ ಅವನು ನೈಸರ್ಗಿಕವಾಗಿ ಸಂಘಜೀವಿಯೂ ಆಗಿದ್ದಾನೆ. ಹಾಗಾಗಿ ಮೊದಲು ಅವನು ತನ್ನ ಈ independenceನ್ನು ಅನುಭವಿಸಲು ಸಂಘಜೀವಿತ್ವದ ಅಂದರೆ interdependence ಒತ್ತಾಯಿಸುವ ಕರ್ತವ್ಯಗಳನ್ನು ಪಾಲಿಸಬೇಕಾಗಿದೆ. ಇದು ಮಾತ್ರ ಮತ್ತು ಇದೇ ನಮ್ಮನ್ನು ನಾವು ಆಳಿಕೊಳ್ಳುವ ನೈಸರ್ಗಿಕ ರೀತಿ ಮತು ನೀತಿ ಮತ್ತು ಬದುಕಿನ ಧರ್ಮ ಎಂದು ಗಾಂಧಿ ಭಾವಿಸಿದ್ದರು.

ಹಾಗಾಗಿ ಈ ಸ್ವಾತಂತ್ರ್ಯ ಮತ್ತು ಅಂತರ್ವಲಂಬಿತನಗಳ ಸಂಬಂಧವನ್ನು ಭಂಗಗೊಳಿಸುವ ಯಾವುದೇ ವಿದ್ಯಮಾನವನ್ನು ಅವರು ಸಹಜವಾಗಿಯೇ ಅಧರ್ಮವೆಂದು ಕರೆದರು. ಈ ಧರ್ಮಪಾಲನೆಯ ಮಾಧ್ಯಮವಾಗಿರುವ ದೇಹವನ್ನು ನಿರ್ಲಕ್ಷದಿಂದ ನೋಡುವುದನ್ನೂ ಅವರು ಅಧರ್ಮವೆಂದು ಕರೆದರು. ದೇಹ ಮತ್ತು ಅದರ ಒಡೆಯನಾದ ಆತ್ಮ ಅಥವಾ ಒಳದನಿಯನ್ನು ಸ್ವಚ್ಛ ಮತ್ತು ಸುಸ್ಥಿತಿಯಲ್ಲಿಟ್ಟುಕೊಂಡು, ಪ್ರಜೆಗಳು ಸಂಪೂರ್ಣ ನೆಮ್ಮದಿಯಲ್ಲಿರುವ ರೀತಿಯಲ್ಲಿ ಕುಶಲಗೊಂಡ ರಾಷ್ಟ್ರವೇ ನಿಜವಾದ ಸ್ವರಾಜ್ಯ. ಯಂತ್ರ, ರೈಲು, ವಕೀಲಿಕೆ, ಆಸ್ಪತ್ರೆ ಇತ್ಯಾದಿ ಆಧುನಿಕ ನಾಗರೀಕತೆಯ ಫಲಗಳನ್ನು ಅವರು ವಿರೋಧಿಸಿದ್ದು ಈ ನೆಲೆಯಲ್ಲಿಯೇ. ರೈಲು ಮನುಷ್ಯನ ನೆಮ್ಮದಿಯನ್ನು ಕೆಡಿಸುವ ಅನೇಕ ಜಟಿಲತೆಗಳಿಗೆ ಕಾರಣವಾಗಬಲ್ಲ ಅನಗತ್ಯ ವೇಗಕ್ಕೆ, ವಕೀಲಿಕೆ ಮನುಷ್ಯನ ಆತ್ಮಸಾಕ್ಷಿಯ ನಾಶಕ್ಕೆ ಮತ್ತು ಆಸ್ಪತ್ರೆ ದೇಹ ಕುರಿತ ಉಡಾಫೆಗೆ ದಾರಿ ಮಾಡಿಕೊಡುವುದೆಂದು ಅವರು ಭಾವಿಸಿದ್ದರು.

ಗಾಂಧಿ ಮನುಷ್ಯ ತನ್ನ ಹತೋಟಿಯಲ್ಲೇ ಇರುವ ತನ್ನ ಪುಟ್ಟ ಪ್ರಪಂಚದಲ್ಲೇ ತನ್ನ ಈ ಸ್ವರಾಜ್ಯ ಧರ್ಮವನ್ನು ಪಾಲಿಸಬಲ್ಲ ಎಂದು ನಂಬಿದ್ದರು. ಏಕೆಂದರೆ, ಭೌತ ಜಗತ್ತಿಗೆ

ಒಂದು ಮಿತಿ ಮತ್ತು ಸಮತೋಲನವಿರುವುದರಿಂದ ಅವನ ಬದುಕು ಕೂಡಾ ಭೌತಿಕ ನೆಲೆಯಲ್ಲಿ ಒಂದು ಮಿತಿ ಮತ್ತು ಸಮತೋಲನದಲ್ಲಿ ಇರಬೇಕೆಂದು ಗಾಂಧಿ ನಂಬಿದ್ದರು. ಈ ಮಿತಿ ಮತ್ತು ಸಮತೋಲನವನ್ನು ಭಾರತ ತನ್ನ ಗ್ರಾಮ ಕಲ್ಪನೆಯಲ್ಲಿ ಕಂಡುಕೊಂಡಿತ್ತು. ಈ ಮಿತಿ ಮತ್ತು ಸಮತೋಲನವನ್ನು ಕಾಪಾಡಲೆಂದೇ ಅವರು ದೇಸಿ ಕಸುಬುಗಳ ಆರ್ಥಿಕತೆಯನ್ನು ಪ್ರತಿಪಾದಿಸಿ, ತಮ್ಮ ಸ್ವದೇಶಿ ಕಲ್ಪನೆಯನ್ನು ಮುಂದಿಟ್ಟರು. ಇಲ್ಲೂ ಅವರ independent but interdependent ತತ್ವವನ್ನು ಅನ್ವಯಿಸಿ, ಗ್ರಾಮಗಳು ಸ್ವತಂತ್ರವೂ, ಹಾಗೆ ಸ್ವತಂತ್ರವಾಗಿರಲು ಅಂತರ್ಅವಲಂಬಿಯೂ ಆಗಿದ್ದುಕೊಂಡು ರಾಷ್ಟ್ರವನ್ನು ಸ್ವರಾಜ್ಯವನ್ನಾಗಿ ರೂಪಿಸಬಹುದೆಂದು ಅವರು ಭಾವಿಸಿದ್ದರು. ಹೀಗೆ ಗಾಂಧಿಯ 'ಹಿಂದ್ ಸ್ವರಾಜ್' ಎಂದರೆ 'ಗ್ರಾಮ ಸ್ವರಾಜ್ಯ'ವೂ ಹೌದು. ನಗರವೆಂದರೆ, ಗಾಂಧೀಜಿ ಪ್ರಕಾರ ಈ ಮಿತಿ ಮತ್ತು ಸಮತೋಲನಗಳ ಉಲ್ಲಂಘನೆ. ಅವರ ಯಂತ್ರ, ರೈಲು, ವಕೀಲ, ಆಸ್ಪತ್ರೆಗಳ ವಿರೋಧವನ್ನೂ ನಾವು ಈ ನೆಲೆಯಲ್ಲೇ ಅರ್ಥ ಮಾಡಿಕೊಳ್ಳಬೇಕು. ಇವೆಲ್ಲ ಕೂಡಿಕೊಂಡ ನಗರಗಳು ಪಾಪಿನ ಹುತ್ತಗಳಂತೆ ಎಂದಿದ್ದರು ಗಾಂಧಿ. ಇಂದಿನ ನಗರಗಳನ್ನು ನೋಡಿದರೆ ನಮಗಾದರೂ ಏನನ್ನಿಸುತ್ತದೆ?

ಮುಖ್ಯವಾಗಿ ಈ ನೆಲೆಯಲ್ಲಿ ನಾವು 'ಹಿಂದ್ ಸ್ವರಾಜ್' ಮತ್ತು ಇಂದಿನ ರಾಜಕಾರಣದ ನೇರ ಮುಖಾಮುಖಿಯನ್ನು ಕಾಣಬಹುದು. ಏಕೆಂದರೆ, ಇವೊತ್ತಿನ ರಾಜಕಾರಣದ ಸಂಚಲನಾ ಶಕ್ತಿ ನಗರೀಕರಣವೇ ಆಗಿದೆ. ಹೋದ ವರ್ಷ ತಾನೇ ಜಗತ್ತಿನ ನಗರಗಳ ಜನಸಂಖ್ಯೆ ಜಗತ್ತಿನ ಜನಸಂಖ್ಯೆಯ ಅರ್ಧದಷ್ಟನ್ನು ದಾಟಿದೆ. ಭಾರತದ ಮಟ್ಟಿಗೂ ಇದನ್ನು ಆದಷ್ಟು ಬೇಗ ಸಾಧಿಸಲು ಪ್ರಯತ್ನಗಳು ನಡೆದಿವೆ. ಇದೇ ಇಂದಿನ ಅಭಿವೃದ್ಧಿಯ ಗುರಿಯೂ ಕೂಡ ಆಗಿದೆ ಮತ್ತು ಈ ಗುರಿ ಸಾಧನೆಗೇ ಪರಮಾಣು ಇಂಧನದ ತುರ್ತು ಅಗತ್ಯ ಉಂಟಾಗಿರುವುದು ಎಂದು ಹೇಳಲಾಗುತ್ತಿರುವುದು.

ನೆಹರೂ ಅವರಿಂದ ಮಿಶ್ರ ಅರ್ಥವ್ಯವಸ್ಥೆಯ ಹೆಸರಿನಲ್ಲಿ ಹಲವರ ಸಂದಿಗ್ಧತೆಗಳೊಂದಿಗೇ (ಇದರಲ್ಲಿ 'ಪೂರ್ವಕ್ಕೆ ಮುಖ ಪಶ್ಚಿಮಕ್ಕೆ ಪಯಣ'ದ ಅನಂತಮೂರ್ತಿಯವರ ಸಂದಿಗ್ಧವೂ ಸೇರಿದೆ!) ಆರಂಭವಾದ ಈ ನಗರೀಕರಣ ಪ್ರಕ್ರಿಯೆ, ಇಂದು ಮನಮೋಹನ ಸಿಂಗರ ಕಾಲಕ್ಕೆ ನಮ್ಮ ಆರ್ಥಿಕ ನೀತಿಯ ಅಸಂದಿಗ್ಧ ಹಾಗಾಗಿ ಅಂತಿಮ ಗುರಿಯೇ ಆಗಿಬಿಟ್ಟಿದೆ. ಈ ಗುರಿ ಮುಟ್ಟಲೆಂದೇ ಮನಮೋಹನ ಸಿಂಗ್ ಅವರು ಅಮೆರಿಕಾದೊಡನೆಯ ನಾಗರಿಕ ಪರಮಾಣು ಒಪ್ಪಂದಕ್ಕೆ ಸಹಿ ಹಾಕಿರುವುದು. ಈ ಒಪ್ಪಂದ ಒದಗಿಸುವ ಪರಮಾಣು ಇಂಧನವನ್ನು ಅನಿವಾರ್ಯವಾಗಿಸಿರುವ ಈ ನಗರೀಕರಣ ಕಾರ್ಯಕ್ರಮದ ಭಾಗವಾಗಿ, ೨೦೧೫ರ ವೇಳೆಗೆ ಸುಮಾರು ೪೦ ಕೋಟಿ ಭಾರತೀಯರು ಕೃಷಿ ನಿರಾಶ್ರಿತರಾಗಿ ನಗರಗಳೆಡೆಗೆ ಧಾವಿಸಲಿದ್ದಾರೆಂದು ಈ ಕಾರ್ಯಕ್ರಮದ ಕರಡನ್ನು ರೂಪಿಸಿರುವ ವಿಶ್ವಬ್ಯಾಂಕ್ ಅಂದಾಜು ಮಾಡಿದೆ. ಅಂದರೆ ಈ ಕೋಟ್ಯಾಂತರ ಕೃಷಿ ನಿರಾಶ್ರಿತರನ್ನು ನಗರಗಳಲ್ಲಿ ನೆಲೆಗೊಳಿಸಿ ಉದ್ಯೋಗ ಒದಗಿಸಲು ಈ ಪರಮಾಣು ವಿದ್ಯುತ್ ಬೇಕಾಗಿದೆ! ಈ ಒಪ್ಪಂದದ ತಾಂತ್ರಿಕ

ಅಂದರೆ ಪರಮಾಣು ವಿದ್ಯುತ್ ನಿರ್ಮಾಣದ ತಾಂತ್ರಿಕ ಅನಾಹುತಗಳ ಬಗ್ಗೆ ಈಗಾಗಲೇ ಅನೇಕ ಪರಿಣತರು (ಕನ್ನಡ ಪತ್ರಿಕೆಗಳಲ್ಲಿ ಮುಖ್ಯವಾಗಿ ನಾಗೇಶ್ ಹೆಗಡೆಯವರು) ವ್ಯಾಪಕವಾಗಿ ಬರೆದಿದ್ದಾರೆ.

ಅದೇನೇ ಇರಲಿ, ಈ ಬೃಹತ್ ಉದ್ಯೋಗ ನಿರ್ಮಾಣ ಮತ್ತು ಪುರ್ನವಸತಿ ಯೋಜನೆಯೊಂದನ್ನು ವಿಶ್ವ ಬ್ಯಾಂಕ್ ಸಿದ್ಧಪಡಿಸಿದೆಯಂತೆ. ಇದರ ಅಂಗವಾಗಿಯೇ, ಅಂದರೆ ಅವರನ್ನು ನಗರ ಜೀವನಕ್ಕೆ ಮತ್ತು ನಗರ ಉದ್ಯೋಗಗಳಿಗೆ ಹೊಂದಿಸಲು ಈಗ ಎಲ್ಲರಿಗೂ–ಅದೂ ಒಂದನೇ ತರಗತಿಯಿಂದಲೇ–ಇಂಗ್ಲಿಷ್ ಕಲಿಸುವುದು ಅನಿವಾರ್ಯವಾಗಿದೆಯಂತೆ! ಬಹುಶಃ ಈಗ ರಾಷ್ಟ್ರವಿಭಜನೆಯ ಸಂದರ್ಭದಲ್ಲಿ ಕಂಡ ವಲಸೆಗಿಂತ ಅತ್ಯಂತ ಬರ್ಬರವಾದ ವಲಸೆಗೆ ನಾವು ತಯಾರಾಗಬೇಕೆಂದು ತೋರುತ್ತಿದೆ. ಅದು ಧರ್ಮಾಂತೆಯನ್ನಾಧರಿಸಿದ ರಾಜಕಾರಣದ ವಲಸೆಯಾಗಿದ್ದರೆ, ಇದು ಅಂಥ ಅಭಿವೃದ್ಧಿ ರಾಜಕಾರಣವನ್ನಾಧರಿಸಿದ ವಲಸೆಯಾಗಿದೆ. ಆ ವಲಸೆಯ ಪರಿಣಾಮಗಳು ಇಂದೂ ನಮ್ಮನ್ನು ಹಲವು ರೂಪಗಳಲ್ಲಿ ಕಾಡುತ್ತಿದೆ. ಇನ್ನು ಈ ವಲಸೆಯ ಪರಿಣಾಮಗಳು? ರೈತರ ಸರಣಿ ಆತ್ಮಹತ್ಯೆ ಈ ಪರಿಣಾಮಗಳ ಆರಂಭ ಮಾತ್ರವೆಂದು ನಾನು ಭಾವಿಸಿದ್ದೇನೆ.

ಎಲ್ಲ ವಲಸೆಗಳೂ ನಿರಾಶ್ರಿತರನ್ನು ಸೃಷ್ಟಿಸುತ್ತದೆ. ರಾಷ್ಟ್ರ ವಿಭಜನೆಯ ಸಂದರ್ಭದಲ್ಲೂ ಇದನ್ನು ಕಂಡೆವು. ನಂತರ ಮಿಶ್ರ ಅರ್ಥವ್ಯವಸ್ಥೆಯ ಅಭಿವೃದ್ಧಿ ಕಾರ್ಯಕ್ರಮಗಳ ಅಂಗವಾಗಿ ಸೃಷ್ಟಿಯಾದ ಹಲವು ರೀತಿಯ ನಿರಾಶ್ರಿತರನ್ನೂ ನಾನು ಕಾಣುತ್ತಿದ್ದೇವೆ. ಉದಾಹರಣೆಗೆ ಅಣೆಕಟ್ಟು ನಿರಾಶ್ರಿತರು. ಕೇವಲ ಸಾವಿರಾರು ಸಂಖ್ಯೆಯಲ್ಲಿರುವ ಈ ನಿರಾಶ್ರಿತರಿಗೆ ನೀಡಿದ ಮರುವಸತಿಯ ಆಶ್ವಾಸನೆ ಎಷ್ಟರ ಮಟ್ಟಿಗೆ ಈಡೇರಿದೆ; ಈ ವಿಷಯದಲ್ಲಿ ಸರ್ಕಾರ ಎಷ್ಟು ಪ್ರಾಮಾಣಿಕವಾಗಿ ಮತ್ತು ದಕ್ಷವಾಗಿ ವರ್ತಿಸಿದೆ, ಯಾವ ತರಹದ ಸುಳ್ಳು, ಮೋಸ, ತಟವಟಗಳನ್ನು ಎಗ್ಗಿಲ್ಲದೆ ಪ್ರದರ್ಶಿಸುತ್ತಿದೆ ಎಂಬುದನ್ನು ನಾವೀಗಾಗಲೇ ನೋಡಿದ್ದೇವೆ. ಮೇಧಾ ಪಾಟ್ಕರರ ನರ್ಮದಾ ಬಚಾವೋ ಆಂದೋಲನಕ್ಕೆ ಕೊನೆಯೇ ಇಲ್ಲದೆ, ಅದು ಹಲವು ನೆಲೆಗಳಿಗೆ ವಿಸ್ತರಿಸುತ್ತಲೇ ಇರುವಂತಾಗಿದೆ. ಪರಿಸ್ಥಿತಿ ಹೀಗಿರುವಾಗ ಕೋಟ್ಯಾಂತರ ಜನ ನಿರಾಶ್ರಿತರ ಪುರ್ನವಸತಿ ಇನ್ನು ಹೇಗೆ ನಡೆಯಬಹುದೆಂದು ನೀವೇ ಯೋಚಿಸಿ. ಇವರಿಗೆಲ್ಲ ನೀರು, ನೆಲೆ, ವಿದ್ಯುತ್, ವಿದ್ಯೆ, ಉದ್ಯೋಗ, ರಸ್ತೆ ಇತ್ಯಾದಿಗಳನ್ನು ನಮ್ಮ ನಗರಗಳಲ್ಲಿ ಅಥವಾ ಅವುಗಳಿಗೆ ಹೊಂದಿಕೊಂಡಂತೆ ನಿರ್ಮಿಸಲು ಸಾಧ್ಯವೇ? ಇದು ಹೇಗೋ, ಎಂದೋ ಒಂದು ದಿನ ಸಾಧ್ಯ ಎಂದೇ ಇಟ್ಟುಕೊಂಡರೂ, ಆ ಪ್ರಕ್ರಿಯೆಯಲ್ಲಿ ಮತ್ತು ಆ ಹೊತ್ತಿಗೆ ಆಗಿರುವ ವಿವಿಧ ರೂಪದ ಮಾನವೀಯ ದುರಂತಗಳ ಕಲ್ಪನೆಯಾದರೂ ಇವರಿಗಿದೆಯೇ? ಅಭಿವೃದ್ಧಿಯ ಅಂಧತೆ ಎಂದೆನಲ್ಲ, ಅದು ಇದೇ. ಎಂದೋ ಒಂದು ಅನಿರ್ದಿಷ್ಟ ದಿನದಂದು ಯಾರಿಗಾಗಿಯೋ ಸೃಷ್ಟಿಯಾಗಲಿರುವ ಸ್ವರ್ಗಕ್ಕಾಗಿ ಇಂದು ಇನ್ನಾರ ಪಾಲಿಗೋ ನರಕಗಳನ್ನು ಸೃಷ್ಟಿಸುತ್ತಾ ಹೋಗುವುದು! ಇದು ಆಧುನಿಕ ನಾಗರೀಕತೆಯಯಲ್ಲಿ ಅಂತರ್ಗತವಾಗಿರುವ ಹಿಂಸೆ. ಇದು ನಮ್ಮ ಅನುಭವಕ್ಕೇಕೆ ತೀವ್ರವಾಗಿ ಬರುತ್ತಿಲ್ಲವೆಂದರೆ

ನಾವು ಈ ಆಧುನಿಕ ನಾಗರೀಕತೆಯ ತತ್ಕಾಲೀನ ಫಲಾನುಭವಿಗಳು. ನಾವು ಇನ್ನೊಂದು ದಡದಲ್ಲಿ ನಿಂತಷ್ಟೇ ಆ ನರಕಗಳನ್ನು ನೋಡುತ್ತಿದ್ದೇವೆ. ಹೆಚ್ಚೆಂದರೆ ನಮ್ಮ ಪಾಲಿಗೆ ಅದು ಮಾನಸಿಕ ಹಿಂಸೆಯಷ್ಟೆ! ಆಧುನಿಕ ನಾಗರೀಕತೆ, ಜನತೆಯನ್ನು ಹೀಗೆ ಭಾವನಾತ್ಮಕವಾಗಿ ಒಡೆದಿಟ್ಟೇ ತನ್ನ ರಾಜಕಾರಣವನ್ನು ಮುಂದುವರೆಸಿಕೊಂಡು ಹೋಗುವುದು.

ಇದನ್ನು trickle down ಸಿದ್ಧಾಂತದ ಮೇಲೆ ಸಮರ್ಥಿಸಿಕೊಳ್ಳಲಾಗುತ್ತಿದೆ. ಅಂದರೆ, ಶ್ರೀಮಂತರ ಭೋಗದ ಮೇಲೆ ಖರ್ಚು ಮಾಡುವ ಹಣ ಒಂದಲ್ಲ ಒಂದು ದಿನ drop by drop ಕೆಳಕ್ಕೆ ಇಳಿಯುತ್ತಾ ಬಡವರ ಯೋಗಕ್ಕೆ ಕಾರಣವಾಗುವುದಂತೆ! ಇದು ಈ ಅಭಿವೃದ್ಧಿ ಮಾದರಿಯ ಅತ್ಯುತ್ತಮ ಉದಾಹರಣೆಯೆಂದು ಹೇಳಲಾಗುತ್ತಿದ್ದ ಅಮೆರಿಕಾದಲ್ಲೇ ಅಂತಿಮವಾಗಿ ವಿಫಲವಾಗಿದೆ ಎಂಬುದನ್ನು ಅಲ್ಲಿನ ಆರ್ಥಿಕ ತಜ್ಞರೇ ಈಗ ಹೇಳತೊಡಗಿದ್ದಾರೆ. ಇದು ಗೊತ್ತಿದ್ದರೂ ಇದನ್ನು ಒಂದು ಮೋಸ, ಆರ್ಥಿಕ ಅಶ್ಲೀಲತೆ ಎಂದು ಕರೆಯುವ ದೃಷ್ಟಿ ಸ್ಪಷ್ಟತೆ ಮತ್ತು ನೈತಿಕ ಧೈರ್ಯವನ್ನೇ ನಾವು ಕಳೆದುಕೊಂಡಿದ್ದೇವೆ. ಇದನ್ನೇ ಗಾಂಧಿ ರೋಗ ಎಂದು ಕರೆದದ್ದು. ಗುರಿ ಮತ್ತು ಮಾರ್ಗಗಳನ್ನು ಒಡೆದು ದೃಷ್ಟಿ ದೋಷಕ್ಕೆ ಕಾರಣವಾಗುವ ಆಧುನಿಕ ನಾಗರೀಕತೆಯ ರೋಗವಿದು.

ಈ ರೋಗವನ್ನು ನೆಹರೂ ಕಾಲದಿಂದಲೇ ಗುರುತಿಸಿ, ಅದನ್ನು ನಿವಾರಿಸುವ ರಾಜಕಾರಣಕ್ಕೆ ಬದ್ಧವಾದ ಗುಂಪೊಂದು ಗಾಂಧಿ ಸನಿಹದಲ್ಲೇ ಬೆಳೆದಿತ್ತು. ಅದು ಭಾರತೀಯ ಸಮಾಜವಾದಿ ಚಳುವಳಿ. ಇದು ಕೆಲವರ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಆಶಯವುಳ್ಳ ಪಶ್ಚಿಮದ ನಾಗರೀಕತೆಗೆ ಪ್ರತಿಯಾಗಿ ಎಲ್ಲರ ಒಂದು ಸಾಮಾನ್ಯ ಸಭ್ಯ ಜೀವನ ಮಟ್ಟದ ಆಶಯವುಳ್ಳ ನಾಗರೀಕತೆಯನ್ನು ನಿರ್ಮಿಸುವ ರಾಜಕಾರಣವನ್ನು ಕಟ್ಟುವ ಪ್ರಯತ್ನ ಮಾಡಿತ್ತು. ಗಾಂಧಿ ಹೇಗೂ ತಮ್ಮ ರಾಜಕೀಯ ದರ್ಶನವನ್ನು ಅಹಿಂಸಾತ್ಮಕ ಸಮಾಜವಾದ ವೆಂದು ಕರೆದುಕೊಂಡಿದ್ದರಲ್ಲ? ಹಾಗಾಗಿ ನೆಹರೂ ದಾರಿ ತಪ್ಪುತ್ತಿದ್ದಾರೆ ಎಂದು ಗಾಂಧಿಗೆ ಅನಿಸತೊಡಗಿದೆ ಎಂದು ಸಮಾಜವಾದಿಗಳಿಗೆ ಗೊತ್ತಾದೊಡನೆ, ಅವರು ತಮ್ಮ ನೇತೃತ್ವವನ್ನು ಗಾಂಧಿ ವಹಿಸಿಕೊಳ್ಳುವಂತೆ ಕೋರಿದ್ದೂ ಉಂಟು. ಆಗ ಗಾಂಧಿ ಹೇಳಿದ್ದು: 'ನಾನು ಹುಟ್ಟಾ ಸಮಾಜವಾದಿ. ನೀವು ದೇವರು, ಧರ್ಮವನ್ನು ನಂಬಿ ಗ್ರಾಮಗಳಿಗೆ ಬಂದು ದಲಿತರ ಮತ್ತು ಮಹಿಳೆಯರ ನಡುವೆ ಕೆಲಸ ಮಾಡುವುದಾದರೆ, ನಾನು ನಿಮ್ಮ ಪಕ್ಷದ ಅಧ್ಯಕ್ಷನಾಗಲೂ ಸಿದ್ಧ!'

ಆದರೆ ಈ ಸಂದರ್ಭದಲ್ಲಿ ಸಮಾಜವಾದಿ ಪಕ್ಷ, ಗಾಂಧಿ ಕುರಿತು ಅಪಾರ ವೈಯುಕ್ತಿಕ ಗೌರವವಿದ್ದರೂ ತಾತ್ವಿಕವಾಗಿ ಇನ್ನೂ ಮಾರ್ಕ್ಸ್‌ವಾದಿಯಾಗಿದ್ದ ಜಯಪ್ರಕಾಶ್ ನಾರಾಯಣ್ ಮತ್ತು ಅವರಂತೆಯೇ ಚಿಂತಿಸುವ ಭೌತವಾದಿಗಳ ಪ್ರಭಾವದಲ್ಲಿದ್ದ ಕಾರಣದಿಂದಾಗಿ, ಅದು ಗಾಂಧಿಯವರ ದೇವರು ಮತ್ತು ಧರ್ಮಗಳ ನಂಬಿಕೆಗಳನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಯಿತು. ಹೀಗಾಗಿ ಮುಂದೆ ಗಾಂಧಿ ನಂತರವೂ ಸಮಾಜವಾದಿ ಚಳುವಳಿಯು ವೈಚಾರಿಕವಾಗಿ ಗಾಂಧಿ ಭಾವನೆಗೇ ಬದ್ಧವಾಗಿದ್ದರೂ, ತನ್ನ

ರಾಜಕೀಯ ಕಾರ್ಯಶೀಲತೆಯಲ್ಲಿ ಒಂದು ನೆಲೆಯ ವೈರ ಮತ್ತು ಕ್ರೋಧಗಳನ್ನು ಅಳವಡಿಸಿಕೊಂಡಿದ್ದರಿಂದ ಪತಾಶೆಗೆ ಸಿಕ್ಕಿ ಚಿಂದಿ ಚಿಂದಿಯಾಯಿತು. ಆದರ ಸಮಾಜವಾದಿ ಚಳುವಳಿಯ ತಾತ್ವಿಕತೆ, ಹುರುಪು ಮತ್ತು ಬದ್ಧತೆಗಳು ಈಗಲೂ ರಾಷ್ಟ್ರಾದ್ಯಂತ ಹಲವು ಗುಂಪುಗಳ ಹಲವು ರೀತಿಯ ಚಟುವಟಿಕೆಗಳಲ್ಲಿ ವ್ಯಕ್ತವಾಗುತ್ತಲೇ ಇದೆ. ಹೆಗ್ಗೋಡಿನಲ್ಲಿಯೇ ಅಂತಹ ಚಟುವಟಿಕೆಗಳ ಎರಡು ಕೇಂದ್ರಗಳಿವೆ. ಒಂದು ನೀನಾಸಂ. ಇನ್ನೊಂದು ಚರಕ. ಹೀಗಾಗಿ, ನಮ್ಮ ಜನರಲ್ಲಿ 'ಹಿಂದ್ ಸ್ವರಾಜ್'ನ ಭಾವನೆ ಬೀಜ ರೂಪದಲ್ಲಿ ಇನ್ನೂ ಸಂರಕ್ಷಿತವಾಗಿದೆ ಎಂಬ ಬಗ್ಗೆ ಯಾರಿಗೂ ಅನುಮಾನ ಬೇಡ. ಮೊನ್ನೆ ಮಹಾರಾಷ್ಟ್ರದ ರಾಯ್‌ಗಡದ ರೈತರು ಅಲ್ಲಿ ಇಂದಿನ ರಾಜಕಾರಣದ ಹೆಗ್ಗುರುತೆನಿಸಿರುವ ವಿಶೇಷ ಆರ್ಥಿಕ ವಲಯ ಯೋಜನೆಯ ಬಗ್ಗೆ ಜನಮತ ಗಣನೆಯಲ್ಲಿ ಶೇಕಡಾ ೯೧ರ ಮತದೊಂದಿಗೆ ತಿರಸ್ಕರಿಸಿರುವುದೇ ಇದಕ್ಕೆ ದೊಡ್ಡ ಸಾಕ್ಷಿಯಾಗಿದೆ. ಹಾಗಾಗಿ ಇದು ನಮ್ಮ ಇಂದಿನ ರಾಜಕಾರಣ ಎಷ್ಟು ಜನದೂರವಾಗಿ ಜನವಿರೋಧಿಯಾಗಿದೆ ಎಂಬುದನ್ನು ಸೂಚಿಸುತ್ತದೆ. ಅಲ್ಲದೆ, ಸಮಾಜವಾದಿ ಚಳುವಳಿಯ ವೈಫಲ್ಯದ ಕಾರಣಗಳ ಹಿನ್ನೆಲೆಯಲ್ಲಿ ಮುಂದಿನ ರಾಜಕಾರಣ ಹೇಗಿರಬೇಕೆಂಬುದನ್ನೂ ಬೊಟ್ಟುಮಾಡುತ್ತದೆ ಎಂದು ನಾನು ಭಾವಿಸಿದ್ದೇನೆ.

(ಹೆಗ್ಗೋಡಿನಲ್ಲಿ ಇದೇ ಅಕ್ಟೋಬರ್ ೫ರಿಂದ ೧೧ರವರೆಗೆ ನಡೆದ 'ಮನೋಭೂಮಿಕೆಯಲ್ಲಿ ಸ್ವರಾಜ್ಯ' ವಿಷಯವಾಗಿ ನಡೆದ ಸಂಸ್ಕೃತಿ ಶಿಬಿರದಲ್ಲಿ ಮಂಡಿಸಿದ ವಿಚಾರಗಳ ವಿಸ್ತೃತ ರೂಪ, 'ಹೊಸತು'ವಿನ ೨೦೦೮ರ ನವೆಂಬರ್ ಸಂಚಿಕೆಯಲ್ಲಿ ಪ್ರಕಟ)

■

೪೪. ಟೆಲಿವಿಷನ್ ಎಂಬ ಜಾಗತಿಕ ರಾಜಕೀಯ ಸಾಧನ

ದೂರದರ್ಶನ ಭಾರತಕ್ಕೆ ಬಂದು ಅರ್ಧ ಶತಮಾನವಾಗುತ್ತಲಿದ್ದರೂ, ಅದೊಂದು ಜನಪ್ರಿಯ ಮಾಧ್ಯಮವಾಗಿ ಬೆಳೆಯತೊಡಗಿದ್ದು ಹದಿನೈದು ವರ್ಷಗಳಿಂದೀಚೆಗಷ್ಟೇ. ಜಗತ್ತು ಇದ್ದಕ್ಕಿದ್ದಂತೆ ಎಲ್ಲ ಗಡಿ ರೇಖೆಗಳನ್ನೂ ಧಿಕ್ಕರಿಸಲು ನಿರ್ಧರಿಸಿದಂತೆ ತೋರುತ್ತಿರುವ ಪ್ರಸ್ತುತ ಜಾಗತೀಕರಣ ಘಟ್ಟದ ಅಂತಾರಾಷ್ಟ್ರೀಯ ಒಪ್ಪಂದಗಳು ಜಾರಿಯಾಗತೊಡಗಿದ ನಂತರ. ರಾಷ್ಟ್ರೀಯ ಟಿ.ವಿ. ಎನಿಸಿರುವ ದೂರದರ್ಶನ ನಿಧಾನವಾಗಿ ಬಣ್ಣಕ್ಕೆ ತಿರುಗಿ, ೧೯೮೫ರಿಂದ ೧೯೯೫ರವರೆಗೆ ಒಂದು ದಶಕದ ಕಾಲ ತನ್ನ ಸೋಪ್ ಅಪೇರಾಗಳು ಮತ್ತು ರಾಮಾಯಣ-ಮಹಾಭಾರತ-ಚಾಣಕ್ಯ ಇತ್ಯಾದಿ ಮಹಾ ಧಾರಾವಾಹಿಗಳ ಮೂಲಕ ಸರಿ ಸುಮಾರು ಎಲ್ಲ ಮಧ್ಯಮ ವರ್ಗಗಳ ಮನೆಗೆ ಒಂದು ಸಾಂಸ್ಕೃತಿಕ ಸಾಧನವೆಂಬಂತೆ ಟಿ.ವಿ. ಸೆಟ್ಟುಗಳಿಗೆ ಪ್ರವೇಶ ದೊರಕಿಸಿಕೊಟ್ಟಿತು. ತದನಂತರ ಬಂದ ಉಪಗ್ರಹ ಟಿ.ವಿ., ಕಳೆದ ಹತ್ತು ವರ್ಷಗಳಲ್ಲಿ ಭಾರತೀಯ ಬದುಕಿನ ಲಂಗರುಗಳನ್ನೇ ಬದಲಿಸಬಲ್ಲಷ್ಟು ಪ್ರಭಾವಶಾಲಿಯಾಗಿ ಬೆಳೆದಿದೆ. ಹಿಂದೊಮ್ಮೆ ತಿರುಗಿ ನೋಡಿದಾಗ ಈ ಎಲ್ಲ ಬೆಳವಣಿಗೆಗಳು ವ್ಯವಸ್ಥಿತ ಯೋಜನೆಯೊಂದರ ಪ್ರಕಾರವೇ ನಡೆದುವೇನೋ ಎಂದು ಆಶ್ಚರ್ಯಪಡುವಷ್ಟು ಅನುಕ್ರಮಣಿಕೆಯಲ್ಲಿವೆ!

ಟಿ.ವಿ. ಭಾರತಕ್ಕೆ ಬಂದದ್ದು ಮೂಲತಃ ಒಂದು ಶೈಕ್ಷಣಿಕ ಸಾಧನವಾಗಿ. ನಿರ್ದಿಷ್ಟವಾಗಿ ಗ್ರಾಮಾಂತರ ಅಭಿವೃದ್ಧಿಯ ಸಾಧನವಾಗಿ. ದೂರದರ್ಶನಕ್ಕೆ ಇತ್ತೀಚಿನವರೆಗೆ–ಅದು ವಾಣಿಜ್ಯೀಕರಣಕ್ಕೆ ಒಳಗಾಗುವವರೆಗೆ–ಹಣ ಒದಗಿಸುತ್ತಿದ್ದುದು ಗ್ರಾಮಾಂತರ ಅಭಿವೃದ್ಧಿ ಖಾತೆಯೇ ಎಂದು ಕೇಳಿದ್ದೇನೆ. ಭಾರತದ ನವೋದಯ ಸಂದರ್ಭದ ಬಹು ದೊಡ್ಡ ಸಮೂಹ ಸಾಧನವಾಗಿ ಬೆಳೆದ ರೇಡಿಯೋದ ತಮ್ಮನಂತೆ ಹುಟ್ಟಿದ ದೂರದರ್ಶನ, ದೇಶ ಕಟ್ಟುವ ಉಮೇದಿನಲ್ಲಿದ್ದ ಸ್ವಾತಂತ್ರ್ಯೋತ್ತರ ಭಾರತದ ಎಲ್ಲ ಸಮೂಹ ಸಾಧನಗಳಂತೆ (ಖಾಸಗಿ ಸ್ವಾಮ್ಯದ ಪತ್ರಿಕೆಗಳೂ ಸೇರಿದಂತೆ) ಮಾಹಿತಿ, ಮನರಂಜನೆ ಹಾಗೂ ಶಿಕ್ಷಣಗಳನ್ನು ತನ್ನ ಗುರಿಗಳೆಂದು ಘೋಷಿಸಿಕೊಂಡು ತನ್ನ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿತ್ತು. ಆದರೆ, ೧೯೭೭ರಲ್ಲಿ ನಡೆದ ಜಯಪ್ರಕಾಶ್ ನಾರಾಯಣರ ನೇತೃತ್ವದ ಸ್ವಾತಂತ್ರ್ಯೋತ್ತರ ಭಾರತದ ಮೊದಲ ಪೂರ್ಣ ಪ್ರಮಾಣದ ರಾಜಕೀಯ ಸ್ಥಿತ್ಯಂತರ, ಅನೇಕ ಏಳು ಬೀಳುಗಳು ಹಾಗೂ ರೂಪಾಂತರಗಳ ನಂತರ ರಾಷ್ಟ್ರದ ಚಿನ್ನದ ಕಾಪು ದಾಸ್ತಾನನ್ನೆಲ್ಲ ವಿಶ್ವಬ್ಯಾಂಕಿನಲ್ಲಿ ಅಡ

ಇಡಬೇಕಾದ ಪರಿಸ್ಥಿತಿ ಉಂಟಾದ ಚಂದ್ರಶೇಖರ್ ಪ್ರಧಾನ ಮಂತ್ರಿತ್ವದ ಪ್ರಯೋಗದೊಂದಿಗೆ ಅಂತಿಮವಾಗಿ ಅವಸಾನಗೊಂಡಿತಲ್ಲ, ಆಗ ಭಾರತದ ನವೋದಯದ ಆದರ್ಶಗಳನ್ನು ಕುರಿತ ಅಪನಂಬಿಕೆ ಆರಂಭವಾಯಿತು. ಪರ್ಯಾಯ ಆದರ್ಶ-ನಂಬಿಕೆಗಳ ಹುಡುಕಾಟದಲ್ಲಿ ತೊಡಗಿದ ಆ ಸಂದಿಗ್ಧ ಕಾಲದಲ್ಲಿ, ರಾಷ್ಟ್ರ ತನ್ನ ರಾಜಕೀಯ ಒತ್ತಡಗಳಿಂದ ಹೊರ ದಾರಿ ಕಂಡುಕೊಂಡದ್ದು, ದೂರದರ್ಶನದ 'ಪೌರಾಣಿಕ' ಧಾರಾವಾಹಿಗಳ ಮೂಲಕ!

ಅರ್ಥಾತ್, ಸ್ವತಂತ್ರ ಭಾರತದ 'ಸೆಕ್ಯುಲರ್' ರಾಜಕಾರಣ ಉಂಟು ಮಾಡಿದ ಒತ್ತಡಗಳು ಆ ಹೊತ್ತಿಗೆ ಎಷ್ಟು ಸಂಕೀರ್ಣ ಹಾಗೂ ಶಕ್ತಿಯುತವಾಗಿದ್ದುವೆಂದರೆ, ಅದು ಪೋಷಿಸಿ ಬೆಳೆಸಿದ್ದ ರೇಡಿಯೋದಂತಹ ಸರಳ ಮಾಧ್ಯಮದ ಮೂಲಕ ಅವು ವ್ಯಕ್ತವಾಗಲಾರದೇ ಹೋದವು. ಹಾಗಾಗಿ, ಇನ್ನೂ ಹೊಸ ಮಾಧ್ಯಮವಾಗಿ ರಾಷ್ಟ್ರಕ್ಕೆ ಅಷ್ಟು ಪರಿಚಯವಾಗದಿದ್ದ ದೂರದರ್ಶನದ ಗುರಿ ಮತ್ತು ಮಾರ್ಗಗಳನ್ನೇ ಅವು ಬದಲಿಸಿಬೇಕಾಯಿತು! ಇಷ್ಟು ವರ್ಷ ಸೆಕ್ಯುಲರ್ ರಾಜಕಾರಣದ ನೇತೃತ್ವ ವಹಿಸಿದ್ದ ಕಾಂಗ್ರೆಸ್ ಪಕ್ಷದ ನರಸಿಂಹ ರಾಯರ ಪ್ರಧಾನ ಮಂತ್ರಿತ್ವದ ಕಾಲದಲ್ಲೇ ಈ ದೂರದರ್ಶನ ತನ್ನ ಭೌತಿಕ ವ್ಯಾಪ್ತಿಯನ್ನು ಅಪಾರವಾಗಿ ಬೆಳೆಸಿಕೊಂಡಿತಲ್ಲದೆ, ಸೆಕ್ಯುಲರ್ ರಾಜಕಾರಣದ ಅಸ್ತಿವಾರಗಳೇ ಅಲ್ಲಾಡಿಹೋಗುವಂತಹ ರಾಜಕೀಯ ವಾತಾವರಣವನ್ನು ಸೃಷ್ಟಿಸುವಂತಹ ಆಧುನಿಕ ರಾಜಕೀಯ ಸಾಧನವಾಗಿಯೂ ಪರಿವರ್ತಿತವಾಯಿತು. ಈ ಬೆಳವಣಿಗೆಯನ್ನು, ಸ್ಥೂಲವಾಗಿ ನೋಡಿದಾಗ ರಾಷ್ಟ್ರದ ಅವೈದಿಕ ರಾಜಕಾರಣದ ಹವ್ಯಾಸಿ ಪ್ರಯೋಗದಂತೆ ತೋರುತ್ತಿದ್ದ ಕಾಂಗ್ರೆಸ್, ತನ್ನ ರಾಜಕೀಯ ತಾರ್ಕಿಕ ಅಂತ್ಯವನ್ನು ಕಂಡುಕೊಂಡ ಕಥೆಯನ್ನಾಗಿಯೂ ಗ್ರಹಿಸಬಹುದಾಗಿದೆ. ಅದೇನೇ ಇರಲಿ, ದೂರದರ್ಶನ ಭಾರತದ ರಾಷ್ಟ್ರೀಯ ರಾಜಕಾರಣದ ಒಂದು ಪ್ರಬಲ ಅಂಗವಾಗಿ ಬೆಳೆಯಲಾರಂಭಿಸಿದ ಹೊತ್ತಿನಲ್ಲೇ, ಕಾಕತಾಳೀಯವೆಂಬಂತೆ ಉಪಗ್ರಹ ಟಿ.ವಿ., ಶೀತಲ ಸಮರೋತ್ತರ (ಸೋವಿಯತ್ ಒಕ್ಕೂಟದ ಪತನಾನಂತರದ) ಏಕ ಧ್ರುವ ಜಗತ್ತಿನ (ಅಂತಾರಾಷ್ಟ್ರೀಯ) ರಾಜಕಾರಣದ ಒಂದು ಪ್ರಬಲ ಅಂಗವಾಗಿ ಭಾರತದಲ್ಲಿ ಅವತರಿಸಿತು.

ಇದರಿಂದಾಗಿ ಸರಳವಾಗಿ ಓದುತ್ತ, ಕೇಳುತ್ತ ವಿಕಾಸಗೊಳುತ್ತಿದ್ದ ಸಮಾಜ, ಇದ್ದಕ್ಕಿದ್ದಂತೆ ಎಲ್ಲವನ್ನು 'ಬಣ್ಣ'ದಲ್ಲಿ ನೋಡುತ್ತ ಬೆಳೆಯುವ ಸಮಾಜವಾಗಿ ಪರಿವರ್ತಿತವಾಯಿತು. ಇದರಿಂದಾಗಿ ವೈಯುಕ್ತಿಕ ಹಾಗೂ ಸಾಮಾಜಿಕ ವಿಕಾಸದ ಕೆಲವು ಆಂತರಿಕ ನೆಲೆಗಳೇ–ಕಲ್ಪನೆ, ಪ್ರಶ್ನೆ, ಧ್ಯಾನಶೀಲತೆ, ಪರ್ಯಾಯ ದೃಷ್ಟಿ–ಕಾಣೆಯಾದವು. ಪತ್ರಿಕೆ ಮತ್ತು ರೇಡಿಯೋ, ಪಶ್ಚಿಮದ ಸಂದರ್ಭದಲ್ಲಿ ಪುನರುಜ್ಜೀವನ ಯುಗದ ಮತ್ತು ನಮ್ಮ ಸಂದರ್ಭದಲ್ಲಿ ನವೋದಯ ಯುಗದ ಮಾಧ್ಯಮ ಪ್ರತೀಕಗಳಾಗಿ, ಆ ಯುಗಗಳ ಆಶಯಗಳಿಗನುಗುಣವಾಗಿ ರೂಪುಗೊಂಡಿದ್ದವು. ಭಾರತದಲ್ಲಿ ಪತ್ರಿಕೆಗಳು ಮತ್ತು ರೇಡಿಯೋ ಸಮಾನತೆ, ಸಾಮೂಹಿಕತೆ ಹಾಗೂ ಸರಳತೆಗಳ ನೆಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಅಂದರೆ, ಜನಸಾಮಾನ್ಯರೂ ಯಾವುದೇ ಜಾತಿ-ವರ್ಗಗಳ ಭೇದವಿಲ್ಲದೆ ಸಮಾನವಾಗಿ ತಮ್ಮ ಪ್ರತಿಬಿಂಬಗಳನ್ನು ಇವುಗಳಲ್ಲಿ ಕಂಡುಕೊಳ್ಳುವ ಸಾಧ್ಯತೆಗಳು ತೆರೆದಿದ್ದವು. ಆದರೆ ಹೊಸಯುಗದ ಟಿ.ವಿ., ತನ್ನ

ಹುಟ್ಟಿನಲ್ಲೇ ಮತ್ತು ತನ್ನ ಸ್ವರೂಪದಲ್ಲೇ ಇವೆಲ್ಲವುಗಳನ್ನು ಧಿಕ್ಕರಿಸುತ್ತಲೇ–ಆ ಹೊತ್ತಿಗೆ ಇದಕ್ಕೆ ಪೂರಕವಾದ ರಾಜಕೀಯ ವಾತಾವರಣವೂ ಸೃಷ್ಟಿಯಾಗಿತ್ತು–ಬೆಳೆಯಿತು. ಇದರಿಂದಾಗಿ ಇಂದು ಅದೊಂದು ಏಕಪಕ್ಷೀಯವಾದ, ಖಾಸಗಿ ಹಿತಾಸಕ್ತಿಗಳ, ಅದನ್ನು ನಡೆಸುವವರ ಮತ್ತು ನೋಡುವವರ ಮಧ್ಯೆ ಅಂತರ್ಪ್ರಕ್ರಿಯೆ ಸಾಧ್ಯವೇ ಇಲ್ಲದಂತಹ ಮಾಧ್ಯಮವಾಗಿ ಬೆಳೆದು ನಿಂತಿದೆ. ಅದು ಸರ್ಕಾರದ ಪರೋಕ್ಷ ಅಧೀನದಲ್ಲಿದೆ ಎಂಬ ಕಾರಣಕ್ಕಾಗಿ ಜನತೆಯ ಭಾಗವಹಿಸುವಿಕೆಯ ಸಾಧ್ಯತೆಯಾದರೂ ಇರುವ ದೂರದರ್ಶನ, ಇಂದು ಜಾಗತಿಕ ಟಿ.ವಿ. ಸಾಮ್ರಾಜ್ಯದಲ್ಲಿ ಹೆಚ್ಚೂ ಕಡಿಮೆ ಕಳೆದೇ ಹೋಗಿರುವುದು; ಸ್ವತಃ ಈ ಮಾಧ್ಯಮವೇ ಆಂತರಿಕವಾಗಿ ಯಾವುದೇ ಮಟ್ಟದ ಹಾಗೂ ತೆರನ ಸ್ಥಳೀಯತೆಯ ಮೇಲೆ ಉಳಿಯಲಾಗದ ಮಾಧ್ಯಮವೆಂಬುದನ್ನು ಸಾಬೀತು ಪಡಿಸಿದೆ. ಎಷ್ಟಾದರೂ ಇದು ಜಾಗತಿಕ ಉಪಗ್ರಹ ಸಂಪರ್ಕ ಬೇಡುವ ಮಾಧ್ಯಮವಲ್ಲವೇ?

ಹೀಗೆ ಇಂದು ಟಿ.ವಿ. ಜಾಗತಿಕ ರಾಜಕಾರಣ ಮತ್ತು ಜಾಗತಿಕ ತಂತ್ರಜ್ಞಾನ ಜೋಡಿಯ ಶಿಶುವಾಗಿ, ಜಾಗತಿಕ ಮಾದರಿ ಹಾಗೂ ರೂಪಕಗಳನ್ನು ಸೃಷ್ಟಿಸಿಕೊಂಡಷ್ಟೇ ಬದುಕಬಲ್ಲ ಮಾಧ್ಯಮವಾಗಿದೆ. ಆದರೆ ಇಂದಿನ ಏಕ ಧೃವ ಜಗತ್ತಿನ ಈ ಮಾದರಿ, ರೂಪಕಗಳಾದರೂ ಹೇಗಿದ್ದಾವು? ಅವು ಎಂತಹ ಘನ ತಾಂತ್ರಿಕತೆ ಅಥವಾ ಕಲಾ ಕೌಶಲ್ಯಗಳನ್ನು ಮೆರೆದರೂ, ಅಂತತಃ ಜಾಗತೀಕರಣದ ಜಾಹೀರಾತುಗಳು ಮಾತ್ರ ಆಗಿರಬಲ್ಲವು. ಹಾಗಾಗಿಯೇ ಇಂದು ಟಿ.ವಿ.ಗಳಲ್ಲಿ ಕಾರ್ಯಕ್ರಮ ಹಾಗೂ ಜಾಹೀರಾತುಗಳು ಅಭಿನ್ನವೆಂಬಂತೆ, ಔಚಿತ್ಯ ಪ್ರಜ್ಞೆಯೆಂಬುದೇ ಇಲ್ಲದಂತೆ ಮಿಶ್ರಗೊಳ್ಳುತ್ತ, ಒಂದು ಮಾಧ್ಯಮ ಮಾಯಾ-ಪ್ರತಿ-ಪ್ರಪಂಚವೇ ಸೃಷ್ಟಿಯಾಗಿದೆ. ಈ ಪ್ರತಿ ಪ್ರಪಂಚವೇ ಮೂಲ ಪ್ರಪಂಚದ ತರ್ಕವನ್ನು ನಿರ್ಧರಿಸುವಷ್ಟರ ಮಟ್ಟಿಗೆ! ಇಷ್ಟು ಹೇಳಿದ ಮೇಲೆ ಟಿ.ವಿ.ಯಿಂದ ಸಮಾಜಕ್ಕಾಗುತ್ತಿರುವ ನಷ್ಟಗಳನ್ನು ಪ್ರತ್ಯೇಕವಾಗಿ ದೃಷ್ಟಾಂತ ಅಥವಾ ವಿವರಗಳ ಮೂಲಕ ಹೇಳುವ ಅಗತ್ಯವಿದೆಯೇ? ಆದರೂ, ಪ್ರಪಂಚದೊಳಗಿದ್ದ ಮನೆಯೊಳಕ್ಕೆ-ಭಾರತದ ಮಟ್ಟಿಗೆ ದಿಢೀರನೆ-ಪ್ರಪಂಚವನ್ನೇ ತಂದಿಡುವ ಮೂಲಕ ಟಿ.ವಿ. ಸೃಷ್ಟಿಸಿರುವ ತಾಂತ್ರಿಕ ಬೆರಗಿಗೆ ಮರುಳಾಗಿ ನಾವು ಅದರ ಲಾಭಗಳು ಆತ್ಯಂತಿಕವಾಗಿ ನಷ್ಟಗಳೂ ಆಗುತ್ತಿರುವ ವಿಪರ್ಯಾಸವನ್ನು ಗುರುತಿಸದೇ ಹೋಗುವ ಸಾಧ್ಯತೆ ಇರುವುದರಿಂದ, ಕೆಲವಾದರೂ 'ವಾಸ್ತವಿಕ' ವಿವರಗಳನ್ನು ಇಲ್ಲಿ ನೀಡುವುದು ಉಚಿತವೆನ್ನಿಸುತ್ತದೆ..

ಹಾಗೆ ನೋಡಿದರೆ, ಲಾಭಗಳು ಅನೇಕವಿರುವುದರಿಂದಲೇ ಟಿ.ವಿ. ಕೈಗಾರಿಕೆ ಇಂದು ಸಮೃದ್ಧವಾಗಿ ಬೆಳೆಯುತ್ತಿರುವುದು. ಕನ್ನಡಕ್ಕೇ ಮೂರು ಸುದ್ದಿ ವಾಹಿನಿಗಳೂ ಸೇರಿದಂತೆ, ಹತ್ತು ಟಿ.ವಿ. ವಾಹಿನಿಗಳಿವೆ. ಒಟ್ಟಾರೆ ಇಂದು ಭಾರತದ ಒಂದು ಸಾಮಾನ್ಯ ಪಟ್ಟಣದಲ್ಲಿಯೂ ಸುಮಾರು ನೂರು ವಾಹಿನಿಗಳು ೨೪ ತಾಸುಗಳೂ ಲಭ್ಯವಿವೆ ಎಂದರೆ, ಲಾಭಗಳು ನೋಡುವವರಿಗಷ್ಟೇ ಅಲ್ಲದೆ, ಅವನ್ನು ನಡೆಸುತ್ತಿರುವವರಿಗೂ ಇದೆ ಎಂದೇ ಅರ್ಥ. ಆದರೆ ಈ ಲಾಭಗಳು ಸೃಷ್ಟಿಸುತ್ತಿರುವ ಮನೆ ಮತ್ತು ಸಮಾಜ ಎಂತಹವು ಎಂಬುದರ

ಆಧಾರದ ಮೇಲೇ ಈ ಲಾಭಗಳ ಮೌಲ್ಯೀಕರಣವನ್ನು ಮಾಡಬೇಕಾಗುತ್ತದೆ. ಅಂದರೆ, ೨೪ ತಾಸುಗಳ ಮನರಂಜನೆ ಅಥವಾ ಮಾಹಿತಿಯನ್ನು ಪಡೆಯುವ ಅಗತ್ಯ ಹಾಗೂ ತಡೆದುಕೊಳ್ಳುವ ಶಕ್ತಿ (ಅಥವಾ ಅರ್ಹತೆ?) ನಮ್ಮ ಮನೆಗಳು ಹಾಗೂ ಸಮಾಜಕ್ಕಿದೆಯೇ ಎಂಬುದು ಇಲ್ಲಿ ಬಹು ಮುಖ್ಯ ಪ್ರಶ್ನೆಯಾಗುತ್ತದೆ. ಇದನ್ನು ಒಂದು ಸಣ್ಣ ಉದಾಹರಣೆಯ ಮೂಲಕವೇ ವಿವರಿಸುವುದಾದರೆ, ಸಣ್ಣ ಮಕ್ಕಳಿಗೆ ತುಂಡು ಬಟ್ಟೆ ಉಡಿಸಿ ವಕ್ರವಾಗಿ ಕುಣಿಸಿ ಅಥವಾ ಅವರ ಬಾಯಲ್ಲಿ ಉತ್ಕಟ ಪ್ರಣಯ ಗೀತೆಗಳನ್ನು ಹಾಡಿಸಿ; ಪ್ರತಿಭಾ ಸ್ಪರ್ಧೆ, ಪ್ರೋತ್ಸಾಹಗಳ ಹೆಸರಲ್ಲಿ ಒಂಚೂರೂ ಎಗ್ಗಿಲ್ಲದೆ, ಸಹಜವಾಗಿ ಆನಂದಿಸುವ ಮಾನಸಿಕತೆಯನ್ನು ನಮ್ಮ ತಂದೆ ತಾಯಂದಿರಲ್ಲಿ ಈ ವಾಹಿನಿಗಳು ಉಂಟು ಮಾಡಿವೆ. ಈ ಸಂಗತಿಯ ಹಿಂದಿನ ಸೂಕ್ಷ್ಮ ನೈತಿಕ ಪ್ರಶ್ನೆಯು ಇವುಗಳ ಲಾಭದ ಇನ್ನೊಂದು ಮುಖವನ್ನೂ ಸೂಚಿಸುತ್ತಿದೆ ಎಂಬುದನ್ನೂ ಗಮನಿಸಿಯೇ, ನಾವು ಇಂದಿನ ಈ ಮಾಧ್ಯಮದ ಒಟ್ಟಾರೆ ಮೌಲ್ಯೀಕರಣವನ್ನು ಮಾಡಬೇಕಾಗುತ್ತದೆ.

ಮೊದಲು, ವಾಹಿನಿಗಳ ಈ ತೆರನ ಸಮೃದ್ಧಿ, ಅವು ಹುಟ್ಟಿಸಿರುವ ಸ್ಪರ್ಧಾತ್ಮಕತೆಯಿಂದಾಗಿಯೇ ಅವುಗಳ ಮಾಧ್ಯಮ ಗುಣಮಟ್ಟವನ್ನು ಹೇಗೆ ಸರಾಸರಿಗೊಳಿಸಿದೆ ಹಾಗೂ ಅವುಗಳ ವೃತ್ತಿಪರತೆ ಮತ್ತು ದೃಷ್ಟಿ ಕೇಂದ್ರಗಳನ್ನು ಎಷ್ಟರ ಮಟ್ಟಿಗೆ ವಿಚಲಿತಗೊಳಿಸಿದೆ ಎಂಬುದನ್ನೂ ನಾವು ಗಮನಿಸಬೇಕು. ಈಗ ಒಮ್ಮೆಗೇ ತೆರೆಯ ಮೇಲೆ ಮುಖ್ಯ ಚಿತ್ರ, ಅದಕ್ಕೆ ಸಂಬಂಧಪಟ್ಟ ಧ್ವನಿ, ಪರಿಣಾಮ ಸಂಗೀತ, ಎರಡೂ-ಒಮ್ಮೊಮ್ಮೆ ಮೂರೂ-ಕೆಳ ಮೂಲೆಗಳಲ್ಲಿ (ನಾಲ್ಕನೆಯದರಲ್ಲಿ ವಾಹಿನಿಯ ಲಾಂಛನವಿರುತ್ತದಲ್ಲ!) ಸಣ್ಣ ಚಿತ್ರ ಸಹಿತ ಜಾಹೀರಾತು (ಅದೂ ಚಲನೆಯಲಿದ್ದು ಕಣ್ಣನ್ನೂ, ಮನಸ್ಸನ್ನೂ ಕುಕ್ಕುತ್ತಿರುತ್ತದೆ!) ಮತ್ತು ಅಥವಾ ದೈನಿಕ ಮಾಹಿತಿ, ಕೆಳಗೆ ಅಕ್ಷರ ರೂಪದ ಜಾಹೀರಾತುಗಳು, ಅದರ ಕೆಳಗೆ ದಿನದ ಇತರ ವಾರ್ತೆಯ ಮುಖ್ಯಾಂಶಗಳು–ಇಷ್ಟನ್ನೂ ಕೊಡುವ ವಾಹಿನಿಗಳು ನೋಡುಗನನ್ನು ಏನೆಂದು ಭಾವಿಸಿವೆ, ಅವನಿಂದ ಎಂತಹ ಪ್ರತಿಸ್ಪಂದನವನ್ನು ನಿರೀಕ್ಷಿಸುತ್ತವೆ ಮತ್ತು ಅವು ತಮ್ಮ ಮಾಧ್ಯಮ ಉದ್ದೇಶಗಳ ಬಗ್ಗೆ ಎಷ್ಟು ಪ್ರಾಮಾಣಿಕವಾಗಿವೆ ಅಥವಾ ಗಂಭೀರವಾಗಿವೆ ಎಂಬುದನ್ನೂ ನಾವು ಯೋಚಿಸಬೇಕು. ನಮ್ಮ ಸುದ್ದಿ ವಾಹಿನಿಗಳಲ್ಲಿ 'ಚುಂಚನ ಕಟ್ಟೆಯಲ್ಲಿ ರಥೋತ್ಸವ ಆರಂಭವಾಗಿದೆ' ಎಂಬುದೂ 'ಸುದ್ದಿ ಸ್ಫೋಟ'ವಾಗುವುದೆಂದರೆ, ಅವು ಸುದ್ದಿಯನ್ನು ಯಾವ ಮಟ್ಟಕ್ಕೆ ಇಳಿಸಿರಬೇಕು, ಯೋಚಿಸಿ! ಮಾಹಿತಿ ನೀಡಬೇಕಾದ ಸುದ್ದಿ, ಜನಪ್ರಿಯತೆಯ ವಾಣಿಜ್ಯಕ್ಕೆ ಸಿಕ್ಕಿ, ಮನರಂಜನೆಯ 'ಸ್ಟೋರಿ'ಯಾಗಿರುವುದರ ದುರಂತವಿದು. ಹಾಗಾಗಿಯೇ ಮೊನ್ನೆ ಕನ್ನಡದ ವಾಹಿನಿಯೊಂದು, ಸುದ್ದಿಗೆ ಹೊಸ ರೂಪ ಕೊಡಬಲ್ಲ ಹಾಗೂ ಅದನ್ನು 'ವಾವ್' ಎನ್ನುವ ರೀತಿಯಲ್ಲಿ ಪ್ರಸ್ತುತ ಪಡಿಸಬಲ್ಲ ಸುದ್ದಿಗಾರರ ತಲಾಷ್‌ನಲ್ಲಿರುವುದಾಗಿ ಜಾಹೀರಾತು ನೀಡುತ್ತಾ, ತನ್ನ ವೃತ್ತಿಪರತೆಯನ್ನು ಪುನರ್‌ನಿರೂಪಿಸಿಕೊಳ್ಳುತ್ತಿದ್ದುದು ಕುತೂಹಲ ಹುಟ್ಟಿಸುವಂತಿತ್ತು!

ಇನ್ನು, ವಿಜ್ಞಾನ ಮತ್ತು ಕ್ರೀಡಾ ವಾಹಿನಿಗಳು ಉಪಯುಕ್ತವಾಗಿ ಕಾಣುತ್ತಿದ್ದರೂ, ಅವುಗಳ ಹಣಕಾಸು ಮತು ಅವುಗಳ ಕಾರ್ಯಕ್ರಮ ಪ್ರಸ್ತುತೀಕರಣದ ವ್ಯಾಕರಣ ಹಾಗೂ

ವಾಕ್ಯರಚನೆಗಳು, ಸುದ್ದಿ ಮತ್ತು ಮನರಂಜನೆ(ಇವು ಇಂದು ಬೇರೆ ಬೇರೆಯೇ?)ಯ ಜಾಗತಿಕ ಟಿ.ವಿ. ಸಾಮ್ರಾಜ್ಯ ರೂಢಿಸಿ ಕೊಟ್ಟಿರುವ ವ್ಯಾಕರಣ ಹಾಗೂ ವಾಕ್ಯರಚನೆಗಳನ್ನೇ ಅವಲಂಬಿಸಿ, ಅನುಸರಿಸುತ್ತಿವೆ. ಆದುದರಿಂದ, ಈ ಉಪಯುಕ್ತತೆಯೂ ದೀರ್ಘಕಾಲಿಕ ದೃಷ್ಟಿಯಿಂದ–ಆಧುನಿಕ ನಾಗರೀಕತೆ ತನ್ನ ಅಂತಿಮ ಗುರಿ ಎಂದು ಹೇಳಿಕೊಂಡ ವ್ಯಕ್ತಿ ಸ್ವಾಯತ್ತತೆಯ ದೃಷ್ಟಿಯಿಂದ–ಅನುಮಾನಾಸ್ಪದವೇ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ, ಟಿ.ವಿ.ಯನ್ನು, ಅಂತರ್ಜಾಲ(ಇಂಟರ್‌ನೆಟ್)ದ ವಿಸ್ತರಣೆಯ ಮೂಲಕ ಪ್ರಜಾಸತ್ತಾತ್ಮಕವಾಗಿ ಬಳಗಿಸಲು ಸಾಧ್ಯ ಎಂದು ಪಾಶ್ಚಾತ್ಯ ಸಮೂಹ ಮಾಧ್ಯಮ ತಜ್ಞರು ಇತ್ತೀಚೆಗೆ ಹೇಳತೊಡಗಿದ್ದಾರೆ. ಅವರ ಪ್ರಕಾರ ಅಂತರ್ಜಾಲಕ್ಕೆ ವೈಯುಕ್ತಿಕ ಹಾಗೂ ಸಾಮೂಹಿಕ ಪ್ರಯತ್ನಗಳೆರಡರ ನೆಲೆಯಲ್ಲೂ ಸುಲಭ ಪ್ರವೇಶ ಸಾಧ್ಯವಿದೆ. ಹಾಗಾಗಿ, ಇಂತಹ ಪ್ರವೇಶಗಳ ಮೂಲಕ ಸಾಮಾನ್ಯ ಜನತೆ ಕೂಡಾ ಭಾಗವಹಿಸಬಲ್ಲ ವೆಬ್ ಸೈಟ್‌ಗಳು ಸ್ಥಾಪನೆಯಾಗಿ, ಟಿ.ವಿ.ಯ ಕಾರ್ಪೊರೇಟ್‌ಶಾಹಿ ರಾಜಕಾರಣ ದುರ್ಬಲಗೊಳ್ಳುತ್ತದೆ ಎಂಬುದು ಇವರ ನಿರೀಕ್ಷೆ. ಆದರೆ ಭಾರತದಂತಹ ಅಭಿವೃದ್ಧಿಶೀಲ ಹಾಗೂ ಕಂಪ್ಯೂಟರ್ ಅನಕ್ಷರಸ್ಥ ದೇಶದಲ್ಲಿ ಅಂತರ್ಜಾಲದ ವ್ಯಾಪ್ತಿ ಹಾಗೂ ಬಳಕೆ ನಿಕಟ ಭವಿಷ್ಯದಲ್ಲಂತೂ ಟಿ.ವಿ.ಜಾಲದ ಎದುರು ನಗಣ್ಯವಾಗಿಯೇ ಉಳಿಯಲಿದೆ. ಮುಂದಿನ ದಿನಗಳಲ್ಲಿ ಅಂತರ್ಜಾಲದ ವ್ಯಾಪ್ತಿ ಮತ್ತು ಬಳಕೆ ಗಣನೀಯವಾಗಿ ಹೆಚ್ಚುವುದೆಂದು ಭಾವಿಸೋಣ. ಆದರೂ, ಭಾರತೀಯ ಭಾಷೆಗಳಲ್ಲಿ ಅಭಿವ್ಯಕ್ತಿ ಸುಲಭ ಸಾಧ್ಯವಿರುವ ಸಾಫ್ಟ್‌ವೇರ್ ಆವಿಷ್ಕಾರವಾಗಿ ಜನಪ್ರಿಯವಾಗುವವರೆಗೂ (ಇದಾಗದಂತೆ ತಡೆದಿರುವುದೇ ಟಿ.ವಿ.ಸಾಮ್ರಾಜ್ಯಶಾಹಿಯ ಹಿಂದಿರುವ ಹಿತಾಸಕ್ತಿಯೇ ಆಗಿರುವಾಗ, ಇದು ಸಾಧ್ಯವೇ ಎಂಬ ಪ್ರಶ್ನೆಯೂ ಇದೆ!), ಅಂತರ್ಜಾಲ ಕೂಡಾ ಭಾರತದ ಮಟ್ಟಿಗೆ ಪ್ರಜಾಸತ್ತಾತ್ಮಕ ಅಂತರ್‌ಪ್ರಕ್ರಿಯೆ ಸಾಧ್ಯವಾಗುವಂತಹ ಸಮೂಹ ಮಾಧ್ಯಮವೆನಿಸಿಕೊಳ್ಳಲಾರದು.

ಹಾಗಾದರೆ, ಟಿ.ವಿ.ಸಾಮ್ರಾಜ್ಯಶಾಹಿಯಿಂದ ನಮಗೆ ಬಿಡುಗಡೆಯೇ ಇಲ್ಲವೆ? ಜಾಗತಿಕ ರಾಜಕಾರಣದೊಂದಿಗೆ ನಾವು ಜೋಡಿಸಿಕೊಂಡಿರುವ ರೀತಿ ನೀತಿಗಳನ್ನು ಬದಲಿಸಿಕೊಂಡರೆ ಮಾತ್ರ ಟಿ.ವಿ., ವಿಕೇಂದ್ರೀಕೃತ ರಾಜಕಾರಣದ ಭಾಗವಾಗಿ ಪ್ರಜಾಸತ್ತಾತ್ಮಕ ಸಮೂಹ ಮಾಧ್ಯಮವಾಗಿ ರೂಪುಗೊಳ್ಳುವ ಸಾಧ್ಯತೆ ಇದೆ. ಇಂತಹ ವಿಕೇಂದ್ರೀಕತ ರಾಜಕಾರಣ ಮಾತ್ರ ಟಿ.ವಿ.ಯ ಸದ್ಯದ ಜಾಗತಿಕ ಮಾದರಿಗಳನ್ನು ವಿಸರ್ಜಿಸಿ, ಅದು ಪ್ರಾದೇಶಿಕ ಮಾದರಿಗಳನ್ನು ಆವಿಷ್ಕರಿಸಿಕೊಳ್ಳುವಂತೆ ಒತ್ತಾಯಿಸಬಲ್ಲುದು. ಆಗ ಮಾತ್ರ ಸಾಮುದಾಯಿಕ ಬಳಕೆಯ ತಂತ್ರಜ್ಞಾನ ಹಾಗೂ ಬಂಡವಾಳ ಸಾಧ್ಯತೆಯುಳ್ಳ ಟಿ.ವಿ.ಯ ಕಾರ್ಯ ಮಾದರಿಗಳು ಗೋಚರವಾಗಬಲ್ಲವೇನೋ! ಹಾಗಾಗಿ ನಾವು ಮುಂದಿನ ದಿನಗಳಲ್ಲಿ ಎಂತಹ ರಾಜಕಾರಣವನ್ನು ಮಾಡಲು ಮುಂದಾಗುತ್ತೇವೆ ಎಂಬುದರ ಮೇಲೆ ನಮ್ಮ ಮತ್ತು ಟಿ.ವಿ. ನಡುವಣ ಸಂಬಂಧ ನಿರ್ಧಾರಿತವಾಗುತ್ತದೆ ಎಂದು ಸದ್ಯಕ್ಕೆ ಹೇಳಬಹುದಾಗಿದೆ.

('ದೇಶಕಾಲ' ೨೦೦೮ರ ಜನವರಿ–ಮಾರ್ಚ್ ಸಂಚಿಕೆ)

೪೫. ಬಾಲಗಂಗಾಧರರ ವಿಚಾರಗಳು: ಮೂರು ಪ್ರಶ್ನೆಗಳು ಮತ್ತು ಒಂದು ಉದಾಹರಣೆ

ಬಾಲಗಂಗಾಧರರು ಭಾರತದ ಜಾತಿ ವ್ಯವಸ್ಥೆ ಕುರಿತಂತೆ ಮಂಡಿಸಿರುವ ಹೊಸ ಆಲೋಚನೆಗಳ ಸಂಬಂಧವಾಗಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ನಡೆದಿರುವ ಸಂಶೋಧನೆಗಳ ಬಗ್ಗೆ 'ಸಂವಾದ'ದಲ್ಲಿ ಪ್ರಕಟವಾಗುತ್ತಿರುವ ಲೇಖನ/ಚರ್ಚೆಗಳನ್ನು ಗಮನಿಸಿರುವೆ. ಈ ಸಂಶೋಧನಾ ಯೋಜನೆಯಲ್ಲಿ ಮುಖ್ಯ ಪಾತ್ರ ವಹಿಸಿರುವ ಡಾ|| ಜೆ.ಎಸ್.ಸದಾನಂದ ಮತ್ತು ಡಾ|| ರಾಜರಾಂ ಹೆಗಡೆಯವರು ನನ್ನ ಆಪ್ತ ಗೆಳೆಯರಷ್ಟೇ ಅಲ್ಲ, ನಾನು ಬಹುವಾಗಿ ಗೌರವಿಸುವ ಸಂಶೋಧಕರು ಕೂಡಾ. ಇವರಿಬ್ಬರೂ ತಂತಮ್ಮ ಕ್ಷೇತ್ರಗಳಲ್ಲಿ ಮಾಡಿರುವ ಸಂಶೋಧನಾ ಕಾರ್ಯವನ್ನು ಗಮನಿಸಿರುವ ಯಾರೂ ಇವರ ಅಕೆಡೆಮಿಕ್ ಪ್ರಾಮಾಣಿಕತೆಯನ್ನು ಪ್ರಶ್ನಿಸಲಾರರು.

ಆದರೂ, ಇವರ ನೇತೃತ್ವ ಅಥವಾ ಮಾರ್ಗದರ್ಶನದ ಈ ಸಂಶೋಧನಾ ಯೋಜನೆ ಮತ್ತು ಸಂಬಂಧಿತ ಸಂಶೋಧನಾ ಕೇಂದ್ರವೊಂದರ ಸ್ಥಾಪನೆ ಕುರಿತಾಗಿ ಸೃಷ್ಟಿಯಾಗಿರುವ ಹಲವು ನೆಲೆಗಳ ವಿವಾದಗಳಿಗೆ, ಹಲವು ರೀತಿಯ ಕಾರಣಗಳಿದ್ದಂತೆ ತೋರುತ್ತದೆ. ನಾಲ್ಕೈದು ವರ್ಷಗಳ ಹಿಂದೆ ರಾಜಾರಾಂ ಹೆಗಡೆ ಮತ್ತು ನನಗೆ ಪರಮಾಪ್ತ ಮಿತ್ರರಾದ ಒಬ್ಬರು ನನ್ನ ಬಳಿ ಆತಂಕದಿಂದ 'ಏನ್ರೀ, ಈ ಹೆಗಡೆ ಮತ್ತವರ ಗೆಳೆಯರು ಜಾತಿ ವ್ಯವಸ್ಥೆಯೆಂಬುದೇ ಸುಳ್ಳು ಅಂತ ವಾದಿಸತೊಡಗಿದ್ದಾರಂತಲ್ರೀ!' ಎಂದು ಹೇಳಿದಾಗಿನಿಂದ ನಾನು ಆ ಬಗ್ಗೆ ಕುತೂಹಲಿತನಾಗಿ ಹೆಗಡೆ ಮತ್ತು ಸದಾನಂದರೊಂದಿಗೆ ನಿರಂತರ ಸಂವಾದದಲ್ಲಿದ್ದೇನೆ. ಈ ಮಧ್ಯೆ ಹೆಗಡೆಯವರು ನನ್ನ ಆಸಕ್ತಿ ಗಮನಿಸಿ ಬಾಲಗಂಗಾಧರರ ಹೊಸ ಜಾತಿ ಮೀಮಾಂಸೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿರುವ ಸಾಹಿತ್ಯವನ್ನು ನನಗೆ ಒದಗಿಸಿ ಉಪಕಾರ ಮಾಡಿದ್ದಾರೆ. ನಾನು ಅದೆಲ್ಲವನ್ನೂ ಸಂಪೂರ್ಣವಾಗಿ ಓದಿಕೊಂಡಿಲ್ಲವಾದರೂ, ಬಾಲಗಂಗಾಧರರ ವಾದವನ್ನಂತೂ ಸಹಾನುಭೂತಿಯಿಂದ ಗ್ರಹಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆಂದು ಹೇಳಬಲ್ಲೆ. ನಂತರ 'ಸಂವಾದ'ದ ಕಳೆದೆರಡು-ಮೂರು ಸಂಚಿಕೆಗಳಲ್ಲಿ ಈ ಸಂಶೋಧನಾ ಯೋಜನೆ ಬಗ್ಗೆ ಪ್ರಕಟವಾದ ಭಿನ್ನಮತದ ಲೇಖನಗಳು ಮತ್ತು ಅವುಗಳಿಗೆ ಕಿರಣ್ ಗಾಜನೂರು ಹಾಗೂ ಡಾ|| ಎ.ಷಣ್ಮುಖ ಅವರು ನೀಡಿದ ವಿವರಣೆಗಳು ಮತ್ತು ಸ್ಪಷ್ಟೀಕರಣಗಳು ನನ್ನ ಗ್ರಹಿಕೆಯನ್ನು ಇನ್ನಷ್ಟು ವಿಸ್ತರಿಸಿವೆ. ಆದರೆ ಬಾಲ ಗಂಗಾಧರರ

ಸಮಾಜಶಾಸ್ತ್ರೀಯ ಅಧ್ಯಯನದ ಹಿಂದಿನ ಮೂಲ ನಂಬಿಕೆಗಳು ಮತ್ತು ಅದರ ಸ್ವರೂಪದ ಬಗ್ಗೆ ನನ್ನ ಹಲವು ಅನುಮಾನಗಳು ಮತ್ತು ಪ್ರಶ್ನೆಗಳು ಉಳಿದೇ ಇವೆ.

ಮೊದಲಾಗಿ, ನಾನು ಇತ್ತೀಚಿನ ವರ್ಷಗಳಲ್ಲಿ ನಮ್ಮ ಸಾಮಾಜಿಕ ನ್ಯಾಯ ಚಳುವಳಿಯು ಜಾತಿ ವಿನಾಶಕ್ಕೆ ಬದಲಾಗಿ ಜಾತಿ ಸಮಾನತೆಯನ್ನು ತನ್ನ ಗುರಿಯನ್ನಾಗಿ ಮಾಡಿಕೊಂಡು ತಳೆಯುತ್ತಿರುವ ರೂಪಗಳನ್ನು ಗಮನಿಸುತ್ತಿದ್ದಂತೆ, ಜಾತಿ ವ್ಯವಸ್ಥೆ ಕುರಿತಂತೆ ನಾವು ಕಟ್ಟಿಕೊಂಡು ಬಂದ ಸಂಕಥನದಲ್ಲಿಯೇ ಏನೋ ಮೂಲ ದೋಷವಿದೆ ಎಂಬ ಅನುಮಾನ ನನ್ನಲ್ಲಿ ಎದ್ದಿತ್ತು. ನಾನು ಅದರ ಬಗ್ಗೆ ಹಲವೆಡೆ ಬರೆದಿದ್ದೇನೆ ಕೂಡಾ. ಈ ಹಿನ್ನೆಲೆಯಲ್ಲಿ ನಾನು ಬಾಲಗಂಗಾಧರರ ಮೀಮಾಂಸೆಯಲ್ಲಿ ನನ್ನ ಅನುಮಾನಕ್ಕೇನಾದರೂ ಪರಿಹಾರ ಸಿಕ್ಕೀತೇ ಎಂದು ವಿವರವಾಗಿ ನೋಡಿದ್ದೇನೆ. ಆದರೆ ಭಾರತದಲ್ಲಿ ಜಾತಿಗಳಿವೆ; ಆದರೆ ಜಾತಿ ವ್ಯವಸ್ಥೆಯೆಂಬುದಿಲ್ಲ ಎಂಬ ಅವರ 'ಹೈಪಾಥಿಸಿಸ್'ನಿಂದ ನಿರಾಶನಾಗಿದ್ದೇನೆ.

ಡಾ॥ ಷಣ್ಮುಖ ಅವರು ಈ ಸಂಶೋಧನಾ ಯೋಜನೆಯ ಬಗೆಗಿನ ವಾದ-ವಿವಾದಗಳನ್ನು ಕುರಿತಂತೆ ಅದರ ವಕ್ತಾರರಾಗಿ 'ಸಂವಾದ'ದಲ್ಲಿ ಸ್ಪಷ್ಟೀಕರಣಗಳನ್ನು ನೀಡುತ್ತಿದ್ದಾರೆ. ಆದರೆ ಈ ಯೋಜನೆಯ ಬಗ್ಗೆ ಹಲವು ವಲಯಗಳಲ್ಲಿ ಏಳುತ್ತಿದ್ದ ಬಿರುಗಾಳಿಯ ತೀವ್ರತೆಯನ್ನು ಆರಂಭದಲ್ಲೇ ಗಮನಿಸಿದ್ದ ನಾನು ಸುಮಾರು ಒಂದು ವರ್ಷದ ಹಿಂದೆಯೇ ಡಾ॥ ಸದಾನಂದ ಅವರಿಗೆ, ಅನೇಕ ತಪ್ಪು ಅಭಿಪ್ರಾಯಗಳು ಮತ್ತು ಅನುಮಾನಗಳು ಹುಟ್ಟಿ ಇಡೀ ಯೋಜನೆಯ ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಗಳು ಅನಗತ್ಯವಾಗಿ ಪ್ರಶ್ನಾರ್ಹವಾಗುವ ಮೊದಲೇ ಅವನ್ನು ನಿವಾರಿಸಿಕೊಳ್ಳಲು ಒಂದು ಮಾರ್ಗ ಸೂಚಿಸಿದ್ದೆ. ಈ ಸಂಶೋಧನಾ ಯೋಜನೆಯ ವಸ್ತುವಿನ ಬಗ್ಗೆಯೇ ಬೇರೆ ಬೇರೆ ನೆಲೆಗಳಲ್ಲಿ ಚಿಂತಿಸುತ್ತಿರುವ, ಅಧ್ಯಯನ ಮಾಡುತ್ತಿರುವ ಮತ್ತು ಕೆಲಸ ಮಾಡುತ್ತಿರುವ ಕೆಲವು ಮುಖ್ಯರೊಂದಿಗೆ ಒಂದು ಸಂವಾದ ಕಾರ್ಯಕ್ರಮ ಏರ್ಪಡಿಸಿಕೊಂಡು, ಅವರು ವ್ಯಕ್ತಪಡಿಸುವ ಭಿನ್ನಾಭಿಪ್ರಾಯ, ನೀಡುವ ಮಾಹಿತಿ ಹಾಗೂ ಒಳನೋಟಗಳಿಂದ ನಿಮ್ಮ ಸಂಶೋಧನೆಗೆ ಸಹಾಯವನ್ನೇ ಪಡೆದುಕೊಳ್ಳಬಹುದು ಎಂಬುದು ನನ್ನ ಸಲಹೆಯಾಗಿತ್ತು. ಆ ಮೂಲಕ ಯೋಜನೆ ಕುರಿತ ತಾತ್ವಿಕ ಹಾಗೂ ವ್ಯಾವಹಾರಿಕ ಅನುಮಾನಗಳಲ್ಲಿ ಕೆಲವಾದರೂ ಪರಿಹಾರವಾದಾವು ಎಂಬ ನಿರೀಕ್ಷೆಯೂ ಈ ಸಲಹೆಯಲ್ಲಿ ಸೇರಿತ್ತು. ಆದರೆ ಏಕೋ ಏನೋ ಸದಾನಂದ ಅವರು ಈ ಬಗ್ಗೆ ಗಂಭೀರವಾಗಿ ಆಲೋಚಿಸಲಿಲ್ಲ.

ಅದೇನೇ ಇರಲಿ, ಜಾತಿ ಇದೆ, ಜಾತಿ ತಾರತಮ್ಯವೂ ಇದೆ; ಆದರೆ ಜಾತಿ ವ್ಯವಸ್ಥೆ ಎಂಬುದಿಲ್ಲ ಎಂಬುದು ತಮ್ಮ ವಾದವಾಗಿದೆ ಎಂದು ಷಣ್ಮುಖ ಹೇಳುತ್ತಾರೆ. ಹೀಗೆ ಹೇಳಲು ಅವರಿಗಿರುವ ಕಾರಣವೆಂದರೆ, ಜಾತಿ ವ್ಯವಸ್ಥೆಯನ್ನು ಗುರುತಿಸುವ ಎಲ್ಲ ವಾದಗಳೂ ಕ್ರಿಶ್ಚಿಯನ್ ದೈವಶಾಸ್ತ್ರದ 'ರಿಲಿಜಿಯನ್' ಪರಿಕಲ್ಪನೆಯನ್ನು ಆಧರಿಸಿದ ವಸಾಹತೀಕೃತ ವಿಚಾರಧಾರೆಯಿಂದ ಮೂಡಿದುವಾಗಿವೆ ಮತ್ತು ಅವು ಮೂಲ ಸಮಾಜಶಾಸ್ತ್ರೀಯ

ತತ್ವಗಳನ್ನು ಉಲ್ಲಂಘಿಸುತ್ತವೆ ಎಂಬುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ನನ್ನ ಮೂರು ಮುಖ್ಯ ಪ್ರಶ್ನೆಗಳು ಇವು:

೧. ಜಾತಿ ಇದ್ದು, ಜಾತಿ ತಾರತಮ್ಯಗಳೂ ಇವೆ ಎಂದು ನೀವು ಒಪ್ಪಿಕೊಳ್ಳುವುದಾದರೆ, ನಿಮ್ಮ ಪ್ರಕಾರ ಈ ತಾರತಮ್ಯಗಳು ಸೃಷ್ಟಿಯಾದ mechanism ಆದರೂ ಯಾವುದು ಎಂದು ನೀವು ಯೋಚಿಸಬೇಕಲ್ಲವೆ? ಅದನ್ನು ನೀವು ಏನೆಂದು ಕರೆಯುವಿರಿ? ಕಾಲಕ್ರಮದಲ್ಲಿ ಈ mechanismನ ತಂತ್ರ ಮತ್ತು ಅದಕ್ಕೆ ತಕ್ಕ ಹಾಗೆ ಅದರ ರೂಪ ಬದಲಾಗುತ್ತಾ ಹೋದ ಮಾತ್ರಕ್ಕೆ ಅದರ ಹಿಂದಿನ ರಾಜಕೀಯ ವಿನ್ಯಾಸವನ್ನು ಅಲ್ಲಗೆಳೆಯಲಾಗುವುದೇ?

೨. 'ರಿಲಿಜಿಯನ್'ನ ಕಲ್ಪನೆಯೇ ಭಾರತೀಯ ಸಂದರ್ಭಕ್ಕೆ ಅನ್ವಯವಾಗದೆ ಇಲ್ಲಿನ ಸಂಸ್ಕೃತಿ ಅಧ್ಯಯನಕ್ಕೆ ಅಸಂಗತವಾಗುವುದಾದರೆ, ಅದೇ ಕಾರಣದಿಂದ, ಇಲ್ಲಿ ನೀವು ಯಾವುದರ ಘನತೆಯನ್ನು ಎತ್ತಿಹಿಡಿಯುವ ಪ್ರಯತ್ನ ಮಾಡುತ್ತಿದ್ದೀರೋ ಆ ಸಮಾಜಶಾಸ್ತ್ರ ಕಲ್ಪನೆಯೂ ಅಸಂಗತವಾಗುವುದಲ್ಲವೆ? ನಮ್ಮ ಸಮಾಜಶಾಸ್ತ್ರೀಯ ಅಧ್ಯಯನಗಳ ಮಾಧ್ಯಮ ಬಹುಪಾಲು ಇಂಗ್ಲಿಷೇ ಆಗಬೇಕಾಗಿ ಬಂದಿರುವುದು;ಒಂದೊಮ್ಮೆ ಅದು ಅನಿವಾರ್ಯವಾಗಿ ಕನ್ನಡವಾಗಬೇಕಾಗಿ ಬಂದಾಗಲೂ, ಅದು ತನ್ನ ಭಾಷಾ ಜಾಯಮಾನದಲ್ಲಿ ಇಂಗ್ಲಿಷಿನಂತೆಯೇ ಇರುವುದು (ಹಾಗಾಗಿಯೇ ಈ ಸಂಶೋಧಕರು ಕನ್ನಡದಲ್ಲಿ ಬರೆದ ಕೆಲವು ವಾಕ್ಯಗಳ ಅರ್ಥ ಸಾಂಗತ್ಯದ ಬಗ್ಗೆ ತಮಗೇ ವಿಶ್ವಾಸವಿಲ್ಲದೆ, ಅದರ ಇಂಗ್ಲಿಷ್ ಮೂಲವನ್ನು ಪಕ್ಕದಲ್ಲಿಯೇ ಕೊಟ್ಟು ವಿವರಿಸಬೇಕಾದ ಇಕ್ಕಟ್ಟಿಗೆ ಸಿಕ್ಕಿರುವುದು!) ಇದೇ ಕಾರಣಕ್ಕಲ್ಲವೆ?

೩. ಜಾತಿ(ವ್ಯವಸ್ಥೆ)ಯನ್ನು ವಸಾಹತೀಕೃತ ಚಿಂತನೆಗಳ ಮೂಲಕ ಅರ್ಥಮಾಡಿಕೊಳ್ಳುವ ಅಸಂಗತತೆಗೆ ಪರ್ಯಾಯವಾಗಿ; ಇಲ್ಲಿಂದ ಬೆಲ್ಜಿಯಂಗೆ ವಲಸೆ ಹೋಗಿ ಅಲ್ಲಿ ಭಾರತದ ಜಾತಿ ವ್ಯವಸ್ಥೆ ಬಗ್ಗೆ ಅಧ್ಯಯನ ಕೈಗೊಂಡು, ಅದನ್ನು ಭಾರತದಲ್ಲಿ ವಿಸ್ತರಿಸಲು ಅಲ್ಲಿಂದ ಹಣವನ್ನೂ ವ್ಯವಸ್ಥೆಮಾಡುವ ಬಾಲಗಂಗಾಧರರ ಚಿಂತನೆ ಮತ್ತು ಕ್ರಿಯಾಶೀಲತೆಗಳಿಂದ ನೀವು ಆಕರ್ಷಿತರಾಗುತ್ತೀರಿ. ಆದರೆ, ಹಿಂದೂ ಧರ್ಮವನ್ನು 'ರಿಲಿಜಿಯನ್' ಪರಿಕಲ್ಪನೆಯಿಂದ ಹೊರಗಿಟ್ಟೇ ಅರ್ಥೈಸಿಯೂ ಜಾತಿ ಪದ್ಧತಿ ವಿರುದ್ಧ ಕಾರ್ಯಕ್ರಮ ರೂಪಿಸಬೇಕಾಗಿ ಬಂದ ಗಾಂಧಿ ನೋಟ ಕ್ರಮದ ಕಡೆ ಏಕೆ ನಿಮಗೆ ಗಮನ ಹರಿಸಲಾಗಿಲ್ಲ?

ವಸಾಹತೀಕೃತ ಚಿಂತನೆಯ ಬಗ್ಗೆ ಆಕ್ಷೇಪಣೆ ಮಾಡುವ ನಿಮ್ಮ ಚಿಂತನೆಯನ್ನು, ನಿಮ್ಮ ಯೋಜನೆಯ ಬಗ್ಗೆ ವ್ಯಕ್ತವಾಗುತ್ತಿರುವ ಅನುಮಾನಗಳ ಆಧಾರದ ಮೇಲೆ ನವವಸಾಹತೀಕೃತ ಚಿಂತನೆ ಎಂದು ಕರೆದರೆ ನಿಮ್ಮ ಪ್ರತಿಕ್ರಿಯೆ ಏನು?

- ೨ -

ಮೊದಲು ನನ್ನಲ್ಲಿ ಅನುಮಾನಗಳಾಗಿ ಹುಟ್ಟಿದ ಈ ಮೇಲಿನ ವಿಚಾರಗಳು ಪ್ರಶ್ನೆಗಳಾಗಿ ರೂಪಾಂತರಗೊಂಡದ್ದು, ಬಾಲಗಂಗಾಧರ ಪ್ರಣೀತ ಸಂಶೋಧನಾ ಯೋಜನೆಯ ಅಂಗವಾಗಿ ಗೆಳೆಯ ರಾಜಾರಾಂ ಹೆಗಡೆಯವರು ಕುವೆಂಪು ಅವರ 'ನೆನಪಿನ ದೋಣಿಯಲ್ಲಿ'

ಕೃತಿ ಕುರಿತು ಇಂಗ್ಲಿಷ್‌ನಲ್ಲಿ ಬರೆದಿರುವ ಪ್ರಬಂಧವನ್ನು ಅಕಸ್ಮಾತ್ ಓದಿದಾಗ. ಅದನ್ನು ನನ್ನ ಇನ್ನೋರ್ವ ಗೆಳೆಯರು ಅಂತರ್ಜಾಲದಿಂದ ಹೆಕ್ಕಿ ನನಗೆ ಪ್ರತಿಕ್ರಿಯೆಗಾಗಿ ಕಳಿಸಿದ್ದರು. ಈ ಗೆಳೆಯರಿಂದ ನನಗೆ ಗೊತ್ತಾದುದೇನೆಂದರೆ; ಬಾಲಗಂಗಾಧರರ ವಿಚಾರಧಾರೆ ಹಲವು ಬಿಡಿ ಬಿಡಿ ಗುಂಪುಗಳ ಆಸಕ್ತಿ ಕೆರಳಿಸಿದೆ ಮತ್ತು ಅದನ್ನು ಕುರಿತ ಚರ್ಚೆ, ಪ್ರಚಾರ ಕಾರ್ಯಕ್ರಮ ಯುದ್ಧೋಪಾದಿಯಲ್ಲಿ ಅಂತರ್ಜಾಲದಲ್ಲಿ ನಡೆದಿದೆ. ಜಾತಿ ವ್ಯವಸ್ಥೆಯೆಂಬುದೆಂಬುದೇ ಇಲ್ಲ; ಇಲ್ಲದ ಇದನ್ನು ಸೃಷ್ಟಿಸಿ ಒಂದು ವರ್ಗವನ್ನು ವೃಥಾ ದೋಷಾರೋಪಣೆಗೆ ಗುರಿಮಾಡಲಾಗಿದೆ ಎಂದು ಸೂಚಿಸುವ ಬಾಲಗಂಗಾಧರರ ವಿಚಾರಧಾರೆ, ಈ ಗುಂಪುಗಳಲ್ಲಿ ರೋಮಾಂಚನವನ್ನೇ ಉಂಟು ಮಾಡಿದಂತೆ ತೋರುತ್ತದೆ! ಆದರೆ ರಾಜಾರಾಂ ಹೆಗಡೆಯವರ ಪ್ರಬಂಧವೂ ಅದರ ಹುರುಪು, ಅರಿವು ಮತ್ತು ವಾದಕ್ರಮದಲ್ಲಿ ಇಂತಹ ಗುಂಪೊಂದರ ಹವ್ಯಾಸಿ ಚಟುವಟಿಕೆಯ ಭಾಗವೆಂಬಂತೆ ಕಂಡಾಗ ನನಗಾದ ಆಶ್ಚರ್ಯ ವಿಷಾದಗಳು ಅಷ್ಟಿಷ್ಟಲ್ಲ.

ಈ ಪ್ರಬಂಧಕ್ಕೆ ನನ್ನ ಪ್ರತಿಕ್ರಿಯೆಯನ್ನು ಬರೆದು, ಅದನ್ನು ಮೂಲ ಪ್ರಬಂಧವನ್ನು ಒದಗಿಸಿದ ಗೆಳೆಯನಿಗೆ ಕಳಿಸುವ ಮುನ್ನ ಈ ನನ್ನ ಪ್ರತಿಕ್ರಿಯೆ ಬಗ್ಗೆ ರಾಜರಾಂ ಹೆಗಡೆಯವರು ಏನು ಹೇಳುವರೋ ನೋಡೋಣವೆಂದು ಅವರನ್ನು ಸಂಪರ್ಕಿಸಿ, ಅವರ ಇ-ಮೇಲ್ ವಿಳಾಸವನ್ನು ಕೋರಿದೆ. ಆದರವರು ನೀಡಲಿಲ್ಲ! ಏಕೆಂದು ತಿಳಿಯದೆ, ಈ ಮೂಲಕವಾದರೂ ಅದನ್ನು ಮತ್ತು ಅವರ ಸಂಶೋಧನಾ ಯೋಜನೆಯ ಮಿತಿಗಳು ಎಂದು ನಾನೂ ಭಾವಿಸಿದ ಅಂಶಗಳನ್ನೂ ರಾಜಾರಾಂ ಹೆಗಡೆಯವರ ಗಮನಕ್ಕೆ ತಂದಂತಾಗುತ್ತದೆ ಎಂದು ನನ್ನ ಆ ಗೆಳೆಯನಿಗೆ ಕಳಿಸಿದ ಪ್ರತಿಕ್ರಿಯೆಯನ್ನು ಇಲ್ಲಿ ಪ್ರಕಟಿಸುತ್ತಿರುವೆ. ಈ ನನ್ನ ಪ್ರತಿಕ್ರಿಯೆಯಲ್ಲಿಯೇ ಮೂಲ ಪ್ರಬಂಧದಲ್ಲಿ ಹೆಗಡೆಯವರು ಏನು ಬರೆದಿದ್ದರು ಎಂಬುದೂ ಸೂಚಿತವಾಗಿರುವುದನ್ನು ಓದುಗರು ಗಮನಿಸಬಹುದು. ಬಹುಶಃ ಹೆಗಡೆಯವರು ಈ ನನ್ನ ಪ್ರತಿಕ್ರಿಯೆಗೆ ಪ್ರತಿಕ್ರಿಯಿಸಿಯಾರು ಮತ್ತು ಅದರ ಭಾಗವಾಗಿ ತಮ್ಮ ಮೂಲ ಇಂಗ್ಲಿಷ್ ಪ್ರಬಂಧದ ಕನ್ನಡ ಅನುವಾದವನ್ನು ನೀಡಿಯಾರು ಎಂದು ನಿರೀಕ್ಷಿಸುವೆ:

ಪ್ರಿಯ ಶ್ರೀ –ಅವರೇ,

ನೀವು ವಿಶ್ವಾಸಪೂರ್ವಕವಾಗಿ ಈ ಮೇಲ್ ಮಾಡಿದ ರಾಜಾರಾಂ ಹೆಗಡೆಯವರ Caste system in Kuvempu's autobiography, *'Nenapina Doniyalli'* ಲೇಖನ ಓದಿದೆ. ಈ ಲೇಖನವನ್ನು ಬರೆಯುವ ಮುನ್ನವೋ ಅಥವಾ ಅನಂತರವೋ ಅವರು ಇದರ ಹಲವು ವಿವರಗಳ ಬಗ್ಗೆ ನನ್ನೊಡನೆ ಮಾತನಾಡಿದ್ದರು. ಆದರೆ ಲೇಖನವನ್ನು ಪೂರ್ಣರೂಪದಲ್ಲಿ ನೋಡದೆ, ನಾನು ನನ್ನ ಅಭಿಪ್ರಾಯಗಳನ್ನು ಪೂರ್ಣ ರೂಪದಲ್ಲಿ ವ್ಯಕ್ತಪಡಿಸಲಾಗಿರಲಿಲ್ಲ. ಈಗ ನಿಮ್ಮ ಆಸಕ್ತಿಯಿಂದಾಗಿ ಅದು ಸಾಧ್ಯವಾಗಿದೆ. ವಂದನೆಗಳು.

ಲೇಖನ, ಯಾವ ಎಗ್ಗೂ ಇಲ್ಲದೆ ಸರಳವಾಗಿ ಹೇಳುವುದಾದರೆ, ಹಾಸ್ಯಾಸ್ಪದವಾಗಿದೆ. ಇತಿಹಾಸದ ಘನ ವಿದ್ವಾಂಸರಾದ ಪ್ರಿಯ ಮಿತ್ರ ಹೆಗಡೆ ಈ ಲೇಖನವನ್ನು ಬರೆದಿದ್ದಾರೆಂದು

ನಂಬುವುದೇ ನನಗೆ ಕಷ್ಟವಾಗಿದೆ. ಹೆಗಡೆ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿದ್ದಾರೆ. ಅವರು, ತಾವು ಭಾವನಾತ್ಮಕವಾಗಿಯೋ ಅಥವಾ ಸಂಶೋಧನೆಗಾಗಿ ಕ್ರೋಢೀಕರಿಸಲಾದ ಅಂಕಿ-ಅಂಶಗಳು ಸೃಷ್ಟಿಸುವ 'ಆಭಾಸ'ದ ಕಾರಣದಿಂದಲೋ ಒಪ್ಪಿಕೊಂಡಿರುವಂತೆ ತೋರುವ ಪ್ರಮೇಯ ವೊಂದನ್ನು ಇತರಿಗಾಗಿ ಸಾಬೀತು ಪಡಿಸಲು, ಅನೇಕ ವಸ್ತುಗಳನ್ನು ಆರಿಸಿಕೊಂಡು ಪ್ರಯೋಗ ಮಾಡಹೊರಟಿದ್ದಾರೆ. ಇಲ್ಲಿ ಕುವೆಂಪು ಮತ್ತು ಅವರ 'ಆತ್ಮಚರಿತ್ರೆ' ಎಂದು ಜನಪ್ರಿಯವಾಗಿ ಕರೆಯಲ್ಪಡುವ ಕೃತಿ ಈ ಪ್ರಯೋಗಕ್ಕೆ ಸಿಕ್ಕಿದೆ!

ಮೊದಲಾಗಿ, ಈ ಲೇಖನವನ್ನು ಇಂಗ್ಲಿಷ್‌ನಲ್ಲಿ ಬರೆದು ಯಾರ ಗಮನ ಸೆಳೆಯಲು ಅಥವಾ ಯಾರನ್ನು, ಯಾಕಾಗಿ ಒಪ್ಪಿಸಲು ಹೆಗಡೆಯವರು ಪ್ರಯತ್ನಿಸಿದ್ದಾರೋ ತಿಳಿಯದು! ಏಕೆಂದರೆ ಈ ಪ್ರಬಂಧವನ್ನು ಈ ಕೃತಿಯನ್ನು ಓದದವರಿಂದಲೇ ತುಂಬಿದ ಅಂತಾರಾಷ್ಟ್ರೀಯ ವಿದ್ವಾಂಸರ ಸಭೆಯಲ್ಲಿ ಪ್ರಸ್ತುತಪಡಿಸಲಾಯಿತೆಂದು ಕೇಳಿದ್ದೇನೆ. ಅದೇನೇ ಇರಲಿ; ದುರದೃಷ್ಟಕರ ಸಂಗತಿ ಎಂದರೆ, ಈ ಲೇಖನದ ಅಧ್ಯಯನ ಮಾದರಿ, ಇದನ್ನು ಯಾವ ಯೋಜನೆಯ ಭಾಗವಾಗಿ ಬರೆಯಲಾಗಿದೆಯೋ ಆ ಯೋಜನೆಯ ಬಗ್ಗೆ ಎದ್ದಿರುವ ಅನುಮಾನಾಸ್ಪದತೆಗೆ ಇಂಬುಕೊಡುವಂತೆಯೇ ಇರುವುದು:

೧. ಮೊದಲಾಗಿ, 'ನೆನಪಿನ ದೋಣಿಯಲ್ಲಿ' ಕುವೆಂಪು ಅವರ ಆತ್ಮಚರಿತ್ರೆಯಲ್ಲ. ಅದು ಪುಸ್ತಕದ ತಾಂತ್ರಿಕ ವಿವರಗಳಲ್ಲಿಯೇ ಸೂಚಿಸಿರುವ ಹಾಗೆ, reminiscence-ಪ್ರಮುಖವಾಗಿ ಅವರ ಹಳೆಯ ದಿನಚರಿಗಳನ್ನು ಆಧರಿಸಿದ ನೆನಪುಗಳ ದಾಖಲೆ. ಬದುಕಿನ ಒಂದು ಘಟ್ಟದಲ್ಲಿ ನಿಂತು ಹಿನ್ನೋಡಿ ಬರೆದ ಕಥಾನಕ(narrative)ವಲ್ಲ ಅದು. ಹಾಗಾಗಿ, ಅದನ್ನು ಒಬ್ಬ ಲೇಖಕ ಬದುಕನ್ನು ಕುರಿತು ರೂಪಿಸಿಕೊಂಡ ಆತ್ಯಂತಿಕ ನಿಲುವುಗಳನ್ನು ನಿರ್ಣಾಯಕವಾಗಿ ಪರಿಶೀಲಿಸಲು ಆಕರವಾಗಿ ಬಳಸುವುದೇ ಅವೈಜ್ಞಾನಿಕ ಅಥವಾ ಅಶಾಸ್ತ್ರೀಯ.

೨. ಕುವೆಂಪು ತಮ್ಮ ಜೀವನ ದರ್ಶನವನ್ನು ರೂಪಿಸಿಕೊಂಡ ಮೂಲಗಳು ಮತ್ತು ಅವನ್ನಾಧರಿಸಿದ ಅವರ ನಿಲುವುಗಳು ಎಂದು ಹೆಗಡೆ ನೀಡುವ ವಿವರಗಳೇ ಪ್ರಶ್ನಾರ್ಹವಾಗಿವೆ. ಉದಾಹರಣೆಗೆ, ಕುವೆಂಪು ತಮ್ಮ ಜೀವನ ದರ್ಶನವನ್ನು ರೂಪಿಸಿಕೊಳ್ಳಲು ಆಧಾರವಾದುವ ವೆಂದು ಹೆಗಡೆಯವರು ಹೇಳುವ ವೇದೋಪನಿಷತ್ತುಗಳನ್ನು, ಕುವೆಂಪು ಅಪೌರುಷೇಯ ಎಂದು; ಹಾಗಾಗಿ ಅವನ್ನು ಪವಿತ್ರ ಎಂದು ಪರಿಗಣಿಸಿಯೇ ಇರಲಿಲ್ಲ. ಅವುಗಳಲ್ಲಿ ಮೂರ್ಖ ಹೇಳಿಕೆಗಳೂ, ಅವಿವೇಕತನವೂ ಇದೆ ಎಂದು ಹೇಳುವಷ್ಟು 'ನಿರಂಕುಶಮತಿ'ಯಾಗಿದ್ದವರು ಕುವೆಂಪು. ಇದರ ವಿಷದೀಕರಣಕ್ಕಾಗಿ, ಅಂದರೆ ವೇದೋಪನಿಷತ್ತುಗಳನ್ನು ಕುರಿತ ಅವರ ನಿಲುವನ್ನು ಅರ್ಥ ಮಾಡಿಕೊಳ್ಳಲು ಅವರು ಸಂಪಾದಿಸಿರುವ 'ಋಷಿವಾಣಿ'ಯನ್ನು ನೋಡಬಹುದು.

ಇನ್ನು ಇಂತಹುದೇ ಆಧಾರಗಳೆಂದು ಹೆಗಡೆಯವರು ಹೇಳುವ ರಾಮಾಯಣ-ಮಹಾಭಾರತಗಳ ಬಗ್ಗೆ ಕುವೆಂಪು ಅವರ ನಿಲುವು, ಅವನ್ನು ಆಧುನೀಕರಿಸಿಯೇ–ಅವನ್ನು

ಇಂದಿನ ಹೊಸ ತಿಳುವಳಿಕೆಗೆ ಹೊಂದಿಸಿಯೇ–ಸ್ವೀಕರಿಸಬೇಕೆಂಬುದಾಗಿತ್ತು. 'ರಾಮಾಯಣ ದರ್ಶನ'ದ ರಚನೆಯೇ ಇದಕ್ಕೆ ದೊಡ್ಡ ಉದಾಹರಣೆ. ಪರಂಪರೆ ಕುರಿತ ಕುವೆಂಪು ಅವರ ತಾತ್ವಿಕ ನಿಲುವು 'ಶೂದ್ರ ತಪಸ್ವಿ' ಕುರಿತ ಇವರ ಮತ್ತು ಮಾಸ್ತಿ ನಡುವಣ ಸಂವಾದದಲ್ಲೇ ಸ್ಪಷ್ಟಗೊಂಡಿದೆ.

೩. ನೇರ ಅನುಭವದ ಆಧಾರದ ಮೇಲೇ ಬದುಕಿನ ಎಲ್ಲ ನಿಲುವುಗಳನ್ನು ರೂಪಿಸಿಕೊಳ್ಳಬೇಕೆಂಬ ಹೆಗಡೆಯವರ ನಿಲುವು, ಬದುಕು ಕೇವಲ ವೈಯುಕ್ತಿಕ ಸ್ತರಗಳಲ್ಲಿ ನಡೆಯುವಂತಹುದಲ್ಲ; ಅದು ವೈಯುಕ್ತಿಕ ಮತ್ತು ಸಾಮಾಜಿಕ-ಈ ದ್ವಂದ್ವಾತ್ಮಕತೆಯಲ್ಲಿ ತನ್ನನ್ನು ಕಟ್ಟಿಕೊಳ್ಳುತ್ತಾ ಹೋಗುತ್ತದೆ ಮತ್ತು ಅದು ತನ್ನ ಸತ್ಯಗಳನ್ನು ಪರಸ್ಪರ ಪೂರಕವಾಗಿ ತಾಳೆ ನೋಡಿಕೊಳ್ಳುತ್ತಲೇ, ರೂಪಿಸಿಕೊಳ್ಳುತ್ತಾ ಹೋಗುತ್ತದೆ ಎಂಬ ಸಂಕೀರ್ಣ ಅರಿವಿಗೆ ಎರವಾಗಿದೆ.

೪. ಕುವೆಂಪು ತಮ್ಮನ್ನು ಶೂದ್ರನನ್ನಾಗಿ ಗ್ರಹಿಸಿಕೊಂಡ ರೀತಿಯೇ ಒಂದು ಅಪಕಲ್ಪನೆಯಾಗಿದೆ ಎನ್ನುವ ಹೆಗಡೆಯವರಿಗೆ ಜಾತಿ ಪದ್ಧತಿ ಕುರಿತ ಕುವೆಂಪು ಅವರ ನಿಲುವೇ ಅರ್ಥವಾಗಿಲ್ಲ ಎಂದು ಹೇಳಬೇಕಾಗುತ್ತದೆ. ವಿಶೇಷವಾಗಿ ಬ್ರಾಹ್ಮಣರನ್ನು ಕುರಿತ ಕುವೆಂಪು ಅವರ ದ್ವಂದ್ವಾತ್ಮಕ ನಿಲುವುಗಳೆಂದು ಹೆಗಡೆಯವರು ಪ್ರಸ್ತುತಪಡಿಸುವ ಪ್ರಕರಣಗಳೇ, ಅವರ ನಿಲುವು ಹೆಗಡೆಯವರು ತೀರ್ಮಾನಿಸಿರುವಂತೆ ಬ್ರಾಹ್ಮಣ ವಿರೋಧ ಅಥವಾ ದ್ವೇಷದ ಮೇಲೆ ನಿಂತುದಲ್ಲ ಎಂದು ಸೂಚಿಸುವಂತಿವೆ! ಹಾಗಾಗಿ, ಹಿಂದೂ ಸಮಾಜದ ಸಾಮಾಜಿಕ ರಚನೆಯಾಗಿದ್ದ ಜಾತಿ ಪದ್ಧತಿ, ಪುರೋಹಿತಶಾಹಿಯಿಂದಾಗಿ (ನಮ್ಮ ಪರಂಪರೆಯನ್ನು ಒಂದು ಸೃಜನಶೀಲ ಮತ್ತು ಚಿಕಿತ್ಸಕ ವಿಮರ್ಶೆಗೆ ಒಡ್ಡಿ ಅದನ್ನು ಆಧುನೀಕರಿಸುವ ಕೆಲಸಕ್ಕೆ ಅಡ್ಡಿಯುಂಟು ಮಾಡುವುದೂ ಸೇರಿದಂತೆ) ಒಂದು ಶೋಷಣಾ ಸಾಧನವಾಗಿದೆ ಎಂದಷ್ಟೇ ಕುವೆಂಪು ಹೇಳುತ್ತಿದ್ದಾರೆ. ಈ ಪುರೋಹಿತಶಾಹಿ ಬ್ರಾಹ್ಮಣರಿಂದಲೇ ತುಂಬಿ ಹೋಗಿದ್ದರೆ (ಹಾಗಾದುದರಿಂದಲೇ ಏನೋ ಅದು ಪುರೋಹಿತಶಾಹಿಯಾದದ್ದು!) ಕುವೆಂಪು ಏನು ಮಾಡಿಯಾರು?

ಈ ಸಂಬಂಧವಾದ ಉದಾಹರಣೆಗಳ ವಿಶ್ಲೇಷಣೆಯಲ್ಲಿ ಹೆಗಡೆಯವರು, ಒಕ್ಕಲಿಗರು ಸ್ವಯಂಪ್ರೇರಿತರಾಗಿಯೇ ಬ್ರಾಹ್ಮಣರ ಪುರೋಹಿತಶಾಹಿ ಪ್ರಭಾವಕ್ಕೆ ಒಳಗಾಗಿದ್ದರು ಎಂದು ಸೂಚಿಸುವುದು ಮತ್ತು ಶೂದ್ರರೂ ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದರು ಎಂಬುದು ಕುವೆಂಪು ಅವರಿಗೆ ಗೊತ್ತಿರಲಿಲ್ಲವೇ ಎಂದು ಕೇಳುವುದು ಕುವೆಂಪು ಅವರ ವ್ಯಕ್ತಿತ್ವದ ಸಾಮಾನ್ಯ ಪ್ರಬುದ್ಧತೆಯನ್ನೇ ಪ್ರಶ್ನಿಸುವಂತಿದೆ! ಇದು ಜಾತಿ ಪದ್ಧತಿ ಕುರಿತ 'ಅಭಿಜಾತ ನಿರೂಪಣೆ' (Classical account of caste system) ಎಂದು ತಾವು ಕರೆಯುವ ಪ್ರಕಲ್ಪನೆಗೆ ಪರ್ಯಾಯವಾಗಿ ಹೆಗಡೆ ಮತ್ತು ಅವರ ಗೆಳೆಯರು ತಮ್ಮ ಸಂಶೋಧನೆಗಳ ಮೂಲಕ ಕಟ್ಟಿ ಹೊರಟಿರುವ ನಿರೂಪಣೆ ಎಷ್ಟು ಅಪ್ರಬುದ್ಧವಾಗಿರಬಹುದು ಎಂಬುದನ್ನು ಸೂಚಿಸುತ್ತದಷ್ಟೆ. ಹೆಗಡೆ ಮತ್ತು ಅವರ ಗೆಳೆಯರ 'ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ' ತನ್ನ ಗುರಿ

ಮುಟ್ಟಲು ಇಷ್ಟು ಅವಸರದ ಹೆಜ್ಜೆಗಳನ್ನಿಡಬಾರದು. ಮುಗ್ಗರಿಸಿ ಬೀಳುವ ಅಪಾಯವನ್ನು ಸ್ವತಃ ತಾವೇ ಹೀಗೆ ಆಹ್ವಾನಿಸಿಕೊಳ್ಳಬಾರದು!

ಪ್ರಿಯ ಗೆಳೆಯರಾದ ಹೆಗಡೆಯವರು ಜಾತಿ ಪದ್ಧತಿ ಕುರಿತಂತೆ ಇತ್ತೀಚಿನ ಹಿಂದುಳಿದ ವರ್ಗಗಳ ಆಂದೋಲನ ಕಟ್ಟಿರುವ ಅತಿ ರೂಕ್ಷ ಸಂಕಥನದ ಹಲವು ಹುಸಿತನಗಳನ್ನು ಬಯಲು ಮಾಡುವ ಉತ್ಸಾಹದಲ್ಲಿ, ಜಾತಿಪದ್ಧತಿಯ ಚರಿತ್ರೆಯ ಅಡಿಗಲ್ಲುಗಳನ್ನೇ ಅಲ್ಲಾಡಿಸಹೊರಟಿದ್ದಾರೆ. ಇದು ಚರಿತ್ರೆಗೇ ಮಾಡಲಾಗುತ್ತಿರುವ ಅನ್ಯಾಯ. ಇದು ನಿಜವಾಗಿ, ಅತ್ಯಂತ ವಿಕ್ಷಿಪ್ತ ಸಾಮಾಜಿಕ ರಚನೆಯಾಗಿ ನಮ್ಮ ಮಧ್ಯೆ ಉಳಿದು ಹೋಗಿರುವ ಜಾತಿ ಪದ್ಧತಿಯ ವಿರುದ್ಧ ಎಲ್ಲರೂ ಸೇರಿ ತಾತ್ವಿಕವಾಗಿ ಮತ್ತು ವಾಸ್ತವ ಮಟ್ಟದಲ್ಲಿಯೂ ನಡೆಸಬೇಕಾದ ಹೋರಾಟವನ್ನು–ಹೆಗಡೆಯವರಿಗೆ ಗೊತ್ತಿದ್ದೋ ಗೊತ್ತಿಲ್ಲದಂತೆಯೋ–ದಾರಿ ತಪ್ಪಿಸುವಂತಹುದೇ ಆಗಿದೆ.

('ಸಂವಾದ', ನವೆಂಬರ್ ೨೦೦೮)

■

೪೬. ತಪ್ಪು ಪ್ರಶ್ನೆ ಮತ್ತು ತಪ್ಪು ಉತ್ತರಗಳ ತಪ್ಪು ಸಂಶೋಧನೆ...

'**ಸಂ**ವಾದ'ದ ೨೦೦೮ರ ನವೆಂಬರ್ ಸಂಚಿಕೆಯಲ್ಲಿ ಬಾಲಗಂಗಾಧರರ ಜಾತಿ ಮೀಮಾಂಸೆಗೆ ಸಂಬಂಧಪಟ್ಟಂತೆ ಪ್ರಕಟವಾದ ನನ್ನ 'ಮೂರು ಪ್ರಶ್ನೆಗಳು ಮತ್ತು ಒಂದು ಉದಾಹರಣೆ' ಲೇಖನಕ್ಕೆ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ ರಾಜರಾಂ ಹೆಗಡೆಯವರ ಪ್ರತಿಕ್ರಿಯೆ ಓದಿದೆ. ಬಾಲ ಗಂಗಾಧರರ ವಿಚಾರಗಳು ಮತ್ತು ಆ ಬಗ್ಗೆ ಅವರ ಶಿಷ್ಯರಿಂದ ನಡೆದಿರುವ ಸಂಶೋಧನೆಗಳ ಚರ್ಯೆಯ ಬಗ್ಗೆ ಅಕ್ಟೋಬರ್ ಸಂಚಿಕೆಯಲ್ಲಿ ಡಾ|| ರಮೇಶ್ ಬೈರಿ ಎಂಬುವವರು ಹೀಗೆ ಬರೆದಿದ್ದಾರೆ:

'....ಈ ಮೂರ್ನಾಲ್ಕು ವರ್ಷಗಳಲ್ಲಿ ಅವರು ಮತ್ತು ಅವರ ತಂಡದವರು ಜಾತಿಯ ಬಗ್ಗೆ ಮಾತನಾಡಿದ್ದನ್ನು ಗಮನದಲ್ಲಿರಿಸಿಕೊಂಡು ಹೇಳೋದಾದ್ರೆ: ಕಳೆದೆರೆಡು ಶತಮಾನಗಳಲ್ಲಿ ತಡೆಯಿಲ್ಲದೆ ನಡೆದ ಜಾತಿಯ ಕುರಿತಾದ ಅಧ್ಯಯನ-ಚಿಂತನೆ-ವಾದವಿವಾದಗಳ ಬಗ್ಗೆ ಈ ಗುಂಪಿಗಿರುವ ತಿರಸ್ಕಾರವೇ ಇವರ ಟ್ರೇಡ್ ಮಾರ್ಕು. ಇನ್ನಾರಿಗೂ ದೊರಕದ ಒಳನೋಟವೊಂದು ತಮಗೆ ದೊರಕಿದೆ ಅನ್ನೋದು ಆ ತಿರಸ್ಕಾರದ ಹಿಂದಿರುವ ಧಾರ್ಷ್ಟ್ಯದ ಬೆನ್ನೆಲುಬು. ಆ ತಿರಸ್ಕಾರ ಅವರ ಎಲ್ಲ ಸಾರ್ವಜನಿಕ ಮುಖಾಮುಖಿಗಳಲ್ಲಿ ಮುಖಕ್ಕೆ ರಾಚುತ್ತದೆ.

ಸಾಮಾನ್ಯವಾಗಿ ಇಂತಹ ಜ್ಞಾನೋದಯ ಆದವರು ಹುಲುಮಾನವರ ಬಗ್ಗೆ ಪ್ರೀತಿ, ಕರುಣೆ ಬೆಳೆಸಿಕೊಳ್ಳುತ್ತಾರೆ. ಆದರೆ ಇಲ್ಲಿ ನಮ್ಮಂತಹ ಅಜ್ಞಾನದ ಅಂಧಕಾರದಲ್ಲಿ ಮುಳುಗಿರುವವರ ಬಗ್ಗೆ ಇವರಿಗೆ ಕೋಪ ಮತ್ತು ಅಸಹನೆ. ಬಾಲಗಂಗಾಧರರನ್ನ, ಅಲ್ಲಾ ಸ್ವಾಮಿ, ಜಾತಿ ಬಗ್ಗೆ ಇವರು ಹೀಗೆ ಹೇಳ್ತಾರೆ, ಅವರು ಹಾಗೆ ಹೇಳ್ತಾರೆ, ಆದರೆ ನೀವು ಹೀಗಂತೀರಲ್ಲಾ, ಅದು ಹೆಂಗೆ ಅಂತೇನಾದ್ರೂ ನೀವು ಅಂದ್ರೋ, ಅಷ್ಟೇ. ಏ ಇವ್ರನ್ನು ಹೊರಗ್ ಹಾಕ್ರೋ ಅಂತ ತಮ್ಮ ಶಿಷ್ಯವೃಂದಕ್ಕೆ ಆದೇಶಿಸ್ತಾರೆ. ಸರಿ, ಗುರುಗಳ ಹತ್ರ ಬೇಡ, ಶಿಷ್ಯರ ಹತ್ರ ಕೇಳೋಣ, ಉದ್ಧಾರ ಆಗೋಣ ಅಂತಂದು ಹೋದ್ರೆ, ಶಿಷ್ಯರ ಪ್ರಿಯ ಅಸ್ತ್ರಗಳು ವ್ಯಂಗ್ಯ; ವ್ಯಂಗ್ಯ ಕೆಲಸ ಮಾಡದಿದ್ದಾಗ ಗುರು ಮಹಿಮೆಯ ಪ್ರವಚನ.'

ಈ ಮಾತುಗಳನ್ನು ಬಾಲಗಂಗಾಧರರ ಆಪ್ತ ಶಿಷ್ಯರಾದ ಪ್ರೊ|| ಸದಾನಂದ ಮತ್ತು ರಾಜರಾಂ ಹೆಗಡೆಯರೊಂದಿಗೆ ಕೆಲವು ವರ್ಷಗಳಿಂದ ಒಡನಾಡಿದ್ದ ನಾನು ಸ್ವಲ್ಪ ಉತ್ಪ್ರೇಕ್ಷೆಯ ಮಾತುಗಳೆಂದೇ ತಿಳಿದಿದ್ದೆ. ಆದರೆ ರಾಜರಾಂ ಹೆಗಡೆಯವರು ನನಗೆ ಪ್ರತಿಕ್ರಿಯಿಸಿರುವ ರೀತಿ ನೋಡಿದಾಗ ನನಗೆ ಬೈರಿಯವರ ಮಾತುಗಳು ಎಷ್ಟು ನಿಜ

ಅನ್ನಿಸಿದವು. ತಮ್ಮ ವಿಚಾರಗಳನ್ನು ಸಹಾನುಭೂತಿಯಿಂದ ಕೇಳಿಸಿಕೊಳ್ಳುತ್ತಿದ್ದಾರೆ ಎಂದು ಅನ್ನಿಸುವವರೆಗೂ ನಿಮ್ಮೊಡನೆ ಸ್ನೇಹ-ಸೌಜನ್ಯಗಳಿಂದಲೇ ವರ್ತಿಸುವ ಈ ತಂಡದ ಸದಸ್ಯರು, ಇವರ ಸಂಶೋಧನೆಗಳ ಬಗ್ಗೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಕೇಳಿದೊಡನೆ ಅಧ್ಯಯನಶೀಲತೆಯ ಎಲ್ಲ ನಯ ವಿನಯಗಳನ್ನೂ ತೊರೆದು ಹೇಗೆ ಕಣ್ಣು ಮುಚ್ಚಿ ಹರಿಹಾಯಬಲ್ಲರು ಎಂಬುದಕ್ಕೆ ಹೆಗಡೆಯವರ ಬರಹವೇ ಒಂದು ಉದಾಹರಣೆ. ಇರಲಿ.

ಈ ಬರಹದ ಕೊನೆಯಲ್ಲಿ ಹೆಗಡೆಯವರು ಕೇಳುವ 'ಯಾವುದು ಅವಸರದ ಹೆಜ್ಜೆ? ವರ್ಷಾನುಗಟ್ಟಲೆ ಸಂಶೋಧನೆಯಲ್ಲಿ ತೊಡಗಿಸಿಕೊಂಡು ಒಂದು ಲೇಖನವನ್ನು ಬರೆಯುವುದೋ, ಇಲ್ಲ ಅದಕ್ಕೆ ಅವಸರದ ಪ್ರತಿಕ್ರಿಯೆಯನ್ನು ನೀಡುವುದೋ?' ಎಂಬ ಪ್ರಶ್ನೆಯಲ್ಲೇ ಇವರೆಲ್ಲ ಸಮಸ್ಯೆಗಳಿದ್ದಂತಿದೆ. ವರ್ಷಾನುಗಟ್ಟಲೆ ತೊಡಗಿಸಿಕೊಂಡು ಇವರು ಬರೆದ ಲೇಖನಕ್ಕೆ ಬಹುಶಃ ನಾವೂ ವರ್ಷಾನುಗಟ್ಟಲೆ ತೊಡಗಿಸಿಕೊಂಡೇ ಉತ್ತರ ಕೊಡಬೇಕೆಂದು ನಿರೀಕ್ಷಿಸುವಂತೆ ತೋರುವ ಇವರಿಗೆ ನನ್ನ ಉತ್ತರ: 'ವಿಶ್ವವಿದ್ಯಾಲಯಗಳಲ್ಲಿ ಎಲ್ಲೆಲ್ಲಿಂದಲೋ ತಂದ ಲಕ್ಷಗಟ್ಟಲೆ ರೂಪಾಯಿಗಳನ್ನು ಖರ್ಚುಮಾಡಿಕೊಂಡು ವರ್ಷಗಟ್ಟಲೆ ನೀವು ಮಾಡುವ ಸಂಶೋಧನೆಗಳು ವಿಶ್ವವಿದ್ಯಾಲಯಗಳ ಹೊರಗಿರುವ ನಮ್ಮಂಥ ಪಾಮರರಿಗೆ ಮೊದಲ ನೋಟಕ್ಕೇ ಹಾಸ್ಯಾಸ್ಪದವಾಗಿ ಕಾಣುವಂತಿದೆಯಲ್ಲ?' ಹಾಗೇ, ನಮ್ಮಂಥಹವರು ಕೇಳಿದ ಪ್ರಶ್ನೆಗಳಿಗೆ ನೇರವಾಗಿ, ಪೂರ್ಣವಾಗಿ ಉತ್ತರಿಸದೆ, ವ್ಯಂಗ್ಯ-ಕಟಕಿಗಳಲ್ಲೇ ಅವನ್ನು ಹಾರಿಸಿಕೊಂಡು ಹೋಗುತ್ತೀರಲ್ಲ, ಏಕೆ?

ನನ್ನ ಲೇಖನದ ಆರಂಭದ ಪೀಠಿಕೆಯೇ ಸೂಚಿಸುವಂತೆ, ಹೆಗಡೆ ಮತ್ತು ಅವರ ಗೆಳೆಯರಿಂದ ತಿಳಿದುಕೊಳ್ಳುವ ಕುತೂಹಲದಿಂದಷ್ಟೇ ಮೊದಲ ಪ್ರಶ್ನೆಯನ್ನು ನಾನು ಕೇಳಿರುವುದು. ಆದರೆ ಅವರು, ನಾನು ಈಗಾಗಲೇ ಸ್ಪಷ್ಟ ಉತ್ತರವನ್ನಿಟ್ಟುಕೊಂಡೇ ಪ್ರಶ್ನೆ ಕೇಳಿದ ಹಾಗೆ, ಈಗಾಗಲೇ ಎಲ್ಲರಿಗೂ ಗೊತ್ತಿರುವ ವಿಷಯಗಳನ್ನೇ ಬಡಬಡಿಸುತ್ತಾ, ಆ ಉತ್ತರವೂ ಬರೀ ಊಹಾತ್ಮಕವಾದದ್ದು ಎಂದು ಸಾಬೀತುಪಡಿಸಲು ಯತ್ನಿಸಿದ್ದಾರೆ. ಹೆಗಡೆಯವರೇ, ಈಗಾಗಲೇ ಬೈರಿಯವರು ಸ್ಪಷ್ಟಪಡಿಸಿರುವ ಹಾಗೆ ನೀವು ಯಾವುದನ್ನು–ಕ್ರಿಶ್ಚಿಯನ್ ಮಿಶನರಿಗಳ ಅವಾಂತರಗಳಿಂದ ಸೃಷ್ಟಿಯಾದದ್ದೆಂದು ಹೇಳಲಾಗುವ 'ಜಾತಿ ಪದ್ಧತಿಯ ಅಭಿಜಾತ ನಿರೂಪಣೆ' (Classical account of Caste system) ಎಂಬುದನ್ನು–ನೆಪವಾಗಿಟ್ಟುಕೊಂಡು ಅಂತಾರಾಷ್ಟ್ರೀಯ ಮಟ್ಟದ ಸಂಶೋಧನೆಯನ್ನು ಕೈಗೊಂಡಿದ್ದೀರೋ, ಆ ನಿರೂಪಣೆಯನ್ನು ಯಾರೂ ಈಗ ಎತ್ತಿ ಹಿಡಿಯುತ್ತಿಲ್ಲ. ನೀವು ಬಹುವಾಗಿ ಹಚ್ಚಿಕೊಂಡಿರುವಂತೆ ತೋರುವ ಅಂಬೇಡ್ಕರರ ಜಾತಿ ಮೀಮಾಂಸೆಯನ್ನೂ ಮೀರಿ ಹೊಸ ಹೊಸ ನಿರೂಪಣೆಗಳು ಚಾಲ್ತಿಗೆ, ಚರ್ಚೆಗೆ ಬಂದು ಅವು ಜಾತಿ ಪದ್ಧತಿ ಕುರಿತಂತೆ ಹೊಸ ತಿಳುವಳಿಕೆ ಮೂಡಿಸಲು ಯತ್ನಿಸುತ್ತಿವೆ ಎಂಬುದೇಕೆ ನಿಮ್ಮ ಗಮನಕ್ಕೆ ಬಂದಿಲ್ಲ? (ಈ ಹೊಸ ತಿಳುವಳಿಕೆಗನುಸಾರವಾಗಿಯೇ ಇಂದು ನಮ್ಮ ಶಾಸನ ಸಭೆಗಳು ಮತ್ತು ನ್ಯಾಯಾಲಯಗಳು ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ನಿರ್ವಹಿಸುತ್ತಿರುವುದು

ಅಲ್ಲವೆ?) ನೀವಾಗಲೀ, ಸದಾನಂದರಾಗಲೀ ಮೂಲತಃ ಸಮಾಜಶಾಸ್ತ್ರ ಅಧ್ಯಯನ ಶಿಸ್ತಿಗೆ ಸೇರಿದವರಲ್ಲ; ಈ ಬಾಲಗಂಗಾಧರರ ಯೋಜನೆಗಾಗಿಯಷ್ಟೆ ಈ ಕ್ಷೇತ್ರಕ್ಕೆ ವಲಸೆ ಬಂದವರಷ್ಟೆ ಎಂಬುದು ಇದಕ್ಕೆ ಕಾರಣವೇ? ಮತ್ತೇಕೆ ಯಾವ ಪ್ರಶ್ನೆ ಕೇಳಿದರೂ ಪದೇ ಪದೇ, 'ಇಲ್ಲಿ 'ರಿಲಿಜಿಯನ್' ಎಂಬುದಿಲ್ಲ. ಹಾಗಾಗಿ.....' ಎಂಬ ನಮ್ಮ ಕಿವಿ ತೂತು ಹೊಡೆದಿರುವ ಉತ್ತರವನ್ನೇ ನೀಡುತ್ತೀರಿ? ಇದಕ್ಕೆ ನಮ್ಮಂತಹವರು ಇಲ್ಲಿ 'ರಾಷ್ಟ್ರ' ಎಂಬುದಿಲ್ಲ. ಹಾಗಾಗಿ...' ಎಂದು ಉತ್ತರ ಕೊಡಲಾರಂಭಿಸಿದರೆ ಏನು ಮಾಡುತ್ತೀರಿ?

ಮೊದಲ ದಿನಗಳಲ್ಲಿ ನಿಮ್ಮ ವಾದ ಜಾತಿಯೇ ಇಲ್ಲ ಎಂಬುದಾಗಿ ಕೇಳಿಸಿತು. ಇದನ್ನು ಕೇಳಿ ಕೆಲವರು ನಕ್ಕಾಗ ಅಧೀರರಾದ ನೀವು 'ಇಲ್ಲ, ಜಾತಿ ಇದೆ; ಜಾತಿ ತಾರತಮ್ಯವೆಂಬುದಿಲ್ಲ' ಎಂಬುದಾಗಿ ಉತ್ತರಿಸಿದ್ದಂತಿತ್ತು. ಆಗ ಇನ್ನೂ ಕೆಲವರು ಜೋರಾಗಿ ನಕ್ಕಾಗ ಗಡಬಡಿಸಿದಂತೆ ತೋರಿದ ನೀವು ಈಗ, 'ಜಾತಿ ಇದೆ; ಜಾತಿ ತಾರತಮ್ಯವೂ ಇದೆ. ಆದರೆ ಜಾತಿ ವ್ಯವಸ್ಥೆಯಿಲ್ಲ' ಎನ್ನತೊಡಗಿದ್ದೀರಿ! ಕ್ರಾಂತಿಕಾರಕವಾಗಿರುವಂತೆ ತೋರುವ ನಿಮ್ಮ ಈ ಸಂಶೋಧನೆಗಳು ಬಹಿರಂಗವಾಗಿ ಪ್ರಕಟವಾಗಿದ್ದರೆ ಅಥವಾ ಚರ್ಚೆಗೆ ಸಿಗುವಂತಿದ್ದರೆ, ಈ ಎಲ್ಲ ಗೊಂದಲಗಳಿಗೆ ಆಸ್ಪದವಿರುತ್ತಿರಲಿಲ್ಲ. ಆದರೆ ಇದೆಲ್ಲ ಅಕಸ್ಮಾತ್ತಾಗಿ 'ಸಂವಾದ'ದಲ್ಲಿ ಬಹಿರಂಗವಾಗತೊಡಗಿದಾಗಷ್ಟೇ ನೀವು ಕನ್ನಡ ಜಗತ್ತಿಗೆ–ಸ್ಥಳೀಯ ಆಸಕ್ತರಿಗೆ– ಸ್ಪಷ್ಟೀಕರಣಗಳನ್ನು ನೀಡಲು ಮುಂದೆ ಬಂದದ್ದು. ಹೀಗಿರುವಾಗ, ಇದೇ ಕ್ಷೇತ್ರದಲ್ಲಿ ನಿಮ್ಮಷ್ಟಲ್ಲದಿದ್ದರೂ ನಮ್ಮ ಕುತೂಹಲಕ್ಕೆ ತಕ್ಕಷ್ಟು ಶ್ರದ್ಧೆಯಿಂದ ಕ್ರಿಯಾಶೀಲರಾಗಿರುವರು ನಮ್ಮ ಗೊಂದಲಗಳನ್ನು ಪರಿಹರಿಸಿಕೊಳ್ಳಲು; ಜಾತಿ ಇದ್ದು, ಜಾತಿ ತಾರತಮ್ಯವೂ ಇರುವುದಾದರೆ, ಆ ತಾರತಮ್ಯವನ್ನು ಸೃಷ್ಟಿಸುವ ರಾಜಕಾರಣವೂ ಇರಬೇಕಲ್ಲವೇ ಎಂದು ಯೋಚಿಸತೊಡಗಿ, ನಿಮ್ಮಂತಹವರನ್ನು ಕೇಳಿದೊಡನೆ ಹೀಗೇಕೆ ನಮ್ಮ ಮೇಲೆ ಹರಿಹಾಯತೊಡಗಿದ್ದೀರಿ? ಏಕೆ, ಪ್ರಶ್ನೆ ನಿಮ್ಮ ಬುಡಕ್ಕೇ ಬಂದಿದೆ ಎಂದೆ?

ಭಾರತದ ಜಾತಿ ಪದ್ಧತಿ ಎಂಬುದನ್ನು Caste system ಎಂದು ಅನುವಾದಿಸಿಕೊಂಡು (ಅದನ್ನು ಮತ್ತೆ ಕನ್ನಡಕ್ಕೆ ಜಾತಿ ವ್ಯವಸ್ಥೆ ಎಂದು ಅನುವಾದಿಸಿಕೊಂಡು!), ಆ Systemಗೆ ಇಂಗ್ಲಿಷ್ ಸಂದರ್ಭದ (ನಿಘಂಟಿನ) ಅರ್ಥವನ್ನು ಆರೋಪಿಸಿಕೊಂಡು ಮತ್ತು ಅದು ಯಾವಾಗಲೂ 'ರಾಷ್ಟ್ರ' ಮಟ್ಟದ ಏಕರೂಪಿ ರಚನೆಯೇ ಆಗಿರಬೇಕೆಂದು ಆಧುನಿಕ ಐರೋಪ್ಯ ಪರಿಕಲ್ಪನಾತ್ಮಕ ನೆಲೆಯಲ್ಲಿ ವಾದ ಮಾಡಹೊರಟಿರುವ ನೀವು, ತಪ್ಪು ಪ್ರಶ್ನೆಗಳಿಗೆ ತಪ್ಪು ಉತ್ತರಗಳನ್ನು ಕಂಡುಕೊಳ್ಳುತ್ತಾ ದಾರಿ ತಪ್ಪಿರುವುದರಲ್ಲಿ ಆಶ್ಚರ್ಯವೇನಿಲ್ಲ. ಭಾರತದ ಮೂಲ ಸಾಮಾಜಿಕತೆಯನ್ನು ನಿರ್ಧರಿಸಿದ ವರ್ಣಾಶ್ರಮ ಧರ್ಮ, ಕ್ರಮೇಣ ಜಾತಿ ಪದ್ಧತಿಯೆಂಬ ರಾಜಕಾರಣವಾದ ಪರಿ ಮಹಾಭಾರತದ ಕಾಲದಿಂದಲೇ ವಿಷದೀಕರಿಸಲ್ಪಟ್ಟಿದೆ. ನಂತರ ಅದೆಷ್ಟು ಸ್ಮೃತಿ-ಪುರಾಣ-ಕಾವ್ಯ-ಲೋಕ ಕಥೆಗಳಲ್ಲಿ ಈ ರಾಜಕಾರಣ ತನ್ನ ಪರಿ ಪರಿಯ ಮುಖಗಳನ್ನು ತೋರಿಸಿಲ್ಲ? ನಮ್ಮ ಬಹುತೇಕ ಪ್ರಾಚೀನ ರಾಜರ ಹೆಮ್ಮೆಯ ಬಿರುದುಗಳಲ್ಲಿ 'ವರ್ಣಾಶ್ರಮ ಧರ್ಮ ಪರಿಪಾಲಕ' ಎಂಬುದೇಕೆ ಸೇರಿರುತ್ತಿತ್ತು? ಈ ಬಿರುದುಗಳನ್ನು ಸೃಷ್ಟಿಸುತ್ತಿದ್ದವರು ಯಾರು, ಯಾಕೆ?

ಆದರೆ ಹೆಗಡೆಯವರಿಗೆ ರಾಜಕಾರಣವೆಂದರೆ ಬರೀ 'ಸ್ಟೇಟ್', 'ಸಿವಿಲ್ ಸೊಸೈಟಿ' ಎಂಬ ಕಲ್ಪನೆಗಳು ಚಾಲ್ತಿಗೆ ಬಂದ ನಂತರವಷ್ಟೇ ಶುರುವಾದ ವ್ಯವಹಾರವಾಗಿದೆ! ಐರೋಪ್ಯ 'ರಿಲಿಜಿಯನ್' ಕಲ್ಪನೆಗೆ ಯಾರೋ ಬಂಧಿತರಾಗಿ ದಾರಿ ತಪ್ಪಿದ್ದಾರೆಂದು ಹೇಳುವ ಹೆಗಡೆ ಮತ್ತವರ ಗೆಳೆಯರು, ಸ್ವತಃ ತಾವೇ ಇಂತಹ ಅನೇಕ ಐರೋಪ್ಯ-ವಿಶಿಷ್ಟ ಕಲ್ಪನೆಗಳಿಗೆ ಬಂಧಿತರಾಗಿ ತಮ್ಮ ಸಂಶೋಧನೆಗಳನ್ನು ಮುಂದುವರೆಸಿರುವುದು ಎಂತಹ ಸೋಜಿಗ! ಹಾಗಾಗಿಯೇ ಅವರಿಗೆ ಅಮೆರಿಕಾದಲ್ಲಿನ Racismಗೂ, Race systemಗೂ ನಿರ್ಣಾಯಕ ವ್ಯತ್ಯಾಸ ಕಾಣುತ್ತದೆ. ಆದರೆ ಭಾರತದಲ್ಲಿ ಜಾತಿ ಪದ್ಧತಿ ಇದ್ದಿರುವಾಗಲೇ, ಅದರ ವಿರುದ್ಧ ಬುದ್ಧನ ಕಾಲದಿಂದಲೂ ವಿವಿಧ ರೀತಿಯ ಪ್ರತಿರೋಧ, ಹೋರಾಟಗಳು ನಡೆದಿದ್ದು, ಈ ನಿರಂತರ ಮತ್ತು ಹಲವು ನೆಲೆಗಳ ಘರ್ಷಣೆಯಲ್ಲಿ ಅದು ಹೆಗಡೆಯವರು ಹುಡುಕುತ್ತಿರುವಂತಹ ಅಥವಾ ಹುಡುಕಿ ಹುಡುಕಿ ಸಾಕಾಗಿ ಕೊನೆಗೆ ಇಲ್ಲವೆಂದು ಹೇಳುತ್ತಿರುವ 'ವ್ಯವಸ್ಥೆ' ತನ್ನ ಮೂಲ 'ರೂಪ'ಗಳನ್ನೂ ಮತ್ತು ಇವರು ನಿರೀಕ್ಷಿಸುವ 'ಐಕ್ಯತೆ'ಯನ್ನೂ ಕಳೆದುಕೊಂಡಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಈಗಂತೂ ಆಧುನಿಕ ಸಂವಿಧಾನ ಜಾರಿಗೆ ಬಂದ ಮೇಲೆ, ಆ ರೂಪಗಳ ಅವಶೇಷಗಳೂ ಕಾಣೆಯಾಗಿರಲಿಕ್ಕೆ ಸಾಕು. ಆದರೆ ಅವುಗಳ ರಾಜಕಾರಣ, ನಮ್ಮ ಹಳೆಯ ಮತ್ತು ಈಗ ಪ್ರಜಾಪ್ರಭುತ್ವ ಪದ್ಧತಿಗೇ ಕಣ್ಣು ಹೊಡೆದು ಪ್ರತಿ ಜಾತಿಯೂ ಹೊಸದಾಗಿ ಕಟ್ಟಿಕೊಳ್ಳುತ್ತಿರುವ ಮಠಗಳ ಮತ್ತು ಅವುಗಳಲ್ಲಿ ಸ್ಥಾಪಿಸಲಾಗುತ್ತಿರುವ ಮಠಾಧೀಶರ ಮತ್ತು ಅವುಗಳಿಗೆ ಹೆಚ್ಚುತ್ತಿರುವ ಭಕ್ತಸಮೂಹಗಳ ರೂಪದಲ್ಲಿ ಮುಂದುವರೆದೇ ಇದೆಯಲ್ಲ? ಇತ್ತೀಚೆಗೆ ತಾನೇ ನಮ್ಮ ಪೇಜಾವರ ಮಠಾಧೀಶರು ನಿಮಗೆ ಜಾತಿಪದ್ಧತಿ ಬೇಡದಿದ್ದರೆ ಬೌದ್ಧ ಧರ್ಮಕ್ಕೆ ಬದಲಾಗಿ ಆರ್ಯಸಮಾಜಕ್ಕೆ ಸೇರಿ ಎಂದು ಶೂದ್ರರಿಗೆ ಮತ್ತು ದಲಿತರಿಗೆ ಕರೆಕೊಟ್ಟಿರುವುದರ ಮರ್ಮವಾದರೂ ಏನು? ಹೋಗಲಿ, ಜಾತೀಯತೆ ಇದೆ, ಆದರೆ ಜಾತಿ ಪದ್ಧತಿ ಇರಲಿಲ್ಲ ಅಥವಾ ಇಲ್ಲ ಎಂಬಷ್ಟರ ಮಟ್ಟಿಗೆ ಸೂಕ್ಷ್ಮ ತರ್ಕ ಮಾಡುವ ನೀವು ಈ ಮೂಲಕ ಸಾಧಿಸ ಬಯಸಿರುವುದಾದರೂ ಏನನ್ನು? ನಿಮ್ಮ ಸಂಶೋಧನೆಗಳ ಪ್ರಕಾರ ಜಾತಿ ತಾರತಮ್ಯಗಳಿಗೆ ಹುಡುಕಿರುವ ಪರಿಹಾರಗಳಾದರೂ ಯಾವುವು? ಅದನ್ನಾದರೂ ಹೊರ ಜಗತ್ತಿಗೆ ಹೇಳಿ!

ಒಬ್ಬ ದೇವರು, ಒಬ್ಬ ಪ್ರವಾದಿ, ಒಂದು ಧರ್ಮಗ್ರಂಥವನ್ನಾಧರಿಸಿದ 'ರಿಲಿಜಿಯನ್' ಎನ್ನುವುದು ಕ್ರಿಶ್ಚಿಯನ್ ಮೂಲದ ಐರೋಪ್ಯ ಕಲ್ಪನೆ. ಅದನ್ನಾಧರಿಸಿ ಇಲ್ಲಿ ಕ್ರಿಶ್ಚಿಯನ್ ಮಿಷನರಿಗಳು 'ಜಾತಿ ಪದ್ಧತಿ'ಯ ಸಂಕಥನವನ್ನು ಕಟ್ಟಿದರು ಎಂದು ನೀವು ಹೇಳುತ್ತೀರಿ. ಆದರೆ ಕ್ರಿಶ್ಚಿಯನ್ ಮಿಷನರಿಗಳು ಇಲ್ಲಿಗೆ ಬರುವ ಹೊತ್ತಿಗಾಗಲೇ, ಶಂಕರಾಚಾರ್ಯರ ಕಾಲಕ್ಕೇ ಇಲ್ಲಿ ಹಿಂದೂ ಧರ್ಮವನ್ನು ಒಂದು 'ರಿಲಿಜಿಯನ್'ನಂತೆ ಕಟ್ಟುವ ಪ್ರಯತ್ನಗಳು ಆರಂಭವಾಗಿರಲಿಲ್ಲವೆ? (ಅವು ಇತ್ತೀಚಿನ ದಯಾನಂದ ಸರಸ್ವತಿ ಅವರ 'ಆರ್ಯ ಸಮಾಜ' ಮತ್ತು ವೀರ ಸಾವರ್ಕರರ 'ಹಿಂದುತ್ವ'ದ ಪ್ರಯತ್ನಗಳವರೆಗೂ ಒಂದಲ್ಲ ಒಂದು ರೀತಿಯಲ್ಲಿ

ಮುಂದುವರೆದಿಲ್ಲವೆ?) ನಂತರ ಬಂದ ಕ್ರಿಶ್ಚಿಯನ್ ಮಿಷನರಿಗಳು ನಿಮ್ಮಲ್ಲಿ ಜಾತಿ ಪದ್ಧತಿ ಇದೆ ಎಂದಾಕ್ಷಣ ಇಲ್ಲಿನ ಜನ, ವಿದ್ವಾಂಸರು ಮತ್ತು ಧರ್ಮ ಜಿಜ್ಞಾಸುಗಳು ಅದನ್ನು ಪ್ರಶ್ನಿಸದೆ, ವಿನಾಃಕಾರಣ ಅದನ್ನು ಒಪ್ಪಿಬಿಡಲು ಅವರೇನು ಮೂರ್ಖರೆ? ಬಾಲಗಂಗಾಧರರು ಬೆಲ್ಜಿಯಂನಲ್ಲಿ ಕೂತು ಸಂಶೋಧನೆ ಮಾಡಿ, ಜಾತಿ ಪದ್ಧತಿ ಎಂಬುದೇ ಕ್ರಿಶ್ಚಿಯನ್ ಧರ್ಮಪ್ರಸಾರಕರ ಮತ್ತು ಐರೋಪ್ಯ ಅಧ್ಯಯನಕಾರರ ಸೃಷ್ಟಿ ಎಂದು ಪ್ರಚುರಪಡಿಸುವವರೆಗೂ, ಇಡೀ ಭಾರತಕ್ಕೆ ಬೌದ್ಧಿಕ ಮಂಕು ಕವಿದಿತ್ತು ಎಂದು ಇವರು ಹೇಳಿದರೆ ನಾವು ನಂಬಬೇಕೆ?

ಈ ಧಾರ್ಷ್ಟ್ಯವೇ ಇವರ ಸಂಶೋಧನೆ ಮತ್ತು ಅದರ ಉದ್ದೇಶಗಳನ್ನು ಅನುಮಾನಾಸ್ಪದಗೊಳಿಸಿರುವುದು. ಇವರೆಲ್ಲ ಸ್ವಲ್ಪ ತಮ್ಮ ಈ ಸಮಾಜಮುಖಿ ಸಂಶೋಧನೆಗಳನ್ನು ಸ್ಥಳೀಯ ಸಮಾಜಕ್ಕೆ ಅರ್ಥವಾಗುವ ಹಾಗೆ–ಅಂದರೆ ಕನ್ನಡ ಜಾಯಮಾನದಲ್ಲಿ–ಬರೆಯತೊಡಗಿದಾಗ ಇವರ ಈ ಧಾರ್ಷ್ಟ್ಯ ಸ್ವಲ್ಪವಾದರೂ ಕಡಿಮೆಯಾದೀತು. ಇದನ್ನೇ ನಾನು ನನ್ನ ಎರಡನೇ ಪ್ರಶ್ನೆಯಲ್ಲಿ ಸೂಚ್ಯವಾಗಿ ಪ್ರಸ್ತಾಪ ಮಾಡಿದ್ದು. ಆದರೆ ಹೆಗಡೆಯವರು ಅದನ್ನು ತಮ್ಮದು ವೈಜ್ಞಾನಿಕ ಅನ್ವೇಷಣೆ ಎಂದು ಹೇಳಿಕೊಳ್ಳುತ್ತಾ, ಇಡೀ ಪ್ರಶ್ನೆಯನ್ನೇ ಮೆಲ್ಲಗೆ ಪಕ್ಕಕ್ಕೆ ಸರಿಸುವ ಮಾಡುವ ಪ್ರಯತ್ನ ಮಾಡಿದ್ದಾರೆ. ಇವರ ಪ್ರಕಾರ ಸಮಾಜವೆಂಬುದು ಒಂದು ಭೌತವಸ್ತುವೇ ಆಗಿರಬಹುದು, ಸಮಾಜ ಶಾಸ್ತ್ರ ಇವರು ಹೇಳುವಂತಹ ಸಮಾಜ 'ವಿಜ್ಞಾನ'ವಾಗಲು! ಎಲ್ಲವನ್ನೂ ವಿಜ್ಞಾನ ಎಂದು ಸಾಧಿಸಿಕೊಳ್ಳುವ ಇಂತಹ ಪ್ರಯತ್ನ ಮತ್ತೆ ಇನ್ನೊಂದು ಐರೋಪ್ಯ ತೆವಲೇ! ಹಾಗೇ 'ಬಾಲಗಂಗಾಧರರು ಈಗ ಪ್ರಚಲಿತದಲ್ಲಿರುವ ವಿಚಾರಗಳನ್ನು ವಸಾಹತೀಕೃತವೆಂಬ ಕಾರಣಕ್ಕಾಗಿಯಾಗಲೀ, ಅವು ಪಶ್ಚಿಮದಲ್ಲಿ ಹುಟ್ಟಿದುವುಗಳು ಎಂಬ ಕಾರಣಕ್ಕಾಗಲೀ ವಿಮರ್ಶೆಗೊಳಪಡಿಸಿಲ್ಲ' ಎನ್ನುವ ಹೆಗಡೆಯವರು ತಮ್ಮ ಸಹ ಸಂಶೋದಕ ಡಾ|| ಎ. ಷಣ್ಮುಖ ಅವರು 'ಸಂವಾದ'ದ ಅಕ್ಟೋಬರ್ ಸಂಚಿಕೆಯಲ್ಲಿ ಬರೆದಿರುವ 'ಪಾಶ್ಚಾತ್ಯ ಥಿಯಾಲಾಜಿಕಲ್ ಭಾಷೆಯ ಚೌಕಟ್ಟು' ಎಂಬ ಲೇಖನದಲ್ಲಿ ತಮ್ಮ ವಾದವನ್ನು ಮಂಡಿಸಲು ಬಳಸಿರುವ ಆಧಾರಗಳನ್ನು ಮತ್ತೊಮ್ಮೆ ಅವಲೋಕಿಸಲಿ.

ಇನ್ನು ನನ್ನ ಮೂರನೇ ಪ್ರಶ್ನೆಯನ್ನು ಹೆಗಡೆಯವರು ಹೆಚ್ಚೂ ಕಡಿಮೆ ತಪ್ಪಿಸಿಕೊಂಡೇ ಮುಂದೆ ಸರಿದಿದ್ದಾರೆ! ಹಿಂದೂ ಧರ್ಮವನ್ನು 'ರಿಲಿಜಿಯನ್' ಕಲ್ಪನೆಗೆ ಸಿಕ್ಕಿಕೊಳ್ಳದೆ ಗ್ರಹಿಸಿದಾಗಲೂ, ಅದರಲ್ಲಿ ಜಾತಿ ಪದ್ಧತಿಯನ್ನು ಕಂಡ ಮತ್ತು ಅದರ ವಿರುದ್ಧದ ಹೋರಾಟವನ್ನೂ ತಮ್ಮ ಸ್ವಾತಂತ್ರ್ಯ ಹೋರಾಟದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳ ಬೇಕಾಗಿ ಬಂದ ಗಾಂಧಿಯವರ ನೋಟ ಕ್ರಮ ನಿಮ್ಮ ಗಮನ ಸೆಳೆಯದೆ, ಬೆಲ್ಜಿಯಂನಿಂದ ದುಡ್ಡು ವ್ಯವಸ್ಥೆ ಮಾಡುವ ಬಾಲಗಂಗಾಧರರ ಈ ಸಂಶೋಧನಾ ಯೋಜನೆಯೇ ಏಕೆ ಇಷ್ಟೊಂದು ನಿಮ್ಮಲ್ಲಿ ಉತ್ಸಾಹ ಹುಟ್ಟಿಸಿದೆ ಎಂಬ ನನ್ನ ಪ್ರಶ್ನೆಗೆ ಹೆಗಡೆಯವರ ಉತ್ತರ: 'ಈ ಸಲಹೆಗೆ ಧನ್ಯವಾದಗಳು'. ನಾನು ಸಲಹೆ ನೀಡಿಲ್ಲ, ಪ್ರಶ್ನೆ ಕೇಳಿದ್ದೇನೆ ಹೆಗಡೆಯವರೇ!

-೨-

ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಕುರಿತ ಹೆಗಡೆಯವರ ಇಂಗ್ಲಿಷ್ ಲೇಖನಕ್ಕೆ ನಾನು ನನ್ನ ಸ್ನೇಹಿತರೊಬ್ಬರಿಗೆ ಪತ್ರ ರೂಪದಲ್ಲಿ ಬರೆದ ಪ್ರತಿಕ್ರಿಯೆಗೆ ಅವರು ಪ್ರತಿಕ್ರಿಯಿಸಿರುವ ರೀತಿಯಂತೂ ಅವರಿಗೆ ನಿಜವಾಗಿಯು ಹುಚ್ಚು ಹಿಡಿದಿದೆಯೇನೋ ಅನ್ನಿಸುವಂತಿದೆ! ಅದರ ತುಂಬಾ ವೈಯುಕ್ತಿಕ ವಿವರಣೆಗಳು ಮತ್ತು 'ತಪ್ಪು ಮಾಹಿತಿ', 'ಸುಳ್ಳು ಸೃಷ್ಟಿ', 'ಸುಳ್ಳು ಮಾಹಿತಿ', 'ತಿರುಚು', 'ಚರ್ಚೆಯ ಸಾಧ್ಯತೆಯನ್ನೇ ಮುಚ್ಚಿ ಹಾಕುವ ಪ್ರಯತ್ನ' ಮುಂತಾದ ವೈಯುಕ್ತಿಕ ಆರೋಪಗಳಿಂದ ತುಂಬಿ ಹೋಗಿವೆ. ಕೊನೆಗಂತೂ ಅವರು hysterical ಆದಂತೆ, ನನ್ನ ಲೇಖನ ಅವರ ಮೇಲೆ ಹಲ್ಲೆಗೆ ಪ್ರೇರೇಪಣೆ ನೀಡುವಂತೆಯೂ ಇದೆಯೆಂದು ಪರೋಕ್ಷವಾಗಿ ಸೂಚಿಸಿ, ನನ್ನಲ್ಲಿ ಗಾಬರಿ ಹುಟ್ಟಿಸಿದ್ದಾರೆ! ಹೆಗಡೆಯವರೇ, ನೀವು ತುಂಬ ಹೆದರಿದಂತೆ ಕಾಣುತ್ತದೆ. ಒಂದು ವೇಳೆ ನನ್ನ ಆ ಲೇಖನದಿಂದಾಗಿ ನೀವು ಕುವೆಂಪು ವಿರೋಧಿಯೆಂಬಂತೆ ಪ್ರತಿಬಿಂಬಿತವಾಗಿ ನಿಮ್ಮ ಮೇಲಾನಾದರೂ ಹಲ್ಲೆಯಾದರೆ, ಅದರೆಲ್ಲ ದೈಹಿಕ ಮತ್ತು ಕಾನೂನು ಸಾಧಕ-ಬಾಧಕ ಖರ್ಚುಗಳನ್ನು ನಾನೇ ವಹಿಸಿಕೊಳ್ಳುತ್ತೇನೆ, ಹೆದರಬೇಡಿ!

ನಿಮ್ಮೆಲ್ಲ ಆರೋಪಗಳಿಗೆ, 'ನೆನಪಿನ ದೋಣಿಯಲ್ಲಿ' ಕುರಿತ ನಿಮ್ಮ ಆ ಇಂಗ್ಲಿಷ್ ಲೇಖನವನ್ನು ಅಥವಾ ಅದರ ಕನ್ನಡ ಅನುವಾದವನ್ನಾದರೂ ಪ್ರಕಟಿಸುವುದೇ ನನ್ನ ಪಾಲಿನ ಅತ್ಯುತ್ತಮ ಉತ್ತರವಾಗಬಹುದಿತ್ತು. ಹಾಗೆ ನೋಡಿದರೆ, ನಿಮ್ಮ ಆ ಲೇಖನಕ್ಕೆ ನನ್ನ ಪ್ರತಿಕ್ರಿಯೆಯ ಮುಖ್ಯ ನೆಲೆ ಇರುವುದೇ ಅದೇಕೆ ಇಂಗ್ಲಿಷ್‌ನಲ್ಲಿದೆ ಎಂಬ ಪ್ರಶ್ನೆಯಲ್ಲಿ. ಮೂಲ ಕೃತಿಯನ್ನೇ ಓದದ/ಓದಲಾಗದ (ಅದು ಇಂಗ್ಲಿಷ್‌ಗೆ ತರ್ಜುಮೆ ಆಗಿಲ್ಲವಾದ್ದರಿಂದ) ಮತ್ತು ನಿಮ್ಮ ಸುಪ್ರಸಿದ್ಧ ಸಂಶೋಧನಾ ಯೋಜನೆಯ ಭಾಗವಾಗಿ ಆಯೋಜಿತವಾದ ಅಂತಾರಾಷ್ಟ್ರೀಯ ವಿದ್ವಾಂಸರ ಸಭೆಯ ಮುಂದೆ ಅದರ ಯಾವುದೇ ನೆಲೆಯ ವಿಮರ್ಶೆಯನ್ನು ಮಂಡಿಸುವ ಉದ್ದೇಶವಾದರೂ ಏನು? ಪ್ರಯೋಜನವಾದರೂ ಏನು? ನೀವು ಪ್ರಾಯೋಜಿಸಿರುವ ಯೋಜನೆಗೆ ಬದ್ಧರಾಗಿ ನಾವು ಹೇಗೆ ಅದಕ್ಕೆ ಪೂರಕವಾದ ಸಾಕ್ಷ್ಯವನ್ನು ಕಲೆ ಹಾಕುತ್ತಿದ್ದೇವೆ ನೋಡಿ ಎಂಬುದನ್ನು ಅವರಿಗೆ ಸಾಬೀತುಪಡಿಸುವುದರ ಹೊರತಾಗಿ?

ಸ್ವಾಮಿ ಹೆಗಡೆಯವರೇ, 'ನೆನಪಿನ ದೋಣಿಯಲ್ಲಿ' ಕೃತಿ ಕುರಿತು–ನಿಮ್ಮ ಯೋಜನೆಯ ಸಲುವಾಗಿಯಾದರೂ–ಮೊದಲು ಚರ್ಚೆಯಾಗಬೇಕಾಗಿರುವುದು ಮತ್ತು ನಿಜವಾಗಿ ಚರ್ಚೆಯಾಗುವುದು ಕನ್ನಡ ಸಮಾಜದ ಮಧ್ಯೆ. ಈ ಬಗ್ಗೆ ನಿಮ್ಮದೇನಿದ್ದರೂ ಅದನ್ನು ಮೊದಲು ಅದರ ನಿಜ ಓದುಗರಾದ ಕನ್ನಡಿಗರಿಗೆ ಹೇಳಿ, ಆನಂತರ ಬೇಕಾದರೆ ತಮ್ಮ ಇತರ ಉಪಯೋಗಗಳಿಗಾಗಿ ಅದನ್ನು ಓದಲಾಗದವರಿಗೂ ಹೇಳಿ! ನೀವೇ ನನಗೆ ಹೇಳಿದಂತೆ, ನೀವು ನನಗೆ ನಿಮ್ಮ ಈ-ಮೇಲ್ ವಿಳಾಸ ನೀಡದಿದರಲು, ನಿಮ್ಮೊಂದಿಗೆ ಮಾತನಾಡುತ್ತಾ ಎತ್ತಿದ ಈ ಪ್ರಶ್ನೆ ನಿಮ್ಮಲ್ಲಿ ಉಂಟುಮಾಡಿದ ಅಸಮಧಾನವೇ ಕಾರಣ. ನೀವು ಕೊಟ್ಟಿರುವ ಗೋಜಲು ಕಾರಣವಲ್ಲ. ನಾನು ನಿಮ್ಮ ಇ-ಮೇಲ್ ವಿಳಾಸ ಕೇಳಿದ್ದು,

ನನ್ನ ಆ ಪ್ರತಿಕ್ರಿಯೆಯಲ್ಲಿ ನಿಮಗೆ ಆಕ್ಷೇಪಾರ್ಹವಾದ್ದೇನಾದರೂ ಕಂಡರೆ, ಅದನ್ನು ಗಮನಿಸಿ ಪ್ರಕಟಿಸಲು. ಅದಕ್ಕೇ ನೀವು ಅವಕಾಶ ಕೊಡಲಿಲ್ಲ. ಈಗ ನೋಡಿದರೆ, ಇದನ್ನು ಪ್ರಕಟಿಸಿದ್ದೇ ಮಹಾಪರಾಧವೆಂಬಂತೆ ಕಟಕಿಯ ಮೇಲೆ ಕಟಕಿಯಾಡುತ್ತಿರುವಿರಿ!

ಇನ್ನು ಈ ಲೇಖನದ ಬಗೆಗೆ ನಾನು ಎತ್ತಿರುವ ನಾಲ್ಕು ಆಕ್ಷೇಪಣೆಗಳಲ್ಲಿ ಮೊದಲನೆಯದನ್ನು ನಿರ್ಲಕ್ಷಿಸಿಯೇ ಹೆಗಡೆಯವರು ಮುಂದುವರೆದಿದ್ದಾರೆ! 'ನೆನಪಿನ ದೋಣಿಯಲ್ಲಿ' ಆತ್ಮಕತೆಯಲ್ಲ; ಅದನ್ನು ಹಾಗೆ ನೋಡಿ ಯಾವುದೇ ತೆರನ ವಿಮರ್ಶೆ ಮಾಡುವುದು ಉಚಿತವಲ್ಲ ಎಂಬ ನನ್ನ ವಾದಕ್ಕೆ ಅವರ ಉತ್ತರ: '(ಕುವೆಂಪು) ಅವರ ಆತ್ಯಂತಿಕ ನಿಲುವುಗಳನ್ನು ಕುರಿತೂ ನಾನಿಲ್ಲಿ ಹೇಳುತ್ತಿಲ್ಲ'. ತಮ್ಮ ಬದುಕು ಮುಗಿಸಿರುವ ಲೇಖಕನೊಬ್ಬನ ಆತ್ಯಂತಿಕ ನಿಲುವುಗಳ ಬಗ್ಗೆ ಮಾತನಾಡದೆ, ಆತನ ಯಾವುದೋ ಕಾಲದ ನಿಲುವುಗಳ ಬಗ್ಗೆ ನಿರ್ಣಾಯಕವಾಗಿ ಮಾತನಾಡುವುದು ಅದೆಂತಹ ವಿಮರ್ಶೆ ಅಥವಾ ಸಂಶೋಧನೆ ಹೆಗಡೆಯವರೇ?

ಎರಡನೆಯದಾಗಿ, ಕುವೆಂಪು ತಮ್ಮ ಜೀವನ ದರ್ಶನವನ್ನು ರೂಪಿಸಿಕೊಂಡ ಮೂಲಗಳು ಎಂದು ಹೆಗಡೆಯವರು ಪಟ್ಟಿ ಮಾಡುವ ಕೆಲವು ವಿವರಗಳೇ ಪ್ರಶ್ನಾರ್ಹವಾಗಿವೆ ಎಂದು ನಾನು ನೀಡಿರುವ ವಿಷದೀಕರಣಕ್ಕೆ ಹೆಗಡೆಯವರ ಪ್ರತಿಕ್ರಿಯೆ: 'ಅವರಿಗಿಂತಲೂ ಚೆನ್ನಾಗಿ ನಾನು ಆ ಕೆಲಸ ಮಾಡಿದ್ದೇನೆ'. ಅವರು ಇಂತಹ ಕೆಲಸಗಳನ್ನು ನನಗಿಂತ ಚೆನ್ನಾಗಿ ಮಾಡಬಲ್ಲರೆಂದು ನನಗೆ ಗೊತ್ತು. ಆದರೆ ಮಾಡಿಲ್ಲ ಎಂಬುದೇ ನನ್ನ ವಿಷಾದ! (ನಾನೇ ಸಂಪಾದಿಸಿರುವ-'ಕುವೆಂಪು: ಒಂದು ಪುನರನ್ವೇಷಣೆ'-ಪುಸ್ತಕದಲ್ಲಿ) ಅವರು ಆ ಕೆಲಸವನ್ನು ಹಾಗೆ ಚೆನ್ನಾಗಿ ಮಾಡಿದ್ದಾರೆ ಎಂದು ನನಗೆ ಮನವರಿಕೆಯಾಗಿದ್ದರೆ, ನಾನು ಆ ಪ್ರಶ್ನೆಯನ್ನೇ ಎತ್ತುತ್ತಿರಲಿಲ್ಲ. ಏಕೆಂದರೆ, ಹೆಗಡೆಯವರು ತಮ್ಮ ಮೂಲ ಲೇಖನದಲ್ಲಿ ಹೇಳುವ ಹಾಗೆ, ಕುವೆಂಪು ಅವರ ವ್ಯಕ್ತಿತ್ವವನ್ನು ನಿಜಾರ್ಥದಲ್ಲಿ ರೂಪಿಸಿದ್ದು ವೇದೋಪನಿಷತ್ತುಗಳಲ್ಲ; ಬದಲಿಗೆ, ಅವುಗಳನ್ನು ಕುರಿತು ಅವರಿಗೆ ಸಾಧ್ಯವಾದ ವೈಚಾರಿಕ ವಿಮರ್ಶೆಯ ಸಾಧ್ಯತೆಗಳು.

ಮೂರನೆಯದಾಗಿ, ವೈಯುಕ್ತಿಕ ಅಥವಾ ನೇರ ಅನುಭವದ ಆಧಾರದ ಮೇಲೇ ಬದುಕಿನ ಎಲ್ಲ ನಿಲುವುಗಳು ತೀರ್ಮಾನವಾಗುವುದಿಲ್ಲ. ಹಾಗಾಗಿ, ಕುವೆಂಪು ಅವರ ನಿಲುವುಗಳಿಗೆ ಅವರ ವೈಯುಕ್ತಿಕ ಬದುಕಿನಲ್ಲೇ ನೇರ 'ಸಾಕ್ಷ್ಯ'ಗಳನ್ನು ಹುಡುಕುವುದು ಮತ್ತು ಅಂತಹ ಸಾಕ್ಷ್ಯಗಳು ಸಿಕ್ಕುತ್ತಿಲ್ಲ ಎಂದು ಅವರ ನಿಲುವುಗಳ ಬಗ್ಗೆ ಯಾವುದೇ ತೆರನ ಟೀಕು ಬರೆಯುವುದು ಸಾಧುವಲ್ಲ ಎಂಬ ನನ್ನ ಸೂಚನೆಗೆ ಹೆಗಡೆಯವರ ಪ್ರತಿಕ್ರಿಯೆ ಬರೀ ಮೌನ!

ಇನ್ನು ಬಾಲಗಂಗಾಧರರ ಚಿಂತನೆ ಜಾತಿ ಪದ್ಧತಿಯ ಆಚರಣೆಗಳನ್ನು ಕುರಿತಂತೆ ಮೇಲ್ಜಾತಿಗಳ ಮೇಲಿನ 'ವೃಥಾ' ಆರೋಪಗಳನ್ನು ಅಲ್ಲಗೆಳೆಯುತ್ತದೆ ಎಂಬ ಕಾರಣಕ್ಕೆ ಕೆಲವು ಗುಂಪುಗಳಲ್ಲಿ ಅದು ರೋಮಾಂಚನ ಉಂಟು ಮಾಡಿದೆ ಎಂಬ ನನ್ನ ಅಭಿಪ್ರಾಯದ ಬಗ್ಗೆ ಹೆಗಡೆಯರೇಕೆ ಅಷ್ಟೊಂದು ಹಾರಾಡಬೇಕೋ ತಿಳಿಯದಾಗಿದೆ! ನಾನು ಅಂತರ್ಜಾಲದಲ್ಲಿ ಬಾಲು ಅವರ ವಿಚಾರಧಾರೆ ಬಗ್ಗೆ ನಡೆದಿರುವ ಚರ್ಚೆಯ ವೈಖರಿ ಮತ್ತು ಉತ್ಸಾಹಗಳನ್ನು

ಮೊದಲ ಬಾರಿಗೆ ಕಂಡ ಗಾಬರಿಯಿಂದ ಮತ್ತು ಅವಕ್ಕೊಂದು ಪ್ರತಿಕ್ರಿಯೆ ಬರೆದು ಎದುರಿಸಿದ ವಾದ ಸರಣಿಯ ರೀತಿ-ನೀತಿಗಳಿಂದ ಉದ್ಭವವಾದ ಅಭಿಪ್ರಾಯವದು. ಯಾವ ಕಾರಣಕ್ಕೆ ಇಂತಹ 'ಬೃಹತ್' ಸಂಶೋಧನೆ ನಡೆಯುತ್ತಿದೆ ಎಂಬ ಕುತೂಹಲವೂ, ಸಂಶೋಧನೆ ಏನೆಂಬುದನ್ನು ಅರಿತುಕೊಳ್ಳುವುದರ ಭಾಗವಾಗಿರುತ್ತದೆ ಎಂಬುದು ಹೆಗಡೆಯವರಂತಹ ಹಿರಿಯ ಸಂಶೋಧಕರಿಗೆ ಗೊತ್ತಿಲ್ಲದಿರುವುದು ಆಶ್ಚರ್ಯಕರ. ಇದನ್ನು ತಮ್ಮನ್ನು ಟೀಕಿಸಲು ಹಾಕಿಕೊಂಡಿರುವ ಪೀಠಿಕೆ ಎಂದಷ್ಟೇ ಅವರು ಭಾವಿಸಿದರೆ ಅದು ಅವರ ದುರಂತವಷ್ಟೆ.

ಇನ್ನು ನಾಲ್ಕನೆಯದಾಗಿ, ಹೆಗಡೆಯವರ ಮುಖ್ಯ ಆಕ್ಷೇಪಣೆಗೆ ಬರೋಣ. '...ವಿಶೇಷವಾಗಿ ಬ್ರಾಹ್ಮಣರನ್ನು ಕುರಿತ ಕುವೆಂಪು ಅವರ ದ್ವಂದ್ವಾತ್ಮಕ ನಿಲುವುಗಳೆಂದು ಹೆಗಡೆಯವರು ಪ್ರಸ್ತುತಪಡಿಸುವ ಪ್ರಕರಣಗಳೇ, ಅವರ ನಿಲುವು ಹೆಗಡೆಯವರು ತೀರ್ಮಾನಿಸಿರುವಂತೆ ಬ್ರಾಹ್ಮಣ ವಿರೋಧ ಅಥವಾ ದ್ವೇಷದ ಮೇಲೆ ನಿಂತುದಲ್ಲ ಎಂದು ಸೂಚಿಸುವಂತಿದೆ' ಎಂಬ ನನ್ನ ಅಭಿಪ್ರಾಯವೇ ಹೆಗಡೆಯವರು ನನ್ನ ಮೇಲೆ ಈ ಹಿಂದೆ ಪಟ್ಟಿ ಮಾಡಿದಂತಹ ವಿವಿಧ ಆರೋಪ ಮತ್ತು ಟೀಕೆಗಳ ಸುರಿಮಳೆ ಮಾಡಲು ಕಾರಣವಾಗಿರುವುದು. ಅವರು ತಮ್ಮ ಈ ಆರೋಪ-ಟೀಕೆಗಳಿಗೆ ಸಮರ್ಥನೆಯಾಗಿ, 'ಪ್ರಸ್ತುತ ಇಡೀ ಲೇಖನದಲ್ಲಿ ಎಲ್ಲೂ ಕುವೆಂಪು ಅವರಿಗೆ ಬ್ರಾಹ್ಮಣ ವಿರೋಧ ಅಥವಾ ದ್ವೇಷವಿತ್ತು ಎಂಬ ಇಂಗಿತವನ್ನು ನಾನು ನೀಡಿಲ್ಲ' ಎಂದು ಹೇಳುತ್ತಾರೆ. ಅಲ್ಲದೆ ಕುವೆಂಪು ಅವರ ಬಗ್ಗೆ ಅವರು ಗೌರವ ಹೊಂದಿದ್ದಾರೋ ಇಲ್ಲವೋ ಅಥವಾ ಸದರಿ ಸಂಶೋಧನೆಯ ಸಂದರ್ಭದಲ್ಲಿ ಅವರು ಅವರಿಗೆ ಋಣಿಯಾಗಿದ್ದಾರೋ ಇಲ್ಲವೋ ಎಂಬುದು ಇಲ್ಲಿ ಚರ್ಚಿತವಾಗುತ್ತಿರುವಂತೆ, ಆ ಬಗ್ಗೆ ಹೆಗಡೆಯವರು ವಿವರಣೆ ನೀಡುವ ಪ್ರಯತ್ನವನ್ನೂ ಮಾಡಿದ್ದಾರೆ. ಅದರ ಅಗತ್ಯ ಅವರಿಗೇಕೆ ಈಗ ಕಂಡುಬಂದಿತೋ ತಿಳಿಯದು!

'ನೆನಪಿನ ದೋಣಿಯಲ್ಲಿ' ಕುರಿತ ಹೆಗಡೆಯವರ ಲೇಖನದ ಉದ್ದೇಶವೇ, ಕುವೆಂಪು ಅವರು ಈ ಕೃತಿಯಲ್ಲಿ ಜಾತಿ ಪದ್ಧತಿ ಕುರಿತು ವ್ಯಕ್ತಪಡಿಸಿರುವ ಎಲ್ಲ ಅಭಿಪ್ರಾಯ, ಟೀಕೆಗಳೂ ಅವರ ನೇರ ಮತ್ತು ವೈಯುಕ್ತಿಕ ಅನುಭವಗಳನ್ನು ಆಧರಿಸಿಲ್ಲ; ಬದಲಿಗೆ, ಬ್ರಾಹ್ಮಣರೇ ಜಾತಿ ಪದ್ಧತಿಯ ಎಲ್ಲ ಅನಾಹುತಗಳಿಗೆ–ಜಾತಿ ತಾರತಮ್ಯ, ಶೂದ್ರರ ದಮನ ಮತ್ತು ನಿರ್ಲಕ್ಷ್ಯ ಇತ್ಯಾದಿ–ಕಾರಣವೆಂದು ಪ್ರತಿಪಾದಿಸುವುದೆಂದು ಹೇಳಲಾದ 'ಜಾತಿ ಪದ್ಧತಿ ಕುರಿತಾದ ಅಭಿಜಾತ ನಿರೂಪಣೆ' (Classical account of Caste System)ಯನ್ನು ನಂಬಿ ಮೂಡಿದಂತಹವು ಎಂದು ಸಾಬೀತುಪಡಿಸುವುದೇ ಆಗಿದೆ. ಹೆಗಡೆಯವರು ಕುವೆಂಪು ತಮಗೆ ಸಹಾಯ ಮಾಡಿದ, ಪ್ರೋತ್ಸಾಹಿಸಿದ ಬ್ರಾಹ್ಮಣರ ಬಗ್ಗೆ ವ್ಯಕ್ತಪಡಿಸಿರುವ ಸದಭಿಪ್ರಾಯಗಳನ್ನು ಉಲ್ಲೇಖಿಸಿರುವುದೂ ಈ ಉದ್ದೇಶದ ಭಾಗವಾಗಿಯೇ. ಕುವೆಂಪು ಅವರು ಎಲ್ಲ ಧರ್ಮಗಳಲ್ಲೂ ಗುರುತಿಸುವ ಪುರೋಹಿತಶಾಹಿಯ ಬಗ್ಗೆ ಮಾಡಿರುವ ಟೀಕೆಗಳನ್ನು ಇಡೀ ಮತ್ತು ಬರೀ ಬ್ರಾಹ್ಮಣ ಸಮುದಾಯಕ್ಕೆ ಅನ್ವಯಗೊಳ್ಳುವ ರೀತಿಯಲ್ಲಿ ಅರ್ಥೈಸಿ, ಅವನ್ನು ಜಾತಿ ಪದ್ಧತಿ ಕುರಿತ ಕುವೆಂಪು ಅವರ ಅಭಿಪ್ರಾಯಗಳಂತೆ ಮಂಡಿಸಿರುವ

ಹೆಗಡೆಯವರ 'Caste System in Kuvempu' autobiography, '*Nenapina Doniyallli*' ಲೇಖನದ ಈ ಕೆಲವು ತೀರ್ಮಾನಗಳನ್ನು ಅವು ಇಂಗ್ಲಿಷಿನಲ್ಲಿರುವಂತೆಯೇ ತದ್ವತ್ತಾಗಿ ಓದಿದರೆ, ಅವರ ಮಾತುಗಳ ಇಂಗಿತವೇನು ಮತ್ತು ನನ್ನ ಮಾತುಗಳು ದುರುದ್ದೇಶಪೂರಿತವೋ, ತಿರುಚಿದ್ದೋ, ಆರೋಗ್ಯಪೂರ್ಣ ಚರ್ಚೆಯ ಸಾಧ್ಯತೆಯನ್ನು ಮುಚ್ಚಿ ಹಾಕುವಂತಹದ್ದೋ ಎಂಬುದು ಓದುಗರಿಗೆ ಸ್ಪಷ್ಟಗೊಳ್ಳಬಹುದು:

Kuvempu's writings imbue the spirit of Shudra reformation and a criticism of Brahmans and Hinduism in general.

Kuvempu's conception of Hinduism and the caste system, **as it is expressed in many of his writings** (ಒತ್ತು ನನ್ನದು) goes as follows:

Brahmins are the priests of Hinduism and the greedy brahminical priesthood is entirely responsible for the degeneration of Hinduism. This degeneration has occurred in the following way:

a) Inspired by greed and ignorance, the Brahman *purohitas* have introduced wrong practices and caste discrimination through interpolations in, and misinterpretations of, the original Hindu texts.

b) Through the caste system, they isolated the Shudra section from the rest of society as inferior people. They denied the Shudra access to the Hindu texts and revelations by denying them an education and imposing cruel punishments for violating the brahmanical restrictions.

c) They want the Shudras to remain in this status perpetually. Therefore, they continue to misguide them through their superstitious and immoral practices, by denying them Sanskrit education and equal status and by discouraging Shudras from elevating their status. The do not tolerate the Shudras who try to violate these restrictions and arrogate the status of the Brahmins.

The author(ie Kuvempu) was skeptical about Hinduism, he says, because of the illiberal and narrow minded propagations of the traditional Brahmins.

There are experiences which Kuvempu himself view as confirmation of the classical account: anecdotes concerning the meanness of the Brahmins.....

—ಇಷ್ಟು ಸಾಕೆಂದು ಕಾಣುತ್ತದೆ.

ಇಷ್ಟೆಲ್ಲ ಚರ್ಚೆಯ ನಂತರ ನಾನು ನನ್ನ ಪ್ರತಿಕ್ರಿಯೆಯಲ್ಲಿ ಮಾಡಿರಬಹುದಾದ ಒಂದು ತಾಂತ್ರಿಕ ತಪ್ಪೆಂದು ನನಗನ್ನಿಸಿದ್ದು, ಹೆಗಡೆಯರು ಆಕ್ಷೇಪಿಸಿರುವ ನನ್ನ ವಾಕ್ಯದಲ್ಲಿ 'ವಿರೋಧ' ಶಬ್ದದ ಜೊತೆಗೆ ಅದರ ಅತಿಯನ್ನು ಸೂಚಿಸಲು 'ದ್ವೇಷ' ಎಂಬ ಪದವನ್ನು (ಅದೂ ಪರ್ಯಾಯವಾಗಿ ಮಾತ್ರ) ಬಳಸಿರುವುದು. ಇದು ಬಿಟ್ಟರೆ ಹೆಗಡೆಯವರ ವಾದವನ್ನು ಅದು ಇದ್ದಂತೆಯೇ ಪ್ರಸ್ತುತಪಡಿಸಿರುವ ವಿಶ್ವಾಸ ನನಗಿದೆ. ಹಾಗಾಗಿ, ಈಗ ಹೆಗಡೆಯವರು ನಿರೀಕ್ಷಿಸಿರುವ ತಪ್ಪೊಪ್ಪಿಗೆ ನೀಡಬೇಕಾದವರು ಯಾರು ಮತ್ತು ಅವರ ಸಂಶೋಧನೆ ಅವಸರದಲ್ಲಿ ಮುಗ್ಗರಿಸಿದೆಯೋ ಇಲ್ಲವೋ ಎಂಬುದನ್ನು ಓದುಗರೇ ತೀರ್ಮಾನಿಸಬಹುದು. ಅಲ್ಲದೆ, ಈ ಮೇಲಿನ ಭಾಗಗಳನ್ನು ಆರಿಸಿರುವ ಲೇಖನದಲ್ಲಿ ತಾವು ಇಲ್ಲವೆಂದು ಸಾಧಿಸಿ ತೋರಿಸಲೆತ್ನಿಸಿರುವ Caste system ಎಂಬುದನ್ನು ಸ್ವತಃ ಅವರೇ ಚರ್ಚೆಯ ಮಧ್ಯೆ ಮತ್ತೆ ಮತ್ತೆ ಒಂದು ಪೂರ್ವಕಲ್ಪನೆಯಾಗಿ ಬಳಸಬೇಕಾದ ಅನಿವಾರ್ಯತೆಯನ್ನುಂಟು ಮಾಡಿರುವ ಕಡೆ ಹೆಗಡೆಯವರು ಸ್ವಲ್ಪ ಗಮನ ಹರಿಸಿದರೂ ಸಾಕು, ಅವರ ವಾದವನ್ನು ಪ್ರಶ್ನಿಸುತ್ತಿರುವವರ ವಿಚಾರಗಳ ನೆಲೆಗಳನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳುವ ಅವಕಾಶ ಉಂಟಾಗಬಹುದೆಂದೂ ಅವರಿಗೆ ಈ ಸಂದರ್ಭದಲ್ಲಿ ಸೂಚಿಸಬಯಸುವೆ.

('ಸಂವಾದ', ಜನವರಿ ೨೦೦೯)

■

೪೭. ಕನ್ನಡ ವಿರೋಧಿಯಾಗುತ್ತಿರುವ ಕನ್ನಡ ಚಳುವಳಿ

ಚಳವಳಿ ಎಂದರೆ ಮೂಲತಃ ತಳಮಳ. ಇದೀಗ ಅದು ಬಹಿರಂಗ ಆಂದೋಲನ ಎಂಬರ್ಥದಲ್ಲೂ ಚಾಲ್ತಿಯಲ್ಲಿರುವುದರಿಂದ, ಕನ್ನಡ ಚಳವಳಿ ಎಂದಾಕ್ಷಣ ನಾವು ಸಾರ್ವಜನಿಕ ವಾಗಿ ಕನ್ನಡಕ್ಕಾಗುತ್ತಿರುವ ಅನ್ಯಾಯಗಳೆಂದು ಹೇಳಲಾದ ವಿಷಯಗಳ ಬಗ್ಗೆ ಬೀದಿಯಲ್ಲಿ ನಡೆಯುವ ಪ್ರತಿಭಟನೆ-ಧರಣೆ-ಪ್ರದರ್ಶನಗಳನ್ನೇ ಕನ್ನಡ ಚಳವಳಿ ಎಂದು ಭಾವಿಸತೊಡಗಿದ್ದೇವೆ. ಕಳೆದ ಹತ್ತಾರು ವರ್ಷಗಳಿಂದ ಕನ್ನಡದ ಹೆಸರಲ್ಲಿ ನಡೆಯುತ್ತಿರುವ ಚಳವಳಿಗಳು ಇದೇ ರೂಪದಲ್ಲಿ ವ್ಯಕ್ತವಾಗುತ್ತಿರುವುದರಿಂದ, ಜನ ಹಾಗೆ ಭಾವಿಸಿರುವುದೂ ಸಹಜವಾಗಿದೆ. ಆದರೆ ಈ ರೂಪದ ಚಳವಳಿಗಳು ಇಷ್ಟು ವರ್ಷ ಬೀದಿ ಬೀದಿ ಸುತ್ತಿದರೂ, ಕನ್ನಡಿಗರೆಲ್ಲರಿಗೂ ಕನ್ನಡದಲ್ಲೇ ಮೂಲಶಿಕ್ಷಣ ದೊರಕಿಸುವ ಮೂಲಕ ಕನ್ನಡಕ್ಕಾಗುವ ಎಲ್ಲ ರೀತಿಯ ಅಪಾಯಗಳನ್ನು ತಡೆಯಬಹುದೆಂಬ ಮೂಲ ಅರಿವನ್ನೇ ಕಳೆದುಕೊಂಡು ಕನ್ನಡ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಸರ್ಕಾರಿ ಆಜ್ಞೆಗೆ ದಾರಿ ಮಾಡಿಕೊಟ್ಟು; ಈಗ ಬೀದಿ ಬದಿಯ ಫಲಕಗಳಿಗೆ ಹಾಗೂ ಅನ್ಯ ಭಾಷಿಕರ ನಾಯಕರ ಮುಖಗಳಿಗೆ ಮಸಿಯನ್ನೋ, ಮೊಟ್ಟೆಸಾರವನ್ನೋ ಬಳಿಯುವ ಕಾರ್ಯಕ್ರಮಗಳ ಮೂಲಕ ತನ್ನ ಹತಾಶೆಯನ್ನು ವ್ಯಕ್ತಪಡಿಸುವಂತಹ ಅಧೋಗತಿಗೆ ತಲುಪಿದೆ. ದುರಂತವೆಂದರೆ, ಈ ಹತಾಶೆಯನ್ನೇ ವೀರಾವೇಶವೆಂದು ಈ ಚಳವಳಿಯ ಸದ್ಯದ ನಾಯಕರು ಬಗೆದಿರುವುದು ಮತ್ತು ಅದಕ್ಕೆ ಚಳವಳಿಯ ಹಿರಿಯರೆನಿಸಿಕೊಂಡವರು ಮಾನ್ಯತೆ ನೀಡುತ್ತಿರುವುದು!

ಈ ಬೆಳವಣಿಗೆ ಕನ್ನಡ ಚಳವಳಿಗೆ ಏನಾಗಿದೆ ಎಂಬುದರ ಎಲ್ಲ ಕಥೆಯನ್ನೂ ಹೇಳುತ್ತದೆ: ಯಾವ ಮಹದಾಶಯದೊಡನೆ ಈ ಚಳವಳಿ ಮೂಡಿತೋ ಅದನ್ನೇ ಮರೆತು ಇಂದು ಚಿಲ್ಲರೆ ಭಾಷಾ ವೈಷಮ್ಯದ ರಾಜಕಾರಣಕ್ಕೆ ತನ್ನನ್ನು ಸೀಮಿತಗೊಳಿಸಿಕೊಂಡು, ಕಾಲಧರ್ಮಕ್ಕನುಸಾರವಾಗಿ ಒಂದು ದಂಧೆಯಾಗಿ ಮಾರ್ಪಟ್ಟಿದೆ. ಈ ಚಳವಳಿಯ ಸದ್ಯದ ನಾಯಕರು ಹಾಗೂ ಅವರಿಗೆ ಬೆಂಬಲವಾಗಿ ನಿಂತಿರುವ ಹಿರಿಯ ನಾಯಕರ ವೈವಿಧ್ಯಮಯ ದಂಧೆಗಳನ್ನು ಸುಮ್ಮನೆ ನೋಡಿದರೆ ಸಾಕು, ಇದು ಸ್ಪಷ್ಟವಾಗುತ್ತದೆ. ಇದು ಹೀಗೇಕಾಯಿತು? ಕನ್ನಡ ಚಳವಳಿ ರೂಪುಗೊಂಡ ರೀತಿನೀತಿಗಳಲ್ಲೇ ಏನಾದರೂ ದೋಷವಿದ್ದವೇ? ಅದನ್ನು ಮುನ್ನಡೆಸಿದ ನಾಯಕರೇ ಏನಾದರೂ ತಪ್ಪು ಮಾಡಿದರೆ? ಜಾಗತೀಕರಣದ ಭರಾಟೆಯ ಇಂದಿನ ದಿನಗಳಲ್ಲಿ ಕನ್ನಡ ಚಳವಳಿ ಎಂಬುದೇ ಬೆಲೆ ಕಳೆದುಕೊಂಡು ಅಪ್ರಸ್ತುತವೆನ್ನಿಸಿದೆಯೇ?

ದಂಧೆಯೇ ಕಾಲಧರ್ಮ ಪ್ರತೀಕವಾಗಿ ತೊಡಗಿರುವಾಗ, ಚಳವಳಿಗಳೂ ದಂಧೆಗಳಾಗಿ ಮಾರ್ಪಾಟಾಗುವುದು ಅನಿವಾರ್ಯವೆ?–ಈ ಎಲ್ಲ ಪ್ರಶ್ನೆಗಳನ್ನು ಪರಿಶೀಲಿಸಲು ಕನ್ನಡ ಚಳವಳಿ ಎಂಬುದು ಹುಟ್ಟಿದ ಹಾಗೂ ವಿಕಾಸಗೊಳ್ಳುತ್ತಾ ಬಂದ ರಾಜಕೀಯ ಸಂದರ್ಭಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಏಕೆಂದರೆ, ಭಾಷೆ ಎಂಬುದು ಕೇವಲ ಸಂಪರ್ಕ ಸಾಧನವಾಗಿರದೆ, ಒಂದು ಸಂಸ್ಕೃತಿ ಮಾಧ್ಯಮವೂ ಆಗಿದ್ದು; ರಾಜಕಾರಣವೆಂಬುದು ತನ್ನ ಚೇತನವನ್ನು ಪಡೆದುಕೊಳ್ಳುವುದು ಸಾಂಸ್ಕೃತಿಕ ಬಲಸಂವರ್ಧನೆಯ ರೂಪದಲ್ಲೇ (ಇಂದಿನ ಜಾಗತೀಕರಣ ತನ್ನ ಬೆಂಬಲಿಗರನ್ನು ಸೃಷ್ಟಿಸಿಕೊಳ್ಳುತ್ತಿರುವ ರೀತಿ ನೀತಿಗಳನ್ನೇ ನೋಡಿ) ಎಂಬುದನ್ನು ನಾವು ಮರೆಯುವಂತಿಲ್ಲ.

ಸಂಸ್ಕೃತ ಪರಂಪರೆಯೊಂದಿಗಿನ ಸೆಣೆಸಾಟದಲ್ಲೇ ರೂಪುಗೊಂಡ ಕನ್ನಡ ಸಂಸ್ಕೃತಿಯ ಚರಿತ್ರೆಯಲ್ಲಿ ಸಹಜವಾಗಿಯೇ, ಕನ್ನಡದ ಮೊದಲ ಶಾಸನಕ್ಕೆ –ಅದು ಹಲ್ಮಿಡಿಯೇ ಆಗಿರಲಿ, ಮತ್ತೊಂದೇ ಆಗಿರಲಿ–ಕಾರಣನಾದವನೇ ಮೊದಲ ಕನ್ನಡ ಚಳವಳಿಗಾರ ಎನ್ನಬಹುದು. ಹೀಗೆ ಕನ್ನಡ ಚಳವಳಿಗೆ ಕನಿಷ್ಠ ೧೫೦೦ ವರ್ಷಗಳ ಇತಿಹಾಸವಿದೆ ಎಂದು ಹೇಳಬಹುದು. ನೃಪತುಂಗ, ಪಂಪರಾದಿಯಾಗಿ ಕುವೆಂಪು-ತೇಜಸ್ವಿಯವರೆಗೆ ಈ ಕನ್ನಡ ಚಳವಳಿ ಕನ್ನಡ ಜನರ ಬದುಕಿನ ಹಲವು ನೆಲೆಗಳಲ್ಲಿ ರೂಪುಗೊಳ್ಳುತ್ತಾ ಬಂದಿದೆ. ಇಲ್ಲಿ ನಾನು ಕುವೆಂಪು–ತೇಜಸ್ವಿಯವರೆಗೆ ಎಂದು ನಿರ್ದಿಷ್ಟವಾಗಿ ಹೇಳಲು ಕಾರಣವಿದೆ. ಕುವೆಂಪು ಕನ್ನಡ ಚಳವಳಿ ಈ ಮೇಲೆ ಸೂಚಿಸಿದಂತಹ ಹತಾಶ ರೂಪ ತಳೆಯುವ ಮುನ್ನ ಹೊಂದಿದ್ದ ತಾತ್ವಿಕ ಘನತೆಯ ಪ್ರತೀಕವಾಗಿದ್ದರೆ, ತೇಜಸ್ವಿ ಈ ತಾತ್ವಿಕ ಘನತೆಗೆ ಒಂದು ರಾಜಕೀಯ ಅರ್ಥಕೊಟ್ಟು, ಮೊದಲ ಬಾರಿಗೆ ಆಧುನಿಕ ಕನ್ನಡ ಚಳವಳಿಯ ಆಂತರಿಕ ದೌರ್ಬಲ್ಯಗಳ ಬಗ್ಗೆ ಒಳನೋಟವುಳ್ಳ ಒಂದು ವ್ಯಾಖ್ಯಾನ ಮಂಡಿಸಿದವರು: "ಕರ್ನಾಟಕದ ಈಚಿನ ಕನ್ನಡ ಚಳವಳಿಗಳೂ ಕೂಡಾ ವ್ಯಾಪಕ ಹಾಗೂ ವಿಸ್ತೃತ ರೂಪ ತಾಳದೆ, ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಆಂದೋಲನಗಳ ಸ್ವರೂಪಕ್ಕೆ ತಿರುಗದೆ ಹೋದುದಕ್ಕೆ ಕಾರಣವೇನು? ಇದಕ್ಕೆ ನನಗೆ ಹೊಳೆಯುವ ಮುಖ್ಯ ಕಾರಣ–ಬಿ.ಎಂ.ಶ್ರೀ, ಅ.ನ.ಕೃ., ರಾಮಮೂರ್ತಿ ಮುಂತಾದ ಬ್ರಾಹ್ಮಣರು ಇದರ ನೇತೃತ್ವ ವಹಿಸಿದ್ದು. ಏಕೆಂದರೆ ಬ್ರಾಹ್ಮಣನಿಂದ ಸ್ಫೂರ್ತಿಗೊಳ್ಳುವ ದೇಶಭಾಷಾ ಚಳವಳಿಗಳು ಕೇವಲ ಅವನ ಆಲೋಚನೆಗೆ ಅಭಿವ್ಯಕ್ತಿ ಸಿದ್ಧಿಯನ್ನು ಒದಗಿಸುವ ಸಾಹಿತ್ಯಕ್ರಾಂತಿಗೆ ಮಾತ್ರ ಸೀಮಿತವಾಗಿರುತ್ತದೆ. ಇದಕ್ಕೆ ಸಾಹಿತ್ಯದಲ್ಲಿ ಕ್ರಾಂತಿಕಾರಿಯಾಗಬೇಕೆಂದು ಹಾತೊರೆದ ಅಡಿಗರು ಸಾಮಾಜಿಕವಾಗಿ ಸಂಪ್ರದಾಯನಿಷ್ಠರಾಗಿ, ವರ್ಣಾಶ್ರಮ ಧರ್ಮ ಪ್ರತಿಪಾದಿಸಿದ್ದು; ಆಡುಭಾಷೆಯಲ್ಲೇ ಕಾವ್ಯಬರೆಯಬೇಕೆಂದ ಅವರು ದೇಶಭಾಷಾ ಮಾಧ್ಯಮದಲ್ಲಿ ಪಾಠ ಹೇಳುವುದನ್ನು ವಿರೋಧಿಸಿದ್ದು–ಇತ್ಯಾದಿಗಳನ್ನು ಉದಾಹರಿಸಬಹುದು. ಕನ್ನಡ ಚಳವಳಿ, ತಮಿಳು ಚಳವಳಿಯಂತೆ ಶೂದ್ರ ಆಂದೋಲನದ ಸ್ವರೂಪ ತಳೆಯದೆ ಹೋಯಿತು..." ('ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ': ಕರ್ನಾಟಕ ಕಲಾವಿದರ ಹಾಗೂ ಬರಹಗಾರರ ಒಕ್ಕೂಟದ ಭಾಷಣ: ಸಂಕ್ರಮಣ–೬೦).

ಮೇಲ್ನೋಟಕ್ಕೆ ಇದು ಕನ್ನಡ ಚಳವಳಿ ಕುರಿತಂತೆ ಒಂದು ಬಿಡುಬೀಸಾದ ಒರಟೊರಟಾಗಿ ಬ್ರಾಹ್ಮಣ ವಿರೋಧಿಯಾದ ಹಾಗೂ ಅನೇಕ ರೀತಿಯಲ್ಲಿ ಶೂದ್ರರೇ ಕನ್ನಡ ಚಳವಳಿಯ 'ಕ್ರಿಯಾಶೀಲ' ನಾಯಕರಾಗಿರುವ ಇಂದಿನ ಸಂದರ್ಭದಲ್ಲಿ ಅಸಂಗತವಾದ ಹೇಳಿಕೆಯಂತೆ ಕಂಡರೂ, ಅದು ಕನ್ನಡ ಚಳವಳಿಯ 'ಚರಿತ್ರೆ' ಕುರಿತಂತೆ ಒಂದು ಆಳವಾದ ತಾತ್ವಿಕ ಒಳನೋಟ ನೀಡುವುದಂತೂ ನಿಜ. ಬಹುಶಃ ಈ ಮೂಲಕ ತೇಜಸ್ವಿ, ಸಂಸ್ಕೃತ ಪರಂಪರೆಯ ವಿರುದ್ಧದ ಸಾಂಸ್ಕೃತಿಕ ಚಳವಳಿಯಾಗಿ ಆರಂಭವಾದ ಕನ್ನಡ ಚಳವಳಿ, ಇತ್ತೀಚಿನ ಚರಿತ್ರೆಯಲ್ಲಿ ತನ್ನ ಅಸ್ಮಿತೆಯನ್ನು ಸಾಧಿಸಿಕೊಳ್ಳುವ ಅನಿವಾರ್ಯತೆಯಲ್ಲಿ ಮರಾಠಿ, ತೆಲುಗು, ಉರ್ದು, ತಮಿಳು ಮುಂತಾದ ಅನ್ಯಭಾಷಿಕ ಸೋದರ ಸಮುದಾಯಗಳ ಸಾಮಾಜಿಕ ಒತ್ತಡಗಳನ್ನು ಹಾಗೂ ಹಿಂದಿ-ಇಂಗ್ಲಿಷ್‌ಗಳ ಪ್ರಭುತ್ವವಾದಿ ರಾಜಕೀಯ ಒತ್ತಡಗಳನ್ನು ನಿವಾರಿಸಿಕೊಳ್ಳುವ ಹೋರಾಟದಲ್ಲಿ ಮತ್ತೆ ಸಂಸ್ಕೃತ ಪರಂಪರೆಯ ಸಾಮಾಜಿಕ-ಸಾಂಸ್ಕೃತಿಕ ಆಶಯಗಳನ್ನೇ ಒಪ್ಪಿಕೊಳ್ಳತೊಡಗಿರುವಂತಾಗಿರುವ ವಿಪರ್ಯಾಸವನ್ನು ಸೂಚಿಸುತ್ತಿದ್ದಾರೆಂದು ಕಾಣುತ್ತದೆ. ಭಾಷೆಯೆಂಬುದು ಜನರ, ಸಮಾಜದ ಶಕ್ತಿಯೂ ಆಗಿರುವುದರಿಂದ, ಅದು ಕೇವಲ ಆತ್ಮಾಭಿಮಾನದ ಅಮೂರ್ತ ಸಂಕೇತವಾಗದೆ, ಸಾಮಾಜಿಕ ಪುನಾರಚನೆಯನ್ನು ಪ್ರಚೋದಿಸುಂತಹ ಆಲೋಚನೆಗಳ ಮೂರ್ತ ರಾಜಕೀಯ ಸಾಧನವೂ ಆಗಬೇಕೆಂಬ ಆಗ್ರಹ ಇದರಲ್ಲಿ ಕಾಣುತ್ತದೆ. ಆದರೆ ಕನ್ನಡ ಸಾಹಿತ್ಯ ಮತ್ತು ಆ ಮೂಲಕ ಸಂಸ್ಕೃತಿ ಚರಿತ್ರೆಯೆಂಬುದು ತಮಿಳು ಸಾಹಿತ್ಯ-ಸಂಸ್ಕೃತಿ ಚರಿತ್ರೆಯಂತೆ ಸಂಸ್ಕೃತ ಪರಂಪರೆಯ ವಿರುದ್ಧದ ಪ್ರತಿರೋಧಗಳ ಚರಿತ್ರೆಯಾಗಿ ಕಟ್ಟಲ್ಪಟ್ಟಿತೋ ಅಥವಾ ಅದರೊಡನೆ ಅನುಸಂಧಾನಗೈಯುತ್ತಲೇ ತನ್ನ ಚರಿತ್ರೆಯನ್ನು ಕಟ್ಟಿಕೊಂಡಿತೋ ಎಂಬುದು ಇನ್ನೂ ಆಳವಾದ ಸಂಶೋಧನೆಗೆ ಒಳಪಡಬೇಕದ ವಿಷಯವಾಗಿದ್ದು, ಇದೇ ಕುವೆಂಪು ತಾತ್ವಿಕತೆ ಮತ್ತು ತೇಜಸ್ವಿ ತಾತ್ವಿಕತೆ ನಡುವೆ ಕಾಣುವ 'ಜಗಿತ'ಕ್ಕೂ ಕಾರಣವಾಗಿದ್ದಂತೆ ತೋರುತ್ತದೆ. ಆದರೆ ಈ ಜಗಿತವೇ ಸಮಕಾಲೀನ ಕನ್ನಡ ಚಳವಳಿಯನ್ನು ಅವಲೋಕಿಸಲು ಒಂದು ಸಮರ್ಥ ತಾತ್ವಿಕ ಪರಿಕರವಾಗಿ ಉಳಿದುಕೊಂಡಿರುವುದಂತೂ ನಿಜ.

ಅದೇನೇ ಇರಲಿ, ಆಧುನಿಕ ಕನ್ನಡ ಚಳವಳಿಯ ಬೀಜ ಬಿತ್ತಿದ ಡೆಪ್ಯುಟಿ ಚೆನ್ನಬಸಪ್ಪ ಅವರು ೧೮೫೬ರಷ್ಟು ಹಿಂದೆಯೇ ಮರಾಠಿ ಪ್ರಭುತ್ವದ ನಡುವೆ ಕನ್ನಡದ ಮಕ್ಕಳಿಗೆ ಕನ್ನಡದಲ್ಲಿ ಶಿಕ್ಷಣಕ್ಕಾಗಿ ಆರಂಭಿಸಿದ ಹೋರಾಟ ಸರಿಯಾಗಿ ಒಂದು ಶತಮಾನದ ನಂತರ ಕನ್ನಡ ರಾಜ್ಯೋದಯದಲ್ಲಿ ಮೂರ್ತಗೊಂಡಿದ್ದರ ಹಿಂದೆ; ಒಂದು ಭಾಷೆಯನ್ನಾಡುವ ಜನ ಒಟ್ಟಿಗೆ ಬದುಕುವ ಸಾಂಸ್ಕೃತಿಕ ಆಶಯದ ಜೊತೆಗೇ, ಒಂದು ಪ್ರತ್ಯೇಕ ಆಡಳಿತ ಘಟಕವಾಗಿ ಅಭಿವೃದ್ಧಿ ಸಾಧಿಸುವ ರಾಜಕೀಯ ಆಶಯವೂ ಕೆಲಸ ಮಾಡಿದೆ ಎಂಬುದನ್ನು ನಾವು ಮರೆಯಬಾರದು. ಒಂದು ಭಾಷೆಯನ್ನಾಡುವ ಜನರನ್ನು ಎರಡು ಆಡಳಿತ ಘಟಕಗಳನ್ನಾಗಿ ಒಡೆದ ಬ್ರಿಟಿಷರ ಬಂಗಾಳ ವಿಭಜನೆಯ ರಾಜಕೀಯ ಕ್ರಮವೇ ಒಂದು ನೆಪವಾಗಿ ಸ್ಫೋಟಗೊಂಡ ಭಾರತದ ಸ್ವಾತಂತ್ರ್ಯ ಹೋರಾಟ, ನಂತರದ ದಿನಗಳಲ್ಲಿ ಸಂಘಟನೆಗೊಂಡ

ರೀತಿ ನೀತಿಗಳಿಂದಾಗಿ; ಸ್ವಾತಂತ್ರ್ಯ ಸಾಧನೆಯ ಹೊತ್ತಿಗೆ, ಭಾಷಾ ಪ್ರಾದೇಶಿಕತೆಗಳು ರಾಷ್ಟ್ರೀಯತೆಯೆಂಬ ರಾಜಕೀಯ ಒಕ್ಕೂಟದ ಪರಿಕಲ್ಪನೆಗೆ ವಿಧೇಯತೆಯನ್ನು ಸಾರುವಂತಹ ದುಃಸ್ಥಿತಿ ಉಂಟಾಯಿತು. ಇದರ ಪರಿಣಾಮವಾಗಿ ಅಖಿಲ ಭಾರತೀಯತೆಯ ಮಾರುವೇಷದಲ್ಲಿ ಸಂಸ್ಕೃತ ಪರಂಪರೆಯೇ ಮತ್ತೆ ಆಧುನಿಕ ಭಾರತದ ಆಳುವ ಸಂಸ್ಕೃತಿಯಾಗಿ ಮೇಲುಗೈ ಪಡೆಯುವಂತಹ ಪರಿಸ್ಥಿತಿ ಉಂಟಾಯಿತು. ಆದರೆ ಒಂದೂವರೆ ಶತಮಾನದಷ್ಟು ಹಿಂದೆಯೇ ಟಿಪ್ಪುಸುಲ್ತಾನನ ಅಂತಿಮ ಸೋಲಿನೊಂದಿಗೆ ತನ್ನ ಅಳಿದುಳಿದಿದ್ದ ಭೌಗೋಳಿಕ ಹಾಗೂ ಐಕ್ಯತೆಗಳನ್ನು ಕಳೆದುಕೊಂಡು ಸಾಂಸ್ಕೃತಿಕ ವಿಘಟನೆಗೆ ಈಡಾಗಿದ್ದ ಕನ್ನಡಕ್ಕೆ, ತಮಿಳು ತೆಲುಗುಗಳಂತೆ ಇದನ್ನು ಧಿಕ್ಕರಿಸುವ ಶಕ್ತಿಯಾಗಲಿ, ತನ್ನ ಮೂಲ ಅಸ್ಮಿತೆಯನ್ನು ಮತ್ತೆ ಕ್ರೋಢೀಕರಿಸಿಕೊಳ್ಳುವ ಛಾತಿಯಾಗಲಿ ಇಲ್ಲದೆ ಹೋಯಿತು.

ಹೀಗಾಗಿ ಸ್ವಾತಂತ್ರ್ಯ ಸಾಧನೆಯ ಹೊತ್ತಿಗೆ; ಅದರ ಜೊತೆಜೊತೆಗೇ ಮೂಡಲಾರಂಭಿಸಿದ್ದ ಕನ್ನಡ ರಾಜ್ಯೋದಯದ ಕನಸಿಗೆ ತಾತ್ವಿಕತೆ ಒದಗಿ ಬಂದದ್ದು, ಕನ್ನಡ ಕುಲಪುರೋಹಿತರೆಂದು ಪ್ರಸಿದ್ಧರಾದ ಆಲೂರು ವೆಂಕಟರಾಯರೆಂಬ ಅಪ್ಪಟ ಸಂಸ್ಕೃತ ಪರಂಪರೆಯ ವೈದಿಕ ನಾಯಕರಿಂದ. ಜಾತಿ ಹಾಗೂ ಅಸ್ಪೃಶ್ಯತಾ ನಿವಾರಣೆಯ ಗಾಂಧೀಜಿಯ ಕಾರ್ಯಕ್ರಮಗಳನ್ನು ತಾತ್ವಿಕ ಹಾಗೂ ವ್ಯಾವಹಾರಿಕ–ಈ ಎರಡೂ ನೆಲೆಗಳಲ್ಲಿ ವಿರೋಧಿಸಿ ಸ್ವಾತಂತ್ರ್ಯಾಂದೋಲನ ದಿಂದ ದೂರ ಸರಿದಿದ್ದ ಇವರು, 'ಕರ್ನಾಟಕದ ಗತ ವೈಭವ'ದ ಆಧಾರದ ಮೇಲೆ ಹೊಸ ಕರ್ನಾಟಕತ್ವದ ಒಂದು ಭವ್ಯ ಲೌಕಿಕ ರೂಪವನ್ನು ಮಂಡಿಸಿದರು. ಆದರೆ ಅದನ್ನು 'ಭರತ ಭೂಮಿಯೆಂಬ ಧರ್ಮಕ್ಷೇತ್ರ'ದಲ್ಲಿ ತಮ್ಮ ಆರಾಧ್ಯದೈವ ವೀರ ಸಾವರ್ಕರರ 'ಹಿಂದುತ್ವ'ದ ಮಾದರಿಯ ಸ್ಫೂರ್ತಿಯಲ್ಲಿ ಅನುಷ್ಠಾನಗೊಳಿಸುವ ಆಶಯವನ್ನು ವ್ಯಕ್ತಪಡಿಸಿದ್ದರು ಅವರು! ಅಲ್ಲದೆ ಇದರ ಜೊತೆಗೇ ದಕ್ಷಿಣದಲ್ಲಿ ಕನ್ನಡ ಚಳವಳಿಯನ್ನು ಮುನ್ನಡೆಸುತ್ತಿದ್ದ; ಜೀವನದೃಷ್ಟಿಯಲ್ಲಿ ಆಧುನಿಕರೂ, ಉದಾರವಾದಿಗಳೂ ಆಗಿದ್ದ ಬಿ.ಎಂ.ಶ್ರೀ ಮತ್ತವರ ಸ್ನೇಹಿತರಿಗೆ, ಕನ್ನಡದ 'ಜನಸಾಮಾನ್ಯರನ್ನು ಕೂಡಾ ಸಂಸ್ಕಾರವಂತರನ್ನಾಗಿ ಮಾಡುವ' ರೀತಿಯಲ್ಲಿ 'ಕನ್ನಡದ ಭಾಷೆ ತಲೆ ಎತ್ತುವ ಬಗೆ'ಯನ್ನು ಪ್ರಚಾರ ಮಾಡಲು ಒದಗಿಬಂದ ಮಾದರಿಯೆಂದರೆ, ಆಧುನಿಕ ಇಂಗ್ಲಿಷ್ ಸಾಹಿತ್ಯ ಸಂಸ್ಕೃತಿಯ ಮಾದರಿ: 'ಆಧುನಿಕ ಕನ್ನಡ ಕಾವ್ಯಮಾಲೆ'ಯೊಂದನ್ನು ಸೃಷ್ಟಿಸಿದರೆ ಸಾಕು, ಕನ್ನಡ ಪುನರುಜ್ಜೀವನಗೊಳ್ಳುವುದು ಎಂಬುದು ಅವರ ಮುಗ್ಧ ನಂಬಿಕೆಯಾಗಿತ್ತು! ಅದಕ್ಕಾಗಿ ಅವರು ವ್ಯಾಪಕವಾದ ಕೆಲಸ ಮಾಡಿದರು ಕೂಡಾ.

ಹೀಗೆ ಕನ್ನಡ ರಾಜ್ಯೋದಯದ ಕನಸಿನೊಂದಿಗೇ ಮೂಡಿದ ಕನ್ನಡ ಚಳವಳಿಯ ಎರಡು ಧಾರೆಗಳೂ ತಮ್ಮ ಮೂಲಸ್ಫೂರ್ತಿಯನ್ನು ಕನ್ನಡದ ಮೂಲ ಜಾಯಮಾನದ ಹೊರಗಿನ ತಾತ್ವಿಕ ಚೌಕಟ್ಟುಗಳಿಂದಲೇ ಪಡೆದುಕೊಂಡಿದ್ದವು. ಹಾಗೂ ಕನ್ನಡ ಸಂಸ್ಕೃತಿಯ ಸ್ವಾಯತ್ತತೆಯ ಪ್ರಶ್ನೆಯನ್ನೇ ತಮ್ಮ ವ್ಯಾಪ್ತಿಯಿಂದ ಹೊರದೂಡಿದ್ದವು. ಹೀಗಾಗಿ ದೆಪ್ಪುಟಿ ಚೆನ್ನಬಸಪ್ಪನವರ ಕನ್ನಡ ಶಿಕ್ಷಣದ ಕಾರ್ಯಕ್ರಮದ ಹಿಂದಿದ್ದ ಕನ್ನಡ ಸಾಮಾಜಿಕತೆಯ ಆಶಯವೇ ಕನ್ನಡ ರಾಜ್ಯೋದಯದ ಹೊತ್ತಿಗೆ ಕಾಣೆಯಾಗಿದ್ದುದರ ವಿಪರ್ಯಾಸವನ್ನಷ್ಟೇ ತೇಜಸ್ವಿ ತಮ್ಮ

ಸಂಸ್ಕೃತಿ ಮೀಮಾಂಸೆಯ ಭಾಗವಾಗಿ ಹೇಳುತ್ತಿದ್ದಾರೆಯೇ ಹೊರತು, ಈ ಮೇಲೆ ಪ್ರಸ್ತಾಪಿಸಿದ ಹಿರಿಯರೂ ಸೇರಿದಂತೆ ನಂತರದ ದಿನಗಳಲ್ಲಿ ಕನ್ನಡ ಚಳವಳಿಯನ್ನು ತಮ್ಮದೇ ರೀತಿನೀತಿಗಳಲ್ಲಿ ಮುನ್ನಡೆಸಿದ ಮಾಸ್ತಿ, ಬೇಂದ್ರೆ, ಕಾರಂತ, ಆನಂದಕಂದ, ಅನಕೃ, ತರಾಸು, ಬೀಚಿ, ಮ. ರಾಮಮೂರ್ತಿ ಮುಂತಾದವರ ಕೊಡುಗೆಗಳನ್ನು ನಿರಾಕರಿಸುತ್ತಿಲ್ಲ ಎಂಬುದನ್ನು ನಾವು ಗಮನಿಸಬೇಕು. ಆದರೆ ಇವರೆಲ್ಲರೂ ಕನ್ನಡ ಚಳವಳಿಯನ್ನು ತಮಿಳು ಚಳವಳಿಯಂತೆ ಒಂದು ಸಾಮಾಜಿಕ ಕ್ರಾಂತಿಯ ಚಳವಳಿಯನ್ನಾಗಿ ವಿಸ್ತರಿಸದೇ ಹೋದದ್ದರ ಬಗ್ಗೆ ಅವರಿಗೆ ಸಿಟ್ಟಿದೆ.

ಕನ್ನಡ ಚಳವಳಿ ಮುಟ್ಟಿರುವ ಇಂದಿನ ಸ್ಥಿತಿ ನೋಡಿದರೆ ಅವರ ಸಿಟ್ಟು ಸಮರ್ಥನೀಯವೇ ಅನ್ನಿಸದಿರಲಾರದು. ಏಕೆಂದರೆ ಅನಕೃ, ತರಾಸು, ಮ. ರಾಮಮೂರ್ತಿ, ದೇಜಗೌ ಅವರ ಕಾಲಕ್ಕೆ ಕನ್ನಡಿಗರ ಉದ್ಯೋಗ, ವ್ಯಾಪಾರ, ಸಿನಿಮಾ ಇತ್ಯಾದಿ ಕ್ಷೇತ್ರಗಳಿಗೂ ವ್ಯಾಪಿಸಿಕೊಂಡ ಕನ್ನಡ ಚಳವಳಿ; ವಾಟಾಳ್, ನಾರಾಯಣಕುಮಾರ್‌ರಂತಹವರ ಕಾಲದ ಹೊತ್ತಿಗೆ ಬೆಂಗಳೂರು ಕೇಂದ್ರಿತವಾಗಿ ಅನ್ಯಭಾಷಾ ವಿಶೇಷವಾಗಿ ತಮಿಳು–ವಿರೋಧಿ ವಾರೆಗಣ್ಣಿನಲ್ಲೇ ನಡೆಯತೊಡಗಿ, ವಸೂಲಿ-ದುಂಡಾವರ್ತಿ ರಾಜಕಾರಣವಾಗಿ ಮಾರ್ಪಾಡಾಯಿತು. ಇದಕ್ಕೆ ಮತ್ತು ಚಳವಳಿಯ ನೇತೃತ್ವ ಅಂತಿಮವಾಗಿ ಇಂತಹವರ ಕೈಗೆ ಸಿಗುವಂತಾಗಲು, ಕರ್ನಾಟಕದ ಎಲ್ಲ ವರ್ಗಗಳ ಜನ ಇದರಲ್ಲಿ ಭಾವನಾತ್ಮಕವಾಗಿಯಾದರೂ ಭಾಗವಹಿಸುವಂತೆ ಅದನ್ನು ವಿಸ್ತರಿಸಲಾಗದ ಅದರ ದೌರ್ಬಲ್ಯವೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ನಮ್ಮ ಬದುಕಿನ ಮೂಲಭೂತ ಸಂಗತಿಗಳಾದ ಹುಟ್ಟು, ನಾಮಕರಣ, ಮದುವೆ, ಶ್ರಾದ್ಧಾದಿ ಕರ್ಮಗಳಲ್ಲದೆ ನಮ್ಮ ಪೂಜೆ-ಪುನಸ್ಕಾರ-ಪ್ರಾರ್ಥನೆ ಇತ್ಯಾದಿಗಳನ್ನು ಅನ್ಯಭಾಷೆಯಲ್ಲೇ ಉಳಿಸಿಕೊಳ್ಳುವಂತಹ ವಿಧಿ–ನಿಷೇಧಗಳಿಗೆ ಮನಸ್ಸನ್ನು ಒಪ್ಪಿಸಿಬಿಟ್ಟ ಸಂಸ್ಕೃತಿಯೊಂದು ಇವಕ್ಕೆಲ್ಲ ಅನರ್ಹವಾಗಿ ಕಂಡಿರುವ ಕನ್ನಡವನ್ನಾದರೂ ಬದುಕಿನ ಯಾವ ಎಲ್ಲೆಯವರೆಗೆ, ಎಷ್ಟು ದಿನ ತಾನೆ ಬಿಟ್ಟುಕೊಂಡೀತು?

ಚಳವಳಿಯ ಈ ಆಂತರಿಕ ದೌರ್ಬಲ್ಯವೇ ಗೋಕಾಕ್ ವರದಿ ಮತ್ತು ಅದರ ಅನುಷ್ಠಾನಕ್ಕಾಗಿ ನಡೆದ ಚಳವಳಿಗಳಿಗೆ ಕಾರಣವಾಯಿತು. ರಾಜ್ಯದಲ್ಲಿ ಕನ್ನಡಿಗರೂ ಕನ್ನಡ ಕಲಿಯದೆಯೇ ತಮ್ಮ ಪ್ರೌಢಶಿಕ್ಷಣವನ್ನು ಮುಗಿಸಬಲ್ಲಂತಹ ಪರಿಸ್ಥಿತಿ ನಿರ್ಮಾಣವಾಗಿತ್ತೆಂದರೆ, ಆವರೆಗಿನ ಕನ್ನಡ ಚಳುವಳಿ ಕನ್ನಡಕ್ಕೆ ನಿಜವಾಗಿ ಏನು ಮಾಡುತ್ತಾ ಬಂದಿತ್ತು, ಯಾವ ರೀತಿಯ ಬೆಂಬಲ-ರಕ್ಷಣೆಯನ್ನು ಒದಗಿಸುತ್ತಾ ಬಂದಿತ್ತು ಮತ್ತು ಅದರ ಕಟ್ಟಡ ಹೇಗೆ ಮರಳೇ ತುಂಬಿಕೊಂಡ ಅಡಿಪಾಯದ ಮೇಲೆ ಕಟ್ಟಲ್ಪಡುತ್ತಿತ್ತು ಎಂಬುದು ವೇದ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಗೋಕಾಕ್ ಚಳವಳಿ, ಸಾಮಾನ್ಯ ಕನ್ನಡಿಗನ ತಪ್ಪಿತಸ್ಥ ಮನೋಭಾವನೆಯ ಆಸ್ಫೋಟನೆಯೆಂಬಂತೆ ರಾಜ್ಯಾದ್ಯಂತ ಬೆಂಕಿಯಂತೆ ಹರಡಿ (ಬಹುಶಃ ರಾಜ್‌ಕುಮಾರ್‌ನ ಪ್ರವೇಶದಿಂದಾಗಿ?) ರಾಜ್ಯ ಶಾಲಾ ಶಿಕ್ಷಣಕ್ರಮದಲ್ಲಿ ಕರ್ನಾಟಕದ ಪ್ರತಿಯೊಬ್ಬರೂ ಒಂದಲ್ಲ ಒಂದು ಹಂತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಯುವಂತಹ ಪರಿಸ್ಥಿತಿ ಉಂಟಾಯಿತಾದರೂ,

ಕರ್ನಾಟಕದಲ್ಲಿ ಕನ್ನಡವನ್ನು ತನ್ನೆಲ್ಲ ಕ್ರಿಯಾಶೀಲತೆಯೊಂದಿಗೆ ಜೀವಂತವಾಗಿಡಬಲ್ಲ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವಂತಹ ವಾತಾವರಣ ಸೃಷ್ಟಿಯಾಗಲೇ ಇಲ್ಲ. ಇಂದು ಎಲ್ಲರಿಗೂ ಇಂಗ್ಲಿಷನ್ನು ಒಂದನೇ ತರಗತಿಯಿಂದ ಕಡ್ಡಾಯವಾಗಿ ಕಲಿಸುವಂತೆ ಮಾಡಿರುವ ಶಕ್ತಿಗಳೇ, ಅಂದು ಕನ್ನಡ ಮಾಧ್ಯಮ ಕಡ್ಡಾಯದ ಮೂಲಕ ರಾಜ್ಯಾದ್ಯಂತವಾದರೂ ಏಕರೂಪದ ಶಿಕ್ಷಣ ಜಾರಿಗೆ ತರಲು ಅಡ್ಡಿಯಾಗಿದ್ದ ಶಕ್ತಿಗಳಾಗಿದ್ದವು ಎಂದರೆ ತಪ್ಪಾಗಲಾರದು. ಏಕೆಂದರೆ ಕನ್ನಡ ಮಾಧ್ಯಮ ಕಡ್ಡಾಯವಾಗದೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯನ್ನು ಜಾರಿಗೆ ತರುವ ಕ್ರಮದಿಂದಾಗಿ ಕನ್ನಡ ಶಿಕ್ಷಣ ಮಾಧ್ಯಮದ ಹಿಂದಿನ ತಾತ್ವಿಕತೆಯೇ ಘಾಸಿಗೊಳ್ಳುತ್ತದೆ. ಅಲ್ಲದೇ ಅದರ ಅಗತ್ಯ; ಹಾಗಾಗಿ ಅದಕ್ಕಾಗಿ ಕೆಲವು ನಿಷ್ಠಾವಂತ ಕನ್ನಡ ಗುಂಪುಗಳ ಆಗ್ರಹದ ಮೇರೆಗೆ ರಾಜ್ಯಸರ್ಕಾರ ಇಷ್ಟು ವರ್ಷಗಳಿಂದ ನಡೆಸಿಕೊಂಡು ಬಂದ ಹೋರಾಟಕ್ಕೆ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿಕ್ಕ ಜಯ; ಆದರೆ ಕೆಲವು ಶಿಕ್ಷಣ ದಂಧೆಕೋರರು ಇದಕ್ಕೆ ಹಾಕಿರುವ ಅಡ್ಡಗಾಲನ್ನು ನಿವಾರಿಸಲು ನಡೆಸಿರುವ ಪ್ರಯತ್ನಗಳು – ಈ ಎಲ್ಲವುಗಳ ಪ್ರಸ್ತುತತೆಯೇ ಅನುಮಾನಾಸ್ಪದವೆನ್ನಿಸಿಕೊಳ್ಳುತ್ತವೆ. ಆದರೆ ಈ ಪರಿವೆಯೇ ಇಲ್ಲದೆ ಈ ಶಕ್ತಿಗಳು ಸಮಕಾಲೀನ ಅಗತ್ಯ ಹಾಗೂ ಸಾಮಾಜಿಕ ನ್ಯಾಯವೆಂಬ ಅಸ್ತ್ರಗಳನ್ನು ಬಳಸಿ, ಕನ್ನಡ ಮಾಧ್ಯಮ ವಿರೋಧಿ ಶಕ್ತಿಗಳೊಂದಿಗೆ ಕೈಜೋಡಿಸಿ ಅವಕ್ಕೂ ಈವರೆಗೆ ಇಲ್ಲದಿದ್ದ ತಾತ್ವಿಕ ಸಮಾಧಾನ ದೊರಕಿಸಿಕೊಟ್ಟಿವೆ.

೧೯೫೩ರ ಜೆ.ಬಿ. ಮಲ್ಲಾರಾಧ್ಯ ವರದಿಯಿಂದ ಹಿಡಿದು ಇತ್ತೀಚಿನ ಎಚ್. ನರಸಿಂಹಯ್ಯ–ಚಂಪಾ–ಬರಗೂರು ವರದಿಗಳವರೆಗೆ ಎಲ್ಲ ಶೈಕ್ಷಣಿಕ ಆಯೋಗಗಳೂ ಮತ್ತು ೧೯೮೯ರ ರಾಜ್ಯ ಉಚ್ಚನ್ಯಾಯಾಲಯದ ತೀರ್ಪಿನಿಂದ ಹಿಡಿದು ೧೯೯೩ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನವರೆಗೆ, ಪ್ರಾಥಮಿಕ ಶಾಲಾ ಶಿಕ್ಷಣವಾದರೂ ಕನ್ನಡ/ ಮಾತೃಭಾಷೆ ಯಲ್ಲೇ ಇರಬೇಕೆಂದು ಹೇಳಿದ್ದರೂ, ಈ ಶಕ್ತಿಗಳಿಗೆ ಇದು ಸಾಧ್ಯವಾಗಿರುವುದಾದರೂ ಹೇಗೆ ಎಂದು ಯೋಚಿಸಬೇಕಾಗುತ್ತದೆ. ಅಷ್ಟೇ ಅಲ್ಲ, ೧೯೯೪ರ ರಾಜ್ಯ ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿ ಇಂಗ್ಲಿಷ್ ಮಾಧ್ಯಮದಲ್ಲೇ ಶಿಕ್ಷಣ ನೀಡುತ್ತಿದ್ದ ಸಾವಿರಾರು ಶಾಲೆಗಳ ಅಧಿಪತಿಗಳು, ಇದರ ವಿರುದ್ಧ ಸರ್ಕಾರ ಕೈಗೊಂಡ ಕಾನೂನು ಕ್ರಮವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವ ಮತ್ತು ಈ ಸಂಬಂಧ ನ್ಯಾಯಾಲಯದಲ್ಲಿ ಸೋತ ನಂತರವೂ ತಮ್ಮ ಅಕ್ರಮ ಶಾಲೆಗಳನ್ನು ಸಕ್ರಮಗೊಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರದ ಕರ್ತವ್ಯವೆಂದು ವಾದಿಸುತ್ತ, ಪದೇ ಪದೇ ಒಂದಲ್ಲ ಒಂದು ನೆಪದಲ್ಲಿ ನ್ಯಾಯಾಲಯದ ಮೆಟ್ಟಿಲೇರುವ ಅನೈತಿಕ ಧೈರ್ಯವನ್ನು ಪ್ರದರ್ಶಿಸುತ್ತಿವೆ. ಇಂತಹ ಪರಿಸ್ಥಿತಿಯಲ್ಲೂ ಕನ್ನಡ ಮಾಧ್ಯಮ ಶಾಲೆಗಳ ಉಳಿವಿಗೆಂದೇ ಒಂದನೇ ತರಗತಿಯಂದ ಇಂಗ್ಲಿಷ್ ಕಲಿಕೆ ಅಗತ್ಯವೆಂದು ವಾದಿಸುತ್ತಾ ಪ್ರಚಂಡ ಪ್ರಚಾರಾಂದೋಲನ ಆರಂಭಿಸಿದ ಈ ಶಕ್ತಿಗಳು ತುಟಿಕ್ ಪಿಟಿಕ್ ಎನ್ನದೆ ಇರುವುದರ ಮರ್ಮವಾದರೂ ಏನು?

ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಒತ್ತಾಯಿಸಿ ಪ್ರಚಾರಾಂದೋಲನ ಆರಂಭಿಸಿದವರು ತಮ್ಮನ್ನು ಸಮರ್ಥಿಸಿಕೊಳ್ಳಲು ನೀಡಿದ ಮುಖ್ಯ ಕಾರಣವೆಂದರೆ, ಇಂದು

ಇಂಗ್ಲಿಷ್ ಸಾರ್ವಜನಿಕ ಜೀವನದ ಅವಿಭಾಜ್ಯ ಅಂಗವಾಗಿದ್ದು (ನಿಜವಾಗಿ?) ಕನ್ನಡ ಮಾಧ್ಯಮ ಶಾಲೆಗಳಲ್ಲೇ ಓದುವ–ವಿಶೇಷವಾಗಿ ಹಿಂದುಳಿದ ವರ್ಗಗಳ–ಮಕ್ಕಳು ಉದ್ಯೋಗ ಸ್ಪರ್ಧೆಯಲ್ಲಿ ಹಿಂದುಳಿಯುತ್ತಾರೆ ಎಂಬುದು. ಆದರೆ ಇಂಗ್ಲಿಷ್ ಕೂಡಾ ನಮ್ಮ ಶಿಕ್ಷಣಕ್ರಮದ ಅವಿಭಾಜ್ಯ ಅಂಗವಾಗಿ ಹೋಗಿ ಬಹಳ ವರ್ಷಗಳೇ ಆಗಿವೆ ಎಂಬ ಸಂಗತಿಯನ್ನು ಯಾಮಾರಿಸಿಯೇ ವಾದ ಮಾಡುವ ಇವರು, ಇಂದು ಪರಿಸ್ಥಿತಿ ಇವರು ಹೇಳುವಷ್ಟು ಬಿಗಡಾಯಿಸಿದ್ದರೆ ಇಂತಹ ಪರಿಸ್ಥಿತಿ ಏಕುಂಟಾಯಿತು, ಅದಕ್ಕೇನು ಕಾರಣ ಎಂಬ ಪ್ರಶ್ನೆಯನ್ನು ಎದುರಿಸುವ ಸಾಮರ್ಥ್ಯವನ್ನೇ ಕಳೆದುಕೊಂಡಿದ್ದಾರೆ. ಏಕೆಂದರೆ, ಈ ಪ್ರಶ್ನೆ ಒಂದು ದೊಡ್ಡ ಹಾಗೂ ಸಂಕೀರ್ಣ ರಾಜಕೀಯ ಪ್ರಶ್ನೆಯಾಗಿದೆ. ಕನ್ನಡ ಚಳವಳಿ ತನ್ನೆಲ್ಲ ಆಯಾಮಗಳಲ್ಲಿ ಕ್ರಿಯಾಶೀಲವಾಗದೆ, ಕೇವಲ ಭಾವಾವೇಶದ ಚಳುವಳಿಯಾಗಿ ಅವನತಿಗೊಂಡಿದ್ದರ ಹಿಂದಿನ, ತೇಜಸ್ವಿ ಎತ್ತಿದ್ದ ಚಳವಳಿಯ ಸಾಮಾಜಿಕ-ರಾಜಕೀಯ ಸ್ವರೂಪದ ಪ್ರಶ್ನೆಯಿದು.

ಕುವೆಂಪು 'ಕನ್ನಡವೇ ಸತ್ಯ; ಕನ್ನಡವೇ ನಿತ್ಯ; ಅನ್ಯವೆನಲದೆ ಮಿಥ್ಯಾ' ಎಂಬ ಸೊಲ್ಲಿನ ಮೂಲಕ ವೈಯುಕ್ತಿಕ ಜೀವನದಲ್ಲಿ ಕನ್ನಡಕ್ಕೊಂದು ಆಧ್ಯಾತ್ಮಿಕ ಶಕ್ತಿಪ್ರದಾನ ಮಾಡಿದರು. ಜೊತೆಗೆ ಸಾರ್ವಜನಿಕ ಜೀವನದಲ್ಲೂ ಕನ್ನಡವನ್ನು ಎಲ್ಲ ನೆಲೆಗಳಲ್ಲಿ ಜೀವಂತಗೊಳಿಸಬೇಕಾದ ಸಹಜ ಅಗತ್ಯವನ್ನು ಮನಗಾಣಿಸುವ ರೀತಿಯಲ್ಲಿ, ಈ ಸಂಬಂಧದ ತಮ್ಮ ಕನಸಿನ 'ಮಾನಸ ಗಂಗೋತ್ರಿ'ಯ ಉದ್ಘಾಟನೆಯನ್ನು, 'ಕ್ಷಯಿಸೆ ಶಿವೇತರ ಕೃತಿ ಕೃತಿಯಲ್ಲಿ, ಮೂಡಲಿ ಮಂಗಳ ಮತಿಮತಿಯಲ್ಲಿ; ಕವಿಋಷಿ ಸಂತರ ಆದರ್ಶದಲಿ, ಸರ್ವೋದಯವಾಗಲಿ ಸರ್ವರಲಿ!' ಎಂಬ ಆಶಯದ 'ಕನ್ನಡ ಡಿಂಡಿಮ'ದೊಂದಿಗೇ ನೆರವೇರಿಸಿದರು. ಅಲ್ಲದೆ, ರಾಜ್ಯದ ಇನ್ನೊಂದು ವಿಶ್ವವಿದ್ಯಾಲಯವಾಗಿದ್ದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಮಾಧ್ಯಮದ ತರಗತಿಗಳು ಆರಂಭವಾಗದ ಹೊರತು ಅಲ್ಲಿಗೆ ಕಾಲಿಡಲಾರೆ ಎಂಬ ದಿಟ್ಟ ಹಾಗೂ ನಿರ್ದಾಕ್ಷಿಣ್ಯ ನಿರ್ಧಾರ ಕೈಗೊಳ್ಳುವಷ್ಟು ಅವರ ಕನ್ನಡ ನಿಷ್ಠೆಯಲ್ಲಿ ವೈಯುಕ್ತಿಕ ಹಾಗೂ ಸಾರ್ವಜನಿಕ ಮತ್ತು ಬದ್ಧತೆಯಿತ್ತು. ಹಾಗೆ ನೋಡಿದರೆ, ಅವರ ಇಡೀ ಸಾಹಿತ್ಯವೇ ಒಂದು ಹೊಸ ಸಾಮಾಜಿಕ ಜಾಗೃತಿಯನ್ನು ಪ್ರಚೋದಿಸುವ ಆಂದೋಲನದ ರೂಪದಲ್ಲಿತ್ತು. ಆದರೆ ಇದು ಒಂದು ರಾಜಕೀಯ ಶಕ್ತಿಯ ರೂಪದಲ್ಲಿ ಹೊರಹೊಮ್ಮಲಾಗದಷ್ಟು ನಿರ್ಬಂಧಗಳನ್ನು ಕುವೆಂಪು–ಬಹುಶಃ ತಮ್ಮ ಸಾಹಿತ್ಯ ವ್ಯಕ್ತಿತ್ವದ 'ಘನತೆ'ಯನ್ನು ಕಾಪಾಡಿಕೊಳ್ಳಲು–ವಿಧಿಸಿಕೊಂಡಿದ್ದರು. ತೇಜಸ್ವಿ ಇದನ್ನು ತಮ್ಮ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ'ಯ ಮೂಲಕ ಭೇದಿಸಲೆತ್ನಿಸಿದರು. ಆದರೆ, ಇದು 'ವ್ಯವಸ್ಥೆ'ಯನ್ನೇ ಬುಡಮೇಲುಗೊಳಿಸುವ ಅಪಾಯ ವಿದ್ದುದರಿಂದ ಪ್ರಭುತ್ವದ ಆಮಿಷ-ಆಕರ್ಷಣೆ-ಒತ್ತಡಗಳೆದುರು ಇದು ಅನೇಕರಿಗೆ ದುಸ್ಸಾಹಸದಂತೆ ಕಂಡು, ತನ್ನ ಆವೇಗವನ್ನು ಕಳೆದುಕೊಂಡಿತು. ಇಲ್ಲಿ ಪ್ರಭುತ್ವವೆಂದರೆ ಸರ್ಕಾರ ಮಾತ್ರ ಆಗಿರದೆ, ಅದನ್ನು ನಿಯಂತ್ರಿಸುವ ಸಮಾಜದಲ್ಲಿನ ಪಟ್ಟಭದ್ರ-ಸಾಮಾಜಿಕ ಹಾಗೂ ಆರ್ಥಿಕ ಶಕ್ತಿಗಳೂ ಸೇರಿರುತ್ತವೆ ಎಂಬುದನ್ನು ನಾವು ಮರೆಯಬಾರದು.

ಇವೆರಡರ ಕೂಟಶಕ್ತಿಯಿಂದಾಗಿ ಕನ್ನಡ ಮಾಧ್ಯಮ ತನ್ನ ವಿಶ್ವಾಸಾರ್ಹತೆಯನ್ನು ಸಾಧಿಸಿಕೊಳ್ಳಲಾರದೆ; ಇಂದು ಕನ್ನಡವೆಂಬುದು ಪರಂಪರೆಯೊಂದರ ಅವಶೇಷದಂತೆ

ಹೆಮ್ಮೆಯ ಪ್ರದರ್ಶನದ ವಸ್ತುವಾಗಿ, ಸಂರಕ್ಷಿಸಿಡಬೇಕಾದ ಕನ್ನಡಿಗನ ಕರ್ತವ್ಯಭಾಗವಾಗಿ ಮಾತ್ರ ಉಳಿದುಕೊಳ್ಳುವ ಸ್ಥಿತಿ ತಲುಪಿದೆ. ಕನ್ನಡ ಭೂಮಿಗೆ ಭಾರವಾಗಿರುವ ಈ 'ವಸ್ತು'ವನ್ನು ಹುಗುರಗೊಳಿಸಿ ಉಳಿಸಲು, ಇಂಗ್ಲಿಷ್ ಲಿಪಿಯಲ್ಲಿ ಬಳಸಲು ತೊಡಗಬೇಕೆನ್ನುವಂತಹ ಸಲಹೆ ನೀಡುವ ಸ್ಥಿತಿ ಕನ್ನಡ ಭಾಷಾಶಾಸ್ತ್ರಜ್ಞರಿಗೆ ಬಂದಿದೆ! ಈ ಸ್ಥಿತಿಯನ್ನು ನಾವು 'ಜಾಗತೀಕರಣ'ವೆಂದು ಕರೆದುಕೊಂಡು, ಅದಕ್ಕೆ ನಮ್ಮ ಮಕ್ಕಳನ್ನು ಸಿದ್ಧಮಾಡಲು ಸರ್ಕಾರಿ ಮತ್ತು ಕನ್ನಡ ಮಾಧ್ಯಮ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಸಾರ್ವಜನಿಕ ಜವಾಬ್ದಾರಿಯನ್ನು ನಿರ್ವಹಿಸಿದ್ದೇವೆ. ಈಗ ಈ ಮಕ್ಕಳು ಹೀಗೆ ಇಂಗ್ಲಿಷ್ ಕಲಿತು ಐದನೇ ತರಗತಿಗೆ ಬರುವ ಹೊತ್ತಿಗೆ ಕನ್ನಡ ಮಾಧ್ಯಮ ಶಾಲೆಗಳನ್ನು ಬಿಟ್ಟುಬಿಡುವಂತಾಗುವಷ್ಟು 'ಸಾಮಾಜಿಕ ವಿಮೋಚನೆ' ಸಾಧಿಸುವ ಎಲ್ಲ ಸಾಧ್ಯತೆಗಳೂ ಕಂಡುಬರುತ್ತಿರುವುದರಿಂದ, ಹಿಂದುಳಿದ ವರ್ಗಗಳ ಹಾಗೂ ಬಡಮಕ್ಕಳ ಶಾಲೆಗಳಾಗಿರುವ ಸರ್ಕಾರಿ ಹಾಗೂ ಕನ್ನಡಮಾಧ್ಯಮ ಶಾಲೆಗಳನ್ನು ಉಳಿಸುವ ಏಕೈಕ ಮಾರ್ಗವೆಂದರೆ ಅವನ್ನು ಐದನೇ ತರಗತಿಯಿಂದ ಸಂಪೂರ್ಣ ಇಂಗ್ಲಿಷ್ ಮಾಧ್ಯಮಶಾಲೆಗಳನ್ನಾಗಿ ಪರಿವರ್ತಿಸುವುದೇ ಆಗಿದೆ ಎಂಬ ಗುಸುಗುಸವನ್ನು ಆರಂಭಿಸಿದ್ದೇವೆ.... (ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಪ್ರಚಾರಾಂದೋಲನಕ್ಕೆ 'ಅಧಿಕೃತ ಮುಖವಾಣಿ'ಯಂತೆ ಕೆಲಸ ಮಾಡಿದ ಕನ್ನಡದ ಹೆಮ್ಮೆಯ ಪತ್ರಿಕೆ 'ಪ್ರಜಾವಾಣಿ'ಯಲ್ಲಿ ಇತ್ತೀಚೆಗೆ ಪ್ರಕಟವಾದ ಮಂಗಳೂರಿನ ಶುಭಶ್ರೀ ಎಂಬ ಉಪಾಧ್ಯಾಯಿನೀ ಬರೆದಿರುವ ದೀರ್ಘಪತ್ರವನ್ನು ಗಮನಿಸಿ.) ಈ ಮಧ್ಯೆ ಇಂಗ್ಲಿಷನ್ನು ಅಂಬೇಡ್ಕರರು ಶೂದ್ರ ಮತ್ತು ದಲಿತರ ಭಾಗ್ಯದೇವತೆ, ಸಿಂಹಿಣಿಯ ಹಾಲು ಎಂದು ವರ್ಣಿಸಿದ್ದಾರೆಂಬ ಹೊಸ ಸಂಶೋಧನೆಗಳೂ ಪ್ರಚಾರಕ್ಕೆ ಬರುತ್ತಿವೆ!

ಈ ಎಲ್ಲ ಬೆಳವಣಿಗೆಗಳೂ ಸಹಜವಾಗಿ ಆಗುತ್ತವೆ ಎಂದು ನಂಬಿದವರಿಗೆ; 'ಜಾಗತೀಕರಣ'ವೆಂಬುದು ಒಂದು ಸಹಜ ಆರ್ಥಿಕ ವಿದ್ಯಮಾನವಾಗಿರದೆ, ಅದರ ಹಿಂದೆ ಒಂದು ಅಂತಾರಾಷ್ಟ್ರೀಯ ರಾಜಕೀಯ ಷಡ್ಯಂತ್ರವೂ ಕೆಲಸ ಮಾಡುತ್ತಿದೆ–ಅದಕ್ಕಾಗಿ ಕೋಟ್ಯಂತರ ರೂಪಾಯಿಗಳ ಹಣ, ವಿವಿಧ ರೂಪದ 'ಸೇವಾಸಂಸ್ಥೆ'ಗಳ ಮೂಲಕ ವಿನಿಯೋಗವಾಗುತ್ತಿದೆ ಎಂಬ ತಿಳುವಳಿಕೆ ಇರಲಾರದು. ಹೀಗೆ ಜಾಗತೀಕರಣವೆಂಬುದು ವಿವಿಧ ಆಮಿಷ-ಆಕರ್ಷಣೆಗಳ ಮಾರುಕಟ್ಟೆ ರೂಪದಲ್ಲಿ ಆಗಮಿಸುತ್ತಿರುವ ಭವಿಷ್ಯದ ಸಾಮ್ರಾಜ್ಯಶಾಹಿಯೇ ಆಗಿದೆ ಎಂಬ ಮುನ್ನೋಟವೂ ಇವರಿಗೆ ಸಾಧ್ಯವಾಗಲಾರದು. ಇಂತಹ ತಿಳುವಳಿಕೆಯಾಗಲೀ, ಮುನ್ನೋಟವಾಗಲಿ ಸಾಧ್ಯವಾಗದಂತಹ ಮಾನಸಿಕತೆ ಸೃಷ್ಟಿಸುವುದೇ ಇಂಗ್ಲಿಷ್ ಕಲಿಕೆಯ ಇತ್ತೀಚಿನ ವಿಶೇಷ ಕಾರ್ಯಾಚರಣೆಯ ಗುರಿಯಾಗಿದೆ. ಈ ಕಾರ್ಯಾಚರಣೆಯನ್ನು ಯೋಜಿಸಿರುವವರಿಗೆ ನಮ್ಮ ಹಿಂದಿನ ತಲೆಮಾರಿನ 'ಇಂಗ್ಲಿಷ್ ಪ್ರೇಮಾಂಧತೆ' ಸಾಲದೆನ್ನಿಸಿ, ಈ 'ಆಪರೇಷನ್ ಇಂಗ್ಲಿಷ್ ಕಾಮಾಂಧತೆ'ಯನ್ನು ಆರಂಭಿಸಿದೆ!

ಹೀಗಾಗಿಯೇ ರೈಲ್ವೇ ಟಿಕೆಟ್‌ನಲ್ಲಿದ್ದ ಕನ್ನಡ ಉಳಿಸಲು, ನಮ್ಮ ರಾಜ್ಯದ ರಾಜ್ಯಪಾಲರ ಕಚೇರಿಯಲ್ಲಿನ ಕನ್ನಡ ಉಳಿಸಲು, ನಮ್ಮದೇ ಸಾರಿಗೆ ಸಂಸ್ಥೆಯ ಬಸ್ ಟಿಕೆಟ್‌ನಲ್ಲಿ ಕನ್ನಡ ತರಲು ಮತ್ತು ಕಾವೇರಿ ನ್ಯಾಯಾಧಿಕರಣದ ತೀರ್ಪಿನ ವಿರುದ್ಧ

ಚಿತ್ರ-ವಿಚಿತ್ರ ಶೈಲಿಗಳಲ್ಲಿ ಹೋರಾಡುವ ಕನ್ನಡ ಚಳವಳಿಯ ನಾಯಕರ್‍ಯಾರೂ ಕನ್ನಡ ಮಾಧ್ಯಮದ ಪರವಾಗಲಿ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದರ ವಿರುದ್ಧವಾಗಲಿ ಸೊಲ್ಲೆತ್ತುವ ತಿಳಿವಳಿಕೆಯನ್ನಾಗಲೀ, ವಿವೇಕವನ್ನಾಗಲೀ ಪ್ರದರ್ಶಿಸಲಾಗಿಲ್ಲ. ಹೀಗೆ ಕನ್ನಡ ಚಳವಳಿಯೇ ಮೂಲತಃ ಕನ್ನಡ ವಿರೋಧಿಯಾಗುತ್ತಿರುವ ದುರಂತವನ್ನೆದುರಿಸುತ್ತಿದೆ. ಆದುರಿಂದಲೇ ಅದಕ್ಕೆ ರೈಲ್ವೇ ಟಿಕೆಟ್‌ನಲ್ಲಾಗಲೀ, ರಾಜ್ಯಪಾಲರ ಕಚೇರಿಯಲ್ಲಾಗಲಿ ಕನ್ನಡವನ್ನು ಉಳಿಸಿಕೊಳ್ಳಲಾಗಲಿ, ರಾಜ್ಯ ಬಸ್ ಟಿಕೆಟ್ ಮೇಲೆ ಕನ್ನಡವನ್ನು ತರಲಾಗಲಿ ಸಾಧ್ಯವಾಗಿಲ್ಲ. ಆ ಗುರಿಗಳೆಡೆಗೆ ತನ್ನನ್ನು ಒಯ್ಯುವಷ್ಟು ತೀವ್ರತೆಯನ್ನಾಗಲಿ, ತ್ರಾಣವನ್ನಾಗಲೀ, ಬದ್ಧತೆಯನ್ನಾಗಲಿ ಸಂಘಟಿಸಿಕೊಳ್ಳಲು ಅನುವು ಮಾಡಿಕೊಡುವ ತಾತ್ವಿಕ ಮುನ್ನೋಟವೇ ಇರದೆ, ಪ್ರದರ್ಶಕ ಬಲದ ರೋಚಕತೆಯನ್ನಷ್ಟೇ ಅದು ಅವಲಂಬಿಸಿರುವುದು ಇದಕ್ಕೆ ಕಾರಣವಾಗಿದೆ. ಇನ್ನು ಕಾವೇರಿ ಜಲ ಪ್ರಕರಣದಲ್ಲಿ ರಾಜ್ಯ ತನ್ನ ನ್ಯಾಯೋಚಿತ ಪಾಲನ್ನು ದೊರಕಿಸಿಕೊಳ್ಳುವಂತಾಗಲು ಮೊದಲು ರಾಜ್ಯ, ಭಾರತದ ಒಕ್ಕೂಟದಲ್ಲಿ ತನ್ನ ರಾಜಕೀಯ ಅಸ್ಮಿತೆಯನ್ನು ದೃಢವಾಗಿ ಸ್ಥಾಪಿಸಿಕೊಳ್ಳುವಂತಾಗಬೇಕು ಹಾಗೂ ಅದು ಸಾಧ್ಯವಾಗುವುದು ತಾನೊಂದು ಭಾಷಾಕುಲವೆಂಬ ಆತ್ಮಪ್ರಜ್ಞೆಯ ಪುನರುಜ್ಜೀವನದ ಮೂಲಕ ಮಾತ್ರ ಎಂಬ ಅರಿವು ಜಾಗೃತವಾಗಬೇಕು. ಇದಕ್ಕಾಗಿ ಕನ್ನಡ ಚಳವಳಿ, ಕನ್ನಡವನ್ನು ಶಿಕ್ಷಣಕ್ರಮದ ಕೇಂದ್ರಕ್ಕೆ ಮರಳಿ ತಂದು, ಸಾರ್ವಜನಿಕ ಜೀವನದಲ್ಲಿ ಕನ್ನಡದಲ್ಲಿ ಪ್ರಸ್ತುತತೆ ಹಾಗೂ ಗೌರವವನ್ನು ಪುನಃಸ್ಥಾಪಿಸುವ ದಿಕ್ಕಿನಲ್ಲಿ ಸಕ್ರಿಯವಾಗಬೇಕಿದೆ. ಬೀದಿ ಹೋರಾಟ ಅದೆಷ್ಟೇ ವೀರಾವೇಶವನ್ನು ಪ್ರದರ್ಶಿಸಿ ರೋಚಕತೆಯನ್ನು ಪಡೆದುಕೊಂಡರೂ, ಅಖಿಲಭಾರತ ಮಟ್ಟದ ಯಾವುದೇ ವೇದಿಕೆಯಲ್ಲಿ ಅದು ಯಾವುದೇ ಪರಿಣಾಮಬೀರದು ಎಂಬ ಅರಿವು ಮೂಡಬೇಕಿದೆ. ಎಷ್ಟಾದರೂ ಕನ್ನಡ-ಕರ್ನಾಟಕ ಬೆಳೆಯಬೇಕಾಗಿರುವುದು, ಸದ್ಯಕ್ಕಂತೂ ಭಾರತವೆಂಬ ಒಕ್ಕೂಟದಲ್ಲೇ.

ಆದರೆ ಕನ್ನಡಿಗನ ಅಂತರಂಗದಿಂದ ಹೊರದೂಡಲ್ಪಟ್ಟಿರುವ ಕನ್ನಡ, ಈ ಬೀದಿ ಹೋರಾಟದ ರೂಪದ ಚಳವಳಿಯಿಂದಲೇ ಬಹಿರಂಗದಲ್ಲಾದರೂ ಇನ್ನೂ ಉಳಿದಿದೆ ಎಂಬ ವಾಸ್ತವ ಸಂಗತಿಯನ್ನು ನಾವು ಒಪ್ಪಿಕೊಳ್ಳಬೇಕಿದೆ. ಈ ದೃಷ್ಟಿಯಿಂದ, ವಾಟಾಳ್ ನಾಗರಾಜ್‌ರಂತಹ ಹೋರಾಟಗಾರರ ಕೊಡುಗೆಯನ್ನು ಅವರ ಅನೇಕ ದೌರ್ಬಲ್ಯಗಳ ನಡುವೆಯೂ ನಾವು ಮಾನ್ಯ ಮಾಡಬೇಕಾಗಿದೆ.

(ಸಕಾಲ, ಆಗಸ್ಟ್ ೮, ೨೦೦೭)

■

೪೮. ಸಮಾಜವಾದಿ ಆಂದೋಲನದ ಪುನರುಜ್ಜೀವನ ಏಕೆ ಮತ್ತು ಹೇಗೆ

ಭೂಮಿ ಬಿಟ್ಟು ಮೇಲೇರಿದ್ದೆಲ್ಲ ಮತ್ತೆ ಭೂಮಿಯ ವಾಸ್ತವಕ್ಕೆ ಇಳಿದು ಬರಲೇಬೇಕು! ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ಎಲ್ಲರ ಅಗತ್ಯಗಳನ್ನು ನಿರ್ಲಕ್ಷಿಸಿ ಕೆಲವರ ಚಪಲಗಳನ್ನು ಪೂರೈಸುವ ಅಡ್ಡದಾರಿ ಹಿಡಿದ ವಿಶ್ವ ಆರ್ಥಿಕತೆ ತನ್ನ ವಾಸ್ತವ ಪ್ರಜ್ಞೆಯನ್ನು ಮರಳಿ ಪಡೆದುಕೊಳ್ಳುವಂತಹ ಆಘಾತವನ್ನು ಈಗ ಅನುಭವಿಸಿರುವುದು ಒಳ್ಳೆಯದಕ್ಕೇ ಎಂದು ನಾವು ಭಾವಿಸಬೇಕು. ಇಂದು ಅಮೆರಿಕಾ ನುಚ್ಚು ನೂರಾಗಿರುವ ತನ್ನ ಆರ್ಥಿಕತೆಯನ್ನು ಪುನಾರಚಿಸಿಕೊಳ್ಳಲು ೭೦೦ ದಶಲಕ್ಷ ಡಾಲರ್ ಸರ್ಕಾರಿ (ತೆರಿಗೆದಾರರ) ಹಣವನ್ನು ಸಾರ್ವಜನಿಕ ಹೂಡಿಕೆಗೆ ಬಿಡುಗಡೆ ಮಾಡುವ ಪ್ರಯತ್ನದಲ್ಲಿದೆ. ೨೫೦ ದಶಲಕ್ಷ ಡಾಲರ್‌ಗಳನ್ನು ತನ್ನ ಕುಸಿದಿರುವ ಬ್ಯಾಂಕುಗಳ ಪುನಶ್ಚೇತನಕ್ಕಾಗಿ ನೀಡಲು ನಿರ್ಧರಿಸಿದೆ. ಬ್ರಿಟನ್ ಎಲ್ಲರಿಗಿಂತ ಮುಂಚೆಯೇ ತನ್ನ ಬ್ಯಾಂಕುಗಳ ಸುರಕ್ಷತೆಗಾಗಿ ನಗದು ಪೂರೈಕೆಯ ದೊಡ್ಡ ಯೋಜನೆಯನ್ನೇ ಪ್ರಕಟಿಸಿದೆ. ರಷ್ಯಾ ತನ್ನ ದೇಶದ ಬ್ಯಾಂಕುಗಳ ಠೇವಣಿದಾರರಿಗೆ ವಿಮಾ ಸೌಲಭ್ಯ ಒದಗಿಸಲು ಮುಂದೆ ಬಂದಿದೆ. ಐರೋಪ್ಯ ರಾಷ್ಟ್ರಗಳಂತೂ ತಮ್ಮ ದೇಶದ ಬ್ಯಾಂಕುಗಳಿಗೆ ಠೇವಣಿ ಸೆಳೆಯಲು ವೈವಿಧ್ಯಮಯ ಉಡುಗೊರೆಗಳ ಆಕರ್ಷಣೆ ಒಡ್ಡಿವೆ! ಅಂತೂ ಈಗ ಜಗತ್ತಿನಾದ್ಯಂತ ಸರ್ಕಾರಗಳು ಮುಕ್ತ ಮಾರುಕಟ್ಟೆಯ ಅನಾಹುತಗಳಿಗೆ ಎಚ್ಚೆತ್ತುಕೊಂಡು, ದೇಶದ ಆರ್ಥಿಕತೆಯಲ್ಲಿ ಸರ್ಕಾರದ ಹಸ್ತಕ್ಷೇಪ ಮತ್ತು ನಿಯಂತ್ರಣಗಳ ಅಗತ್ಯಗಳನ್ನು ಮನಗಂಡಿವೆ. ಸಮಾಜವಾದದ ಕಾಲ ಮುಗಿಯಿತೆಂದು ಅವಸರದಲ್ಲಿ ಅಂದವರೀಗ ನಾಲಿಗೆ ಕಚ್ಚಿಕೊಳ್ಳತೊಡಗಿದ್ದಾರೆ!

-'ಮುಕ್ತ ಮಾರುಕಟ್ಟೆ ಎಂಬ ಮಹಾಮೋಸ' ಎಂಬ ಇದೇ ಲೇಖಕರ ಲೇಖನದಿಂದ

ಜಾಗತೀಕರಣದ ಈ ದಿನಗಳಲ್ಲಿ ಸಮಾಜವಾದದ ಬಗ್ಗೆ ಮಾತಾಡುವುದೇ ಕೆಲವರಿಗೆ ತಮಾಷೆಯಾಗಿ ಕಾಣುವುದು. ಏಕೆಂದರೆ ಸಮಾಜವಾದದ ಸಾವಿನಲ್ಲೇ ಜಾಗತೀಕರಣ ಚಿಗುರೊಡೆದಿರುವುದು ಎಂದು ಇವರು ನಂಬಿದ್ದಾರೆ. ಅರ್ಥಾತ್, ಕಳೆದ ಶತಮಾನದ ಮಹಾ

ರಾಜಕೀಯ ಪ್ರಯೋಗವಾದ ಸಮಾಜವಾದ, ಈಗ ತನ್ನೆಲ್ಲ ವಿಶ್ವಾಸಾರ್ಹತೆ ಕಳೆದುಕೊಂಡು ಜಾಗತೀಕರಣಕ್ಕೆ ದಾರಿ ಮಾಡಿಕೊಟ್ಟಿದೆ ಎಂಬುದು ಇವರ ವಾದ. ಇವರ ಪ್ರಕಾರ ಜಾಗತೀಕರಣವೆಂಬುದು ಮತ್ತೇನೂ ಆಗಿರದೆ, ಯಾವ ಸಮಾಜವಾದ ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆಯ ಮೂಲಗಳನ್ನು ಗುರುತಿಸಿ ಅದಕ್ಕೆ ಪರಿಹಾರ ರೂಪವಾಗಿ ಮೂಡಿನಿಂತಿತೋ, ಅದರ ವಿರುದ್ಧ ಬಂಡವಾಳಶಾಹಿ ಸಾಧಿಸಿರುವ ಆತ್ಯಂತಿಕ ವಿಜಯವೇ ಆಗಿದೆ. ಇದು ಒಂದು ರೀತಿಯಲ್ಲಿ ನಿಜವೂ ಹೌದು. ಏಕೆಂದರೆ ಕಳೆದ ಶತಮಾನದ ಮಧ್ಯೆ ಭಾಗದಲ್ಲಿ ಹೊಸ ನೈತಿಕತೆಯ ಮಾತ್ರವಲ್ಲ, ಹೊಸ ಮಾನವತೆಯ ಪ್ರತೀಕವಾಗಿ ಜಗತ್ತಿನ ಎಲ್ಲ ಭಾಗಗಳ ಚಿಂತಕರ ರಾಜಕೀಯ ಆಕರ್ಷಣೆಯಾಗಿದ್ದ ಸಮಾಜವಾದ; ಆ ಶತಮಾನದ ಕೊನೆಯ ಹೊತ್ತಿಗೆ ಚಲಾವಣೆ ಕಳೆದುಕೊಂಡ ನಾಣ್ಯದಂತೆ ಇತಿಹಾಸದ ಜೇಬು ಸೇರುವ ಸ್ಥಿತಿ ತಲುಪಿದ್ದನ್ನು ಕಣ್ಣಾರೆ ಕಂಡವರು, ಇನ್ನೇನು ಭಾವಿಸಿಯಾರು?

ಆದರೆ ಈ ಸತ್ಯಕ್ಕೆ ಇನ್ನೊಂದು ಮುಖವೂ ಇದೆ. ಜಗತ್ತಿನ ಇತಿಹಾಸದುದ್ದಕ್ಕೂ ಅನೇಕ ರೀತಿಯ ಐತಿಹಾಸಿಕ ಕಾರಣಗಳಿಂದಾಗಿ ಪ್ರಬಲರಾದವರ ಮತ್ತು ದುರ್ಬಲರಾದವರ ನಡುವೆ ಘರ್ಷಣೆ ನಡೆದೇ ಇದೆ. ಈ ನಿರಂತರ ಘರ್ಷಣೆಯ ಒಂದು ಭಾಗವಾಗಿ ಕಳೆದ ಶತಮಾನದ ರಾಜಕೀಯ ಇತಿಹಾಸ ನೋಡಿದಾಗ, ಯಾರಾದರೂ ಅಂತಿಮವಾಗಿ ಗೆದ್ದಿದ್ದಾರೆ ಎಂದು ಹೇಳುವುದು ಇತಿಹಾಸದ ದೃಷ್ಟಿಯಿಂದ ಕಷ್ಟವಾಗುತ್ತದೆ. ಏಕೆಂದರೆ ಕಳೆದ ಶತಮಾನದ ಯಾವ ಸಮಾಜವಾದೀ ಚಿಂತನೆಯ ಒಂದು ಭಾಗವಾಗಿ ಮಾರ್ಕ್ಸ್‌ವಾದ ಮೂಡಿಬಂತೋ ಆ ಮಾರ್ಕ್ಸ್‌ವಾದ, ಈ ನಿರಂತರ ಘರ್ಷಣೆಗೆ ಕಾರಣವಾದ ಐತಿಹಾಸಿಕ ಶಕ್ತಿಗಳ ಮರ್ಮವನ್ನು ತಾನು ಅರಿತಿದ್ದೇನೆಂದು ಘೋಷಿಸಿಕೊಂಡು; ಅದರ ಶಾಶ್ವತ ನಿವಾರಣೆಯ 'ವೈಜ್ಞಾನಿಕ' ಮದ್ದನ್ನೂ 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ' ರೂಪದಲ್ಲಿ ಪ್ರಚಾರಮಾಡಿ ಹುಟ್ಟಿಸಿದ ನಂಬಿಕೆಯ ಹಿನ್ನೆಲೆಯಲ್ಲಿ ಮಾತ್ರ ಇವೊತ್ತಿನ ಸೋಲು-ಗೆಲುವುಗಳ ಮಾತುಗಳು ಅರ್ಥ ಪಡೆಯುತ್ತವೆ. ಸಮಾಜವಾದವನ್ನು ಅಥವಾ ಮಾರ್ಕ್ಸ್‌ವಾದವನ್ನು ಜಗತ್ತಿನ ಇತಿಹಾಸದುದ್ದಕ್ಕೂ ಪಟ್ಟಭದ್ರರ ಹಾಗೂ ವಂಚಿತರ ನಡುವೆ ಪದೇ ಪದೇ ನಡೆಯುತ್ತ ಬಂದಿರುವ ಘರ್ಷಣೆಯ ಇತ್ತೀಚಿನ ರಾಜಕೀಯ ಚಿಂತನಾ ರೂಪಗಳಷ್ಟೇ ಎಂದು ನೋಡಿದಾಗ, ಸೋತಿರುವುದು ಈ ರಾಜಕೀಯ ರೂಪಗಳೇ ಹೊರತು, ಸಮಾಜವಾದ ಪ್ರತಿನಿಧಿಸುವ ಮನುಷ್ಯನ ಸಮಾನತೆಯ ಆಶಯವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಜಾಗತೀಕರಣ ಎಂದರೆ–ಹಳೆಯ ಮಾರ್ಕ್ಸ್‌ವಾದಿಗಳೂ ತಮ್ಮ ಸಿದ್ಧಾಂತದ (ಕುರುಡು) ನಂಬಿಕೆಯ ಆಧಾರದ ಮೇಲೆ ಹೇಳುತ್ತಿದ್ದಂತೆ–'ಇತಿಹಾಸದ ಅಂತ್ಯ' ಎಂದು ಇಂದಿನ ಜಾಗತೀಕರಣವಾದಿಗಳೂ ಹೇಳುತ್ತಿದ್ದಾರೆ. ಅವರಿಗೆ ಇತಿಹಾಸ ನಿರ್ಮಾಣವಾಗುವುದು ಮನುಷ್ಯನ ಅದಮ್ಯ ಚೇತನ ಶಕ್ತಿಯಿಂದಲೇ ಹೊರತು, ಮಾರುಕಟ್ಟೆಯ ಜಡ ಶಕ್ತಿಗಳಿಂದಲ್ಲ ಎಂಬ ಆಧ್ಯಾತ್ಮಿಕ ಸತ್ಯದ ಅರಿವಿಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಮಾರುಕಟ್ಟೆಗೆ ಅಥವಾ ಅದು ಸೃಷ್ಟಿಸುವ ಭೌತಿಕ ದಾಹಕ್ಕೆ ಒಂದು ಮಿತಿಯಿದೆ–ಒಂದು ಸ್ಥಗಿತತೆಯ, ಒಂದು ಕೊಳೆಯುವಿಕೆಯ ಬಿಂದು ಇದೆ. ಆ ಸ್ಥಿತಿ

ಮುಟ್ಟಿದೊಡನೆ ಮನುಷ್ಯ ಚೇತನ, ಮಾರುಕಟ್ಟೆ ಶಕ್ತಿಗಳು ಹೊಟ್ಟೆಯಿಂದಲೇ ಒಡೆದೆದ್ದು ನಿಲ್ಲುತ್ತದೆ.

ಈ ಒಡೆದೆದ್ದು ನಿಲ್ಲುವುದು ಎಂಬುದು ಭವಿಷ್ಯದ ಮಾತಲ್ಲ. ಇಂದೇ ಅದು ಒಡೆದೆದ್ದು ಬರುತ್ತಿದೆ.... ಮಾರುಕಟ್ಟೆಯ ಗಜಿಬಿಜಿ ಗಲಾಟೆಯಲ್ಲಿ ಅದರ ಬಿರಿಯುವಿಕೆಯ ಸದ್ದು ಕೇಳಿಸುತ್ತಿಲ್ಲವಷ್ಟೇ! ಬಂಡವಾಳಶಾಹಿ ಆರ್ಥಿಕತೆಯ ನಿಜ ಬಣ್ಣ ಬಯಲಾಗುತ್ತಿರುವ ಜಾಗತಿಕ ಮಹಾ ಹಿಂಜರಿತದ ಈ ದಿನಗಳಲ್ಲಂತೂ ಸಮಾಜವಾದಿ ಆರ್ಥಿಕತೆಯಲ್ಲದೆ, ಸಮಾಜವಾದಿ ರಾಜಕಾರಣದ ಬಗೆಗೂ ಮರುಚಿಂತನೆ ಮಾಡುವ ಕಾಲ ಬಂದಿದೆ ಎಂದು ಪಶ್ಚಿಮದ ಅರ್ಥಶಾಸ್ತ್ರಜ್ಞರು ಹೇಳತೊಡಗಿದ್ದಾರೆ! ಈವರೆಗೆ ಮುಕ್ತ ಬಂಡವಾಳಶಾಹಿ ಎತ್ತಿ ಹಿಡಿಯುತ್ತಿದ್ದ ಅಮೆರಿಕಾ ಮತ್ತು ಈರೋಪಿನ ಹಲವು ದೇಶಗಳು ಈಗ ದಿವಾಳಿ ಎದ್ದಿರುವ ತಮ್ಮ ಖಾಸಗಿ ಬ್ಯಾಂಕುಗಳು ಮತ್ತು ಇತರೆ ಹಣಕಾಸಿನ ಸಂಸ್ಥೆಗಳನ್ನು ಉಳಿಸಿಕೊಳ್ಳಲು ತೆರಿಗೆದಾರರ ಕೋಟ್ಯಾಂತರ ಡಾಲರುಗಳನ್ನು ಸಾರ್ವಜನಿಕ ವಲಯದಲ್ಲಿ ಹೂಡತೊಡಗಿವೆ! 'ಒಂದೇ ಜಗತ್ತು' ಎನ್ನುವ ಜಾಗತೀಕರಣದ ವಿರುದ್ಧ ಹಳೆಯ ಸಮಾಜವಾದಿಗಳ, ಮಾರ್ಕ್ಸ್‌ವಾದಿಗಳ ಹುಯ್ಲು ಒಂದು ಕಡೆ ಇದ್ದರೆ, 'ಇನ್ನೊಂದು ಜಗತ್ತು ಸಾಧ್ಯ' ಎಂಬ ಪರ್ಯಾಯ ಕಲ್ಪನೆಯೊಂದನ್ನು ಮಂಡಿಸುತ್ತಿರುವ ಹೊಸ ಮುಖದ ಚಿಂತಕರ ಘೋಷಣೆ ಇನ್ನೊಂದೆಡೆ ಗಂಭೀರ ಚರ್ಚೆಗೆ ಒಳಗಾಗಿದೆ.* ಸಮಾಜವಾದ ತನ್ನ ಆರಂಭಿಕ ದಿನಗಳಲ್ಲಿ ಬಡ-ಶ್ರೀಮಂತ ದೇಶಗಳೆಂಬ ಭೇದ ಭಾವಗಳಿಲ್ಲದೆ ಹೇಗೆ ಎಲ್ಲ ಜನರ ಗಮನ-ಆಸಕ್ತಿಗಳನ್ನು ಸೆಳೆದಿತ್ತೋ (ಐವತ್ತು-ಅರವತ್ತರ ದಶಕದಲ್ಲಿ ಅಮೇರಿಕಾದಲ್ಲೂ ಒಂದು ಸಮಾಜವಾದಿ ಪಕ್ಷ ಕ್ರಿಯಾಶೀಲವಾಗಿತ್ತು!) ಈ 'ಇನ್ನೊಂದು ಜಗತ್ತು ಸಾಧ್ಯ' ಚಳುವಳಿಯ ರೂಪದ ಹೊಸ ಸಮಾಜವಾದ, ಜಗತ್ತಿನ ಎಲ್ಲ ದೇಶಗಳ–ಚೀಲ ದೇಶಗಳೂ ಸೇರಿದಂತೆ–ಜನರ ಗಮನ ಮತ್ತು ಆಸಕ್ತಿಗಳನ್ನು ಸೆಳೆದಿದೆ. ಈ ಚಳುವಳಿ ಕಳೆದ ಶತಮಾನದ ಸಮಾಜವಾದವೂ ಸೇರಿದಂತೆ ಎಲ್ಲ ಎಡ ಪಂಥೀಯ ರಾಜಕೀಯ ಪ್ರಯೋಗಗಳ ಅನುಭವ-ಪಾಠಗಳ ಆಧಾರದ ಮೇಲೆ ತನ್ನ ತಾತ್ವಿಕತೆಯನ್ನು ಕಟ್ಟಿಕೊಳ್ಳುವ ಪ್ರಯತ್ನದಲ್ಲಿದೆ. ನಾನು ಇವನ್ನು ಪ್ರಸ್ತಾಪಿಸುತ್ತಿರುವುದು, ಇದೇ ಹೊಸ ಶತಮಾನದ ಸಮಾಜವಾದ ಎಂದು ಸೂಚಿಸಲಲ್ಲ. ಜಾಗತೀಕರಣವೆಂಬುದು ಇತಿಹಾಸದ ಅಂತಿಮ ಘಟ್ಟವಲ್ಲ. ಇತಿಹಾಸದ ಶಕ್ತಿಗಳು ಇನ್ನೂ ಜೀವಂತವಿದ್ದು, ಹೊಸ (ರಾಜಕೀಯ) ಸತ್ಯದ ಅನ್ವೇಷಣೆಯಲ್ಲಿ ತೊಡಗಿದೆ ಎಂದು ಸೂಚಿಸಲು. ಇದು, ನಾವು ನಂಬಿದ್ದ ಸಮಾಜವಾದ ಸೋತಿದೆಯೇ ಎಂದು ಕೇಳಿಕೊಂಡು, ಸೂಕ್ತ ಉತ್ತರ ಕಂಡುಕೊಳ್ಳಲು ಆತ್ಮವಿಶ್ವಾಸವನ್ನು ಒದಗಿಸುತ್ತದೆ.

ಜಗತ್ತಿನ ಮಾತು ಒತ್ತಟ್ಟಿಗಿರಲಿ, ಭಾರತದಲ್ಲಿ ಸಮಾಜವಾದ ಸೋತಿದೆ ಎನ್ನುವವರಿಗೆ ಕಳೆದ ೫೦ ವರ್ಷಗಳಲ್ಲಿ ಭಾರತದಲ್ಲಿ ಆಗಿರುವ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತ್ಯಂತರಗಳ

---

* ಅನುಬಂಧ ನೋಡಿ.

ನೆಲೆಗಳ ಪರಿಚಯವೇ ಇಲ್ಲ ಎಂದು ಹೇಳಬೇಕಾಗುತ್ತದೆ. ಇತಿಹಾಸದ ಸಮಾಜವಾದಿ ಅರಿವಿನಿಂದಾಗಿಯೇ ಶಿಕ್ಷಣ, ಸಾರ್ವಜನಿಕ ಉದ್ಯೋಗ ಹಾಗೂ ರಾಜಕೀಯ ಅಧಿಕಾರಕ್ಕೆ 'ತೆರೆದುಕೊಂಡ' ಸಮಾನ ಅವಕಾಶಗಳು–ಇದನ್ನು ಮುಕ್ತ ಸ್ಪರ್ಧೆಯ ಜೊತೆಗೆ ಗೊಂದಲ ಮಾಡಿಕೊಳ್ಳಬಾರದು-ಎಷ್ಟು ವಂಚಿತ ಜನವರ್ಗಗಳನ್ನು ಜಾಗೃತಗೊಳಿಸಿಲ್ಲ? ಎಂತೆಂತಹ ಸಾಮಾಜಿಕ-ಆರ್ಥಿಕ-ರಾಜಕೀಯ ಅಂತರ್ಚಲನೆಗಳಿಗೆ ಹಾಗೂ ಸಂಚಲನಗಳಿಗೆ ಕಾರಣವಾಗಿಲ್ಲ? ದುರಾದೃಷ್ಟದ ಸಂಗತಿ ಎಂದರೆ, ಭಾರತದ ಸಮಾಜವಾದಿ ಚಳವಳಿ, ಆಗಿರುವುದರ ಅರಿವೇ ಇಲ್ಲದೇ; ಆಗದಿರುವುದರ ಬಗ್ಗೆಯೇ ಕೂಗಾಡುತ್ತಾ, ತನ್ನ ಸ್ಥಿಮಿತವನ್ನು ಕಳೆದುಕೊಂಡಿತು. ಹಾಗೆ ನೋಡಿದರೆ ಭಾರತದ ಸಮಾಜವಾದಿ ಚಳವಳಿ ಎಂದರೆ ಅಧಿಕೃತ ಸಮಾಜವಾದಿ ಪಕ್ಷಗಳ ನಿಲುವು-ಧೋರಣೆ-ಸಾಧನೆಗಳು ಮಾತ್ರವಾಗಿರದೆ, ಸರಿಸುಮಾರು ಎಲ್ಲ ರಾಜಕೀಯ ಪಕ್ಷಗಳ ನೀತಿ ವಿಕಾಸದ ಪರಿಣಾಮಗಳೂ ಸೇರಿದ ಒಂದು ರಾಜಕೀಯ ವಿದ್ಯಮಾನ ಎಂದೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಂದು ಬಿಜೆಪಿಯಂತಹ ಬಲಪಂಥೀಯ ಸಂಪ್ರದಾಯವಾದಿ ಪಕ್ಷವೂ ಮಂಡಲ್ ಆಯೋಗದ ಶಿಫಾರಸ್ಸುಗಳನ್ನೂ, ಪಂಚಾಯತ್‌ರಾಜ್ ಕಾಯಿದೆಯ ಬಲವರ್ಧನೆಯನ್ನೂ ಬೆಂಬಲಿಸುವ ರಾಜಕೀಯ ಅನಿವಾರ್ಯತೆ ಉಂಟಾಗಿರುವುದನ್ನೇ, ಕಳೆದ ಐವತ್ತು ವರ್ಷಗಳ ಭಾರತದ ಸಮಾಜವಾದಿ ಚಳವಳಿಯ ಯಶಸ್ಸು ಎಂದು ಏಕೆ ನಾವು ಭಾವಿಸ'ಬಾರದು? ಈ ಯಶಸ್ಸನ್ನು ಅರ್ಥಮಾಡಿಕೊಂಡಾಗಲೇ ಅಥವಾ ಅರ್ಥಮಾಡಿಕೊಳ್ಳುವ ನೆಲೆಗಳಲ್ಲೇ, ಸಮಾಜವಾದಿ ಚಳವಳಿಯ ವೈಫಲ್ಯಗಳ ನೆಲೆಗಳೂ ಸ್ಪಷ್ಟವಾಗಿ ನಮ್ಮ ಅರಿವಿಗೆ ಬರ ತೊಡಗುವುದು.

ಸಮಾಜವಾದಿ ಪಕ್ಷ (ಸದ್ಯದ ಮುಲಾಯಂಸಿಂಗ್ ಪಕ್ಷವಲ್ಲ) ಎಂದೂ ಕೇಂದ್ರದಲ್ಲಿ ಯಾಗಲೀ, ಯಾವುದೇ ರಾಜ್ಯದಲ್ಲಿಯಾಗಲ್ಲೀ ಏಕಾಂಗಿಯಾಗಿ ಯಾವುದೇ ಅವಧಿಯ ಆಡಳಿತ ನಡೆಸಿದ ಸಂದರ್ಭವಿಲ್ಲವಾದ್ದರಿಂದ, ನಾವಿಂದು ಸಮಾಜವಾದಿ ಚಳವಳಿಯ ಪರಿಣಾಮಗಳ ಬಗ್ಗೆ ಮಾತಾಡುವಾಗಲೆಲ್ಲ ಅದರ ಅನಧಿಕೃತ-ಅಪ್ರತ್ಯಕ್ಷ- ಪರಿಣಾಮಗಳ ಬಗ್ಗೆಯೇ ಮಾತಾಡುತ್ತಿರುತ್ತೇವೆ ಎಂಬುದೂ ನೆನಪಿರಬೇಕು. ಅಂದರೆ ಸಮಾಜವಾದಿ ಪಕ್ಷಗಳ (ಹೌದು, ಪಕ್ಷಗಳು;ಏಕೆಂದರೆ ಭಾರತದ ಸಮಾಜವಾದದ ಚರಿತ್ರೆ ಎಂದರೆ ವಿಭಜನೆ ಹಾಗೂ ವಿಲೀನಗಳ ಚರಿತ್ರೆಯೇ ಆಗಿದೆ!) ಹೊರಗಿನ ಒತ್ತಡ ಹಾಗೂ ಆಡಳಿತ ಪಕ್ಷದೊಳಗಿನ ಸಮಾಜವಾದಿ ಒಲವುಳ್ಳ ಶಕ್ತಿಗಳ ಒಳಗಿನ ಒತ್ತಡಗಳೂ ಸೇರಿ ಭಾರತದ ಸಮಾಜವಾದಿ ರಾಜಕಾರಣವನ್ನು ಕಟ್ಟಿವೆ ಎಂಬುದನ್ನು ಗಮನಿಸಿಯೇ ನಾವು ಭಾರತದ ಸಮಾಜವಾದಿ ಚಳವಳಿಯ ಮೌಲ್ಯಮಾಪನ ಮಾಡಬೇಕು. ಏಕೆಂದರೆ, ಸಮಾಜವಾದಿ ಚಳವಳಿಯ ಈ ಯಶಸ್ಸಿನ ನೆಲೆಯಲ್ಲಿಯೇ ಅದರ ವೈಫಲ್ಯಗಳ ಸುಳಿವುಗಳೂ ನಮಗೆ ದೊರೆಯುವುದು.

ಹೀಗಾಗಿ ಮೊದಲ ಪ್ರಶ್ನೆ : ಭಾರತದಲ್ಲಿ ಸಮಾಜವಾದಿ ಚಳವಳಿ ಏಕೆ ಸುಸ್ಥಿರವಾಗಿ ಬೆಳೆಯಲಾಗಲಿಲ್ಲ? ಏಕೆ ಒಡೆಯುತ್ತ, ಕೂಡುತ್ತ, ಚದುರುತ್ತ: ತನ್ನ ತತ್ವವನ್ನೂ, ಅದರ

ಪರಿಣಾಮಶೀಲತೆಯನ್ನೂ ಕಳೆದುಕೊಳ್ಳುತ್ತಾ ಹೋಯಿತು? ಅನೇಕ ಶಕ್ತಿಗಳ 'ಆಡೊಂಬಲ'ವಾಗಿದ್ದ ಕಾಂಗ್ರೆಸ್ಸಿನ ಗರ್ಭದಲ್ಲಿ ಜನಿಸಿದ ಭಾರತೀಯ ಸಮಾಜವಾದಿ ಚಳವಳಿ ಬಹಳ ಕಾಲ ತನ್ನ ಸ್ವಂತ ಅಸ್ತಿತ್ವವನ್ನೂ, ಅಸ್ಮಿತೆಯನ್ನೂ ಸ್ಥಾಪಿಸಿಕೊಳ್ಳಲಾಗದೆ ಕಾಂಗ್ರೆಸ್ ಎಂಬ ಮಹಾಸಮಾಜದ 'ವಂಚಿತ'ರ ಗುಂಪಿನಂತೆಯೇ ಬೆಳೆದು, ಆ ಕಹಿ ಮನೋಭಾವದೊಂದಿಗೇ ಕಾಂಗ್ರೆಸ್ಸಿನಿಂದ ಹೊರ ಬಂತು. ಬಂದ ನಂತರ ಅಲ್ಲಿಂದ ಹೊತ್ತುಕೊಂಡು ಬಂದಿದ್ದ ಅನೇಕ ವೈಯಕ್ತಿಕ ಹಾಗೂ ತಾತ್ವಿಕ ಸಂದಿಗ್ಧಗಳನ್ನೂ ತನ್ನದೇ ಸ್ವತಂತ್ರ ರಾಜಕಾರಣದ ಸ್ಥಾಪನೆಯ ಕುಲುಮೆಯಲ್ಲಿ ಕರಗಿಸಿಕೊಳ್ಳುವ ಮುನ್ನವೇ ಭಾರಿ ಚುನಾವಣಾ ಸೋಲನ್ನು ಅನುಭವಿಸಿ, ಆ ಹತಾಶೆ–ಗೊಂದಲದಲ್ಲಿ ಪಕ್ಷದ ಮೊದಲ ವಿಭಜನೆಯಾದದ್ದು. ಉದಾಹರಣೆಗೆ ನೆಹರೂ ಕುರಿತ ಲೋಹಿಯಾ ಹಾಗೂ ಜೆ.ಪಿ.ಯವರ ವೈಯಕ್ತಿಕ ನಿಲುವುಗಳು ರಾಜಕೀಯ ಸ್ವರೂಪ ಪಡೆದು, ಸಮಾಜವಾದಿ ಚಳವಳಿಯಲ್ಲಿ ಅನೇಕ ಅನಾಹುತಗಳಿಗೆ ಕಾರಣವಾಯಿತು.

ಹಾಗೇ ಕಾಂಗ್ರೆಸ್‌ನೊಳಗೇ ಹುಟ್ಟಿಕೊಂಡ ಸಮಾಜವಾದಿ ಬೀಜಗುಂಪು ರೂಪಿಸಿಕೊಂಡ ಮೂಲತಃ ಮಾರ್ಕ್ಸ್‌ವಾದಿ ತಾತ್ವಿಕ ವಿನ್ಯಾಸದೊಳಕ್ಕೆ ಗಾಂಧಿಯನ್ನು ಅನುಸಂಧಾನಿಸುವ ಪ್ರಯತ್ನ ಅನೇಕ ಅಸಾಧ್ಯ ತಾತ್ವಿಕ ರೂಪಕಗಳನ್ನು ಹುಟ್ಟುಹಾಕಿ, ಸಂಘಟನೆಯನ್ನು ಅಸಾಧ್ಯಗೊಳಿಸಿತು. ಸಮಾಜವಾದಿ ಕಾರ್ಯಕರ್ತನ ಒಂದು ಕಣ್ಣಲ್ಲಿ ಅನ್ಯಾಯದ ವಿರುದ್ಧ ಕ್ರೋಧದ ಕಣ್ಣೀರು ಮತ್ತು ಇನ್ನೊಂದು ಕಣ್ಣಲ್ಲಿ ಅನ್ಯಾಯಕ್ಕೊಳಗಾದವರ ಬಗೆಗಿನ ಕರುಣೆಯ ಕಣ್ಣೀರು ಇರಬೇಕೆಂಬ ಲೋಹಿಯಾರ ಪ್ರಸಿದ್ಧ ಘೋಷವಾಕ್ಯ, ವೈಯಕ್ತಿಕ ನೆಲೆಯಲ್ಲಿ ಸಾಕ್ಷಾತ್ಕಾರವಾಗಬೇಕಾದ ಹೋರಾಟ ತತ್ವ. ಸಾಮಾಜಿಕ ನೆಲೆಯಲ್ಲಿ ಅದನ್ನು ರೂಢಿಸಲು, ಕಷ್ಟಸಾಧ್ಯವಾದ ನಿರಂತರ ತರಬೇತಿ ಕಾರ್ಯಕ್ರಮಗಳು ಅಗತ್ಯ. ಆದರೆ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಸಂಘಟಿಸುವ ತಾಕತ್ತನ್ನೇ ಗಳಿಸಿಕೊಳ್ಳದ ಲೋಹಿಯಾ ಸಮಾಜವಾದಿ ಚಳವಳಿ, ಬರೀ ಕಾಂಗ್ರೆಸ್ ವಿರೋಧಿ ಕ್ರೋಧದ ಬೆಂಕಿಯಾಗಿ ಉರಿದು ಆರಿ ಹೋಗಿದ್ದು ಸಹಜವೇ ಆಗಿದೆ. ನಗರ ಪ್ರದೇಶಗಳ ಕಾರ್ಯಕರ್ತರ ಬೌದ್ಧಿಕ ಪ್ರಜ್ಞೆ ಹಾಗೂ ಗ್ರಾಮಾಂತರ ಪ್ರದೇಶದ ಕಾರ್ಯಕರ್ತರ ನಡುವಣ ವಾಸ್ತವ ಪ್ರಜ್ಞೆಗಳ ನಡುವೆ ಪಕ್ಷ ಕಳೆದುಹೋದ ಸಾಧ್ಯತೆಯನ್ನು ನಾವು ಅಲ್ಲ ಗಳೆಯುವಂತಿಲ್ಲ.

ಕಾಗೋಡು ಹಾಗೂ ಸೊಂಡೂರು ಭೂ ಸತ್ಯಾಗ್ರಹಗಳನ್ನು ಸಮಾಜವಾದಿ ಹೋರಾಟಗಳೆಂದು ಕರೆಯಲಾಗುವುದಾದರೂ, ಈ ಹೋರಾಟಗಳನ್ನು ನಿಜವಾಗಿ ಆರಂಭಿಸಿದ್ದು ಸ್ಥಳೀಯ ರೈತ ಸಂಘಗಳು ಎಂಬುದನ್ನು ನಾವು ಮರೆಯಬಾರದು. ಅವು ತಮ್ಮ ಹೋರಾಟಗಳನ್ನು ತಾರ್ಕಿಕ ಅಂತ್ಯಗಳಿಗೆ ಒಯ್ಯಲಾಗದೆ, ಆಗ ಪ್ರಭುತ್ವ ವಿರೋಧಿ ಪಕ್ಷವಾಗಿ ಪ್ರಸಿದ್ಧವಾಗಿದ್ದ ಸಮಾಜವಾದಿ ಪಕ್ಷಕ್ಕೆ ನೇತೃತ್ವ ವಹಿಸಿಕೊಟ್ಟವಷ್ಟೇ. ಆದರೆ ದತ್ತಾಗಿ ಬಂದ ಈ ಹೋರಾಟಗಳ ಮೂಲಕ ಪಕ್ಷ, ಸಮಾಜವಾದಿ ಚಳವಳಿಯನ್ನು ಬೆಳೆಸಲು ವ್ಯವಸ್ಥಿತ ಪ್ರಯತ್ನಗಳನ್ನು ಮಾಡಿದ ಸೂಚನೆಗಳೇನೂ ನಮಗೆ ಸಿಗುವುದಿಲ್ಲ. ಒಂದು ಕಾಲದಲ್ಲಿ ಕರ್ನಾಟಕದಲ್ಲಿ ಸಮಾಜವಾದಿ ಚಳವಳಿಯ ತವರು ಎನಿಸಿದ್ದ ಶಿವಮೊಗ್ಗ ಜಿಲ್ಲೆ ಇಂದು

ಈ ಹಿಂದೆ ಇಲ್ಲಿ ಹೆಸರೇ ಇರದಿದ್ದ ಸಂಘ ಪರಿವಾರದ ಭದ್ರಕೋಟೆಯಾಗಿರುವುದನ್ನು ವಿವರಿಸುವುದಾದರೂ ಹೇಗೆ? ಸೊಂಡೂರು ಭೂ ಸತ್ಯಾಗ್ರಹದ ನೇತೃತ್ವವನ್ನು ರೈತ ಸಂಘದಿಂದ ಪಡೆದ ಸಮಾಜವಾದಿ ಪಕ್ಷ, ರೈತರಿಗೆ ಭೂಮಿ ಹಂಚಿಕೆಯಾಗುವ ವಿಧಿ ವಿಧಾನಗಳು ಆರಂಭವಾಗುವ ಹೊತ್ತಿಗೆ ಅಲ್ಲಿಂದ ಕಾಲ್ಕಿತ್ತಿತ್ತು. (ಚಳವಳಿ ನಡೆದಿದ್ದೂ ಬೆಂಗಳೂರು–ಶಿವಮೊಗ್ಗಗಳಿಂದ ಬಂದಿದ್ದ ಕಾರ್ಯಕರ್ತರ ಬಲದೊಡನೆ!) ಎಂದರೆ ಏನು ಹೇಳುವುದು? ಸದಾ ವಿರೋಧಾನಂದಿಗಳಾಗಿದ್ದ ಸಮಾಜವಾದಿಗಳು ಗುದ್ದಲಿ, ವೋಟು, ಸೆರೆಮನೆ (ರಚನಾತ್ಮಕ ಕೆಲಸ, ಚುನಾವಣಾ ರಾಜಕೀಯ, ಪ್ರತಿಭಟನೆ) ತಮ್ಮ ಪಕ್ಷದ ತ್ರಿರೂಪಿ ಕಾರ್ಯಕ್ರಮವೆಂದು ಹೇಳಿಕೊಂಡರೂ, ಪ್ರತಿಭಟನೆಗೆ ಪೂರಕವಾಗಿ ರಚನಾತ್ಮಕ ಕೆಲಸಗಳಲ್ಲಿ ಆಸಕ್ತಿಯನ್ನೇ ವಹಿಸದೇ ಅಂತಿಮವಾಗಿ ವೋಟುಗಳಿಂದಲೂ ವಂಚಿತರಾದರು.

ಸಿದ್ಧಾಂತ ಏನೇ ಇದ್ದರೂ, ಕಾಂಗ್ರೆಸ್‌ನೊಡನೆಯ ದಾಯಾದಿ ಮತ್ಸರವನ್ನು ತನ್ನ ಅಸ್ತಿತ್ವಕ್ಕೆ ಆಧಾರ ಮಾಡಿಕೊಂಡಂತೆ ಬೆಳೆದ ಸಮಾಜವಾದಿ ಚಳವಳಿ, ಕೊನೆಗೆ ತಾನುಳಿಯಲು 'ಕಾಂಗ್ರೆಸ್ಸೇತರವಾದ'ವನ್ನೂ ಸೃಷ್ಟಿಸಿಕೊಳ್ಳಬೇಕಾಯಿತು ಎಂಬುದನ್ನು ಸಮಾಜವಾದಿ ಚಳವಳಿಯ ಇತಿಹಾಸದ ಅಧ್ಯಯನದ ದೃಷ್ಟಿಯಿಂದ ವಿಶೇಷವಾಗಿ ಗಮನಿಸಬೇಕು. ಹಾಗೇ, ಲೋಹಿಯಾ ಬದುಕಿದ್ದಾಗಲೇ ಈ ಕಾಂಗ್ರೆಸ್ಸೇತರವಾದದ ಮೊದಲ ಬಲಿ ಅವರ ಕಣ್ಣೆದುರಲ್ಲೇ ಬಿಹಾರದಲ್ಲಿನ ಸಂಯುಕ್ತ ಸಮಾಜವಾದಿ ಪಕ್ಷದ ನೇತೃತ್ವದ ಸಮ್ಮಿಶ್ರ ಸರ್ಕಾರವೇ ಆಗಿತ್ತು. ಬಿ.ಪಿ.ಮಂಡಲ್ ಎಂಬ ಸಮಾಜವಾದಿ ಸಂಸತ್ ಸದಸ್ಯ ರಾಜ್ಯದ ಮುಖ್ಯಮಂತ್ರಿ ಆಗುವ ಆಸೆಯಿಂದ ಪಕ್ಷದ ನೀತಿ ಸಂಹಿತೆಯನ್ನೇ ಉಲ್ಲಂಘಿಸಿ, ವಿಧಾನ ಪರಿಷತ್ ಸದಸ್ಯನಾಗಲು ಹವಣಿಸುವ ಮೂಲಕ ಅಂತಿಮವಾಗಿ ಪಕ್ಷವನ್ನು ಒಡೆದು ಸರ್ಕಾರದ ಪತನಕ್ಕೆ ಕಾರಣನಾದ. ಅಷ್ಟು ಸುಲಭವಾಗಿ ಶಿಥಿಲಗೊಳಿಸಿತ್ತು ಸಮಾಜವಾದದ ನೈತಿಕತೆಯನ್ನು, ಈ ಕಾಂಗ್ರೆಸ್ಸೇತರವಾದವೆಂಬ ಪಕ್ಷ ಉಳಿಸಿಕೊಳ್ಳುವ ಹತಾಶ ಯತ್ನ! ಇನ್ನು ಕಾಂಗ್ರೆಸ್ಸೇತರವಾದವನ್ನು ತಾತ್ವಿಕವಾಗಿ ವಿರೋಧಿಸಿದ ಸಮಾಜವಾದಿಗಳ ಒಂದು ಗುಂಪು (ಕೆಲವರ ಹೊರತಾಗಿ) ಅನತಿಕಾಲದಲ್ಲೇ ಕಾಂಗ್ರೆಸ್ಸಿನಲ್ಲಿ ವಿಲೀನವಾದದ್ದು ಸಮಾಜವಾದಿ ಚಳವಳಿಯ ಇನ್ನೊಂದು ವಿಪರ್ಯಾಸ!

ಇನ್ನು ಇದಾದ ಹತ್ತು ವರ್ಷಗಳ ನಂತರ ಮಾಜಿ ಸಮಾಜವಾದಿ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಜನತೆಯೇ ಕಟ್ಟಿದ್ದೆಂದು ಹೇಳಬಹುದಾದ ಜನತಾ ಪಕ್ಷ ಗಾಂಧಿ ಸಮಾಜವಾದದ ದೀಕ್ಷೆ ಪಡೆದೂ, ಮೂರೇ ವರ್ಷಗಳಲ್ಲಿ ವಿಘಟನೆಗೊಂಡು, ಭಾರತದ ರಾಜಕಾರಣದ ಅತಿ ದೊಡ್ಡ ಛಿದ್ರೀಕರಣಕ್ಕೆ ಮತ್ತು ಅದಕ್ಕಿಂತ ಮುಖ್ಯವಾಗಿ ಕೋಮುವಾದಿ ರಾಜಕಾರಣದ ಬಲವರ್ಧನೆಗೆ ಕಾರಣವಾಯಿತು. ಇದು, ನಾನು ನನ್ನ ಇನ್ನೊಂದು ಲೇಖನದಲ್ಲಿ ಹೇಳಿದಂತೆ, ಕೆಲವು ಸಮಾಜವಾದಿಗಳಲ್ಲಿ ಹೊಸ 'ಎಚ್ಚರ' ಮೂಡಿಸಿ; ಕಾಂಗ್ರೆಸ್ಸೇತರವಾದವನ್ನು ಅರ್ಧಕ್ಕೆ ಕೈ ಬಿಟ್ಟು, ಕಾಂಗ್ರೆಸ್‌ವಾದವನ್ನು ಪ್ರತಿಪಾದಿಸಲು ಪ್ರೇರೆಪಿಸಿತು! ಮುಖ್ಯವಾಗಿ ಲೋಹಿಯಾರ ಆಪ್ತ ಶಿಷ್ಯರಾದ ಮತ್ತು ಸಮಾಜವಾದಿ

ಆಂದೋಲನದ ಕಾಂಗ್ರೆಸ್ ವಿರೋಧಿ ಹೋರಾಟಗಳಲ್ಲಿ ಅವರಿಗೆ ಬೆಂಬಲವಾಗಿ ನಿಂತಿದ್ದ ಮಧುಲಿಮೆಯೆ ಅವರೇ, ಬಲಪಂಥೀಯ ಕೋಮುವಾದಿ ರಾಜಕಾರಣದೆದುರು ಕಾಂಗ್ರೆಸ್ಸನ್ನು ಬೆಳೆಸುವ ಅಗತ್ಯ ಮತ್ತು ಮಹತ್ವದ ಮಾತುಗಳನ್ನಾಡಲಾರಂಭಿಸಿದರು... ಆ ಮೂಲಕ ಅವರು ಸಮಾಜವಾದಿ ಸಂಘಟನೆಯ ಆತ್ಯಂತಿಕ ವೈಫಲ್ಯವನ್ನೂ ಒಪ್ಪಿಕೊಳ್ಳಲಾರಂಭಿಸಿದರು. ಸಮಾಜವಾದಿ ಆಂದೋಲನದ ಸರಿ ಸುಮಾರು ಆರಂಭದಿಂದಲೂ ಇದ್ದ ಮತ್ತು ಸಮಾಜವಾದಿ ಚಳವಳಿಯ ಇತಿಹಾಸವನ್ನು ಒಬ್ಬ ಸಾಕ್ಷಿದಾರನಾಗಿಯೂ ಬರೆದಿರುವ ಲಿಮೆಯೆ, ತಮ್ಮ ಬದುಕಿನ ಕೊನೇ ದಿನಗಳಲ್ಲಿ ಸಮಾಜವಾದಿ ಪಕ್ಷದ ಅನಿವಾರ್ಯ ಅಂತ್ಯವನ್ನೂ ಮನಗಂಡಿದ್ದರು..

ಆದರೆ, ಹಾಗೆ ಮನಗಾಣದ ಎರಡನೇ ಸಾಲಿನ ನಾಯಕರು ತಮ್ಮ ರಾಜಕೀಯ ಅನುಕೂಲಗಳಿಗೆ ತಕ್ಕಂತೆ ವಿವಿಧ ಪಕ್ಷಗಳಲ್ಲಿ ಹಂಚಿ ಹೋದರು. ನಂತರದ ಗೊಂದಲಗಳಲ್ಲಿ ಜಾತಿ ಬಲಗಳಿದ್ದ ಕೆಲವು ನಾಯಕರು–ಉದಾ: ಲಾಲೂ ಮತ್ತು ಮುಲಾಯಂರಂತಹವರು–ತಮ್ಮದೇ ಪ್ರಾದೇಶಿಕ ಪಕ್ಷಗಳನ್ನು ಕಟ್ಟಿ ಕೊಂಡರು. ಈ ಪಕ್ಷಗಳಲ್ಲಿನ 'ಗೌಡಿಕೆ'ಯನ್ನು ಸಹಿಸಲಾರದೆ ಕೆಲವರು ಪಕ್ಷ ಬಿಟ್ಟು ಇನ್ನೆಲ್ಲಿಗೂ ಹೋಗಲಾರದ ಸ್ಥಿತಿ ತಲುಪಿ, ಕೊನೆಗೆ ಬಿಜೆಪಿ ಮೈತ್ರಿಕೂಟ ಸೇರಿದರು! ಹೀಗೆ ಭಾರತದಲ್ಲಿ ಸಮಾಜವಾದಿ ಆಂದೋಲನ ಭಾರತದ ಸರ್ವ ಪಕ್ಷಗಳಿಗೂ ತನ್ನ ಕೊಡುಗೆಯನ್ನು ನೀಡಿದೆ... ಆ ಮೂಲಕ ಭಾರತದ ಸಮಾಜವಾದವೆಂದರೆ, ಹಾಕಿಕೊಂಡವರ ತಲೆಯ ಆಕಾರ ಪಡೆಯುವ ಕಾಂಗ್ರೆಸ್ ಟೊಪ್ಪಿಗೆ ಇದ್ದಂತೆ ಎಂದು ಈ ಆಂದೋಲನದ ಇತಿಹಾಸ ಬರೆದಿರುವ ಹ್ಯಾರಿಸ್ ವೊಫರ್ಡ್ ಎಂಬ ರಾಜಕೀಯ ಟೀಕಾಕಾರನ ಮಾತುಗಳನ್ನು ನಿಜಗೊಳಿಸಿದೆ!

–೨–

ಭಾರತದ ಸಮಾಜವಾದಿ ಆಂದೋಲನವನ್ನು ಹತ್ತಿರದಿಂದ ಮತ್ತು ವಸ್ತುನಿಷ್ಠವಾಗಿ ಅಭ್ಯಾಸ ಮಾಡಿದವರಿಗೆ ಇದೇನೂ ಅಸಹಜವೆನಿಸುವುದಿಲ್ಲ. ಸಮಾಜವಾದಿ ಪಕ್ಷವೆಂಬುದೇ ಈ ಹಿಂದೆ ಸೂಚಿಸಿದಂತೆ ಮೂಲತಃ ಕಾಂಗ್ರೆಸ್ ಪಕ್ಷದ ಉಪ ಪಕ್ಷವಾಗಿ ಆರಂಭವಾದದ್ದು. ಸ್ವಾತಂತ್ರ್ಯಪೂರ್ವ ಕಾಂಗ್ರೆಸ್ಸಿನೊಳಗೇ ಎದ್ದ ಯುವ ಜನರ ತಾತ್ವಿಕ ಬಂಡಾಯದ ಫಲವದು. ಅದು ಕೂಡಾ ಬಹಳ ಕಾಲ ಒಂದು ತಾತ್ವಿಕ ಸ್ಪಷ್ಟತೆ ಪಡೆದುಕೊಂಡಿರಲಿಲ್ಲ. ಆಗ ಇನ್ನೂ ಹಸಿ ಹಸಿ ನೆನಪಾಗಿದ್ದ ರಷ್ಯಾದ ಕ್ರಾಂತಿಯ ಸ್ಫೂರ್ತಿಯಿಂದಾಗಿ ಮೂಲತಃ ಮಾರ್ಕ್ಸವಾದಿಗಳಾಗಿದ್ದ ಇವರು, ಕಾರ್ಯಾಚರಣೆಯಲ್ಲಿ ಅಂದಿನ ಭಾರತದ ಕಮ್ಯೂನಿಷ್ಟ ಪಕ್ಷದ ವರಸೆಗಳನ್ನೊಪ್ಪದೆ ಕಾಂಗ್ರೆಸ್‌ನೊಳಗೇ ತಮ್ಮ ಕ್ರಾಂತಿಕಾರಿ ವಿಚಾರಗಳನ್ನು ಬಿತ್ತಲಾರಂಭಿಸಿದವರು. ಇವರ ನಾಯಕ ಜಯಪ್ರಕಾಶ್ ನಾರಾಯಣ್. ಗಾಂಧೀಜಿಯ ಕಾಲು ಮುಟ್ಟಿ ನಮಸ್ಕರಿಸುವಷ್ಟು ಗಾಂಧಿ ವ್ಯಕ್ತಿತ್ವದ ಬಗ್ಗೆ ಗೌರವವುಳ್ಳವರಾಗಿದ್ದ ಇವರು, ಗಾಂಧೀಜಿಯ ರಾಜಕೀಯ ವಿಚಾರಧಾರೆಯ ಕಟ್ಟಾ ವಿರೋಧಿಯೂ ಆಗಿದ್ದರು! ಒಮ್ಮೆ ಕಮ್ಯೂನಿಷ್ಟರು ಜೆಪಿಯವರ

ಈ ದ್ವಂದ್ವ ವ್ಯಕ್ತಿತ್ವದ ಉಪಯೋಗ ಪಡೆದು ಅವರ ಉಪ ಪಕ್ಷದ ಒಳಹೊಕ್ಕು ಮಾಡಿದ ಅವಾಂತರ ಗೊತ್ತಾದ ನಂತರವಷ್ಟೇ ಈ ಉಪ ಪಕ್ಷ, ಮಾರ್ಕ್ಸ್‌ವಾದ ಎಲ್ಲ ನೈತಿಕತೆಯನ್ನು ಮೀರಿ ನಿಂತದ್ದು ಎಂದು ಮನಗಂಡು, ಗಾಂಧಿವಾದದ ಕಡೆ ಸಹಾನುಭೂತಿ ಪರವಾದ ನಿಲುವು ತಳೆಯಲು ಸಾಧ್ಯವಾದದ್ದು. ಆ ಸಂದರ್ಭದಲ್ಲಿಯೇ ಜರ್ಮನಿಯಲ್ಲಿನ ತಮ್ಮ ಸಂಶೋಧನಾ ಅಧ್ಯಯನದ ಸಂದರ್ಭದಲ್ಲಿ ಫ್ಯಾಸಿಸ್ಟರು ಮತ್ತು ಕಮ್ಯೂನಿಷ್ಟರು–ಈ ಇಬ್ಬರ 'ಅನೈತಿಕ' ವರಸೆಗಳನ್ನು ಕಂಡಿದ್ದ ಡಾ. ರಾಮ ಮನೋಹರ ಲೋಹಿಯಾ, ಈ ಉಪ ಪಕ್ಷಕ್ಕೆ ತಾವು ಜರ್ಮನ್ ಸಮಾಜವಾದಿ ಅರ್ಥಶಾಸ್ತ್ರಜ್ಞರಾದ ಷೂಮೇಕರ್ ಮತ್ತು ಜೆಂಬಾರ್ಟ್ ಅವರಿಂದ ಕಲಿತಿದ್ದ ಮಧ್ಯಮ ಮಾರ್ಗದ ಸಮಾಜವಾದದ ಸೈದ್ಧಾಂತಿಕ ನೆಲೆ ಒದಗಿಸುವ ಪ್ರಯತ್ನ ಮಾಡಿದ್ದು. ಇದಕ್ಕೆ ಪೂರಕವಾಗಿ ಒದಗಿ ಬಂದದ್ದು ಆಗಿನ್ನೂ ಜೀವಂತ ಪ್ರಯೋಗದಲ್ಲಿದ್ದ ಗಾಂಧಿವಾದ.

ಹೀಗೆ ಭಾರತೀಯ ಸಮಾಜವಾದವೆಂಬುದು ಮಾರ್ಕ್ಸ್‌ವಾದ, ಐರೋಪ್ಯ ಸಮಾಜವಾದ ಮತ್ತು ಗಾಂಧಿವಾದಗಳೆಂಬ ಮೂರು ರಾಜಕೀಯ ವಿಚಾರಧಾರೆಗಳ ಮಿಶ್ರಣವಾಗಿ ಒಂದು ಪಕ್ಷವನ್ನು ಕಟ್ಟತೊಡಗಿತ್ತು. ಕಾಂಗ್ರೆಸ್‌ನೊಳಗಿನ ಈ 'ಕಾಂಗ್ರೆಸ್ ಸೋಷಲಿಸ್ಟ್' ಎಂಬ ಈ ಉಪ ಪಕ್ಷಕ್ಕೆ, ವಲ್ಲಭಭಾಯಿ ಪಟೇಲರ ನೇತೃತ್ವದ ಬಲ ಪಂಥೀಯ ಗುಂಪು ಕಾಂಗ್ರೆಸ್ ಪಕ್ಷದ ಅಂಗರಚನೆಗೆ ಒಂದು ತಿದ್ದುಪಡಿ ತಂದು, ಪಕ್ಷದೊಳಗೊಂದು ಉಪ ಪಕ್ಷವಿರಲು ಸಾಧ್ಯವಿಲ್ಲದಂತೆ ಮಾಡಿದ್ದರಿಂದ ತನ್ನ ಮಾತೃಪಕ್ಷದಿಂದ ಹೊರ ಹೋಗುವುದು ಅನಿವಾರ್ಯವೆನಿಸಿದಾಗಲೂ, ಅದು ರಾಜಕೀಯ ಪಕ್ಷವೊಂದರ ಯಾವ ಸ್ಪಷ್ಟ ಲಕ್ಷಣಗಳನ್ನು ಹೊಂದಿರಲಿಲ್ಲ! ಬಹಳಕಾಲ ಉಪ ಪಕ್ಷವಾಗಿ ಕೆಲಸ ಮಾಡಿದ್ದುದರಿಂದ ಸಡಿಲ ಸಂಘಟನೆಯನ್ನಷ್ಟೇ ಹೊಂದಿದ್ದ ಈ ಪಕ್ಷ, ಒಂದು ಸ್ಪಷ್ಟ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿಲ್ಲ. ಈ ಎರಡೂ ಕಾರಣಗಳಿಂದಾಗಿ ೧೯೫೨ರ ಮೊದಲ ಮಹಾಚುನಾವಣೆಯಲ್ಲಿ ಹೀನಾಯವಾಗಿ ಸೋತ ನಂತರ ಆತ್ಮ ಪರಿವೀಕ್ಷಣೆಗಾಗಿ ಪಂಚಮಢಿ ಎಂಬಲ್ಲಿ ಸಮಾವೇಶಗೊಂಡಾಗಲೇ, ಈ ಪಕ್ಷ ತನ್ನ ಈ ಎರಡೂ ದೌರ್ಬಲ್ಯಗಳ ಬಗ್ಗೆ ಗಂಭೀರವಾಗಿ ಚಿಂತಿಸಿದ್ದು! ಹಿರಿಯ ನಾಯಕ ಆಚಾರ್ಯ ನರೇಂದ್ರದೇವ ಅವರ ಅನುಪಸ್ಥಿತಿಯಲ್ಲಿ ಈ ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಡಾ. ರಾಮಮನೋಹರ ಲೋಹಿಯಾ ಪ್ರಸ್ತುತ ಪಡಿಸಿದ 'ಸಮಾಜವಾದ ತಾತ್ವಿಕ ಅಡಿಗಲ್ಲುಗಳು' (Doctrinal foundation of Socialism) ಎಂಬ ಭಾಷಣವೇ ಭಾರತದ ಸಮಾಜವಾದಿ ಆಂದೋಲನಕ್ಕೆ ತನ್ನದೆನ್ನುವ ಒಂದು ಸ್ಪಷ್ಟ ವೈಚಾರಿಕ ಆಕೃತಿಯನ್ನು ನೀಡಿದ್ದು.

ಆದರೆ ಬಹುಬೇಗ ದಾಯಾದಿ ಮತ್ಸರದಲ್ಲೆಂಬಂತೆ ತನ್ನ ಕಾಂಗ್ರೆಸ್ ವಿರೋಧಿ ರಾಜಕಾರಣದಲ್ಲೇ ಮೈಮರೆತ ಸಮಾಜವಾದಿ ಆಂದೋಲನ–ವಿಶೇಷವಾಗಿ ಲೋಹಿಯಾಧಾರೆ–ಇದರ ರಚನಾತ್ಮಕ ಅಂಶಗಳ ಕಡೆ ಗಮನಕೊಟ್ಟಿದ್ದು, ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಹೋರಾಟದಲ್ಲಿ ಆಯಾಸಗೊಂಡಾಗ ಹೋಗಿ ತಾತ್ವಿಕ ವಿವೇಚನೆಯಲ್ಲಿ ತೊಡಗಲು, ಸ್ವತಃ

ಲೋಹಿಯಾ ಪ್ರತಿಪಾದಿಸಿದ್ದ 'ಸಮಾಜವಾದಿ ಆಶ್ರಮ'ಗಳ ಕಲ್ಪನೆ ಬರೀ ಕಲ್ಪನೆಯಾಗಷ್ಟೇ ಉಳಿಯಿತು. ಹಾಗಾಗಿ ಈ ಸಮಾಜವಾದಿಗಳು ತಮ್ಮ ಈ 'ಹೋರಾಟ'ಗಳಿಂದಾಗಿ ಸೇರಿದ್ದು ಆಶ್ರಮಗಳನ್ನಲ್ಲ, ಸೆರೆಮನೆಗಳನ್ನಷ್ಟೇ–ಅದೂ ಇನ್ನಾವ ಪಕ್ಷದ ಹೋರಾಟಗಾರರೂ ಸೇರದಷ್ಟು ಬಾರಿ ಮತ್ತು ಅವಧಿಗಳವರೆಗೆ! ಹಾಗೆ ನೋಡಿದರೆ, ಇಂತಹ ಹೋರಾಟಗಳಲ್ಲಿ ಹೀಗೆ ಆಯಾಸಗೊಂಡವರಲ್ಲಿ ಕೆಲವರು ಪಕ್ಷವನ್ನೇ ಬಿಟ್ಟು ಹೋದರೆ, ಇನ್ನು ಕೆಲವರು ಪಕ್ಷ ರಾಜಕಾರಣವನ್ನೇ ತೊರೆದು ಹೋದರು. ಹಾಗೆ ಪಕ್ಷ ರಾಜಕಾರಣವನ್ನು ತೊರೆದ ಮುಖ್ಯ ನಾಯಕರಲ್ಲೊಬ್ಬರಾದ ಜಯಪ್ರಕಾಶರು ಬಿಹಾರದ ಸೆಖೋದೇವೂರಾ ಎಂಬಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದರು. ಆದರದು ಸರ್ವೋದಯದ ಆಶ್ರಮವಾಗಿತ್ತು. ಅದು ಸರ್ವೋದಯ ಚಳವಳಿಯಂತೆಯೇ ಕ್ರಮೇಣ ಹಾಳು ಬಿದ್ದಿತೆಂಬುದು ಬೇರೆ ಮಾತು!

ಲೋಹಿಯಾ ಅವರೇನೋ ತಮ್ಮ ಹೋರಾಟದೊಂದಿಗೆ ತಾತ್ವಿಕ ಅನ್ವೇಷಣೆಗಳಲ್ಲೂ ತೊಡಗಿಕೊಂಡರು. ಇದರಿಂದಾಗಿ ರಾಷ್ಟ್ರಾದ್ಯಂತ ಅನೇಕ ಲೇಖಕರು-ಕಲಾವಿದರು-ಬುದ್ಧಿಜೀವಿಗಳು ಅದರೆಡೆಗೆ ಆಕರ್ಷಿತರಾದರು. ಅವರ 'ಇತಿಹಾಸ ಚಕ್ರ', 'ಮಾರ್ಕ್ಸ್, ಗಾಂಧಿ ಮತ್ತು ಸಮಾಜವಾದ' ಮತ್ತು 'ರಾಜಕೀಯದ ಮಧ್ಯೆ ಬಿಡುವು' ಇಂತಹ ತಾತ್ವಿಕ ಅನ್ವೇಷಣೆಯ ವಿವಿಧ ಸ್ತರಗಳ ಪ್ರಯತ್ನಗಳು. ಆದರೆ ಈ ವಿಷಯದಲ್ಲಿ ಲೋಹಿಯಾರದ್ದು 'ಏಕವ್ಯಕ್ತಿ ಪ್ರದರ್ಶನ'ವಾಯಿತೇ ಹೊರತು, ಸಮಾಜವಾದಿ ಪಕ್ಷವೆಂಬುದು ಕಾಂಗ್ರೆಸ್ಸಿಗೆ ಒಂದು ರಾಜಕೀಯ ಪರ್ಯಾಯ ಒದಗಿಸುವ ಜನರ ಆಂದೋಲನವಾಗಿ ಬೆಳೆಯಲಾರದಾಯಿತು. ಬದಲಿಗೆ ಅದೊಂದು 'ಪ್ರತಿಭಟನೆ'ಯ ಹೆಸರಿನ, ಕೈ ಬೆರಳೆಣಿಕೆಯ 'ಗಲಭೆಕೋರರ' ಪಕ್ಷವೆಂದೇ ಜನರ ಕಣ್ಣಲ್ಲಿ ದಾಖಲಾಗುತ್ತಾ ಹೋಯಿತು. ಇದರಿಂದಾಗಿ ಪಕ್ಷ ತನ್ನ ಜನಪರ ತಾತ್ವಿಕತೆಯ ಹೊರತಾಗಿಯೂ, ಆಯ್ಕೆಯಾದ ಅದರ ಕೆಲವೇ ಶಾಸಕರ ಜನಪರ ಶಾಸನಸಭಾ 'ಪ್ರದರ್ಶನ'ಗಳ ಹೊರತಾಗಿಯೂ, ಸೋಲಿನ ಮೇಲೆ ಸೋಲನ್ನು ಅನುಭವಿಸುತ್ತಾ ಹೋಯಿತು. ಇದರ ಪರಿಣಾಮವಾಗಿ ಪಕ್ಷ, ರಾಷ್ಟ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಪದೇ ಪದೇ ಹೋಳಾಗತೊಡಗಿತು. ಈ ಮಧ್ಯೆ ಕಾಂಗ್ರೆಸ್ ಪಕ್ಷ ಪದೇ ಪದೇ ತನ್ನ ಸಮಾಜವಾದಿ ನೀತಿ ಬದ್ಧತೆಯನ್ನು ಪುನರುಚ್ಚರಿಸುತ್ತಿದ್ದುದರಿಂದಲೂ, ಕಾಂಗ್ರೆಸ್ಸಿನ ಕಡೆ ವಲಸೆ ನಡೆದೇ ಇತ್ತು. ೧೯೫೦ರಲ್ಲಿ ಉತ್ತರಪ್ರದೇಶದ ಬುಲಂದ್‌ಷಹರ್ ಎಂಬಲ್ಲಿ ಸಮಾಜವಾದಿ ಕಾರ್ಯಕರ್ತರು ಮತ್ತು ರೈತರು ಸೇರಿ 'ಲೋಹಿಯಾ ಸಾಗರ' ಎಂಬ ಕಿರು ಜಲಾಶಯವೊಂದನ್ನು ನಿರ್ಮಿಸಿದ್ದರ ಹೊರತಾಗಿ, ಸಮಾಜವಾದಿಗಳು 'ರಚನಾತ್ಮಕ' ಎನ್ನಬಹುದಾದ ಯಾವ ಚಟುವಟಿಕೆಯನ್ನು ಮಾಡಿದಂತೆ ತೋರುವುದಿಲ್ಲ. ಕೊನೇ ಪಕ್ಷ ತನ್ನ ಸಂಘಟನೆಗಾಗಿ ಒಂದು ಕೇಂದ್ರ ಕಾರ್ಯಾಲಯದ ಕಟ್ಟಡವೊಂದನ್ನೂ ಅದು ಕಟ್ಟಿಕೊಳ್ಳಲಾಗಲಿಲ್ಲ. ಹಾಗಾಗಿಯೇ ಶುದ್ಧ ಅಲೆಮಾರಿಗಳ ಪಕ್ಷದಂತಿದ್ದ ಸಮಾಜವಾದಿ ಪಕ್ಷ ಇಂದು ಭಾರತದ ರಾಜಕಾರಣದಿಂದಾಗಿಯೇ ಕಾಣೆಯಾಗಿದೆ. ಹಾಗಾಗಬಾರದೆಂದು ತಮ್ಮ ಬದುಕಿನ ಕೊನೇ ದಿನಗಳಲ್ಲಿ, ನಾನು ಈ ಹಿಂದೆಯೇ ತಿಳಿಸಿದಂತೆ, ಅದರ ಇಬ್ಬರು ಮುಖ್ಯ ನಾಯಕರಾದ ಲೋಹಿಯಾ ಮತ್ತು ಜಯಪ್ರಕಾಶರು ಹತ್ತು ವರ್ಷಗಳ ಅವಧಿಯಲಿ–೧೯೬೭ ಮತ್ತು

೧೯೬೭ರಲ್ಲಿ–ಕಾಂಗ್ರೆಸ್ಸೇತರವಾದದ ಎರಡು ದೊಡ್ಡ ರಾಜಕೀಯ ತಂತ್ರಗಳನ್ನು ರೂಪಿಸಿದವರಾದರೂ!

ಇಷ್ಟಾದರೂ ಸಮಾಜವಾದದ ಸೆಳೆತ ಭಾರತೀಯ ಸಮಾಜದಲ್ಲಿ ಕಡಿಮೆಯಾದಂತಿಲ್ಲ. ಜಾಗತೀಕರಣ, ಒಂದು ಜನವರ್ಗವನ್ನು ಬಲಿ ತೆಗೆದುಕೊಂಡೇ ಇನ್ನೊಂದು ಜನವರ್ಗದ ಅಪಾರ ಸಿರಿವಂತಿಕೆಗೆ ಕಾರಣವಾಗುತ್ತಿರುವ ವಿದ್ಯಮಾನವೆಂಬುದು (ಇದನ್ನೇ ನವವಸಾಹತುಶಾಹಿ ಎನ್ನುವುದು) ಕ್ರಮೇಣ ಸ್ಪಷ್ಟವಾಗುತ್ತಿದ್ದಂತೆ, ಸಮಾಜವಾದದ ಬಗ್ಗೆ ಜನರಲ್ಲಿ ಮತ್ತೆ ಕುತೂಹಲ ಹುಟ್ಟುತ್ತಿದೆ. ಆದರೆ ಈ ಸೆಳೆತ ಮತ್ತು ಕುತೂಹಲಗಳನ್ನು ಅರ್ಥಪೂರ್ಣ ಗೊಳಿಸುವಂತಹ ಒಂದು ಸಂಘಟನೆಯಲ್ಲಿಯೇ ಇಂದು ಇಲ್ಲವಾಗಿದೆ. ಹಾಗೆ ನೋಡಿದರೆ ಸಮಾಜವಾದದ ಪುನರುಜ್ಜೀವನಕ್ಕೆ ಇಂದು ಹೊಸ ಅವಕಾಶವೊಂದು ತಾನಾಗಿ ರೂಪುಗೊಂಡಿದೆ. ಕಾಂಗ್ರೆಸ್ ಪೂರ್ವಾಶ್ರಮದ ನೆನಪುಗಳ ಭಾರಗಳಿಂದ ಮುಕ್ತರಾದ ಹೊಸ ತಲೆಮಾರಿನ ಸಮಾಜವಾದಿಗಳು, ಸಮಾಜವಾದವನ್ನು ಇಂದಿನ ಅಗತ್ಯಗಳಿಗೆ ತಕ್ಕಂತೆ ಪುನರ್ರೂಪಿಸುವ ಅವಕಾಶ ಹೊಂದಿದ್ದಾರೆ. ಅದರ ತಂತ್ರಜ್ಞಾನ, ಆಡಳಿತ, ಜಾತಿ, ಭಾಷೆ ಇನ್ನಿತರ ನೀತಿಗಳನ್ನು ಹೊಸ ಸಂದರ್ಭಕ್ಕೆ ತಕ್ಕಂತೆ ಪುನರ್ ನಿರೂಪಿಸುವ 'ಸ್ವಾತಂತ್ರ್ಯ' ಅವರಿಗಿದೆ. ಮುಖ್ಯವಾಗಿ ಸಮಾಜವಾದ ಪ್ರತಿಪಾದಿಸಿದ ಸರಳ ಸಭ್ಯ ಜೀವನ ಮಟ್ಟದ ಮಧ್ಯಮ ಮಾರ್ಗವನ್ನು ಅದು ಇಂದಿನ ಹೊಸ ಆರ್ಥಿಕ ಸಂದರ್ಭದಲ್ಲಿ ವ್ಯಾವಹಾರಿಕವೆನಿಸುವ ರೀತಿಯಲ್ಲಿ ನಿರ್ದಿಷ್ಟಕರಿಸಬೇಕಿದೆ. ಲೋಹಿಯಾ ಅವರು ಅರವತ್ತರ ದಶಕದ ಆರ್ಥಿಕತೆಯ ಹಿನ್ನೆಲೆಯಲ್ಲಿ, ಅಸಮಾನತೆಯ ಅಂತರ ಹತ್ತುಪಟ್ಟಿಗಿಂತ ಹೆಚ್ಚಿರಬಾರದು ಎನ್ನುವ ಗರಿಷ್ಠ ಸಾಧ್ಯ ಸಮಾನತೆಯ ಸೂತ್ರದ ಆಧಾರದ ಮೇಲೆ ಸರಳ ಸಭ್ಯ ಜೀವನ ಮಟ್ಟವನ್ನು ನಿರ್ದಿಷ್ಟೀಕರಿಸಿದ್ದರು. ಆದರೆ ಅದು ಕೂಡಾ ಬಹಳ ಜನರಿಗೆ ಅಂದು ವ್ಯವಹಾರಿಕ ಅನ್ನಿಸಲಿಲ್ಲ. ಏಕೆಂದರೆ ಅದು ಸಾಮಾನ್ಯ ಮನುಷ್ಯನೊಬ್ಬನ ಸುಖದ ಇಚ್ಛೆಯ ಎಲ್ಲೆಗಳನ್ನು ಗುರುತಿಸಿರಲಿಲ್ಲ ಮತ್ತು ಆ ಇಚ್ಛೆಯನ್ನು ನಿಯಂತ್ರಿಸಬಲ್ಲ ರಾಜಕೀಯ ಶಕ್ತಿಯನ್ನು, ಸಮಾಜವಾದಿ ಸಂಘಟನೆ ಗಳಿಸಿಕೊಂಡಿರಲಿಲ್ಲ.

ಈಗಲಾದರೋ ಅಸಮಾನತೆಯ ಅಂತರ, ಸಾವಿರ ಪಟ್ಟನ್ನು ಮೀರಿ ಹೋಗಿದೆ! ಲೋಹಿಯಾ ಕಾಲದಲ್ಲಿ ಕೆಲವರಲ್ಲಾದರೂ ಇನ್ನೂ ವಿಶ್ವಾಸ ಉಳಿಸಿಕೊಂಡಿದ್ದ ಗಾಂಧಿವಾದದ ಸರಳ ಜೀವನದ ಆದರ್ಶ ಇಂದು ಅಪ್ರಸ್ತುತವೆನಿಸಿಕೊಂಡಿದೆ. ಮಾಹಿತಿ ತಂತ್ರಜ್ಞಾನದ ಸ್ಫೋಟ ಹಲವಾರು ನೆಲೆಗಳಲ್ಲಿ ಕೆಲಸ ಮಾಡುತ್ತಾ, ಸಮಾಜದ ಲೌಕಿಕ ನಿರೀಕ್ಷೆಗಳ ಮಟ್ಟವನ್ನೂ ಹಲವು ಪಟ್ಟು ಹೆಚ್ಚಿಸಿದೆ. ಇನ್ನು ಸಾಮಾಜಿಕ ನ್ಯಾಯದ ಆಂದೋಲನವೂ ಈ ವರ್ಷಗಳಲ್ಲಿ ಚೈತನ್ಯ ಶಾಲಿಯಾಗಿ ಬೆಳೆದು, ಇದರಿಂದಾಗಿ ಪರಿಶಿಷ್ಟರೂ ಸೇರಿದಂತೆ ಸಮಾಜದ ಶೂದ್ರ ಜಾತಿಗಳು ಗಣನೀಯ ಸಾಮಾಜಿಕ ಚೈತನ್ಯವನ್ನು ಪಡೆದುಕೊಂಡು, ರಾಜಕಾರಣದಲ್ಲಿ ಸಾಕಷ್ಟು ಆಕ್ರಮಣಕಾರಿ ಪಾತ್ರವನ್ನೇ ವಹಿಸುತ್ತಿವೆ. ಇಂತಹ ಹೊಸ ಸಾಮಾಜಿಕ-ಆರ್ಥಿಕ ಸಂಕೀರ್ಣತೆಗಳಲ್ಲಿ, ಸಮಾಜವಾದ ತನ್ನ ಹೊಸ ದಿಗಂತಗಳನ್ನು

ಕಂಡುಕೊಳ್ಳಬೇಕಿದೆ. ಹಾಗೆ ಕಂಡುಕೊಂಡ ಹೊಸ ಎಲ್ಲೆಗಳಲ್ಲೇ ಸಮಾಜವಾದಿಗಳೆನಿಸಿಕೊಂಡವರು ತಮ್ಮ ಜೀವನ ಶೈಲಿಯನ್ನು ರೂಢಿಸಿಕೊಂಡು, ಅದರ ಚೆಲುವನ್ನೇ ಒಂದು ಹೊಸ ಮೌಲ್ಯವೆಂಬಂತೆ ಪ್ರಚುರ ಪಡಿಸುವಂತಹ ಸಾಂಸ್ಕೃತಿಕ ಆಂದೋಲನವನ್ನಾಗಿ, ಹೊಸ ಸಮಾಜವಾದಿ ಆಂದೋಲನವನ್ನು ಕಟ್ಟಬೇಕಾಗಿದೆ. ಮುಖ್ಯವಾಗಿ ಕುಟುಂಬವೊಂದರ ಆಸ್ತಿ ಮತ್ತು ಆದಾಯ ಮಿತಿಗಳ ನಿರ್ಧಾರಗಳೊಂದಿಗೆ ಈ ಕೆಲಸ ಆರಂಭವಾಗಬೇಕಿದೆ. ಅದರ ಆಧಾರದ ಮೇಲೆ ಸಾಮಾಜಿಕ ನ್ಯಾಯ ಮೀಮಾಂಸೆಯನ್ನು ಪುನಾರಚಿಸಬೇಕಿದೆ. ಈ ಮೀಮಾಂಸೆ ಮುಖ್ಯವಾಗಿ ಜಾಗತೀಕರಣ ಸೃಷ್ಟಿಸಿರುವ 'ಸುಖ'ದ ಕಲ್ಪನೆಯ ನಿಜತ್ವವನ್ನು ಶೋಧಿಸಬಲ್ಲ ಪಾರಮಾರ್ಥಿಕತೆಯನ್ನು ಮೈಗೂಡಿಸಿಕೊಳ್ಳಬೇಕಿದೆ. ಇಲ್ಲದೇ ಹೋದಲ್ಲಿ, ಜಾತಿ, ಭಾಷೆ, ಆಡಳಿತ ಮತ್ತು ತಂತ್ರಜ್ಞಾನಗಳನ್ನು ಕುರಿತ ನಮ್ಮ ಹಳೆಯ ನೀತಿಗಳನ್ನು ಪುನರ್ ವಿಮರ್ಶಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ.

ಈ ವಿಷಯಗಳನ್ನು ಕುರಿತಂತೆ, ಸಮಾಜವಾದ ಹಿನ್ನೆಲೆಗೆ ಸರಿದ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಡೆದಿರುವ ಎಲ್ಲ ಚರ್ಚೆಗಳನ್ನೂ ಸಹಾನುಭೂತಿಯಿಂದ ಪರಿಶೀಲಿಸಿ, ಸಮಾಜವಾದವನ್ನು ಹೊಸಕಾಲದ ಮಧ್ಯಮ ಮಾರ್ಗವನ್ನಾಗಿ ಹೇಗೆ ಜನರ ಕಣ್ಣಲ್ಲಿ ವ್ಯಾವಹಾರಿಕವಾಗಿಯೂ ಸಾಧುವೆನ್ನಿಸುವ ರೀತಿಯಲ್ಲಿ ಪ್ರಸ್ತುತ ಪಡಿಸಬಹುದು ಎಂಬುದರ ರೂಪು ರೇಷೆಗಳನ್ನು ಸಿದ್ಧ ಪಡಿಸಬೇಕಿದೆ. ಅದು ಮುಖ್ಯವಾಗಿ, ಮುಕ್ತ ಮಾರುಕಟ್ಟೆಯ ಆರ್ಥಿಕತೆ ಸೃಷ್ಟಿಸುತ್ತಿರುವ ಆಸ್ಫೋಟನಕಾರಿ ಅಸಮಾನತೆಯ, ಅಪರಾಧಗಳ, ಅಶ್ಲೀಲತೆಯ ಹಾಗೂ ಅವನತಿಯ ಸಮಾಜಕ್ಕೆ ಒಂದು ನೈತಿಕ ಪರ್ಯಾಯವಾಗಿರುವಂತೆ ನೋಡಿಕೊಳ್ಳಬೇಕಿದೆ. ಉದಾಹರಣೆಗೆ, ಇಂದಿನ ಆರ್ಥಿಕತೆಯಲ್ಲಿ ತಿಂಗಳಿಗೆ ಪ್ರತಿ ಕುಟುಂಬಕ್ಕೂ ಹತ್ತು ಸಾವಿರ ರೂಪಾಯಿಗಳ ಆದಾಯವಿಲ್ಲದೆ, ಯಾರಾದರೂ ಒಂದು ಲಕ್ಷಕ್ಕಿಂತ ಹೆಚ್ಚಿನ ಆದಾಯಗಳಿಸುವುದು ಮತ್ತು ಅಂತಹ ವ್ಯವಸ್ಥೆ ಇರುವುದು ಅನೈತಿಕ ಎಂಬ ಸಾಂಸ್ಕೃತಿಕ ಎಚ್ಚರವನ್ನು ಪ್ರಚೋದಿಸುವ ರೀತಿಯಲ್ಲಿ ಈ ಆಂದೋಲನವನ್ನು ಆರಂಭಿಸಬೇಕಿದೆ. ನೇರವಾಗಿ ಹೇಳುವುದಾದರೆ, ಹೊಸ ಸಮಾಜವಾದವೆಂಬುದು ರೂಪುಗೊಳ್ಳುವುದಾದರೆ, ಅದೊಂದು ಹೊಸ ನೈತಿಕ ಆಂದೋಲನವಾಗಿಯೇ ಆರಂಭವಾಗಬೇಕಿದೆ. ಇದಕ್ಕೆ ಸದ್ಯಕ್ಕೆ ಪಕ್ಷದ ಅಗತ್ಯವಿಲ್ಲ. ಮೊದಲು ಈ ಎಲ್ಲ ವಿಷಯಗಳ ಬಗ್ಗೆ ಚರ್ಚಿಸಲು, ಸಹಮತ ಮೂಡಿಸಲು ಒಂದು ಅಧ್ಯಯನದ ವೇದಿಕೆಯ ಅಗತ್ಯವಿದೆ. ಸಮಾಜವಾದವನ್ನು ಗಾಂಧಿವಾದದ ಹೆಸರಲ್ಲಾಗಲಿ, ಸರ್ವೋದಯದ ಹೆಸರಲ್ಲಾಗಲಿ, ಹೊಸ ಸಮಾಜವಾದದ ಹೆಸರಲ್ಲಾಗಲಿ ಪುನರುಜ್ಜೀವನಗೊಳಿಸ ಬಯಸುವವರು, ಮೊದಲು ಇಂತಹ ವೇದಿಕೆಯೊಂದರ ಅನಿವಾರ್ಯತೆಯನ್ನು ಮನಗಂಡು, ಅದನ್ನು ರೂಪಿಸುವ ಕಡೆ ಪ್ರಯತ್ನ ಗಳನ್ನು ಆರಂಭಿಸಬೇಕಿದೆ.

(ದಿ. ಕೆ.ರಾಮದಾಸ್ ಅವರ ಸ್ಮರಣ ಸಂಪುಟಕ್ಕಾಗಿ ಬರೆದ ಲೇಖನ, 'ಸಂವಾದ'ದ ೨೦೦೮ರ ಸೆಪ್ಟಂಬರ್ ಸಂಚಿಕೆಯಲ್ಲಿ ಪ್ರಕಟ)

೪೯. 'ಹೊಸ ಸಮಾಜವಾದ ಇಂದಿನ ಅಗತ್ಯ': ಒಂದು ಸಂದರ್ಶನ

(ಇದು ಸಾಗರದ ಎಚ್.ಬಿ.ರಾಘವೇಂದ್ರ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ಚಾರ್ವಾಕ' ವಾರಪತ್ರಿಕೆಯ ವಾರ್ಷಿಕ ಸಂಚಿಕೆಗಾಗಿ ಭೀಮನಕೋಣೆಯ 'ಚರಕ'ದ ಎಂ.ಎನ್. ಕುಲಕರ್ಣಿಯವರು ನನ್ನೊಡನೆ ನಡೆಸಿದ ಸಂದರ್ಶನದ ಆಯ್ದ ಭಾಗಗಳು-ಲೇಖಕ)

ಕರ್ನಾಟಕದ ಕಳೆದ ಮೂರು ದಶಕದ ಸರಿ ಸುಮಾರು ಎಲ್ಲ ಪ್ರಮುಖ ಚಳುವಳಿಗಳಲ್ಲಿ ನೀವು ತೊಡಗಿಕೊಂಡವರು. ಅದು ಸಮಾಜವಾದಿ ಚಳುವಳಿಯಾಗಿರಬಹುದು, ರೈತ ಚಳುವಳಿಯಾಗಿರಬಹುದು, ದಲಿತ ಚಳುವಳಿಯಾಗಿರಬಹುದು ಅಥವಾ ಭಾಷಾ ಚಳುವಳಿಯಾಗಿರಬಹುದು. ಈ ಚಳುವಳಿಗಳಿಂದ ನೀವು ಆಕರ್ಷಿತರಾದದ್ದು ಹೇಗೆ? ಅದರ ಹಿನ್ನಲೆ ಸ್ವಲ್ಪ ವಿವರಿಸಿ.

ಮೊದಲನೆಯದಾಗಿ ನಾನು ಕರ್ನಾಟಕದ ಈ ಎಲ್ಲ ಚಳುವಳಿಗಳಲ್ಲೂ ಸಕ್ರಿಯವಾಗಿ ಭಾಗವಹಿಸಿದೆ ಅಂತ ಹೇಳಲಾರೆ. ಏಕೇಂದ್ರೆ ನಾನು ಒಬ್ಬ ಸರ್ಕಾರಿ ನೌಕರನಾಗಿದ್ದೆ. ಆದರೆ ಎಲ್ಲಾ ಚಳುವಳಿಗಳ ಜೊತೆ ನನ್ನ ಸಂಪರ್ಕವಿತ್ತು. ನನ್ನ ಒಳ್ಳೆಯ ಸ್ನೇಹಿತರು ಆ ಚಳುವಳಿಗಳಲ್ಲಿದ್ದರು. ಒಬ್ಬ ಸಮಾಜವಾದಿಯಾಗಿ ಅವರ ಒಡನಾಡಿಯಾಗಿ ಆ ಚಳುವಳಿಗಳ ಕುರಿತು ನಾನು ವಿಮರ್ಶೆ ಮಾಡ್ತಿದ್ದೆ. ಈ ಕಾರಣದಿಂದಾಗಿ ಚಳುವಳಿಗಳಲ್ಲಿ ತೊಡಗಿದ ನನ್ನ ಸ್ನೇಹಿತರು ನನ್ನ ಅಭಿಪ್ರಾಯಗಳನ್ನು ಕೇಳ್ತಾಯಿದ್ದರು. ಅವರ ಅಧ್ಯಯನ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ, ಅವರ ಸಭೆಗಳಲ್ಲಿ ವಿಶೇಷ ಆಹ್ವಾನಿತನಾಗಿ ನಾನು ಭಾಗವಹಿಸ್ತಾ ಇದ್ದೆ. ಮುಖ್ಯವಾಗಿ ನಾನು ರೈತ ಚಳುವಳಿ, ದಲಿತ ಚಳುವಳಿಗಳೊಂದಿಗೆ ನಿಕಟ ಸಂಪರ್ಕದಲ್ಲಿದ್ದೆ ಅಂತ ಹೇಳಬಹುದು. ಭಾಷಾ ಚಳುವಳಿಯ ಬಗ್ಗೆ ನಾನು ವ್ಯಾಪಕವಾಗಿ ಬರೆದಿರುವೆನಾದರೂ, ಅದರೊಂದಿಗೆ ನನ್ನ ಸಂಬಂಧ ಅಷ್ಟಾಗಿ ಇರಲಿಲ್ಲ. ಕಾರಣ, ನನ್ನ ಅಭಿಪ್ರಾಯದಲ್ಲಿ ಅದು ಯಾವುದೇ ತಾತ್ವಿಕತೆ ಇಲ್ಲದೆ, ಬಹು ಸ್ಥೂಲವಾದ ಭಾಷಾಭಿಮಾನವೊಂದನ್ನೇ–ಅದೂ ಅನ್ಯಭಾಷಾ ಅಸಹಿಷ್ಣುತೆಯನ್ನು ಪೋಷಿಸುತ್ತಾ–ಏಕೈಕ ಕಾರ್ಯಕ್ರಮವನ್ನಾಗಿ ಮಾಡಿಕೊಂಡು, ತುಂಬಾ ಒರಟಾದ ಚಳುವಳಿಯಾಗಿ ಬೆಳೆಯ ತೊಡಗಿದ್ದುದು.

ಸಮಾಜವಾದಿ ಚಳುವಳಿಯಲ್ಲಿ ನಾನು ತೊಡಗಿಕೊಂಡಿದ್ದು ಕೂಡಾ ಅದರ ಅಂತಿಮ

ಘಟ್ಟದಲ್ಲಿ, ೭೦ರ ದಶಕದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ. ಅದೊಂದು ಆಕಸ್ಮಿಕ ಎನ್ನಬಹುದು. ಡಾ॥ ರಾಮಮನೋಹರ ಲೋಹಿಯಾರವರ 'ರಾಜಕೀಯದ ಮಧ್ಯೆ ಬಿಡುವು' ಪುಸ್ತಕ ಓದಿ ಅದರಿಂದ ಪ್ರಭಾವಿತನಾಗಿ. ರಾಜಕೀಯ ಅಂದರೆ ಕೇವಲ ಚುನಾವಣಾ ರಾಜಕೀಯ ಅಂತ ತಿಳಿದಿದ್ದ ನನಗೆ ಆ ಪುಸ್ತಕ ಓದಿದ ನಂತರ ರಾಜಕೀಯದ ಆಳ, ವಿಸ್ತಾರ ಅರಿವಿಗೆ ಬಂತು. ನಂತರ ಕುತೂಹಲಿತನಾಗಿ ಅವರ ರಾಜಕೀಯ ದರ್ಶನದ ಇತರ ಪುಸ್ತಕಗಳನ್ನು ಓದತೊಡಗಿದೆ. ಹೀಗೆ ನಾನು ತಾತ್ವಿಕ ಕುತೂಹಲದಿಂದ ಸಮಾಜವಾದಿ ಚಳುವಳಿಯ ಸಂಪರ್ಕಕ್ಕೆ ಬಂದವನು.

ನಾನಾಗ ದೆಹಲಿಯ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದೆ. ತುರ್ತು ಪರಿಸ್ಥಿತಿಯ ದಿನಗಳವು. ಅಕಸ್ಮಾತ್ತಾಗಿ ತುರ್ತು ಪರಿಸ್ಥಿತಿ ವಿರೋಧಿ ಗುಂಪಿನ ಸಂಪರ್ಕಕ್ಕೆ ಬಂದ ನಾನು, ಅದರ ಚಟುವಟಿಕೆಗಳಲ್ಲಿ ಭಾಗವಹಿಸಿದೆ. ಅದರ ಭಾಗವಾಗಿಯೇ ಜೆಪಿಯವರ 'ಸೆರಮನೆ ದಿನಚರಿ'ಯನ್ನು ಕನ್ನಡಕ್ಕೆ ಅನುವಾದಿಸಿದೆ. ಇದರಿಂದಾಗಿ ಕರ್ನಾಟಕದ ಅನೇಕ ಸಮಾಜವಾದಿಗಳ ಸಂಪರ್ಕ ಏರ್ಪಟ್ಟಿತು. ಮುಖ್ಯವಾಗಿ ದೇವನೂರ ಮಹಾದೇವ, ರಾಜಶೇಖರ ಕೋಟಿ, ನೆಲಮನೆ ದೇವೇಗೌಡ, ಎಂ.ಡಿ.ನಂಜುಂಡಸ್ವಾಮಿ, ತೇಜಸ್ವಿ, ಲಂಕೇಶ್, ಕೆ.ರಾಮದಾಸ್, ರವಿವರ್ಮಕುಮಾರ್, ಪ. ಮಲ್ಲೇಶ್, ಗೋವಿಂದಯ್ಯ, ಕೆ.ಬಿ. ಸಿದ್ಧಯ್ಯ ಇತ್ಯಾದಿ. ಇವರೆಲ್ಲ ಅಂದಿನ ಸಮಾಜವಾದಿಗಳಲ್ಲೇ ಕಿಶನ್ ಪಟ್ನಾಯಕ್ ಧಾರೆ ಅಂತ ಒಂದು ಗುಂಪೇನಿತ್ತು ಅದರ ಜೊತೆಗೆ ಗುರುತಿಸಿಕೊಂಡವರು. ಅದು, ಅಧಿಕೃತ ಸಮಾಜವಾದಿ ಪಕ್ಷ ೧೯೭೭ರಲ್ಲಿ ಜನತಾ ಪಕ್ಷದಲ್ಲಿ ಲೀನವಾಗಿ ಹೋದ ನಂತರ ಸಮಾಜವಾದವನ್ನ ಪುರ್ನನಿರೂಪಿಸೋ ಮತ್ತು ಆ ಮೂಲಕ ಸಮಾಜವಾದಿ ಚಳುವಳಿಯನ್ನ ಪುರ್ನಸಂಘಟಿಸೋ ಪ್ರಯತ್ನ ಮಾಡ್ತಾ ಇತ್ತು. ಇದು ಸಹಜವಾಗಿಯೇ ನನ್ನನ್ನ ಆಕರ್ಷಿಸಿತು.

ಲೋಹಿಯಾರ ಆಪ್ತ ಶಿಷ್ಯರಲ್ಲೊಬ್ಬರಾದ ಕಿಷನ್, ಸಮಾಜವಾದಿಗಳಲ್ಲಿ ಅಪರೂಪವೆನಿಸ ತೊಡಗಿದ್ದ ಶಿಸ್ತು ಮತ್ತು ಸರಳ ಬದುಕಿನ ಪ್ರಾಮಾಣಿಕ ಮನುಷ್ಯ. ಇವರ ಸ್ಫೂರ್ತಿಯಲ್ಲಿ ನಾನು ೧೯೭೮ರಲ್ಲಿ ಹಾಸನದಲ್ಲಿ ತರುಣ ಲೋಹಿಯಾವಾದಿಗಳ ಸಮ್ಮೇಳನವೊಂದನ್ನು ಆಯೋಜಿಸಿದೆ. ಹಾಸನ ಆಗ ಹೊಸ ತಲೆಮಾರಿನ ಸಮಾಜವಾದಿಗಳ ಕೇಂದ್ರವಾಗಿತ್ತು. ಮಂಜುನಾಥ ದತ್ತ, ಕೆ.ಟಿ.ಶಿವಪ್ರಸಾದ್, ವೆಂಕಟೇಶಮೂರ್ತಿ ಮುಂತಾದವರಿದ್ದ ಈ ಗುಂಪೇ ಮುಂದೆ ಕರ್ನಾಟಕದ ರೈತ ಚಳುವಳಿಗೆ ಯುವಶಕ್ತಿಯ ಬೆನ್ನೆಲುಬನ್ನು ಒದಗಿಸಿದ್ದು. ನಂತರ ನಾನು ೧೯೮೦ರ ಸುಮಾರಿಗೆ ಬೆಂಗಳೂರಿನಲ್ಲಿ ಅಖಿಲ ಭಾರತ ಸಮಾಜವಾದಿ ಸಮ್ಮೇಳನವೊಂದನ್ನು ಆಯೋಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಸಮ್ಮೇಳನಕ್ಕೆ ದೇಶದ ಹಲವಾರು ರಾಜ್ಯಗಳಿಂದ ಸಮಾಜವಾದಿಗಳು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿದ್ದರು. ಸಮಾಜವಾದಿ ಚಳುವಳಿಗೆ ರಾಷ್ಟ್ರೀಯ ಮಟ್ಟದಲ್ಲಿ ಪುನಶ್ಚೇತನ ನೀಡುವ ಉದ್ದೇಶದಿಂದ ಈ ಸಮ್ಮೇಳನವನ್ನು ಮಾಡಿದ್ದು. ಇದರಲ್ಲಿ ಕರ್ನಾಟಕದ ಸಮಾಜವಾದಿ ಚಿಂತಕರು, ಹೋರಾಟಗಾರರೆನಿಸಿದ್ದ ಪ್ರೊ॥ ನಂಜುಂಡಸ್ವಾಮಿ, ಲಂಕೇಶ್, ಅನಂತಮೂರ್ತಿ,

ರಾಮದಾಸ್, ತೇಜಸ್ವಿ, ಕಡಿದಾಳು ಶಾಮಣ್ಣ ಮೊದಲಾದವರೆಲ್ಲ ಭಾಗವಹಿಸಿದ್ದರು. ಆಗ ನಡೆಯುತ್ತಿದ್ದ ದಲಿತ ಜಾಥಾವೊಂದರಲ್ಲಿ ಭಾಗವಹಿಸುತ್ತಾ ಬೆಂಗಳೂರಿಗೆ ಬಂದಿದ್ದ ದೇವನೂರ ಮಹಾದೇವ ಮತ್ತು ಬಿ. ಕೃಷ್ಣಪ್ಪ ಸೇರಿದಂತೆ ದಲಿತ ಚಳುವಳಿಯ ಅನೇಕ ಹಿರಿಯ ನಾಯಕರೂ ಈ ಸಮ್ಮೇಳನಕ್ಕೆ ಸಾಕ್ಷಿಯಾದರು. ಜೊತೆಗೆ ರಾಚಪ್ಪ ಬೆಟ್ಸೂರ್, ರಾಚಪ್ಪ ಹಡಪದ್, ವೀರಣ್ಣ ತಿಮ್ಮಾಜಿ ಮುಂತಾದ ಲೋಹಿಯಾ ಕಾಲದ ಸಮಾಜವಾದಿ ಕಾರ್ಯಕರ್ತರೂ ಅಲ್ಲಿದ್ದರು. ಸಮ್ಮೇಳನದ ವಿಶೇಷತೆ ಏನೆಂದರೆ, ಸಮಾಜವಾದದ ಬಗ್ಗೆ ಅಷ್ಟೇನೂ ಗೊತ್ತಿರದ ಅನೇಕ ಯುವಕರು ಸಮಾಜವಾದದ ಕಲ್ಪನೆಯಿಂದ ಆಕರ್ಷಿತರಾಗಿ ದೊಡ್ಡ ಕನಸಿನೊಂದಿಗೆ ಭಾಗವಹಿಸಿದ್ದುದು. ಅಲ್ಲಿಯೇ ನನಗೆ ಮೊದಲ ಬಾರಿಗೆ ಕರ್ನಾಟಕದಲ್ಲಿನ ಬೃಹತ್ ಸಮಾಜವಾದಿ ಸಮೂಹದ ಪರಿಚಯವಾದದ್ದು.

ನಂತರದ ದಿನಗಳಲ್ಲಿ ನಾನು ಸಮಾಜವಾದ ಕುರಿತು ಕನ್ನಡದಲ್ಲಿ ಬರೆಯುತ್ತಾ ಬಂದೆ. ಈಗಲೂ ಅದನ್ನು ಮುಂದುವರೆಸಿದ್ದೇನೆ. ೧೯೭೯ರಲ್ಲಿ ಸಮಾಜವಾದಿಗಳ ಮುಖವಾಣಿಯಾಗಿದ್ದು, ನಿಂತು ಹೋಗಿದ್ದ ‘ಮಾನವ’ ಮಾಸಿಕದ ಜವಾಬ್ದಾರಿಯನ್ನು ಸಂಪಾದಕನಾಗಿ ವಹಿಸಿಕೊಂಡು, ನೆಲಮನೆ ದೇವೇಗೌಡರ ನೆರವಿನಿಂದ ಒಂದು ವರ್ಷ ನಡೆಸಿದೆ. ಅಮೇಲೆ ಸ್ವಲ್ಪ ಸಮಯ ನಾನು ಆಕಾಶವಾಣಿ ಕೆಲಸ ಬಿಟ್ಟು ‘ಲಂಕೇಶ್ ಪತ್ರಿಕೆ’ಯಲ್ಲಿ ವಿಶೇಷ ವರದಿಗಾರನಾಗಿ ಕೆಲಸ ಮಾಡಿದೆ. ಅದು ಕರ್ನಾಟಕದಲ್ಲಿ ಸಮಾಜವಾದಿ ಚಳುವಳಿ ಮತ್ತೆ ಗರಿಗೆದರತೊಡಗಿದ್ದ ರೋಮಾಂಚನಕಾರಿ ಕಾಲ.

ಆ ಸಂದರ್ಭದಲ್ಲಿಯೇ ರೈತ ಚಳುವಳಿ ಹುಟ್ಟಿಕೊಂಡಿದ್ದು. ೧೯೮೦ರಲ್ಲಿ ಕಿಶನ್ ಪಟ್ನಾಯಕ್‌ರವರ ನೇತೃತ್ವದಲ್ಲಿ ರಾಷ್ಟ್ರೀಯ ಸಮಾಜವಾದಿ ಸಮ್ಮೇಳನ ಏನು ನಡೆಯಿತೋ ಅದು ಅಷ್ಟೇನೂ ಪರಿಣಾಮ ಬೀರಲಿಲ್ಲ. ಅದರಿಂದ ಹತಾಶರಾದ ಕರ್ನಾಟಕದ ಕೆಲವರು ಪ್ರೊ॥ ನಂಜುಂಡಸ್ವಾಮಿ ನೇತೃತ್ವದಲ್ಲಿ ರೈತ ಸಂಘವನ್ನು ಕಟ್ಟಲು ಹೊರಟರು. ನಾನು ನನ್ನ ಯುವ ಸ್ನೇಹಿತರಿಗೆ ರೈತ ಸಂಘ ಬೇಡ ಅಂತಲೇ ಹೇಳಿದೆ. ಸಮಾಜವಾದಿ ಚಳುವಳಿಯನ್ನು ಎಲ್ಲರ ಚಳುವಳಿಯಾಗಿ ಬೆಳೆಸಬೇಕು. ನೀವು ರೈತರಿಗೆ ಪ್ರತ್ಯೇಕ ಚಳುವಳಿ ಮಾಡಿ ಸಮಾಜವಾದದ ಸಮಗ್ರತೆಯನ್ನು ಹಾಳು ಮಾಡುವಿರಿ ಎಂದು ಎಚ್ಚರಿಸಿದೆ. ಆದರೆ ಅವರು ಸಮಾಜವಾದವನ್ನು ರೈತ ಚಳುವಳಿಯ ಮೂಲಕ ಕಟ್ಟುವ ಮಾತನ್ನಾಡಿ ನನ್ನ ಬಾಯಿ ಮುಚ್ಚಿಸಿದರು. ಮುಂದೇನಾಯಿತು ಎಂಬುದು ನಿಮಗೆ ತಿಳಿದೇ ಇದೆ. ಇದನ್ನು ತಡೆಯಲು ನಾವು ಕೆಲವು ಗೆಳೆಯರು ರೈತ ಚಳುವಳಿ ಮತ್ತು ದಲಿತ ಚಳುವಳಿಯನ್ನು ಒಗ್ಗೂಡಿಸುವ ಪ್ರಯತ್ನ ಮಾಡಿದಿವಿ. ಇದನ್ನು ವಿರೋಧಿಸಿದ ಎರಡೂ ಚಳುವಳಿಗಳ ಕೆಲವು ನಾಯಕರು ಈ ಎರಡೂ ಚಳುವಳಿಗಳನ್ನು ಅವನತಿಯತ್ತ ಕೊಂಡೊಯ್ಯುವಲ್ಲಿ ಯಶಸ್ವಿಯಾದರು.

೭೦-೮೦ರ ದಶಕದಲ್ಲಿ ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಸಮಾಜವಾದವನ್ನು ಮತ್ತೆ ಕಟ್ಟಬಹುದು ಎನ್ನೋ ಆಶಾವಾದ ಇತ್ತು, ರಾಜಕೀಯ ವಾತಾವರಣವೂ ಇತ್ತು. ೧೯೭೭ರಲ್ಲಿ ಜೆಪಿಯವರ ಆಗ್ರಹದ ಮೇರೆಗೆ ಭಾರತದ ಎಲ್ಲ

ಮುಖ್ಯ ಕಾಂಗ್ರೆಸ್ಸೇತರ ಪಕ್ಷಗಳು ವಿಲೀನವಾಗಿ ರಚಿಸಿದ್ದ ಜನತಾ ಸರ್ಕಾರ, ಸಮಾಜವಾದವನ್ನು ತನ್ನ ನೀತಿಯನ್ನಾಗಿ ಅಳವಡಿಸಿಕೊಂಡು ಜನಮನ್ನಣೆ ಗಳಿಸಿತ್ತು ಎಂಬುದನ್ನು ನಾವು ಮರೆಯಬಾರದು. ಆದರೆ ನಾಯಕರ ದೂರದೃಷ್ಟಿಯ ಕೊರತೆ ಮತ್ತು ಅನೇಕ ವ್ಯಕ್ತಿಗತ ದೌರ್ಬಲ್ಯಗಳ ಕಾರಣದಿಂದ ಅದು ಕುಸಿದು ಬಿತ್ತು. ನಂತರ ನಡೆದ ಸಮಾಜವಾದದ ಅನೇಕ ಬೆರಕೆ ಪ್ರಯೋಗಗಳೂ ವಿಫಲಗೊಂಡು, ೯೦ರ ದಶಕದ ಹೊತ್ತಿಗೆ ಸಮಾಜವಾದ ಕುರಿತಂತೆ ಜನರ ಆಶಾಭಾವನೆಯಲ್ಲ ಕರಗಿ, ಅದು ತನ್ನ ವಿಶ್ವಾಸಾರ್ಹತೆಯನ್ನೇ ಕಳೆದುಕೊಂಡು ಬಿಡ್ತು. ಇದರಿಂದಾಗಿಯೇ ಖಾಸಗೀಕರಣ ಮತ್ತು ಉದಾರೀಕರಣದ ಹುಯ್ಲು ಹೆಚ್ಚಿ, ಜಾಗತೀಕರಣದ ಸ್ವಾಗತಕ್ಕೆ ವೇದಿಕೆ ಸಿದ್ಧವಾಯ್ತು. ಇದೆಲ್ಲದರ ವಿವರವಾದ ವಿಶ್ಲೇಷಣೆಗೆ ಹೊರಟರೆ ತುಂಬಾ ವಿವರಕ್ಕೆ ಹೋಗಬೇಕಾಗುತ್ತೆ. ಈಗ ಬೇಡ ಅದು.

ಇತ್ತೀಚೆಗೆ ನಿಮ್ಮ 'ಮರಳಿ ಬರಲಿದೆ ಸಮಾಜವಾದ' ಎಂಬ ಕೃತಿ ಬಿಡುಗಡೆಯಾಗಿದೆ. ನಾವೆಲ್ಲ ಅದೊಂದು ಆಶಾವಾದದ ಕನಸು ಎಂಬರ್ಥದಲ್ಲಿ ಬರೆದಿದ್ದೀರಿ ಅಂದುಕೊಂಡಿದ್ದೆವು. ಆದರೆ ಇವತ್ತಿನ ಜಾಗತಿಕ ಅರ್ಥವ್ಯವಸ್ಥೆಯ ಕುಸಿತವನ್ನು ಗಮನಿಸಿದರೆ ನಿಮ್ಮ ಆಶಾವಾದದ ಕನಸು ಚಿಗುರೊಡೆಯುತ್ತಿರುವಂತೆ ಕಾಣುತ್ತಿದೆಯಲ್ಲ?

ಮರಳಿ ಬರಲಿದೆ ಸಮಾಜವಾದ ಅಂತ ನಾನು ಹೇಳಿರುವುದು ಈ ಹಿಂದೆ ಕಂಡಿರುವ ಸಮಾಜವಾದವೇ ಮತ್ತೆ ಬರುತ್ತದೆ ಎಂಬರ್ಥದಲ್ಲಲ್ಲ. ಇಂದಿನ ಮುಕ್ತ ಮಾರುಕಟ್ಟೆಯ ಅರ್ಥವ್ಯವಸ್ಥೆಯ ದುಷ್ಪರಿಣಾಮಗಳಿಂದ ಮತ್ತು ಈ ಹಿಂದಿನ ಸಮಾಜವಾದಿ ಚಳುವಳಿಯ ತಪ್ಪುಗಳಿಂದ ಪಾಠ ಕಲಿತು ಮನುಷ್ಯ ಹೊಸದೊಂದು ಸಮಾಜವಾದವನ್ನು ಕಟ್ಟಿಕೊಳ್ಳುತ್ತಾನೆ. ಆ ಮೂಲಕ ಸಮಾಜವಾದ ಹೊಸ ರೂಪದಲ್ಲಿ ಮತ್ತೆ ಬರಲಿದೆ ಎಂಬುದು ನನ್ನ ತೀವ್ರ ಅನ್ನಿಸಿಕೆ. ನಿಮಗೆ ಈಗಾಗಲೇ ಗೊತ್ತಿರುವಂತೆ ಭಾರತದಲ್ಲಿ ಈ ಜಾಗತೀಕರಣದ ರೂವಾರಿ ಎನಿಸಿದ ನಮ್ಮ ಪ್ರಧಾನಿ ಮನಮೋಹನ್‌ಸಿಂಗ್‌ರವರೇ ಕಳೆದ–೨೦೦೪ರ–ಚುನಾವಣೆಯ ಹೊತ್ತಿಗೆ 'ಆಮ್ ಆದ್ಮಿ' ಸರ್ಕಾರದ ಬಗ್ಗೆ ಅಂದರೆ ಶ್ರೀಸಾಮಾನ್ಯನ ಸರ್ಕಾರದ ಬಗ್ಗೆ ಮಾತನಾಡಬೇಕಾಯಿತು. ಮತ್ತು ಅವರು ಹಣಕಾಸಿನ ಮಂತ್ರಿಯಾಗಿ ತಮ್ಮ ಉದಾರೀಕರಣ-ಖಾಸಗೀಕರಣ ಕಾರ್ಯಕ್ರಮದ ಭಾಗವಾಗಿ ರದ್ದುಗೊಳಿಸಿದ್ದ ಅನೇಕ ಸಾಮಾಜಿಕ ಕಾರ್ಯಕ್ರಮಗಳನ್ನು ಮತ್ತು ಕೆಲವು ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತರುವ ಭರವಸೆ ನೀಡಬೇಕಾಯಿತು. ಯಾಕೇಂದ್ರೆ ಹಿಂದಿನ ಚುನಾವಣೆಗಳಲ್ಲಿ ಹೆಚ್ಚಿದ ಅಭಿವೃದ್ಧಿ ದರದ ಹೊರತಾಗಿಯೂ, ಈ ಉದಾರೀಕರಣ ಮತ್ತು ಖಾಸಗೀಕರಣಗಳ ನೀತಿಯನ್ನು ಜನ ಒಪ್ಪದೆ ಕಾಂಗ್ರೆಸ್ಸನ್ನು ಸೋಲಿಸಿದ್ದರು. ಹಾಗೇ ಇವರ ಆರ್ಥಿಕ ನೀತಿಯನ್ನು ಇನ್ನಷ್ಟು ತೀವ್ರ ಗತಿಯಲ್ಲಿ ಮುಂದುವರೆಸಿ 'ಪ್ರಕಾಶಮಾನ ಭಾರತ'ವನ್ನು ಸೃಷ್ಟಿಸಿದ ಭಾಜಪ ನೇತೃತ್ವದ ಸರ್ಕಾರವನ್ನೂ ಜನ ಸೋಲಿಸಿದರು. ಇದರ ಅರ್ಥ ಏನು? ಈ ಉದಾರೀಕರಣ ಮತ್ತು ಖಾಸಗೀಕರಣ ಗಳನ್ನಾಧರಿಸಿದ ಜಾಗತೀಕರಣ ದೇಶದ ಸಾಮಾನ್ಯ ಜನತೆಗೆ ಒಳಿತನ್ನು ಮಾಡಿಲ್ಲ. ಈಗ

ಪ್ರಧಾನಿಯಾಗಿ ಮನಮೋಹನ ಸಿಂಗ್ ಅವರು, ಜಗತ್ತಿನಾದ್ಯಂತ ಮುಕ್ತ ಮಾರುಕಟ್ಟೆ ಆರ್ಥಿಕತೆ ಕುಸಿದು ಜನ ಮತ್ತು ಸರ್ಕಾರಗಳೆರಡೂ ಕಂಗಾಲಾಗಿರುವಾಗ ರಾಷ್ಟ್ರಗಳ ಆರ್ಥಿಕತೆಯ ಮೇಲೆ ಸರ್ಕಾರಗಳ ನಿಯಂತ್ರಣದ ಅಗತ್ಯದ ಬಗ್ಗೆ ಮಾತನಾಡುತ್ತಿದ್ದಾರೆ!

ಇನ್ನು ಇವತ್ತಿನ ಜಾಗತಿಕ ಆರ್ಥಿಕ ಹಿಂಜರಿತ ನೋಡಿದರಂತೂ ಮುಕ್ತ ಮಾರುಕಟ್ಟೆಯ ಅರ್ಥ ವ್ಯವಸ್ಥೆ ತನ್ನ ಆಂತರಿಕ ವಿರೋಧಾಭಾಸಗಳಿಂದಲೇ ಕುಸಿದು ಬಿದ್ದಿದೆ ಎಂಬುದು ದಿನೇ ದಿನೇ ಸಾಬೀತಾಗುತ್ತಿದೆ. ಸಮಾಜವಾದಕ್ಕೇನು ಈ ಹಿಂದೆ ಆಘಾತವಾಗಿತ್ತೋ ಅದಕ್ಕಿಂತ ದೊಡ್ಡ ಆಘಾತ ಈಗ ಇದಕ್ಕೆ ಆಗಿದೆ. ಅಮೇರಿಕದ ಲೆಹಮನ್ ಬ್ರದರ್ಸ್ ಆಗಲೀ, ಅದರ ಜೊತೆಗೇ ದಿವಾಳಿ ಎದ್ದ ಇನ್ಯಾವುದೇ ಕಂಪನಿಗಳಾಗಲಿ ಏಕೆ ಕುಸಿದು ಬಿದ್ದವು ಎಂದು ನೋಡಿದಾಗ ಅವುಗಳ ಹಿಂದೆ ಇದ್ದುದು ಯಾವುದೇ ಯಾವುದೇ ಸಾಧುವಾದ ಅಥವಾ ಸಂಗತವಾದ ಆರ್ಥಿಕ ತತ್ವವಲ್ಲ; ಬದಲಿಗೆ ಇದ್ದುದು ಬರೀ ದಗಾಕೋರತನ ಎಂಬುದು ಎದ್ದು ಕಾಣುವಂತಾಗಿದೆ. ನಮ್ಮ ಭಾರತದ ಸತ್ಯಂ ಕಂಪ್ಯೂಟರ್ಸ್ ಹಗರಣ ಇದಕ್ಕೊಂದು ತಾಜಾ ಉದಾಹರಣೆ. ಒಂದು ಮಿತಿ ಮೀರಿ ಹಣ, ಸಂಪತ್ತು ಎಲ್ಲಿ ಕ್ರೋಢೀಕರಣವಾಗುತ್ತದೋ ಅಲ್ಲಿ ಭ್ರಷ್ಟತೆ ಮತ್ತು ದುಷ್ಟತನ ಸಹಜವೆಂಬಂತೆ ಹುಟ್ಟುತ್ತದೆ. ಸಮಾಜವಾದ ಇದೆಲ್ಲಕ್ಕೂ ಆಂತರಿಕವಾಗಿಯೇ ಮಿತಿಗಳನ್ನು ಸೃಷ್ಟಿಸುವಂತಹ ಮಧ್ಯಮ ಮಾರ್ಗದ ಆರ್ಥಿಕತೆಯ ಮತ್ತು ಬದುಕಿನ ಸಿದ್ಧಾಂತ. ಒಂದು ಸಭ್ಯ ಸರಳ ಸಾಮಾಜಿಕ ಬದುಕು ಅದರ ಮೂಲ ಸ್ಫೂರ್ತಿ.

ಸಮಾಜವಾದದ ಹೆಸರೇ ಸೂಚಿಸುವಂತೆ, ಅದು ಮನುಷ್ಯ ಮೂಲತಃ ಸಮಾಜ ಜೀವಿ ಎನ್ನುವ ನಂಬಿಕೆಯನ್ನಾಧರಿಸಿದ ಸಿದ್ಧಾಂತ. ಅದಕ್ಕೆ ವಿರುದ್ಧವಾಗಿ ಬಂಡವಾಳಶಾಹಿ ಎನ್ನುವುದು ಮನುಷ್ಯನ ವೈಯಕ್ತಿಕ ಸಾಹಸ, ಆಶೆ, ಆಕಾಂಕ್ಷೆಗಳನ್ನು ಆಧರಿಸಿದ ಸಿದ್ಧಾಂತ. ಮನುಷ್ಯ ಮೂಲತಃ ಸಾಮಾಜಿಕ ಜೀವಿ ಎಂಬುದನ್ನು ಮರೆಯುವ ಅದು ಸಾಮೂಹಿಕತೆಯ ಸ್ಪರ್ಶವಿಲ್ಲದೆ, ಮನುಷ್ಯನನ್ನು ಬೇಜವಬ್ದಾರನನ್ನಾಗಿ ಮಾಡಿ ಭ್ರಷ್ಟಗೊಳಿಸುತ್ತದೆ, ದಗಾಕೋರನನ್ನಾಗಿ ಮಾಡುತ್ತದೆ ಎಂಬುದು ಇತಿಹಾಸದಲ್ಲಿ ಮತ್ತೆ ಮತ್ತೆ ಸಾಬೀತಾಗಿದೆ. ಇದನ್ನು ಸರಿಪಡಿಸಬೇಕೆಂದರೆ ನಾವು ಸಮಾಜದ ಜೊತೆಗೇ ಮನುಷ್ಯನನ್ನೂ ಕಟ್ಟಬೇಕಾಗಿದೆ. ವ್ಯಕ್ತಿಯನ್ನು ದಮನ ಮಾಡಿ ಸಮಾಜವನ್ನು ಕಟ್ಟಲಾಗುವುದಿಲ್ಲ. ವ್ಯಕ್ತಿ ಮತ್ತು ಸಮಾಜದ ನಡುವಣ ಸಮತೋಲನವನ್ನು ಸೃಷ್ಟಿಸುವುದೇ ಸಮಾಜವಾದ. ಇಂಥ ಸಮಾಜವಾದದ ಅಗತ್ಯವನ್ನು ಮನುಷ್ಯ ಒಂದಲ್ಲಾ ಒಂದು ದಿವಸ ಮನಗಾಣಲೇಬೇಕು ಎಂಬುದು ನನ್ನ ನಂಬಿಕೆ. ಆ ಸೂಚನೆಗಳು ಈಗಾಗಲೇ ಜಗತ್ತಿನಾದ್ಯಂತ ಕಾಣತೊಡಗಿವೆ. 'ಇನ್ನೊಂದು ಜಗತ್ತು ಸಾಧ್ಯ'? ಚಳುವಳಿ ಇದರ ಪ್ರತೀಕವಾಗಿದೆ.

ಕಳೆದ ಎರಡು-ಮೂರು ದಶಕಗಳಲ್ಲಿ ಕರ್ನಾಟಕದಲ್ಲಿ ಕರ್ನಾಟಕದ ಸಮಾಜವಾದಕ್ಕೆ ಪ್ರೊ।। ನಂಜುಂಡಸ್ವಾಮಿ, ಲಂಕೇಶ್, ತೇಜಸ್ವಿ, ಅನಂತಮೂರ್ತಿ, ರಾಮದಾಸ್‌ರಂತಹ ಧೀಮಂತ ನಾಯಕರ ನಾಯಕತ್ವ ದೊರಕಿತ್ತು, ಅವರಿಂದಾಗಿ ಸಮಾಜವಾದ ಯಾವ

ಒಂದು ಉತ್ತುಂಗ ಸ್ಥಿತಿಯನ್ನು ತಲುಪಿತ್ತೋ ಅದರ ನಂತರದ ಕಾಲ ಘಟ್ಟದಲ್ಲಿ ಈಗ ಸಮಾಜವಾದ ಮತ್ತೆ ಬೆಳೆಯಬಲ್ಲ ಸಾಧ್ಯತೆ ಇದೆ ಅಂತೀರಾ?

ಕ್ಷಮಿಸಿ, ಕರ್ನಾಟಕದ ಸಾಂಸ್ಕೃತಿಕ ನಾಯಕರ ಹೆಸರನ್ನು ನೀವೇನು ಹೇಳಿದಿರಿ, ಇವರ ಕಾಲದಲ್ಲಿ ಸಮಾಜವಾದ ತನ್ನ ದೃಷ್ಟಿ ಕೇಂದ್ರವನ್ನು ಕಳೆದುಕೊಂಡು ಗೊಂದಲದ ಗೂಡಾಯಿತೆಂದೇ ಹೇಳಬೇಕು. ಇವರೆಲ್ಲರಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸುತ್ತಲೇ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇವರಲ್ಲಿ ತೇಜಸ್ವಿ ಸ್ವಲ್ಪ ಮಟ್ಟಿಗೆ ಅಪವಾದವಷ್ಟೆ. ಅವರು 'ಅಖಿಲ ಕರ್ನಾಟಕ ಲೇಖಕ ಹಾಗೂ ಬರಹಗಾರರ ಒಕ್ಕೂಟ'ದ ಹರಿಕಾರರಾಗಿ, ಕರ್ನಾಟಕದಲ್ಲಿ ಸಮಾಜವಾದಿ ತತ್ವ ಚಿಂತನೆಗೆ ಹೊಸ ಆಯಾಮ ನೀಡಿದರು. ಇವರೆಲ್ಲ ದೊಡ್ಡ ಲೇಖಕರು, ಚಿಂತಕರು. ನಂಜುಂಡಸ್ವಾಮಿ ಮತ್ತು ರಾಮದಾಸ್ ದೊಡ್ಡ ಹೋರಾಟಗಾರರು, ಅದರಲ್ಲಿ ಅನುಮಾನವೇ ಬೇಡ. ಇವರ ಚಿಂತನೆ-ಸಾಹಸಗಳ ಸ್ಫೂರ್ತಿಯಿಂದಲೇ ನಮ್ಮಂಥವರು ಸಮಾಜವಾದಿ ಚಳುವಳಿಯತ್ತ ಆಕರ್ಷಿತರಾದವರು. ಆದರೆ ಇವರೆಲ್ಲ ತಮ್ಮ ಎಲ್ಲ ದ್ವಂದ್ವಗಳನ್ನು, ದೌರ್ಬಲ್ಯಗಳನ್ನು ಇಟ್ಟುಕೊಂಡೇ ಸಮಾಜವಾದವನ್ನು ಕಟ್ಟಲಿಕ್ಕೆ ಹೊರಟವರು. ಆದರೆ ಈ ಪ್ರಕ್ರಿಯೆಯಲ್ಲಿ ಅವರ ದ್ವಂದ್ವಗಳು, ದೌರ್ಬಲ್ಯಗಳು ಹೆಚ್ಚಾದಂತೆ ಕಂಡವೇ ಹೊರತು, ಕಡಿಮೆಯಾದಂತೆ ಕಾಣುವುದಿಲ್ಲ! ಅನಂತಮೂರ್ತಿಯವರ 'ಪೂರ್ವಕ್ಕೆ ಮುಖ ಪಶ್ಚಿಮಕ್ಕೆ ಪಯಣ' ರೂಪಕವೇ ಇದಕ್ಕೊಂದು ಉದಾಹರಣೆ.

ಇದಕ್ಕೆ ಮುಖ್ಯ ಕಾರಣ ಇವರೆಲ್ಲ ಮೂಲತಃ ಲೇಖಕರು ಮತ್ತು ಬಂಡುಕೋರರು. ಹಾಗಾಗಿ ಅತಿ ವೈಯುಕ್ತಿಕ ಜೀವಿಗಳು. ಜೊತೆಗೆ ಇವರಲ್ಲಿ ಕೆಲವರು ಸಮಾಜವಾದ ಜಾರಿಗೆ ಬರಲಿಕ್ಕೆ ಸಾಧ್ಯವಿಲ್ಲವೇನೋ ಎಂಬ ಅನುಮಾನ ಇಟ್ಟುಕೊಂಡೇ ಸಮಾಜವಾದವನ್ನು ಕಟ್ಟಲಿಕ್ಕೆ ಹೊರಟವರು! ಏಕೆಂದರೆ, ಸಮಾಜವಾದ ಅನ್ನುವುದು ಅಷ್ಟು ದೊಡ್ಡ ಆದರ್ಶಗಳನ್ನು ಇಟ್ಟಕೊಂಡ ದೂರಗಾಮಿಯಾದ ಕನಸು. ಹೀಗಾಗಿ ಇವರ ಬಹುಪಾಲು ಪ್ರತಿಭೆಯೆಲ್ಲ ಪ್ರಭುತ್ವ ವಿರೋಧಿ ತಾತ್ವಿಕ ಅನ್ವೇಷಣೆ ಮತ್ತು ಚಟುವಟಿಕೆಗಳಲ್ಲೇ ಸೋರಿಹೋಗಿ, ಸಮಾಜವಾದದ ರಚನಾತ್ಮಕ ಮುಖ ಸ್ಪಷ್ಟವಾಗಿ ಮೂಡದೇ ಹೋಯಿತು. ಇದೇ ಮಾತು ಸಮಾಜವಾದಿ ಚಳುವಳಿಗಳೆನಿಸಿದ ರೈತ ಮತ್ತು ದಲಿತ ಚಳುವಳಿಗಳ ಕಾರ್ಯಕ್ರಮಗಳಿಗೂ ಅನ್ವಯಿಸುತ್ತದೆ.

ಗೋಪಾಲಗೌಡರು?

ಗೋಪಾಲಗೌಡರು ಇವರಿಗಿಂತ ಹಿಂದಿನ ತಲೆಮಾರಿನವರು ಮತ್ತು ಕೆಟ್ಟದ್ದನ್ನು ಕೆಡುವುದರ ಜೊತೆಗೇ ಒಳ್ಳೆಯದನ್ನು ಕಟ್ಟಲೂ ಶ್ರಮಿಸಿದವರು. ಜೊತೆಗೆ ಅವರು ಸಾರ್ವಜನಿಕ ಜೀವನದಲ್ಲಿ ಎಷ್ಟು ಮುಳುಗಿ ಹೋಗಿರುತ್ತಿದ್ದರೆಂದರೆ, ಅವರ ಬೌದ್ಧಿಕತೆ ವಾಸ್ತವದಲ್ಲಿ ಪರೀಕ್ಷೆಗೆ ಒಳಪಟ್ಟೇ ಸಾಧುತ್ವವನ್ನು ಗಳಿಸಿಕೊಳ್ಳಬೇಕಿತ್ತು! ಲೋಹಿಯಾರವರಾಗಲಿ, ಗೋಪಾಲಗೌಡರಾಗಲಿ ಮತ್ತು ಅವರ ಗೆಳೆಯರಾಗಲಿ ನಿಜವಾಗಿ ದೊಡ್ಡ ತ್ಯಾಗಗಳನ್ನು

ಮಾಡಿ ದೊಡ್ಡ ಮನಸ್ಸಿನೊಂದಿಗೆ, ದೊಡ್ಡ ಕನಸುಗಳೊಂದಿಗೆ ಸಮಾಜವಾದಿ ಚಳುವಳಿಯನ್ನು ಕಟ್ಟಿದರು. ಕರ್ನಾಟಕದಲ್ಲಿ ೬೦-೭೦ರ ದಶಕದಲ್ಲಿ ಇವರ ಪಕ್ಷದ ಶಾಸಕರ ಸಂಖ್ಯೆ ಎಷ್ಟೇ ಕಡಿಮೆಯಾಗಿದ್ದರೂ ಕೂಡಾ ಸಾಮಾನ್ಯ ಜನರ ನಿರೀಕ್ಷೆಗಳನ್ನು, ಆಶೋತ್ತರಗಳನ್ನು ಪ್ರತಿನಿಧಿಸಲು ಇದ್ದವರು ಅವರೇನೆ. ಇವತ್ತು ಸಮಾಜವಾದವೆಂದರೆ ವ್ಯಾವಹಾರಿಕವಾಗಿ ಒಂದು ತಮಾಷೆಯ ವಸ್ತು ಎನಿಸಿಕೊಂಡಿದ್ದರೂ ಕೂಡಾ, ಒಂದು ಆದರ್ಶವಾಗಿ ಅದಕ್ಕೆ ಅಷ್ಟೇ ಗೌರವ ಕೂಡಾ ಇದೆ. ಇತ್ತೀಚೆಗೆ ಬಿಜೆಪಿಯ ಮುಖ್ಯಮಂತ್ರಿ ಚಂದ್ರು ಅವರನ್ನ ಒಂದು ಸಮಾರಂಭದಲ್ಲಿ ಭೇಟಿ ಮಾಡಿದ್ದೆ. ಅಲ್ಲಿ ಯಾರೋ ಒಬ್ಬರು ಅವರು ಕೋಮುವಾದಿ ಪಕ್ಷದಲ್ಲಿದ್ದಾರೆಂದು ಆಕ್ಷೇಪಿಸಿದಾಗ ಅವರು, 'ಏ ನಾನೂ ಸಮಾಜವಾದಿನೇ ಕಣಪ್ಪ. ಈ ಪಕ್ಷದಲ್ಲಿ ಇರಬಹುದು ಅಷ್ಟೆ!' ಅಂತ ತಮ್ಮ ರಾಜಕೀಯ ಗೌರವವನ್ನು ಕಾಪಾಡಿಕೊಳ್ಳಲು ಯತ್ನಿಸಿದರು! ಅಂಥವರು ಬಹಳಷ್ಟು ಜನ ಬೇರೆ ಬೇರೆ ಪಕ್ಷಗಳಲ್ಲಿದ್ದಾರೆ. ಸಮಾಜವಾದಿ ಚಳುವಳಿ ಒಂದು ರಾಜಕೀಯ ಪಕ್ಷವಾಗಿ ಉಳಿಯುವಂಥಹ ಶಿಸ್ತನ್ನು, ಧೃಡತೆಯನ್ನು ಉಳಿಸಿಕೊಂಡು ಬರಲಿಲ್ಲ.

ಗೋಪಾಲಗೌಡರೂ ತುಂಬಾ ಅಶಿಸ್ತಿನ ಮನುಷ್ಯ ಅಂತ ಹೇಳ್ತಾರಲ್ಲ?

ಗೋಪಾಲಗೌಡರು ಅಷ್ಟೇ ಅಲ್ಲ, ಲೋಹಿಯರವರೂ ಅಶಿಸ್ತಿನ ಮನುಷ್ಯರೇ ಅಂತ ಹೇಳ್ತಾರೆ. ಲೋಹಿಯರವರನ್ನು ಹಲವು ಬಾರಿ ಸಮಾಜವಾದಿ ಚಳುವಳಿಯಿಂದ ಹೊರ ಹಾಕಲಾಯಿತು, ಅಶಿಸ್ತಿನ ಹೆಸರಿನಲ್ಲಿ. ಸಮಾಜವಾದಿಗಳಲ್ಲಿ ಎರಡು ರೀತಿಯ ಅಶಿಸ್ತನ್ನು ನೋಡ್ತೇವೆ. ಒಂದು ರಾಜಕೀಯ ಅಶಿಸ್ತು. ಪಕ್ಷ ತೆಗೆದುಕೊಂಡ ತೀರ್ಮಾನವನ್ನು ಪ್ರಶ್ನಿಸುವುದು, ಇತರ ನಾಯಕರ ಹೇಳಿಕೆಗಳ ಬಗ್ಗೆ ಬಹಿರಂಗವಾಗಿ ಭಿನ್ನಾಭಿಪ್ರಾಯ ವ್ಯಕ್ತ ಪಡಿಸುವುದು ಒಂದು ರೀತಿಯದಾದರೆ, ಇನ್ನೊಂದು ರೀತಿಯದು ವೈಯಕ್ತಿಕ ಬದುಕಿನ ಅಶಿಸ್ತು. ಹಣಕಾಸಿನ ವಿಷಯದಲ್ಲಿ ಬೇಜವಾಬ್ದಾರಿಯಿಂದ ವರ್ತಿಸುವುದು, ಸಮಯ ಪಾಲನೆ ಮಾಡದೇ ಇರುವುದು, ಇನ್ನೊಬ್ಬರ ಬಗ್ಗೆ ಉಡಾಫೆಯಿಂದ ಮಾತನಾಡುವುದು ಇದೆಲ್ಲಾ ಸಮಾಜವಾದಿ ಚಳುವಳಿಯಲ್ಲಿ ಜಾಸ್ತಿ. ಯಾಕೆಂದರೆ ಸಮಾಜವಾದ, ಸಾಮೂಹಿಕ ಬದುಕಿನ ಆದರ್ಶಗಳೊಂದಿಗೆ ವ್ಯಕ್ತಿ ಸ್ವಾತಂತ್ರ್ಯವನ್ನೂ ಎತ್ತಿ ಹಿಡಿಯುವ ಸಿದ್ಧಾಂತವಾಗಿತ್ತು. ಕೆಲವೊಮ್ಮೆ ಇದು ಅತೀಗೆ ಹೋಗುತ್ತಿತ್ತು.

ಗೋಪಾಲಗೌಡರ ವಿಷಯದಲ್ಲಿ ಹೇಳುವುದಾದರೆ ಅವರು ಎಷ್ಟು ಕಷ್ಟ ಪಟ್ಟಿದ್ದಾರೆ ಜೀವನದಲ್ಲಿ ಎಂದರೆ, ಅವರು ಎಷ್ಟೋ ಸಲ ಊಟಕ್ಕಿಲ್ಲದೆ ದಿನ ಕಳೆದಿದ್ದಾರೆ. ಎಷ್ಟೋ ಸಲ ಪಾರ್ಟಿ ಮೀಟಿಂಗ್‌ಗೆ ಹೋಗಬೇಕಿದ್ದರೆ ರೈಲ್ವೆ ಸ್ಟೇಷನ್‌ನಲ್ಲಿ ಕುಳಿತೇ ಇರುತ್ತಿದ್ದರು, ಯಾರಾದರೂ ಬಂದು ಟಿಕೆಟ್ ಕೊಡಿಸ್ತಾರೇನೋ ಅಂತ. ಇವತ್ತು ಯಾರೋ ಎರಡು ರೂಪಾಯಿ ಕೊಟ್ಟಿದ್ದರಿಂದ ಎರಡು ದಿನದ ಖರ್ಚಿಗೆ ತೊಂದರೆಯಿಲ್ಲ ಅಂತ ಬರೆಯುತ್ತಾರೆ ತಮ್ಮ ದಿನಚರಿಯಲ್ಲಿ... ಅಂತಹ ಬಡತನದಲ್ಲಿ ಇದ್ದುಕೊಂಡು ಒಂದು ಕಾಲಘಟ್ಟದ

ಯುವಕರ ಕನಸುಗಳನ್ನು ಬಡಿದೆಬ್ಬಿಸುವಂತಹ ಚಳುವಳಿಯನ್ನು ಕಟ್ಟಿದರು ಎನ್ನುವುದು ತುಂಬಾ ದೊಡ್ಡ ವಿಷಯ. ಈ ಹಿನ್ನೆಲೆಯಲ್ಲಿ ಅವರ ಅಶಿಸ್ತಿನ ಬಗ್ಗೆ ಮಾತಾಡುವುದು ಜುಜುಬಿತನವಾದೀತು.

ವ್ಯಕ್ತಿಯನ್ನು ದಮನ ಮಾಡಿ ಸಮಾಜವಾದ ಕಟ್ಟಕ್ಕೆ ಆಗೋಲ್ಲ ಅಂದರಲ್ಲ, ವ್ಯಕ್ತಿಗಿಂತ ಸಮಾಜ ಮುಖ್ಯ ಅಲ್ವಾ? ಒಳ್ಳೆಯದನ್ನು ಕಟ್ಟಲು ಹೊರಟಾಗ ಅದಕ್ಕೆ ಎದುರಾಗುವವರನ್ನು ದಮನ ಮಾಡುವುದು ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗುವುದಿಲ್ಲವೆ?

ವ್ಯಕ್ತಿಯ ದಮನ ಅಥವಾ ವ್ಯಕ್ತಿ ಮತ್ತು ಸಮಾಜಗಳನ್ನು ಬೇರ್ಪಡಿಸಿ ನೋಡುವ ಕಲ್ಪನೆಗಳೇ ಸಮಾಜ ವಿರೋಧಿಯಾದವುಗಳು. ನೋಡಿ, ಸಮಾಜ ಅನ್ನುವುದು ನಾವು ಕಟ್ಟಿಕೊಂಡಿರುವುದು. ಮತ್ತೆ ಮತ್ತೆ ಕಟ್ಟಿಕೊಳ್ಳಬೇಕಾದುದು ಮತ್ತು ಕಟ್ಟಿಕೊಳ್ಳಬಹುದಾದುದು. ಹಾಗಾಗಿ ಮೂಲತಃ ಅದೊಂದು ಕಲ್ಪನೆ. ಆದರೆ ವ್ಯಕ್ತಿ ಕಲ್ಪನೆ ಅಲ್ಲ. ಅವನು ಹುಟ್ಟಿನಿಂದಲೇ ಒಂದು ಸ್ವಾಯತ್ತ ಜೈವಿಕ ಘಟಕ. ಅದೇ ಸಮಾಜದ ಮೂಲ ಶಕ್ತಿ ಕೂಡ. ಅದನ್ನು ದಮನ ಮಾಡಿ ನೀವು ಏನನ್ನೂ ಕಟ್ಟಲಿಕ್ಕೆ ಸಾಧ್ಯವಿಲ್ಲ. ಸಮಾಜವಾದದ ಮುಖ್ಯ ಆಕರ್ಷಣೆ ಏನೆಂದರೆ ಮನುಷ್ಯನ ಖಾಸಗಿತನದ ಮೇಲೆ, ಅವನ ಮೂಲ ಅಸ್ಮಿತೆಯ ಮೇಲೆ ಆಕ್ರಮಣ ಮಾಡದೆ ಸಮಾಜದ ಪುರ್ನನಿರ್ಮಾಣ ಸಾಧ್ಯ ಎಂಬ ಅದರ ನಂಬಿಕೆ. ಅದರಿಂದಾಗಿ ಅದು ರಾಜಕೀಯ ಪಕ್ಷವಾಗಿ ಬೆಳೆಯುವಲ್ಲಿ ಬಹಳಷ್ಟು ಕಡೆ ಎಡರು ತೊಡರುಗಳನ್ನು, ಸಂದಿಗ್ಧಗಳನ್ನು ಎದುರಿಸಬೇಕಾಯಿತು ನಿಜ. ಆದರೆ ವ್ಯಕ್ತಿಯನ್ನು ದಮನ ಮಾಡಿದ ಸಮಾಜವಾದಿ ರಾಷ್ಟ್ರಗಳು ಹೇಗೆ ಉರುಳಿ ಬಿದ್ದಿವೆ, ಹೇಗೆ ನರಳ್ತಾ ಇವೆ ಎಂಬುದನ್ನು ನಾವು ಇವತ್ತು ನೋಡ್ತಾ ಇದ್ದೇವೆ. ಅದು ರಷ್ಯಾ ಇರಬಹುದು, ಅದರ ಸುತ್ತಲಿದ್ದ ರಾಷ್ಟ್ರಗಳಿರಬಹುದು. ಅಥವಾ ಚೀನ ಇರಬಹುದು.

ಆದ್ದರಿಂದ ವ್ಯಕ್ತಿ ಮತ್ತು ಸಮಾಜಗಳಿಗೆ ಸಂಬಂಧಿಸಿದಂತೆ, ಅಂದಿನ ಬಂಡವಾಳಶಾಹಿ ಮತ್ತು ಕಮ್ಯುನಿಸ್ಟ್ ಸಿದ್ಧಾಂತಗಳೆಂಬ ಎರಡು ಅತಿಗಳ ನಡುವೆ ಮನುಷ್ಯನ ಖಾಸಗಿ ಪ್ರಪಂಚವನ್ನು ರಕ್ಷಿಸಿಕೊಂಡೇ ಸಮಾಜವಾದವನ್ನು ಕಟ್ಟಲು ಸಾಧ್ಯವೇ ಅಂತ ಲೋಹಿಯಾರವರು ಕೆಲವು ತಾತ್ವಿಕ ಪ್ರಮೇಯಗಳನ್ನು ಮಂಡಿಸಿದರು. ರಾಜಕೀಯ ಅಧಿಕಾರದ ಮೂಲಕ ಅದಕ್ಕೊಂದು ವಾಸ್ತವಿಕ ನೆಲಗಟ್ಟನ್ನು ಒದಗಿಸಲು ಅವರಿಗೆ ಸಾಧ್ಯವಾಗಲಿಲ್ಲ. ಯಾಕೆಂದರೆ ಅವರು ನೆಹರುರಂತಹ ಬಹಳ ಪ್ರಬಲವಾದ ರಾಜಕೀಯ ಎದುರಾಳಿಗೆ ಪ್ರತಿಯಾಗಿ ರಾಜಕಾರಣ ಮಾಡಬೇಕಿತ್ತು. ನೆಹರೂ ಅವರ ಕಾಂಗ್ರೆಸ್ ಪಕ್ಷಕ್ಕೆ ಸ್ವಾತಂತ್ರ್ಯ ಹೋರಾಟದ ವಾರಸುದಾರಿಕೆ ಬೇರೆ ಇತ್ತು. ಹೀಗಾಗಿ ಅವರ ಜೊತೆ ಭಿನ್ನಾಭಿಪ್ರಾಯ ಇಟ್ಟುಕೊಳ್ಳೋದೇ ದೊಡ್ಡ ವಿಷಯ ಆಗ. ಆದರೂ ಲೋಹಿಯಾರವರು ವ್ಯಕ್ತಿ ಮತ್ತು ಸಮಾಜದ ನಡುವಣ ಸಮತೋಲನವನ್ನು ಕಾಯ್ದು ಕೊಳ್ಳಲು ಮೂರು ಮುಖ್ಯ ಸಂಗತಿಗಳನ್ನು ಪ್ರತಿಪಾದಿಸಿದ್ದರು.

ಮೊದಲನೆಯದಾಗಿ ಅಧಿಕಾರವನ್ನು ಕೇಂದ್ರೀಕರಿಸಬಾರದು. ಅದು ಸದಾ ವಿಕೇಂದ್ರಿಕೃತ

ವಾಗಿರಬೇಕು. ಮತ್ತು ಈ ವಿಕೇಂದ್ರೀಕರಣ ಕೆಳಮಟ್ಟದಿಂದ ಶುರುವಾಗಬೇಕು. ಇದು ಅವರು ಪ್ರತಿಪಾದಿಸಿದ ಚತುಸ್ತಂಭ ರಾಷ್ಟ್ರದ ಕಲ್ಪನೆಯಲ್ಲಿ ಅಡಗಿದೆ. ಎರಡನೆಯದು ಸಂಪತ್ತಿನ ಉತ್ಪಾದನೆಯ ವಿಕೇಂದ್ರೀಕರಣ. ಸಂಪತ್ತು ಅಥವಾ ಮನುಷ್ಯನ ಲೌಕಿಕ ಅಗತ್ಯಗಳು ಅವನ ನೆರೆಹೊರೆಯಲ್ಲೇ ಉತ್ಪಾದಿತವಾಗುವಂತಿರಬೇಕು. ಅದಕ್ಕಾಗಿ ಸಣ್ಣ ಪ್ರಮಾಣದ ತಂತ್ರಜ್ಞಾನದ ಆವಿಷ್ಕಾರವಾಗಬೇಕು. ಇದರಿಂದ ಸಂಪತ್ತು ಅಥವಾ ಬಂಡವಾಳ ಒಂದೆಡೆ ಕೇಂದ್ರಿಕೃತಗೊಳ್ಳದೇ ಸಣ್ಣ ಸಣ್ಣ ಘಟಕಗಳಲ್ಲಿ ಹಂಚಿಹೋಗಿ, ವ್ಯಕ್ತಿ ಸ್ವಾತಂತ್ರ್ಯ ಹರಣ ಕೂಡ ನಿಯಂತ್ರಿಸಲ್ಪಡುತ್ತದೆ. ಮೂರನೆಯದು, ಅಭಿವೃದ್ಧಿ ಎಂದರೆ ಪಶ್ಚಿಮದ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಕಲ್ಪನೆಗೆ ಪ್ರತಿಯಾಗಿ, ನಮ್ಮ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗನುಣವಾದ ಸರಳ ಸಭ್ಯ ಜೀವನ ಮಟ್ಟದ ಕಲ್ಪನೆ.

ಇದು ಗಾಂಧೀಜಿಯವರಿಂದ ಅವರು ಪಡೆದ ಪ್ರೇರಣೆಯ ಫಲ. ಗ್ರಾಮ ಸ್ವರಾಜ್ಯ ಕಲ್ಪನೆಯ ವಿಸ್ತರಣೆ. ಆದರೆ ಸ್ವಾತಂತ್ರ್ಯವನ್ನು ಪಡೆಯುವಲ್ಲಿ ಕಾಂಗ್ರೆಸ್ ತೋರಿದ ಅವಸರದಲ್ಲಿ, ರಾಷ್ಟ್ರ ವಿಭಜನೆಯ ಗೊಂದಲದಲ್ಲಿ ಈ ಚಿಂತನೆಯೇ ನಮ್ಮ ಸಂವಿಧಾನ ಕರ್ತೃಗಳ ಮನದಿಂದ ಮರೆಯಾಯಿತು. ಅಧಿಕಾರ ಮತ್ತು ಸಂಪತ್ತಿನ ವಿಕೇಂದ್ರೀಕರಣದ ವಿಷಯ, ಸಂವಿಧಾನದ ಮುಖ್ಯ ಆಶಯವಾಗಿ ನಿರೂಪಿತವಾಗದೇ ಹೋಯಿತು. ತಮ್ಮ ಕಾಂಗ್ರೆಸ್ ವಿರೋಧಿ ಧೋರಣೆಯಿಂದಾಗಿ ಸಮಾಜವಾದಿಗಳು ಸಂವಿಧಾನ ರಚನಾ ಸಭೆಯನ್ನೂ ಬಹಿಷ್ಕರಿಸಿದ್ದೂ ಇದಕ್ಕೆ ಪೂರಕವಾಯಿತು. ಇದು ಅವರು ಐತಿಹಾಸಿಕವಾಗಿ ಮಾಡಿದ ದೊಡ್ಡ ತಪ್ಪು. ಇನ್ನೊಂದು ಮುಖ್ಯ ವಿಷಯವೇನೆಂದರೆ–ನಾನು ಇದನ್ನು ಹೇಳಲೇ ಬೇಕು–ಅಂಬೇಡ್ಕರ್‌ರವರು ಸಂವಿಧಾನ ರಚನಾ ಸಮಿತಿಯಲ್ಲಿ ಬಹು ದೊಡ್ಡ ಪಾತ್ರ ವಹಿಸಿದ ಕಾರಣದಿಂದಾಗಿಯೋ ಏನೋ, ಸಂವಿಧಾನದಲ್ಲಿ ಕೇಂದ್ರೀಕೃತ ವ್ಯವಸ್ಥೆಗೇ ಹೆಚ್ಚು ಒತ್ತು ಬಿದ್ದಿತು. ಯಾಕೆಂದರೆ ವಿಕೇಂದ್ರೀಕರಣದಿಂದ ಹಳ್ಳಿಗಳಲ್ಲಿ ದಲಿತರಿಗೆ ಮತ್ತು ಹಿಂದುಳಿದವರಿಗೆ ನ್ಯಾಯ ಸಿಗಲಿಕ್ಕಿಲ್ಲ ಅನ್ನೋ ಭಯ ಅವರಿಗಿತ್ತು. ನಂತರ ಇತ್ತೀಚೆಗೆ ರಾಜೀವ್ ಗಾಂಧಿಯವರ ಕಾಲದಲ್ಲಿ ಸಂವಿಧಾನ ತಿದ್ದುಪಡಿ ಮಾಡಿ ಪಂಚಾಯ್ತತ್ ರಾಜ್‌ಗೆ ಸಂವಿಧಾನಿಕ ಮಾನ್ಯತೆ ನೀಡಲಾಯಿತಾದರೂ, ಅದು ಲೋಹಿಯಾ ಅಥವಾ ಗಾಂಧಿ ಕಲ್ಪನೆಯ ಅಧಿಕಾರ ಮತ್ತು ಸಂಪತ್ತುಗಳ ವಿಕೇಂದ್ರೀಕರಣ ವ್ಯವಸ್ಥೆಯಾಗಲು ಕಾಲ ಮಿಂಚಿ ಹೋಗಿತ್ತು. ಹೀಗಾಗಿ ನಮ್ಮ ರಾಷ್ಟ್ರ ತಾಂತ್ರಿಕವಾಗಿ ಒಕ್ಕೂಟವೆನಿಸಿದರೂ ಅದು ತಿರುಳಲ್ಲಿ, ಕಾರ್ಯಶೈಲಿಯಲ್ಲಿ ಏಕಾತ್ಮಕ ರಾಷ್ಟ್ರವೇ ಆಗಿದೆ.

ಅಂಬೇಡ್ಕರ್ ಅವರ ಅಂದಿನ ತೀರ್ಮಾನ ಇವತ್ತಿನ ಸಂದರ್ಭದಲ್ಲಿ ಗೊಂದಲಗಳನ್ನು ಸೃಷ್ಟಿಸಿದೇ ಅಂತೀರಾ?

ಅದು ಅಂಬೇಡ್ಕರ್ ಅವರ ವೈಯುಕ್ತಿಕ ತೀರ್ಮಾನ ಎಂದು ಹೇಳಲಾಗುವುದಿಲ್ಲ. ಅದೊಂದು ಸಾಮೂಹಿಕ ನಿರ್ಧಾರ. ಆದರೆ ಇದರ ಹಿಂದೆ ಪ್ರಧಾನವಾಗಿ ಅಂಬೇಡ್ಕರ್

ಪ್ರಭಾವ ಇದ್ದಿರಬಹುದೆಂದಷ್ಟೇ ನಾನು ಸೂಚಿಸುತ್ತಿರುವುದು. ಇದರ ಪರಿಣಾಮವಾಗಿ ಇವೊತ್ತು ಏಕಾತ್ಮಕ ರಾಷ್ಟ್ರ ಅನ್ನೋದು ಹುಸಿ ರಾಷ್ಟ್ರೀಯತೆಯೊಂದನ್ನು ಸೃಷ್ಟಿಸಿದೆ. ರಾಷ್ಟ್ರೀಯತೆಯನ್ನು ಕಲ್ಪಿಸಿಕೊಳ್ಳುವಲ್ಲಿಯೇ ನಮಗೆ ಗೊಂದಲಗಳನ್ನು ಸೃಷ್ಟಿಸಿದೆ. ಹಾಗೆ ನೋಡಿದರೆ, ನಿಜವಾದ ರಾಷ್ಟ್ರೀಯತೆ ಅಂದರೆ ನಮ್ಮ ಭಾಷಾ ರಾಷ್ಟ್ರೀಯತೆ. ಕನ್ನಡ ರಾಷ್ಟ್ರೀಯತೆ, ತಮಿಳು ರಾಷ್ಟ್ರೀಯತೆ, ಬಂಗಾಳಿ ರಾಷ್ಟ್ರೀಯತೆ ಇತ್ಯಾದಿ. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ಸ್ಫೋಟಗೊಂಡಿದ್ದೇ ೧೯೦೫ರಲ್ಲಿ ಬ್ರಿಟಿಷರು ಬಂಗಾಳವನ್ನು ವಿಭಜನೆ ಮಾಡಿದಾಗ ಎಂಬುದನ್ನು ನಾವು ಗಮನಿಸಬೇಕು. ಅಂದರೆ ಭಾಷಾ ರಾಷ್ಟ್ರೀಯತೆಗೆ ಆಘಾತವಾದಾಗಲೇ ರಾಷ್ಟ್ರೀಯ ಹೋರಾಟ ಆರಂಭವಾದದ್ದು. ಅದಕ್ಕಿಂತ ಮೊದಲು ರಾಷ್ಟ್ರೀಯ ಚಳುವಳಿ ಅನ್ನುವುದು ಕೆಲವು ವರ್ಗಗಳ ಹಿತಕ್ಕಾಗಿ ಕೆಲವು ವಿನಾಯ್ತಿ ಅಥವಾ ಸವಲತ್ತುಗಳನ್ನು ಕೇಳುತ್ತಾ ಮನವಿ ಸಲ್ಲಿಸುವುದು, ಅಪೀಲು ಕೊಡುವುದು ಅಷ್ಟಕ್ಕೇ ಸೀಮಿತವಾಗಿತ್ತು. ಹೀಗಾಗಿ, ಭಾಷಾ ರಾಷ್ಟ್ರೀಯತೆಗಳನ್ನು ಗುರುತಿಸಿ ಅವುಗಳ ಆಶೋತ್ತರಗಳ ಆಧಾರದ ಮೇಲೆ ಒಂದು ಒಕ್ಕೂಟ ರಾಷ್ಟ್ರವನ್ನು ಕಟ್ಟುವಂತಹ ಮತ್ತು ಅಧಿಕಾರ ಮತ್ತು ಸಂಪತ್ತಿನ ವಿಕೇಂದ್ರೀಕರಣವನ್ನು ನಿರ್ದೇಶಿಸುವ ಸಂವಿಧಾನವನ್ನು ನಾವು ರಚಿಸಿಕೊಂಡಿದ್ದರೆ, ಇವತ್ತು ಜಾಗತೀಕರಣದ ಜೊತೆ ಜೊತೆಗೇ ಕೋಮುವಾದಿ ರಾಷ್ಟ್ರೀಯತೆ ತಲೆ ಎತ್ತುತ್ತಿರಲಿಲ್ಲ. ಇಂದು ಕೋಮುವಾದಿಗಳು ಈ ಏಕಾತ್ಮಕ ರಾಷ್ಟ್ರ ಪರಿಕಲ್ಪನೆಯನ್ನು ತಮ್ಮ ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಿನಲ್ಲಿ ಹೈಜಾಕ್ ಮಾಡಿದ್ದಾರೆ.

ನೀವು ಹೇಳುವುದು ಕೇಂದ್ರೀಕೃತ ವ್ಯವಸ್ಥೆಗಿಂತ ಗಣರಾಜ್ಯ ವ್ಯವಸ್ಥೆಗೆ ಹೆಚ್ಚಿನ ಒತ್ತು ಕೊಡಬೇಕು ಎನ್ನುವುದೆ?

ಗಣರಾಜ್ಯ ಸ್ವರೂಪವನ್ನು ಈಗಿರುವಂತೆ ಇಟ್ಟುಕೊಂಡರೆ ಕಷ್ಟ ತಪ್ಪಿದ್ದಲ್ಲ. ಭಾಷಾ ರಾಷ್ಟ್ರೀಯತೆಗಳನ್ನು ಪ್ರಾದೇಶಿಕ ಸಂಕುಚಿತತೆ ಎಂದು ದಮನ ಮಾಡುವ ಏಕಾತ್ಮಕ ರಾಷ್ಟ್ರದ ರಾಜಕಾರಣ, ಇನ್ನಷ್ಟು ಗಲಭೆ-ಗೊಂದಲ-ಅಶಾಂತಿಗಳನ್ನಷ್ಟೇ ಸೃಷ್ಟಿಸಬಲ್ಲುದು. ಇದಕ್ಕೆ ಪರಿಹಾರವೆಂದರೆ, ರಾಷ್ಟ್ರವನ್ನು ನಿಜವಾದ ಒಕ್ಕೂಟ ವ್ಯವಸ್ಥೆಯನ್ನಾಗಿಸುವುದು. ಇವತ್ತು ಅಮೇರಿಕ ಸಂಯುಕ್ತ ಸಂಸ್ಥಾನಗಳಿರುವಂತೆ. ಕಳೆದ ೫೦-೬೦ ವರ್ಷಗಳಲ್ಲಿ ನಮ್ಮ ಸಂವಿಧಾನಕ್ಕೆ ತಂದಿರುವ ತಿದ್ದುಪಡಿಗಳನ್ನು ನೋಡಿದರೆ, ನಮ್ಮ ಮೂಲ ಸಂವಿಧಾನದಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಅಧಿಕಾರಗಳಲ್ಲಿ ಎಷ್ಟೋ ಸಮತೋಲನ ಇತ್ತು; ಆದರೆ ಸಂವಿಧಾನ ತಿದ್ದುಪಡಿ ಆಗ್ತಾ ಆಗ್ತಾ, ಇವತ್ತು ಹೆಚ್ಚಿನ ಅಧಿಕಾರವೆಲ್ಲ ಹೇಗೆ ಕೇಂದ್ರದ ಪಾಲಾಗಿದೆ ಎಂಬುದು ಗೊತ್ತಾಗುತ್ತದೆ. ಇತ್ತೀಚಿನ ಉದಾಹರಣೆ ಎಂದರೆ, ನಮ್ಮ ಸಂವಿಧಾನದ ಮೂಲ ಸ್ವರೂಪವನ್ನು ನಿರ್ಧರಿಸುವಂತಹ ರಾಜ್ಯ ಸಭೆ ಮತ್ತು ಲೋಕಸಭೆಗಳ ರಚನೆ ಏನಿದೆ, ಅದನ್ನು ಮೂಲಭೂತವಾಗಿ ಬದಲಾಯಿಸಲಾಗಿರುವುದು. ರಾಜ್ಯಸಭೆ ನಮ್ಮ ಭಾಷಾಧಾರಿತ ರಾಜ್ಯಗಳ ಅಧಿಕಾರಗಳನ್ನು ಕಾಯುವ ಸಭೆ. ಮೂಲ ಸಂವಿಧಾನದ ಪ್ರಕಾರ

ಈ ರಾಜ್ಯಸಭೆಗೆ ರಾಜ್ಯಗಳ ಪ್ರತಿನಿಧಿಗಳಾಗಿ ಆಯ್ಕೆಯಾಗಬೇಕಾದವರು ಆಯಾ ರಾಜ್ಯಗಳ ನಿವಾಸಿಗಳೇ ಆಗಬೇಕಿತ್ತು. ಆದರೆ ಹಿಂದಿನ ಎನ್.ಡಿ.ಎ. ಸರ್ಕಾರ ತಂದ ತಿದ್ದುಪಡಿಯಿಂದಾಗಿ ಈಗ ಯಾರು ಯಾವ ರಾಜ್ಯವನ್ನಾದರೂ ಪ್ರತಿನಿಧಿಸಬಹುದಾಗಿದೆ! ಹೀಗಾದರೆ ಒಕ್ಕೂಟಕ್ಕೇನು ಅರ್ಥ? ಕುಲದೀಪ್ ನಯ್ಯಾರ್ ಇದನ್ನು ಪ್ರಶ್ನಿಸಿ ಕೋರ್ಟಿಗೆ ಹೋದಾಗ, ಸುಪ್ರೀಂ ಕೋರ್ಟ್ ಕೂಡ ಈ ತಿದ್ದುಪಡಿಯನ್ನು ಎತ್ತಿ ಹಿಡಿಯಿತು. ಅಂದರೆ, ಸಂವಿಧಾನವನ್ನು ಅರ್ಥೈಸುವ ಜವಾಬ್ದಾರಿ ಹೊಂದಿರುವ ನ್ಯಾಯಾಂಗ ಕೂಡ ಕಾಲದ ರಾಜಕೀಯ ಕರೆಗಳಿಗೆ ತಕ್ಕಂತೆ ತನ್ನ ಅರ್ಥೈಸುವಿಕೆಯನ್ನು ಬದಲಾಯಿಸಿಕೊಳ್ಳುತ್ತಾ ಹೋಗುತ್ತದೆ! ಇದು ನಿಜವಾದ ಅಪಾಯದ ಸೂಚನೆ.

ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಕುರಿತು ನಿಮ್ಮ ತೀವ್ರ ವಿರೋಧವನ್ನು ಈಗಾಗಲೇ ಪ್ರಕಟಪಡಿಸಿದ್ದೀರಿ. ಬಡವರು, ಹಿಂದುಳಿದ ವರ್ಗದವರು ಮತ್ತು ಗ್ರಾಮೀಣ ಮಕ್ಕಳು ಕನ್ನಡ ಮಾಧ್ಯಮ ಶಾಲೆಗೆ ಹೋಗುವುದು ಅನಿವಾರ್ಯವಾಗಿದೆ. ಔದ್ಯೋಗಿಕ ಕ್ಷೇತ್ರದಲ್ಲಿ ಇಂಗ್ಲೀಷ್ ಭಾಷೆಗೆ ಹೆಚ್ಚಿನ ಪ್ರಾಧಾನ್ಯತೆ ಇರುವುದರಿಂದ ಸಹಜವಾಗಿ ಅವರು ಹಿನ್ನಡೆ ಅನುಭವಿಸುತ್ತಾರೆ. ನಿಮ್ಮ ನಿಲುವು ಈ ಸಮೂಹಕ್ಕೆ ಅನ್ಯಾಯ ಮಾಡಿದಂತಲ್ಲವೆ?

ಇದಕ್ಕೆ ಸಾಕಷ್ಟು ಬಾರಿ ಉತ್ತರ ಕೊಟ್ಟಿದ್ದೀನಿ. ಮತ್ತೆ ಹೇಳೋದಾದರೆ, ಇವೊತ್ತಿನ ಶಿಕ್ಷಣ ವ್ಯವಸ್ಥೆಯಲ್ಲಿ ಒಂದನೇ ತರಗತಿಯಿಂದಾಗಲಿ, ಐದನೇ ತರಗತಿಯಿಂದಾಗಲಿ ಇಂಗ್ಲೀಷ್ ಬೋಧಿಸುವುದರಿಂದ ಅಂತಹ ಮುಖ್ಯ ವ್ಯತ್ಯಾಸವೇನೂ ಆಗುವುದಿಲ್ಲ ಅಂತ ನನ್ನ ಸ್ಪಷ್ಟ ಅಭಿಪ್ರಾಯ. ಅದಕ್ಕಿಂತ ಮುಖ್ಯವಾಗಿ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ನಿರ್ಧಾರ, ಇಂಗ್ಲಿಷ್ ಭಾಷೆಯನ್ನು ಸಾರ್ವಜನಿಕ ಜೀವನದ ಅಧಿಕೃತ ಭಾಷೆಯನ್ನಾಗಿ ಮಾಡೋದಕ್ಕೆ ಮತ್ತು ಮಾತೃಭಾಷೆ ಅಥವಾ ಪ್ರಾಂತೀಯ ಭಾಷೆಯನ್ನು ಎರಡನೆ ದರ್ಜೆಗೆ ತಳ್ಳೋದಕ್ಕೆ ಜಾಗತೀಕರಣದ ಹಿಂದಿರುವ ನವ ಸಾಮ್ರಾಜ್ಯಶಾಹಿ ಶಕ್ತಿಗಳು ನಡೆಸಿರೋ ರಾಜಕೀಯ ಹುನ್ನಾರ ಅಂತ ನಾನು ತಿಳಿದು ಕೊಂಡಿದ್ದೇನೆ. ಇದಕ್ಕೆ ಸಾಕಷ್ಟು ಪುರಾವೆಗಳನ್ನು ಕೂಡಾ ನನ್ನ 'ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ: ಏಕೆ ಬೇಡ?' ಪುಸ್ತಕದಲ್ಲಿ ನೀಡಿದ್ದೇನೆ.

ಎರಡನೇಯದಾಗಿ ಜಾಗತೀಕರಣವನ್ನು, ಅದರ ಆರ್ಥಿಕತೆಯನ್ನು ವಿರೋಧಿಸುವ ನೀವು; ಅದಕ್ಕೆ ಪೂರಕ ಶಕ್ತಿಯಾಗಿ ಜಾಗತೀಕರಣವಾದಿಗಳು ಎತ್ತಿ ಹಿಡಿಯುತ್ತಿರುವ ಶಿಕ್ಷಣದಲ್ಲಿನ ಇಂಗ್ಲಿಷ್ ಪ್ರಾಥಮಿಕತೆಗಾಗಿ ಆಗ್ರಹಿಸುವುದು ಒಂದು ದೊಡ್ಡ ವಿರೋಧಾಭಾಸ ವಲ್ಲವೆ? ನೀವು ಈಗ ಜಾರಿಯಲ್ಲಿರುವಂತಹ ಆರ್ಥಿಕತೆ, ಇದರ ಆಧಾರದ ಮೇಲೇ ರಾಷ್ಟ್ರವನ್ನು ಕಟ್ಟಬೇಕು ಅಂದ್ಕೊಂಡಿದ್ರೆ ಇಂಗ್ಲಿಷ್ ಬೇಕು ಎಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ನೀವು ನಮ್ಮ ಈ ಅಭಿವೃದ್ಧಿಯ ಪರಿಕಲ್ಪನೆ ಸರಿಯಿಲ್ಲ, ರಾಷ್ಟ್ರ ಹೋಗುತ್ತಿರುವ ದಿಕ್ಕು ಸರಿಯಿಲ್ಲ, ಎಲ್ಲ ತಲೆಕೆಳಗಾಗಿದೆ ಅಂತ ಹೇಳ್ತಾ, ಇಂಗ್ಲಿಷ್ ಭಾಷೆಯ ಸ್ಥಾನಮಾನವನ್ನು

ಹೆಚ್ಚಿಸಲೂ ಆಗ್ರಹಿಸುವುದು ಅಪ್ಪಟ ಅಪ್ರಾಮಾಣಿಕತೆ ಆಗುತ್ತದೆ. ಹೊಸ ಸಮಾಜವಾದದ ಅನ್ವೇಷಣೆಗಾಗಿ ನಾವು ನಮ್ಮ ಪ್ರಾದೇಶಿಕ ಭಾಷೆಗಳ ಕಡೆಗೇ ನೋಡಬೇಕಾಗುತ್ತದೆ. ಏಕೆಂದರೆ, ಭಾಷೆ ಅನ್ನೋದು ಕೇವಲ ಸಂಪರ್ಕ ಮಾಧ್ಯಮವಲ್ಲ. ಅದೊಂದು ಸಂಸ್ಕೃತಿ. ಜೀವನವನ್ನು ಗ್ರಹಿಸುವ, ಕಟ್ಟಿಕೊಳ್ಳುವ ಒಂದು ವಿಶಿಷ್ಟ ಕ್ರಮ ಕೂಡಾ. ಹೀಗಾಗಿ ನಮ್ಮ ಭಾಷೆಯನ್ನು ಎರಡನೇ ದರ್ಜೆಗೆ ಇಳಿಸಿ ಪ್ರತಿ ರಾಜಕಾರಣವನ್ನು ಕಟ್ಟುತ್ತೇವೆ ಅಂದ್ರೆ ಅದು ಆತ್ಮದ್ರೋಹದ ಮಾತಾಷ್ಟೇ ಆಗುತ್ತದೆ.

ದೇವನೂರ ಮಹಾದೇವ ಅವರು ಇಂಗ್ಲಿಷನ್ನ ಮಾಧ್ಯವನ್ನಾಗಿ ಕೇಳುತ್ತಿಲ್ಲ, ಕೇವಲ ಭಾಷೆಯನ್ನಾಗಿ ಕೇಳುತ್ತಿದ್ದೇವೆ ಎನ್ನುತ್ತಾರಲ್ಲ?

ಮಹದೇವ ನನ್ನ ಕ್ಲೋಸೆಸ್ಟ್ ಫ್ರೆಂಡ್. ನಾನು ಅವರನ್ನ ನನ್ನ ಒಬ್ಬ ಫಿಲಾಸಫರ್-ಗೈಡ್-ಫ್ರೆಂಡ್ ಅಂತ ತಿಳಿದವನು. ಭಾಷಾ ನೀತಿಯ ವಿಚಾರದಲ್ಲಿ ಯಾವಾಗ ಅಭಿಪ್ರಾಯ ಭೇದ ಉಂಟಾಯಿತೋ ಆಗಿನಿಂದ ನನ್ನ ಮತ್ತು ಅವರ ನಡುವೆ ಭಾವನಾತ್ಮಕ ಕಂದಕ ಉಂಟಾಗಿದೆ. ಮತ್ತೆ ಯಾರೋ ಒಬ್ಬ ದೊಡ್ಡ ವ್ಯಕ್ತಿ ಹೇಳಿದಾರೆ ಅನ್ನೋ ಕಾರಣಕ್ಕೆ ನಾನು ನನ್ನ ಅಭಿಪ್ರಾಯವನ್ನ ಬದಲಿಸಿಕೊಳ್ಳಲಾರೆ. ಅವರ ಅಭಿಪ್ರಾಯ ಅವರಿಗೆ, ನನ್ನ ಅಭಿಪ್ರಾಯ ನನಗೆ. ಇಂದು ಭಾಷೆಯನ್ನಾಗಿ ಕೇಳುತ್ತಿರುವುದು, ನಾಳೆ ಮಾಧ್ಯಮವನ್ನಾಗಿ ಕೇಳಲೆಂದೇ ಎಂಬುದು ಇವರು ಇಂಗ್ಲಿಷ್ ಪರವಾಗಿ ಮಂಡಿಸುತ್ತಿರುವ ವಾದದಿಂದಲೇ ಸ್ಪಷ್ಟವಾಗುವಂತಿದೆ. ಆದ್ದರಿಂದ ಇಂಗ್ಲಿಷ್ ಭಾಷೆಯಿಂದಲೇ ಇಂದು ಉದ್ಧಾರ ಸಾಧ್ಯ ಎಂದು ನಿಜವಾಗಿ ನಂಬಿರುವವರು ಅದನ್ನು ಭಾಷೆಯಾಗಿ ಮಾತ್ರವಲ್ಲ, ನೇರವಾಗಿ ಇಂಗ್ಲಿಷ್ ಮಾಧ್ಯಮವನ್ನೇ ಬೇಡುವುದರ ಮೂಲಕ ಹೆಚ್ಚು ಪ್ರಾಮಾಣಿಕರಾಗುವುದು ಒಳಿತು. ಆದರೆ ಆ ಧೈರ್ಯ ಇನ್ನೂ ಅವರಿಗೆ ಬಂದಿಲ್ಲ!

ಭಾಷಾ ಚಳುವಳಿಯನ್ನು (ಗೋಕಾಕ್ ಚಳುವಳಿ) ಒರಟು ಸ್ವರೂಪದ್ದೆಂದು ಹೇಳಿದಿರಿ. ಅದು ಕೂಡಾ ಭಾಷಾ ರಾಷ್ಟ್ರೀಯತೆಯನ್ನು ಪ್ರತಿಪಾದಿಸುವ ಚಳುವಳಿಯಲ್ಲವೇ?

ಗೋಕಾಕ್ ಚಳುವಳಿ ಶಿಕ್ಷಣದಲ್ಲಿ ಕನ್ನಡದ ಮಕ್ಕಳಿಗೆ ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ಕಲಿಸಲು ಆಗ್ರಹಿಸುವುದಕ್ಕೆ ಸೀಮಿತವಾದ ಒಂದು ಚಳುವಳಿ. ಭಾಷಾ ರಾಜಕಾರಣವನ್ನು ಅದರ ತಾರ್ಕಿಕ ಅಂತ್ಯಕ್ಕೆ ಕರೆದೊಯ್ಯುವ ಯಾವುದೇ ಆಶಯವನ್ನು ಕೂಡ ಅದು ಪ್ರಕಟಪಡಿಸಲಿಲ್ಲವಾದ್ದರಿಂದ ಅದನ್ನು ಭಾಷಾ ರಾಷ್ಟ್ರೀಯತೆಯ ಚಳುವಳಿ ಎಂದು ಕರೆಯಲಾಗುವುದಿಲ್ಲ. ನಮ್ಮ ಎಲ್ಲ ಕನ್ನಡ ಚಳುವಳಿಗಳ ಮಿತಿ ಇದು. ಇದಕ್ಕೆ ಕಾರಣಗಳನ್ನು ತೇಜಸ್ವಿ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಎಂಬ ತಮ್ಮ ಒಕ್ಕೂಟದ ಭಾಷಣದಲ್ಲಿ ವಿವರಿಸಿದ್ದಾರೆ.

ಕೋಮುವಾದ ನಮ್ಮ ದೇಶವನ್ನು ಕಾಡ್ತಿರೋ ಪ್ರಮುಖ ಸಮಸ್ಯೆ. ಇದನ್ನ

ದೇಶದ ಒಳಗಿನ ಕೋಮುವಾದಿಗಳು ಮತ್ತು ಹೊರಗಿನ ಉಗ್ರವಾದಿಗಳಿಬ್ಬರೂ (ಪರಸ್ಪರರನ್ನು ದೂಷಿಸುತ್ತ) ಬೆಳೆಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸಮಾಜವಾದವನ್ನು ಒಪ್ಪಿಕೊಂಡ ಯುವಕರಿಗೆ ನಿಮ್ಮ ಕಿವಿ ಮಾತೇನು?

ನೋಡಿ ಸಮಾಜವಾದಿ ಚಳುವಳಿ, ವಿಶೇಷವಾಗಿ ಲೋಹಿಯಾ ಧಾರೆ ಧರ್ಮವನ್ನು ಕುರಿತು ಒಂದು ಸ್ಪಷ್ಟವಾದ ನಿಲುವನ್ನು ತಾಳಿದೆ. ಅದು ನಾವಿವತ್ತು ಎತ್ತಿ ಹಿಡಿಯುತ್ತಿರುವ ಸೆಕ್ಯೂಲರಿಸಮ್‌ಗಿಂತ ತುಂಬಾ ಭಿನ್ನವಾಗಿದೆ. ಈ ಮಾರ್ಕ್ಸ್‌ವಾದಿ ಸಮಾಜವಾದ ಇದೆಯಲ್ಲ–ಯಾವುದನ್ನ ನಾವು ವೈಜ್ಞಾನಿಕ ಸಮಾಜವಾದ ಅಂತ ಕರೀತೀವಿ–ಅದು ಧರ್ಮವನ್ನು ಅಫೀಮು ಅಂತ ಕರೀತು. ಇದರಿಂದ ದೊಡ್ಡ ಗೊಂದಲವೇ ಆಗಿ ಹೋಗಿದೆ. ಧರ್ಮ ಅನ್ನೋದು ಭಾರತದಲ್ಲಿ ಬಹುಮುಖಿಯಾದದ್ದು. ಅದು ಸಾಂಸ್ಕೃತಿಕ ಮುಖವುಳ್ಳದ್ದು. ಅದು ಪಶ್ಚಿಮದಲ್ಲಿದ್ದಂತೆ ಕೇವಲ ಚರ್ಚಲ್ಲ. ಅಥವಾ ಇಲ್ಲಿನ ದೇವಸ್ಥಾನ ಮಾತ್ರವಲ್ಲ. ಕೃಷಿ ಸಂಸ್ಕೃತಿಗೆ, ಬುಡಕಟ್ಟು ಸಂಸ್ಕೃತಿಗೆ ಸಂಬಂಧಿಸಿದ ಆಚರಣೆಗಳು ಕೂಡ ಇಲ್ಲಿ ಧರ್ಮ ಎನ್ನಿಸಿಕೊಂಡಿದೆ. ತೇರು, ಜಾತ್ರೆ, ಭೂಮಿ ಹುಣ್ಣಿಮೆ ಇವೆಲ್ಲವೂ ಇಲ್ಲಿ ಧರ್ಮ. ಆದರೆ ಆಧುನಿಕ ರಾಷ್ಟ್ರವಾಗುವ ಭರದಲ್ಲಿ ನಾವು ಪಶ್ಚಿಮದ ಆಧುನಿಕತೆಯ ಸೃಷ್ಟಿಯಾದ ಧರ್ಮ ಮತ್ತು ರಾಜಕಾರಣವನ್ನ ಪ್ರತ್ಯೇಕ ಮಾಡುವ ಸೆಕ್ಯೂಲರ್ ತತ್ವವನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಂಡೆವು. ರಾಜಕಾರಣ ಎಂದರೇನು? ಜನತಾ ಶಕ್ತಿಯ ನಿರ್ವಹಣೆ ತಾನೆ? ಈ ಜನತಾ ಶಕ್ತಿಯ ಸಾಂಸ್ಕೃತಿಕತೆಯನ್ನೇ ಅನುಮಾನಾಸ್ಪದಗೊಳಿಸಿ ನಾವೆಂತಹ ರಾಜಕಾರಣವನ್ನು ಮಾಡಬಲ್ಲೆವು? ನಮ್ಮ ರಾಜಕಾರಣದ ಇಂದಿನ ಎಲ್ಲ ಅನೈತಿಕತೆ ಮತ್ತು ಭ್ರಷ್ಟತೆಗಳು ಈ ಮೂಲದಿಂದಲೇ ಬಂದವು ಎಂದು ನಾನು ಭಾವಿಸಿದ್ದೇನೆ. ಇಲ್ಲಿ ಗಾಂಧಿಯವರ 'ನನಗೆ ದೀರ್ಘಕಾಲಿಕ ರಾಜಕಾರಣವೇ ಧರ್ಮ, ಅಲ್ಪಕಾಲಿಕ ಧರ್ಮವೇ ರಾಜಕಾರಣ' ಎಂಬ ಮಾತು ನನಗೆ ನೆನಪಿಗೆ ಬರುತ್ತಿದೆ.

ಲೋಹಿಯಾ ಅವರು ಧರ್ಮಕ್ಕೆ ನಾಲ್ಕು ಮುಖಗಳಿವೆ ಅಂತ ಹೇಳ್ತಾ ಇದ್ದರು. ಮೊದಲನೆಯದು ಅಗಮ್ಯದೊಡನೆ ಸಂವಾದ. ಮನುಷ್ಯ ಪೂರ್ಣನಲ್ಲ. ಅವನ ಪೂರ್ಣತೆಯ ಹಂಬಲ ಚಿರಂತನವಾದದ್ದು. ಹಾಗಾಗಿ ಮನುಷ್ಯ ಅಗಮ್ಯ-ಅನೂಹ್ಯದ ಹಂಬಲದಲ್ಲಿ ಧ್ಯಾನಸ್ಥನಾಗುವುದು ಅವನ ಹುಟ್ಟು ಲಕ್ಷಣ. ಎರಡನೆಯದು ಸಾಮಾಜಿಕ ಸದ್ವರ್ತನೆಯ ತರಬೇತಿ: ಒಳ್ಳೆಯದು, ಕೆಟ್ಟದು, ಬೇಕು-ಬೇಡಗಳ ಶಿಕ್ಷಣ. ಮೂರನೆಯದು ಹೆಣ್ಣು ಗಂಡಿನ ನಡುವೆ ಮತ್ತು ಜಾತಿ-ವರ್ಗಗಳ ತರತಮಗಳನ್ನು ಬೋಧಿಸುವ ಕೆಲವು ಲಕ್ಷಣಗಳು ಧರ್ಮದಲ್ಲಿವೆ. ನಾಲ್ಕನೆಯ ಮುಖ ಅನ್ಯಮತ ಅಸಹಿಷ್ಣುತೆ ಅಥವಾ ಮತಾಂಧತೆ. ಧರ್ಮದ ಈ ನಾಲ್ಕು ಮುಖಗಳಲ್ಲಿ ಮೊದಲ ಎರಡನ್ನು ಇಟ್ಟುಕೊಂಡು, ಕೊನೆಯ ಎರಡನ್ನು ತಿರಸ್ಕರಿಸಬೇಕೆಂದು ಲೋಹಿಯಾ ಹೇಳುತ್ತಿದ್ದರು. ನಾವು ಆಧುನಿಕತೆಯ ಹೆಸರಿನಲ್ಲಿ ಧರ್ಮವನ್ನು ಸಾರ್ವಜನಿಕ ಜೀವನದಿಂದ ದೂರ ಇಡಬೇಕು ಅಂತ ಹೇಳಿದ್ದರಿಂದ ಜನತೆ ಈ ಸೆಕ್ಯೂಲರಿಸಂನ್ನು ಆಳದಲ್ಲಿ ಒಪ್ಪಲಿಲ್ಲ. ಜೊತೆಗೆ ಈ ಸೆಕ್ಯೂಲರ್ ರಾಷ್ಟ್ರವನ್ನು ಕಟ್ಟಲಿಕ್ಕೆ

ಹೊರಟಾಗ, ಅದು ಧರ್ಮದ ಆಧಾರದ ಮೇಲೆ ವಿಭಜಿತವಾದ ಕಹಿ ನೆನಪು ಜನರ ಮನಸ್ಸಿನಲ್ಲಿದೆ ಎಂಬುದನ್ನೂ ನಾವು ಮರೆಯಬಾರದು. ನಮ್ಮದು ನಿಜವಾಗಿ ಸೆಕ್ಯುಲರ್ ರಾಷ್ಟ್ರವಾಗುವುದು, ನಾವು ಏಕರೂಪದ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಿದಾಗ. ಹಾಗಾಗಿಯೇ, ಎಲ್ಲ ರಾಜಕೀಯ ಪಕ್ಷಗಳು ಇದನ್ನು ಪ್ರಸ್ತಾಪಿಸಲು ಹಿಂದು ಮುಂದು ನೋಡುತ್ತಿದ್ದಾಗ ಲೋಹಿಯಾ ಇದನ್ನು ೧೯೬೨ರಲ್ಲಿಯೇ ಒಂದು ಚುನಾವಣಾ ವಿಷಯವನ್ನಾಗಿ ಘೋಷಿಸಿದರು. ಇದರಿಂದಾಗಿ ಚುನಾವಣೆಯಲ್ಲಿ ಅವರ ಪಕ್ಷಕ್ಕೆ ಹಲವೆಡೆ ಸೋಲುಂಟಾಯಿತು. ಅದರಿಂದೇನೂ ಅವರು ವಿಚಲಿತರಾಗಲಿಲ್ಲ. ಕಿಶನ್ ಪಟ್ನಾಯಕ್ ಎರಡನೇ ಬಾರಿ ಸೋತದ್ದು ಇದೇ ಕಾರಣಕ್ಕೆ. ಉದಾತ್ತ ಉದ್ದೇಶಗಳಿಗಾಗಿ ಜನಪ್ರಿಯತೆಯನ್ನು ಪಣಕ್ಕೊಡ್ಡುವ ಧೀಮಂತ ನಾಯಕರು ಸೃಷ್ಟಿಯಾಗದ ಹೊರತು ರಾಷ್ಟ್ರನಿರ್ಮಾಣವೆಂಬುದು ಕನಸಿನ ಮಾತೇ ಸರಿ!

ಗಾಂಧಿ ಹತ್ಯೆಯ ಕಾರಣದಿಂದಾಗಿ ದಮನಗೊಂಡಿದ್ದ ಹಿಂದೂ ಕೋಮುವಾದ ಶಾಬಾನು ಪ್ರಕರಣದಿಂದ ಮತ್ತೆ ಚಿಗುರೊಡೆಯಲು ಅವಕಾಶವಾಯಿತು. ಇದರಿಂದ ಸಿಟ್ಟಿಗೆದ್ದ ಹಿಂದುಗಳನ್ನು ಸಂತೈಸಲು ರಾಜೀವ್ ಗಾಂಧಿ ಬಾಬ್ರಿ ಮಸೀದಿಯ ಬಾಗಿಲು ತೆಗೆಸಿ ಪೂಜೆ-ಕರಸೇವೆ ಇತ್ಯಾದಿಗಳಿಗೆ ಅವಕಾಶ ಮಾಡಿಕೊಟ್ಟು ದೊಡ್ಡ ಅನಾಹುತಕ್ಕೇ ದಾರಿ ಮಾಡಿಕೊಟ್ಟರು. ಹೀಗೆ ನಾವು ಅಪದ್ಧ ಸೆಕ್ಯುಲರಿಸಂನ್ನು ರಕ್ಷಿಸಿಕೊಳ್ಳುವ ನೆಪದಲ್ಲಿ ಸ್ಪರ್ಧಾತ್ಮಕ ಕೋಮುವಾದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ನನ್ನ ಪ್ರಕಾರ ಸೆಕ್ಯೂಲರಿಸಮ್‌ನ್ನು ನಾವು ಅಳವಡಿಸಿಕೊಂಡ ರೀತಿನೇ ಇಂದು ಭಯಂಕರ ಕೋಮುವಾದಕ್ಕೆ ಕಾರಣವಾಗಿದೆ. ಆದ್ದರಿಂದ ಸೆಕ್ಯೂಲರಿಸಮನ್ನು ಇಂದಿನ ಸಂದರ್ಭಕ್ಕೆ ರಿಡಿಫೈನ್ ಮಾಡಿಕೊಳ್ಳುವುದೆಂದರೆ, ಜನಪ್ರಿಯತೆಯನ್ನು ಪಣಕ್ಕೊಡ್ಡಿ ಯೂನಿಫಾರಂ ಸಿವಿಲ್ ಕೋಡ್‌ಗಾಗಿ ಆಗ್ರಹಿಸುವುದು.

ಭಾರತದಂತಹ ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಅಲ್ಪಸಂಖ್ಯಾತರಿಗೆ ಕೆಲವು ಸವಲತ್ತುಗಳನ್ನು ಕೊಡುವುದು ತಪ್ಪು ಅಂತೀರಾ?

ಭಾರತದ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳನ್ನು ಕೊಟ್ಟ ಮೇಲೆ ಮತ್ತೆ ಅಲ್ಪಸಂಖ್ಯಾತತೆಯ ಪರಿಭಾಷೆಯಲ್ಲಿ ಮಾತಾಡುವುದು ಈ ಸಮಾನ ಹಕ್ಕುಗಳ ಜಾರಿಯ ಬಗ್ಗೆ ನಮಗಿರುವ ಅಪನಂಬಿಕೆ ಅಥವಾ ಸಂದೇಹಗಳನ್ನಷ್ಟೇ ಸೂಚಿಸುತ್ತದೆ. ಎಲ್ಲರಿಗೂ ಧರ್ಮ, ಸಂಸ್ಕೃತಿ, ಪೂಜಾ ವಿಧಾನ ಇತ್ಯಾದಿಗಳಿಗೆ ಸಂಬಂಧಪಟ್ಟಂತೆಯೂ ಸಮಾನ ಮೂಲಭೂತ ಹಕ್ಕುಗಳನ್ನು ಕೊಟ್ಟ ಮೇಲೆ ಮತ್ತೆ ಅಲ್ಪಸಂಖ್ಯಾತರ ಹೆಸರಲ್ಲಿ ಸವಲತ್ತು ಕೊಡುತ್ತೀರೆಂದರೆ ಏನೋ ಓಲೈಸುವಿಕೆ ನಡೀತಾ ಇದೆ ಅಂತ ಯಾರಿಗಾದರೂ ಅನಿಸೋದಕ್ಕೆ ಶುರುವಾಗುತ್ತೆ. ಸಾಮಾಜಿಕ-ಆರ್ಥಿಕ ಆಧಾರದ ಮೇಲೆ ಏನು ಬೇಕಾದರೂ ಸಾರ್ವತ್ರಿಕ ಸವಲತ್ತುಗಳನ್ನು ಕೊಡಲಿ. ಆದರೆ ಧಾರ್ಮಿಕ ಅಲ್ಪಸಂಖ್ಯಾತತೆಯ ಆಧಾರದ ಮೇಲೆ ಯಾವುದೇ ಪರಿಗಣನೆ ಇರಬಾರದು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮುಸ್ಲಿಂ ಕೋಮುವಾದ

ಬೆಳೆದದ್ದೇ ಸೆಕ್ಯೂಲರಿಸಂ ಹೆಸರು ಹೇಳಿಕೊಂಡು. ಈಗ ಹಿಂದೂ ಕೋಮುವಾದ ಪುನರವತರಿಸಿರುವುದು ಮುಸ್ಲಿಂ ಕೋಮುವಾದವನ್ನು ಕಾರಣ ಮಾಡಿಕೊಂಡು! ಅಂದರೆ, ಸೆಕ್ಯೂಲರಿಸಮ್‌ನ್ನು ಮುಸ್ಲಿಮರು ಒಂದು ರೀತಿ ಅರ್ಥಮಾಡಿಕೊಂಡಿದ್ದಾರೆ, ಹಿಂದೂಗಳು ಇನ್ನೊಂದು ರೀತಿ ಅರ್ಥ ಮಾಡಿಕೊಂಡಿದ್ದಾರೆ. ಸರ್ಕಾರ ಮತ್ತೊಂದು ರೀತಿ ಅರ್ಥ ಮಾಡಿಕೊಂಡಿದೆ! ಇದೇ ಇಂದಿನ ಕೋಮುವಾದ ಸಂಬಂಧಿಯಾದ ಎಲ್ಲ ಅನಾಹುತಗಳಿಗೆ ಕಾರಣವಾಗಿದೆ.

ಬದಲಾವಣೆಗಳಿಗೆ ರಾಜಕೀಯ ಪಕ್ಷಗಳನ್ನು, ಸಿದ್ಧಾಂತಗಳನ್ನು ಅವಲಂಬಿಸುವ ಬದಲು ಈ ರಾಜಕಾರಣವನ್ನೇ ಅಪ್ರಸ್ತುತಗೊಳಿಸಿ ಚಳುವಳಿ ನಡೆಸುವ ಅಣ್ಣಾ ಹಜಾರೆ, ಮೇಧಾಪಾಟ್ಕರ್ ರೀತಿಯ ನಿಲುವು ಹೆಚ್ಚು ಪರಿಣಾಮಕಾರಿಯಲ್ಲವೆ?

ಅವರಿಬ್ಬರನ್ನೂ ನಾನು ಕಂಡಿದ್ದೇನೆ, ಮಾತಾಡಿಸಿದ್ದೇನೆ. ಅವರು ರಾಜಕಾರಣವನ್ನು ಅಪ್ರಸ್ತುತಗೊಳಿಸುತ್ತಿದ್ದಾರೆ ಎಂದು ಹೇಳಿದರೆ ತಪ್ಪಾದೀತು. ಅವರು ಮಾಡುತ್ತಿರುವುದೂ ರಾಜಕಾರಣವೇ. ಆದರೆ ಅದು ಚುನಾವಣಾ ರಾಜಕೀಯಕ್ಕೆ ಹೊರತಾದ ಪರ್ಯಾಯ ರಾಜಕಾರಣ. ರಾಜಕಾರಣಕ್ಕೆ, ಕಳೆದು ಹೋಗಿರುವ ಅದರ ತಾತ್ವಿಕತೆಯನ್ನು ಮರಳಿ ಗಳಿಸಿಕೊಡಲು ಯತ್ನಿಸುತ್ತಿರುವ ಜನತಾ ಚಳುವಳಿಗಳ ನಾಯಕರವರು. ಅವರು ಮಾತ್ರವಲ್ಲ, ನಮ್ಮ ಹಳ್ಳಿಗಳಿಗೆ ಹೋದರೆ ಅವರ ಹಾಗೇ, ಆದರೆ ತಮ್ಮ ಮಿತಿಗಳಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ನೋಡಬಹುದು. ಅದನ್ನೊಂದು ಜನಶಕ್ತಿಯಾಗಿ ಪರಿವರ್ತಿಸುವ ಕೆಲಸವಾಗಬೇಕಿದೆ ಇಂದು.

ಪಾಳೇಕರ್ ಕೃಷಿಯಲ್ಲಿ ತೊಡಗಿದವರನ್ನೇ ತೆಗೆದುಕೊಳ್ಳಿ. ಪಾಳೇಕರ್ ಕೃಷಿಯನ್ನು ಒಂದು ಜನಶಕ್ತಿಯನ್ನಾಗಿ ರೂಪಿಸಲು ಸಾಧ್ಯವಾದರೆ, ಅದು ಕೈಗಾರಿಕೀಕರಣದ ವಿರುದ್ಧ ನಾವು ಈವರೆಗೆ ಮಾಡಿರದಂತಹ ದೊಡ್ಡ ಹೋರಾಟ ಆಗಲಿಕ್ಕೆ ಸಾಧ್ಯವಿದೆ. ಆದರೆ ಪಾಳೇಕರ್ ಕೃಷಿ ವಿರುದ್ಧವೇ ಅಪಪ್ರಚಾರ ಶುರುವಾಗಿದೆ ಇವತ್ತು. ಅದನ್ನು ಶುರು ಮಾಡಿದವರೇ ಇಂದು ಅಪಪ್ರಚಾರಕ್ಕೆ ತೊಡಗಿದ್ದಾರೆ ಎಂದರೆ ಏನು ಹೇಳುವುದು? ಬದಲಾವಣೆಯ ಮಾತನಾಡುವವರಲ್ಲೇ ಈ ರೀತಿಯ ಸಮಸ್ಯೆಗಳು ಕಾಣ್ತವೆ ಇವತ್ತು. ಇದಕ್ಕೆ ಕಾರಣ, ಬದಲಾವಣೆಯ ಉಮೇದು ವ್ಯಕ್ತಿತ್ವದ ಆಳದಿಂದ ಹೊಮ್ಮದೆ, ಕೇವಲ ಒಂದು ಖಯಾಲಿಯ ವಿಷಯವಾಗಿರುವುದು. ಮೊದಲಿಗೆ ಬದಲಾವಣೆಯ ಹೋರಾಟದಲ್ಲಿ ತೊಡಗಿದವರು ಎಷ್ಟರ ಮಟ್ಟಿಗೆ ತಮ್ಮ ತಾತ್ವಿಕ ನಂಬಿಕೆಗಳಲ್ಲಿ ನಿಷ್ಠೆಯನ್ನು ಇಟ್ಟುಕೊಂಡಿದ್ದಾರೆ ಅನ್ನೋದು ಮುಖ್ಯವಾಗುತ್ತದೆ. ಜನ ಎಲ್ಲವನ್ನೂ, ಎಲ್ಲರನ್ನೂ ಗಮನಿಸುತ್ತಿರುತ್ತಾರೆ. ನಾವು ಪದೇ ಪದೇ ನಮ್ಮ ಖಯಾಲಿಗೆ ತಕ್ಕಂತೆ ನಮ್ಮ ನಿಲುವುಗಳನ್ನು ಬದಲಾಯಿಸ್ತಾ ಹೋದರೆ ಕಷ್ಟ ಆಗುತ್ತದೆ. ಹೀಗಾಗಿ, ನಮ್ಮ ರಾಜಕೀಯ ಸಂಸ್ಕೃತಿ ನಾಶವಾಗಿದೆ ಅಂತ ನಾವು

ಹೇಳ್ತಿರುವಾಗ, ಅದು ನಾಶ ಮಾಡಿರೋದು ಮುಖ್ಯವಾಗಿ ನಮ್ಮ ಶೀಲವನ್ನು ಎಂಬುದು ನಮ್ಮ ಗಮನದಲ್ಲಿರಬೇಕು.

ಜಾಗತೀಕರಣವನ್ನು ಅನಿವಾರ್ಯ ಎಂಬಂತೆ ಮಾಡಿರುವ ನಮ್ಮ ಕೇಂದ್ರ ಹೀನ ರಾಜಕೀಯ, ನಮ್ಮ ವ್ಯಕ್ತಿತ್ವದ ಅಡಿಗಲ್ಲುಗಳನ್ನೇ ನಾಶ ಮಾಡಿದೆ. ಅದನ್ನು ತಿಳಿದು ಅದನ್ನು ಕಟ್ಟುವ ಕಡೆಗೆ ಪ್ರಯತ್ನಪಟ್ಟರೆ, ನಾವು ಏನನ್ನಾದರೂ ಮಾಡಬಹುದು. ಹೊಸ ಸಮಾಜವಾದವನ್ನು ರೂಪಿಸಬಹುದು. ತುಂಬಾ ದೂರದ ಗುರಿ ಇದು. ಹಾಗೇ ಬಹಳ ಕಷ್ಟದ ಗುರಿ ಕೂಡಾ. ಆದರೆ ಮನುಷ್ಯ ಖಂಡಿತಾ ಆ ಗುರಿಯ ಕಡೆ ಸಾಗುತ್ತಾನೆ ಅಂತ ನಂಬುತ್ತೇನೆ ನಾನು. ಏಕೇಂದ್ರೆ, ಇಷ್ಟು ಕಡು ಭ್ರಷ್ಟತೆಯನ್ನು, ಅಸಮಾನತೆಯನ್ನು, ಹಿಂಸೆಯನ್ನು, ಅನೈತಿಕತೆಯನ್ನು ಮನುಷ್ಯ ಯಾವತ್ತೂ ಬಹಳ ದಿವಸ ಸಹಿಸುವುದಿಲ್ಲ. ಕಾಯಬೇಕು ಅಷ್ಟೇ ನಾವು. ಕಾಯುತ್ತಾ ಇದ್ದೀನಿ ನಾನಂತೂ. ಕಾಯುವುದೆಂದರೆ ಸುಮ್ಮನೆ ಕಾಯುವುದಲ್ಲ, ನಮ್ಮ ಕೆಲಸವನ್ನು ನಾವು ಮಾಡ್ತಾನೆ ಕಾಯಬೇಕು. ಅದಕ್ಕೆ, ನಾವು ನಂಬಿದ್ದರಲ್ಲಿ ಅಚಲ ನಂಬಿಕೆ ಬಹಳ ಮುಖ್ಯ.

('ಚಾರ್ವಾಕ' ವಾರ್ಷಿಕ ಸಂಚಿಕೆ, ಜನವರಿ-೨೦೦೯)

■

೫೦. ಕೆಲವು ಪ್ರತಿಕ್ರಿಯೆಗಳು:

೧. ಮೂಲಭೂತವಾದವೇ ಎಲ್ಲ ಕೋಮುವಾದಗಳ ತಾಯಿ!

ಗೆಳೆಯ ರಹಮತ್ ತರೀಕೆರೆಯವರು 'ಕೋಮುವಾದ ವಿರೋಧಿ ಚಳುವಳಿ' ಕುರಿತು ಬರೆದಿರುವ ಲೇಖನ ಓದಿದೆ ('ಸಕಾಲ', ಆಗಸ್ಟ್, ೨೦೦೭). ಅವರು ಕೋಮುವಾದವನ್ನು ಅತಿ ವಿವರಣೆಗೆ ಒಡ್ಡಿರುವುದರಿಂದಾಗಿ ಲೇಖನದ ದೃಷ್ಟಿಕೇಂದ್ರವೇ ವಿಚಲಿತವಾದಂತಿದೆ. ವಿಶೇಷವಾಗಿ, ಕೋಮುವಾದ ಹಾಗೂ ಮತೀಯ ಮೂಲಭೂತವಾದಗಳು ಬೇರೆ ಬೇರೆಯೇ ಎಂದು ಹೇಳುವಾಗ ಇದು ಎದ್ದು ಕಾಣುತ್ತದೆ. ಇಂದು ಕೋಮುವಾದವನ್ನು ಒಂದು ರಾಷ್ಟ್ರೀಯ ವಿದ್ಯಮಾನವಾಗಿ ನೋಡುವ ಪರಿಸ್ಥಿತಿ ಇಲ್ಲ. ಅದನ್ನು ಜಾಗತಿಕ ಚೌಕಟ್ಟಿನಲ್ಲಿಟ್ಟು ನೋಡಿದಾಗ ಮಾತ್ರ ಮೂಲಭೂತವಾದವೇ ಎಲ್ಲ ಕೋಮುವಾದಗಳ ತಾಯಿ ಎಂಬುದು ತಿಳಿದು ಬರುತ್ತದೆ.

ಭಾರತದಲ್ಲಿ ಹಿಂದೂ ಕೋಮುವಾದ ಹಾಗೂ ಮುಸ್ಲಿಂ ಕೋಮುವಾದ ಒಟ್ಟಿಗೇ ಹುಟ್ಟಿದವು ಹಾಗೂ ರಾಷ್ಟ್ರ ವಿಭಜನೆಗೆ ಕಾರಣವಾದವು. ಗಾಂಧಿ ಹತ್ಯೆ ನಂತರ ಹಿಂದೂ ಕೋಮುವಾದ ಸ್ವಲ್ಪ ಕಾಲ ತಲೆಮರೆಸಿಕೊಂಡಿತ್ತಾದ್ದರೂ; ಪಾಕಿಸ್ತಾನ (ಈಗಿನ ಬಂಗ್ಲಾದೇಶವೂ ಸೇರಿದಂತೆ)ದಲ್ಲಿನ ಅಧಿಕೃತ ಕೋಮುವಾದದಿಂದಾಗಿ, ಗಣನೀಯವಾಗಿದ್ದ ಅಲ್ಲಿನ ಹಿಂದೂ ಜನಸಂಖ್ಯೆ ನಗಣ್ಯ ಸ್ಥಿತಿ ತಲುಪಿ, ಉಳಿದವರೂ ಸಾಮಾನ್ಯ ಪ್ರಜೆತನವನ್ನು ಕಳೆದುಕೊಂಡು ಬಾಳುವಂತಾದುದರ ಪರಿಣಾಮವಾಗಿ ಸುಪ್ತವಾಗಿ ಬೆಳೆಯುತ್ತಲೇ ಇತ್ತು. ಅದು, ಭಾರತೀಯ ಮುಸ್ಲಿಂ ಮೂಲಭೂತವಾದದ ರಾಜಕೀಯ ಯಶಸ್ಸಿನ ಪ್ರತೀಕದಂತಿರುವ ಶಾಬಾನು ಪ್ರಕರಣದ ರೂಪದಲ್ಲಿ ಸ್ಫೋಟಗೊಳ್ಳಲಾರಂಭಿಸಿತಷ್ಟೆ. ಈ ಎಲ್ಲ ಬೆಳವಣಿಗೆಗಳ ಹಿಂದೆ ಇರುವುದು ಎರಡು ಧರ್ಮಗಳ ಮೂಲಭೂತವಾದವೇ ಎಂಬುದನ್ನು ನಾವು ಗಮನಿಸಬೇಕು. ಇಂದು ಭಾರತದಲ್ಲಿ ಹಿಂದೂ ಮೂಲಭೂತವಾದ, ಕೋಮುವಾದದ ರೂಪದಲ್ಲೂ; ಮುಸ್ಲಿಂ ಕೋಮುವಾದ, ಮೂಲಭೂತವಾದದ ರೂಪದಲ್ಲೂ ಕಾಣಿಸಿಕೊಳ್ಳುತ್ತಿದೆಯಷ್ಟೆ. ಹಾಗಾಗಿ ಅವರಡನ್ನೂ ಬೇರ್ಪಡಿಸಿ ನೋಡುವ ಕ್ರಮ ಅಂತಿಮವಾಗಿ ಅವರಡನ್ನು ಎದುರಿಸುವ ಹೋರಾಟವನ್ನು, ಚಿಂತನೆಯ ವಿಶ್ವಾಸಾರ್ಹತೆಯ ಕೊರತೆಯಿಂದಾಗಿ ದುರ್ಬಲಗೊಳಿಸಬಲ್ಲುದಷ್ಟೆ.

ಸಂಸದೀಯ ಪ್ರಜಾಪ್ರಭುತ್ವವನ್ನೇ ಒಪ್ಪದ ಮಾವೋವಾದಿ ಹೋರಾಟವನ್ನು ಕೋಮುವಾದಿ ವಿರೋಧಿ ಹೋರಾಟವನ್ನಾಗಿ ನೋಡುವ ಕ್ರಮದಲ್ಲೂ ಇಂತಹುದೇ ದೋಷವಿದೆ. ಆಂಧ್ರದಲ್ಲಿ ಕಾಂಗ್ರೆಸ್, ಟಿ.ಡಿ.ಪಿ.ಗಳನ್ನು ಎದುರಿಸುತ್ತಿರುವಂತೆ ಅವರು ಇಲ್ಲಿ ತಮ್ಮ ರಾಜಕೀಯ 'ಅವಕಾಶ'ಕ್ಕಾಗಿ ತಾವು ಪ್ರವೇಶಿಸಿರುವ ಪ್ರದೇಶದಲ್ಲಿ ಪ್ರಬಲವಾಗಿರುವ ಕೋಮುವಾದಿ ರಾಜಕಾರಣವನ್ನು ಎದುರು ಹಾಕಿಕೊಂಡಿದ್ದಾರಷ್ಟೆ. ಅವರು ರಾಜ್ಯ ಮಟ್ಟದಲ್ಲೂ, ಅಖಿಲ ಭಾರತ ಮಟ್ಟದಲ್ಲಿಯೂ, ಮುಸ್ಲಿಂ ಮೂಲಭೂತವಾದಿ/ಉಗ್ರವಾದಿ ಸಂಘಟನೆಗಳೊಂದಿಗೆ ಸಂಪರ್ಕದಲ್ಲಿದ್ದಾರೆಂಬುದು ಈಗ ಗುಟ್ಟಾಗೇನೂ ಉಳಿದಿಲ್ಲ!

(ಸಕಾಲ, ಸೆಪ್ಟಂಬರ್, ೨೦೦೭)

೨. ಇಂಗ್ಲಿಷ್ ಜೊತೆಯಲ್ಲಿ ಇಂಟರ್‌ಫೇಸ್!

ಶುದ್ಧ ವಿದ್ವಾಂಸರು ಶುದ್ಧ ನಿರ್ವಾತದಲ್ಲೇ ಮಾತನಾಡುವುದು ಹೆಚ್ಚು. ನಮ್ಮ ಕೆ.ವಿ.ನಾರಾಯಣರು ಇದಕ್ಕೆ ಹೊರತೇನಲ್ಲ! (ಮಾತು-ಮಂಥನ: ಮಯೂರ, ಅಕ್ಟೋ., ೨೦೦೭). 'ಕನ್ನಡ ಭಾಷೆ ಸಾಯುತ್ತಿರುವ ಭಾಷೆ ಎಂದು ಹೇಳಲಾಗ್ತಿದೆಯಲ್ಲ?' ಎಂಬ ಆಶಾದೇವಿಯವರ ಪ್ರಶ್ನೆಗೆ ಉತ್ತರಿಸುತ್ತಾ, 'ಮುಂದಿನ ವರ್ಷಗಳಲ್ಲಿ ನಾವು ಕನ್ನಡದ ಜನ ಬೇರೆ ಬೇರೆ ಭಾಷೆ ಆಡಬಹುದು, ದ್ವಿಭಾಷಿಕರಾಗಬಹುದು ಅಥವಾ ಈಗಿರುವ ಕನ್ನಡವನ್ನು ಮಾತನಾಡದಿರಬಹುದು... ಇವತ್ತು ಇಂಗ್ಲಿಷ್‌ನ ಜೊತೆಯಲ್ಲಿ ಇಂಟರ್‌ಫೇಸ್ ಕ್ರಿಯೇಟ್ ಆಗ್ತಾ ಇದೆ' ಎಂದೆಲ್ಲ ಹೇಳುತ್ತಾರೆ. ಆದರೆ ಇದೆಲ್ಲ ಏಕೆ ಆಗ್ತಿದೆ, ಇದರ ಪರಿಣಾಮಗಳು ಏನು ಎಂಬ ಪ್ರಶ್ನೆಗಳ ಗೋಜಿಗೇ ಹೋಗದೆ; ಸರಾಗವಾಗಿ ಹಾಗೂ ಸುಲಭವಾಗಿ ಮಾತನಾಡುತ್ತಾ ಹೋಗಿದ್ದಾರೆ. ಭಾಷಾ ಮಾಧ್ಯಮ ಕುರಿತ ಪ್ರಶ್ನೆಗೆ ಉತ್ತರಿಸುತ್ತಾ, ಅದೊಂದು ವಿಶಾಲವಾದ ಸಾಮಾಜಿಕ-ರಾಜಕೀಯ ಪ್ರಶ್ನೆ ಎಂದೆನ್ನುವ ನಾರಾಯಣರ ಪ್ರಕಾರ, ಈ ಭಾಷಾ ಮಾಧ್ಯಮದ ಪ್ರಶ್ನೆಯನ್ನು ಭಾಷಾಶಾಸ್ತ್ರಜ್ಞರಾಗಲೀ, ಮನಃಶಾಸ್ತ್ರಜ್ಞರಾಗಲೀ ನಡೆಸಿರುವ ಅಧ್ಯಯನಗಳೂ ನಿರ್ಧರಿಸಲು ಸಾಧ್ಯವಿಲ್ಲ. ಹಾಗಾದರೆ, ನಾರಾಯಣ್ ನಮ್ಮ(ಅವರೂ ಸೇರಿದಂತೆ) ಭಾಷಾ ಶಾಸ್ತ್ರಜ್ಞರು ಹಾಗೂ ಮನಃಶಾಸ್ತ್ರಜ್ಞರ ಅಧ್ಯಯನಗಳೆಲ್ಲ ಸಾಮಾಜಿಕ-ರಾಜಕೀಯ ನಿರ್ವಾತದಲ್ಲೇ ನಡೆಯುತ್ತಿವೆ ಎಂದು ಹೇಳುತ್ತಿದ್ದಾರೆಯೇ? ಹಾಗೇನೂ ಇಲ್ಲ ಎಂದು ನಾರಾಯಣ್‌ಗೂ ಗೊತ್ತು. ಆದರೆ ಯಾವುದೋ ಒತ್ತಡದಲ್ಲಿ 'ಪೊಲಿಟಿಕಲಿ ಕರೆಕ್ಟ್' ಆದ ನಿರ್ಧಾರಕ್ಕೆ ಸಿಕ್ಕಿ ಹಾಕಿಕೊಂಡಿರುವ ಅವರು, ಅದಕ್ಕೆ ತಕ್ಕ ಸಮಜಾಯಿಷಿಗಳನ್ನು ಕೊಡಲು ತಮ್ಮೆಲ್ಲ ಬುದ್ಧಿ ಬಳಸತೊಡಗಿದ್ದಾರೆ.

ಇಂತಹುದೇ ಬೌದ್ಧಿಕ ಕಸರತ್ತಿನಿಂದಾಗಿ, 'ಶುದ್ಧ ಕನ್ನಡ' ಪರಿಕಲ್ಪನೆಯಿಂದ ಕೆಲವು ವರ್ಗಗಳು ಕನ್ನಡದಿಂದ ದೂರವಾಗುತ್ತಿವೆ ಎಂಬ ಹೊಸ ಸತ್ಯವನ್ನು ಕಂಡುಕೊಂಡಿರುವ

ನಾರಾಯಣ್, 'ಶುದ್ಧ ಇಂಗ್ಲಿಷ್' ಪರಿಕಲ್ಪನೆಯಿಂದ ತಲೆಮಾರು ತಲೆಮಾರುಗಳೇ ಉನ್ನತ ಶಿಕ್ಷಣದಿಂದ ದೂರವಾದುದನ್ನು ಮರೆತುಬಿಟ್ಟಂತೆ ತೋರುತ್ತದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಇಷ್ಟು ವಿಕ್ಷಿಪ್ತಗೊಳಿಸಬಾರದು! ಇಂಗ್ಲಿಷ್ ಜೊತೆಯಲ್ಲಿ ಇವರು ಹೇಳುವಂತಹ ಇಂಟರ್‌ಫೇಸ್ ಕ್ರಿಯೇಟಾಗುತ್ತಿರುವುದೂ ಒಂದು ರಾಜಕೀಯ ವಿದ್ಯಮಾನ ಎಂಬ ಅರಿವಿಲ್ಲದೆ ನಾರಾಯಣ್ ಅದನ್ನು ಶುದ್ಧ ಭಾಷಾಶಾಸ್ತ್ರೀಯ ವಿದ್ಯಮಾನವೆಂಬಂತೆ ರಾಜಕೀಯ ನಿರ್ವಾತದಲ್ಲಿ ಮಂಡಿಸಿದ್ದಾರೆ. ಇದು ಅವರೇ ಹೇಳಿದ 'ಭಾಷಾ ಕಲಿಕೆ ಹಾಗೂ ಮಾಧ್ಯಮದ ಪ್ರಶ್ನೆ ವಿಶಾಲವಾದ ಸಾಮಾಜಿಕ-ರಾಜಕೀಯ ಪ್ರಶ್ನೆ' ಎಂಬ ದೊಡ್ಡ ಸತ್ಯಕ್ಕೆ ಅಪಚಾರವೆಸುಗುವಂತಿದೆ.

ನಾರಾಯಣ್ ಪ್ರಕಾರ ಮುಂದಿನ ದಿನಗಳಲ್ಲಿ, ಈಗಾಗಲೇ ಬೆಂಗಳೂರಿನ ಮಲ್ಲೇಶ್ವರಂ ಬಸ್ಸುಗಳಲ್ಲಿ ಕೇಳತೊಡಗಿರುವ 'ಫ್ರಂಟ್‌ನಲ್ಲಿ ಸಫಿಷಿಯಂಟ್ ಸ್ಪೇಸಿದೆ, ಸ್ವಲ್ಪ ಮೂವ್ ಮಾಡೀಪ್ಪಾ!' ಎಂಬ ಕನ್ನಡವೇ ಎಲ್ಲ ಕಡೆ ರಾರಾಜಿಸಲಿದ್ದು, ಅದನ್ನು ನಾವೆಲ್ಲ ನಿರ್ವಿಣ್ಣರಾಗಿ ಒಪ್ಪಕೊಳ್ಳದೆ ವಿಧಿಯಿಲ್ಲ!

(ಮಯೂರ, ನವೆಂ., ೨೦೦೭)

೩. ಹಳ್ಳದಿಂದ ಹಳ್ಳಕ್ಕೆ!

ಗೆಳೆಯ ಜಿ.ರಾಜಶೇಖರ್ ಕಮ್ಯುನಿಸಂಗೆ ವಿದಾಯ ಹೇಳಿ ಬಹಳ ಕಾಲವೇ ಆದರೂ, ಅವರು ಇನ್ನೂ ಹೊಸ ಮತಾಂತರಿಯ ಆವೇಶದಲ್ಲಿಯೇ ಮತನಾಡುತ್ತಿರುವುದು ('ಮಾತು-ಮಂಥನ': ಮಯೂರ, ಮಾರ್ಚ್, ೨೦೦೮) ಕುತೂಹಲಕಾರಿಯಾಗಿದೆ. ಈ ಆವೇಶದಿಂದಾಗಿಯೇ ಜಾಗತೀಕರಣ, ಕೋಮುವಾದ ಹಾಗೂ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಕುರಿತ ಅವರ ಅನಿಸಿಕೆಗಳಲ್ಲಿ ಗೊಂದಲ ಹಾಗೂ ಅಪ್ರಾಮಾಣಿಕತೆ ಎದ್ದು ಕಾಣುವಂತಿದೆ. ಶಿಕ್ಷಣ ಮಾಧ್ಯಮದ ಪ್ರಶ್ನೆ ಸಾಮಾನ್ಯ ಶಿಕ್ಷಣದ ಪ್ರಶ್ನೆಯನ್ನೂ ಬಗೆಹರಿಸುವ ಅಪಾರ ಸಾಧ್ಯತೆಗಳನ್ನು ಒಳಗೊಂಡಿದೆ ಎಂಬ ಪರಿವೆಯೇ ಇಲ್ಲದಂತೆ; ಮೊದಲು ಸಾಮಾನ್ಯ ಶಿಕ್ಷಣಕ್ಕೆ ಪ್ರಯತ್ನಿಸೋಣ, ನಂತರ ಬೇಕಾದರೆ ಶಿಕ್ಷಣ ಮಾಧ್ಯಮದ ಪ್ರಶ್ನೆಯನ್ನು ಎತ್ತಿಕೊಳ್ಳೋಣ ಎಂಬ ಅವರ ನಿಲುವೇ ಇದಕ್ಕೊಂದು ಉದಾಹರಣೆ. ಈ ಹಿಂದೆ ಶಿವರಾಮ ಕಾರಂತರನ್ನು ರಾಜಶೇಖರ್ ಕಮ್ಯುನಿಸ್ಟರಾಗಿ ಸಂದರ್ಶಿಸಿದ್ದಾಗ, ಕಾರಂತರು ಅವರನ್ನು ಕುರಿತು, 'ನೀವು ಒಂದು ಹಳ್ಳ ಬೇಡವೆಂದು ಇನ್ನೊಂದು ಹಳ್ಳಕ್ಕೆ ಬಿದ್ದೀದ್ದೀರಷ್ಟೆ....' ಎಂಬರ್ಥದ ಮಾತನ್ನಾಡಿದ್ದುದು ಈಗೇಕೋ ನೆನಪಾಗುತ್ತಿದೆ!

(ಮಯೂರ, ಏಪ್ರಿಲ್ ೨೦೦೮)

೪. ಸಮಸ್ಯೆಯ ಸರಳೀಕರಣ

ವಿವೇಕ ಶಾನಭಾಗರು ತಮ್ಮ ಸಂದರ್ಶನದಲ್ಲಿ ('ಮಾತು-ಮಂಥನ': ಮಯೂರ, ಏಪ್ರಿಲ್, ೨೦೦೮) ಜಾಗತೀಕರಣದ ಬಗ್ಗೆ ಮಾತನಾಡುತ್ತಾ, ಅದನ್ನು ಕುರಿತಂತೆ ವೈವಿಧ್ಯಮಯ ಪ್ರತಿಸ್ಪಂದನಗಳಿವೆ ಎಂಬುದನ್ನೇ ಮರೆತಂತೆ, ಜಾಗತೀಕರಣವನ್ನು ಆಮೂಲಾಗ್ರವಾಗಿ ವಿರೋಧಿಸುವವರು ಎಂದು ಹೇಳಲಾಗುವವರನ್ನು ಮಾತ್ರ ಆರಿಸಿಕೊಂಡು ನೀಡಿರುವ ಪ್ರತಿಕ್ರಿಯೆ ಸಮಸ್ಯೆಯನ್ನು ಸರಳೀಕರಿಸಿದೆಯಷ್ಟೆ. ಹಾಗಾಗಿಯೇ ಅವರು ವಿದ್ಯುತ್ ಬಳಸುವ ನಾವು ತದಡಿ ವಿದ್ಯುತ್ ಸ್ಥಾವರ ಬೇಡ ಎಂದಾಗ ಅದು ವಿರೋಧಾಭಾಸವಾಗಿ ಕಾಣುತ್ತದೆ ಎಂದಿದ್ದಾರೆ. ಹಾಗೇನೂ ಆಗುವ ಅಗತ್ಯವಿಲ್ಲ.

ಜಾಗತೀಕರಣದ ವಿರೋಧವೆಂದರೆ, ಆಧುನೀಕರಣದ–ಅಂದರೆ, ಬದುಕಿನಲ್ಲಿ ಒಂದಿಷ್ಟು ಆರಾಮ ವಿರಾಮಗಳನ್ನು ಒದಗಿಸುವ ಸಾಧನ ಸೌಲಭ್ಯಗಳ–ವಿರೋಧವೆಂದೇನೂ ಆಗಬೇಕಿಲ್ಲ. ವಿರೋಧವಿರುವುದು ಆಧುನೀಕರಣವು ಜಾಗತೀಕರಣದ ವೇಷದಲ್ಲಿ ಮಾಡುತ್ತಿರುವ ಮನುಷ್ಯನ ಔಚಿತ್ಯ ಪ್ರಜ್ಞೆ ಮತ್ತು ಸಾಮನ್ಯ ವಿವೇಕಗಳನ್ನು ಬೆಳೆಸುವ ಸಮೂಹ ಚಳುವಳಿ ಹಾಗೂ ಸಂಘಟನೆಗಳನ್ನು ಅಪ್ರಸ್ತುತಗೊಳಿಸುತ್ತಿರುವ ಅದರ ರಾಜಕೀಯದ ಬಗ್ಗೆ. ಹಾಗಾಗಿ ಜಾಗತೀಕರಣದ ರಾಜಕಾರಣವನ್ನು ವಿರೋಧಿಸುವುದು ಎಂದರೆ, ಮನುಷ್ಯನ ಸುಖ ಸಂಪತ್ತುಗಳಿಗೆ ಒಂದು ಸಾಮಾಜಿಕ (ಸಂಹಿತೆಯ) ಮಿತಿ ಇದ್ದರೆ ಮಾತ್ರ ಅವು ಸುಖ ಸಂಪತ್ತೆನಿಸಿಕೊಳ್ಳಬಲ್ಲವು ಎಂದು ಎಚ್ಚರಿಸುವ ರಾಜಕಾರಣವನ್ನು ಕಟ್ಟುವುದೂ ಆಗಿದೆ. ಜಾಗತೀಕರಣವನ್ನು ಕುರಿತ ವಿರೋಧವನ್ನು ಈ ನೆಲೆಯಲ್ಲಿ ಗ್ರಹಿಸದರೆ ವಿರೋಧಾಭಾಸಗಳೇನೂ ಕಾಣಲಾರದು ಎಂದು ನಾನು ಭಾವಿಸಿದ್ದೇನೆ.

(ಮಯೂರ, ಮೇ ೨೦೦೮)

೫. ಸಂಸ್ಕೃತಿ ಎಂಬುದು ಸಿದ್ಧವಸ್ತುವಲ್ಲ!

ಶ್ರೀಯುತ ರಹಮತ್ ತರೀಕೆರೆಯವರು ಮಾಂಸಾಹಾರವನ್ನು ಸಮರ್ಥಿಸುವ ಉತ್ಸಾಹದಲ್ಲಿ (ಈಗ ಅದರ ಅಗತ್ಯವೇನಿತ್ತೋ ತಿಳಿಯದು!) ಪ್ರಾಣಿ ಬಲಿ ಸಂಸ್ಕೃತಿಯಯನ್ನೂ ಸಮರ್ಥಿಸಿರುವುದು ('ಮಾತಿನ ಹಂಗು': ಸಂವಾದ, ಏಪ್ರಿಲ್, ೨೦೦೮) ನನಗೆ ಆಶ್ಚರ್ಯ ತಂದಿದೆ. ತಮ್ಮ ಈ ವಾದಕ್ಕೆ ಪೂರಕವಾಗಿ ಅವರು ಬುದ್ಧ ಪ್ರಾಣಿ ಬಲಿಯನ್ನು ಬೇಸಾಯಕ್ಕೆ ದನಗಳ ಕೊರತೆಯುಂಟಾದುದಕ್ಕಾಗಿ ಬೇಡವೆಂದನೆಂದು ಹೇಳಿದ್ದಾರೆ. ಇದು ಒರಟು ಮಾರ್ಕ್ಸ್‌ವಾದಿಗಳ ಆವಿಷ್ಕಾರವಲ್ಲದೆ ಮತ್ತೇನಲ್ಲ. ಆದರೆ ನನಗೆ ತಿಳಿದಂತೆ (ಅಂದರೆ ನನ್ನ ಈವರೆಗಿನ ಬೌದ್ಧ ಸಾಹಿತ್ಯದ ಓದಿನ ಪ್ರಕಾರ) ಬುದ್ಧ ಪ್ರಾಣಿ ಬಲಿಯನ್ನು ಬೇಡವೆಂದದ್ದು ತನ್ನ ವೈಚಾರಿಕತೆಯ ನೆಲೆಯಲ್ಲಿ-ಅದೊಂದು ಮೌಢ್ಯ ಎಂದು-ಮತ್ತು ತನ್ನ ಧರ್ಮದ ಮೂಲ ನೆಲೆಯಾದ 'ಕರುಣಾ'ದ ಭಾಗವಾಗಿ. ಅಂಬೇಡ್ಕರ್ ಕೂಡಾ ಬುದ್ಧ ಧರ್ಮ ಕುರಿತ ತಮ್ಮ ಪುಸ್ತಕದಲ್ಲಿ ಇದನ್ನು ಹೇಳಿದ್ದಾರೆ.

ಬುದ್ಧ, ರಹಮತ್ ಅವರು ಹೇಳಿದಂತೆ ತನ್ನ ಶಿಷ್ಯರಿಗೆ ಮಾಂಸಾಹಾರವನ್ನೇನೂ ನಿಷೇಧಿಸಿರಲಿಲ್ಲ, ನಿಜ. ಆದರೆ ಇದನ್ನು ಬುದ್ಧ ಮಾಂಸಾಹಾರದ ಸಮರ್ಥಕ ಎಂದೇನೂ ಅರ್ಥ ಮಾಡಿಕೊಳ್ಳುವ ಅಗತ್ಯವಿಲ್ಲ. ಏಕೆಂದರೆ ಆತ ತನ್ನ ಶಿಷ್ಯರಿಗೆ ಆಹಾರಕ್ಕಾಗಿ ಮಾಂಸ ಬೇಡದಂತೆ ಸೂಚಿಸಿದ್ದ. ಅಂದರೆ ಅವನು ಹೇಳಿದ್ದು, ಭಿಕ್ಷೆಯಯಲ್ಲಿ ಏನು ಬೀಳುತ್ತದೋ ಅದನ್ನು ತಿಂದು ಬದುಕಬೇಕೆಂದು. ಇದು ಬುದ್ಧನ ಮಧ್ಯಮ ಮಾರ್ಗಕ್ಕೆ ತಕ್ಕುನಾಗಿಯೇ ಇತ್ತು.

ವೈಚಾರಿಕ ಆಂದೋಲನಗಳಿಂದಾಗಿ ಈವರೆಗೆ ಸ್ವಲ್ಪ ನಿಯಂತ್ರಣದಲ್ಲಿದ್ದ (ಖಾಸಗಿಯಾಗಿ ನಡೆಯುತ್ತಿದ್ದ) ಪ್ರಾಣಿ ಬಲಿ ಈಗ ಮುಕ್ತ ಮಾರುಕಟ್ಟೆ ನೀತಿ ಸೃಷ್ಟಿಸಿದ ಮಾನಸಿಕ ಪರಿಣಾಮವೋ ಎಂಬಂತೆ, ಹಲವಾರು ಕಡೆ ಎಗ್ಗಿಲ್ಲದಂತೆ ಬಹಿರಂಗವಾಗಿ–ಕೆಲವೆಡೆ, ಇಡೀ ಊರಿನ ರಸ್ತೆಗಳೆಲ್ಲ ರಕ್ತಸಿಕ್ತವಾಗುವಷ್ಟರ ಮಟ್ಟಿಗೆ–ಸಾಮೂಹಿಕ ಸನ್ನಿ ರೂಪದಲ್ಲಿ ನಡೆಯುತ್ತಿದೆ. ಇತ್ತೀಚೆಗೆ ಟಿ.ವಿ.ವಾಹಿನಿಯೊಂದರಲ್ಲಿ ಕಂಡಂತೆ, ಜಾತ್ರೆಯೊಂದರಲ್ಲಿ–ಬಹುಶಃ ಮೈಲಾರ ಲಿಂಗನ ಜಾತ್ರೆ-ನೂರಾರು ಎಳೆಯ ಕುರಿಮರಿಗಳನ್ನು ತೇರಿಗೆ ದವನ-ಬಾಳೆ ಹಣ್ಣು ಎಸೆದಂತೆ ಎಸೆಯುತ್ತಿದ್ದ ದೃಶ್ಯ ಭಯಾನಕವಾಗಿತ್ತು. ಈ ಸಂದರ್ಭದಲ್ಲಿ ನಮ್ಮ ಸರ್ವೋಚ್ಛ ನ್ಯಾಯಲಯದ ಮಾಜಿ ನ್ಯಾಯಾಧೀಶರೊಬ್ಬರು ಭಕ್ತರಾಗಿ ಹಾಜರಿದ್ದುದು, ಪರಿಸ್ಥಿತಿ ಎಲ್ಲಿಗೆ ಬಂದು ಮುಟ್ಟಿದೆ ಎಂಬುದನ್ನು ಸೂಚಿಸುವಂತಿತ್ತು!

ರಹಮತ್ ಬಲಿ ಮತ್ತು ಮಾಂಸಾಹಾರವನ್ನು ಒಟ್ಟಿಗೆ ಜೋಡಿಸಿ ವಿಶ್ಲೇಷಣೆ ಮಾಡುತ್ತಾ, ಇವನ್ನು ಹಿಂಸೆ, ಅಪವಿತ್ರ ಎನ್ನುವವರು ನಮ್ಮ ಸಂಸ್ಕೃತಿಗೆ ಬಾಹಿರರು ಎಂದು ಘೋಷಿಸುವಾಗ ಅವರ ಮನಸ್ಸಿನಲ್ಲಿ ಸಂಸ್ಕೃತಿ ಎಂದರೆ ಸಿದ್ಧವಸ್ತು ಎಂಬ ಅರ್ಥವಿದ್ದಂತಿದೆ. ಇದು ನನ್ನಲ್ಲಿ ಆತಂಕ ಹುಟ್ಟಿಸಿದೆ. ಅದಕ್ಕಾಗಿ ಈ ಪ್ರತಿಕ್ರಿಯೆ.

ಇನ್ನು ರಹಮತ್ ಅವರು ಈ ಹಿಂದಿನ ಅಂಕಣದಲ್ಲಿ (ಮಾರ್ಚ್, ೨೦೦೮) ರೈಲ್ವೇ ಬಗ್ಗೆ ಬರೆಯುತ್ತಾ, ಲಾಲೂ ಪ್ರಸಾದ್ ಯಾದವರನ್ನು ಲೋಹಿಯಾ ಅವರ ನೇರ ಶಿಷ್ಯ ಎಂದು ಗುರುತಿಸಿದ್ದಾರೆ. ವಾಸ್ತವವಾಗಿ ಲೋಹಿಯಾ ನಿಧನರಾದಾಗ ಲಾಲೂ ಇನ್ನೂ ಶಾಲಾ ಬಾಲಕನಾಗಿದ್ದಿರಬೇಕು! ಲಾಲೂ ಮೂಲತಃ ಎಪ್ಪತ್ತರ ದಶಕದ ಜೆ.ಪಿ. ಚಳುವಳಿಯಲ್ಲಿ ಆಗಿನ ಸಮಾಜವಾದಿ ಯುವಜನ ಗುಂಪಿನೊಂದಿಗೆ ಗುರುತಿಸಿಕೊಂಡು ಭಾಗವಹಿಸಿ, ಕಾಲಕ್ರಮೇಣ (ಎಂಭತ್ತರ ದಶಕದ ಕೊನೆಯಲ್ಲಿ) ಬೆಳಕಿಗೆ ಬಂದ ನಾಯಕ.

ಇದು ಕೇವಲ ಮಾಹಿತಿಗಾಗಿ.

(ಸಂವಾದ, ಮೇ ೨೦೦೮)

೬. ಎಂ.ಕೆ.ಗಾಂಧಿಯವರ ರಾಮರಾಜ್ಯ!

ತಮ್ಮ ಪತ್ರಿಕೆಯ ಜೂನ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಬಿ.ಎಂ.ಪುಟ್ಟಯ್ಯ ಅವರ 'ದಲಿತ ಹೋರಾಟಕ್ಕೆ ನಿದ್ದೆ ಮಾತ್ರೆ' ಎಂಬ ಲೇಖನ ಓದಿದೆ. ಅದರಲ್ಲಿ ಅವರು ಬರೆದಿರುವ

ಬಹಳಷ್ಟು ವಿಚಾರಗಳು ನಿಜವೇ ಆಗಿವೆ. ಆದರೆ ಲೇಖನದ ಕೊನೆಯಲ್ಲಿ ಅವರು ಪ್ರಸ್ತಾಪಿಸುವ ಎಂ.ಕೆ.ಗಾಂಧಿಯವರ(ಇವರು ಮಹಾತ್ಮ ಗಾಂಧಿಯವರೇ ಆಗಿರಬಹುದೆಂದು ನನ್ನಂತಹ ಪಾಮರರ ನಂಬಿಕೆ!) ಊಳಿಗಮಾನ್ಯಶಾಹಿ ಶೋಷಣೆಯ ರಾಮರಾಜ್ಯದ ಕನಸು, ನೆಹರೂ ಅವರ ಬಂಡವಾಳಶಾಹಿ ಸಮಾಜವಾದ ಇತ್ಯಾದಿಗಳನ್ನು ಸ್ವಲ್ಪ ವಿವರಿಸಿದ್ದರೆ ಚೆನ್ನಾಗಿತ್ತು. ಏಕೆಂದರೆ, ಗಾಂಧಿ ಊಳಿಗಮಾನ್ಯಶಾಹಿ ಶೋಷಣೆಯನ್ನು ಬೆಂಬಲಿಸುತ್ತಿದ್ದರು ಎಂದು ಹೀಗೆ ಸರಳವಾಗಿ ಹೇಳುವುದು, ಒಂದು ದೊಡ್ಡ ಆಪಾದನೆಯ ಮಾತಾಗುತ್ತದೆಯೇ ಹೊರತು ವಿಚಾರವೆನ್ನಿಸಿಕೊಳ್ಳುವುದಿಲ್ಲ. ಹಾಗೇ ಬಂಡವಾಳಶಾಹಿ ಸಮಾಜವಾದವೆನ್ನುವುದು ಪುಟ್ಟಯ್ಯನವರ ಬಾಯಿಂದಲೇ ಕೇಳುತ್ತಿರುವ ಒಂದು ಹಚ್ಚ ಹೊಸ ಪರಿಕಲ್ಪನೆಯಾಗಿದೆ! ಹಾಗಾಗಿ ಅದೂ ವಿವರಣೆಯನ್ನು ಬೇಡುತ್ತದೆ.

ಇನ್ನು ಅಂಬೇಡ್ಕರ್ ಭೂಮಿ ಮತ್ತು ಸಂಪತ್ತನ್ನು ರಾಷ್ಟ್ರೀಕರಿಸಬಯಸಿದ್ದರು ಎಂದು ಪುಟ್ಟಯ್ಯ ಹೇಳಿದ್ದಾರೆ. ಅಂಬೇಡ್ಕರ್ ಸಾಮೂಹಿಕ ಕೃಷಿಯನ್ನು ಪ್ರತಿಪಾದಿಸಿದ್ದರೆಂದು ಬಲ್ಲೆ. ಹಾಗಾಗಿ ಉಳಿದ ವಿಷಯಗಳನ್ನು ಅವರು ಎಲ್ಲಿ, ಹೇಗೆ ಪ್ರತಿಪಾದಿಸಿದ್ದರು ಎಂಬುದನ್ನು ಪುಟ್ಟಯ್ಯನವರು ಸೂಚಿಸಿದರೆ ಒಳಿತು. ಓದಿಕೊಳ್ಳಲು ನಮಗೆ ಸಹಾಯವಾಗುವುದು. ದಯವಿಟ್ಟು ಸಂಪಾದಕರು ಲೇಖಕರಿಂದ ಉತ್ತರ ತರಿಸಿ ಪ್ರಕಟಿಸಬೇಕೆಂದು ಕೋರುತ್ತೇನೆ.

(ಉತ್ತರವೇನೂ ಪ್ರಕಟವಾಗಲಿಲ್ಲ!) –ಲೇ.

(ಜನಪದ ವಿಚಾರ, ಜುಲೈ, ೨೦೦೮)

೭. ಇದು ಅಪಾಯದ ಸೂಚನೆ!

ಕನ್ನಡ ಮಾಧ್ಯಮ ಕುರಿತ ಹೈಕೋರ್ಟ್ ತೀರ್ಪು ಅಂತೂ ಹೊರಬಂದಿದೆ. ಇದು ಸಂಪೂರ್ಣವಾಗಿ ಅನಿರೀಕ್ಷಿತವೆನಿಸುವ ತೀರ್ಪೇನಲ್ಲ. ಏಕೆಂದರೆ ಹೊಸ ಆರ್ಥಿಕ ನೀತಿಯು ಮಾರುಕಟ್ಟೆಗಳಲ್ಲಿ ತಂದು ಒಟ್ಟಿರುವ ಹೊಸ ಸಂಪತ್ತಿನ ಮರುಳು, ನ್ಯಾಯಾಲಯಗಳಿಗೂ ಆವರಿಸಿರುವುದು ಈ ತೀರ್ಪಿನಿಂದ ಗೊತ್ತಾಗುವಂತಿದೆ. ಹಾಗಾಗಿಯೇ ಅದು ಇಂಗ್ಲಿಷ್ ಇಲ್ಲದೆ 'ಪ್ರಗತಿ' ಸಾಧ್ಯವಿಲ್ಲವೆಂಬ ಹಳೆಯ ಅರ್ಧ ಸತ್ಯವನ್ನೇ ಹೊಸ ಹುರುಪಿನಿಂದ ಪೂರ್ಣ ಒಪ್ಪಿಕೊಳ್ಳುತ್ತಾ, ಕನ್ನಡ ಮಾಧ್ಯಮ ಜಾರಿಗೆ ಸಂಬಂಧಿಸಿದ ಸರ್ಕಾರಿ ಆಜ್ಞೆಯನ್ನು ಅನೂರ್ಜಿತಗೊಳಿಸಿದೆ. ಬಹಳ ಹಿಂದಿನಿಂದಲೂ ಎಲ್ಲ ಶಾಲೆಗಳಲ್ಲಿ–ಈಗ ಒಂದನೇ ತರಗತಿಯಿಂದಲೇ–ಎಲ್ಲ ಮಕ್ಕಳಿಗೆ ಇಂಗ್ಲಿಷ್ ಕಲಿಸಲಾಗುತ್ತಿದೆ ಎಂಬ ಸಂಗತಿಯನ್ನೇ ಗಮನಕ್ಕೆ ತಂದುಕೊಳ್ಳದೆ, ಇಂಗ್ಲಿಷ್ ಪರವಾಗಿ ವಕ್ತಾರಿಕೆ ಮಾಡಿರುವ ಈ ತೀರ್ಪು, ಮಕ್ಕಳ ಕಲಿಕೆಯ ಬಗೆಗಿರುವ ತಾತ್ವಿಕತೆಯನ್ನೇ ಸಂಪೂರ್ಣವಾಗಿ ತಿರಸ್ಕರಿಸುವ ಮೂಲಕ ಮುಂದಿನ ದಿನಗಳು ಹೇಗೆ ಕೇವಲ ಮಾರುಕಟ್ಟೆ ವಾಸ್ತವತೆಯ ದಿನಗಳು ಮಾತ್ರವಾಗಿರುತ್ತವೆ ಮತ್ತು ಅದಕ್ಕೆ ನ್ಯಾಯಾಂಗದ ಬೆಂಬಲವೂ ಉಂಟು ಎಂಬ ಅಪಾಯದ ಸೂಚನೆಯನ್ನೂ ನೀಡಿದೆ!

ಶಿಕ್ಷಣ ಮಾಧ್ಯಮ ಸ್ವಾತಂತ್ರ್ಯವೂ ಅಭಿವ್ಯಕ್ತಿ ಸ್ವಾತಂತ್ರ್ಯದ ಅವಿಭಾಜ್ಯ ಅಂಗವೆಂದು

ಉದಾರವಾಗಿ ಅರ್ಥೈಸಿರುವ ಕೋರ್ಟು, ಕರ್ನಾಟಕದ ಶಾಲೆಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸುವಂತೆ ಮಾಡಿರುವ ತನ್ನದೇ ಶಿಫಾರ್ಸನ್ನು ಹೇಗೆ ಸಮರ್ಥಿಸಿಕೊಳ್ಳುವುದೋ ತಿಳಿಯದು! ಏಕೆಂದರೆ, ಕೋರ್ಟಿನ ಈ ಅರ್ಥೈಸುವಿಕೆಯ ಪ್ರಕಾರ, ತಮ್ಮ ಮಕ್ಕಳಿಗೆ ಯಾವುದೇ ಭಾಷೆಯನ್ನು ಕಲಿಸದಿರುವ ಸ್ವಾತಂತ್ರ್ಯವನ್ನೂ ಪೋಷಕರು ಹೊಂದಿರುತ್ತಾರೆ ಅಲ್ಲವೆ? ಕೋರ್ಟು ಈಗ ಮಾನ್ಯ ಮಾಡಿರುವ 'ಪ್ರಗತಿ'ಯ ಹೆಸರಲ್ಲೇ ಈ ಸ್ವಾತಂತ್ರ್ಯವನ್ನೂ ಒತ್ತಾಯಿಸಿ–ಮಕ್ಕಳ ಮೇಲೆ ಒಂದು ಭಾಷೆಯಾಗಿಯೂ ಕನ್ನಡವನ್ನು ಹೇರಬಾರದೆಂದು-ಪೋಷಕರು ಅಥವಾ ಸಾಹುಕಾರ ಶಾಲೆಗಳ ದಲ್ಲಾಳಿಗಳ್ಯಾರಾದರೂ ಕೋರ್ಟಿನ ಮೊರೆ ಹೋದರೆ, ಈ ಕೋರ್ಟು ಏನು ಹೇಳುವುದು? ಸಂವಿಧಾನ ಪ್ರದಾನ ಮಾಡಿರುವ ಸ್ವಾತಂತ್ರ್ಯದ ಅರ್ಥವನ್ನು, ರಾಷ್ಟ್ರೀಯ ವಿವೇಕದ ಸಾಂಸ್ಕೃತಿಕ ಗಡಿಗಳನ್ನು ಧಿಕ್ಕರಿಸಿ ವಿಸ್ತರಿಸಲಾಗದೆಂಬ ಅರಿವಿನಿಂದಲೇ ಸುಪ್ರೀಂ ಕೋರ್ಟ್ ಐದನೇ ತರಗತಿಯವರೆಗಾದರೂ ಮಾತೃ/ಪ್ರಾದೇಶಿಕ ಭಾಷಾ ಮಾಧ್ಯಮ ಶಿಕ್ಷಣವನ್ನು ಜಾರಿಗೆ ತರುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ದಯಪಾಲಿಸಿತ್ತು. ಇದಾದ ಒಂದೂವರೆ ದಶಕದ ನಂತರ ನಮ್ಮ ಹೈಕೋರ್ಟು ಬದಲಾದ (ರಾಜಕೀಯ) 'ವಾಸ್ತವ'ಕ್ಕೆ ತಕ್ಕಂತೆ ತಾನೂ ಬದಲಾಗುವ 'ಆಧುನಿಕತೆ'ಯನ್ನು ಪ್ರದರ್ಶಿಸುತ್ತಾ, ಸುಪ್ರೀಂ ಕೋರ್ಟಿನ ತೀರ್ಪಿನ ಹಿಂದಿದ್ದ ರಾಷ್ಟ್ರೀಯ ಭಾವನೆಯೇ ಅಸಂಗತವೆನ್ನುವಂತಹ ತೀರ್ಪು ನೀಡಿದೆ!

ಈ ತೀರ್ಪಿನ ಹಿಂದೆ ಅಂತಹ ಜಟಿಲ ವಿಷಯಗಳ ನಿರ್ವಹಣೆಯೇನೂ ಇದ್ದಂತೆ ತೋರುವುದಿಲ್ಲ. ಅದು ಸರಳವಾಗಿ, ನೇರವಾಗಿದೆ! ಇಂತಹ ಸರಳ, ನೇರ ತೀರ್ಪನ್ನು ಬರೆಯಲು ನ್ಯಾಯಾಧೀಶರಿಗೆ ಎರಡು ವರ್ಷಗಳು ಬೇಕಾಯಿತು ಮತ್ತು ಅದು ಈ ಪ್ರಕರಣವನ್ನು ಆಲಿಸಿದ ನ್ಯಾಯಾಧೀಶರಲ್ಲೊಬ್ಬರಾಗಿದ್ದ ಮುಖ್ಯ ನ್ಯಾಯಾಧೀಶರು ಈಗ ಸುಪ್ರೀಂ ಕೋರ್ಟಿಗೆ ನ್ಯಾಯಾಧೀಶರಾಗಿ ಭಡ್ತಿ ಹೊಂದಿ ಹೋಗಬೇಕಾದ ಮುನ್ನ ನಿಕಾಲೆ ಮಾಡಬೇಕಾದ ಅನಿವಾರ್ಯತೆಯಲ್ಲಷ್ಟೇ ಪ್ರಕಟವಾಗಿದೆ ಎಂಬ ಸಂಗತಿಗಳು, ಈ ಬಗ್ಗೆ ಇನ್ನಷ್ಟು ಪ್ರಶ್ನೆಗಳನ್ನು ಎತ್ತಬಲ್ಲವು. ಹಾಗಾಗಿ, ಸರ್ಕಾರ ತಾನು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿಕೊಂಡಿದ್ದಂತೆ ನಿಜವಾಗಿ ಕನ್ನಡ ಅಭಿವೃದ್ಧಿಗೆ ಬದ್ಧವಾಗಿದ್ದರೆ, ನ್ಯಾ॥ ರಾಮಾ ಜೋಯಿಸರೂ ಸೇರಿದಂತೆ ಕನ್ನಡಕ್ಕೆ ಸಾಂಸ್ಕೃತಿಕ ದೃಷ್ಟಿಯಿಂದ ಬದ್ಧವಾದ ಕಾನೂನು ತಜ್ಞರು, ಶಿಕ್ಷಣ ತಜ್ಞರು ಮತ್ತು ಕನ್ನಡ ಬುದ್ಧಿಜೀವಿಗಳು ಹಾಗೂ ಕಾರ್ಯಕರ್ತರೊಂದಿಗೆ ವ್ಯವಧಾನದಲ್ಲಿ ವ್ಯಾಪಕ ಚರ್ಚೆ ನಡೆಸಿ, ಈ ತೀರ್ಪಿಗೆ ಕೂಡಲೇ ಸುಪ್ರೀಂ ಕೋರ್ಟಿನಿಂದ ತಡೆಯಾಜ್ಞೆ ಪಡೆಯುವ ಏರ್ಪಾಡು ಮಾಡಬೇಕು.

(ವಿಕ್ರಾಂತ ಕರ್ನಾಟಕ, ಜುಲೈ ೧೮, ೨೦೦೮)

೮. ಭಾಷೆ ಎಂಬುದು ಸ್ವತ್ತೇ?

ಕೆ.ವಿ. ನಾರಾಯಣರ 'ಭಾಷೆಯ ಸ್ವತ್ತು' ('ಭಾಷೆಯ ಸುತ್ತಮುತ್ತ': ಮಯೂರ, ಜನವರಿ ೨೦೦೯) ಲೇಖನ ಕುತೂಹಲಕಾರಿಯಾಗಿದ್ದರೂ, ಅನಗತ್ಯವಾಗಿ ಅನೇಕ

ಗೊಂದಲಗಳನ್ನೂ ಸೃಷ್ಟಿಸಿದೆ ಎನ್ನಿಸುತ್ತದೆ. ಮೊದಲಾಗಿ ಭಾಷೆಯನ್ನು 'ಸ್ವತ್ತು' ಎಂದು ಭೌತಿಕ ನೆಲೆಯಲ್ಲಿ ಪರಿಗಣಿಸುವುದೇ ಈ ಎಲ್ಲ ಗೊಂದಲಗಳಿಗೆ ಕಾರಣವಾಗಿರುವಂತಿದೆ. ಭಾಷೆ ಮನುಷ್ಯನ ಒಂದು ಅಂತರ್ಗತ ಅಮೂರ್ತ 'ಶಕ್ತಿ'ಯಾಗಿದ್ದು, ತನ್ನ ಹೊರಚಾಚುಗಳಲ್ಲಿ ಮಾತ್ರ ಮೂರ್ತ ರೂಪ ಪಡೆಯುತ್ತದೆ ಮತ್ತು ಹಾಗೆ ಮೂರ್ತರೂಪ ಪಡೆಯುವಾಗ ನಿರ್ಮಿಸಿಕೊಳ್ಳುವ ಸಾಮಾಜಿಕತೆಯಲ್ಲಿ ಮಾತ್ರ ಅದು 'ಸ್ವತ್ತು' ಎನಿಸಿಕೊಳ್ಳುತ್ತದೆ. (ಅಂದರೆ, ಭಾಷೆಗೆ ಅದರ 'ಸಾಮಾಜಿಕತೆ'ಗೆ ಹೊರತಾದ ಒಂದು ನಿಯೋಗವೂ ಇದೆ). ಹಾಗಾಗಿ ಕೆ.ವಿ.ನಾರಾಯಣರು ಯಾರ ಭಾಷಾ ಹಕ್ಕುಗಳನ್ನು ಈ ಅಂಕಣದಲ್ಲಿ ಎತ್ತಿ ಹಿಡಿಯುವಂತೆ ತೋರುತ್ತಿದೆಯೋ, ಆ ವಲಸೆಯ ಜನರಾಗಲೀ ಅಥವಾ ಭಾಷೆಯೊಂದನ್ನು ವಿವಿಧ ರೀತಿಗಳಲ್ಲಿ 'ಆಡುವ' (ನಾರಾಯಣರು ಹೇಳುವಂತೆ 'ಬಳಸುವ' ಅಲ್ಲ) 'ಅಂಚಿ'ನ ಜನರಾಗಲೀ, ಅವರವರ ಭಾಷೆಗಳನ್ನು ಸಾರ್ವಜನಿಕವಾಗಿ 'ಬಳಸುವ' ಅವಕಾಶಗಳು ಆಯಾ ಕಾಲ-ದೇಶಗಳ ಸಾಮಾಜಿಕ ಸಂದರ್ಭದ ರಾಜಕಾರಣವನ್ನು ಅವಲಂಬಿಸಿರುವುದು ಅನಿವಾರ್ಯವೇ ಆಗಿದೆ.

ಇಂದು ನಾವು ಪ್ರಜಾಸತ್ತಾತ್ಮಕ ರಾಜಕಾರಣವನ್ನು ಒಪ್ಪಿಕೊಂಡಿರುವಾಗ, ಅದಕ್ಕೆ ತಕ್ಕಂತೆ ಭಾಷೆಯ ಸಾರ್ವಜನಿಕ ಬಳಕೆಯ ಸ್ವರೂಪವನ್ನೂ ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿಯೇ ನಿರ್ವಹಿಸಬೇಕಾಗುತ್ತದೆ. ಪ್ರಜಾಸತ್ತೆ ಎಂದರೆ, ಅದರಲ್ಲಿ–ಸದ್ಯದ ಪರಿಸ್ಥಿತಿಯಲ್ಲಿ ತಾಂತ್ರಿಕವಾಗಿಯಾದರೂ-ಎಲ್ಲರ, ಇವರು ಹೇಳುವ 'ಭಾಷಾ ಅನ್ಯಾಯ'ಕ್ಕೆ ಒಳಗಾದವರೂ ಸೇರಿದಂತೆ, ಪಾಲೂ ಇರುತ್ತದೆ. ಆದುದರಿಂದ ಅದರ ನಿರ್ಧಾರಗಳನ್ನು 'ಕೆಲವರ ನಿರ್ಧಾರ' ಎಂದು ಹೇಳುವುದು ಅಗ್ಗದ ಜನಪ್ರಿಯತೆಯ ಅಥವಾ ಬೇಜವಾಬ್ದಾರಿ ಸಾಂಸ್ಕೃತಿಕ ರಾಜಕಾರಣ ಮಾತ್ರ ಎನಿಸಿಕೊಳ್ಳುತ್ತದೆ. ಇಂತಹ one-upmanshipನ್ನು ಇತ್ತೀಚೆಗೆ ಕೆಲವರು 'ಆಧುನಿಕೋತ್ತರವಾದ' ಎಂದೂ ಗೌರವಯುತವಾಗಿ ಕರೆಯುವ ಪರಿಪಾಠವೂ ಉಂಟು! ಇವರು ಕನಿಷ್ಠ ತಾವು ಅನ್ಯಾಯಕ್ಕೆ ಒಳಗಾಗಿರುವವರೆಂದು ಭಾವಿಸುವ ಜನವರ್ಗಗಳಿಗೆ ನ್ಯಾಯ ಖಚಿತಗೊಳಿಸುವ ಪ್ರಜಾಸತ್ತಾತ್ಮಕ ವಿಧಾನಗಳನ್ನು–ಇವರು ಪದೇ ಪದೇ ಪ್ರಸ್ತಾಪ ಮಾಡುವ ಭಾಷಾ ನೀತಿಯ ರೂಪದಲ್ಲೋ, ಭಾಷಾ ಯೋಜನೆಯ ರೂಪದಲ್ಲೋ–ಸ್ಪಷ್ಟವಾಗಿ ನಿರೂಪಿಸಿ ಚರ್ಚೆಗೆ ಇಡುವವರೆಗಾದರೂ, ಇದನ್ನು ಹಾಗೆ ಕರೆಯುವುದು ಅನಿವಾರ್ಯವಾಗಿದೆ ಎಂದು ವಿಷಾದದಿಂದ ತಿಳಿಸಬೇಕಾಗಿದೆ.

ಅದೇನೇ ಇರಲಿ, ಭಾಷೆ ಪ್ರಜಾಸತ್ತಾತ್ಮಕತೆಗೆ ಒಳಪಡುವುದು ಕೂಡಾ ಅದರ ಸಾರ್ವಜನಿಕ ಬಳಕೆಯ ನೆಲೆಯಲ್ಲಿ ಮಾತ್ರ. ಭಾಷಾ ಬಳಕೆಯ ಇತರ ಕ್ಷೇತ್ರಗಳಲ್ಲಿ–ವಿಶೇಷವಾಗಿ ಅದರ ನಿಜವಾದ ಬೆಳವಣಿಗೆಯ ನೆಲೆಯಾದ ಸೃಜನಶೀಲ ಅಭಿವ್ಯಕ್ತಿಯ ಕ್ಷೇತ್ರದಲ್ಲಿ–ಅದು ಅರಾಜಕವಾಗಿಯೇ ಉಳಿದು, ತನ್ನೆಲ್ಲ ಸಾಮರ್ಥ್ಯ ಮೆರೆಯಲು ಅವಕಾಶವಿದ್ದೇ ಇದೆಯಲ್ಲ? ಭಾಷೆಯೊಂದರ ನಿಜವಾದ authenticity ನಿರ್ಧಾರವಾಗುವುದು ಅಲ್ಲಿಯೇ ಅಲ್ಲವೆ? ಹೀಗಿರುವಾಗ ನಾರಾಯಣರಂತಹವರ ಆತಂಕ ಅನಗತ್ಯವಾದದ್ದು ಎನ್ನಿಸುತ್ತದೆ.

(ಮಯೂರ, ನವೆಂಬರ್ ೨೦೦೮)

ಅನುಬಂಧ:

'ಇನ್ನೊಂದು ಜಗತ್ತು ಸಾಧ್ಯ...': ವಿಶ್ವ ಸಾಮಾಜಿಕ ವೇದಿಕೆ

ಜಾಗತೀಕರಣದ ಅಡಿಯಲ್ಲಿ ಪ್ರತಿಪಾದಿತವಾಗುತ್ತಿರುವ ಮುಕ್ತ ಬಂಡವಾಳ ಪ್ರಣೀತವಾದ ನವ ಉದಾರವಾದವನ್ನು ವಿರೋಧಿಸುವ ಜಾಗತಿಕ ಆಂದೋಲನವೊಂದು ಈಗಾಗಲೇ ಸಂಘಟನೆಗೊಂಡಿದೆ. 'ವಿಶ್ವ ಸಾಮಜಿಕ ವೇದಿಕೆ' (World Social Forum) ಎಂಬ ಹೆಸರಿನಲ್ಲಿ ಕ್ರಿಯಾಶೀಲವಾಗಿರುವ ಈ ಆಂದೋಲನ, ಅಮೆರಿಕಾ, ಫ್ರಾನ್ಸ್, ಜರ್ಮನಿ, ಬ್ರಿಟನ್ ಸೇರಿದಂತೆ ಜಗತ್ತಿನ ಬಹುಪಾಲು ಎಲ್ಲ ದೇಶಗಳಿಗೂ ವ್ಯಾಪಿಸಿದೆ. ಜಾಗತೀಕರಣವನ್ನು ಅಧಿಕೃತಗೊಳಿಸಲು, ಅದರ ಪ್ರಬಲ ಪ್ರತಿಪಾದಕರೆಂದೇ ಹೆಸರಾದ ಜಿ-೮ ಗುಂಪಿನ ದೇಶಗಳ ಅಧಿಪತಿಗಳು ೨೦೦೧ರ ಜನವರಿ ೨೫ರಿಂದ ೩೦ರವರೆಗೆ ಸ್ವಿಟ್ಜರ್ಲ್ಯಾಂಡ್‌ನ ದೇವೋಸ್‌ನಲ್ಲಿ ಅಸಮವಾದ ವಿಶ್ವ ವ್ಯಾಪಾರ ಒಪ್ಪಂದದ (World Trade Agreement) ಚೌಕಟ್ಟಿನಲ್ಲಿ ಆಯೋಜಿಸಿಕೊಂಡಿದ್ದ 'ವಿಶ್ವ ಆರ್ಥಿಕ ಶೃಂಗ ಸಭೆ'ಗೆ ವಿರೋಧವಾಗಿ ಅದೇ ದಿನಾಂಕಗಳಂದು ಬ್ರೆಜಿಲ್‌ನ ಪೊರ್ತೋ ಅಲೆಗ್ರೆ ನಗರದಲ್ಲಿ ಈ ಆಂದೋಲನದ ಮೊದಲನೇ ಅಧಿವೇಶನ ಆಯೋಜಿತವಾಗಿತ್ತು. ಇದರಲ್ಲಿ ೧೨೭ ದೇಶಗಳ ಸುಮಾರು ೨೦ ಸಾವಿರ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮಾವೇಶದಲ್ಲಿ, ಜಾಗತೀಕರಣ ರೂಪಿಸುತ್ತಿರುವ ಅಶ್ಲೀಲ ಶ್ರೀಮಂತಿಕೆಯ ಅಸಮ ಜಗತ್ತಿಗೆ ಪರ್ಯಾಯವಾಗಿ; ಜನಾಂಗವಾದ, ಲೈಂಗಿಕವಾದ, ದುರಾಕ್ರಮಣ, ಹಿಂಸೆ ಮತ್ತು ಪರಿಸರ ನಾಶದ ಮಾರ್ಗಗಳಲ್ಲಿ ಜಗತ್ತನ್ನು ಅಮಾನವೀಕರಣಕ್ಕೆ ಒಳಪಡಿಸುತ್ತಿರುವ ಬಂಡವಾಳವಾದ ಏಕಪ್ರಭುತ್ವದ ವಿರುದ್ಧ ಅಹಿಂಸಾತ್ಮಕ ಸಾಮಾಜಿಕ ಪ್ರತಿರೋಧವನ್ನು ಸಂಘಟಿಸುವ ತೀರ್ಮಾನವನ್ನು ಕೈಗೊಳ್ಳಲಾಯಿತು. ಜೊತೆಗೆ, ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಜನತೆಯ ಸಾರ್ವಭೌಮತ್ವದ ಆಶಯಗಳುಳ್ಳ 'ಇನ್ನೊಂದು ಜಗತ್ತು ಸಾಧ್ಯ' (Another World is Possible) ಎಂಬ ಘೋಷಣೆಯನ್ನು ಅಂಗೀಕರಿಸಲಾಯಿತು. ಅದೇ ಸಮಯದಲ್ಲಿ ದೇವೋಸ್‌ನಲ್ಲಿ 'ವಿಶ್ವ ಆರ್ಥಿಕ ಶೃಂಗ ಸಭೆ'ಯನ್ನು ಸಂಪೂರ್ಣ ವಿಚಲಿತಗೊಳಿಸಿದ ಬೃಹತ್ ಪ್ರತಿಭಟನೆಯೂ ನಡೆದಿತ್ತು.

ಜಾಗತೀಕರಣದ ರಾಜಕೀಯ ನಾಯಕತ್ವ ವಹಿಸಿರುವ ಅಮೆರಿಕಾದ ನಿಕಟ ನೆರೆಹೊರೆಯ ಲ್ಯಾಟಿನ್ ಅಮೆರಿಕಾದ ನೆಲದಿಂದಲೇ ಈ ಆಂದೋಲನ ಚಿಗುರೊಡೆದಿರುವುದು

ಸಹಜವೇ ಆಗಿದೆ. ಈ ದೇಶಗಳ ಪ್ರಗತಿಪರ ಪ್ರಜಾಪ್ರಭುತ್ವಗಳನ್ನು ನಾಶಗೊಳಿಸಿ ಅಲ್ಲಿ ಕೈಗೊಂಬೆ ಸರ್ಕಾರಗಳನ್ನು ಸ್ಥಾಪಿಸಿ ಅಲ್ಲಿನ ಅರಣ್ಯ, ಎಣ್ಣೆ, ಖನಿಜ ಸಂಪನ್ಮೂಲಗಳನ್ನು ತನ್ನ ಆರ್ಥಿಕತೆಯ ಅನುಕೂಲಕ್ಕಾಗಿ ಸೂರೆ ಮಾಡುತ್ತಿದ್ದ ಅಮೆರಿಕಾ ಈಗ ಅಲ್ಲಿಯ ಜನತೆಯ ಪ್ರಥಮ ಶತ್ರುವೆನಿಸಿದೆ. (ಇತ್ತೀಚಿನ ಒಬಾಮಾ ಆಯ್ಕೆ ಈ ಶತ್ರುತ್ವದ ಕಾವನ್ನು ಸ್ವಲ್ಪ ತಗ್ಗಿಸಿರಲೂಬಹುದು!) ವೇದಿಕೆಯ ಪ್ರಥಮ ಸಮಾವೇಶವನ್ನು ಸಂಘಟಿಸಿದವರೂ ಬ್ರೆಜಿಲ್‌ನ ವಿವಿಧ ಪ್ರಾಂತ್ಯಗಳಲ್ಲಿನ ಬೇರು ಮಟ್ಟದ ಸ್ಥಳೀಯ ಸಂಸ್ಥೆಗಳೇ. ಇವುಗಳಲ್ಲಿ ರೈತ-ಕಾರ್ಮಿಕ-ಮಹಿಳಾ ಸಂಘಟನೆಗಳಲ್ಲದೆ, ಉದ್ಯಮದಾರರ ಸಂಘಟನೆಗಳು, ಸಾಮಾಜಿಕ-ಆರ್ಥಿಕ ಅಧ್ಯಯನ ಸಂಸ್ಥೆಗಳು ಮತ್ತು ನಗರ ಸಭೆ ಮುಂತಾದ ಸ್ಥಳೀಯ ಜನ ಪ್ರತಿನಿಧಿ ಸಂಸ್ಥೆಗಳೂ ಸೇರಿದ್ದವು. ಈ ಆಂದೋಲನ ಆರಂಭವಾದಾಗಿನಿಂದ ಲ್ಯಾಟಿನ್ ಅಮೆರಿಕಾದ ಮೂರು ರಾಷ್ಟ್ರಗಳಲ್ಲಿ–ಬೊಲಿವಿಯಾ, ವೆನಿಜೂಲ ಹಾಗೂ ನಿಕಾರುಗುವಾ–ಸಮಾಜವಾದಿ ಸರ್ಕಾರಗಳು ಸ್ಥಾಪಿತವಾಗಿವೆ. ಇತ್ತೀಚೆಗೆ, ದೊಡ್ಡ ವಿರಾಮದ ನಂತರ, ಸ್ಪೇನ್‌ನಲ್ಲಿ ಸಮಾಜವಾದಿಗಳು ಮತ್ತೆ ಅಧಿಕಾರ ಹಿಡಿದಿದ್ದಾರೆ. ಮೆಕ್ಸಿಕೋದ ಚುನಾವಣೆಗಳಲ್ಲಿ ಸಮಾಜವಾದಿ ಸರ್ಕಾರ ಸ್ಥಾಪಿತವಾಗುವ ಅವಕಾಶ ಕೂದಲೆಳೆ ಅಂತರದಲ್ಲಿ–ಮತ ಎಣಿಕೆ ಕಾಲದಲ್ಲಿ ಗಣಕ ಯಂತ್ರಗಳು ಕೈಕೊಟ್ಟು, ಸಮಾಜವಾದಿಗಳ ಮುನ್ನಡೆ ಆಶ್ಚರ್ಯಕರವಾಗಿ ಹಿನ್ನಡೆಯಾಗಿ ಪರಿವರ್ತಿತವಾಗಿ–ತಪ್ಪಿಹೋಗಿದೆ!

ಪ್ರತಿ ವರ್ಷ ವೇದಿಕೆಯು ವಾರ್ಷಿಕ ಸಮಾವೇಶಗಳನ್ನು ನಡೆಸುತ್ತಿದ್ದು, ಅಲ್ಲಿ ಜಗತ್ತಿನಾದ್ಯಂತ ಅಭಿವೃದ್ಧಿಯ ಹೆಸರಲ್ಲಿ ನಡೆಯುತ್ತಿರುವ ಬಲಾತ್ಕಾರದ ಕೃಷಿ ಭೂಮಿ ವಶ, ನಿರ್ವಸತೀಕರಣ, ನದಿ ನೀರಿನ ಮಾರಾಟ ಮುಂತಾದ ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಆಯಾ ದೇಶಗಳ ನಾಗರಿಕ ಸಮಾಜಗಳು ಸಂಘಟಿಸುತ್ತಿರುವ ಸಾಮಾಜಿಕ ಆಂದೋಲನಗಳ ನಡುವೆ ಸಂಪರ್ಕಗಳನ್ನೇರ್ಪಡಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇದೊಂದು ರಾಜಕೀಯೇತರ ಸಮನ್ವಯ ಸಂಸ್ಥೆಯಾಗಿದ್ದು, ಜಾಗತೀಕರಣ ಮಾನವ ಜನಾಂಗಕ್ಕೆ ಒಡ್ಡುತ್ತಿರುವ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಸವಾಲುಗಳನ್ನು ಎದುರಿಸಲು ಪರ್ಯಾಯ ಅಭಿವೃದ್ಧಿ ಹಾಗೂ ಆಡಳಿತ ಮಾದರಿಗಳನ್ನು ಚರ್ಚಿಸುವ ಮತ್ತು ಆ ಸಂಬಂಧ ಅನುಭವ ವಿನಿಮಯ ಮಾಡಿಕೊಳ್ಳುವ ಒಂದು ವೇದಿಕೆಯಾಗಿ ಮಾತ್ರ ಕೆಲಸ ಮಾಡುತ್ತಿದೆ. ಈ ವೇದಿಕೆಯಲ್ಲಿ ಈಗ ಜಗತ್ಪ್ರಸಿದ್ಧ ವಿಜ್ಞಾನಿಗಳು, ಅರ್ಥಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳು, ಸಾಮಾಜಿಕ ಕಾರ್ಯಕರ್ತರ ಜೊತೆಗೆ ಈಗ ವಿವಿಧ ಸರ್ಕಾರಗಳ ಅಧಿಪತಿಗಳೂ ಭಾಗವಹಿಸತೊಡಗಿದ್ದಾರೆ. ೨೦೦೪ರಲ್ಲಿ ಮೊದಲ ಬಾರಿಗೆ ಬ್ರೆಜಿಲ್‌ನಾಚೆ ಮುಂಬೈನಲ್ಲಿ ನಡೆದ ಈ ವೇದಿಕೆಯ ವಾರ್ಷಿಕ ಸಮ್ಮೇಳನದಲ್ಲಿ ೧೩೬ ದೇಶಗಳ ಸುಮಾರು ಒಂದು ಲಕ್ಷ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರೆಂಬುದು, ಈ ಆಂದೋಲನ ಕ್ರಮೇಣ ಜಗತ್ತಿನಾದ್ಯಂತ ಮತ್ತು ನಿರ್ದಿಷ್ಟವಾಗಿ ಭಾರತದಲ್ಲಿ ಗಳಿಸಿಕೊಳ್ಳುತ್ತಿರುವ ಜನ ಬೆಂಬಲದ ದ್ಯೋತಕವಾಗಿದೆ. ಈ ಸಮಾವೇಶದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಹಾಗೂ

ವಿಶ್ವ ಬ್ಯಾಂಕಿನ ಮಾಜಿ ಮುಖ್ಯ ಆರ್ಥಿಕ ಸಲಹಾಗಾರ ಜೋಸೆಫ್ ಸ್ಟಿಗ್ಲಿಟ್ಜ್ ಜಾಗತೀಕರಣದ ಹಿಂದಿನ ವಿನಾಶಕಾರಿ ಆರ್ಥಿಕ ರಾಜಕಾರಣವನ್ನು ಕುರಿತು ಮಾತಾಡಿದ್ದೊಂದು ವಿಶೇಷ! ಈ ನಂತರ ವೇದಿಕೆಯ ವಾರ್ಷಿಕ ಸಮ್ಮೇಳನಗಳು ವೆನಿಜೂಲ, ಪಾಕಿಸ್ತಾನ ಹಾಗೂ ಕೀನ್ಯಾಗಳಲ್ಲಿಯೂ ನಡೆದಿದ್ದು, ಇತ್ತೀಚಿನ ಅಂದರೆ ಒಂಭತ್ತನೆಯ ಸಮ್ಮೇಳನ ಇದೇ ಫೆಬ್ರುವರಿಯಲ್ಲಿ ದೇವೋಸ್‌ನಲ್ಲಿ ನಡೆದ ಜಗತಿಕ ಆರ್ಥಿಕ ಸಮ್ಮೇಳನಕ್ಕೆ ಸಮಾನಾಂತರವಾಗಿ, ಬ್ರೆಜಿಲ್‌ನ ಅಮೆಜಾನ್ ಕಾಡಿನ ಮಧ್ಯೆ ಇರುವ ಬೆಲೇಂನಲ್ಲಿ ಆಯೋಜಿತವಾಗಿತ್ತು. ಇದರಲ್ಲಿ ಬ್ರೆಜಿಲ್, ವೆನಿಜೂಲ, ಈಕ್ವೆಡಾರ್, ಬೊಲಿವಿಯಾ ಹಾಗೂ ಪರಗ್ವೇ ದೇಶಗಳ ಅಧ್ಯಕ್ಷರಲ್ಲದೆ, ಜಗತ್ತಿನಾದ್ಯಂತದ ಸುಮಾರು ಒಂದು ಲಕ್ಷ ಜನರು ಭಾಗವಹಿಸಿ ಬಂಡವಾಳಶಾಹಿ ಆರ್ಥಿಕತೆ ಹಾಗೂ ಜಾಗತೀಕರಣದ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ.

ವಿಶ್ವ ಸಾಮಾಜಿಕ ವೇದಿಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿನ ಧನ ಸಹಾಯ ಪಡೆವ ಸರ್ಕಾರೇತರ ಸಂಸ್ಥೆಗಳ ಒಂದು ಒಕ್ಕೂಟವಾಗಿದ್ದು; ಅದು ಬರೀ ಚರ್ಚಾಕೂಟದಂತೆ ಕೆಲಸ ಮಾಡುತ್ತಾ, ಸ್ಥಳೀಯ ಜನತಾ ಚಳುವಳಿಗಳ ಸ್ಥಾನವನ್ನು ಆಕ್ರಮಿಸಿಕೊಳ್ಳುವ ಅಪಾಯ ಒಡ್ಡಿದೆ ಎಂದು ಕೆಲವು ವಲಯಗಳಿಂದ ಟೀಕೆಗಳೂ ಕೇಳಿಬರುತ್ತವೆ. ಆದರೆ Socialist Internationalನಂತಹ ಅಂತಾರಾಷ್ಟ್ರೀಯ ಸಮಾಜವಾದಿ ಸಂಸ್ಥೆಗಳು ಈಗ ನಿಷ್ಕ್ರಿಯವಾಗಿರುವ ಹಿನ್ನೆಲೆಯಲ್ಲಿ, ಈ ವೇದಿಕೆ ಜಗತ್ತಿನ ಎಲ್ಲ ದೇಶಗಳ ಮಧ್ಯಮ ಮಾರ್ಗದ ಎಡಪಂಥೀಯರ ವೇದಿಕೆಯಾಗಿ ಬೆಳೆಯುವ ಅನಿವಾರ್ಯತೆ ಇದೆ ಎಂಬುದು ಬಹು ಜನರ ಅಭಿಪ್ರಾಯವಾಗಿದೆ. ಇದಕ್ಕೆ ತಕ್ಕಂತೆ ಈಗ ವಿಶ್ವಸಂಸ್ಥೆಯೂ ತನ್ನ ಅಂಗಸಂಸ್ಥೆಯಾದ ಯುನೆಸ್ಕೋವನ್ನು ಇತ್ತೀಚಿನ ವರ್ಷಗಳಲ್ಲಿ ವೇದಿಕೆಯ ವಾರ್ಷಿಕ ಸಮ್ಮೇಳನಗಳಿಗೆ ತನ್ನ ಪ್ರತಿನಿಧಿಯನ್ನಾಗಿ ಕಳಿಸತೊಡಗಿದೆ ಎಂಬುದು ಅದರ ಹೆಚ್ಚುತ್ತಿರುವ ಜಾಗತಿಕ ಮಾನ್ಯತೆಗೆ ಸಾಕ್ಷಿಯಾಗಿದೆ ಎಂದು ಹೇಳಬಹುದು.

****

ಇದೇ ಲೇಖಕರ ಇತರ ಕೃತಿಗಳು:

- **ಗಮನ** (ಸಾಹಿತ್ಯ ವಿಮರ್ಶೆ-ಸಾಮಾಜಿಕ ಚಿಂತನೆ))
- **ಅನೇಕ** (ಸಾಹಿತ್ಯ ವಿಮರ್ಶೆ-ಸಾಮಾಜಿಕ ಚಿಂತನೆ)
- **ಈ ಭೂಮಿಯಿಂದ ಆ ಆಕಾಶದವರೆಗೆ** (ಸಾಹಿತ್ಯ ವಿಮರ್ಶೆ)
- **ಕುವೆಂಪು ಸಾಹಿತ್ಯ ದರ್ಶನ** (ಸಾಹಿತ್ಯ ವಿಮರ್ಶೆ)
- **ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ** (ವ್ಯಕ್ತಿ ಮತ್ತು ಸಾಹಿತ್ಯ ಪರಿಚಯ)
- **ಒಂದನೇ ತರಗತಿಯಿಂದ ಇಂಗ್ಲಿಷ್: ಏಕೆ ಬೇಡ** (ಭಾಷಾ ಜಿಜ್ಞಾಸೆ)
- **ಜಯಪ್ರಕಾಶ್ ನಾರಾಯಣ: ಒಂದು ಅಪೂರ್ಣ ಕ್ರಾಂತಿಯ ಕಥೆ** (ಜೀವನ ಚರಿತ್ರೆ)
- **ಲೋಹಿಯಾ ಸಮಾಜವಾದ ದರ್ಶನ** (ಸಮಾಜವಾದಿ ತತ್ವ ಪರಿಚಯ)
- **ಮರಳಿ ಬರಲಿದೆ ಸಮಾಜವಾದ!** (ಸಮಕಾಲೀನ ಸಮಾಜವಾದಿ ಚಿಂತನೆಗಳು)
- **ಬೇರು ಬಿಳಲು** (ಸಮಾಜವಾದಿ ಸಂಕಥನಗಳು-೧)
- **ಇದು ಭಾರತ! ಇದು ಭಾರತ!!** (ಸಮಾಜವಾದಿ ಸಂಕಥನಗಳು-೨)
- **ರೈತಭಾರತ: ಅವಸಾನದ ಅಂಚಿನಲ್ಲಿ** (ರೈತರ ಸರಣಿ ಆತ್ಮಹತ್ಯೆ ಕುರಿತ ಕಿರು ಅಧ್ಯಯನ)

ಸಂಪಾದನೆ

- **ಕುವೆಂಪು: ಒಂದು ಪುನರನ್ವೇಷಣೆ** (ಕುವೆಂಪು ಶತಮಾನೋತ್ಸವ ಸಂಪುಟ)
- **ಲೋಹಿಯಾ: ವ್ಯಕ್ತಿ-ವಿಚಾರ-ವಿಮರ್ಶೆ** (ಲೋಹಿಯಾ ಸಮಾಜವಾದಿ ಚಿಂತನೆ)
- **ಆ ಗಣರಾಜ್ಯ-ಈ ಕರ್ನಾಟಕ** (ಸುವರ್ಣ ಕರ್ನಾಟಕದ ಸುವರ್ಣ ಪುಟಗಳು)
- **ಮಾನವ** (ಸಮಾಜವಾದಿ ಮಾಸಿಕ)
- **ಒಲವು** (ಅಂತರ್ಜಾತಿ ವಿವಾಹಿತರ ಸಮಾವೇಶದ ಸ್ಮರಣ ಸಂಪುಟ)

ಸಹ ಸಂಪಾದನೆ:

- **ಹಣತೆ** (ಜಿಎಸೆಸ್ ಅಭಿನಂದನ ಗ್ರಂಥ)
- **ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ** (ಮಾಸ್ತಿ ಸಾಹಿತ್ಯ ಸಮೀಕ್ಷೆ)
- **ಕಾಡಿನ ಹುಡುಗ ಕೃಷ್ಣ** (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)
- **ಸಾಹಿತ್ಯ ಸಂವಾದ** (ಸಾಹಿತ್ಯ ದ್ವೈಮಾಸಿಕ)

ಅನುವಾದ:

ಜೆಪಿ ಸೆರೆಮನೆಯ ದಿನಚರಿ

ನಮ್ಮ ಪ್ರಕಟಣೆಗಳು

ಕಥಾ ಸಂಕಲನ

*1. ಕರ್ಪುರದ ಕಾಯದಲ್ಲಿ	ಡಾ. ರಾಜಶೇಖರ ನೀರಮಾನ್ವಿ	15/-
*2. ನೀರಮಾನ್ವಿ ಕಥೆಗಳು	ಡಾ. ರಾಜಶೇಖರ ನೀರಮಾನ್ವಿ	15/-
*3. ನಾರೀ ಹಳ್ಳದ ದಂಡೆಯಲ್ಲಿ	ಚಂದ್ರಕಾಂತ ವಡ್ಡು	15/-
*4. ಮಣ್ಣಿನ ಬಳೆ ಮತ್ತು ಇತರ ಕತೆಗಳು	ಶಾಂತಾರಾಮ ಸೋಮಯಾಜಿ	30/-
*5. ಹಂಗಿನರಮನೆಯ ಹೊರಗೆ	ಡಾ. ರಾಜಶೇಖರ ನೀರಮಾನ್ವಿ	60/-
*6. ಅನಾಥ ಪಕ್ಷಿಯ ಕಲರವ	ವೀರಭದ್ರ	125/-
*7. ಕಾಳಬೆಳುದಿಂಗಳ ಸಿರಿ	ರಾಜಶೇಖರ ಹತಗುಂದಿ	45/-
*8. ಹಣದಿ	ಶಿವಕುಮಾರ ನಾಗವಾರ	60/-
*9. ಪಟ್ಟಾ	ಚಿತ್ರಶೇಖರ ಕಂಠಿ	45/-
*10. ಉಡಿಯಲ್ಲಿಯ ಉರಿ	ಕಲಿಗಣನಾಥ ಗುಡದೂರು	45/-
*11. ಮಣ್ಣಿನ ಕುಡಿಕೆ	ಡಾ. ಮಲ್ಲಿಕಾರ್ಜುನ ವಣೇನೂರು	50/-
*12. ಹಂಸೆ ಹಾರಿತ್ತು	ಬಿದರಹಳ್ಳಿ ನರಸಿಂಹಮೂರ್ತಿ	75/-
*13. ಬಾಳೆಗಿಡ ಗೊನೆಹಾಕಿತು	ಬಿ. ಎಂ. ಬಶೀರ್	30/-
*14. ವಾಸ್ತವದ ಕನವರಿಕೆ	ಡಿ. ಬಿ. ರಜಿಯಾ	30/-
*15. ತಪ್ಡಂಡ	ಡಾ. ಬಸವರಾಜ ಸಾದರ	45/-
*16. ಹುಡುಕಾಟ	ಅಬ್ಬಾಸ್ ಮೇಲಿನಮನಿ	60/-
17. ಪ್ರಕ್ಷುಬ್ಧ ಅಲೆಗಳು	ಡಾ. ಪ್ರಹ್ಲಾದ ಅಗಸನಕಟ್ಟೆ	40/-
*18. ಲದೇಣಿಯಾ	ಕೃಷ್ಣ ನಾಯಕ್	50/-
19. ಮೀಯುವ ಆಟ	ಡಾ. ಎಚ್. ನಾಗವೇಣಿ	60/-
20. ಕಾಡಿನ ಬೇರು	ಡಾ. ಶಾಂತರಸ ಹೆಂಬೇರಾಳು	35/-
21. ವಸುಂಧರೆಯ ಗ್ಯಾನ	ಡಾ. ಎಚ್. ನಾಗವೇಣಿ	35/-
22. ಸದ್ಯಕಿದು ಹುಚ್ಚರ ಸಂತಿ	ಹಸನ್ ನಯೀಂ ಸುರಕೋಡ	50/-
23. ಮೋಹನ ದಾಸ	ಆರ್. ಪಿ. ಹೆಗಡೆ	50/–
24. ಬೇರುಗಳು	ವೆಂಕಟೇಶ ಮಾಚಕನೂರ	50/–

ಕಾವ್ಯ

*25. ಹಟವಾದಿ ಮತ್ತು ಹುಡುಗಿ	ಡಾ. ಬೂದಗುಪ್ಪ ಪ್ರಹ್ಲಾದರೆಡ್ಡಿ	60/-
*26. ಗಾಂಧಿಯೊಂದಿಗೆ	ಪ್ರಮೋದ್ ತುರ್ವಿಹಾಳ್	30/-
27. ಆ ಅಜ್ಜ - ಈ ಮೊಮ್ಮಗ	ಮುದೇನೂರ ಸಂಗಣ್ಣ	75/-
*28. ತಮಾಷಾ	ವಿಕ್ರಮ ವಿಸಾಜಿ	45/-
*29. ಜಾಲಿ ಹೂಗಳ ನಡುವೆ	ಬಿ. ಪೀರ್ ಬಾಷ	45/-
*30. ಮರಾಠಿ ದಲಿತ ಕಾವ್ಯ	ಡಾ. ಸರಜೂ ಕಾಟ್ಕರ್	75/-
*31. ಕೆಡಹಬಲ್ಲರು ಅವರು ಕಟ್ಟಬಲ್ಲೆವು ನಾವು	ಪ್ರೊ. ಅಲ್ಲಮಪ್ರಭು ಬೆಟ್ಟದೂರು	35/-
*32. ಗಾಂಧೀಗಿಡ	ಸತೀಶ್ ಕುಲಕರ್ಣಿ	35/-
*33. ಕಣ್ಣಮುಂದಿನ ಬೆಳಕು	ದಸ್ತಗೀರ್‌ಸಾಬ್ ದಿನ್ನಿ	35/-
*34. ಸಿಸಿಫಸ್‌ರ ಸುತ್ತು	ಡಾ. ಬಸರಾಜ ಸಾದರ	50/-
*35. ಕದವಿಲ್ಲದ ಊರಲ್ಲಿ	ಜಿ. ಕೆ. ರವೀಂದ್ರಕುಮಾರ್	75/-
*36. ಅವ್ವ	ಡಾ. ಸರಜೂ ಕಾಟ್ಕರ್	60/-
37. ಕಣ್ಮುಚ್ಚಿ ಕಂಡವರು	ಶಂಕರ ಪಾಟೀಲ	35/-
38. ಸುನೀತ ಸಂಪದ	ಚೆನ್ನವೀರ ಕಣವಿ	100/-
*39. ಮಳೆಯೇ ಮಂಟಪ	ಎಚ್. ಎಸ್. ಶಿವಪ್ರಕಾಶ್	50/-
*40. ಬಾಂಬ್ ವಿರೋಧಿ ಪಾಕಿಸ್ತಾನಿ ಕವಿತೆಗಳು	ಡಾ. ಸರಜೂ ಕಾಟ್ಕರ್	30/-
41. ಈ ಮಣ್ಣು ಅಪ್ಪಿಕೊಳ್ಳುವ ಮುನ್ನ...	ಗವಿಸಿದ್ಧ ಎನ್. ಬಳ್ಳಾರಿ	75/-
*42. ಮಗುಮಲಗಿದೆ ಎದೆಯಮೇಲೆ	ಎಂ. ಡಿ. ಒಕ್ಕುಂದ	35/-
43. ಚಿತ್ತಾರ	ಡಾ. ಸಬಿಹಾ ಭೂಮಿಗೌಡ	40/-
44. ಬಾಗಿಲಾಚೆಯ ಮೌನ	ರೂಪ ಹಾಸನ	50/-
45. ಕಂಪನಿ ಸವಾಲ್	ಸತೀಶ ಕುಲಕರ್ಣಿ	50/-
46. ನೂರು ಗೋರಿಯ ದೀಪ	ಡಾ. ವಿನಯಾ	35/-
47. ಉರಿವ ಒಲೆಗಳ ಮುಂದೆ	ಆರ್. ನಿರ್ಮಲ	25/-
48. ಗಾಂಧೀ ಟು ಗೋದ್ರಾ	ಡಾ. ಸರಜೂ ಕಾಟ್ಕರ್	35/–
49. ದರುಶನ	ಸವಿತಾ ನಾಗಭೂಷಣ	40/–
50. ಲೋಹದ ಕಣ್ಣು	ಡಾ. ಎಚ್. ಎಲ್. ಪುಷ್ಪ	50/–

ಕಾದಂಬರಿ

*51. ಮಾಂಡೋವಿ	ರವಿ ಬೆಳಗೆರೆ	60/-
*52. ಶಾಮಣ್ಣ	ಕುಂ. ವೀರಭದ್ರಪ್ಪ	175/-
53. ಗಾಂಧಿ ಬಂದ	ಎಚ್. ನಾಗವೇಣಿ	175/-
54. ಬದುಕು	ಗೀತಾ ನಾಗಭೂಷಣ	216/-
*55. ಹುತ್ತ	ಬಾಳಾಸಾಹೇಬ ಲೋಕಾಪುರ	75/-
*56. ಲೋಟಸ್ ಪಾಂಡ್	ತಾರಾಭಟ್	50/-
*57. ಚಾಕ್ರಿ ನಿಂಬಜ್ಜ	ಬ್ರಹ್ಮದೇವ್ ಹದಳಗಿ	30/-
*58. ರಂಗನೋ ಮಲೆ ಮಂಗನೋ!	ಮುಹಮ್ಮದ್ ಕುಳಾಯಿ	30//-
*59. ಕಿರೂರುನಾಮಾ	ಚಂದ್ರಕಾಂತ ಕುಸನೂರ	60/-

*60.	ಅತಂತ್ರ	ಗುರುರಾಜ ಮಾರ್ಪಳ್ಳಿ	50/-
61.	ಜನ್ನತ್ ಮೊಹಲ್ಲಾ	ಅಬ್ಬಾಸ್ ಮೇಲಿನಮನಿ	100/-

ಪ್ರವಾಸ ಕಥನ

62.	ನನ್ನೊಳಗಿನ ಹಾಡು ಕ್ಯೂಬಾ	ಜಿ. ಎನ್. ಮೋಹನ್	50/-
*63.	ಪಂಚಮುಖಿ ಪಂಜಾಬ್	ಜಿ. ಪಿ. ಬಸವರಾಜು	60/-
*64.	ನಾ ಕಂಡ ಬ್ರೆಝಿಲ್	ಡಾ. ಸಿ. ನಾಗಭೂಷಣ	60/-
65.	ಥೇಮ್ಸ್‌ದಿಂದ ಟೈಬರ್‌ವರೆಗೆ	ವೆಂಕಟೇಶ ಮಾಚಕನೂರ	40/-
66.	ಆಗ್ನೇಯದಂಗಳದಲ್ಲಿ	ವೆಂಕಟೇಶ ಮಾಚಕನೂರ	60/-
67.	ಕುಲು ಕಣಿವೆಯಲ್ಲಿ	ಜಿ.ಪಿ. ಬಸವರಾಜು	60/–

ವೈಚಾರಿಕ ಮತ್ತು ಇತರೆ

68.	ಲೋಹಿಯಾ	ಹಸನ್‌ನಯೀಂ ಸುರಕೋಡ	120/-
*69.	ಸರಳಸಿದ್ಧರಾಮ ಚರಿತೆ	ಡಾ. ಎಲ್. ಬಸವರಾಜು	60/-
*70.	ಶ್ರೀ ಮಧುರಚೆನ್ನರ ಸ್ಮೃತಿಗಳು	ಡಾ. ಸಿಂಪಿ ಲಿಂಗಣ್ಣ	60/-
*71.	ಕಾಡು ಮತ್ತು ತೋಪು	ವಿ. ಚಂದ್ರಶೇಖರ ನಂಗಲಿ	90/-
*72.	ಅಮೃತ ಮತ್ತು ವಿಷ	ರಂಜಾನ್ ದರ್ಗಾ	75/-
*73.	ಶತಮಾನ	ಮೊಗಳ್ಳಿ ಗಣೇಶ	50/-
*74.	ಅಣುವೆಂಬ ಸದ್ದಿಲ್ಲದ ಸಾವ ಕುರಿತು	ಎನ್. ಜಗದೀಶ ಕೊಪ್ಪ	25/-
75.	ನಿರ್‌ಬೀಜೀಕರಣದ ವಿರಾಟ್ ಸ್ವರೂಪ	ವಿ. ಚಂದ್ರಶೇಖರ ನಂಗಲಿ	12/-
*76.	ಬುದ್ಧ ಚರಿತೆ	ಡಾ. ಎಲ್. ಬಸವರಾಜು	180/-
77.	ಸೌಂದರನಂದ	ಡಾ. ಎಲ್. ಬಸವರಾಜು	150/-
*78.	ನೀರದೀವಿಗೆ	ಡಾ. ಕೆ. ವೈ. ನಾರಾಯಣಸ್ವಾಮಿ	100/-
*79.	ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ	ಜಸ್ಬೀರ್ ಸಿಂಗ್	25/-
80.	ಅಲ್ಲಮನ ವಚನಚಂದ್ರಿಕೆ	ಡಾ. ಎಲ್. ಬಸವರಾಜು	250/-
*81.	ಸೂಳೆ ಸಂಕವ್ವೆ (ನಾಟಕ)	ಮುದೇನೂರ ಸಂಗಣ್ಣ	50/-
82.	ಚಾತುರ್ವರ್ಣ ಧರ್ಮದರ್ಶನ	ಕುಮಾರ ಕಕ್ಕಯ್ಯಪೋಳ	75/-
*83.	ನಾ ನಿಮ್ಮೊಳಗು	ಪ್ರೊ. ವಿ. ಚಂದ್ರಶೇಖರ ನಂಗಲಿ	100/-
*84.	ಬಗೆ	ಡಾ. ಸಬಿಹಾ ಭೂಮಿಗೌಡ	60/-
*85.	ಹಣತೆ: ಜಿ.ಎಸ್.ಎಸ್. ಅಭಿನಂದನ ಗ್ರಂಥ		300/-
*86.	ಎಸ್. ನಿಜಲಿಂಗಪ್ಪ : ಒಂದು ಅಧ್ಯಯನ	ಕೋ. ಚೆನ್ನಬಸಪ್ಪ	125/-
87.	ಬಸವಪ್ರಜ್ಞೆ	ರಂಜಾನ್ ದರ್ಗಾ	15/-
88.	ಹುತಾತ್ಮ ಭಗತ್‌ಸಿಂಗ್	ಜಿ. ಪಿ. ಬಸವರಾಜು	60/-
*89.	ಗುಣಗೌರವ	ಜಿ. ಎಚ್. ನಾಯಕ	75/-
*90.	ಜೀವನಸಂಧ್ಯಾ	ಡಾ. ಕೃಷ್ಣಮೂರ್ತಿ ಕಿತ್ತೂರ	75/-
*91.	ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ	ಡಾ. ಜೆ. ಎಂ. ನಾಗಯ್ಯ	100/-
*92.	ನೊಂದವರ ನೋವು	ಮೂಡ್ನಾಕೂಡು ಚಿನ್ನಸ್ವಾಮಿ	60/-
*93.	ಸಾಕ್ಷಿ	ಡಾ. ಸರಜೂ ಕಾಟ್ಕರ್	50/-
*94.	ಸಲ್ಲಲಿತ ಸನ್ಮಾರ್ಗ	ಚೆನ್ನಬಸವಪ್ಪ ಬೆಟ್ಟದೂರು	30/-
*95.	ಪ್ರೇಮಲೋಕದ ಮಾಯಾವಿ	ಹಸನ್ ನಯೀಂ ಸುರಕೋಡ	45/-
*96.	ಶರಣ ಬಂಡಾಯ	ಡಾ. ಸರಜೂ ಕಾಟ್ಕರ್	50/-
*97.	ಜಯಪ್ರಕಾಶ್ ನಾರಾಯಣ	ಡಿ. ಎಸ್. ನಾಗಭೂಷಣ	100/-
*98.	ಬೆಳಗಿನ ಬೆರಗು	ಜಿ. ಎನ್. ಮಲ್ಲಿಕಾರ್ಜುನ	75/-
99.	ರಸೀದಿ ತಿಕೀಟು	ಹಸನ್‌ನಯೀಂ ಸುರಕೋಡ	100/-
*100.	ನಡುಹಗಲಿನಲ್ಲಿ ಕಂದೀಲುಗಳು	ಡಾ. ರಾಜೇಂದ್ರ ಚೆನ್ನಿ	125/-
*101.	ಕುವೆಂಪು-ಒಂದು ಪುನರನ್ವೇಷಣೆ	ಡಿ.ಎಸ್. ನಾಗಭೂಷಣ	150/-
102.	ಬಸವಣ್ಣನವರ ದೇವರು	ರಂಜಾನ್ ದರ್ಗಾ	15/-
*103.	ಹಿಂದೂ ಮಂದಿರಗಳು ಹಾಗೂ ಔರಂಗಜೇಬನ ಆದೇಶಗಳು	ಹಸನ್ ನಯೀಂ ಸುರಕೋಡ	20/-
104.	ನಮ್ಮೊಡನೆ ನಮ್ಮ ನುಡಿ	ಡಾ. ಕೆ. ವಿ. ನಾರಾಯಣ	50/-
*105.	ಅನೇಕ	ಡಿ. ಎಸ್. ನಾಗಭೂಷಣ	125/-
*106.	ಖರೇ ಖರೇ ಸಂಗ್ಯಾ-ಬಾಳ್ಯಾ	ಡಾ. ಎಂ.ಎಂ. ಕಲಬುರ್ಗಿ	30/-
107.	ಶಿವಾಜಿ ಮೂಲ ಕನ್ನಡ ನೆಲ	ಡಾ. ಸರಜೂ ಕಾಟ್ಕರ್	75/-
108.	ಅಯೋಧ್ಯೆ-ವಿನಾಶಕಾರಿ ವೋಟ್ ಬ್ಯಾಂಕ್ ರಾಜಕೀಯ	ಹಸನ್ ನಯೀಂ ಸುರಕೋಡ	25/-
109.	ಮನೆಯೊಡೆಯನಿದ್ದಾನೋ	ಎಸ್.ಜಿ. ಮೈಸೂರು ಮಠ	150/-
110.	ಲಿಂಗವ ಪೂಜಿಸಿ ಫಲವೇನಯ್ಯಾ?	ರಂಜಾನ್ ದರ್ಗಾ	25/–
111.	ಅರಿವಿನ ನಡೆ	ಡಾ. ಕವಿತಾ ರೈ	50/–
112.	ಬದುಕಿಗಾಗಿ ಶಿಕ್ಷಣ	ಅರವಿಂದ ಚೊಕ್ಕಾಡಿ	40/–
113.	ಕರ್ನಾಟಕ ಏಕೀಕರಣ	ಕೋ. ಚೆನ್ನಬಸಪ್ಪ	60/–
114.	ಮರಳಿ ಬರಲಿದೆ ಸಮಾಜವಾದ	ಡಿ. ಎಸ್. ನಾಗಭೂಷಣ	60/–
115.	ಬಸವ ಧರ್ಮದ ವಿಶ್ವ ಸಂದೇಶ	ರಂಜಾನ್ ದರ್ಗಾ	15/–
116.	ರೈತ ಭಾರತ : ಅವಸಾನದ ಅಂಚಿನಲ್ಲಿ	ಡಿ.ಎಸ್. ನಾಗಭೂಷಣ	20/–
117.	ಆ ಗಣರಾಜ್ಯ – ಈ ಕರ್ನಾಟಕ	ಡಿ.ಎಸ್. ನಾಗಭೂಷಣ	60/–
118.	ಪಡುವಣದ ಕಡಲು	ಸುನಂದಾ ಪ್ರಕಾಶ ಕಡಮೆ	45/–
119.	ಇಸ್ಲಾಂ : ಹುಟ್ಟು ಮತ್ತು ವಿಕಾಸ	ಹನಸ್ ನಯೀಂ ಸುರಕೋಡ	125/–
120.	ವಸಿಷ್ಠರು ಮತ್ತು ವಾಲ್ಮೀಕಿಯರು	ಡಿ.ಎಸ್. ನಾಗಭೂಷಣ	150/–
121.	ಕೋಮು ಗಲಭೆಗಳು ಹಾಗೂ ಭಾರತದ ಪೊಲೀಸರು	ಹಸನ್ ನಯೀಂ ಸುರಕೋಡ	60/–

* ಪ್ರತಿಗಳು ಮುಗಿದಿವೆ



'ಕಾಲದ ಜೊತೆ ಹೆಜ್ಜೆ ಹಾಕುವಾಗ ನಾನು ಒಂದೆರಡು ಹೆಜ್ಜೆ ಮುಂದೆ ಹೋಗಿಬಿಟ್ಟಿರುವೆನೇನೋ.... ಆದರೆ ಈ ದೇಶದ ಜನತೆ ಒಂದಲ್ಲ ಒಂದು ದಿನ ನನ್ನ ಮಾತುಗಳಿಗೆ ಕಿವಿಗೊಡುವರು, ಕಿವಿಗೊಡಲೇ ಬೇಕಾಗುತ್ತದೆ....' ಎಂದಿದ್ದರು ಈ ದೇಶ ಕಂಡ ಮಹಾ ಮೇಧಾವಿ ರಾಮಮನೋಹರ ಲೋಹಿಯಾ. ತಮ್ಮ ಚಿಂತನೆಯ ದೀವಟಿಗೆಯನ್ನು, ರಾಜಕೀಯದಲ್ಲಿರುವ ತಮ್ಮ ಶಿಷ್ಯಗಣ ಮುಂದಕ್ಕೊಯ್ದು ಸಮಾಜದಲ್ಲಿ ವೈಚಾರಿಕತೆಯ ಬೆಳಕು ಪಸರಿಸಲಿದ್ದಾರೆಂದು ಅವರು ನಂಬಿದ್ದರೋ ಏನೋ? ಆದರೆ ಆ ಶಿಷ್ಯಗಣ ಭ್ರಷ್ಟ ರಾಜಕೀಯ ವ್ಯವಸ್ಥೆಯ ಕತ್ತಲ ಕೂಪದಲ್ಲಿ ಬಿದ್ದು ಕುರುಡಾಗಿ ಹೋಗಿ ದಾರಿ ತಪ್ಪಿದೆ.

ಇಂತಹ ವೈಚಾರಿಕ ಅಂಧಕಾರದ ಸುರಂಗದ ಕೊನೆಯಲ್ಲಿನ ಬೆಳಕಿಂಡಿಯಂತಿದೆ ಡಿ.ಎಸ್.ನಾಗಭೂಷಣ್ ಅವರ ಬರವಣಿಗೆ. ಸಮಾಜವಾದಿ ಚಿಂತನೆಗಳನ್ನು ಪರಿಣಾಮಕಾರಿಯಾಗಿ ಹೇಳುವುದು ಎಲ್ಲರಿಗೂ ಸಾಧ್ಯವಾಗುವಂತಹುದ್ದಲ್ಲ. ನಿಷ್ಠುರ ನುಡಿ ಮತ್ತು ನೇರ ನಡೆಯನ್ನು ಬದುಕಿನ ಒಂದು ಬಗೆಯಾಗಿ ಅಂಗೀಕರಿಸಿದವರಿಗೆ ಮಾತ್ರ ಇದು ಸಾಧ್ಯ. ಸಮಾಜವಾದಿ ಚಿಂತನೆಯ ಕುಲುಮೆಯಲ್ಲಿ ಪುಟಗೊಂಡ ಡಿಎಸ್‌ಎನ್ ಅವರಲ್ಲಿ ಇಂತಹ ಗುಣಗಳಿರುವುದರಿಂದಾಗಿಯೇ ಈ ಕಲೆ ಅವರಿಗೆ ಸಿದ್ಧಿಸಿದೆ. ಬದುಕು ಮತ್ತು ಬರಹದ ನಡುವೆ ಅಂತರ ಇಲ್ಲದ ಅವರ ವ್ಯಕ್ತಿತ್ವದ ಪ್ರತಿಬಿಂಬ ಅವರ ಬರಹಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಈ ಕಾರಣಕ್ಕಾಗಿಯೇ ಅವು ಓದುಗರ ಮನದ ಕದ ತಟ್ಟುತ್ತಿವೆ. ಡಿಎಸ್‌ಎನ್ ಅವರದ್ದು ಹಂಗಿಲ್ಲದ ಬರವಣಿಗೆ.

ಡಿ.ಎಸ್.ನಾಗಭೂಷಣ್ ಅವರನ್ನು ನಾನೆಂದೂ ಭೇಟಿ ಮಾಡಿಲ್ಲ. ಅವರನ್ನು ತಿಳಿದುಕೊಳ್ಳಲು ಒಂದು ಭೇಟಿಯ ಅವಶ್ಯಕತೆ ಇದೆ ಎಂದು ನನಗೆ ಈಗಲೂ ಅನಿಸುತ್ತಿಲ್ಲ. ಅದಕ್ಕೆ ಅವರ ಬರವಣಿಗೆಯೇ ಸಾಕು. ಕರ್ನಾಟಕದಿಂದ ದೂರ ಇದ್ದರೂ, ಕಳೆದೆರಡು ವರ್ಷಗಳಿಂದ 'ವಿಕ್ರಾಂತ ಕರ್ನಾಟಕ'ದಲ್ಲಿ 'ವಾರದ ಒಳನೋಟ' ಎಂಬ ಹೆಸರಲ್ಲಿ ಪ್ರಕಟವಾಗುತ್ತಿರುವ ಅವರ ಬಹುತೇಕ ಅಂಕಣಗಳನ್ನು ನಾನು ಓದಿದ್ದೇನೆ. ಅವುಗಳನ್ನು ಓದಿದಾಗಲೆಲ್ಲ ನನ್ನನ್ನು ಸೆಳೆಯುವುದು ಅವರ ಬರಹಗಳಲ್ಲಿ ಸದಾ ಪ್ರಜ್ವಲಿಸುತ್ತಿರುವ ಸಿಟ್ಟು. ಆ ಸಿಟ್ಟಿನಲ್ಲಿ ಅನ್ಯಾಯವನ್ನು ಸುಟ್ಟು ಹಾಕಬೇಕೆನ್ನುವ ಬೆಂಕಿಯ ಜತೆಯಲ್ಲಿ, ಸಮಾಜದ ಹಿತಕ್ಕಾಗಿ ತುಡಿಯುವ ಅಂತಃಕರಣದ ಬೆಳಕೂ ಇದೆ. ಹಾಗಾಗಿಯೇ ಈ 'ಸಿಟ್ಟಿನ ಅಪರಾವತಾರಿ' ಒಂದು ಪುಟ್ಟ ಬೆಕ್ಕಿನ ಸಾವಿಗೂ ಕರಗಿಹೋಗುತ್ತಾರೆ. ಈ ಅಪ್ಪಟ ಮನುಷ್ಯ ಗುಣವೇ ಅವರ ಬರವಣಿಗೆಗಳತ್ತ ನಮ್ಮನ್ನು ಸೆಳೆಯುವುದು.

'ಮನುಷ್ಯ ಸಿಟ್ಟಾಗಬಾರದು, ಅದು ಆರೋಗ್ಯಕ್ಕೆ ಹಾನಿ. ಆದ್ದರಿಂದ ನಗು ನಗುತ್ತಾ ಇರಬೇಕು' ಎನ್ನುತ್ತಾರೆ ವೈದ್ಯರು. ಅವರಿಗೆ ಸಾಮಾಜಿಕ ಆರೋಗ್ಯದ ಬಗ್ಗೆ ಅರಿವಿಲ್ಲ. ಆರೋಗ್ಯವಂತ ಮನುಷ್ಯನೊಬ್ಬ ಭಾರತೀಯ ಸಮಾಜದಲ್ಲಿ ಸಿಟ್ಟಾಗದೆ ಇರಲು ಸಾಧ್ಯವೇ ಇಲ್ಲವೆಂಬುದು ನನ್ನ ಗಟ್ಟಿ ನಂಬಿಕೆ. ಆದರೆ ಸಾತ್ವಿಕರ ಸಿಟ್ಟು ನಿರಾಶೆಯಾಗಿ, ಕೊನೆಗೆ ಹತಾಶೆಯಾಗಿ ಮಾರ್ಪಡಲು ಸಮಾಜ ಬಿಡಬಾರದು. ಪ್ರಿಯ ನಾಗಭೂಷಣ್, ಬರೆಯುತ್ತಲೇ ಇರಿ, ಅದಕ್ಕೆ ಕಿವಿಗೊಡುವವರು ಇದ್ದೇ ಇದ್ದಾರೆ ಖಂಡಿತ.

– ದಿನೇಶ್ ಅಮಿನ್ ಮಟ್ಟು

'ಪ್ರಜಾವಾಣಿ' ವರದಿಗಾರ, ಹೊಸದೆಹಲಿ

ಲೋಹಿಯಾ ಪ್ರಕಾಶನ, ಬಳ್ಳಾರಿ

ಬೆಲೆ ರೂ. 150

ISBN 81-87731-95-8